ಋಗ್ಭಾಷ್ಯ

VOLUME XI

ಸಂಚಿಕೆ ೧೧

|| ಶ್ರೀ ಮಧ್ವನಾಥೋ ವಿಜಯತೇ ||

ಶ್ರೀಮನ್ಮಧ್ವಾಚಾರ್ಯರ

ಸರ್ವ ಮೂಲಗ್ರಂಥಗಳ ಮಾಲಿಕೆಯ ಏಕಾದಶ ಗುಚ್ಛದಲ್ಲಿ

೩೭ನೇಯ ಗ್ರಂಥವಾದ

ಋಗ್ಭಾಷ್ಯ

ದ್ವೈತವೇದಾಂತ ವಿದ್ವಾನ್, ದ್ವೈತವೇದಾಂತ ಶಿರೋಮಣಿ,

ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲಾ ನಿವೃತ್ತ ಪ್ರಧಾನ ಪಂಡಿತ

ಉಡುಪಿ ಆಯುರ್ವೇದ ಕಾಲೇಜಿನ ನಿವೃತ್ತ ಪ್ರೊಫೆಸರ್, ವೇದಾಂತ ವಾಚಸ್ಪತಿ

ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳಿಂದ ವಿರಚಿತವಾದ

ಕನ್ನಡ ಟೀಕಾ ಭಾಷಾಂತರ ಸಹಿತ.

ಶ್ರೀ ೧೦೮ ಶ್ರೀ ಪರಮಹಂಸೇತ್ಯಾದಿ ಬಿರುದಾಂಕಿತರಾದ ಪರ್ಯಾಯ

ಶ್ರೀಕಾಣಿಯೂರು ಮಠಾಧೀಶ್ವರ

ಶ್ರೀ ವಿದ್ಯಾವಾರಿನಿಧಿತೀರ್ಥ ಶ್ರೀಪಾದಂಗಳವರ ಕನ್ನಡ ಮುನ್ನುಡಿ

ಮತ್ತು

ಶ್ರೀ ಯು. ವೆಂಕಟಕೃಷ್ಣ ರಾವ್, M. A.

ನಿವೃತ್ತ ಪ್ರಿನ್ಸಿಪಾಲ್, ಎಸ್. ಎಂ. ಎಸ್. ಪಿ. ಸಂಸ್ಕೃತ ಕಾಲೇಜ್, ಉಡುಪಿ.

ಪ್ರಾಧ್ಯಾಪಕ, ಕ್ರಿಶ್ಚಿಯನ್ ಕಾಲೇಜ್, ಮದ್ರಾಸ್.

ಇವರ ಇಂಗ್ಲಿಷ್ ಮುನ್ನುಡಿಯೊಡನೆ.

MMSS

ಪ್ರಕಾಶಕರು:

1860ನೇ ಇಸವಿಯ 21ನೇ ಆಕ್ಟಿನ ಮೇರೆಗೆ ರಿಜಿಸ್ಟ್ರಿಯಾಗಿರುವ

ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ.

SRI MADHWAMUNI SEVA SANGHA (REGD) UDIPI, S. K.

ಉಡುಪಿ ಮೆಜಿಸ್ಟಿಕ್ ಪ್ರೆಸ್ಸಿನಲ್ಲಿ ಮುದ್ರಿತವಾದುದು.

1967

ಬೆಲೆ: ಹತ್ತು ರೂಪಾಯಿ

ಶ್ರೀ ಮಧ್ವಮುನಿ ಸೇವಾಸಂಘ (ರಿ.) ಉಡುಪಿ.

ವರದಿ

1927ರಲ್ಲಿ ಸ್ಥಾಪಿಸಲ್ಪಟ್ಟ ಈ ಸಂಘವು ಇದುವರೆಗೆ ಶ್ರೀಮನ್ಮಧ್ವಾಚಾರ್ಯರ ಮೂಲ ಗ್ರಂಥಗಳಲ್ಲಿ "ಯತಿಪ್ರಣವ ಕಲ್ಪ" ಒಂದು ಹೊರತು ಉಳಿದ ಎಲ್ಲಾ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಿದೆ. 11 ಸಂಪುಟಗಳಲ್ಲಿ ಪ್ರಕಟವಾದ ಈ 36 ಗ್ರಂಥಗಳ ತಯಾರಿಕೆಗಾಗಿ ಜುಮ್ಲಾ ರೂ. 35,000—00 ದಷ್ಟು ವೆಚ್ಚವಾಗಿರುತ್ತದೆ.

ಕೊನೆಯದಾದ "ಯತಿಪ್ರಣವ ಕಲ್ಪ"ವನ್ನು ಇನ್ನು ಒಂದು ತಿಂಗಳಿನಲ್ಲಿ ಮುದ್ರಿಸಿ ಪ್ರಕಟಿಸಲಾಗುವುದು. ಅಲ್ಲಿಗೆ ಈ ಸಂಘದ ಸ್ಥಾಪನೆಯ ಮುಖ್ಯ ಉದ್ದೇಶವು ಒಂದಾವರ್ತಿ ಸಂಪೂರ್ಣವಾದಂತೆ ಆಯಿತು.

1966ನೇ ದಶಂಬರ ಅಂತ್ಯದಲ್ಲಿ ಸಂಘದಲ್ಲಿ ಸುಮಾರು ರೂ. 9500/= ಮುಖ ಬೆಲೆಯ ಪುಸ್ತಕಗಳ ದಾಸ್ತಾನು ಇತ್ತು. 1967ನೇ ಇಸವಿಯಲ್ಲಿ ಈ ವರೆಗೆ ಸುಮಾರು ರೂ. 1500/= ಮುಖ ಬೆಲೆಯ ಪುಸ್ತಕಗಳನ್ನು ಮೆಂಬರರಿಗೆ ಹಂಚಿಯದೆ.

ಈಗ ಮುದ್ರಣ ಕಾರ್ಯವು ಮುಗಿದ ಋಗ್ಭಾಷ್ಯದ 500 ಪ್ರತಿಗಳ ಮುಖ ಬೆಲೆ ರೂ. 5000/= ಸೇರಿ ಸದ್ಯ ಸಂಘದಲ್ಲಿ ರೂ. 13000/= ಬೆಲೆಯ ಪುಸ್ತಕಗಳ ದಾಸ್ತಾನು ಇರುತ್ತದೆ.

ಯತಿಪ್ರಣವ ಕಲ್ಪದ ಮುದ್ರಣದ ನಂತರ ಸಂಘದಿಂದ ಈ ಮೊದಲು ಮುದ್ರಿಸಲ್ಪಟ್ಟು ಖರ್ಚಾಗಿರುವ "ಶ್ರೀಮನ್ಮಹಾ ಭಾರತ ತಾತ್ಪರ್ಯ ನಿರ್ಣಯ"ಗ್ರಂಥವನ್ನು ಸಾಕಷ್ಟು ಪ್ರೋತ್ಸಾಹ ಸಿಕ್ಕಿದರೆ ಪುನರ್ಮುದ್ರಣ ಮಾಡುವ ಆಲೋಚನೆ ಮಾಡಿರುತ್ತೇವೆ. ಅಲ್ಲದೆ ಅದರೊಂದಿಗೆ ಶ್ರೀಮನ್ಮಧ್ವಾಚಾರ್ಯರ ಮೂಲ ಗ್ರಂಥಗಳ ಸರಳ ಕನ್ನಡ ಅನುವಾದವನ್ನು ಚುಟುಕಾಗಿ ಚಿಕ್ಕ ಚಿಕ್ಕ ಪುಸ್ತಕಗಳ ರೂಪದಲ್ಲಿ ಮುದ್ರಿಸಿ ಪ್ರಚಾರ ಮಾಡಲು ಉದ್ದೇಶಿಸಿರುತ್ತೇವೆ.

ಸಂಘದಲ್ಲಿ ಈಗ ಇರುವ ಪುಸ್ತಕಗಳ ದಾಸ್ತಾನು ಆದಷ್ಟು ಬೇಗನೇ ಖರ್ಚಾಗುವಂತೆ ಸಂಘದ ಮೆಂಬರರು ಪ್ರಯತ್ನಿಸಿದಲ್ಲಿ ಸಂಘದ ಮೇಲಿನ ಪುನರ್ಮುದ್ರಣ ಕೆಲಸವನ್ನು ಶೀಘ್ರದಲ್ಲಿ ಮುಂದುವರಿಸಲು ಅನುಕೂಲವಾಗುತ್ತದೆ.

15—8—1967

ಉಡುಪಿ.

ಆಡಳಿತ ಮಂಡಳಿ
ಶ್ರೀಮಧ್ವಮುನಿ ಸೇವಾ ಸಂಘ, (ರಿ) ಉಡುಪಿ.

ಶ್ರೀ ಮಧ್ವಮುನಿ ಸೇವಾ ಸಂಘದ ಪೋಷಕರು.

1 ಶ್ರೀ ವಿಷ್ಣು ಪದಂಗತ ಅದಮಾರುಮಠದ ವಿಬುಧಪ್ರಿಯತೀರ್ಥ ಶ್ರೀಪಾದಂಗಳವರು.
2 ಶ್ರೀ ವಿಷ್ಣು ಪದಂಗತ ಪುತ್ತಿಕಾಮಠದ ಸುಧೀಂದ್ರತೀರ್ಥ ಶ್ರೀಪಾದಂಗಳವರು.
3 ಶ್ರೀ ವಿಷ್ಣು ಪದಂಗತ ಕೃಷ್ಣಾಪುರಮಠದ ವಿದ್ಯಾಪೂರ್ಣತೀರ್ಥ ಶ್ರೀಪಾದಂಗಳವರು.
4 ಶ್ರೀ ವಿಷ್ಣು ಪದಂಗತ ಸೋದಾಮಠದ ವಿಶ್ವೇಂದ್ರತೀರ್ಥ ಶ್ರೀಪಾದಂಗಳವರು.
5 ಶ್ರೀ ಸೋದಾಮಠದ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರು.
6 ಶ್ರೀ ವಿಷ್ಣು ಪದಂಗತ ಕಾಣಿಯೂರು ಮಠದ ವಿದ್ಯಾಸಮುದ್ರತೀರ್ಥ ಶ್ರೀಪಾದಂಗಳವರು.
7 ಶ್ರೀ ವಿಷ್ಣು ಪದಂಗತ ಫಲಿಮಾರುಮಠದ ರಘುಮಾನ್ಯತೀರ್ಥ ಶ್ರೀಪಾದಂಗಳವರು.
8 ಶ್ರೀ ವಿಷ್ಣು ಪದಂಗತ ಶೀರೂರುಮಠದ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರು.
9 ಶ್ರೀ ವಿಷ್ಣು ಪದಂಗತ ಪೇಜಾವರಮಠದ ವಿಶ್ವಮಾನ್ಯತೀರ್ಥ ಶ್ರೀಪಾದಂಗಳವರು.
10 ಶ್ರೀ ವಿಷ್ಣು ಪದಂಗತ ಉತ್ತರಾದಿಮಠದ ಸತ್ಯಧ್ಯಾನತೀರ್ಥ ಶ್ರೀಪಾದಂಗಳವರು.
11 ಶ್ರೀ ಸೋಸಲೆ ವ್ಯಾಸರಾಯ ಮಠದ ವಿದ್ಯಾಪ್ರಸನ್ನತೀರ್ಥ ಶ್ರೀಪಾದಂಗಳವರು.
12 ಶ್ರೀ ಸಂಪುಟನರಸಿಂಹಸ್ವಾಮಿಮಠದ ವಿದ್ಯಾಸಿಂಧುತೀರ್ಥ ಶ್ರೀಪಾದಂಗಳವರು.
13 ಶ್ರೀ ವಿಷ್ಣು ಪದಂಗತ ಕಾಶೀಮಠದ ಸುಕೃತೀಂದ್ರತೀರ್ಥ ಶ್ರೀಪಾದಂಗಳವರು.
14 ಶ್ರೀ ಕಾಶೀಮಠದ ಸುಧೀಂದ್ರತೀರ್ಥ ಶ್ರೀಪಾದಂಗಳವರು.
15 ಶ್ರೀ ಗೋಕರ್ಣ ಪರ್ತಗಾಳಿಮಠದ ದ್ವಾರಕಾನಾಥತೀರ್ಥ ಶ್ರೀಪಾದಂಗಳವರು.
16 ಕೀರ್ತಿಶೇಷ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು ಬೆಂಗಳೂರು.
17 ಕೀರ್ತಿಶೇಷ ಡಾಕ್ಟರ್ ಉಡುಪಿ ರಾಮರಾಯರು ಮದ್ರಾಸ್.
18 ಶ್ರೀಯುತ ಮಣೇಲ್ ಕೃಷ್ಣಸಾಯುಕ್ ಮತ್ತು ಸನ್ಸ್, ಮಂಗಳೂರು.
19 ಕೀರ್ತಿಶೇಷ ಶ್ರೀ ಕಾಲಜರು ಶ್ಯಾಮರಾಯರು. ಬಳ್ಳಾರಿ.
20 ಶ್ರೀಯುತ ಡಾಕ್ಟರ್ ಇಡ್ಯ ವೆಂಕಟರಾಯರು, ಉಳ್ಳಾಳ.
21 ಕೀರ್ತಿಶೇಷ ಶ್ರೀ ಹರಿವಾಣಂ ಹನುಮಂತಾಚಾರ್ಯರು, ಬಳ್ಳಾರಿ.
22 ಕೀರ್ತಿಶೇಷ ಶ್ರೀ ಕಲ್ಮಂಜೆ ವ್ಯಾಸಾಚಾರ್ಯರು ಉಡುಪಿ.
23 ಶ್ರೀಯುತ ಡಾಕ್ಟರ್ ಉಡುಪಿ ಲಕ್ಷ್ಮೀನಾರಾಯಣರಾಯರು ಮದ್ರಾಸ್.
24 ಶ್ರೀಯುತ ಡಾಕ್ಟರ್ ಜವ್ಳಿ ವಿ. ಬದರಿನಾರಾಯಣ ಮದ್ರಾಸ್.
25 ಶ್ರೀಯುತ ಕೆ. ಎನ್. ರಂಗರಾಯರು ಕಲ್ಕತ್ತಾ.
26 ಶ್ರೀಯುತ ಉಡುಪಿ ರಾಘವೇಂದ್ರಾಚಾರ್ಯರು, ಡಿಲ್ಲಿ.
27 ಶ್ರೀಯುತ ಎ. ವಿ. ಕೃಷ್ಣಮೂರ್ತಿರಾಯರು, ಬೆಂಗಳೂರು.
28 ಶ್ರೀಯುತ ಗುಪ್ತ ಅಪ್ಪರು.
29 ಶ್ರೀಯುತ ಕೆ. ಸೀತಾರಾಮರಾಯರು ಮದ್ರಾಸ್.
30 ಶ್ರೀಯುತ ಡಿ.ಕೆ.ರಾಮರಾಯರು ನಿವೃತ್ತ ಮೈಸೂರು ಹೈಕೋರ್ಟ್ ಜಡ್ಜರು, ಮೈಸೂರು.
31 ಕೀರ್ತಿಶೇಷ ರಾಜಸೇವಾಪ್ರಸಕ್ತ ವೈ. ಕೆ. ರಾಮಚಂದ್ರರಾವ್ ಮೈಸೂರು.
32 ಶ್ರೀಯುತ ಕಲ್ಸಂಕ ವೆಂಕಟ್ರಾಯ ಪೈ ಮತ್ತು ಸನ್ಸ್, ರಥಬೀದಿ, ಉಡುಪಿ.

ಶ್ರೀ ಮಧ್ವಮುನಿ ಸೇವಾ ಸಂಘ, (ರಿ.) ಉಡುಪಿ, ದ. ಕ.

— ಈಗ ಸಿಗುವ ಪುಸ್ತಕಗಳು. —

ಶ್ರೀಮನ್ಮಧ್ವಾಚಾರ್ಯರ ಎಲ್ಲಾ ಮೂಲ ಗ್ರಂಥಗಳನ್ನು ಟೀಕಾ, ವಿವೃತಿ ಸಹಿತವಾಗ
ಕನ್ನಡಿಸಿದವರು.

ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳು.

1	ಬೃಹದಾರಣ್ಯಕೋಪನಿಷತ್	(536 ಪುಟ)	8	00
2	ಛಾಂದೋಗ್ಯೋಪನಿಷತ್	(526 ಪುಟ)	9	00
3	ಸಭಾಷ್ಯಸತಾತ್ಪರ್ಯ ಶ್ರೀಮದ್ಭಗವದ್ಗೀತಾ	(936 ಪುಟ)	15	00
4	ಶ್ರೀಮದ್ಭಾಗವತ ತಾತ್ಪರ್ಯನಿರ್ಣಯ	(1380 ಪುಟ)	25	00
5	ಯಮಕಭಾರತ ಮತ್ತು ತಂತ್ರಸಾರ	(120 ಪುಟ)	3	50
6	ಶ್ರೀಮನ್ನ್ಯಾಯವಿವರಣಂ	(184 ಪುಟ)	5	00
7	ಋಗ್ಭಾಷ್ಯ	(440 ಪುಟ)	10	00

**ಶ್ರೀಮನ್ಮಧ್ವಾಚಾರ್ಯರ ಗ್ರಂಥಗಳಲ್ಲಿ ಮುದ್ರಣವಾಗುತ್ತಿರುವ
ಕೊನೆಯ ಗ್ರಂಥ**

—: ಯತಿಪ್ರಣವಕಲ್ಪ :—

ಪುಟಗಳು: **80** ಅಂದಾಜು ಬೆಲೆ: **2-00**

ತ್ವರೆ ಮಾಡಿರಿ!! **ಶೀಘ್ರದಲ್ಲೇ ಪ್ರಕಟವಾಗಲಿದೆ!!**

ಶ್ರೀಮನ್ಮಧ್ವಾಚಾರ್ಯವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

(ದ್ವಿತೀಯ ಮುದ್ರಣ)

ಅಂದಾಜು ಪುಟಗಳು **1500** ಚಂದಾ ರೂ. **30/—**

ಮೂರು ಭಾಗಗಳಲ್ಲಿ ಪ್ರಕಟವಾಗುವ ಈ ಗ್ರಂಥಕ್ಕೆ ಈಗಲೇ ಮುಂಗಡವಾಗಿ ಹಣ ಕಳಿಸಿದವರಿಗೆ ಪ್ರಕಟವಾದಂತೆ ಅಂಚೆಯಲ್ಲಿ ಉಚಿತವಾಗಿ ರಿಜಿಸ್ಟ್ರ ಮಾಡಿ ಕಳಿಸಲಾಗುವುದು. ಪ್ರಕಟವಾದ ನಂತರ ಅಂಚೆವೆಚ್ಚ ಪ್ರತ್ಯೇಕ
ಇಂದೇ ತ್ವರೆ ಮಾಡಿರಿ.

ಪ್ರಕಾಶಕರು:

ಶ್ರೀಮಧ್ವಮುನಿ ಸೇವಾಸಂಘ, (ರಿ.) ಉಡುಪಿ.

ಮುನ್ನುಡಿ

॥ ಶ್ರೀಃ ॥

ಸದಾಗಮೈಕವಿಜ್ಞೇಯಂ ಸಮತೀತಕ್ಷರಾಕ್ಷರಂ ।
ನಾರಾಯಣಂ ಸದಾ ವಂದೇ ನಿರ್ದೋಷಾಶೇಷಸದ್ಗುಣಂ ॥

ವಿಶ್ವಧಾರಕವಾದ ಧರ್ಮ ಮತ್ತು ನ್ಯಾಯ ನೀತಿಗಳಿಗೆ ಮೂಲಾಧಾರವು ವೇದವೇ ಎಂದು "ವೇದೋಽಖಿಲೋ ಧರ್ಮಮೂಲಂ" ಎಂಬ ಅಭಿಯುಕ್ತ ವಚನದಿಂದ ಸಿದ್ಧವಾಗುವುದು. ಪ್ರತ್ಯಕ್ಷಾದಿಗಳಿಂದ ತಿಳಿಯಲಾರದ ಅಲೌಕಿಕ ಪುರುಷಾರ್ಥಸಾಧನವನ್ನು ತಿಳಿಸಿಕೊಡುವ ಪವಿತ್ರ ಗ್ರಂಥವೇ ವೇದವು. ಈ ವೇದವನ್ನೇ ಶ್ರುತಿ ಎಂದೂ ಆಗಮವೆಂದೂ ಶಾಸ್ತ್ರದಲ್ಲಿ ವ್ಯವಹರಿಸುವುದುಂಟು. ಇಂತಹ ವೇದವು ಆದಿಯಲ್ಲಿ ಅಪಾರ ಮಂತ್ರಗಳ ರಾಶಿಯಾಗಿದ್ದಿತೆಂದು— ಆ ದಿಶೆಯಲ್ಲಿ ಅದಕ್ಕೆ ಮೂಲವೇದವೆಂದು ಹೆಸರಿತ್ತೆಂದೂ ಪುರಾಣಾದಿಗಳಿಂದ ತಿಳಿದು ಬರುತ್ತದೆ. ಅನಂತರ ಋಕ್, ನಿಗದ, ಸಾಮ, ಅಥರ್ವ ಎಂದು ನಾಲ್ಕು ವಿಧವಾಗಿ ಸಾಕ್ಷಾನ್ನಾರಾಯಣಾಂಶ ಸಂಭೂತರಾದ ಮಹರ್ಷಿ ಶ್ರೀ ವೇದವ್ಯಾಸರು ಅವಾಂತರವೇದ ವಿಭಾಗ ಮಾಡಿದರು. ಕಾಲಾನುಸಾರವಾಗಿ ಆ ಅವಾಂತರ ವೇದಗಳೂ ಅಧ್ಯಯನಕ್ಕೆ ಅಸಾಧ್ಯವೆಂದು ತೋರಿದ್ದರಿಂದ ಋಗ್ವೇದವನ್ನು, ಇಪ್ಪತ್ತನಾಲ್ಕು, ನಿಗದ (ಯಜುಸ್ಸ)ವನ್ನು ನೂರ ಒಂದು, ಸಾಮವನ್ನು ಸಹಸ್ರ, ಅಥರ್ವಣವನ್ನು ಹನ್ನೆರಡು, ಈ ರೀತಿ ಶಾಖೆಗಳಾಗಿ ಸರ್ವಜ್ಞರಾದ ಆ ವ್ಯಾಸರಿಂದಲೇ ವ್ಯವಸ್ಥಿತವಾಯ್ತೆಂದು ಸ್ಕಾಂದ ಪುರಾಣದ ಆಧಾರದ ಮೇಲೆ ಶ್ರೀ ಮಧ್ವಾಚಾರ್ಯರು ತಮ್ಮ ಮೂಲ ಗ್ರಂಥಗಳಲ್ಲಿ ನಿರ್ಣಯಿಸಿರುವರು. ಈ ವೈದಿಕ ವಾಙ್ಮಯವು ಅಪಾರವೂ ಅತ್ಯಂತ ಗಹನಾರ್ಥವೂ ಆಗಿದ್ದು ತತ್ತ್ವಜ್ಞಾನದ ನಿಧಿ ಎನಿಸಿದೆ. ಇದು ಅನಾದಿ ನಿತ್ಯ ಅಪೌರುಷೇಯ ಎಂಬು ವೈದಿಕರ ಸಿದ್ಧಾಂತವಿದೆ.

ಇಷ್ಟೆಲ್ಲಾ ತೀರ್ಮಾನಕ್ಕೆ ಬರಬೇಕಾದರೆ ಮೂಲಭೂತ ಸಂಶಯಗಳು ಕೆಲವು ಸಹಜವಾಗಿ ಬರತಕ್ಕದ್ದಿದೆ. ಅದೇನೆಂದರೆ— ವೇದವು ಪ್ರಮಾಣವೆಂದಾಗಬೇಕಾದರೆ ಲಕ್ಷಣ— ಹಾಗೂ ಪ್ರಮಾಣಗಳಿರಬೇಕು. ಯದ್ಯಪಿ ಅಲೌಕಿಕ ಪುರುಷಾರ್ಥ ಸಾಧನವನ್ನು ಬೋಧಿಸತಕ್ಕ ಗ್ರಂಥವೇ ವೇದವೆಂದು ಲಕ್ಷಣ ಹೇಳಿದೆ.

ಪ್ರತ್ಯಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ಬುಧ್ಯತೇ ।
ಏತಂ ವಿದಂತಿ ವೇದೇನ ತಸ್ಮಾದ್ವೇದಸ್ಯ ವೇದತಾ ॥ ಇತಿ

ಆದರೆ ಇದು ಮನ್ವಾದಿ ಶಾಸ್ತ್ರಗಳಲ್ಲಿ ಬಂದೇಬರುವುದು. ಇದೇ ರೀತಿ ವೇದದ ಅಸ್ತಿತ್ವದಲ್ಲಿ ಪ್ರಮಾಣವಿಲ್ಲ, ಎಂಬುದು ಮತ್ತೊಂದು ವಾದವು. "ಋಗ್ವೇದಂ ಭಗವೋಽಧ್ಯೇಮಿ" ಎಂಬ ವಾಕ್ಯವು ಋಗ್ವೇದಾದಿಗಳ ಅಸ್ತಿತ್ವದಲ್ಲಿ ಪ್ರಮಾಣವೆಂದರೆ ವೇದದ ಸ್ವರೂಪಸಿದ್ಧಿಯಲ್ಲಿ ವೇದವನ್ನೇ ಮುಂದಿರಿಸಿದಂತಾಗುವುದಷ್ಟೆ? ಅದಕ್ಕೆ—ಅಂದರೆ ವೇದಕ್ಕೆ ವೇದವೇ ಪ್ರಮಾಣವೆಂದಾಯಿತು. ಇದು ಸರಿಯಲ್ಲ. ಇದರ ಕುರಿತು ಉತ್ತರವೇನೆಂದರೆ ಪ್ರಾಚೀನ ತಪಸ್ವಿಗಳಾದ ಮಹರ್ಷಿಗಳು ಇದು ಮಂತ್ರ — ಇದು ಬ್ರಾಹ್ಮಣವಾಕ್ಯ — ಇದು ಅರಣ್ಯಕ, ಇದು ಉಪನಿಷತ್ ಎಂಬಿತ್ಯಾದಿ ವ್ಯವಹಾರಗಳಿಂದ ಯಾವ ಅಮೃತವಾಙ್ಮಯಗಳು ಆ ರೀತಿ ಲೋಕದಲ್ಲಿ ಪ್ರಸಿದ್ಧಿ ಪಡೆದಿರುವವೋ, ಅವೇ ವೇದಾದಿಗಳು ಎಂಬಿಷ್ಟೇ ಅದಕ್ಕುತ್ತರ. ಇಷ್ಟಾದ ಮೇಲೆ ಈ ವಿಷಯದಲ್ಲಿ ಶ್ರುತಿಯೂ ಸ್ಮೃತಿಗಳೂ ಪೋಷಕಗಳಾಗುವವು. ಹೀಗಿದ್ದರೂ— ವೇದಗಳು ಪೌರುಷೇಯಗಳೇ? ಅಪೌರುಷೇಯಗಳೇ? ಪೌರುಷೇಯಗಳಾದರೆ ಅದರ ಕರ್ತೃವಿನಲ್ಲಿ ಅಜ್ಞಾನ ವಿಪರೀತ ಜ್ಞಾನಾದಿಗಳು ಇಲ್ಲ ಎಂಬುದು ಹೇಗೆ ಸಿದ್ಧವಾಗಬೇಕು? ಅಲ್ಲದೆ ಪ್ರಮಾಣಭೂತ ವಾಕ್ಯಗಳು ಕರ್ತೃವಿನ ಗುಣಗಳಿಂದಾಗಿಯೇ ಪ್ರಮಾಣಗಳೆನಿಸಿಕೊಳ್ಳುವವು. ವೇದಕರ್ತನಲ್ಲಿ ಪ್ರಾಮಾಣ್ಯಕ್ಕೆ ಉಪಯುಕ್ತ ಸಾರ್ವಜ್ಞ್ಯಪಟುಕರಣತ್ವ ಮಂತಾ

ದವುಗಳಿವೆಂಬುದಕ್ಕೆ ಏನು ಪ್ರಮಾಣ? ಇನ್ನು ವೇದಗಳು ಅಪೌರುಷೇಯ. ಅವು ಅನಾದಿನಿತ್ಯ ಎನ್ನುವುದಾದರೆ ಈ ಪಕ್ಷದಲ್ಲಿ ಅನೇಕಾಕ್ಷೇಪಗಳನ್ನೆದುರಿಸಬೇಕಾಗುವುದು. ವಾಕ್ಯ ಎಂದಾದ ಮೇಲೆ ಬಾಯಿಂದ ಉಚ್ಚಾರ ಮಾಡಲ್ಪಟ್ಟದ್ದೇ. ಅಲ್ಲದೆ "ಅಪೌರುಷೇಯ ವಾಕ್ಯ" ಎನ್ನುವುದು "ನಾನು ಮೂಕ" ಎಂದು ಹೇಳಿದಂತೆ ವಿರುದ್ಧವೇ ಆಗುವುದು. ವಾಕ್ಯ ಪ್ರಾಮಾಣ್ಯವು, ಆಪ್ತೋಕ್ತತ್ವರೂಪಗುಣದಿಂದಲೇ ಲೋಕದಲ್ಲಿ ಸಿದ್ಧವಾಗುವುದರಿಂದ ವಾಕ್ಯರಾಶಿ ಎನಿಸಿದ ವೇದಗಳಿಗೆ ಅದರ ಹೊರತು ಹೇಗೆ ಪ್ರಾಮಾಣ್ಯವು ಉಂಟಾದೀತು? ಅಪೌರುಷೇಯವೆಂದಾದರೆ ಇದಕ್ಕೆಲ್ಲಿಯ ಅವಕಾಶ? ಎಂದು ಮುಂತಾಗಿ ಸರ್ವಸಾಮಾನ್ಯ ಆಕ್ಷೇಪವು ಇದ್ದೇ ಇದೆ. ಇದಕ್ಕೂ ಉತ್ತರ ವಿಲ್ಲದಿಲ್ಲ. ಅಬಾಧಿತ ಜ್ಞಾನವನ್ನು ಉಂಟುಮಾಡುವುದು ಯಾವುದೋ ಅದು ಪ್ರಮಾಣ. ಪ್ರತ್ಯಕ್ಷಾದಿಗಳನ್ನೂ ಪ್ರಮಾಣವೆನ್ನುವುದು ಈ ಕಾರಣದಿಂದಲೇ. ಹೀಗೆಂದ ಮೇಲೆ ವೇದವಾಕ್ಯವೂ ಅಬಾಧಿತ ಜ್ಞಾನವನ್ನು ಲೌಕಿಕ ವಾಕ್ಯದಂತೆ ಉಂಟು ಮಾಡುವುದಾದರೆ ಏಕೆ ಪ್ರಮಾಣವಾಗಲಾರದು? ವಾಕ್ಯದಿಂದ ಪ್ರಮೆಯೇ ಹುಟ್ಟುತ್ತದೆಂಬ ನಿಯಮವಿಲ್ಲವೆಂದರೆ ಅದು ಪ್ರತ್ಯಕ್ಷದಲ್ಲಿಯೂ ಸಮಾನ. ಹಗ್ಗವನ್ನೂ ನೋಡಿ ಇದು ಹಾವು ಎಂದು ಭ್ರಮೆ ಬರುವುದಿಲ್ಲವೇ? ಇನ್ನೊಂದು ವಿಶೇಷವೇನೆಂದರೆ—ವೇದವು ಪುರುಷ ಬುದ್ಧಿಬಲದಿಂದ ನಿರ್ಮಿತವಾದುದಲ್ಲ, ಎಂದೊಪ್ಪಿಕೊಂಡರೆ ಪುರುಷನಲ್ಲಿ ಸಹಜವಾಗಿರತಕ್ಕ ಅಜ್ಞಾನಾದಿ ದೋಷಗಳ ಸ್ಪರ್ಶವೇ ಇಲ್ಲವೆಂದಾಗಿ ಅಪ್ರಾಮಾಣ್ಯ ಶಂಕೆಗೇನೇ ಎಡೆ ಇಲ್ಲವೆಂದಾಗುವುದು. ಇಂತಹ ವಾಙ್ಮಯ ಪ್ರಬಂಧ ಇರಬಹುದೇ? ಎಂದರೆ—ಇದೆ, ಹೇಗೆ ಕಾಲ ಆಕಾಶಾದಿಗಳು ಅಪೌರುಷೇಯಗಳಾಗಿ ನಿತ್ಯವೆನಿಸಿರುವವೋ ಅಂತೆಯೇ ಅದರ ಜೊತೆಯಲ್ಲಿ ವೇದವನ್ನೂ ಸೇರಿಸಿಕೊಂಡರಾಯ್ತು. ಪ್ರಮಾಣಸಿದ್ಧ ಅಸ್ತಿತ್ವವು ಕಾಲಾಕಾಶಾದಿಗಳಂತೆ ವೇದಕ್ಕೂ ಸಮಾನವೇ. ಈ ರೀತಿ ಒಪ್ಪಿಕೊಳ್ಳುವುದರಲ್ಲಿ ಬಾಧಕವಿಲ್ಲ. ಇಲ್ಲವಾದರೆ ಅನುಭವಸಿದ್ಧ ಕಾಲಾಕಾಶಾದಿಗಳನ್ನೂ ಒಪ್ಪದಿರಬೇಕಾಗುವುದು.) ತತ್ತ್ವಜಿಜ್ಞಾಸೆಯಿಂದ ಕೇಳುವುದಾದರೆ—ಪರಮಾತ್ಮನು ಎಲ್ಲ ಕಾಲದಲ್ಲಿಯೂ ಒಬ್ಬನೇ ಎಂಬುದು ಎಲ್ಲರಿಗೂ ಸಮ್ಮತವಾದ ವಿಷಯ. ಪ್ರತಿಬ್ರಹ್ಮಕಲ್ಪದಲ್ಲಿಯೂ ಸೃಷ್ಟ್ಯಾದಿಕರ್ತನು ಅವನೊಬ್ಬನೆ. ಕಲ್ಪಭೇದದಿಂದ ಪರಮಾತ್ಮಭೇದವನ್ನೂ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಆ ರೀತಿ ಒಪ್ಪಿದರೆ ಹಿಂದಿನ ಕಲ್ಪದಲ್ಲಿ ಸೃಷ್ಟ್ಯಾದಿಗಳನ್ನು ಮಾಡಿದ ಪರಮಾತ್ಮನು ಎಲ್ಲಿ ಹೋದನು? ಅವನಿದ್ದರೆ ಈ ಕಲ್ಪದಲ್ಲಿ ಸೃಷ್ಟ್ಯಾದಿ ವ್ಯಾಪಾರವನ್ನು ಬಿಡಲು ಕಾರಣವೇನು? ಅಶಕ್ತತ್ವಾದಿಗಳನ್ನೂ ಅವನಲ್ಲಿ ಒಪ್ಪಲು ಸಾಧ್ಯವಿಲ್ಲ–ಅವನು ಸರ್ವಶಕ್ತ, ಸರ್ವ ಸ್ವತಂತ್ರ, ಸರ್ವೇಶ್ವರ-ಈ ಗುಣಗಳಿಲ್ಲದವನು ಸರ್ವೇಶ್ವರ–ಪರಮಾತ್ಮನೇ ಆಗುವುದಿಲ್ಲ. ಅದಲ್ಲದೆ ಅನೇಕ ಪರಮಾತ್ಮರನ್ನು ಒಪ್ಪಿದರೆ ಆ ಪರಮಾತ್ಮನ ಒಡೆತನ ಈ ಪರಮಾತ್ಮನಿಗಿಲ್ಲ, ಎಂದರೆ ಸರ್ವೇಶ್ವರನಾಗುವುದಿಲ್ಲ. ಉಂಟೆಂದು ಹೇಳಿದರೆ ಆ ಪರಮಾತ್ಮನು ಸರ್ವೇಶ್ವರನಲ್ಲವೆಂದಾಗುವುದು. ಈ ರೀತಿ ಯಾವ ಕಲ್ಪದ ಪರಮಾತ್ಮನೂ ಸರ್ವೇಶ್ವರನಲ್ಲವೆಂದಾಗುವುದು. ಆದ್ದರಿಂದ ಪರಮಾತ್ಮ ಅನಂತ ಕಾಲದಲ್ಲಿಯೂ ಒಬ್ಬನೇ, ಎಂದು ಯಾರೂ ಒಪ್ಪಲೇಬೇಕು. ಸರ್ವಜ್ಞನಲ್ಲದವನು ಸೃಷ್ಟ್ಯಾದಿಕರ್ತನಾಗಲು ಸಾಧ್ಯವಿಲ್ಲವಾದ್ದರಿಂದ ಸರ್ವಜ್ಞನು ಆಗಿರಲೇಬೇಕು, ಹೀಗೆಂದಾದ ಮೇಲೆ ಹಿಂದಿನ ಕಲ್ಪದಲ್ಲಿದ್ದ ವೇದವನ್ನೂ ಈ ಕಲ್ಪದಲ್ಲಿ ಮರೆತು ಬಿಡಲು ಸಾಧ್ಯವಿಲ್ಲ. ಅದು ಅವನ ಬುದ್ಧಿಯಲ್ಲಿ ಅಚ್ಚಳಿಯದಿರುವಾಗ ಈ ಕಲ್ಪದಲ್ಲಿ ಹೊಸವೇದವನ್ನು ವ್ಯರ್ಥವಾಗಿ ಮಾಡಲು ಕಾರಣವೇನು? ಇದರಿಂದ ಸೃಷ್ಟ್ಯಾದಿಯಲ್ಲಿ ಪರಮಾತ್ಮನು ವೇದವನ್ನು, ಕಾಳಿದಾಸಾದಿ ಕವಿಗಳು ರಘುವಂಶಾದಿ ಕಾವ್ಯಗಳನ್ನು ಮಾಡಿದಂತೆ ಹೊಸದಾಗಿ ಮಾಡಿದನು ಎಂಬ ವಾದವೂ ಸ್ವಾಗತಾರ್ಹವಲ್ಲ ಎಂದು ಸಿದ್ಧವಾಯ್ತು. ಈರೀತಿ ಹಿಂದಿನ ವೇದವನ್ನೇ ಸೃಷ್ಟ್ಯಾದಿಯಲ್ಲಿ ಆದಿಮಾನವ (ಚತುರ್ಮುಖಬ್ರಹ್ಮ)ನಿಗೆ ಶ್ರೀಪರಮಾತ್ಮನು ಉಪದೇಶ ಮಾಡುತ್ತಾನೆ. ಹಿಂದಿನ ಕಲ್ಪದಲ್ಲಿ ಅದಕ್ಕಿಂತ ಹಿಂದಿನ ಕಲ್ಪದಲ್ಲಿದ್ದುದನ್ನು ಎಂದು ಹಿಂದೆ ಹಿಂದೆ ನಮ್ಮ ಬುದ್ಧಿಯನ್ನೂ ಹಿಂದಿರುಗಿಸಿದರೆ ಬುಡವಿಲ್ಲದ ಕಲ್ಪಪ್ರವಾಹದಲ್ಲಿ ವೇದವೆಂದು ಪ್ರಸಿದ್ಧಿ ಪಡೆದ ಪವಿತ್ರ ತತ್ತ್ವಜ್ಞಾನ ಸಾಧನವಾದ ವಿಲಕ್ಷಣ ಅಮೃತವಾಣಿಯು "ಅನಾದಿನಿತ್ಯ" ಆದುದರಿಂದಲೇ "ಅಪೌರುಷೇಯ"ವೆಂದು ಸುಲಭವಾಗಿ ಉತ್ತರಿಸಬಹುದು. ಇದರಿಂದ—ಸರ್ವಸೃಷ್ಟಿಕರ್ತನು ಪರಮಾತ್ಮ ಎಂದು ಹೇಳುತ್ತದೆ ವೇದ. ಆ ರೀತಿಯೇ ವೈದಿಕರ ಸಿದ್ಧಾಂತವೂ ಸಾರುತ್ತಿದೆ. ವೇದ ಅನಾದಿ ನಿತ್ಯ ಇದು ಹೇಗೆ? ಸರ್ವದಲ್ಲಿ ವೇದ

ಸೇರುವುದಿಲ್ಲವೇ? ಎಂಬ ಶಂಕೆಗೂ ಸಮಾಧಾನ ದೊರೆತಂತಾಯ್ತು. ಪರಮಾತ್ಮನು ತನ್ನ ಬುದ್ಧಿಯಲ್ಲಿ ಶಾಶ್ವತವಾಗಿದ್ದ ವೇದವನ್ನು ಆಯಾಯ ಕಲ್ಪದ ಆದಿಯಲ್ಲಿ ಚತುರ್ಮುಖ ಬ್ರಹ್ಮನಿಗೆ (ಅವನ ಮೂಲಕ ಮುಂದಿನ ಜನಾಂಗಕ್ಕೆ) ಸ್ವತಂತ್ರವಾಗಿ ಉಪದೇಶಿಸುತ್ತಾನೆ. ಇದುವೇ ನಿತ್ಯವೆನ್ನಲಾದ ವೇದಕ್ಕೆ ಪರಮಾತ್ಮನಿಂದ ಉತ್ಪತ್ತಿ. ಒಬ್ಬನ ಉಪದೇಶವನ್ನನುಸರಿಸಿ ಉಪದೇಶ ಮಾಡುವಿಕೆಯು ವೇದಕ್ಕೆ ಉತ್ಪತ್ತಿಯಲ್ಲ. ಅದು ಅದರ ಅನುವಾದಮಾತ್ರ. ಇದರಿಂದ ವೇದವನ್ನು ಪಾರಾಯಣ ಮಾಡ ತಕ್ಕವರಾರೂ ವೇದೋತ್ಪಾದಕರಲ್ಲವೆಂದು ಸಿದ್ಧವಾಯ್ತು. ಈ ರೀತಿಯ ವೇದೋತ್ಪತ್ತಿಯನ್ನು ಶ್ರೀ ಮಧ್ವಾಚಾರ್ಯರು ವೇದಶ್ಚಾಪೀಶ್ವರೇಚ್ಛಯಾ।ವ್ಯಕ್ತಿನಾಮ ವಿಶೇಷೋಽಸ್ತಿ ತಸ್ಮಾತ್ತದ್ವಶತೈವ ಹಿ। ಉತ್ಪತ್ತಿರತ್ರ ಕಥಿತಾ...." ಎಂದು ಅನುವ್ಯಾಖ್ಯಾನದಲ್ಲಿ ನಿರೂಪಿಸಿರುವರು. ಹೀಗಿದ್ದರೂ—ಪುನರುಕ್ತಿ, ವ್ಯಾಹತಿ, ಸಿದ್ಧಬೋಧಕತ್ವ ಅರ್ವಾಚೀನ ಕಥಾ-ವ್ಯಕ್ತಿ ಸೂಚಕತ್ವ ಮುಂತಾದವುಗಳಿಂದ ಪ್ರಾಮಾಣ್ಯಕ್ಕೂ ಅನಾದಿ ನಿತ್ಯತ್ವಕ್ಕೂ ಬಾಧಕ ಬರುವುದಿಲ್ಲವೇ? ಎಂದು ಶಂಕಿಸಲೆಡೆಯಿದೆ. ಆದರೆ ಈ ವಿಚಾರವನ್ನೂ ವೇದಾರ್ಥ ನಿರ್ಣಾಯಕ ಪೂರ್ವಮೀಮಾಂಸಾಶಾಸ್ತ್ರವು ಕೂಲಂಕಷವಾಗಿ ವಿಚಾರ ಮಾಡಿ ಪ್ರಾಮಾಣ್ಯಾದಿಗಳಿಗೆ ಯಾವ ತರದ ಧಕ್ಕೆಯುಂಟಾಗುವುದಿಲ್ಲವೆಂದು ಸಿದ್ಧಾಂತಪಡಿಸಿದ್ದುಂಟು. ಅದರ ಸಾರಾಂಶವಿಷ್ಟೆ— ಅದರ, ಶಪಥ ಮುಂತಾದುವುಗಳನ್ನು ಸೂಚಿಸುವಲ್ಲಿ ಲೋಕ ವ್ಯವಹಾರದಲ್ಲಿಯೂ ಪುನರುಕ್ತಿ ತೋರುವುದರಿಂದ ವೇದದಲ್ಲಿ ಪುನರುಕ್ತಿ ಆಯಾಯ ಅರ್ಥವಿಶೇಷದಲ್ಲಿ ಯುಕ್ತವೇ. ವ್ಯಾಹತಿಯೂ ಅಧಿಕಾರಿ ವಿಶೇಷದಿಂದ ಅವ್ಯಾಹತವಾಗುವುದು. ಕ್ಷೌರ ಪ್ರಕರಣದಲ್ಲಿ "ಆಪ ಉಂದಂತು ಜೀವಸೇ" ನೀರು ಒದ್ದೆ ಮಾಡಲಿ ಎಂದು ತಲೆಗೆ ನೀರು ಹಚ್ಚುವಲ್ಲಿ ಪ್ರಾರ್ಥನೆ ಇದೆ. ಇದು ಪ್ರತ್ಯಕ್ಷ ಸಿದ್ಧವಾದರೂ ಇದರಲ್ಲಿ ನೀರಿನ ಅಭಿಮಾನಿ ದೇವತೆಯ ಅಲೌಕಿಕ| ಅನುಗ್ರಹವಿಶೇಷವೂ ಉಂಟಾಗಬೇಕೆಂಬ ಸದಿಚ್ಛೆಯು ಇದರಲ್ಲಿ ಅಡಕವಾಗಿರುವುದರಿಂದ ಸಿದ್ಧಾರ್ಥ ಬೋಧಕತ್ವವೂ ಇಲ್ಲ. "ಧಾತಾ ಯಥಾಪೂರ್ವಮಕಲ್ಪಯತ್" ಹಿಂದಿನ ಕಲ್ಪದಂತೆ ಈ ಕಲ್ಪದಲ್ಲಿಯೂ ಪರಮಾತ್ಮನು ಏಕ ರೀತಿಯಾಗಿ ಸೃಷ್ಟಿಸಿದನೆಂದು ಶ್ರುತಿ ಸಾರುತ್ತದೆ. ಗಮನಾರ್ಹ ಮಹಾಕಾರ್ಯಗಳು ಪ್ರತಿಕಲ್ಪದಲ್ಲಿಯೂ ಸಮಾನವಾದುದರಿಂದ ಶಬ್ದಾನುಪೂರ್ವಿಯೂ ಒಂದೇ ರೀತಿಯಾಗಿ ನಿತ್ಯವೇದದಲ್ಲಿರಲಡ್ಡಿ ಇಲ್ಲ. ಈ ವಿಷಯವು ಶಾಸ್ತ್ರಗಳಲ್ಲಿ ಅಲ್ಲಲ್ಲಿ ಬಹು ಮುಖವಾಗಿ ಚರ್ಚಿಸಲ್ಪಟ್ಟಿರುವದು. ಆದುದರಿಂದ ವೇದಕ್ಕೆ—ಅಪೌರುಷೇಯತ್ವ, ಆದರಿಂದಲೆ ಅನಾದಿ ನಿತ್ಯತ್ವ, ಆದರಿಂದಲೇ ಪ್ರಾಮಾಣ್ಯ, ನಿಸ್ಸಂದಿಗ್ಧವಾಗಿ ಸಿದ್ಧವಾದಂತಾಗುವುದು. ಧರ್ಮಾಧರ್ಮವ್ಯವಸ್ಥಾಪಕವೂ ಅಲೌಕಿಕ ಪರಮಪುರುಷಾರ್ಥ ಸಾಧನವೂ ಅತ್ಯಂತ ಪವಿತ್ರವೂ ಆದ ವೇದವು ಮಾನವಕೋಟಿಯ ಸರ್ವಪುರುಷಾರ್ಥಚಿಂತಾಮಣಿಯು, ಅಮೂಲ್ಯ ತತ್ವಜ್ಞಾನದ ನಿಧಿಯು.

ಈ ತರದ ವಿಲಕ್ಷಣ ವೈದಿಕ ವಾಙ್ಮಯದ ಅಧ್ಯಯನವು ಜನಸಾಮಾನ್ಯಕ್ಕೆ ಆಗದ ಕೆಲಸವೆಂದೇ ಪ್ರಾಚೀನ ಮಹರ್ಷಿಗಳು ವಿಶಿಷ್ಟ ಜ್ಞಾನವುಳ್ಳ ತ್ರೈವರ್ಣಿಕರಿಗೇನೇ ಎಂದು ನಿರ್ಣಯಿಸಿ ಇತರರು ಅಧ್ಯಯನ ಮಾಡಕೂಡದೆಂದು ನಿಷೇಧಿಸಿರುವರು. ಯದ್ಯಪಿ ಅಧ್ಯಯನೋಪಯೋಗಿ ವಿಶಿಷ್ಟ ಜ್ಞಾನವು ತ್ರೈವರ್ಣಿಕರಲ್ಲಿ ಸೀಮಿತವಾಗಿದೆಯೆಂದೂ ಇತರರಲ್ಲಿ ಇಲ್ಲವೇ ಇಲ್ಲವೆಂದಾಗಲೀ ಪ್ರಾಚೀನರ ಅಭಿಪ್ರಾಯವಲ್ಲ. ವಿಶಿಷ್ಟ ಜ್ಞಾನವುಳ್ಳವರು ಅಧ್ಯಯನಾಧಿಕಾರಿ ಎಂದರೆ ಅವ್ಯವಸ್ಥಿತವಾಗುವುದು. ಈ ಕಾರಣದಿಂದ ಒಂದು ರೀತಿಯ ವ್ಯವಸ್ಥೆ ಬೇಕೆಂಬ ಉದ್ದೇಶದಿಂದಲೇ ಆ ರೀತಿ ನಿರ್ಣಯಿಸಿರುವರು. ಇದು ಒಂದು ತರದ ಸಂಕುಚಿತ ಭಾವನೆಯ ಪ್ರತೀಕವೆಂದು ಹೇಳಲು ಅವಕಾಶವಿದೆ. ಆದರೆ ವಿದ್ಯುತ್ಕಾರ್ಖಾನೆಯಲ್ಲಿ "ಅಪ್ಪಣೆ ವಿನಹ ಒಳಗೆ ಪ್ರವೇಶವಿಲ್ಲ" ಎಂಬ ಬೋರ್ಡು ಹಾಕುವದಿದೆ. ಇದರ ಉದ್ದೇಶ- ವಿದ್ಯುತ್ತಿನ ಪೂರ್ವೋತ್ತರ ಸೂಕ್ಷ್ಮ ವಿಷಯಗಳನ್ನು ಅರಿಯದವರು ಆಕಸ್ಮಾತ್ತಾಗಿ ಬಂದು ಮುಟ್ಟಿದಲ್ಲಿ ಪ್ರಾಣಕ್ಕೇನೆ ಅಪಾಯ ಒದಗೀತೆಂದು ಅದೊಂದು ತರದ ಲೋಕಹಿತ ಭಾವನೆಯಿಂದಲೇ ಅಲ್ಲದೆ ಸಂಕುಚಿತತೆ ಹೇಗೆ ಅಲ್ಲವೋ ಅಂತೆಯೇ ವೇದವೂ ಸಾಮಾನ್ಯ ಲೌಕಿಕ ಕಾವ್ಯಾದಿಗಳಂತೆ ಅಧ್ಯಯನ ಮಾಡತಕ್ಕದಲ್ಲ. ಅದಕ್ಕೆ ಜನ್ಮ ಪರಿಶುದ್ಧಿ, ಆಚಾರ ತತ್ಪರತೆ, ವೈದಿಕ ಸಂಸ್ಕಾರ ಸಂಸ್ಕೃತತ್ವ, ದೇಶಕಾಲಾದಿನಿಯಮ, ತ್ರಿಕರಣ ಶುದ್ಧಿ, ಮುಂತಾದ ಹಲವು ಸಾಧನ ಸಂಪನ್ನರಿಂದಲೇ ಅಧ್ಯಯನಾ

ಕರವು. ಇದಕ್ಕೆ ವಿಪರೀತವಾಗಿ ನಡೆಸಿದರೆ ಅನಿಷ್ಟ ಫಲವು. ಅಂತಹ ಅನಿಷ್ಟಕ್ಕೆ ಗುರಿಯಾಗಬಾರದೆಂದೇ ಈ ತರದ ನಿರ್ಣಯವನ್ನು ಕೈಕೊಳ್ಳಬೇಕಾಯ್ತು. ಅಧಿಕಾರಿಕ ಕ್ರಮಬದ್ಧ ಅಧ್ಯಯನವು ಚಿಂತಿತ ಫಲದಾಯಕವು. ಗೋವೆ ಕಡೆ ಸಂಚಾರ ಮಾಡುತ್ತಿದ್ದ ಶ್ರೀಮನ್ಮಧ್ವಾಚಾರ್ಯರು ಅಲ್ಲಿಯ ಜನತೆಯ ಅಭಿಪ್ರಾಯದಂತೆ ಅಂಗೈಯಲ್ಲಿ ಬೀಜವನ್ನಿರಿಸಿ ವೇದ ಮಂತ್ರವನ್ನು ಜಪಿಸುತ್ತಿರುವಾಗ, ಬೀಜ ಅಂಕುರಿತವಾಗಿ ಕ್ರಮೇಣ ಸಸ್ಯವಾಗಿ ಬೆಳೆದುದನ್ನು ತೋರಿಸಿ ವೈದಿಕ ಮಂತ್ರ ಸಾಮರ್ಥ್ಯವನ್ನು ಸರ್ವರಿಗೂ ಖಚಿತಪಡಿಸಿದರೆಂದು ಐತಿಹ್ಯವಿದೆ. ಅಂತೆಯೇ ಅಕ್ರಮವಾಗಿ ಜಪಮಾಡಿದವರಿಗೆ ಅನಿಷ್ಟ ಫಲವೂ ಉಂಟಾದುದಕ್ಕೆ ಅನೇಕ ಕಥಾ ಸಂದರ್ಭಗಳು ಪುರಾಣಗಳಲ್ಲಿ ಉಲ್ಲಖಿತಗಳಾಗಿರುವುವು. ಆದುದರಿಂದ ಪ್ರಾಯಶಃ ವಿಶಿಷ್ಟ ಜ್ಞಾನಾದಿ ಸಂಪನ್ನರಾದ ತ್ರೈವರ್ಣಿಕರು ಅಧ್ಯಯನಾಧಿಕಾರಿಗಳೆಂದು ನಿರ್ಣಯಿಸಿದ್ದು ನ್ಯಾಯ ಸಮ್ಮತವೇ ಆಗಿದೆ.

ಅಧ್ಯಯನವೂ, ಕೇವಲ ಕಂಠಪಾಠ ಮಾತ್ರವಲ್ಲ. ಅರ್ಥ ಜ್ಞಾನ ಸಂಪಾದನೆಯೇ ಅಧ್ಯಯನದ ಗುರಿ. "ವೇದಃ ಕೃತ್ಸ್ನೋಽಧಿಗಂತವ್ಯಃ ಸರಹಸ್ಯೋ ದ್ವಿಜನ್ಮನಾ" ಎಂದು ಸ್ಮೃತಿ ವಚನವು. ನಿರರ್ಥಕ ಪಾಠವನ್ನು, ಶ್ರುತಿಯೇ—

"ಸ್ಥಾಣುರಯಂ ಭಾರಹಾರಃ ಕಿಲಾಭೂದಧೀತ್ಯ ವೇದಂ ನ ವಿಜಾನಾತಿ ಯೋಽರ್ಥಂ!" ವೇದವನ್ನು ಓದಿ ಅರ್ಥಜ್ಞಾನಮಾಡಿಕೊಳ್ಳದವನು ಭಾರವನ್ನು ಹೊತ್ತುನಿಂತ ಮೋಟುಮರದಂತೆ, ಎಂದು ನಿಂದಿಸಿರುವುದು, ಅರ್ಥಜ್ಞಾನವನ್ನು ಅನುಕೂಲವಿದ್ದರೆ ಮಾಡಿಕೊಳ್ಳುವುದು, ಅನುಕೂಲವಿಲ್ಲದವರು ಬೇಡ ಎಂದೆನ್ನಲಾಗದು. ಅದು ಕಾಮ್ಯ ಕರ್ಮವಲ್ಲ-ತ್ರೈವರ್ಣಿಕರಿಗೆ ನಿತ್ಯಕರ್ಮವೇ ಆಗಿರುವುದರಿಂದ ಸಂಧ್ಯಾವಂದನಾದಿಗಳಂತೆ ಅದು ಅವಶ್ಯಾನುಷ್ಠೇಯ. ಈ ವಿಷಯವನ್ನು ಶಾಸ್ತ್ರ ಕರ್ತೃಗಳೆಲ್ಲರೂ ಒಮ್ಮತದಿಂದ ನಿರ್ಣಯಿಸಿರುವರು. ಅಲೌಕಿಕ ಸರ್ವ ವಿಷಯವನ್ನು ಪ್ರಕಾಶಪಡಿಸುವ ಸರ್ವಜ್ಞಕಲ್ಪ ಅಪೌರುಷೇಯ ವೇದವನ್ನು ಮಾನವನು ತನ್ನ ಅಲ್ಪ ಬುದ್ಧಿಯಿಂದ ಅರ್ಥಮಾಡುವುದು ಅಸಾಧ್ಯ ಅಯೋಗ್ಯ. ಪಾಶ್ಚಾತ್ಯರನೇಕರು ಆಪಾತತಃ ತೋರುವ ಅರ್ಥಗಳನ್ನು ವಿವರಣೆ ಮಾಡಲು ಸಾಹಸಮಾಡಿದ್ದಾರೆ. ಅದರಲ್ಲಿ ತೋರುವ ಅನೇಕ ಕಥೆಗಳು ಕೆಲ ಒಂದು ವ್ಯಕ್ತಿಗಳು ಮುಂತಾದವುಗಳ ಸೋಲಿಂದ ವೇದಗಳ ಜನ್ಮ ಪತ್ರಿಕೆಯನ್ನು ತಯಾರಿಸಿ ಪ್ರಕಟಿಸಲಿಕ್ಕೂ ಮುಂದು ಬಂದಿರುವರು. ಇದು "ಚಿತ್ರಸೇನಾ ಇಷುಬಲಾ" ಎಂಬ ವೇದವಾಕ್ಯದಲ್ಲಿದ್ದ ಚಿತ್ರಸೇನಪದದ ಆಧಾರದಿಂದ ನಮ್ಮ ಮುತ್ತಜ್ಜನ ತಂದೆಯ ಕಾಲದಲ್ಲಿ ಮನೆಯ ಶಾನುಭೋಗ ಚಿತ್ರಸೇನನಿದ್ದ—ಅವನ ನಂತರ ಈ ಮಂತ್ರ ರಚಿತ ಎಂದು ಒಬ್ಬನ ವಿಮರ್ಶೆಯಂತೆ ಹಾಸ್ಯಾಸ್ಪದವೇ ಸರಿ. ಈ ವಿಷಯದ ಕುರಿತು—ಅನಂತವಾದ ಕಾಲಪ್ರವಾಹದಲ್ಲಿ ಅನಾದಿ ನಿತ್ಯ ವೇದವು ಏಕರೀತಿಯಿಂದ ನಡೆಯುವ ಕೆಲವೊಂದು ಮುಖ್ಯ ವಿಷಯವನ್ನು ಹೇಳುವ ದಿಶೆಯಲ್ಲಿ ಆನುಪೂರ್ವಿಯ ಏಕತೆಯು ಅನಿವಾರ್ಯ, ಎಂದು ಈ ಹಿಂದೆಯೇ ತಿಳಿಸಿರುವೆವು. ವಸ್ತುತಃ ಅಪೌರುಷೇಯ ನಿತ್ಯ ವಾಕ್ಯವನ್ನು ಒಪ್ಪದೆ ಹೋದರೆ ಸಕಲ ಲೋಕಸಿದ್ಧಧರ್ಮಾಧರ್ಮವ್ಯವಸ್ಥೆ ಅಪ್ರಾಮಾಣಿಕವೆಂದಾದೀತು. ಅದು ಅಪ್ರಾಮಾಣಿಕವಾದರೆ ಲೋಕವ್ಯವಸ್ಥೆಯೇ ಬುಡಮೇಲಾದೀತು. ಈ ವಿಚಾರವನ್ನು ಸವಿಮರ್ಶವಾಗಿ ಶ್ರೀಮದಾಚಾರ್ಯರು ತತ್ತ್ವನಿರ್ಣಯಾದಿಗ್ರಂಥಗಳಲ್ಲಿ ನಿರೂಪಿಸಿರುವರು. ಆದುದರಿಂದ ವೇದಗಳಿಗೆ ಕಾಲನಿರ್ಣಯ ಮಾಡುವ ಕೆಲಸ ನಿರರ್ಥಕವೂ ಅನರ್ಥಕಾರಿಯೂ ಆಗಿದೆ. ಇಷ್ಟು ಮಂತ್ರಗಳಿಗೆ ಋಷಿಗಳು ಪ್ರಸಿದ್ಧರಾಗಿದ್ದು ಅವರೇ ಕರ್ತೃಗಳೆಂದು ಅರ್ವಾಚೀನವಾದ. ಇದೂ ಸರಿಯಲ್ಲ—ತಪಸ್ಸಿನ ಮತ್ತು ಯೋಗ ಸಿದ್ಧಿಯ ಬಲದಿಂದ ಅತೀತಾನಾಗತವನ್ನು ಕರತಲಾಮಲಕದಂತೆ ಸಾಕ್ಷಾತ್ಕರಿಸಬಲ್ಲ ಪ್ರಾಚೀನ ಮಹರ್ಷಿಗಳು ಬ್ರಹ್ಮಸಮಾಧಿ ಮಗ್ನರಾದಾಗ ಅಶರೀರ ವಾಣಿಯಂತೆ ಕೆಲವೊಂದು ಮಂತ್ರಗಳನ್ನು ಕಾಣುತ್ತಾರೆ. ಪರಮಾತ್ಮನ ಇಚ್ಛೆಯಂತೆ ಅದು ಅವರವರಿಗೆ ಗೋಚರಿಸುವುದು. ಇಷ್ಟರಿಂದ ಆ ಮಂತ್ರವನ್ನು ಅವರೇ ಮಾಡಿದರೆನ್ನಲಾಗದು. ಭೌತಿಕ ವಸ್ತುಶೋಧಕರು ತಮ್ಮ ವಿಜ್ಞಾನ ಸಾಮರ್ಥ್ಯದಿಂದ ಒಂದು ವಸ್ತುವನ್ನು ಭೂಗರ್ಭದಿಂದ ಶೋಧಿಸಿ ಲೋಕಕ್ಕೆ ಉಪಯೋಗಕ್ಕಾಗಿ ನೀಡುವರು. ಇದರಿಂದ ಆ ವಸ್ತುವನ್ನು ಅವರು ಮಾಡಿದರೆನ್ನಲಾಗುವುದೇ? ಸಂಶೋಧಿಸಿದವರು ಅಷ್ಟೆ. ಅಂತೆಯೇ ಶೋಧಿತ ವಸ್ತುವಿಗೆ, ಶೋಧಕನ ಹೆಸರು ಶಾಶ್ವತವಾಗಿ ನಿಲ್ಲುವಂತೆ ಆತನ ಹೆಸರನ್ನೊಳಗೊಂಡ ಅಂಕಿತ ನಾಮವನ್ನೂ ಇಡುವರು. ಅದರಂತೆ ಕೆಲ ಉಪನಿಷತ್ತುಗಳಿಗೂ ಸಂಹಿತೆಯೊಳಗಿನ

ಸೂಕ್ತಗಳಿಗೂ ಅದೇ ಹೆಸರು ಬಂದಿರುವುದು. ಇದ್ದರಿಂದ ಋಷಿಗಳು ಕರ್ತಾರರಲ್ಲ. ಆದ್ದರಿಂದ "ಮಂತ್ರದ್ರಷ್ಟಾ ಋಷಿಃ" ಎಂದೇ ಋಷಿ ಶಬ್ದದ ನಿರ್ವಚನವೂ ಇರುವುದು. ಆದ್ದರಿಂದ ವೇದವಾಣಿಗೆ ಕಾಲನಿರ್ಣಯ ಮಾಡುವುದು ಯುಕ್ತವಲ್ಲ.

ಆದುದರಿಂದ ಸರ್ವಾರ್ಥಪ್ರಕಾಶಕವಾದುದೂ ಅತಿಗಹನವೂ ಆದ ಈ ವೇದವನ್ನು ಅರ್ಥಮಾಡುವುದೆಂದರೆ ಸುಲಭದ ಕೆಲಸವಲ್ಲ. ವೇದ ವ್ಯಾಖ್ಯಾನ ಮಾಡುವವರು ಸರ್ವಜ್ಞಕಲ್ಪರು ಇರಬೇಕು. ಪುರಾಣ ನ್ಯಾಯ ವ್ಯಾಕರಣಾದಿಗಳಲ್ಲಿ ನಿಷ್ಣಾತರಿರಬೇಕು. ವೇದ ತಾತ್ಪರ್ಯವನ್ನು ಕಂಡು ಹಿಡಿಯುವ ಸೂಕ್ಷ್ಮಮತಿಗಳಾಗಿರಬೇಕು. ನಿಗಮಾದಿಪಾರಂಗತರಿರಬೇಕು. ಸಾವಿರಾರು ವರ್ಷಗಳ ಹಿಂದೆ ಯಾಸ್ಕ ಮುಂತಾದ ಮೇಧಾವಿ ವ್ಯಕ್ತಿಗಳು ತಮ್ಮ ಸಮಗ್ರ ಜೀವನವನ್ನೇ ಮುಡಿಪಾಗಿರಿಸಿ ವೇದಾರ್ಥೋಪಾಯವನ್ನು ಕಂಡು ಹಿಡಿಯಲು ಪ್ರಯತ್ನಿಸಿದರು. ನಿರುಕ್ತ, ಪದಪಾಠ, ಛಂದಸ್ಸಿನ ವಿಚಾರ ಮಂತ್ರಾನುಕ್ರಮಣಿಕೆ ಮುಂತಾದ ಹಲವು ಸಾಧನಗಳನ್ನು ನಿರ್ಮಿಸಿ ವೇದಾರ್ಥ ನಿರ್ಣಯಮಾಡುವವರಿಗೆ ಮಹದುಪಕಾರ ಮಾಡಿದ್ದಾರೆ. ಅವರ ಆ ಪ್ರಯತ್ನದ ಫಲವನ್ನು ಮುಂದಿನ ಮಾನವ ಪೀಳಿಗೆ ಎಂದೂ ಆಸ್ವಾದಿಸದೆ ಬಿಡುವಂತಿಲ್ಲ. ಈ ಸಾಧನಗಳನ್ನು ಅವಲಂಬಿಸಿಯೇ ಅನೇಕ ವೇದಭಾಷ್ಯಗಳು ಬೆಳಕಿಗೆ ಬಂದಿರುತ್ತವೆ. ವೇದಾರ್ಥ ಮಾಡಿಕೊಳ್ಳುವ ಲಾಲಸೆ ಉಳ್ಳವರಿಗೆ ಇದು ಮಾರ್ಗದರ್ಶಕವೇ ಆಗಿದೆ. ಹೀಗಿದ್ದರೂ ಇವೆಲ್ಲವು ಪರಿಪೂರ್ಣ ಸಾಧನವೆನ್ನಲಾಗದು. ಏಕೆಂದರೆ—ಅನಂತವೇದಗಳು ಓಂಕಾರವನ್ನೇ ಆಶ್ರಯಿಸಿರುವವು. ಓಂಕಾರದ ಪರಮ ಮುಖ್ಯವಾದ ಅರ್ಥ ಅನಂತ ಗುಣಗಣಾಶ್ರಯ ಪರಬ್ರಹ್ಮ. ಈ ವಿಷಯದಲ್ಲಿ ಯಾವ ವೈದಿಕನೂ ಸಂಶಯ ಪಡಲಾರ. ಅಂದ ಮೇಲೆ ವೇದದ ಪ್ರತಿಯೊಂದು ಅಕ್ಷರ, ಪದ ವಾಕ್ಯಗಳಿಗೂ ಪರಮ ಮುಖ್ಯವಾಗಿ ಶ್ರೀ ಪರಮಾತ್ಮನೇ ಪ್ರತಿಪಾದ್ಯನಾಗಬೇಕಲ್ಲವೆ? ಈ ದಿಶೆಯಲ್ಲಿ ವೇದವನ್ನು ವಿವರಿಸಿದರೆ ಮಾತ್ರ ನಿಷ್ಕೃಷ್ಟಾರ್ಥ ದೊರೆತಂತಾಗುವದು. ವೇದದಲ್ಲಿ ಬರತಕ್ಕ ಇಂದ್ರಾದಿ ಪದಗಳನ್ನೂ ಇಂದ್ರ ಮೊದಲಾದ ದೇವತಾ ಪರವಾಗಿಯೇ ಇಟ್ಟುಕೊಂಡರೆ ಆ ಪರಮ ಮುಖ್ಯಾರ್ಥಕ್ಕೆ ಎಲ್ಲಿಯ ಅವಕಾಶ? ಯಾಸ್ಕಾದಿಗಳಿಂದ ವಿರಚಿತ ನಿರುಕ್ತಾದಿಗಳ ಆಧಾರದ ಮೇಲೆ ಬರೆಯಲಾದ ಹಲವು ಭಾಷ್ಯಗಳು ಮೇಲಿಂದ ಮೇಲಕ್ಕೆ ತೋರತಕ್ಕ ಅರ್ಥಗಳನ್ನೇ ನಿರೂಪಿಸತಕ್ಕವುಗಳು. ಇಷ್ಟೇ ಅರ್ಥ ವೇದಕ್ಕೆ ಎಂದರೆ ಅದೊಂದು ರೀತಿಯಲ್ಲಿ ಅದರ ಮಹತ್ವವನ್ನು ಮರೆಸಿದಂತಾಗುವುದು. ಅನಂತ ವೇದಗಳನ್ನೂ ತನ್ನ ಸ್ವರೂಪಸಾಮರ್ಥ್ಯದಿಂದಲೇ ಸರಿಯಾಗಿ ತಿಳಿದು ಅವುಗಳನ್ನು ವಿಭಾಗಿಸಿದ, ವ್ಯಾಪ್ತಜ್ಞಾನ ಮಹಾಂಶುಮಾನರೆನಿಸಿದ ವಿಜ್ಞಾನಘನ ಶ್ರೀವೇದವ್ಯಾಸರೇ. ಅವುಗಳ ಪರಮ ಮುಖ್ಯ ತಾತ್ಪರ್ಯವನ್ನು ತಿಳಿಸಬಲ್ಲವರು. ಅವರೇ ಆ ವೇದಗಳ ಅರ್ಥವಿವರಣೆಗಾಗಿ ನಿರುಕ್ತ, ಸ್ವಾಧ್ಯಾಯ, ಸತ್ತರ್ಕ, ಮುಂತಾದ ಹಲವು ಆಧಾರ ಗ್ರಂಥಗಳನ್ನು ಮಾಡಿ ಆಗಾಗ್ಗೆ ಅವತರಿಸಿ ಲೋಕೋಪಕಾರ ಮಾಡಿರುವರು. ಆ ಗ್ರಂಥಗಳೊಂದೂ ನಮ್ಮ ಪ್ರಾಚೀನ ಯಾಸ್ಕ ಪ್ರಭೃತಿಗಳಿಗೆ ದೊರೆತಂತೆ ಕಾಣುವುದಿಲ್ಲ. ಶ್ರೀ ವ್ಯಾಸರು ವೇದಗಳಿಗೆ ಮೂಲತಃ ನಿಖಿಲಗುಣ ಪರಿಪೂರ್ಣಬ್ರಹ್ಮ, ಅಧಿದೈವ, ಅಧ್ಯಾತ್ಮ, ಎಂದು ಮೂರು ವಿಧವಾಗಿ ಅರ್ಥ ಮಾಡಿರುವರು. ಬ್ರಹ್ಮಮೀಮಾಂಸೆಯಲ್ಲಿ ಈ ವಿಚಾರವನ್ನು ಅವರೇ ಸ್ಪಷ್ಟಪಡಿಸಿರುವರು. ಸಾಮಾನ್ಯ 800, ವರ್ಷಗಳ ಹಿಂದೆ ಅವತರಿಸಿದ ವಾಯ್ವಂಶಸಂಭೂತರಾದ ಶ್ರೀ ಮಧ್ವಾಚಾರ್ಯರವರು ಈ ಗ್ರಂಥಗಳನ್ನೆಲ್ಲ ಶೋಧಿಸಿರುವರು. ಸಾಕ್ಷಾದ್ವೇದವ್ಯಾಸರ ಮುಖ್ಯ ಶಿಷ್ಯರಾದುದರಿಂದ ಅವರಿಗೆ ಈ ಅವಕಾಶ ದೊರೆಯಿತು 'ವ್ಯಾಸಾಜ್ಞಯಾ ಭಾಷ್ಯವರಂ ವಿಧಾಯ, ತಸ್ಯೈವ ಶಿಷ್ಯೋ ಜಗದೇಕ ಭರ್ತುಃ ಎಂದು ತಾನೇ ತಾತ್ಪರ್ಯ ನಿರ್ಣಯದಲ್ಲಿ ಹೇಳಿಕೊಂಡಿರುವರು. ಅವರ ಕಾಲದಲ್ಲಿದ್ದ ವೇದ ಭಾಷ್ಯಗಳು ಸಂಪೂರ್ಣ ಅರ್ಥವನ್ನು ಕೊಡುವವಲ್ಲ. ಅಲ್ಲದೆ ಕ್ವಚಿತ್ ವೇದ ತಾತ್ಪರ್ಯ ವಿರುದ್ಧಗಳಾಗಿಯೂ ಇವೆಯೆಂದು ಅವರು ತಿಳಿದರು. ವ್ಯಾಸನಿರ್ಮಿತ ನಿರುಕ್ತಾದಿಗಳ ಆಧಾರದ ಮೇಲೆ ವೇದಕ್ಕೆ ಹೇಗೆ ಅರ್ಥಮಾಡಬೇಕೆಂಬುದನ್ನು ಋಗ್ವೇದದ ನಲ್ವತ್ತು ಸೂಕ್ತಗಳಿಗೆ ಭಾಷ್ಯ ಬರೆದು ದಿಗ್ದರ್ಶನ ಮಾಡಿದರು. ಆಚಾರ್ಯರು ತಮ್ಮ ಋಗ್ಭಾಷ್ಯದಲ್ಲಿ ವೇದಗಳಿಗೆ ಪರಬ್ರಹ್ಮ, ಅಧಿದೈವ, ಅಧ್ಯಾತ್ಮ ಎಂಬ ಅರ್ಥತ್ರಯಗಳು ಹೇಗೆ ಹೊಂದಿಕೊಳ್ಳುತ್ತವೆ ಎಂಬುದನ್ನು ಸಾಧಾರವಾಗಿ ನಿರೂಪಿಸಿರುವರು

ಇದನ್ನು ವ್ಯಾಖ್ಯಾನಮಾಡಿದ ಮಹಾಮೇಧಾವಿಗಳಾದ ಶ್ರೀಮಜ್ಜಯತೀರ್ಥರು ಈಗ ಪ್ರಚಲಿತವಾಗಿರುವ ಸಾಯಣಭಾಷ್ಯವನ್ನೂ ಕೆಲವು ಕಡೆ ವಿಮರ್ಶಿಸಿದ್ದಾರೆ. ಯಾಸ್ಕಾದಿಗಳ ಗ್ರಂಥಗಳಲ್ಲಿದ್ದ ನ್ಯೂನತೆಯನ್ನೂ ಪರಿಶೀಲಿಸಿರುವರು.

ಶ್ರೀಮದಾಚಾರ್ಯರ ಭಾಷ್ಯವು ವೇದಗಳ ಸಾವಿರಾರು ಶಾಖೆಗಳ ಮತ್ತು ವೇದವ್ಯಾಸಕೃತ ಮೂಲ ಗ್ರಂಥಗಳ ಆಧಾರದ ಮೇಲೆ ಬರೆದದ್ದಾಗಿದೆ. ಇದು ಪರಮಮುಖ್ಯವಾಗಿ ಶ್ರೀ ವಿಷ್ಣುವನ್ನೂ ನಾನಾ ಗುಣೋತ್ಕರ್ಷ ಪ್ರತಿಪಾದಕ ಮುಖದಿಂದ ವೇದಗಳು ಏಕಕಂಠದಿಂದ ಸ್ತೋತ್ರ ಮಾಡುತ್ತವೆ, ಎಂಬುದನ್ನು ಸ್ಪಷ್ಟಪಡಿಸುತ್ತದೆ. ಎರಡನೇ ಮುಖ್ಯವಾಗಿ ಅನಾವ ಇಂದ್ರಾದಿ ದೇವತೆಗಳನ್ನು ಹೇಗೆ ತಿಳಿಸುವವೆಂಬುದನ್ನು ವಿಶದಪಡಿಸುತ್ತದೆ. ಮೂರನೆಯದಾಗಿ ಅಧಿಕಾರಿಯಾದ ಮುಮುಕ್ಷುವು ಮಾನಸ ಜ್ಞಾನಯಜ್ಞವನ್ನು ಹೇಗೆ ನಿರ್ವರ್ತಿಸಬೇಕೆಂಬುದನ್ನೂ ವಿವರಿಸುತ್ತದೆ. ಈ ತರದ ಭಾಷ್ಯವು ಜಗತ್ತಿನಲ್ಲಿ ಅನಂತಕಾಲ ಪ್ರವಾಹದಲ್ಲಿ ಇದುವರೆಗೆ ಯಾರಿಂದಲೂ ನಿರ್ಮಿತವಾಗಿಲ್ಲ. ಇದು ಶ್ಲೋಕರೂಪವಾಗಿದ್ದು ಕಂಠಪಾಠ ಮಾಡಿಕೊಳ್ಳಲು ಅನುಕೂಲವಾಗಿದೆ ಅಲ್ಲದೆ ಪರಿಮಿತವಾಗಿ ವ್ಯಾಕರಣ ನಿರುಕ್ತ, ಛಂದಸ್ಸು, ತತ್ದೈವತಾ, ಮುಂತಾದ ಅವಶ್ಯಾಪೇಕ್ಷಿತ ಪ್ರಮೇಯಗಳಿಂದಲೂ ಒಳಗೊಂಡಿದೆ. ಇದು ಭಾಷ್ಯಕಾರರಾದ ಶ್ರೀ ಆಚಾರ್ಯರ ಅತ್ಯದ್ಭುತ ಮೇಧಾಶಕ್ತಿಯು, ಮತ್ತು ಅನಂತ ಶಾಖಾವೇದಿತ್ವದ ದ್ಯೋತಕವಾಗಿದೆ. ವೇದದ ಸಂಪೂರ್ಣ ಭಾಗಕ್ಕೆ, ಭಾಷ್ಯವಿಲ್ಲ ಎಂಬ ನ್ಯೂನತೆಯುಳ್ಳದೆ, ಇದ್ದ ಭಾಗವು ಪೂರ್ಣವಾಗಿ ಸರ್ವಾಂಗ ಸುಂದರವೆನ್ನಲು ಅಡ್ಡಿಯಿಲ್ಲ. ತಾವು ರಚಿಸಿದ ಭಾಷ್ಯಭಾಗವನ್ನು ಸಂಪೂರ್ಣ ಮನನ ಮಾಡಿದರೆ ವೇದಗಳ ಯಾವ ಭಾಗವನ್ನೂ ಬುದ್ಧಿವಂತನು ಅರ್ಥಮಾಡಿಕೊಳ್ಳಬಹುದೆಂದು ಅವರು ಅಷ್ಟರಲ್ಲೇ ಬಿಟ್ಟಿರಬೇಕು. ಅಥವಾ ಆಧ್ಯಾತ್ಮಿಕತೆಯಲ್ಲಿ ಜನತೆಯ ಪ್ರವೃತ್ತಿ ಮುಂದಿನ ಯುಗಾಂಗದಲ್ಲಿ ಇಳಿಮುಖವಾಗಿರುವದರಿಂದ ಇಷ್ಟರಿಂದಲೇ ಅಲಂಬುದ್ಧಿ ಉಂಟಾಯಿತೆಂದೂ ಹೇಳಬಹುದು. ಏನೇ ಇರಲಿ, ಈ ಋಗ್ಭಾಷ್ಯವನ್ನು ಚೆನ್ನಾಗಿ ಓದಿ ಮನನ ಮಾಡಿದರೆ ಜೀವನ ಸಾರ್ಥಕ, ಕೃತಕೃತ್ಯ, ಎಂದೆನಿಸಲು ಯಾವ ಅಭ್ಯಂತರವೂ ಇಲ್ಲ

ಪ್ರಕೃತ ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿರುವುದರಿಂದ ಇದರ ಸವಿ ಸಂಸ್ಕೃತ ವಿದ್ವಾಂಸರ ಪಾಲಿಗೆನೇ ಎಂದಿತ್ತು. ಒಂದು ದೃಷ್ಟಿಯಲ್ಲಿ ಇದು ಸಂಸ್ಕೃತಾನಭಿಜ್ಞರಿಗೆ ದೊಡ್ಡ ನಷ್ಟವೆನ್ನಬಹುದು. ಮಧ್ವಮುನಿ ಸೇವಾಸಂಘದ ಕಡೆಯಿಂದ ಪ್ರಚೋದಿತರಾದ ನಮ್ಮ ಮತದ ಆಸ್ಥಾನ ವಿದ್ವಾನ್ ಶ್ರೀ ಅಗ್ರಹಾರ ನಾರಾಯಣ ಪಂಡಿತರು ಸರಳ ಕನ್ನಡ ಭಾಷೆಯಲ್ಲಿ ಇದರ ಅನುವಾದಮಾಡಿ ಈ ನಷ್ಟವನ್ನು ತುಂಬಿಸಿದ್ದಾರೆ. ಶ್ರೀ ಪಂಡಿತರು ತಮ್ಮ ಜೀವಿತಕಾಲವನ್ನು ಬಹುಮಟ್ಟಿಗೆ ಮಾಧ್ವಗ್ರಂಥಗಳ ಅನುವಾದಕ್ಕೇ ಉಪಯೋಗಿಸಿಕೊಂಡವರೆಂದರೆ ತಪ್ಪಾಗದು. ಅವರೀಗ ಶ್ರೀಮದಾಚಾರ್ಯ ವಿರಚಿತ ಋಗ್ಭಾಷ್ಯವನ್ನು ಸರಳ ಶೈಲಿಯಿಂದ ಕನ್ನಡ ಭಾಷೆಯಲ್ಲಿ ಅನುವಾದಿಸಿ ಮತ್ತೊಂದು ಕೃತಿಯನ್ನು ತೋರಿಸಿದರು ಒಂದು ಮುನ್ನುಡಿಯನ್ನು ಬರೆಸಿ ಅನುಗ್ರಹಿಸಬೇಕೆಂದೂ ಶ್ರೀಮಧ್ವಮುನಿ ಸೇವಾಸಂಘದ ಪರವಾಗಿ ಕೇಳಿಕೊಂಡರು. ಶ್ರೀಮನ್ಮಧ್ವಾಚಾರ್ಯರವರ ಗ್ರಂಥಗಳಿಗೆ ಪರಿಚಯಾತ್ಮಕ ಮುನ್ನುಡಿ ಬರೆಯುವ ಪ್ರಾಶಸ್ತ್ಯಕ್ಕೆ ನಿಜವಾಗಿಯೂ ದೇವತೆಗಳೇ ಮುಖ್ಯಾಧಿಕಾರಿಗಳು. ನಮ್ಮಂಥವರು ಆ ಕುರಿತು ಕೈಹಾಕುವುದು "ಯಸ್ಮಾದ್ವಶೋಽಪಿ ಯತತೇ ತದತೀವ ಹಾಸ್ಯಂ" ಎಂದಾಗದಿರದು. ಆದರೂ ನಮ್ಮ ಶ್ರೇಯಸ್ಸನ್ನಪೇಕ್ಷಿಸಿ ಈ ಎರಡು ಮಾತನ್ನು ಮುನ್ನುಡಿಯಾಗಿ ಮುಂದಿರಿಸಿರುವೆವು. ಪ್ರಕೃತ ಈ ಕನ್ನಡಾನುವಾದವು ಕನ್ನಡಕ್ಕೊಂದು ಅಪೂರ್ವ ಕೃತಿಯಾಗಿದೆ. ಶಾಸ್ತ್ರೀಯ ಮೂಲ ತತ್ವಗಳನ್ನೂ ಭಾಷೆಯಲ್ಲಿಳಿಸುವುದು ಸುಲಭದ ಕೆಲಸವಲ್ಲ. ಶ್ರೀಮಧ್ವಸಿದ್ಧಾಂತದ ಅವಿರತ ಸೇವೆಯನ್ನು ಕೈಗೊಂಡ ನಮ್ಮ ಶ್ರೀ ಪಂಡಿತರ ಪ್ರವೃತ್ತಿ ಸರ್ವಥಾ ಅಭಿನಂದನೀಯವು. ಇವರೀಗ ಕೊನೆಯದಾಗಿ ಆಚಾರ್ಯರ "ಯತಿಪ್ರಣವಕಲ್ಪ" ಎಂಬ ಗ್ರಂಥವನ್ನು ಅನುವಾದಿಸಲುಪಕ್ರಮಿಸುವರು. ಈ ಪವಿತ್ರಕೃತಿಯು ಬೇಗನೇ ಬೆಳಕಿಗೆ ಬಂದು ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳ ಭಾಷಾನುವಾದವು ಪಂಡಿತರಿಂದಾಗಿ ಸಂಪೂರ್ಣವಾಯಿತು ಎಂದೆನ್ನುವಂತೆ ಶ್ರೀದೇವರು ಅವರಿಗೆ ಆಯುರಾರೋಗ್ಯಾದಿ ಸಂಪತ್ತನ್ನು ಅನುಗ್ರಹಿಸಲಿ ಎಂದು

ನಮ್ಮ ಉಪಾಸ್ಯಮೂರ್ತಿ ಶ್ರೀಕೃಷ್ಣ ನೃಸಿಂಹರನ್ನು ಪ್ರಾರ್ಥಿಸುವೆವು. ಜನತೆ ಈ ಕೃತಿಯನ್ನು ಗೌರವಾದರಗಳಿಂದ ಸ್ವಾಗತಿಸಿಕೊಂಡು ಅದರಲ್ಲಿ ನಿರೂಪಿತವಾದಂತೆ ವೇದಾರ್ಥ ಜ್ಞಾನವನ್ನು ಸಂಪಾದಿಸಿಕೊಂಡು ಕೃತಾರ್ಥವಾಗಲೆಂದೂ ಹಾರ್ದಿಕವಾಗಿ ಹರಸಿ, ನಮ್ಮ ಮುನ್ನುಡಿಯ ಎರಡುನುಡಿಯನ್ನು ಶ್ರೀಮುಖ್ಯಪ್ರಾಣಾಂತರ್ಗತ ಶ್ರೀನೃಸಿಂಹನಿಗರ್ಪಿಸಿ ಉಪರಮಿಸುವೆವು. ಓಂ ಸ್ವಸ್ತಿ!

ಯಸ್ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ।
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್ ॥

ಪ್ಲವಂಗ ಆಷಾಢ
ಬಹುಳ ೧೧
ದಿನಾಂಕ
2—7—67

ಶ್ರೀ ಶ್ರೀ ೧೦೮ ಶ್ರೀ ಪರಮಹಂಸೇತ್ಯಾದಿ ಬಿರುದಾಂಕಿತರಾದ
ಪ್ರಕೃತ ಪರ್ಯಾಯ ಪೀಠಾಧಿರೂಢರಾದ ಕಾಣಿಯೂರು
ಮಠದ ಶ್ರೀ ವಿದ್ಯಾವಾರಿನಿಧಿತೀರ್ಥ ಶ್ರೀಪಾದಂಗಳವರು.

SRI MADHVA'S RIGBHASHYA

तत्त्ववादेन रम्येण नवनीतेन बोधयन् ।
आनन्दवर्धनः कस्य नासीन्मध्वो हरिप्रियः ॥

At critical moments in the history of our land, the Lord incarnated Himself or sent out His emissaries to put the erring people on into the right path.

"The old order changeth, yielding place to new,
And God fulfils Himself in many ways,
Lest one good custom should corrupt the world"—

So declared Tennyson and this fact is proved in the history of the religious upheavals of any country in the world. In our country also, the religious prophets, who could be termed the Messengers of the Time-less, showed themselves at the bidding of the Lord from time to time and tried to redeem their less fortunate bretheren. Samkara, the Avatara of Siva as his followers believe, came in to stem the tide of Buddhism and resuscitate Sanatana Dharma but his emphasis was too much on *jnana* which alone would lead us to salvation. This of course was quite necessary at the time since the masses were being weaned away from their vedic moorings by the atheist Buddhist philosophy. After the lapse of a few centuries, Ramanuja, the incarnation of Adishesha as his followers believe, appeared on the scene and preached the Gospel of *Sharanagati* or absolute surrender or dedication to god which alone would lead us on to salvation. The pendulum had swung to the other extreme and Madhva, the next prophet, believed to be third incarnation of Vayu, preached the Gospel of the golden mean between the two extreme views of the previous prophets and pleaded for a proper balancing of the *jnana* or religious lore and *Karma* or human effort—jnana and Karma samuchchaya, which along with *bhakti* or devotion to the Supreme would secure redemption for us.

This Dvaita philosophy of Sri Madhva has often been misunderstood and even misrepresented; when Madhva argued with relentless logic, for example, that the human soul and the Divine soul would always remain separate, even in the redeemed state, the

human soul continuing to be the servant even there, the adversaries of the other two schools began to twist his views and present him in an unfavourable light. As the late C. R Krishna Rao explained clearly in his English book dealing with Sri Madhva, His Life and doctrine published on 22—6—1929 by the Council of Sri Madhva Muni Seva Sanga, Udupi, the main task to which that Council addressed itself under his enlightened inspiration was to combat this misrepresentation. It was in the year 1926 when he was District Munsif at Udupi that the idea of starting this Sangha was mooted by him. The late Karpur Srinivasa Rao, Retired Executive Engineer, Mysore, than whom there was no greater Madhva Scholar then living, blessed this venture when he visited Udupi that year and the Pandits of the S. M. S. P. Samskrit College, where I happened to be the Acting Principal that year, responded wholeheartedly to the call of the Sangha. Now after 40 years, this labour of love started under such auspices by this band of selfless scholars, is crowning its efforts with the translation into Kannada of that last but most significant (though small) work of Madhva, the Rigbhashya.

In my sloka at the beginning of this article, I have compared this Bhashya to *Navaneeta*, freshly prepared butter. This is the butter churned out by him from the Rig Veda. The adversaries of Madhva, be it noted, might not have liked his philosophy because of its extremely uncompromising nature, but they had to concede, in the interests of true and accurate scholarship the title *Tattvavaada* or doctrine of truth to it. Madhava Acharya (1302—1387 A.D.), the author of the Sarvadarshana sangraha refers to Poornaprajnadarshana-Poornaprajna being one of the names of Madhva—by this appellation I have also referred to him as Haripriya in my sloka as he was never tired of emphasising that the greatest God was Hari or Vishnu. This was the central plank of his doctrine as taught to him by Vedavyasa in Badarikaashrama, where his followers believe, he resides even today learning at the feet of his Guru. The Hari Vamsha declares:

वेदे रामायणे चैव पुराणे भारते तथा ।
आदावन्ते च मध्ये च विष्णुस्सर्वत्र गीयते ॥

Madhva's was a mastermind which was at home with all branches of Samskrit literature, not excluding the Vedas even. If Sri Samkara or Ramanuja would look askance at the Vedic hymns and whould not dare to touch them except only indirectly, Madhva exhibited his masterly over them also, and only illustratively commented on the first forty sooktas of the Rig Veda, perhaps suggesting that if time were at his disposal, he could have commented on the entire vedas also in a much better way than Saayana. As it is even with this fragmentary commentary, he has proved to the satisfaction of the scholars that the central doctrine of the Vedas was definitely the Supremacy of Vishuu. The Aitareya Brahmana declares in unequivocal terms:

अग्निर्वै देवानामवमो विष्णुः परमः ॥

The fates had however willed otherwise;the purpose of Madhva's incarnation was to preach this doctrine of Vishnu's supremacy by establishing and consolidating his new faith of promise which he vouchsafed to his disciples. This was itself a Herculean task which engrossed his energy for more than 50 or 60 years and only 2 or 3 years prior to his shuffling off his mortal coil, he started and laboured hard to show that Vyasa's central teaching even in the Rig Veda was this doctrine as revealed by his Brahma Tarka and Nirukti which were somehow available to him in his incessant search for manuscripts. These two were the most *precious* in his collection as can be gleaned from the quotations therefrom in his various works (The late C. R. Krishna Rao has collected after patient endeavour almost all the available quotations from the Brahma Tarka and published them slightly prior to his death). These two books are irrevocably lost now; they had preserved the tradition of Vyasa faithfully and following this tradition sincerely, Madhva called out aloud to his disciples, in the true spirit of Longfellow's Psalm of Life, to listen to his message and redeem themselves as he was only echoing Vyasa's clarion call.

In my sloka, I have compared Madhva to Anandavardhana,the greatest of the literary critics in India hailing from Kashmir in about 950 A. D. It was this critic who emphasised that the essence

of literature is its hidden context, not the straight-forward meaning of the words employed. This theory of suggestion he called by the peculiar name *Dhvani* and this theory holds the field in literary circles, even today. What Anandatirtha did for Indian Philosophy was exactly the same; he suggested that if Agni be the God worshipped in the opening sookta of the Rig Veda, it was not he that was meant to be worshipped therewith, it was the *Sarvajeevapranetaa*, the indwelling soul in every creature, Vishnu alone that was really worshipped. Just as Anandavardhana is acclaimed as having worked out an elaborote and grand synthesis of all that had been said on the subject of literary criticism prior to him, Madhva, historically the last of the great *Bhagavatpaadas* or prophets in the iine of Vedavyasa, worked out a philosophical synthesis which supersedes and excels all others. He idealised and spiritualised the whole process and made it easily accessible to one and all who cared to listen to his devotional hymns, the most exquisite among them being his *Dvaadashastotra*. This ecstatic song, sung by him in his exquisite joy at finding the image of Krishna which had come in search of him and was installed by him later in Udupi provided the masses with the essential tenets of the Bhagavatha Purana which according to him was the very cream of the Brahma sutras:

अर्थोऽयं ब्रह्मसूत्राणां पुराणं शुकसम्मतम् ॥

Its(the stotra's)devotional fervour was infectious and spread like wild fire among his disciples and the result was the exquisite *Devara naamas* or devotional songs sung by Purandara, Kanaka and other saint-poets. Madhva, the unique critic, regarded tha Rig Veda as one of the best pieces of suggestive poetry inspired by the reverential feelings animating the sages and flowing out towards the Supreme God Vishnu as underlying Agni, Yama, Varuna and other Gods. Rasabhakti, according to him could be described as the very essence of the Vedic effusions; in a God-intoxicated state of mind, the Riks, he declared, had flowed spontaneously from the pure fountain of their hearts in unpremeditated songs. It was reserved for Madhva alone to show how the *Raso Vai sah* underlying the Upanishads also animates the Veda. Thus, according to him, if Badarayana Vyasa had stopped with applying the principles of

interpretation only to the Upanishadic Brahman in his Brahmasutras,we should feel equally justified in extending this underlying interpretation also to the Veda by extracting its *adhyaatma* or esoteric interpretation. The truth of Madhva's stand has been vindicated by Dayananda Sarasvati of the Arya Samaj and more recently by Maharshi Aurobindo in Pondicheri; Sri T.V. Kapali Sastri in his commentary entitled Siddhaanjana published in 1950 in Pondicheri Ashram has also hailed Madhva's unique interpretations. These are all Advaitins and another famous Vishishtadvaitic scholar Sri O. T. Tatacharya of Tirupati also pays a handsome tribute to Madhva's interpretation in his Krishnaswami Rao Endowment Lectures delivered in Madras University in 1948. Dr. B. N. K. Sharma of the Ruparel College, Bombay, rightly observes that Madhva's approach is designed for the satisfaction of the spiritual and mystic thought-needs of humanity and is fully in line with the latest psychological findings also. There are for every Mantra, according to him 3 meanings: (1) as referring to Agni, or the individual God directly addressed (2) as referring to the indwelling Vishnu and (3) its adhyaatmic interpretation A certain *Paingi* shruti-which also is uncurrent at present, is quoted by him in support as it was available to him then. (It must be noted that both Sri Samkara and Ramauuja quote certain uncurrent shrutis also).

सर्वोत्कर्षे देवदेवस्य विष्णोः महातात्पर्यं नैव चान्यत्र सत्यम् ।
अवान्तरं तत्परत्वं तदन्यत् सर्वागमानां पुरुषार्थस्ततोऽत : ॥

Another Puranic Passage is also cited by him:

सर्वेशं सर्वकर्तारं नारायणमनामयम् ।
सर्वोत्तमं ज्ञापयन्ति महातात्पर्यमत्र हि ॥
सर्वेषामपि वेदानामितिहासपुराणयोः
प्रमाणानां च सर्वेषां तदर्थं चान्यदुच्यते ॥

Sri Kapali Sastri in his Samskrit introduction approvingly quotes the three meanings as given in Mantraarthamanjaree, Raghavendra Svamin's Commentary on Rigbhashya, of course omitting the grammatical part. He regrets to note that very few pandits of the Maadhva faith alone know these interpretations.

**

Every syllable of the Vedas, Puranas, and the Epics was written according to him, only to proclaim this most important truth of Vishnu's supremacy, The Aitareya Aranyaka mantra II—ii ends with this eloquent eulogy of Vishnu:—

एतमेव (नारायणं) सन्तं ता वा

एताः सर्वा ऋचः सर्वे वेदाः सर्वे घोषाः एकैव व्याहृतिः प्राण

एव प्राणः ऋच इत्येव विद्यात्

(Page 400, Udupi Madhva Seva Sangha Edition: 1929)

In one of his comments on this very Upanishad which was his favourite, he declares:

ऋचस्तु विशेषतः

इन्द्रादि नामवतो विष्णोः गुणान् अल्पज्ञानामपि प्रकाशयन्ति.

That these hymns proclaim the virtues of Vishnu (who possesses the names of Indra etc., also) for the sake of ignorant people like us. Even the names of the lesser gods, according to Madhva, primarily refer to Vishnu, but for practical purposes of human needs, are pressed to yield the sense of the lesser gods who discharge their functions at his pleasure. They derive their limited powers from the Primary Eternal Power House which is Vishnu. The world is thus the veritable family of Vishnu, in which the Pater familias is Vishnu, Mother His Consort—Lakshmi, Brahma their son, Adi Shesha their couch, Siva their grandson. His Vehicle Garuda and His Family-house the ocean washing His feet:

लक्ष्मीः जाया, सुरवरगुरुः पद्मभूः यस्य सूनुः

शेषः शय्या, त्रिपुरदहनो यस्य पौत्रो, गरुत्मान् ।

वाहश्चाण्ड, सदनमुदधिः यत्पदक्षालनार्थः

चित्रं चित्रं जगति महतस्तस्य पुंसश्चरित्रम् ॥

Verily such a Mahapurusha must be regarded as the Most High, the SARVOTTAMA. Among these there is a strict gradation and seniority—Vishnu, Lakshmi, Brahma, Vayu etc.

Sri Samkara and others following him would prefer to dichotomise the Rig Veda into *jnaana* and *Karma* Kaandas, as according to them the latter served the purpose of eulogising only the *karma* or

sacrificial ritual and so should be deemed as being of mechanical import. But Madhva showed that such a dichotomy if at all, was done only for the sake of a working hypothesis and these so- called *Karma Kaanda* mantras, he clearly showed, had a higher *adhyaatma* interpretation in terms of the highest Vedantic knowledge of the Brahman.

In the 780 *granthas* of his Rig bhashya, he could deal only with the first 3 *adhyayas* in the first Ashtaka and cover only the first 40 sooktas of the Rig Veda. In his Aitareya Upanishad Commentary, Karmanirnaya and elsewhere, he has similarly commented on other repesentative sooktas in other contexts (as अप्राक्षितं वसु बिभर्ति, अपाङ् प्राङेति स्वधया गृहीतो etc.) In some contexts, he has anticipated and even gone beyond the modern Western or American Vedic interpreters like Roth, Griffith, Whitney etc , in as much as he alone has declared that the *Shunashshepa* hymn in Mandala I ought to contain 100 riks, the last 2 being somehow pushed into other places, into IV--i--4 and V—ii--7. In मा नः स्तेनेभ्यो (II—23—16), he says that from the point of the meaning there appears to be something wanting ऊनता दृश्यते ऽ र्थतः and this deficiency he supplies in his Brahmasutra-Bhashya III – iv —49.

In his last chapter X, entitled critical reflections criticised, C. R. Krishna Rao has quoted on P. 157 two slokas from the Rig Bhashya which can make anybody understand how Madhva's style is never terse and abstruse(as many adverse critics suggest),how he could descend to the ordinary level of the common man in the street and teach him on his own ground:

स्वाध्यायस्तत्त्वविज्ञानं विष्णुभक्तिर्विरागता ।
निषिद्धकर्मसन्त्यागो विहितस्य सदा क्रिया ॥
सदा विष्णुस्मृतिश्चैव केवलं मोक्षसाधनम् ।
एतैर्विना न मोक्षः स्याद्व्रत्रेदेतैरपि ध्रुवम् ॥

He has added a translation, but I feel that even anybody, ignorant of Samskrit, but knowing how to read, can understand the slokas, they are so simple.

"Truth is like a torch, the more it is shook it shines" quotes this enlightened critic. Madhva's truth is a veritable torch, illuminating the dark corridors of the castle of philosophy Is it not the duty of every Maadhva to blaze the torch lighted by that great prophet after whom he is named and show the path to those who are willing to be guided.

ध्येयः सदा सवितृमण्डलमध्यवर्ती नारायणः सरसिजासनसंनिविष्टः

केयूरवान् मकरकुण्डलवान् किरीटी हारी हिरण्मयवपुः धृतशंखचक्रः ॥

The Rig Veda was thus raised by Madhva to its time-honoured position of the *Moolaprasthaana*, the fountainhead of the three Prasthaanas, Brahmasutras, Bhagavadgita and Upanishads. In doing so, he was only faithfully following what the Lord had declared in the Gita XV—15

वेदैश्च सर्वैरहमेव वेद्यः

I am to be known through all the Vedas

The learned translator Sri Agrahara Narayana Tantri, my former colleague in the Samskrit College has spared no pains to make the translation of all the works of Madhva entrusted to him by the sangha readable and understandable by the Kannada knowing public. His unfailing enthusiasm and devotion to Madhva should be an eye opener to all of us; this has spurred him on in his labour of love and we pray that he may be spared for a long time more to spread the message of Madhva to the masses to dispel their religious ignorance.

U. VENKATAKRISHNA RAO.
(Former Principal, S. M. S. P. Samskrit College, Udupi) Professor of Samskrit--Madras Christian College.

10 B. Dandapani St.
T. Nagar, Madras 17

॥ ಶ್ರೀಃ ॥

ಋಗ್ಭಾಷ್ಯ

ನಾರಾಯಣಾಭಿದಂ ಜ್ಯೋತಿಃ ಪ್ರತ್ಯೂಹಧ್ವಾಂತಶಾಂತಿಕೃತ್ ।
ಕಮಲಾಕಮಲಾನಂದಮಂತಃ ಸ್ವಾಂತಮುಪಾಸ್ಮಹೇ ॥
ಅಶೇಷಗುಣಸಂಪೂರ್ಣಂ ಸರ್ವದೋಷವಿವರ್ಜಿತಂ ।
ಅನಂತಾಮ್ನಾಯಸಂವೇದ್ಯಂ ವಂದೇಽಹಂ ಕಮಲಾಪತಿಂ ॥
ಅಶೇಷ ಪ್ರಾಣಿನಾಂ ನೇತಾ ಯೇನ ಸಂಪೂಜ್ಯತೇ ಹರಿಃ ।
ತಸ್ಯ ವಾಯೋಸ್ತೃತೀಯಂ ತದ್ರೂಪಂ ಮಧ್ವಾಭಿಧಂ ಭಜೇ ॥
ಮೂಕೋಽಪಿ ವಾಗ್ಮಿತಾಂ ಯಾಯಾದ್ಯದನುಗ್ರಹಮಾತ್ರತಃ ।
ಸೇವೇ ತಂ ಜಯಯೋಗೀಂದ್ರಂ ಪ್ರತಿವಾದಿಮತಚ್ಛಿದಂ ॥
ಅಥ ತದ್ದಾಸದಾಸೇನ ತಂತ್ರಿನಾರಾಯಣೇನ ಚ
ಋಷಿಛಂದೋ ದೇವತೋಕ್ತಿಪದಾರ್ಥಾನ್ವಯಪೂರ್ವಿಕಾ ।
ಋಗ್ಭಾಷ್ಯ ವಿವೃತೇರ್ವ್ಯಾಖ್ಯಾ ಕ್ರಿಯತೇ ಪ್ರೀತಯೇ ಹರೇಃ ॥

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ
ಲಕ್ಷ್ಮೀಹಯಗ್ರೀವಾಯ ನಮಃ ॥

ಭಾಷ್ಯ ॥ ಓಂ ॥ ನಾರಾಯಣಂ ನಿಖಿಲಪೂರ್ಣಗುಣಾರ್ಣವಮುಚ್ಚಸೂರ್ಯಾಮಿತದ್ಯುತಿಮಶೇಷನಿರಸ್ತದೋಷಂ । ಸರ್ವೇಶ್ವರಂ ಗುರುಮಜೇಶನುತಂ ಪ್ರಣಮ್ಯ ವಕ್ಷ್ಯಾಮ್ಯೃಗರ್ಥಮತಿತುಷ್ಟಿಕರಂ ತದಸ್ಯ ॥

ಅ ॥ ನಿಶ್ಶೇಷಗಳೂ, ಪ್ರಪ್ರತ್ಯೇಕ ಪೂರ್ಣಗಳೂ ಆದ ಜ್ಞಾನ ಆನಂದಾದಿ ಗುಣಗಳಿಂದ ಸಮುದ್ರದಂತಿರುವವನೂ, ಸಂಪೂರ್ಣವಾಗಿ ಪ್ರಕಾಶವನ್ನು ಹೊಂದಿರುವ ಅಪರಿಮಿತ ಸೂರ್ಯರ ಪ್ರಕಾಶದಂತೆ ಪ್ರಕಾಶವುಳ್ಳವನೂ, ಅಥವಾ ಅಪರಿಮಿತ ಸೂರ್ಯರಿಂದಲೂ ದೃಷ್ಟಾಂತೀಕರಿಸಲಿಕ್ಕೆ ಅಶಕ್ಯವಾದ (ಅಂದರೆ ಅಪರಿಮಿತ ಸೂರ್ಯರಿಗಿಂತಲೂ ಅತಿಶಯವಾದ) ಪ್ರಕಾಶವುಳ್ಳವನೂ, ಸಂಪೂರ್ಣವಾಗಿ ಸರ್ವದಾ ದೋಷಗಳನ್ನು ಹೋಗಲಾಡಿಸುವವನೂ, ಚೇತನಾಚೇತನ ಜಗತ್ತಿಗೆ ನಿಯಾಮಕನೂ, ಜ್ಞಾನೋಪದೇಶಕನೂ, ಬ್ರಹ್ಮರುದ್ರಾದಿದೇವತೆಗಳಿಂದ ನಮಸ್ಕರಿಸಲ್ಪಡುವವನೂ, ಆದ ಶ್ರೀ ನಾರಾಯಣನನ್ನು ಭಕ್ತಿಪೂರ್ವಕವಾಗಿ ನಮಸ್ಕರಿಸಿ ಯಾವ ಕಾರಣದಿಂದ ಋಗರ್ಥವಚನಾದಿಗಳು ಈ ಶ್ರೀ ನಾರಾಯಣನಿಗೆ ಅತಿ ಸಂತೋಷವನ್ನು ಹುಟ್ಟಿಸತಕ್ಕುವುಗಳೋ, ಆದಕಾರಣ ಕೆಲವು ಋಕ್ಕುಗಳ ಅರ್ಥವನ್ನು ಹೇಳುವೆನು. ಅಥವಾ ಹಿಂದೆ ಹೇಳಿದ ಲಕ್ಷಣಗಳುಳ್ಳ ಬುದ್ಧಿಸನ್ನಿಹಿತನಾದ ಶ್ರೀ ನಾರಾಯಣನಿಗೆ ಪರಮಸಂತೋಷವನ್ನು ಹುಟ್ಟಿಸತಕ್ಕ ಕೆಲವು ಋಕ್ಕುಗಳ ಅರ್ಥವನ್ನು ಹೇಳುವೆನು.

ವಿ ॥ ಸಂಸಾರ ಸಮುದ್ರವನ್ನು ದಾಟಲಿಚ್ಛಿಸುವವರು ಭಗವತ್ಪ್ರಸಾದವನ್ನು ಪ್ರಾರ್ಥಿಸಬೇಕು. ಆ ಪ್ರಸಾದವು ಭಗವಂತನ ಜ್ಞಾನವಿಲ್ಲದೆ ಕೂಡಲಾರದು. ಆ ಭಗವಂತನ ಜ್ಞಾನಕ್ಕಾಗಿಯೇ ನಿಖಿಲ ವೇದಗಳೂ ಪ್ರವೃತ್ತಗಳಾಗಿವೆ. ಅವುಗಳೆಲ್ಲವೂ ಭಗವತ್ಪರಗಳೇ ಎಂದು ತೋರಿಸುವುದಕ್ಕಾಗಿ ಅಂದರೆ ಕೆಲವು ಋಕ್ಕುಗಳು ಭಗವತ್ಪರಗಳೆಂದು ತಿಳಿದರೆ ಸಮಸ್ತ ವೇದವೂ ಭಗವತ್ಪರವೆಂದು ಬುದ್ಧಿವಂತರಿಗೆ ವ್ಯಾಖ್ಯಾನ ಮಾಡಲಿಕ್ಕೆ ಶಕ್ಯವಾಗುವುದೆಂಬ ಅಭಿಪ್ರಾಯದಿಂದ ಕೆಲವು ಋಕ್ಕುಗಳಿಗೆ ಮಾತ್ರ ಭಾಷ್ಯವನ್ನು ಮಾಡುತ್ತಾ ಶ್ರೀಮದಾಚಾರ್ಯರು ಪ್ರಾರಿಪ್ಸಿತವಾದ ಗ್ರಂಥವು ನಿರ್ವಿಘ್ನವಾಗಿ ಸಮಾಪ್ತಿಯಾಗುವುದಕ್ಕಾಗಿಯೂ ಲೋಕದಲ್ಲಿ ಪ್ರಸಿದ್ಧಿ ಬರುವುದಕ್ಕಾಗಿಯೂ ಶ್ರೀ ನಾರಾಯಣನಿಗೆ ನಮಸ್ಕಾರಸ್ತೋತ್ರರೂಪಮಂಗಳವನ್ನು ಮಾಡುತ್ತಾ ಪ್ರಯೋಜನವನ್ನು ತೋರಿಸಿದರು. ॥ ೧ ॥

ಋಕ್ ॥ ಓಂ ॥ ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ ।
ಹೋತಾರಂ ರತ್ನಧಾತಮಮ್ ॥ ೧ ॥

ಅ ॥ ಪುರೋಹಿತಂ=ಅನಾದಿಯಿಂದ ಸರ್ವಪ್ರಾಣಿಗಳಿಗೂ ಅನುಕೂಲನಾದವನು, ಸರ್ವರಿಗೂ ಪ್ರಭುವಾದವನು, ಯಜ್ಞಸ್ಯ ಋತ್ವಿಜಂ=ಜ್ಯೋತಿಷ್ಟೋಮಾದಿ ಯಾಗಗಳನ್ನು ಮಾಡುವುದರಿಂದ ಋತ್ವಿಕ್ ಎಂದು ಹೆಸರುಳ್ಳ ಅಧ್ವರ್ಯು ಹೋತೃ ಉದ್ಗಾತೃ ಮೊದಲಾದವರಲ್ಲಿ ನಿಯಾಮಕನಾಗಿ ಇದ್ದುದರಿಂದ ಋತ್ವಿಕ್ ಎಂದು ಹೆಸರುಳ್ಳವನು, ಹೋತಾರಂ=ತದ್ಯೇಯಂ ವಾಕ್ಸೋಽಯಮಗ್ನಿಃ ಸ ಹೋತಾ ಎಂಬ ಶ್ರುತಿಯಿಂದ ಹೋತನಿಗೆ ನಿಯಾಮಕನಾಗಿ ಆತನಲ್ಲಿ ವಿಶೇಷತಃ ಸನ್ನಿಹಿತನಾಗಿರುವುದರಿಂದ ಹೋತೃ ನಾಮಕನೂ, ರತ್ನಧಾತಮಂ=ನಿರವಧಿಕ ಆನಂದ ಸ್ವರೂಪನೂ, ಅಥವಾ ಧನಾಢ್ಯನೂ, ದೇವಂ=ಕ್ರೀಡಾದಿಕರ್ತನೂ, ಅಥವಾ ಸರ್ವರಿಂದ ಸ್ತುತ್ಯನೂ, ಆದ ಅಗ್ನಿಂ=ಸಮಸ್ತ ಪೂಜ್ಯರಿಗಿಂತಲೂ ಪ್ರಥಮ ಪೂಜ್ಯನೂ, ಅಥವಾ ಸರ್ವೋತ್ತಮನೂ, ಪ್ರಥಮತಃ ಪ್ರವರ್ತಕನೂ,ಆದ ಅಗ್ನಿನಾಮಕ ಶ್ರೀವಿಷ್ಣುವನ್ನೂ, ಆತನಿಗೆ ಅಧಿಷ್ಠಾನಭೂತನಾದ ಪ್ರಸಿದ್ಧಾಗ್ನಿಯನ್ನಾಗಲೀ ಈಳೇ=ಸ್ತುತಿಸುತ್ತೇನೆ. (ಇಲ್ಲಿ ಹೇಳಿದ ಎಲ್ಲಾ ಗುಣಗಳೂ ಶ್ರೀಹರಿಯಲ್ಲಿ ನಿರವಧಿಕಗಳು. ಅಗ್ನಿಯಲ್ಲಿ ಯಥಾಯೋಗ್ಯವಾದುದು.) (ಈಮಂತ್ರವು ಸರ್ವರಿಂದಲೂ ಅಪೇಕ್ಷಿತವಾದ ಸುಖವನ್ನು ಕೊಡತಕ್ಕ ಶ್ರೀಹರಿಯ ಉಪಾಸನೆಗೆ ವಿಷಯಭೂತವಾದ ನಿರತಿಶಯ ಸುಖಸ್ವರೂಪವಾದ ಮಹಾಗುಣವನ್ನು ಪ್ರತಿಪಾದಿಸುವುದರಿಂದ ಈ ಅಗ್ನಿ ಸೂಕ್ತವನ್ನು ಪ್ರಥಮತಃ ಹೇಳಿದ್ದು. (ಅಧ್ಯಾತ್ಮಪರವಾದ ಅರ್ಥವು) ಪುರೋಹಿತಂ=ಅನಾದಿಯಿಂದ ಸರ್ವರಿಗೂ ಅನುಕೂಲನಾದವನು, ಯಜ್ಞಸ್ಯ=ಜ್ಞಾನಯಜ್ಞಕ್ಕೆ ಪ್ರವರ್ತಕನಾಗಿ, ಋತ್ವಿಜಂ=ಋತ್ವಿಕ್‌ಭೂತರಾದ ಇಂದ್ರಿಯಾಭಿಮಾನಿಗಳಿಗೆ ನಿಯಾಮಕನಾಗಿದ್ದುದರಿಂದ ಋತ್ವಿಕ್ ನಾಮಕನು, ಹೋತಾರಂ=ಇಂದ್ರಿಯಾಖ್ಯ ಅಗ್ನಿಗಳಲ್ಲಿ ವಿಷಯರೂಪ ಹವಿಸ್ಸುಗಳನ್ನು ಹೋಮಿಸುವವನು, (ಅಂದರೆ ವಿಷಯಭೋಗವನ್ನು ಕೊಡುವವನು,) ಅಗ್ನಿಂ ಚ=ಸರ್ವರ ಶರೀರಗಳಿಗೆ ಪ್ರವರ್ತಕನು, ಇಂತಹ ಶ್ರೀಹರಿಯನ್ನು ಸ್ತುತಿಸುತ್ತೇನೆ.

ಅಧ್ಯಾತ್ಮಂ=(ಶರೀರ ನಿಯಾಮಕ ಭಗವದ್ರೂಪವು.) (ಅಧ್ಯಾತ್ಮ ಜ್ಞಾನ ಯಜ್ಞದಲ್ಲಿ ಸರ್ವತ್ರ ಮೋಕ್ಷ ಸಾಧಕನಾದವನು ಯಾವನೊಬ್ಬ ಸಾತ್ವಿಕನಾದ ಜೀವನೇ ಯಜಮಾನನು) ಜ್ಞಾನಾರ್ಥಿಗೆ ಜ್ಞಾನವನ್ನು ಕೊಡುತ್ತಾ ಸಮಸ್ತ ಇಂದ್ರಿಯಗಳಿಗೆ ಪ್ರೇರಕನೂ ಯಥೋಚಿತ ಭೋಗಪ್ರದನೂ ಆದ ಶ್ರೀವಿಷ್ಣುವಿನ ಸ್ತುತಿಯು ಯುಕ್ತವೆಂದು ಸ್ತುತ್ಯತ್ವವನ್ನು ಉಪಪಾದಿಸುವುದೇ ವಿಶೇಷಣಗಳಿಗೆ ಕೃತ್ಯವು. ॥ ೧ ॥

ವಿ || (1) ಋಕ್ಶಾಖೆಯಲ್ಲಿ (೧೦೦೧) ಒಂದು ಸಹಸ್ರದ ಒಂದು ಸೂಕ್ತಗಳು. ಅವುಗಳ ಮಧ್ಯದಲ್ಲಿ ಶ್ರೀಭಗವತ್ಪಾದರು (1) ಅಗ್ನ್ಯಾದಿ ದೇವತಾ, (2) ತದಂತರ್ಗತ ವಿಷ್ಣು, (3) ಅಧ್ಯಾತ್ಮ, ಹೀಗೆ ಮೂರು ಅರ್ಥಪರವಾಗಿ (೪೦) ನಲ್ವತ್ತು ಸೂಕ್ತಗಳಿಗೆ ಮಾತ್ರ ವ್ಯಾಖ್ಯಾನ ಮಾಡಿರುವರು.

(2) ಅದರಲ್ಲಿ ಕೆಲವರು ಆವಾವ ಕರ್ಮಗಳಲ್ಲಿ ವಿನಿಯುಕ್ತಗಳಾದ ಮಂತ್ರಗಳಿಗೆ ಶಬ್ದ ಸಾಮರ್ಥ್ಯ ರೂಪಲಿಂಗದಿಂದಲೂ ಆವಾವ ಪ್ರಕರಣಗಳಿಂದಲೂ ಆವಾವ ದೇವತಾರೂಪ ಅರ್ಥವೇ ಉಚಿತವು. ವಿಷ್ಣ್ವಾದಿ ರೂಪವಾದ ಅರ್ಥವು ಯೋಗ್ಯವಲ್ಲ. ಏಕೆಂದರೆ—ಆ ವಿಷಯದಲ್ಲಿ (೧) ಪ್ರಮಾಣವಿಲ್ಲ. (೨) ಮತ್ತು ಒಂದು ಶಬ್ದಕ್ಕೆ ಅನೇಕಾರ್ಥ ಹೇಳುವುದು ಅನ್ಯಾಯವೂ ಆಗಿದೆ. (೩) ಅಲ್ಲದೆ ಸರ್ವಸೂಕ್ತಗಳೂ ವಿಷ್ಣು ಸೂಕ್ತಗಳೆಂದೇ ಆಗಬೇಕಾಗಿರುವುದರಿಂದ ಇದು ಆಗ್ನೇಯಸೂಕ್ತವು, ಇದು ಐಂದ್ರಸೂಕ್ತವು, ಇತ್ಯಾದಿ ವ್ಯವಸ್ಥೆಯೂ ಕೂಡದೆ ಹೋಗುವುದು. (೪) ಮತ್ತು ಒಂದು ಶಬ್ದಕ್ಕೆ ಅನೇಕಾರ್ಥಗಳನ್ನು ಹೇಳಿದರೆ ತತ್ಪ್ರಯುಕ್ತ ವಾಕ್ಯಭೇದವೂ ಬರಬೇಕಾಗುವುದು, ಎಂದು ಆಕ್ಷೇಪಿಸುವರು.

(3) ಇದಯುಕ್ತವು ಏಕೆಂದರೆ–ಆ ವಿಷಯದಲ್ಲಿ ಹೀಗೆ ಸಮಾಧಾನವು. (೧) ಓಮಿತಿ ಬ್ರಹ್ಮ ಇತ್ಯಾದಿ ಶ್ರುತಿ, (೨) ಓಂತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ, ಇತ್ಯಾದಿ ಸ್ಮೃತಿ, (೩) ಓಂಕಾರೋ ಬ್ರಹ್ಮವಾಚೀ ತನ್ನಿಷ್ಠಧರ್ಮಪ್ರವೃತ್ತಿಹೇತುಕತ್ವಾತ್, ಇತ್ಯಾದ್ಯನುಮಾನ, ಇವುಗಳಿಂದ ಓಂಕಾರವು ಬ್ರಹ್ಮರೂಪ ಅರ್ಥವನ್ನು ಹೇಳುತ್ತದೆ. ಬ್ರಹ್ಮನು ಗುಣಪರಿಪೂರ್ಣನು. ಬ್ರಹ್ಮನೇ ಶ್ರೀವಿಷ್ಣುವು. ಓಂಕಾರೇಣ ಸರ್ವಾ ವಾಕ್ ಸಂತೃಣ್ಣಾ ಎಂಬ ಛಂದೋಗ ಶ್ರುತಿ, ಇವುಗಳಿಂದ ವೇದಗಳೆಲ್ಲವೂ ಓಂಕಾರದ ವ್ಯಾಖ್ಯಾನವು. ತಥಾ ಚ (೪) ವಿಷ್ಣುಃ ಸರ್ವವೇದಪ್ರತಿಪಾದ್ಯಃ ತದ್ವ್ಯಾಖ್ಯೇಯೋಂಕಾರಾರ್ಥತ್ವಾತ್ ಯೋ ಯದ್ವ್ಯಾಖ್ಯೇಯಾರ್ಥಃ ಸ ತದ್ವ್ಯಾಖ್ಯಾನಪ್ರತಿಪಾದ್ಯಃ ಯಥಾ ಸಂಪುತಃ, (೫) ವೇದಾಃ ವಿಷ್ಣುಪರಾಃ ವಿಷ್ಣುಪರಓಂಕಾರವ್ಯಾಖ್ಯಾನತ್ವಾತ್ ಯಃ ಯತ್ಪರಶಬ್ದವ್ಯಾಖ್ಯಾನಂ ಸಃ ತತ್ಪರಃ ಯಥಾ ಸಂಮತಃ, ಇದು ಮೊದಲಾದ ಅನುಮಾನಗಳಿಂದ ಸಮಸ್ತವೇದಗಳೂ ವಿಷ್ಣುವನ್ನೇ ಪ್ರತಿಪಾದಿಸುತ್ತವೆಂದು ಸಿದ್ಧಿಸುವ ಪ್ರಯುಕ್ತ (೧) ಪ್ರಮಾಣವಿಲ್ಲವೆಂದದ್ದು ಅಯುಕ್ತವು. (1) ಓಂಕಾರಾರ್ಥವು ವ್ಯಾಹೃತಿಯು, ವ್ಯಾಹೃತ್ಯರ್ಥವು ಗಾಯತ್ರಿಯು. ಗಾಯತ್ರಿಯ ಅರ್ಥವು ಪುರುಷಸೂಕ್ತವು. ಪುರುಷ ಸೂಕ್ತದ ಅರ್ಥವು ಸಮಸ್ತ ವೇದಗಳು. ಈ ರೀತಿಯಾಗಿ, ಆಗಲೀ ಅಥವಾ ಸಾಕ್ಷಾತ್ತಾಗಿಯೇ ವೇದಗಳಿಗೂ ಓಂಕಾರಕ್ಕೂ ವ್ಯಾಖ್ಯಾನ ವ್ಯಾಖ್ಯೇಯಭಾವವನ್ನು ತಿಳಿದುಕೊಳ್ಳಬೇಕು. (2) ಮತ್ತು ಅದುಃಖಮಿತಗತ್ಸರ್ವಂ ಜೀವಾ ಏವ ತು ದುಃಖಿನಃ । ತೇಷಾಂ ದುಃಖಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ ಎಂಬ ಪರಮ ಶ್ರುತಿಯಿಂದ ಜೀವರಿಗೆ ಆತ್ಯಂತಿಕದುಃಖ ನಿವೃತ್ತಿರೂಪವಾದ ಬಂಧನಿವೃತ್ತಿರೂಪ ಮೋಕ್ಷಕ್ಕಾಗಿ ವೇದಗಳು ಪ್ರವೃತ್ತಗಳಾಗಿವೆ. (3) ಯಸ್ಯ ಪ್ರಸಾದಾತ್ಪರಮಾರ್ತಿರೂಪಾದಸ್ಮಾತ್ಸಂಸಾರಾನ್ಮುಚ್ಯತೇ ನಾಪರೇಣ, ಎಂಬ ನಾರಾಯಣಶ್ರುತಿಯಿಂದ ಶ್ರೀಭಗವಂತನ ಪ್ರಸಾದದಿಂದಲೇ ಸತ್ಯವಾದ ಬಂಧಕ್ಕೂ ನಿವೃತ್ತಿಯು ಸಾಧ್ಯವಾಗುವುದು, (4) ಅಂತಹ ಪ್ರಸಾದವು ಪ್ರಿಯೋ ಹಿ ಜ್ಞಾನಿನೋಽತ್ಯರ್ಥಂ ಇತ್ಯಾದಿಗಳಿಂದ ಜ್ಞಾನದಿಂದಲೇ ಸಾಧ್ಯವು. ಅಂತಹ ಜ್ಞಾನವು ವೇದಾದಿಶಾಸ್ತ್ರಗಳಿಂದಲೇ ಹುಟ್ಟಬೇಕು. ಆದಕಾರಣ ವೇದಗಳು ವಿಷ್ಣುವಿನ ಜ್ಞಾನವನ್ನು ಹುಟ್ಟಿಸುತ್ತವೆಂದು ಸಿದ್ಧವಾಯ್ತು. ತಥಾ ಚ (5) ಸರ್ವೇ ವೇದಾಃ ವಿಷ್ಣುಜ್ಞಾನಜನಕಾಃ ತತ್ಸಾಧ್ಯಮೋಕ್ಷಾರ್ಥಂ ಪ್ರವೃತ್ತತ್ವಾತ್ ಯಃ ಯತ್ಸಾಧ್ಯಯದರ್ಥಂ ಪ್ರವೃತ್ತಃ ಸಃ ತಜ್ಜನಕಃ, ಇದು ಮೊದಲಾದ ಅನುಮಾನಗಳಿಂದಲಾಗಲೀ ಸಮಸ್ತ ವೇದಗಳೂ ವಿಷ್ಣುವಿನ ಜ್ಞಾನವನ್ನು ಹುಟ್ಟಿಸುತ್ತವೆಂದು ಸಿದ್ಧವಾಗುತ್ತದೆ.

(4) ಮತ್ತು ಶ್ರುತಿಗಳಿಗೆ ಆಪಾತತಃ ಪ್ರತೀತವಾದುದೇ ಅರ್ಥವಲ್ಲ. ಏಕೆಂದರೆ ಆಪಾತತಃ ತೋರಿದ್ದೇ ಅರ್ಥವೆಂದು ಇಟ್ಟು ಕೊಂಡರೆ ಕರ್ಮಮೀಮಾಂಸಾ ಶಾಸ್ತ್ರದಲ್ಲಿ ಆಜ್ಯೈಃ ಸ್ತುವತೇ ಎಂಬ ವಾಕ್ಯದಲ್ಲಿರತಕ್ಕ ಆಜ್ಯಪದಕ್ಕೆ 'ಯದಾಜಿಮೀಯುಸ್ತದಾಜ್ಯಾನಾಮಾಜ್ಯತ್ವಂ ಎಂಬ ವಾಚನಿಕನಿರುಕ್ತ್ಯಾದಿಗಳ ಬಲದಿಂದ ಮಂತ್ರ ಎಂದು ಅರ್ಥ ಹೇಳಿದ್ದು (ಮಂತ್ರಗಳಿಂದ ಸ್ತುತಿಸುತ್ತಾರೆಂದದ್ದು) ಕೂಡದೆ ಹೋಗಬೇಕಾಗುವುದು. ಹಾಗೆಯೇ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಆಕಾಶಾಧಿಕರಣಾದಿಗಳಲ್ಲಿ ಆಕಾಶ ಇತಿ ಹೋವಾಚ ಇತ್ಯಾದಿ ವಾಕ್ಯಗಳಲ್ಲಿರತಕ್ಕ ಆಕಾಶಾದಿ ಶಬ್ದಗಳಿಗೆ ಸ ಏಷ ಪರೋವರೀಯಾನ್ ಇತ್ಯಾದಿ ವಾಕ್ಯಶೇಷದಲ್ಲಿರತಕ್ಕ ಲಿಂಗಾದಿಬಲದಿಂದ ವಿಷ್ಣು ಎಂದರ್ಥ ಹೇಳಿದ್ದು ಕೂಡದೆ ಹೋಗುವುದು. ಆದಕಾರಣ ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ಇತ್ಯಾದಿಗಳಲ್ಲಿ ಹೇಳಿದ ಪ್ರಕಾರ, ಉಪಕ್ರಮ ಉಪಸಂಹಾರ ಅಭ್ಯಾಸ ಅಪೂರ್ವತಾ ಫಲ ಅರ್ಥವಾದ ಉಪಪತ್ತಿ, ಶ್ರುತಿ, ಲಿಂಗ, ವಾಕ್ಯ ಪ್ರಕರಣ ಸ್ಥಾನ ಸಮಾಖ್ಯೆ ಇವುಗಳಿಗೆ ಅನುಗುಣ್ಯವನ್ನು ಅನುಸಂಧಾನ ಮಾಡಿಕೊಂಡು ಚೆನ್ನಾಗಿ ಮೀಮಾಂಸಾ (ವಿಚಾರ)ದಿಂದ ಲಭ್ಯವಾದ ಅರ್ಥವನ್ನೇ ಹೇಳಬೇಕು. ತಥಾ ಚ ಅಗ್ನ್ಯಾದಿ ಶಬ್ದಗಳಿಗೆ ನಿಗಮ ನಿಘಂಟ್ವಾದಿ ರೂಪವಾದ ಅನುಶಾಸನ ಬಲದಿಂದಲೂ ಆಗ್ನೇಯಾದಿ ಕರ್ಮಾದಿ ಸಿದ್ಧಿರೂಪವಾದ ಪ್ರಯೋಜನ ಬಲದಿಂದಲೂ ಪ್ರಸಿದ್ಧಗಳಾದ ಅಗ್ನ್ಯಾದಿಗಳಲ್ಲಿ ಹೇಗೆ ಶಕ್ತಿಯಿದೆಯೋ ಹಾಗೆಯೇ ವಿಷ್ಣುವಿನಲ್ಲಿಯೂ ಶಕ್ತಿಯು ಇದೆ. ಹೇಗೆಂದರೆ **ಚಮಸವದವಿಶೇಷಾತ್** (೧.೪.೯) ಇತ್ಯಾದಿಗಳಲ್ಲಿ ಭಾಷ್ಯದಲ್ಲಿ ಹೇಳಿದ ಪ್ರಕಾರ (1) **ನಾಮಾನಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ ಪರಮಮುದಾಹರಂತಿ** ಎಂದು ಭಾಲ್ಲವೇಯ ಶ್ರುತಿ) (2) **ಹಂತ ಏತಮೇವ ಪುರುಷಂ ಸರ್ವಾಣಿ ನಾಮಾನ್ಯಭಿವದಂತಿ** (ಭಾಷ್ಯ. ಉದಾ ಶ್ರುತಿ) (3) **ಸರ್ವನಾಮಾ ಸರ್ವಕರ್ಮಾ ಸರ್ವಲಿಂಗಃ** (ಮ.ಉ.) (4) **ಯೋ ದೇವಾನಾಂ ನಾಮಧಾ ಏಕ ಏವ** (ಋ. ಮ. ೧೦. ೮೨. ೩) ಇತ್ಯಾದಿ ಶ್ರುತಿಗಳಿಂದಲೂ, (5) **ಸರ್ವಛಂದೋಽಭಿಧೋ ಹ್ಯೇಷಃ ಸರ್ವದೇವಾಭಿಧೋ ಹ್ಯಸೌ** (ವಾಮನ, ಪು.) ಇತ್ಯಾದಿ ಸ್ಮೃತಿಗಳಿಂದಲೂ ಸಾಮಾನ್ಯವಾಗಿ, (6) **ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್** (ಋ. ಮ. ೧. ೧೬೪. ೪೬.) (7) **ಯಮಿಂದ್ರಮಾಹುರ್ವರುಣಂ ಯಮಾಹುರ್ಯಮಂ ಮಿತ್ರಮಾಹುರ್ಯಮು ಸತ್ಯಮಾಹುಃ** (ಅ. ಉ. ಭಾ. ಉದಾ.) ಇತ್ಯಾದಿ ಶ್ರುತಿಗಳಿಂದಲೂ, (8) **ಬೃಂಹಣಾದ್ಬ್ರಹ್ಮನಾಮಾಸೌ ಸಾವೈಶ್ವರ್ಯಾದಿಂದ್ರ ಉಚ್ಯತೇ । ಏವಂ ನಾನಾವಿಧೈಃ ಶಬ್ದೈರೇಕ ಏವ ತ್ರಿವಿಕ್ರಮಃ । ವೇದೇಷು ಸಪುರಾಣೇಷು ಗೀಯತೇ ಪುರುಷೋತ್ತಮಃ** (ಬ್ರಹ್ಮಾಪು) ॥ ಇದು ಮೊದಲಾದ ಸ್ಮೃತಿಗಳಿಂದಲೂ ಹೀಗೆ ವಿಶೇಷವಾಗಿ ಅನುಶಾಸನ ರೂಪಗಳಾದ ಈ ಶ್ರುತ್ಯಾದಿಗಳಿಂದ ಶ್ರೀ ವಿಷ್ಣುವಿನಲ್ಲಿಯೂ ಶಕ್ತಿಯು ಸಿದ್ಧವಾಗುವ ಪ್ರಯುಕ್ತ ಅಗ್ನ್ಯಾದಿ ಶಬ್ದಗಳಿಗೆ ವಿಷ್ಣುವೆಂಬ ಅರ್ಥವೂ ಮಂತ್ರಗಳಲ್ಲಿ ನ್ಯಾಯವೇ ಆಗಿದೆ. ಆದಕಾರಣ ಒಂದು ಶಬ್ದಕ್ಕೆ ಅನೇಕಾರ್ಥ ಹೇಳುವುದು ಅನ್ಯಾಯವಲ್ಲ.

(5) ಮತ್ತು ಇಂದ್ರ ಅಗ್ನಿ ಮೊದಲಾದ ಶಬ್ದಗಳ ಯೋಗವು ವೇದವ್ಯಾಸ ಕೃತವಾದ ನಿರುಕ್ತಿ ಮೊದಲಾದ ಸ್ಮೃತಿಗಳಿಂದ ಸಿದ್ಧವಾಗುವ ಪ್ರಯುಕ್ತ ಇಂದ್ರ ಅಗ್ನಿ ಮೊದಲಾದ ಶಬ್ದಗಳ ಪ್ರವೃತ್ತಿ ನಿಮಿತ್ತವಾದ ಪರಮೈಶ್ವರ್ಯ ಮೊದಲಾದುದು ಅನನ್ಯಾಧೀನತ್ವ, ನಿರವಧಿಕತ್ವಗಳಿಂದ (೧) **ನ ತೇ ವಿಷ್ಣೋ ಜಾಯಮಾನೋ ನ ಜಾತಃ** (ಋ. ಮ. ೭.೯೯.೨.) ಇದು ಮೊದಲಾದ ಶ್ರುತಿ ಸ್ಮೃತಿಗಳ ಬಲದಿಂದ ಶ್ರೀವಿಷ್ಣುವಿನಲ್ಲಿಯೇ ಮುಖ್ಯವಾಗಿ ಕೂಡುವುದರಿಂದ ಆ ಯೋಗವು. ಮಹಾಯೋಗರೂಪವಾಗಿರುವುದರಿಂದಲೂ ಶ್ರೀಹರಿಯಲ್ಲಿ ಯೋಗವೂ ಬಲಿಷ್ಠವೇ ಆಗಿದೆ. (1) ಮತ್ತು ಇಂದ್ರಂ ಮಿತ್ರಂ ಇತ್ಯಾದಿ ಶ್ರುತಿಗಳಲ್ಲಿ ಆಹುಃ ಎಂದು ಹೇಳಿದ ಕಾರಣ ಪ್ರಯೋಗಬಾಹುಲ್ಯರೂಪ ಲಿಂಗಬಲದಿಂದ ಶ್ರೀಹರಿಯಲ್ಲಿ ವಿದ್ವದ್ರೂಢಿಯೂ ಇದೆ ಎಂದುಕ್ತವಾಯ್ತು. ಅಜ್ಞರೂಢಿಗಿಂತ ವಿದ್ವದ್ರೂಢಿಯು ಬಲಿಷ್ಠವು. ಮತ್ತು ಐತರೇಯದಲ್ಲಿ ಶಂ

ಯಚ್ಛೃತಂ ವರ್ಷಾಣ್ಯಧ್ಯಾರ್ಜಿತ್ ಇತ್ಯಾದಿಗಳಲ್ಲಿ ಸರ್ವೇ ವೇದಾಃ ಸರ್ವೇ ಘೋಷಾಃ ಏಕೈವ
ವ್ಯಾಹೃತಿಃ ಪ್ರಾಣ ಏವ ಪ್ರಾಣ ಋಚಃ ಇತ್ಯೇವ ವಿದ್ಯಾತ್ ಎಂಬ ಪರ್ಯಂತ ವಾಕ್ಯದಲ್ಲಿ ಬ್ರಹ್ಮ
ನೆಂದು ನಿರ್ಣೀತನಾದ ಪ್ರಾಣೋ ಹ್ಯೇಷ ಯಃ ಏಷ ತಪತಿ ಎಂಬ ಪೂರ್ವವಾಕ್ಯದಲ್ಲಿದ್ದ ಪ್ರಾಣನನ್ನು
ಪರಾಮರ್ಶಮಾಡಿಕೊಂಡು ಪೂರ್ಣಅವಯವಾರ್ಥವನ್ನು ಹೇಳಿ ಮಹಾಯೋಗದಿಂದಲೂ ಆಚಕ್ಷತೇ ಎನ್ನು
ವುದರಿಂದ ಲಭ್ಯವಾದ ವಿದ್ವದ್ರೂಢಿಯಿಂದಲೂ ಇಂದ್ರಾದಿಗಳಿಗೆ ಅಜ್ಞರೂಢಿಯಿಂದ ಬಂದ ಮುಖ್ಯತ್ವವನ್ನು
ನಿರಾಕರಿಸಿ ತಸ್ಮಾಚ್ಛೃತರ್ಚಿನಸ್ತಸ್ಮಾಚ್ಛೃತರ್ಚಿನ ಇತ್ಯಾಚಕ್ಷತೇ ಇದು ಮೊದಲಾದ ಅಭ್ಯಾಸ (ಅಸಕೃದಾ
ವೃತ್ತಿ) ದಿಂದ ತಾತ್ಪರ್ಯಪೂರ್ವಕವಾಗಿ ಶ್ರೀ ವಿಷ್ಣುವಿನಲ್ಲಿಯೇ ಸರ್ವಶಬ್ದಗಳಿಗೂ ಮುಖ್ಯಾರ್ಥತ್ವವನ್ನು
ಹೇಳುತ್ತಾ ಸಮಸ್ತವೇದಗಳಿಗೂ ವಿಷ್ಣುಪರತ್ವವನ್ನೇ ಹೇಳಿದೆ, ಎಂದು ಆಚಕ್ಷತ ಇತಿ ಹ್ಯತ್ರ ಸಂತಮಿತ್ಯ
ವಧಾರಣಾತ್। ಯೋಗಸ್ಯ ರೂಢೇಃಪ್ರಾಬಲ್ಯಂ ವಿದ್ವದ್ರೂಢಿಂ ಚ ತತ್ರಗಾಂ। ಪ್ರಾಬಹುಶೋ ದರ್ಶ
ಯತ್ಯಂಜಃ ತಾತ್ಪರ್ಯಾತ್ಸನಿರುಕ್ತಿಕಂ॥ ಎಂದು ಅನುವ್ಯಾಖ್ಯಾನದಲ್ಲಿ ಹೇಳಿದೆ. ಮತ್ತು (1) ಅವ
ಸ್ವರಾತಿ ಗರ್ಗರೋ ಗೋಧಾ ಇತ್ಯಾದಿಶ್ರುತಿಗಳಲ್ಲಿ ಗರ್ಗರ ಗೋಧಾದಿ ಶಬ್ದಗಳು ಇಂದ್ರನೆನಿಸಿದ ಪರ
ಮೈಶ್ವರ್ಯಸಂಪನ್ನನಾದ ಶ್ರೀ ವಿಷ್ಣುವಿನಲ್ಲಿ ಮಂತ್ರಶಾಸ್ತ್ರಸಿದ್ಧವಾದ ನಾದರೂಪವರ್ಣವನ್ನು ಅಭಿವ್ಯಕ್ತೀ
ಕರಿಸಿ ವಾಚಕಗಳಾಗುತ್ತವೆಂದು ಹೇಳಿ ನಿಖಿಲವೇದಗಳೂ ಭಗವದ್ವಾಚಕಗಳೇ ಎಂದು ಸಮರ್ಥಿತವಾಗಿದೆ.
ಮತ್ತೂ (2) ಅ ಇತಿ ಬ್ರಹ್ಮ ಎಂದು ಅಕಾರವು ಪರಬ್ರಹ್ಮವಾಚಕವು ಎಂದು ಹೇಳಿದುದರಿಂದ (3)
ಅಕಾರೋ ವೈ ಸರ್ವಾ ವಾಕ್ ಎಂಬ ಐತರೇಯಶ್ರುತಿಯಲ್ಲಿಯೂ (4) ಅಕಾರಸ್ಸರ್ವವಾಗಾತ್ಮಾ ಪರ
ಬ್ರಹ್ಮಾಭಿಧಾಯಕಃ (ಗರು. ಪು) ಎಂಬ ಸ್ಮೃತಿಯಲ್ಲಿಯೂ ಸರ್ವಶಬ್ದಗಳೂ ಪರಬ್ರಹ್ಮವಾಚಕಗಳೆಂದು
ಸಮರ್ಥಿಸಿಯದೆ. (5) ಮತ್ತು ಸೃಜತೋಹಿ ತೇ ಶ್ರುತಯೋಽನುವರ್ತಂತೇ ನೈವಾಸೃಜತಃ ಕಂ ವಾ
ವಿದಧತೇ ಕಂವಾ ನಿಷೇಧಂತಿ ಸ್ತುತಿಮಾತ್ರಾ ಏವ ತೇ ಸ್ಯುಃ ಎಂದು ಶ್ರುತಿಗೀತಾತಾತ್ಪರ್ಯದಲ್ಲಿ
ಹೇಳಿದ್ದ ಶಾಂಡಿಲ್ಯ ಶ್ರುತಿಯಲ್ಲಿ ವಿಧ್ಯಾದಿ ಭಾಗವೂ ಭಗವಂತನನ್ನೇ ಸ್ತುತಿಸುತ್ತದೆಂದುಹೇಳಿದೆ. ಮತ್ತು (6)
ಯದ್ವೈ ಕಿಂ ಚೈತದಧ್ಯಗೀಷ್ಮಾ ನಾಮೈವೈತನ್ನಾಮ ವಾ ಋಗ್ವೇದೋ ಯಜುರ್ವೇದಃ ಸಾಮ
ವೇದಃ ಆಥರ್ವಣಶ್ಚತುರ್ಥಃ ಎಂದು ಛಾಂದೋಗ್ಯದಲ್ಲಿಯೂ, ಯದ್ವಾಚ ಓಮಿತಿ ಯಚ್ಚನೇತಿಯ
ಚ್ಚಾಸ್ಯಾಃಕ್ರೂರಂ ಯದು ಚೋಲ್ಬಣಿಷ್ಣು ತದ್ವಿಯಾಯು ಕವಯೋಽನ್ವವಿಂದನ್ನಾಮಾಯತ್ತಾ
ಸಮತೃಪ್ಯನ್ ಛೃತೇಽಧಿ ಎಂಬ ಐತರೇಯದಲ್ಲಿಯೂ ಸಮಸ್ತ ವೈದಿಕ ಶಬ್ದಗಳೂ ಭಗವಂತನ ನಾಮ
ಗಳೇ ಎಂದು ಹೇಳಿದೆ. ಮತ್ತು (8) ನಾರಾಯಣಪರಾ ವೇದಾಃ ದೇವಾಃ ನಾರಾಯಣಾಂಗಜಾಃ ।
ಎಂದು ಭಾ॰ ೨ನೇ ಸ್ಕಂಧ, ೫ನೇ ಅಧ್ಯಾಯದಲ್ಲಿಯೂ,(9)ವಾಸುದೇವಪರಾಃವೇದಾಃ ವಾಸುದೇವಪರಾ
ಮಖಾಃ ಎಂದು ೧ನೇ ಸ್ಕಂಧ,೨ನೇ ಅಧ್ಯಾಯದಲ್ಲಿಯೂ(10)ವೇದೇ ರಾಮಾಯಣೇ ಚೈವ ಪುರಾಣೇ
ಭಾರತೇ ತಥಾ। ಆದಾವಂತೇಚ ಮಧ್ಯೇಚ ವಿಷ್ಣುಃಸರ್ವತ್ರ ಗೀಯತೇಎಂದುಹರಿವಂಶದಲ್ಲಿಯೂ ಹೀಗೆ
ಸರ್ವತ್ರ ವೇದಾದಿಗಳಿಗೆ ವಿಷ್ಣು ಪರತ್ವವನ್ನೇ ಹೇಳಿದೆ.ಮತ್ತು(11)ವೇದೈಶ್ಚ ಸರ್ವೈರಹಮೇವ ವೇದ್ಯಃ
ಎಂದು ಶ್ರೀಕೃಷ್ಣ ಪರಮಾತ್ಮನು ತಾನೇ ಪರಮ ಮುಖ್ಯ ವೃತ್ತಿಯಿಂದ ಸಮಸ್ತ ವೇದಗಳಿಂದ ಪ್ರತಿಪಾದ್ಯ
ನೆಂದು ಭಕ್ತಾಗ್ರೇಸರನಾದ ಅರ್ಜುನನಿಗೆ ಉಪದೇಶಿಸಿರುವನು, ಮತ್ತು (12) ಸರ್ವೇ ವೇದಾ ಯತ್ಪದ
ಮಾಮನಂತಿಎಂದು(ಕಾಠ.ಪು.48)ಕಾಠಕದಲ್ಲಿಮುಖ್ಯವಾಗಿ ಅಶೇಷವೇದಗಳಿಂದ ವೇದ್ಯನೆಂದುಹೇಳಿ,(13)
ತದ್ವಿಷ್ಣೋಃಪರಮಂ ಪದಂ ಎಂದುಪಸಂಹಾರಮಾಡಿಯದೆ. ಸಮನ್ವಯಸೂತ್ರದಲ್ಲಿ ಸಮಸ್ತ ವೇದಗಳಿಗೆ
ಶ್ರೀಹರಿಯಲ್ಲಿಯೇ ಸಮನ್ವಯವನ್ನು ಪ್ರತಿಜ್ಞಾಮಾಡಿ ಆನಂದಮಯೋಽಭ್ಯಾಸಾತ್1ಬ್ರ.ಸೂ.೧.೧.೧೨.
ಇತ್ಯಾದಿಗಳಿಂದ ಅದನ್ನೇ ವಿವರಿಸಿರುವರು. ಜ್ಯೋತಿರಧಿಕರಣದಲ್ಲಿ ವಿ ಮೇ ಕರ್ಣಾಪತಯತಃ ಎಂಬ
ಅಗ್ನಿಸೂಕ್ತಕ್ಕೆ ಕರ್ಣಾದಿ ವಿದೂರತ್ವಾದಿರೂಪವಾದ ವಿಷ್ಣುಲಿಂಗದಿಂದ ವಿಷ್ಣುಪರತ್ವವನ್ನೇ ಸಮರ್ಥಿಸಿರು

ವರು. ಇಷ್ಟು ಮಾತ್ರವಲ್ಲದೆ ಸಮಸ್ತವೇದಗಳೂ ವಿಷ್ಣು ಪರಗಳೆಂದು ಇಟ್ಟುಕೊಂಡರೆ ವೇದಗಳಿಗೆ ಅಪೂರ್ವತಾರೂಪವಾದ ತಾತ್ಪರ್ಯಲಿಂಗವು ಪ್ರತೀತವಾಗುವುದರಿಂದ ಜ್ಞಾನಿಗಳಿಗೆ ಮೋಕ್ಷವು ಲಭಿಸುವುದು. (14) ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್ । ತತ್ಪ್ರೀಣನಾನ್ಮೋಕ್ಷಮಾಪ್ನೋತಿ ಸರ್ವಸ್ತತೋ ವೇದಾಸ್ತತ್ಪರಾಃ ಸರ್ವ ಏವ ॥ ಎಂಬ ಸೌಪರ್ಣ ಶ್ರುತಿಯಿಂದಲೂ, (15) ಪ್ರಿಯೋ ಹಿ ಜ್ಞಾನಿನೋಽತ್ಯರ್ಥ. ಎಂಬ ಸ್ಮೃತಿಯಿಂದಲೂ ವಿಷ್ಣುವನ್ನು ಪ್ರತಿಪಾದಿಸಿದರೆ ವಿಷ್ಣು ಜ್ಞಾನ ಸಾಧ್ಯವಾದ ಮೋಕ್ಷಾಖ್ಯ ಮಹಾಫಲವು ಲಭಿಸುವುದು. (16) ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಇತ್ಯಾದಿಗಳಿಂದ ಶ್ರೀಹರಿಯನ್ನು ತಿಳಿಯದೆ ಇದ್ದರೆ ನಿಂದಾರೂಪ ಅರ್ಥವಾದವೂ (17) ಯ ಇತ್ತದ್ವಿದುಸ್ತ ಇಮೇ ಸಮಾಸತೇ ಎಂದು ತಿಳಿದರೆ ಸ್ತುತಿರೂಪವಾದ ಅರ್ಥವಾದವೂ ಉಕ್ತವಾಗಿದೆ. ಹಾಗೆಯೇ ಅನುಕ್ರಮಣಿಕೆಯಲ್ಲಿಯೂ (18) ಏಕೈವ ವಾ ಮಹಾನಾತ್ಮಾ ದೇವತಾ ಎಂದು ಸಮಸ್ತ ಸೂಕ್ತಗಳಿಗೂ ಪರಮಾತ್ಮನೇ ದೇವತೆಯೆಂದೂ ಹೇಳಿದೆ.

ಹಾಗಾದರೆ ಸಮಸ್ತವೇದಗಳೂ ವಿಷ್ಣು ರೂಪವಾದ ಅರ್ಥವನ್ನು ಮಾತ್ರ ಪ್ರತಿಪಾದಿಸುವೆಂದಾಗಲಿ, ಅಗ್ನ್ಯಾದಿರೂಪವಾದ ಅರ್ಥವನ್ನು ಪ್ರತಿಪಾದಿಸದೇನೇ ಇರಲಿ. ಗೌರವವು ಬರುವುದು, ಎಂದರೆ ಹಾಗೆ ಹೇಳಕೂಡದು. ಕಲ್ಪನೋಪದೇಶಾತ್ (೧. ೪. ೧೧) ಎಂಬ ಸೂತ್ರದ ತಾತ್ಪರ್ಯವನ್ನು ನಿರೂಪಿಸತಕ್ಕ ಅನುವ್ಯಾಖ್ಯಾನದಲ್ಲಿ (1) ತೇಷು ತೇಷು ಪದಾರ್ಥೇಷು ರೂಢಿರಂಗೀಕೃತಾ ಯತಃ । ಪ್ರಯೋಜನ ಬಹುತ್ವೇನ ತತ್ಯಕ್ತಿಸ್ಯಾವಿರೋಧತಃ । ಉಪದೇಶಾದಿ ಸಾಮರ್ಥ್ಯಾದ್ವಿಷ್ಣೌ ಶಕ್ತಿಶ್ಚ ಗೃಹ್ಯತೇ। ಎಂಬಲ್ಲಿ ಅಗ್ನ್ಯಾದಿ ದೇವತಾ ಸ್ವರೂಪ ಸಿದ್ಧಿ ಮೊದಲಾದ ಬಹು ಪ್ರಯೋಜನಗಳು ಲಭಿಸುವುದಕ್ಕಾಗಿ ಅಗ್ನ್ಯಾದಿದೇವತಾ ರೂಪವಾದ ಅರ್ಥವೂ ಆವಶ್ಯಕವೆಂದು ಹೇಳಿದೆ. ಮತ್ತು ನಿಗಮನಿಘಂಟು ವ್ಯಾಕರಣಾದಿಗಳಿಂದ ಸಿದ್ಧವಾದ ವ್ಯುತ್ಪತ್ತಿಯಿಂದ ಲಭ್ಯವಾದ ಅಗ್ನ್ಯಾದಿ ದೇವತಾ ರೂಪವಾದ ಅರ್ಥವನ್ನು ಬಿಡುವುದು ಸರ್ವಥಾ ಯುಕ್ತವಲ್ಲ. ಮತ್ತೂ (2) ತ್ರಯೋಽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ । ವಿಷ್ಣೋಃ ಸಹಸ್ರ ನಾಮಾಪಿ ನಿರಂತರಶತಾರ್ಥಕಂ । ಎಂಬ ಸ್ಕಾಂದ ಸ್ಮೃತಿಯಿಂದ ವೇದಗಳಿಗೆ ೩ ಅರ್ಥಗಳು ಇವೆ ಎಂದು ಹೇಳಿದೆ. ಅನ್ಯಾರ್ಥಂತು ಜೈಮಿನಿಃ (೧.೪.೧೯) ಇತ್ಯಾದಿಗಳಲ್ಲಿ ಸೂತ್ರಕಾರರು ಪರಬ್ರಹ್ಮನ ಜ್ಞಾನಕ್ಕಾಗಿ ಕರ್ಮ ದೇವತಾ ರೂಪವಾದ ಅರ್ಥಾಂತರವೂ ಆವಶ್ಯಕವೆಂದು ಹೇಳಿರುವರು.

ಹಾಗಾದರೆ–(1 ನಾಮಾನಿ ವಿಶ್ವಾಭಿ ನ ಸಂತಿ ಲೋಕೇ ಎಂಬ ಭಾಲ್ಲವೇಯ ಶ್ರುತಿಯಲ್ಲಿ ಇಂದ್ರಾದಿಗಳು ವಾಚ್ಯರು ಆಗುವುದೇ ಇಲ್ಲ, ವಿಷ್ಣುವೇ ವಾಚ್ಯನು, ಎಂದು ಹೇಳಿದೆ. ಹಾಗೆಯೇ (2) ವೇದೈಶ್ಚ ಸರ್ವೈರಹಮೇವ ವೇದ್ಯಃ (ಗೀ.೧೫–೧೫) ಎಂಬ ಸ್ಮೃತಿಯಲ್ಲಿಯೂ ನಾನೇ ವೇದ್ಯನು, ಬೇರೆಯವರು ವೇದ್ಯರಲ್ಲ ಎಂದು ಹೇಳಿದೆ. ಹಾಗೆಯೇ ತತ್ತುಸಮನ್ವಯಾತ್ (ಬ್ರ. ಸೂ. ೧. ೧. ೪.) ಎಂಬಲ್ಲಿ ಅವಧಾರಣಾರ್ಥಕ ತು ಶಬ್ದದಿಂದ ವಿಷ್ಣ್ವಾಖ್ಯಬ್ರಹ್ಮನೇ ಸರ್ವಶಾಸ್ತ್ರಪ್ರತಿಪಾದ್ಯನೆಂದು ಪ್ರತಿಜ್ಞಾ ಮಾಡಿ ಇಡೀ ೧ನೇ ಅಧ್ಯಾಯದಿಂದ ಇಂದ್ರಾದಿ ಶಬ್ದವಾಚ್ಯನು ಶ್ರೀ ವಿಷ್ಣುವೇ, ಆಕಾಶ ಪ್ರಾಣ ಜ್ಯೋತಿರಾದಿ ಶಬ್ದವಾಚ್ಯನೂ ಶ್ರೀ ವಿಷ್ಣುವೇ ಎಂದು ಸಪ್ರಮಾಣವಾಗಿ ಸಮಸ್ತ ಶಬ್ದಗಳಿಗೂ ಕೇವಲ ಶ್ರೀ ವಿಷ್ಣುವೇ ಅರ್ಥನೆಂದು ಸಮರ್ಥಿಸಿರುವರು. ಮತ್ತು (3) ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥ ಆ. ಉಪನಿಷತ್ತಿನಲ್ಲಿ ಶ್ರೀವಿಷ್ಣುವಿಗೇನೇ ಜ್ಞೇಯತ್ವವು, ಇತರರಿಗೆ ಜ್ಞೇಯತ್ವವಿಲ್ಲವೆಂದೂ ಹೇಳಿದೆ. ಆದಕಾರಣ ಇತ್ಯಾದಿಪ್ರಮಾಣಗಳಿಂದ ವಿರೋಧವು ಬರುವುದು, ಎಂದರೆ, ಹಾಗೆ ಹೇಳ ಕೂಡದು. ಮುಖ್ಯವೃತ್ತಿಯಿಂದ ಇಂದ್ರಾದಿಗಳು ವಾಚ್ಯರಾದಾಗ್ಯೂ ಪರಮ ಮುಖ್ಯವೃತ್ತಿಯಿಂದ ಇಂದ್ರಾದಿಗಳು ವಾಚ್ಯರಾಗುವುದಿಲ್ಲ. ಶ್ರೀ ಭಗವಂತನೇ ಪರಮ ಮುಖ್ಯ ವೃತ್ತಿಯಿಂದ ವಾಚ್ಯನು. ಪರಮ ಮುಖ್ಯವೃತ್ತಿಯಿಂದಲೇ

ಇಂದ್ರಾದಿಗಳಿಗೆ ವಾಚ್ಯತ್ವವನ್ನು ಶ್ರುತಿ ಸೂತ್ರಾದಿಗಳಲ್ಲಿ ನಿರಾಕರಿಸಿದ್ದು. ಹಾಗೆಯೇ ಅನ್ಯಾ ವಾಚೋ ವಿಮುಂಚಥ ಇತ್ಯಾದಿ ಶ್ರುತಿಸೂತ್ರಗಳಲ್ಲಿಯೂ ಸರ್ವೋತ್ತಮರೆಂದು ಇತರರನ್ನು ತಿಳಿಯ ಬಾರದು ಎಂದದ್ದು. ಆದುದರಿಂದಲೇ **ಅಂಗಾವಬದ್ಧಾಸ್ತು ನ ಶಾಖಾಸು ಹಿ ಪ್ರತಿವೇದಂ** (3. 3. 57) ಎಂಬ ಸೂತ್ರದಲ್ಲಿ ಬ್ರಹ್ಮ ರುದ್ರ ಇಂದ್ರ ಮಿತ್ರ ವರುಣ ಮೊದಲಾದ ಅಂಗದೇವತಾ ವಿಷಯಕಗಳಾದ ಉಪಾಸನಾ ನಮನ ಪೂಜನ ಮನನಾದಿಗಳನ್ನು ಮಾಡಬೇಕೆಂದು ಹೇಳಿ **ಮಂತ್ರಾದಿವದ್ವಾಽವಿರೋಧಃ** (3.3.58.) ಎಂಬ ಗುಣಸೂತ್ರದಲ್ಲಿ ಹೇಗೆ ಅಧಮ ದೇವತಾ ಪರಗಳಾದ ಮಂತ್ರಗಳು ಉತ್ತಮ ದೇವತೆಗಳನ್ನು ಪ್ರತಿಪಾದಿಸುತ್ತವೆಂದು ತಿಳಿಯಬೇಕೋ, ಹಾಗೆಯೇ ಅಧಮ ದೇವತೆಗಳ ಗುಣಗಳು ಉತ್ತಮ ದೇವತೆಗಳಲ್ಲಿ ಇವೆ ಎಂದು ತಿಳಿಯ ಬೇಕು, ಧ್ಯಾನಿಸ ಬೇಕು, ಆದರೆ ಉತ್ತಮ ದೇವತೆಗಳ ಗುಣಗಳನ್ನು ಅಧಮದೇವತೆಗಳಲ್ಲಿ ಧ್ಯಾನಿಸಬಾರದು. ತಿಳಿಯಬಾರದು. ಉತ್ತಮ ದೇವತಾ ಪರಗಳಾಗಿ ಪ್ರತೀತಗಳಾದ ಮಂತ್ರಗಳನ್ನು ಅಧಮ ದೇವತಾ ಪರಗಳನ್ನಾಗಿ ಹೇಗೆ ತಿಳಿಯ ಬಾರದೋ, ಹಾಗೆಯೇ ಎಂದು ಹೇಳಿದೆ.

ಹಾಗಾದರೆ ಹೀಗೆ ಅನೇಕಾರ್ಥಗಳನ್ನು ಇಟ್ಟುಕೊಂಡರೆ ವಾಕ್ಯ ಭೇದವು ಬರುವುದೆಂದರೆ ಹಾಗೆ ಹೇಳ ಕೂಡದು. **ಸಮಾಕರ್ಷಾತ್** (೧—೪—೧೬) ಎಂಬಲ್ಲಿ ಹೇಳಿದ ಪ್ರಕಾರ ಪರಮ ಮುಖ್ಯ ವೃತ್ತಿಯಿಂದ ವಿಷ್ಣು ರೂಪವಾದ ಅರ್ಥವನ್ನೂ ಮುಖ್ಯ ವೃತ್ತಿಯಿಂದ ಇಂದ್ರಾದಿ ರೂಪವಾದ ಅರ್ಥವನ್ನೂ ಅಂಗೀಕರಿಸುವೆವು. ಒಂದೇ ವೃತ್ತಿಯಿಂದ ಅನೇಕಾರ್ಥಗಳನ್ನು ಇಟ್ಟುಕೊಂಡರೆ ಮಾತ್ರ ವಾಕ್ಯ ಭೇದ ಮೊದಲಾದ ದೋಷಗಳು ಬರಬಹುದಿತ್ತು. ಹಾಗೆ ಅಂಗೀಕರಿಸಲಿಲ್ಲ. ಆದುದರಿಂದಲೇ **ತಸ್ಮಾತ್ಪರಮ ಮುಖ್ಯತ್ವಂ ವಿಷ್ಣಾವನ್ಯತ್ರ ಮುಖ್ಯತಾ।** ಶ್ರೀ ವಿಷ್ಣುವಿನಲ್ಲಿ ಪರಮ ಮುಖ್ಯ ವೃತ್ತಿಯು ಇಂದ್ರಾದಿಗಳಲ್ಲಿ ಮುಖ್ಯ ವೃತ್ತಿಯು ಎಂದು ಅನುವ್ಯಾಖ್ಯಾನದಲ್ಲಿ ಹೇಳಿದೆ.

ಆದುದರಿಂದಲೇ ಅಗ್ನಿ ಇಂದ್ರ ಇತ್ಯಾದಿ ಪದಗಳಿಗೆ ಪರಮ ಮುಖ್ಯ ವೃತ್ತಿಯಿಂದ ಶ್ರೀ ವಿಷ್ಣು ಪರತ್ವವಿದ್ದರೂ ಮುಖ್ಯ ವೃತ್ತಿಯಿಂದ ಅಗ್ನ್ಯಾದಿ ದೇವತಾ ಪರತ್ವವೂ ಇದ್ದುದರಿಂದ ಅಗ್ನಿ ಸೂಕ್ತ, ಇಂದ್ರ ಸೂಕ್ತ ಇತ್ಯಾದಿ ವ್ಯವಸ್ಥೆಯು ಕೂಡುತ್ತದೆ. ಆದಕಾರಣ ವ್ಯವಸ್ಥೆಯಿಲ್ಲವೆನ್ನುವ ದೋಷವಿಲ್ಲ. ೨ ಕಡೆಗಳಲ್ಲಿ ತಾತ್ಪರ್ಯವನ್ನು ಕಲ್ಪಿಸಿದರೆ ತಾತ್ಪರ್ಯ ಭೇದವು ಬರುವುದರಿಂದ ತತ್ಪ್ರಯುಕ್ತ ವಾಕ್ಯ ಭೇದ ದೋಷವು ಬರುತ್ತದೆಂದರೆ, ಹಾಗೆ ಹೇಳಕೂಡದು, ಶ್ರೀ ವಿಷ್ಣುವಿನಲ್ಲಿ ಮಾತ್ರ ಮಹಾ ತಾತ್ಪರ್ಯವಿರುವುದು. ಮಹಾ ತಾತ್ಪರ್ಯ ಒಂದೇ ಆದುದರಿಂದ ವಾಕ್ಯ ಭೇದ ದೋಷವಿಲ್ಲ. (೧) **ಸರ್ವೋತ್ಕರ್ಷೇ ದೇವ ದೇವಸ್ಯ ವಿಷ್ಣೋರ್ಮಹಾತಾತ್ಪರ್ಯಂ ನೈವ ಚಾನ್ಯತ್ರ ಸತ್ಯಂ। ಅವಾಂತರಂ ತತ್ಪರತ್ವಂ ತದನ್ಯತ್ಸರ್ವಾಗಮಾನಾಂ ಪುರುಷಾರ್ಥಸ್ತತೋಽತಃ ॥** (ಎಂದು ಪೈಂಗಿ ಶ್ರುತಿ) (೨) **ಸರ್ವಜ್ಞಂ ಸರ್ವ ಕರ್ತಾರಂ ನಾರಾಯಣಮನಾಮಯಂ। ಸರ್ವೋತ್ತಮಂ ಜ್ಞಾಪಯಂತೀ ಮಹಾ ತಾತ್ಪರ್ಯಮತ್ರಹಿ। ಸರ್ವೇಷಾಮಪಿ ವೇದಾನಾಮಿತಿಹಾಸಪುರಾಣಯೋಃ। ಪ್ರಮಾಣಾನಾಂಚ ಸರ್ವೇಷಾಂ ತದರ್ಥಂ ಚಾನ್ಯದುಚ್ಯತೇ ॥** ಇತ್ಯಾದಿ ನಾರದೀಯಪುರಾಣಾದಿಗಳು. ಇತ್ಯಾದಿಗಳಲ್ಲಿ ಮಹಾತಾತ್ಪರ್ಯ ಅವಾಂತರ ತಾತ್ಪರ್ಯ ಭೇದದಿಂದ ಅನೇಕಾರ್ಥಗಳನ್ನು ಹೇಳಿ ಸಮಸ್ತವೇದ, ಇತಿಹಾಸ, ಪುರಾಣ, ಸಮಸ್ತ ಪ್ರಮಾಣಗಳಿಗೂ ಸರ್ವೋತ್ತಮನಾದ ಶ್ರೀ ವಿಷ್ಣುವಿನಲ್ಲಿಯೇ ಮಹಾ ತಾತ್ಪರ್ಯವು. ಇತರರಲ್ಲಿ ಅವಾಂತರ ತಾತ್ಪರ್ಯವು, ಎಂದು ಹೇಳಿದೆ. (3) ಮತ್ತು ಅಗ್ನ್ಯಾದಿ ಸೂಕ್ತಗಳಿಂದ ಭಗವಂತನನ್ನು ಉಪಾಸನೆ ಮಾಡುವವರಿಗೆ ಅಗ್ನಿ ಮೊದಲಾದ ಅಧಿಷ್ಠಾನಗಳಲ್ಲಿಯೇ ಭಗವಂತನನ್ನು ಧ್ಯಾನಿಸಬೇಕು, ಅಲ್ಲಿಯೇ ಅಭಿವ್ಯಕ್ತನಾಗುತ್ತಾನೆ. ಅಲ್ಲಿಯೇ ಪ್ರಾಪ್ಯನಾಗುತ್ತಾನೆ, ಎಂಬ 3 ನಿಮಿತ್ತಗಳಿಂದ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ, ಇತ್ಯಾದಿ ವ್ಯವಸ್ಥೆಯು ಕೂಡುತ್ತದೆಂದು ವೈಶ್ವಾನರಾಧಿಕರಣದಲ್ಲಿ ಸೂತ್ರಕಾರರೇ ಸಮರ್ಥಿಸಿರುವರು. (4) ಅಥವಾ **ಪೃಥಗ್ರೂಪಾಣಿ ವಿಷ್ಣೋಸ್ತು ದೇವತಾಂತರಗಾಣಿಚ।**

ಅಗ್ನ್ಯಾದಿ ಸೂಕ್ತನಾಮ್ಯಾನಿ ನಾಮ್ನಾ ಸೂಕ್ತಭಿದಾ ಭವೇತ್ ॥ ಎಂದು ಈ ಋಗ್ಭಾಷ್ಯದಲ್ಲಿ ಹೇಳಿದ ಪ್ರಕಾರ ಅಗ್ನ್ಯಾದಿ ನಾಮಭೇದದಿಂದ ಅಗ್ನ್ಯಾದಿ ಸೂಕ್ತ ವ್ಯವಸ್ಥೆಯು ಎಂದೆನ್ನಬೇಕು. (5) ಅಗ್ನಿ ಸೂಕ್ತ, ವಾಯು ಸೂಕ್ತ ಇತ್ಯಾದಿ ಪ್ರಕಾರವೇ ಪ್ರಸಿದ್ಧಿಯಿರುವುದು, ವಿಷ್ಣುಸೂಕ್ತ ಇತ್ಯಾದಿ ಪ್ರಕಾರ ಪ್ರಸಿದ್ಧಿಯಿಲ್ಲ ಎಂದರೆ ಅದು ಅಜ್ಞಾನ ಮೂಲಕವೆಂದು ಚಂದ್ರಿಕಾದಲ್ಲಿ ಸಮರ್ಥಿಸಿರುವರು. (6) ಏವಂಚ ಸರ್ವೋತ್ತಮನಾದ ಶ್ರೀ ವಿಷ್ಣುವೇ ಸ್ವರ ವರ್ಣ ಪದಾದಿ ರೂಪ ಸಮಸ್ತ ವೇದಗಳಿಂದಲೂ ಪ್ರತಿಪಾದ್ಯ ನೆಂದು ಸಿದ್ಧವಾಯ್ತು.

ಋಷಿ ಛಂದೋ ದೈವತಾನಿ ಜ್ಞಾತ್ವಾಽರ್ಥಂ ಚೈವ ಭಕ್ತಿತಃ । ಸ್ವಾಧ್ಯಾಯೋಽನ್ಯೈವ ಮೋಕ್ಷಃ ಸ್ಯಾದ್ವಿರಕ್ತಸ್ಯ ಹರಿಸ್ಮೃತೇಃ ॥ ಎಂದು ಸ್ಮೃತಿ, ಯೋ ಹ ವಾಽವಿದಿತಾರ್ಷೇಯ ಛಂದೋ ದೈವತಬ್ರಾಹ್ಮಣೇನ ಮಂತ್ರೇಣ ಯಜತಿ ಯಾಜಯತ್ಯಧ್ಯಾಪಯತಿ ಸ ಸ್ಥಾಣುಂ ವರ್ಚ್ಛತಿ ಗರ್ತೇವಾಪದ್ಯತೇ ಪ್ರಮಾಮೀಯತೇ ಎಂದು ಶ್ರುತಿ ಇತ್ಯಾದಿ ಪ್ರಮಾಣಗಳಿಂದ ಋಷ್ಯಾದಿಗಳ ಜ್ಞಾನವಿದ್ದರೇನೇಮಂತ್ರಾರ್ಥ ಜ್ಞಾನವು ಸಫಲವಾಗುವುದು.ಇಲ್ಲವಾದರೆ ಅನರ್ಥವುಂಟಾಗುವುದು.ಎಂದು ತಿಳಿಯುವುದರಿಂದ ಋಷ್ಯಾದಿಗಳ ಜ್ಞಾನವು ಆವಶ್ಯಕವು.ಹಾಗೆ ಛಂದಸ್ಸು,ಛಂದಸ್ಸುಗಳಿಗೆ ಅಭಿಮಾನಿದೇವತೆ,ಇವುಗಳ ಜ್ಞಾನವೂ ಆವಶ್ಯಕವೇ.

ಅದರಲ್ಲಿ ೧ನೇದ್ದು ಆಗ್ನೇಯಸೂಕ್ತವು. ೨ ವರ್ಗವು. ೯ ಋಕ್ಕುಗಳು. ಗಾಯತ್ರೀಚ್ಛಂದಸ್ಸು, ಅಗ್ನಿಯೂ, ಅಗ್ನ್ಯಂತರ್ಗತ ಅಗ್ನಿನಾಮಕ ಶ್ರೀವಿಷ್ಣುವೂ ದೇವತೆಯು. ಅಗ್ನಿಮೀಳೇ ಎಂದಾರಂಭಿಸಿ, ಅಗ್ನಿಂ ದೂತಂ ಎನ್ನುವುದಕ್ಕಿಂತ ಮೊದಲಿನ ೧೧೦ ಋಕ್ಕುಗಳಿಗೆ ಮಧುಛಂದಸರೇ ಋಷಿಗಳು. ಅಗ್ನಿಮೀಳೇ ಎಂದಾರಂಭಿಸಿ ಗಾಯಂತಿ ತ್ವಾ ಎನ್ನುವುದಕ್ಕಿಂತ ಮೊದಲಿನ ೯ ಸೂಕ್ತಗಳಲ್ಲಿ ಗಾಯತ್ರೀ ಛಂದಸ್ಸು. ಗಾಯತ್ರೀ ಛಂದಸ್ಸಿಗೆ ಶ್ರೀ ಬ್ರಹ್ಮಾಣೀ ಭಾರತೀ ಗರುಡ, ಸ್ವಾಹಾ, ಎಂಬುವರು ಐದು ಮಂದಿ ಅಭಿಮಾನಿದೇವತೆಗಳು ಎಂದು ತಿಳಿಯಬೇಕು. ॥ ೧ ॥

ಅವ ॥ ಅಗ್ನ್ಯಾದಿದೇವತೆಗಳನ್ನು ಪ್ರತಿಪಾದಿಸತಕ್ಕ ಋಕ್ಕುಗಳನ್ನು ವ್ಯಾಖ್ಯಾನಮಾಡಿದರೆ ಶ್ರೀನಾರಾಯಣನಿಗೆ ಅತಿತುಷ್ಟಿಯಾಗುವುದು. ಹೇಗೆಂದರೆ ಸಕಲವೇದಗಳೂ ಮುಖ್ಯತಃ ಭಗವಂತನ ಜ್ಞಾನವನ್ನೇ ಹುಟ್ಟಿಸುತ್ತವೆ. ಹೇಗೆಂದರೆ-

ಭಾ ॥ (1) ಓಮಶೇಷಗುಣಾಧಾರ ಇತಿ ನಾರಾಯಣೋಽಪ್ಯಸೌ।(2) ಪೂರ್ಣೋ ಭೂತಿವ
ರೋಽನಂತಸುಖೋ ಯದ್ವ್ಯಾಹೃತೀರಿತಃ।(3)ಗುಣೈಸ್ತತಃ ಪ್ರಸವಿತಾ ವರಣೀಯೋ
ಗುಣೋನ್ನತೇಃ । ಭಾರತಿಜ್ಞಾನರೂಪತ್ವಾದ್ಭರ್ಗೋ ಧ್ಯೇಯೋಽಖಿಲೈರ್ಜನೈಃ ॥
ಪ್ರೇರಕೋಽಶೇಷಬುದ್ಧೀನಾಂ ಸ ಗಾಯತ್ರ್ಯರ್ಥ ಈರಿತಃ ॥ ೩ ॥

ಅ ॥ (ಓತತ್ವ ವಾಚೀ ಹ್ಯೋಂಕಾರಃ ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ ಪ್ರಕಾರ) ಓಂಕಾರವು ಯಾವ ಕಾರಣದಿಂದ ನಿಖಿಲಗುಣಾಧಾರತ್ವವನ್ನು ಪ್ರತಿಪಾದಿಸುತ್ತದೋ ಶ್ರೀವಿಷ್ಣುವು ಸರ್ವಗುಣಗಳಿಗೂ ಆಶ್ರಯನೋ ಆದುದರಿಂದ ಓಂಕಾರವು ಶ್ರೀನಾರಾಯಣನನ್ನೇ ಪ್ರತಿಪಾದಿಸುತ್ತದೆ. ಮತ್ತು ನಾರಾಯಣ ಶಬ್ದವು ಶ್ರೀಪರಮಾತ್ಮನಲ್ಲಿಯೇ ಪ್ರಸಿದ್ಧವು, ಅದು ಶ್ರೀ ಹರಿಯು ಸರ್ವಗುಣಗಳಿಂದ ಪರಿಪೂರ್ಣನು ಎಂದು ಹೇಳುವುದು. ಆ ಸಮಾಖ್ಯೆಯಿಂದ ಓಂಕಾರವೂ ಕೂಡ ಶ್ರೀನಾರಾಯಣನನ್ನೇ ಪ್ರತಿಪಾದಿಸುತ್ತದೆ ಎಂದು ನಿಶ್ಚಯವಾಗುತ್ತದೆ. (೨) ಯಾವಕಾರಣದಿಂದ ಹಿಂದೆ ಹೇಳಿದ ಪ್ರಕಾರ ಶ್ರೀಹರಿಯು ಓಂಕಾರದ ಅರ್ಥಭೂತನೋ,ಆದ ಕಾರಣ ಪ್ರಣವಾರ್ಥಾ ವ್ಯಾಹೃತಯೋ ವ್ಯಾಹೃತಿತ್ರಿಗುಣಾ ಪುನಃ

ವೇದಮಾತಾ ಚ ಗಾಯತ್ರೀ ಎಂಬ ಸ್ಮೃತಿಯಿಂದ ಭೂಃ ಭುವಃ ಸುವಃ ಎಂಬ ವ್ಯಾಹೃತಿತ್ರಯವು ಓಂಕಾರದಲ್ಲಿದ್ದ ಅ, ಉ, ಮ್, ಎನ್ನುವ ಮೂರುವರ್ಣಗಳ ವ್ಯಾಖ್ಯಾನ ರೂಪವೆಂದು ತಿಳಿಯುವುದರಿಂದ ಶ್ರೀಹರಿಯೇ ವ್ಯಾಹೃತಿಯಿಂದ ಪ್ರತಿಪಾದ್ಯನು. (ಯಾವನಿಮಿತ್ತದಿಂದಎಂದರೆ) ಪೂರ್ಣಃ=ಭೂಬ ಹೌ ಬಹುಃ ಪೂರ್ಣತಾಯಾಂ ಎಂದು ಮಹಾವ್ಯಾಕರಣದಲ್ಲಿ ಹೇಳಿರುವುದರಿಂದ ಸರ್ವಗುಣಪರಿಪೂರ್ಣನಾದುದರಿಂದ ಭೂಃ ಎನಿಸುತ್ತಾನೆ. ಭೂಃ= ಪೂರ್ಣತ್ವವು. ಭೂತಿಮಃ=ಐಶ್ವರ್ಯದ ನಿಮಿತ್ತದಿಂದ ಶ್ರೀಮ್ಮನು, ಅಂದರೆ ಮಹೈಶ್ವರ್ಯವುಳ್ಳವನಾದುದರಿಂದ ಭುವಃ ಎನಿಸುತ್ತಾನೆ. (ಭೂಸತ್ತಾಯಾಂ, ಮರಶಬ್ದದ ಅಂತ್ಯವಾದ ರ ಕಾರಕ್ಕೆಲೋಪವು) ಸುವಃ=ಸುಃ=ಶೋಭನವಾದ (ಅಪರಿಮಿತವಾದ) ವಃ=(ವಃ ಪುಮಾನ್ ವರುಣೇ ಕುಂಭೇ ವಿಕಲ್ಪೇ ಗಗನೇ ಗುರೌ। ಕಲಭೇ ಖಗಗರ್ಭೇ ಚ ಮದೇ (ಹರ್ಷದಲ್ಲಿ) ಬಾಲ್ಯೇ ಚ ಕರ್ಮಣಿ॥ ಎಂದು ಏಕಾಕ್ಷರಮಾಲಾದಲ್ಲಿ ಹೇಳಿದ ಪ್ರಕಾರ) ಸುಖವು ಯಾರಿಗೋ ಎಂಬ ವ್ಯುತ್ಪತ್ತಿಯಿಂದ ಅಪರಿಮಿತ ಸುಖವುಳ್ಳವನಾದುದರಿಂದ ಸುವಃ ಎನಿಸುತ್ತಾನೆ. ಸ್ವಃ=ಎಂಬ ಕಲ್ಪದಲ್ಲಿ ಸು ಎನ್ನುವಲ್ಲಿದ್ದ ಉ ಕಾರಕ್ಕೆ ಲೋಪವು. ಏವಂ ಚ ಯಾವ ಕಾರಣದಿಂದ ಗುಣಪೂರ್ಣತ್ವಾದಿಗಳುಳ್ಳವನೇ ವ್ಯಾಹೃತಿ ಪ್ರತಿಪಾದ್ಯನೋ ಅಂತಹನು ಪರಮಾತ್ಮನೇ. ಆದಕಾರಣ ಶ್ರೀಹರಿಯೇ ವ್ಯಾಹೃತಿ ಪ್ರತಿಪಾದ್ಯನು. (೩) ಯಾವ ಕಾರಣ ದಿಂದ ಶ್ರೀ ಹರಿಯೇ ವ್ಯಾಹೃತಿ ಪ್ರತಿಪಾದ್ಯನೋ, ಆದಕಾರಣ ಗಾಯತ್ರಿಯು ವ್ಯಾಹೃತಿಯ ಅರ್ಥವಾದುದ ರಿಂದ ಶ್ರೀ ಹರಿಯೇ ಗಾಯತ್ರಿಯ ಅರ್ಥ ಭೂತನೆಂದು ಹೇಳಲ್ಪಟ್ಟಿರುತ್ತಾನೆ. ಹೇಗೆಂದರೆ, ಯಾವ ಕಾರಣದಿಂದ ಜ್ಞಾನಾನಂದಾದಿಗುಣಗಳಿಂದ ವ್ಯಾಪ್ತನೋ, ಆದಕಾರಣ ತತ್ ಸರ್ವಜಗತ್ತಿಗೂ ಮುಖ್ಯತಃ ಜನಕನಾದುದರಿಂದ ಸವಿತಾ. ಜ್ಞಾನಾನಂದಾದಿ ಗುಣಾಧಿಕ್ಯನಿಮಿತ್ತದಿಂದ ಸರ್ವರಿಂದ ಭಜಿಸಲರ್ಹನಾದು ದರಿಂದ ವರೇಣ್ಯಂ. (ಭಾ ದೀಪ್ತೌ, ರಮು ಕ್ರೀಡಾಯಾಂ, ಗಮ್ಲೃ ಗತೌ. ಈ ಧಾತುಸಮುದಾಯದಿಂದ ಅಸುನ್ ಪ್ರತ್ಯಯವು, ಎಂಬ ವ್ಯುತ್ಪತ್ತಿಯಿಂದ) ಪ್ರಕಾಶವಿಶೇಷ, ಕ್ರೀಡಾ ಜ್ಞಾನಸ್ವರೂಪನಾದುದ ರಿಂದ ಭರ್ಗಃ ಎಂದು ಸರ್ವಜನರಿಂದಲೂ ಧ್ಯಾನಾರ್ಹನು. ಯಾವಾತನು ಸರ್ವರಬುದ್ಧಿಗಳಿಗೆ ಪ್ರೇರಕನೋ, ಅಂತಹನೇ ಗಾಯತ್ರಿಯ ಅರ್ಥ ಭೂತನೆಂದು ಹೇಳಲ್ಪಟ್ಟಿರುತ್ತಾನೆ. ಏವಂ ಚ ಯಃ= ಯಾವಾತನು, ನಃ=ನಮ್ಮ (ಅಂದರೆ ಅಶೇಷ ಜೀವರ) ಧಿಯಃ=ಧರ್ಮಾದಿ ವಿಷಯಕ ಬುದ್ಧಿಗಳನ್ನು ಪ್ರಚೋದಯಾತ್=ಪ್ರೇರೇಪಿಸುವನೋ, ಸವಿತುಃ ದೇವಸ್ಯ=ಅಂತಹ ಸರ್ವ ಜಗತ್ಸೃಷ್ಟಿ ಕರ್ತನಾದ ಕ್ರೀಡಾದಿಗುಣ ವಿಶಿಷ್ಟನಾದ ಶ್ರೀನಾರಾಯಣನ, ತತ್=ಸರ್ವ ಗುಣಗಳಿಂದ ವ್ಯಾಪ್ತವಾದ, ವರೇಣ್ಯಂ= ಆದುದರಿಂದಲೇ ಸರ್ವರಿಂದಲೂ ಭಜಿಸಲಿಕ್ಕೆ ಅರ್ಹವಾದ ಭರ್ಗಃ=ಪ್ರಕಾಶ ಕ್ರೀಡಾ ಜ್ಞಾನಸ್ವರೂಪವಾದ ರೂಪವನ್ನು ಧ್ಯಾನಿಸುವೆವು. ॥ ೧ ॥

ಅವ ॥ ಶ್ರೀಹರಿಯು ಗಾಯತ್ರಿಯಿಂದ ಪ್ರತಿಪಾದ್ಯನಾದಾಗ್ಯೂ ಪ್ರಕೃತ ಏನಾಯಿತೆಂದರೆ—

ಭಾ ॥ (1) ಸ ಪೂರ್ಣತ್ವಾತ್ಪುಮಾನ್ನಾಮ ಪೌರುಷೇ ಸೂಕ್ತ ಈರಿತಃ। (2) ಸ ಏವಾಖಿಲ ವೇದಾರ್ಥಃ ಸರ್ವಶಾಸ್ತ್ರಾರ್ಥ ಏವ ಚ ॥ (3) ಸ ಏವ ಸರ್ವಶಬ್ದಾರ್ಥಃ (4) ಇತ್ಯಾಹೋಪನಿಷತ್ಪರಾ ತಾ ವಾ ಏತಾ ಋಚ ಇತಿ (5) ವಿಶೇಷೇಣಾಪ್ಯೃಗರ್ಥತಾಂ॥ (6) ಯೋ ದೇವಾನಾಮಿತಿ ಶ್ರುತ್ಯಾ ದೇವನಾಮ್ನಾಂ ವಿಶೇಷತಃ । ಸ್ಪಷ್ಟತ್ವಾತ್ತದ್ಗತತ್ವೇನ ॥ ೨ ॥

ಅ ॥ (1) ಯಾವ ಕಾರಣದಿಂದ ಶ್ರೀಹರಿಯು ಗಾಯತ್ರೀಪ್ರತಿಪಾದ್ಯನೋ, ಆದಕಾರಣ ಶ್ರೀ ಹರಿಯು ಗಾಯತ್ರೀ ಪ್ರತಿಪಾದ್ಯನಾದುದರಿಂದ ಶ್ರೀಹರಿಯೇ ಪುರುಷ ಸೂಕ್ತದಲ್ಲಿ ಪ್ರತಿಪಾದಿಸಲ್ಪಟ್ಟಿರು

ತ್ವಾನ್. (ಹಾಗಾದರೆ ಪುರುಷಸೂಕ್ತದಲ್ಲಿ ಪುರುಷನಾಮಕ ಪಶುವು ಪ್ರತಿಪಾದ್ಯವು. ಶ್ರೀ ವಿಷ್ಣುವು ಪ್ರತಿಪಾದ್ಯನಲ್ಲ, ಎಂದರೆ ಹಾಗೆ ಹೇಳಕೂಡದು.)(ಏಕೆಂದರೆ) ಸರ್ವಗುಣ ಪರಿಪೂರ್ಣನಾದುದರಿಂದ ಪುಮಾನ್= ಪುರುಷನೆಂದರೆ ಆ ಶ್ರೀವಿಷ್ಣುವೇ. (2) (ಆದಾಗ್ಯೂ ಪ್ರಕೃತವೇನಾಯಿತೆಂದರೆ) ಯಾವ ಕಾರಣದಿಂದ ಶ್ರೀಹರಿಯು ಪುರುಷ ಸೂಕ್ತಪ್ರತಿಪಾದ್ಯನೋ, ಆದಕಾರಣ ವೇದಾಃ ಪುರುಷಸೂಕ್ತಗಾಃ ಎಂಬ ಪ್ರಮಾಣದಿಂದ ಎಲ್ಲಾ ವೇದಗಳು ಪುರುಷ ಸೂಕ್ತದ ಅರ್ಥಗಳಾಗಿರುವುದರಿಂದ) ಆ ಶ್ರೀಹರಿಯೇ ಸಮಸ್ತ ವೇದಗಳಿಂದ ಪ್ರತಿಪಾದ್ಯನು (ಆದುದರಿಂದ ಸ್ಮೃತಿಗಳೆಲ್ಲವೂ ಶ್ರುತಿ ಮೂಲಕಗಳಾಗಿರುವುದರಿಂದ) ಆ ಶ್ರೀಹರಿಯೇ ಸಮಸ್ತ ಶಾಸ್ತ್ರಗಳಿಂದಲೂ ಪ್ರತಿಪಾದ್ಯನು. (3) (ಸರ್ವಶಾಸ್ತ್ರ ಪ್ರತಿಪಾದ್ಯನಾದುದರಿಂದ) ಆ ಶ್ರೀಹರಿಯೇ ಸರ್ವ ಶಬ್ದಗಳಿಂದಲೂ ವಾಚ್ಯನು. (ಏಕೆಂದರೆ ಸರ್ವಶಬ್ದಗಳೂ ವೇದ ಪ್ರತಿಪಾದ್ಯಗಳೇ.) (ಇಲ್ಲಿ ಶ್ರೀವಿಷ್ಣುವು ಸಮಸ್ತ ವೇದ ಪ್ರತಿಪಾದ್ಯನು ಎನ್ನುವುದೇ ಪ್ರಕೃತ ಉಪಯುಕ್ತವಾಗಿರುವುದರಿಂದ ಸರ್ವಶಾಸ್ತ್ರ ಪ್ರತಿಪಾದ್ಯನು. ಸರ್ವಶಬ್ದ ಪ್ರತಿಪಾದ್ಯನು ಎನ್ನುವುದು ಎರಡು ಪ್ರಸಂಗಸಂಗತಿಯಿಂದ ಹೇಳಿದ್ದು.) (4) ಈಶ್ವರಃ ಸರ್ವವೇದಾರ್ಥಃ ತದ್ವ್ಯಾಖ್ಯೇಯ ಪುರುಷಸೂಕ್ತಾರ್ಥತ್ವಾತ್ ಯೋ ಯದ್ವ್ಯಾಖ್ಯೇಯಾರ್ಥಃ ಸಃ ವ್ಯಾಖ್ಯಾನ ರೂಪ ಗ್ರಂಥಾರ್ಥಃ, ಯಥಾ ರಾಮಾಯಣಾರ್ಥೋ ರಾಮಃ ತಟ್ಟೀಕಾರ್ಥ.) ಎನ್ನುವ ಅನುಮಾನದಿಂದ ಶ್ರೀಹರಿಯು ಸಮಸ್ತವೇದಗಳಿಂದಲೂ ವಾಚ್ಯನೆಂದು ಸಾಧಿಸಿ ಶ್ರುತಿಯಿಂದಲೂ ಸಾಧಿಸುತ್ತಾರೆ.) ಶ್ರೀಹರಿಯೇ ಸಮಸ್ತ ವೇದಗಳ ಅರ್ಥಭೂತನು ಎಂದು ಹೇಳಿದ ಅರ್ಥವನ್ನು 'ತಾವಾ ಏತಾಃ ಸರ್ವಾ ಋಚಃ ಸರ್ವೇ ವೇದಾಃ ಸರ್ವೇ ಘೋಷಾಃ ಏಕೈವ ವ್ಯಾಹೃತಿಃ ಪ್ರಾಣ ಏವ ಎಂದು ಉತ್ಕೃಷ್ಟವಾದ (ವಿಸ್ಪಷ್ಟವಾಗಿ ಪ್ರತಿಪಾದಿಸುವ) ಐತರೇಯೋಪನಿಷತ್ತೂ ಕೂಡ ಹೇಳುತ್ತದೆ. (5) (ಹಾಗಾದರೆ ಸಮಸ್ತವೇದಗಳೂ ಭಗವತ್ಪರಗಳಾಗಿರುವುದರಿಂದ ಯಾವುದಾದರೊಂದು ವೇದದ ವ್ಯಾಖ್ಯಾನಾದಿಗಳೂ ಶ್ರೀಹರಿಗೆ ತುಷ್ಟಿಯನ್ನುಂಟು ಮಾಡುತ್ತವೆ. ಆದಕಾರಣ ಋಕ್ಕುಗಳನ್ನೇ ವ್ಯಾಖ್ಯಾನ ಮಾಡುವುದು ಏತಕ್ಕೆ? ಎಂದರೆ) ಋಕ್ಕುಗಳು ವೇದಗಳಲ್ಲಿಯೇ ಅಡಕವಾಗಿರುವುದರಿಂದ ಸರ್ವೇ ವೇದಾಃ ಎಂದು ಹೇಳಿ, ಸರ್ವಾಃ ಋಚಃ ಎಂದು ತಿರುಗಿ ಹೇಳಿದುದರಿಂದ ವಿಶೇಷತಃ ಶ್ರೀಹರಿಯು ಋಕ್ಕುಗಳಿಂದ ಪ್ರತಿಪಾದ್ಯನೆಂದು ಉಪನಿಷತ್ತೂ ಹೇಳುತ್ತದೆಂದು ತಿಳಿಯುತ್ತೇವೆ. (ಇಲ್ಲವಾದರೆ ಸರ್ವಾ ಋಚಃ ಎಂದು ಪ್ರತ್ಯೇಕ ಹೇಳಿದ್ದೂ ವ್ಯರ್ಥವಾಗುವುದು. ಆದಕಾರಣ ಋಕ್ಕುಗಳ ವ್ಯಾಖ್ಯಾನಾದಿಗಳು ಶ್ರೀಹರಿಗೆ ಅತಿತುಷ್ಟಿಯನ್ನುಂಟುಮಾಡುವುದರಿಂದ ಋಕ್ಕುಗಳ ವ್ಯಾಖ್ಯಾನಾದಿಗಳನ್ನೇ ಮಾಡುತ್ತೇವೆ.) (6) (ಇತರ ವೇದಗಳಿಗಿಂತ ವಿಶೇಷತಃ ಋಕ್ಕುಗಳು ಪರಮೇಶ್ವರ ಪ್ರತಿಪಾದಕಗಳು ಎನ್ನುವುದು ಹೇಗೆಂದರೆ)ಯೋ ದೇವಾನಾಂ ನಾಮಧಾ ಏಕ ಏವ ಎನ್ನುವ ಶ್ರುತಿಯಿಂದ ಅಗ್ನಿ ಸೂರ್ಯ ಮೊದಲಾದ ದೇವತೆಗಳ ನಾಮಗಳು ಭಗವದ್ವಾಚಕಗಳಾಗಿರುವ ಕಾರಣ ಋಕ್ಕುಗಳು ಭಗವದ್ವಾಚಕಗಳೆನ್ನುವುದು ವಿಶೇಷತಃ ಸ್ಪಷ್ಟವಾಗಿರುವುದರಿಂದ ವಿಶೇಷವಾಗಿಯೂ ಈಶ್ವರನು ಋಕ್ಕುಗಳಿಂದ ಪ್ರತಿಪಾದ್ಯನು ಎಂದು ಉಪನಿಷತ್ತು ಹೇಳುತ್ತದೆ.

ವಿ|| (1)ವಸಂತೇ ವಸಂತೇ ಜ್ಯೋತಿಷಾ ಯಜೇತ ಇತ್ಯಾದಿ ವೇದಗಳು ಆಪಾತತಃ ಕರ್ಮ ಕಾಲಾದಿಗಳನ್ನು ಬೋಧಿಸುವುದರಿಂದ ಅಜ್ಞರಿಗೆ ಭಗವಂತನನ್ನು ಬೋಧಿಸುತ್ತವೆಎಂಬ ಜ್ಞಾನವುಬರುವುದಿಲ್ಲ. ಅಗ್ನಿಮೀಳೇ ಇತ್ಯಾದಿ ಋಕ್ಕುಗಳು ಅಗ್ನ್ಯಾದಿ ದೇವತೆಗಳ ಗುಣಗಳನ್ನು ಪ್ರತಿಪಾದಿಸುವುದರಿಂದ ಅಗ್ನ್ಯಾದಿ ದೇವತಾಶಬ್ದವು ಭಗವತ್ಪರವೆಂದು ಹೇಳೋಣ. ಆ ಮಂತ್ರೋಕ್ತ ಗುಣಗಳು ಭಗವತ್ಪರಗಳೆಂದ ಸುತರಾಂ ಸಿದ್ಧವಾಗುತ್ತವೆ. ಆದ ಕಾರಣ ಋಕ್ಕುಗಳು ಭಗವತ್ಪರಗಳೆನ್ನುವಲ್ಲಿ ಅತಿಪ್ರಯತ್ನವಿಲ್ಲ ಆದ ಕಾರಣ ಋಕ್ಕುಗಳು ವಿಶೇಷತಃ ಭಗವದ್ವಾಚಕಗಳೆಂದು ಹೇಳಿದ್ದು. (2) ಋಚಸ್ತು ವಿಶೇಷತಃ ಇಂದ್ರಾದಿ ನಾಮವತೋ ವಿಷ್ಣೋರ್ಗುಣಾನಲ್ಪಜ್ಞಾನಾಮಪಿ ಪ್ರಕಾಶಯಂತೀತಿಪ್ರಾಣೋ ನಾರಾಯಣ ಏವೇತಿ ವಿದ್ಯಾತ್ ಋಕ್ಕುಗಳಾದರೂ ಅಲ್ಪ ಜ್ಞಾನಿಗಳಿಗೂ ಇಂದ್ರ ಸೂರ್ಯ ಮೊದಲಾದ ನಾಮ

ವುಳ್ಳ ಶ್ರೀವಿಷ್ಣುವಿನ ಗುಣಗಳನ್ನು ವಿಶೇಷತಃ ಪ್ರಕಾಶಗೊಳಿಸುತ್ತವೆ, ಎಂದು ಋಕ್ಕುಗಳು ನಾರಾಯಣನನ್ನೇ ಪ್ರತಿಪಾದಿಸುತ್ತವೆ ಎಂದು ತಿಳಿಯಬೇಕು ಎಂದು ಐತರೇಯಭಾಷ್ಯದಲ್ಲಿ ಹೇಳಿದೆ- (3)ಹುಂಕಾರೇಣ ಸದೈವಾಬ್ಧಿಃ ಸರ್ವಾಭಿಭವಶಕ್ತತಾಂ । ವಿಷ್ಣೋರ್ವಕ್ತಿ ಯತೋ ಹುಂ ಹಿಂ ಪರಾಭಿಭವವಾಚಕಃ । ಓಮಿತಿ ಸ್ವರತೇ ನಿತ್ಯಂ ವಾಯುರ್ಘೋಷೇಷು ಸಂಸ್ಥಿತಃ । ಬಲವನ್ನಾದ ಸಂಯುಕ್ತೋ ಹ್ಯಧಿಕೋಚ್ಚತ್ವಮುಸ್ಯತು । ಓಂಕಾರಸ್ಯಾರ್ಥ ಉದ್ದಿಷ್ಟಃ ಉತ್ಕೃಷ್ಟಾರ್ಥಾಧಿಕ್ಯಮೇವಚ । ನಾದೋ ಬಲೀ ಪ್ರವದತಿ ತಥಾ ಭೇರೀಧ್ವನಿಃ ಪ್ರಭೋಃ । ಅನುದಾತ್ತಸ್ವರೂಪತ್ವಾದೌದಾರ್ಯಂ ವದತೀಶಿತುಃ । ತದಪೇಕ್ಷಯಾ ಹ್ಯನೀಚತ್ವಂ ಘಂಟಾಯಾಃ ಸ್ವರಿತಾತ್ಮತಃ । ಉಚ್ಚಸ್ಥಿತಿಮುದಾತ್ತಸ್ತು ಸ್ವರ್ಣಚಂಚ್ವಾದಿಕಃ ಸ್ವರಃ । ವಿಷ್ಣೋರ್ವಕ್ತಿ ತಥಾ ಮಂದ್ರಃ ಶ್ವಾಸಾದಿಪ್ರಥನಾತ್ಮಕಃ । ಏಕಪ್ರಕಾರತಾಂ ವಿಷ್ಣೋಃ ಸದಾಽಚಾಲ್ಯಾಂ ವದತ್ಯಪಿ ॥ ಎಂದು ಬೃಹತ್ಸಂಹಿತೆಯಲ್ಲಿ ಹೇಳಿದಪ್ರಕಾರ ಸಮುದ್ರಾದಿ ಘೋಷಗಳೂ ಕೂಡ ಭಗವದ್ವಾಚಕಗಳೆಂದು ಸಿದ್ಧಿಸುತ್ತವೆ ॥೨॥

ಅವ ॥ ಹೀಗೆ ವ್ಯಾಖ್ಯಾನ ಮಾಡಲಿಕ್ಕೆ ಆವಶ್ಯಕವಾದ ಋಗ್ವೇದದ ೨೧ ಪ್ರಭೇದಗಳಲ್ಲಿ ಇದು ಶಾಕಲ ಶಾಖೆಯು. ಇದರಲ್ಲಿ ೬೪ ಅಧ್ಯಾಯಗಳು. ೧೦ ಮಂಡಲಗಳು. ೨೦೦೬ ವರ್ಗಗಳು, ೧೦೦೧ ಸೂಕ್ತಗಳು ಇಂತಹ ಶಾಕಲ ಶಾಖೆಯ ೧ ನೇ ಮಂಡಲದ ೧ ನೇ ಅಧ್ಯಾಯದ ೧ನೇ ಅನುವಾಕದ ೩ ಸೂಕ್ತಗಳಲ್ಲಿ ೧ ನೇ ಸೂಕ್ತವು ವ್ಯಾಖ್ಯಾನಾರ್ಹವಾಯ್ತು. ಹೀಗೆ ಇಂತಹ ಋಕ್ಕುಗಳ ಅರ್ಥವನ್ನು ಅವಶ್ಯವಾಗಿ ಹೇಳಬೇಕೆಂದು ಉಪಪಾದಿಸಿ ಈಗ ೧ನೇ ಸೂಕ್ತದ ತಾತ್ಪರ್ಯವನ್ನು ಹೇಳುತ್ತಾರೆ.

ಭಾ ॥ (೧) ತತ್ರಾಹಾಗ್ರೇಽಗ್ನಿನಾಮಕಂ । ಅಗ್ರಣೀತ್ವಂ ಯದಗ್ನಿತ್ವಮಿತ್ಯಗ್ರೇ ನಾಮ ತದ್ಭವೇತ್ ॥ (೨) ಏವಮೇವಾಹ ಭಗವಾನ್ನಿರುಕ್ತಿಂ ಬಾದರಾಯಣಃ ॥ (೩) ಯಥೈವಾಗ್ನ್ಯಾದಯಶ್ಶಬ್ದಾಃ ಪ್ರವರ್ತಂತೇ ಜನಾರ್ದನೇ ॥ ತಥಾ ನಿರುಕ್ತಿಂ ವಕ್ಷ್ಯಾಮೋ ಜ್ಞಾನಿನಾಂ ಜ್ಞಾನಸಿದ್ಧಯೇ ॥ ಇತಿ ತೇನ ॥ ೩ ॥

ಅ॥ (೧) ಆ ಋಕ್ಕುಗಳಲ್ಲಿ ಪ್ರಥಮ ಸೂಕ್ತದಲ್ಲಿ ಅಗ್ನಿನಾಮಕ ಭಗವಂತನನ್ನು ವೇದವು ಪ್ರತಿಪಾದಿಸುತ್ತದೆ. (ಅಗ್ನಿನಾಮಕ ಭಗವಂತನನ್ನು ಪ್ರಥಮತಃ ಪ್ರತಿಪಾದಿಸಲಿಕ್ಕೆ ಏನು ಕಾರಣವು ಎಂದರೆ) ಯಾವ ಕಾರಣದಿಂದ ಅಗ್ನಿ ಶಬ್ದವಾಚ್ಯನು ಋಕ್ಪ್ರತಿಪಾದ್ಯಸ್ತುತ್ಯಾದಿಗಳಲ್ಲಿ ಸರ್ವರಿಗಿಂತ ಪ್ರಥಮದಲ್ಲಿ ಸ್ತುತಿಸಲ್ಪಡುತ್ತಾನೋ, (ಅಂದರೆ ಸರ್ವರಿಗಿಂತ ಪ್ರಥಮತಃ ಪೂಜ್ಯನಾಗಿರುತ್ತಾನೋ) ಆದ ಕಾರಣ ಆತನೇ ಅಗ್ರಣೀಃ ಎನ್ನಿಸುತ್ತಾನೆ. ಆದ ಕಾರಣ ಅಗ್ನಿ ಎಂಬ ನಾಮವು ಪ್ರಥಮ ಸೂಕ್ತದಲ್ಲಿ ಪ್ರಯುಕ್ತವಾಗಿದೆ. (ಅಂತಹ ಗುಣವನ್ನೇ ಅಗ್ನಿಶಬ್ದವು ಶ್ರೀಹರಿಗೆ ಪ್ರತಿಪಾದಿಸುತ್ತದೆ.) (ಆದ ಪ್ರಯುಕ್ತ ಅಗ್ನಿ ಎಂಬ ನಾಮದಿಂದಲೇ ಪ್ರಥಮತಃ ಶ್ರೀಹರಿಯನ್ನು ಸ್ತುತಿಸಿದ್ದು ಯುಕ್ತವು.) (೨) (ಈ ವಿಷಯದಲ್ಲಿ ವೃದ್ಧಸಂಮತಿಯನ್ನು ಹೇಳುತ್ತಾರೆ) ಈ ಅಭಿಪ್ರಾಯದಿಂದಲೇ ಅಗ್ನಿ ಶಬ್ದವನ್ನು ಆದಿಯನ್ನಾಗಿ ಮಾಡಿ ಷಡ್ಗುಣ ಪರಿಪೂರ್ಣರಾದ ವೇದವ್ಯಾಸರು, ಸರ್ವಶಬ್ದಗಳೂ ಭಗವತ್ಪರಗಳು ಎಂಬ ಅಭಿಪ್ರಾಯದಿಂದ ನಿರ್ವಚನವನ್ನು ಹೇಳಿರುವರು. (೩) ಯಾವ ರೀತಿಯಾಗಿ ನಿರ್ವಚನ ಮಾಡಿದರೆ ಅಗ್ನಿ ಮೊದಲಾದ ಶಬ್ದಗಳು ಶ್ರೀಪರಮಾತ್ಮನಲ್ಲಿ ಪ್ರವೃತ್ತಗಳಾಗುತ್ತವೋ, ಹಾಗೆ ನಿರುಕ್ತಿಯನ್ನು ಜ್ಞಾನಿಗಳಿಗೆ ಜ್ಞಾನವು ಸಿದ್ಧಿಯಾಗುವುದಕ್ಕಾಗಿ ಹೇಳುವೆವು. (ಹೀಗೆ ಪ್ರತಿಜ್ಞಾ ವಾಕ್ಯದಿಂದ ಅಗ್ನಿ ಶಬ್ದವನ್ನು ಆದಿಯನ್ನಾಗಿ ಮಾಡಿ ನಿರುಕ್ತಿಯನ್ನು ವೇದವ್ಯಾಸರು ಮಾಡಿರುವರು ಎಂದು ತಿಳಿಯುತ್ತದೆ.) (ನಿರವಧಿಕ ಜ್ಞಾನಾದಿಗಳುಳ್ಳ ವೇದವ್ಯಾಸರು ಪ್ರಮಾದದಿಂದ ಹೇಳಿರುವರು ಎಂದು ಹೇಳಲಾಗುವುದಿಲ್ಲ. ಮತ್ತು, ಇದನ್ನು ಬಿಟ್ಟು ಕಾರಣಾಂತರವನ್ನು ಕಲ್ಪಿಸಲಿಕ್ಕೆ ಪ್ರಮಾಣವಿಲ್ಲ)

(ಯಾವ ಕಾರಣದಿಂದ ಹೀಗೆ ಅಗ್ನಿ ಶಬ್ದವನ್ನು ಪ್ರಥಮದಲ್ಲಿ ಪ್ರಯೋಗಿಸಿದ್ದು ಯುಕ್ತವೋ) ಆ ಕಾರಣದಿಂದ ಆ ಋಕ್ಕುಗಳಲ್ಲಿ ಪ್ರಥಮ ಸೂಕ್ತದಲ್ಲಿ ಅಗ್ನಿನಾಮಕ ಭಗವಂತನನ್ನು ವೇದವು ಪ್ರತಿಪಾದಿಸಿಯದೆ. (ಅತಿ ಪ್ರಾಚೀನ ನಿರುಕ್ತಿ, ಮಹಾವ್ಯಾಕರಣಾದಿಗಳನ್ನು ಅನುಸರಿಸಿಯೇ ನಾವು ವ್ಯಾಖ್ಯಾನ ಮಾಡಿರುವುದರಿಂದ ಯಾಸ್ಕನಿರುಕ್ತಿ ಪಾಣಿನಿವ್ಯಾಕರಣ ಇತ್ಯಾದಿಗಳಿಂದ ವಿರೋಧವು ಅನಾದರಣೀಯವೆಂದು ಸೂಚಿತವಾಯಿತು. ‖ ೩ ‖

ಹರಿಃ ಓಂ ೩ ವರ್ ‖ ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ । ಹೋತಾರಂ ರತ್ನಧಾತಮಮ್ ‖ (ಇದು ವ್ಯಾಖ್ಯಾತವಾಗಿದೆ.‖) ‖ ೧ ‖

ಅವ ‖ ಅಗ್ನಿಮೀಳೇ ಇತ್ಯಾದಿ ಋಕ್ಕುಗಳ ಅರ್ಥವು (೧) ಪ್ರಸಿದ್ಧ ಅಗ್ನ್ಯಾದಿ ಪರವಾದುದು. (೨) ಅಗ್ನ್ಯಂತರ್ಗತ ಅಗ್ನಿನಾಮಕ ಭಗವತ್ಪರವಾದುದು. (೩) ಶರೀರದಲ್ಲಿರತಕ್ಕ ಭಗವತ್ಪರವು. ಹೀಗೆ ೩ ವಿಧವು. ಆ ೩ ಅರ್ಥಗಳನ್ನು ಭಾಷ್ಯದಲ್ಲಿ ಶ್ರೀಮದಾಚಾರ್ಯರು ನಿರೂಪಿಸಿರುವರು. ಅದರಲ್ಲಿ ಅಗ್ನಿಮೀಳೇ ಎಂಬ ೧ನೇ ಋಕ್ಕನ್ನು ವ್ಯಾಖ್ಯಾನ ಮಾಡುತ್ತಾ ಅಗ್ನಿಶಬ್ದಾರ್ಥವನ್ನು ನಿರ್ವಚನ ಮಾಡುತ್ತಾರೆ.

ಭಾ ‖ (೧) ಅಗ್ನಿಶಬ್ದೋಽಯಮಗ್ರ ಏವಾಭಿಪೂಜ್ಯತಾಂ। ಅಗ್ರ್ಯತ್ವಮಗ್ರನೇತೃತ್ವಮತ್ತಿ (ತ್ತೃ)ಮಂಗಾಗನೇತೃತಾಂ । ಆಹ ತಂ ಸ್ತೌತ್ಯಶೇಷಸ್ಯ ಪೂರ್ವಮೇವ ಹಿತಂ ಪ್ರಭುಂ (೨) ಋತ್ವಿಙ್ನಿಯಾಮಕತ್ವೇನ ಯಜ್ಞಾನಾಮೃತ್ವಿಜಂ ಸದಾ ‖ (೩) ದ್ಯೋತ (ಜ) ನಾದ್ವಿಜಯಾತ್ಕಾಂತ್ಯಾ ಸ್ತುತ್ಯಾ ವ್ಯವಹೃತೇರಪಿ। ಗತ್ಯಾ ರಕ್ಷ್ಯಾ ಚ ದೇವಾಖ್ಯಂ (೪) ಹೋತೃಸಂಸ್ಥಂ ವಿಶೇಷತಃ ‖ ಅಗ್ನಿಸಂಸ್ಥೇನ ರೂಪೇಣ ಯತೋಽಗ್ನಿರ್ಹೋತೃದೇವತಾ ‖ (೫) ಇಂದ್ರಿಯಾಗ್ನಿಷು ಚಾರ್ಥಾನಾಂ ಯದ್ಧೋತಾ ಹೋತೃನಾಮಕಃ ‖ (೬) ರತಿಧಾರಕೋತ್ತಮತ್ವಾತ್ಸ ರತ್ನಧಾತಮ ಈರಿತಃ ‖ ೧ ‖

ಅ ‖ (೧) ಆದಿಯಲ್ಲಿ ಪ್ರಯುಕ್ತವಾದ ಅಗ್ನಿ ಶಬ್ದವು (ಬಾಹ್ಯ ಯಜ್ಞದಲ್ಲಿ) ಅಗ್ನಿಗೂ ಅಗ್ನಿಯಲ್ಲಿ ಅಂತರ್ಗತನಾದ ಅಗ್ನಿನಾಮಕ ಶ್ರೀಹರಿಗೂ, ಅಧ್ಯಾತ್ಮದಲ್ಲಿ ಶ್ರೀಹರಿಗೆ ಜ್ಞಾನಯಜ್ಞದಲ್ಲಿ ಮುಖ್ಯಾಮುಖ್ಯಗಳಾಗಿ ಪೂಜ್ಯರಾದ ಸರ್ವರಿಗಿಂತಲೂ) ಮೊದಲೇ ಚೆನ್ನಾಗಿ ಭಕ್ತಿಪೂರ್ವಕವಾಗಿ ಪೂಜಿಸಲ್ಪಡುವಿಕೆಯನ್ನು ಹೇಳುತ್ತದೆ. ಹಾಗೆಯೇ ಸರ್ವರಿಗಿಂತಲೂ ಪ್ರಥಮದಲ್ಲಿರುವಿಕೆಯನ್ನು (ಅಂದರೆ ಸರ್ವೋತ್ತಮತ್ವವನ್ನು) ಹಾಗೆಯೇ ಪ್ರಥಮತಃ ಸರ್ವ ಪ್ರವರ್ತಕತ್ವವನ್ನೂ, ಅಧ್ಯಾತ್ಮಾಪೇಕ್ಷಯಾ ಬಾಹ್ಯಾರ್ಥದಲ್ಲಿ ಶ್ರೀ ಹರಿಯಲ್ಲಿ ಸಂಹರ್ತೃತ್ವವನ್ನೂ, ಅಗ್ನಿಯಲ್ಲಿಯೂ ಅಗ್ನ್ಯಂತರ್ಗತ ಶ್ರೀಹರಿಯಲ್ಲಿಯೂ ಹವಿಸ್ಸುಗಳ ಭೋಕ್ತೃತ್ವವನ್ನೂ, ಅಧ್ಯಾತ್ಮದಲ್ಲಿ (ಶರೀರದಲ್ಲಿ) ವಿಷಯಗಳ ಭೋಕ್ತೃತ್ವವನ್ನೂ, ಹಾಗೆಯೇ ಶರೀರದಲ್ಲಿ ಶ್ರೀ ವಿಷ್ಣುವಿಗೂ ಅಗ್ನಿಗೂ ಸರ್ವ ಶರೀರಗಳ ಪ್ರವರ್ತಕತ್ವವನ್ನೂ, ಹಾಗೆಯೇ ಸ್ವತಃ ಪ್ರವೃತ್ತಿಯಿಲ್ಲದಿರುವ ಸಮಸ್ತ ಜಗತ್ತಿನ ಪ್ರವರ್ತಕತ್ವವನ್ನೂ, ಅಗ್ನಿ ಶಬ್ದವು ಪ್ರತಿಪಾದಿಸುತ್ತದೆ. ಅಂತಹ ಅಗ್ನಿನಾಮಕ ಶ್ರೀ ಪರಮಾತ್ಮನನ್ನು ಸ್ತುತಿಸುತ್ತೇನೆ. ನಮಸ್ಕರಿಸುತ್ತೇನೆ. (ಏಕೆಂದರೆ) ಅತನು ನಿಖಿಲ ಜಗತ್ತಿಗಾಗಿ ಅನಾದಿಕಾಲದಿಂದಲೇ ಹಿತಕರನು. ಸರ್ವರಿಗೂ ಸ್ವಾಮಿಯು, (ಸರ್ವೋತ್ಕೃಷ್ಟನು.) (೨) ಮತ್ತು ಸರ್ವದಾ ಋತ್ವಿಕ್‌ಗಳಲ್ಲಿ ನಿಯಾಮಕನಾಗಿರುವುದರಿಂದ ಬಾಹ್ಯ ಯಜ್ಞಗಳಿಗೂ ಅಧ್ಯಾತ್ಮಿಕರಾದ ಋತ್ವಿಕ್ ಎನಿಸಿಕೊಂಡ ಇಂದ್ರಿಯಾಭಿಮಾನಿ ದೇವತೆಗಳಿಗೂ ಜ್ಞಾನರೂಪ ಆಧ್ಯಾತ್ಮಿಕ ಯಜ್ಞಗಳಿಗೂ ನಿಯಾಮಕ

ನಾಗಿ ಋತ್ವಿಕ್ ಎನಿಸಿಕೊಂಡವನು. ಅಥವಾ ತದಧೀನತ್ವಾದರ್ಥವತ್ ಎಂಬ ಸೂತ್ರದಲ್ಲಿ ಇತರರಲ್ಲಿರುವ ದುಃಖಾದಿಗಳು ಶ್ರೀ ಪರಮಾತ್ಮನ ಅಧೀನಗಳಾಗಿರುವುದರಿಂದ ಶ್ರೀ ಪರಮಾತ್ಮನಿಗೆ ದುಃಖ್ಯಾದಿ ಶಬ್ದವಾಚ್ಯತ್ವವಿದ್ದಂತೆಯೇ ಪ್ರಕೃತದಲ್ಲಿಯೂ ಅಗ್ನಿಯಲ್ಲಿರತಕ್ಕ ಋತುಯಜನಕರ್ತೃತ್ವರೂಪವಾದ ಋತ್ವಿಕ್ತ್ವವು ಶ್ರೀ ಪರಮಾತ್ಮನ ಅಧೀನವಾಗಿರುವ ಪ್ರಯುಕ್ತ ಶ್ರೀ ಹರಿಯೂ ಋತ್ವಿಕ್ ಎನ್ನಿಸುತ್ತಾನೆ. (ಅಂದರೆ ಋತ್ವಿಗಾದಿಗಳು ಶ್ರೀವಿಷ್ಣುವಿನ ಅಧೀನರಾಗಿರುವುದರಿಂದ ಶ್ರೀವಿಷ್ಣುವು ಋತ್ವಿಗಾದಿಶಬ್ದವಾಚ್ಯನು. (ಅಧ್ಯಾತ್ಮ ಜ್ಞಾನಯಜ್ಞದಲ್ಲಿ ಇಂದ್ರಿಯಾಭಿಮಾನಿ ದೇವತೆಗಳೇ ಋತ್ವಿಜರು. ಬಾಹ್ಯಯಜ್ಞದಲ್ಲಿ ಆದರೂ ಋತ್ವಿಜರು ಪ್ರಸಿದ್ಧರೆ. (ಋತ್ವಿಜರು ಶಸ್ತ್ರ ಶಂಸನಾದಿ ಕರ್ಮಗಳನ್ನು ಮಾಡುವವರು, ಋಕ್ಕುಗಳು ಕರ್ಮಗಳಿಗೆ ಅಂಗಗಳು, ಕರ್ಮಗಳಿಗೆ ಅಂಗಭೂತಗಳಾದ ಮಂತ್ರಗಳನ್ನು ಋತ್ವಿಜರು ಪ್ರಯೋಗಿಸುವುದರಿಂದ ಋತ್ವಿಜರ ವಾಕ್ಯಗಳೆಂದಾಗೋಣ ಋತ್ವಿಜರ ವಾಕ್ಯರೂಪಗಳಾದ ಋಕ್ಕುಗಳಿಗೆ ಬಾಹ್ಯಯಜ್ಞದಲ್ಲಿ ಹೋತ್ರಾದಿಗಳಿಗೆ ನಿಯಾಮಕನೂ, ಆಧ್ಯಾತ್ಮಿಕ ಯಜ್ಞದಲ್ಲಿ ಜ್ಞಾನಾರ್ಥಿಗೆ ಆ ವಾಕ್ಯಗಳ ಪ್ರಯೋಗಕ್ಕೆ ಕಾರಣನೂ ಆದ ಶ್ರೀ ಪರಮಾತ್ಮನು ಎಂಬ ಅನುಸಂಧಾನ ರೂಪಜ್ಞಾನವನ್ನು ಕೊಡುವವನೂ ಆದ ಅಗ್ನಿಶಬ್ದವಾಚ್ಯನಾದ ಶ್ರೀಹರಿಯ ಸ್ತುತಿಯು ಯುಕ್ತವೇ ಆಗಿದೆ.) (೩) ಪ್ರಕಾಶ ವಿಜಯ ಕಾಂತಿ, ವ್ಯವಹಾರ, ಗತಿ, ರಮಣ, ಮದ, ಸ್ವಪ್ನ, ಇವುಗಳಿಗೆ ಕರ್ತನಾದುದರಿಂದಲೂ ಸ್ತೋತ್ರಕ್ಕೆ ವಿಷಯನಾದುದರಿಂದಲೂ ದೇವನೆನಿಸಿಕೊಂಡವನು. (೪) ಅಗ್ನಿಯಲ್ಲಿರತಕ್ಕ ರೂಪದಿಂದ ಋತ್ವಿಜರಿಗಿಂತ ವಿಶೇಷತಃ ಹೋತೃವಿನಲ್ಲಿದ್ದಾನೆ. (ಅಂದರೆ—ಋತ್ವಿಜರಲ್ಲಿ ಋತ್ವಿಜರಿಗೆ ನಿಯಾಮಕನಾದ ಋತ್ವಿಕ್ ಶಬ್ದವಾಚ್ಯನಾದ ಶ್ರೀಪರಮಾತ್ಮನು ಸನ್ನಿಹಿತನೇ ಆಗಿರುತ್ತಾನೆ. ಹೋತೃವಿನಲ್ಲಿ ಆದರೂ ಅಗ್ನಿಮೀಳೇ ಇತ್ಯಾದಿಗಳಲ್ಲಿ ಸ್ತುತ್ಯವಾದದ್ದು ಅಗ್ನಿಯಲ್ಲಿರತಕ್ಕುದು ಅಗ್ನಿಗೆ ನಿಯಾಮಕವಾದುದು ಅಗ್ನಿನಾಮಕವಾದುದು ಯಾವುದು ಭಗವದ್ರೂಪವಿದೆಯೋ ಆ ರೂಪವೇ ಋತ್ವಿಜರಿಗಿಂತ ವಿಶೇಷವಾಗಿ ಸನ್ನಿಹಿತವಾಗಿರುತ್ತದೆ. (ಆದಕಾರಣ ಋತ್ವಿಜಂ ಹೋತಾರಂ ಎಂಬವುಗಳಿಗೆ ಪುನರುಕ್ತಿಯಿಲ್ಲ.) (ಅಗ್ನಿನಾಮಕ ಶ್ರೀ ವಿಷ್ಣುವು ಹೋತೃವಿನಲ್ಲಿದ್ದಾನೆಂಬುವುದು ಯಾವುದರಿಂದ ಎಂದರೆ) ಹೋತೃವಿಗೆ ಅಭಿಮಾನಿ ದೇವತೆಯಾಗಿ ಪ್ರಸಿದ್ಧನಾದ ಅಗ್ನಿಯು ಯಾವ ಕಾರಣದಿಂದ ಹೋತನಲ್ಲಿದ್ದಾನೋ ಆದಕಾರಣ ಅಗ್ನಿಯಲ್ಲಿರತಕ್ಕ ಶ್ರೀ ವಿಷ್ಣುವು ಹೋತೃವಿನಲ್ಲಿದ್ದಾನೆಂಬುವುದು ಯುಕ್ತವು. (ಹೀಗೆ ಶ್ರೀವಿಷ್ಣುವಿನಲ್ಲಿ ಹೋತೃ ಶಬ್ದವನ್ನು ವ್ಯಾಖ್ಯಾನ ಮಾಡಿ ಅಗ್ನಿಯಲ್ಲಿಯೂ ವ್ಯಾಖ್ಯಾನ ಮಾಡುತ್ತಾರೆ.) ಯಾವ ಕಾರಣದಿಂದ ಅಗ್ನಿಯು ಹೋತೃವಿಗ ಅಭಿಮಾನಿ ದೇವತೆಯೋ, ಆದಕಾರಣ ಅಗ್ನಿಯು ಹೋತಾ ಎನಿಸಿಕೊಳ್ಳುತ್ತಾನೆ. (ಹೇಗೆಂದರೆ ತದ್ಯೋಯಂ ವಾಕ್ ಸೋಽಯಮಗ್ನಿಃ ಸ ಹೋತಾ ಯಾವುದು ವಾಗಿಂದ್ರಿಯವೋ ಅದಕ್ಕೆ ಅಗ್ನಿಯು ಅಭಿಮಾನಿಯು. ಹೋತೃವಿಗೂ ಅಭಿಮಾನಿಯು, ಎಂದು ಶ್ರುತಿಯು.) ಋಗ್ವೇದಿಗಳು ಹೋತೃತ್ವವನ್ನು ಅಪೇಕ್ಷಿಸುವವರು. ಆದ ಕಾರಣ ಹೋತೃವಿನಲ್ಲಿರತಕ್ಕ ಭಗವದ್ರೂಪವನ್ನು ಸ್ತುತಿಸಿದ್ದು ಯುಕ್ತವೇ (೫) (ಆಧ್ಯಾತ್ಮದಲ್ಲಿ ಹೋತೃ ಶಬ್ದವನ್ನು ವ್ಯಾಖ್ಯಾನಮಾಡುತ್ತಾರೆ.) ಯಾವ ಕಾರಣದಿಂದ ಇಂದ್ರಿಯಾಖ್ಯ ಅಗ್ನಿಗಳಲ್ಲಿ ಆಯಾವ ಇಂದ್ರಿಯಗಳಿಗೆ ವಿಷಯಗಳಾದ ಹವಿಸ್ಸುಗಳನ್ನು ಶ್ರೀಹರಿಯು ಹೋಮಿಸುವವನೋ, ಆದುದರಿಂದಲೂ ಹೋತನೆಂದು ಹೆಸರುಳ್ಳವನು, (೬) ಇಂದ್ರಿಯ ವಿಷಯ ಸಂಬಂಧ ಸಂಪಾದನದ್ವಾರಾ ವಿಷಯಾನುಭವರೂಪ ಭೋಗವನ್ನು ಯಾರು ಕೊಡುತ್ತಾರೋ, ಅವರ ಸ್ತುತಿಯನ್ನು ಮಾಡಲೇಬೇಕು. ಶ್ರೀಹರಿಯು ಪರಮ ಸುಖಸ್ವರೂಪನಾದುದರಿಂದ ಸುಖಾರ್ಥಿಗಳು ಆ ಶ್ರೀಹರಿಯನ್ನು ಸ್ತುತಿಸುವುದು ಯುಕ್ತವೆನ್ನುವ ಅಭಿಪ್ರಾಯದಿಂದ ರತ್ನಧಾತಮ ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ.) ರತಿಯನ್ನು (ಸುಖವನ್ನು) ಧರಿಸುವವರಲ್ಲಿ ಉತ್ತಮೋತ್ತಮನಾದುದರಿಂದಲೂ ರಮಣೀಯಗಳಾದ ಧನಗಳನ್ನು ಭಕ್ತರಿಗೆ ಸರ್ವಾಪೇಕ್ಷಯಾ ವಿಶೇಷತಃ ಕೊಡುವವನಾದುದರಿಂದಲೂ ಶ್ರೀಹರಿಯು ರತ್ನಧಾತಮಃ ಎನಿಸುತ್ತಾನೆ.

(1) ರತ್ನಂ ರತಿಂ ಧತ್ತೇ ಇತಿ ರತ್ನಧಾಃ । ಅತಿಶಯೇನ ರತ್ನದಾಃ ರತ್ನಧಾತಮಃ ಎಂದು. (2) ನವಾ ಏಕೇ

ನಾಕ್ಷರೇಣ ಛಂದಾಂಸಿ ವಿಯಂತಿ ನ ದ್ವಾಭ್ಯಾಂ ಒಂದೆರಡು ಅಕ್ಷರಗಳು ನ್ಯೂನಗಳಾದರೂ ಅಧಿಕವಾದರೂ ದೋಷವಿಲ್ಲ, ಎಂಬ ಪ್ರಮಾಣದಿಂದ ರತ್ನಧಾತಮಮಿತ್ಯತ್ರ ಧಾರಕೋತ್ತಮತ್ವಾತ್ಸಃ ಎಂಬ ಭಾಷ್ಯದಲ್ಲಿ ವರ್ಣಾಧಿಕ್ಯವು ದೋಷಾಧಾಯಕವಲ್ಲ.) ॥ ೧ ॥

ಅವ॥ ಆಚಾರ ಬಲದಿಂದಲೂ ಅಗ್ನಿಯನ್ನು ಸ್ತುತಿಸುವುದು ಯುಕ್ತವೆನ್ನುವ ಅಭಿಪ್ರಾಯದಿಂದ ಆಚಾರವೂ ಇದೆ ಎನ್ನುತ್ತಾರೆ.

ಋಕ್ ॥ ಅಗ್ನಿಃ ಪೂರ್ವೇಭಿರ್ಋಷಿಭಿರೀಡ್ಯೋ ನೂತನೈರುತ ।
ಸ ದೇವಾಁಏಹ ವಕ್ಷತಿ ॥ ೨ ॥

ಅ॥ ಅಗ್ನಿಃ=ಅಗ್ನಿಯು, ಪೂರ್ವೇಭಿಃ=ಪುರಾತನರೂ ನೂತನೈಃ=ವರ್ತಮಾನಕಾಲಿಕರೂ, ಉತ=ಭವಿಷ್ಯತ್ಕಾಲಿಕರೂ ಆದ. ಋಷಿಭಿಃ=ಜ್ಞಾನಿಗಳಾಗಿರುವುದರಿಂದ ಋಷಿಗಳೆನಿಸಿ ಕೊಂಡ ದೇವಾದಿಗಳಿಂದ ಈಡ್ಯಃ=ಸ್ತುತ್ಯನು ಸಃ=ಸ್ತುತ್ಯನಾದ ಅಗ್ನಿಯೂ, ಅಗ್ನಿಯಲ್ಲಿರತಕ್ಕ ಅಧ್ಯಾತ್ಮದಲ್ಲಿರತಕ್ಕ ಶ್ರೀ ಹರಿಯೂ, ಇಹ=ಈ ಬಾಹ್ಯಯಜ್ಞದಲ್ಲಿ, ದೇವಾನ್=ಹವಿಸ್ಸನ್ನು ಭಜಿಸುವ ದೇವತೆಗಳನ್ನು ಆವಕ್ಷತಿ=ತರಿಸಲಿ. ಜ್ಞಾನಯಜ್ಞದಲ್ಲಿ ಇಂದ್ರಿಯಾಭಿಮಾನಿಗಳಾದ ದೇವತೆಗಳನ್ನು ತರಿಸಲಿ. (ಅಂದರೆ ವಿಶೇಷವಾಗಿ ನಮಗೆ ಉಪಕಾರಿಗಳನ್ನಾಗಿ ಮಾಡಲಿ.) ॥ ೨ ॥

ಅವ॥ ಅಗ್ನ್ಯಂತರ್ಗತ ಅಧ್ಯಾತ್ಮಗತ ಅಗ್ನಿನಾಮಕ ಶ್ರೀಹರಿಯ ಸ್ತೋತ್ರದಲ್ಲಿ ಆಚಾರವೂ ಇದೆ ಎಂದು ಹೇಳುತ್ತಾರೆ.

ಭಾ॥ ಸ ಪೂರ್ವೈರ್ನೂತನೈರೇಷ್ಯೈರ್ವಿಜ್ಞಾನಾದೃಷಿನಾಮಕೈಃ । ಈಡ್ಯೋ ದೇವಾದಿಭಿಸ್ಸರ್ವೈಸ್ಸ ಚ ದೇವಾನಿಹಾನಯೇತ್ ॥ ೨ ॥

ಅ॥ ಆ ಅಗ್ನಿಯೂ ಅಗ್ನಿಯಲ್ಲಿರತಕ್ಕ ಅಧ್ಯಾತ್ಮಗತನಾದ ಶ್ರೀಹರಿಯೂ ಕೂಡ, ಪುರಾತನರೂ, ವರ್ತಮಾನ ಕಾಲಿಕರೂ, ಭವಿಷ್ಯತ್ಕಾಲಿಕರೂ ವಿಶಿಷ್ಟ ಜ್ಞಾನವಿದ್ದುದರಿಂದ ಋಷಿನಾಮಕರೂ ಆದ ದೇವಾದಿಗಳಿಂದೆಲ್ಲರಿಂದಲೂ ಸ್ತುತ್ಯನಾದವನು. ಸ್ತುತಿಸಲ್ಪಟ್ಟ ಆ ಅಗ್ನಿಯು, ಆ ಶ್ರೀಹರಿಯೂ ಸ್ತುತಿ ಮಾಡಿದ ಋಷಿಗಳ ಸಂಬಂಧಿಯಾದ ಬಾಹ್ಯ ಯಜ್ಞದಲ್ಲಿ ದೇವತೆಗಳನ್ನು ಹವಿಸ್ಸುಗಳನ್ನು ಭೋಜಿಸುವುದಕ್ಕಾಗಿ ತರಿಸಲಿ. ಜ್ಞಾನ ಯಜ್ಞದಲ್ಲಿ ಆದರೂ ಇಂದ್ರಿಯಾಭಿಮಾನಿ ದೇವತೆಗಳು ಸದಾ ಇದ್ದರೂ ಅವರನ್ನು ಸ್ತಾವಕರಾದ ಋಷಿಗಳಿಗೆ ಜ್ಞಾನ ಭಕ್ತ್ಯಾದಿ ವಿಶೇಷಗಳನ್ನು ಕೊಟ್ಟು ಉಪಕಾರಿಗಳನ್ನಾಗಿ ಮಾಡಲಿ. ॥ ೨ ॥

ಅವ ॥ ಅಗ್ನಿಯು ಅಭೀಷ್ಟವನ್ನು ಕೊಡುವವನಾದುದರಿಂದ ಆತನ ಸ್ತೋತ್ರವು ಯುಕ್ತವೆಂಬ ಅಭಿಪ್ರಾಯದಿಂದ, ಆತನು ಅಭೀಷ್ಟವನ್ನು ಕೊಡುವವನೆಂದು ಹೇಳುತ್ತಾರೆ.

ಋಕ್ ॥ ಅಗ್ನಿನಾ ರಯಿಮಶ್ನವತ್ಪೋಷಮೇವ ದಿವೇ ದಿವೇ ।
ಯಶಸಂ ವೀರವತ್ತಮಂ ॥ ೩ ॥

ಅವ ॥ (ಸ್ತುತಿ ಮಾಡುವವನು) ಅಗ್ನಿನೈವ=ಅಗ್ನಿಯ ಮತ್ತು ಅಗ್ನ್ಯಂತರ್ಗತ ಶ್ರೀಪರಮಾತ್ಮನ ಪ್ರಸಾದದಿಂದಲೇ, ರಯಿಂ=ಬಾಹ್ಯ ಯಜ್ಞದಲ್ಲಿ ಧನಾತ್ಮಕ ವಿತ್ತವನ್ನೂ, ಅಧ್ಯಾತ್ಮದಲ್ಲಿ ಜ್ಞಾನಾಖ್ಯ ವಿತ್ತವನ್ನು ಅಶ್ನವತ್=ಹೊಂದುತ್ತಾನೆ, ದಿವೇದಿವೇ=ದಿವಸ ದಿವಸದಲ್ಲಿ (ನಿತ್ಯದಲ್ಲಿಯೂ) ಪೋಷಮೇವ=(ಪ್ರಾಪ್ತವಾದ ದ್ರವ್ಯದ) ಪುಷ್ಟಿಯನ್ನೇ ಹೊಂದುತ್ತಾನೆ. (ಲೋಕದಂತೆ ಹೀನತ್ವವನ್ನು ಹೊಂದುವುದಿಲ್ಲ.) ವೀರವತ್ತಮಂ=(ಬಾಹ್ಯದಲ್ಲಿ) ಅತಿಶಯಿತ ಪುತ್ರನುಳ್ಳ (ಸದ್ಗುಣ ಭರಿತನಾದ ಪುತ್ರನಿಂದ ಯುಕ್ತವಾದ) ಯಶಸಂ=ಕೀರ್ತಿಯನ್ನು, ಅಧ್ಯಾತ್ಮದಲ್ಲಿ ವೀರ್ಯವತ್ತಾದ ಯಶಸ್ಸು ಜ್ಞಾನ ಸುಖ ಇವುಗಳನ್ನು ಅಶ್ನವತ್=ಹೊಂದುತ್ತಾನೆ. ॥ ೩ ॥

ಭಾ ॥ ತೇನೈವ ರಯಿಮಾಪ್ನೋತಿ ವಿತ್ತಂ ವಿದ್ಯಾಧನಾತ್ಮಕಂ । ದಿವಸೇ ದಿವಸೇ ನಿತ್ಯಂ ಪುಷ್ಟಿಮೇವ ನ ಹೀನತಾಂ । ಯಶಶ್ಚ ಪುತ್ರಸಂಯುಕ್ತಂ ವೀರ್ಯವತ್ತಮ ಮೇವ ವಾ ॥ ೩ ॥

ಅ ॥ ಸ್ತುತಿಸುವವನು ಅಗ್ನಿಯ ಪ್ರಸಾದದಿಂದಲೇ, ಬಾಹ್ಯದಲ್ಲಿ ಧನಾತ್ಮಕವಾದ ವಿತ್ತವನ್ನು, ಅಧ್ಯಾತ್ಮದಲ್ಲಿ ವಿದ್ಯಾರೂಪ ವಿತ್ತವನ್ನೂ, ಹೊಂದುತ್ತಾನೆ. ಪ್ರತಿ ದಿವಸದಲ್ಲಿಯೂ ನಿತ್ಯದಲ್ಲಿಯೂ ಹೊಂದಿದ ದ್ರವ್ಯದ ಪುಷ್ಟಿಯನ್ನೇ ಹೊಂದುತ್ತಾನೆ. ಪುನಃ ಲೋಕದಂತೆ ಹೀನತ್ವವನ್ನು ಹೊಂದುವುದಿಲ್ಲ. ಬಾಹ್ಯದಲ್ಲಿ ಸದ್ಗುಣ ಭರಿತರಾದ ಪುತ್ರರಿಂದ ಕೂಡಿರುವ ಕೀರ್ತಿಯನ್ನೂ, ಅಧ್ಯಾತ್ಮದಲ್ಲಿ ವೀರ್ಯವತ್ತಾದ ಯಶಸ್ಸು, ಜ್ಞಾನ ಸುಖಗಳನ್ನು, ವೀರ್ಯವತ್ತಾದ ಅಪರೋಕ್ಷ ಜ್ಞಾನವನ್ನು ಮೌಕ್ತ ಸುಖವನ್ನು, ಹೊಂದುತ್ತಾನೆ. (ದ್ರವ್ಯ ಪುತ್ರ ಕೀರ್ತಿಗಳ ಪ್ರಾಪ್ತಿಯು ಬಾಹ್ಯಾಗ್ನಿ ಅಗ್ನಿಯಲ್ಲಿರತಕ್ಕ ಶ್ರೀ ವಿಷ್ಣುವಿನ ಪ್ರಸಾದದಿಂದಲೇ. ರಯಿ ಶಬ್ದೋಕ್ತವಾದ ಪರೋಕ್ಷಜ್ಞಾನ ಅಪರೋಕ್ಷಜ್ಞಾನ ಮುಕ್ತಿಸುಖ ಇವುಗಳನ್ನು ಅಧ್ಯಾತ್ಮದಲ್ಲಿರತಕ್ಕ ಶ್ರೀ ವಿಷ್ಣುವಿನ ಪ್ರಸಾದರಿಂದಲೇ.) ಎಂದು ವಾ=ವ್ಯವಸ್ಥಿತ ವಿಕಲ್ಪವು. ॥ ೩ ॥

ಅವ ॥ ಹೀಗೆ ಋಖುಕ್ಕುಗಳಿಂದ ಸ್ತೋತ್ರವು ಯುಕ್ತವೆಂದು ಹೇಳಿ ಈಗ ಅಗ್ನಿಯನ್ನು ಸ್ತುತಿಸುತ್ತಾರೆ.

ಋಕ್ ॥ ಅಗ್ನೇ ಯಂ ಯಜ್ಞಮಧ್ವರಂ ವಿಶ್ವತಃ ಪರಿಭೂರಸಿ ।
ಸ ಇದ್ದೇವೇಷು ಗಚ್ಛತಿ ॥ ೪ ॥

ಅ ॥ ಅಗ್ನೇ=ಎಲೋ ಅಗ್ನಿಯೇ, (ನೀನು) ಅಧ್ವರಂ=ವಿಧಿಮಾರ್ಗದಲ್ಲಿರತಕ್ಕ, (ಶಾಸ್ತ್ರದಲ್ಲಿ ವಿಹಿತ ಪ್ರಕಾರವಾಗಿಯೇ ಅನುಷ್ಠಿತವಾದ) ಯಂ ಯಜ್ಞಂ=ಯಾವ ಬಾಹ್ಯ ಆಂತರವಾದ ಯಾಗವನ್ನು ವಿಶ್ವತಃ ಸರ್ವ ಕಾಲದಲ್ಲಿ (ಯಾವಾಗಲೂ) ಪರಿಭೂಃ ಅಸಿ=ಸುತ್ತಲೂ ಇದ್ದು ರಕ್ಷಿಸುತ್ತಿಯೋ, ಸ ಇತ್=ಅಂತಹ ಯಜ್ಞವೇ, ದೇವೇಷು ಗಚ್ಛತಿ=ದೇವತೆಗಳನ್ನು ಹೊಂದುತ್ತದೆ. (ಭಗವಂತನಿಂದ ರಕ್ಷಿತವಾದ ಯಜ್ಞವನ್ನೇ ದೇವತೆಗಳು ಸ್ವೀಕರಿಸುತ್ತಾರೆ.) (ಅಂತಹ ಜ್ಞಾನ ಯಜ್ಞಕ್ಕೇನೇ ದೇವಾದಿಗಳು ವಿಷಯರಾಗುತ್ತಾರೆ.) ಎಂದು ಅಧ್ಯಾತ್ಮಾರ್ಥವು. ॥ ೪ ॥

ಭಾ ॥ ಯಂ ಯಜ್ಞಂ ಪರಿತೋ ಭೂತ್ವಾ ರಕ್ಷಸಿ ತ್ವಂ ಸದೈವ ಚ । ವಿಧಿಮಾರ್ಗಸ್ಥಿತಂ ದೇವಾನ್ಸ ವಿನಾಪ್ನೋತ್ಯಸಂಶಯಂ ॥ ೪ ॥

ಅ ॥ (ಎಲೋ ಅಗ್ನಿಯೇ) ನೀನು ಶಾಸ್ತ್ರೋಕ್ತಪ್ರಕಾರ ಅನುಷ್ಠಿತವಾದ ಬಾಹ್ಯ ಅಂತರ ಯಾವ ಯಜ್ಞವನ್ನು ಯಾವಾಗಲೂ ಸುತ್ತಮುತ್ತಲೂ ರಕ್ಷಿಸುತ್ತೀಯೋ, ಅಂತಹ ಯಜ್ಞವೇ, ನಿಶ್ಸಂಶಯವಾಗಿ ದೇವತೆಗಳನ್ನು ಹೊಂದುತ್ತದೆ, (ಪರಮೇಶ್ವರನಿಂದ ರಕ್ಷಿತವಾದ ಯಜ್ಞವನ್ನೇ ದೇವತೆಗಳು ಸ್ವೀಕರಿಸುತ್ತಾರೆ. ಅಂತಹ ಜ್ಞಾನಯಜ್ಞಕ್ಕೇನೇ ದೇವಾದಿಗಳು ವಿಷಯರಾಗುತ್ತಾರೆ) ॥ ೪ ॥

ಋಕ್ ॥ ಅಗ್ನಿರ್ಹೋತಾ ಕವಿಕ್ರತುಃ ಸತ್ಯಶ್ಚಿತ್ರಶ್ರವಸ್ತಮಃ ।
ದೇವೋ ದೇವೇಭಿರಾಗಮತ್ ॥ ೫ ॥

ಅ ॥ ಹೋತಾ=ಹೋತನಿಗೆ ಪ್ರೇರಕನಾಗಿ ಹೋತೃವಿನಲ್ಲಿದ್ದುದರಿಂದ ಹೋತಾ ಎನಿಸಿಕೊಂಡ ಕವಿಕ್ರತುಃ=ಸರ್ವವಿಷಯಕ ಜ್ಞಾನಕ್ಕಾಗಿ ವಿಶೇಷ ಪ್ರಜ್ಞೆಯುಳ್ಳ, ಸತ್ಯಃ=ನಿರ್ದುಷ್ಟಗಳಾದ ಗುಣಗಳಿಂದ ವ್ಯಾಪ್ತನೂ ಸರ್ವನಿಯಾಮಕನೂ, ಚಿತ್ರಶ್ರವಸ್ತಮಃ=ಅದ್ಭುತವಾದ (ಉತ್ತಮವಾದ) ಕೀರ್ತಿಯುಳ್ಳ ಪುರುಷರ ಮಧ್ಯದಲ್ಲಿ ಉತ್ತಮನು, ದೇವಃ=ಕ್ರೀಡಾದಿ ಗುಣ ವಿಶಿಷ್ಟನು, ಸ್ತುತಿವಿಷಯನು, ಇಂತಹ, ಅಗ್ನಿಃ=ಅಗ್ನಿಯು, ದೇವೇಭಿಃ=ಯಜ್ಞಭಾಗಿಗಳಾದ ದೇವತೆಗಳಿಂದ ಅಧ್ಯಾತ್ಮದಲ್ಲಿ ಇಂದ್ರಿಯಾಭಿಮಾನಿಗಳಾದ ದೇವತೆಗಳಿಂದ ಆಗಮತ್=ಯಜ್ಞಸ್ಥಾನವನ್ನು ಭಕ್ತರ ಶರೀರವನ್ನಾಗಲೀ, ಹೊಂದುತ್ತಾನೆ. (ಇಂತಹ ಶ್ರೀಹರಿಯು ಭಕ್ತರ ಬಾಹ್ಯ ಆಧ್ಯಾತ್ಮಿಕ ಪೂಜೆಗಳನ್ನು ಸ್ವೀಕರಿಸುವುದರಲ್ಲಿ ಆಸಕ್ತನಾಗಿ ಭಕ್ತರಲ್ಲಿ ವಿಶೇಷತಃ ಸನ್ನಿಹಿತನಾಗಿರುತ್ತಾನೆ.) ॥ ೫ ॥

ಭಾ ॥ ಸೋಽಖಿಲಗ್ರಹಣಪ್ರಜ್ಞಃ ಸದ್ಗುಣೈಸ್ಸಂತತೋಽಖಿಲಂ ।
ಯಮಯತ್ಯಗ್ರ್ಯಕೀರ್ತಿನಾಮುತ್ತಮೋ ವಿಬುಧೈಸ್ಸಹ ॥
ಆಗಂತಾಽಖಿಲಭಕ್ತಾನಾಂ ಪೂಜಾಸ್ವೀಕಾರತತ್ಪರಃ ॥ ೫ ॥ ೧ ॥

ಅ ॥ ಆ ಅಗ್ನಿಯು ಸಮಸ್ತ ಜ್ಞಾನಕ್ಕಾಗಿ ಪ್ರಜ್ಞೆಯುಳ್ಳವನು. ಜಗತ್ಸೃಷ್ಟಿಕರ್ತೃತ್ವ ಮೊದಲಾದ ಧರ್ಮಗಳಿಂದ ವ್ಯಾಪ್ತನು, ಮತ್ತು ಸಮಸ್ತ ಜಗತ್ತಿಗೂ ಪ್ರೇರೇಪಕನು, ಉತ್ತಮ ಕೀರ್ತಿಯುಳ್ಳ ಪುರುಷರ ಮಧ್ಯದಲ್ಲಿ ಉತ್ತಮೋತ್ತಮನು, ಇಂತಹ ಶ್ರೀಹರಿಯು ಸಮಸ್ತ ಭಕ್ತರ ಬಾಹ್ಯ ಆಧ್ಯಾತ್ಮಿಕ ಪೂಜೆಗಳನ್ನು ಸ್ವೀಕರಿಸುವುದರಲ್ಲಿ ಆಸಕ್ತನಾಗಿ ಯಜ್ಞ ಭೋಕ್ತೃಗಳಾದ ದೇವತೆಗಳಿಂದಲೂ ಇಂದ್ರಿಯಾಭಿಮಾನಿಗಳಾದ ದೇವತೆಗಳಿಂದಲೂ ಒಡಗೂಡಿ ಭಕ್ತರಿಗೆ ಪ್ರೀತಿಯನ್ನುಂಟು ಮಾಡುವುದಕ್ಕಾಗಿಯೇ (ಹವಿರಾದಿಗಳನ್ನು ತಿನ್ನುವ ಆಶಯದಿಂದ ಅಲ್ಲ) ಯಜ್ಞಸ್ಥಾನವನ್ನು ಕುರಿತು ಮತ್ತು ಭಕ್ತರ ಶರೀರವನ್ನು ಕುರಿತು ಬರುತ್ತಾನೆ ಅಂದರೆ ಅಲ್ಲಿ ವಿಶೇಷತಃ ಸನ್ನಿಹಿತನಾಗುತ್ತಾನೆ. ॥ ೫ ॥ ೧ ॥

೧ನೇ ವರ್ಗವು ಸಮಾಪ್ತವಾಯಿತು.

ಋಕ್ ॥ ಯದಂಗ ದಾಶುಷೇ ತ್ವಮಗ್ನೇ ಭದ್ರಂ ಕರಿಷ್ಯಸಿ ।
ತವೇತ್ತತ್ಸತ್ಯಮಂಗಿರಃ ॥ ೬ ॥

ಅ ॥ ಅಂಗ= ಸಜ್ಜನರಿಗೆ ಪ್ರಿಯನಾದ, ಅಂಗಿರಃ ಅಂಗಿರ ಋಷಿಯ ಪುತ್ರನಾದುದರಿಂದ ಅಂಗಿರಃ ಎನಿಸಿಕೊಂಡವನೇ, ಮತ್ತು ಆತನಲ್ಲಿ ಶ್ರೀಹರಿಯು ನಿಯಾಮಕನಾಗಿದ್ದುದರಿಂದ ಅಂಗಿರಃ ಎನಿಸಿಕೊಂಡವನೇ (ಅಧ್ಯಾತ್ಮದಲ್ಲಿ)ಸರ್ವರ ಶರೀರಗಳಿಗೆ ಪ್ರೇರಕನೂ ಆದ ಅಗ್ನೇ=ಎಲೋ ಅಗ್ನಿಯೇ, ತ್ವಂ=ನೀನು, ದಾಶುಷೇ–ದಕ್ಷಿಣಾದಿಗಳನ್ನು ಕೊಡತಕ್ಕ ಯಜಮಾನನಿಗಾಗಿ, ಭದ್ರಂ=ಮಂಗಲವನ್ನು, ಕರಿಷ್ಯಸೀತಿ ಯತ್=ಮಾಡಲಿಕ್ಕೆ ಇಚ್ಛಿಸುತ್ತಿ ಎನ್ನುವುದು ಯಾವುದೋ, ತತ್=ಅದು, ತವ ಇತ್= ನಿನಗೇನೇ, ಸತ್ಯಂ= ಯಥಾರ್ಥವು. (ಅಂದರೆ ಈತನಿಗೆ ಇಂತಹ ಅಭೀಷ್ಟವನ್ನು ಕೊಡುತ್ತೇನೆಂದು ಇಚ್ಛಿಸಿದರೆ ನಿಶ್ಚಯವಾಗಿಯೂ ಕೊಡುತ್ತಿ.) ॥ ೬ ॥

ಭಾ ॥ ಯಜಮಾನಾಯ ಯದ್ಭದ್ರಂ ಕರ್ತುಮಿಚ್ಛಸಿ ಸತ್ಪ್ರಿಯ । ತ್ವ(ಯ)ಚ್ಚೇಷ್ಟಯೈವ ಕರ್ಮಾಣಿ ವರ್ತಯಿತ್ವಾ ತದೀಹನಂ ॥ ತವೈವ ಸತ್ಯಮಂಗಾನಾಂರಸ ಯದ್ವಹ್ನಿಗೋ ಹರಿಃ॥ ಅಂಗಿರಾಃ ಅಂಗಿರಃಪುತ್ರೋ ಯತೋಽಗ್ನಿರಭವತ್ಕ್ವಚಿತ್ ॥ ೬ ॥

ಅ ॥ ಸಜ್ಜನರಿಗೆ ಪ್ರಿಯನಾದ ಅಗ್ನಿಯೇ ಹವಿಸ್ಸು ಮೊದಲಾದುದನ್ನು ಕೊಡತಕ್ಕ ಯಜಮಾನನಿಗಾಗಿ, ಮಂಗಲಕಾರ್ಯವನ್ನೇ ಮಾಡಬೇಕೆಂದು ಯಾವುದು ಇಚ್ಛಿಸುತ್ತಿಯೋ, ಅಂತಹ ಇಚ್ಛಾರೂಪವ್ಯಾಪಾರವು ನಿನಗೇನೇ ಸತ್ಯವು-(ಅಂದರೆ ಇಂತಹ ಫಲವನ್ನು ಕೊಡುತ್ತೇನೆಂದು ಇಚ್ಛಿಸಿದರೆ ಕೊಡುವಿಯೇ.) (ಮತ್ತ ಯಜಮಾನನು ಪೂಜಿಸುತ್ತಾನೆ.ತಾನು ಫಲವನ್ನು ಕೊಡುತ್ತೇನೆಂದು ವಿನಿಮಯವಲ್ಲ (ಉಪಕಾರಕ್ಕೆ ಪ್ರತ್ಯುಪಕಾರವಲ್ಲ, ಮತ್ತೆ) ಅಂಗಾನಾಂ ರಸ= ಸರ್ವರ ಶರೀರ ಪ್ರವರ್ತಕನೇ, ಯಾವ ನಿನ್ನ ಚೇಷ್ಟೆಯಿಂದಲೇ ಯಜಮಾನನಿಂದ ಸತ್ಕರ್ಮಗಳನ್ನು ಮಾಡಿಸಿಕೊಂಡೇ ಇರುತ್ತಿ. (ಅಂದರೆ ಪೂಜಾದಿಕರ್ಮಗಳಿಗೆ ಪ್ರವರ್ತಕನೂ ನೀನೇ.) (ಬಾಹ್ಯಾರ್ಥವನ್ನು ತೋರಿಸುತ್ತಾರೆ) ಯಾವ ಕಾರಣದಿಂದ ಶ್ರೀಹರಿಯು ಅಗ್ನಿಯಲ್ಲಿದ್ದಾನೋ ಆದ ಕಾರಣ ಅಂಗಿರಾಃ ಎನಿಸುತ್ತಾನೆ. (ಶ್ರೀಹರಿಯು ವಹ್ನಿಯಲ್ಲಿದ್ದರೂ ಹೇಗೆ ಅಂಗಿರಾಃ ಎನಿಸಿಕೊಳ್ಳುತ್ತಾನೆಂದರೆ) ಯಾವ ಕಾರಣದಿಂದ ಕೆಲವು ಕಾಲವಲ್ಲಿ ಅಗ್ನಿಯು ಅಂಗಿರ ಋಷಿಯ ಪುತ್ರನಾಗಿರುವನೋ, ಆದ ಕಾರಣ **ಗೋಭಿಃಶ್ರೀಣೀತ ಮತ್ಸರಂ** ಮದಜನಕವಾದ ಸೋಮವನ್ನು ಗೋವಿನ ವಿಕಾರಗಳಾದ ಪಯಸ್ಸುಗಳಿಂದ ಮಿಶ್ರೀಕರಿಸಬೇಕು. ಇತ್ಯಾದಿಗಳಲ್ಲಿ ಕಾರ್ಯಕಾರಣಗಳಿಗೆ ಅಭೇದವು ಕಂಡದ್ದಿಂದಲೂ, **ಯತ್ರ ವಾ ಪಿತುಃ ತದಸ್ಯ ಪುತ್ರಸ್ಯ** ಎಂಬ ಶ್ರುತಿಯಿಂದ ಅಗ್ನಿಯು ಅಂಗಿರಸ ಋಷಿಗಳ ಪುತ್ರನಾದುದರಿಂದ ಅಂಗಿರಾಃ ಎನಿಸುತ್ತಾನೆ. ಅಗ್ನಿಯಲ್ಲಿ ನಿಯಾಮಕನಾಗಿದ್ದುದರಿಂದ ಶ್ರೀಹರಿಯೂ ಕೂಡಾ **ತದಧೀನತ್ವಾದರ್ಥವತ್** ಎಂಬ ನ್ಯಾಯದಿಂದ ಅಂಗಿರಾಃ ಎನಿಸುತ್ತಾನೆ. ॥ ೬ ॥

ಋ ॥ ಉಪ ತ್ವಾಗ್ನೇ ದಿವೇ ದಿವೇ ದೋಷಾವಸ್ತರ್ಧಿಯಾ ವಯಂ। ನಮೋ ಭರಂತ ಏಮಸಿ ॥ ೭ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ಧಿಯಾ=ಬುದ್ಧ್ಯಾದಿಗುಣಗಳಿಂದ, ವಯಂ=ನಾವು (ಅತ್ಯಲ್ಪರಾದಾಗ್ಯೂ) ದಿವೇ ದಿವೇ ದಿನದಿನವೂ(ಪ್ರತಿನಿತ್ಯವೂ)ದೋಷಾವಸ್ತಃ=ಹಗಲು ರಾತ್ರಿಯಲ್ಲಿ, ಸರ್ವದಾ, ನಮಃ= ನಿನ್ನ ನಮಸ್ಕಾರವನ್ನು, ಭರಂತಃ=ಧರಿಸಿದವರಾಗಿ, (ಮಾಡುತ್ತಾ) ತ್ವಾ=ನಿನ್ನನ್ನು (ಉಚ್ಚ ಗುಣಗಳುಳ್ಳವನನ್ನಾಗಿಯೂ,) ಉಪ ಆ ಇಮಸಿ=ಶರಣು ಹೊಂದುವೆವು. ॥ ೭ ॥

ಭಾ ॥ ವಸ್ತರ್ದಿನಮಹೋರಾತ್ರಮಭೀಷ್ಟಪ್ರಾಣಿನಾಂ ಸದಾ ।
ಅಲ್ಪಾ ಅಪಿ ವಯಂ ಬುದ್ಧ್ಯಾ ತ್ವಾಮುಚ್ಚಗುಣಮೀಶ್ವರಂ ।
ಉಪಯಾಮ ಮನಃಕರ್ಮ ವಾಗ್ಭಿಸ್ತ್ವನ್ನಮಸಂಭರಾಃ ॥ ೭ ॥

ಅ ॥ ಯಾವಾಗಲೂ ಪ್ರಾಣಿಗಳಿಗೆ ಅಭೀಷ್ಟದಾಯಕನೇ ಬುದ್ಧ್ಯಾದಿ ಗುಣಗಳಿಂದ ನಾವು ಅತ್ಯಲ್ಪ ರಾದಾಗ್ಯೂ ವಸ್ತಃ=ಹಗಲು, (ಹಗಲು ರಾತ್ರಿ) ಸರ್ವದಾ ಮನಸ್ಸು ಕರ್ಮವಚನಗಳಿಂದ ನಿನ್ನ ನಮಸ್ಕಾರವನ್ನು ಭಕ್ತಿಪೂರ್ವಕ ಧರಿಸಿದವರಾಗಿ (ಮಾಡುವವರಾಗಿ) ಸರ್ವೋತ್ಕೃಷ್ಟ ಗುಣಗಳುಳ್ಳವನೂ. ಸರ್ವನಿಯಾಮಕನೂ ಆದ ನಿನ್ನನ್ನು ಕೇವಲ ಭಕ್ತ್ಯತಿಶಯ ವಶದಿಂದಲೇ ಶರಣು ಹೊಂದುತ್ತೇವೆ. ॥ ೭ ॥

ಋ ॥ ರಾಜಂತಮಧ್ವರಾಣಾಂ ಗೋಪಾಮೃತಸ್ಯ ದೀದಿವಿಂ ।
ವರ್ಧಮಾನಂ ಸ್ವೇ ದಮೇ ॥ ೮ ॥

ಅ ॥ ಅಧ್ವರಾಣಾಂ=ಯಜ್ಞಗಳಿಗೆ, ರಾಜಂತಂ=ನಿಯಾಮಕನು, (ಅಂದರೆ-ಬಾಹ್ಯ ಆಧ್ಯಾತ್ಮಿಕ ಯಜ್ಞ ಗಳಿಗೆ ಸ್ವಾಮಿಯು) ಋತಸ್ಯ=ಯಥಾರ್ಥಜ್ಞಾನಕ್ಕೆ, ಗೋಪಾಂ=ರಕ್ಷಕನು, ಸ್ವೇ ದಮೇ=(ಬಾಹ್ಯವಿವಕ್ಷೆಯಿಂದ) ಸ್ವರ್ಗ ಮೊದಲಾದ ತನ್ನ ಮಂದಿರವಲ್ಲಿಯೂ, (ಅಧ್ಯಾತ್ಮವಿವಕ್ಷೆಯಿಂದ) ಹೃದಯದಲ್ಲಿಯೂ, ದೀದಿವಿಂ=ವಿಶೇ ಷತಃ ಪ್ರಕಾಶಿಸಿಕೊಂಡಿರುವವನು, ವರ್ಧಮಾನಂ=ಸದಾ ಸರ್ವಗುಣಪರಿಪೂರ್ಣನು ಇಂತಹ ನಿನ್ನನ್ನು ಶರಣು ಹೊಂದುವೆವು. ॥ ೮ ॥

ಭಾ ॥ ದೇದೀಪ್ಯಮಾನಂ ಸ್ವೇ ಸದ್ಮನ್ಯಧ್ವರೇಶಂ ಸದಾವೃಧಂ ।
ಯಥಾರ್ಥಜ್ಞಾನ ಗೋಪಂ ತ್ವಾಮುಪೇಮಸಿ ॥ ೮ ॥

ಅ ॥ ಬಾಹ್ಯ ಆಧ್ಯಾತ್ಮಿಕ ಯಜ್ಞಗಳಿಗೆ ಸ್ವಾಮಿಯು, ಯಥಾರ್ಥಜ್ಞಾನವನ್ನು ರಕ್ಷಿಸುವವನು, ಸ್ವರ್ಗಾದಿ ಗಳಲ್ಲಿಯೂ ಹೃದಯದಲ್ಲಿಯೂ ವಿಶೇಷತಃ ಪ್ರಕಾಶಿಸಿಕೊಂಡಿರುವವನು, ಯಾವಾಗಲೂ ಸರ್ವಗುಣ ಸಂಪೂ ರ್ಣನು, ಇಂತಹ ನಿನ್ನನ್ನು ಶರಣು ಹೊಂದುವೆವು ॥ ೮ ॥

ಋ ॥ ಸ ನಃ ಪಿತೇವ ಸೂನವೇಽಗ್ನೇ ಸೂಪಾಯನೋ ಭವ ।
ಸಚಸ್ವಾ ನಃ ಸ್ವಸ್ತಯೇ ॥ ೯ ॥ ೨ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ಸಃ=ಹಿಂದೆ ಹೇಳಿದ ಪ್ರಕಾರ ನಮ್ಮಿಂದ ಶರಣು ಹೊಂದಲ್ಪಟ್ಟ ನೀನು, ಸೂನವೇ=ಪುತ್ರನಿಗೆ, ಪಿತೇವ=ತಂದೆಯಂತೆ, ನಃ=ನಮಗೆ ಸೂಪಾಯನಃ=ಶೋಭನಕರ್ಮಗಳಿಗೆ ಮುಖ್ಯಾ ಶ್ರಯನೂ, ಭವ=ಆಗು. ನಃ=ನಮ್ಮನ್ನು ಸ್ವಸ್ತಯೇ=ನಿರಂತರದಲ್ಲಿಯೂ ಸೌಖ್ಯಕ್ಕಾಗಿ, ಅಥವಾ ಸದಾ ಚೆನ್ನಾಗಿ ಬಲಕ್ಕಾಗಿ, ಸಚಸ್ವ=ರಕ್ಷಿಸು. (ಅಂದರೆ ಹೇಗೆ ರಕ್ಷಣದಿಂದ ನಮಗೆ ಸರ್ವದಾ ಸೌಖ್ಯಾದಿಗಳು ಆಗುತ್ತವೋ, ಹಾಗೆ ರಕ್ಷಿಸು) ॥ ೯ ॥

ಭಾ ॥ ಪಿತೇವ ನಃ ಸೂಪಾಶ್ರಯೋ ಭವ ತ್ವಂ ಚ ಯದ್ವದೌರಸಸೂನವೇ ।
ರಕ್ಷ ಸಂತತಸೌಖ್ಯಾಯ ಸಮ್ಯಕ್ಸತ್ವಾಯ ವಾ ಸದಾ ॥ ೯ ॥ ೨ ॥ ೧ ॥

ಅ ॥ ಎಲೋ ಅಗ್ನಿಯೇ ನೀನು ಮಕ್ಕಳಿಗೆ ತಂದೆಯಂತೆ ನಮಗೆ ಶುಭಕರ್ಮಾದಿಗಳಿಗೆ ಮುಖ್ಯಾಶ್ರಯನಾಗು. (ಕೇವಲ ಸರ್ವಸಾಮಾನ್ಯ ಮಕ್ಕಳಿಗೆ ತಂದೆಯಂತೆ ಅಲ್ಲ. ಮತ್ತೆ) ಸಾಕ್ಷಾತ್ ಔರಸಮಕ್ಕಳಿಗೆ ತಂದೆಯು ಹೇಗೆ ಆಶ್ರಯನೋ. ಹಾಗೆ ಆಶ್ರಯನಾಗು. ಅಥವಾ ತಂದೆಯು ದತ್ತಪುತ್ರಾದಿಗಳಿಗೆ ಆಶ್ರಯನು ಹೇಗೆ ಆಗುತ್ತಾನೋ ಹಾಗೆ ನಮಗೆ ಆಶ್ರಯನಾಗು. ಔರಸ ಪುತ್ರನಿಗೆ ಹೇಗೆ ಆಶ್ರಯನಾಗುತ್ತಾನೊ ಹಾಗೂ ನಮಗೆ ಆಶ್ರಯನಾಗು(ಎನ್ನುವ ಅಭಿಪ್ರಾಯದಿಂದ ಯದ್ವದೌರಸಸೂನವೇ ಎಂದದ್ದು.) ಮತ್ತು ಸದಾ ದುಃಖವಿಲ್ಲದಿರುವ ಸಂತೋಷಕ್ಕಾಗಿಯೂ, ಚೆನ್ನಾಗಿ ಸಾಮರ್ಥ್ಯಕ್ಕಾಗಿಯೂ ರಕ್ಷಿಸು.(ಹೇಗೆ ರಕ್ಷಿಸಿದರೆ ಸರ್ವದಾ ಸೌಖ್ಯಾದಿಗಳುಂಟಾಗುವವೋ ಹಾಗೆ ರಕ್ಷಿಸು.) ॥ ೯ ॥ ೨ ॥ ೧ ॥

ಅವ ॥ ಹೀಗೆ ವ್ಯಾಖ್ಯಾನ ಮಾಡಿದ ಸೂಕ್ತ, ಮುಂದೆ ವ್ಯಾಖ್ಯಾನ ಮಾಡುವ ಸೂಕ್ತ ಇವುಗಳ ಜ್ಞಾನಾದಿಗಳು ಋಷ್ಯಾದಿಗಳ ಜ್ಞಾನವು ಇದ್ದರೇನೇ ಸಫಲವಾಗುತ್ತವೆ. ಇಲ್ಲದಿದ್ದರೆ ಸಫಲವಾಗಲಾರದು. ಏಕೆಂದರೆ **ಯೋ ಹ ವಾ ಅವಿದಿತಾರ್ಷಚ್ಛಂದೋ ದೈವತ ಬ್ರಾಹ್ಮಣೇನ ಮಂತ್ರೇಣ ಯಜತಿ ಯಾಜಯತಿ ವಾಽಧ್ಯಾಪಯತಿ ಸ್ಥಾಣುಂ ವರ್ಚ್ಛತಿ ಗರ್ತೇ ವಾ ಪದ್ಯತೇ ಪ್ರಮೀಯತೇವಾ** ಯಾವಾತನು, ಮಂತ್ರದ್ರಷ್ಟೃ, ಗಾಯತ್ರ್ಯಾದಿ ಛಂದಸ್ಸು, ಮಂತ್ರ ಪ್ರತಿಪಾದ್ಯ ದೇವತೆ, ವ್ಯಾಖ್ಯೇಯ ಮಂತ್ರಾರ್ಥ, ಮಂತ್ರಗಳಿಗೆ ಆಯಾವ ಕರ್ಮಗಳಲ್ಲಿ ವಿನಿಯೋಗ, (ಮಂತ್ರ ಪ್ರತಿಪಾದ್ಯ ಅರ್ಥ) ಇವುಗಳನ್ನು ತಿಳಿಯದೆ ಮಂತ್ರ ಸಮೂಹದಿಂದ ದೇವ ಪೂಜೆಯನ್ನು ಮಾಡುತ್ತಾನೋ, ಶಿಷ್ಯರಿಗೆ ಜ್ಞಾನೋಪದೇಶ ಮಾಡುತ್ತಾನೋ, ದೇವತೆಗಳಿಗೆ ಹವಿಸ್ಸು ಮೊದಲಾದುದನ್ನು ಕೊಡುತ್ತಾನೋ, ಅಧ್ಯಯನಾದಿಗಳನ್ನು ಮಾಡಿಸುತ್ತಾನೋ, ಅಂತಹನು ವೃಕ್ಷಾದಿ ಸ್ಥಾವರ ಜಾತಿಯನ್ನು ಹೊಂದುತ್ತಾನೆ. ಭೂಗರ್ತ ರೂಪವಾದ ನರಕದಲ್ಲಿ ಬೀಳುತ್ತಾನೆ. ಅಲ್ಪಾಯುಷ್ಯ ಪ್ರಕೃಪನಾಗುತ್ತಾನೆ. **ಪಾಪೀಯಾನ್ ಭವತಿ** ಪಾಪಿಷ್ಠನಾಗುತ್ತಾನೆ. **ತಸ್ಮಾದೇತಾನಿ ಮಂತ್ರೇ ಮಂತ್ರೇ ವಿದ್ಯಾತ್**, ಆದಕಾರಣ ಇವುಗಳನ್ನು ಪ್ರತಿ ಮಂತ್ರದಲ್ಲಿಯೂ ತಿಳಿಯಬೇಕು, ಎಂದು ಶ್ರುತಿಯು. ಆದಕಾರಣ ಋಷ್ಯಾದಿಗಳನ್ನು ತಿಳಿಸುತ್ತಾ ಋಷಿಯನ್ನು ಹೇಳುತ್ತಾರೆ

ಭಾ ॥ (೧) ಮುನಿಸ್ತು ಸರ್ವವಿದ್ಯಾನಾಂ ಭಗವಾನ್ಪುರುಷೋತ್ತಮಃ। ವಿಶೇಷತಶ್ಚ ವೇದಾನಾಂ ಯೋ ಬ್ರಹ್ಮಾಣಮಿತಿ ಶ್ರುತಿಃ ॥ (೨) ಋಗ್ವೇದಾದಿಕಮಸ್ಯೈವ ಶ್ವಸಿತಂ ಪಪ್ರಹ ಚಾಪರಾ ॥ (೩) ವಾಚೋ ಬಭೂವುರುಶತೀರ್ಹಯಗ್ರೀವಾದಿತಿ ಸ್ಫುಟಂ । ವಚೋ ಭಾಗವತೇಽಪ್ಯಸ್ತಿ (೪) ಬ್ರಹ್ಮಾಂಡೇಽಪಿ ತಥಾ ಪರಂ।ಃಹಯಗ್ರೀವಾದಿಮಾ ವಿದ್ಯಾಃ ಶ್ವಸಿತತ್ವೇನ ನಿಸ್ಸೃತಾಃ । ಬ್ರಹ್ಮಣಾ ಸ್ವೀಕೃತಾಸ್ತಾಶ್ಚ ರುದ್ರಶೇಷವಿಪಾ ಅಪಿ । ದಕ್ಷಾದ್ಯಾಃ ಸನಕಾದ್ಯಾಶ್ಚ ಶಕ್ರಾದ್ಯಾ ಮನವಸ್ತಥಾ । ಜಗೃಹಸ್ತೇ ಚ ವಿಶ್ವಸ್ಮಿನ್ ಚಕ್ರುರ್ವ್ಯಾಪ್ತಾಸ್ತತೋಽಖಿಲಾಃ ॥ (೫) ಉಕ್ತಂ ಪಾದ್ಮಪುರಾಣೇಚ ಕಪಿಲೋ ಭಗವಾನಜಃ । ಪ್ರೋವಾಚ ಬ್ರಹ್ಮಣೇ ವಿದ್ಯಾಃ (೬) ಹೃದಿಸ್ಥೋ ಬಾದರಾಯಣಃ । ಓಂಕಾರಪೂರ್ವಿಕಾ ವಿದ್ಯಾಃ ಪ್ರೇರಯತ್ಯಖಿಲೇಷ್ವಪಿ । ಸದೈವ ಬ್ರಹ್ಮಣೇ ಪೂರ್ವಮಿತಿ ಸಾತ್ವತ ಸಂಹಿತಾ ॥ ೧ ॥

ಅ ॥ (೧) ಷಡ್ಗುಣ ಪರಿಪೂರ್ಣನೂ ಕ್ಷರಾಕ್ಷರ ಪುರುಷರಿಂದುತ್ತಮನೂ ಆದ ಶ್ರೀ ಪರಮಾತ್ಮನು ಸಮಸ್ತ ವಿದ್ಯೆಗಳಿಗೂ ಋಷಿಯು (ಮಂತ್ರದ್ರಷ್ಟನು.) ವಿಶೇಷವಾಗಿ ವೇದಗಳಿಗೆ ಶ್ರೀ ಪರಮಾತ್ಮನು ಮಂತ್ರದ್ರಷ್ಟನು. (ಅಧ್ಯಾಪಕನಿಲ್ಲದಿರುವುದರಿಂದ ಅಧ್ಯಯನವಿಲ್ಲದೇನೇ ವೇದಾದಿಗಳಿಗೆ ದ್ರಷ್ಟನಾಗಿ ಯಾವನು ತಾನೇ ವಾಕ್ಯವನ್ನು ನೋಡುತ್ತಾನೋ, ಆತನು ಆ ವಾಕ್ಯಕ್ಕೆ ಋಷಿಯು. ಎಂದು ತಿಳಿಯಬೇಕು.) (ಪೌರುಷೇಯ ವಾಕ್ಯಗಳು ಹುಟ್ಟಿದ ಮೇಲೆಯೇ ಅವುಗಳ ದರ್ಶನವು. ವೇದಗಳನ್ನಾದರೂ ಸರ್ವದಾ ನೋಡುತ್ತಲೇ ಇರುವನು.) (ಇದು ಹೇಗೆಂದರೆ) **ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ** ಎಂಬ ಶ್ರುತಿಯು(ಶ್ವೇತಾಶ್ವತರೋಪನಿಷತ್ತು)ಚತುರ್ಮುಖ ಬ್ರಹ್ಮನನ್ನು ಶ್ರೀಪರಮಾತ್ಮನು ಆದಿಯಲ್ಲಿ ಸೃಷ್ಟಿಸಿ ಆತನಿಗೆ ವೇದಾದಿ ಸರ್ವ ವಿದ್ಯೆಗಳನ್ನುಪದೇಶಿಸಿದನು ಎಂದು ಹೇಳುತ್ತದೆ. (ಇದರಿಂದ ಶ್ರೀ ಪರಮಾತ್ಮನೇ ಸಮಸ್ತ ವಿದ್ಯೆಗಳಿಗೂ ಋಷಿಯೆಂದು ತಿಳಿಯುತ್ತದೆ.) **(೨) ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ಯ ದೃಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸ ಇತಿಹಾಸಃ ಪುರಾಣಂ ವಿದ್ಯಾ ಉಪನಿಷದಃ ಶ್ಲೋಕಾಃ ಸೂತ್ರಾಣ್ಯನುವ್ಯಾಖ್ಯಾನಾನಿ ವ್ಯಾಖ್ಯಾನಾನ್ಯಸ್ಯೈವೈತಾನಿ ನಿಶ್ವಸಿತಾನಿ** ಎಂದು ಇನ್ನೊಂದು ಶ್ರುತಿಯು. ಋಗ್ವೇದ ಮೊದಲಾದ ಅವಾಂತರ ವೇದಗಳು, ಭಾರತ, ರಾಮಾಯಣವೂ, ಸಮಸ್ತ ಪುರಾಣಗಳೂ. ಮೂಲ ವೇದರಾಶಿಯು, ವಿಶೇಷತಃ ಭಗವತ್ಪ್ರತಿಪಾದಕಗಳಾದ ಉಪನಿಷತ್ತುಗಳು, ಪಂಚರಾತ್ರಾಗಮಗಳು, ಬ್ರಹ್ಮಸೂತ್ರಗಳು, ವೇದವ್ಯಾಖ್ಯಾನಕ್ಕೂ ವ್ಯಾಖ್ಯಾನರೂಪ ಗ್ರಂಥ ವಿಶೇಷಗಳು, ವೇದಾರ್ಥ ಪ್ರತಿಪಾದಕ ಗ್ರಂಥಗಳು ಇವುಗಳೆಲ್ಲವೂ ಶ್ರೀ ಹರಿಯಿಂದಲೇ ಹೊರಟವುಗಳು, ಎನ್ನುವ ಬೃಹದಾರಣ್ಯಕೋಪನಿಷತ್ತು, ಋಗ್ವೇದಾದಿಗಳೆಲ್ಲವೂ ಶ್ರೀ ಪರಮಾತ್ಮನಿಂದಲೇ ಅನಾಯಾಸದಿಂದಲೇ ಉಚ್ಚರಿತಗಳ (ಆವಿರ್ಭೂತಗಳು) ಎಂದು ಹೇಳುತ್ತವೆ. ಇದರಿಂದಲೂ ಶ್ರೀಹರಿಯೇ ಋಷಿಯೆಂದು ತಿಳಿಯುತ್ತದೆ. **(೩) ವಾಚೋ ಬಭೂವುರುಶತೀಃ ಶ್ವಸತೋಽಸ್ಯ ನಸ್ತಃ** ಶ್ವಾಸವನ್ನು ಬಿಡತಕ್ಕ ಹಯಗ್ರೀವ ದೇವರ ಮೂಗಿನಿಂದ ಪ್ರಕಾಶಮಾನಗಳಾದ ವೇದಾದಿ ವಚನಗಳು ಆವಿರ್ಭೂತಗಳಾದವು, ಎಂದು ಭಾಗವತದಲ್ಲಿಯೂ ಸ್ಪಷ್ಟವಾಗಿ ಈ ಅರ್ಥವನ್ನು ಪ್ರತಿಪಾದಿಸತಕ್ಕ ವಚನವಿದೆ. (೪) ಬ್ರಹ್ಮಾಂಡ ಪುರಾಣದಲ್ಲಿಯೂ ಇಂತಹ ಅರ್ಥವನ್ನು ಪ್ರತಿಪಾದಿಸತಕ್ಕ ಉತ್ಕೃಷ್ಟವಾದ ವಚನವಿದೆ. (ಆ ವಚನವು ಯಾವುದೆಂದರೆ) ಹಯಗ್ರೀವ ದೇವರಿಂದ ಈ ಋಗಾದಿ ವಿದ್ಯೆಗಳು ಶ್ವಾಸರೂಪದಿಂದ ಹೊರಟಿವೆ. ಆ ವಿದ್ಯೆಗಳು ಚತುರ್ಮುಖನಿಂದ ಸ್ವೀಕರಿಸಲ್ಪಟ್ಟವು. ಬ್ರಹ್ಮದೇವರಿಂದ ರುದ್ರ ಶೇಷ ಗರುಡರೂ, ಅವರಿಂದ ಇಂದ್ರಾದಿ ದೇವತೆಗಳೂ, ಅವರಿಂದ ದಕ್ಷ ಪ್ರಜಾಪತಿ ಮೊದಲಾದವರೂ, ಅವರಿಂದ ಸನಕ, ಸನಂದನ ಮೊದಲಾದ ಋಷಿಗಳೂ ಹಾಗೆಯೇ ಮನುಗಳೂ ಕೂಡ ಆ ವಿದ್ಯೆಗಳನ್ನು ಸ್ವೀಕರಿಸಿದರು. ಅಭ್ಯಾಸ ಮಾಡಿದರು. ಅವರಾದರೂ ಸರ್ವ ಜಗತ್ತಿನಲ್ಲಿ ಉಪದೇಶಿಸಿದರು. ಅವರ ಉಪದೇಶದಿಂದ ಎಲ್ಲಾ ವಿದ್ಯೆಗಳೂ ಜಗತ್ತಿನಲ್ಲಿ ವ್ಯಾಪ್ತಗಳಾದವು (೫) ಉತ್ಪತ್ತಿಯಿಲ್ಲದಿರುವ ಕಪಿಲರೂಪಿ ಶ್ರೀಪರಮಾತ್ಮನು ಚತುರ್ಮುಖನಿಗೆ ವೇದಾದಿ ವಿದ್ಯೆಗಳನ್ನು ಉಪದೇಶಿಸಿದನು, ಎಂದು ಪಾದ್ಮ ಪುರಾಣದಲ್ಲಿ (ಬ್ರಾಹ್ಮ ಪುರಾಣದಲ್ಲಿಯೂ) ಹೇಳಿದೆ. (೬) ಹೃದಯದಲ್ಲಿರತಕ್ಕ ವೇದವ್ಯಾಸ ದೇವರು ಓಂಕಾರವೇ ಆದಿಯಾಗಿ ಉಳ್ಳ ಎಲ್ಲಾ ವಿದ್ಯೆಗಳನ್ನು ಯಾವಾಗಲೂ ಸರ್ವರಿಗೂ ಉಪದೇಶಿಸುತ್ತಾರೆ. ಅದರಲ್ಲಿಯೂ ಮೊದಲು ಬ್ರಹ್ಮನಿಗೆ ಉಪದೇಶಿಸಿದರು. ಎಂದು ಸಾತ್ವತ ಸಂಹಿತೆಯು.

ಐ ॥ (1) **ಋಷಿಛಂದೋದೈವತಾನಿ ಬ್ರಾಹ್ಮಣಾರ್ಥಸ್ವರಾದ್ಯಪಿ । ಅವಿದಿತ್ವಾ ಪ್ರಯುಂಜಾನೋ ಮಂತ್ರಕಂಟಕ ಉಚ್ಯತೇ ॥** (2) **ಸ್ವರೋ ವರ್ಣಾಕ್ಷರಮಾತ್ರಾದಿನಿಯೋಗೋಽಕ್ಷರ ಏವ ಚ । ಮಂತ್ರಂ ಜಿಜ್ಞಾಸಮಾನೇನ ವೇದಿತವ್ಯಂ ಪದೇಪದೇ ॥** ಎಂದು ಸ್ಮೃತಿಗಳು. (3) **ಅಥ ಋಗ್ವೇದಾಮ್ನಾಯೇ ಶಾಕಲಕೇ ಸೂಕ್ತಪ್ರತೀಕ ಋಕ್ಸಂಖ್ಯರ್ಷಿದೈವತಛಂದಾಂಸ್ಯನುಕ್ರಮಿಷ್ಯಾಮೋ ಯಥೋಪದೇಶಂ ನ ಹ್ಯೇತಜ್ಜ್ಞಾನಮೃತೇ ಶ್ರೌತ ಸ್ಮಾರ್ತಕರ್ಮಪ್ರಸಿದ್ಧಿರ್ಮಂ**

ತ್ರಾಣಾಂ ಬ್ರಾಹ್ಮಣಾರ್ಷೇಯಂ ಛಂದೋ ದೈವತ ವಿದ್ಯಾರ್ಜನಾಧ್ಯಾಪನಾಭ್ಯಾಂ ಶ್ರೇಯೋಽಧಿಗಚ್ಛತಿ ॥ ಎಂದು ಅನುಕ್ರಮಣಿಕೆಯು, ಅಂತೂ ಋಷ್ಯಾದಿಗಳ ಜ್ಞಾನವಿಲ್ಲದೆ ಕರ್ಮವು ಸಫಲವಾಗುವುದಿಲ್ಲ. ಯಾವನು ಇವುಗಳ ಜ್ಞಾನವನ್ನು ಹೊಂದುತ್ತಾನೋ, ಆತನು ಅಧ್ಯಾಪನಾಧಿಗಳಿಂದ ಶ್ರೇಯಸ್ಸನ್ನು ಹೊಂದುತ್ತಾನೆ. ॥ ೧ ॥

ಅವ ॥ ಶ್ರೀಹರಿಯು ಸಮಸ್ತ ವಿದ್ಯೆಗಳಿಗೂ ಮುಖ್ಯ ಋಷಿಯು, ಎಂದುಪಪಾದಿಸಿ ಆ ಮೇಲೆ ಚತುರ್ಮುಖ ಬ್ರಹ್ಮನೂ ಋಷಿಯೆಂದುಪಪಾದಿಸುತ್ತಾರೆ.

ಭಾ ॥ (೧) ಸಕೃನ್ನಿಗದಮಾತ್ರೇಣ ಗೃಹೀತಂ ಬ್ರಹ್ಮಣಾಖಿಲಂ । ಅಂತರ್ಗತಸ್ಯ ವ್ಯಾಸಸ್ಯ ಪ್ರಸಾದಾನ್ನಿತ್ಯಶಕ್ತಿತಃ । ತೇನ ಚಾನಂತಶಕ್ತಿತ್ವಾದ್ಯುಗಪತ್ಸಮುದೀರಿತಂ । ಪ್ರಥಮಂ ಪ್ರತಿಪತ್ತೃತ್ವಾನ್ಮುನಿರ್ಬ್ರಹ್ಮಾಖಿಲಸ್ಯ ಚ ॥ ॥ ೨ ॥

ಅ ॥ ಯಾವ ಕಾರಣದಿಂದ ಆ ಶ್ರೀಹರಿಗೆ ಅನಂತಾನಂತ ಶಕ್ತಿಯಿದ್ದ ಪ್ರಯುಕ್ತ ಏಕಕಾಲದಲ್ಲಿಯೇ ಶ್ರೀಹರಿಯು ಉಪದೇಶಿಸಿದ ಸಮಸ್ತ ವಿದ್ಯಾಸಮೂಹಗಳನ್ನು ಆದಿಕಾಲದಲ್ಲಿ ಒಂದು ಸಲ ಹೇಳೋಣ ಮಾತ್ರದಿಂದಲೇ ಚತುರ್ಮುಖ ಬ್ರಹ್ಮನು ತನ್ನಲ್ಲಿ ಅಂತರ್ಗತರಾದ ಶ್ರೀವೇದವ್ಯಾಸರ ಅನುಗ್ರಹದಿಂದ ಶ್ರೀಭಗವತ್ಪ್ರಸಾದಾಧೀನವಾದ ನಿತ್ಯಶಕ್ತಿಯಿಂದ ಗೃಹಿಸಿರುವನೋ ಆದಕಾರಣ ಹೀಗೆ ಸಮಸ್ತ ವಿದ್ಯೆಗಳನ್ನು ಪ್ರಥಮತಃ ತಿಳಿದವನಾದುದರಿಂದ ಬ್ರಹ್ಮನೂ ಕೂಡ ಸಮಸ್ತ ವಿದ್ಯಾಸಮೂಹಕ್ಕೂ ರುದ್ರಾದಿಗಳಿಗಿಂತ ಪ್ರಥಮ ಋಷಿಯು ಎಂದು ತಿಳಿಯಬೇಕು ॥ ೩ ॥

ಅವ ॥ ಹೀಗೆ ಸಮಸ್ತ ವಿದ್ಯೆಗಳಿಗೂ ಶ್ರೀಹರಿಯು ಮುಖ್ಯಋಷಿಯು. ಆ ಮೇಲೆ ಚತುರ್ಮುಖನೂ ಋಷಿಯು ಎಂದು ಹೇಳಿ ಈಗ ವಿದ್ಯಾಪ್ರಭೇದಗಳಿಗೆ ಬೇರೆ ಬೇರೆ ಋಷಿಗಳನ್ನು ಹೇಳುತ್ತಾರೆ.

ಭಾ ॥ ಸುಪರ್ಣೋಽಖಿಲವೇದಾನಾಂ ಪಂಚರಾತ್ರಸ್ಯ ನಾಗರಾಟ್ । ದ್ವಿತೀಯ ಪ್ರತಿಪತ್ತೃತ್ವಾನ್ಮುನಿತ್ವೇ ಸಂಪ್ರಕೀರ್ತಿತೌ ॥ ೩ ॥

ಅ ॥ ಅಖಿಲ ವೇದಗಳಿಗೆ ಗರುಡನೂ, ಪಂಚರಾತ್ರಾಗಮಕ್ಕೆ (ಪೌರುಷೇಯ ಸಮಸ್ತ ವಿದ್ಯೆಗಳಿಗೂ) ಶೇಷನೂ ಋಷಿಯು. ಇವರಿಬ್ಬರು ೨ನೇ (ಬ್ರಹ್ಮನಿಗಿಂತ ಮೇಲೆ) ತಿಳಿಯುವವರಾದುದರಿಂದ ಋಷಿತ್ವ ವಿಷಯದಲ್ಲಿ ೨ನೆಯವರಾಗಿ ಹೇಳಲ್ಪಡುತ್ತಾರೆ. ॥ ೩ ॥

ಅವ ॥ ಶ್ರೀಹರಿಯು ಸ್ವಯಮೇವ ಸಮಸ್ತ ವಿದ್ಯೆಗಳನ್ನು ತಿಳಿದವನಾಗಿರುವುದರಿಂದ ಋಷಿಯಾಗಲಿ, ಶ್ರೀಹರಿಯಿಂದ ಉಪದೇಶಿಸಿಕೊಂಡ ಬ್ರಹ್ಮಾದಿಗಳು ಹೇಗೆ ಋಷಿಗಳಾಗುವರು. ಎಂದರೆ

ಭಾ ॥ ಯಃ ಪಶ್ಯತಿ ಸ್ವಯಂ ವಾಕ್ಯಂ ಸ ಋಷಿಸ್ತಸ್ಯ ಕೀರ್ತಿತಃ । ಅರ್ವಾಕ್ತು ದ್ವಾದಶಾವೃತ್ತೇರಧೀತ್ಯಾಪ್ಯೃಷಿರೇವ ಸಃ ॥ ೪ ॥

ಅ ॥ ಯಾವಾತನು ತಾನು ಗುರುಗಳ ದ್ವಾರಾ ಅಧ್ಯಯನ ಮಾಡದೇನೇ ಯಾವ ವಾಕ್ಯವನ್ನು ಸ್ವತ ಏವ ತಿಳಿಯುತ್ತಾನೋ ಆತನು ಆ ವಾಕ್ಯಕ್ಕೆ ಋಷಿಯೆಂದು ಹೇಗೆ ಹೇಳಲ್ಪಡುತ್ತಾನೋ, ಹೀಗೆಯೇ ಯಾವಾತನು

೧೨ ಸಲಕ್ಕಿಂತ ಕಡಿಮೆ ಗುರುಗಳ ಮುಖದಿಂದ ಅಧ್ಯಯನ ಮಾಡಿಯಾದರೂ ಸಮಸ್ತ ವಿದ್ಯೆಗಳನ್ನು ತಿಳಿದು ಕೊಳ್ಳುತ್ತಾನೋ, ಆತನೂ ಋಷಿಯೇ ಎನ್ನಿಸುತ್ತಾನೆ. (ಅಂದರೆ ಅಂತಹನೂ ತಾನಾಗಿಯೇ ಸಮಸ್ತ ವಿದ್ಯೆಗಳನ್ನು ತಿಳಿದುಕೊಂಡವನಿಗೆ ಸದೃಶನೇ ಆಗುವನು. ಅಷ್ಟು ಯೋಗ್ಯತೆಯಿಲ್ಲದವನು ಇಷ್ಟುಮಾತ್ರ ಅಧ್ಯಯನದಿಂದ ಸಮಸ್ತವಿದ್ಯೆಗಳನ್ನು ತಿಳಿಯಲು ಶಕ್ತನಾಗಲಾರನು.) (ಏವಂಚ **ದ್ವಾದಶಾವೃತ್ತೇರರ್ವಾಕ್ ಅಧ್ಯಯನೇನಾಪಿ ಸರ್ವವಿದ್ಯಾಪ್ರತಿಪತ್ತಾ ಋಷಿಃ** ಅಂದರೆ ೧೨ ಸಲಕ್ಕಿಂತ ಕಡಿಮೆ ಗುರುಗಳ ಮುಖದಿಂದ ಅಧ್ಯಯನ ಮಾಡಿಯಾದರೂ ಸಮಸ್ತವಿದ್ಯೆಗಳನ್ನು ತಿಳಿದವನೂ ಋಷಿಯೆನ್ನಿಸುತ್ತಾನೆಂದುಕ್ತವಾಯ್ತು.) ಬ್ರಹ್ಮಾದಿಗಳಾದರೂ ಭಗವತ್ಪ್ರಸಾದದಿಂದ ಸಮಸ್ತ ವಿದ್ಯೆಗಳನ್ನು ತಾವಾಗಿಯೇ ತಿಳಿದುಕೊಂಡು ಒಂದು ಸಲ ಅಧ್ಯಯನ ಮಾಡಿರುವರು. ಆದಕಾರಣ ಋಷಿಗಳೆನ್ನುವುದು ಯುಕ್ತವು. ॥ ೪ ॥

ಅವ॥ ಹೀಗೆ ಬ್ರಹ್ಮಾದಿಗಳು ಸ್ವತ ಏವ ವೇದಾದಿ ವಿದ್ಯೆಗಳನ್ನು ತಿಳಿದು ಕೊಂಡು ಋಷಿಗಳೆಂದಾದರೆ ಅವರಿಗೆ ಅಧ್ಯಯನವು ಏತಕ್ಕೆಂದರೆ—

ಭಾ ॥ ಯತ್ಸ್ವಯಂ ಪ್ರತಿಭಾತಸ್ಯ ಸಂಶಯಾರ್ಥಂ (ನಿಶ್ಚಯಾರ್ಥಂ) ಗುರೋರ್ವಚಃ ।
ಸುಪರ್ಣಾದೇರ್ವಿರಿಂಚಸ್ಯ ಕೇವಲಂ ಧರ್ಮಕಾರಣಂ ॥ ೫ ॥

ಅ ॥ ಗರುಡ ಶೇಷಾದಿಗಳು ಸ್ವತಏವ ವೇದಾದಿಗಳನ್ನು ತಿಳಿದುಕೊಂಡು ಅವುಗಳ ಪಾಠ ರೂಪವಾದ ಯಾವುದು ಗುರುಗಳ ವಚನವೋ, ಅದು ನಾವು ಕಂಡದ್ದು ವೇದವೋ ಅಥವಾ ಬೇರೆ ಯಾವುದಾದರೂ ವಾಕ್ಯವೋ ಎನ್ನುವ ಸಂಶಯ ನಿವೃತ್ತಿಯಾಗಿ ಇದು ವೇದವೇ ಎಂದು ನಿಶ್ಚಯ ಜ್ಞಾನಕ್ಕಾಗಿ ಸಫಲವಾಗುತ್ತದೆ. ಚತುರ್ಮುಖನಿಗಾದರೂ ಸಂಶಯವೇ ಇಲ್ಲದಿರುವುದರಿಂದ ಕೇವಲ ಧರ್ಮಕ್ಕೇನೇ ಕಾರಣವಾಗುತ್ತದೆ. (ಇತರರಿಗಾದರೂ ಗುರುಗಳ ವಚನವು ಧರ್ಮಗಳಿಗೆ ಕಾರಣವು.) (ಪರಮೇಶ್ವರನಿಂದಲೇ ಅಧ್ಯಯನವು ಮಹಾಧರ್ಮಕ್ಕೆ ಕಾರಣವು.) ॥ ೫ ॥

ಅವ ॥ ಹೀಗೆ ಪೌರುಷೇಯ ಅಪೌರುಷೇಯ ಸಮಸ್ತ ವಿದ್ಯೆಗಳಿಗೆ ಋಷಿಭೇದವನ್ನು ಹೇಳಿ ವೇದಗಳಲ್ಲಿಯೇ ಅವಾಂತರ ಭೇದದಿಂದ ಋಷಿ ಭೇದವನ್ನು ಹೇಳುತ್ತಾರೆ.

ಭಾ ॥ ೧) ಋಚಾಮೃಷಿಸ್ತತಃ ಶಕ್ರೋ ಯಜುಷಾಂ ಸೂರ್ಯ ಏವಚ । ಸೋಮಸ್ಸಾಮ್ನಾಂ ತೃತೀಯಾಸ್ತೇ ಪ್ರತಿಪತ್ತಾರ ಈರಿತಾಃ (೨) ಅಥರ್ವಾಂಗಿರಸಾಮಗ್ನಿರೇಕರ್ಷಿಶ್ಚಾಪ್ಯಥರ್ವಣಾಂ ॥ ಇತ್ಯುಕ್ತಾಸ್ಸಮುದಾಯಸ್ಯ ಸಂತ್ಯನ್ಯೇ ಚ ಪೃಥಕ್ ಪೃಥಕ್ ॥ ೬ ॥

ಅ ॥ (೧) ಗರುಡ ಶೇಷಾದಿಗಳ ಅನಂತರದಲ್ಲಿ ಋಗ್ವೇದಾದಿಗಳಿಗೇನೇ ದೇವೇಂದ್ರನೂ, ಯಜುರ್ವೇದಗಳಿಗೇನೇ ಸೂರ್ಯನಾದರೂ ಸಾಮವೇದಗಳಿಗೇನೇ ಸೋಮನಾದರೂ ಋಷಿಯು. ಆ ಮೂವರು ಗರುಡಾದ್ಯನಂತರದಲ್ಲಿಯೇ ಮೂರನೆಯವರಾಗಿ ತಿಳಿಯುವರೆಂದು ಹೇಳಲ್ಪಡುತ್ತಾರೆ. ಅಥರ್ವ, ಅಂಗಿರಸ, ಎಂದು ಎರಡು ಪ್ರಭೇದಗಳುಳ್ಳ ಆಥರ್ವ ವೇದಕ್ಕೂ ಅಗ್ನಿಯು ಋಷಿಯು. ಅಥರ್ವಣ ವೇದದ ಪ್ರಭೇದಗಳಾದ ಅಥರ್ವಗಳಿಗಾದರೂ ಅಗ್ನಿಯೂ ಏಕರ್ಷಿಯೂ ಕೂಡ ಋಷಿಯು. ॥ ೬ ॥

ಅವ ॥ ಅವರಿಗಿಂತ ಕೆಳಗಿನವರಾದ ಋಷಿಗಳನ್ನು ಹಿಂದಿನವರನ್ನು ಅನುವಾದ ಮಾಡುತ್ತಾ ಹೇಳುತ್ತಾರೆ.

ಭಾ ॥ ಇತ್ಯುಕ್ತಾಸ್ಸಮುದಾಯಸ್ಯ ಸಂತ್ಯನ್ಯೇಚ ಪೃಥಕ್ ಪೃಥಕ್ ॥ ೭ ॥

ಅ॥ ಈ ಹಿಂದೆ ಹೇಳಿದವರು ಪ್ರಾಯಶಃ ಅವಿಭಕ್ತ ವಿದ್ಯಾ ಸಮುದಾಯಗಳಿಗೆ ಋಷಿಗಳು ಮೂರು ವಿಧರೆಂದು ಹೇಳಲ್ಪಟ್ಟರು. ಇವರಿಂದ ಇತರರಾದ ಶಾಖಲ ಆಶ್ವಲಾಯನ ಆಪಸ್ತಂಬ ಮಧುಚ್ಛಂದ ಶುನಃಶೇಪ ಮೊದಲಾದವರು ನಾಲ್ಕನೆಯವರೂ ಪ್ರಪ್ರತ್ಯೇಕ ಒಂದೊಂದು ಋಗಾದಿ ಸಮುದಾಯದ ಅವಾಂತರ ಭೇದಗಳಾದ ಶಾಖಾದಿಗಳಿಗೆ ಋಷಿಗಳು ಇರುತ್ತಾರೆ.(ಅವರನ್ನು ಚರಣವ್ಯೂಹ ಅನುಕ್ರಮಣಿಕಾದಿ ಶಾಸ್ತ್ರಾಂತರಗಳಿಂದ ತಿಳಿದುಕೊಳ್ಳಬೇಕು.)

ವಿ ॥ (೧) ವಿಷ್ಣು ಬ್ರಹ್ಮರು ಸಂಕೋಚವಿಲ್ಲದೆ ಸರ್ವವಿದ್ಯೆಗಳಿಗೂ ಋಷಿಗಳು, (೨) ಗರುಡನು ಅಪೌರುಷೇಯಕ್ಕೂ ಶೇಷನು ಪೌರುಷೇಯಕ್ಕೂ ಋಷಿಯು. (೩) ಇಂದ್ರಾದಿಗಳು. ಋಗಾದಿ ವಿದ್ಯೆಗಳಿಗೆ ಋಷಿಗಳು, ಎಂದು ಹೇಳಿದರೂ ಋಗಾದಿಗಳಲ್ಲಿ ಅವಾಂತರಭೇದ ಶಾಖಾ ಉಪಶಾಖಾ ಸೂಕ್ತಾದಿಗಳನ್ನು ವಿವಕ್ಷಾ ಮಾಡಿಕೊಳ್ಳದೆ ಸಮುದಾಯಸ್ಯ ಎಂದದ್ದು. ॥ ೭ ॥

ಅವ ॥ (೧) ಶ್ರೀವಿಷ್ಣು ಚತುರ್ಮುಖರು ಸಮಸ್ತ ವಿದ್ಯೆಗಳಿಗೂ ಮುಖ್ಯ ಋಷಿಗಳು. (೨) ಗರುಡನು ಅಪೌರುಷೇಯ ವೇದಗಳಿಗೂ, ಶೇಷನು ಪೌರುಷೇಯ ಭಾರತಾದಿಗಳಿಗೂ ಋಷಿಯು. (೩) ಋಗಾದಿಗಳಿಗೆ ಪ್ರಪ್ರತ್ಯೇಕ ಇಂದ್ರಾದಿಗಳು ಋಷಿಗಳು, (೪) ಋಗಾದಿಗಳ ಶಾಖಾದಿಗಳಿಗೆ ಇತರರಾದ ಶಾಕಲಾದಿಗಳು ಋಷಿಗಳು. ಹೀಗೆ ನಾಲ್ಕು ವಿಧರಾದ ಋಷಿಗಳನ್ನು ಹೇಳಿ ಅವರನ್ನು ಸ್ಮರಿಸುವುದಕ್ಕೆ ಫಲಹೇಳುತ್ತಾರೆ.

ಭಾ ॥ (೧) ಏತಜ್ಜ್ಞಾನಾದದೃಷ್ಟಸ್ಯ ಫಲಸ್ಯಾಪ್ತಿಃ ಸ್ಫುಟಂ ಭವೇತ್ । ದ್ರಷ್ಟೄಣಾಂತು ಚತುರ್ಥಾನಾಂ ಜ್ಞಾನಾದಪ್ಯೈಹಿಕಂ ಭವೇತ್ ॥ (೨) ತೇ ಚೈಕಸ್ಯಾಪಿ ಬಹವಃ ಸ್ಯುಃ ಸೂಕ್ತಸ್ಯರ್ಚ ಏವ ವಾ ॥ (೩) ತಸ್ಯಾಂ ತಸ್ಯಾಮವಸ್ಥಾಯಾಂ ತತ್ತತ್ಪ್ರಾಪ್ತಿವಿಶೇಷತ॥ ತೇಷಾಂ ವಾಕ್ಯಸ್ವರೂಪೇಣ ಪ್ರಾರ್ಥನಾದಿಷು ಪಶ್ಯತಿ(೪) ವಿಷ್ಣುಬ್ರಹ್ಮಸುಪರ್ಣೋ ವಾ ತತ್ತದ್ಯೋಗ್ಯಾರ್ಥಭೇದತಃ ॥ ೮ ॥

ಅ ॥ ನಾಲ್ಕು ವಿಧ ಋಷಿಗಳ ಮಧ್ಯದಲ್ಲಿ ಪ್ರಥಮ ಮೂರು ವಿಧ ಋಷಿಗಳ ಜ್ಞಾನದಿಂದ ಅದೃಷ್ಟವಾದ ಫಲದಪ್ರಾಪ್ತಿಯು ಸ್ಪಷ್ಟವಾಗಿ ಆಗುವುದು.(ಅದೃಷ್ಟ ಪ್ರಾಪ್ತಿಯು ಸ್ಪಷ್ಟವಾಗಿ ಆಗುತ್ತದೆಂದು ಯಾವಾಗ ಆಯ್ತೋ ಆಗ ದೃಷ್ಟ ಫಲವು ಸಿಗುವುದೆಂದು ಸುತರಾಂ ಸಿದ್ಧ.) ನಾಲ್ಕನೇ ಪ್ರತಿಪತ್ತೃಗಳ ಜ್ಞಾನದಿಂದಲೂ ಫಲವಾಗುವುದು. ಅದಾದರೂ ಐಹಿಕ ಫಲವು. (೨) (ಋಗಾದಿಗಳ ಅವಾಂತರ ಭೇದಗಳಾದ ಸೂಕ್ತಾದಿಗಳಿಗೆ ನಾಲ್ಕು ಪ್ರಕಾರ ಋಷಿಗಳು ಇರುತ್ತಾರೆಂದು ಹೇಳಿತು. ಅದರಲ್ಲಿ ಒಂದೊಂದು ಸೂಕ್ತಾದಿಗಳಿಗೆ ಒಬ್ಬೊಬ್ಬರೇ ಋಷಿಗಳು ಎಂದು ನಿಯಮವಿಲ್ಲವೆನ್ನುತ್ತಾರೆ.) ಒಂದೊಂದು ಸೂಕ್ತಕ್ಕೂ ಅಥವಾ ಒಂದೊಂದು ಋಕ್ಕಿಗೂ ಅನೇಕ ಋಷಿಗಳೇ ಇರುವರು. (೪) (ಹಾಗಾದರೆ—ವಿಷ್ಣ್ವಾದಿಗಳೇ ಸಮಸ್ತವಿದ್ಯೆಗಳಿಗೂ ಋಷಿಗಳು ಎಂದಾದರೆ–ಆ ವಿದ್ಯೆಗಳು ವಿಷ್ಣ್ವಾದಿಗಳ ವಾಕ್ಯಗಳಾಗಬೇಕಾಗುವುದು. **ಯಸ್ಯ ವಾಕ್ಯಂ ಸ ಋಷಿಃ** ಎಂದು ಅನುಕ್ರಮಣಿಕಾದಲ್ಲಿ ಹೇಳಿದೆ. ಆದಕಾರಣ **ತ್ರಿಷ್ವಾದಿತ್ಯಂ ದ್ರುಪದೇಷು ಬದ್ಧಃ ಅವೈನಂ ರಾಜಾ ವರುಣಃ ಸ ಸೃಜ್ಯಾತ್, ಸ ನೋ ಹಿರಣ್ಯರಥಂ,** ವೃಕ್ಷದ ಅಥವಾ ಯೂಪದ ಮೂರು ಸ್ಥಾನಗಳಲ್ಲಿ ಅಥವಾ ಸತ್ವಾದಿಗುಣಗಳಿಂದ ಬದ್ಧನಾದ ಶುನಶ್ಶೇಪನು ಯಾವ ಆದಿತ್ಯನನ್ನು(ಸರ್ವರಿಗಿಂತ ಆದಿಯಲ್ಲಿರತಕ್ಕ ಶ್ರೀಹರಿಯನ್ನು ಕರೆಯುತ್ತಾನೋ, ಅಂತಹ ಭಕ್ತರಿಂದ ಭಜನೀಯನಾದುದರಿಂದ ವರುಣನನೆನಿಸಿಕೊಂಡ ಶ್ರೀಹರಿಯು ಈ ಶುನಶ್ಶೇಪನನ್ನು ಸಂಸಾರದಿಂದ ಬಿಡುಗಡೆ ಮಾಡಲಿ. ಇಂದ್ರನು ನಮಗೆ ಹಿರಣ್ಯ ರಥವನ್ನು ಕೊಟ್ಟನು. ಇದು ಮೊದಲಾದುದು ಅಯುಕ್ತವಾಗಬೇಕಾಗುವುದು. ಏಕೆಂದರೆ ಸಂಸಾರಬಂಧದಿಂದ ಮೋಕ್ಷವಾಗಬೇಕೆಂದು ವಿಷ್ಣ್ವಾದಿಗಳ ಪ್ರಾರ್ಥನೆಯೂ, ಇಂದ್ರನಿಂದ ರಥ ಪ್ರಾಪ್ತಿಯೂ, ವರುಣನಿಂದ ಜ್ಞಾನವುಂಟಾಗಬೇಕೆಂದು ಪ್ರಾರ್ಥನೆಯೂ ಸಂಪೂರ್ಣ ಆಯುಷ್ಯವುಂಟಾಗ

ಬೇಕೆಂಬ ಪ್ರಾರ್ಥನೆಯೂ ಇತ್ಯಾದಿಗಳು ಕೂಡದೆ ಹೋಗುವವುಎಂದರೆ) ಪ್ರಾರ್ಥನಾದಿ ವಾಕ್ಯಗಳು ವಿವಕ್ಷಿತಗಳಾ ಗುವಾಗ ಶ್ರೀ ವಿಷ್ಣುವು ಆ ವಾಕ್ಯಗಳನ್ನು ಆವಾವ ಸಂಸಾರ ಬಂಧಾದ್ಯವಸ್ಥೆಗಳಲ್ಲಿ ಆವಾವ ರಥಾದಿ ರೂಪಫಲ ಪ್ರಾಪ್ತಿ ವಿಶೇಷವದೆ ಎನ್ನುವುದು ಆ ಶುನಶ್ಶೇಪಾದಿಗಳ ವಾಕ್ಯಗಳೆಂದು ಶ್ರೀವಿಷ್ಣುವು ತಿಳಿಯುತ್ತಾನೆ. (ಹೇಗೆಂದರೆ ಯೂಪೇಽಹಂ ಬದ್ಧೋಽಸ್ಮಿ. ಬದ್ಧಂ ಮಾಂ ವರುಣೋ ಮೋಚಯತು. ಇಂದ್ರಪ್ರಸಾದಾದಹಂ ಹಿರಣ್ಯರಥಂ ಪ್ರಾಪ್ತೋಽಸ್ಮಿ, ಯೂಪದಲ್ಲಿ ನಾನು ಬದ್ಧನಾಗಿರುತ್ತೇನೆ. ಬದ್ಧನಾದ ನನ್ನನ್ನು ವರುಣನು ಬಿಡಿಸಲಿ.ಇಂದ್ರನ ಅನುಗ್ರಹದಿಂದ ನಾನು ಹಿರಣ್ಯರಥವನ್ನು ಹೊಂದಿರುತ್ತೇನೆ, ಇತ್ಯಾದಿಗಳನ್ನು ಶುನಶ್ಶೇಪನು ಅತೀತ ಕಲ್ಪದಲ್ಲಿ ಹಾಗೆ ಹೇಳಿರುವನು, ಅಥವಾ ಮುಂದಿನ ಕಲ್ಪದಲ್ಲಿ ಹೇಳುವನು, ಎಂದು ಶ್ರೀ ವಿಷ್ಣುವು ತಿಳಿಯುತ್ತಾನೆ. ತನ್ನ ವಾಕ್ಯಗಳೆಂದು ತಿಳಿಯುವುದಿಲ್ಲ.)(೫)ಹೀಗೆಯೇ ಬ್ರಹ್ಮನೂ ಗರುಡನೂ,ಇಂದ್ರಾದಿಗಳೂ ಋಷಿಗಳಾಗಲೀ ತಂತಮಗೆ ಅಯೋಗ್ಯವಾದ ಅರ್ಥವನ್ನು ಪ್ರತಿಪಾದಿಸುವ ವಾಕ್ಯಗಳು ಯಾರು ಯಾರಿಗೆ ಯೋಗ್ಯಗಳೋ ಅವರವರ ವಾಕ್ಯ ಗಳೆಂದೇ ತಿಳಿಯುತ್ತಾರೆ. (ವಿರೋಧಲೇಶವೂ ಇಲ್ಲ. ಹೀಗೆಯೇಅಧಮರಾದ ಇಂದ್ರಾದಿ ಋಷಿಗಳೂ ಉತ್ತಮರಿಗೆ (ಲಕ್ಷ್ಮ್ಯಾದಿಗಳಿಗೆ)ಯೋಗ್ಯಗಳಾದ ಅರ್ಥಗಳನ್ನು ಹೇಳುವ **ಅಹಂ ರಂದ್ರಾ್ರಯ ಆಧನುರಾತನೋಮಿ** ಇತ್ಯಾದಿ ವಾಕ್ಯಗಳನ್ನು ಲಕ್ಷ್ಮ್ಯಾದಿಗಳ ವಾಕ್ಯಗಳೆಂದೇ ತಿಳಿಯುತ್ತಾರೆ.) (ಹೇಗೆ ಒಂದೊಂದು ವಾಕ್ಯವು ಅನೇಕಾನೇಕ ಋಷಿಗಳಿಂದ ದೃಷ್ಟವಾಗಿದೆಯೋ ಹಾಗೆ ಅದರ ಅರ್ಥವು ಸರ್ವಸಾಧಾರಣವೋ ಎಂದರೆ ಅಲ್ಲ ಎನ್ನುತ್ತಾರೆ.) ಯಾರು ಯಾರಿಗೆ ಯಾವಯಾವ ಭಗವನ್ಮಹಿಮಾದಿಗಳನ್ನು ಹೇಳತಕ್ಕ ವಾಕ್ಯಗಳ ಅರ್ಥವು ತಿಳಿಯಲು ಯೋಗ್ಯ ವೋ ಆವಾವ ಅರ್ಥಗಳನ್ನು ಹೇಳುವವುಗಳೆಂದೇ ಆವಾವ ವಾಕ್ಯಗಳನ್ನು ಅವರವರು ತಿಳಿಯುತ್ತಾರೆ. ॥ ೮ ॥

ಅಪ ॥ ಹೀಗೆ ಪುರುಷರಾದ ಋಷಿಗಳನ್ನು ಹೇಳಿ ಸ್ತ್ರೀ ಋಷಿಗಳನ್ನು ಹೇಳುತ್ತಾರೆ.

ಭಾ ॥ (೧) **ಸರ್ವವೇದಾಭಿಮಾನಿತ್ವಾಚ್ಛ್ರೀರ್ಬ್ರಹ್ಮಾಣೀ ಚ ಭಾರತೀ । ದ್ರಷ್ಟ್ರ್ಯಶ್ಚ ಸರ್ವ ವಿದ್ಯಾನಾಂ (೨) ವ್ಯಾಖ್ಯಾತೋ ಬ್ರಹ್ಮಣಾ ಮರುತ್ ॥ (೩) ಸ್ವಭರ್ತ್ರನಂತರಂ ದ್ರಷ್ಟ್ರ್ಯಸ್ತೇಭ್ಯಸ್ತನ್ನೋದಿತಾ ಹಿರುಕ್॥ (೪)ತಾ ಸ್ತುವಂತಿ ಹರಿಂ ನಿತ್ಯಂ ವಿದ್ಯಾಭಿಸ್ತೇ ಚ ಸರ್ವಶಃ । (೫) ಛಂದಸ್ತ್ವೇನ ಮುನಿತ್ವೇನ ತಾಸಾಂ ಸ್ಮೃತಿರುದೀರಿತಾ । ಸ್ಮರ್ತ ವ್ಯಾಸ್ತೇ ಚ ಸರ್ವೇಽಪಿ ಮುನಿತ್ವೇನ ಪೃಥಕ್ ಪೃಥಕ್** ॥ ೯ ॥

ಆ ॥ (೧) ಸಮಸ್ತವಿದ್ಯೆಗಳಿಗೆ ಅಭಿಮಾನಿಗಳಾಗಿರುವುದರಿಂದ ಲಕ್ಷ್ಮೀದೇವಿ,ಸರಸ್ವತೀ ಭಾರತಿಯೂಕೂಡ ಸರ್ವ ವಿದ್ಯೆಗಳನ್ನು ಕಂಡವರು (ಅವರೂ ಋಷಿಗಳು) (೨) ಬ್ರಹ್ಮವಾಯುಗಳ ಗುಣಗಳು ಸ್ವರೂಪತಃ ಸಮ ಗಳಾಗಿರುವುದರಿಂದ ಚತುರ್ಮುಖ ಬ್ರಹ್ಮನು ಋಷಿಯು ಎಂದು ಹೇಳಿದುದರಿಂದ ಮುಖ್ಯಪ್ರಾಣನೂ ಕೂಡ ಸಮಸ್ತ ವಿದ್ಯೆಗಳಿಗೆ ಋಷಿಯೆಂದು ಹೇಳಿದುದಂತೆಯೇ ಆಯ್ತು. (ಹೀಗೆಯೇ ಶೇಷನಿಂದ ರುದ್ರನೂ, ಇಂದ್ರ ನಿಂದ ಕಾಮನೂ, ಅಗ್ನಿಯಿಂದ ಭೃಗು ಋಷಿ ಮೊದಲಾದವರೂ ಹೇಳಲ್ಪಟ್ಟರು.)(೩) ಲಕ್ಷ್ಮ್ಯಾದಿಗಳಿಗೂ ಸಮಸ್ತ ವಿದ್ಯೆಗಳ ದ್ರಷ್ಟೃತ್ವವಿದ್ದರೆ ಶಾಸ್ತ್ರಗಳಲ್ಲಿ ವಿಷ್ಣ್ವಾದಿಗಳೇ ಋಷಿಗಳೆಂದು ಹೇಳಿದ್ದೂ ಹೇಗೆ? ಲಕ್ಷ್ಮ್ಯಾದಿಗಳನ್ನು ಏಕೆ ಹೇಳಲಿಲ್ಲ, ಎಂದರೆ) ಲಕ್ಷ್ಮ್ಯಾದಿಗಳು ತಂತಮ್ಮ ಪತಿಗಳ ನಂತರದಲ್ಲಿ ಸಮಸ್ತ ವಿದ್ಯೆಗಳಿಗೂ ದ್ರಷ್ಟೃಗಳು ಎಂದು ತಂತಮ್ಮ ಪತಿಗಳನ್ನು ಹೇಳಿದುದರಿಂದಲೇ ಯಾವ ಕಾರಣದಿಂದ ಸಿದ್ಧವಾಗುತ್ತದೋ, (ಯಾವ ಕಾರಣ ದಿಂದ ಪ್ರಾಯಶಃ ಹೆಂಡಂದಿರು ಭರ್ತೃಸಮಾನ ಧರ್ಮವುಳ್ಳವರಾಗಿರುತ್ತಾರೋ.) ಆದಕಾರಣ ಸ್ತ್ರೀಯರಿಗೆ ಋಷಿತ್ವವಿದ್ದರೂ ಅರ್ಥಾತ್ ಸಿದ್ಧವಾಗುವುದರಿಂದ ತಂತಮ್ಮ ಭರ್ತೃಗಳಿಗಿಂತ ಪ್ರಪ್ರತ್ಯೇಕ ಸ್ತ್ರೀಯರನ್ನು ಋಷಿ ಗಳೆಂದು ಹೇಳಲಿಲ್ಲ. (೪) ಋಷಿಗಳಾದ ಆ ಸ್ತ್ರೀಯರ ಮತ್ತು ಪುರುಷರ ವ್ಯಾಪಾರವನ್ನು ಹೇಳುತ್ತಾರೆ ಆ ಸ್ತ್ರೀ ಯರೂ, ಆ ಪುರುಷರೂ ಎಲ್ಲರೂ ನಿತ್ಯದಲ್ಲಿಯೂ ಶ್ರೀಹರಿಯನ್ನು ವಿದ್ಯೆಗಳಿಂದ ಸ್ತುತಿಸುತ್ತಿರುತ್ತಾರೆ.

(೫) ಆ ಸ್ತ್ರೀಯರನ್ನು ಮುನಿಗಳೆಂದು ಸ್ಮರಿಸಬೇಕು ಎಂದು ಹೇಳಿಯದೆ, ಮತ್ತು (ದೃಷ್ಟಾದೃಷ್ಟ ಫಲಗಳಿಗೆ ಕಾರಣರಾಗಿರುವುದರಿಂದ) ಆ ಸ್ತ್ರೀಯರ ಭರ್ತೃಗಳನ್ನು ಸ್ತ್ರೀಯರಕ್ಕಿಂತಲೂ ವಿಶೇಷವಾಗಿ ಮುನಿಗಳೆಂದು ಪ್ರಪ್ರತ್ಯೇಕ ಸ್ಮರಿಸಲೇಬೇಕು. (ಹೀಗೆ ಋಷಿಗಳನ್ನು ಹೇಳಿ ಅವರನ್ನು ಸ್ಮರಿಸಬೇಕೆಂದೂ ವಿಧಿಸಿ ಈಗ ಛಂದಸ್ಸುಗಳನ್ನು ಸ್ಮರಿಸಬೇಕೆಂದು ವಿಧಿಸುತ್ತಾರೆ.) ಮತ್ತು ಲಕ್ಷ್ಮೀ ಸರಸ್ವತ್ಯಾದಿಗಳನ್ನು ಗಾಯತ್ರ್ಯಾದಿ ಛಂದಸ್ಸುಗಳಿಗೆ ದೇವತೆಗಳೆಂದೂ ಸ್ಮರಿಸಬೇಕು ಎಂದು ಹೇಳಿದೆ. ॥ ೯ ॥

ಅವ ॥ ಅದರಲ್ಲಿ ಯಾವ ಯಾವ ಛಂದಸ್ಸಿಗೆ ಯಾವ ಯಾವ ದೇವತೆಯು ಎಂದರೆ---

ಭಾ ॥ (೧) ಗಾಯತ್ರೀ ಬೃಹತೀ ಚೈವ ತಾಸ್ಸರ್ವಾ ಗರುಡಸ್ತಥಾ । ಬ್ರಹ್ಮಾಣ್ಯನುಷ್ಟುಬಿಂದ್ರಾಣೀ ತ್ರಿಷ್ಟುಪ್‌ಸ್ವಾಹೇತಿ ಚೋಚ್ಯತೇ ॥ ಗಾಯತ್ರೀ ಜಗತೀ ಚೈವ ವಾರುಣೀ ರೋಹಿಣೀ ತಥಾ । ಅನುಷ್ಟುಬ್ಬೃಹತೀ ಚೈವ ತಾರಾ ಪಙ್ಕ್ತಿಃಶಚೀ ತಥಾ ॥ ಉಷ್ಣಿಕ್ ಸೌರೀ ಜಗತ್ಯಶ್ಚ ಸರ್ವದೇವಸ್ತ್ರಿಯೋ ಮತಾಃ॥ ವಿರಾಣ್ಮಿತ್ರಾವರುಣಯೋರ್ಭಾರ್ಯೇ ಇತಿ ಚ ಕೀರ್ತಿತೇ । ಅತಿಛಂದಾಂಸಿ ಸರ್ವಾಣಿ ಸರ್ವದೇವ್ಯಃ ಪ್ರಕೀರ್ತಿತಾಃ ॥ ವಿರಾಡಿತಿ ಚ ನಾಮಾಸಾಂ ॥ ॥ ೧೦ ॥

ಅ ॥ (೧) ಹಿಂದೆ ಹೇಳಿದ ಲಕ್ಷ್ಮಿ ಸರಸ್ವತೀ ಭಾರತಿಯರೂ ಹಾಗೆಯೇ ಗರುಡನೂ ಕೂಡ ಗಾಯತ್ರೀ ಛಂದಸ್ಸು. (ಗಾಯತ್ರಿ ಛಂದಸ್ಸಿಗೆ ದೇವತೆಯರು.)ಮತ್ತು ಬೃಹತೀ ಛಂದಸ್ಸು. ಸರಸ್ವತಿಯು.ಅನುಷ್ಟುಪ್ ಛಂದಸ್ಸಿಗೆ (**ಇಂದ್ರಸ್ಯ ತ್ರಿಷ್ಟುಬಿಹ ಭಾಗೋ ಅಹ್ನಃ** ಎಂಬ ಶ್ರುತ್ಯರ್ಥ ಹೇಳುತ್ತಾರೆ.) ಇಂದ್ರನ ಪತ್ನಿಯಾದ ಶಚೀದೇವಿಯು ತ್ರಿಷ್ಟುಪ್ ಛಂದಸ್ಸು. **ಅಗ್ನೇರ್ಗಾಯತ್ರ್ಯಭವತ್ಸಯುಗ್ವಾ** ಎನ್ನುವುದರ ಅರ್ಥ ಹೇಳುತ್ತಾರೆ. (ಲಕ್ಷ್ಮ್ಯಾದಿಗಳು ಮಾತ್ರ ಗಾಯತ್ರೀ ಎನಿಸುವುದಲ್ಲ ಮತ್ತೆ) ಸ್ವಾಹಾದೇವಿಯೂ ಗಾಯತ್ರೀ ಎನಿಸುತ್ತಾಳೆ. (ಸಮಸ್ತ ದೇವ ಸ್ತ್ರೀಯರೂ) ವಾರುಣೀ ದೇವಿಯೂ ಕೂಡ ಜಗತೀ ಛಂದಸ್ಸು. ಏವ= **ಅಗ್ನಿಃ ಸವಿತಾ ಸೋಮೋ ಬೃಹಸ್ಪತಿಃ ಮಿತ್ರಾವರುಣಾವಿಂದ್ರೋ ವಿಶ್ವೇದೇವಾಃ ದೇವತಾಃ** ಎಂದು ಅನ್ಯಥಾ ಹೇಳಿದ್ದೂ ಪ್ರಮಾಣ ವಿರುದ್ಧವಾದ ಪ್ರಯುಕ್ತ ಅಯುಕ್ತವು. ಸರಸ್ವತಿಯು ಮಾತ್ರ ಅನುಷ್ಟುಪ್ ಛಂದಸ್ಸಲ್ಲ. ಮತ್ತೆ ರೋಹಿಣೀ ದೇವಿಯೂ (ಚಂದ್ರನ ಹೆಂಡತಿಯು) ಕೂಡ ಅನುಷ್ಟುಪ್ ಛಂದಸ್ಸು. ಹೀಗೆಯೇ ತಾರಾದೇವಿಯೂ (ಬೃಹಸ್ಪತಿಯ ಭಾರ್ಯೆಯು) ಬೃಹತೀ ಛಂದಸ್ಸು. ಶಚೀದೇವಿಯು ಪಙ್ಕ್ತಿಛಂದಸ್ಸು. ಮತ್ತು **ಇಂದ್ರಾಣೀ ತ್ರಿಷ್ಟುಪ್** ಎಂದು ಹೇಳಿದುದರಿಂದ ತ್ರಿಷ್ಟುಪ್‌ಛಂದಸ್ಸಿಗೂ ದೇವತೆಯು. ಮತ್ತು ವಿರಾಟ್‌ಛಂದಸ್ಸು. ಸೌರೀ ದೇವಿಯು (ಆದಿತ್ಯನ ಭಾರ್ಯೆಯಾದ ಸಂಜ್ಞಾದೇವಿಯು) ಉಷ್ಣಿಕ್ ಛಂದಸ್ಸು. ಸಮಸ್ತ ದೇವ ಸ್ತ್ರೀಯರೂ ವಾರುಣೀ ದೇವಿಯೂ ಕೂಡ ಜಗತೀಛಂದಸ್ಸು. ಮಿತ್ರಾ ವರುಣರ ಹೆಂಡಂದಿರೂ ಸರ್ವದೇವ ಸ್ತ್ರೀಯರೂ ಶಚೀ ದೇವಿಯೂ ಕೂಡ ವಿರಾಟ್ ಎಂದು ಅನ್ನಿಸಿಕೊಳ್ಳುತ್ತಾರೆ. ಸಮಸ್ತ ದೇವತಾ ಸ್ತ್ರೀಯರೂ ಎಲ್ಲಾ ಅತಿ ಛಂದಸ್ಸುಗಳು ಎಂದು ಹೇಳಲ್ಪಡುತ್ತಾರೆ. ಈ ದೇವತಾ ಸ್ತ್ರೀಯರಿಗೂ ವಿರಾಟ್ ಎಂದು ನಾಮಧೇಯವು ಇದೆ. ಎಲ್ಲರೂ ಆವಾವಛಂದಸ್ಸುಗಳಿಗೆ ಅಭಿಮಾನಿಗಳೆಂದರ್ಥವು.

ವಿ ॥ (೧) ಯದ್ಯಪಿ ಲೋಕದಲ್ಲಿ **ಉಕ್ತಾಽತ್ಯುಕ್ತಾ ತಥಾ ಮಧ್ಯಾ ಪ್ರತಿಷ್ಠಾ ಸುಪ್ರತಿಷ್ಠಿತಾ** ಇತ್ಯಾದಿ ಪ್ರಕಾರ ೨೬ ಛಂದಸ್ಸುಗಳನ್ನು ಛಂದೋಗ್ರಂಥಗಳಲ್ಲಿ ಹೇಳಿರುವರು. ಆದರೂ ಋಗ್ವೇದದಲ್ಲಿ ಅನುಕ್ರಮಣಿಕಾಕಾರರು (1) ಗಾಯತ್ರೀ, (2) ಉಷ್ಣಿಕ್, (3) ಅನುಷ್ಟುಪ್, (4)ಬೃಹತೀ, (5) ಪಂಙ್ಕ್ತಿ, (6) ತ್ರಿಷ್ಟುಪ್ (7) ಜಗತೀ ಎಂದು ೭ ಛಂದಸ್ಸುಗಳನ್ನೂ (1) ಅತಿ ಜಗತೀ, (2) ಶಕ್ವರೀ, (3) ಅತಿ ಶಕ್ವರೀ, (4) ಅಷ್ಟಿ, (5) ಅತ್ಯಷ್ಟೀ, (6) ಧೃತಿ,(7) ಅತಿಧೃತಿ ಎಂದು ೭ ಅತಿ ಛಂದಸ್ಸುಗಳನ್ನೂ ಹೇಳಿರುವರು. (೨) ಹೀಗೆಯೇ ಗಾಯ

ತ್ರ್ಯಾದಿಗಳಿಗೆ ಲಕ್ಷಣಗಳನ್ನು ಅಲ್ಲಿಯೇ ಹೇಳಿರುವರು. ಗಾಯತ್ರೀ ಛಂದಸ್ಸಿಗೆ ೨೪ ಅಕ್ಷರಗಳು. ಉಷ್ಣಿಕ್ ಮೊದಲಾದ ೧೩ಛಂದಸ್ಸುಗಳಿಗೆ ಕ್ರಮವಾಗಿ ೪,೪, ಅಕ್ಷರಗಳು ವೃದ್ಧಿಯಾಗುತ್ತಾ ಅಂತಿಮದ ಅತಿಧೃತಿ ಛಂದಸ್ಸಿಗೆ ೭೬ ಅಕ್ಷರಗಳು ಆಗುತ್ತವೆ. (೩) ಹೀಗೆಯೇ ಅದರ ಮೇಲಿನ (1) ಕೃತಿ, (2) ಪ್ರಕೃತಿ, (3) ಆಕೃತಿ, (4) ವಿಕೃತಿ, (5) ಸಂಕೃತಿ, (6) ಅತಿಕೃತಿ, (7) ಉತ್ಕೃತಿ, ಛಂದಸ್ಸುಗಳಿಗೆ ೪, ೪, ಅಕ್ಷರಗಳು ವೃದ್ಧಿಯಾಗಿ ಕೊನೆಗೆ ೧೦೪ ಅಕ್ಷರಗಳು ಆಗುತ್ತವೆ. ಇವುಗಳನ್ನೆಲ್ಲಾ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯದಿಂದಲೇ ಭಾಷ್ಯದಲ್ಲಿ **ಅತಿಛಂದಾಂಸಿ ಸರ್ವಾಣಿ,** ಎನ್ನುವಲ್ಲಿ **ಸರ್ವಾಣಿ** ಎಂದು ಹೇಳಿರುವರು. ॥ ೧೦ ॥

ಅವ ॥ ಹೀಗೆ ಛಂದಸ್ಸುಗಳಿಗೆ ದೇವತೆಗಳನ್ನು ಹೇಳಿ ಆ ಛಂದಸ್ಸುಗಳ ಅವಾಂತರ ಭೇದಗಳನ್ನೂ, ಆ ಅವಾಂತರ ಭೇದಗಳ ದೇವತೆಗಳನ್ನೂ, ಹೇಳುತ್ತಾರೆ.

ಭಾ ॥ (೧) ತಾಸ್ತ್ವೂನಾಧಿಕೇಷ್ವಪಿ । (೨) ನಿಚೃದ್ಭುರಿಗ್ವಿರಾಟ್ ಸಂಜ್ಞಾ (೩) ಪ್ರಸ್ತಾ ರೇತ್ಯಾದಿ ನಾಮ ಚ ॥ ೧೧ ॥

ಅ॥(೧)ಯಾವ ಯಾವಛಂದಸ್ಸುಗಳಿಗೆ ಎಷ್ಟು ಎಷ್ಟು ವರ್ಣಗಳಿರಬೇಕೋ,ಅವುಗಳಿಗಿಂತ ಕಡಿಮೆಇದ್ದರೆ ಅಥವಾ ಹೆಚ್ಚು ವರ್ಣಗಳಿದ್ದರೆ ಪಾದಗಳ ವಿನ್ಯಾಸಭೇದದಿಂದ ಅವಾಂತರ ಭೇದಗಳಲ್ಲಿಯೂ ಆಯಾಯ ಛಂದಸ್ಸುಗಳ ದೇವತೆಗಳೇ ದೇವತೆಗಳೆಂದು ತಿಳಿಯಬೇಕು. (೨) ೧ ಅಕ್ಷರ ಕಡಿಮೆಯಾದರೆ ನಿಚೃತ್. ೧ ಅಕ್ಷರ ಹೆಚ್ಚಾದರೆ ಭುರಿಕ್. ೨ ಅಕ್ಷರಗಳು ಕಡಿಮೆಯಾದರೆ ವಿರಾಟ್. ೨ ಅಕ್ಷರಗಳು ಹೆಚ್ಚಾದರೆ ಸ್ವರಾಟ್, ಹೀಗೆಯೇ ನ್ಯೂನಾಧಿಕ್ಯಾದಿಗಳಿಂದ ಗಾಯತ್ರ್ಯಾದಿ ಛಂದಸ್ಸುಗಳು ನಿಚೃತ್ ಮೊದಲಾದ ಸಂಜ್ಞೆಯುಳ್ಳವುಗಳಾಗುತ್ತವೆ. (ಅಂದರೆ ೨ ವರ್ಣಗಳು ಅಧಿಕವಾಗಿ ಯಾವುದು ಸ್ವರಾಟ್ ಗಾಯತ್ರಿಯು ಅದೆಯೋ,ಅದೇವೇ ೨೮ಅಕ್ಷರಗಳುಳ್ಳ ಉಷ್ಣಿಕ್ ಛಂದಸ್ಸಿಗಿಂತ ೨ ಅಕ್ಷರಗಳು ನ್ಯೂನವಾಗಿರುವುದರಿಂದ ಉಷ್ಣಿಕ್ ವಿರಾಟ್ ಎನಿಸುತ್ತದೆ. ಹೀಗೆ ೩೦ ಅಕ್ಷರಗಳುಳ್ಳ ಸ್ವರಾಟ್ ಉಷ್ಣಿಕ್ ಛಂದಸ್ಸೇ ವಿರಾಟನುಷ್ಟುಪ್ ಎನಿಸುತ್ತದೆ. ಹೀಗೆ ಮೇಲಿನ ಛಂದಸ್ಸುಗಳನ್ನು ತಿಳಿಯ ಬೇಕು.) (೩) ವಿನ್ಯಾಸ ಭೇದದಿಂದ ಅವಾಂತರ ಭೇದಗಳಿಗೆ ಪ್ರಸ್ತಾರ (ಪಜ್ತ್ರಛಂದೋ ವಿಶೇಷ) ಸಂಸ್ತಾರ, ಆಸ್ತಾರ, ವಿಷ್ಟಾರ ಎಂಬ ನಾಮಗಳನ್ನು ತಿಳಿದುಕೊಳ್ಳಬೇಕು. (ಇವುಗಳನ್ನು ಪಿಂಗಲ ಸೂತ್ರ ಅನುಕ್ರಮಣಿಕಾ ಮೊದಲಾದ ಛಂದೋ ಗ್ರಂಥಗಳಿಂದ ತಿಳಿದುಕೊಳ್ಳಬೇಕು). ॥ ೧೧ ॥

ಅವ ॥ ೧ ಗಾಯತ್ರಿಗೆ ಅನೇಕರಾದ ಲಕ್ಷ್ಮೀ ಸರಸ್ವತ್ಯಾದಿಗಳಿಂದ ಅಭೇದವು ಕೂಡದಿರುವ ಪ್ರಯುಕ್ತ **ತಾಃ ಸರ್ವಾ ಗಾಯತ್ರೀ** ಇತ್ಯಾದಿಗಳು ಕೂಡಲಾರವು ಎಂದರೆ–

ಭಾ ॥ (೧) ಬಹ್ವೀನಾಮೇಕಮಾನೇನ ತ್ವೇಕಂ ನಾಮ ಚ ಯುಜ್ಯತೇ ॥ (೨) ಸರ್ವಾಭಿಮಾನಿತಾ ಚೈವ ತಿಸೃಣಾಂತು ಯಥಾಕ್ರಮಂ ॥ (೩) ದೇವತಾ ಸರ್ವವಿದ್ಯಾನಾಂ ಸ್ವಯಂ ನಾರಾಯಣಃ ಪ್ರಭುಃ ॥ (೪) ಋತೇ ತತ್ರ ಪ್ರಸಿದ್ಧಾಶ್ಚ ದೇವತಾ ಶ್ರೀಸ್ತಥಾತ್ರ ಚ। ಋತೇ ಪ್ರಸಿದ್ಧಾ ಬ್ರಹ್ಮೈವ ತತಸ್ತೇನ ಕ್ರಮೇಣ ಚ । ಪೂರ್ವಪ್ರಸಿದ್ಧವರ್ಜಂತು ಶಕ್ರಾಂತಾ ದೇವತಾ ಮತಾಃ ॥ ॥ ೧೨ ॥

ಅ ॥ (೧) (ಇಲ್ಲಿ ಲಕ್ಷ್ಮ್ಯಾದಿ ದೇವತೆಗಳಿಗೂ ಗಾಯತ್ರ್ಯಾದಿ ಛಂದಸ್ಸುಗಳಿಗೂ ಐಕ್ಯ ಹೇಳುವುದಲ್ಲ. ಮತ್ತೆ ಗಾಯತ್ರ್ಯಾದಿ ಛಂದಸ್ಸುಗಳಿಗೆ ಲಕ್ಷ್ಮ್ಯಾದಿಗಳು ಅಭಿಮಾನಿಗಳಾಗಿರುವುದರಿಂದ ಲಕ್ಷ್ಮ್ಯಾದಿಗಳಿಗೆ ಆಯಾಯ ಗಾಯತ್ರೀ ಮೊದಲಾದ ನಾಮಗಳು.) ಲಕ್ಷ್ಮೀ ಮೊದಲಾದ ಅನೇಕ ದೇವತಾ ಸ್ತ್ರೀಯರು ಗಾಯತ್ರೀ

ಮೊದಲಾದ ಒಂದೊಂದು ಛಂದಸ್ಸಿಗೆ ಅಭಿಮಾನಿಗಳಾಗಿರುವುದರಿಂದಲೇ ಅವರಿಗೆ ಗಾಯತ್ರೀ ಮೊದಲಾದ ಒಂದೊಂದು ನಾಮವು ಕೂಡುತ್ತದೆ. (ವಿರುದ್ಧವಾಗುವುದಿಲ್ಲ) (ಇದರಿಂದ **ಅಗ್ನೇರ್ಗಾಯತ್ರ್ಯ ಭವತ್** ಅಗ್ನಿಯಿಂದ ಗಾಯತ್ರ್ಯಭಿಮಾನಿನಿಯು ಪ್ರಕಟಳಾದಳು, **ಸವಿತಾ ಉಷ್ಣಿಹಯಾ** ಸೂರ್ಯನು ಉಷ್ಣಿಕ್ ಛಂದಸ್ಸಿಗೆ ಅಭಿಮಾನಿನಿಯಾವ ತನ್ನ ಹೆಂಡತಿಯಿಂದ ಕೂಡಿ ಅಗ್ನಿ ಹೋತ್ರಾದಿ ಸತ್ಕರ್ಮಗಳಿಂದ ಯುಕ್ತನಾದನು, ಇತ್ಯಾದಿಗಳಲ್ಲಿ ಹೀಗೆಯೇ ಅರ್ಥವನ್ನು ತಿಳಿಯಬೇಕೆಂದುಕ್ತವಾಯ್ತು.) (೨) (ಗಾಯತ್ರೀ ಬೃಹತೀ ಛಂದಸ್ಸುಗಳಿಗೆ ಲಕ್ಷ್ಮ್ಯಾದಿಗಳು ದೇವತೆಗಳು ಎಂದುಕ್ತವಾಯ್ತು. ಆದರೆ ಗಾಯತ್ರೀ ಬೃಹತೀ ಛಂದಸ್ಸುಗಳಿಗೆ ಮಾತ್ರ ಲಕ್ಷ್ಮ್ಯಾದಿಗಳು ದೇವತೆಗಳು ಎಂದಲ್ಲ. ಮತ್ತೆ) ಲಕ್ಷ್ಮೀ ಸರಸ್ವತೀ ಭಾರತೀಯರು ಯಥಾಕ್ರಮವಾಗಿ ಸಮಸ್ತ ಛಂದಸ್ಸುಗಳಿಗೂ ಅಭಿಮಾನಿಗಳಾಗಿರುತ್ತಾರೆ. (ಹಾಗಾದರೆ **ಗಾಯತ್ರೀ ಬೃಹತೀ ಚೈವ ತಾಸ್ಸರ್ವಾಃ ಬ್ರಹ್ಮಾಣ್ಯನುಷ್ಟುಪ್** ಎಂದು ಹೇಳಿದ್ದು ವ್ಯರ್ಥವೆಂದರೆ, ಗಾಯತ್ರ್ಯಾದಿ ಛಂದಸ್ಸುಗಳಲ್ಲಿ ಲಕ್ಷ್ಮ್ಯಾದಿಗಳಿಗೆ ಉಷ್ಣಿಗಾದಿ ಛಂದಸ್ಸುಗಳಿಗಿಂತ ವಿಶೇಷತಃ ಅಭಿಮಾನವಿದೆ ಎಂದು ತೋರಿಸುವುದಕ್ಕಾಗಿ ಹೇಳಿದ್ದು.) (೩) (ಹೀಗೆ ಋಷಿ ಛಂದಸ್ಸುಗಳನ್ನು ಹೇಳಿ ದೇವತೆಯನ್ನೂ ಹೇಳುತ್ತಾರೆ.) ಸರ್ವ ಸಮರ್ಥನಾದ ಶ್ರೀ ನಾರಾಯಣನೇ ಸಮಸ್ತ ವಿದ್ಯೆಗಳಿಗೂ ಸಾಕ್ಷಾತ್ ಪರಮ ಮುಖ್ಯ ವೃತ್ತಿಯಿಂದ ದೇವತೆಯು. (ಅಂದರೆ ನಿರುಪಚರಿತ ಸರ್ವಸ್ವಾಮಿಯಾಮದರಿಂದಲೂ ಸಮಸ್ತ ವಸ್ತುಗಳಲ್ಲಿರತಕ್ಕ ಪ್ರವೃತ್ತಿ ನಿಮಿತ್ತಗಳು ಶ್ರೀ ವಿಷ್ಣುವಿನ ಅಧೀನಗಳಾಗಿರುವುದರಿಂದಲೂ ಶ್ರೀ ನಾರಾಯಣನೇ ಸಮಸ್ತ ವಿದ್ಯೆಗಳಲ್ಲಿ ಪ್ರತಿಪಾದ್ಯನು) (೪) ಶ್ರೀ ಪರಮಾತ್ಮನಲ್ಲಿಯೇ ಪ್ರಸಿದ್ಧಗಳಾದ ಪುರುಷ ಸೂಕ್ತ, ವಿಷ್ಣುಸೂಕ್ತ, ಹರಿಸೂಕ್ತ ಮೊದಲಾದ ವಿದ್ಯೆಗಳನ್ನು ಬಿಟ್ಟು ಬೇರೆ ವಿದ್ಯೆಗಳಿಗೆ ಶ್ರೀಲಕ್ಷ್ಮೀ ದೇವಿಯೂ ದೇವತೆಯು.ಹಾಗೆಯೇ ಶ್ರೀದೇವಿಯಲ್ಲಿಯೇ ಪ್ರಸಿದ್ಧಗಳಾದ ಅಂಭೃಣೀ ಸೂಕ್ತ, ಶ್ರೀ ಸೂಕ್ತ ಮೊದಲಾದವುಗಳನ್ನು ಬಿಟ್ಟು ಬಿಟ್ಟು ಬೇರೆವಿದ್ಯೆಗಳಿಗೆ ಚತುರ್ಮುಖ ಬ್ರಹ್ಮನೇ ದೇವತೆಯು. ಆ ಮೇಲೆ ಮುಂದೆ ಹೇಳುವ ತಾರತಮ್ಯ ಕ್ರಮದಿಂದಲೇ ಪೂರ್ವ ದೇವತೆಯಲ್ಲಿ ಅಂದರೆ ಬ್ರಹ್ಮನಲ್ಲಿಯೂ ವಾಯುವಿನಲ್ಲಿಯೂ ಪ್ರಸಿದ್ಧಗಳಾದ, **ಹಿರಣ್ಯ ಗರ್ಭ** ಇತ್ಯಾದಿ ಬಳಿತ್ಥೇತ್ಯಾದಿ ವಿದ್ಯೆಗಳನ್ನು ಬಿಟ್ಟು ಬೇರೆ ವಿದ್ಯೆಗಳಿಗೆ ಸರಸ್ವತೀ ಭಾರತಿಯರು ದೇವತೆಯರು. ಹೀಗೆ ಇಂದ್ರ ಪರ್ಯಂತರಾದವರು ದೇವತೆಗಳೆಂದು ಸಂಮತರಾಗಿರುತ್ತಾರೆ. ॥ ೧೨ ॥

ಅವ ॥ ದೇವತೆಗಳ ತಾರತಮ್ಯ ಕ್ರಮವನ್ನು ಹೇಳುತ್ತಾರೆ.

ಭಾ ॥ (೧) ಬ್ರಹ್ಮವಾಯೂ ಗಿರೌ ವೀಂದ್ರಶೇಷರುದ್ರಾಶ್ಚ ತತ್ಸ್ತ್ರಿಯಃ। ಶಕ್ರಕಾಮೌ ಕಾಮಪುತ್ರಮನುದಕ್ಷಾಂಗಿರಸ್ಸುತಾಃ ॥ (೨) ತದ್ವಚ್ಚಚೀ ರತಿಃ ಸೂರ್ಯ ಸೋಮಧರ್ಮಾದಿ ತತ್ಸ್ತ್ರಿಯಃ । ಪ್ರಧಾನ ಮರುತೋ ವಾರಿಪತಿರಗ್ನಿಶ್ಚ ಮಾರುತಾಃ ॥ (೩) ನಿಋರ್ತಿಃ ಸ್ತ್ರಿಯಶ್ಚ ಸೂರ್ಯಾದೇರಶ್ವಿನಾವಿತರೇ ತಥಾ ॥ ಅನಂತಕೋಟಿ ಶತಕದಶಾರ್ಧಾದ್ಯಂಶತಃ ಕ್ರಮಾತ್ । (೪) ಜ್ಞಾನ ಭಕ್ತಿ ಬಲೈಶ್ವರ್ಯ ಪೂರ್ವಾಖಿಲಗುಣೈರಪಿ। ಮುಕ್ತಾವಪಿ ಕ್ರಮೋ ಹ್ಯೇಷ ದೇವತಾ ಉದಿತಾ ಇಮಾಃ ॥ ೧೩ ॥

ಅ ॥ (೧) ಬ್ರಹ್ಮವಾಯುಗಳು, ಸರಸ್ವತೀ ಭಾರತಿಯರು, ಗರುಡ ಶೇಷ ರುದ್ರರು, ಅವರ ಪತ್ನಿಯರಾದ ಸೌಪರ್ಣೀ ವಾರುಣೀ ಪಾರ್ವತಿಯವರೂ ದೇವೇಂದ್ರ ಮನ್ಮಥರು, ಕಾಮನ ಮಗನಾದ ಅನಿರುದ್ಧ, ಮನು, ದಕ್ಷ ಪ್ರಜಾಪತಿ, ಅಂಗಿರಯಷಿಯ ಮಗನಾದ ಬೃಹಸ್ಪತಿ ಇವರು, (೨) ಕಾಮ ಪುತ್ರನಾದ ಅನಿರುದ್ಧಾದಿಗಳಂತೆ (ಅನಿರುದ್ಧ, ಸ್ವಾಯಂ ಭುವ ಮನು, ದಕ್ಷ ಪ್ರಜಾಪತಿ,ಬೃಹಸ್ಪತಿ ಇವರಂತೆ) ಶಚೀದೇವಿ, ರತಿ ದೇವಿ, ಸೂರ್ಯ, ಚಂದ್ರ, ಧರ್ಮಾದಿಗಳು, ಮನ್ವಾದಿಗಳ ಸ್ತ್ರೀಯರು, ಪ್ರವಹ (ಸೂರ್ಯಾದಿಗಳಿಗಿಂತ ಉತ್ತಮನಾದುದರಿಂದ ಅವರಿಗಿಂತ ಮೊದಲು ಹೇಳಬೇಕು.) ಮೊದಲಾದ ಮರುತ್‌ಗಳು, (ಆದಿಪದ ಗೃಹೀತರಾದ ದಕ್ಷ ಪತ್ನಿ ಮೊದ

ಲಾದವರು ಸೂರ್ಯಾದಿಗಳಿಗಿಂತ ಕಡಿಮೆಯವರು.) ಜಲಾಧಿಪತಿಯಾದ ವರುಣನು, ಅಗ್ನಿಯೂ, ಪ್ರವಹಾದಿಗಳಿಗಿಂತ ಇತರರಾದ ವಾಯುಗಳೂ ನಿರ್ಋತಿಯೂ ಸೂರ್ಯ ಸೋಮ ಧರ್ಮರ ಸ್ತ್ರೀಯರೂ ಸ್ವಾಯಂಭುವ ಮನುವಿನ ಪತ್ನಿಯಾದ ಶತರೂಪೆಯೂ ಅಶ್ವಿನೀ ದೇವತೆಗಳೂ ಹಾಗೆಯೇ ಇತರ ದೇವತೆಗಳೂ ಅನಂತ, ಕೋಟಿ, ೧೦೦, ೧೦, ೫, ಮೊದಲಾದ ಅಂಶಗಳಿಂದ ನ್ಯೂನರಾಗಿ ಈ ಕ್ರಮದಿಂದ ಇರುತ್ತಾರೆ. (ಅಂದರೆ—ನಾರಾಯಣ ಲಕ್ಷ್ಮೀ ಬ್ರಹ್ಮ ವಾಯು, ಮೊದಲಾದವರ ಮಧ್ಯದಲ್ಲಿ ಶ್ರೀ ನಾರಾಯಣನಿಗಿಂತ ಲಕ್ಷ್ಮೀದೇವಿಗೆ ಅನಂತ ಗುಣಹೀನತ್ವವು. ಲಕ್ಷ್ಮೀದೇವಿಗಿಂತ ಬ್ರಹ್ಮವಾಯುಗಳಿಗೆ ಕೋಟಿ ಗುಣಗಳಿಂದ ಅಧಮತ್ವವು. ಅವರಿಗಿಂತ ಸರಸ್ವತೀ ಭಾರತಿಯವರಿಗೆ ಶತ ಗುಣಗಳಿಂದ ಅಧಮತ್ವವು. ಇವರಿಗಿಂತ ಗರುಡ ಶೇಷ ರುದ್ರರಿಗೆ ೧೦೦ ಗುಣಗಳಿಂದ ಅಧಮತ್ವವು. ಇವರಿಗಿಂತ ಅವರ ಸ್ತ್ರೀಯರಿಗೆ ೧೦೦ ಗುಣಗಳಿಂದ ಅಧಮತ್ವವು. ಪಾರ್ವತಿಗಿಂತ ಇಂದ್ರ ಕಾಮರಿಗೆ ೧೦೦ ಗುಣಗಳಿಂದ ಅವರತ್ವವು. ಕಾಮ ಪುತ್ರಾದಿಗಳನ್ನಾರಂಭಿಸಿ ರತಿ ಪರ್ಯಂತರಾದವರಿಗೆ ಇಂದ್ರನಿಗಿಂತ ೧೦೦ ಗುಣಗಳಿಂದ ಅಧಮತ್ವವು. ಪ್ರವಹನಿಗೆ ಕಾಮ ಪುತ್ರಾದಿಗಳಿಗಿಂತ ಪಂಚ ಗುಣಗಳಿಂದ ಅಧಮತ್ವವು. ಇತ್ಯಾದಿ ಕ್ರಮಗಳನ್ನು ಪ್ರಮಾಣಾನುಸಾರವಾಗಿ ತಿಳಿಯಬೇಕು.) (೪) ಜ್ಞಾನ ಭಕ್ತಿ ಬಲ ಐಶ್ವರ್ಯ ಮೊದಲಾದ ಎಲ್ಲಾ ಗುಣಗಳಿಂದಲೂ ಕ್ರಮವಾಗಿ ನ್ಯೂನರಾಗಿರುತ್ತಾರೆ. ಮುಕ್ತಿಯಲ್ಲಿಯೂ ಇದೇ ಕ್ರಮವು. ಈ ಕ್ರಮವಾಗಿ ಹೇಳಲ್ಪಟ್ಟ ಈ ದೇವತೆಗಳು ಯಥಾಯೋಗ್ಯವಾಗಿ ಸಮಸ್ತ ವಿದ್ಯೆಗಳಿಗೆ ದೇವತೆಗಳೆಂದು ತಿಳಿಯಬೇಕು.

ವಿ ॥ (1) ಪ್ರಾಯಶಃ ಇಲ್ಲಿ ದ್ವಂದ್ವ ಸಮಾಸದಿಂದ ಗೃಹೀತರಾದವರು (**ಬ್ರಹ್ಮವಾಯೂ** ಇತ್ಯಾದಿಗಳು) ಸಮಾನಿಕರು. (2) ಪ್ರಧಾನ ವಾಯುಗಳಲ್ಲಿ ಪ್ರವಹನೆಂಬ ವಾಯುವು ಸೂರ್ಯ ಸೋಮಾದಿಗಳಿಗಿಂತ ಶ್ರೇಷ್ಠನು. (3) ಸೂರ್ಯ ಚಂದ್ರ ಯಮರಿಗೂ ಮನು ಪತ್ನಿಗೂ ಸಾಮ್ಯವು. ಪ್ರಸೂತ್ಯಾದಿ ಸ್ತ್ರೀಯರು ಸೂರ್ಯಾದಿಗಳಿಗಿಂತ ಅಧಮರು. ಹೀಗೆ ತಿಳಿಯಬೇಕು. ॥ ೧೩ ॥

ಅವ ॥ ಇವರೆಲ್ಲರೂ ವಿದ್ಯಾಭಿಮಾನಿ ದೇವತೆಗಳೆಂಸಾದರೆ **ಶಕ್ರಾಂತಾ ದೇವತಾ ಮತಾಃ** ಎಂಬದ್ದು ಹೇಗೆ? ಎಂದರೆ—

ಭಾ ॥ ಇಂದ್ರಾವರಾ ವಿಶೇಷೇಣ ಲಿಂಗೇನೈವ ಪೃಥಕ್ ಪೃಥಕ್ । ದೇವತಾಸ್ತತ್ರ ತತ್ರ ಸ್ಯು ರೇಷ ಏವ ಪರೋ ವಿಧಿಃ ॥ ೧೪ ॥

ಅ ॥ (ಯದ್ಯಪಿ ಇವರೆಲ್ಲರೂ ವಿದ್ಯಾಭಿಮಾನಿಗಳಾಗಿ ಆಗಿಯೇ ಆಗುತ್ತಾರೆ. ಆದಾಗ್ಯೂ) ಪ್ರತ್ಯೇಕ ವ್ಯಾವರ್ತಕವಾದ ಶ್ರುತಿಲಿಂಗಾದಿ ಜ್ಞಾಪಕವಿದ್ದರೇನೇ ಇಂದ್ರನಿಗಿಂತ ಕೆಳಗಿನವರು ಆಯಾಯ ವಿದ್ಯೆಗಳಲ್ಲಿ ಅಭಿಮಾನಿ ದೇವತೆಗಳಾಗುವರು. (ಶ್ರುತಿ ಲಿಂಗಾದಿಗಳು ಇಲ್ಲವಾದರೆ ಇಂದ್ರನಿಗಿಂತ ಕೆಳಗಿನವರು ಅಭಿಮಾನಿ ದೇವತೆಗಳು ಆಗಲಾರರು. ಇಂದ್ರ ಪರ್ಯಂತ ದೇವತೆಗಳಾದರೂ ಶ್ರುತ್ಯಾದಿಗಳು ಇಲ್ಲದಿದ್ದರೂ, **ಪೂರ್ವಪ್ರಸಿದ್ಧವರ್ಜಂತು ಶಕ್ರಾಂತಾಃ ದೇವತಾಃ** ಎಂದು ಹೇಳಿದ ಪ್ರಕಾರ ಇಂದ್ರ ಪರ್ಯಂತರಾದವರು ದೇವತೆಗಳಾಗುವರು ಎಂಬದ್ದು.) (ಆಯಾಯ ಶ್ರುತ್ಯಾದಿಗಳಿಂದಲೇ ವಿಷ್ಣ್ವಾದಿಗಳೂ ಕೂಡ ದೇವತೆಗಳಾಗುವರು, ಎಂದು ಇತರರು ಹೇಳುತ್ತಾರೆ, ಎಂದರೆ ಅದು ಅಯುಕ್ತವೆನ್ನುತ್ತಾರೆ.) ಪ್ರಮಾಣ ಸಿದ್ಧವಾದ ಪ್ರಯುಕ್ತ ಇದೆ. ದೇವತಾ ಸ್ಥಿತಿ:— ಅಂದರೆ **ದೇವತಾ ಸರ್ವವಿದ್ಯಾನಾಂ ಸ್ವಯಂ ನಾರಾಯಣಃ ಪ್ರಭುಃ ।** ಎಂದಾರಂಭಿಸಿ **ಪೂರ್ವಪ್ರಸಿದ್ಧವರ್ಜಂ ತು ಶಕ್ರಾಂತಾ ದೇವತಾ ಮತಾಃ** ಎಂದು ಹೇಳಿದ ದೇವತಾತ್ವ ವ್ಯವಸ್ಥಿತಿ ರೂಪವಾದ ಪ್ರಕಾರವು. ಬೇರೆ ಪ್ರಕಾರವಲ್ಲ. ॥ ೧೪ ॥

ಅವ ॥ ವಿಷ್ಣ್ವಾದಿಗಳು ವಿದ್ಯಾ ದೇವತೆಗಳು ಎಂದು ಹೇಳಿದುದನ್ನು ವಿವರಿಸುತ್ತಾರೆ

ಭಾ ॥ ವೇದಾದಿವರ್ಣ ಪರ್ಯಂತೈಃ ಮೂರ್ತಯಃ ಕೇಶವಸ್ಯತು । ಸಮಾಸ ವ್ಯಾಸ ಯೋಗೇನ ವಾಚ್ಯಾಸ್ತಾತ್ಪರ್ಯತಃ ಕ್ವಚಿತ್। ಯಥಾಯೋಗಂ ಯಥಾನ್ಯಾಯಮನ್ಯಾ ಸಾಮಪಿ ಮೂರ್ತಯಃ ॥ ೧೫ ॥

ಅ ॥ ವೇದಗಳನ್ನಾರಂಭಿಸಿ ವರ್ಣ ಪರ್ಯಂತ ಶಬ್ದಗಳಿಂದ ಸಂಕ್ಷೇಪ ವಿಸ್ತರಗಳಿಂದ ಪ್ರತ್ಯೇಕವಾಗಿ ಪರಮ ಮುಖ್ಯ ವೃತ್ತಿಯಿಂದ ಭಗವನ್ಮೂರ್ತಿಗಳು ವಾಚ್ಯಗಳು. (ಸಂಕ್ಷೇಪ ವಿಸ್ತಾರಗಳು ಹೇಗೆಂದರೆ ಸಮಸ್ತ ವೇದಗಳಿಂದ ಒಂದು ಭಗವನ್ಮೂರ್ತಿಯೂ, ವೇದ ಪ್ರಭೇದಗಳಿಂದ ಅಷ್ಟು ಭಗವನ್ಮೂರ್ತಿಗಳೂ, ಅವುಗಳ ಅವಾಂತರ ಪ್ರಭೇದಗಳಿಂದಲೂ ಅಷ್ಟು ಭಗವನ್ಮೂರ್ತಿಗಳು ಈ ಪ್ರಕಾರ ವಾಚ್ಯಗಳಾಗುತ್ತವೆ.) ಅದೂ ಕೂಡ ಯೋಗ ವೃತ್ತಿಯನ್ನು ಅತಿಕ್ರಮಿಸದೆ, ಆವಾವ ಭಗವನ್ಮೂರ್ತಿಗಳಿಗೆ ಜ್ಞಾಪಕವಾದ ಲಿಂಗವನ್ನು ಅತಿ ಕ್ರಮಿಸದೆ ವಾಚ್ಯಗಳೆಂದು ತಿಳಿಯಬೇಕು. ಹಾಗೆಯೇ ಲಕ್ಷ್ಮ್ಯಾದಿ ದೇವತೆಗಳೂ ಸರ್ವ ವಿದ್ಯೆಗಳಲ್ಲಿ ವಾಚ್ಯರೆಂದು ತಿಳಿಯಬೇಕು. ॥ ೧೫ ॥

ಅವ॥ ಹಿಂದೆ ಹೇಳಿದ ಪ್ರಕಾರ ಋಷಿ ಛಂದಸ್ಸು ದೇವತೆ ಇವುಗಳ ಸ್ವರೂಪವನ್ನು ಹೇಳಿ ಆ ವಿಷಯ ದಲ್ಲಿ ಪ್ರಮಾಣ ಹೇಳುತ್ತಾರೆ.

ಭಾ ॥ ಋಕ್ಸಂಹಿತಾಯಾಂ ಸ್ವಾಧ್ಯಾಯೇ ನಿರುಕ್ತೇ ವ್ಯಾಸನಿರ್ಮಿತೇ। ಪ್ರವೃತ್ತೇ ಚೈತದಖಿಲ ಮುಕ್ತಂಹಿ ಪ್ರಭುಣಾ ಸ್ವಯಂ ॥ ೧೬ ॥

ಅ ॥ ಋಕ್ಸಂಹಿತೆಯಲ್ಲಿಯೂ ಸ್ವಾಧ್ಯಾಯ ಗ್ರಂಥದಲ್ಲಿಯೂ ವೇದವ್ಯಾಸರು ನಿರ್ಮಿಸಿದ ನಿರುಕ್ತ ದಲ್ಲಿಯೂ ಪ್ರವೃತ್ತ ಎನ್ನುವ ಗ್ರಂಥದಲ್ಲಿಯೂ ಇದೆಲ್ಲವೂ ಸಾಕ್ಷಾತ್ ಪ್ರಭುವಾದ ಶ್ರೀನಾರಾಯಣನಿಂದ ಹೇಳಲ್ಪಟ್ಟಿದೆ. ॥ ೧೬ ॥

ಅವ ॥ ಶ್ರೀವಿಷ್ಣುವು ಸರ್ವ ವಿದ್ಯೆಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿದ್ದಾನೆನ್ನುವಲ್ಲಿ ಶ್ರುತಿಗಳನ್ನು ಹೇಳು ತ್ತಾರೆ.

ಭಾ ॥ ಸರ್ವೇ ವೇದಾಶ್ಚ ನಾಮಾನಿ ತಾವಾ ಏತಾ ಋಚಸ್ತಥಾ । ಇಂದ್ರಂ ಮಿತ್ರಂ ವರುಣ ಮಿತ್ಯಾದ್ಯಶ್ರುಚ ಪ್ರಮಾಪರಾ ॥ ೧೭ ॥

ಅ ॥ (1) **ಸರ್ವೇ ವೇದಾ ಯತ್ಪದಮಾಮನಂತಿ** (ಕಾಠ) ಸಮಸ್ತವೇದಗಳೂ ಯಾವ ಶ್ರೀಹರಿಯ ಸ್ವರೂಪವನ್ನೇ ಪ್ರತಿಪಾದಿಸುತ್ತವೋ (2) **ನಾಮಾನಿ ಸರ್ವಾಣಿ ಯಮಾವಿಶಂತಿ** (ಭಾಲ್ಲವೇಯ ಶ್ರುತಿ) ಇಂದ್ರಾದಿ ಸಮಸ್ತ ನಾಮಗಳೂ ಯಾವ ಶ್ರೀಹರಿಯನ್ನೇ ಪ್ರತಿಪಾದಿಸುತ್ತವೋ (3) **ತಾವಾ ಏತಾಃ ಸರ್ವಾ ಋಚಃ** ಆ ಈ ಋಗಾದಿಗಳೆಲ್ಲವೂ ಶ್ರೀವಿಷ್ಣುವನ್ನೇ ಮುಖ್ಯತಃ ಪ್ರತಿ ಪಾದಿಸುತ್ತವೆ. (೪) **ಇಂದ್ರಂ ಮಿತ್ರಂ ವರುಣಮಗ್ನಿಮಾಹುಃ**(ಋ,೨,೩,೨೨)ಬ್ರಹ್ಮಜ್ಞಾನಿಗಳುಯಾವಶ್ರೀವಿಷ್ಣುವನ್ನೇಇಂದ್ರಾದಿಶಬ್ದಗಳಿಂದವಾಚ್ಯನನ್ನಾಗಿ ಹೇಳುತ್ತಾರೋ(ಅಂತಹ ಶ್ರೀವಿಷ್ಣುವೇಸುಪರ್ಣಗರುಡಾದಿ ಶಬ್ದಗಳಿಂದ ವಾಚ್ಯನು.ಆದಕಾರಣ ಆತನು ಕ್ರೀಡಾದಿ ಗುಣ ವಿಶಿಷ್ಟನು. ಆದುದರಿಂದ ಸರ್ವರಿಗಿಂತಲೂ ಪ್ರಧಾನನೂ ನಿರ್ದುಷ್ಟನೂ ಆದ ಶ್ರೀವಿಷ್ಣುವನ್ನು ಬಹು ರೂಪಗಳುಳ್ಳವನೆಂದು ಹೇಳುತ್ತಾರೆ.) ಇದು ಮೊದಲಾದುದು ಶ್ರೀವಿಷ್ಣುವೇ ಸಮಸ್ತ ವಿದ್ಯೆಗಳಿಂದಲೂ ಮುಖ್ಯತಃ ವೇದ್ಯನು ಎನ್ನುವ ವಿಷಯಲ್ಲಿ ಋಕ್ ಸಂಹಿತಾದಿಗಳಿಗಿಂತ ಇತರವಾದ ಪ್ರಮಾಣವಿದೆ. ॥ ೧೭ ॥

ಅವ || ಶ್ರೀವಿಷ್ಣುವು ಸರ್ವೋತ್ತಮನಾದುದರಿಂದ ಮುಖ್ಯತಃ ಸಮಸ್ತ ವಿದ್ಯೆಗಳಿಂದಲೂ ತಿಳಿಯಲ್ಪಡುವವನು. ಲಕ್ಷ್ಮ್ಯಾದಿಗಳೂ ಕೂಡ ಆಧಿಕ್ಯ ತಾರತಮ್ಯಾನುಸಾರವಾಗಿ ವಿದ್ಯೆಗಳಿಂದ ತಿಳಿಯಲ್ಪಡುವವರು, ಎಂದುಕ್ತವಾಯ್ತು. ಅಂತಹ ತಾರತಮ್ಯವನ್ನು ಪ್ರಮಾಣಗಳಿಂದ ಸಾಧಿಸುತ್ತಾ ಪ್ರಥಮತಃ ಶ್ರೀವಿಷ್ಣುಸರ್ವೋತ್ತಮತ್ವವನ್ನು ಸಾಧಿಸುತ್ತಾರೆ.

ಭಾ || ದೇವತಾ ತಾರತಮ್ಯಂ ಚ ಸರ್ವೋತ್ಕೃಷ್ಟಂ ಚ ಕೇಶವಂ | ಜ್ಞಾತ್ವೈವ ಮುಚ್ಯತೇ ಹ್ಯಸ್ಮಾನ್ನಾನ್ಯಥಾ ತು ಕಥಂಚನ ||ಇತಿ ಪೈಂಗಿಶ್ರುತಿಶ್ಚಾಹ ದೃಶ್ಯತೇತ್ರ ಚ ಸರ್ವಶಃ || ೧೮ ||

ಅ || ದೇವತೆಗಳ ತಾರತಮ್ಯವನ್ನೂ, ಸರ್ವೋತ್ತಮನು ಕೇಶವನೇ ಎನ್ನುವುದನ್ನೂ ತಿಳಿದುಕೊಂಡೇ ಈ ಸಂಸಾರದಿಂದ ಮುಕ್ತನಾಗುತ್ತಾನೆ. ಇಲ್ಲವಾದರೆ ಯಾವ ಪ್ರಕಾರದಿಂದಲೂ ಮುಕ್ತನಾಗಲಾರನು. ಹೀಗೆ ಪೈಂಗಿಶ್ರುತಿಯು ಹೇಳುತ್ತದೆ. ಈ ಶಾಖೆಯಲ್ಲಿಯೂ ಶ್ರೀವಿಷ್ಣುಸರ್ವೋತ್ತಮತ್ವಾದಿಗಳು ಪ್ರತಿಪಾದಿತಗಳಾಗಿವೆ. (ಈ ಶಾಖೆಯಲ್ಲಿ ಪ್ರಾಯಃ ಇಂದ್ರಾದಿ ನಾಮಗಳುಳ್ಳ ಶ್ರೀಪರಮಾತ್ಮನಿಗೆ ಸರ್ವೋತ್ತಮತ್ವಾದಿಗಳೇ ಸ್ಪಷ್ಟವಾಗಿ ತೋರುತ್ತವೆ. ಶಾಖಾಂತರಗಳಂತೆ ಆಪಾತತಃ ಕರ್ಮಾದಿಗಳು ಪ್ರತೀತಗಳಾಗುವುದಿಲ್ಲ ಎನ್ನುವ ಆಭಿಪ್ರಾಯದಿಂದ ಅತ್ರ ಚ ಎಂದದ್ದು. ಅಥವಾ ಈ ಶಾಖೆಯಲ್ಲಿಯೂ ಪ್ರಸಿದ್ಧಗಳಾದ ಸ್ಪಷ್ಟಾರ್ಥವುಳ್ಳ ಶ್ರುತಿಗಳಲ್ಲಿಯೂ ಶ್ರೀವಿಷ್ಣುಸರ್ವೋತ್ತಮತ್ವಾದಿಗಳೇ ಪ್ರತಿಪಾದಿತಗಳಾಗಿವೆ. || ೧೮ ||

ಅವ || ಅವುಗಳನ್ನೇ ಪ್ರತಿಪಾದಿಸುತ್ತಾರೆ.

ಭಾ || (೧) ನ ತೇ ಮಹಿತ್ವಮಿತ್ಯಾದಿನ್ಯೈಶ್ವರಾನೇವ ಕೇವಲಾನ್ | ಗುಣಾನ್ವಿಷ್ಣೋಃ ಶ್ರುತಿರ್ಹ್ಯಾಹ ನೈವ ದೋಷಾನ್ಕಥಂಚನ|| (೨) ಜಾತಾ ಪರಿಬಭೂವೇತಿ ಮರ್ಯಾದಾಂ ಬ್ರಹ್ಮಣೋऽಪಿಹಿ || (೩) ನೈನ ರೇಮೇ ಬಿಭೇತ್ಯಸ್ಮಾ ನಾಸೀದಿತ್ಯಾದಿಕಾನಪಿ | ದೋಷಾನ್ ರುದ್ರೇ ಚ ತಾನೇವ ನ ಮಿನಂತೀತಿ ಪೂರ್ವಕಾನ್|| (೪) ಯಂ ಕಾಮಯೇ ತಂತಮುಗ್ರಂ ರುದ್ರಾಯ ಧನುರಿತ್ಯಪಿ| ಅಸ್ಯ ದೇವಸ್ಯ ಮಾಶಿಶ್ನ ದೇವಾ ಅಪಿಗುರಿತ್ಯಪಿ | ಘ್ನನ್ ಶಿಶ್ನದೇವಾನಿತ್ಯಾದ್ಯಾ ದೋಷಾ ಬಹವ ಈರಿತಾಃ || (೬) ತತೋ ವಿತಿಷ್ಠೇ ಯೋನಿಃ ಸಃ ಏತಾವತ್ಯಹಮಿತ್ಯಪಿ | ಅನ್ಯಾಶ್ರಯತ್ವಂ ದೇವ್ಯಾಶ್ಚ ಕಥಿತಂ ಬಹುಶೋऽಪಿ ಹಿ || ೧೯ ||

ಅ || (೧) ಪರೋ ಮಾತ್ರಯಾ ತನ್ವಾ ವೃಧಾನ ನ ತೇ ಮಹಿತ್ವಮನ್ವಶ್ನುವಂತಿ=(ಋ.ಅಷ್ಟ.೫. ಅ.೬.ವ.೨೪.) ತನ್ನ ದೇಹದಿಂದಲೇ ಅಭಿವೃದ್ಧನಾದ ಶ್ರೀವಿಷ್ಣುವೇ ನೀನು ಜ್ಞಾನಕ್ಕೆ ಅವಿಷಯನು. (ತನ್ನ ಮೂರ್ತಿಯಿಂದಲೇ ಅಪರಿಚ್ಛಿನ್ನನು.) ಅದು ಕಾರಣ ನಿನ್ನ ಸರ್ವೋತ್ತಮತ್ವಾದಿ ಮಹಿಮೆಯನ್ನು ಯಾರೂ ಹೊಂದಲಾರರು, ಇತ್ಯಾದಿ ಪ್ರಮಾಣಗಳಿಂದ ಶ್ರುತಿಯು ಸರ್ವೋತ್ತಮತ್ವಾದಿ ಗುಣಗಳನ್ನು ಶ್ರೀವಿಷ್ಣುವಿಗೆ ಹೇಳುತ್ತದೆ. ಆ ಗುಣಗಳು ಶ್ರೀವಿಷ್ಣುವಿನಲ್ಲಿ ಮಾತ್ರ ಇರತಕ್ಕವುಗಳು ಎಂದೂ ಹೇಳುತ್ತದೆ. ಆತನಿಗೆ ಯಾವುದೊಂದು ಶ್ರುತಿಯು ದೋಷಗಳನ್ನಾದರೂ ಹೇಳುವುದೇ ಇಲ್ಲ. (ಆದುದರಿಂದ ಇತರರಲ್ಲಿ ಸರ್ವಥಾ ಇಲ್ಲದಿರುವ ಅತ್ಯುತ್ತಮಗಳಾದ ಅನಂತಾನಂತ ಗುಣಗಳು ಇದ್ದುದರಿಂದಲೂ ದೋಷಲೇಶರಹಿತನಾದುದರಿಂದಲೂ ಶ್ರೀವಿಷ್ಣುವೇ ಸರ್ವೋತ್ತಮನೆಂದು ತಿಳಿಯುತ್ತದೆ.) (೨) (ಇಂತಹುದು ಬ್ರಹ್ಮರುದ್ರಾದಿಗಳಿಗೆ ಇಲ್ಲವೆನ್ನುತ್ತಾರೆ.)

ಪ್ರಜಾಪತೇ ನ ತ್ವದೇತಾನ್ಯನ್ಯೋ ವಿಶ್ವಾ ಜಾತಾನಿ ಪರಿತಾ ಬಭೂವ। ಯತ್ಕಾಮಾಸ್ತೇ ಜುಹುಮಸ್ತನ್ನೋ ಅಸ್ತು ವಯಂ ಸ್ಯಾಮ ಪತಯೋ ರಯೀಣಾಂ॥ (ಋ.೮.೭.೪.)(ಎಲೋ ಚತುರ್ಮುಖನೇ ನೀನು ಹುಟ್ಟತಕ್ಕ ಎಲ್ಲಾ ವಸ್ತುಗಳಿಗೂ ಸ್ವಾಮಿಯಾಗಿರುತ್ತಿ. ನೀನು ಹೊರತು ಬೇರೆ ಯಾರೂ ಸರ್ವ ವಸ್ತುಗಳಿಗೆ ಸ್ವಾಮಿಯಾಗಿ ಇಲ್ಲ. ಯಾವ ಅಭೀಷ್ಟಕ್ಕಾಗಿ ನಾವು ನಿನ್ನ ಪ್ರೀತಿಗಾಗಿ ಹೋಮಿಸುತ್ತೇವೋ ಅಂತಹ ಅಭೀಷ್ಟವು ನಮಗೆ ಆಗಲಿ. ಮತ್ತು ನಾವು ನಿನ್ನ ಅನುಗ್ರಹದಿಂದ ದ್ರವ್ಯವುಳ್ಳವರೂ ಒಳ್ಳೇ ಜ್ಞಾನವುಳ್ಳವರೂ ಆಗುವೆವು') ಎಂಬ ಶ್ರುತಿಯು ಚತುರ್ಮುಖನಿಗೂ ಐಶ್ವರ್ಯಕ್ಕೆ ಇಯತ್ತಾವನ್ನು ಹೇಳಿದೆ. (ಜಾತಾ=ಹುಟ್ಟಿದವುಗಳು ಎಂದು ಹೇಳಿದುದರಿಂದ ಹುಟ್ಟದಿರುವ ನಿತ್ಯಗಳಾದ ವಸ್ತುಗಳಿಗೆ ಚತುರ್ಮುಖನು ಅಧಿಪತಿಯಲ್ಲವೆಂದುಕ್ತವಾಯ್ತು.) (೨) **ಸ ವೈ ನೈವ ರೇಮೇ ಸೋಽಬಿಭೇತ್ । ಏಕೋ ನಾರಾಯಣ ಆಸೀತ್ ನ ಬ್ರಹ್ಮಾ**=(ಚತುರ್ಮುಖ ಬ್ರಹ್ಮನು ಆದಿಸೃಷ್ಟಿಯಲ್ಲಿ ಒಬ್ಬನೇ ಆದುದರಿಂದ ಸಂತುಷ್ಟನಾಗಲಿಲ್ಲ- ಆಗ ಭಯಗ್ರಸ್ತನಾದನು. ನಾರಾಯಣನೊಬ್ಬನೇ ಇದ್ದನು. ಪ್ರಲಯ ಕಾಲದಲ್ಲಿ ಬ್ರಹ್ಮಾದಿಗಳಿರಲಿಲ್ಲ.) ಇತ್ಯಾದಿ ಶ್ರುತಿಗಳಿಂದ ಚತುರ್ಮುಖನಿಗೆ ದುಃಖ ಭಯ ಪ್ರಲಯಕಾಲದಲ್ಲಿ ಅಭಾವ ಮೊದಲಾದ ದೋಷಗಳನ್ನು ಶ್ರುತಿಯು ಹೇಳುತ್ತದೆ. (ಆದ ಕಾರಣ ಚತುರ್ಮುಖನಿಗೆ ಶ್ರೀಹರಿಯಿಂದ ಸಾಮ್ಯವು ಸರ್ವಥಾ ಇಲ್ಲ.) (೪) (ರುದ್ರನಿಗೂ ಭಗವತ್ಸಾಮ್ಯವಿಲ್ಲ. ಏಕೆಂದರೆ) **ನ ಯಸ್ಯೇಂದ್ರೋ ವರುಣೋ ನ ಮಿತ್ರೋ ವ್ರತಮರ್ಯಮಾ ನ ಮಿನಂತಿ ರುದ್ರಃ। ನಾರಾತಯಸ್ತಮಿದಂ ಸ್ವಸ್ತಿ ಹುವೇ ದೇವಂ ಸವಿತಾರಂ ನಮೋಭಿಃ॥** (ಋ.೨.೮.೩.) ಯಾವ ಶ್ರೀವಿಷ್ಣುವಿನ ಜಗತ್ಸೃಷ್ಟ್ಯಾದಿ ವ್ಯಾಪಾರಗಳನ್ನು ಇಂದ್ರನು, ವರುಣನು, ಮಿತ್ರನು, ಅರ್ಯಮಾ ಎಂಬ ಸೂರ್ಯನು, ರುದ್ರನು, ಯಾರೊಬ್ಬರೂ ತಿಳಿಯುವುದಿಲ್ಲ. ಶತ್ರುಗಳಾದ ದೈತ್ಯರೂ ತಿಳಿಯುವುದಿಲ್ಲವೋ. ಅಂತಹ ಸರ್ವಜಗತ್ಸೃಷ್ಟಿಕರ್ತನಾದ ಶ್ರೀನಾರಾಯಣನನ್ನು ನಮಸ್ಕಾರಗಳಿಂದ ಐಹಿಕಾಮುಷ್ಮಿಕ ಸುಖದ ಉದ್ದಿಶ್ಯ ಪೂಜಿಸುವೆವು.) ಎಂದು ಶ್ರುತಿಯು ರುದ್ರನಲ್ಲಿಯೂ ಆ ಅಜ್ಞಾನ ಮೊದಲಾದ ದೋಷಗಳನ್ನೇ ಹೇಳುತ್ತದೆ. (೫) ಆ ದೋಷಗಳನ್ನೇ ರುದ್ರನಲ್ಲಿ ಸ್ಪಷ್ಟೀಕರಿಸುತ್ತಾರೆ.) (1) **ಯಂ ಕಾಮಯೇ ತಂತಮುಗ್ರಂ ಕೃಣೋಮಿ** (ಋ.೮.೭.೧೨.) (2) **ಅಹಂ ರುದ್ರಾಯ ಧನುರಾತನೋಮಿ** (ಋ.೮.೭.೧೧.) (3) **ಅಸ್ಯ ದೇವಸ್ಯ ಮೀಳ್ಹುಷಃ** (ಋ.೫.೪.೭.) (4) **ಮಾ ಶಿಶ್ನದೇವಾ ಅಪಿಗುರ್ಋತಂ ನಃ** (ಋ.೫.೩.೩.) (5) **ಘ್ನನ್ ಶಿಶ್ನದೇವಾನ್ ಅಭಿವರ್ಪಸಾಽಭೂತ್ ।** (ಋ.೮.೫.೧೪.) (1) ಯಾರನ್ನು ರುದ್ರನನ್ನಾಗಿ ಮಾಡಲಿಕ್ಕೆ ಇಚ್ಛಿಸುತ್ತೇನೋ ಆತನನ್ನು ರುದ್ರನನ್ನಾಗಿ ಮಾಡುತ್ತೇನೆ, (ಇದರಿಂದ ರುದ್ರನ ಪದಪ್ರಾಪ್ತಿಯು ಪರಾಧೀನವೆಂದುಕ್ತವಾಯ್ತು. (2) ನಾನು ಚತುರ್ಮುಖನ ಐದನೇ ಮುಖವನ್ನು ಛೇದಿಸಿದ ಹಿಂಸಕನಾದ ರುದ್ರನನ್ನು ಕೊಲ್ಲುವುದಕ್ಕಾಗಿಯೇ ಧನುಸ್ಸನ್ನು ವಿಸ್ತರಿಸುತ್ತೇನೆಂದು ಲಕ್ಷ್ಮೀದೇವಿಯ ಆಯುಧಕ್ಕೆ ರುದ್ರನು ವಿಷಯನೆಂದುಕ್ತವಾಯ್ತು. (ಇವು ಎರಡು ಲಕ್ಷ್ಮೀದೇವಿಯ ವಾಕ್ಯಗಳು.) (3) ಈ ಕ್ರೀಡಾದಿಗುಣವಿಶಿಷ್ಟನಾದ ಭಕ್ತರಿಗೆ ಅಭಿಲಷಿತವನ್ನು ಸೇಚಿಸುವ ಶ್ರೀವಿಷ್ಣುವಿಗೆ ರುದ್ರನು ಪೂಜೆಮಾಡಿ ತನ್ನ ಪದವಿಯನ್ನು ಹೊಂದಿದನು, ಎಂದು ಇದರಿಂದ ರುದ್ರನಿಗೆ ಪದವಿಪ್ರಾಪ್ತಿಯು ಶ್ರೀವಿಷ್ಣುವಿನ ಭಜನಾಧೀನವೆಂದುಕ್ತವಾಯ್ತು. (4) ಶಿಶ್ನಾಭಿಮಾನಿಗಳಾದ ರುದ್ರರೂ ಕೂಡ ನಮಗೆ ಉಪಾಸ್ಯನಾದ ಸ್ವಾಮಿಯಾದ ಜ್ಞಾನರೂಪಿಯಾದ ಶ್ರೀವಿಷ್ಣುವನ್ನು ಸಂಪೂರ್ಣ ತಿಳಿಯಲಿಲ್ಲ. (ಇದರಿಂದ ರುದ್ರರಿಗೆ ಅಜ್ಞಾನವುಕ್ತವಾಯ್ತು) (5) (ಶಿಶ್ನಾಭಿಮಾನಿಗಳಾದ ರುದ್ರರನ್ನೂ ಸಂಹರಿಸುವ ಶ್ರೀವಿಷ್ಣುವು ಸಾಮರ್ಥ್ಯದಿಂದ ಸರ್ವರನ್ನು ತಿರಸ್ಕರಿಸಿ ಸರ್ವರಿಗೂ ಅಧಿಪತಿಯಾದನು.) ಇದು ಮೊದಲಾದ ಶ್ರುತಿಗಳಲ್ಲಿ ರುದ್ರನಿಗೆ ಪರಾಧೀನ ಪದಪ್ರಾಪ್ತ್ಯಾದಿರೂಪಗಳಾದ ಬಹುದೋಷಗಳು ಹೇಳಲ್ಪಟ್ಟಿವೆ. (೬) (1) **ಅಹಂ ಸುವೇ ಪಿತರಮಸ್ಯ ಮೂರ್ಧನ್ ಮಮ ಯೋನಿರಪ್ಸ್ವಂತಃ ಸಮುದ್ರೇ। ತತೋ ವಿತಿಷ್ಠೇ ಭುವನಾನು ವಿಶ್ವೋತಾ ಮೂಂ ದ್ಯಾಂ ವರ್ಷ್ಮಣೋಪಸ್ಪೃಶಾಮಿ।** (ಋ.೮.೭.೧೧.)(೩)**ಪರೋ ದಿವಾ ಪರ ಏನಾ ಪೃಥಿವ್ಯೈತಾವತೀ ಮಹಿನಾ ಸಂಬಭೂವ।** ((1) ಲಕ್ಷ್ಮೀಯಾದ ನಾನು ಜಗತ್ಸರ್ಜಕನಾದ ಚತುರ್ಮುಖನನ್ನು ರುದ್ರಾದಿಗಳಿಗಿಂತ ಉತ್ಕೃಷ್ಟನನ್ನಾಗಿ

ಹುಟ್ಟಿಸುತ್ತೇನೆ. ಯಾವ ಕಾರಣದಿಂದ ನಾನು ಅಂತಹ ಪರಮಾತ್ಮನಿಂದ ಹುಟ್ಟಿರುವೆನೋ ಆದಕಾರಣ ಅಂತಹ ನನಗೂ ಸ್ಥಿತ್ಯಾದಿಗಳಿಗೆ ಕಾರಣನಾದ ಶ್ರೀವಿಷ್ಣುವು ಸಮುದ್ರೋದಕದ ಮಧ್ಯದಲ್ಲಿ ಮಲಗಿರುತ್ತಾನೆ. ಅನಂತರ ನಾನು ಸಮಸ್ತ ಲೋಕಗಳನ್ನೂ ಸ್ವರ್ಗಲೋಕವನ್ನೂ ಬಲದಿಂದ ವಶೀಕರಿಸಿಕೊಳ್ಳುತ್ತೇನೆ. ಶರೀರದಿಂದ ವ್ಯಾಪಿಸುತ್ತೇನೆ. (2) ಯಾವ ವಿಷ್ಣುವು ಸ್ವರ್ಗಲೋಕದಿಂದಲೂ ಈ ಪೃಥಿವಿಗಿಂತಲೂ ಮೀರಿರುವನೋ ಅಂತಹ ಶ್ರೀವಿಷ್ಣುವಿನ ಪ್ರಸಾದದಿಂದ ನಾನು ಮಹಿಮೆಯಿಂದ ಬ್ರಹ್ಮರುದ್ರಾದಿಗಳನ್ನು ಜನಿಸುವ ವಿಷಯದಲ್ಲಿ ಸಾಮರ್ಥ್ಯಯುಕ್ತಳಾಗಿ ಆಗಿರುವೆನು,) ಇತ್ಯಾದಿ ಶ್ರುತಿಗಳಲ್ಲಿ ಲಕ್ಷ್ಮೀದೇವಿಯೂ ಕೂಡ ಭಗವಂತನನ್ನು ಆಶ್ರಯಿಸಿರುತ್ತಾಳೆಂದು **ಅಹಂ ರುದ್ರೇಭಿಃ** ಎಂಬ ಸೂಕ್ತದಲ್ಲಿಯೇ ಬಹುಧಾ ಸ್ಫುಟವಾಗಿ ಹೇಳಲ್ಪಟ್ಟದೆ. (ಆದ ಕಾರಣ ಆ ಲಕ್ಷ್ಮಿಯೂ ಕೂಡ ಶ್ರೀಹರಿಗೆ ಸಮಾನಳಲ್ಲ.) ॥ ೧೯ ॥

ಅವ ॥ ಹೀಗೆ ಶ್ರೀವಿಷ್ಣುವಿಗೆ ಸರ್ವೋತ್ತಮತ್ವವನ್ನು, ಲಕ್ಷ್ಮ್ಯಾದಿಗಳಿಗೆ ಶ್ರೀವಿಷ್ಣುವಿಗಿಂತ ಅಧಮತ್ವವನ್ನೂ ಸಾಧಿಸಿ ಲಕ್ಷ್ಮೀದೇವಿಗೆ ಬ್ರಹ್ಮಾದಿಗಳಿಗಿಂತ ಉತ್ತಮತ್ವವನ್ನು ಸಾಧಿಸುತ್ತಾರೆ.

ಭಾ ॥ (೧) ತದಾಶ್ರಯತ್ವಮನ್ಯೇಷಾಮಪಿ ತತ್ರೈವ ನಿಶ್ಚಯಾತ್ ॥ (೨) ಬ್ರಹ್ಮೈವಾಗ್ರ ಇತಿ ಹ್ಯುಕ್ತ್ವಾ ರುದ್ರಾದೀನಾಂ ತತೋ ಜನಿಃ । ಉಕ್ತಾ (೩) ಜಾತಾನಿ ವಿಶ್ವಾನಿ ಸ ಪರ್ಯಭವದಿತ್ಯಪಿ ॥ (೪) ಯಸ್ಯ ಛಾಯಾಮೃತಂ ಮೃತ್ಯುರಿತಿಚಾದರತೋಽಬ್ರವೀತ್ ॥ ೨೦ ॥

ಅ ॥(೧) ಬ್ರಹ್ಮರುದ್ರಾದಿ ದೇವತೆಗಳೂ ಕೂಡ ಲಕ್ಷ್ಮೀದೇವಿಯನ್ನು ಆಶ್ರಯಿಸಿಕೊಂಡಿದ್ದಾರೆಂದು **ಅಹಂ ರುದ್ರೇಭಿಃ** ಎನ್ನುವ ಸೂಕ್ತದಲ್ಲಿಯೇ ಸ್ಪಷ್ಟವಾಗಿ ಹೇಳಿದೆ. (೨) (ಬ್ರಹ್ಮನಿಗೆ ರುದ್ರಾದಿಗಳಿಗಿಂತ ಉತ್ತಮತ್ವವನ್ನು ಸಾಧಿಸುತ್ತಾರೆ.) **ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ । ಸ ದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾ ವಿಧೇಮ ॥** (ಋ ಅ. ೭. ೩.) ಚತುರ್ಮುಖನೊಬ್ಬನೇ ಜಗತ್ತು ಹುಟ್ಟುವುದಕ್ಕಿಂತ ಮೊದಲು ಹುಟ್ಟಿ ಭಗವದ್ಭಜನಾದಿಗಳಿಂದ ಚೆನ್ನಾಗಿದ್ದನು. ಹುಟ್ಟಿದ ವಸ್ತುಗಳಿಗೆ ಅಧಿಪತಿಯಾಗಿದ್ದನು. ಆತನು ಪೃಥಿವಿಯನ್ನು ಸ್ವರ್ಗಾದಿಗಳನ್ನು ಧರಿಸಿಕೊಂಡಿದ್ದಾನೆ. ಆದಕಾರಣ ಆ ಬ್ರಹ್ಮದೇವರಿಗಾಗಿ ಹವಿಸ್ಸನ್ನು ಕೊಟ್ಟೆವು.) ಎಂಬ ಸೂಕ್ತದಲ್ಲಿ ಚತುರ್ಮುಖನಿಗೆ ಎಲ್ಲರಿಗಿಂತ ಮೊದಲು ಉತ್ಪತ್ತಿಯನ್ನು ಹೇಳಿ (**ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ । ಪ್ರಶಿಷಂ ಯಸ್ಯ ದೇವಾಃ** ಋ. ಅ. ೭. ೩.) ಯಾವ ಚತುರ್ಮುಖನು ತನ್ನ ಶಿಷ್ಯರಿಗಾಗಿ ಶ್ರೀ ಪರಮಾತ್ಮನನ್ನುಪದೇಶಿಸಿರುವನೋ, ಬಲದೇವತೆಯಾದ ಶ್ರೀ ವಾಯುವಿಗೂ ಉಪದೇಶಕನೋ, ವಿಶ್ವೇದೇವತೆಗಳು ಯಾವ ಚತುರ್ಮುಖನಿಂದ ಉತ್ಪತ್ತಿಯನ್ನು ಹೊಂದುತ್ತಾರೋ, ಹಾಗೆಯೇ **ಮಾ ನೋ ಹಿಂಸೀಜ್ಜನಿತಾ ಯಃ ಪೃಥಿವ್ಯಾ ಯೋ ವಾ ದಿವಂ ಸತ್ಯಧರ್ಮಾ ಜಜಾನ । ಯಶ್ಚಾಪಶ್ಚಂದ್ರಾ ಬೃಹತೀರ್ಜಜಾನ** (ಋ. ಅ. ೭. ೬.) ಯಾವ ಚತುರ್ಮುಖನು ನಮ್ಮನ್ನು ಕೊಲ್ಲಲಿಲ್ಲವೋ, ಪೃಥಿವಿಗೆ ಉತ್ಪಾದಕನೋ, ಸತ್ಯಧರ್ಮವುಳ್ಳವನೋ, ಸ್ವರ್ಗಾಭಿಮಾನಿದೇವತೆಗಳನ್ನು ಕರ್ಮಾಭಿಮಾನಿ ದೇವತೆಗಳನ್ನು ರುದ್ರ ಗರುಡ ಶೇಷ ಮೊದಲಾದ ಶ್ರೇಷ್ಠ ದೇವತಗಳನ್ನು ಹುಟ್ಟಿಸಿರುವನೋ) ಇತ್ಯಾದಿ ಶ್ರುತಿಗಳಿಂದ ರುದ್ರಾದಿ ದೇವತೆಗಳಿಗೆ ಚತುರ್ಮುಖನಿಂದ ಉತ್ಪತ್ತಿಯು ಹೇಳಲ್ಪಟ್ಟಿದೆ. (2) **ವಿಶ್ವಾಜಾತಾನಿ ಪರಿತಾಬಭೂವ**– (ಋ. ಅ. ೭. ೬.) ಎನ್ನುವ ಶ್ರುತಿಯಲ್ಲಿ ಹುಟ್ಟಿದ ರುದ್ರಾದಿಗಳು ಚತುರ್ಮುಖನ ಅಧೀನದಲ್ಲಿಯೇ ಇರುತ್ತಾರೆಂದೂ ಹೇಳಿದೆ. (೪) ಜಗತ್ಪಾಲನಾರ್ಥವಾಗಿ ಅಮೃತ ಪ್ರಾಶನ ಮಾಡಿರುವ ಇಂದ್ರಾದಿ ದೇವತೆಗಳ ಸಮುದಾಯವೂ ಸಂಹಾರಕನಾದ ರುದ್ರನೂ ಯಾವ ಚತುರ್ಮುಖನಿಗೆ ಪ್ರತಿಬಿಂಬ ರೂಪನೋ ಎನ್ನುವ ಶ್ರುತಿಯಲ್ಲಿ ಜಗತ್ಪಾಲಕರಾದ ಇಂದ್ರಾದಿ ದೇವತೆಗಳೂ ಸಂಹಾರಕರಾದ ರುದ್ರಾದಿಗಳೂ ಚತುರ್ಮುಖನ ಪ್ರತಿಬಿಂಬರೆಂದು ಅತ್ಯಾದರದಿಂದ ಹೇಳಿದೆ. ॥ ೨೦ ॥

ಅವ || ವಾಯುದೇವರು ವಿಷ್ಣ್ವಾದಿಗಳಿಂದ ಅವರ(ಕೆಳಗಿನವ)ರೆಂದೂ, ರುದ್ರಾದಿಗಳಿಂದ ಉತ್ತಮರೆಂದೂ ಸಾಧಿಸುತ್ತಾರೆ.

ಭಾ || (೧) ಅನಂತಾದವರೇಶಾನಾ ತಸ್ಯಾಃ ಪ್ರಾಣಸ್ತತಶ್ಚ ವಾಕ್ । ತಸ್ಯಾ! ರುದ್ರ ಉಮಾ ತಸ್ಮಾದಿಂದ್ರಸ್ತಸ್ಮಾಸ್ತತೋಽಪರೇ ॥ ಸೌಪರ್ಣ ಶ್ರುತಿರಿತ್ಯಾಹ (೨) ಸಪ್ತಾಕ್ಷಿತಯ ಇತ್ಯಪಿ ॥ (೩) ವಾಯುರಸ್ಮಾ ಉಪಾಮಂಥತ್ (೪)ವಿಶ್ವ ದೇವಾಯ ವಾಯವೇ । (೫)ವಿಶ್ವೈರ್ದೇವೈಃ ಚ ಇತ್ಯಾದ್ಯಾಃ ಪ್ರಮಾ ಅತ್ರಾಪರಾ ಅಪಿ || ೨೧ ||

ಅ || (೧) ಶ್ರೀ ನಾರಾಯಣನಿಂದ ಲಕ್ಷ್ಮೀದೇವಿಯು ಅವರಳು. ಶ್ರೀ ನಾರಾಯಣ ಲಕ್ಷ್ಮೀದೇವಿಯರಿಗಿಂತ ಮುಖ್ಯಪ್ರಾಣನು ಅವರನು ಮುಖ್ಯಪ್ರಾಣನಿಗಿಂತ ಸರಸ್ವತೀ ಭಾರತೀಯರು ಅವರರು. ಅವರಿಗಿಂತ ರುದ್ರನೂ ರುದ್ರನಿಗಿಂತ ಪಾರ್ವತಿಯೂ, ಪಾರ್ವತಿಗಿಂತ ಇಂದ್ರನೂ, ಇಂದ್ರನಿಗಿಂತ ಇತರರೂ ಅವರರು. ಹೀಗೆ ಸೌಪರ್ಣಶ್ರುತಿಯು ವಾಯುವಿಗೆ ವಿಷ್ಣುಲಕ್ಷ್ಮಿಯವರಿಂದ ಅವರತ್ವಾದಿಗಳನ್ನು ಹೇಳಿದೆ. (೨) **ತಮೇತಾಃ ಸಪ್ತಾಕ್ಷಿತಯ ಉಪತಿಷ್ಠಂತೇ ತದ್ಯಾ ಇಮಾ ಅಕ್ಷಂಲ್ಲೋಹಿನ್ಯೋ ರಾಜಯಸ್ತಾಭಿರೇನಂ ರುದ್ರೋಽನ್ವಾಯತ್ತಃ** ಬಲ ಕಣ್ಣಿಗೆ ನಿಯಾಮಕನಾಗಿರುವ ಮುಖ್ಯಪ್ರಾಣನನ್ನು ಕ್ಷೀಣವಾಗದ ಜ್ಞಾನ ಮನಸ್ಸುಗಳುಳ್ಳ ಸದಾಶಿವರುದ್ರ, ಪರ್ಜನ್ಯ, ಆದಿತ್ಯ, ಅಗ್ನಿ, ಇಂದ್ರ, ಪೃಥಿವೀ, ದ್ಯೋರೂಪರಾದ ೭ಮಂದಿ ದೇವತೆಗಳು ಸೇವಿಸುತ್ತಿರುತ್ತಾರೆ. ಆದರಲ್ಲಿ ಕಣ್ಣಿನಲ್ಲಿ ಕೆಂಪಾದ ಯಾವ ರೇಖೆಗಳು ಇರುತ್ತಾವೋ, ಅವುಗಳ ಅಧಿಷ್ಠಾನದಿಂದ ರುದ್ರನು ಮುಖ್ಯಪ್ರಾಣನ ಅಧೀನನಾಗಿರುತ್ತಾನೆ. (೩) **ವಾಯುರಸ್ಮಾ ಉಪಾಮಂಥತ್ಪಿನಷ್ಟಿ ಸ್ಮಾಕುನನ್ನಮಾ । ಕೇಶೀ ವಿಷಸ್ಯ ಪಾತ್ರೇಣ ಯದ್ರುದ್ರೇಣಾಪಿಬತ್ಸಹ॥** ಪಾಪ ಕರ್ಮದಿಂದಲೇ ಸಂತೋಷಗೊಳ್ಳುವ ದೈತ್ಯಾದಿಗಳನ್ನು ಬಗ್ಗಿಸುವ (ಅಥವಾ ಕುತ್ಸಿತರನ್ನು ಸಂಹರಿಸುವ) ಪ್ರಶಸ್ತಕೇಶಗಳುಳ್ಳ ವಾಯುದೇವರು ಯಾವಾಗ ರುದ್ರನಿಂದ ಕೂಡಿಕೊಂಡು ಪಾತ್ರದಿಂದ ವಿಷವನ್ನು ಕುಡಿದಿರುವರೋ ಆಗ ರುದ್ರನಿಗೆ ಅನುಗ್ರಹಿಸುವ ಇಚ್ಛೆಯಿಂದ ಆ ವಿಷವನ್ನು ಮಥನಮಾಡಿದನು. ಮತ್ತೂ ಚೆನ್ನಾಗಿ ಚೂರ್ಣೀಕರಿಸಿದನು. (ಅಂತೂ ವಾಯುದೇವರು ತಾನು ಕುಡಿದು ವಿಷವನ್ನು ಮಥಿಸಿ ರುದ್ರನಿಗೆ ಕೊಟ್ಟರು.)(೪) **ಪೂಷಣ್ವತೇ ಮರುತ್ವತೇ ವಿಶ್ವೇದೇವಾಯ ವಾಯವೇ ।** ಪೂಷಾಖ್ಯಸೂರ್ಯನು ಸೇವಕನಾಗಿ ಉಳ್ಳವನು, ಅಹಂಕಾರಿಕ ಪ್ರಾಣಾದಿಮರುತುಗಳು ಸೇವಕರಾಗಿಉಳ್ಳವನು, ರುದ್ರಾದಿ ದೇವತೆಗಳಿಗೆ ಅಧಿಪತಿಯು, ಇಂತಹವಾಯುವಿಗೆ ನಮಸ್ಕಾರವು.(೫) (1)**ವಿಶ್ವೈರ್ದೇವೈಃ ಸಃ** (2) **ವಿಶ್ವೈರ್ದೇವೈಃ ಪಿತೃಭಿರ್ಗುಪ್ತಮನ್ನಂ**(1)ಆ ವಾಯುವು ರುದ್ರಾದಿ ದೇವತೆಗಳಿಂದ ಆಶ್ರಿತನಾಗಿರುತ್ತಾನೆ. (2) ಅನ್ನಾಭಿಮಾನಿಯಾದ ಮುಖ್ಯಪ್ರಾಣನು ರುದ್ರಾದಿ ದೇವತೆಗಳಿಂದಲೂ ಪಿತೃದೇವತೆಗಳಿಂದಲೂ ರಕ್ಷಿಸಲ್ಪಟ್ಟಿದ್ದಾನೆ. (ಅಂದರೆ ರುದ್ರಾದಿಗಳು ಮುಖ್ಯಪ್ರಾಣನಿಗೆ ಪರಿವಾರಭೂತರಾಗಿರುತ್ತಾರೆ ಇದು ಮೊದಲಾದ ಪ್ರಮಾಣಗಳೂ, ಬೇರೆ ಪ್ರಮಾಣಗಳೂ ಕೂಡ ವಾಯುದೇವರು ರುದ್ರಾದಿಗಳಿಗಿಂತ ಉತ್ತಮರೆಂದು ಪ್ರತಿಪಾದಿಸುತ್ತವೆ. || ೨೧ ||

ಅವ || ವಾಯುದೇವರು ಇಂದ್ರದೇವರ ಪರಿವಾರರಾದುದರಿಂದ ಇಂದ್ರದೇವರಿಗಿಂತ ಉತ್ತಮರೆನ್ನುವುದು ಹೇಗೆ? ಎಂದರೆ—

ಭಾ || (೧) ನಾರಾಯಣೋಽದಿತಿರ್ವಾಯುರ್ವಾಣೀ ರುದ್ರ ಉಮಾ ವಿಭುಃ । ಇತರೇ ಚ ಕ್ರಮಾದ್ಧೀನಾಃ ಶತಾಂಶಾದ್ವಾಯುತೋಽವರಾಃ ॥ ಇತಿಬರ್ಕ(ಟ್ಕ) ಶ್ರುತಿಶ್ಚಾಹ (೨) ಶಕ್ರಾತ್ ಸಪ್ತಾಕ್ಷಿತಿಶ್ರುತಿಃ । (೩) ಅಯಂತ ಏಮಿ ತನ್ವೇತಿ ಪೂರ್ವಾ ಅನ್ಯಾ ಅಪಿ ಸ್ಫುಟಂ । ವಾಯೋರಾಧಿಕ್ಯಮಪ್ಯಾಹುಃ (೪) ಇಂದ್ರಂ ಸೋಮಂ ಹುತಾಶನಂ ।

ಸೂರ್ಯಂ ರುದ್ರಮಿಮಾನ್ ಪಂಚ ದೇವಾನೇಕೋ ಮಹಾತ್ಮನಃ । ಸೃಜತ್ಯತ್ತಿ ಮಹಾನ್ ಪ್ರಾಣ ಇತಿಚಾಹ ತುರಶ್ರುತಿಃ ॥ ೨೨ ॥

ಅ ॥ (೧) ಶ್ರೀ ನಾರಾಯಣನು, ಅಖಂಡಿತಳಾದ (ದೇಹಾದಿಗಳಿಗೂ ನಾಶವಿಲ್ಲದಿರುವ) ಲಕ್ಷ್ಮೀದೇವಿಯು, ವಾಯುವು, ಸರಸ್ವತಿಯು, ರುದ್ರನು, ಪಾರ್ವತಿಯು, ಇಂದ್ರನು, ಇತರರೂ ಕೂಡ ಕ್ರಮವಾಗಿ ಕಡಿಮೆ ಕಡಿಮೆ ಗುಣಾದಿಗಳುಳ್ಳವರು. ವಾಯುದೇವರಿಗಿಂತ ೧೦೦-೧೦೦ ಅಂಶಕ್ಕಿಂತ ಅವರರು.(ಅಂದರೆ ವಾಯುದೇವರಿಂದ ಅವರರಾದ ಯಾರು ಸರಸ್ವತ್ಯಾದಿಗಳೋ,ಅವರು ಕ್ರಮದಿಂದ ೧೦೦-೧೦೦ಅಂಶ ಗುಣ ಕಡಿಮೆಯುಳ್ಳವರು, ಎಂಬ ವಚನದಿಂದ ವಾಯುವು ಲಕ್ಷ್ಮೀದೇವಿಗಿಂತ ಕೋಟ್ಯಂಶ ಗುಣ ಕಡಿಮೆಯುಳ್ಳವನು. ಲಕ್ಷ್ಮೀದೇವಿಯು ಶ್ರೀನಾರಾಯಣನಿಗಿಂತ ಅನಂತಾನಂತ ಗುಣ ಕಡಿಮೆಯುಳ್ಳವಳು, ಎಂದು ಸೂಚಿತವಾಯ್ತು.) ಎಂದು ಬರ್ಕ ಶ್ರುತಿಯು ಹೇಳುತ್ತದೆ. (೨) **ತಮೇತಾಃ ಸಪ್ತಾತ್ಕ್ಷಿತಯಃ ಉಪತಿಷ್ಠಂತೇ । ಯಚ್ಛುಕ್ಲಂ ತೇನೇಂದ್ರಃ ಅನ್ವಾಯತ್ತಃ ।** ರುದ್ರಾದಿ ೭ ಮಂದಿ ದೇವತೆಗಳು ಮುಖ್ಯಪ್ರಾಣನನ್ನು ಆಶ್ರಯಿಸಿರುತ್ತಾರೆ. ಕಣ್ಣಿನಲ್ಲಿ ಯಾವುದು ಶುಕ್ಲರೂಪವಿದೆಯೋ,ಅದರಿಂದ ಇಂದ್ರನು ವಾಯುವನ್ನುಆಶ್ರಯಿಸುತ್ತಿರುತ್ತಾನೆ.(ಅಂದರೆ ವಾಯುವಿನ ಅಧೀನನು.) ಎಂಬ ಶ್ರುತಿಯು ಇಂದ್ರನಿಂದ ವಾಯುವಿಗೆ ಆಧಿಕ್ಯವನ್ನು (ಉತ್ತಮತ್ವವನ್ನು) ಹೇಳುತ್ತದೆ. (೩) **ಅಯಂತ ಏಮಿ ತನ್ವಾ ಪುರಸ್ತಾದ್ವಿಶ್ವೇದೇವಾ ಅಭಿಮಾಯಂತಿ ಪಶ್ಚಾತ್ । ಯದಾ ಮಹ್ಯಂ ದೀಧರೋ ಭಾಗಮಿಂದ್ರಾದಿನ್ಮಯಾಕೃಣವೋ ವೀರ್ಯಾಣಿ=** (ಯಾವುದೋ ಒಂದು ಯುದ್ಧ ಕಾಲದಲ್ಲಿ ಇಂದ್ರನೊಡನೆ ವಾಯುದೇವರ ವಚನವು.) ಎಲೋ ಇಂದ್ರನೇ ಈ ನಾನು ಆಯುಧಾದಿಗಳ ಅಪೇಕ್ಷೆಯಿಲ್ಲದೇನೇ ಶರೀರದಿಂದ ನಿನ್ನ ಇದಿರು ರಣಭೂಮಿಯನ್ನು ಪ್ರವೇಶಿಸುವೆನು. ನೀನೇ ಮೊದಲಾದ ಎಲ್ಲಾ ದೇವತೆಗಳು ನನ್ನ ಅನಂತರದಲ್ಲಿ ಬರಲಿ. ನೀನಾದರೂ ಯಾವ ಕಾರಣದಿಂದ ನನ್ನ ಪ್ರೇರಣೆಯಿಂದಲೇ ನನ್ನ ಉದ್ದಿಶ್ಯ ಯಜ್ಞಭಾಗವನ್ನು ಧರಿಸಿರುತ್ತೀಯೋ,(ಅಂದರೆ ನನ್ನನ್ನು ಪೂಜಿಸಿರುತ್ತೀಯೋ)ಆದುದರಿಂದಲೇ ನಾವಿಬ್ಬರೂ ಒಟ್ಟಿಗೇನೇ ಸಾಮರ್ಥ್ಯಗಳನ್ನು ತೋರಿಸುವ, ಎನ್ನುವ ಶ್ರುತಿಯೂ, ಇದೇ ಮೊದಲಾದ ಬೇರೆ ಶ್ರುತಿಗಳೂ ಕೂಡ ಇಂದ್ರನಿಗಿಂತಲೂ ಸ್ಪಷ್ಟವಾಗಿ ವಾಯುದೇವರಿಗೆ ಉತ್ತಮತ್ವವನ್ನು ಹೇಳುತ್ತವೆ. (೪) ಮಹತ್ತತ್ವಾಭಿಮಾನಿಯಾದ ಪ್ರಧಾನನಾದ ಮುಖ್ಯಪ್ರಾಣನು ಮಹಾನುಭಾವರಾದ ಇಂದ್ರ, ಚಂದ್ರ, ಅಗ್ನಿ, ಸೂರ್ಯ, ರುದ್ರ, ಈ ೫ ಮಂದಿ ದೇವತೆಗಳನ್ನು ಸೃಷ್ಟಿಸುತ್ತಾನೆ. ಸಂಹರಿಸುತ್ತಾನೆ, ಎಂಬ ತುರಶ್ರುತಿಯೂ ಕೂಡ ವಾಯುದೇವರಿಗೆ ದೇವೇಂದ್ರನಿಗಿಂತ ಉತ್ತಮತ್ವವನ್ನು ಹೇಳುತ್ತದೆ. ॥ ೨೨ ॥

ಅವ ॥ ಶ್ರೀ ವಿಷ್ಣುವು ಉಪೇಂದ್ರ ರೂಪದಿಂದ ಇಂದ್ರನ ಭೃತ್ಯನಾದುದರಿಂದ ಶ್ರೀವಿಷ್ಣುವಿಗೆ ಇಂದ್ರನಿಗಿಂತ ಆಧಿಕ್ಯವು ಹೇಗೆ? ಎಂದರೆ —

ಭಾ ॥ (೧) ವಿಹಿಸೋತೋರಸೃಕ್ಷತ ನೇಂದ್ರಂ ದೇವಮಮಂಸತ ॥ (೨) ನ ಯಸ್ಯೇಂದ್ರ ಇತಿ ಹ್ಯಾಹ ವಿಷ್ಣೋರಿಂದ್ರಸ್ಯ ಹೀನತಾಂ ॥ ೨೩ ॥

ಅ॥ (೧) **ವಿಹಿಸೋತೋರಸೃಕ್ಷತ ನೇಂದ್ರಂ ದೇವಮಮಂಸತ । ಯತ್ರಾಮದದ್ವೃಷಾಕಪಿರರ್ಯಃ ಪುಷ್ಟೇಷು ಮತ್ಸಖಾ ವಿಶ್ವಸ್ಮಾದಿಂದ್ರ ಉತ್ತರಃ ॥** (ಋ. ಅಷ್ಟ. ೮. ಅ ೪ ವ. ೧) ಯಾವ ಯಜ್ಞಗಳಲ್ಲಿ ಪೂರ್ಣರಾದ ವಾಯ್ವಾದಿಗಳಿಗೂ ಸ್ವಾಮಿಯಾದ, ನನಗೆ ಸಖಿಯಾದ ಷಡ್ಗುಣ ಪರಿಪೂರ್ಣನೂ, ನಿರವಧಿಕ ಸುಖವುಳ್ಳವನೂ ಆದುದರಿಂದ ವೃಷಾಕಪಿಯೆನಿಸಿಕೊಂಡ ಶ್ರೀ ವಿಷ್ಣುವು ಸುಖಿಯಾಗಿಯೇ ಇರುವನೋ, ಆದುದರಿಂದಲೇ ಚೇತನಾಚೇತನ ಜಗತ್ತಿನಿಂದ ಸರ್ವೋತ್ಕೃಷ್ಟನೂ, ಮುಖ್ಯತಃಇಂದ್ರಶಬ್ದವಾಚ್ಯನೂ ಆಗಿರುತ್ತಾನೋ ಅಂತಹ ಯಜ್ಞಗಳಲ್ಲಿ ಸೋಮರಸವನ್ನು ಹಿಂಡುವುದಕ್ಕಾಗಿ ಅಥವಾ ಸೋಮವನ್ನು ಹೋಮಿಸು

ವುದಕ್ಕಾಗಿ ಸಮರ್ಥರಾದ ಋತ್ವಿಜರು ಪ್ರೇರಿತರಾದರು. ಆ ಋತ್ವಿಜರು ಇಂದ್ರ ದೇವರನ್ನು ದ್ಯೋತನಾದಿ (ಪ್ರಕಾಶಾದಿ) ಗುಣಗಳಿಂದ ಪರಿಪೂರ್ಣನನ್ನಾಗಿ ತಿಳಿಯಲಿಲ್ಲವಷ್ಟೇ. (೨) **ನ ಯಸ್ಯೇಂದ್ರೋ ವರುಣೋ ನ ಮಿತ್ರೋ ವ್ರತಮರ್ಯಮಾ ನ ಮಿನಂತಿ ರುದ್ರಃ ॥ ನಾರಾತಯಃ** (ಋ. ಅ. ೨ ಅಧ್ಯಾ ೮ ವ. ೩) ಯಾವ ಶ್ರೀಪರಮಾತ್ಮನ ಸತ್ಯಜಗತ್ಸರ್ಜನಾದಿ ರೂಪವಾದ ಕರ್ಮವನ್ನು ಇಂದ್ರನು ವರುಣನು ಸೂರ್ಯನು ರುದ್ರನೂ ಶತ್ರುಗಳೂ ಯಾರೂ ಕೂಡ ಸಂಪೂರ್ಣ ತಿಳಿಯಲಾರರು. ಈ ೨ಶ್ರುತಿಗಳೂ ಶ್ರೀ ವಿಷ್ಣುವಿನಿಂದ ಇಂದ್ರನಿಗೆ ಅವರತ್ವವನ್ನು ಹೇಳುತ್ತವೆ. ॥ ೨೩ ॥

ಅವ॥ ಈ ೨ಶ್ರುತಿಗಳಲ್ಲಿ ವಿಷ್ಣು ವಾಚಕವಾದ ಪದವು ಸ್ಪಷ್ಟವಾಗಿಲ್ಲದಿರುವುದರಿಂದ ಶ್ರುತ್ಯಂತರವನ್ನು ಹೇಳುತ್ತಾರೆ.

ಭಾ॥ (೧) ವೇಧಾ ಅಜಿನ್ವದಿತ್ಯಾದಿ ವಚನಂ ವಿಷ್ಣುನಾಮತಃ । ಆನಂದಶ್ರುತಿರಸ್ಯಸ್ಯ ಜೀವತಾಮೇವ ದರ್ಶಯೇತ್ ॥ (೩) ಅಹ ಸೂರ್ಯಾದಪೀಂದ್ರಸ್ಯ ವಾಯೋರ್ವಿಷ್ಣೋರಪೀಶತಾಂ । ಯಃ ಸೂರ್ಯಂ ಯ ಉಷಸಂ (೪) ವ್ರಿಯಂತೇ ಪಂಚ ದೇವತಾಃ । (೫) ಚಕ್ಷುಷಾ ದ್ಯೌಶ್ಚಾದಿತ್ಯಶ್ಚ (೬) ಚಕ್ಷೋಃಸೂರ್ಯೋಽಜಾಯತ । (೭) ಯಮಾದಿತ್ಯೋ ನ ವೇದೇತಿ ಪೂರ್ವಾ ಶ್ರುತಿರಥಾಪರಾಃ ॥ ೨೪ ॥

ಅ ॥ (೧) **ಆಯೋ ವಿವಾಯ ಸಚಥಾಯ ದೈವ್ಯ ಇಂದ್ರಾಯ ವಿಷ್ಣುಃ ಸುಕೃತೇ ಸುಕೃತ್ತರಃ । ವೇಧಾ ಅಜಿನ್ವತ್ರಿಷಧಸ್ಥ ಆರ್ಯಮೃತಸ್ಯ ಭಾಗೇ ಯಜಮಾನಮಾಭಜತ್ ॥** (ಋ.ಅಷ್ಟ೨-೨-೨೬) ಸತ್ಕರ್ಮಕಾರಿಯಾದ ಇಂದ್ರನಿಗೆ ಪರಮದೇವತೆಯೂ, ಅತಿಶಯವಾಗಿ ಸತ್ಕರ್ಮಕಾರಿಯೂ, ವಿಶೇಷವಾಗಿ ಧಾರಣಪೋಷಣ ಕರ್ತನೂ, ಶ್ವೇತದ್ವೀಪ ಅನಂತಾಸನ ವೈಕುಂಠಗಳೆಂಬ ೩ ಸ್ಥಾನಗಳಲ್ಲಿರುವವನೂ ಆದ ಶ್ರೀ ವಿಷ್ಣುವು, ವಾಮನಾವತಾರದಲ್ಲಿ ಜ್ಯೇಷ್ಠನಾದ ಅಶ್ವಮೇಧ ಯಜ್ಞಮಾಡಿದ ದೇವೇಂದ್ರನನ್ನು ಸುಖದಿಂದ ಇರುವುದಕ್ಕಾಗಿ ದೈತ್ಯಾದಿಗಳ ಉಪದ್ರವವು ಬಾರದಿರುವಂತೆ ರಕ್ಷಿಸುವುದಕ್ಕಾಗಿ ಸರ್ವದಿಕ್ಕುಗಳಲ್ಲಿ ವ್ಯಾಪಿಸಿದನು. ಮತ್ತು ಇಂದ್ರನು ಸುಖದಿಂದ ಇರುವುದಕ್ಕಾಗಿ ಸುಖ ಸಾಧನಗಳನ್ನುಂಟುಮಾಡಿದನು. ಯಜ್ಞದಭಾಗದಲ್ಲಿ ಸೇವಿಸಿದನು. (ಯಜ್ಞದಲ್ಲಿ ಕೊಟ್ಟ ಹವಿರಾದಿಗಳನ್ನು ಸ್ವೀಕರಿಸಿದನು.) ಎಂದು ವಿಷ್ಣುನಾಮದಿಂದೊಡಗೂಡಿದ ಶ್ರುತಿಯು ಇಂದ್ರನಿಗಿಂತ ಶ್ರೀವಿಷ್ಣುವಿಗೆ ಉತ್ತಮತ್ವವನ್ನು ಸ್ಪಷ್ಟವಾಗಿ ಹೇಳುತ್ತದೆ. (೨) **ತೇ ಯೇ ಶತಮಿಂದ್ರಸ್ಯಾನಂದಾಃ। ಸ ಏಕೋ ಬೃಹಸ್ಪತೇರಾನಂದಃ ॥** (ತೈ. ಉ.) ಇಂದ್ರನ ೧೦೦ ಆನಂದಗಳು ರುದ್ರನಿಗೆ ೧ ಆನಂದವು, ಎಂದು ಜೀವರ ಆನಂದಗಳಿಗೆ ತಾರತಮ್ಯವನ್ನು ಹೇಳತಕ್ಕತೈತ್ತಿರೀಯ ಶ್ರುತಿಯು ಈ ಇಂದ್ರನಿಗೆ ಜೀವತ್ವವನ್ನೇ ತೋರಿಸುತ್ತದೆ.(ಅದರಿಂದ ಇಂದ್ರನು ಶ್ರೀಹರಿಗಿಂತ ಅವರನೆಂದು ಸ್ಪಷ್ಟವಾಗಿ ತಿಳಿಯುತ್ತದೆ. (೩) (ಸೂರ್ಯನು ಸರ್ವೋತ್ತಮನೆಂದು ಕೆಲವರು ಅಂಗೀಕರಿಸಿರುವರು. ಅದಯುಕ್ತವು. ಸೂರ್ಯನಿಗಿಂತ ಇಂದ್ರಾದಿಗಳಿಗೆ ಆಧಿಕ್ಯವಿದೆ ಎಂದು ಸಾಧಿಸುತ್ತಾರೆ.) ಸೂರ್ಯನಿಗಿಂತ ಇಂದ್ರನಿಗೂ ವಾಯುವಿಗೂ ಶ್ರೀವಿಷ್ಣುವಿಗೂ ಉತ್ತಮತ್ವವನ್ನು ಶ್ರುತಿಯು ಹೇಳುತ್ತದೆ. (ಹೇಗೆಂದರೆ–) **ಯಃ ಸೂರ್ಯಂ ಯ ಉಷಸಂ ಜಜಾನ ಯೋ ಅಪಾಂ ನೇತಾ ಸಜನಾಸ ಇಂದ್ರಃ** ಯಾವ ಇಂದ್ರನು ಸೂರ್ಯನನ್ನು ಹುಟ್ಟಿಸಿರುವನೋ,? ಉಷೋದೇವತೆಯನ್ನು ಹುಟ್ಟಿಸಿರುವನೋ ಯಾವನು ಅಹಿದೈತ್ಯನಿಂದ ಜಲಾಭಿಮಾನಿಗಳು ತಡೆಯಲ್ಪಟ್ಟರೂ ಆ ದೈತ್ಯನನ್ನು ಸಂಹರಿಸಿ ಆ ಜಲಾಭಿಮಾನಿಗಳಿಗೆ ಪ್ರವರ್ತಕನೋ, ಅಂತಹ ಇಂದ್ರನು ಜನರನ್ನು ಹುಟ್ಟಿಸಿರುವನು, ಎಂಬ ಶ್ರುತಿಯು ದೇವೇಂದ್ರನಿಗೆ ಸೂರ್ಯನಿಗಿಂತ ಉತ್ತಮತ್ವವನ್ನು ಹೇಳುತ್ತದೆ. (೪) **ಏಷ ಹ ವೈ ಬ್ರಹ್ಮಯೋಽಯಂ ಪವತೇ ತಮೇತಾಃ ಪಂಚದೇವತಾಃ ಪರಿವ್ರಿಯಂತೇ ವಿದ್ಯುದ್ವೃಷ್ಟಿಶ್ಚಂದ್ರಮಾ ಆದಿತ್ಯೋಽಗ್ನಿಃ** ಯಾವ ವಾಯುವು ದೇವಾದಿಗಳಿಗೆ ಜ್ಞಾನೋಪದೇಶಕೊಟ್ಟು ಪವಿತ್ರೀಕರಿಸುತ್ತಾನೋ, ಈ ವಾಯುವೇ ಭಾವಿಚತುರ್ಮುಖನು. ಆ ವಾಯುವಿನಿಂದ ವಿದ್ಯುದಭಿಮಾನಿನಿಯಾದ

ಭಾರತಿಯೂ, ವೃಷ್ಟಿಗೆ ಅಭಿಮಾನಿಯಾದ ಇಂದ್ರನೂ, ಚಂದ್ರನೂ, ಆದಿತ್ಯನೂ, ಅಗ್ನಿಯೂ, ಈ ಪ್ರಕಾರ ಈ ಐದು ಮಂದಿ ದೇವತೆಗಳು ಸಂಹೃತರಾಗುತ್ತಾರೆ, ಎಂಬ ಶ್ರುತಿಯು ವಾಯುವಿಗೆ ಸೂರ್ಯಾದಿಗಳಿಗಿಂತ ಉತ್ತಮತ್ವವನ್ನು ಹೇಳುತ್ತದೆ. (೫) **ಚಕ್ಷುಷಾ ಸೃಷ್ಟೌ ದ್ಯೌಶ್ಚಾಽದಿತ್ಯಶ್ಚ** ದ್ಯುಲೋಕಾಭಿಮಾನಿಯೂ ಸೂರ್ಯನೂ ಕೂಡ ಶ್ರೀವಿಷ್ಣುವಿನ ಕಣ್ಣಿನಿಂದ ಸೃಷ್ಟಿಸಲ್ಪಟ್ಟರು. (೬) ಶ್ರೀವಿಷ್ಣುವಿನ ಕಣ್ಣಿನಿಂದ ಸೂರ್ಯನು ಹುಟ್ಟಿದನು, ಎಂದು ಹೇಳಿದುದರಿಂದಲೂ (೭) ಸೂರ್ಯನು ಯಾವ ಶ್ರೀ ಹರಿಯನ್ನು ತಿಳಿಯುವುದಿಲ್ಲ. ಎಂದು ಸೂರ್ಯನಿಂದ ತಿಳಿಯಲ್ಪಡದಿರುವಿಕೆ, (೮) **ಯ ಆದಿತ್ಯಮಂತರೋ ಯಮಯತಿ,** ಯಾವ ಶ್ರೀ ಹರಿಯು ಆದಿತ್ಯನೊಳಗೆ ಇದ್ದು ಪ್ರೇರೇಪಿಸುತ್ತಾನೋ. (ಎಂದು ಸೂರ್ಯ ನಿಯಾಮಕತ್ವವನ್ನು ಹೇಳಿದೆ. ಇದು ಮೊದಲಾದ ಶ್ರುತಿಗಳು ಸೂರ್ಯನಿಗಿಂತ ಶ್ರೀವಿಷ್ಣುವಿಗೆ ಆಧಿಕ್ಯವನ್ನು ಹೇಳುತ್ತದೆ. ಇಂದ್ರನಿಗೆ ಸೂರ್ಯನಿಗಿಂತ ಆಧಿಕ್ಯ, ವಾಯುವಿಗೆ ಸೂರ್ಯನಿಗಿಂತ ಆಧಿಕ್ಯ, ಶ್ರೀವಿಷ್ಣುವಿಗೆ ಸೂರ್ಯನಿಗಿಂತ ಆಧಿಕ್ಯ, ಈ ಮೂರು ಅರ್ಥಗಳಲ್ಲಿ ಬೇರೆ ಶ್ರುತಿಗಳೂ ಇವೆ. || ೨೪ ||

ಅವ || ಆ ೩ ಅರ್ಥಗಳನ್ನು ಹೇಳತಕ್ಕ ಶ್ರುತಿಗಳನ್ನು ಹೇಳುತ್ತಾರೆ.

ಭಾ || (೧) ವಿಷ್ಣೋರ್ವಾತೋ ಅಜನಿಷ್ಟ ವಾತಾದಿಂದ್ರಸ್ತತೋ ರವಿಃ । ಸೋಮಶ್ಚೇತಿ ಲಯೋಽಪ್ಯೇವಂ ಪೂರ್ವೇ ಪೂರ್ವೇ ಗುಣಾಧಿಕಾಃ || (೨) ವಿಷ್ಣೋಃ ಪ್ರಾಣೋ ಅಜನಿಷ್ಟ ಪ್ರಾಣಾದಿಂದ್ರೋರವಿರ್ವಿಧುಃ । ಲಯೋಽಪ್ಯೇತಾದೃಶಸ್ತೇಷಾಂ ಪೂರ್ವಃ ಪೂರ್ವೋ ಗುಣಾಧಿಕಃ || ತುರಶ್ರುತಿಶ್ಚ ಸೌಪರ್ಣೀ ಪಿಂಗಶ್ರುತಿರಪೀದೃಶೀ || (೩) ಅತಸ್ಸರ್ವಾಧಿಕೋ ವಿಷ್ಣುರ್ನಿರ್ಣೀತಃ ಶ್ರುತಿಸಂಚಯಾತ್ || ೨೫ ||

ಅ || (೧) ಶ್ರೀ ವಿಷ್ಣುವಿನಿಂದ ಮುಖ್ಯಪ್ರಾಣನು ಹುಟ್ಟಿದನು. ಆತನಿಂದ ಇಂದ್ರನೂ, ಇಂದ್ರನಿಂದ ಸೂರ್ಯನೂ, ಚಂದ್ರನೂ ಹುಟ್ಟಿದರು. ಹೀಗೆಯೇ ಲಯವೂ ಕೂಡ. ಮೊದಲು ಮೊದಲಿನವರು ಹೆಚ್ಚು ಹೆಚ್ಚು ಗುಣಗಳುಳ್ಳವರು, ಎಂದು ತುರಶ್ರುತಿಯು. (೨) ಶ್ರೀವಿಷ್ಣುವಿನಿಂದ ಪ್ರಾಣನೂ, ಪ್ರಾಣನಿಂದ ಇಂದ್ರನೂ, ಇಂದ್ರನಿಂದ ಸೂರ್ಯ ಚಂದ್ರರೂ ಹುಟ್ಟಿದರು. ಲಯವೂ ಇಂತಹುದೇ, (ಆದರೆ ಲಯವು ವಿಪರೀತವಾಗಿ ಎಂದು ತಾತ್ಪರ್ಯವು.) ಅವರಲ್ಲಿ ಮೊದಲು ಮೊದಲಿನವರು ಹೆಚ್ಚು ಹೆಚ್ಚು ಗುಣಗಳುಳ್ಳವರು. ಹೀಗೆ ಸೌಪರ್ಣ ಶ್ರುತಿಯು. ಪಿಂಗ ಶ್ರುತಿಯೂ ಈ ರೀತಿಯಾದುದೇ. (ಆದಕಾರಣ ಪ್ರತ್ಯೇಕ ಪಠಿತವಾಗಲಿಲ್ಲ.) (೩) ಆದಕಾರಣ ಶ್ರೀವಿಷ್ಣುವು ಬ್ರಹ್ಮಾದಿಗಳಿಂದೆಲ್ಲಾ ಉತ್ತಮನೆಂದು ಶ್ರುತಿಗಳ ಸಮುದಾಯದಿಂದ ನಿರ್ಣೀತನಾಗಿರುತ್ತಾನೆ. (ಲಕ್ಷ್ಮ್ಯಾದಿಗಳ ತಾರತಮ್ಯವೂ ನಿರ್ಣೀತವಾಯ್ತು.) ತುರ ಶ್ರುತಿ, ಸೌಪರ್ಣೀ ಶ್ರುತಿ, ಪಿಂಗ ಶ್ರುತಿ, ಈ ಮೂರು ಶ್ರುತಿಗಳು.

ವಿ || ಶ್ರೀ ವಿಷ್ಣುವಿಗೆ ವಾಯು ಇಂದ್ರ ಸೂರ್ಯರಿಗಿಂತಲೂ ವಾಯುವಿಗೆ ಇಂದ್ರ ಸೂರ್ಯರಿಗಿಂತಲೂ ಇಂದ್ರನಿಗೆ ಸೂರ್ಯನಿಗಿಂತಲೂ ಆಧಿಕ್ಯ, ಹೀಗೆ ಪ್ರಪ್ರತ್ಯೇಕ ಸರ್ವಾರ್ಥಗಳನ್ನೂ ಪ್ರತಿಪಾದಿಸುತ್ತವೆ. **ವಿಹಿಸೋತೋ** ಇತ್ಯಾದಿಗಳಂತೆ ಒಬ್ಬೊಬ್ಬನಿಗೆ ಒಬ್ಬೊಬ್ಬನಿಂದ ಆಧಿಕ್ಯವು ಹೇಳಲ್ಪಡುವುದಲ್ಲ, ಎಂದು ಸೂಚಿಸುವುದಕ್ಕಾಗಿ **ಅಥಾಪರಾಃ** ಎಂದು **ಪೃಥಕ್** ಹೇಳಿದ್ದು. || ೨೫ ||

ಅವ || ಸೋಮಃ ಪವತೇ ಜನಿತಾ ಮತೀನಾಂ ಜನಿತಾ ದಿವೋ ಜನಿತಾ ಪೃಥಿವ್ಯಾಃ। ಜನಿತಾಽಗ್ನೇರ್ಜನಿತಾ ಸೂರ್ಯಸ್ಯ ಜನಿತೇಂದ್ರಸ್ಯ **ಜನಿತೋತ ವಿಷ್ಣೋಃ** (ಋ. ೭–೪–೬) ಇತ್ಯಾದಿಗಳಲ್ಲಿ ಶ್ರೀ ವಿಷ್ಣುವಿಗೂ ಜನನಾದಿದೋಷಗಳು ಪ್ರತೀತಗಳಾಗಿರುವುದರಿಂದ **ಗುಣಾನ್ವಿಷ್ಣೋಃ ಶ್ರುತಿಃ ಪ್ರಾಹ ನೈವ ದೋಷಾನ್** ಎಂದದ್ದು ಅಯುಕ್ತವು ಎಂದರೆ—

ಭಾ ॥ (೧) ಅತೋ ದೋಷವಚೋ ಯತ್ರ ತದ್ವಾಕ್ಯಮವರಂ ವದೇತ್ ॥ (೨) ನಿರ್ದೋಷತ್ವೈವ ವಿಷ್ಣೋಸ್ತು ಕ್ರಮಾನ್ಮಧ್ಯಗತೇಷ್ವಪಿ॥ (೩) ತ್ರಯೋಽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ । ವಿಷ್ಣೋಸ್ಸಹಸ್ರನಾಮಾಪಿ ನಿರಂತರಶತಾರ್ಥಕಂ ॥ ಇತಿ ಸ್ಕಾಂದ ವಚೋ ಯಸ್ಮಾದರ್ಥಭೇದವ್ಯಪೇಕ್ಷಯಾ। ನಿರ್ದೋಷತ್ವಂ ಹರೇರ್ವಕ್ತಿ ದೋಷಮನ್ಯೇಷ್ವಪಿ ಕ್ರಮಾತ್ ॥ ೨೬ ॥

ಅ ॥ (೧) ಯಾವ ವಾಕ್ಯದಲ್ಲಿ ಶ್ರೀ ವಿಷ್ಣುವಿಗೆ ದೋಷಗಳನ್ನು ಹೇಳುವುದಾಗಿ ತೋರುತ್ತದೋ, ಮತ್ತು ತಮಗಿಂತ ಅವರರ ಸೃಷ್ಟ್ಯಾದಿಕರ್ತೃತ್ವಮೊದಲಾದ ಗುಣಗಳು ಯಾವುವು ಮೊದಲು ಹೇಳಲ್ಪಟ್ಟವೆಯೋ, ಅವುಗಳಿಗಿಂತ ಅಲ್ಪಗುಣಗಳನ್ನು ಹೇಳುವುದಾಗಿ ತೋರುತ್ತದೋ ಆ ವಾಕ್ಯವು ದೋಷವಿರಲು ಸಂಭಾವಿತವಾದ ಯಜ್ಞರೂಪವಾದ ವಸ್ತುವನ್ನು ಹೇಳುತ್ತದೆ.ಶ್ರೀವಿಷ್ಣುವನ್ನು ಹೇಳುವುದಿಲ್ಲ.(ಹಾಗಾದರೆ ಲಕ್ಷ್ಮ್ಯಾ ಮೊದಲಾದವರದ್ದು ಯಾವುದು ಸ್ವರೂಪವು ಹೇಳಿಯದೋ ಅದೂ ಅಯುಕ್ತವು.ಏಕೆಂದರೆ ಕೆಲವರಲ್ಲಿ ಅಧಿಕದೋಷವು ಶ್ರುತವಾಗಿದೆ,ಎಂದರೆ) ಯಾವ ವಾಕ್ಯದಲ್ಲಿ ಲಕ್ಷ್ಮ್ಯಾದಿಗಳಿಗೆ ಅಧಿಕದೋಷಗಳನ್ನು ಹೇಳುವುದಾಗಿಯೂ,ಅವರಲ್ಲಿ ಯಾವ ಗುಣಗಳು ಇರಲು ಯೋಗ್ಯಗಳೋ ಅವುಗಳಿಗಿಂತ ಅಲ್ಪ ಗುಣಗಳನ್ನು ಹೇಳುವುದಾಗಿ ತೋರುತ್ತವೋ, ಆ ವಾಕ್ಯವೂ ದೋಷವಿರಲು ಸಂಭಾವಿತವಾದ ನಿಕೃಷ್ಟವಾದ ಯಜ್ಞರೂಪವಾದ ವಸ್ತುವನ್ನು ಹೇಳುತ್ತದೆ.(೨)(ವಿಷ್ಣುಪಕ್ಷದಲ್ಲಿಯೂ ಲಕ್ಷ್ಮ್ಯಾದಿ ಪಕ್ಷದಲ್ಲಿಯೂ ಹೇಳಿದ ಹೇತುವನ್ನು ತೋರಿಸುತ್ತಾರೆ.)ಯಾವ ಕಾರಣದಿಂದ ಶ್ರೀವಿಷ್ಣುವಿಗೆ ಸರ್ವಥಾ ನಿರ್ದೋಷತ್ವವೂ ಸರ್ವಗುಣ ಪರಿಪೂರ್ತಿಯೂ ಪ್ರಮಾಣಗಳಿಂದ ನಿರ್ಣೀತವಾಗಿದೆಯೋ, ಮಧ್ಯಸ್ಥರಾದ ಲಕ್ಷ್ಮ್ಯಾದಿಗಳಲ್ಲಿಯೂ ತಾರತಮ್ಯ ಕ್ರಮವಾಗಿ ನಿರ್ದೋಷತ್ವವೂ ಗುಣಪೂರ್ತಿಯೂ ಪ್ರಮಾಣಗಳಿಂದ ನಿರ್ಣೀತವಾಗಿದೆಯೋ, ಆದಕಾರಣ ದೋಷವಚನವು ಯಜ್ಞರೂಪ ನಿಕೃಷ್ಟಾರ್ಥವನ್ನು ಹೇಳುತ್ತದೆ. (೩) (ದೋಷಗಳನ್ನು ಹೇಳತಕ್ಕ ವಾಕ್ಯವು ಯಜ್ಞಾದಿಪರವಾದರೆ ವಿಷ್ಣ್ವಾದಿಗಳು ಸಮಸ್ತ ವೇದಾದಿಗಳಿಂದ ವೇದ್ಯರಾಗುತ್ತಾರೆನ್ನುವುದು ಕೂಡದೆ ಹೋಗುವುದು ಎಂದರೆ) ಸಮಸ್ತ ವೇದಗಳಲ್ಲಿ ೩ ಅರ್ಥಗಳು. ಇಡೀ ಭಾರತದಲ್ಲಿ ೧೦ ಅರ್ಥಗಳು. ವಿಷ್ಣು ಸಹಸ್ರ ನಾಮದ ಸಮಸ್ತ ಪದಗಳೂ ೧೦೦, ೧೦೦, ಅರ್ಥವುಳ್ಳವುಗಳು, ಹೀಗೆ ಸ್ಕಾಂದಪುರಾಣವಚನವು ಯಾವ ಕಾರಣದಿಂದ ವೇದಗಳಿಗೆ ಅನೇಕಾರ್ಥಗಳಿವೆ ಎಂದು ಹೇಳುತ್ತದೋ, ಆದಕಾರಣ ಅರ್ಥಭೇದವನ್ನು ಇಟ್ಟುಕೊಂಡು ಯೋಜನಾ ವಿಶೇಷ ವಿವಕ್ಷೆಯಿಂದ ಒಂದೇ ವಾಕ್ಯವು ಶ್ರೀಹರಿಗೆ ನಿರ್ದೋಷತ್ವವನ್ನೂ ಇತರರಲ್ಲಿ ಕ್ರಮವಾಗಿ ದೋಷವನ್ನೂ ಹೇಳುತ್ತದೆ. ಹೀಗೆ ಅಂಗೀಕರಿಸಿದುದರಿಂದ ದೋಷವಿಲ್ಲ.

ವಿ (1) ಅರ್ಥಭೇದವ್ಯಪೇಕ್ಷಾ ಹೇಗೆಂದರೆ **ಜನಿತೋತ ವಿಷ್ಣೋಃ** ಎಂಬಲ್ಲಿ **ಸೋಮಃ ಪವತೇ** ಇತ್ಯಾದಿ ಶ್ರುತಿಯು. ಸೋಮಲತೆಯು ಶ್ರೀ ವಿಷ್ಣುವಿಗೆ ಉತ್ಪಾದಕವು ಎಂದರ್ಥ ಇಟ್ಟುಕೊಂಡರೆ ಶ್ರೀ ವಿಷ್ಣುವಿಗೆ ಉತ್ಪತ್ತಿರೂಪದೋಷವು ತೋರುತ್ತದೆ. ವಿಷ್ಣುವಿಗೆ ದೋಷ ಪ್ರತಿಪಾದಕ ವಚನದಂತೆ ತೋರಿದರೆ ಅನ್ಯಾರ್ಥವನ್ನು ಹೇಳಬೇಕು. ಹೇಗೆಂದರೆ—**ವಿಷ್ಣುರಿತಿ ಯಜ್ಞಸ್ಯ ಯಜಮಾನಸ್ಯ ವಾ ನಾಮ** ಎಂದು ಹೇಳಿದ ಪ್ರಕಾರ.ಸೋಮವು ವಿಷ್ಣು ಅಂದರೆ ಯಜ್ಞವನ್ನು ನಿರ್ವಹಿಸುವುದರಿಂದ ಯಜ್ಞೋತ್ಪಾದಕವು.ಅಥವಾ ಸಂಸ್ಕಾರದ್ವಾರಾ ಯಜಮಾನನನ್ನು ಪುಷ್ಟೀಕರಿಸುತ್ತದೆಂದಂಗೀಕರಿಸಿದರೂ ದೋಷವಿಲ್ಲ.(2)ಅಥವಾ ಜನಿತಾ ಅಂದರೆ ಜನೀ ಪ್ರಾದುರ್ಭಾವೇ ಎಂಬ ಧಾತು ವ್ಯಾಖ್ಯಾನದಿಂದ ಸೋಮವು ಶ್ರೀವಿಷ್ಣುವಿಗೆ ಪ್ರಾದುರ್ಭಾವವನ್ನು ಮಾಡಿಸುವುದು. ಅಂದರೆ ಯಜ್ಞದಲ್ಲಿ ಅಭಿವ್ಯಕ್ತನಾಗುವಂತೆ ಮಾಡಿಸುತ್ತದೆ. ಹೀಗೆ ಇಟ್ಟುಕೊಂಡರು. ಉತ್ಪತ್ತಿ ರೂಪ ದೋಷಪ್ರತಿಪಾದಕವಾಗುವುದಿಲ್ಲ. (3) ಅಥವಾ ಸೋಮಃ=ಉ=ಸರ್ವೋತ್ಕೃಷ್ಟಳಾದ,ಮಾ=ಲಕ್ಷ್ಮೀದೇವಿಯು, ಉಮಾ. ಉಮಯಾ ಸಹಿತಃ=ಶ್ರೀ ಲಕ್ಷ್ಮೀದೇವಿಯಿಂದ ಕೂಡಿರುವ ಶ್ರೀಹರಿಯು ಸೋಮನು, ಎಂಬ ಅರ್ಥವನ್ನು ವಿವಕ್ಷಾ ಮಾಡಿದರೆ, ಸೋಮಃ= ಶ್ರೀವಿಷ್ಣುವು, ಶ್ರೀವಿಷ್ಣುವಿಗೆ ಪ್ರಾದುರ್ಭಾವವನ್ನು ಮಾಡಿಸುತ್ತಾನೆ.

ಏವಂಚ ಒಂದು ಭಗವದ್ರೂಪದಿಂದ ರೂಪಾಂತರಕ್ಕೆ ಅಭಿವ್ಯಕ್ತಿಯು. ಹೀಗಾದರೂ ಉತ್ಪತ್ತಿರೂಪ ದೋಷ ಪ್ರತಿಪಾದಕವಾಗುವುದಿಲ್ಲ. (4) ಯೋಜನಾವಿಶೇಷ ವಿವಕ್ಷಾ ಹೇಗೆಂದರೆ **ಆತ್ಮಾವಾ ಇದಮೇಕ ಏವಾಗ್ರ ಆಸೀತ್** ಎಂಬ ಬೃಹದಾರಣ್ಯಕಶ್ರುತಿಯು ಪ್ರಲಯ ಕಾಲದಲ್ಲಿ ಒಬ್ಬನೇ ಆತ್ಮನು ಈ ಜಗತ್ತಾಗಿದ್ದನು,ಎಂದು ಯೋಜನಾ ಮಾಡಿದರೆ ಶ್ರೀವಿಷ್ಣುವಿಗೆ ಜಗತ್ತಿನಿಂದ ಅಭೇದ ಬರುವುದರಿಂದ ಅಜ್ಞಾನ ಪಾರತಂತ್ರ್ಯಾದಿ ದೋಷಗಳನ್ನು ಹೇಳುತ್ತದೆ. ಈ ಜಗತ್ತಿನ ಪೂರ್ವದಲ್ಲಿ (ಪ್ರಲಯಕಾಲದಲ್ಲಿ) ಆತ್ಮನೊಬ್ಬನೇ ಇದ್ದನು. ಬ್ರಹ್ಮಾದಿ ಜಗತ್ತು ಪ್ರವೃತ್ತಿಯಿಂದ ಯುಕ್ತವಾಗಿರಲಿಲ್ಲ. ಸ್ವರೂಪತಃ ಇತ್ತು. ಎಂದು ಯೋಜನಾ ಮಾಡಿದರೆ ಶ್ರೀವಿಷ್ಣುವಿಗೆ ನಿರ್ದೋಷತ್ವವೂ, ಲಕ್ಷ್ಮ್ಯಾದಿಗಳಿಗೆ ವಿಷ್ಣುವಿನ ಅಧೀನತ್ವವೂ ಪ್ರಲಯ ಕಾಲದಲ್ಲಿ ಅವಿದ್ಯಮಾನತ್ವವೂ ಕ್ರಮದಿಂದ ವಿಷ್ಣುಜನ್ಯತ್ವ ಮೊದಲಾದ ದೋಷಗಳನ್ನು ಹೇಳುತ್ತದೆ: || ೨೬ ||

ಅವ || ದೋಷಗಳನ್ನು ಹೇಳಿದರೆ ಪ್ರಯೋಜನವಿಲ್ಲದಿರುವುದರಿಂದ ಶ್ರೀವಿಷ್ಣುವಿನಲ್ಲಿ ದೋಷಗಳನ್ನು ಹೇಳತಕ್ಕ ವಾಕ್ಯಗಳಿಗೆ ಅನ್ಯಾರ್ಥವನ್ನು ಕೂಡಿಸಿದಂತೆಯೇ ಇತರ ದೇವತೆಗಳಲ್ಲಿಯೂ ದೋಷಗಳನ್ನು ಹೇಳತಕ್ಕ ವಾಕ್ಯಗಳಿಗೆ ಅನ್ಯಾರ್ಥವನ್ನು ಏಕೆ ಇಟ್ಟುಕೊಳ್ಳಬಾರದು, ಎಂದರೆ—

ಭಾ || (೧) **ತಾರತಮ್ಯಸ್ಯ ವಿಜ್ಞಪ್ತ್ಯೈ ವಚೋ ದೋಷಸ್ಯ ಚಾರ್ಥವತ್ |** (೨)**ಗುಣಾಃ ಶ್ರುತಾ ಇತಿ ಹ್ಯಾಹ ಗುಣೈಕನಿಯತಿಂ ಹರೌ|** (೩)**ನಿರ್ದೋಷ ಗುಣಪೂರ್ಣಶ್ಚ ವಿಷ್ಣುರೇಕೋ ನ ಚಾಪರಃ | ಅಪೂರ್ಣಾ ದೋಷರಹಿತಾ ಮಾಯೈಕಾ ತದ್ವಶೈವ ಚ||** (೪)**ಅದೋಷಃ ಪ್ರಾಯಶೋ ಬ್ರಹ್ಮಾ ದೋಷವಂತಃ ಕ್ರಮಾತ್ಪರೇ || ಇತಿಮಾನ್ಯಶ್ರುತಿಶ್ಚಾಹ ಭೇದೋಽರ್ಥಾನಾಂ ತತೋ ಮತಃ** || ೨೭ ||

ಅ || (೧)ದೇವತೆಗಳ ತಾರತಮ್ಯ ಜ್ಞಾನಕ್ಕಾಗಿ ದೋಷ ವಚನವೂ ಸಾರ್ಥಕವು.(ಅಂದರೆ ಆಯಾಯ ದೇವತೆಗಳಲ್ಲಿರತಕ್ಕ ದೋಷಗಳನ್ನು ಹೇಳದಿದ್ದರೆ ದೇವತೆಗಳ ತಾರತಮ್ಯವು ತಿಳಿಯದೆ ಹೋಗುವುದು. ಮೋಕ್ಷೇಚ್ಛುವಿಗೆ ದೇವತಾ ತಾರತಮ್ಯ ಜ್ಞಾನವು ಅಗತ್ಯವಾಗಿ ಅಪೇಕ್ಷಿತವು. ಆದುದರಿಂದ ತಾರತಮ್ಯವನ್ನು ತಿಳಿಸಿಕೊಡುವುದಕ್ಕಾಗಿ ದೋಷ ವಚನವು ಸಾರ್ಥಕವು.) (೨) (**ಅತೋ ದೋಷವಚೋ ಯತ್ರ** ಎಂದು ಹಿಂದೆ ಹೇಳಿದುದನ್ನು ದೃಢೀಕರಿಸುತ್ತಾರೆ.) **ಗುಣಾಃ ಶ್ರುತಾಃ** ಎಂಬ ಶ್ರುತಿಯು ಶ್ರೀಹರಿಯಲ್ಲಿ ಕೇವಲ ಗುಣಗಳ ನಿಯಮವನ್ನೇ ಹೇಳುತ್ತದೆ. (೩) ದೋಷಲೇಶರಹಿತನಾಗಿ ಸರ್ವಗುಣ ಪರಿಪೂರ್ಣನಾದವನು ಶ್ರೀವಿಷ್ಣು ಒಬ್ಬನೇ. ಬೇರೆ ಯಾರೊಬ್ಬರೂ ಇಲ್ಲವೇ ಇಲ್ಲ. ಸರ್ವಗುಣ ಪರಿಪೂರ್ಣಳಾಗದೆ ಇದ್ದು ದೋಷಲೇಶರಹಿತಳಾದವಳು ಲಕ್ಷ್ಮೀದೇವಿಯೊಬ್ಬಳು. ಶ್ರೀಹರಿಯ ಅಧೀನಳೇ ಆದವಳು. (೪) ಚತುರ್ಮುಖಬ್ರಹ್ಮನು ಪ್ರಾಯಶಃ ದೋಷವಿರಹಿತನು. ಇತರರು ಕ್ರಮವಾಗಿ ದೋಷಾಧಿಕ್ಯವುಳ್ಳವರು. ಹೀಗೆ ನಿರ್ದೋಷೇತ್ಯಾದಿ ಮಾನ್ಯ ಶ್ರುತಿಯೂ ಕೂಡ ಶ್ರೀಹರಿಗೆ ಕೇವಲ ಗುಣಗಳ ನಿಯಮನವನ್ನೇ ಹೇಳುತ್ತದೆ. ಹೀಗೆ ಶ್ರೀಹರಿಯು ನಿರ್ದೋಷ ಗುಣಪರಿಪೂರ್ಣನಾದುದರಿಂದಲೂ ಇತರರು ಯಥಾಯೋಗ್ಯವಾಗಿ ದೋಷಗಳುಳ್ಳವರಾದುದರಿಂದಲೂ ಯೋಜನಾ ಭೇದದಿಂದ ಅರ್ಥಗಳಿಗೆ ವೈಲಕ್ಷಣ್ಯವೇ ಸಮ್ಮತವಾಗಿದೆ. || ೨೭ ||

ಅವ || **ಯಥಾಯೋಗಂ ಯಥಾನ್ಯಾಯಂ** ಎಂಬುವುದರಿಂದ ಯೋಗ ವೃತ್ತಿಯಿಂದ ಶ್ರೀವಿಷ್ಣುವು ನಿಖಿಲವೇದಗಳಿಂದ ವೇದ್ಯನೆಂದು ಹೇಳಿದೆ. ಅದು ಅಯುಕ್ತವು. **ಸರ್ವಜ್ಞಃ ಸರ್ವವಿತ್** ಇತ್ಯಾದಿಶ್ರುತಿಗಳಲ್ಲಿ ಸರ್ವ ಮೊದಲಾದ ಶಬ್ದಗಳು ಅನ್ಯಪರಗಳಾದರೆ ಶ್ರೀಹರಿಯು ಸರ್ವ ಶಬ್ದಗಳಿಂದ ವಾಚ್ಯನೆಂಬುವುದು ವ್ಯಾಹತವಾಗುವುದು. ಭಗವಂತನನ್ನೇ ಹೇಳುತ್ತವೆ ಎಂದಾದರೆ ಭಗವನ್ನಾಮಗಳನ್ನೇ ಆವೃತ್ತಿ ಮಾತ್ರ ಮಾಡುವುದರಿಂದ ಯೋಗವು ಕೂಡಲಾರದು, ಎಂಬ ಆ ಶಂಕೆಯನ್ನು ಸ್ಮೃತಿಯಿಂದಲೇ ಪರಿಹರಿಸುತ್ತಾರೆ—

ಭಾ ॥ (೧) ರೂಢಿಮೇವ ಸಮಾಶ್ರಿತ್ಯ ವಿಭಜ್ಯಾರ್ಥಾನ್ಯಥಾಕ್ರಮಂ । ನಿರ್ದೋಷಗುಣ ಪೂರ್ತ್ಯರ್ಥಂ ವಿಷ್ಣೌ ಯೋಗಾರ್ಥಮಾನಯೇತ್ । ಪಶ್ಚಾದೇವ ಯಥಾಯೋಗ ಮಿತರೇಷ್ವಪಿ ಸಂನಯೇತ್।ಋಗ್ವೇದಸಂಹಿತಾಯಾಂ ಚ ಪ್ರಭುಣೈವಂ ಸಮೀರಿತಂ॥ (೨) ಪೃಥಗ್ರೂಪಾಣಿ ವಿಷ್ಣೋಸ್ತು ದೇವತಾಂತರಗಾಣಿ (ನಿ)ಚ । ಅಗ್ನ್ಯಾದಿಸೂಕ್ತ ವಾಚ್ಯಾನಿ ನಾಮ್ನಾ ಸೂಕ್ತಭಿದಾ ಭವೇತ್ ॥ ೨೮ ॥

ಅ ॥ (೧) ಸರ್ವಾದಿ ಶಬ್ದಗಳಿಗೆ ರೂಢಿವೃತ್ತಿಯನ್ನೇ ಚೆನ್ನಾಗಿ ಆಶ್ರಯಿಸಿ ನಿಖಿಲಮೊದಲಾದ ಅರ್ಥ ಗಳನ್ನು ವಿಸ್ಪಷ್ಟವಾಗಿ ತಿಳಿದುಕೊಂಡು ಆ ಮೇಲೆ ಶಬ್ದಾನುಶಾಸನಾದಿ ಕ್ರಮಗಳನ್ನು ಅಂಗೀಕರಿಸಿ ಶ್ರೀವಿಷ್ಣುವು ನಿರ್ದೋಷ ಗುಣಪರಿಪೂರ್ಣನೆಂದು ಸಿದ್ಧಿಯಾಗುವುದಕ್ಕಾಗಿ ಸರ್ವಜ್ಞ ಮೊದಲಾದ ಶಬ್ದಗಳಿಗೆ ಯೋಗಾರ್ಥ ವನ್ನು ಹೊಂದಿಸಿಕೊಡಬೇಕು. ಆ ಮೇಲೆ ಸರ್ವಾದಿ ಶಬ್ದಗಳಿಗೂ ಸರವಾದಿ ಶಬ್ದಗಳ ರೂಢಾರ್ಥಗಳನ್ನು ತೆಗೆದು ಕೊಂಡೇ ಶ್ರೀವಿಷ್ಣುವಿನಲ್ಲಿ ಸರವಃ=ಸರ್ವಃ= ವೈದಿಕ ಶಬ್ದದಿಂದ ಸಹಿತನು(ಅಂದರೆವೈದಿಕಶಬ್ದಗಳಿಂದಪ್ರತಿಪಾದ್ಯ ನು)ಇತ್ಯಾದಿ ರೂಪವಾದ **ರಃಸ್ಯಾತ್ಪುಮಾನ್ ಶಿವೇ ವಹ್ನೌ** ಎಂಬ ಕೋಶದಿಂದ ರಂ=ಶಿವನನ್ನು ಅಗ್ನಿಯನ್ನಾ ಗಲೀ ವರ್ತಯತಿ=ಪ್ರವರ್ತಿಸುವವನು,ರವಃಎಂಬ ಯೋಗವೃತ್ತಿಯನ್ನು ಹೊಂದಿಸಿ ಕೊಡಬೇಕು.(ರೂಢಿಯಿಂದಲೇ ಶ್ರೀಹರಿಯು ಸಮಸ್ತ ವೇದಗಳಿಂದಲೂ ವೇದ್ಯನೆಂದಾಗಲಿ ಯೋಗ ಏತಕ್ಕೆ,ಎಂದರೆ–ಶ್ರೀಹರಿಯು ನಿರ್ದೋಷನು ಗುಣಪರಿಪೂರ್ಣನು ಎಂದು ತಿಳಿಸುವುದಕ್ಕಾಗಿಯೇ ಸಮಸ್ತವೇದಗಳು ಪ್ರವೃತ್ತಗಳಾಗಿವೆ. ರೂಢಿಮಾತ್ರದಿಂದ ಚೆನ್ನಾಗಿ ನಿರ್ದೋಷತ್ವಾದಿಗಳು ಸಿದ್ಧಗಳಾಗಲಾರವು. ಆದಕಾರಣ ಯೋಗವನ್ನೇ ಆಶ್ರಯಿಸಬೇಕು.) ಆ ಮೇಲೆಯೇ ಶ್ರೀವಿಷ್ಣುವಿನಿಂದ ಅತಿರಿಕ್ತರಾದ ದೇವತೆಗಳಲ್ಲಿಯೂ ಕೂಡ ಆವಾವ ದೇವತೆಗಳ ಯೋಗ್ಯತೆ ಯನ್ನನುಸರಿಸಿಯೇ ಯೋಗವೃತ್ತಿಯನ್ನು ಹೊಂದಿಸಿಕೊಡಬೇಕು. ಋಗ್ವೇದಸಂಹಿತೆಯಲ್ಲಿಯೂ ಕೂಡ ಪ್ರಭುವಾದ ಶ್ರೀಹರಿಯಿಂದ ಹೀಗೆಯೇ ಹೇಳಲ್ಪಟ್ಟಿದೆ. (೨) (ಸಮಸ್ತ ವೇದಗಳೂ ಭಗವತ್ಪರಗಳೆಂದಾದರೆ, ಇದು ಅಗ್ನಿಸೂಕ್ತವು, ಇದು ವಾಯುಸೂಕ್ತವು, ಇತ್ಯಾದಿ ಸೂಕ್ತಭೇದವು ಹೇಗೆ ಕೂಡುತ್ತದೆ ಎಂದರೆ) ಅಗ್ನಿಸೂಕ್ತ ಮೊದಲಾದ ಸೂಕ್ತಗಳಿಂದ ವಾಚ್ಯಗಳಾದ ಭಗವದ್ರೂಪಗಳು (1) ಅಗ್ನ್ಯಾದಿ ದೇವತೆಗಳಲ್ಲಿ ಅಂತರ್ಗತಗಳು, (2) ಅಗ್ನ್ಯಾದಿ ದೇವತೆಗಳಲ್ಲಿ ಅಂತರ್ಗತಗಳಾಗದೆ ಇದ್ದವುಗಳು ಎಂದು ಎರಡು ವಿಧಗಳು. (ಎಲ್ಲವೂ ಅಗ್ನ್ಯಾದಿ ನಾಮವುಳ್ಳವುಗಳೇ.)(ಅವುಗಳಲ್ಲಿ ಅಗ್ನ್ಯಾದಿದೇವತೆಗಳಲ್ಲಿ ಅಂತರ್ಗತಗಳಾದ ಭಗವದ್ರೂಪಗಳನ್ನು ಪ್ರತಿಪಾದಿಸುವು ದೆಂಬ ಪಕ್ಷದಲ್ಲಿ ಸಮಸ್ತ ವೇದಗಳೂ ಭಗವತ್ಪರಗಳಾದುದಾಗ್ಯೂ ಆಯಾಯ ದೇವತೆಗಳಲ್ಲಿ ಅಂತರ್ಗತಗಳಾದ ಆಯಾಯ ನಾಮವುಳ್ಳ ಭಗವದ್ರೂಪ ವಿಶೇಷಗಳನ್ನು ಪ್ರತಿಪಾದಿಸುವುದರಿಂದಲೂ ಭಿನ್ನಗಳಾದ, ಆವಾವ ನಾಮ ವುಳ್ಳ ಭಗವದಧಿಷ್ಠಾನಭೂತರಾದ ಅಗ್ನ್ಯಾದಿಗಳನ್ನು ಪ್ರತಿಪಾದಿಸದೆ ಇರುವುದರಿಂದಲೂ) ತನ್ನ ನಾಮದಿಂದಲೂ ಅಧಿಷ್ಠಾನ ನಾಮದಿಂದಲೂ ಅಗ್ನ್ಯಾದಿ ಸೂಕ್ತಭೇದವು ಆಗುವುದು. (ಅಂತರ್ಗತಗಳಾಗದೆ ಇದ್ದ ಭಗವದ್ರೂಪ ಗಳನ್ನು ಪ್ರತಿಪಾದಿಸುವುದೆಂಬ ಪಕ್ಷದಲ್ಲಿ)ತನ್ನದ್ದಾದ ಅಗ್ನ್ಯಾದಿ ನಾಮಗಳಿಂದಲೇ ಸೂಕ್ತಾದಿಭೇದವು ಬರುವುದು. ಅಧಿಷ್ಠಾನ ನಾಮದಿಂದ ಅಲ್ಲ.) ॥ ೨೮ ॥

ಅವ ॥ ಹೀಗೆ ಋಷಿ ಛಂದೋ ದೇವತಾ ಸ್ವರೂಪವನ್ನು ಕ್ರಮ ಪ್ರಕಾರ ಉಪಪಾದಿಸಿ ಈಗ ಕೆಲವು ಋಕ್ಕುಗಳ ವ್ಯಾಖ್ಯಾನವನ್ನು ಮಾತ್ರ ಪ್ರತಿಜ್ಞಾ ಮಾಡಿದುದರಿಂದ ಭಾಷ್ಯಕಾರರು ವ್ಯಾಖ್ಯಾನ ಮಾಡದಿದ್ದ ಋಕ್ಕುಗಳ ವ್ಯಾಖ್ಯಾನ ಪ್ರಕಾರವನ್ನು ಶಿಕ್ಷಿಸುತ್ತಾರೆ–

ಭಾ ॥ (೧) ನ ಕಿರ್ಮಾಕಿಃ ಸ್ಮಸೀತ್ಯಾದಿ ಪ್ರೋಕ್ತಾಧಿಕ್ಯವಿವಕ್ಷಯಾ ।। (೨) ಆಧಿಕ್ಯೇಽಧಿ ಕಮಿತ್ಯೇವ ಹರಿಣಾ ಸೂತ್ರನಿರಿತಂ ॥ (೩) ಕೃತ್ಸ್ನೇ ಹತ್ಸ್ವೀತಿ ಪೂರ್ವಾಶ್ಚ (೪)ತೃತೀ

ಯೋಽತಿಶಯೋ ಯತಃ । (೫) ವಿಶ್ಲಿಷ್ಟಾರ್ಥೇಚ ವಿಶ್ಲಿಷ್ಟಮೂನಾರ್ಥೇ ಚೋನವಿ‍ಷ್ಯತೇ ॥(೬) ವ್ಯತ್ಯಯೋಽಭೇದಕರಣಸ್ವಾತಂತ್ರ್ಯೇಷು ಸಮೀರಿತಃ ॥ (೭) ಆಭೇದೋ ಹರಿರೂಪಾಣಾಂ ಗುಣಾನಾಂ ಚ ಕ್ರಿಯಾಸು ಚ । ತಸ್ಯೈವಾವಯವಾನಾಂ ಚ । (೮)ಭೇದಃ ಶ್ರೀಬ್ರಹ್ಮಪೂರ್ವಕೈಃ ॥ ಮುಕ್ತೈರಪಿ ಜಡೈರ್ಭೇದಃ ಕೈಮುತ್ಯಾದೇವ ದೃಶ್ಯತೇ ॥ ಋಗ್ವೇದಸಂಹಿತಾಯಾಂಚ ಪ್ರೋಕ್ತಮೇತತ್ಸಮಸ್ತಶಃ ॥ ೨೯ ॥

ಅ ॥ (೧)(1) **ನ ಕಿರಿಂದ್ರ ತ್ವದುತ್ತರೋನ ಜ್ಯಾಯಾँ ಅಸ್ತಿ ವೃತ್ರಹನ್।** (ಋ.೩.೬.೧೯)ಎಲೋ ಪರಮೇಶ್ವರನೇ ನಿನ್ನಿಂದ ಉತ್ತಮನು ಸರ್ವಥಾ ಇಲ್ಲ. ವೃತ್ರಾಸುರಸಂಹಾರಕನೇ ನಿನಗಿಂತ ಇನ್ನೊಬ್ಬನೂ ಶ್ರೇಷ್ಠನೂ ಹೊಗಳಿಸಿಕೊಳ್ಳಲು ಯೋಗ್ಯನೂ ಇಲ್ಲವೇ ಇಲ್ಲ. (2)**ಮಾಕಿರ್ನೇಶತ್ ಮಾಕೀಂ ರಿಷನ್ ಮಾಕೀಂ ಸಂಶಾರಿ । ಕೇವಟೇ । ಅಥಾರಿಷ್ಟಾಭಿರಾಗಹಿ**=(ಋ.೪.೮.೨೦) ಪೂಷನ್=ಭಗವಂತನೇ ನೀನು ಭಕ್ತರ ಹೃದಯದಿಂದ ಯಾವಾಗಲೂ ಹೊರಟು ಹೋಗುವುದಿಲ್ಲ. (ಅಂದರೆ ಸದಾ ಭಕ್ತರ ಹೃದಯದಲ್ಲಿ ಸನ್ನಿಹಿತನಾಗಿರುತ್ತಿ.) **ನ ಮೇ ಭಕ್ತಃ ಪ್ರಣಶ್ಯತಿ** ಎಂಬುವ ಪ್ರಮಾಣದಿಂದ) ಭಕ್ತವರ್ಗವನ್ನು ಯಾವಾಗಲೂ ನಾಶಗೊಳಿಸುವುದಿಲ್ಲ. ಹಾಗೆಯೇ ತಾನು (**ಅಚ್ಛೇದ್ಯೋಽಯಮದಾಹ್ಯೋಽಯಂ** ಎಂಬ ಪ್ರಮಾಣದಿಂದ) ಯಾವ ಪುರುಷನಿಂದಲೂ ಬಾವಿಯಲ್ಲಿ (ಯಾವುದೊಂದು ಸ್ಥಾನದಲ್ಲಿಯೂ) ಸಂಹರಿಸಿಕೊಳ್ಳಲ್ಪಡುವುದಿಲ್ಲ. ಆದ ಕಾರಣ ನೀನು ಸ್ತ್ರೀಯರಿಂದ ಕೂಡಿ ಬಾ. (3) **ತ್ವಾವತಃ ಪುರೂವಸೋ ವಯಮಿಂದ್ರ ಪ್ರಣೇತಃ । ಸ್ಮಸಿ ಸ್ಥಾತರ್ಹರೀಣಾಂ ॥** (ಋ.೬.೪.೧.) ಉತ್ಕೃಷ್ಟ ಧನವುಳ್ಳವನೂ, ಸರ್ವಜಗತ್ಪ್ರವರ್ತಕನೂ, ಅಶ್ವಗಳಿಗೆ ಸ್ಥಾಪಕನೂ ಆದ ಇಂದ್ರನೇ ನಾವು ನಿನ್ನವರು. (ನಿನ್ನ ಭಕ್ತರು.) ಆಗಿರುತ್ತೇವೆ, ಇತ್ಯಾದಿಗಳಲ್ಲಿ **ಅಮಾನೋನಾಃ ಪ್ರತಿಷೇಧೇ** ಎಂಬ ಸೂತ್ರದಿಂದ ಪ್ರಾಪ್ತಗಳಾದ **ನ ಮಾ** ಶಬ್ದಗಳಿಂದ ಅಧಿಕವಾದ ಕಿಃ ಎಂಬ ಶಬ್ದರೂಪವೂ, **ತಿಪ್ತಸಿ** ಇತ್ಯಾದಿ ಸೂತ್ರದಿಂದ ಪ್ರಾಪ್ತವಾದ ಅಧಿಕವಾದ **ಮಸಿ ಸ್ಮಸಿ** ಎಂಬ ಶಬ್ದರೂಪವೂ **ಕೀಂ** ಎಂಬ ಶಬ್ದರೂಪವೂ ಅಲ್ಲಿ ಹೇಳಿದ ಅರ್ಥಕ್ಕೆ ಆಧಿಕ್ಯವನ್ನು ವಿವಕ್ಷಾ ಮಾಡಿಕೊಂಡು ಅಂದರೆ **ನ ಕಿಃ ಮಾ ಕಿಃ** ಇತ್ಯಾದಿ ನಿಷೇಧದಲ್ಲಿ ಸರ್ವದೇಶಕಾಲ ಸಂಬಂಧಿತ್ವವನ್ನೂ **ಸ್ಮಸಿ** ಇತ್ಯಾದಿ ವಿಧಿಯಲ್ಲಿ ವಿಧೇಯಾಧಿಕ್ಯವನ್ನೂ ವಿವಕ್ಷಾಮಾಡಿಕೊಂಡು ಪ್ರಯೋಗಿಸಿದ್ದೆಂದು ತಿಳಿಯಬೇಕು. (೨) **ಆಧಿಕ್ಯೇಽಧಿಕಂ**=ಅರ್ಥಾಧಿಕ್ಯವು ವಿವಕ್ಷಿತವಾಗೇಣ ಅಧಿಕವಾದ ಶಬ್ದರೂಪವು ಆಗುತ್ತದೆ, ಎಂದೇ ಸೂತ್ರವು ಶ್ರೀಹರಿಯಿಂದ ಹೇಳಲ್ಪಟ್ಟದೆ. (೩) **ಪುನರ್ದಾಯ ಬ್ರಹ್ಮ ಜಾಯಾಂ ಕೃತ್ವೀ ದೇವೈರ್ನಿಕಿಲ್ಬಿಷಂ । ಊರ್ಜಂ ಪೃಥಿವ್ಯಾ ಭಕ್ತ್ವಾಯೋರುಗಾಯಮುಪಾಸತೇ ॥**(ಋ. ೮.೬.೭.) ಹರಿ ಭಕ್ತರಿಂದ ಸ್ನೇಹವನ್ನು ಮಾಡುತ್ತಿರುವ ಜನಕರಾಜನೇ ಮೊದಲಾದ ರಾಜರು ಪರಬ್ರಹ್ಮರೂಪಿಯಾದ ರಾಮಾದಿಗಳಿಗೆ ಸೀತಾದಿರೂಪವುಳ್ಳ ಸ್ತ್ರೀಯರನ್ನು ತಿರುಗಿಕೊಟ್ಟು (ಸೀತಾದಿಗಳು ಲಕ್ಷ್ಮೀಸ್ವರೂಪರಾಗಿರುವುದರಿಂದ ಮೊದಲೇ ವಿಷ್ಣುಪತ್ನಿಯರೆಂದು ಸಿದ್ಧವಾಗಿರುವುದರಿಂದ ಪುನಃ ಎಂದದ್ದು.) ಯಜ್ಞಾದಿಗಳಿಂದ ಇಂದ್ರಾದಿದೇವತೆಗಳಿಗೆ ಪ್ರೀತಿಯನ್ನು ಅತ್ಯಂತವಾಗಿ ಮಾಡಿ ಪೃಥಿವೀ ಸಂಬಂಧಿಯಾದ ಸಂಪೂರ್ಣ ಅನ್ನವನ್ನು ಬ್ರಾಹ್ಮಣರಿಗೆ ದಾನಮಾಡಿ ಶ್ರೇಷ್ಠರಾದ ಬ್ರಹ್ಮಾದಿಗಳಿಂದ ಗಾನಮಾಡಲ್ಪಡತಕ್ಕ ಶ್ರೀವಿಷ್ಣುವನ್ನುಧ್ಯಾನಿಸುತ್ತಾರೆ. **ಹಿರಣ್ಯಯಮುತ ಭೋಗಂ ಸಸಾನ ಹತ್ವೀ ದಸ್ಯೂನ್ ಪ್ರಾರ್ಯಂ ವರ್ಣಮಾವತ್**= (ಋ. ೩. ೨. ೧೫) (ಪರಮೈಶ್ವರ್ಯಸಂಪನ್ನನಾದ ಶ್ರೀಹರಿಯು ಸುವರ್ಣಮಯವಾದ ಶರೀರವನ್ನು ಅಥವಾ ಸುವರ್ಣಸದೃಶ ಶರೀರವನ್ನು ಅಥವಾ ಸುವರ್ಣಾಲಂಕೃತ ಶರೀರವನ್ನು ಅಥವಾ ಸುವರ್ಣ ಪ್ರಾಚುರ್ಯನಿಮಿತ್ತವಾದ ಸುಖಾನುಭವವನ್ನು ಹೊಂದಿರುವನು. ಮತ್ತು ಚೋರರಾದ ದೈತ್ಯಾದಿಗಳನ್ನು ನಿಶ್ಶೇಷವಾಗಿ ಸಂಹರಿಸಿ ಸರ್ವರಿಂದಲೂ ಪ್ರಾರ್ಥ್ಯನಾದ ದೇವಶ್ರೇಷ್ಠನಾದ **ಚತುರ್ಮುಖನನ್ನು** ಅಥವಾ ಜ್ಞಾನಿಯನ್ನು ಅಥವಾ ಉತ್ತಮವಾದ ಬ್ರಾಹ್ಮಣಜಾತಿಯನ್ನು ರಕ್ಷಿಸಿದನು, ಇದು ಮೊದಲಾದ ವರ್ಣವಿಕಾರಗಳು (ಕೃತ್ವಾ ಎನ್ನುವುದಕ್ಕೆ ಕೃತ್ವೀ ಎಂದೂ ಹತ್ವಾ

ಎನ್ನುವುದಕ್ಕೆ ಹತ್ವೀ ಎಂದೂ ವರ್ಣ ವಿಕಾರಗಳು ಅರ್ಥಾಧಿಕ್ಯವನ್ನು ವಿವಕ್ಷಾಮಾಡಿಕೊಂಡು ಪ್ರಯುಕ್ತಗಳೆಂದು ತಿಳಿಯಬೇಕು. (೪) ಏಕೆಂದರೆ—ತೃತೀಯೋಽತಿಶಯೇ, ಅರ್ಥಾಧಿಕ್ಯವು ವಿವಕ್ಷಿತವಾಗೋಣ ಪ್ರಾಪ್ತವಾದ ಅಕ್ಷರದ ಸ್ಥಾನದಲ್ಲಿ ಅದಕ್ಕಿಂತ ೩ನೇ ವರ್ಣವು ಬರುತ್ತದೆ. ಉದಾ=ಹತ್ವಾ=ಎನ್ನುವ ಆಕಾರಕ್ಕೆ ಹತ್ವೀ=ಎಂದು ಈ ಕಾರವು. ಕ್ವಚಿತ್ ಈ ಕಾರಕ್ಕೆ ಆ ಕಾರವು. (೫) ಅಃ ಇತಿಬ್ರಹ್ಮ ಇದು ಮೊದಲಾದ, ವರ್ಣಗಳಿಗೆ ಅತಿಶಯಿತ ಸಂಧಿಯಿಲ್ಲದೆ ನಿರ್ದೇಶಮಾಡಿದ ಶಬ್ದಸ್ವರೂಪವು ವಿಶ್ಲಿಷ್ಟಾರ್ಥದಲ್ಲಿ (ಅಂದರೆ ಆ ಅರ್ಥವು ಇತರ ವಸ್ತುಗಳಿಂದ ಭಿನ್ನವಾಗಿದೆ, ಎಂಬ ಅರ್ಥದಲ್ಲಿದೆ.) (ಅಂದರೆ—ಅಕಾರವಾಚ್ಯನಾದ ಪರಬ್ರಹ್ಮನು ಇತರ ಸಕಲ ಪದಾರ್ಥಗಳಿಂದಲೂ ಭಿನ್ನನು ಎಂದು ತಿಳಿಯಲ್ಪಡುತ್ತಾನೆ. ಎಂದಭಿಪ್ರಾಯವು.) **ತಮ ಆಸೀತ್ತಮಸಾ ಗೂಳ್ಹಮಗ್ರೇ ಪ್ರಕೇತಂ ಸಲಿಲಂ ಸರ್ವಮಾ ಇದಂ** (ಋ.೮.೭.೧೭.) (ಪ್ರಲಯ ಕಾಲದಲ್ಲಿ ಅಂಧಕಾರವೂ ಅಥವಾ ಅದಕ್ಕೆ ಅಭಿಮಾನಿನಿಯಾದ ದುರ್ಗಾದೇವಿಯಾಗಲೀ, ಇರುತ್ತಿದ್ದಳು. ಹಾಗೆಯೇ ಪ್ರಲಯ ಕಾಲದಲ್ಲಿ ಅಗಾಧವಾದ ಈ ಎಲ್ಲಾ ನೀರೂ (ಅಂದರೆ ಪ್ರಲಯೋದಕವು) ತಮಸ್ಸಿನಿಂದ ವ್ಯಾಪ್ತವಾಗಿ ಆ=ಇತ್ತು.) ಎನ್ನುವಲ್ಲಿ ಆಸೀತ್ ಎಂದು ಹೇಳುವ ಬದಲಿಗೆ ಆ=ಇತ್ಯಾದಿ ಊನವಾಗಿ ಹೇಳಿದ್ದಕ್ಕೆ ಅರ್ಥವು ಊನವಾಗಿದೆ ಎಂದರ್ಥವು, ವಿವಕ್ಷಿತವೆಂದು ತಿಳಿಯಬೇಕು. (ಅಂದರೆ ಪ್ರಲಯ ಕಾಲದಲ್ಲಿರತಕ್ಕ ಪರಮಾತ್ಮನಿಗಿಂತ ನ್ಯೂನವಾಗಿತ್ತು, ಎಂದು ಶ್ರುತ್ಯರ್ಥವು)(೬)(**ಸುಪ್ ತಿಙ್ ವಿಕರಣ ಲಿಂಗ ಪುರುಷ ಕಾಲ ಹಲಚ್ ಸ್ವರ ಕೃತ್ತದ್ಧಿತ ಸಮಾಸ ಸನ್ಯಜಾದಿ ವ್ಯತ್ಯಯಸ್ತು** ಸುಪ್‌ತಿಙ್, ವಿಕರಣ, ಪುಲ್ಲಿಂಗಾದಿಗಳು, ಪ್ರಥಮಪುರುಷಾದಿಗಳು, ಭೂತಾದಿಕಾಲವು, ಹಲ್‌ವರ್ಣ, ಅಜ್ವರ್ಣ, ಸ್ವರ,ಕೃತ್, ತದ್ಧಿತಸಮಾಸ, ಸನ್ನಂತ,ಯಜಾದಿಗಳು, ಇವುಗಳ ವ್ಯತ್ಯಾಸವಾದರೂ ಅಭೇದಕರಣ ಸ್ವಾತಂತ್ರ್ಯಎಂಬ ಅರ್ಥಗಳಲ್ಲಿದೆ ಎಂದು ತಿಳಿಯಬೇಕು. (೭) (ಅಭೇದವನ್ನು ಎಲ್ಲಿ ವ್ಯಾಖ್ಯಾನ ಮಾಡಬೇಕೆಂದರೆ) ಭಗವಂತನಿಂದ ಆತನ ರೂಪಗಳಿಗೂ ಗುಣಗಳಿಗೂ ಕ್ರಿಯೆಗಳಿಗೂ ಆತನ ಅವಯವಗಳಿಗೂ ಪರಸ್ಪರವಾಗಿ ಅಭೇದವೇ.(೮)ಲಕ್ಷ್ಮೀಬ್ರಹ್ಮಾದಿದೇವತೆಗಳಿಂದಲೂ ಮುಕ್ತರಿಂದಲೂ ಶ್ರೀಪರಮಾತ್ಮನಿಗೆಭೇದವು. ಶ್ರೀಹರಿಗೆ ಜಡಗಳಿಂದ ಭೇದವು ಸುತರಾಂ ಸಿದ್ಧವಾಗುತ್ತದೆ. ಇದೆಲ್ಲವೂ ಹಿಂದೆ ಹೇಳಿದ ಸೂತ್ರಗಳಿಂದ ಸಿದ್ಧವಾಗುವುದು ಮಾತ್ರವಲ್ಲ. ಮತ್ತೆಋಗ್ವೇದ ಸಂಹಿತೆಯಲ್ಲಿಯೂ ಹೇಳಿದ ಪ್ರಕಾರ ಅದರಿಂದಲೂ ಸಿದ್ಧವಾಗುತ್ತದೆ. ॥೨೯॥

ಅವ ॥ ಸ್ಥಳಾಂತರಗಳಲ್ಲಿಯೂ ಅಭೇದವನ್ನು ತೋರಿಸುತ್ತಾರೆ.

ಭಾ ॥ (೧) ಅಭೇದಃ ಸ್ವಗುಣಾದ್ಯೈಶ್ಚ ಮುಕ್ತಾನಾಮಪಿ ಸರ್ವಶಃ । ಭೇದಾಭೇದಸ್ತ್ವಭೇದಶ್ಚ ಗುಣ್ಯೈಃ ಸಂಸಾರಿಣಾಮಪಿ ॥ (೨) ಜಡಾನಾಮಂಶತೋ ಭೇದಃ ಸಮುದಾಯೇನ ಚೋಭಯಂ । ಮನುಷ್ಯ ಗಂಧರ್ವ ಪಿತೃಗಣ ಕಾರ್ಮಿಕ ತಾತ್ವಿಕಾಃ । ದೇವಾಃ ಶಕ್ರಃ ಶಿವೋ ಬ್ರಹ್ಮಾಮುಕ್ತೌ ಸೌಖ್ಯಾದಿಭಿರ್ಗುಣೈಃ । ಶತಾಯುತೋತ್ತರಾ ನಿತ್ಯಮನ್ಯೋನ್ಯ ಪ್ರೀತಿಸಂಯುತಾಃ । ಇತಿ ಸಿದ್ಧಾಂತಗಂ ವಾಕ್ಯಂ ಸ್ವಯಂ ಭಗವತೇರಿತಂ । (೩) ಸ್ವಾಧ್ಯಾಯಸ್ತತ್ವವಿಜ್ಞಾನಂ ವಿಷ್ಣುಭಕ್ತಿರ್ವಿರಾಗತಾ । ನಿಷಿದ್ಧಕರ್ಮಸಂತ್ಯಾಗೋ ವಿಹಿತಸ್ಯ ಸದಾ ಕ್ರಿಯಾ । ಸದಾ ವಿಷ್ಣುಸ್ಮೃತಿಶ್ಚೈವ ಕೇವಲಂ ಮೋಕ್ಷಸಾಧನಂ । ಏತೈರ್ವಿನಾ ನ ಮೋಕ್ಷಃ ಸ್ಯಾತ್ ಭವೇದೇತೈರಪಿ ಧ್ರುವಂ ॥೩೦॥

ಅ ॥ (೧) ಎಲ್ಲಾಮುಕ್ತರಿಗೂ ಸ್ವರೂಪಭೂತಗಳಾದ ಜ್ಞಾನಾದಿಗುಣಗಳಿಂದ ಅತ್ಯಂತಾಭೇದವು.(ಯಾವ ಅಮುಕ್ತ ಕ್ರಿಯೆಗಳಿಗೆ ಮುಕ್ತಿಯಲ್ಲಿ ಉಚ್ಛೇದವು, (ನಾಶವು) ಭೇದಾಭೇದವು ಎಂದರೆ) **ಚಿಂತನಾದಿಕ್ರಿಯಾಣಾಂತು ಮುಕ್ತಾವುಚ್ಛೇದತಸ್ಸದಾ । ಕಿಂ ಮಯಾ ಕಾರ್ಯಮಾದೀನಾಂ ಭೇದಾಭೇದ ಉದಾಹೃತಃ** ಕಿಂ ಮಯಾ ಕಾರ್ಯಂ ಇತ್ಯೇವಮಾದಿರೂಪಗಳಾದ ಚಿಂತನಾದಿ ಕ್ರಿಯೆಗಳಿಗೆ ಮುಕ್ತಿಯಲ್ಲಿ ಉಚ್ಛೇದವಾಗುವುದರಿಂದ ಸಂಸಾರಿಗಳಿಗೆ ಸದಾ ಭೇದಾಭೇದವು. (ಅಂದರೆ ಕಿಂ ಮಯಾ ಕಾರ್ಯಂ ಇತ್ಯಾದಿ ರೂಪಗಳಾದ

ಚಿಂತನಾದಿ ಕ್ರಿಯೆಗಳಿಂದ ಹುಟ್ಟತಕ್ಕ ನೀಚೋಚ್ಚತ್ವಾದಿಗಳು ಮುಕ್ತಿಯಲ್ಲಿ ಸರ್ವಥಾ ನಾಶಹೊಂದುತ್ತವೆ. ಕಾಮದಿಂದ ಸಂಸಾರದಲ್ಲಿ ಹುಟ್ಟುತ್ತವೆ. ಆದ ಕಾರಣ ಭೇದಾಭೇದವು.) ಸಂಸಾರಿಗಳಿಗೂ ಸ್ವರೂಪಭೂತಗಳಾದ ಜ್ಞಾನಾದಿ ಗುಣಗಳಿಂದ ಅಭೇದವು. ಮುಕ್ತರಿಗೆ ಹೀಗೆ ಇಲ್ಲ ಎಂದು ತಿಳಿಸುವುದಕ್ಕಾಗಿ ತು ಶಬ್ದವು (೨) ಜಡಗಳಾದ ಘಟಾದಿ ಅವಯವಗಳಿಗೆ ಒಂದೊಂದು ಅಂಶದಿಂದಲೂ ಸಂಸ್ಥಾನ ವಿಶೇಷ ರಹಿತವಾದ ಅಂಶ ಸಮುದಾಯದಿಂದಲೂ ಭೇದಾಭೇದಗಳು. ಸಂಸ್ಥಾನ ವಿಶೇಷ ವಿಶಿಷ್ಟಗಳಾದ ಸರ್ವಾಂಶಗಳಿಂದ ಅಭೇದವು. ಮನುಷ್ಯೋತ್ತಮರು, ಮನುಷ್ಯಗಂಧರ್ವರು, ದೇವ ಗಂಧರ್ವರು, ಪಿತೃದೇವತೆಗಳು, ಕರ್ಮದೇವತೆಗಳು, ತತ್ವಾಭಿಮಾನಿದೇವತೆಗಳು, ದೇವೇಂದ್ರನು, ರುದ್ರನು, ಬ್ರಹ್ಮನು- ಇವರು ಮುಕ್ತಿಯಲ್ಲಿ ಆನಂದಾದಿಗುಣಗಳಿಂದ ಕೆಲವರು (ಸರಸ್ವತ್ಯಾದಿಗಳು ರುದ್ರಾದಿ ದೇವತೆಗಳಿಗಿಂತ) ನೂರುಗುಣ ಹೆಚ್ಚುವುಳ್ಳವರು. ಬ್ರಹ್ಮಾದಿಗಳಾದರೂ ಅಯುತ ಗುಣ ಹೆಚ್ಚು ಉಳ್ಳವರು. ನಿತ್ಯದಲ್ಲಿಯೂ ಪರಸ್ಪರ ಪ್ರೀತಿಯುಳ್ಳವರು, ಎಂದು ಸಿದ್ಧಾಂತ ಎಂಬ ಗ್ರಂಥದಲ್ಲಿರತಕ್ಕ ವಾಕ್ಯವು ಸಾಕ್ಷಾತ್ ಪರಮಾತ್ಮನಿಂದ ಹೇಳಲ್ಪಟ್ಟದ್ದು (೩) (ಹೀಗೆ ಹಿಂದೆ ಹೇಳಿದ ಋಷಿ ಛಂದಸ್ಸು ದೇವತಾದಿ ಜ್ಞಾನ ಪೂರ್ವಕವಾಗಿ ವೇದಾಧ್ಯಯನಾದಿಗಳಿಗೆ ಫಲವನ್ನೂ ಫಲ ಆಗ ತಕ್ಕ ಪ್ರಕಾರವನ್ನೂ ಪ್ರಮಾಣಗಳಿಂದ ತೋರಿಸುತ್ತಾರೆ.) ವೇದಾಧ್ಯಯನವು, ತತ್ವವಿಜ್ಞಾನವು, ವಿಷ್ಣು ವಿಷಯಕ ಭಕ್ತಿಯು, ವೈರಾಗ್ಯವು, ಶಾಸ್ತ್ರನಿಷಿದ್ಧ ಕರ್ಮಗಳ ಪರಿತ್ಯಾಗವು ಶಾಸ್ತ್ರಗಳಲ್ಲಿ ವಿಹಿತಗಳಾದ ಕರ್ಮಗಳನ್ನು ಸದಾ ಮಾಡುವಿಕೆ, ಯಾವಾಗಲೂ ಭಗವಂತನ ಸ್ಮರಣೆಯು, ಇವುಗಳೇ ಮುಖ್ಯವಾಗಿ ಮುಕ್ತಿಗೆ ಸಾಧನಗಳು. ಸ್ವಾಧ್ಯಾಯಾದಿಗಳನ್ನು ಮಾಡದೆ ಮುಕ್ತಿಯು ಆಗಲಾರದು. ಇವುಗಳಿಂದಲೇ ನಿಶ್ಚಯವಾಗಿಯೂ ಮೋಕ್ಷವಾಗುವುದು ||೩೦||

ಭಾ || ಋಷಿ ಛಂದೋ ದೈವತಾನಿ ಜ್ಞಾತ್ವಾಽರ್ಥಂ ಚೈವ ಭಕ್ತಿತಃ | ಸ್ವಾಧ್ಯಾಯೇನೈವ ಮೋಕ್ಷಃ ಸ್ಯಾದ್ವಿರಕ್ತಸ್ಯ ಹರಿಸ್ಮೃತೇಃ || ೩೧ ||

ಅ || (ಇದು ಪ್ರಮಾಣಾಂತರವು. ಆದಕಾರಣ ಪುನರುಕ್ತಿಯಿಲ್ಲ.) ವಿರಕ್ತನಾಗಿ ಸರ್ವದಾ ಭಗವದ್ವಿಷಯಕ ಸ್ಮರಣೆಯುಳ್ಳವನಿಗೆ ಋಷಿ ಛಂದಸ್ಸು ದೇವತೆಗಳನ್ನುಅರ್ಥ (ಪ್ರಯೋಜನ)ವನ್ನು ಭಕ್ತಿಯಿಂದ ತಿಳಿದೇ ವೇದಾಧ್ಯಯನದಿಂದಲೇ ಮೋಕ್ಷವಾಗುವುದು.(ಛಂದಸ್ಸಿನ ಜ್ಞಾನಕ್ಕೆ ಫಲವಿದೆ, ಎಂದುಹೇಳಿದುದರಿಂದ ಛಂದಸ್ಸಿನ ಜ್ಞಾನದಿಂದುಪಯೋಗವಿಲ್ಲವೆಂಬ ಮತವು ನಿರಾಕೃತವಾಯ್ತು.) || ೩೧ ||

ಭಾ || ಜಪ್ಯೇನೈವ ತು ಸಂಸಿದ್ಧ್ಯೇದ್ಬ್ರಾಹ್ಮಣೋ ನಾತ್ರ ಸಂಶಯಃ | ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ || ೩೨ ||

ಅ || ಬ್ರಾಹ್ಮಣನು, ಋಷಿ ಛಂದಸ್ಸು ದೇವತೆಗಳ ಜ್ಞಾನಪೂರ್ವಕವಾಗಿ ಜಪಿಸತಕ್ಕ ಮಂತ್ರದಿಂದಲೇ ಮುಕ್ತನಾಗುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ. ಇತರಮಂತ್ರಗಳನ್ನು ಜಪಿಸಿದರೂ ಜಪಿಸದಿದ್ದರೂ ಮಿತ್ರ (ಸೂರ್ಯ) ದೇವತಾಕವಾದ ಗಾಯತ್ರೀಜಪದಿಂದಲೇ ಫಲವಿದ್ದ ಪ್ರಯುಕ್ತ ಗಾಯತ್ರೀಮಂತ್ರವನ್ನು ಜಪಿಸುವವರು ಬ್ರಾಹ್ಮಣರೆನಿಸುತ್ತಾರೆ. (ಇದು ಪ್ರಮಾಣಾಂತರವು) || ೩೨ ||

ಭಾ || ತಸ್ಮಾನ್ನಿತ್ಯಂ ಹರಿಂ ಧ್ಯಾಯನ್ ಕುರ್ಯಾತ್ಸ್ವಾಧ್ಯಾಯಮಂಜಸಾ | ಐಹಿಕಾ ಆಮುಷ್ಮಿಕಾ ಭೋಗಾ ರಕ್ತಸ್ಯಾನ್ಯಸ್ತು ಮುಚ್ಯತೇ || ಇತಿ ಸ್ವಾಧ್ಯಾಯವಚನಂ ಸ್ವಯಂ ಭಗವತೋದಿತಂ || ೩೩ ||

ಅ || (ತಸ್ಮಾದಿತ್ಯಾದಿ ವಾಕ್ಯವು ಸ್ವಾಧ್ಯಾಯಾಖ್ಯ ಗ್ರಂಥದಲ್ಲಿರತಕ್ಕ ವಾಕ್ಯವು.) ಯಾವ ಕಾರಣದಿಂದ ಐಹಿಕ ಆಮುಷ್ಮಿಕ ಭೋಗಗಳು ಆ ಭೋಗಗಳಲ್ಲಿಯೇ ಆಸಕ್ತನಾದ ಕಾಮುಕನಿಗೆ ಆಗುತ್ತವೋ ಕಾಮುಕನಿಂದ

ಭಿನ್ನನಾದವನು ಮುಕ್ತನಾಗುತ್ತಾನೋ ಆದುದರಿಂದ ನಿತ್ಯದಲ್ಲಿಯೂ ಶ್ರೀಹರಿಯನ್ನು ಧ್ಯಾನಿಸುತ್ತಾ ಚೆನ್ನಾಗಿ ವೇದಾಧ್ಯಯವನ್ನು ಮಾಡಬೇಕು. ಹೀಗೆ ವೇದಾಧ್ಯಯನ ಮಾಡಬೇಕೆಂಬ ವಚನವು ಸಾಕ್ಷಾತ್ ಭಗವಂತನಿಂದಲೇ ಹೇಳಲ್ಪಟ್ಟಿದೆ. ॥ ೩೩ ॥

ಭಾ ॥ (೧) ಸ್ವಾಧ್ಯಾಯಾತ್ತು ಪ್ರವಚನೇ ಸಹಸ್ರ ಗುಣಿತಂ ಫಲಂ । (೨) ಅರ್ಥದ್ರಷ್ಟುಃ ಕೋಟಿಗುಣಂ ತತೋಽನಂತಂ ನಿಯಾಮಕೇ ॥ (೩) ತರ್ಕಾಗಮಾಭ್ಯಾಂ ನಿಯತಿಂ ಯಃ ಕರೋತ್ಯಧಿಕಂ ತತಃ । (೪) ಪೂರ್ಣಂ ವೇದಾಖಿಲದ್ರಷ್ಟುರ್ಬ್ರಹ್ಮಣಃ ಫಲಮುಚ್ಯತೇ ॥ ೩೪ ॥

ಅ ॥ (೧) ಕೇವಲ ವೇದಪಾಠಕ್ಕಿಂತ (ಅರ್ಥಜ್ಞಾನವು ಅಧಿಕವಾದ ಪ್ರಯುಕ್ತ)ಪ್ರವಚನವನ್ನು(ಗುರುಗಳ ಮುಖದಿಂದ ಯಾವುದು ಶ್ರುತವಾಗಿದೆಯೋ ಹೇಗೆ ಶ್ರುತವಾಗಿದೆಯೋ ಅಷ್ಟು ಮಾತ್ರ ವ್ಯಾಖ್ಯಾನವನ್ನು) ಮಾಡಿದರೆ ಸಹಸ್ರ ಗುಣಿತ (ಹೆಚ್ಚು) ಫಲವು. ಗುರುಗಳ ಮುಖದಿಂದ ಹೇಗೆ ಶ್ರುತವಾಗಿದೆಯೋ ಅಷ್ಟು ಮಾತ್ರ ವ್ಯಾಖ್ಯಾನ ಮಾಡುವವನಿಗಿಂತಲೂ ತಾನಾಗಿಯೇ ಅರ್ಥದ್ರಷ್ಟೃವಿಗೆ (ತನ್ನ ಬುದ್ಧಿ ಬಲದಿಂದಲೆ ಗುರು ಮೊದಲಾದವರು ಹೇಳದಿದ್ದ ಅರ್ಥವನ್ನು ತಾನಾಗಿಯೇ ತಿಳಿಯುವವನಿಗೆ) ಕೋಟಿ ಗುಣಿತವಾದ ಫಲವು. ಅರ್ಥದ್ರಷ್ಟೃವಿಗಿಂತಲೂ ನಿಯಾಮಕನಿಗೆ (ತಾನು ತಿಳಿದ ಅರ್ಥವನ್ನು ಇತರರಿಗೆ ಉಪದೇಶ ಮಾಡುವನಿಗೆ) ಅನಂತ ಗುಣಿತವಾದ ಫಲವು. (೩) ಆಪ್ತಿಮಾತ್ರದಿಂದ ಉಪದೇಶಿಸುವವನಿಗಿಂತಲೂ ಯುಕ್ತಿ ಆಗಮಗಳಿಂದ ಉಪಪಾದನೆಯನ್ನು ಯಾರು ಮಾಡುತ್ತಾನೋ, ಆತನಿಗೆ ಹೆಚ್ಚು ಫಲವು. (೪) ಹೀಗೆ ಕೇವಲ ವೇದಾರ್ಥವನ್ನು ನೋಡುವವರಿಗೇನೇ ಮಹಾಫಲವಿದೆವೆಂದಾದ ಮೇಲೆ ಚತುರ್ಮುಖ ಬ್ರಹ್ಮನಿಗೆ ಪೂರ್ಣಫಲವಿದೆ ಎಂದು ಏನು ಹೇಳಬೇಕು. (ಆದ ಕಾರಣ) ನಿಖಿಲವೇದಗಳನ್ನೂ ಅವುಗಳ ಅರ್ಥಗಳನ್ನೂ ಸರ್ವದಾ ನೋಡುತ್ತಿರುವ, ಮತ್ತು ಪರರಿಗೆ ಉಪದೇಶಿಸುತ್ತಿರುವ ಚತುರ್ಮುಖ ಬ್ರಹ್ಮನಿಗೇನೆ ಪೂರ್ಣಫಲವು ॥ ೩೪ ॥

ಅವ ॥ ವೇದಾರ್ಥಜ್ಞಾನಕ್ಕೆ ಮಹಾಫಲವಿದೆ ಎಂದುಕ್ತವಾಯ್ತು. ವೇದವು ಸ್ವರವರ್ಣಾತ್ಮಕವು. ಅದರಲ್ಲಿ ಸ್ವರಗಳು ನಿರರ್ಥಕಗಳು ಎಂದು ಕೆಲವರ ಮತವು. ಅದು ಅಯುಕ್ತವು ಎಂಬ ಅಭಿಪ್ರಾಯದಿಂದ ಹೇಳುತ್ತಾರೆ.

ಭಾ ॥ (೧) ದಾರ್ಢ್ಯಮೇವಾನುದಾತ್ತಾರ್ಥ ಉದಾತ್ತಸ್ಯೋಚ್ಚತಾರ್ಥತಾ । ನೀಚತಾ ಸ್ವರಿತಸ್ಯಾರ್ಥಃ ಪ್ರಚಯಸ್ಯ ಯಥಾಸ್ಥಿತಿಃ । ಸಮಾಹಾರೇಽಖಿಲಾ ಅರ್ಥಾಃ ಸ್ವರಾರ್ಥಾನಾಮಿಯಂ ಸ್ಥಿತಿಃ ॥ ೩೫ ॥

ಅ॥ (೧) ಅನುದಾತ್ತ ಸ್ವರಸಹಿತ ವರ್ಣಗಳಿಗೆ ಯಾವುದು ಅರ್ಥವಿದೆಯೋ, ಅದಕ್ಕೆ ದಾರ್ಢ್ಯರೂಪ ಅರ್ಥವೆಂದು ತಿಳಿಯಬೇಕು. ಉದಾತ್ತ ಸ್ವರ ವಿಶಿಷ್ಟ ವರ್ಣಗಳ ಅರ್ಥವು ಉಚ್ಚತ್ವವು. ಉದಾತ್ತ ಶ್ರುತಿರೂಪ ಸ್ವರಿತಯುಕ್ತವಾದ ವರ್ಣಗಳ ಅರ್ಥವು ನೀಚತ್ವವು. ಪ್ರಚಯ ವಿಶಿಷ್ಟಗಳಾದ ವರ್ಣಗಳ ಅರ್ಥವು ವಿಕಾರವಿಲ್ಲದಿರುವಿಕೆ. (ದಾರ್ಢ್ಯದಿಂದ ಬೇರೆ.) (ಪತಂಜಲಿ ಶಿಷ್ಯರು ಉದಾತ್ತಾದಿ ೭ಸ್ವರಗಳನ್ನು ಅಂಗೀಕರಿಸಿರುವುದರಿಂದ ಸಮಾಹಾರವೆಂದರೆ ಸ್ವರವಿಶೇಷವು (ಉದಾತ್ತಾನುದಾತ್ತ ಸಮುದಾಯರೂಪವಾದ ಸ್ವರಿತ ಭೇದವು) ಎಂದು ಹೇಳಿರುವರು.) ಆ ಸಮಾಹಾರಕ್ಕೆ ಎಲ್ಲಾ ಅರ್ಥಗಳೂ ಇವೆ. (ಪ್ರಕರಣಾದಿಗಳನ್ನು ನೋಡಿ ಆವಾವ ವಿಶೇಷಾರ್ಥಗಳನ್ನು ತೆಗೆದುಕೊಳ್ಳಬೇಕು.) ಅಥವಾ ಅನೇಕಾಕ್ಷರಗಳುಳ್ಳ ಪದದಲ್ಲಿ ಸ್ವರಗಳು ಒಟ್ಟಿಗೆ ಸೇರಿದಾಗ ಅಲ್ಲಿ ಎಲ್ಲಾ ಅರ್ಥಗಳನ್ನೂ ತಿಳಿಯಬೇಕು. ಹೀಗೆ ಸ್ವರಾರ್ಥಗಳ ಸ್ಥಿತಿಯು. (ಸಪ್ತಸ್ವರಗಳ ಉದಾಹರಣೆಗಳನ್ನು ಅನ್ಯತ್ರ ತಿಳಿದುಕೊಳ್ಳಬೇಕು,) ॥ ೩೫ ॥

ಅವ ॥ ಹಾಗಾದರೆ ಅಲ್ಲಿ ವಿರೋಧವು ಬರುವುದು. ಒಂದು ಪದಕ್ಕೆ ಒಂದರ್ಥವಷ್ಟೆ. ಅಕ್ಷರಗಳು ಅನೇಕಗಳಿದ್ದ ಪ್ರಯುಕ್ತ ಸ್ವರಗಳು ಅನೇಕಗಳು. ಒಂದರ್ಥಕ್ಕೆ ಅನೇಕಾರ್ಥಗಳಿಂದ ವಿಶೇಷಣವು ಯುಕ್ತವಾಗಲಾರದು ಎಂದರೆ—

ಭಾ ॥ (೧) ಸ್ತುತ್ಯಧರ್ಮಸ್ಯ ಭೇದೇನ ಪದಾದ್ಯಾದಿ ಸ್ವರೇ ಭಿದಾ ॥ (೨) ಸಾಧಾರಣೋ ವಿಧಿಸ್ತ್ವೇಷ ವಿಶೇಷೋ ಯತ್ರ ಯತ್ರ ಚ ॥ (೩) ಕ್ರಮಾದೇವ ತದನ್ಯೇಷಾಮೃಷ್ಯಾದೀನಾಂ ಸ್ವಯೋಗ್ಯತಃ ॥ ೩೬ ॥

ಅ ॥ (೧) **ವಾಯೋ** ಇದು ಮೊದಲಾದ ಒಂದೇ ಪದದಲ್ಲಿಯೂ, **ವ, ಆಯು** ಇದು ಮೊದಲಾದ ಅನೇಕ ವರ್ಣಗಳಿಂದ ಸ್ತುತ್ಯಗಳಾದ (ವ ಶಬ್ದದಿಂದ ವಿಷ್ಣುವಿನಲ್ಲಿ ಬಲವೂ, ಆಯುಶಬ್ದದಿಂದ ಗಮನ ಕರ್ತೃತ್ವವೂ ಹೇಳಲ್ಪಡುತ್ತದೆ.) ಭಗವದ್ಧರ್ಮಗಳು ಅನೇಕಗಳಾಗಿರುವುದರಿಂದ ಆವಾವ ವಿಶೇಷಕ್ಕಾಗಿ ವಾಯೋ ಇತ್ಯಾದಿ ಪದಗಳ ಆದಿ ಮಧ್ಯ ಅಂತ ಸ್ವರಗಳಿಗೆ ಬೇರೆ ಬೇರೆ ಅರ್ಥವು ವಿರುದ್ಧವಲ್ಲ. (ಅಂದರೆ **ವ** ಶಬ್ದವು ಉದಾತ್ತವಾಗಿರುವುದರಿಂದ ಉಚ್ಚವಾದ ಬಲವೆಂದೂ **ಆಯೋ** ಎನ್ನುವುದು ಅನುದಾತ್ತವಾಗಿರುವ ಪ್ರಯುಕ್ತ ದಾರ್ಢ್ಯಾರ್ಥಕವಾದುದರಿಂದ ದೃಢಗಮನ ಕರ್ತೃತ್ವವೆಂದೂ ಅರ್ಥವಾಗುವುದು. ಆದಕಾರಣ ಒಂದೇ ಪದದಲ್ಲಿಯೂ ಅನೇಕ ಸ್ವರಾರ್ಥಗಳಿಗೆ ವಿರೋಧವಿಲ್ಲ.) (೨) (ಹೀಗೆ ಹೇಳಿದ್ದಕ್ಕೆ ಸರ್ವತ್ರ ಒಂದೇ ರೀತಿಯೆಂದು ನಿಯಮವಿಲ್ಲ. ಮತ್ತೆ) ಇದು ಸ್ವರಾರ್ಥಗಳದ್ದು ಸಾಧಾರಣವಾದ ಪ್ರಕಾರವು. ಆದಕಾರಣ ಎಲ್ಲಿ ಎಲ್ಲಿ ವಿಶೇಷವು ಹೇಳಲ್ಪಡುತ್ತದೋ, ಅಲ್ಲಿ ಅಲ್ಲಿ ಹೇಳಲ್ಪಟ್ಟ ಆ ವಿಶೇಷವನ್ನು ಇಟ್ಟುಕೊಳ್ಳಬೇಕು. (ಅಂದರೆ ಯಾವ ಪದದಲ್ಲಿ ಭಗವದ್ಧರ್ಮಗಳಿಂದ ಅತಿರಿಕ್ತಗಳಾದ ಅವಯವಾರ್ಥಗಳು ಹೇಳಲ್ಪಡುತ್ತವೋ ಅಲ್ಲಿ ಅವಯವಾರ್ಥವಾಗಿ ಭಗವದ್ಧರ್ಮಗಳನ್ನೂ ಭಗವದ್ಧರ್ಮಾತಿರಿಕ್ತಗಳಾದ ಅರ್ಥಗಳನ್ನೂ ಇಟ್ಟುಕೊಳ್ಳಬೇಕು. ಹೇಗೆಂದರೆ— **ಅಗ್ರ್ಯತ್ವಮಗ್ರ ನೇತೃತ್ವಂ** ಎಂದು ಅಗ್ನಿಶಬ್ದದ ಅವಯವಾರ್ಥಗಳಾದ ಅಂಗನೇತೃತ್ವಾದಿಗಳು ಭಗವದ್ಧರ್ಮಗಳಿಂದ ಬೇರೆಯಾದವುಗಳನ್ನು ಹೇಳಿದುದರಿಂದ **ಅಲ್ಲಿ ಅಗ್** ಎನ್ನುವುದು ದಾರ್ಢ್ಯಾರ್ಥವಾದ ಅನುದಾತ್ತವಾಗಿದೆ, ನಿ ಎನ್ನುವುದು ಉಚ್ಚಾರ್ಥಕವಾದ ಉದಾತ್ತವಾಗಿದೆ. ಆದಕಾರಣ ದೃಢಗಳಾದ ಅಂಗಗಳಿಗೆ ಉತ್ಕೃಷ್ಟ ಪ್ರೇರಕನು ಎಂಬ ಸ್ವರಾರ್ಥದಿಂದ ಅನ್ವಯವಿದ್ದರೆ ವಿರೋಧವಿಲ್ಲ.) (೩) (ಉತ್ತಮರಾದ ಋಷಿಗಳು ವಿಶೇಷಾರ್ಥಗಳನ್ನು ತಿಳಿಯುತ್ತಾರೆ.) ಅವರಿಗಿಂತ ಇತರರಾದ ಋಷಿಗಳಿಗೆ ಕ್ರಮದಿಂದಲೇ ತಂತಮ್ಮ ಯೋಗ್ಯತಾನುಸಾರ ಆವಾವ ವಾಕ್ಯಾರ್ಥಜ್ಞಾನವುಂಟಾಗುತ್ತದೆ. (ಯಾವ ಯಾವ ಋಷಿಗಳಿಗೆ ಯಾವ ಯಾವ ಅರ್ಥವು ನೋಡಲು ಯೋಗ್ಯವೋ, ಆವಾವ ಅರ್ಥವನ್ನೇ ಆವಾವ ಋಷಿಗಳು ಕಂಡದ್ದೆಂದು ತಿಳಿಯಬೇಕು. ವ್ಯತ್ಯಾಸವಾಗಿ ತಿಳಿಯಕೂಡದು. ಹೀಗೆಯೇ ಉತ್ತಮ ದೇವತೆಯಲ್ಲಿ ಸರ್ವ ವೇದೋಕ್ತಮಾಹಾತ್ಮ್ಯವೂ, ಇತರ ದೇವತೆಗಳಲ್ಲಿ ತತ್ತದ್ಯೋಗ್ಯತಾನುಸಾರವಾಗಿ ವೇದೋಕ್ತ ಮಾಹಾತ್ಮ್ಯವಿದೆ ಎಂದೂ ತಿಳಿಯತಕ್ಕದು) ॥ ೩ ॥

ಅವ ॥ ಯಥಾಯೋಗ್ಯವಾಗಿ ವೇದಾರ್ಥಗಳನ್ನು ವ್ಯಾಖ್ಯಾನ ಮಾಡಿದರೇನೇ ಹಿಂದೆ ಹೇಳಿದ ಫಲವು ಲಭಿಸುವುದು. ಇಲ್ಲವಾದರೆ ಲಭಿಸುವುದಿಲ್ಲ ಎನ್ನುತ್ತಾರೆ.

ಭಾ । (೧) ವಿಪರ್ಯಯಾರ್ಥಕಥನೇ ವಿಪರೀತಂ ತಥಾ ತಮಃ ॥ (೨) ಯಾವತ್ಪ್ರಯೋಜಕೋ ಜ್ಞಾನೇ ತಾವತ್ತಾವಚ್ಚ ಬಾಧಿಕಃ ॥ ತಥೈವ ವಿಪರೀತೇಽಪಿ ಸ್ಮೃತಾಜ್ಞಾನೇ ಚ ತತ್ಸಮಂ ॥ (೩) ತಮೋನಿರಯ ಮಾನುಷ್ಯ ಸ್ವರ್ಗಮೋಕ್ಷಾತಿರೇಕತಃ । ಯೋಗ್ಯತಾ ತಾರತಮ್ಯೇನ ಫಲಂ ಸರ್ವೇಷು ಚೋಚ್ಯತೇ । ಇತಿ ಪ್ರವೃತ್ತವಚನಂ ವಿವೇಕೇಽಪ್ಯೇತದೀರಿತಂ । ॥ ೩೭ ॥

ಅ ॥ (೧) ವ್ಯತ್ಯಾಸವಾಗಿ ವೇದಾರ್ಥಗಳನ್ನು ಹೇಳಿದರೆ ವಿಪರೀತವಾದ ಫಲವುಂಟಾಗುತ್ತದೆ. (ಯಾವುದೆಂದರೆ) ವಿಪರೀತ ಫಲವಾದುದು ಅಂಧಂತಮಸ್ಸು. (೨) (ಸಿದ್ಧಾಂತಕ್ಕೆ ಅವಿರುದ್ಧ ವಿರುದ್ಧವ್ಯಾಖ್ಯಾನಗಳನ್ನು ಮಾಡಿದರೆ ಅವುಗಳು ಆನವುಗಳ ಆಧಿಕ್ಯಾನುಸಾರವಾಗಿ ಫಲಪ್ರದಗಳಾಗುತ್ತವೆ, ಎನ್ನುತ್ತಾರೆ.) ಸುಜ್ಞಾನ ಉಂಟಾಗಲಿಕ್ಕೆ ಎಷ್ಟೆಷ್ಟು ಪ್ರಯೋಜಕವಿದೆಯೋ ವಿಪರೀತ ಜ್ಞಾನದಲ್ಲಿಯೂ ಯಥಾರ್ಥ ಸ್ಮೃತಿಯಲ್ಲಿಯೂ ವಿಪರೀತವಾದ ಸ್ಮೃತಿಯಲ್ಲಿಯೂ ಯಥಾಯೋಗ್ಯವಾಗಿ ಫಲವು. (೩) ಮೋಕ್ಷಾದಿಗಳು ಅವುಗಳ ಫಲವು. ಅದು ಏಕಪ್ರಕಾರವಾದುದು. (ವ್ಯತ್ಯಾಸವು ಹೇಗೆಂದರೆ) ತಮಸ್ಸು, ನರಕ, ಭೂಲೋಕ, ಸ್ವರ್ಗ, ಮೋಕ್ಷಗಳಿಗೆ, ತಾರತಮ್ಯವಿದ್ದುದರಿಂದ ಯೋಗ್ಯತಾ ತಾರತಮ್ಯವಾಗಿ ಹಿಂದೆ ಹೇಳಿದ ವ್ಯಾಖ್ಯಾತ್ರಾದಿಗಳಲ್ಲಿ ಫಲವು ಹೇಳಲ್ಪಡುತ್ತದೆ. ಹೀಗೆ **ಸ್ವಾಧ್ಯಾಯಾತ್ತು ಪ್ರವಚನೇ** ಇತ್ಯಾದಿಗಳು ಪ್ರವೃತ್ತವಚನವು. ವಿವೇಕವೆಂಬ ಗ್ರಂಥದಲ್ಲಿಯೂ ಈ ಪ್ರಮೇಯವು ಹೇಳಲ್ಪಟ್ಟಿದೆ. ॥ ೩೭ ॥

ಅವ ॥ ಹೀಗಾದರೆ–ಯೋಗ್ಯ ಅಯೋಗ್ಯ ಅರ್ಥಗಳನ್ನು ವಿವೇಚಿಸಲಿಕ್ಕೆ ಅಶಕ್ಯವಾದುದರಿಂದ ವೇದ ವ್ಯಾಖ್ಯಾನವನ್ನೇ ಬಿಟ್ಟು ಬಿಡಬೇಕಾಗುವುದೆಂಬ ಆಶಂಕೆಯನ್ನು ಸ್ಮೃತಿಯಿಂದ ಪರಿಹರಿಸುತ್ತಾರೆ.

ಭಾ ॥ (೧) ಯಾದೃಶೋ ಯೋಗ್ಯತಾಂ ಯಾಯಾತ್ಸ ಜ್ಞೇಯೋಽರ್ಥಸ್ತಥಾ ಸ್ಫುಟಂ ॥ (೨) ಅನಂತ ನಿಯಮೈರ್ಯುಕ್ತಾ ಅನಂತಾರ್ಥ ವಿಶೇಷಿಣಃ ॥ ವೇದಾ ಇತಿ ಸಮಾಸೇನ ನಿಯಮೋಽಯಂ ಸಮೀರಿತಃ ॥ ಋಕ್ಸಂಹಿತಾಗತಂ ವಾಕ್ಯಮಿತಿಚಾನ್ಯನ್ನಿಯಾಮಕಂ ॥ (೩) ತಸ್ಮಾದ್ವಂದ್ಯಾಶ್ಚ ಪೂಜ್ಯಾಶ್ಚ ಬ್ರಹ್ಮಾದ್ಯಾ ಜ್ಞಾನಯೋಜಕಾಃ ॥ ಗುರುತ್ವೇನ ಕ್ರಮಾದೇವ ವಿಶೇಷೇಣೈವ ಕೇಶವಃ । (೪) ಆರಭ್ಯ ಸ್ವಗುರುಂ ಯಾವದ್ವಿಷ್ಣುರೇವೋತ್ತರೋತ್ತರಾಃ । ಕ್ರಮಾನ್ನಿಷ್ಫಲತ್ವಾನ್ಯತ್ರ ಗುರುತತ್ವೇ ಸಮೀರಿತಾ ॥ ೩೮ ॥

ಅ ॥ (೧) ಯಾವ ಅರ್ಥವು ಯೋಗ್ಯತೆಯನ್ನು (ಅಂದರೆ ಪ್ರಮಾಣಗಳಿಂದೊಡಗೂಡುವಿಕೆ, ಪ್ರಮಾಣದಿಂದ ಬಾಧವಿಲ್ಲದಿರುವಿಕೆ,ಆ ವೇದ ವಾಕ್ಯ ಪ್ರತಿಪಾದ್ಯಗಳಾದ ಅರ್ಥಗಳಿಂದೊಡಗೂಡುವಿಕೆ, ಪರಸ್ಪರ ಸಂಬಂಧವಿರುವಿಕೆ, ಇವುಗಳನ್ನು) ಹೊಂದುವುದೋ, ಅಂತಹ ಅರ್ಥವು ಯೋಗ್ಯವೆಂತ ಸ್ಪಷ್ಟವಾಗಿ ತಿಳಿಯಬೇಕು. (೨) (ಹಾಗಾದರೆ ಹೀಗೆ ಸಂಕ್ಷೇಪವಾಗಿ ಏಕೆ ಹೇಳುವುದು? ಇಲ್ಲಿ ಇದು ಯೋಗ್ಯವಾದ ಅರ್ಥವು ಎಂದು ಪ್ರಪ್ರತ್ಯೇಕ ವಿಸ್ತಾರವಾಗಿಯೇ ಹೇಳಬಹುದಷ್ಟೆ ಎಂದರೆ) ವೇದಗಳು ವ್ಯಾಖ್ಯಾನ ಮೊದಲಾದ ಕರ್ತವ್ಯ ಬೋಧಕ ಅನಂತ ಪ್ರಕಾರಗಳಿಂದೊಡಗೂಡಿವೆ. ಅನಂತಾನಂತ ಅರ್ಥ ವಿಶೇಷವುಳ್ಳವುಗಳು. ಹೀಗೆ ಸಂಕ್ಷೇಪವಾಗಿ ಯೋಗ್ಯಾಯೋಗ್ಯ ಅರ್ಥ ವ್ಯವಸ್ಥೆಯು ಹೇಳಲ್ಪಟ್ಟಿದೆ. ಹೀಗೆ ಋಕ್ಸಂಹಿತೆಯಲ್ಲಿರತಕ್ಕ ವಾಕ್ಯವು ವಿವಕ್ಷಿತವಾದ ಅರ್ಥವನ್ನು ಪ್ರತಿಪಾದಿಸತಕ್ಕುದು ಇನ್ನೊಂದು ಪ್ರಮಾಣವಿದೆ. (೩) (ಯಾವ ಕಾರಣದಿಂದ ಹೀಗೆ ಅಯೋಗ್ಯಾರ್ಥವನ್ನು ಹೇಳಿದರೆ ಮಹಾನರ್ಥವಿದೆಯೋ ಆದಕಾರಣ ಪ್ರಮಾದದಿಂದುಂಟಾದ ಅಪರಾಧವನ್ನು ಪರಿಹರಿಸುವುದಕ್ಕಾಗಿ ಪ್ರಾಚೀನರಾದ ವ್ಯಾಖ್ಯಾತೃಗಳ ವಂದನಾದಿಗಳನ್ನು ಮಾಡಲೇಬೇಕೆನ್ನುತ್ತಾರೆ) ಆದಕಾರಣ ಜ್ಞಾನದಾಯಕರಾದ ಬ್ರಹ್ಮಾದಿಗಳನ್ನು ಕ್ರಮವಾಗಿಯೇ ಗುರುಗಳೆಂದು ನಮಸ್ಕರಿಸಬೇಕು. ಪೂಜಿಸಬೇಕು. ಸರ್ವರಿಗಿಂತಲೂ ವಿಶೇಷವಾಗಿಯೇ ಶ್ರೀಹರಿಯು ವಂದ್ಯನೂ ಪೂಜ್ಯನೂ ಆಗಿರುತ್ತಾನೆ. (೪) ತನ್ನ ಗುರುವನ್ನಾರಂಭಿಸಿ ಶ್ರೀ ವಿಷ್ಣುಪರ್ಯಂತವಾಗಿಯೇ ಉತ್ತಮೋತ್ತಮರು ತಾರತಮ್ಯ ಕ್ರಮವಾಗಿಯೇ ನಮ್ಯರೂ ಪೂಜ್ಯರೂ ಆಗಿರುತ್ತಾರೆ. ಇಲ್ಲವಾದರೆ ಫಲವಿಲ್ಲವೆಂದು ಮಾತ್ರವಲ್ಲ, ಮತ್ತೆ ವಿರುದ್ಧ ಅನರ್ಥಫಲವೂ ಲಭಿಸುವುದು, ಎಂದು ಗುರುತತ್ವವೆಂಬ ಗ್ರಂಥದಲ್ಲಿಯೂ ಹೇಳಲ್ಪಟ್ಟಿದೆ. ॥ ೩೮ ॥

ಅವ ॥ ಪರರು ಹೇಳಿರುವ ಅಗ್ನ್ಯಾದಿ ದೇವತೆಗಳೂ ಮಧುಛಂದಃ ಮೊದಲಾದ ಋಷಿಗಳೂ ಅಂಗೀಕಾರಾರ್ಹರಾಗುವರೋ ಇಲ್ಲವೋ ಎಂಬ ಆಶಂಕೆಯನ್ನು ಪರಿಹರಿಸುತ್ತಾ ಮೊದಲನೆಯ ೧೦೦ ಋಕ್ಕುಗಳಿಗೆ ದೇವತೆಯನ್ನೂ ಅವಾಂತರಋಷಿಯನ್ನೂ ಹೇಳುತ್ತಾರೆ.

ಭಾ ॥ ಏವಂ ಸ್ಥಿತೇಽಗ್ನಿಗಂ ವಿಷ್ಣುಮಗ್ನಿನಾಮಾನಮೇವ ಚ । ಮಧುಚ್ಛಂದಾ ಋಕ್ಶತೇನ ವಾಯ್ವಾದಿಗತಮೇವ ಚ । ಸಾಗ್ನ್ಯಾದಿಂ ಸ್ತೌತಿ ಸದ್ಭಕ್ತ್ಯಾ ತತ್ತನ್ನಾಮಾನಮೇವ ಚ ॥ ೩೯ ॥

ಅ ॥ ಹೀಗೆ ಪ್ರಮಾಣಗಳಿಂದ ನಿಶ್ಚಿತವಾಗುತ್ತಿರಲು ಅಗ್ನಿಯಲ್ಲಿ ನಿಯಾಮಕನಾಗಿರತಕ್ಕ ಶ್ರೀ ವಿಷ್ಣುವನ್ನು ಅಗ್ನಿನಾಮಕನನ್ನಾಗಿಯೂ ಹಾಗೆಯೇ ವಾಯು ಇಂದ್ರ ಮೊದಲಾದವರಲ್ಲಿರತಕ್ಕ, ಅಗ್ನಿ ವಾಯು ಇತ್ಯಾದಿಗಳಿಂದ ಕೂಡಿರುವ ಶ್ರೀ ವಿಷ್ಣುವನ್ನು, ವಾಯು ಇಂದ್ರ ಮೊದಲಾದ ಆವಾವ ನಾಮವುಳ್ಳವನನ್ನಾಗಿಯೂ ಮಧುಚ್ಛಂದರೆಂಬ ಋಷಿಗಳು ೧೦೦ ಋಕ್ಕುಗಳಿಂದ ಸಮೀಚೀನಭಕ್ತಿಯಿಂದ ಸ್ತುತಿಸುತ್ತಾರೆ. (ಅಂದರೆ ಅಗ್ನಿ ವಾಯು ಇತ್ಯಾದಿಗಳಲ್ಲಿ ಅಂತರ್ಗತನಾದ ಶ್ರೀ ಹರಿಯನ್ನು ಅಗ್ನಿ ವಾಯು ಇತ್ಯಾದಿ ನಾಮವುಳ್ಳವನನ್ನಾಗಿಯೂ, ಹಾಗೆಯೇ ಅಧಿಷ್ಠಾನವಾದ ಪ್ರಸಿದ್ಧ ಅಗ್ನಿ ವಾಯು ಇತ್ಯಾದಿಗಳನ್ನು ಸ್ತುತಿಸುತ್ತಾರೆ.) ॥ ೩೯ ॥

ಅವ ॥ ಹೀಗೆ **ಅಗ್ನಿಮೀಳೇ** ಮೊದಲಾದ ೯ ಋಕ್ಕುಗಳುಳ್ಳ ಆಗ್ನೇಯ ಸೂಕ್ತವನ್ನು ವ್ಯಾಖ್ಯಾನ ಮಾಡಿ ಅದಕ್ಕೆ ಉಪಯುಕ್ತವಾದ ಪ್ರಮೇಯವನ್ನು ಹೇಳಿ ಈಗ **ವಾಯವಾಯಾಹಿ** ಇತ್ಯಾದಿ ೯ ಋಕ್ಕುಗಳುಳ್ಳ ಸೂಕ್ತವನ್ನು ವ್ಯಾಖ್ಯಾನ ಮಾಡುತ್ತಾರೆ. ಅದರಲ್ಲಿ ಆದಿಯ ೩ ಋಕ್ಕುಗಳು ವಾಯುದೇವತಾಕಗಳು. ೨ನೇ ೩ ಋಕ್ಕುಗಳು ಇಂದ್ರ ವಾಯು ದೇವತಾಕಗಳು. ೩ನೇ ೩ ಋಕ್ಕುಗಳು ಮಿತ್ರ ವರುಣ ದೇವತಾಕಗಳು. ಅದರಲ್ಲಿ ವಾಯು ಮೊದಲಾದ ಶಬ್ದಗಳಿಗೆ ಶ್ರೀವಿಷ್ಣುವಿನಲ್ಲಿ ಮಹಾಯೋಗ ವಿದ್ವದ್ರೂಢಿಗಳಿಂದ ಪರಮ ಮುಖ್ಯ ವೃತ್ತಿಯು. ವಾಯು ಮೊದಲಾದ ಪ್ರಸಿದ್ಧದೇವತೆಗಳಲ್ಲಿ ಆದರೂ ಮುಖ್ಯ ವೃತ್ತಿಯು. ಯೋಗವೆಂದರೆ ಅವಯವ ಶಕ್ತಿಯಿಂದ ಅರ್ಥವನ್ನು ತಿಳಿಸಿಕೊಡುವಿಕೆಯು-

**ಋ ॥ (೧೦) ವಾಯವಾಯಾಹಿ ದರ್ಶತೇಮೇ ಸೋಮಾ ಅರಂಕೃತಾಃ ।
ತೇಷಾಂ ಪಾಹಿ ಶ್ರುಧೀ ಹವಂ ॥ ೧ ॥**

ಅ ॥ ದರ್ಶತ=(ದೃಶಿರ್ ಪ್ರೇಕ್ಷಣೇ) ಸರ್ವಜ್ಞನಾದ ವಾಯೋ=ಬಲರೂಪನೂ ಸರ್ವಾಶ್ರಯನೂ ಆದ ವಾಯುವೇ ಆಯಾಹಿ=ಆಧ್ಯಾತ್ಮಯಜ್ಞವನ್ನು ಕುರಿತು ಮತ್ತು ಬಾಹ್ಯವಾದ ಯಜ್ಞವನ್ನು ಕುರಿತು ಬಾ. (ಬರಬೇಕೆಂದು ಏಕೆ ಪ್ರಾರ್ಥಿಸುವುದೆಂದರೆ) ಇಮೇ ಸೋಮಾಃ ಅರಂಕೃತಾಃ=ಅಧ್ಯಾತ್ಮದಲ್ಲಿ ಮನೋವ್ಯಾಪಾರಗಳು ಭಕ್ತ್ಯಾದಿಗಳಿಂದ ಅಲಂಕೃತಗಳಾಗಿವೆ. ಬಾಹ್ಯಯಜ್ಞದಲ್ಲಿ ಈ ಪ್ರಸಿದ್ಧ ಸೋಮಗಳು ಹಿರಣ್ಯದಿಂದ ಅಲಂಕೃತಗಳಾಗಿವೆ. ತೇಷಾಂ ಪಾಹಿ=ಅಧ್ಯಾತ್ಮದಲ್ಲಿ ಮನೋ ವ್ಯಾಪಾರಗಳನ್ನು ಕುಡಿ. (ಅಂದರೆ ಪ್ರೀತಿಯುಕ್ತಗಳನ್ನಾಗಿ ಮಾಡು.) ಬಾಹ್ಯ ಯಜ್ಞದಲ್ಲಿ ನಿನ್ನದ್ದೇ ಆದ ಸೋಮಗಳನ್ನು ಕುಡಿ (ಅಂದರೆ ಅಪ್ರಾಕೃತ ದಿವ್ಯ ದೇಹ ಇಂದ್ರಿಯಗಳಿಂದ ಕೂಡಿರುವುದರಿಂದ ಸಾರಗಳನ್ನು ಭೋಗಿಸು.) ಹವಂ=ನಿನ್ನ ಆಹ್ವಾನವನ್ನು ಶ್ರುಧಿ=ಕೇಳು. (ಆಗಮನದಿಂದ ಆಹ್ವಾನಶ್ರವಣವನ್ನು ಸಫಲವನ್ನಾಗಿ ಮಾಡು. ಅಂದರೆ—ಆಹ್ವಾನವನ್ನು ಕೇಳು. ಕೇಳಿದ ಮೇಲೆ ಬಾ. ಬಂದು ಸೋಮವನ್ನು ಕುಡಿ) ॥ ೧ ॥

ಭಾ ॥ (೧) ಬಲತ್ವಾದಯನಾಚ್ಚೈವ ವಾಯುರಿತ್ಯಭಿಧೀಯತೇ (೨) ವಾತ್ಯಾಯುರಿತಿ ವಾ ಜ್ಞಾನಾದ್ವರಣಾದಾಶ್ರಯತ್ವತಃ ॥ (೩) ವಯ ಬಂಧನ ಇತ್ಯಸ್ಮಾತ್ಸಂಸಾರಾದೇ-ರ್ವ್ಯಯಾದಪಿ । (೪) ವ್ಯೇತ್ಯಸ್ಮಿನ್ನಿತಿ ವಾ ವಾಯುರ್ವಯ ಶ್ರೇಷ್ಠತ್ವ ಇತ್ಯಪಿ । (೫) ಮುಖ್ಯತೋ ವಾಸುದೇವೇ ತೇ ಗುಣಾಃ ಸಂತ್ಯೇವ ಸರ್ವಶಃ। ಅನಿಷಿದ್ಧಾಸ್ತದನ್ಯೇಷು ಯಥಾಯೋಗ್ಯತಯಾ ಮತಾಃ ॥ ೧ ॥

ಅ ॥ (೧) (**ನಪುಂಸಕೇ ಬಲೇ ವಂ ಸ್ಯಾತ್** ಎಂಬ ಕೋಶದಿಂದ ವಃ=ಬಲರೂಪನು,ಏತೀತ್ಯಾಯುಃ=ಗಮನಕರ್ತನು, ವಶ್ಚಾಸೌ ಆಯುಶ್ಚವಾಯುಃ,) ಬಲಾತ್ಮಕನಾದುದರಿಂದಲೂ ಗಮನಾಶ್ರಯನಾದುದರಿಂದಲೂ ವಾಯುಃ ಎನ್ನಿಸಿಕೊಳ್ಳುತ್ತಾನೆ. (೨) ಅಥವಾ ವಾತಿ ಗಚ್ಛತೀತಿ ವಃ=ಗಮನಾಶ್ರಯನು, ಆಯುಃ=ಜಗತ್ತಿಗೆ ಆಯುಷ್ಯವನ್ನು ಕೊಡುವವನು, ಅಂದರೆ ಜಗತ್ತಿನ ಪ್ರಾಣಧಾರಣಕ್ಕೆ ಕಾರಣನಾದವನು, ವಶ್ಚಾಸೌ ಆಯುಶ್ಚ ವಾಯುಃ=ಅಥವಾ ವಾತೀತಿ ವಾಯುಃ=ಜ್ಞಾನೋತ್ಪಾದಕನಾದುದರಿಂದ ವಾಯುಃ ಎನಿಸುತ್ತಾನೆ. ಅಥವಾ ವೃಣೋತಿ ವ್ರಿಯತೇ ಇತಿ ವಾ ಭಕ್ತರೆಂದು ಸ್ವೀಕರಿಸುವುದರಿಂದಲೂ ಭಕ್ತರಿಂದ ಸ್ವೀಕರಿಸಲ್ಪಡುವುದರಿಂದಲೂ ವಾಯುಃ ಎನ್ನಿಸುತ್ತಾನೆ: ಅಥವಾ ವಾಂತಿ, ಗಚ್ಛಂತಿ ಪ್ರವರ್ತಂತೇ ಅಸ್ಮಿನ್ ಎಂಬ ವ್ಯುತ್ಪತ್ತಿಯಿಂದ ಸರ್ವರಿಗೂ ಆಶ್ರಯನಾದುದರಿಂದ ವಾಯು=ಎನ್ನಿಸುತ್ತಾನೆ. (೩) ವಯ ಬಂಧನೇ ಎನ್ನುವ ಧಾತುವಿನಿಂದ, ವಯತೀತಿ ವಾಯುಃ, ಭವ ಪಾಶದಿಂದ ಬಂಧಿಸುವುದರಿಂದ ವಾಯುಃ, ಎನಿಸುತ್ತಾನೆ. ಅಥವಾ ವ್ಯಯತೇ ವಿನಶ್ಯತ್ಯನೇನ ಎಂಬ ವ್ಯುತ್ಪತ್ತಿಯಿಂದ ಸಂಸಾರಾದಿಗಳನ್ನು ವಿನಾಶಗೊಳಿಸುವುದರಿಂದ ವಾಯುಃ ಎನಿಸುತ್ತಾನೆ. (೪) ವ್ಯೇತಿ ಅಸ್ಮಿನ್=ಈತನಲ್ಲಿ ಲಯ ಹೊಂದುವ ಪ್ರಯುಕ್ತವೂ ವಾಯುಃ ಎನಿಸುತ್ತಾನೆ. ಅಥವಾ ವಯ ಶ್ರೇಷ್ಠತ್ವೇ ಎನ್ನುವ ಧಾತುವಿನಿಂದ ವಯತೀತಿ ಶ್ರೇಷ್ಠನಾದ ಪ್ರಯುಕ್ತವೂ (ಅಂದರೆ ಶ್ರೇಷ್ಠತ್ವೋಪಯೋಗಿ ಭಕ್ತ ಸಂರಕ್ಷಣಾದಿರೂಪವ್ಯಾಪಾರವಿದ್ದುದರಿಂದಲೂ) ವಾಯುಃ ಎನಿಸುತ್ತಾನೆ. (೫) (ಭಗವಂತನಲ್ಲಿ ಹೇಗೋ ಹಾಗೆಯೇ ಇತರ ದೇವತೆಗಳಲ್ಲಿಯೂ ಈ ವ್ಯಾಖ್ಯಾನವನ್ನು ತಿಳಿಯಬೇಕೋ ಎಂದರೆ-) ಪರಮಮುಖ್ಯವೃತ್ತಿಯಿಂದ ಆ ಎಲ್ಲಾ ಗುಣಗಳೂ ಶ್ರೀ ವಾಸುದೇವನಲ್ಲಿಯೇ ಇರುತ್ತವೆ. ಯಾವವು ಶ್ರೀ ಪರಮಾತ್ಮನಿಗೆ ಲಕ್ಷಣಗಳಾಗುವುದಿಲ್ಲವೋ, ಅಂತಹವುಗಳೂ ಶ್ರೀ ಪರಮಾತ್ಮನಿಗಿಂತ ಇತರರಾದವರಲ್ಲಿ ಯಥಾಯೋಗ್ಯಗಳಾಗಿಯೇ ಇರುತ್ತವೆ. (ನಿರತಿಶಯಗಳಾದವುಗಳಲ್ಲ. ಏಕೆಂದರೆ ನಿರತಿಶಯಜ್ಞಾನ ಆನಂದಾದಿಗಳು ಭಗವಂತನ ಲಕ್ಷಣಗಳಾಗಿವೆ.) ॥ ೧ ॥

ಭಾ ॥ (೧) ದರ್ಶತಸ್ತದ್ವ್ಯಾಪ್ತಿತ್ವಾತ್ಸರ್ವಜ್ಞೋಽಸೌ ಯತೋ ವಿಭುಃ ॥ (೨) ಭಕ್ತ್ಯಾದ್ಯಲಂಕೃತಾಃ ಸೋಮಾ ಮನಾಂಸ್ಯನ್ಯೇ ಹಿರಣ್ಯತಃ । ಹಿರಣ್ಯಾಲಂಕೃತಾ ಯಸ್ಮಾ-ದ್ಧ್ಯಯಂತೇ ವಾಯವೇ ಸುತಾಃ ॥ ೩ ॥ ತಾನ್ಪಾಹಿ ಶ್ರುಧಿ ಚಾಹ್ವಾನಂ ಸ್ವಾತಂತ್ರ್ಯೇ ವ್ಯತ್ಯಯೋಽಪ್ಯಯಂ ॥ (೪) ಮನೋಽಪಿ ಭೋಗ್ಯಮೀಶಸ್ಯ ಪ್ರೀತಿಮಾತ್ರೇಣ ಕೇವಲಂ ॥ (೫) ಗುಣಾಧಿಕ್ಯಂ ಯೇನ ಭವೇದ್ವೇದಸ್ಯಾರ್ಥಃ ಸ ಏವ ಹಿ । ಪ್ರಯೋ-ಜಕತ್ವಾನ್ನಾನ್ಯಸ್ಯ ಫಲಾಭಾವಾತ್ತದರ್ಥತಾ ॥ (೬) ಉಪಕ್ರಮಾದಯೋ ಯತ್ರ ತಾತ್ಪರ್ಯಾರ್ಥಸ್ಸ ಏವ ಹಿ ॥ ೧ ॥

ಅ ॥ (೧) ಯಾವ ಕಾರಣದಿಂದ ಈ ಶ್ರೀಹರಿಯು ಸರ್ವತ್ರ ವ್ಯಾಪ್ತವಾದ ದೃಷ್ಟಿಯಿರುವುದರಿಂದ ಸರ್ವಜ್ಞನಾಗಿರುತ್ತಾನೋ, ಆದಕಾರಣ ದರ್ಶತಃ=ಜ್ಞಾನದಿಂದ ವ್ಯಾಪ್ತನು. (೨) ಅಧ್ಯಾತ್ಮದಲ್ಲಿ ಮನಸ್ಸಿನ ವ್ಯಾಪಾರಗಳು ಭಕ್ತ್ಯಾದಿಗಳಿಂದ ಅಲಂಕೃತಗಳಾಗಿವೆ. ಪ್ರಸಿದ್ಧ ಬಾಹ್ಯ ಯಜ್ಞದಲ್ಲಿ ಇತರಗಳಾದ (ಬಹಿಷ್ಠಗಳಾದ) ಈ ಪ್ರಸಿದ್ಧ ಸೋಮಗಳು ಹಿರಣ್ಯದಿಂದ. ಅಂದರೆ ಹಿರಣ್ಯದಿಂದ ಅಲಂಕೃತಗಳಾಗಿವೆ. ಯಾವ ಕಾರಣ

ದಿಂದ ಸೋಮಗಳು ಹೋಮಿಸಲ್ಪಡುತ್ತವೋ. (೩) (ಆ ಸೋಮಗಳ ರಸವನ್ನು ಕುಡಿ. ನಿನ್ನ ಆಹ್ವಾನವನ್ನು ಕೇಳು. (ತಾನ್ ಎಂದು ಹೇಳದೆ **ತೇಷಾಂ** ಎಂದು ವಿಭಕ್ತಿ ವ್ಯತ್ಯಾಸವಾಗಿ ಹೇಳಲು ಕಾರಣವೇನಂದರೆ) ತೇಷಾಂ ಎಂದು ವಿಭಕ್ತಿ ವ್ಯತ್ಯಾಸವಾಗಿ ಹೇಳಿದುದು ಸ್ವಾತಂತ್ರ್ಯವೆಂಬ ಅರ್ಥದಲ್ಲಿ. (ತಥಾಚ ನಿನ್ನದ್ದೇ ಆದ ಸೋಮಗಳನ್ನು ನೀನು ಕುಡಿ ಎಂದರ್ಥವು.)(**ವ್ಯತ್ಯಯೋಽಪ್ಯಯಂ** ಎಂಬಲ್ಲಿದ್ದ ಅಪಿಪದವು **ಸಂಹಿತಾಯಾಂ ಯತ್ರ ಧೈರ್ಘ್ಯಂ ಪದಕಾಲೇ ನ ವಿದ್ಯತೇ । ಉಕ್ತಾರ್ಥಸ್ಯ ಮಹಾಧಿಕ್ಯಂ ಶ್ರುತೇಸ್ತತ್ರ ವಿವಕ್ಷಿತಂ ॥** ಎಂಬ ಪ್ರಮಾಣದಿಂದ **ಶ್ರುಧಿ** ಎಂದು ಹೇಳದೆ ಸಂಹಿತೆಯಲ್ಲಿ **ಶ್ರುಧೀ** ಎಂದು ದೀರ್ಘ ಹೇಳಿದ್ದೂ ಉಕ್ತವಾದ ಅರ್ಥಕ್ಕೆ ಆಧಿಕ್ಯವನ್ನು ತಿಳಿಸುವುದು.) (೪) (ಅಧ್ಯಾತ್ಮದಲ್ಲಿ ಮನಸ್ಸು ಸೋಮವಲ್ಲವೆಂದಾದರೆ ಮನಸ್ಸಿಗೆ ಪಾನವು ಹೇಗೆಕೂಡುತ್ತದೆಂದರೆ) ಶ್ರೀಹರಿಗೆ ಕೇವಲ ಪ್ರೀತಿಮಾತ್ರದಿಂದಲೇ ಮನಸ್ಸೂ (ಪ್ರೀತಿಯುಕ್ತ ಮನೋವ್ಯಾಪಾರಗಳು) ಭೋಗ್ಯವಾಗುತ್ತವೆ. (೫) (ತೇಷಾಂ ಪಾಹಿ ಎನ್ನುವಲ್ಲಿ ತಾನ್ ಪಾಹಿ ಎಂದು ವಿಭಕ್ತಿ ವ್ಯತ್ಯಾಸವನ್ನು ಅಂಗೀಕರಿಸಿ ಸ್ವಾತಂತ್ರ್ಯರೂಪ ಅರ್ಥದಲ್ಲಿ ವ್ಯಾಖ್ಯಾನ ಮಾಡುವುದಕ್ಕಿಂತಲೂ ಸೋಮಗಳ ರಸವನ್ನು ಪಾನಮಾಡು ಎಂಬ ವ್ಯಾಖ್ಯಾನವೇ ಶ್ರೇಷ್ಠವು, ಎಂದರೆ ಸಮಾಧಾನ ಹೇಳುತ್ತಾರೆ.) ಯಾವ ಅರ್ಥವನ್ನು ವ್ಯಾಖ್ಯಾನ ಮಾಡಿದರೆ ಗುಣಾಧಿಕ್ಯವು ದೇವತೆಯಲ್ಲಿ ಜ್ಞಾಪಿತವಾಗುತ್ತದೋ, ಫಲವಿದ್ದುದರಿಂದ ವೇದಕ್ಕೆ ಆ ಅರ್ಥವೇ ಆಗುವುದು. ಗುಣಾಧಿಕ್ಯಕ್ಕೆ ವಿರೋಧಿಯಾದ ಅರ್ಥಕ್ಕೆ ಫಲವಿಲ್ಲದಿರುವುದರಿಂದ ಅದು ವೇದಾರ್ಥವಾಗುವುದೇ ಇಲ್ಲ. (ಅಂದರೆ ಶ್ರೀಹರಿಗೆ ಗುಣಾಧಿಕ್ಯವಿದೆ ಎಂದು ತಿಳಿದರೇನೇ ಆತನು ಫಲವನ್ನು ಕೊಡುತ್ತಾನೆ. ವಿಭಕ್ತಿ ವ್ಯತ್ಯಾಸವಿದ್ದರೇನೇ ಗುಣಾಧಿಕ್ಯವು ಲಭಿಸುತ್ತದೆ.) (೬) (ಫಲವಿದ್ದರೂ ಈ ಅರ್ಥವೇ ಆಗಬೇಕು ಎಂಬಲ್ಲಿ ನಿಯಾಮಕವೇನು ಎಂದರೆ) ಎಲ್ಲಿ ಯಾವ ಅರ್ಥಕ್ಕೆ ಉಪಕ್ರಮಾದಿಗಳು ಅನುಕೂಲಗಳಾಗಿವೆಯೋ ಅದೇವೇ ತಾತ್ಪರ್ಯಾರ್ಥವು. (ಅಂದರೆ ಉಪಕ್ರಮಾದಿಗಳು ತಾತ್ಪರ್ಯಾರ್ಥಕ್ಕೆ ನಿರ್ಣಾಯಕಗಳಷ್ಟೆ. ತಾತ್ಪರ್ಯಾರ್ಥವನ್ನು ತಿಳಿದರೇನೇ ಸ್ವರ್ಗಾದಿಸರ್ವಫಲಗಳಿಗಿಂತ ಅಧಿಕವಾದ ಮೋಕ್ಷರೂಪ ಫಲವು ಆಗುತ್ತದೆ.) (ಅಥವಾ ಉಪಕ್ರಮಾದಿಗಳಲ್ಲಿ ಉತ್ತರೋತ್ತರವು ಪ್ರಬಲವಾಗಿರುವುದರಿಂದ ಫಲವತ್ತ್ವರೂಪವಾದ ತಾತ್ಪರ್ಯಲಿಂಗವು ಉಪಕ್ರಮಾದಿಗಳು ಎಲ್ಲಕ್ಕಿಂತಲೂ ಶ್ರೇಷ್ಠವು) ॥ ೧ ॥

ಋ ॥ (೧೧) ವಾಯ ಉಕ್ಥೇಭಿರ್ಜರಂತೇ ತ್ವಾಮಚ್ಛಾ ಜರಿತಾರಃ । ಸುತಸೋಮಾ ಅಹರ್ವಿದಃ ॥ ೨ ॥

ಅ ॥ ವಾಯೋ=ಎಲೋ ವಾಯುವೇ, ಸುತಸೋಮಾಃ= ಸೋಮಗಳನ್ನು ಛೇದಿಸಿರುವ, ಅಚ್ಛ ಅಹರ್ವಿದಃ=(ಯಾವ ದಿನದಲ್ಲಿ ಸೋಮವನ್ನು ಹಿಂಡುತ್ತೇವೋ ಆ ದಿನಕ್ಕೆ ಅಹಃ ಎಂದು ಹೆಸರು. ಅದರಿಂದ ಯಜ್ಞವನ್ನು ಇಟ್ಟುಕೊಳ್ಳಬೇಕು) ಸುತ್ತಮುತ್ತಲೂ ಯೋಗ್ಯ ರೀತಿಯಿಂದ ಯಜ್ಞಗಳನ್ನು ತಿಳಿದಿರುವ, ಜರಿತಾರಃ=ಸ್ತೋತೃಗಳು, ಉಕ್ಥೇಭಿಃ=ಶಸ್ತ್ರಗಳಿಂದ, ತ್ವಾಂ=ನಿನ್ನನ್ನು, ಜರಂತೇ=ಸ್ತುತಿಸುತ್ತಾರೆ. ॥ ೨ ॥

ಭಾ ॥ ಸ್ತುವಂತಿ ಶಸ್ತ್ರೈಃ ಸ್ತೋತಾರೋ ಯಥಾವದ್ಯಜ್ಞವೇದಿನಃ ॥ ೨ ॥

ಅ ॥ ಯಥಾಯೋಗ್ಯವಾಗಿ ಯಜ್ಞಗಳನ್ನು ತಿಳಿದಿರುವ ಸ್ತೋತೃಗಳು ಶಸ್ತ್ರ ಮಂತ್ರಗಳಿಂದ ಸ್ತುತಿಸುತ್ತಾರೆ. ॥ ೨ ॥

ಋ ॥ (೧೨) ವಾಯೋ ತವ ಪ್ರಪೃಂಚತೀ ಧೇನಾ ಜಿಗಾತಿ ದಾಶುಷೇ । ಉರೂಚೀ ಸೋಮಪೀತಯೇ ॥ ೩ ॥

ಅ ॥ ವಾಯೋ=ಎಲೋ ವಾಯುವೇ, ತವ=ನಿನ್ನನ್ನು, ಪ್ರಪೃಂಚತೀ=(ಪೃಚೀಸಂಪರ್ಕೇ) ಸ್ಪರ್ಶಿಸುವ (ನಿನ್ನ ಸಂಪರ್ಕವುಳ್ಳ) (ನಿನ್ನ ಸ್ತುತಿ ರೂಪವಾದ) ಉರೂಚೀ=ಅತಿ ಮಹತ್ತಾದ, ಧೇನಾ=ವಚನವು, ಸೋಮ ಪೀತಯೇ=ಸೋಮಪಾನ ಮಾಡತಕ್ಕ, ದಾಶುಷೇ=ಯಜಮಾನನಿಗೋಸ್ಕರ, ಜಿಗಾತಿ=(ಇಷ್ಟವನ್ನು) ಹೊಂದಿಸಿ ಕೊಡುತ್ತದೆ. (ಅಂದರೆ ನಿನ್ನ ಸ್ತೋತ್ರವು ಯಜಮಾನನಿಗೆ ಇಷ್ಟವನ್ನು ಸಾಧಿಸಿಕೊಡುತ್ತದೆ. ಆದಕಾರಣ ಸ್ತೋತ್ರ ಮಾಡತಕ್ಕ ನಮಗೆ ಇಷ್ಟವನ್ನು ಮಾಡು) ॥ ೩ ॥

ಭಾ ॥ ವಾಕ್ ತ್ವತ್ಸಂಪರ್ಕಿಣೀ ಯಜ್ಞಕೃತೇ ಪ್ರಾಪಯತೀಪ್ಸಿತಂ ।
ಸೋಮಪಾಯಾತಿಮಹತೀ ಮಹಾರ್ಥತ್ವಾತ್ತ್ವದರ್ಥತಃ ॥ ೩ ॥

ಅ ॥ (ನೀನು ಸರ್ವರಿಗಿಂತಲೂ ಅತಿ ಶ್ರೇಷ್ಠನು, ಆದಕಾರಣ) ನಿನ್ನನ್ನುದ್ದೇಶೀಕರಿಸಿರುವುದರಿಂದ ಅತಿ ಶ್ರೇಷ್ಠವಾದ ಅರ್ಥವುಳ್ಳದ್ದಾದ ಕಾರಣ ಅತಿ ಶ್ರೇಷ್ಠವಾದ, ನಿನ್ನನ್ನು ಸ್ತುತಿಸುವ, ವಚನವು, ಸೋಮ ಪಾನ ಮಾಡತಕ್ಕ, ಮತ್ತು ಯಾಗ ಮಾಡತಕ್ಕ ಯಜಮಾನನಿಗೋಸ್ಕರ, ಇಷ್ಟಾರ್ಥವನ್ನು ಹೊಂದಿಸಿಕೊಡುತ್ತದೆ.॥೩॥

ಋ ॥ (೧೩) ಇಂದ್ರವಾಯೂ ಇಮೇ ಸುತಾ ಉಪ ಪ್ರಯೋಭಿರಾ ಗತಂ ।
ಇಂದವೋ ವಾಮುಶಂತಿ ಹಿ ॥ ೪ ॥

ಅ ॥ ಇಂದ್ರವಾಯೂ=(ಇದಿ ಪರಮೈಶ್ವರ್ಯೇ ಎಂಬ ಧಾತುವಿನಿಂದ) ಪರಮೈಶ್ವರ್ಯ ಸಂಪನ್ನನಾದುದ ರಿಂದ ಇಂದ್ರ ಎನಿಸಿಕೊಂಡವನು, ಅಥವಾ ವಿಷಯಗಳ ಸಮುದಾಯವನ್ನು ಕುರಿತು ಓಡುವುದರಿಂದಲೂ ಸಮಸ್ತ ವಿಷಯಗಳನ್ನುಪಭೋಗಿಸುವುದರಿಂದಲೂ, ಈ ಎಲ್ಲಾ ವಸ್ತುಗಳನ್ನು ನೋಡುವುದರಿಂದಲೂ, (ಇಂಧೀದೀಪ್ತೌ) ವಿಶೇಷತಃ ಪ್ರಕಾಶವಿರುವುದರಿಂದಲೂ (ರಾದಾನೇ) ಸರ್ವಾಭೀಷ್ಟವನ್ನು ಕೊಡುವುದರಿಂದಲೂ, ಪ್ರಸಿದ್ಧನಾದ ಇಂದ್ರನೇ ಮತ್ತು ವಾಯುವೇ ಮತ್ತು ಇಂದ್ರ ವಾಯುಗಳಲ್ಲಿ ಅಂತರ್ಗತರಾದ ಉಪೇಂದ್ರ ಸಂಕರ್ಷಣರೇ, ಇಮೇ ಸುತಾಃ=ಈಸೋಮಗಳು, (ಸಂಪಾದಿತಗಳಾಗಿವೆ.) ಇಂದವಃ=ಆ ಸೋಮಗಳು, (ಅಂದರೆ ಬಾಹ್ಯ ಯಜ್ಞ ದಲ್ಲಿ ಸೋಮದಲ್ಲಿರತಕ್ಕ ಸೋಮಾಭಿಮಾನಿಗಳಾದ ದೇವತೆಗಳು, ಅಧ್ಯಾತ್ಮದಲ್ಲಿ ನಮ್ಮ ಮನೋವೃತ್ಯಭಿಮಾನಿ ಗಳು) ಹಿ=ಯಾವ ಕಾರಣದಿಂದ,ವಾಂ=ನಿಮ್ಮಿಬ್ಬರನ್ನು,ವಿಶಂತಿ=(ವಶ ಕಾಂತೌ) ನಿಮ್ಮಿಬ್ಬರಆಗಮನವನ್ನು ಇಚ್ಛಿ ಸುತ್ತಾರೋ, (ಆ ಕಾರಣದಿಂದ)ಪ್ರಯೋಭಿಃ=ಅತ್ಯಂತ ಪ್ರಿಯರಾದವರಿಂದೊಡಗೂಡಿ, ಉಪಆಗತಂ=ಬನ್ನಿರಿ॥.॥

ಭಾ ॥ (೧) ಇಂದ್ರಃ ಸ ಪರಮೈಶ್ವರ್ಯಾದಿದಮುದ್ದಿಶ್ಯ ಚ ದ್ರುತೇಃ । ದದರ್ಶೇದಂ ದೀಪ್ತಿ ಮತ್ತ್ವಾದಿದಂ ರಾತೀತಿ ವಾ ಭವೇತ್ ॥ (೨) ಸೋಮಾಭಿಮಾನಿನೋ ದೇವಾ ವಾಮಿಚ್ಛಂತಿ ಹಿ ಸೋಮಗಾಃ ॥ (೩) ಪ್ರಿಯೈರುಪಾಗತಂ ತೇನೋಪೇಂದ್ರಃ ಸಂಕ ರ್ಷಣೋ ಹರಿಃ ॥ (೪) ದ್ವಿರೂಪತ್ವಾದ್ಬಹುತ್ವಂಚ ವಿಶೇಷಾದೇವ ಕೇವಲಂ । ಏಕ ಸ್ಯೈವ ಹರೇರ್ನಾತ್ರ ಭೇದಃ ಶಂಕ್ಯಃ ಕಥಂಚನ ॥ (೫) ಏಕಮೇವಾದ್ವಿತೀಯಂ ತನ್ನೇಹ ನಾನಾಸ್ತಿ ಕಿಂಚನ । ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ । ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ । ಏವಂ ಧರ್ಮಾನ್ ಪೃಥಕ್ ಪಶ್ಯಂಸ್ತಾನೇವಾನು ವಿಧಾವತಿ ॥ (೬) ಉಕ್ತ್ವಾ ಧರ್ಮಾನ್ ಪೃಥಕ್ತ್ವಸ್ಯ ನಿಷೇಧಾದೇವಮೇವ ಹಿ । ವಿಶೇಷೋ ಜ್ಞಾಯತೇ ಶ್ರುತ್ಯಾ ಭೇದಾ ದನ್ಯಶ್ಚ ಸಾಕ್ಷಿತಃ ॥ ೪ ॥

ಅ ॥ (೧) (ಇಂದ್ರ ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ.) **ಆ ಶ್ರೀಹರಿಯು** (1) **ಪರಮೈಶ್ವರ್ಯ** ಸಂಪನ್ನನಾದುದರಿಂದಲೂ, (2) ಅಥವಾ ಈ ವಿಷಯ ಸಮುದಾಯವನ್ನುದ್ದೇಶಿಸಿ ಓಡುವುದರಿಂದಲೂ (ಅಂದರೆ ಸರ್ವ ವಿಷಯಗಳನ್ನುಪಭೋಗಿಸುವುದರಿಂದಲೂ) (3) **ಇದನುದರ್ಶಮಿತೀ॑ ತಸ್ಮಾದಿದಂದ್ರೋನಾಮ** ಇತ್ಯಾದಿ ಶ್ರುತ್ಯುಕ್ತ ಪ್ರಕಾರ ಸರ್ವ ವಸ್ತುಗಳನ್ನು ನೋಡುವುದರಿಂದಲೂ (4) **ಇಂಧೋ ಹವೈ ನಾಮೈಷಃ** ಇತ್ಯಾದಿ ಶ್ರುತ್ಯುಕ್ತ ಪ್ರಕಾರ ವಿಶೇಷತಃ ಪ್ರಕಾಶವುಳ್ಳವನಾದುದರಿಂದಲೂ (5) ಭಕ್ತರಿಗೆ ಅಭೀಷ್ಟವನ್ನು ಕೊಡುವುದರಿಂದಲೂ ಇಂದ್ರನೆನಿಸುತ್ತಾನೆ. (೨) ಇಂದ್ರವಾಯುಗಳೇ ಸೋಮದಲ್ಲಿರತಕ್ಕ ಸೋಮಾಭಿಮಾನಿಗಳಾದ ದೇವತೆಗಳು ನಿಮ್ಮಿಬ್ಬರನ್ನು (ನಿಮ್ಮ ಆಗಮನವನ್ನು) ಯಾವ ಕಾರಣದಿಂದ ಇಚ್ಛಿಸುತ್ತಾರೋ, (೩) ಆ ಕಾರಣದಿಂದ ಅತಿಪ್ರಿಯರಾದವರಿಂದ ಕೂಡಿ ಬನ್ನಿರಿ. ಇಲ್ಲಿ ಇಂದ್ರ ವಾಯು ಶಬ್ದಗಳಿಂದ ಪ್ರಸಿದ್ಧ ಇಂದ್ರವಾಯುಗಳೂ, **ನಾಮಗ್ರಹಣೇ ತದೇಕದೇಶಗ್ರಹಣಂ** ಎಂಬ ನ್ಯಾಯದಿಂದ ಇಂದ್ರ ಶಬ್ದದಿಂದ ಇಂದ್ರಾಂತರ್ಗತ ಉಪೇಂದ್ರನೂ, **ಬಲಜ್ಞಾನ ಸ್ವರೂಪತ್ವಾದ್ವಾಯುಃನಾಮಾ ಸ ಏವಚ । ವಾಯೌ ಸಂಕರ್ಷಣೋ ನಿತ್ಯಂ ಸ್ಥಿತಃ** ಎಂಬ ಪ್ರಮಾಣದಿಂದ ವಾಯು ಶಬ್ದದಿಂದ ವಾಯುವಿನಲ್ಲಿ ಅಂತರ್ಗತನಾದ ಸಂಕರ್ಷಣ ರೂಪಿಯಾದ ಶ್ರೀಹರಿಯೂ ಹೇಳಲ್ಪಡುತ್ತಾನೆ (೪) ಭೇದರಹಿತನೇ ಆದ ಶ್ರೀಹರಿಗೆ ಎರಡು ರೂಪಗಳು ಇದ್ದುದರಿಂದ(**ಇಂದ್ರವಾಯೂ** ಇತ್ಯಾದಿ ದ್ವಿವಚನಾಂತ ಶಬ್ದವಾಚ್ಯತ್ವವು ಕೂಡುತ್ತದೆ)(**ಯತ್ರ ದ್ವಿತ್ವಂ ತತ್ರ ಭೇದಃ**ಎಂಬನ್ಯಾಯದಿಂದ ದ್ವಿತ್ವವಿದ್ದರೆ ಭೇದವು ಅವಶ್ಯವಾಗಿ ಇರಬೇಕಾದುದರಿಂದ ಭೇದವೇ ಇಲ್ಲದಿರುವ ಶ್ರೀಹರಿಗೆ ಎರಡು ರೂಪಗಳು ಹೇಗೆ ಕೂಡುತ್ತವೆ ಎಂದರೆ) ವಸ್ತುತಃ ಭೇದವಿಲ್ಲದಿದ್ದರೂ ಭೇದಕಾರ್ಯನಿರ್ವಾಹಕವಾದ ಭೇದ ಪ್ರತಿನಿಧಿ ಸ್ವರೂಪ ಸಾಮರ್ಥ್ಯರೂಪವಾದ ವಿಶೇಷದಿಂದಲೇ ಕೇವಲವಾಗಿ ಬಹುತ್ವವೂ ದ್ವಿತ್ವವೂ ಕೂಡುತ್ತದೆ. ಈ ವಿಷಯದಲ್ಲಿ ಭಗವದ್ರೂಪಗಳಲ್ಲಿ ಯಾವ ಪ್ರಕಾರದಿಂದಲೂ ಭೇದವಾಗಲೀ, ಅಭೇದಸಹಿತವಾದ ಭೇದವಾಗಲೀ ಶ್ರುತಿವಿರೋಧ ಬರುವ ಪ್ರಯುಕ್ತವೇ ಶಂಕಿಸಕೂಡದು. (೫) (ಶ್ರುತಿಗಳು ಯಾವವು ಎಂದರೆ) ತತ್=ಆ ಬ್ರಹ್ಮನು ಏಕಂ=ತನ್ನ ದೇಹ ಗುಣಕ್ರಿಯಾದಿಗಳಿಂದ ಭೇದವಿಲ್ಲದಿರುವವನು ಏವ=ಭೇದಾಭೇದವಿಲ್ಲದಿರುವವನು, ಅದ್ವಿತೀಯಂ=ಸಮಾಧಿಕ ರಹಿತನೂ ಆದ, ಇಹ=ಬ್ರಹ್ಮನಲ್ಲಿ, ಕಿಂಚನ=ಅವಯವ ಗುಣಕ್ರಿಯಾ ಪ್ರಾದುರ್ಭಾವಾದಿಗಳು, ನಾನಾ=ಭಿನ್ನವಾದುದು, ನಾಸ್ತಿ=ಇಲ್ಲ, ಯಃ=ಯಾವಾತನು, ಇಹ=ಬ್ರಹ್ಮನಲ್ಲಿ, ನಾನೇವ=ಭಿನ್ನಾಭಿನ್ನನನ್ನುಯಾವುದನ್ನಾದರೂ, ಪಶ್ಯತಿ=ನೋಡುತ್ತಾನೋ,ಸಃ=ಆತನು,ಮೃತ್ಯೋಃ=ಮರಣಾನಂತರದಲ್ಲಿ, ಮೃತ್ಯುಂ=ಅಂಧಂ॑ತಮಸ್ಸನ್ನು ಆಪ್ನೋತಿ=ಹೊಂದುತ್ತಾನೆ. ಯಥಾ=ಹೇಗೆ ಪರ್ವತೇಷು=ಪರ್ವತಗಳಲ್ಲಿ, ದುರ್ಗೇ=ಶಿಖರದಲ್ಲಿ, ವೃಷ್ಟಂ=ವರ್ಷಿಸಲ್ಪಟ್ಟ, ಉದಕಂ=ನೀರು, ವಿಧಾವತಿ=ಕೆಳಗೆ ಓಡಿಹೋಗುತ್ತದೋ, ಏವಂ=ಹೀಗೆಯೇ, ಧರ್ಮಾನ್=ವಿಷ್ಣು ಧರ್ಮಗಳನ್ನು, ಪೃಥಕ್ ಪಶ್ಯನ್=ಶ್ರೀವಿಷ್ಣುವಿಗೂ ಧರ್ಮಗಳಿಗೂ ಪರಸ್ಪರವಾಗಿ ಭೇದವಿದೆ ಎಂದು ತಿಳಿದುಕೊಂಡ ಪುರುಷನು, ತಾನೇವ ಅನು=ಹಾಗೆ ಕಂಡವರನ್ನು ಅನುಸರಿಸಿಯೇ, ವಿಧಾವತಿ=ಕೆಳಗೆ ಹೋಗುತ್ತಾನೆ. (ಅಂಧಂತಮಸ್ಸನ್ನು ಹೊಂದುತ್ತಾನೆ.) (ಈ ಪ್ರಮಾಣ ಸಮೂಹದಲ್ಲಿ ಶ್ರೀಹರಿಯ ಪ್ರಾದುರ್ಭಾವರೂಪಗಳಿಗೂ ಅವಯವಗಳಿಗೂ ಭೇದವನ್ನು ನಿರಾಕರಿಸಿರುವುದರಿಂದ ಶರೀರ ಭೇದವನ್ನು ನಿಷೇಧ ಮಾಡಿದ ಕಾರಣ ಆತನು ದ್ವಿವಚನ ವಿಷಯನಾಗುವುದಿಲ್ಲ.) (೬) (ಭೇದವಿಲ್ಲದೆ ವಿಶೇಷಮಾತ್ರದಿಂದಲೇ ದ್ವಿವಚನಾದಿಗಳು ಕೂಡುತ್ತವೆಂದದ್ದು ಅಯುಕ್ತವು. ಭೇದದಿಂದ ಇತರವಾದ ವಿಶೇಷವಿದೆ ಎನ್ನುವಲ್ಲಿಯೇ ಪ್ರಮಾಣವಿಲ್ಲ ಎಂದರೆ) **ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ, ಸ್ವಪ್ನಾಂತಂ ಜಾಗರಿತಾಂತಂ ಚ** ಇತ್ಯಾದಿ ಪ್ರಮಾಣಗಳಿಂದ ಕಾಠಕದಲ್ಲಿ ಶ್ರೀ ಪರಮಾತ್ಮನಿಗೆ) ಅನೇಕ ಧರ್ಮಗಳನ್ನು ಹೇಳಿ, **ಏಕಮೇವಾದ್ವಿತೀಯಂ** ಎಂದು ಪುನಃ ಭೇದವನ್ನು ನಿಷೇಧ ಮಾಡಿದುದರಿಂದ ಭೇದದಿಂದ ಇತರವಾದ ವಿಶೇಷವು ಶ್ರೀ ಭಗವಂತನಲ್ಲಿ ಶ್ರುತ್ಯುಕ್ತವಾದ ಅರ್ಥಾಪತ್ತಿಯಿಂದಲೇ ತಿಳಿಯಲ್ಪಡುತ್ತದೆ. (ನಿರ್ವಿಶೇಷನೆಂದಾಗಿದ್ದರೆ ಧರ್ಮಗಳನ್ನು ಹೇಳಿದ್ದು ಕೂಡದೆ ಹೋಗಬೇಕಾಗುವುದು. ಭೇದವಿದ್ದರೆ ನಿಷೇಧವೇ ಕೂಡದೆ ಹೋಗುವುದು.) ಮತ್ತು ಘಟಾದಿಗಳಲ್ಲಿ ಜಾತಿ ಪರಿಮಾಣಗಳಿಂದ ಭೇದದಿಂದ ಇತರವಾದ ವಿಶೇಷವು ಸಾಕ್ಷಿಪ್ರತ್ಯಕ್ಷದಿಂದಲೇ ತಿಳಿಯುತ್ತದೆ. (ಆದುದರಿಂಲೇ ಪ್ರತ್ಯಕ್ಷದಿಂದ

ಘಟ ಘಟ ಧರ್ಮಗಳಿಗೆ ಅಭೇದವು ಜ್ಞಾತವಾದಾಗ್ಯೂ ಪುರುಷನು ಸಾಕ್ಷಿಯಿಂದ ವಿಶೇಷವನ್ನು ತಿಳಿದು ಘಟೇ ಘಟತ್ವಂ ಇತ್ಯಾದಿ ಪ್ರಕಾರ ವ್ಯವಹರಿಸುತ್ತಾನೆ.)

ವಿ ॥ **ಮೂಲರೂಪಶ್ಚ ಯೋ ವಿಷ್ಣುಃ ಪ್ರಾದುರ್ಭಾವಾದಿಕಶ್ಚ ಸಃ । ಗುಣತಃ ಸ್ವರೂಪತೋ ವಾಪಿ ವಿಶೇಷಂ ಯೋಽತ್ರ ಪಶ್ಯತಿ । ಅತ್ಯಲ್ಪಮಪಿ ಮತ್ವಾ ಸಃ ತಮೋಽಂಧಂಯಾತ್ಯಸಂಶಯಂ ॥** ಇತ್ಯಾದಿ ಪ್ರಮಾಣಗಳಿಂದ ಭಗವದ್ರೂಪಗಳಿಗೆ ಅತ್ಯಲ್ಪ ಭೇದವೂ ಇಲ್ಲವೆಂದುಕ್ತವಾಯ್ತು. ॥ ೪ ॥

ಋ ॥ (೧೪) ವಾಯವಿಂದ್ರಶ್ಚ ಚೇತಥಃ ಸುತಾನಾಂ ವಾಜಿನೀವಸೂ ।
ತಾವಾಯಾತಮುಪದ್ರವತ್ ॥ ೫ ॥ ೩ ॥

ಅ ॥ ವಾಯೋ = ಎಲೋ ವಾಯುವೇ, ವಾಜಿನೀವಸೂ = ವೃಷ್ಟ್ಯಾದಿಗಳಿಂದ ವಿಶೇಷವಾಗಿ ಅನ್ನವನ್ನು ಪ್ರವರ್ತಿಸುವ ಸೂರ್ಯನಲ್ಲಿ ಆವಾಸ ಮಾಡುವ, (ಅಂದರೆ ಅನ್ನಪತಿಯಾದ ಸೂರ್ಯನಲ್ಲಿ ಸದಾ ಇರುವ) ಇಂದ್ರಶ್ಚ = ಇಂದ್ರನು, ನೀನೂ ಕೂಡ, ಸುತಾನಾಂ = ಸೋಮಗಳನ್ನು, ಮನೋವೃತ್ತಿಗಳನ್ನಾಗಲೀ, ಚೇತಥಃ= (ಚಿತೀಸಂಜ್ಞಾನೇ) ತಿಳಿದಿರುವಿರಿ. (ಅಂದರೆ ಈ ಸೋಮಗಳು ನಮಗೆ ಸ್ವೀಕಾರ ಮಾಡಲಿಕ್ಕೆ ಯೋಗ್ಯಗಳಾಗುತ್ತವೆ, ಎಂದು ನೀವಿಬ್ಬರು ತಿಳಿದಿರುವಿರಿ.) (ಆದಕಾರಣ) ದ್ರವತ್ = ಶೀಘ್ರವಾಗಿ, ತೌ = ಆ ನೀವಿಬ್ಬರು, ಉಪ ಆಯಾತಂ = ಬನ್ನಿರಿ. ಅಥವಾ ನಿಮ್ಮನ್ನು ತಿಳಿದಿರುವ ಯಜಮಾನನ ಸೋಮಗಳನ್ನು ಸ್ವೀಕರಿಸುವುದಕ್ಕಾಗಿ ಬನ್ನಿರಿ. ॥ ೫ ॥

ಭಾ ॥ ವಿಜಾನತಃ ಸುತಾನನ್ನಪತೌ ಸೂರ್ಯೇ ಸದಾ ಸ್ಥಿತೌ ।
ದ್ರವದ್ದ್ರುತಂ ಸುತಾತ್ಪರ್ಯದ್ಯೋತಕೋಽಭ್ಯಾಸ ಇಷ್ಯತೇ ॥ ೫ ॥

ಅ ॥ ಅನ್ನಪತಿಯಾದ ಸೂರ್ಯನಲ್ಲಿ ಸದಾ ಇರುವ ನೀವಿಬ್ಬರು ಸೋಮಗಳನ್ನು ತಿಳಿದಿರುವಿರಿ. ದ್ರವತ್ ಅಂದರೆ ಶೀಘ್ರವಾಗಿ ಬನ್ನಿರಿ. **ವಾಯವಾಯಾಹಿ, ಉಪಪ್ರಯೋಭಿರಾಗತಂ ತಾವಾಯಾತಂ** ಎಂದು ಅಭ್ಯಾಸವು (ಪುನಃ ಪುನರುಕ್ತಿಯು ಮುಖ್ಯತಾತ್ಪರ್ಯವನ್ನು ತೋರಿಸಿಕೊಡುತ್ತದೆಂದು ಸಂಮತವು. ॥ ೫ ॥ ೩ ॥

ಋ ॥ (೧೫) ವಾಯವಿಂದ್ರಶ್ಚ ಸುನ್ವತ ಆಯಾತಮುಪ ನಿಷ್ಕೃತಂ । ಮಕ್ಷ್ವಿ॒ತ್ಥಾ ಧಿಯಾ ನರಾ ॥ ೬ ॥

ಅ ॥ ವಾಯೋ=ಎಲೋ ವಾಯುವೇ, ನರಾ= (ಲಾ ಪರಿವರ್ತನೇ ರೀಜ ಕ್ಷಯೇ. ಅಥವಾ ರಿಷಹಿಂಸಾಯಾಂ)ನಿರ್ವಿಕಾರರಾದ, ಅಥವಾ ವಿನಾಶವಿಲ್ಲದಿರುವ, ಇಂದ್ರಶ್ಚ=ಇಂದ್ರನು, ಮತ್ತು ನೀನು ಹೀಗೆ ನೀವಿಬ್ಬರು, ಸುನ್ವತಃ=ಯಜ್ಞಮಾಡತಕ್ಕವನ, ನಿಷ್ಕೃತಂ=ಪೂಜಾನುಸಾರಿ ಫಲ ದಾನವನ್ನು ಕುರಿತು (ಅಂದರೆ ಯಜಮಾನನಿಂದ ಮಾಡಲ್ಪಟ್ಟ ಪೂಜೆಗೆ ಅನುಸಾರಿಯಾದ ಫಲವನ್ನು ಕೊಡುವುದಕ್ಕಾಗಿ) ಇತ್ಥಾ=ಈತನಿಗೆ ಫಲವನ್ನು ನಿಶ್ಚಯವಾಗಿಯೂ ಕೊಡುವೆನು,ಎನ್ನುವ ಪ್ರಕಾರವಾದ, ಧಿಯಾ=ಬುದ್ಧಿಯಿಂದ, ಮಕ್ಷು=ಅತಿ ಶೀಘ್ರವಾಗಿ, ಉಪ ಆಯಾತಂ=ಬನ್ನಿರಿ. ॥ ೬ ॥

ಭಾ ॥ (೧) ಯಜನ್ ಸುನ್ವನ್ ಕೃತಸ್ಯಾನುಸಾರಿ ಕರ್ಮೈವ ನಿಷ್ಕೃತಂ । ತದರ್ಥಂ ಕ್ಷಿಪ್ರಮಾಯಾತಂ ಧಿಯೇತ್ಥಂ ಭೂತಯಾಽಚಲೌ ॥ (೯) ನರೌ ತಾವವಿನಾಶಿತ್ವಾದು ಪಚಾರಃ ಕ್ವಚಿದ್ಭವೇತ್ । ಅಮರತ್ವವದ್ಯತೋ ಮೋಕ್ಷೋ ದೇವತಾನಾಂ ಸುನಿಶ್ಚಿತಃ ॥ ೬ ॥

ಅ ॥ (೧) ಋತ್ವಿಜರು ಮಾಡತಕ್ಕ ಯಾಗವೂ ಯಜಮಾನನ ಉದ್ದಿಶ್ಯವಾಗಿರುವುದರಿಂದ) ಯಜನ್=ಯಜಮಾನನು ಸುನ್ವನ್ ಎನಿಸುತ್ತಾನೆ. ಯಜಮಾನನು ಮಾಡತಕ್ಕ ಪೂಜೆಗೆ ಅನುಸಾರಿಯಾದ ಕರ್ಮವೇ, ನಿಷ್ಕೃತವೆನಿಸುತ್ತದೆ. ಪೂಜಾನುಸಾರಿ ಫಲವನ್ನು ಕೊಡುವುದಕ್ಕಾಗಿ ಈತನಿಗೆ ಫಲವನ್ನು ಕೊಡುತ್ತೇನೆಂಬ ಬುದ್ಧಿಯಿಂದ ನರೌ=ಅಚಲರಾದ, ನಿರ್ವಿಕಾರರಾದ ನೀವಿಬ್ಬರು ಶೀಘ್ರವಾಗಿ ಬನ್ನಿರಿ. ಆ ವಿಷ್ಣು ರೂಪರಾದ ಉಪೇಂದ್ರ ಸಂಕರ್ಷಣರು ನಿರ್ವಿಕಾರರಾದುದರಿಂದಲೂ ವಿನಾಶವಿಲ್ಲದವರಾದುದರಿಂದಲೂ ಮುಖ್ಯತಃ ನರಶಬ್ದ ವಾಚ್ಯರು. ಪ್ರಸಿದ್ಧ ವಾಯುವಿನಲ್ಲಿಯೂ ಇಂದ್ರನಲ್ಲಿಯೂ ಅಮರತ್ವದಂತೆಯೇ ಅಮುಖ್ಯವೃತ್ತಿಯು. (ಅಂದರೆ ನರಪದದಿಂದ ಹೇಳಲ್ಪಟ್ಟ ಅವಿಕಾರ ಅವಿನಾಶಿತ್ವಗಳು ಅಮುಖ್ಯಗಳು. ಶ್ರೀವಿಷ್ಣುವಿನಲ್ಲಿಯೇ ಮುಖ್ಯಗಳು.) ದೇವತೆಗಳಗೆ ಮುಖ್ಯವಾಗಿ ಮರಣವೆಂದಿಲ್ಲ) ಯಾವ ಕಾರಣದಿಂದ ದೇವತೆಗಳಿಗೆ ಮೋಕ್ಷವು ಸುನಿಶ್ಚಿತವಾಗಿದೆಯೋ (ಅಂದರೆ ಮುಕ್ತಿಯಲ್ಲಿ ಅವಿನಾಶಿತ್ವಾದಿಗಳು ನಿಶ್ಚಿತಗಳಾಗಿರುವುದರಿಂದ ಮುಕ್ತಿಗಿಂತ ಮೊದಲೂ ಹಾಗೆಯೇ ಅಮುಖ್ಯತಃ ಇರುತ್ತವೆಂದು ಹೇಳಲ್ಪಡುತ್ತವೆ.) ॥ ೬ ॥

ಋ ॥ (೧೬) ಮಿ॒ತ್ರಂ ಹು॑ವೇ ಪೂ॒ತದ॑ಕ್ಷಂ॒ ವರು॑ಣಂ ಚ ರಿ॒ಶಾದ॑ಸಂ ।
ಧಿಯಂ॑ ಘೃ॒ತಾಚೀಂ॒ ಸಾಧಂ॑ತಾ ॥ ॥ ೭ ॥

ಅ ॥ ಮಿತ್ರಂ=ರಕ್ಷಿಸಲಿಕ್ಕೆ ಯೋಗ್ಯನನ್ನು ತಿಳಿದುಕೊಂಡು ರಕ್ಷಿಸುವುದರಿಂದ ಮಿತ್ರನೆನಿಸಿಕೊಂಡವನು, ವರುಣಂ= ಉತ್ಕೃಷ್ಟ ಆನಂದವುಳ್ಳವನು, ಪೂತದಕ್ಷಂ=ಯಜಮಾನರನ್ನು ಪವಿತ್ರೀಕರಿಸಿದವನು, ರಿಶಾದಸಂ=ಅತಿಶಯಿತ ಸುಖವನ್ನು ಅನುಭವಿಸುವವನು, ಇಂತಹ ಮಿತ್ರಂ=ಮಿತ್ರ ದೇವತೆಯನ್ನೂ, ಮಿತ್ರಾಂತರ್ಗತ ಶ್ರೀ ಹರಿಯನ್ನೂ, ವರುಣಂ=ವರುಣ ದೇವತೆಯನ್ನೂ, ವರುಣಾಂತರ್ಯಾಮಿ ಶ್ರೀಹರಿಯನ್ನೂ, ಹುವೇ=ಕರಿಯುತ್ತೇನೆ. ಘೃತಾಚೀಂ=ಶ್ರೀವಿಷ್ಣು ವಿಷಯಕವಾದ ಧಿಯಂ=ಬುದ್ಧಿಯನ್ನೂ ಸಾಧಂತಾ=ಯಾವಕಾರಣದಿಂದ ನೀವಿಬ್ಬರು ಸಾಧಿಸುವಿರೋ, (ಆದಕಾರಣ ಕರಿಯುತ್ತೇನೆ.) ॥ ೭ ॥

ಭಾ ॥ (೧) ಮಿತ್ವಾ ತ್ರಾತೀತಿ ಮಿತ್ರೋಽಯಂ ಮಿತಮಹ್ನಾ ಕರೋತೀತಿ ವಾ। ಮಿತಂ ರಾತೀತಿ ವಾ ನಿತ್ಯಂ ಮಿತಂ ರಮಯತೀತಿ ವಾ । (೨) ಆವೃಣೋತೀತಿ ವರುಣಸ್ತಮಸಾಽಜ್ಞಾನತೋಽಪಿವಾ ॥ ವರಮುನ್ನಯತೀತ್ಯಸ್ಮಾದ್ವರಾನಂದತ್ವತೋಽಪಿವಾ ॥ (೩) ಪೂತಾ ದಕ್ಷಾ ಅನೇನೇತಿ ಪೂತದಕ್ಷ ಇತೀರಿತಃ (1) (೪) ತಮೋಹ್ನಯಾನಿ ಸುಖಿನಂ ಶಮದಪ್ರಮಾತೇ ಯತಃ ॥ (೫) ಆನೂನಸುಖಭೋಕ್ತೃತ್ವಾದ್ರಿಶಾದಾ ಇತಿ ಕೀರ್ತಿತಃ ॥ (೬) ಹರಿರ್ಘೃತಃ ಸುಶುದ್ಧತ್ವಾದ್ಘೃತಾಚೀ ಚ ತದಂಚನಾತ್ । ಸ್ವಧೀತಿ ಸಾಧಕೋ ವಿಷ್ಣುರ್ಭಕ್ತಾನಾಂ ಚ ಯಥಾರ್ಥತಃ ॥ ೭ ॥

ಅ ॥ (೧) (ಮಾಙ ಮಾನೇ, ತ್ರೈಙ ಪಾಲನೇ. ಮಾತಿ ತ್ರಾತೀತಿ ಮಿತ್ರ:) ರಕ್ಷಿಸಲು ಯೋಗ್ಯನಾದವನನ್ನು ತಿಳಿದು ರಕ್ಷಿಸುವುದರಿಂದ ಈ ವಿಷ್ಣುವು ಮಿತ್ರನೆನಿಸುತ್ತಾನೆ ಅಥವಾ ಹಗಲಿನಿಂದ ವಸ್ತುಗಳ ಸಮುದಾಯವನ್ನು ಮಿತಂ ರಾತಿ=ತಿಳಿಯಲ್ಪಟ್ಟದ್ದನ್ನಾಗಿ ಮಾಡುವುದರಿಂದ ಮಿತ್ರನೆನಿಸುತ್ತಾನೆ ಅಥವಾ ಮಿತಂ ರಾತಿ ಪರಿಮಿತವಾದುದನ್ನು ಯಥಾಯೋಗ್ಯವಾಗಿಯೇ ಕೊಡುತ್ತಾನೆ. ಅಥವಾ ಮಿತಂ ರಮಯತಿ=ನಿತ್ಯದಲ್ಲಿಯೂ ಪರಿಮಿತವಾಗಿವೇ ರಮಿಸುವುದರಿಂದಲೂ, ಮಿತ್ರಾಖ್ಯ ಸೂರ್ಯನೂ ಮಿತ್ರಾಂತರ್ಗತ ಶ್ರೀಹರಿಯೂ ಮಿತ್ರನೆನಿಸುತ್ತಾನೆ. (೨)ಹೊರಗೆ ತಮಸ್ಸಿನಿಂದಲೂ, ಒಳಗೆ ಅಜ್ಞಾನದಿಂದಲೂ ಆವರಿಸುವುದರಿಂದಲೂ ಉತ್ತಮ ಜೀವನನ್ನು ಮೇಲೆ ಒಯ್ಯುವುದರಿಂದಲೂ, ಉತ್ಕೃಷ್ಟ ಆನಂದವಿರುವುದರಿಂದಲೂ, ವರುಣನೆನಿಸುತ್ತಾನೆ (೩) ಶ್ರೀಹರಿಯಿಂದ ಯಜಮಾನರು ಪವಿತ್ರರಾಗುವುದರಿಂದ ಶ್ರೀಹರಿಯು ಪೂತದಕ್ಷನೆನಿಸುತ್ತಾನೆ. (೪) ಯಾವ ಕಾರಣದಿಂದ ಸುಖಿಯಾದವನಿಗೆ ಸುಖವನ್ನುಕೊಡುತ್ತಾ ಕ್ರೀಡಿಸುತ್ತಾನೋ, ಆದ ಕಾರಣ ಆ ಶ್ರೀಹರಿಯನ್ನು ಕರಿಯುತ್ತೇನೆ. (೫) ಪೂರ್ಣ ಸುಖವನ್ನು ಭೋಗಿಸುವುದರಿಂದ ರಿಶಾದಾಃ ಎನಿಸುತ್ತಾನೆ. ಅತಿಶುದ್ಧನಾದ ಪ್ರಯುಕ್ತ ಶ್ರೀ ಹರಿಯು ಘೃತನೆನಿಸುತ್ತಾನೆ. ಆ ವಿಷ್ಣುವನ್ನು ವಿಷಯೀಕರಿಸುವುದರಿಂದ ಬುದ್ಧಿಯು ಘೃತಾಚೀ ಎನಿಸುತ್ತದೆ. ಯಥಾರ್ಥವಾಗಿ ಶ್ರೀ ವಿಷ್ಣುವು ಭಕ್ತರಿಗೆ ಸ್ವವಿಷಯಕ ಧ್ಯಾನವನ್ನು ಸಾಧಿಸಿಕೊಡುವವನು. ॥ ೭ ॥

ಋ ॥ (೧೭) ಋತೇನ ಮಿತ್ರಾವರುಣಾ ವೃತಾವೃಧಾ ವೃತಸ ಶಾ । ಕ್ರತುಂ
ಬೃಹಂತಮಾಶಾಥೇ ॥ ೮ ॥

ಅ ॥ ಋತಾವೃಧೌ=ಭಗವಂತನಿಂದ ಅಭಿವೃದ್ಧರಾದವರು, ಋತೇನ=ಯಾವಾಗಲೂ ಋತಸ್ಪೃಶೌ= ವಿಷ್ಣುವಿನ ಸಂಬಂಧಿಗಳೂ, ಆದ ಮಿತ್ರಾವರುಣಾ=ಮಿತ್ರವರುಣರೆಂಬ ದೇವತೆಗಳೇ, ಮತ್ತೂ ಋತಾವೃಧೌ=ನಿತ್ಯದಲ್ಲಿಯೂ ಅಭಿವೃದ್ಧರಾದ, ಋತೇನ=ಸತ್ಯವಾಗಿಯೇ (ಔಪಚಾರಿಕವಾಗಿಯಲ್ಲ) ಋತಸ್ಪೃಶಾ= ವೇದ ಪ್ರತಿಪಾದ್ಯಗಳಾದ, ಮಿತ್ರಾವರುಣೌ=ಮಿತ್ರ ವರುಣರಲ್ಲಿ ಅಂತರ್ಗತಗಳಾದ ಭಗವದ್ರೂಪ ವಿಶೇಷಗಳೇ, ಬೃಹಂತಂ ಕ್ರತುಂ=ಮಹಾಜ್ಞಾನವನ್ನು ಅಥವಾ ಪೂರ್ಣ ಸುಖವನ್ನು, ಆಶಾಥೇ–ಪ್ರೇರೇಪಿಸುತ್ತೀರಿ. ॥ ೮ ॥

ಭಾ ॥ (೧) ನಿತ್ಯವೃದ್ಧಃ ಸ ಭಗವಾನೃತೇನಾನುಪಚಾರತಃ । ಋತಸ್ಪೃಗ್ವೇದವಾಚ್ಯತ್ವಾ (೨) ದನ್ಯೌ ಚೇದ್ಭಗವಾನೃತಃ ॥ ಋಗತಾವಿತ್ಯತಃ ಸರ್ವವಸ್ತುಷ್ವನುಗತತ್ವತಃ ॥ (೩) ತೇನ ವೃದ್ಧೌ ತತ್ಸ್ಪೃಶೌ ಚ ಸರ್ವದಾ ಮಿತ್ರವಾರಿಪೌ ॥ (೪) ಸಂಹಿತಾಯಾಂ ತು ದೈರ್ಘ್ಯಾದಿರುಕ್ತ್ಯಾಧಿಕ್ಯೇ ಪದೇಽನ್ಯಥಾ । ಅನನ್ಯಾರ್ಥತ್ವವಿಜ್ಞಪ್ತ್ಯೈ ಈಶಾಥೇ ಚ ಮಹಾಕ್ರತುಂ। ಮಹತ್ಸುಖಂ ವಾ ॥ ೮ ॥

ಅ ॥ (೧) ಆ ಶ್ರೀಹರಿಯು (ಯಾವ ಕಾರಣದಿಂದ) ಸರ್ವದಾ ಅಭಿವೃದ್ಧನೇ ಆಗಿರುತ್ತಾನೋ, (ಆದ ಕಾರಣ ಋತವೃಧಃ ಎನಿಸುತ್ತಾನೆ.) ಸತ್ಯವಾಗಿಯೇ, ಸರ್ವಥಾ ಔಪಚಾರಿಕವಲ್ಲ. ಸಮಸ್ತ ವೇದಗಳಿಂದ ಪ್ರತಿಪಾದ್ಯನಾದುದರಿಂದ ಋತಸ್ಪೃಕ್ (ವೇದ ಸಂಪರ್ಕವಿರುವವನು) ಎನ್ನಿಸುತ್ತಾನೆ. (೨) ಶ್ರೀ ಪರಮಾತ್ಮನಿಂದ ಭಿನ್ನರಾದ ಮಿತ್ರ ವರುಣರೆಂಬ ದೇವತೆಗಳು ವಿವಕ್ಷಿತರಾದರೆ (೨ನೇ, ೩ನೇ, ಋತ ಶಬ್ದಗಳಿಂದ ಶ್ರೀಹರಿಯು ಹೇಳಲ್ಪಡುತ್ತಾನೆ. ಹೇಗೆಂದರೆ) ಋ ಗತೌ ಎಂಬ ಧಾತುವಿನಿಂದ ಸರ್ವ ವಸ್ತುಗಳಲ್ಲಿ ಅನುಗತನಾಗಿರುವುದರಿಂದ (ಅಂದರೆ ಸರ್ವ ವಸ್ತುಗಳಲ್ಲಿ ನಿಯಾಮಕನಾಗಿದ್ದುದರಿಂದ) ಋತಃ=ಭಗವಂತನು (೩) ಮಿತ್ರ ವರುಣರು ಸರ್ವದಾ ಆ ಶ್ರೀಹರಿಯಿಂದ ಅಭಿವೃದ್ಧರಾದುದರಿಂದ ಋತ ವೃಧೌ ಎಂದೂ, ಆ ಶ್ರೀಹರಿಯ ಸಂಬಂಧಿಗಳಾದುದರಿಂದ ಋತ ಸ್ಪೃಶಾ ಎಂದೂ ಅನ್ನಿಸುತ್ತಾರೆ. (೪) ಸಂಹಿತೆಯಲ್ಲಿ ಋತಾವೃಧೌ ಎಂದು ದೈರ್ಘ್ಯ, ವರ್ಣ

ವಿಕಾರ ಮೊದಲಾದುದೂ, ಪದದಲ್ಲಿ ಬೇರೆ ರೀತಿಯಾಗಿ ಅಂದರೆ ಋತ ಎಂದು ಹ್ರಸ್ವವೂ ಇದ್ದರೆ ಅದು ಹಿಂದೆ ಹೇಳಿದ ಅರ್ಥಕ್ಕೆ ಆಧಿಕ್ಯವನ್ನು ತಿಳಿಸುವುದಕ್ಕಾಗಿಯೂ, ಅವಧಾರಣ (ನಿಶ್ಚಯವನ್ನು) ತಿಳಿಸುವುದಕ್ಕಾಗಿಯೂ ಹಾಗೆ ಹೇಳುವುದು. ಮಹಾಜ್ಞಾನವನ್ನು ಮಹಾಸುಖವನ್ನಾಗಲೀ, ಪ್ರೇರೇಪಿಸುತ್ತೀರಿ. ॥ ೮ ॥

ಋ ॥ (೧೮) ಕವೀನೋ ಮಿತ್ರಾವರುಣಾ ತುವಿಜಾತಾ ಉರುಕ್ಷಯಾ । ದಕ್ಷಂ ದಧಾತೇ ಅಪಸಂ ॥ ॥ ೯ ॥ ೪ ॥ ೨ ॥

ಅ ॥ ಕವೀ = ಸರ್ವಜ್ಞರಾದ, ತುವಿಜಾತೌ=ಸರ್ವ ಗುಣ ಪರಿಪೂರ್ಣರಾಗಿರುವ, ಪೂರ್ಣ ಬ್ರಹ್ಮನಿಂದ ಹುಟ್ಟಿರುವ, ಉರುಕ್ಷಯಾ=ಸರ್ವತ್ರ ವ್ಯಾಪ್ತರಾದ, ನಿತ್ಯದಲ್ಲಿಯೂ ಗಮನಾಗಮನವುಳ್ಳ, ಮಿತ್ರಾವರುಣೌ= ಭಗವದ್ರೂಪವಿಶೇಷಗಳೇ, ಮಿತ್ರ ವರುಣರೆಂಬ ದೇವತೆಗಳೇ ನಃ = ನಮಗಾಗಿ, ದಕ್ಷಂ = ಯಜಮಾನನನ್ನು ಕುರಿತು, ಅಪಸಂ = ಕರ್ಮವನ್ನು ದಧಾತೇ = ಮಾಡುವಿರಿ. (ಅಂದರೆ ಯಜಮಾನನನ್ನು ಕರ್ಮಕರ್ತನನ್ನಾಗಿ ಮಾಡುವಿರಿ.) ಅಥವಾ ನಃ = ನಮ್ಮವನಾದ (ಋತ್ವಿಜರ ಸಂಬಂಧಿಯಾದ) ಅಪಸಂ = ಕರ್ಮಕರ್ತನಾದ ಯಜಮಾನನನ್ನು, ದಕ್ಷಂ = ಸಮರ್ಥನನ್ನಾಗಿ ಮಾಡುವಿರಿ. ॥ ೯ ॥

ಭಾ ॥ (೧) ತುವಿಜೌ ಬ್ರಹ್ಮಜಾತೌ ತಥಾವಿಧೌ । ಹರಿಸ್ತಥೈವ ಭೂತತ್ವಾತ್ ಸ್ಥಾನಂ ಕ್ಷಯ ಇಹೋಚ್ಯತೇ (೨) ಕರ್ಮಾಪಸಂ ಚ ಕರ್ತಾರಂ ದಕ್ಷಂ ಕರ್ತಾರಮೇವ ವಾ । ಅಸ್ಮದರ್ಥೇ ದಧಾತೇ ತೌ ನಿತ್ಯಂ ಬುದ್ಧೌ ಗತಾಗತೌ ॥ ೯ ॥ ೪ ॥ ೨ ॥

ಅ ॥ (೧) ತುವಿಜೌ = ಸರ್ವಗುಣ ಪರಿಪೂರ್ಣನಾದ ಪರಬ್ರಹ್ಮನಿಂದ ಹುಟ್ಟಿದವರು. ಮತ್ತು ಸರ್ವದಾ ಸರ್ವಗುಣ ಪರಿಪೂರ್ಣರಾಗಿಯೇ ಇರುವವರು, (ಹೇಗೆಂದರೆ) ಸರ್ವ ಗುಣ ಪರಿಪೂರ್ಣನಾಗಿಯೇ ಸದಾ ಇರುವುದರಿಂದ ಶ್ರೀ ಹರಿಯು ತುವಿಜಾತನೆನಿಸುತ್ತಾನೆ. (ಮಿತ್ರಾ ವರುಣರು ಬ್ರಹ್ಮನಿಂದ ಹುಟ್ಟಿರುವುದರಿಂದ ತುವಿಜಾತರೆನಿಸುತ್ತಾರೆ.) ಉರುಕ್ಷಯೌ ಎನ್ನುವಲ್ಲಿ ಸ್ಥಾನವು ಕ್ಷಯವೆನಿಸುತ್ತದೆ. (೨) ಅಪಸವೆಂದರೆ ಕರ್ಮವು. ನಮಗಾಗಿ ಯಜಮಾನನನ್ನು ಕರ್ಮಕರ್ತನನ್ನಾಗಿಯೂ, ಅಥವಾ ಯಜಮಾನನನ್ನು ಸಮರ್ಥನನ್ನಾಗಿಯೂ, ಮಾಡುವಿರಿ. ಆ ಮಿತ್ರಾ ವರುಣರು ನಿತ್ಯದಲ್ಲಿಯೂ ತಿಳಿದವರು, (ಅಂದರೆ ಸರ್ವಜ್ಞರು) ಮತ್ತೂ ಗಮನಾಗಮನವುಳ್ಳವರು. ॥ ೯ ॥ ೪ ॥ ೨ ॥

ಅವ ॥ ೧೨ ಋಕ್ಕುಗಳು. ೨ ವರ್ಗಗಳು. ಮೊದಲಿನ ೩ ಋಕ್ಕುಗಳು ಅಶ್ವಿನೀದೇವತಾಕಗಳು. ೨ನೇ ೩ ಋಕ್ಕುಗಳು ಇಂದ್ರ ದೇವತಾಕಗಳು. ಮೂರನೇ ೩ ಋಕ್ಕುಗಳು ವಿಶ್ವೇದೇವ ದೇವತಾಕಗಳು. ನಾಲ್ಕನೆ ೩ ಋಕ್ಕುಗಳು ಸರಸ್ವತೀ ದೇವತಾಕಗಳು.

ಋ ॥ (೧೯) ಅಶ್ವಿನಾ ಯಜ್ವರೀರಿಷೋ ದ್ರವತ್ಪಾಣೀ ಶುಭಸ್ಪತೀ । ಪುರುಭುಜಾ ಚನಸ್ಯತಂ ॥ ೧ ॥

ಅ ॥ ದ್ರವತ್ಪಾಣೀ = ಶೀಘ್ರಹಸ್ತವುಳ್ಳ, (ಔದಾರ್ಯವುಳ್ಳ)ಅಥವಾ ಶೀಘ್ರವಾಗಿ ಅಭೀಷ್ಟಪ್ರದಗಳಾದ, ಶುಭಸ್ಪತೀ = ಶುಭಗಳಿಗೆ ಅಧಿಪತಿಗಳಾದ, ಪುರುಭುಜಾ = ಬಹುಜಗತ್ತನ್ನು ರಕ್ಷಿಸುವ, ಅಥವಾ ಬಹುಭೋಕ್ತೃ

ಗಳಾದ, ಅಶ್ವಿನಾ=ಅಶ್ವಿಪದವಾಚ್ಯ ಭಗವದ್ರೂಪ ವಿಶೇಷಗಳೇ, ಅಥವಾ ಅಶ್ವಿನೀ ದೇವತೆಗಳೇ, (ನೀವಿಬ್ಬರು) ಯಜ್ವರೀಃ=ಯಜ್ಞ ಸಾಧನಗಳಾದ, ಇಷಃ=ಹವಿಸ್ಸುಗಳನ್ನು, ಚನಸ್ಯತಂ=ಕೊಡಿರಿ. ಅಥವಾ ಯಜ್ವರೀಃ= ಯಜ್ಞದಲ್ಲಿ ಕೊಡಲ್ಪಟ್ಟ, ಇಷಃ=ಸ್ವಭಾಗಗಳನ್ನು ಚನಸ್ಯತಂ=ಸ್ವೀಕರಿಸಿರಿ (ಇಚ್ಛಿಸಿರಿ) ॥ ೧ ॥

ಭಾ ॥ (೧) ಅನ್ನಾನಿ ಯಜ್ಞಯೋಗ್ಯಾನಿ ಕ್ಷಿಪ್ರಹಸ್ತೌ ಶುಭಾಧಿಪೌ । ಬಹುಗೋಪೌ ಬಹುಭುಜೌ ನೋ ಯೋಜಯತಮಶ್ವಿನೌ ॥ (೨) ಯಜ್ಞೇ ವೃತಾನ್ ಸ್ವಭಾಗಾನ್ವಾ ಸಂಯೋಜಯತಮಾಶು ವೈ॥ (೩) ಆಶುವಾನಾದ್ಗತೇರಶ್ವೀ ಕ್ಷಿಪ್ರವಗತಿತೋऽಥವಾ। ಅಶ್ನುತೇऽಖಿಲಮಿತ್ಯೇವಾಪ್ಯಶ್ವಜತ್ವಾತ್ತಥಾऽಶ್ವಿನೌ ॥ ೧ ॥

ಅ॥ (೧) ಶೀಘ್ರವಾಗಿ ಅಭೀಷ್ಟಪ್ರದಗಳಾದ, ಶುಭಗಳಿಗೆ ಅಧಿಪತಿಗಳಾದ ಸರ್ವ ಜಗತ್ತನ್ನು ರಕ್ಷಿಸುವ ಬಹುಭೋಕ್ತೃಗಳಾದ ಅಶ್ವಿನೀ ದೇವತೆಗಳಿರಾ, ಯಜ್ಞಕ್ಕೆ ಯೋಗ್ಯಗಳಾದ (ಯಜ್ಞ ಸಾಧನಗಳಾದ) ಹವಿರಾದಿಗಳನ್ನು ನಮಗೆ ಕೊಡಿರಿ. (೨) ಅಥವಾ ಯಜ್ಞದಲ್ಲಿ ಕೊಡಲ್ಪಟ್ಟ ತಮ್ಮ ಭಾಗಗಳನ್ನು ಶೀಘ್ರವಾಗಿಯೇ ಸ್ವೀಕಾರ ಮಾಡಿರಿ. (೩) ಶೀಘ್ರದಲ್ಲಿ ಗಮನವಿದ್ದ ಪ್ರಯುಕ್ತ ಅಥವಾ ಶೀಘ್ರವಾಗಿ ತಿಳಿದುಕೊಳ್ಳುವುದರಿಂದ ಅಥವಾ (ಅಶೂವ್ಯಾಪ್ತೌ) ಸರ್ವ ಜಗತ್ತನ್ನು ವ್ಯಾಪಿಸುವುದರಿಂದ ಶ್ರೀ ಹರಿಯು ಅಶ್ವೀ (ಎಂದು ಎನಿಸಿಕೊಳ್ಳುತ್ತಾನೆ. ಹಾಗೆಯೇ ಅಶ್ವಿನೀ ದೇವತೆಗಳು ಅಶ್ವರೂಪನಾದ ಸೂರ್ಯನಿಂದ ಹುಟ್ಟುವುದರಿಂದ ಅಶ್ವಿನೌ ಎನಿಸಿಕೊಳ್ಳುತ್ತಾರೆ. ॥ ೧ ॥

ಋ ॥ (೨೦) ಅಶ್ವಿನಾ ಪುರುದಂಸಸಾ ನರಾ ಶವೀರಯಾ ಧಿಯಾ । ಧಿಷ್ಣ್ಯಾ ವನತಂ ಗಿರಃ ॥ ೨ ॥

ಅ ॥ ಪುರುದಂಸಸಾ=ಬಹು ಕರ್ಮಗಳನ್ನು ಮಾಡುವ, ನರಾ=ನಿರ್ವಿಕಾರರಾದ, ಅಥವಾ ವಿನಾಶವಿಲ್ಲದಿರುವ, ದಿಷ್ಣ್ಯಾ=ಸರ್ವದಾ ಸರ್ವರಿಗೂ ಆಶ್ರಯರಾದ, ಅಶ್ವಿನಾ=ಭಗವದ್ರೂಪ ವಿಶೇಷಗಳೇ ಅಶ್ವಿನೀ ದೇವತೆಗಳಿರಾ, (ನೀವಿಬ್ಬರು) ಶವೀರಯಾ=ಸುಖವೀರ್ಯಾತ್ಮಕವಾದ, ಧಿಯಾ=ಬುದ್ಧಿಯಿಂದ, ಗಿರಃ=ನಮ್ಮ ಸ್ತುತಿರೂಪ ವಚನಗಳನ್ನು, ವನತಂ=(ವನ ಸಂಭಕ್ತೌ) ಸ್ವೀಕರಿಸಿರಿ ॥ ೨ ॥

ಭಾ । ಬಹುಕರ್ಮಕೃತೌ ಸೌಖ್ಯವೀರ್ಯಾತ್ಮಿಕ್ಯಾ ಧಿಯಾ ಗಿರಃ। ಅಸ್ಮದೀಯಾಃ ಸಂಭಜತಂ ಧಿಷ್ಣ್ಯೌ ಸರ್ವಾಶಯೌ ಸದಾ ॥ ೨ ॥

ಅ ॥ ಬಹುಕರ್ಮಗಳನ್ನು ಮಾಡುತ್ತಿರುವ ಯಾವಾಗಲೂ ಸರ್ವರಿಗೂ ಆಶ್ರಯರಾದ ಭಗವದ್ರೂಪಗಳೇ ಅಶ್ವಿನೀದೇವತೆಗಳಿರಾ ನೀವಿಬ್ಬರು ಸುಖವೀರ್ಯಸ್ವರೂಪವಾದ ಬುದ್ಧಿಯಿಂದ ನಮ್ಮ ಸ್ತುತಿರೂಪಗಳಾದ ವಚನಗಳನ್ನು ಸ್ವೀಕರಿಸಿರಿ ॥ ೨ ॥

ಋ ॥ (೨೧) ದಸ್ರಾ ಯುವಾಕವಃ ಸುತಾ ನಾಸತ್ಯಾ ವೃಕ್ತಬರ್ಹಿಷಃ । ಆಯಾತಂ ರುದ್ರವರ್ತನೀ ॥ ॥ ೩ ॥

ಅ ॥ ರುದ್ರವರ್ತನೀ=ರುಜ್‌ಶಬ್ದೇ ಉಪಪದೇ, ದ್ರುಗತೌ) (ವೃತು ವರ್ತನೇ) ರೋಗಾದಿ ದುಃಖವನ್ನು ಓಡಿಸುವುದರಿಂದ ರುದ್ರನೆನಿಸಿಕೊಂಡ ವಾಯು ದೇವರನ್ನು ಸ್ನೇಹದಿಂದ ಅನುಸರಿಸುವ, (ರುದ್ರಂ ಅನುವರ್ತ

ನಿರ್ಯಯೋಃ ಎಂದು ವಿಗ್ರಹವು) ಅಥವಾ ಭೃತ್ಯರಾಗಿ ಅನುಸರಿಸುವ, ನಾಸತ್ಯಾ=ಅಸಮೀಚೀನ ಗುಣಗಳಿಲ್ಲದಿರುವ (ಅಂದರೆ ಸದ್ಗುಣಗಳುಳ್ಳ) ಅಥವಾ ನಾಸಿಕಾಭಿಮಾನಿಗಳಾಗಿ ಮೂಗಿನಲ್ಲಿರುವ, ದಸ್ರಾ= (ದಸು ವಿಭೇದನೇ) ಸರ್ವ ಶತ್ರುಗಳನ್ನು ಭೇದಿಸುವ, ಭಗದ್ರೂಪ ವಿಶೇಷಗಳೇ, ಅಥವಾ ಪ್ರಸಿದ್ಧ ಅಶ್ವಿನೀ ದೇವತೆಗಳಿರಾ, ವೃಕ್ತಬರ್ಹಿಷಃ ವೃಕ್ತಂ=ವಿಸ್ತೃತಂ ಬರ್ಹಿರ್ಯೇನ) ವಿಸ್ತೃತವಾದ ಬರ್ಹಿಸ್ಸುಳ್ಳ, ಯಜಮಾನನ ಸಂಬಂಧಿಗಳಾದ ಸುತಾಃ=ಸೋಮಗಳು, ಯುವಾಕವಃ=ನಿಮಗಾಗಿ ಸಂಪಾದಿಸಲ್ಪಟ್ಟವೆ. (ಆದ ಕಾರಣ)ಆಯಾತಂ= ಬನ್ನಿರಿ. ॥ ೩ ॥

ಭಾ ॥ (೧) ಭೇದಕೌ ಸರ್ವಶತ್ರೂಣಾಂ ದಸ್ರೌ ಸಂಬಂಧಿನೌ ಹಿ ವಾಂ ॥ ಸುತಾ ಯುವಾಕವಃ ಸೋಮಾ ಯಜ್ವನಃ ಸ್ತೃತಬರ್ಹಿಷಃ । ನಾಸತ್ಯೌ ನಾಸಿಕಾಸಂಸ್ಥೌ ನೈವ ಚಾಸದ್ಗುಣೌ ಕ್ವಚಿತ್ । (೨) ರುಜಾಂ ದ್ರಾವಣತೋ ರುದ್ರೋ ವಾಯುಸ್ತದನುವರ್ತನಾತ್ । ಸ್ನೇಹತೋಽನುವಶತ್ವಾದ್ವಾ ತನ್ಮಾರ್ಗಗತಿತೋಽಥವಾ । (೩) ಕಸ್ಮಿನ್ನಹಮಿತಿ ಶ್ರುತ್ಯಾ ವಾಸುದೇವೋಽಶ್ವಿನಾವಪಿ । ರುದ್ರವರ್ತನಿಶಬ್ದೋಕ್ತಾಃ । ೩ ॥

ಅ ॥ (೧) ದಸ್ರೌ=ಅಂದರೆ ಸರ್ವಶತ್ರುಗಳನ್ನು ನಾಶಗೊಳಿಸುವ ದೇವತೆಗಳಿರಾ, ವಿಸ್ತೃತ ಬರ್ಹಿಸ್ಸುಳ್ಳ ಯಜಮಾನನ ಸಂಬಂಧಿಗಳಾದ, ಸುತಾಃ=ಸೋಮಗಳು, ಯುವಾಕವಃ=ನಿಮ್ಮ ಸಂಬಂಧಿಗಳಾಗಿ ಸಂಪಾದಿತಗಳಾಗಿವೆ. ನಾಸತ್ಯೌ=ಅಶ್ವಿನೀ ದೇವತೆಗಳು ನಾಸಿಕಾಭಿಮಾನಿಗಳಾಗಿ ನಾಸಿಕಾದಲ್ಲಿ ಇರುವವರು. ಭಗವದ್ರೂಪಗಳು ಎಲ್ಲಿಯೂ ಅಸದ್ಗುಣಗಳುಳ್ಳವುಗಳಲ್ಲ. (೨) ರೋಗಗಳನ್ನು ಪರಿಹರಿಸುವುದರಿಂದ ರುದ್ರಃ= ವಾಯುವು. ಆ ವಾಯುವನ್ನು ಸ್ನೇಹದಿಂದ ಅನುಸರಿಸುವುದರಿಂದ ವಾಸುದೇವನು ರುದ್ರವರ್ತನೆನಿಸುತ್ತಾನೆ. ಅಶ್ವಿನೀ ದೇವತೆಗಳು ವಾಯುವನ್ನು ಭೃತ್ಯರಾಗಿ (ವಾಯುವಿನ ಅಧೀನರಾಗಿ) ಅನುಸರಿಸುವುದರಿಂದ ರುದ್ರವರ್ತನಿ ರೆನಿಸುತ್ತಾರೆ- ಅಥವಾ ವಾಯುದೇವರ (ಭೃತ್ಯರಾದ ಪ್ರಯುಕ್ತ ಅವರ) ಮಾರ್ಗದ ಗತಿಯುಳ್ಳವರಾದುದರಿಂದ ಅಥವಾ ವಾಯುದೇವರ ಮಾರ್ಗವುಳ್ಳವರಾದುದರಿಂದ ರುದ್ರವರ್ತನಿ ಎನ್ನಿಸುತ್ತಾರೆ. (೩) (ಅಶ್ವಿನೀ ದೇವತೆಗಳು ವಾಯುದೇವರ ಭೃತ್ಯರಾದುದರಿಂದ ಅವರಿಗೆ ವಾಯುದೇವರ ಮಾರ್ಗದ ಗತಿಯು ಇರಲಿ. ಶ್ರೀಹರಿಗೆ ಹೇಗೆಂದರೆ) **ಕಸ್ಮಿನ್ನಹಮುತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ. ಕಸ್ಮಿನ್ವಾ ಪ್ರತಿಷ್ಠಿತೇ. ಪ್ರತಿಷ್ಠಾಸ್ಯಾಮೀತಿ ಸ ಪ್ರಾಣ ಮಸೃಜತ** ನಾನು ಯಾವನು ದೇಹದಿಂದ ಹೊರಟು ಹೋದೊಡನೆ ಹೊರಟು ಹೋಗುವೆನು, ಯಾವನು ಪ್ರವೇಶ ಮಾಡಿದೊಡನೆ ಪ್ರವೇಶಿಸುವೆನು. ಎಂದು ವಿಚಾರ ಮಾಡಿ ಇಂತಹವನು ಮುಖ್ಯವಾಯುವೇ ಎಂದು ನಿಶ್ಚಯಿಸಿ ಶ್ರೀಹರಿಯು ಪ್ರಾಣನನ್ನು ಸೃಷ್ಟಿಸಿದನು, ಎಂಬ ಶ್ರುತಿಯಿಂದ ಶ್ರೀಹರಿಯು ಅಶ್ವಿನೀ ದೇವತೆಗಳೂ ಕೂಡ ರುದ್ರವರ್ತನಿ ಎನಿಸುತ್ತಾರೆ. ॥ ೩ ॥

ಋ ॥ (೨೨)ಇಂದ್ರಾಯಾಹಿ ಚಿತ್ರಭಾನೋ ಸುತಾ ಇಮೇ ತ್ವಾಯವಃ। ಅಣ್ವೀಭಿಸ್ತನಾ ಪೂತಾಸಃ ॥ ೪ ॥

ಅ॥ಚಿತ್ರಭಾನೋ=ಆಶ್ಚರ್ಯಕರಗಳಾದ ಜ್ಞಾನಗಳು ಅಥವಾ ತೇಜಸ್ಸುಗಳುಳ್ಳ ಇಂದ್ರ=ಎಲೋ ವಿಷ್ಣುವೇ, ಎಲೋ ಇಂದ್ರನೇ, ಅಣ್ವೀಭಿಃ=ಸೂಕ್ಷ್ಮತಂತುಗಳುಳ್ಳ, ಚೆನ್ನಾಗಿ ಶೋಧನೆಗೆ ಸಾಧನಗಳಾದ ವಸ್ತ್ರಗಳಿಂದ, ತನಾ ವಿಸ್ತರಿಸಿ ಪೂತಾಸಃ=(ಅಭಿಮನ್ಯಮಾನದ್ವಾರಾ ಪವಿತ್ರಗಳಾದ, ಶೋಧಿತಗಳಾದ, ಇಮೇ ಸುತಾಃ=ಈ ಸೋಮರಸಗಳು (ಸೋಮರಸಾಭಿಮಾನಿಗಳು) ತ್ವಾಯವಃ=ನಿಮ್ಮನ್ನು ಇಚ್ಛಿಸತಕ್ಕವುಗಳಾಗಿ ಇವೆ. ಅಂದರೆ ಇಂದ್ರನು ಯಾವಾಗ ರಸಗಳನ್ನು ಆಸ್ವಾದನಮಾಡುವನು.ಎಂದು ಇಚ್ಛಿಸುವವಗಳಾಗುತ್ತವೆ.)(ಅಧ್ಯಾತ್ಮ ರೂಪ ಅರ್ಥದಲ್ಲಿ)

ಸೂಕ್ಷ್ಮಾರ್ಥಗಳನ್ನು ಗ್ರಹಿಸತಕ್ಕ ಜ್ಞಾನಗಳಿಂದ ವಿಸ್ತರಿಸಿ ನಿರ್ಮಲವಾಗಿ ಮಾಡಲ್ಪಟ್ಟಮನಸ್ಸು ಮನೋಭಿಮಾನಿಗಳು (ಸೋಮಾಭಿಮಾನಿಗಳೇ ಮನೋಭಿಮಾನಿಗಳು) ನಿಮ್ಮನ್ನು ಇಚ್ಛಿಸುತ್ತಾರೆ. ಆದ ಕಾರಣ ಆಯಾಹಿ=ಬನ್ನಿರಿ. ॥ ೬ ॥

ಭಾ ॥ (೧) ಚಿತ್ರಂ ಭದ್ರಂ ರತಂ ಚಿತೌ।ಚಿದ್ರತೇಶ್ಚಾ ಯನೀಯತ್ವಾದದನಾದ್ವಾ ಚಿತೋ (೨)ಽಭಿದಾ॥ ತಾದೃಶಾ ರಶ್ಮಯೋ ಜ್ಞಾನಮಸ್ಯೇತಿ ಭಗವಾನ್ಪರಃ । ಚಿತ್ರಭಾನುರಿತಿ ಪ್ರೋಕ್ತಸ್ತೇಜೋ ವಾ ತಾದೃಶಂ ಪ್ರ(ವಿ)ಭೋಃ॥(೩) ತ್ವದಿಚ್ಛವ ಇಮೇ ಸೋಮಾಃ ಪಟೇಭಿಃ ಸೂಕ್ಷ್ಮತಂತುಭಿಃ। ವಿಸ್ತೃತ್ಯ ಶೋಧಿತಾಃ ಸೂಕ್ಷ್ಮಪ್ರಮಾಭಿರ್ವಾ(ಶ್ವ)ಮನಾಂಸಿ ಚ॥(೪) ಸೋಮಾನಾಂ ಮನಸಾಂ ಚೈವ ದೇವತಾಃ ಸೋಮರಶ್ಮಿಗಾಃ । ಸೋಮಭೃತ್ಯಾಃ ಸಮಸ್ತಸ್ಯ ಸೋಮ ಏವಾಧಿಪೋ ಹರಿಃ ॥ ೪ ॥

ಅ॥ (೧) (ಚಿತ್ರಭಾನು ಶಬ್ದವನ್ನು ವ್ಯಾಖ್ಯಾನಮಾಡಲಿಕ್ಕಾಗಿ ಚಿತ್ರ ಶಬ್ದಾರ್ಥವನ್ನು ಹೇಳುತ್ತಾರೆ.) ಚಿತ್ರಂ=ಮಂಗಲವು ಶ್ರೇಷ್ಠವು. ಅಥವಾ ಚಿತೌ=ಸಮಸ್ತ ಜೀವಚೈತನ್ಯದಲ್ಲಿ, ರತಂ=ನಿಯಾಮಕವಾಗಿ ಆಸಕ್ತವಾದುದು. ಅಥವಾ ಚಿದ್ರತೇಃ=ಜಡ ಭಿನ್ನ ಸುಖ ಸ್ವರೂಪವಾಗಿರುವುದರಿಂದ ಚಿಚ್ಚಸಾ ರತಿಶ್ಚ ಇತಿ ಚಿತ್ರಂ, ಅಥವಾ ಚಾಯನೀಯತ್ವಾತ್=ನೋಡಲರ್ಹವಾಗಿರುವುದರಿಂದ, ಅಥವಾ ಪೂಜಿಸಿಕೊಳ್ಳಲಿಕ್ಕೆ ಯೋಗ್ಯವಾದುದರಿಂದ ಚಿತ್ರಂ. ಚಿತಃ ಅದನಾದ್ವಾ=ಚೈತನ್ಯವನ್ನು ಸ್ವರೂಪವನ್ನಾಗಲೀ ಅನುಭವಿಸುವುದರಿಂದ ಚಿತ್ರಂಎನ್ನಿಸುತ್ತದೆ (೨) (ಈಗ ಚಿತ್ರಭಾನು ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ.) ಅಭೇದ ರೂಪಕಾರಣದಿಂದ ಅಂತಹ ರಶ್ಮಿಗಳು ಚಿತ್ರಗಳೆನಿಸುತ್ತವೆ. ಚಿತ್ರಗಳಾದ ಭಾನವಃ=ರಶ್ಮಿಗಳು. ಅಂದರೆ ಚಿತ್ರಜ್ಞಾನವು ಶ್ರೀಹರಿಗೆ ಇದ್ದ ಪ್ರಯುಕ್ತ ಸರ್ವೋತ್ತಮನಾದ ಶ್ರೀಹರಿಯು ಚಿತ್ರಭಾನುಃ ಎನಿಸುತ್ತಾನೆ. (ಸರ್ವಜೀವ ಚೈತನ್ಯದಲ್ಲಿ ರತತ್ವ ಮೊದಲಾದ ಭಗವದ್ಧರ್ಮಗಳು ಜ್ಞಾನ ತೇಜಸ್ಸುಗಳ ಧರ್ಮವಾಗುವುದು. ಹೇಗೆ ಎಂದರೆ) ಜ್ಞಾನ ತೇಜಸ್ಸುಗಳಿಗೆ ಪರಮಾತ್ಮನಿಂದ ಅಭೇದವಿದ್ದ ಪ್ರಯುಕ್ತ ಹೇಳಿದ್ದು ಯುಕ್ತವು. ಅಥವಾ ಶ್ರೀಪರಮಾತ್ಮನ ಅಸದೃಶ ತೇಜಸ್ಸು ಭಾನವಃ ಎನಿಸುತ್ತದೆ. (೩) ಸೂಕ್ಷ್ಮ ತಂತುಗಳುಳ್ಳ ಚೆನ್ನಾಗಿ ಶೋಧಿಸಲಿಕ್ಕೆ ಸಾಧನಗಳಾದ ವಸ್ತ್ರಗಳಿಂದ ವಿಸ್ತಾರಮಾಡಿ ಶೋಧಿತಗಳಾದ, ಸೋಮಗಳುಈ ಸೋಮಾಭಿಮಾನಿಗಳು ನಿನ್ನನ್ನು ಇಚ್ಛಿಸುತ್ತವೆ (ಅಧ್ಯಾತ್ಮದಲ್ಲಿ) ಸೂಕ್ಷ್ಮಾರ್ಥ ವಿಷಯಕ ಜ್ಞಾನಗಳಿಂದ, ಮನೋಭಿಮಾನಿಗಳು ನಿರ್ಮಲವಾಗಿ ಮಾಡಲ್ಪಡುತ್ತವೆ. (೪) (ಬಾಹ್ಯಸೋಮ ಸ್ಥಾನದಲ್ಲಿ ಅಧ್ಯಾತ್ಮದಲ್ಲಿ ಮನಸ್ಸನ್ನು ತೆಗೆದುಕೊಳ್ಳಲಿಕ್ಕೆ ಏನು ಕಾರಣವು.? ಎಂದರೆ ಸೋಮಶಬ್ದವಾಚ್ಯ ಅಭಿಮಾನಿ ದೇವತೆಗಳ ಐಕ್ಯವು.) ಸೋಮಗಳಿಗೂ ಮನಸ್ಸುಗಳಿಗೂ ಚಂದ್ರ ರಶ್ಮಿಗಳಲ್ಲಿರುವ ಸೋಮಭೃತ್ಯರು ದೇವತೆಗಳು. (ಅಂದರೆ ಸೋಮನ ರಶ್ಮಿಗಳಲ್ಲಿದ್ದ ಪ್ರಯುಕ್ತವೂ ಸೋಮಭೃತ್ಯರಾದ ಪ್ರಯುಕ್ತವೂ ಅಭಿಮಾನಿ ದೇವತೆಗಳಲ್ಲಿ ಸೋಮ ಶಬ್ದ ಪ್ರವೃತ್ತಿಯು. ಸೋಮ ಸಂಬಂಧದಿಂದಲೇ ಸೋಮರಸಗಳಲ್ಲಿಯೂ ಮನಸ್ಸುಗಳಲ್ಲಿಯೂ ಸೋಮಶಬ್ದಪ್ರವೃತ್ತಿಯು.) ಸೋಮಗಳಿಗೂ ಮನಸ್ಸುಗಳಿಗೂ ಸೋಮನೇ ಅಭಿಮಾನಿ ದೇವತೆಯು, ಶ್ರೀಹರಿಯು ಅಧಿಪತಿಯೇ ಆಗಿರುತ್ತಾನೆ. (ಸರ್ವಥಾ ಅಭಿಮಾನಿಯಲ್ಲ.) ॥ ೪॥

ಋ ॥ (೨೩) ಇಂದ್ರಾಯಾಹಿ ಧಿಯೇಷಿತೋ ವಿಪ್ರಜೂತಃ ಸುತಾವತಃ। ಉಪ ಬ್ರಹ್ಮಾಣಿ ವಾಘತಃ ॥ ೫ ॥

ಅ॥ ಇಂದ್ರ=ಇಂದ್ರನೇ, ಧಿಯಾ=ನಮ್ಮಬುದ್ಧಿಯಿಂದ,ಇಷಿತಃ=(ಇಷು ಇಚ್ಛಾಯಾಂ) ಪ್ರಾರ್ಥಿಸಲ್ಪಟ್ಟ ಅಥವಾ (ಇಷ ಗತೌ.) ತನ್ನ ಬುದ್ಧಿಯಿಂದ ಪ್ರೇರೇಪಿಸಲ್ಪಟ್ಟ. ವಿಪ್ರಜೂತಃ= (ಜೂನ್ ಗತೌ.) ಋತ್ವಿಜ ಬ್ರಾಹ್ಮಣರಿಂದ ಭಕ್ತಿಯಿಂದ ಪ್ರೇರೇಪಿಸಲ್ಪಟ್ಟ ನೀನು,ವಾಘತಃ=(ವಾಶೃಶಬ್ದೇ) (ವಚಪರಿಭಾಷಣೇ) ಸ್ತುತಿಸುವ

ಹೋತೃವಿನ, ಬ್ರಹ್ಮಾಣಿ=ಸ್ತುತಿ ವಾಕ್ಯಗಳನ್ನು, ಸುತವತಃ=ಸೋಮವುಳ್ಳ ಯಜಮಾನನ, ಅಂದರೆ ಹೋತೃವಿನ ಸ್ತುತಿ ವಾಕ್ಯಗಳನ್ನೂ, ಯಜಮಾನ ಸಂಬಂಧಿ ಸೋಮಗಳನ್ನು ಕುರಿತು ಉಪ ಆಯಾಹಿ=ಬಾ. (ಅಧ್ಯಾತ್ಮದಲ್ಲಿ) ಇಚ್ಛಾರೂಪ ಮನೋವೃತ್ತಿಯುಳ್ಳ (ಅಂದರೆ ನಿನ್ನ ಆಗಮನವನ್ನು ಇಚ್ಛಿಸುವ,) ಮೋಕ್ಷ ಸಾಧಕ ಯಜಮಾನನ ಮನೋವೃತ್ತಿಗಳನ್ನು ಕುರಿತು ಮತ್ತು ಮಂತ್ರಗಳಿಂದ ಸ್ತುತಿಸುವ ಹೊತೃವಿನ ಸ್ತುತಿ ವಾಕ್ಯಗಳನ್ನು ಕುರಿತು ಬಾ. ಏವಂಚ ಆಹ್ವಾನ ರೂಪವಾದ ಇಂದ್ರ ವಿಷಯಕವಾದ ಸ್ತೋತ್ರವು ವಾಚಕ ಯಜ್ಞವು. ಇಂದ್ರ ವಿಷಯಕ ವಾದ ಮನೋವೃತ್ತಿಯು ಮಾನಸಿಕ ಯಜ್ಞವು. ॥ ೫ ॥

ಭಾ ॥ (೧) ಅಸ್ಮದ್ಬುಧ್ಯಾ ಪ್ರಾರ್ಥಿತೋ ವಾ ಸ್ವಬುಧ್ಯಾ ಪ್ರೇರಿತೋಽಪಿ ವಾ । ಬ್ರಾಹ್ಮಣೈಃ ಪ್ರೇರಿತೋ ಭಕ್ತ್ಯಾ ವದತೋ ಹೋತುರಂಜಸಾ ॥ ಬ್ರಹ್ಮಾಣಿ ಸೋಮಯುಕ್ತಾನಿ ಯಜಮಾನಸ್ಯ ವೇಚ್ಛತಃ । ಉಪಾಯಾಹ್ಯಪಿ ಯಃ ಕೋಽಪಿ ಸಾಧಕೋ ಯಜ್ಞಕೃನ್ಮತಃ । ಮಾನಸೋ ವಾಚಿಕೋ ವಾ ಸ್ಯಾದ್ಯಜ್ಞೋ ಹೋತಾಽಽಹ್ವಯನ್ ಸ ಚ ॥ ೫ ॥

ಅ ॥ (೧) ನಮ್ಮ ಬುದ್ಧಿಯಿಂದ ಪ್ರಾರ್ಥಿಸಲ್ಪಟ್ಟ ಅಥವಾ ತನ್ನ ಬುದ್ಧಿಯಿಂದ ಪ್ರೇರೇಪಿಸಲ್ಪಟ್ಟ ಋತ್ವಿಜರಿಂದ ಭಕ್ತಿಯಿಂದ ಪ್ರೇರೇಪಿಸಲ್ಪಟ್ಟ ನೀನು ಚೆನ್ನಾಗಿ ಸ್ತೋತ್ರ ಮಾಡತಕ್ಕ ಹೋತೃವಿನ ಅಥವಾ ಇಚ್ಛಿಸತಕ್ಕ ಯಜಮಾನನ ಸೋಮಯುಕ್ತಗಳಾದ ಸ್ತುತಿವಾಕ್ಯಗಳನ್ನು ಕುರಿತು ಬರಬೇಕು. (ಹಾಗಾದರೆ ಅಧ್ಯಾತ್ಮದಲ್ಲಿ ಯಜಮಾನನು ಯಾರು? ಯಜ್ಞವು ಯಾವುದು? ಹೋತೃ ಯಾರು? ಎಂದರೆ) ಯಾವನಾದರೂ ಮೋಕ್ಷಕ್ಕೆ ಸಾಧಕನಾದವನು ಯಜ್ಞವನ್ನು ಮಾಡುವವನು ಯಜಮಾನನೆಂದು ಸಮ್ಮತನು. ಇಂದ್ರ ವಿಷಯಕ ಮನೋವ್ಯಾಪಾರವು ಮಾನಸಿಕ ಯಜ್ಞವು. ಆಹ್ವಾನರೂಪ ಇಂದ್ರ ವಿಷಯಕ ಸ್ತೋತ್ರವು ವಾಚಿಕಯಜ್ಞವು. ಮೋಕ್ಷವನ್ನು ಸಾಧಿಸುವವನೇ ಯಾವಾಗ ಪರಮಾತ್ಮನನ್ನು ಕರೆಯುವನೋ, ಆಗ ಹೋತಾ ಎನಿಸುತ್ತಾನೆ. ॥ ೫ ॥

ಋ ॥ (೨೪) ಇಂದ್ರಾಯಾಹಿ ತೂತುಜಾನ ಉಪ ಬ್ರಹ್ಮಾಣಿ ಹರಿವಃ। ಸುತೇ ದಧಿಷ್ವ ನಶ್ಚನಃ ॥ ೬ ॥

ಅ ॥ ಹರಿವಃ=(ಹೃಞ ಹರಣೇ) (ವೃತುವರ್ತನೇ) ಭಕ್ತರ ಜನನ ಮರಣಾದಿ ಸಂಸಾರ ಕ್ಲೇಶವನ್ನು ಪರಿಹರಿಸುತ್ತಾ ಇರುವ ಇಂದ್ರ=ವಿಷ್ಣುವೇ,ಹರಿವಃ=ಹರಿನಾಮಕ ಅಶ್ವಗಳಿಂದ ಕೂಡಿ ಇರುವ, ಅಥವಾ ಶ್ರೀವಿಷ್ಣುವಿನಿಂದ ಪ್ರೇರಿತನಾಗಿರುವ ಇಂದ್ರ=ಪುರಂದರನೇ, (ಅಧ್ಯಾತ್ಮದಲ್ಲಿ)ವಿಷಯಗಳನ್ನುಅಪಹರಿಸುವುದರಿಂದ ಹರಿ ಎನಿಸಿಕೊಂಡ ಇಂದ್ರಿಯಗಳಲ್ಲಿರುವವನೇ, ನಃ=ನಮ್ಮ, ಬ್ರಹ್ಮಾಣಿ=ಸ್ತುತಿ ವಾಕ್ಯಗಳನ್ನು ಕುರಿತು, ತೂತುಜಾನಃ= (ತುಜ ಗತೌ) ವೇಗವುಳ್ಳವನಾಗಿ, ಉಪ ಆಯಾಹಿ=ಬಾ. ಬಂದು, ನಃ=ನಮ್ಮ, ಸುತೇ–ಸೋಮದಲ್ಲಿ. ಚನಃ= (ಮನು ಅವಬೋಧನೇ) ಮನಸ್ಸನ್ನು ದಧಿಷ್ವ=ಮಾಡು. (ಅಂದರೆ ನಮ್ಮದಾದ ಸೋಮರಸವನ್ನು ಕುಡಿಯಲಿಕ್ಕೆ ಇಚ್ಛೆಯನ್ನು ಮಾಡು.) ॥ ೬ ॥ ೫ ॥

ಭಾ ॥ (೧) ವೇಗವಾನ್ ತೂತುಜಾನಃ ಸ್ಯಾತ್ ಸಂಸಾರಮುಪಸಂಹರನ್ । ವರ್ತತೇ ಯೇನ ಹರಿವಾ ಹರಿಭಿರ್ವರ್ತತೇಽಥವಾ । ಹರಣಾದ್ವಿಷಯಾಣಾಂ ಚ ಪ್ರಾಣಾ ಹರಯ ಈರಿತಾಃ ॥ ತೇಷು ವರ್ತತ ಇತ್ಯಸ್ಮಾತ್ತಾನ್ಸ್ವಾಥ ಗಮಯೇದಶೌ । ಹರಿವಾ ಹರಿವಾ

ನ್ನಾಪಿ ವಿಷ್ಣುನಾ ವರ್ತತೇಽಥವಾ । ಚನೋ ಮನ ಇಹ ಪ್ರೋಕ್ತಂ ಸುಖಂ ಚ ಕ್ವಚಿದೀರ್ಯತೇ ॥ ೬ ॥ ೫ ॥

ಅ ॥ (೧) ವೇಗವುಳ್ಳವನು ತೂತುಜಾನಃ ಎನಿಸುವನು. ಯಾವ ಕಾರಣದಿಂದ ಭಕ್ತರ ಸಂಸಾರವನ್ನು ಉಪ ಸಂಹಾರ (ವಿನಾಶ) ಮಾಡುತ್ತಾ ಇರುತ್ತಾನೋ, ಆ ಕಾರಣ ಶ್ರೀ ಹರಿಯು ಹರಿವಾಃ ಎನಿಸುತ್ತಾನೆ. ಅಥವಾ ಹರಿನಾಮಕ ಕುದುರೆಗಳಿಂದ ಕೂಡಿ ಇರುವ ಪ್ರಯುಕ್ತ ದೇವೇಂದ್ರನು ಹರಿವಾಃ ಎನಿಸುತ್ತಾನೆ. (ಅಧ್ಯಾತ್ಮ) ಇಂದ್ರಿಯಾಣಿವಿಷಯಾಣಾಂ ಹರಣಾತ್‌ಗ್ರಹಣಾನ್ನಿಮಿತ್ತಾತ್‌ಹರಯಃ) ವಿಷಯಗಳನ್ನುಅಪಹರಿಸುವಪ್ರಯುಕ್ತ (ವಿಷಯಗಳ ಕಡೆಗೆ ಓಡುವ ಪ್ರಯುಕ್ತ) ಇಂದ್ರಿಯಗಳು ಹರಯಃ ಎನಿಸುತ್ತವೆ. ಆ ಇಂದ್ರಿಯಗಳಲ್ಲಿ ನಿಯಾಮಕನಾಗಿರುವುದರಿಂದ ಶ್ರೀ ಹರಿಯು ಹರಿವಾಃ ಎನಿಸುತ್ತಾನೆ. ಅಥವಾ ಇಂದ್ರಿಯಗಳನ್ನು ಆಯಾವ ವಿಷಯ ಗಳಲ್ಲಿ ಪ್ರವರ್ತಿಸುವ ಪ್ರಯುಕ್ತ ಶ್ರೀ ಹರಿಯು ಹರಿವಾಃ ಎನಿಸುತ್ತಾನೆ. ಅಥವಾ ಹರಿನಾಮಕ ಅಶ್ವಗಳುಳ್ಳ ವನು ಹರಿವಃ ಎಂಬ ಶಬ್ದದಿಂದ ಹೇಳಿಸಿಕೊಳ್ಳಲ್ಪಡುತ್ತಾನೆ. ಅಥವಾ ಶ್ರೀ ವಿಷ್ಣುವಿನಿಂದ ಪ್ರೇರಿತನಾಗಿ ಇರುವ ಪ್ರಯುಕ್ತ ದೇವೇಂದ್ರನು ಹರಿವಾಃ ಎನಿಸುತ್ತಾನೆ. ಚನಃ ಎಂದರೆ ಮನಸ್ಸು ಎಂದು ಇಲ್ಲಿ ಹೇಳಲ್ಪ ಲ್ಪಟ್ಟಿದೆ- ಕ್ವಚಿತ್ ಸುಖವು ಹೇಳಲ್ಪಡುತ್ತದೆ. ॥ ೬ ॥ ೫ ॥

ಋ ॥ (೨೫) ಓಮಾಸಶ್ಚರ್ಷಣೀಧೃತೋ ವಿಶ್ವೇ ದೇವಾಸ ಆ ಗತ । ದಾಶ್ವಾಂಸೋ ದಾಶುಷಃ ಸುತಂ ॥ ೭ ॥

ಅ ॥ ಓಮಾಸಃ=(ಆ=ಸಮಂತಾತ್, ಊ=ಊರೀಕೃತಾ, ಮಾ=ಪ್ರಮಾ, ಯೈಸ್ತೇ, ಓಮಾಃ) ಚೆನ್ನಾಗಿ ಸ್ವೀಕರಿಸಲ್ಪಟ್ಟ ಜ್ಞಾನವುಳ್ಳವರು ಅಂದರೆ ಸರ್ವ ವಿಷಯಕ ಜ್ಞಾನವುಳ್ಳವರು, ಅಥವಾ (ಓ ಶಬ್ದೋಪಪದಾತ್, ಮಾ ನಿರ್ಮಾಣೇ) ಓಂಕಾರ ವಾಚ್ಯನಾದ ಶ್ರೀವಿಷ್ಣುವಿನಿಂದ ನಿರ್ಮಿತರಾದ, ಚರ್ಷಣೀಧೃತಃ=ಪ್ರಜೆಗಳಿಗೆ ಧಾರಕರಾದ, ದಾಶ್ವಾಂಸಃ = (ದಾಶೃದಾನೇ) ಅಭೀಷ್ಟಪ್ರದರಾದ, ವಿಶ್ವೇದೇವಾಸಃ = (ವಿಶಪ್ರವೇಶನೇ) ಸರ್ವತ್ರ ಪ್ರವಿಷ್ಟರಾದುದರಿಂದ ವಿಶ್ವೇ ಎನಿಸಿಕೊಂಡ ಕ್ರೀಡಾದಿ ಗುಣ ವಿಶಿಷ್ಟಗಳಾದ ಭಗವದ್ರೂಪ ವಿಶೇಷ ಗಳೇ, ವಿಶ್ವೇ ದೇವತೆಗಳೇ, ದಾಶುಷಃ=ಹೋಮಕರ್ತನಾದ ಅಧ್ವರ್ಯುವಿನ ಅಥವಾ ಯಜಮಾನನ, ಸುತಂ=ಸೋಮವನ್ನು ಕುರಿತು, ಆ ಗತ=ಬನ್ನಿರಿ. ॥ ೭ ॥

ಭಾ ॥ (೧) ಆ ಸಮಂತಾತ್ಸ್ವೀಕೃತಾ ಮಾ ಓಮಾ ಇತಿ ಚ ಶಬ್ದಿತಾಃ ॥ (೨) ಓಂ ನಾಮಾ ಭಗವಾನ್ವಿಷ್ಣುಸ್ತೇನ ವಾ ನಿರ್ಮಿತಾಃ ಸುರಾಃ ॥ (೩) ಓತಾ ಮಾನೇಷು ಮಾ ಯೇಷು ಪ್ರೋತಾ ಓಮಾ ಇತೀರಿತಾಃ ॥ (೪) ಪ್ರಜಾಶ್ಚರ್ಷಣಯಃ ಪ್ರೋಕ್ತಾ ವಿಶ್ವೇ ತೇಚ ಪ್ರವೇಶನಾತ್ । ಸರ್ವೇವಾಽಥ ವಿಶಾಂ ನಾನಾಚ್ಛಬ್ದಃ (೫) ಕಸ್ಮೈ ಯಥಾ ಭವೇತ್ । (೬) ದಾತಾರೋ ಯಜಮಾನಾ ವಾ ॥ ೭ ॥

ಅ ॥ (೧) ಆ=ಚೆನ್ನಾಗಿ ಸ್ವೀಕರಿಸಲ್ಪಟ್ಟ ಪ್ರಮೆ (ಯಥಾರ್ಥ ಜ್ಞಾನ)ಯುಳ್ಳವರು ಓಮಾಃ ಎನಿಸುತ್ತಾರೆ. ಸರ್ವ ವಿಷಯಕ ಜ್ಞಾನವುಳ್ಳವರು.(ಇದು ಶ್ರೀಹರಿಯಲ್ಲಿ ಮುಖ್ಯವು ದೇವತೆಗಳಲ್ಲಿ ಅಮುಖ್ಯವು)ಅಥವಾ ಷಡ್ಗುಣ ಭರಿತನಾದಶ್ರೀವಿಷ್ಣುವು ಓಂ ಶಬ್ದ ಸಮಾನಾರ್ಥವುಳ್ಳ ಓ ಎಂದು ಹೆಸರುಳ್ಳವನು ಓ ಎಂದು ಹೆಸರುಳ್ಳ ಶ್ರೀವಿಷ್ಣು ವಿನಿಂದ ನಿರ್ಮಿಸಲ್ಪಟ್ಟ ಉತ್ಪನ್ನರಾದ ದೇವತೆಗಳು ಓಮಾಃ ಎನಿಸುತ್ತಾರೆ. (೩) ಅಥವಾ ಪ್ರಮಾಣಗಳಲ್ಲಿ ಪ್ರತಿ ಪಾದ್ಯರಾಗಿ ಪ್ರವಿಷ್ಟರಾದವರು, ಓಮಾಃ ಎನಿಸುತ್ತಾರೆ ಅಥವಾ ಯಥಾರ್ಥ ಜ್ಞಾನಗಳು ಯಾರಲ್ಲಿ ಪ್ರತಿಪಾದಕ

ಗಳಾಗಿ ಪ್ರವಿಷ್ಟಗಳಾಗಿರುತ್ತವೋ ಅವರು ಓಮಾಃ ಎನಿಸುತ್ತಾರೆ. (೪) ಚರ್ಷಣಿಗಳೆಂದರೆ ಪ್ರಜೆಗಳು. ಹೀಗೆ ನೈಘಂಟುಕರಿಂದ ಹೇಳಲ್ಪಟ್ಟಿವೆ. ಆ ಭಗವದ್ರೂಪ ವಿಶೇಷಗಳೂ ದೇವತೆಗಳೂ ಕೂಡ ಪ್ರೇರಕರಾಗಿ ಸರ್ವತ್ರ ಪ್ರವೇಶ ಮಾಡಿದುದರಿಂದ ವಿಶ್ವೇ ಎನಿಸುತ್ತಾರೆ. ಅಥವಾ ಸಮಸ್ತ ದೇವತೆಗಳು ವಿಶ್ವೇ ಎನಿಸುತ್ತಾರೆ. ಅಥವಾ ಪ್ರಜೆಗಳ ಗಮನಕ್ಕೆ ಕಾರಣರಾದುದರಿಂದ ವಾ ಪ್ರಜೆಗಳನ್ನೂ ಚೆನ್ನಾಗಿ ತಿಳಿದವರಾದುದರಿಂದ ವಿಶೋ ವಾಂತಿ ಎಂಬ ವ್ಯುತ್ಪತ್ತಿಯಿಂದ ವಿಶ್ವೇ ಎನಿಸುತ್ತಾರೆ. (೫) (ಸರ್ವ ಶಬ್ದ ಪರ್ಯಾಯವಾದ ವಿಶ್ವ ಶಬ್ದಕ್ಕೇನೇ ಸರ್ವ ನಾಮ ಸಂಜ್ಞೆಯಿರುವುದು. ಸರ್ವನಾಮ ಸಂಜ್ಞೆಯುಳ್ಳ ಶಬ್ದಕ್ಕೇನೇ ಜಸ್ ಪ್ರತ್ಯಯಕ್ಕೆ ಶೀ (ಈ) ಭಾವ ವನ್ನು ವಿಧಿಸಿದುದರಿಂದ ಪ್ರವೇಶನ, ವಿಶೋ ವಾಂತಿ ಎಂಬ ಹಿಂದಿನ ಕಲ್ಪಗಳಲ್ಲಿಯೂ ವಿಶ್ವೇ ಎಂಬ ರೂಪವು ಸಿದ್ಧಿಸುವುದಿಲ್ಲ ಎಂದರೆ) **ಕಸ್ಮೈ ದೇವಾಯ ಹವಿಷಾ ವಿಧೇಮ** ಎನ್ನುವಲ್ಲಿ ಚತುರ್ಮುಖ ಪರ್ಯಾಯವಾದ **ಕ** ಶಬ್ದಕ್ಕೆ ಸರ್ವನಾಮ ಸಂಜ್ಞೆಯು ಇಲ್ಲವಾದರೂ **ಸರ್ವೇವಿಧಯಃ ಛಂದಸಿ ಬಹುಲಂ ಭವಂತಿ** ಎಂದು **ಸರ್ವ ನಾಮ್ನಃ ಸ್ಮೈ** ಎಂದು ಸರ್ವನಾಮ ಶಬ್ದದ ಕಾರ್ಯವು ಕಾಣುತ್ತದೋ, ಹೀಗೆಯೇ ಇಲ್ಲಿಯೂ **ವಿಶ್ವ** ಶಬ್ದಕ್ಕೆ ಸರ್ವನಾಮ ಸಂಜ್ಞೆಯಿಲ್ಲವಾದರೂ ಸರ್ವನಾಮ ಕಾರ್ಯವು ಜಸ್ ಪ್ರತ್ಯಯಕ್ಕೆ ಈ ಕಾರವು ಬರುವುದು. ಆದಕಾರಣ ವಿಶ್ವೇ ಎಂಬ ರೂಪವು ಯುಕ್ತವು. (೬) ದಾಶ್ವಾಂಸಃ=ಅಭೀಷ್ಟವನ್ನು ಕೊಡುವವರು. ಅಥವಾ ಯಜಮಾನರು. (ಫಲಕ್ಕಾಗಿ ಯಜ್ಞ ಮಾಡತಕ್ಕದು ಶ್ರೀವಿಷ್ಣುವಿನಲ್ಲಿ ಬಾಧಿತವಾದ) ಪ್ರಯುಕ್ತ ಯಜಮಾನರು ಎನ್ನುವುದು ದೇವತಾಂತರ ವಿಷಯಕವು.) ॥ ೭ ॥

ಋ ॥ (೨೬) ವಿಶ್ವೇ ದೇವಾಸೋ ಅಪ್ತುರಃ ಸುತಮಾಗಂತ ತೂರ್ಣಯಃ । ಉಸ್ರಾ ಇವ ಸ್ವಸರಾಣಿ ॥ ೮ ॥

ಅ ॥ ಅಪ್ತುರಃ=(ತುರ್ವ ತ್ವರಣೇ) (ಅಪಃಕರ್ಮಾಣಿ, ತುತುರತಿ, ತ್ವರಯಂತಿ ಫಲೋನ್ಮುಖೀಕುರ್ವಂತಿ ಇತಿ ಅಪ್ತುರಃ) ಕರ್ಮಗಳಲ್ಲಿ ವೇಗವುಳ್ಳ, ವಿಶ್ವೇ ದೇವಾಸಃ=ವಿಶ್ವೇದೇವತೆಗಳೇ, ಸ್ವಸರಾಣಿ=ದಿನಗಳನ್ನು ಕುರಿತು, ಉಸ್ರಾ ಇವ=ರಶ್ಮಿಗಳಂತೆ, ತೂರ್ಣಯಃ=(ಞಿತ್ವರಾ ಸಂಭ್ರಮೇ) ವೇಗವುಳ್ಳವರಾಗಿ, ಸುತಂ=ನಮ್ಮದಾದ ಸೋಮವನ್ನು ಕುರಿತು, ಆಗಂತ=ಬನ್ನಿರಿ. ॥ ೮ ॥

ಭಾ ॥ ಅಪ್ತುರಃ ಕರ್ಮವೇಗಿನಃ । ಉಸ್ರಾಸ್ತು ರಶ್ಮಯಶ್ಚೈವ ಸ್ವಸರಾಣಿ ದಿನಾನಿಚ ॥ ೮ ॥

ಅ ॥ ಅಪ್ತುರಃ=ಕರ್ಮವೇಗವುಳ್ಳವರು. ಉಸ್ರಾಃ=ರಶ್ಮಿಗಳು. ಸ್ವಸರಾಣಿ=ದಿನಗಳು. ॥ ೮ ॥

ಋ ॥ (೨೭) ವಿಶ್ವೇದೇವಾಸೋ ಅಸ್ರಿಧ ಏಹಿಮಾಯಾಸೋ ಅದ್ರುಹಃ । ಮೇಧಂ ಜುಷಂತ ವಹ್ನಯಃ ॥ ೯ ॥

ಅ ॥ ಅಸ್ರಿಧಃ=ಅಹಿಂಸ್ಯರಾದ, ಏಹಿ ಮಾಯಾಸಃ=(ಇಷು ಇಚ್ಛಾಯಾಂ) ಆ=ಚೆನ್ನಾಗಿ, ಇ=ಇಚ್ಛಾಧೀನ ವಾದ, ಹಿ=ನಿಶ್ಚಿತವಾದ, ಮಾಯಾಸಃ=ಜ್ಞಾನವುಳ್ಳ, (ಅಂದರೆ ಸರ್ವವಿಷಯಕವಾದ ಸ್ವತಂತ್ರವಾದ ನಿಶ್ಚಿತ ಜ್ಞಾನವುಳ್ಳ,) ಅದ್ರುಹಃ=(ದ್ರುಹ ಕ್ಲೇಶೇ) ದುಃಖವಿಲ್ಲದಿರುವ, ವಹ್ನಯಃ=(ವಹ ಪ್ರಾಪಣೇ)ಜಗತ್ಪ್ರವರ್ತಕರಾದ, ವಿಶ್ವೇದೇವಾಸಃ=ವಿಶ್ವೇದೇವತೆಗಳೇ, ಮೇಧಃ=ನಮ್ಮ ಯಜ್ಞವನ್ನು, ಜುಷಂತ=(ಜುಷೀಪ್ರೀತಿಸೇವನನಯೋಃ ಸೇವಿಸಿರಿ. ಅವರು ಸೇವಿಸಲಿ ಎಂದು ತಾತ್ಪರ್ಯವು. ॥ ೯ ॥

ಭಾ ॥ (೧) ಅಸಂಸಾರಾದಸ್ರಿಧಸ್ತೇ ದೇವಾಶ್ಚೇನ್ಮೋಕ್ಷ ನಿಶ್ಚಯಾತ್ । ಯಥೇಷ್ಟನಿಶ್ಚಿತ ಜ್ಞಾನಾ ಏಹಿಮಾಯಾಃ ಸಮಂತತಃ। ಅದುಃಖತ್ವಾದದ್ರುಹಸ್ತೇ ಮೇಧಂ ಯಜ್ಞಂ ಜುಷಂತು ನಃ । ವಹ್ನಯೋ ವಹನಾದಸ್ಯ ॥ ೯ ॥

ಅ ॥ (೧) ಭಗವದ್ರೂಪಗಳು ಸಂಸಾರವಿಲ್ಲದಿರುವುದರಿಂದ, (ನಿತ್ಯಮುಕ್ತಗಳಾದ ಪ್ರಯುಕ್ತ) ಅಸ್ರಿಧಃ=ಅಹಿಂಸ್ಯರು. ದೇವತೆಗಳಾದರೆ, ನಿಶ್ಚಿತಮೋಕ್ಷವುಳ್ಳವರಾದುದರಿಂದ ಔಪಚಾರಿಕವಾಗಿ ಅಸ್ರಿಧಃ=ಅಹಿಂಸ್ಯರು. ಸರ್ವವಿಷಯಕ ಸ್ವತಂತ್ರ ನಿಶ್ಚಯ ಜ್ಞಾನವುಳ್ಳವರು ಏಹಿಮಾಯಾಃ ಎನಿಸುತ್ತಾರೆ. ದುಃಖವಿಲ್ಲದಿರುವುದರಿಂದ ಅದ್ರುಹಃ ಎನಿಸುತ್ತಾರೆ. ಅಂತಹ ದೇವತೆಗಳು ನಮ್ಮ ಯಜ್ಞವನ್ನು ಸೇವಿಸಲಿ. ಜಗತ್ಪ್ರವರ್ತಕರಾದುದರಿಂದ ವಹ್ನಯಃ ಎನಿಸುತ್ತಾರೆ. ॥ ೯ ॥

ಋ ॥ (೨೮) ಪಾವಕಾ ನಸ್ಸರಸ್ವತೀ ವಾಜೇಭಿರ್ವಾಜಿನೀವತೀ ।
ಯಜ್ಞಂ ವಷ್ಟು ಧಿಯಾವಸುಃ ॥ ೧೦ ॥

ಅ ॥ ಪಾವಕಾ=(ಪೂಞ್ ಪವನೇ) ಶೋಧಕವಾದ, ವಾಜಿನೀವತೀ=ಶ್ರೀವಿಷ್ಣುವಿಗೂ ಸರಸ್ವತಿಗೂ ಅನ್ನಾಧಿಪತಿಯಾದ ಸೂರ್ಯನು ಪುತ್ರನಾಗಿದ್ದಾನೆ. ಆದಕಾರಣ ಸೂರ್ಯನು ಪುತ್ರನಾಗಿ ಉಳ್ಳ, ಅಥವಾ ಅನ್ನವಿದ್ದ ಪ್ರಯುಕ್ತವೂ ಜ್ಞಾನಯುದ್ಧವಿದ್ದ ಪ್ರಯುಕ್ತವೂ ವಾಜಿನೀ ಎನಿಸಿಕೊಂಡ ಮಾತಿಗೆ ಅಭಿಮಾನಿನಿಯಾದ ಪಾರ್ವತಿಯು ಪುತ್ರಿಯಾಗಿ ಉಳ್ಳ, ಧಿಯಾವಸುಃ=ಬುದ್ಧಿಯಿಂದ ಕೂಡಿ ವಾಸಿಸುವ, (ನಿತ್ಯಜ್ಞಾನವುಳ್ಳ) ಸರಸ್ವತಿ(=(ಸೃಗತೌ.)ವ್ಯಾಪ್ತ್ಯಾದಿ ಗುಣಗಳುಳ್ಳ ಸ್ತ್ರೀರೂಪನಾದ ಶ್ರೀಹರಿಯು, ಅಥವಾ ವ್ಯಾಪ್ತನಾದ ಸರ್ವಜ್ಞನಾದ ಶ್ರೀಹರಿಯು ಪ್ರಿಯನಾಗಿ ಉಳ್ಳ ವಾಯುವಿನ ಹೆಂಡತಿಯಾದ ಭಾರತಿಯು ನಃ=ನಮ್ಮ, ಯಜ್ಞಂ=ಬಾಹ್ಯಯಜ್ಞವನ್ನು (ಅಧ್ಯಾತ್ಮದಲ್ಲಿ) ಜ್ಞಾನಯಜ್ಞವನ್ನೂ, ವಾಜೇಭಿಃ=ಅಶನಗಳಿಂದ (ಅಧ್ಯಾತ್ಮದಲ್ಲಿ) ಜ್ಞಾನಯುದ್ಧಗಳಿಂದ, (ಅಂದರೆ ಅಶನಾದಿಗಳನ್ನು ಕೊಟ್ಟು) ವಷ್ಟು=(ವಹ ಪ್ರಾಪಣೇ) ಪ್ರವರ್ತಿಸಲಿ. ॥ ೧೦ ॥

ಭಾ ॥ (೧) ಶೋಧಕತ್ವಾತ್ತು ಪಾವಕಾ (೨) ಸರಣಾತ್ಸರ್ವಗತ್ವೇನ ಸರ್ವಜ್ಞೋ ವಾಸೆರೋ ಹರಿಃ। ಸರಸಃ ಸರತಿತ್ವಾದ್ವಾ ತದ್ವತ್ತ್ಯೇವ ಸರಸ್ವತೀ॥ (೩) ಹರೌ ಗುಣಾಃ ಸರಶ್ಶಬ್ದಾಃ (೪) ದೇವೀ ತು ಹರಿವಾಚಿನೀ । ಹರಿಪ್ರಿಯತ್ವತೋ ವಾಯುಃ ಸರಸ್ವಾಂಸ್ತತ್ಪ್ರಿಯಾಽಥವಾ ॥ (೫) ಗುಣಸ್ತ್ವೇನ ತತತ್ವಾದ್ವಾ ಭಗವಾಂಸ್ತು ಸರಸ್ವತೀ ॥ (೬) ಸ್ತ್ರೀರೂಪಶ್ಚೈವ ಪುಂರೂಪೋ ಭಗವಾನ್ನನಪುಂಸಕಃ॥ (೭) ಸ್ತ್ರೀಪುಂದೋಷವಿಹೀನತ್ವಾದಪಿ ತಚ್ಛಬ್ದಗೋಚರಃ ॥ (೮) ಅನ್ನೇನೋ ವಾಜಿನಾಮೀಶೋ ವಾಜಿನೀಃ ಸೂರ್ಯ ಉಚ್ಯತೇ।ವಾಜೇನಃ ಛಂದಸಾಂ ವಾಪಿ ಸ್ವಾಮೀ ಪ್ರೋಕ್ತಃ ಸ ವಾಜಿನೀ॥ (೯) ಛಂದಾಂಸ್ಯಶ್ವಾ ಯತಸ್ತಸ್ಯ ತೇಚೇನಾ ಅನ್ಯವಾಜಿನಃ। (೧೦) ಅನ್ನವತ್ತ್ವಾದ್ವಾಜಿನೀ ವಾಗ್ಜ್ಞಾನಯುದ್ಧತ್ವತೋಽಪಿವಾ ॥(೧೧) ಸಷುಕ್ರೋ ವಾಗುಮಾಕಸ್ಯಾಃ ಪುತ್ರೀ ತದ್ವಾಜಿನೀವತೀ । ಸರಸ್ವತೀ ಹರಿರ್ವಾಪಿ ಯಜ್ಞಂ ವಹತು ನೋಽಶನೈಃ । (೧೨) ಅನ್ನದಾ ಹಿ ಸದಾ ದೇವೀ ಧಿಯಾ ಸಹ ವಸೇದ್ಯತಃ । ಧಿಯಾವಸುರ್ನಿತ್ಯಬೋಧಾ ॥ ೧೦ ॥

ಅ || (೧) ಸಮಸ್ತ ವಸ್ತುಗಳಿಗೆ ಶೋಧಕನಾದುದರಿಂದ ಸ್ತ್ರೀರೂಪನಾದ ಶ್ರೀಹರಿಯೂ ಭಾರತಿಯೂ ಪಾವಕಾ ಎನಿಸುತ್ತಾರೆ. (೨) (ಸರಸ್ವತೀ ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ.) ಸರ್ವತ್ರ ವ್ಯಾಪ್ತನಾಗಿದ್ದು ಸರ್ವತ್ರ ಸಂಚರಿಸುವುದರಿಂದ ಶ್ರೀಹರಿಯು ಸರಃ ಎನಿಸುತ್ತಾನೆ. (ಸರಂತಿ ಸರ್ವತ್ರ ಗಚ್ಛಂತಿ ಸರ್ವಂ ಜಾನಂತಿ) ಅಥವಾ ಸರತೀತಿ ಸರಃ ಎಂಬ ವ್ಯುತ್ಪತ್ತಿಯಿಂದ ಸರ್ವಜ್ಞನಾದುದರಿಂದ ಸರಃ ಎನಿಸುತ್ತಾನೆ. ಅಥವಾ (ರಸೇನ ಬಲೇನ ಸಹಿತಃ, ರಸಾ ರತ್ಯಾ ಚ ಸಹಿತಃ ಬಲದಿಂದ ಕೂಡಿರುವುದರಿಂದ ಅಂದರೆ ಬಲಿಷ್ಠನಾದುದರಿಂದ ಅಥವಾ ಸುಖದಿಂದ ಕೂಡಿರುವುದರಿಂದ ಅಥವಾ ಕ್ರೀಡಾದಿ ಗುಣಗಳಿಂದ ಕೂಡಿರುವುದರಿಂದ ಸರಃ ಎನಿಸುತ್ತಾನೆ. ಹೀಗೆ ಸರಶ್ಶಬ್ದವಾಚ್ಯನಾದ ಶ್ರೀಹರಿಯು ಭಾರತಿಯಲ್ಲಿ ನಿಯಾಮಕನಾಗಿದ್ದುದರಿಂದ ಭಾರತಿಯು ಸರಸ್ವತೀ ಎನಿಸುತ್ತಾಳೆ. (ಈ ವ್ಯಾಖ್ಯಾನವು ಇತರ ದೇವತಾ ವಿಷಯಕವು.) (೩) ಸರಸ್ವತೀ ಶಬ್ದದಿಂದ ಶ್ರೀಹರಿಯು ವಿವಕ್ಷಿತನಾದರೆ, ಸರಂತಿ=ಸರ್ವತ್ರ ಗಚ್ಛಂತ್ರಿ, ಸರ್ವಂ ಜಾನಂತಿ, ರಸೇನ=ಬಲದಿಂದ ಕೂಡಿದವುಗಳೂ ಸುಖದಿಂದ ಕೂಡಿದವುಗಳು, ಎಂಬ ವ್ಯುತ್ಪತ್ತಿಯಿಂದ ವ್ಯಾಪ್ತಿ ಜ್ಞಾನಾದಿಗುಣಗಳು ವಾಚಕಗಳಾಗಿ ಸರಶ್ಶಬ್ದವುಳ್ಳವುಗಳು. ಏವಂಚ ಜ್ಞಾನಾದಿ ಗುಣಗಳಿಗೆ ಸರ್ವಜ್ಞತ್ವಾದಿಗುಣಗಳಿಂದ ಕೂಡಿದ ಶ್ರೀಹರಿಯಿಂದ ಅಭೇದವಿದ್ದ ಪ್ರಯುಕ್ತ ಅವುಗಳಿಗೂ ಸರ್ವಜ್ಞತ್ವಾದಿಗಳು. ತಥಾಚ ಸರಃ ಎನಿಸಿಕೊಂಡ ವ್ಯಾಪ್ತ್ಯಾದಿ ಗುಣಗಳು ಶ್ರೀಹರಿಗೆ ಇದ್ದ ಪ್ರಯುಕ್ತ ಸ್ತ್ರೀರೂಪನಾದ ಶ್ರೀಹರಿಯು ಸರಸ್ವತೀ ಎನಿಸುತ್ತಾನೆ. (೪) ಬ್ರಹ್ಮಪತ್ನಿಯಾದ ಸರಸ್ವತಿಯು ಭಗವದ್ವಾಚಕಗಳಾದ ವೇದಗಳಿಗೆ ಅಭಿಮಾನಿನಿಯಾದುದರಿಂದ ಸರಃ ಏನಿಸಿಕೊಂಡ ಶ್ರೀಹರಿಯನ್ನು ಹೇಳುವವಳು. (ಅಂದರೆ ಸಮಸ್ತ ವೇದಗಳಿಂದ ವಾಚ್ಯನಾದ ಶ್ರೀಹರಿಯುಳ್ಳವಳು. ಶ್ರೀಹರಿಯು ವಾಚ್ಯನು. ವೇದಗಳು ವೇದಾಭಿಮಾನಿನಿಗಳೂ ವಾಚಕಗಳು.) ಸರಃ ಎನಿಸಿಕೊಂಡ ಶ್ರೀಹರಿಗೆ ಪ್ರಿಯರಾದುದರಿಂದ ವಾಯುದೇವರು ಸರಸ್ವಾನ್ ಎನಿಸುತ್ತಾರೆ. ಆ ವಾಯುದೇವರ ಹೆಂಡತಿಯು ಸರಸ್ವತೀ ಎನಿಸುತ್ತಾಳೆ. (೫) ಸರಃ ಎನಿಸಿಕೊಂಡ ಜ್ಞಾನಾದಿ ಗುಣಗಳೆಂಬ ದ್ರವ್ಯದಿಂದ ವ್ಯಾಪ್ತನಾದ ಪ್ರಯುಕ್ತ ಶ್ರೀಹರಿಯು ಸರಸ್ವತಃ ಎನಿಸುತ್ತಾನೆ. ಶ್ರೀಹರಿಯ ಸ್ತ್ರೀರೂಪವು ಸರಸ್ವತೀ ಎನಿಸುತ್ತದೆ. (೬)(ಶ್ರೀಹರಿಯಲ್ಲಿ ಸ್ತ್ರೀಲಿಂಗ ಪ್ರಯೋಗವು ಹೇಗೆ? ಶ್ರೀಹರಿಗೆ ಸ್ತ್ರೀತ್ವವಿದ್ದ ಪ್ರಯುಕ್ತ ಎಂದರೆ ಅಗ್ನಿ ಮೊದಲಾದ ಪುಲ್ಲಿಂಗ ಪ್ರಯೋಗವು ಹೇಗೆ? ಎಂದರೆ) ಶ್ರೀಹರಿಯು ಸ್ತ್ರೀ ರೂಪನೂ ಪುರುಷ ರೂಪನೂ ಆಗಿರುತ್ತಾನೆ. (ಹೀಗಾದರೆ ಶ್ರೀಹರಿಯಲ್ಲಿ ಬ್ರಹ್ಮ ಮೊದಲಾದ ನಪುಂಸಕ ಪ್ರಯೋಗವಿದ್ದುದರಿಂದ ನಪುಂಸಕ ರೂಪವನ್ನೂ ಅಂಗೀಕರಿಸಬೇಕಾಗುವುದು ಎಂದರೆ) ಶ್ರೀಹರಿಯು ನಪುಂಸಕ ರೂಪವುಳ್ಳವನು ಆಗುವುದೇ ಇಲ್ಲ. (೭) ಪುರುಷೇಚ್ಛಾ ಮೊದಲಾದ ಸ್ತ್ರೀದೋಷಗಳು ಸ್ತ್ರೀಯರಲ್ಲಿ ಇಚ್ಛಾ ಸ್ತ್ರೀವಶತ್ವಮೊದಲಾದ ಪುರುಷ ದೋಷಗಳು ಇವುಗಳಿಂದ ವಿರಹಿತನಾದಾಗ್ಯೂ ಸ್ತ್ರೀಲಿಂಗ ಪುಲ್ಲಿಂಗ ಶಬ್ದಗಳಿಗೆ ವಿಷಯ ನಾಗುತ್ತಾನೆ. (೮) (ವಾಜಿನೀವತೀ ಶಬ್ದವನ್ನು ವಾಖ್ಯಾನ ಮಾಡುವುದಕ್ಕಾಗಿ ವಾಜಿನೀ ಶಬ್ದಾರ್ಥವನ್ನು ಹೇಳುತ್ತಾರೆ,) ವಾಜಂ=ಅನ್ನವು. ಅತಿಶಯಾರ್ಥದಲ್ಲಿ ಇಕಾರವು. ವಾಜಿ=ಅನ್ನವನ್ನು ನಯತೀತಿ ಎಂಬ ವ್ಯುತ್ಪತ್ತಿಯಿಂದ ವಾಜಿನೀ=ಸೂರ್ಯನು. ಅಂದರೆ ಅನ್ನೇನಃ=ಅನ್ನಕ್ಕೆ ಸ್ವಾಮಿಯು. ಅಥವಾ ವಾಜಸ್ಯ ಇನಃ= ಅನ್ನಕ್ಕೆ ಸ್ವಾಮಿಯು. ವಾಜೇನ ಏವ ವಾಜಿನೀ=ಸೂರ್ಯನು. ಅಥವಾ ವಾಜಿನಾಂ=ಕುದುರೆಗಳಿಗೆ, ಅಥವಾ ಅನ್ನವುಳ್ಳವರಿಗೆ, ಇನಃ=ಸ್ವಾಮಿಯು, ಹೀಗೆ ವಾಜಿನೀ ಶಬ್ದದಿಂದ ಸೂರ್ಯನು ಹೇಳಿಸಿ ಕೊಳ್ಳಲ್ಪಡುತ್ತಾನೆ. ಅಥವಾ ವಾಜಿನಾಂ=ಅಶ್ವಗಳಿಗೆ, ಇನಾನಿ=ಸ್ವಾಮಿಗಳು. ಏಳು ಛಂದಸ್ಸುಗಳು. ವಾಜಿನಾನಿ ಅಸ್ಯಸಂತಿ ಎಂಬ ವ್ಯುತ್ಪತ್ತಿಯಿಂದ, ಏಳು ಛಂದಸ್ಸುಗಳಿಗೆ ಸ್ವಾಮಿಯು, (೯) ಸೂರ್ಯನು ಛಂದಸ್ಸುಗಳಿಗೆ ಸ್ವಾಮಿಯು ಹೇಗೆ? ಮತ್ತು ಛಂದಸ್ಸುಗಳು ಅಶ್ವಗಳಿಗೆ ಸ್ವಾಮಿಯು ಹೇಗೆ? ಎಂದರೆ.) ಸೂರ್ಯನ ಕುದುರೆಗಳು ಯಾವ ಕಾರಣದಿಂದ ಛಂದೋಭಿಮಾನಿಗಳೋ, ಅಂತಹ ಕುದುರೆಗಳು ಇತರ ಕುದುರೆಗಳಿಗೆ ಸ್ವಾಮಿಗಳು. (೧೦) (ವಾಜಿನೀ ಶಬಕ್ಕೆ ಅನ್ಯಾರ್ಥವನ್ನು ಹೇಳುತ್ತಾರೆ.) ಅನ್ನವಿರುವುದರಿಂದಲೂ (ಅಂದರೆ ಮಾತಿಗೆ ಅನ್ನ ಭೋಜನದಿಂದ ಪುಷ್ಟಿಯಿರುವುದರಿಂದಲೂ) ಜ್ಞಾನಕ್ಕಾಗಿ ಯುದ್ಧವಿರುವುದರಿಂದಲೂ, (ಅಂದರೆ ವಾಗಿಂದ್ರಿಯವು ವಾದ ಜಲ್ಪ ಮೊದಲಾದವುಗಳನ್ನು ಹುಟ್ಟುಸುವುದರಿಂದಲೂ,) ವಾಕ್ಕು, ವಾಜಿನೀ ಎನಿಸುತ್ತದೆ. (೧೧) ಆ ಸೂರ್ಯನು ವಿಷ್ಣುವಿನ, ಮತ್ತು

ಪ್ರಸಿದ್ಧಳಾದ ಸರಸ್ವತಿಯ ಪುತ್ರನು. ವಾಗಭಿಮಾನಿನಿಯಾದ ಪಾರ್ವತಿಯು ಮಗಳು. ಹೀಗೆ ಎರಡೂ ಇದ್ದ ಪ್ರಯುಕ್ತ (ವಾಜಿನೀ ಶಬ್ದವಾಚ್ಯರಾದ ಸೂರ್ಯ ಪಾರ್ವತಿಯರು ಇದ್ದಪ್ರಯುಕ್ತ)ಸರಸ್ವತಿಯು ವಾಜಿನೀವತೀ ಎನ್ನಿಸುತ್ತಾಳೆ. ಇಂತಹ ಸರಸ್ವತಿಯು ಶ್ರೀಹರಿಯಾಗಲೀ, ನಮ್ಮ ಬಾಹ್ಯಯಜ್ಞವನ್ನು ಅನ್ನಾದಿಗಳನ್ನು ಕೊಟ್ಟು, ಅಧ್ಯಾತ್ಮದಲ್ಲಿ ಜ್ಞಾನ ಯುದ್ಧಗಳಿಂದಲೂ (ಜ್ಞಾನಕ್ಕಾಗಿ ಯುದ್ಧ ಮಾಡಿ ಆಧ್ಯಾತ್ಮಿಕ ಜ್ಞಾನ ಯುದ್ಧವನ್ನು) ಪ್ರವರ್ತಿಸಲಿ. (೧೨) ಸರಸ್ವತೀ ದೇವಿಯು ಸದಾ ಅನ್ನವನ್ನು ಕೊಡುವವಳು. ಯಾವ ಕಾರಣದಿಂದ ಸರ್ವದಾ ಬುದ್ಧಿಯಿಂದ ಕೂಡಿಯೇ ಆವಾಸ ಮಾಡುವವಳೋ ಆದಕಾರಣ ಧಿಯಾವಸುಃ ಎನಿಸುತ್ತಾಳೆ. ಅಂದರೆ ನಿತ್ಯ ಜ್ಞಾನವುಳ್ಳವಳು. || ೧೦ ||

ಋ||(೨೯)ಚೋದಯಿತ್ರೀ ಸೂನೃತಾನಾಂ ಚೇತಂತೀ ಸುಮತೀನಾಂ|ಯಜ್ಞಂ ದಧೇ ಸರಸ್ವತೀ || ೧೧ ||

ಅ || ಸೂನೃತಾನಾಂ=(ಸುಷ್ಠು ನೃತ್ಯಂತಿ ಅನೇನ ಎಂಬ ವ್ಯುತ್ಪತ್ತಿಯಿಂದ) ಒಳ್ಳೆ ವಚನಗಳಿಗೆ, ಚೋದಯಿತ್ರೀ=ಪ್ರೇರಕಳಾದ,ಸುಮತೀನಾಂ=ಒಳ್ಳೇ ಬುದ್ಧಿಗಳನ್ನು,ಚೇತಂತೀ=ತಿಳಿಸಿ ಕೊಡುವ,(ಒಳ್ಳೇ ಬುದ್ಧಿಗಳನ್ನು ಜ್ಞಾಪಿಸಿಕೊಡುವ) ಸರಸ್ವತೀ=ಶ್ರೀ ಹರಿಯು,ಸರಸ್ವತಿಯೂ ಕೂಡ,ಯಜ್ಞಂ=ಯಾಗವನ್ನುದಧೇ=ಧರಿಸುತ್ತಾರೆ. (ಅಂದರೆ—ಸಮಸ್ತ ಕರ್ಮಗಳಿಗೆ ವಾಕು, (ಮಾತು)ಮತ್ತೂ ಬುದ್ದಿಗಳು ಮೂಲಕಾರಣಗಳಾಗಿರುವ ಪ್ರಯುಕ್ತ ವಾಕ್ ಬುದ್ಧಿಗಳಿಗೆ ಪ್ರವರ್ತಕರಾದುದರಿಂದ ಯಜ್ಞಾದಿಗಳನ್ನು ಧರಿಸುವವರು, ಎಂದು ಸ್ತುತಿಯು.) || ೧೧ ||

ಭಾ || ಸುವಾಚಾಂ ಪ್ರೇರಕಾ ಸದಾ | ಸುಬುದ್ಧಿಜ್ಞಾಪಿಕಾ ಸೈವ ಸ್ವಾತಂತ್ರ್ಯಲ್ಲುಪ್ತಿಯೋ ಭವೇತ್ | ಅನೇನೈವ ಪ್ರಕಾರೇಣ ಸೈವ ಯಜ್ಞಾದಿಧಾರಿಣೀ || ೧೧ ||

ಅ || ಆ ಸರಸ್ವತಿಯೇ ಒಳ್ಳೇ ವಚನಗಳಿಗೆ ಸದಾ ಪ್ರೇರಕಳು, ಸ್ವತಂತ್ರವಾಗಿ ಒಳ್ಳೇ ಬುದ್ಧಿಗಳನ್ನು ತಿಳಿಸಿ ಕೊಡುವವಳು, ಪ್ರವರ್ತಿಸುವವಳು ('ಸ್ವಾತಂತ್ರ್ಯ ಸ್ನೇಹಯೋರಂತರ್ಣೀತಣಿಚ್' ಎಂಬ ಸೂತ್ರದಿಂದ ಚೇತಂತೀ ಶಬ್ದವು) ಸ್ವಾತಂತ್ರ್ಯ ವಿವಕ್ಷೆಯಿಂದ ಲುಪ್ತವಾದ ಯಕಾರ (ಣಿಚ್) ವುಳ್ಳದ್ದೂ ಆಗುವುದು. ಇದೇ ಪ್ರಕಾರವಾಗಿ ವಾಕ್ ಬುದ್ಧಿಗಳಿಗೆ ಪ್ರವರ್ತಕಳಾದುದರಿಂದ ಯಜ್ಞಾದಿಗಳನ್ನು ಧರಿಸುವವಳು. (ಕರ್ಮಸ್ವರೂಪಾದಿಗಳನ್ನು ತಿಳಿದುಕೊಂಡು ಮಂತ್ರ ವ್ಯವಹಾರ ಪೂರ್ವಕವಾಗಿ ಮಾಡಿದ ಕರ್ಮಗಳು ಸಫಲಗಳಾಗಿರುವುದರಿಂದ ಯಜ್ಞಾದಿಗಳನ್ನು ಧರಿಸುವವಳು) || ೧೧ ||

ಋ|| (೩೦) ಮಹೋ ಅರ್ಣಃ ಸರಸ್ವತೀ ಪ್ರಚೇತಯತಿ ಕೇತುನಾ| ಧಿಯೋ ವಿಶ್ವಾ ವಿರಾಜತಿ || ೧೨ || ೬ || ೩ || ೧ ||

ಅ || ಸರಸ್ವತೀ=ಹಿಂದೆ ಹೇಳಿದ ಪ್ರಕಾರ ಸರಸ್ವತೀ ಎನಿಸಿಕೊಂಡ ಸ್ತ್ರೀ ರೂಪನಾದ ಶ್ರೀಹರಿಯು, ಮಹಃ=ತೇಜೋ ರೂಪನಾದುದರಿಂದಲೂ ಸರ್ವಶ್ರೇಷ್ಠನಾದುದರಿಂದಲೂ ಮಹಃ ಎನಿಸಿಕೊಂಡ, ಅರ್ಣಃ=ಚೆನ್ನಾಗಿ ಆನಂದ ಸ್ವರೂಪನಾಗಿರುವುದರಿಂದ ಅರ್ಣಃ ಎನಿಸಿಕೊಂಡ ಪರಬ್ರಹ್ಮನನ್ನು (ತನ್ನನ್ನೇ) ಕೇತುನಾ=ಭಕ್ತರಿಗೆ ಜ್ಞಾನ ಸಾಮರ್ಥ್ಯವನ್ನು ಕೊಟ್ಟು, ಪ್ರಚೇತಯತಿ=ಚೆನ್ನಾಗಿ ಮಹತ್ತರ ಜ್ಞಾನದಿಂದ ಪ್ರಕಾಶಿಸಬೇಕು. (ವಾಣೀ ಪಕ್ಷದಲ್ಲಿ ಮಹೋ ಅರ್ಣಃ=ಶ್ರೀ ಹರಿಯನ್ನು ಭಕ್ತರಿಗೆ ಜ್ಞಾನವನ್ನು ಕೊಟ್ಟು ಪ್ರಕಾಶಗೊಳಿಸಬೇಕು

ಒಳ್ಳೆ ಜ್ಞಾನವನ್ನು ಕೊಡುವುದರಿಂದಲೇ, ವಿಶ್ವಾಃ=ಎಲ್ಲಾ, (ಭಕ್ತರ) ಧಿಯಃ=ಬುದ್ಧಿಗಳನ್ನೂ, ವಿರಾಜತಿ= ಪ್ರಕಾಶಗೊಳಿಸುತ್ತಾನೆ. (ಜ್ಞಾನವುಳ್ಳವರ ಬುದ್ಧಿಯು ಪ್ರಕಾಶಿಸುತ್ತದೆ) ॥ ೧೨ ॥

ಭಾ ॥ (೧) ಮಹೋ ಅರ್ಣಃ ಪರಂಬ್ರಹ್ಮ ತೇಜಸ್ತ್ವಾಚ್ಚ ಮಹತ್ವತಃ । ಅರಮಾನಂದ ರೂಪತ್ವಾಣ್ಣೋ ಹಿ ನಿರ್ವೃತಿವಾಚಕಃ। ತಜ್ಜ್ಞಾಪಯತಿ ಸಾ ದೇವೀ ಜ್ಞಾನಂ ದತ್ವಾ ಮಹತ್ತರಂ । ಮಹೋ ಅರ್ಣಃಸ್ಸ್ವಯಂ ದೇವಃ ಸ್ವಮಾತ್ಮಾನಂ ಪ್ರಕಾಶಯೇತ್ ॥ ವಿರಾಜಯತಿ ವಿಶ್ವಾಶ್ಚ ಧಿಯಃ ಸುಜ್ಞಾನದಾನತಃ ॥ ೧೨ ॥

ಅ ॥ (೧) ತೇಜೋರೂಪನಾದುದರಿಂದಲೂ ಶ್ರೇಷ್ಠನಾದುದರಿಂದಲೂ ಮಹಃ ಎನಿಸಿಕೊಂಡವನು, ಅರ್ಣಃ=ಪರಬ್ರಹ್ಮನು. ಅರಂ=ಅತ್ಯಂತವಾಗಿ ಪೂರ್ಣವಾಗಿ ಆನಂದ ಸ್ವರೂಪನಾಗಿರುವುದರಿಂದ ಅರ್ಣಃ, ಎನಿಸಿಕೊಂಡವನು. ಣಃ ಎಂಬ ಪದವು ಸುಖ ಪರಿಪೂರ್ಣತ್ವವನ್ನು ಹೇಳುತ್ತದೆ. ಆ ಸರಸ್ವತೀ ದೇವಿಯು ಭಕ್ತರಿಗೆ ಮಹತ್ತರವಾದ ಜ್ಞಾನವನ್ನು ಕೊಟ್ಟು ಆ ಪರಬ್ರಹ್ಮನನ್ನೂ ತಿಳಿಸುತ್ತಾಳೆ. ಅಥವಾ ಸಾಮಾನ್ಯ ಜ್ಞಾನವನ್ನು ಕೊಟ್ಟು ವಿಶೇಷವಾಗಿ ತಿಳಿಸುತ್ತಾಳೆ. (ಇದು ಇತರ ದೇವತಾ ವಿಷಯಕವು.) (ಭಗವದ್ವಿಷಯದಲ್ಲಿ ಆದರೂ) ಸರಸ್ವತೀ ಶಬ್ದವಾಚ್ಯನಾದ ಶ್ರೀಹರಿಯು ಸಾಕ್ಷಾತ್ತಾಗಿ ಮಹಃ ಅರ್ಣಃ ಎನಿಸುತ್ತಾನೆ. ಆತನು ತನ್ನ ಸ್ವರೂಪವನ್ನೇ ಪ್ರಕಾಶಗೊಳಿಸುವನು. ಶ್ರೀ ಹರಿಯು ಒಳ್ಳೇ ಜ್ಞಾನವನ್ನು ಕೊಡೋಣದರಿಂದ ಭಕ್ತರ ಎಲ್ಲಾ ಬುದ್ಧಿಗಳನ್ನು ಪ್ರಕಾಶಗೊಳಿಸುತ್ತಾನೆ. ॥ ೧೨ ॥ ೬ ॥ ೩ ॥ ೧ ॥ ೬ ವರ್ಗ ೩ ಸೂಕ್ತ ೧ ಅನುವಾಕ ಅವ ೧೦. ಋಕ್ಕು. ೨ವರ್ಗ. ಇಂದ್ರಸೂಕ್ತವು.

ಋ ॥ (೩೧) ಸುರೂಪಕೃತ್ನುಮೂತಯೇ ಸುದುಘಾಮಿವ ಗೋದುಹೇ ।
ಜುಹೂಮಸಿ ದ್ಯವಿ ದ್ಯವಿ ॥ ೧ ॥

ಅ ॥ ದ್ಯವಿ ದ್ಯವಿ=ಪ್ರತಿ ದಿವಸದಲ್ಲಿಯೂ, ಗೋದುಹೇ=(ದುಹ ಪ್ರಪೂರಣೇ) ಗೋವುಗಳ ದೋಹನಕ್ಕಾಗಿ ಸುದುಘಾಮಿವ=ಚೆನ್ನಾಗಿ ಕರೆಯುವ ಕಾಮಧೇನುವನ್ನೆಂಬಂತೆ, ಊತಯೇ=ಯಜಮಾನನಿಗೆ ಇಷ್ಟವಾದ ಅರ್ಥವು ಸಿದ್ಧಿಸುವುದಕ್ಕಾಗಿ, ಅಥವಾ ಯಜಮಾನನ ರಕ್ಷಣೆಗಾಗಿ, ಸುರೂಪ ಕೃತ್ನುಂ=ಸಾಧು ರೂಪಗಳನ್ನು ಸೃಷ್ಟಿಸುವ, ಶ್ರೀವಿಷ್ಣುವನ್ನು ಇಂದ್ರನನ್ನು ಕೂಡ, ಜುಹೂಮಸಿ=(ಹ್ವೇಞ ಶಬ್ದೇ) ಚೆನ್ನಾಗಿ ಕರೆಯುತ್ತೇವೆ. ॥ ೧ ॥

ಭಾ ॥ (೧) ಸೂಕ್ತಂ ತ್ವನಾರತಂ ಪ್ರೋಕ್ತಮನುವಾಗೇಕಕಾಲಿಕಾ ॥ ಅನ್ಯಥಾತ್ವಂಚ ತತ್ರ ಸ್ಯಾದಾವಾಪೋದ್ವಾಪತಸ್ತ್ವೃಚಾಂ ॥ (೨) ವೇದಾನಂತತ್ವವಿಜ್ಞಪ್ತ್ಯೈ ತೌ ಚಕ್ರೇ ಬಾದರಾಯಣಃ । (೩) ಋಚಃ ಸ ಋಚ ಉದ್ಧೃತ್ಯ ಋಗ್ವೇದಂ ಕೃತವಾನ್ ಪ್ರಭುಃ । ಯಜೂಂಷಿ ನಿಗದಾಚ್ಚೈವ ತಥಾ ಸಾಮಾನಿ ಸಾಮತಃ ॥ ಏವಂ ಪುರಾಣವಚನಾದುದ್ಧೃತಾ ಹಿ ತತಸ್ತತಃ । ಋಚಃ ಶಾಖಾತ್ವಮಾಪನ್ನಾಃ ಶಿಷ್ಯ ತಚ್ಛಿಷ್ಯಕೈರಿಮಾಃ । (೪) ಮಾನಸ್ತೇನೇತಿ ಪೂರ್ವಾಸು ಹ್ಯೂನತಾ ದೃಶ್ಯತೇಽರ್ಥತಃ ॥ (೫) ಶುನಃಶೇಪೋದಿತಾಭ್ಯಶ್ಚ ಪಠ್ಯಂತೇಽನ್ಯತ್ರ ಕಾಶ್ಚನ । ಅತ್ರಾಪ್ಯಕ್ರಮತೋ ದೃಷ್ಟಿರಿತಿ ನೈಕಕ್ರಮೋ ಭವೇತ್ । (೬) ಅನಂತತ್ವಾತ್ತು ವೇದಾನಾಂ

ಪ್ರಾಯಃ ಕರ್ಮಾನುಸಾರತಃ । ಸಂಕ್ಷೇಪಂ ಕೃತವಾನ್ ದೇವಃ ಶಿಷ್ಯಾಶ್ಚ ತದನುಜ್ಞಯಾ॥ ಅಷ್ಟಕಾಧ್ಯಾಯವರ್ಗಾದಿ ಭೇದಂ ಚ ಕೃತವಾನ್ ಪ್ರಭುಃ (ಸ್ವಯಂ)। ಸ್ವಾಧ್ಯಾಯವಿಶ್ರಮಾರ್ಥಾಯ ತಸ್ಮಾತ್ಕ್ರಮವಿಪರ್ಯಯಃ। ತತ್ರ ತತ್ರೈಕಾಂತರಿತಾಃ ದೃಶ್ಯಂತೇ ಚ ಖಿಲಾ ಅಪಿ ॥(೮)ಯತ್ರಾರ್ಥೇ ನ ವಿಶೇಷೋಽಸ್ತಿ ಪದಾಂತರಿತತಾಽತ್ರ ಚ । ಯತ್ರಾಲ್ಪೋಽಪಿ ವಿಶೇಷೋಽಸ್ತಿ ಪದಂ ನಾಂತರಿತಂ ಭವೇತ್ ॥ ೧ ॥

ಅ ॥ (೧) ನಿರಂತರವಾಗಿ ಪಠಿತವಾದುದು ಸೂಕ್ತವು. (ಅಂದರೆ — ಮೂಲ ವೇದದಲ್ಲಿ ಋಕ್ಕುಗಳದ್ದು ಯಾವುದು ಕ್ರಮವೋ, ಅದರಲ್ಲಿ ಅದೇ ಕ್ರಮದಿಂದ ಋಕ್ಕುಗಳನ್ನು ಅವ್ಯವಹಿತಗಳನ್ನಾಗಿ ಮಾಡಿ ಎಷ್ಟು ಋಕ್ಸಮುದಾಯವು ಉಪವೇದದಲ್ಲಿ ಪಠಿತವಾಗುತ್ತದೋ, ಅಷ್ಟು ಉಪವೇದದಲ್ಲಿ ಸೂಕ್ತವೆನಿಸುತ್ತದೆ.) ಋಷಿಗಳು ನೋಡುವ ಸಮಯದಲ್ಲಿ ನಿರಂತರ ಕಾಲದಲ್ಲಿ ಎಷ್ಟು ಕಾಣುತ್ತದೋ, ಅದು ಅನುವಾಕ ಎನಿಸುತ್ತದೆ. ಅಥವಾ ವಿರಾಮ (ವರ್ಣಗಳ ವಿಚ್ಛೇದ) ಮಾಡದೆ ಒಂದು ಕಾಲದಲ್ಲಿ ಹೇಳಲರ್ಹವಾದುದು. ಉದಾ= **ಇಷೇ ತ್ವಾ** ಎಂದಾರಂಭಿಸಿ **ಪಶೂನ್ಪಾಹಿ** ಎಂಬುವ ಪರ್ಯಂತ. ಅಥವಾ ಋಗ್ವೇದಾದಿಗಳ ಬ್ರಾಹ್ಮಣ ಆರಣ್ಯಕಗಳ ಖಂಡಗಳು ವಿಚ್ಛೇದವಿಲ್ಲದೆ ಏಕಕಾಲದಲ್ಲಿಯೇ ಪಠಿತಗಳಾಗುತ್ತವೆ. ಅಂತಹುದು ಅನುವಾಕವು. (೨) (ಹಿಂದೆ ಹೇಳಿದುದಕ್ಕೆ ಅಪವಾದ ಹೇಳುತ್ತಾರೆ.) (ಋಕ್ ನಿಗದ ಮೊದಲಾದುದು ರಾಶಿರೂಪವಾದುದು ಮೂಲ ವೇದವು. ಅದರಿಂದ ಉದ್ಧೃತಗಳಾಗಿ ಪೃಥಕ್ಕೃತಗಳಾದ ಋಕ್ ನಿಗದ ಸಾಮ ಅಥರ್ವ ನಾಮಕಗಳು ಉಪವೇದಗಳು. (ಅವುಗಳಿಂದ ಉದ್ಧೃತಗಳಾದ ಋಗ್ವೇದಾದಿ ನಾಮವುಳ್ಳವುಗಳು ಅವಾಂತರ ವೇದಗಳು. ಅವುಗಳಿಂದ ಉದ್ಧೃತಗಳಾದವುಗಳು ಶಾಕಲಾದಿ ಶಾಖೆಗಳು.) ಉಪವೇದಗಳಲ್ಲಿ ಅವ್ಯವಹಿತವಾಗಿ ಹೇಳಲ್ಪಟ್ಟದ್ದು ಸೂಕ್ತವೆನಿಸುತ್ತದೆ.)ಆ ಸೂಕ್ತದಲ್ಲಿದ್ದ ಕ್ರಮಕ್ಕೆ ಉಪವೇದಗಳಿಂದ ಉದ್ಧೃತಗಳಾದ ಋಗ್ವೇದಾದಿ ನಾಮಗಳುಳ್ಳ ಅವಾಂತರ ವೇದಗಳಲ್ಲಿ ವೈಪರೀತ್ಯವೂ ಬರಬಹುದು. ಹೇಗೆಂದರೆ ಋಕ್ಕುಗಳ ಆವಾಪ (ಪ್ರಕ್ಷೇಪ)ಉದ್ವಾಪ ಕ್ರಮದಿಂದ. (ಅಂದರೆ ಮೂಲ ವೇದದಲ್ಲಿದ್ದ ಕ್ರಮದಿಂದ ೧೦ ಋಕ್ಕುಗಳು ಉಪವೇದದಲ್ಲಿ ಪಠಿತಗಳಾಗಿವೆ. ಅವುಗಳಿಗೆ ಉಪವೇದದಲ್ಲಿ ಸೂಕ್ತಗಳೆಂದು ಹೆಸರು. ಅವುಗಳ ಮಧ್ಯದಲ್ಲಿ ೨ ಋಕ್ಕುಗಳನ್ನು ಬಿಟ್ಟು ಅವಾಂತರ ವೇದದಲ್ಲಿ ಪಾಠಮಾಡಿದರೆ ೮ ಋಕ್ಕುಗಳದ್ದು ಸೂಕ್ತವಾಗುವುದು. ಇದು **ಉದ್ವಾಪವು.** ಬೇರೆ ಕಡೆಗಳಲ್ಲಿದ್ದ ೨ ಋಕ್ಕುಗಳನ್ನು ಆ ಸೂಕ್ತಕ್ಕೆ ಸೇರಿಸಿದರೆ ೧೨ ಋಕ್ಕುಗಳದ್ದು ಸೂಕ್ತವಾಗುವುದು. ಇದು **ಆವಾಪವು.**) (ಅವಾಂತರ ವೇದದಲ್ಲಿ ಸೂಕ್ತವೆಂಬ ಸಂಜ್ಞೆಗೆ ಕಾರಣವೇನೆಂದರೆ ಉಪವೇದದಲ್ಲಿರತಕ್ಕುದು ಯಾವುದು ಸೂಕ್ತವೋ, ಅದರಲ್ಲಿ ಸೇರಿರುವ ಋಕ್ಕುಗಳ ಸಂಬಂಧವೇ ಅವಾಂತರ ವೇದದಲ್ಲಿ ಸೂಕ್ತವೆಂಬ ಸಂಜ್ಞೆಗೆ ನಿಮಿತ್ತವು) (೨) (ಆವಾಪ ಉದ್ವಾಪಮಾಡಲಿಕ್ಕೆ ಕಾರಣವೇನೆಂದರೆ)ವೇದವ್ಯಾಸರು ವೇದಗಳು ಅನಂತಗಳಾದುದರಿಂದ ಆಯಾಯ ಅಧಿಕಾರಿಗಳು ಅವರವರ ಶಕ್ತ್ಯನುಸಾರವಾಗಿ ಕರ್ಮಗಳನ್ನುಮಾಡಬೇಕೆಂದು ತಿಳಿಸುವುದಕ್ಕಾಗಿ ಆವಾಪೋದ್ವಾಪಗಳನ್ನು ಮಾಡಿದರು. (ಅಂದರೆ ವೇದಗಳು ಅನಂತಗಳಾಗಿರುವುದರಿಂದ ಸರ್ವರಿಗೆ ಸಮಸ್ತ ವೇದಗಳಲ್ಲಿ ಹೇಳಿದ ಕರ್ಮಗಳನ್ನು ಮಾಡಲಿಕ್ಕೆ ಶಕ್ತಿಯಿಲ್ಲದಿರುವುದರಿಂದ ಮೂಲ ವೇದದಿಂದ ಋಕ್ ನಿಗದ ಮೊದಲಾದ ಉಪವೇದಗಳು ಉದ್ಧೃತಗಳಾಗಿವೆ. ಉಪವೇದಗಳಲ್ಲಿ ಹೇಳಿದ ಕರ್ಮಗಳನ್ನು ಮಾಡಲಿಕ್ಕೆ ಅಶಕ್ತರಾದವರನ್ನು ಕುರಿತು ಅವರಿಗೆ ಶಕ್ಯಗಳಾದ ಕರ್ಮಗಳನ್ನು ಮಾಡಲಿಕ್ಕಾಗಿ ಉಪವೇದಗಳಿಂದ ಉದ್ಧೃತಗಳಾದ ಋಗ್ವೇದ ಮೊದಲಾದ ಅವಾಂತರವೇದಗಳಲ್ಲಿ ಉಪವೇದಗಳಲ್ಲಿರತಕ್ಕ ಸೂಕ್ತಗಳಲ್ಲಿ ಸೇರಿದ ಋಕ್ಕುಗಳ ಆವಾಪಉದ್ವಾಪಗಳನ್ನು ಮಾಡಿದರು) (ಅಥವಾ ವೇದಗಳು ಅನಂತಗಳಾಗಿರುವುದರಿಂದ ಅಲ್ಲಲ್ಲಿ ಹೇಳಿದ ಬಹು ಕರ್ಮಗಳನ್ನು ಆಯಾಯ ವಾಕ್ಯಗಳನ್ನು ಪರ್ಯಾಲೋಚಿಸುತ್ತಾ ತಿಳಿಯಲು ಅಶಕ್ಯಗಳಾಗಿರುವುದರಿಂದ ಕರ್ಮ ಕ್ರಮಾದಿಗಳನ್ನು ತಿಳಿಸುವುದಕ್ಕಾಗಿ ಅಲ್ಲಿ ಅಲ್ಲಿ ಉಪಯುಕ್ತಗಳಾದ ಋಕ್ಕುಗಳ ಆವಾಪವನ್ನು ಅನುಪಯುಕ್ತಗಳಾದ ಋಕ್ಕುಗಳ ಉದ್ಧಾರವನ್ನು ಮಾಡಿದರು. ಏವಂಚ ಆವಾಪ ಉದ್ವಾಪಗಳನ್ನು ಮಾಡಲಿಕ್ಕೆ ವೇದಗಳು ಅನಂತಗಳಾಗಿರುವ ಕಾರಣ ಕರ್ಮಗಳ

ಜ್ಞಾನವೇ ಕಾರಣವು, ಎಂದು ಕೆಲವರು ಅನ್ನುತ್ತಾರೆ) (೩) ಮೂಲವೇದದಿಂದ ಉಪವೇದಗಳನ್ನು ಅವುಗಳಿಂದ ಅವಾಂತರವೇದಗಳನ್ನುತ್ಧಾರಮಾಡಿ ಪ್ರಬಂಧ ನಿರ್ಮಾಣಮಾಡಿದ್ದೆಂಬುವುದರಲ್ಲಿ ಏನು ಪ್ರಮಾಣವೆಂದರೆ—) ವೇದವ್ಯಾಸ ದೇವರು ಮೂಲವೇದದಿಂದ ಉದ್ಧೃತವಾದ ಉಪವೇದ ರೂಪವಾದ ಋಗ್ರಾಶಿಯಿಂದ ಕೆಲವು ಋಕ್ಕುಗಳನ್ನುದ್ಧರಿಸಿ ಋಗ್ವೇದವೆಂಬ ಅವಾಂತರವೇದವನ್ನು ಮೂಲವೇದದಿಂದ ಉದ್ಧೃತವಾದ ನಿಗದದಿಂದ ಯಜುಸ್ಸುಗಳನ್ನುದ್ಧರಿಸಿ ಯಜುರ್ವೇದವನ್ನೂ ಹಾಗೆಯೇ ಸಾಮದಿಂದ ಸಾಮುಗಳನ್ನುದರಿಸಿ ಸಾಮವೇದವನ್ನು (ಅಥರ್ವದಿಂದ ಅಥರ್ವಣವೇದವನ್ನು)ಮಾಡಿದರು. ಮೂಲ ವೇದದಿಂದ ಉಪವೇದಗಳೂ, ಅವುಗಳಿಂದ ಅವಾಂತರವೇದಗಳೂ ಉದ್ಧೃತಗಳಾಗಿವೆ, ಎಂದು ಪುರಾಣ ವಚನದಿಂದ ತಿಳಿಯುತ್ತದೆ. ಈ ಋಕ್ಕುಗಳು ಶಿಷ್ಯ ಪ್ರಶಿಷ್ಯಾದಿಗಳಿಂದ ಉಪಶಾಖಾರೂಪತ್ವವನ್ನು ಹೊಂದಿದವು, ಶಾಖೆಗಳಾದವು. (ಅಂದರೆ ಉಪವೇದಾದಿಗಳು ಹೇಗೆ ಕೃತ್ರಿಮಗಳೋ ಹೀಗೆಯೇ ಶಾಖಾ ಪ್ರಭೇದಗಳೂ ಕೃತ್ರಿಮಗಳು) (೪) (ಹೀಗೆ ಆವಾಪ ಉದ್ಧಾರಗಳನ್ನು ಪಪಾದಿಸಿ ಅವುಗಳಲ್ಲಿ ಲಿಂಗವನ್ನು ತೋರಿಸುತ್ತಾರೆ.)(1)**ಮಾನಸ್ತೇನೇಭ್ಯೋ ಯೇ ಅಭಿದ್ರುಹಸ್ಪದೇ ನಿರಾಮಿಣೋ ರಿಪವೋಽನ್ನೇಷು ಜಾಗೃಧುಃ** (ಋ.೨.೬.೩೨ (2) **ಆ ದೇವಾನಾನೋಹತೇವಿವ್ರಯೋ ಹೃದಿ ಬೃಹಸ್ಪತೇ ನ ಪರಃ ಸಾಮ್ನೋ ವಿದುಃ** (ಋ.೨.೬.೩೨) ||ಇದು ವಿದ್ಯಾದೇವಿಯು ವಾಯುವನ್ನು ಪ್ರಾರ್ಥಿಸುವುದು. (1) ಯಾರು ಮುಖ್ಯತಃ ದ್ರೋಹಕ್ಕೆ ಆಸ್ಪದವಾದ ಅಂಧಂತಮಸ್ಸಿನಲ್ಲಿರಲು ಯೋಗ್ಯರೋ, ಸುಖವಿರುದ್ಧರೋ, ವೈರಿಗಳಾಗಿ ಭೋಗಗಳಲ್ಲಿಯೇ ಆಕಾಂಕ್ಷಾವುಳ್ಳವರೋ, ಅಂತಹ ಕಳ್ಳರಿಗೆ ನಮ್ಮನ್ನು ಹೇಳಬೇಡಿರಿ. (2) ಎಲೋ ವಾಯುವೇ ದೇವತೆಗಳಿಗೆ ವಿಶೇಷತಃ ಶ್ರೇಷ್ಠನೂ ನಿಯಾಮಕನೂ ಆದ ಬ್ರಹ್ಮನನ್ನು ಹೃದಯದಲ್ಲಿ ಚೆನ್ನಾಗಿ ಯಾರು ಧರಿಸಿಕೊಳ್ಳುತ್ತಾರೋ, ಅಂತಹರು ಸಾಮನಾಮಕ ಶ್ರೀ ವಿಷ್ಣುವಿನಿಂದ ಇತರವಾದುದನ್ನು ಉತ್ಕೃಷ್ಟವೆಂದು ತಿಳಿಯುವುದಿಲ್ಲ." ಈ ಋಕ್ಕಿನಲ್ಲಿ ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಅಸಂಬದ್ಧ ಅರ್ಥಗಳು ಕಾಣುವುದರಿಂದ ಅರ್ಥತಃ ನ್ಯೂನತೆಯು ತೋರಿಬರುತ್ತದೆ. (ಆದ ಕಾರಣ ಪೂರ್ವಾರ್ಧ ಉತ್ತರಾರ್ಧಗಳ ಮಧ್ಯದಲ್ಲಿ ವಾಕ್ಯಾಂತರವಿದೆ ಎಂದು ತಿಳಿಯುತ್ತದೆ. ಆ ಮಧ್ಯಸ್ಥವಾಕ್ಯವು (1) "**ಯೇಷಾಂ ನೈತನ್ನಾಪರಂ ಕಿಂಚನೈಕಂ ಬ್ರಹ್ಮಣಸ್ಪತೇ ಬ್ರೂಹಿ ತೇಭ್ಯಃ ಕದಾಚಿತ್ ।** (ಋ. ೨. ೬.) (2) **ಅಥೋ ಶಮೋನೋಽಪರತಾ ಮನುಷ್ಯಾ ಯೇ ಧರ್ಮಿಣೋ ಬ್ರೂಹಿ ತೇಭ್ಯಃ ಸದಾ ನಃ॥**" (ಋ ೨. ೬.) ಯಾರ ಮತದಲ್ಲಿ ಪರಬ್ರಹ್ಮನಿಲ್ಲವೋ ಅಥವಾವಾದ ಜಗತ್ತೂ ಇಲ್ಲವೋ, ಬ್ರಹ್ಮನನ್ನು ನಿರ್ಗುಣನನ್ನಾಗಿಯೂ ಅನಿರ್ವಾಚ್ಯನನ್ನಾಗಿಯೂ ಹೇಳುತ್ತಾರೋ, ಅಂತಹಸ್ತೇನರಿಗೆ ನಮ್ಮನ್ನು ಹೇಳಬೇಡಿರಿ, ಎನ್ನುವುದಕ್ಕೆ ಪೂರ್ವಾರ್ಧದಿಂದ ಅನ್ವಯವಿದ್ದ ಪ್ರಯುಕ್ತ ಇದೊಂದು ಋಕ್ಕು. (3) ಮತ್ತೆ ಯಾರು ಶ್ರೀ ವಿಷ್ಣುವಿನಲ್ಲಿಯೇ ಆಸಕ್ತರಾಗಿರುತ್ತಾರೋ ಧರ್ಮಿಷ್ಠರಾದ ಮನುಷ್ಯರೋ, ದೇವತೆಗಳಿಗೂ ನಿಯಾಮಕನಾದ ಪರಬ್ರಹ್ಮನನ್ನು ಹೃದಯದಲ್ಲಿ ಧರಿಸಿರುತ್ತಾರೋ, ಪರಬ್ರಹ್ಮನಿಗಿಂತ ಇತರವಾದುದನ್ನು ಯಾವುದನ್ನು ಶ್ರೇಷ್ಠವೆಂದು ತಿಳಿಯುವುದಿಲ್ಲವೋ, ಅಂತಹವರಿಗಾಗಿ ನಮ್ಮನ್ನು ಹೇಳು. ಎನ್ನುವುದಕ್ಕೆ ಉತ್ತರಾರ್ಧದಿಂದ ಅನ್ವಯವಿದ್ದ ಪ್ರಯುಕ್ತ **ಅಥೋ ಶಮೋನ** ಎನ್ನುವುದರಿಂದ **ಕೂಡಿ ಆ ದೇವಾನಾಂ** ಎನ್ನುವುದು ಒಂದು ಋಕ್ಕು.) (ಹೀಗೆ ಉಭಯಾರ್ಧಮಧ್ಯದಲ್ಲಿರತಕ್ಕ ವಾಕ್ಯವನ್ನು ಯೋಜನೆ ಮಾಡಿ ನ್ಯೂನತೆಯನ್ನು ಪರಿಹರಿಸಿಕೊಳ್ಳಬೇಕು.) ಹೀಗೆಯೇ **ಭದ್ರಂ ನೋ ವಾತಯಮನಃ** ಇತ್ಯಾದಿಗಳಲ್ಲಿಯೂ ಅರ್ಥತಃ ನ್ಯೂನತೆಯು ಕಾಣುವುದರಿಂದ ವಾಕ್ಯಾಂತರದಿಂದ ನ್ಯೂನತೆಯನ್ನು ಪರಿಹರಿಸಿಕೊಂಡು ಅರ್ಥಪೂರ್ತಿಯಾಗುವಂತೆ ಮಾಡಿಕೊಳ್ಳಬೇಕು.) (೫) ಮತ್ತು ಶುನಶ್ಯೇಪನು ೧೦೦ ಋಕ್ಕುಗಳನ್ನು ಕ್ರಮವಾಗಿ ಕಂಡನು ಎಂದು ಬ್ರಾಹ್ಮಣವು.(ಇದು **ವಿಶ್ವಾಮಿತ್ರಃ ಹೋತಾಸೀತ್**ಎಂಬ ಖಂಡದಲ್ಲಿ **ಅಥಹ ಶುನಶ್ಯೇಪಃ ಈಕ್ಷಾಂ ಚಕ್ರೇ** -ಎಂದಾರಂಭಿಸಿ **ನಿದಿತಂಸಹಸ್ರಾತ್**ಎಂಬತನಕ ಬ್ರಾಹ್ಮಣವನ್ನು ಅರ್ಥತಃ(ಸಂಗ್ರಹಿಸಿ ಹೇಳಿದ್ದು)ಆ ಋಕ್ಕುಗಳ ಅವಾಂತರ ವೇದದಲ್ಲಿ ನ್ಯೂನವಾದ ೧೦೦ ಋಕ್ಕು ೨ನೇ ಅಧ್ಯಾಯದಲ್ಲಿ ಕಾಣುತ್ತದೆ. ಹೀಗೆ ಶುನಃಶ್ಯೇಪನಿಂದ ಹೇಳಲ್ಪಟ್ಟ ಋಕ್ಕುಗಳಿಂದ ಇತರಗಳಾದ ಕೆಲವು ಋಕ್ಕುಗಳು ಇತರತ್ರ ಪಠಿತಗಳಾಗುತ್ತವೆ.

ಮತ್ತು ಇದರಿಂದ ಋಕ್ಕುಗಳಿಗೆ ಇಲ್ಲಿಂದ ಉದ್ವಾಪವೂ ಅನ್ಯತ್ರ ಆವಾಪವೆಂದು ತಿಳಿಯುತ್ತವೆ. ಮಧುಛಂದಸರಿಂದ ದೃಷ್ಟಗಳಾದ ಋಕ್ಕುಗಳಲ್ಲಿಯೂ ಅವಾಂತರವೇದದಲ್ಲಿ ಯಾವ ಕ್ರಮವೋ ಆ ಕ್ರಮವನ್ನುಲ್ಲಂಘಿಸಿಯೇ ಮಧುಛಂದಸರು ಕಂಡದ್ದು. ಅಥವಾ ಮೂಲವೇದ ಉಪವೇದಗಳದ್ದು ಯಾವ ಕ್ರಮವೋ, ಆಕ್ರಮವನ್ನುಲ್ಲಂಘಿಸಿಯೇ ಅವಾಂತರ ವೇದದಲ್ಲಿ ಮಾಧುಛಂದಸ ಪ್ರಕರಣದಲ್ಲಿ ಋಕ್ಕುಗಳು ಕಾಣುತ್ತವೆ. ಆದಕಾರಣ ಮೂಲವೇದ ಉಪವೇದ ಅವಾಂತರ ವೇದಗಳಲ್ಲಿ ಒಂದೇ ಕ್ರಮವು ಆಗಲಾರದು (೬) (ವೇದಗಳಿಗೆ ಆನಂತ್ಯವನ್ನು ತಿಳಿಸುವುವಕ್ಕಾಗಿ ಆವಾಪ ಉದ್ವಾಪಗಳಿಂದ ಸಂಕ್ಷೇಪ ಮಾಡಿದ್ದು ಎಂದದ್ದು ಅಯುಕ್ತವು. **ಅನಂತಾ ವೈವೇದಾಃ** ಇತ್ಯಾದಿ ಪ್ರಮಾಣಗಳಿಂದಲೇ ಆನಂತ್ಯವನ್ನು ತಿಳಿಯಬಹುದು ಎಂದರೆ) ವೇದಗಳು ಅನಂತಗಳಾಗಿರುವುದರಿಂದ (ಅವುಗಳಲ್ಲಿ ಹೇಳಿದಪ್ರಕಾರ ಬ್ರಹ್ಮರುದ್ರಾದಿಗಳಿಗಿಂತ ಇತರರಿಗೆ ಸಂಪೂರ್ಣ ಕರ್ಮಗಳನ್ನು ಮಾಡಲಿಕ್ಕೆ ಶಕ್ತಿಯಿಲ್ಲದಿರುವುದರಿಂದ) ಪ್ರಾಯಶಃ ಅಧಿಕಾರಿಗಳಿಗೆ ಕರ್ಮಗಳನ್ನು ಮಾಡಲಿಕ್ಕೆ ಎಷ್ಟುಶಕ್ತಿಯುದೆಯೋ, ಅವರ ಶಕ್ತಿಯನ್ನು ಅನುಸರಿಸಿ ಶ್ರೀವೇದವ್ಯಾಸರು ಕರ್ಮಗಳ ಜ್ಞಾನಕ್ಕಾಗಿ ಆವಾಪ ಉದ್ಧಾರಗಳಿಂದ ಸಂಕ್ಷೇಪ ಮಾಡಿದರು. ಶಿಷ್ಯರೂ ವೇದವ್ಯಾಸರ ಆಜ್ಞೆಯಿಂದ ಸಂಕ್ಷೇಪ ಮಾಡಿದರು.

ವಿ !! ಹೇಗೆಂದರೆ-**ಮೂಲವೇದಶ್ಚೋಪವೇದ। ತಥಾಽವಾಂತರ ಏವಚ। ಶಾಖೋಪಶಾಖಾ ಭೇದೇನ ವೇದೋಽನೇಕವಿಧೋ ಮತಃ ।**

(1) ಋಗಾದಿ ಸಂಜ್ಞೆಯಿಲ್ಲದೆ ಯಾವಾಗ ಸಮಸ್ತವೇದಗಳೂ ಒಂದೆಯಾಗಿದ್ದವೋ, ಆಗ ಕೃತಯುಗದಲ್ಲಿ **ಮೂಲವೇದ** ಎಂದೇನಾಮವು. **ಪಂಚರಾತ್ರವೃಗಾದ್ಯಾಶ್ಚ ಸರ್ವಮೇಕಂ ಪುರಾಽಭವತ್ ಮೂಲವೇದ ಇತಿ ಹ್ಯಾಖ್ಯಾ ಕಾಲೇ ಕೃತಯುಗೇ ತದಾ । ನೈವಕ್ರ್ಸಾಮಾದಿನಾಮಾನಿ ತದಾ ವೇದಸ್ಯ ಚಾಭವನ್ ।** ಎಂದು ಪ್ರಮಾಣವು. ಅಂತೂ ಅವಿಭಕ್ತವಾದುದು ಮೂಲವೇದವು.

(2) ಆ ಮೂಲವೇದವೇ ತ್ರೇತಾಯುಗದಲ್ಲಿ ಋಕ್ ನಿಗದ ಸಾಮ=ಅಥರ್ವ ಎಂದು ಪ್ರವಿಭಕ್ತವಾಗಿ ಉಪವೇದವೆನಿಸುತ್ತದೆ. **ಏಕೋ ವೇದಃ ಕೃತೇ ಹ್ಯಾಸೀತ್ತ್ರೇತಾಯಾಂ ಸ ತ್ರಿಧಾಽಭವತ್** ಎಂದು. (3) ಆ ಉಪವೇದವೇ ದ್ವಾಪರಯುಗದಲ್ಲಿ ಗೌತಮರ ಶಾಪಾದಿಗಳಿಂದ ಉತ್ಸನ್ನ (ನಷ್ಟ) ವಾಯ್ತು. ಆ ಋಕ್ ನಿಗದಾದಿರೂಪದಿಂದ **ಮೊದಲೇ** ವಿಭಕ್ತವಾದ ಉಪವೇದ ದೆಶೆಯಿಂದ ದ್ವಾಪರದಲ್ಲಿ ವೇದವ್ಯಾಸರು ಆ ಉತ್ಸನ್ನವಾದ ವೇದವನ್ನು ಒಂದೊಂದು ಋಗಾದಿಗಳಿಂದ ಒಂದೊಂದು ಋಗಾದಿಗಳನ್ನು ಏಕೈಕದೇಶದಿಂದ ಉದ್ಧರಿಸಿ ಋಗ್ವೆದ ಮೊದಲಾದ ನಾಲ್ಕು ವೇದಗಳನ್ನು ಮಾಡಿದರು. **ಋಚಃ ಸ ಋಚ ಉದ್ಧೃತ್ಯ ಋಗ್ವೇದಂ ಕೃತವಾನ್ಪ್ರಭು ॥ ಯಜೂಂಷಿ ನಿಗದಾಚ್ಚೈವ ತಥಾ ಸಾಮಾನಿ ಸಾಮತ: ॥** ಎಂದು. ಇಲ್ಲಿ ಅಥರ್ವಣವೇದವನ್ನು ನಿಗಮದಲ್ಲಿಯೇ ಸೇರಿಸಿರುವರು.) ಈ ವಿಭಕ್ತವಾದ ಋಗ್ವೇದಾದಿಗಳಿಗೆ ಅವಾಂತರ ವೇದಗಳೆಂದು ಹೆಸರು.

(4)ಪುನಃ ಆ **ನಾಲ್ಕು ವೇದಗಳಲ್ಲಿ** ಋಗ್ವೇದವನ್ನು ೨೪ಪ್ರಕಾರ, ಯಜುರ್ವೇದವನ್ನು ೧೦೧ ಪ್ರಕಾರ, ಸಾಮವೇದವನ್ನು ೧೦೦೦ ಪ್ರಕಾರ, ಅಥರ್ವಣ ವೇದವನ್ನು ೧೨ ಪ್ರಕಾರವಾಗಿಯೂ ಆ ವೇದವ್ಯಾಸರೇ ವಿಭಜಿಸಿದರು. ವಿಭಕ್ತವೇದಗಳಿಗೆ ಶಾಖಾವೇದವೆಂದು ಹೆಸರು

(5)ಚತುರ್ವಿಂಶತ್ಯಾದಿ ಭೇದದಿಂದ ಶ್ರೀವೇದವ್ಯಾಸರಿಂದಲೇ ವಿಭಕ್ತಗಳಾದ ಶಾಖೆಗಳಲ್ಲಿಯೂ ಋಷಿಗಳಿಂದ ಶಿಷ್ಯಪ್ರಶಿಷ್ಯಾದಿಗಳಿಂದ **ಪುನಃಪುನಃ** ವಿಭಕ್ತವಾದುದು **ಅವಾಂತರ ಶಾಖಾವೇದ** ವೆನಿಸುತ್ತದೆ.ಹೀಗೆವೇದವು ಐದು ವಿಧವು.ಇನ್ನೂ ಇತರಗಳೂ ಅವಾಂತರ ಶಾಖಾ ವೇದಗಳಿವೆ **ವ್ಯದಧಾದ್ಯಜ್ಞಸಂತತ್ಯೈ ವೇದಮೇಕಂ ಚತುರ್ವಿಧಂ।ಋಗ್ಯಜುಸ್ಸಾಮಾಥರ್ವಾಶ್ಚವೇದಾಶ್ಚತ್ವಾರ ಉದ್ಧೃತಾಃ।ತ ಏವಮೃಷಯೋ ವೇದಂ ಸ್ವಂಸ್ವಂ ವ್ಯಸ್ಯನ್ನನೇಕಧಾ।ಶಿಷ್ಯೈಃಪ್ರಶಿಷ್ಯೈಃತಚ್ಛಿಷ್ಯೈಃವೇದಾಸ್ತೇ ಶಾಖಿನೋಽಭವನ್॥**ಎಂದು ಭಾಗವತವು.) (೩) **(ಮೂಲ ವೇದಾದಿಗಳಲ್ಲಿ** ಇಲ್ಲದೇನೇ ಇರುವ**)** ಅಷ್ಟಕ, ಅಧ್ಯಾಯ, ವರ್ಗ ಮೊದಲಾದ ಪಂಚಿಕಾ, **ಪ್ರ**ಪಾಠಾದಿ ಭೇದವನ್ನು ವೇದಾಧ್ಯಯನವನ್ನೂ ಮಧ್ಯೇ ನಿಲ್ಲಿಸುವುದಕ್ಕಾಗಿ ಮಾಡಿದರು, ಆದ ಕಾರಣ ಕ್ರಮ

ವ್ಯತ್ಯಾಸವು. (ಆದಕಾರಣ ಮೂಲ ವೇದಾದಿಗಳಲ್ಲಿ ಒಂದೇ ಪ್ರಕಾರವಲ್ಲ.) ಸಿತಾಸಿತೇ ಸರಿತೇ ಯತ್ರ ಸಂಗಥೇ ಇದು ಮೊದಲಾದ ಪರಿಶಿಷ್ಟಗಳೂ ಕೂಡ ಅಲ್ಲಿ ಅಲ್ಲಿಯೇ ಅಂತರ್ಹಿತಗಳಾದವುಗಳೇ ಕಾಣುತ್ತವೆ. (೮) (ಈ ಉದ್ಧಾರವು ಹೇಗೆ ತಿಳಿಯುತ್ತದೆ.? ಎಂದರೆ ಜ್ಞಾಪಕವನ್ನು ಲೇಶತಃ ತೋರಿಸುತ್ತಾರೆ-) ಎಲ್ಲಿ ೨ ವಾಕ್ಯಗಳ ಅರ್ಥದಲ್ಲಿ ವಿಶೇಷವು ಇಲ್ಲವೋ ಅಲ್ಲಿ ಯಾವ ಪದದಿಂದ ಆ ಪುನರುಕ್ತಿಯು ಪರಿಹೃತವಾಗುತ್ತದೋ ಆ ಪದವು ಅಂತರಿತವೆಂದು ತಿಳಿಯಬೇಕು. ಎಲ್ಲಿ ಪದಾಂತರವಿಲ್ಲದಿದ್ದರೂ ಅಲ್ಪವಾದ ವಿಶೇಷ ಶ್ರವಣದಿಂದಲೇ ಪುನರುಕ್ತಿ ಪರಿಹಾರವಾಗುತ್ತದೋ ಅಲ್ಲಿ ಪದವು ಅಂತರಿತವಾಗಿದೆ ಎಂದು ಕಲ್ಪಿಸಕೂಡದು. (ಹೀಗೆಯೇ ಆವಾಪ ಉದ್ವಾಪ ಗಳಲ್ಲಿ ಇತರ ಲಿಂಗಗಳನ್ನು ಹುಡುಕಬೇಕು) ॥ ೧ ॥

ಭಾ ॥ ವಿಷ್ಣುಂ ಸುರೂಪಕರ್ತಾರಮಭಿಪ್ರೇತಾರ್ಥ ಸಿದ್ಧಯೇ॥ ತ್ರಾಣಾಯ ವಾ ಕಾಮಧೇನು ಮಿವ ದೋಹಾಯ ತತ್ಸ್ಥಿತೇಃ । ದಿನೇ ದಿನೇ ಸ್ವಾಹ್ವಯಾಮೋ ॥ ೧ ॥

ಅ ॥ ನಾವು ಪ್ರತಿ ದಿವಸದಲ್ಲಿಯೂ, ಗೋವನ್ನು ಕರೆಯುವುದಕ್ಕಾಗಿ ಕಾಮಧೇನುವನ್ನೆಂಬಂತೆ ಶ್ರೀಭಗವಂತನನ್ನು ಆಶ್ರಯಿಸಿರುವ ಯಜಮಾನನ ಇಷ್ಟಾರ್ಥ ಸಿದ್ಧಿಗಾಗಿ, ಅಥವಾ ರಕ್ಷಣೆಗಾಗಿ ಸಾಧುರೂಪ ಗಳನ್ನುಂಟುಮಾಡುವ ಶ್ರೀವಿಷ್ಣುವನ್ನು ಇಂದ್ರನನ್ನು ಕರೆಯುತ್ತೇವೆ॥ (ಇದು **ಸುರೂಪಕೃತ್ನುಂ** ಎಂಬುವುದರ ಭಾಷ್ಯವು ॥ ೧ ॥

ಋ:॥ (೩೨) ಉಪ ನಃ ಸವನಾಽಽಗಹಿ ಸೋಮಸ್ಯ ಸೋಮಪಾಃ ಪಿಬ ।
ಗೋದಾ ಇದ್ರೇವತೋ ಮದಃ ॥

ಅ ॥ ಸೋಮಪಾಃ = ಇಂದ್ರನೇ,(ಯಾವ ನೀನು) ರೇವತಃ ಇತ್=(ಅಧ್ಯಾತ್ಮ) ಜ್ಞಾನಾಖ್ಯ ದ್ರವ್ಯದಿಂದ ಕೂಡಿರುವ, (ಬಾಹ್ಯಾರ್ಥ) ನಿನ್ನ ಪೂಜೆಗಾಗಿ ಹಿರಣ್ಯಾದಿಗಳುಳ್ಳ ಯಜಮಾನನಿಗೇನೇ ಗೋದಾಃ = ಜ್ಞಾನ ದಾಯಕನೂ, ಮದಃ = (ಮದೀಹರ್ಷೇ) ಸುಖಕಾರಿಯೂ, (ಆಗುತ್ತಿಯೋ,) (ಅಂತಹ ನೀನು) ನಃ = ನಮ್ಮ ಸೋಮಸ್ಯ = ಸೋಮದ, ಸವನಾ = ಯಜ್ಞಗಳನ್ನು ಉಪ ಆಯಾಹಿ = ಬಾ. ಪಿಬ = ಬಂದು ಸೋಮವನ್ನು ಕುಡಿ ॥ ೨ ॥

ಭಾ ॥ ಜ್ಞಾನದೋಽಸ್ಯೈವ ಚಾಧಿಕಃ । ಜ್ಞಾನಾಖ್ಯರಯಿಯುಕ್ತಸ್ಯ ಹಿರಣ್ಯಾದಿಮತೋಽಪಿ ವಾ । ಸುಖಕಾರೀ ಭವಾನ್ ॥ ೨ ॥

ಅ ॥ ಎಲೋ ಇಂದ್ರನೇ ಯಾವ ನೀನು ಜ್ಞಾನಾಖ್ಯದ್ರವ್ಯದಿಂದ ಕೂಡಿರುವ, ಅಥವಾ ಬಾಹ್ಯದಲ್ಲಿ ನಿನ್ನ ಪೂಜೆಗಾಗಿ ಹಿರಣ್ಯಾದಿಗಳುಳ್ಳ ಈ ಯಜಮಾನನಿಗೇನೇ ಅಧಿಕವಾಗಿ ಜ್ಞಾನದಾಯಕನೂ ಸುಖಕಾರಿಯೂ ಆಗುತ್ತಿಯೋ, ಅಂತಹ ನೀನು ಬಂದು ಸೋಮವನ್ನು ಕುಡಿ. ॥ ೨ ॥

ಋ ॥ (೩೩)ಅಥಾ ತೇ ಅಂತಮಾನಾಂ ವಿದ್ಯಾಮ ಸುಮತೀನಾಂ। ಮಾನೋ
ಅತಿ ಖ್ಯ ಆ ಗಹಿ ॥ ೩ ॥

ಅ ॥ ಅಥ = ನೀನು ಜ್ಞಾನಾದಿಗಳುಳ್ಳವರಿಗೆ ಇಷ್ಟಾರ್ಥವನ್ನು ಕೊಡುವ ಸ್ವಭಾವ ವುಳ್ಳವನಾದುದರಿಂದ (ನಾವು) ಅಂತಮಾನಾಂ=ಉತ್ತಮೋತ್ತಮಗಳನ್ನು ಗಣನೆ ಮಾಡುವಾಗ ಅಂತ್ಯದಲ್ಲಿ ಪ್ರಮಿತಗಳಾದ, (ಅಂದರೆ

ಉತ್ತಮೋತ್ತಮಗಳಾದ) ತೇ=ನಿನ್ನ ವಿಷಯಕಗಳಾದ, ಯಾವ ಸುಮತಿಗಳೋ, ಅಂತಹ ಸುಮತೀನಾಂ=ಒಳ್ಳೇ ಬುದ್ಧಿಗಳನ್ನು, ವಿದ್ಯಾಮ=ಹೊಂದುವೆವು. (ನೀನು) ನಮ್ಮನ್ನು, ಅತಿ=ಅತಿಕ್ರಮಿಸಿ, ಅನ್ಯಾನ್=ಇತರರನ್ನು, ಮಾಖ್ಯಃ=ಯಾವಾಗಲೂ ನೋಡಲೇ ಬೇಡ. (ಅಂದರೆ ದಯಾದ್ರ್ರದೃಷ್ಟಿಯಿಂದ ನಮ್ಮನ್ನೇ ನೋಡು.) ಆಗಹಿ=ಬಾ. || ೩ ||

ಭಾ || ತಸ್ಮಾಲ್ಲಭೇಮ ಸುಮತೀಸ್ತವ | ಅಂತೇ ಮಿತಾಸ್ತ್ವದ್ವಿಷಯಾ ಮತಯೋ ಹ್ಯುತ್ತ ಮೋತ್ತಮಾಃ || ಅಸ್ಮಾನತೀತ್ಯ ಮಾ ಪಶ್ಯ ಕರುಣಾದ್ರ್ರದೃಶಾ ಸದಾ || ೩ ||

ಅ || ನೀನು ಜ್ಞಾನಾದಿ ಗುಣಗಳುಳ್ಳವರಿಗೆ ಇಷ್ಟಾರ್ಥವನ್ನು ಕೊಡತಕ್ಕ ಸ್ವಭಾವವುಳ್ಳವನಾದುದರಿಂದ ಉತ್ತಮೋತ್ತಮ ಗಣನೆಯ ಅಂತ್ಯದಲ್ಲಿ ಪ್ರಮಿತಗಳಾದ (ಅಂದರೆ ಉತ್ತಮೋತ್ತಮಗಳಾದ) ನಿನ್ನ ವಿಷಯಕಗಳಾದವುಗಳು ಒಳ್ಳೇ ಬುದ್ಧಿಗಳು. ಅಂತಹ ನಿನ್ನ ಬುದ್ಧಿಗಳನ್ನು ಹೊಂದುವೆವು. ನೀನು ನಮ್ಮನ್ನು ಅತಿಕ್ರಮಿಸಿ ಯಾವಾಗಲೂ ಕರುಣಾದ್ರ್ರದೃಷ್ಟಿಯಿಂದ ಇತರರನ್ನು ನೋಡಬೇಡ. (ನಮ್ಮನ್ನೇ ನೋಡು) || ೩ ||

ಋ || (೩೪) ಪರೇಹಿ ವಿಗ್ರಮಸ್ತೃತಮಿಂದ್ರಂ ಪೃಚ್ಛಾ ವಿಪಶ್ಚಿತಂ | ಯಸ್ತೇ ಸಖಿಭ್ಯ ಆವರಂ || ೪ ||

ಅ || (ಋಷಿಯು ತನ್ನ ಅಂತಃಕರಣವನ್ನು ಕುರಿತು ಹೇಳುತ್ತಾನೆ.) (ಎಲೋ ಮನಸ್ಸೇ, ಯದ್ಯಪಿ ನೀನು ಇಂದ್ರನ ದೆಶೆಯಿಂದ) ಪರಾ=ದೂರದಲ್ಲಿರುತ್ತಿ. (ಅಂದರೆ ಸಂಪೂರ್ಣವಾಗಿ ಇಂದ್ರನನ್ನು ಗ್ರಹಣ ಮಾಡಲಿಕ್ಕೆ ಅಸಮರ್ಥವಾದುದು.) ಅಥವಾ ಶ್ರೀಹರಿಯು ಸ್ವತಃ ದೂರದಲ್ಲಿರುತ್ತಾನೆ. (ನಿನಗೆ ವಿಷಯನಾಗುವುದಿಲ್ಲ.) (ಆದಾಗ್ಯೂ ನೀನು) ಯಃ=ಯಾವ ಇಂದ್ರನು, ತೇ=ನಿನ್ನ ಸಖಿಭ್ಯಃ-ಚಕ್ಷುರಾದಿಗಳಿಗೆ ಪ್ರೇರಕರಾಗಿ ಉಪಕಾರಿಗಳಾದ ದೇವತೆಗಳ ದೆಶೆಯಿಂದ ಆವರಂ=ನಿತ್ಯದಲ್ಲಿಯೂ ಉತ್ತಮನೋ, (ಅಂತಹ) ವಿಗ್ರಂ=ಅಗ್ರಾಹ್ಯನೂ, ಅಸ್ತೃತಂ=ಅನಷ್ಟನೂ, ವಿಪಶ್ಚಿತಂ=ವ್ಯಾಪ್ತವಾದ ಮನಸ್ಸುಳ್ಳವನೂ, ಆದ, ಇಂದ್ರಂ=ಪರಮೇಶ್ವರನನ್ನು, ಇಹಿ=ಹೋಗು. ಅಥವಾ ಶರಣು ಹೊಂದು. ಅಥವಾ ತಿಳಿದುಕೋ. ಪೃಚ್ಛ=ಅದಕ್ಕಾಗಿ ಗುರುಗಳನ್ನು ಕೇಳು || ೪ ||

ಭಾ || ಮನ್ಮನೋ ವಾಽಥ ಶಕ್ರೋ ವಾ ದೂರೇಽಪಿ ಪರಮೇಶ್ವರಂ | ಗಚ್ಛಾಗ್ರಾಹ್ಯಮನಷ್ಟಂ ಚ ವ್ಯಾಪ್ತ ಚಿತ್ತಂ ಯ ಏವೇಚ | ಸಖಿಭ್ಯ ಉತ್ತಮೋ ನಿತ್ಯಂ || ೪ ||

ಅ || ಎಲೋ ನನ್ನ ಮನಸ್ಸೇ, ನೀನು ಪರಮೇಶ್ವರನಿಗಿಂತ ದೂರದಲ್ಲಿರುತ್ತಿ. (ಸಂಪೂರ್ಣ ಶ್ರೀಹರಿಯನ್ನು ಗ್ರಹಿಸಲಿಕ್ಕೆ ಅಸಮರ್ಥವು) ಅಥವಾ ಶ್ರೀಹರಿಯು ನಿನಗಿಂತ ದೂರದಲ್ಲಿರುತ್ತಾನೆ. (ನಿನಗೆ ವಿಷಯನಾಗುವುದಿಲ್ಲ)(ಅಪಿ=)ಆದಾಗ್ಯೂ ಯಾವ ಇಂದ್ರನು ನಿನಗೆ ಸಖಿಗಳಾದಚಕ್ಷುರಾದಿಗಳಿಗೆ ಪ್ರೇರಕರಾಗಿ ಉಪಕಾರಿಗಳಾದ ದೇವತೆಗಳದ್ದೆಶೆಯಿಂದ ಸರ್ವದಾ ಉತ್ತಮೋತ್ತಮನೋ, (ನೀನು) ಅಂತಹ ಸಾಕಲ್ಯೇನ ಅಗ್ರಾಹ್ಯನೂ ಸರ್ವಥಾ ನಾಶವಿಲ್ಲದವನೂ, ವ್ಯಾಪ್ತವಾದ ಮನಸ್ಸುಳ್ಳವನೂ ಆದ ಶ್ರೀ ಪರಮೇಶ್ವರನನ್ನು ಶರಣು ಹೊಂದು. || ೪ ||

ಋ || (೩೫) ಉತ ಬ್ರುವಂತು ನೋ ನಿದೋ ನಿರನ್ಯತಶ್ಚಿದಾರತ | ದಧಾನಾ ಇಂದ್ರ ಇದ್ದುವಃ || ೫ || ೭ ||

ಅ ॥ ನಿದಃ=ಜಗತ್ಸೃಷ್ಟ್ಯಾದಿ ಕಾರ್ಯ ಮಾಡಲಿಕ್ಕೆ ಸಹಾಯಕರಾಗಿ ಇಂದ್ರನೆಸಿಸಿಕೊಂಡ ಶ್ರೀವಿಷ್ಣುವಿನ ಸಮೀಪದಲ್ಲಿಯೇ ಇರುವ ಬ್ರಹ್ಮಾದಿ ದೇವತೆಗಳೋ, ಉತ=ಅವರೂ ಕೂಡ, ನಃ=ನಮ್ಮನ್ನು ಕುರಿತು, ಬ್ರುವಂತು=ಪರಮೇಶ್ವರನ ಸ್ವರೂಪವನ್ನು ಯಥಾ ಯೋಗ್ಯವಾಗಿ ವ್ಯಾಖ್ಯಾನ ಮಾಡಲಿ. ಚಿತ್=ಯಾರು,ಅನ್ಯತಃ=ಸ್ಥಾನಾಂತರದಿಂದ, ಸಂಸಾರಕ್ಕೆ ಕಾರಣವಾದ ಅಜ್ಞಾನದಿಂದ,ನಿಃ=ಹೊರಟು, ಆರತ=ಶ್ರೀಪರಮಾತ್ಮನನ್ನು ಹೊಂದಿರುತ್ತಾರೋ (ಅವರೂ ಕೂಡ ನಮ್ಮನ್ನು ಕುರಿತು ಶ್ರೀ ಪರಮಾತ್ಮನ ಸ್ವರೂಪವನ್ನು ಉಪದೇಶಿಸಲಿ. (ಯಾರು) ಇಂದ್ರೇ ಇತ್=ಶ್ರೀ ಪರಮಾತ್ಮನಲ್ಲಿಯೇ, ದುವಃ=ಆತ್ಮನಿಗೆ ವಿಷಯಗಳನ್ನು ಪೂರ್ಣೀಕರಿಸುವ ಇಂದ್ರಿಯಗಳನ್ನು, ದಧಾನಾಃ=ಧರಿಸುವವರಾಗಿರುತ್ತಾರೋ, (ಅಂದರೆ ಶ್ರೀ ಪರಮಾತ್ಮನ ಪ್ರಾಪ್ತಿಗಾಗಿ ಶ್ರೀಹರಿಯನ್ನುಪಾಸನೆ ಮಾಡುತ್ತಿರುತ್ತಾರೋ) (ಅವರೂ ಕೂಡ ಪರಮಾತ್ಮನನ್ನು ನಮಗಾಗಿ ಉಪದೇಶಿಸುತ್ತಾರೆಯೇ ಸರಿ.) ॥ ೫ ॥ ೨ ॥

ಭಾ ॥ ನಿದಸ್ತಸ್ಯ ಸಮೀಪಗಾಃ । ತೇಽಪಿ ಬ್ರುವಂತು ನೋ ದೇವಂ ಪ್ರಾಪುರ್ಯೇ ಚಾನ್ಯತೋಽಪಿ ತಂ॥ ನಿರ್ಗತ್ಯಾಜ್ಞಾನತಸ್ತಸ್ಮಾದ್ದಧಾನಾ ಈಶ ಏವ ಚ॥ ದುವಃ ಪ್ರಾಣಾನ್ ಬ್ರುವಂತ್ವೇವ ತೇಽಪಿ ನಃ ಪರಮೇಶ್ವರಂ ॥ ೫ ॥

ಆ ॥ ನಿದಃ= ಯಾರು ಶ್ರೀಹರಿಯ ಸಮೀಪವಲ್ಲಿಯೇ ಇರುವವರೋ, ಅಂದರೆ ಸೃಷ್ಟಿ ಸ್ಥಿತಿ ಸಂಹಾರಾದಿ ಕಾರ್ಯಗಳನ್ನು ಮಾಡುವಾಗ ಸಹಾಯಕರಾಗಿ ಯಾವ ಬ್ರಹ್ಮಾದಿಗಳು ಸಮೀಪದಲ್ಲಿರುತ್ತಾರೋ, ಅವರೂ ಕೂಡ ನಮ್ಮನ್ನು ಕುರಿತು ಭಗವತ್ಸ್ವರೂಪವನ್ನು ಯಥಾ ಯೋಗ್ಯವಾಗಿ ಉಪದೇಶಿಸಲಿ. ಯಾರು ಸಂಸಾರಕ್ಕೆ ಕಾರಣವಾದ ಅಜ್ಞಾನದಿಂದ ಹೊರಟೇ ಶ್ರೀಹರಿಯನ್ನು ಹೊಂದಿರುತ್ತಾರೋ, ಅವರೂ ಕೂಡ (ಸಮೀಪದಲ್ಲಿರತಕ್ಕ ಬ್ರಹ್ಮಾದಿಗಳಿಂದ ಅತಿರಿಕ್ತರಾದ ಅಪರೋಕ್ಷ ಜ್ಞಾನಿಗಳೂ ಕೂಡ) ಭಗವತ್ಸ್ವರೂಪವನ್ನು ಯಥಾಯೋಗ್ಯವಾಗಿ ಉಪದೇಶಿಸಲಿ. ಯಾವ ಪರೋಕ್ಷಜ್ಞಾನಿಗಳು ಪರಮೈಶ್ವರ್ಯ ಸಂಪನ್ನನಾದ ಶ್ರೀಹರಿಯಲ್ಲಿಯೇ, ತನಗೆ ರೂಪಾದಿ ವಿಷಯಗಳನ್ನುಹೊಂದಿಸಿಕೊಡತಕ್ಕ ಇಂದ್ರಿಯಗಳನ್ನು ಧರಿಸುವವರಾಗಿರುತ್ತಾರೋ (ಶ್ರೀಪರಮಾತ್ಮನ ಪ್ರಾಪ್ತಿಗಾಗಿ ಶ್ರೀಹರಿಯನ್ನು ವಾಸನೆ ಮಾಡುತ್ತಾರೊ.) ಅವರೂ ಕೂಡ ನಮಗಾಗಿ ಶ್ರೀಪರಮಾತ್ಮನ ಸ್ವರೂಪವನ್ನು ಯಥಾಯೋಗ್ಯವಾಗಿ ವ್ಯಾಖ್ಯಾನ ಮಾಡಲಿ. ॥ ೫ ॥ ೨ ॥

ಋ ॥ (೩೬)ಉತ ನಃ ಸುಭಗಾಁ ಅರಿರ್ವೋಚೇಯುರ್ದಸ್ಮ ಕೃಷ್ಟಯಃ । ಸ್ಯಾಮೇದಿಂದ್ರಸ್ಯ ಶರ್ಮಣಿ ॥ ೬ ॥

ಅ ॥ ದಸ್ಮ=(ದಂಸು ವಿಭೇದನೇ) ಶತ್ರು ನಾಶಕನೇ, ಅರಿರುತ=ಶತ್ರುಗಳು ಮಿತ್ರರು ಉದಾಸೀನರೂ ಕೂಡ, ಕೃಷ್ಟಯಃ=ಪ್ರಜೆಗಳಾದ, ನಃ=ನಮ್ಮನ್ನು, ಸುಭಗಾನ್=ಒಳ್ಳೇ ಸಂಪತ್ತುಳ್ಳವರನ್ನಾಗಿ, ವೋಚೇಯುಃ=(ವಚ ಪರಿಭಾಷನೇ) ಯಾವಾಗಲೂ ಹೇಳುವರು. (ನಾವು) ಇಂದ್ರಸ್ಯ=ಪರಮೈಶ್ವರ್ಯ ಸಂಪನ್ನನಾದ ನಿನ್ನ, ಅನುಗ್ರಹವಾಗೋಣ) ಶರ್ಮಣಿ= ಸುಖ ವಿಷಯದಲ್ಲಿ, ಸ್ಯಾಮಇತ್=ಆಗುವೆವು. (ನಿನ್ನ ಅನುಗ್ರಹವಾದಾಗ ಸುಖಿಗಳು ಆಗಿಯೇ ಆಗುವೆವು.) ॥ ೬ ॥

ಭಾ ॥ ಅರಯೋಽಪಿ ಪ್ರಜಾ ಅಸ್ಮಾನ್ ವೋಚೇಯುಃ ಸುಭಗಾನ್ ಸದಾ । ಶತ್ರುಭೇದಿನ್ ತವೇಂದ್ರಸ್ಯ ಸ್ಯಾಮ್ಯೈವಾನುಗ್ರಹೇ ಸುಖೇ ॥ ೬ ॥

ಅ ॥ ಶತ್ರು ಸಂಹಾರಕನೇ ಶತ್ರುಗಳೂ ಕೂಡ ಪ್ರಜೆಗಳಾದ ನಮ್ಮನ್ನು ಯಾವಾಗಲೂ ಒಳ್ಳೇ ಐಶ್ವರ್ಯ

ವುಳ್ಳವರನ್ನಾಗಿ ಹೇಳುವರು. (ಮತ್ತು ನಾವು) ಇಂದ್ರನಾದ ನಿನ್ನ ಅನುಗ್ರಹವಾದಾಗ ಸುಖಿಗಳಾಗಿ ಆಗಿಯೇ ಆಗುವೆವು. ॥ ೬ ॥

ಋ ॥ (೩೭)ಏಮಾಶುಮಾಶವೇ ಭರ ಯಜ್ಞಶ್ರಿಯಂ ನೃಮಾದನಂ ।
ಪತಯನ್ಮಂದಯತ್ಸಖಂ ॥ ೭ ॥

ಅ ॥ ಆಶವೇ = ಶೀಘ್ರನಾಗಿ ಮಾಡತಕ್ಕ ಸಾಮರ್ಥ್ಯವುಳ್ಳವನೇ, ಆಶುಂ = ದ್ರವದ್ರವ್ಯವಾಗಿರುವುದರಿಂದ ವೇಗವುಳ್ಳ, ಯಜ್ಞಶ್ರಿಯಂ = ಯಾಗಕ್ಕೆ ಭೂಷಣವಾದ, ನೃಮಾದನಂ = ಪುರುಷರಿಗೆ ಮದವನ್ನುಂಟು ಮಾಡುವ (ಅಂದರೆ ಪಾಪ ಮಾಡಿದ ಪುರುಷರಿಗೆ ಹರ್ಷವನ್ನುಂಟು ಮಾಡುವ) ಪತಯತ್ = ಪಾನ ಮಾಡುವವರಿಗೆ ಮದವನ್ನುಂಟು ಮಾಡಿ ಉತ್ಪತನಾದಿ ವ್ಯಾಪಾರಗಳಿಗೆ ಕಾರಣವಾದ, ಮಂದಯತ್ಸಖಂ = ಯಾರು ಸೋಮಪಾನ ಮಾಡುತ್ತಾನೋ, ಅವನ ಸಖಿಗಳಿಗೆ ಮುಂದರಾಗಲಿಕ್ಕೆ ಕಾರಣವಾದ, (ಅಂದರೆ–ಸೋಮವನ್ನು ಪಾನ ಮಾಡುವವರಿಗೆ ಧಾವನಾದಿಗಳಲ್ಲಿ ಬಲವುಂಟಾಗುವುದರಿಂದ, ಪಾನ ಮಾಡದಿರುವ ಸಖಿಗಳು ಪಾನ ಮಾಡದಿರುವವನ ಮುಂದೆ ಹೋಗುವುದರಿಂದ ಅವರಿಗೆ ಮುಂದತ್ವವನ್ನುಂಟುಮಾಡುತ್ತದೆ. ಈಂ=ನಿನ್ನ ಅಧೀನವೇ ಆದ,ಸೋಮವನ್ನು (ತನ್ನ ಉದರದಲ್ಲಿ) ಆ ಭರ=ಧರಿಸು. (ಅಧ್ಯಾತ್ಮದಲ್ಲಿ) ಇಂತಹ ಮನಸ್ಸನ್ನು ಸಂತೋಷದಿಂದ ಹೃದಯದಲ್ಲಿ ಇದು ಸಾಧುವೆಂದು ಧರಿಸು. (ಮನಸ್ಸು ಚಂಚಲವಾಗಿರುವುದರಿಂದ ಆಶುತ್ವವು. (ಶೀಘ್ರತನವು.) (ಸೋಮರಸ ಪಾನದಿಂದುಂಟಾದ ಬಲಾತಿಶಯದಿಂದಲಾಗಲೀ ಮನಸ್ಸು ಚಂಚಲವಾಗಿರುವುದರಿಂದ ಕೇವಲ ಈಶ್ವರನಲ್ಲಿಲ್ಲದಿರುವ ಪ್ರಯುಕ್ತ ಮನಸ್ಸಿನಿಂದ ಹುಟ್ಟತಕ್ಕ ಅಹಂಕಾರಾದ್ಯುದ್ರೇಕದಿಂದಲಾಗಲೀ ಪುರುಷರಿಗೆ ಮದಾದಿಗಳು ಹುಟ್ಟುತ್ತವೆ.) ॥ ೭ ॥

ಭಾ ॥(೧)ಆಶುವೀರ್ಯಂ ತವೈವಾಶುಂ ಸೋಮಂ ಕ್ಷಿಪ್ರಂ ಮನೋsಪಿ ವಾ। ಆಠಭಸ್ವೋದರೇ ತುಷ್ಟ್ಯಾ ಹೃದಿ ವಾ ಯಜ್ಞಭೂಷಣಂ । ಈಮೇವ ಪುಂಮದಕರಂ ಮದಾದುತ್ಪತನಾದಿಕೇ । ಹೇತುಂ ಮುಂದತ್ವಹೇತುಂ ಚ ತತ್ಸಖೀನಾಂ ಪುರೋಗತೇಃ ॥ ೭ ॥

ಅ ॥ ಶೀಘ್ರವಾಗಿಮಾಡತಕ್ಕ ಸಾಮರ್ಥ್ಯವುಳ್ಳವನೇ, ದ್ರವದ್ರವ್ಯವಾಗಿರುವುದರಿಂದ ವೇಗವುಳ್ಳ,ಯಜ್ಞಕ್ಕೆ ಅಲಂಕಾರಭೂತವಾದ ಪಾನ ಮಾಡಿದ ಪುರುಷರಿಗೆ ಹರ್ಷವನ್ನುಂಟುಮಾಡುವ ಮದವನ್ನುಂಟುಮಾಡಿ ಉತ್ಪತನ ಮೊದಲಾದ ವ್ಯಾಪಾರಗಳಿಗೆ ಕಾರಣಭೂತವಾದ, ಧಾವನಾದಿಗಳಲ್ಲಿ ಪಾನ ಮಾಡಿದವರಿಗೆ ಬಲವುಂಟಾಗುವುದರಿಂದ ಪಾನಮಾಡದಿರುವವರಿಗಿಂತ ಮುಂದೆ ಹೋಗುವುದರಿಂದ ಸೋಮಪಾನ ಮಾಡಿದವರ ಸಖಿಗಳು ಸೋಮಪಾನಮಾಡದಿರುವುದರಿಂದ ಅವರ ಮುಂದತ್ವಕ್ಕೆ ಕಾರಣವಾದ ನಿನ್ನ ಅಧೀನವೇ ಆದ ಸೋಮವನ್ನು ತನ್ನ ಉದರದಲ್ಲಿ ಧರಿಸು. (ಅಧ್ಯಾತ್ಮದಲ್ಲಿ ಆದರೂ ಇಂತಹ ಮನಸ್ಸನ್ನು ಸಂತೋಷದಿಂದ ಹೃದಯದಲ್ಲಿ ಇದು ಸಾಧುವು ಎಂತ ಧರಿಸು, ಹೀಗೆ ವ್ಯವಸ್ಥಿತ ವಿಕಲ್ಪವು ॥ ೭ ॥

ಋ ॥(೩೮)ಅಸ್ಯ ಪೀತ್ವಾ ಶತಕ್ರತೋ ಘನೋ ವೃತ್ರಾಣಾಮಭವಃ।
ಪ್ರಾವೋ ವಾಜೇಷು ವಾಜಿನಂ ॥ ೮ ॥

ಅ ॥ ಶತಕ್ರತೋ=ಎಲೋ ಅಪರಿಮಿತ ಜ್ಞಾನವುಳ್ಳ ಶ್ರೀ ವಿಷ್ಣುವೇ, ಅಥವಾ ೧೦೦ ಆವರ್ತಿ ಅಶ್ವಮೇಧಯಜ್ಞಮಾಡಿದ ಪುರಂದರನೇ, ಅಸ್ಯಪೀತ್ವಾ=ನಿನ್ನ ಅಧೀನವೇ ಆದ ಈ ಸೋಮವನ್ನು ಪಾನಮಾಡಿ,

ವೃತ್ರಾಣಾಂ=('ಯದಿಮಾನ್ ಲೋಕಾನ್ ಆವೃಣೋತ್ ತದ್ವೃತ್ರಸ್ಯ ವೃತ್ರತ್ವಂ'ಎಂಬ ಶ್ರುತಿಯಿಂದ ಸಮಸ್ತ ಜೀವರಿಗೆ ಆವರಕ ವಾದುದರಿಂದ, ವೃತ್ರಪದ ವಾಚ್ಯಗಳಾದ ಅಜ್ಞಾನ ಗಳಿಗೆ ಘನಃ=ಅಭೇದ್ಯನು, ಅಭವಃ=ಆಗಿರುವಿ. (ಅಂದರೆ.ಅಜ್ಞಾನಗಳಿಂದ ಅನಾವೃತನಾಗಿರುತ್ತಿ.) (ವಿಷ್ಣು ಪಕ್ಷದಲ್ಲಿ, ಯಾವ ಯಜ್ಞದಲ್ಲಿ ಭಗವಂತನಿಂದ ಸೋಮವು ಪಾನಮಾಡಲ್ಪಟ್ಟದೋ, ಆ ಯಜ್ಞದಿಂದ ಆವಿರ್ಭೂತನಾದ ಶ್ರೀವಿಷ್ಣುವಿನ ಪ್ರಸಾದ ದಿಂದ ಆ ಮುಕ್ತರಲ್ಲಿ ಅಜ್ಞಾನಸ್ಪರ್ಶವನ್ನು ಸಹಿಸುವುದಿಲ್ಲ.(ಮುಕ್ತರಿಗೆ ಅಜ್ಞಾನವಿಲ್ಲ.) (ನೀನು) ವಾಜಿನಂ=ಅನ್ನ ವನ್ನು ಕೊಡತಕ್ಕ ಮನುಷ್ಯನನ್ನು, ವಾಜೇಷು=ಅನ್ನಾದಿ ಸಮಸ್ತ ಭೋಗ ವಿಷಯದಲ್ಲ, ಪ್ರಾವಃ=ರಕ್ಷಿಸಿದಿ, ಅಥವಾ, ವಾಜಿನಂ=ಜ್ಞಾನಾದಿ ವಿಷಯದಲ್ಲಿ ಯುದ್ಧ ಮಾಡುವವನನ್ನು, ವಾಜೇಷು=ಜ್ಞಾನಾದಿ ಯುದ್ಧಗಳಲ್ಲಿ ಪ್ರಾವಃ=ರಕ್ಷಿಸಿದಿ ॥ ೮ ॥

ಭಾ ॥ (೧) ಏನಂ ಪೀತ್ವಾ ಬಹುಜ್ಞಾನಾऽಭೂಸ್ತಮೋಭಿರನಾವೃತಃ । ತ್ಪ್ರಸಾದಾದೇವ ಮುಕ್ತೇಷು ತಮೋऽಸಹ್ಯತಯಾ ಘನಃ ॥ ಆವೃತೇರೇವ ವೃತ್ರಾಣಿ ಹ್ಯಜ್ಞಾನಾನ್ಯನ್ನದಂ ನರಂ । ಪ್ರಾವೋ ಯುದ್ಧೇಷು ಯೋದ್ಧಾರಂ ಭಕ್ತಂ ಜ್ಞಾನಿನಮೇವ ಚ ॥ ೮ ॥

ಅ ॥ (೧) ಬಹುಜ್ಞಾನವುಳ್ಳವನೇ ಈಸೋಮವನ್ನು ಪಾನಮಾಡಿ,ತಮಸ್ಸುಗಳಿಂದ ಅನಾವೃತನಾಗಿರುತ್ತಿ ಯಾವಯಾಜ್ಞಿಕರ ಸೋಮವು ಶ್ರೀಹರಿಯಿಂದ ಪಾನಮಾಡಲ್ಪಟ್ಟದೋ ಆಯಾಜ್ಞಕರು ಆ ಯಜ್ಞದಿಂದುಂಟಾದ ಭಗವತ್ಪ್ರಸಾದದಿಂದಲೇ ಮುಕ್ತರಾಗಲು ಭಗವತ್ಪ್ರಸಾದದಿಂದಲೇ ಅಸಹ್ಯಂ ತಮೋ ಯಸ್ಯ ಸಃ ಎಂಬ ವ್ಯುತ್ಪತ್ತಿಯಿಂದ ಶ್ರೀಹರಿಯು ತಮಸ್ಸನ್ನು ಸಹಿಸುವುದಿಲ್ಲ. (ತಮಸ್ಸು ಅವನ ಹತ್ತಿರ ಬರುವುದಿಲ್ಲ) ಮುಕ್ತರಿಗೆ ಅಜ್ಞಾನಸಂಪರ್ಕವನ್ನು ಸಹಿಸುವುದಿಲ್ಲ, ಆದಕಾರಣ ಸೋಮವನ್ನು ಪಾನಮಾಡಿ ವೃತ್ರಾಣಾಂ ಘನಃ ಅಭವಃ ಎನ್ನಿಸುತ್ತಾನೆ. (**ನಿರನಿಷ್ಟೋ ನಿರವದ್ಯಃ** ಎಂಬ ಪ್ರಮಾಣದಿಂದ ಸರ್ವಥಾ ಅಜ್ಞಾನಾದಿ ದೋಷಗಳಿಲ್ಲವೆಂದು ಹೇಳಿದುದರಿಂದ ಸೋಮಪಾನ ಸಾಮರ್ಥ್ಯದಿಂದ ಶ್ರೀಹರಿಗೆ ಅಜ್ಞಾನಾವರಣವಿಲ್ಲವೆಂಬುವುದು ಪ್ರಮಾಣ ವಿರುದ್ಧವು.) (೨) ಸಮಸ್ತ ಜೀವರನ್ನು ಆವರಿಸುವುದರಿಂದ ಅಜ್ಞಾನಗಳು ವೃತ್ರಾಣಿ ಎನಿಸುತ್ತವೆ. (ಹ್ಯೇವ) ಈ ನಿರ್ವಚನವು **'ಯದಾವೃಣೋತ್ತದ್ವೃತ್ರಸ್ಯ ವೃತ್ರತ್ವಂ ।** ಇತ್ಯಾದಿ ಶ್ರುತಿ ಪ್ರಸಿದ್ಧವಾದುದರಿಂದ ಪ್ರಬಲವು. ಮತ್ತೂ ಅನ್ನದಾನ ಮಾಡತಕ್ಕ ಮನುಷ್ಯನನ್ನು ಸರ್ವ ಭೋಗ ವಿಷಯದಲ್ಲಿ ರಕ್ಷಿಸಿದಿ. (ಸರ್ವ ಭೋಗಗಳನ್ನು ಕೊಡುತ್ತಿ.) ಅಥವಾ ಯುದ್ಧ ಮಾಡತಕ್ಕವನನ್ನು ಯುದ್ಧಗಳಲ್ಲಿ ರಕ್ಷಿಸಿದಿ. (ಅನ್ನದಾನಾದಿ ಮಾತ್ರದಿಂದ ಶ್ರೀಹರಿಯು ರಕ್ಷಿಸುವುದಿಲ್ಲ. ಮತ್ತೆ) ಭಕ್ತನೂ ಜ್ಞಾನಿಯೂ ಆದವನನ್ನೇ ರಕ್ಷಿಸುತ್ತಾನೆ. ॥ ೮ ॥

ಋ ॥ (೩೯) ತಂ ತ್ವಾ ವಾಜೇಷು ವಾಜಿನಂ ವಾಜಯಾಮಃ ಶತಕ್ರತೋ । ಧನಾನಾಮಿಂದ್ರ ಸಾತಯೇ ॥ ೯ ॥

ಅ ॥ ಶತಕ್ರತೋ=ಇಂದ್ರ=ಇಂದ್ರನೇ ತಂ=ಹಿಂದೆ ಹೇಳಿದ ಗುಣಗಳುಳ್ಳ, ವಾಜಿನಂ=ಯುದ್ಧ ಮಾಡತಕ್ಕ ತ್ವಾ=ನಿನ್ನನ್ನು ಧನಾನಾಂ=ಜ್ಞಾನಾದಿದ್ರವ್ಯಗಳನ್ನು ಸಾತಯೇ=ಹೊಂದುವುದಕ್ಕಾಗಿ,ವಾಜೇಷು=ಯುದ್ಧಗಳಲ್ಲಿ ವಾಜಯಾಮಃ=(ಅಜ್ಞಾನ ಮೊದಲಾದ ನಮ್ಮ ಶತ್ರುಗಳಿಂದಲೂ, ಬಾಹ್ಯ ಶತ್ರುಗಳಿಂದಲೂ ಕೂಡಿಕೊಂಡು) ಯುದ್ಧ ಮಾಡುತ್ತೇವೆ ॥
॥ ೯ ॥

ಭಾ ॥ ಯೋಧಯಾನೋ ವಯಂ ತಂ ತ್ವಾಂ ಜ್ಞಾನಾದಿಧನಲಬ್ಧಯೇ । ಅಜ್ಞಾನಾದ್ಯಸ್ಮದರಿಭಿಃ ॥ ೯ ॥

ಅ ॥ ಎಲೋ ಇಂದ್ರನೇ ಹಿಂದೆ ಹೇಳಿದ್ದ ಗುಣಗಳುಳ್ಳ ಯುದ್ಧಮಾಡತಕ್ಕ ನಿನ್ನನ್ನು ಜ್ಞಾನ ಮೊದಲಾದ ದ್ರವ್ಯಗಳನ್ನು ಹೊಂದುವುದಕ್ಕಾಗಿ ಯುದ್ಧಗಳಲ್ಲಿ ಅಜ್ಞಾನ ಮೊದಲಾದ ನಮ್ಮ ಶತ್ರುಗಳಿಂದ ಕೂಡಿಕೊಂಡು ಯುದ್ಧಮಾಡು (ಬಾಹ್ಯಾರ್ಥದಲ್ಲಿ) ನಿನ್ನನ್ನು ಪ್ರಸಿದ್ಧ ಧನ ಪ್ರಾಪ್ತಿಗಾಗಿ ನಮ್ಮ ಬಾಹ್ಯ ಶತ್ರುಗಳಿಂದೊಡಗೂಡಿ ಯುದ್ಧಮಾಡುತ್ತೇವೆ. (ಅಂದರೆ ನಮಗೆ ಜ್ಞಾನ ಪ್ರಸಿದ್ಧಧನಗಳಿಗೆ ಪ್ರತಿಬಂಧಕರಾದ ಉಭಯ ವಿಧ ವೈರಿಗಳನ್ನು ಕೊಂದರೆ ನೀನು ಕೊಟ್ಟ ಜ್ಞಾನಾದಿಗಳು ನಮ್ಮಲ್ಲಿ ಸ್ಥಿರವಾಗುವುದು. ಎಂದು ತಾತ್ಪರ್ಯವು) ॥ ೯ ॥

ಋ ॥ (೪೦) ಯೋ ರಾಯೋ೩ಽವನಿರ್ಮಹಾನ್ ಸುಪಾರಃ ಸುನ್ವತಃ ಸಖಾ ।

ತಸ್ಮಾ ಇಂದ್ರಾಯ ಗಾಯತ ॥ ೧೦ ॥೮॥ ೪ ॥

ಅ ॥ ಯಃ = ಯಾವ ಇಂದ್ರನು, ರಾಯಃ = ಸಮಸ್ತ ದ್ರವ್ಯಗಳಿಗೆ, ಅವನಿಃ=ಭೂಮಿಯಂತೆ ಆಶ್ರಯನೋ, ಮಹಾನ್ = ಉತ್ತಮನೋ, ಸುಪಾರಃ = ಸುಖವನ್ನು ಕೊಡುವವನೋ, ಸಂಸಾರದಿಂದ ದಾಟಿಸುವವನೋ, ಸುನ್ವತಃ = ಯಜಮಾನನಿಗೆ, ಸಖಾ = ಗೆಳೆಯನೋ ತಸ್ಮೈ ಇಂದ್ರಾಯ = ಆ ಇಂದ್ರನಿಗಾಗಿ, ಗಾಯತ= (ಕೈ ಗೈ ರೈ ಶಬ್ದೇ) (ಎಲೋ ಉದ್ಗಾತೃಗಳೇ) ಸಾಮಗಾನಮಾಡಿರಿ ಅಥವಾ ಋತ್ವಿಜರೇ ಸ್ತುತಿ ಶಬ್ದಗಳನ್ನು ಮಾಡಿರಿ ॥ ೧೦ ॥

ಭಾ (೧) ಯೋಽಶೇಷದ್ರವಿಣಾವನಿಃ । ಸುಖದಃ ಸಂಸೃತೇಃ ಪಾರಸ್ತಸ್ಮಾ ಇಂದ್ರಾಯ ಗಾಯತ ॥ (೨) ಕಂಪೋಽಶೇಷಗ್ರಹೇ ಕ್ವಾಪಿ ಲಜ್ಜಾಯಾಂ ವಾ ಪುರಾತನೇ । ಪೃಥಕ್ತ್ವೇ ಧೃಷ್ಯತಾಯಾಂ ವಾ ಹರಿಣರ್ಕ್ಸಂಹಿತೋದಿತಃ ॥ ॥ ೧೦ ॥ ೮ ॥ ೪ ॥

ಅ ॥ (೧) ಯಾವ ಇಂದ್ರನು ಸಮಸ್ತ ದ್ರವ್ಯಗಳಿಗೆ ಪೃಥಿವಿಯಂತೆ ಆಶ್ರಯನೋ, ಸುಖವನ್ನು ಕೊಡುವವನೋ, ಸಂಸಾರದಿಂದ ದಾಟಿಸುವವನೋ, ಅಂತಹ ಇಂದ್ರನನ್ನು ಪ್ರಸನ್ನೀಕರಿಸುವುದಕ್ಕಾಗಿ ಇಂದ್ರನಿಗಾಗಿ ಗಾನ ಮಾಡಿರಿ. (೨) (ಅಶೇಷ ಎನ್ನುವುದರಿಂದ ಕಂಪಾರ್ಥವು ಹೇಳಲ್ಪಟ್ಟಿತು. ಕಂಪಕ್ಕೆ ಅಶೇಷ ಎಂಬ ಅರ್ಥವಿದೆ ಎಂಬಲ್ಲಿ ಪ್ರಮಾಣ ಹೇಳುತ್ತಾರೆ.) ಅಶೇಷ ಎಂಬ ಅರ್ಥದಲ್ಲಿಯೂ, ಲಜ್ಜಾ ಎಂಬ ಅರ್ಥದಲ್ಲಿಯೂ, ಪುರಾತನ ಎಂಬ ಅರ್ಥದಲ್ಲಿಯೂ, ಅದರಿಂದ ಇದು ಬೇರೆ ಎಂಬ ಅರ್ಥದಲ್ಲಿಯೂ ಸಹಿಸಲಿಕ್ಕೆ ಶಕ್ಯವಾಗುವಿಕೆ ಎಂಬ ಅರ್ಥದಲ್ಲಿಯೂ, ಕಂಪವು ಇದೆ ಎಂದು (ಉದಾತ್ತಾನುದಾತ್ತ ಸಮಾಹಾರ ರೂಪವಾದ ಸ್ವರಿತದ ತ್ರಿಮಾತ್ರಾ ಚತುರ್ಮಾತ್ರಾಕಾಲದಿಂದ ಉಚ್ಚಾರಣವು ಶ್ರೀಹರಿಯಿಂದ ಋಕ್ಸಂಹಿತೆಯಲ್ಲಿ ಹೇಳಲ್ಪಟ್ಟಿದೆ. ॥ ೧೦ ॥ ೮ ॥ ೪ ॥

ಅವ ॥ ೧೦ ಋಕ್ಕು. ೨ ವರ್ಗ. ಇಂದ್ರಸೂಕ್ತವು.

ಋ ॥ (೪೧) ಆತ್ವೇತಾ ನಿಷೀದತೇಂದ್ರಮಭಿ ಪ್ರಗಾಯತ ।

ಸಖಾಯಃ ಸ್ತೋಮವಾಹಸಃ ॥ ೧ ॥

ಅ ॥ ಸಖಾಯಃ=ಸಖಿಭೂತರಾದ,ಸ್ತೋಮವಾಹಸಃ=ಸಾಮವಿಶೇಷಗಳನ್ನು ಗಾನ ಮಾಡುವ ಉದ್ಗಾತೃಗಳೇ, ಆ ಇತ=ಬನ್ನಿರಿ. ಆನಿಷೀದತ=ಬಂದು ಕೂತುಕೊಳ್ಳಿರಿ. ಇಂದ್ರಂ=ಇಂದ್ರನನ್ನು ಅಭಿಪ್ರಗಾಯತ ತು=ಗಾನ ಮಾಡಿರಿ. ಬಂದ ಮೇಲೆ ಕೂತುಕೊಳ್ಳುವುದು ಎಂಬ ಅರ್ಥವನ್ನು ಸೂಚಿಸುವುದಕ್ಕಾಗಿ ತು ಶಬ್ದವು. ॥ (ಸ್ಪಷ್ಟಾರ್ಥಕವಾದುದರಿಂದ ಈ ಋಕ್ಕನ್ನು ಬಾಷ್ಯಕಾರರು ವ್ಯಾಖ್ಯಾನ ಮಾಡಲಿಲ್ಲ.) ॥ ೧ ॥

ಋ ॥ (೪೨) ಪುರೂತಮಂ ಪುರೂಣಾಮೀಶಾನಂ ವಾರ್ಯಾಣಾಂ ।
ಇಂದ್ರಂ ಸೋಮೇ ಸಚಾ ಸುತೇ ॥ ೨॥

ಅ॥ ಪುರೂಣಾಂ=(ಪ್ಯಾ ಪಾಲನ ಪೂರಣಯೋಃ) ಸುಪೂರ್ಣರಾದವರ ಮಧ್ಯದಲ್ಲಿ ಪುರುತಮಂ=ಪೂರ್ಣತಮನು, (ಶ್ರೇಷ್ಠರಾದ ದೇವತೆಗಳ ಮಧ್ಯದಲ್ಲಿ ಶ್ರೇಷ್ಠರಾದ ವಾಯು ದೇವರಿಗಿಂತಲೂ ಅತಿ ಶ್ರೇಷ್ಠನೂ ಅಥವಾ ಶ್ರೇಷ್ಠರಿಂದಲೂ ಇಚ್ಛಿಸಲ್ಪಡತಕ್ಕವನೂ, ಪುರೂಣಾಂ=ಉತ್ತಮಗಳಾದ ವಾರ್ಯಾಣಾಂ=(ವೃಞ ವರಣೇ) ಉಪಾದೇಯಗಳಾದ ವಸ್ತುಗಳಿಗೆ ಈಶಾನಂ=ಅಧೀಶ್ವರನೂ ಆದ. ಇಂದ್ರಂ=ಇಂದ್ರನನ್ನು. ಸೋಮೇ ಸುತೇ=ಸೋಮವು ಹಿಂಡಲ್ಪಡುತ್ತಿರಲು, ಸಚಾ=ಸುಖವಾಗಿಯೇ, (ಮನಃಪ್ರಸಾದ ಪೂರ್ವಕವಾಗಿ) ಗಾನ ಮಾಡಿರಿ) ॥ ೨ ॥

ಭಾ ॥ ಸುಪೂರ್ಣಾನಾಂ ಪೂರ್ಣತಮಂ ವರೇಣ್ಯಾನಾಮಧೀಶ್ವರಂ । ಸುತೇ ಸೋಮೇ ಸುಖೇನೈವ ಸ ಚಾಗಾಯತ ತಂ ಪ್ರಭುಂ ॥ ೨॥

ಅ॥ ಅತಿಪೂರ್ಣಗಳಾದ ವಸ್ತುಗಳ ಮಧ್ಯದಲ್ಲಿ ಅತಿ ಪೂರ್ಣನು, ಉಪಾದೇಯ ವಸ್ತುಗಳಿಗೆ ನಿಯಾಮಕನೂ ಆದ ಆ ಸರ್ವರಿಗೂ ಪ್ರಭುವಾದ ಶ್ರೀಹರಿಯನ್ನು ಸೋಮವು ಹಿಂಡಲ್ಪಡುತ್ತಿರಲು ಮನಃಪ್ರಸಾದ ಪೂರ್ವಕವಾಗಿಯೇ ಗಾನಮಾಡಿರಿ. ॥ ೨ ॥

ಋ ॥ (೪೩) ಸ ಘಾ ನೋ ಯೋಗ ಆ ಭುವತ್ಸ ರಾಯೇ ಸ ಪುರಂಧ್ಯಾಂ ।
ಗಮದ್ವಾಜೇಭಿರಾ ಸ ನಃ ॥ ೩ ॥

ಅ ॥ ಸಃ ಘ=ಆ ಪರಮೇಶ್ವರನೇ, ನಃ=ನಮಗೆ, ಆ=ಚೆನ್ನಾಗಿ, ಯೋಗೇ=ಸಾಯುಜ್ಯರೂಪವಾದ ಮುಕ್ತಿಗಾಗಿ, ಭುವತ್=ಆದನು. ಸಃ=ಆ ಶ್ರೀ ಹರಿಯೇ, ರಾಯೇ=ಜ್ಞಾನದ್ರವಿಣರೂಪ ದ್ರವ್ಯಕ್ಕಾಗಿ, ಆದನು. ಸಃ=ಆ ಶ್ರೀ ಹರಿಯೇ ಪುರಂಧ್ಯಾಂ=(ಉಪಾಸಕನಿಂದ ಪರಮೇಶ್ವರ ಸಂಬಂಧಿಯಾದ ಶರೀರವು ಬುದ್ಧಿಯಲ್ಲಿ ಧರಿಸಲ್ಪಡುವುದರಿಂದ ಬುದ್ಧಿಯು ಪುರಂಧೀ ಎನಿಸುತ್ತದೆ.) ಸರ್ವರ ಬುದ್ಧಿಯಲ್ಲಿರುತ್ತಾನೆಂದು ಅಧ್ಯಾತ್ಮಾರ್ಥವು. ಬಾಹ್ಯಾರ್ಥದಲ್ಲಿ (**ಪುರಂಧಿರ್ಯೋಷೇತ್ಯಾಹ ಯೋಷಿತ್ಯೇವ ರೂಪಂ ದಧಾತಿ,** ಇತ್ಯಾದಿಗಳಿಂದ ಶ್ರೀ ಹರಿಯು ಯಾವ ಸ್ತ್ರೀಯಲ್ಲಿ ಗಂಡನಿಗೆ ಪ್ರಿಯವಾದ ವೇಷವನ್ನು ಧರಿಸುತ್ತಾನೋ ಅವಳು ಪುರಂಧಿಃ ಎನಿಸುತ್ತಾಳೆ.) ಪತ್ನೀ ಪ್ರಾಪ್ತಿಗಾಗಿ ಶ್ರೀ ಹರಿಯೇ ಆದನು. ಆ ಶ್ರೀ ಹರಿಯೇ ಅನ್ನಗಳನ್ನು ಕೊಡುವುದಕ್ಕಾಗಿ, ನಃ=ನಮ್ಮನ್ನು ಕುರಿತು ಆ ಗಮತ್=ಬರಲಿ. ॥ ೩ ॥

ಭಾ ॥ ಮುಕ್ತೌ ಯೋಗಾಯೂಸಮಂತಾಚ್ ಭವೇನ್ನೋ ಘೋsವಧಾರಣೇ । ಸ ಏವ ಭಗವಾನ್ ಜ್ಞಾನವಿತ್ತಾಯ ಸ ಚ ಬುದ್ಧಿಗಃ । ಬುದ್ಧಿಃ ಪುರಾಶ್ರಯತ್ವೇನ ಪುರಂಧಿಃ

ಪತ್ನ್ಯಥಾಪಿವಾ । ಪತ್ನ್ಯರ್ಥತ್ವೇತು ತಾದರ್ಥ್ಯಂ ಸೋsನ್ನೈಃ ಸಹ ನ ಆ ವ್ರಜೇತ್ ॥ ೩ ॥

ಅ ॥ ಆ ಭಗವಂತನೇ, ನಮಗೆ ಚೆನ್ನಾಗಿ ಮುಕ್ತಿಯಲ್ಲಿ ಸಾಯುಜ್ಯ ರೂಪವಾದ ಮುಕ್ತಿ ಸಂಬಂಧಕ್ಕಾಗಿ ಆಗಬೇಕು. ಘ ಶಬ್ದವು ಅವಧಾರಣ ಎಂಬ ಅರ್ಥದಲ್ಲಿದೆ. ಆ ಶ್ರೀ ಹರಿಯೇ (ಅಧ್ಯಾತ್ಮದಲ್ಲಿ) ಜ್ಞಾನರೂಪ ವಾದ ದ್ರವ್ಯಕ್ಕಾಗಿ (ಆಗಬೇಕು.) ಆ ಶ್ರೀ ಹರಿಯೇ ಸರ್ವರ ಬುದ್ಧಿಗೆ ನಿಯಾಮಕನಾಗಿದ್ದಾನೆ. (ಉಪಾಸಕ ನಿಂದ ಪರಮಾತ್ಮನ ಸಂಬಂಧಿಯಾದ ಶರೀರವು ಬುದ್ಧಿಯಲ್ಲಿರಿಸಲ್ಪಡುವುದರಿಂದ ಬುದ್ಧಿಯು ಪುರಂಧಿಃ ಎನಿಸು ತ್ತದೆ. ಏವಂಚ) ಶರೀರಕ್ಕೆ ಆಶ್ರಯವಾಗಿರುವುದರಿಂದ ಬುದ್ಧಿಯು ಪುರಂಧಿಃ ಎನಿಸುತ್ತದೆ. ಅಥವಾ (ಬಾಹ್ಯ ದಲ್ಲಿ) ಪತ್ನಿಯೂ ಕೂಡ ಪುರಂಧಿಃ ಎನಿಸುತ್ತಾಳೆ. ಪುರಂಧಿ ಶಬ್ದಕ್ಕೆ ಪತ್ನೀ ಎಂದು ಅರ್ಥವಾಗುವಾಗ ಪತ್ನೀ ಪ್ರಾಪ್ತಿಗಾಗಿ ಆದನು. (ಪರಮಾತ್ಮನು ಯಾವ ಸ್ತ್ರೀಯಲ್ಲಿ ಗಂಡನಿಗೆ ಪ್ರಿಯವಾದ ವೇಷವನ್ನು ಧರಿಸುತ್ತಾನೋ, ಆ ಸ್ತ್ರೀಯು ಪುರಂಧಿಃ ಎನಿಸುತ್ತಾಳೆ.) ಆ ಶ್ರೀ ಹರಿಯು ಅನ್ನಗಳನ್ನು ಕೊಡುವುದಕ್ಕಾಗಿ ನಮ್ಮನ್ನು ಕುರಿತು ಬರಬೇಕು. ॥ ೩ ॥

ಋ ॥ (೪೪) ಯಸ್ಯ ಸಂಸ್ಥೇ ನ ವೃಣ್ವತೇ ಹರೀ ಸಮತ್ಸು ಶತ್ರವಃ ।
ತಸ್ಮಾ ಇಂದ್ರಾಯ ಗಾಯತ ॥ ೪ ॥

ಅ ॥ ಯಾವ ಇಂದ್ರನು ಇರುತ್ತಿರಲು, (ಯಾವ ಶ್ರೀಹರಿಯು ರಥದಲ್ಲಿರುತ್ತಿರಲು) ಸಮತ್ಸು=ಯುದ್ಧ ಗಳಲ್ಲಿ ಶತ್ರವಃ=ಶತ್ರುಗಳೂ, ಹರೀ= ೨ ಕುದುರೆಗಳ ಅಗ್ರ ಭಾಗವನ್ನೂ ಕೂಡ, ನ ವೃಣ್ವತೇ=ಹೊಂದುವುದಿ ಲ್ಲವೋ ತಸ್ಮಾ ಇಂದ್ರಾಯ=ಆ ಶ್ರೀಹರಿಗಾಗಿ, ಗಾಯತ=ಗಾನಮಾಡಿರಿ. (ಇಂದ್ರನ ಅಶ್ವಗಳು ಸಾವಿರಾರು ಇದ್ದರೂ ಇದಿರು ಓಡುವವುಗಳು ಎರಡೇ ಪ್ರಧಾನಗಳಾಗಿರುವುದರಿಂದ ಎರಡನ್ನೇ ಹೇಳಿದ್ದು.) (ಅಧ್ಯಾತ್ಮರೂಪ ಅರ್ಥದಲ್ಲಿ) ಯಾವ ಶ್ರೀಹರಿಯು ವಿಶೇಷವಾಗಿ ಭಕ್ತರ ಶರೀರದಲ್ಲಿ ಸನ್ನಿಹಿತನಾಗುತ್ತಿರಲು ಜ್ಞಾನ ಯುದ್ಧ ಗಳಲ್ಲಿ ಅಜ್ಞಾನ ಮೊದಲಾದ ಶತ್ರುಗಳ ವಿಷಯಗಳ ಕಡೆಗೆ ಓಡುವುದರಿಂದ ಹರಿ ಎನಿಸಿಕೊಂಡ ಮನಸ್ಸು ಬುದ್ಧಿಗಳು, ಇರುವುದಿಲ್ಲ. ಅಂದರೆ ಮನಸ್ಸು ಬುದ್ಧಿಗಳು ಅಜ್ಞಾನಾದಿಗಳಿಂದ ಆವೃತಗಳಾಗುವುದಿಲ್ಲ. ॥ ೪ ॥

ಭಾ ॥ ಯಸ್ಯ ಸ್ಥಿತೌ ನ ವೃಣುತೇ ಹರ್ಯಗ್ರಮಪಿ ಶತ್ರವಃ । ಮನಃ ಪುರೋ ವಾ ವಿಷಯ ಹರಣಾನ್ಮನ ಏವಚ । ಬುದ್ಧಿಶ್ಚ ಹರಿಶಬ್ದೋಕ್ತೇ ತಮ ಆದೀನಿ ಶತ್ರವಃ ॥ ೪ ॥

ಅ ॥ ಯಾವ ಶ್ರೀ ಹರಿಯು ರಥದಲ್ಲಿರುತ್ತಿರಲು ಯುದ್ಧಗಳಲ್ಲಿ ಶತ್ರುಗಳು ಅಶ್ವಗಳ ಇದಿರೂ ಹೋಗಲಿಕ್ಕೆ ಅಸಮರ್ಥರಾಗಿರುತ್ತಾರೆ. (ಅಧ್ಯಾತ್ಮದಲ್ಲಿ) ಮನಸ್ಸು ಬುದ್ಧಿಗಳು ವಿಷಯಗಳ ಕಡೆಗೆ ಓಡುವುದರಿಂದ ಮನಸ್ಸು ಬುದ್ಧಿಗಳು ಹರಿ ಶಬ್ದದಿಂದ ಹೇಳಲ್ಪಡುತ್ತವೆ. ತಮಸ್ಸು ಮೊದಲಾದುವುಗಳು ಶತ್ರುಗಳು. (ಯಾವ ಶ್ರೀಹರಿಯು ವಿಶೇಷವಾಗಿ ಭಕ್ತರ ಶರೀರದಲ್ಲಿ ಸನ್ನಿಹಿತನಾಗಿರುತ್ತಿರಲು ಜ್ಞಾನ ಯುದ್ಧಗಳಲ್ಲಿ ತಮಸ್ಸು ಮೊದಲಾದ ಶತ್ರುಗಳು ಮನಸ್ಸು ಬುದ್ಧಿಗಳ ಇದಿರು ಅಂಗೀಕರಿಸುವುದಿಲ್ಲ. (ಅಂದರೆ ಹೋಗುವುದಿಲ್ಲ) (ಅಂದರೆ ಮನಸ್ಸು ಬುದ್ಧಿಗಳು ಅಜ್ಞಾನಾದಿಗಳಿಂದ ಆವೃತಗಳಾಗುವುದಿಲ್ಲ.) ॥ ೪ ॥

ಋ ॥ (೪೫) ಸುತಪಾವ್ನೇ ಸುತಾಃ ಇಮೇ ಶುಚಯೋ ಯಂತಿ ವೀತಯೇ ।
ಸೋಮಾಸೋ ದಧ್ಯಾಶಿರಃ ॥ ೫ ॥

ಅ ॥ ಶುಚಯಃ=ಶುದ್ಧಗಳಾದ, ಸುತಾಃ=ಹಿಂಡಲ್ಪಟ್ಟ ದಧ್ಯಾಶಿರಃ=ದಧಿಯಿಂದ ಮಿಶ್ರಿತಗಳಾದ, ಇಮೇ ಸೋಮಾಸಃ=ಈ ಸೋಮಗಳು, ವೀತಯೇ=(ವೀಗತೌ) ಯಜಮಾನನಿಗೆ ಇಂದ್ರನ ಪ್ರಾಪ್ತಿಗಾಗಿ, ಸುತಪಾವ್ನೇ=(ಪಾ ಪಾನೇ) ಸೋಮಪಾನ ಮಾಡತಕ್ಕ ಇಂದ್ರನಿಗಾಗಿ, ಯಂತಿ= (ಇಣ್‌ಗತೌ) ಹೋಗುತ್ತವೆ. (ಅಧ್ಯಾತ್ಮದಲ್ಲಿ) ಸುತಾಃ=ವೇದ ವಾಕ್ಯಗಳ ಸಂಘರ್ಷವುಳ್ಳ, ಶುಚಯಃ=ರಾಗಾದಿ ದೋಷಗಳಿಲ್ಲದಿರುವ, ದಧ್ಯಾಶಿರಃ=(ಡುಧಾಞ ಧಾರಣೇ) ಭಗವದ್ಧ್ಯಾನದಿಂದ ಮಿಶ್ರಿತಗಳಾದ, ಇಮೇ ಸೋಮಾಸಃ=ಈ ಮನಸ್ಸುಗಳು, ಸುತಪಾವ್ನೇ ವೀತಯೇ=(ವೀಗತಿ ಪ್ರಜನನ ಕಾಂತ್ಯಸನ ಖಾದನೇಷು) ಮನಸ್ಸಿನಿಂದ ಸೇವ್ಯನಾದ ಶ್ರೀಹರಿಯ ಪ್ರಾಪ್ತಿಗಾಗಿ ಯಂತಿ=ಸರ್ವದಾ ಹೋಗುತ್ತವೆ. (ಯದ್ಯಪಿ ಆಶಿರ ಶಬ್ದವು ಅಹೋರಾತ್ರಾಂತರಿತವಾದ ದಧಿಯನ್ನು ಹೇಳುತ್ತದೆ. ಆದಾಗ್ಯೂ ಪ್ರತ್ಯೇಕ ದಧಿ ಶಬ್ದವು ಶ್ರುತವಾಗಿರುವುದರಿಂದ ಅಹೋರಾತ್ರಾಂತರಿತ ಎಂಬುವ ಅರ್ಥವನ್ನು ಮಾತ್ರ ಹೇಳುತ್ತದೆ.) ॥ ೫ ॥

ಭಾ ॥ ಸೋಮಪೇ ಶುಚಯಸ್ಸೋಮಾಃ ಪ್ರಾಪ್ತ್ಯೈದಧಿವಿಮಿಶ್ರಿತಾಃ ಮನಾಂ ಸಿಧ್ಯಾನ ಯುಕ್ತಾನಿ ಸಾ ಯಾಂತಿ ಹರಯೇ ಸದಾ ॥ ॥೫॥ ೯॥

ಅ ॥ ಶುದ್ಧಗಳಾದ ದಧಿಯಿಂದ ಮಿಶ್ರಿತಗಳಾದ ಸೋಮಗಳು ಯಜಮಾನನಿಗೆ ಇಂದ್ರನ ಪ್ರಾಪ್ತಿಗಾಗಿ ಸೋಮಪಾನ ಮಾಡಿದ ಇಂದ್ರನ ಸಮೀಪವನ್ನು ಹೊಂದುತ್ತವೆ. (ಅಧ್ಯಾತ್ಮರೂಪಾರ್ಥದಲ್ಲಿ) ಭಗವದ್ಧ್ಯಾನದಿಂದ ಯುಕ್ತಗಳಾದ ಮನಸ್ಸುಗಳು ಮನಸ್ಸಿನಿಂದ ಸೇವ್ಯವಾದ ಶ್ರೀಹರಿಯ ಪ್ರಾಪ್ತಿಗಾಗಿ ಸದಾ ಯಾಂತಿ=(ಯಾ ಪ್ರಾಪಣೇ.) ಹೋಗುತ್ತವೆ. ॥ ೫ ॥ ೯ ॥

ಋ । (೪೬) ತ್ವಂ ಸುತಸ್ಯ ಪೀತಯೇ ಸದ್ಯೋ ವೃದ್ಧೋ ಅಜಾಯಥಾಃ ।
ಇಂದ್ರಜ್ಯೈಷ್ಠ್ಯಾಯ ಸುಕ್ರತೋ ॥ ೯ ॥

ಅ ॥ ಸುಕ್ರತೋ=ಶೋಭನ ಜ್ಞಾನವುಳ್ಳಇಂದ್ರನೇ ಸದ್ಯಃ ವೃದ್ಧಃ=ಯಾವ ದಿವಸದಲ್ಲಿ ತಾನು ಇರುತ್ತಾನೋ, ಆ ದಿವಸದಲ್ಲಿ ಯಾವಾಗಲೂ ಇರುತ್ತಾನೆ. ಆದಕಾರಣ ಸದ್ಯಃವೃದ್ಧಃ=ಎನಿಸುತ್ತಾನೆ. ಸದಾ ವೃದ್ಧನು ನಿತ್ಯಪೂರ್ಣನೂ ಆದ, ತ್ವಂ=ನೀನು, ಸುತಸ್ಯ ಪೀತಯೇ=ಸೋಮಪಾನ ಮಾಡುವುದಕ್ಕಾಗಿ (ಸೋಮವನ್ನು ಹೊಂದುವುದಕ್ಕಾಗಿ) (ಯಜ್ಞದಲ್ಲಿ ಯಾವ ಕಾರಣದಿಂದ) ಅಜಾಯಥಾಃ=ಅಭಿವ್ಯಕ್ತನಾಗಿರುತ್ತಿಯೋ, ಆದಕಾರಣ, ಅದು, ಜ್ಯೈಷ್ಠ್ಯಾಯ=ಸಮಸ್ತ ದೇವತೆಗಳಿಗಿಂತ, ಆತಿಶಯವಾಗಿ ಸೋಮಪಾನಾದಿಗಳಿಂದ ಜ್ಯೇಷ್ಠತ್ವವನ್ನು ಪ್ರಕಟೀಕರಿಸುವುದಕ್ಕಾಗಿಯೇ, (ಕ್ಷುತ್=ಹಸಿವೆ, ಮೊದಲಾದ ನಿಮಿತ್ತದಿಂದ ಅಲ್ಲ.) ॥ ೬ ॥

ಭಾ ॥ ಸದಾ ಪೂರ್ಣಃ ಶುಭಜ್ಞಾನಜ್ಯೈಷ್ಠ್ಯವ್ಯಕ್ತ್ಯೈ ಸುತಾಪ್ತಯೇ । ನ ಕ್ಷುದಾದೇರಭಿವ್ಯಕ್ತೋಽಭವೋ ॥ ೬ ॥

ಅ ॥ ಶೋಭನಜ್ಞಾನವುಳ್ಳವನೇ ಸದಾ ಪೂರ್ಣನಾದ ನೀನು ಸೋಮಪ್ರಾಪ್ತಿಗಾಗಿ ಯಜ್ಞದಲ್ಲಿ ಅಭಿವ್ಯಕ್ತಿಯನ್ನು ಹೊಂದಿದ್ದು ಸಮಸ್ತ ದೇವತೆಗಳಿಗಿಂತ ಹೆಚ್ಚು ಸೋಮಪಾನಾದಿಗಳಿಂದ ತನ್ನ ಶ್ರೈಷ್ಠ್ಯವನ್ನು ಪ್ರಕಟೀಕರಿಸುವುದಕ್ಕಾಗಿಯೇ. ಹಸಿವೆ ಮೊದಲಾದದು ನಿವೃತ್ತಿಯಾಗಬೇಕೆನ್ನುವ ನಿಮಿತ್ತದಿಂದ ಅಲ್ಲ. ॥ ೬ ॥

ಋ ॥ (೪೭) ಆ ತ್ವಾ ವಿಶಂತ್ವಾಶವಃ ಸೋಮಾಸ ಇಂದ್ರ ಗಿರ್ವಣಃ ।
ಶಂತೇ ಸಂತು ಪ್ರಚೇತಸೇ ॥ ೭ ॥

ಅ ॥ ಗಿರ್ವಣಃ= (ವನ ಸಂಭಕ್ತೌ) ವೇದವಚನಗಳಿಂದ ಭಜಿಸಲು ಯೋಗ್ಯನಾದ, ಇಂದ್ರ-ಪರಮೈಶ್ವರ್ಯ ಸಂಪನ್ನನಾದ ಶ್ರೀ ಹರಿಯೇ, ಆಶವಃ-ದ್ರವದ್ರವ್ಯವಾದುದರಿಂದ ಶೀಘ್ರವಾಗಿ ಹೋಗುವ,ಸೋಮಾಸಃ -ಸೋಮಗಳು, ತ್ವಾ=ನಿನ್ನನ್ನು, ಆ ವಿಶಂತು-ಪ್ರವೇಶಿಸಲಿ. ತೇ-ಆವಿಷ್ಟಗಳಾದ ಆ ಸೋಮಗಳು, ಪ್ರಚೇತನೇ = ಪ್ರಕೃಷ್ಟ ಚಿತ್ತವುಳ್ಳ, ತೇ=ನಿನ್ನ ಭೃತ್ಯನಾದ ಯಜಮಾನನಿಗೆ, ಶಂಸಂತು=ಸುಖಕರಗಳಾಗಲಿ. ॥ ೭ ॥

ಭಾ ॥ ಗೀರ್ಭಿರ್ವೃತ ಪ್ರಭೋ । ಪ್ರಕೃಷ್ಟಚೇತಾಸ್ತ್ವದ್ಭೃತ್ಯೋ ಯೋಽಸ್ಮೈ ಸ್ಯುಃ ಶಂಕರಾಃ ಸುತಾಃ ॥ ೭ ॥

ಅ ॥ ವೇದ ವಾಕ್ಯಗಳಿಂದ ಭಜಿಸಲು ಯೋಗ್ಯನಾದ ಶ್ರೀ ಹರಿಯೇ, ಇಂದ್ರನೇ, ಪ್ರಕೃಷ್ಟವಾದ ಮನಸ್ಸುಳ್ಳ ನಿನ್ನ ಭೃತ್ಯನಾದ ಯಾವ ಯಜಮಾನನೋ ಆ ಯಜಮಾನನಿಗೆ ಸೋಮಗಳು ಸುಖಕರಗಳಾಗಲಿ ॥ ೭ ॥

ಋ ॥ (೪೮) ತ್ವಾಂ ಸ್ತೋಮಾ ಅವೀವೃಧನ್ ತ್ವಾಮುಕ್ಥಾ ಶತಕ್ರತೋ ।

ತ್ವಾಂ ವರ್ಧಂತು ನೋ ಗಿರಃ ॥ ೮ ॥

ಅ ॥ ಶತಕ್ರತೋ=ಸಂಪೂರ್ಣ ಜ್ಞಾನವುಳ್ಳ ಶ್ರೀಹರಿಯೇ ೧೦೦ ಅಶ್ವಮೇಧ ಯಾಗ ಮಾಡಿದ ಇಂದ್ರನೇ ತ್ವಾಂ=ನಿನ್ನನ್ನು ಸ್ತೋಮಾಃ = ಸಾಮ ವಿಶೇಷಗಳು, ಅವೀವೃಧನ್=ಅಭಿವ್ಯಕ್ತೀಕರಿಸಿದವು. (ಪ್ರಕಟೀಕರಿಸಿದವು.) ತ್ವಾಂ=ನಿನ್ನನ್ನು, ಉಕ್ಥಾ = ಋಕ್ಕುಗಳಲ್ಲಿರತಕ್ಕ ಮಂತ್ರ ವಿಶೇಷಗಳು, (ವ್ಯಕ್ತೀಕರಿಸಿದವು.) (ಆದ ಕಾರಣ) ನಃ=ನಮ್ಮ, ಗಿರಃ=ಮಾತುಗಳು, ತ್ವಾಂ ವರ್ಧಂತು=ನಿನ್ನನ್ನು ಮಹಾಗುಣಗಳಿಂದ ಯುಕ್ತನನ್ನಾಗಿ ಪ್ರಕಟೀಕರಿಸಲಿ. ॥ ೮ ॥

ಭಾ ॥ (೧) ವ್ಯಂಜಯಂತ್ಯಧಿಕಂ ಸ್ತೋಮಾಃ ಸಾಮ್ನ್ಯುಕ್ಥಾನ್ಯೃಕ್ಷು ಚೈವ ಹಿ । ಮಹಾಗುಣೈರ್ವ್ಯಂಜಯಂತು ಗಿರೋಽಸ್ಮಾಕಮಪಿ ಪ್ರಭೋ॥ (೨) ಆಕಾಶವೃದ್ಧಿವದ್ವೃದ್ಧಿರ್ವಿಷ್ಣೋಃ ಸ್ಯಾನ್ನೈವ ಚಾನ್ಯಥಾ॥(೩)ನ ವರ್ಧತೇ ನೋ ಕನೀಯಾನಿತಿ ಹ್ಯೇನಂ ಶ್ರುತಿರ್ಜಗೌ ॥ (೪) ಮಹಾತಾತ್ಪರ್ಯರೋಧಾಚ್ಚ ಶ್ರುತ್ಯರ್ಥೋ ನಾಪರೋ ಭವೇತ್ । (೫) ಯದ್ಯನ್ಯಾಪೇಕ್ಷಯಾ ವೃದ್ಧಿರೀಶತ್ವಂ ಸ್ಯಾತ್ಕುತೋಽಸ್ಯ ಚ । (೬) ಅಕ್ಷಿತೋತಿರಿತಿ ಹ್ಯಸ್ಮಾತ್ಪೂರ್ಣಾಭಿಪ್ರಾಯತೋದಿತಾ ॥ ೮ ॥

ಅ ॥ (೧) ಸರ್ವ ಸಮರ್ಥನೇ, (ಸಾಮ್ನಿ ಸ್ತೋಮಾಃ=) ಸಾಮ ಸಮುದಾಯಗಳ ಮಧ್ಯದಲ್ಲಿ ಯಾವ ಸಾಮ ವಿಶೇಷಗಳೋ ಅವುಗಳು, ನಿನ್ನನ್ನು ಅತ್ಯಧಿಕವಾಗಿ ವ್ಯಕ್ತೀಕರಿಸಿದವು. ಹೀಗೆಯೇ ಋಕ್ಕುಗಳಲ್ಲಿರತಕ್ಕ ಮಂತ್ರ ವಿಶೇಷಗಳೂ ವ್ಯಕ್ತೀಕರಿಸಿದವು. ನಮ್ಮ ಮಾತು ನಿನ್ನನ್ನು ಸರ್ವ ಸ್ವಾತಂತ್ರ್ಯ ಮೊದಲಾದ ಮಹಾಗುಣಗಳಿಂದೊಡಗೂಡಿದವನನ್ನಾಗಿ ವ್ಯಕ್ತೀಕರಿಸಲಿ (೨) ಘಟಾದಿಗಳ ಅಪಸರಣಾದಿಗಳಿಂದ ಆಕಾಶವು ಅಭಿವ್ಯಕ್ತವಾಗುತ್ತಿರಲು **ಆಕಾಶಃ ವೃದ್ಧಃ** ಎಂದು ಪ್ರಯೋಗವಿದ್ದಂತೆಯೇ ಶ್ರೀ ವಿಷ್ಣುವಿನಲ್ಲಿಯೂ ವೃದ್ಧಿ ಶಬ್ದ ಪ್ರಯೋಗವು. (ಅವಯವಗಳು ಉಪಚಯಗಳಾದವು ಎಂಬ ಅಭಿಪ್ರಾಯದಿಂದ ವೃದ್ಧಿ ಶಬ್ದ ಪ್ರಯೋಗವಲ್ಲ.) (೩)(ಆಕಾಶದಲ್ಲಿ ಹಾಗೆ ಅರ್ಥ ಮಾಡಲಿಕ್ಕೆ **ಅನಾದಿರ್ವಾ ಅಯಮಾಕಾಶಃ** ಎಂದು ಬಾಧಕವಿದ್ದ ಪ್ರಯುಕ್ತ ಔಪಚಾರಿಕ ಅರ್ಥವನ್ನು ಅಂಕೀಕರಿಸುತ್ತೇವೆಂದರೆ ಪ್ರಕೃತದಲ್ಲಿಯೂ ಹಾಗೆಯೇ ಎನ್ನುತ್ತಾರೆ.) ಶ್ರೀಹರಿಯು ಅಭಿವೃದ್ಧನೂ ಆಗುವುದಿಲ್ಲ. ಚಿಕ್ಕವನೂ ಆಗುವುದಿಲ್ಲ,ಎಂಬುದು ಶ್ರುತಿಯು ಶ್ರೀಹರಿಯನ್ನು ವೃದ್ಧಿಕ್ಷಯ ರಹಿತ

ನನ್ನಾಗಿ ಹೇಳುತ್ತದೆ. (೪) ಶ್ರೀಹರಿಯು ಸರ್ವರಿಗೂ ನಿಯಾಮಕನು ಎಂಬ ವಿಷಯದಲ್ಲಿ ಸಮಸ್ತ ವೇದಗಳಿಗೂ ಮಹಾ ತಾತ್ಪರ್ಯವಿದೆ, ಆದರಿಂದ ವಿರೋಧವು ಬರುವುದರಿಂದ ಬೇರೆ ಯಾವುದೂ ಶ್ರುತ್ಯರ್ಥವಾಗಲಾರದು. (ಅಂದರೆ ಶ್ರೀ ಹರಿಗೆ ವೃದ್ಧಿಯಿದೆ ಎಂಬುವುದು ಶ್ರುತ್ಯರ್ಥವಾಗಲಾರದು) (೫) ಶ್ರೀ ಹರಿಗೆ ಅನ್ಯಾಪೇಕ್ಷೆಯಿಂದ (ಅಂದರೆ ಸ್ತೋಮಾದ್ಯಧೀನವಾದ) ವೃದ್ಧಿಯು ಆಗುವುದಾದರೆ ಶ್ರೀ ಹರಿಗೆ ಈಶ್ವರತ್ವವು ಯಾವುದರಿಂದ ಆಗುವುದು. (ಅಂದರೆ ಈಶ್ವರತ್ವವೇ ಇಲ್ಲದೆ ಹೋಗುವುದು. ಪರಾಧೀನನು, ಈಶ್ವರನೆಂಬುವುದು ವಿರುದ್ಧಗಳು. ಅಂತೂ ವೇದಗಳಿಗೆ ಮಹಾತಾತ್ಪರ್ಯವಿದೆ ಎನ್ನುವುದೂ ವಿರುದ್ಧವಾಗುವುದು.) (೬) (ಶ್ರೀ ಹರಿಗೆ ವೃದ್ಧ್ಯಾದಿಗಳನ್ನು ಅಂಗೀಕರಿಸಿದರೆ ಉತ್ತರ ವಾಕ್ಯ ವಿರೋಧವೂ ಇದೆ ಎನ್ನುತ್ತಾರೆ) ವೃದ್ಧ್ಯಾದಿಗಳಿಲ್ಲದೆ ಸರ್ವ ಸ್ವಾತಂತ್ರ್ಯವಿದ್ದುದರಿಂದಲೇ ಶ್ರೀ ವಿಷ್ಣುವಿಗೆ ಅಕ್ಷಿತೋತಿಃ=(ಅಕ್ಷೀಣವಾದ (ಪೂರ್ಣವಾದ) ಅಭಿಪ್ರಾಯವುಳ್ಳವನು.) ಎಂದು ಹೇಳಲ್ಪಟ್ಟ ಪೂರ್ಣಾಭಿಪ್ರಾಯವುಳ್ಳತನವು (ಇಷ್ಟವಾದ ಅಖಿಲ ಪೂರ್ತಿಯು) ಕೂಡುತ್ತದೆ. (ಅನ್ಯಥಾ ಕೂಡಲಾರದು) ॥ ೮ ॥

ಋ ॥ (೪೯) ಅಕ್ಷಿತೋತಿಃ ಸನೇದಿಮಂ ವಾಜಮಿಂದ್ರಃ ಸಹಸ್ರಿಣಂ ।
ಯಸ್ಮಿನ್ ವಿಶ್ವಾನಿ ಪೌಂಸ್ಯಾ ॥ ೯ ॥

ಅ॥ ಯಸ್ಮಿನ್=ಯಾವ ಇಂದ್ರನಲ್ಲಿ, ವಿಶ್ವಾನಿ ಪೌಂಸ್ಯಾ=ಸಮಸ್ತ ಸಾಮರ್ಥ್ಯಗಳು (ಇರುತ್ತವೋ,) ಸಃ ಅಕ್ಷಿತೋತಿಃ=ಆ ಪೂರ್ಣಾಭಿಪ್ರಾಯವುಳ್ಳ, (ನಿಖಿಲ ಇಷ್ಟಾರ್ಥಪೂರ್ತಿಯುಳ್ಳ) ಇಂದ್ರಃ=ಶ್ರೀ ಹರಿಯೂ ಸಹಸ್ರಿಣಂ=ಅನಂತ ಫಲವನ್ನು ಕೊಡತಕ್ಕ, ಇಮಂ ವಾಜಂ=ಈ ಹವಿಸ್ಸನ್ನು ಸನೇತ್=(ವನಷಣ ಸಂಭಕ್ತೌ) ನಮ್ಮಿಂದ ಹೊಂದಲಿ. ಅಥವಾ ಭಗವಂತನ ಪೂಜೆಗಾಗಿ ಇತರರಿಗೆ ಹವಿಸ್ಸನ್ನು ನಮ್ಮಿಂದ ಹೊಂದಿಸಲಿ. (ಅಂದರೆ ನಮಗೆ ಯಥೇಷ್ಟವಾಗಿ ಹವಿಸ್ಸನ್ನು ಕೊಡಲಿ.) ॥ ೯ ॥

ಭಾ॥ (೧) ಅನಂತಫಲದಂ ವಾಜಮಸ್ಮತ್ತೋ ಲಭತಾಂ ಸ ಚ।ದದಾತು ವಾ ಪೌರುಷಾಣಿ ಶಕ್ತಯೋ ಯತ್ರ ಚಾಖಿಲಾಃ॥ (೨) ಅತಶ್ಚಾನಂತಶಕ್ತಿತ್ವಾನ್ನ ವೃದ್ಧ್ಯಾದ್ಯಾಃ ಕಥಂಚನ॥ (೩) ಸರ್ವೋಪೇತೇತ್ಯೇತಮರ್ಥಮಭಿಪ್ರೇತ್ಯಾಹ ವೇದರಾಟ್ ॥ ೯ ॥

ಅ ॥ (೧) ಯಾವ ಶ್ರೀ ಹರಿಯಲ್ಲಿ ಸರ್ವ ಶಕ್ತಿಗಳೂ ಇರುತ್ತವೋ ಅಂತಹ ಶ್ರೀಹರಿಯು ಅನಂತ ಫಲವನ್ನು ಕೊಡತಕ್ಕ ಅನ್ನವನ್ನು ನಮ್ಮಿಂದ ಹೊಂದಲಿ. ಅಥವಾ ನಮಗೆ ಯಥೇಷ್ಟವಾಗಿ ಕೊಡಲಿ. (೨) ಆದ ಕಾರಣ ಅನಂತ ಶಕ್ತಿಗಳು ಇದ್ದುದರಿಂದ ಶ್ರೀ ಹರಿಗೆ ಯಾವ ರೀತಿಯಿಂದಲೂ ವೃದ್ಧ್ಯಾದಿಗಳು ಕೂಡಲಾರವು. (೩) ಶ್ರೀಹರಿಗೆ ಸಂಪೂರ್ಣ ಶಕ್ತಿಯಿದ್ದ ಪ್ರಯುಕ್ತ ವೃದ್ಧ್ಯಾದಿಗಳಿಲ್ಲ ಎಂಬ ಈ ಅರ್ಥವನ್ನು ಇಟ್ಟುಕೊಂಡೇ ವೇದವ್ಯಾಸರು **ಸರ್ವೋಪೇತಾ ಚ ತದ್ದರ್ಶನಾತ್** ಎಂಬ ಸೂತ್ರದಲ್ಲಿ ಶ್ರೀ ಹರಿಯು ಸಮಸ್ತಶಕ್ತಿಗಳಿಂದ ಕೂಡಿದವನು,ಚ ಶಬ್ದದಿಂದ ವೃದ್ಧ್ಯಾದಿ ದೋಷಗಳಿಲ್ಲದವನು, ಎಂದು '**ಸರ್ವೈಯುಕ್ತಾ ಶಕ್ತಿಭಿರ್ದೇವತಾ ಸಾ**'ಇತ್ಯಾದಿ ಶ್ರುತಿಗಳಿಂದ ಸಮರ್ಥಿಸಿರುತ್ತಾರೆ. ॥ ೯ ॥

ಋ ॥ (೫೦)ಮಾ ನೋ ಮರ್ತಾ ಅಭಿ ದ್ರುಹನ್ತನೂನಾಮಿಂದ್ರ ಗಿರ್ವಣಃ ।
ಈಶಾನೋ ಯವಯಾ ವಧಂ ॥ ೧೦ ॥ ೧೦ ॥ ೫ ॥ ೫ ॥

ಅ || ಗಿರ್ವಣಃ=ವೇದವಾಕ್ಯಗಳಿಂದ ಭಜಿಸಲು ಯೋಗ್ಯನಾದ, ಇಂದ್ರ=ಶ್ರೀಹರಿಯೇ, ಮರ್ತಾಃ= (ಮೃಜಪ್ರಾಣತ್ಯಾಗೇ) ಮನುಷ್ಯರು, ನಃ=ನಮ್ಮ, ತನೂನಾಂ=ಶರೀರಗಳಿಗೋಸ್ಕರ, ಮಾ ಅಭಿ ದ್ರುಹನ್= (ದ್ರುಹ ಜಿಘಾಂಸಾಯಾಂ) ಯಾವ ರೀತಿಯಿಂದಲೂ ದ್ರೋಹ ಮಾಡುವವರು ಆಗಬಾರದು. ಈಶಾನಃ=(ಯಾವ ಕಾರಣದಿಂದ ನೀನು) ಸಮರ್ಥನೋ, (ಆ ಕಾರಣದಿಂದ) ನಃ=ನಮ್ಮ, ವಧಂ=ಸಂಹಾರವನ್ನು, ಯವಯ= (ಯು ಮಿಶ್ರಣಾಮಿಶ್ರಣಯೋಃ) ಹೋಗಲಾಡಿಸು. ಅಥವಾ ನಮ್ಮ ಶರೀರಗಳಿಗೆ ಮನುಷ್ಯರು ದ್ರೋಹಮಾಡುವವರು ಆಗಬಾರದು. (ಅಂದರೆ ಮನುಷ್ಯರಿಂದ ವಿಪತ್ತುಗಳು ಸರ್ವಥಾ ಬರಬಾರದು.) ಸರ್ವಸಮರ್ಥನಾದ ನೀನು ಶ್ರೇಷ್ಠವಾದ ವಧವನ್ನು ಹೊಂದಿಸಿಕೊಡು. (ಅಂದರೆ ದುರ್ಜನರು ಮಾಡತಕ್ಕ ಉಪದ್ರವಕ್ಕಿಂತ ದೈವಾಧೀನವಾದ ಮರಣವೇ ಶ್ರೇಷ್ಠವು. ಆದ ಕಾರಣ ಉಪದ್ರವ ಪರಿಹಾರವನ್ನು ಮಾಡು.) || ೧೦ ||

ಭಾ|| (೧) ಮಾ ಮರ್ತಾ ನಸ್ತನೂನಾಂ ತು ದ್ರೋಗ್ಧಾರಃ ಸ್ಯುಃ ಕಥಂಚನ। ಈಶೋಽಸ್ಯಪಾಕುರು ವಧಂ ತೇನ ನೋ ಮುಕ್ತಿದಾನತಃ || (೨) ಮಾನುಷೇಭ್ಯಸ್ತನೂನಾಂಚ ನೈವ ನಃ ಸ್ಯುರ್ವಿಪತ್ತಯಃ । (೩) ಕಾಲೇನ ದೈವತಃ ಪ್ರಾಪ್ತಃ ಸ್ಯಾದದೇಹತ್ವತೋ ವಧಃ || ೧೦ || ೧೦ || ೫ || ೫ ||

ಅ || (೧)ಮನುಷ್ಯರು ನಮ್ಮ ಶರೀರಗಳಿಗೊಸ್ಕರ ಯಾವ ಪ್ರಕಾರದಿಂದಲೂ ದ್ರೋಹ ಮಾಡುವವರು ಆಗಬಾರದು. ಯಾವ ಕಾರಣದಿಂದ ನೀನು ಸಮರ್ಥನು ಆಗಿರುತ್ತಿಯೋ ಆಕಾರಣ ನಮಗೆ ಮುಕ್ತಿಯನ್ನು ಕೊಡೋಣದರಿಂದ ನಮ್ಮ ಸಂಹಾರವನ್ನು ಹೋಗಲಾಡಿಸು. (೨) (ಈ ಋಕ್ಕನ್ನು ರೀತ್ಯಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ನಮ್ಮ ಶರೀರಗಳಿಗೆ ಮನುಷ್ಯರಿಂದ ಆಪತ್ತುಗಳು ಸರ್ವಥಾ ಬರಬಾರದು. (೩) ಮರಣ ಕಾಲದಿಂದ ದೈವವಶಾತ್ ನಿನ್ನಿಂದ ಪ್ರಾಪ್ತವಾದದ್ದು ದೇಹಾಬಾವ ರೂಪದಿಂದ ವಧವು ಬರಲಿ (ದುರ್ಜನರು ಮಾಡತಕ್ಕ ಉಪದ್ರವಕ್ಕಿಂತ ದೈವಾಧೀನವಾದ ಮರಣವೇ ಶ್ರೇಷ್ಠವು. ಆದಕಾರಣ ಉಪದ್ರವ ಪರಿಹಾರವನ್ನು ಮಾಡು ಎಂದು ಋಕ್ಕಿನ ಅಭಿಪ್ರಾಯವು) || ೧೦ || ೧೦ || ೫ ||

ಅವ || ಈ ಸೂಕ್ತದಲ್ಲಿ ೧೦ ಋಕ್ಕುಗಳು. ೧. ೨. ೪. ಇವುಗಳಿಗೆ ಮರುತ್ ಎನಿಸಿಕೊಂಡ ಬ್ರಹ್ಮಾದಿ ದೇವತೆಗಳು, ೩. ೫. ಇವುಗಳಿಗೆ ಇಂದ್ರ ಮರುತ್‌ಗಳು, ಇತರ ಋಕ್ಕುಗಳಿಗೆ ಇಂದ್ರನು ದೇವತೆಯು.

ಋ || (೫೧) ಯುಂಜಂತಿ ಬ್ರಧ್ನಮರುಷಂ ಚರಂತಂ ಪರಿ ತಸ್ಥುಷಃ ।
ರೋಚಂತೇ ರೋಚನಾ ದಿವಿ || ೧ ||

ಅ || (ಬ್ರಹ್ಮಾದಿ ಸಮಸ್ತ ದೇವತೆಗಳು) ಅರುಷಂ=ಅರುಣ ವರ್ಣವುಳ್ಳ, ತಸ್ಥುಷಃ=ಸ್ಥಾವರಗಳಾದ ಪರ್ವತಗಳ, ಪರಿ=ಸುತ್ತಲೂ, ಚರಂತಂ=ಸಂಚರಿಸುವ, ಬ್ರಧ್ನಂ=(ವೃಧು ವೃದ್ಧೌ) ವೃದ್ಧನಾಗಿದ್ದುದರಿಂದ ಬ್ರಧ್ನ ಶಬ್ದವಾಚ್ಯನಾದ ಸೂರ್ಯನನ್ನು, ಯುಂಜಂತಿ=ಪ್ರವರ್ತಿಸುತ್ತಾರೆ. ಆ (ದೇವತೆಗಳಿಂದಲೇ ಸೂರ್ಯನಿಗಿಂತ ಇತರಗಳಾದ ಚಂದ್ರ ಮೊದಲಾದ) ರೋಚನಾ=ಪ್ರಕಾಶಮಾನಗಳಾದ ಜ್ಯೋತಿಸ್ಸುಗಳು, ದಿವಿ=ಸ್ವರ್ಗಲೋಕದಲ್ಲಿ, ರೋಚಂತೇ=ಪ್ರಕಾಶಿಸುತ್ತವೆ. ಇತರ ವಸ್ತುಗಳನ್ನು ಪ್ರಕಾಶಗೊಳಿಸುತ್ತವೆ. (ವಿಷ್ಣುಪಕ್ಷದಲ್ಲಿ) ಯಾವ ಶ್ರೀಹರಿಯ ಸಾಮರ್ಥ್ಯಗಳು ಅರುಣ ವರ್ಣವುಳ್ಳ, ಸೂರ್ಯನನ್ನು ಪರ್ವತಗಳ ಸುತ್ತಲೂ ಸಂಚರಿಸುವವನನ್ನಾಗಿ ಪ್ರೇರೇಪಿಸುತ್ತವೋ, ಆ ಸಾಮರ್ಥ್ಯ ನಿಮಿತ್ತದಿಂದಲೇ ಪ್ರಕಾಶಮಾನಗಳಾದ ಜ್ಯೋತಿಸ್ಸುಗಳು ಸ್ವರ್ಗಲೋಕದಲ್ಲಿ ಪ್ರಕಾಶಿಸುತ್ತವೆ. ಇತರ ವಸ್ತುಗಳನ್ನು ಪ್ರಕಾಶಗೊಳಿಸುತ್ತವೆ. || ೧ ||

ಭಾ ॥ ಪೌಂಸ್ಯಾನಿ ವಾಸುದೇವಸ್ಯ ಬ್ರಧ್ನಂ ವೃದ್ಧಂ ದಿವಾಕರಂ। ಅರುಣಂ ಚರಂತಂ ಪರಿತೋ ಗಿರೀನ್ಯುಂಜಂತಿ ಸರ್ವದಾ । ತೈರೇವಾನ್ಯಾನಿ ಚಂದ್ರಾದಿರೋಚನಾನಿ ತ್ರಿವಿಷ್ಟಪೇ ॥ ರೋಚಯಂತಿ ॥ ೧ ॥

ಅ ॥ (ಶ್ರೀ ಹರಿ ವಿಷಯದಲ್ಲಿ ವ್ಯಾಖ್ಯಾನ ಮಾಡುತ್ತಾರೆ.) ಶ್ರೀ ವಾಸುದೇವನ ಸಾಮರ್ಥ್ಯಗಳು ಅರುಣ ವರ್ಣವುಳ್ಳ, ಸ್ಥಾವರಗಳಾದ ಮೇರು ಮೊದಲಾದ ಪರ್ವತಗಳ ಸುತ್ತಲೂ ಸಂಚರಿಸುವ, ವೃದ್ಧನಾಗಿರುವುದರಿಂದ ಬ್ರಧ್ನನೆನಿಸಿಕೊಂಡ ಸೂರ್ಯನನ್ನು ಯಾವಾಗಲೂ ಪ್ರೇರೇಪಿಸುತ್ತವೆ. ಆ ವಾಸುದೇವನ ಸಾಮರ್ಥ್ಯನಿಮಿತ್ತ ದಿಂದಲೇ ಸೂರ್ಯನಿಗಿಂತ ಇತರಗಳಾದ ಚಂದ್ರ ಮೊದಲಾದ ಜ್ಯೋತಿಸ್ಸುಗಳು ಸ್ವರ್ಗಲೋಕದಲ್ಲಿ ಪ್ರಕಾಶ ಗೊಳ್ಳುತ್ತವೆ. ಇತರಗಳಾದ ಘಟ ಪಟ ಮೊದಲಾದ ವಸ್ತುಗಳನ್ನು ಪ್ರಕಾಶಗೊಳಿಸುತ್ತವೆ. ॥ ೧ ॥

ಋ ॥ (೫೨) ಯುಂಜಂತ್ಯಸ್ಯ ಕಾಮ್ಯಾ ಹರೀ ವಿಪಕ್ಷಸಾ ರಥೇ ।
ಶೋಣಾ ಧೃಷ್ಣೂ ನೃವಾಹಸಾ ॥ ೨ ॥

ಅ ॥ (ಬ್ರಹ್ಮಾದಿದೇವತೆಗಳು) (ವಾಸುದೇವನ ಸಾಮರ್ಥ್ಯಗಳು) ಅಸ್ಯ=ಇಂದ್ರನ, ರಥೇ=ರಥದಲ್ಲಿ, ಕಾಮ್ಯಾ=ಹೆಚ್ಚು ಗುಣಗಳಿದ್ದುದರಿಂದ ಇಚ್ಛಾವಿಷಯಗಳಾದ, ವಿಪಕ್ಷಸಾ=ಉತ್ತಮ ರೆಕ್ಕೆಗಳಿಂದೊಡಗೂಡಿದ ಹಕ್ಕಿಗಳಂತೆ ಶೀಘ್ರ ಗಮನಗಳುಳ್ಳ, ಶೋಣಾ=ಕುದುರೆಗಳು ಶ್ಯಾಮವರ್ಣಗಳಾದಾಗ್ಯೂ ಇದಿರು ಓಡುವ ಕುದುರೆ ಗಳ ಶಿರಸ್ಸಿನಲ್ಲಿ ರಕ್ತ ಬಣ್ಣ ಸಂಬಂಧವಿದ್ದುದರಿಂದ ಶೋಣೌ ಎನಿಸಿಕೊಂಡ, ಧೃಷ್ಣೂ=ಧೈರ್ಯೋಪೇತಗಳಾದ, ನೃವಾಹಸಾ=ಮನುಷ್ಯರನ್ನುದ್ದೇಶಿಸಿ, ಇಂದ್ರನನ್ನು ಯಾ ವಿಷ್ಣುವನ್ನು ಹೊರುವ, ಅಥವಾ ಇಂದ್ರನನ್ನು ಯಾ ವಿಷ್ಣುವನ್ನು ಭಕ್ತರ ಸಮೀಪಕ್ಕೆ ಹೊರುವ, ಹರೀ=ಇಂದ್ರನ ರಥದ ಇದಿರು ಹೋಗುವ ೨ ಕುದುರೆಗಳನ್ನು ಯುಂಜಂತಿ=(ಯುಜಿರ್ ಯೋಗೇ) ಪ್ರವರ್ತಿಸುತ್ತಾರೆ. ಅಥವಾ ಅಸ್ಯ=ಭಕ್ತರ ಸಮುದಾಯದ ರಥೇ=ದೇಹ ದಲ್ಲಿ ಕಾಮ್ಯಾ=ಇಚ್ಛಾರ್ಹಗಳಾದ, ವಿಪಕ್ಷಸಾ=ಶೀಘ್ರವಾಗಿ ಹೋಗುವ,ಶೋಣಾ=(ಶಶಬ್ದ ಉಪಪದೇ, ಅಣಗತೌ) ಸುಖವನ್ನು ಹೊಂದಿರುವ, (ಅವ್ಯಾಕುಲಗಳಾದ) ಧೃಷ್ಣೂ=ಧೈರ್ಯಯುಕ್ತಗಳಾದ, ನೃವಾಹಸಾ=ಶ್ರೀಹರಿ ಯನ್ನು ಹೊರುವ, ಹರೀ=ವಿಷಯಗಳ ಕಡೇಗೆ ಓಡುವುದರಿಂದ ಹರೀ ಎನ್ನಿಸಿಕೊಂಡ ಮನಸ್ಸು ಬುದ್ಧಿ ಇವುಗ ಳನ್ನು, ಭಕ್ತರ ದೇಹದಲ್ಲಿ ಯುಂಜಂತಿ=ಪ್ರೇರೇಪಿಸುತ್ತಾರೆ.) (ಅಂದರೆ ತನ್ನ ಮನೋಬುದ್ಧಿಗಳನ್ನು ಭಕ್ತರ ದೇಹ ದಲ್ಲಿ ಪ್ರೇರೇಪಿಸುವುದಕ್ಕಾಗಿ ಪ್ರವರ್ತಿಸುತ್ತಾರೆ.) ಅಂದರೆ ಭಕ್ತರನ್ನು ಪ್ರಶಸ್ತ ಮನುಸ್ಸುಳ್ಳವರನ್ನಾಗಿಯೂ ಬುದ್ಧಿಯುಳ್ಳವರನ್ನಾಗಿಯೂ ಮಾಡುತ್ತಾರೆ. ॥ ೨ ॥

ಭಾ ॥ (೧) ಹರೀ ಚಾಸ್ಯ ಮನೋಬುದ್ಧೀ ಸ್ವಶಕ್ತಯಃ । ಯುಂಜಂತ್ಯಧಿಗುಣತ್ವೇನ ಕಾಮ್ಯಾವಶ್ಯವಥಾಪಿ ವಾ । ವಿಶಿಷ್ಟಪಕ್ಷಸಂಯುಕ್ತಾವಿವ ಕ್ಷಿಪ್ರತರೌ ಸದಾ । ರಥೇ ದೇಹೇಽಪಿ ವಾ ದೇವಾಃ ಸ್ವಮನೋಬುದ್ಧಿಮೇವ ಚ । ಅಸ್ಯ ದೇಹೇ ಪ್ರಯುಂಜಂತಿ ಸೂರ್ಯಾದೀನ್ ಸ್ಥಾಪಯಂತಿ ಚ । ಸೂರ್ಯಾದಿ ಸ್ಥಾಪಕತ್ವಂ ಚ ಬ್ರಹ್ಮಾದೀನಾಂ ಭವೇತ್ಸದಾ । ಶೋಣೌ ಚ ಶಮಣೌ ಪ್ರೋಕ್ತೌ ಸುಖಪ್ರಾಪ್ತೌ ಯುತಸ್ಸದಾ। (೨)ಶ್ಯಾಮೌ ಮೂರ್ಧನಿ ಶೋಣೌ ಚ ಶಕ್ರಾಶ್ವಾವಗ್ರಗೌ ಸ್ಮೃತೌ॥ (೩) ಧೃಷ್ಟೌ ನೄನ್ಪ್ರತಿ ತಂ ವೇಶಂ ವಹಂತೌ ತಾವುಭಾವಪಿ ॥ ೨ ॥

ಅ ॥ (೧) ಶ್ರೀ ವಾಸುದೇವನ ಸ್ವರೂಪಭೂತಗಳಾದ ಶಕ್ತಿಗಳು ಶ್ರೀ ವಿಷ್ಣುವಿನ ಅಧೀನಗಳಾದ ವಿಷಯಗಳ ಕಡೇಗೆ ಓಡುವುದರಿಂದ ಹರೀ ಎನಿಸಿಕೊಂಡ ಮನಸ್ಸು ಬುದ್ಧಿಗಳನ್ನು ಭಕ್ತರ ದೇಹದಲ್ಲಿ ಪ್ರೇರೇಪಿಸುತ್ತಾರೆ. (ಅಂದರೆ ಆ ಭಕ್ತರನ್ನು ಪ್ರಶಸ್ತ ಮನಸ್ಸುಳ್ಳವರನ್ನಾಗಿಯೂ ಪ್ರಶಸ್ತ ಬುದ್ಧಿಯುಳ್ಳವರನ್ನಾಗಿಯೂ ಮಾಡುತ್ತಾರೆ.) (ಈ ಋಕ್ಕನ್ನು ಮರುದ್ವಿಷಯಕವನ್ನಾಗಿ ವ್ಯಾಖ್ಯಾನ ಮಾಡುತ್ತಾರೆ.) ಅಥವಾ ದೇವತೆಗಳು ಮರುತ್ ಗಳಾಗಲೀ, ಇಂದ್ರನ ಅಶ್ವಗಳನ್ನು ಇಂದ್ರನದ್ದೇ ಆದ ರಥದಲ್ಲಿ ಪ್ರೇರೇಪಿಸುತ್ತಾರೆ. ಅಥವಾ ದೇವತೆಗಳು ತಮ್ಮ ಮನೋಬುದ್ಧಿಗಳನ್ನು ಈ ಜೀವರ ಸಮುದಾಯದ ದೇಹದಲ್ಲಿ ಪ್ರೇರೇಪಿಸುತ್ತಾರೆ. (ಅಂದರೆ) (ಆ ಜೀವರ ಸಮುದಾಯದ ದೇಹ ಪ್ರೇರಣೆಗಾಗಿ ಪ್ರೇರೇಪಿಸುತ್ತಾರೆ.)(ಮರುದ್ವಿಷಯಕವಾಗಿ ಯುಂಜಂತಿ ಬ್ರಧ್ನಂ ಎಂಬ ಹಿಂದಿನ ಋಕ್ಕಿನದ್ದೂ ತಾತ್ಪರ್ಯ ಹೇಳುತ್ತಾರೆ.)ದೇವತೆಗಳು ಸೂರ್ಯಾದಿ ದೇವತೆಗಳನ್ನು ಸ್ಥಾಪಿಸುತ್ತಾರೆ.ಅಂದರೆ ತತ್ತತ್ಕಾರ್ಯಗಳಲ್ಲಿ ನಿಯಮಿಸುತ್ತಾರೆ.(ಅ ಸೂರ್ಯಾದಿಸ್ಥಾಪಕತ್ವವು ಸರ್ವದೇವತೆಗಳಲ್ಲಿ ಮುಖ್ಯತಃಇಲ್ಲವೆನ್ನುತ್ತಾರೆ) ಬ್ರಹ್ಮರುದ್ರಾದಿ ದೇವತೆಗಳು .ಸದಾ ಸೂರ್ಯಾದಿ ದೇವತೆಗಳನ್ನು ಆವಾವ ಕಾರ್ಯಗಳಲ್ಲಿ ನಿಯೋಜಿಸುತ್ತಾ ಅವರಿಗೆ ನಿಯಾಮಕರಾಗಿರುತ್ತಾರೆ.(ಸ್ಥಾಪಕರಾಗದೆ ಇದ್ದ ಇತರ ದೇವತೆಗಳಲ್ಲಿ ಸ್ಥಾಪಕರಾದ ಬ್ರಹ್ಮಾದಿಗಳ ಸಾಹಚರ್ಯದಿಂದ ಲಕ್ಷಣಯಾ ಸ್ಥಾಪಕ ಶಬ್ದ ಪ್ರಯೋಗವು.) (ಈ ೨ನೇ ಋಕ್ಕಿನಲ್ಲಿ ಕಾಮ್ಯಾದಿ ವಿಶೇಷಣಗಳನ್ನು ಮನಸ್ಸು ಬುದ್ಧಿಗಳಲ್ಲಿಯೂ ಅಶ್ವಗಳಲ್ಲಿಯೂ ಅಧಿಗುಣತ್ವೇನ ಇತ್ಯಾದಿಗಳಿಂದ ಕೂಡಿಸುತ್ತಾರೆ.) ಅಧಿಕ ಗುಣಗಳಿದ್ದುದರಿಂದ ಇಚ್ಛೆಗೆ ವಿಷಯಗಳಾಗಿವೆ.ಅಶ್ವಗಳು, ಅಥವಾ ಮನಸ್ಸು ಬುದ್ಧಿಗಳು. ಉತ್ತಮ ರೆಕ್ಕೆಗಳಿಂದೊಡಗೂಡಿದ ಹಕ್ಕಿಗಳಂತೆಯೇ ಸದಾ ಅತಿವೇಗದಿಂದ ಓಡುವವುಗಳು. ಯಾವ ಕಾರಣದಿಂದ ಸದಾ ಸುಖವನ್ನು ಹೊಂದಿರುತ್ತಾವೋ, ಆದಕಾರಣ ಶಂ=ಸುಖವನ್ನು, ಅಣೌ=ಹೊಂದಿದವುಗಳು, ಅವುಗಳೇ ಶೋಣೌ ಎಂದು ಹೇಳಲ್ಪಟ್ಟವೆ.(ಶ=ಸುಖ. ಉ=ಚೆನ್ನಾಗಿ ಯಾವಾಗಲೂ. ಣ=ಹೊಂದಿದವುಗಳು.) (೨) (ಮನೋಬುದ್ಧಿಗಳಲ್ಲಿ ಹೀಗೆ ವ್ಯಾಖ್ಯಾನವಾದಾಗ್ಯೂ ಅಶ್ವಗಳಲ್ಲಿ ಶೋಣತ್ವವು ಪ್ರಸಿದ್ಧವೇ ಆಗಿದೆ. ಎಂದರೆ) ಇಂದ್ರನ ಕುದುರೆಗಳು ಶ್ಯಾಮವರ್ಣವುಳ್ಳವುಗಳೆಂದೇ ಪ್ರಮಿತಗಳಾಗಿವೆ. (ಆದಕಾರಣ ಶೋಣತ್ವವು ಅಸಂಭಾವಿತವಾದ ಪ್ರಯುಕ್ತ ಅಲ್ಲಿಯೂ ಯೋಗಾರ್ಥವನ್ನು ಅನುಸರಿಸಲೇಬೇಕು.) (ಪ್ರಕಾರಾಂತರದಿಂದ ಶೋಣಶಬ್ದವನ್ನು ಅಶ್ವಗಳಲ್ಲಿ ವ್ಯಾಖ್ಯಾನ ಮಾಡುತ್ತಾರೆ.) ಶೋಣಗುಣವು ಉತ್ತಮಾಂಗವಾದ ಶಿರಸ್ಸಿನಲ್ಲಿದ್ದ ಪ್ರಯುಕ್ತ ಸರ್ವಾಂಗಗಳಿಂದ ಕೂಡಿದ ಅಶ್ವಗಳೂ, ಲಕ್ಷಣಯಾ ಶೋಣಗಳೆನಿಸುತ್ತವೆ. (ಇಂದ್ರನಿಗೆ ೧೦೦೦ ಕುದುರೆಗಳಿದ್ದ ಪ್ರಯುಕ್ತ ಎರಡೇ ಅಶ್ವಗಳನ್ನು ತೆಗೆದುಕೊಳ್ಳಲು ಕಾರಣವೇನಂದರೆ—) (ಸಹಸ್ರ ಕುದುರೆಗಳಲ್ಲಿ ಎರಡೇ ಕುದುರೆಗಳು) ಇದಿರು ಓಡುವುದರಿಂದ (ಅವುಗಳೇ ಪ್ರಧಾನಗಳಾಗಿರುವ ಪ್ರಯುಕ್ತ ಆ ಎರಡನ್ನೇ ತೆಗೆದುಕೊಂಡದ್ದು.) (೩) ಧಾರ್ಷ್ಟ್ಯ (ಧೈರ್ಯ)ವುಳ್ಳವುಗಳು. ಮನುಷ್ಯರನ್ನುದ್ದೇಶಿಸಿ ಇಂದ್ರನನ್ನು ಯಾ ವಿಷ್ಣುವನ್ನು ಹೊರುವವುಗಳು. ಅಥವಾ ನಿಯಾಮಕನಾದ ಇಂದ್ರನನ್ನು ಶ್ರೀವಿಷ್ಣುವನ್ನಾಗಲೀ ಭಕ್ತರ ಸಮೀಪಕ್ಕೆ ಹೊರುವವುಗಳು. ಮನೋಬುದ್ಧಿಗಳು ಅಶ್ವಗಳೂ ಆ ಎರಡೂ ಕೂಡ ಹೀಗೆ ಇರುವವುಗಳು. ॥ ೨ ॥

ಋ ॥ (೫೩) ಕೇತುಂ ಕೃಣ್ವನ್ನಕೇತವೇ ಪೇಶೋ ಮರ್ಯಾ ಅಪೇಶಸೇ ।

ಸಮುಷದ್ಭಿರಜಾಯಥಾಃ ॥ ೩ ॥

ಅ ॥ (ಎಲೈ ಶ್ರೀಹರಿಯೇ ನೀನು) ಅಕೇತವೇ=ಅಜ್ಞನಿಗೆ, ಕೇತುಂ=ಸಜ್ಜ್ಞಾನವನ್ನು, ಕೃಣ್ವನ್=ಮಾಡುತ್ತಾ, ಅಪೇಶಸೇ=ಸುವರ್ಣವಿಲ್ಲದವನಿಗೆ, ಪೇಶಃ=ಸುವರ್ಣವನ್ನು ಕೃಣ್ವನ್ ಮಾಡುತ್ತಾ, ಉಷದ್ಭಿಃ=ವಶಕಾಂತೌ, ಚನ್ನಾಗಿ ಪ್ರಕಾಶಮಾನಗಳಾದ ಸಾಮರ್ಥ್ಯಾತಿಶಯಗಳಿಂದ ಕೂಡಿ, ಅಜಾಯಥಾಃ=ಯಜ್ಞದಲ್ಲಿ ಅಭಿವ್ಯಕ್ತನಾಗಿರುತ್ತಿ. (ನೀನು ಮಾತ್ರವಲ್ಲ. ಮತ್ತೆ) ಮರ್ಯಾಃ=ದೇಹಹಾನಿ ರೂಪಮರಣವುಳ್ಳ ದೇವತೆ

ಗಳೂ ಕೂಡ ಅಜ್ಞರಿಗೆ ಸಜ್ಜ್ಞಾನ ಕೊಡಲಿಕ್ಕೂ ಸುವರ್ಣವಿಲ್ಲದವರಿಗೆ ಸುವರ್ಣ ಕೊಡಲಿಕ್ಕಾಗಿಯೂ ಯಜ್ಞದಲ್ಲಿ ಅಭಿವ್ಯಕ್ತರಾದರು. ॥ ೩ ॥

ಭಾ ॥ ಅಜ್ಞಾಯ ಕುರ್ವನ್ ಸಜ್ಜ್ಞಾನಂ ಹೇಮಾಹೇಮಾಯ ಚೇಶ್ವರ। ಉಷದ್ಭಿಃ ಸಂಪ್ರಕಾಶದ್ಭಿಃ ಶಕ್ತಿಭಿರ್ವ್ಯಕ್ತತಾಮಗಾಃ । ಮರ್ಯಾ ಮರಣವಂತೋऽಪಿ ದೇವಾ ಏವಂ ॥ ೩ ॥

ಅ ॥ ಎಲೋ ಇಂದ್ರನೇ, ನೀನು ಅಜ್ಞರಿಗೆ ಸಜ್ಜ್ಞಾನವನ್ನೂ ಸುವರ್ಣವಿಲ್ಲದವರಿಗೆ ಸುವರ್ಣವನ್ನೂ ಮಾಡುತ್ತಾ (ಕಾಶೃದೀಪ್ತೌ) ಚೆನ್ನಾಗಿ ಪ್ರಕಾಶಿಸಿಕೊಂಡಿರತಕ್ಕ ಸಾಮರ್ಥ್ಯಗಳಿಂದ ಅಭಿವ್ಯಕ್ತಿಯನ್ನು ಯಜ್ಞದಲ್ಲಿ ಹೊಂದಿರುತ್ತಿ. (ನೀನು ಮಾತ್ರವಲ್ಲ. ಮತ್ತೆ) ಮರಣವುಳ್ಳ ದೇವತೆಗಳೂ ಕೂಡ ಹೀಗೆಯೇ ಯಜ್ಞದಲ್ಲಿ ಅಭಿವ್ಯಕ್ತಿಯನ್ನು ಹೊಂದಿರುತ್ತಾರೆ ॥ ೩ ॥

ಋ॥ (೫೪) ಆದಹ ಸ್ವಧಾಮನು ಪುನರ್ಗರ್ಭತ್ವಮೇರಿರೇ। ದಧಾನಾ ನಾಮ ಯಜ್ಞಿಯಂ ॥ ॥ ೪ ॥

ಅ ॥ ಯಜ್ಞಿಯಂ = ಯಜ್ಞದಲ್ಲಿ ವಾಚ್ಯವಾದ, (ಯಾಗದಲ್ಲಿ ಉಚ್ಚಾರಣ ವಿಷಯವಾಗಿ ಇರತಕ್ಕ) ನಾಮ=ಹೆಸರನ್ನು ದಧಾನಾಃ = ಧರಿಸಿರುವ, ಶ್ರೀಹರಿಯ ಶಕ್ತಿಗಳು, ಅಥವಾ ದೇವತೆಗಳು, ಆತ್ = ಅಕಾರ ವಾಚ್ಯನಾದ ಶ್ರೀವಿಷ್ಣುವಿನ ಇಚ್ಛೆಯಿಂದ, ಅಹ = ಯಜ್ಞದಲ್ಲಿ ಅಭಿವ್ಯಕ್ತಿಯಾದ ಮೇಲೆಯೇ ಸ್ವಧಾಂ (ಸ್ವಂ-ಆತ್ಮಾನಂ, ದಧಾತಿ = ಪುಷ್ಣಾತೀತಿ ಸ್ವಧಾಂ (ಅನು = ಸುಖದಿಂದಲೇ, (ಭಯದಿಂದ ಅಲ್ಲ) ಪುನಃ = ತಿರುಗಿ, ಗರ್ಭತ್ವಂ=ಗೂಢತ್ವವನ್ನು, ಏರಿರೇ=(ಆಙ್‌ಪೂರ್ವಾತ್ ಈರಗತೌ, ಕಂಪನೇಚ) ಹೊಂದಿದರು ॥ ೪ ॥

ಭಾ॥ ಹರೇರ್ವಶಾತ್ । ತದೈವ ಸುಖಮನ್ವೇವ ಪುನರ್ಗೂಢತ್ವಮಾಪಿರೇ । ಸ್ವೇಚ್ಛಯೈವ ಪರೇಶಸ್ಯ ಶಕ್ತಯೋ ದೇವತಾ ಅಪಿ ॥ ಯಜ್ಞೇ ವಾಚ್ಯಂ ದಧಾನಾಶ್ಚ ನಾಮ॥ ॥ ೪ ॥

ಅ ॥ ಶ್ರೀಹರಿಯ ಅಧೀನವಾಗಿ, ಯಜ್ಞದಲ್ಲಿ ಉಚ್ಚಾರಣ ವಿಷಯವಾಗಿರತಕ್ಕ, ಹೆಸರನ್ನು ಧರಿಸಿರುವ ಶ್ರೀಹರಿಯ ಶಕ್ತಿಗಳು, ದೇವತೆಗಳೂ ಕೂಡ ಅಕಾರವಾಚ್ಯನಾದ ಶ್ರೀವಿಷ್ಣುವಿನ ನಿಮಿತ್ತದಿಂದ ಸ್ವೇಚ್ಛೆಯಿಂದಲೇ ಯಜ್ಞದಲ್ಲಿ ಅಭಿವ್ಯಕ್ತಿಯಾದ ಮೇಲೆಯೇ ಸುಖದಿಂದಲೇ (ಭಯದಿಂದ ಅಲ್ಲ) ಪುನಃ ಗೂಢತ್ವವನ್ನು ಹೊಂದಿರುತ್ತಾರೆ. ॥ ೫ ॥

ಋ॥ (೫೫) ವೀಳು ಚಿದಾರುಜತ್ನುಭಿರ್ಗುಹಾ ಚಿದಿಂದ್ರ ವಹ್ನಿಭಿಃ। ಅವಿಂದ ಉಸ್ರಿಯಾ ಅನು ॥ ॥ ೫ ॥ ೧೧ ॥

ಅ ॥ ಎಲೋ ಇಂದ್ರನೇ, ಗುಹಾಚಿತ್=ಗುಹೆಯಲ್ಲಿದ್ದವನಾದಾಗ್ಯೂ, (ಜನರಿಗೆ ಗೋಪ್ಯನಾಗಿದ್ದವನಾದಾಗ್ಯೂ ನೀನು, ವೀಳು=ದೃಢವಾಗಿ, ಚಿತ್=ದೃಢವಾದಾಗ್ಯೂ, (ಬ್ರಹ್ಮಾಂಡಾದಿಗಳನ್ನು) ಆರುಜತ್ನುಭಿಃ=(ರುಜೋ

ಭಂಗೇ) ಸಂಹರಿಸುವ, ವಹ್ನಿಭಿಃ=ಲೋಕವನ್ನು ಹೊರುವ ತನ್ನ ಸಾಮರ್ಥ್ಯಗಳಿಂದ ಕೂಡಿಕೊಂಡು, ಉಸ್ರಿಯಾಃ= ನಾನಾ ವಿಧ ಪ್ರಾಕಟ್ಯವನ್ನು, ಅನು=ಸ್ವೇಚ್ಛಾನುಸಾರವಾಗಿ, ಅವಿಂದಃ=(ವಿದ್ಲೃಲಾಭೇ) ಹೊಂದಿರುತ್ತಿ. (ಸ್ವಪ್ರಕಾಶನಾಗಿರುತ್ತಿ) ಅಥವಾ ವೀಳುಚಿತ್=ದೃಢವಾದಾಗ್ಯೂ, ಬ್ರಹ್ಮಾಂಡಾದಿಗಳನ್ನು, ಆರುಜನ್ನುಭಿಃ= ಸಂಹರಿಸುವ, ವಹ್ನಿಭಿಃ=ಲೋಕಗಳನ್ನು ಹೊರುತ್ತಿರುವ ದೇವತೆಗಳಿಂದ ಕೂಡಿಕೊಂಡು ನೀನು, ಉಸ್ರಿಯಾಃ= ನಾನಾ ವಿಧಪ್ರಾಕಟ್ಯಗಳನ್ನು, ಅನು=ಅನುಕೂಲವಾಗಿ, ಅವಿಂದಃ=ಹೊಂದಿರುತ್ತಿ. ॥ ೫ ॥

ಭಾ ॥ ವೀಳು ದೃಢಂ ಹ್ಯಪಿ । ಆರುಜದ್ಭಿಃ ಸ್ವಸಾಮರ್ಥ್ಯೈಃ ಗುಹಾಯಾಂ ಸಂಸ್ಥಿತೋಽ ಪಿಸನ್। ವಹದ್ಭಿರಖಿಲಂ ಲೋಕಂ ಪ್ರಕಾಶತ್ವಾನಿ ಲಬ್ಧವಾನ್ । ದೇವೈರ್ವೈತಾದೃಶೈಃ ಸಾಕಮಾನುಕೂಲ್ಯೇನ ಲಬ್ಧವಾನ್ ॥ ೫ ॥ ೧೧ ॥

ಅ ॥ ಎಲೋ ಇಂದ್ರನೇ ಲೋಕಸ್ಥ ಜನರಿಗೆ ಗೋಪ್ಯನಾಗಿದ್ದವನಾದಾಗ್ಯೂ ನೀನು ದೃಢನಾದಾಗ್ಯೂ ಬ್ರಹ್ಮಾಂಡಾದಿಗಳನ್ನು ಸಂಹರಿಸುವ, ಸಮಸ್ತ ಲೋಕಗಳನ್ನು ಹೊರುತ್ತಿರುವ ತನ್ನ ಸಾಮರ್ಥ್ಯಗಳಿಂದೊಡಗೂಡಿ ನಾನಾ ವಿಧ ಪ್ರಾಕಟ್ಯವನ್ನು ಸ್ವೇಚ್ಛಾನುಸಾರವಾಗಿ ಹೊಂದಿರುತ್ತಿ. (ಸ್ವಪ್ರಕಾಶನಾಗಿರುತ್ತಿ.) ಅಥವಾ ಹಿಂದೆ ಹೇಳಿದ ಗುಣಗಳಿಂದ ಕೂಡಿದ ದೇವತೆಗಳಿಂದೊಡಗೂಡಿ ಅನುಕೂಲವಾಗಿ ಹೊಂದಿರುತ್ತಿ. ॥ ೫ ॥ ೧೧ ॥

ಋ ॥ (೫೬) ದೇವಯಂತೋ ಯಥಾ ಮತಿಮಚ್ಛಾ ವಿದದ್ವಸುಂ ಗಿರಃ । ಮಹಾಮನೂಷತ ಶ್ರುತಂ ॥ ೬ ॥

ಅ ॥ ಅಚ್ಛ ದೇವಯಂತಃ=(ದಿವ್‌ಧಾತುವು ದ್ಯುತ್ಯರ್ಥಕವು.) ಚೆನ್ನಾಗಿ ಪ್ರಕಾಶಿಸಿಕೊಂಡಿರುವ, ಗಿರಃ= (ಗೃನಿಗರಣೇ) ವೇದರೂಪಗಳಾದ ವಚನಗಳು, ಅಥವಾ ವೇದರೂಪವಾದ ವಚನವನ್ನುಚ್ಚರಿಸುವ ಪುರುಷರು, ಯಥಾ=ಯಥಾಸ್ಥಿತವಾಗಿರುವ (ನಿರ್ವಿಕಾರನಾದ) ಮತಿಂ=ಮತಿರೂಪನಾದ, ವಿದದ್ವಸುಂ=ದ್ರವ್ಯವನ್ನು ಹೊಂದಿರುವ, ಮಹಾಂ=ಶ್ರೇಷ್ಠನಾದ, ಶ್ರುತಂ=ಶ್ರುತ್ಯಾದಿಗಳಲ್ಲಿ ಪ್ರಸಿದ್ಧನಾದ, ಈ ಇಂದ್ರನನ್ನು ಅನೂಷತ= (ಣು ಸ್ತುತೌ) ಸ್ತೋತ್ರ ಮಾಡಿದರು. ॥ ೬ ॥

ಭಾ ॥ ಸಮ್ಯಕ್ ಪ್ರದ್ಯೋತಯಂತೋಽಮುಂ ಮತಿರೂಪಂ ಯಥಾಸ್ಥಿತಂ । ವಿದದ್ವಿತ್ತಂ ಮಹಾಂತಂ ಚ ವಿಶ್ರುತಂ ಸುಗಿರೋಽಸ್ತುವನ್ ॥ ೬ ॥

ಅ ॥ ಚೆನ್ನಾಗಿ ಪ್ರಕಾಶಿಸಿಕೊಂಡಿರುವ ವೇದರೂಪ ವಚನಗಳು. ಅಥವಾ ವೇದಗಳನ್ನುಚ್ಚರಿಸುವ ಪುರುಷರು, ನಿರ್ವಿಕಾರನೂ, ಮತಿರೂಪನೂ, ದ್ರವ್ಯವನ್ನು ಹೊಂದಿರುವವನೂ, ಶ್ರೇಷ್ಠನೂ, ಪ್ರಸಿದ್ಧನೂ ಆದ ಇಂದ್ರನನ್ನು ಸ್ತುತಿಸಿದರು ॥ ೬ ॥

ಋ ॥ (೫೭) ಇಂದ್ರೇಣ ಸಂ ಹಿ ದೃಕ್ಷಸೇ ಸಂಜಗ್ಮಾನೋ ಅಬಿಭ್ಯುಷಾ। ಮಂದೂ ಸಮಾನವರ್ಚಸಾ ॥ ೭ ॥

ಅ ॥ ಮಂದೂ=ಮುಖಸ್ವರೂಪರಾದುದರಿಂದ ಸುಖವನ್ನು ಕೊಡುವ ಶಂಕರ ಪುರಂದರರು, ಸುಖಸ್ವರೂಪ ರಾದುದರಿಂದ ಶ್ರೀಭೂಮಿಗಳಾಗಲೀ, ಸಂದೃಕ್ಷಸೇ=ಭಕ್ತಿಪೂರ್ವಕವಾಗಿ ಪರಮಾತ್ಮನನ್ನು ನೋಡುವುದಕ್ಕಾಗಿ,

ಅಬಿಭ್ಯುಷಾ=(ಞಾಭಿಭಯೇ) ನಿರ್ಭಯನಾದ, ಸಮಾನವರ್ಚಸಾ=ನಿರ್ವಿಕಾರ ತೇಜಸ್ಸುಳ್ಳ, ಇಂದ್ರೇಣ=ಪರಮಾತ್ಮನಿಂದ, ಸಂಜಗ್ಮಾನಃ=(ಗಮ್ಲ್ಟೃ ಗತೌ) ಸಂಗತರಾದರು. ಹಿ=ಪ್ರಸಿದ್ಧವು. (ಇಂದ್ರನ ವಿಷಯದಲ್ಲಿ ಆದರೂ) ಮಂದೂ=ಸುಖಕ್ಕೆ ಕಾರಣರಾದುದರಿಂದ ದ್ಯಾವಾ ಪೃಥಿವಿಗಳು, (ಎಂದು ಇಟ್ಟುಕೊಳ್ಳಬೇಕು.) ॥ ೭ ॥

ಭಾ ॥ ತಸ್ಯ ಸಂದರ್ಶನಾಯೈವ ಸಂಗತಸ್ತೇನ ಶಂಕರಃ । ಮುಖಾತ್ಮಾ ಪುರುಹೂತೋ ವಾ ಶ್ರೀಭೂಮೀ ಚ ಸುಖಾತ್ಮಿಕೇ ॥ ೭ ॥

ಅ ॥ ಮುಖಸ್ವರೂಪಿಯಾದ ಶಂಕರನೂ, ದೇವೇಂದ್ರನೂ ಸುಖಸ್ವರೂಪಗಳಾದ ಶ್ರೀ ಭೂಮಿಗಳಾಗಲೀ, ಶ್ರೀ ಪರಮಾತ್ಮನನ್ನು ನೋಡುವುದಕ್ಕಾಗಿಯೇ ಆ ಪರಮಾತ್ಮನಿಂದ ಸಂಗತರಾದರು. ॥ ೭ ॥

ಋ ॥ (೫೮) ಅನವದ್ಯೈರಭಿದ್ಯುಭಿರ್ಮಖಃ ಸಹಸ್ವದರ್ಚತಿ ।

ಗಣೈರಿಂದ್ರಸ್ಯ ಕಾಮ್ಯೈಃ ॥ ॥ ೮ ॥

ಅ ॥ ಮಖಃ=ಯಜ್ಞಾಭಿಮಾನಿಯಾದ ದೇವೇಂದ್ರನು ಅನವದ್ಯೈಃ=ನಿರ್ದೋಷರಾದ, ಅಭಿದ್ಯುಭಿಃ=ಮಹಾಜ್ಞಾನಿಗಳಾದ, ಇಂದ್ರಸ್ಯ=ಪರಮೇಶ್ವರನಿಗೆ ಕಾಮ್ಯೈಃ=ಪ್ರಿಯರಾದ, ಗಣೈಃ=ದೇವತೆಗಳ ಸಮೂಹಗಳಿಂದೊಡಗೂಡಿ, ಸಹಸ್ವತ್=ವಾಯುವಿನಂತೆ,) ವಾಯುವು ಹೇಗೆ ಆಗುತ್ತಾನೋ ಹಾಗೆ, (ಅಂದರೆ ವಾಯುವಿನಿಂದ ಕೂಡಿಕೊಂಡು.) ಇಂದ್ರಸ್ಯ=ಶ್ರೀ ಪರಮಾತ್ಮನನ್ನು ಅರ್ಚತಿ=ಪೂಜಿಸುತ್ತಿರುತ್ತಾನೆ. ಅಂದರೆ ವಾಯುವು, ಇಂದ್ರನು, ದೇವತೆಗಳೂ ಕೂಡ, ಮಹಾಜ್ಞಾನಿಗಳಾಗಿರುವುದರಿಂದಲೂ, ನಿರ್ದುಷ್ಟರಾದುದರಿಂದಲೂ, ಮಖಾಭಿಮಾನಿಗಳಾಗಿರುವುದರಿಂದಲೂ, ಅತಿಪ್ರಿಯರಾದುದರಿಂದಲೂ ಶ್ರೀ ಪರಮೇಶ್ವರನನ್ನು ಪೂಜಿಸುತ್ತಿರುತ್ತಾರೆ. (ಪ್ರಸಿದ್ಧನಾದ ಇಂದ್ರನ ವಿಷಯದಲ್ಲಿಯಾದರೂ ಇಂದ್ರನಿಗೆ ಪ್ರಿಯರಾದ ಋತ್ವಿಜರ ಸಮೂಹಗಳಿಂದ ಮಾಡಲ್ಪಡತಕ್ಕಯಾಗವು ಬಲಿಷ್ಠನಾದ ಇಂದ್ರನನ್ನು ಅತಿಶಯವಾಗಿ ಪೂಜಿಸುತ್ತದೆ.॥) ಯಜಮಾನನು ಕರ್ತನು ಯಾಗವು ಕರಣವಾದಾಗ್ಯೂ ಔಪಚಾರಿಕವಾಗಿ ಕರ್ತೃತ್ವವ್ಯಪದೇಶವು) ॥ ೮ ॥

ಭಾ ॥ ಅನವದ್ಯೈರ್ಮಹಾಜ್ಞಾನೈಃ ಪ್ರಿಯೈರ್ದೇವಗಣೈಸ್ಸಹ । ವಾಯುನಾ ಚ ಸಹಾರ್ಚಂತಿ ಸುಧೀತ್ವಾತ್ಪರಮೇಶ್ವರಂ ॥ ೮ ॥

ಅ ॥ ವಾಯು ಇಂದ್ರ ಸಮಸ್ತ ದೇವತೆಗಳೂ ಕೂಡ ದೋಷವಿಲ್ಲದವರೂ ಮಹಾಜ್ಞಾನಿಗಳೂ ಶ್ರೀ ಹರಿಗೆ ಪ್ರಿಯರೂ ಆದ ದೇವ ಸಮೂಹಗಳಿಂದಲೂ ವಾಯುದೇವರಿಂದಲೂ ಕೂಡಿಕೊಂಡು ಮಹಾಜ್ಞಾನಿಗಳಾದುದರಿಂದ ಶ್ರೀ ಪರಮೇಶ್ವರನನ್ನು ಪೂಜಿಸುತ್ತಾರೆ.॥ (ವಾಯು, ಇಂದ್ರ ಸಮಸ್ತ ದೇವತೆಗಳೂ ಕೂಡ ಶ್ರೀ ಹರಿಯನ್ನು ಪೂಜಿಸುತ್ತಿರುತ್ತಾರೆ.) ॥ ೮ ॥

ಋ ॥ (೫೯) ಅತಃ ಪರಿಜ್ಮನ್ನಾಗಹಿ ದಿವೋ ವಾ ರೋಚನಾದಧಿ।

ಸಮಸ್ಮಿನ್ನೃಂಜತೇ ಗಿರಃ ॥ ೯ ॥

ಅ ॥ ಪರಿಜ್ಮನ್=(ಜು ಗತೌ) (ಪರಿತಃ ಸರ್ವತ್ರಜವತೇ ಗಚ್ಛತಿ,) ಭೂಮಿಯ ಸುತ್ತು ಮುತ್ತಲೂ ಇರುವವನೇ, (ಸರ್ವಗತನೇ,) ಅತಃ= ಸರ್ವಯಜ್ಞಭೋಕ್ತೃತ್ವವಿದ್ಧಪ್ರಯುಕ್ತವೇ ದಿವಃ= ಸ್ವರ್ಗಲೋಕದಿಂದ, ರೋಚನಾತ್ ವಾ=(ರುಚದೀಪ್ತೌ) ಪ್ರಕಾಶಮಾನವಾದ ಸೂರ್ಯ ಮಂಡಲದಿಂದಲಾಗಲೀ, ಅಧಿ=ನಮ್ಮ ಪೂಜೆಯನ್ನು ಅಧಿಕರಿಸಿ, ಇಹ=ಯಜ್ಞ ಸ್ಥಾನವನ್ನು ಕುರಿತು, ಆಗಹಿ=ಬಾ. ಅಸ್ಮಿನ್=ಈ ಯಜ್ಞ ಸ್ಥಾನದಲ್ಲಿ ಗಿರಃ=ಸ್ತುತಿರೂಪಗಳಾದ ವಚನಗಳು, ಸಮ್=ಪರಮ ಮುಖ್ಯ ವೃತ್ತಿಯಿಂದ, ತ್ವಾಂ=ನಿನ್ನನ್ನು, ಋಂಜತೇ=ಹೊಂದುತ್ತವೆ. ಸ್ತುತಿಸುತ್ತವೆ. (ಆದುದರಿಂದಲೂ ಬರಬೇಕು.) ॥ ೯ ॥

(ಭಾ) (೧)ಅತೋ ಹೇತೋರಿಹಾಯಾಹಿ ದಿವೋ ವಾ ಸೂರ್ಯಮಂಡಲಾತ್ । ಪರಿಜ್ಮನ್ ಸರ್ವಗಾಸ್ಮಾಕಮಧಿಕೃತ್ಯ ಸಮರ್ಹಣಂ ॥ (೨) ಅಸ್ಮಿನ್ ಗಿರಃ ಪ್ರಾಪ್ನುವಂತಿ ಸಮ್ಯಕ್ ಪರಮ ಮುಖ್ಯತಃ ॥ (೩) ಯುಂಜಂತೀತ್ಯತ್ರ ಬಾಹುಲ್ಯಾದ್ದೇವಯಂತೋ ತ ಇತ್ಯಪಿ। ಬಾಹುಲ್ಯಾದ್ದ್ವ (ದ್ವಾ)ಷ್ಟಿತೋ ಗೀರ್ಭಿರ್ವಿನಾ್ಯರ್ಥೋ ನಾನ್ಯ ಇಷ್ಯತೇ । ೯॥

ಅ ॥ (೧) ಭೂಮಿಯ ಸುತ್ತಲೂ ಇರುವವನೇ ಅಂದರೆ ಸರ್ವತ್ರವ್ಯಾಪ್ತನೇ, ಸಮಸ್ತ ಯಜ್ಞಗಳನ್ನು ಭೋಗಿಸುವುದರಿಂದಲೇ ಸ್ವರ್ಗದಿಂದಲಾಗಲೀ ಸೂರ್ಯ ಮಂಡಲದಿಂದಲಾಗಲೀ, ನಮ್ಮ ಪೂಜೆಯನ್ನು ಅಧಿಕರಿಸಿ (ಉದ್ದೇಶಿಸಿ) ಈ ಯಜ್ಞ ಸ್ಥಾನಕ್ಕೆ ಬಾ. (೨) ಈ ಯಜ್ಞ ಸ್ಥಾನದಲ್ಲಿ ಸ್ತುತಿ ರೂಪಗಳಾದ ವೇದವಚನಗಳು ಚೆನ್ನಾಗಿ ಅಂದರೆ ಪರಮ ಮುಖ್ಯವೃತ್ತಿಯಿಂದ ನಿನ್ನನ್ನು ಹೊಂದುತ್ತವೆ. ಸ್ತುತಿಸುತ್ತವೆ. ಆದುದರಿಂದಲೂ ಬಾ. (೩) (ಈ ಸೂಕ್ತದಲ್ಲಿ ಪ್ರಾಥಮಿಕ ೩ ಋಕ್ಕುಗಳಿಗೆ ಕೇವಲ ಇಂದ್ರನು ದೇವತೆಯು, **ಆದಹ** ಮೊದಲಾದ ೬ ಋಕ್ಕುಗಳಿಗೆ ಮರುತ್ ದೇವತೆಯು. ಆ ೬ ಋಕ್ಕುಗಳಲ್ಲಿಯೂ **ವೀಳುಚಿತ್ ಇಂದ್ರೇಣ** ಎಂಬ ೨ ಋಕ್ಕುಗಳಿಗೆ ಇಂದ್ರನೂ ದೇವತೆಯು. ೧೦ನೇ ಋಕ್ಕಿಗೆ ಇಂದ್ರನು ದೇವತೆಯು, ಎಂದು ಅನುಕ್ರಮಣಿಕಾಕಾರರು ಹೇಳುತ್ತಾರೆ. ಅದರಲ್ಲಿ ೧೦ನೇ ಋಕ್ಕಿನಲ್ಲಿ ಬಹುವಚನಾದಿ ಲಿಂಗಗಳಿಲ್ಲದಿರುವ ಪ್ರಯುಕ್ತ ಇಂದ್ರನು ಮಾತ್ರ ವಿಷಯನೆಂದು ನಾವೂ ಅಂಗೀಕರಿಸಿರುವುದರಿಂದ ೧೦ ನೇ ಋಕ್ಕಿನಲ್ಲಿ ವಿಪ್ರತಿಪತ್ತಿಯಿಲ್ಲದಿರುವ ಕಾರಣ ಅದನ್ನು ವ್ಯಾಖ್ಯಾನ ಮಾಡುವುದಕ್ಕಿಂತ ಮೊದಲೇ ಅನುಕ್ರಮಣಿಕೆಯಲ್ಲಿ ಹೇಳಿದುದನ್ನು ನಿರಾಕರಿಸುತ್ತಾರೆ.) (1) **ಯುಂಜಂತಿ ಬ್ರಧ್ನಂ** (2) **ಯುಂಜಂತ್ಯಸ್ಯ** ಎಂಬ ೨ ಋಕ್ಕುಗಳಲ್ಲಿ ಬಹುವಚನವು ಶ್ರುತವಾದ ಪ್ರಯುಕ್ತ ಸಮಸ್ತ ದೇವತೆಗಳಿಂದ ಭಿನ್ನನಾದ ಕೇವಲ ಇಂದ್ರನೆನ್ನುವ ಅರ್ಥವನ್ನು ಪ್ರಾಮಾಣಿಕರು ಅಂಗೀಕರಿಸುವುದಿಲ್ಲ. ಮತ್ತೆ ಮರುತ್ ಶಬ್ದಿತರಾದ ಸಮಸ್ತ ಬ್ರಹ್ಮಾದಿ ದೇವತೆಗಳು. (ಯಥಾಕಥಂಚಿತ್ ಕೇವಲ ಇಂದ್ರನೆಂದು ವ್ಯಾಖ್ಯಾನ ಮಾಡಿದರೆ, ಬ್ರಧ್ನಂ=ಇಂದ್ರನನ್ನೂ, ಪರಿತಸ್ಥುಷಃ= ಸುತ್ತಲೂ ಇರುವ ಸೇವಕರಾದ ಬ್ರಹ್ಮಾದಿ ದೇವಾದಿಗಳು, ಯುಂಜಂತಿ= ಅನುಸರಿಸಿ ಸಂಚರಿಸುತ್ತಾರೆ, ಎಂದು ವ್ಯಾಖ್ಯಾನ ಮಾಡಿದರೆ **ಭಾಸ್ಕರಾಹಸ್ಕರ ಬ್ರಧ್ನ** ಎನ್ನುವ ಕೋಶದಿಂದ ಬ್ರಧ್ನ ಶಬ್ದಕ್ಕೆ ಆದಿತ್ಯನಲ್ಲಿರುವ ರೂಢಿಯು ವಿರುದ್ಧವಾಗುವುದು. **ಯುಂಜಂತಿ ಬ್ರಧ್ನಮಿತ್ಯಾಹ ಅಸೌವಾ ಆದಿತ್ಯೋ ಬ್ರಧ್ನಃ** ಎಂದು ಬ್ರಾಹ್ಮಣದಲ್ಲಿ ಬ್ರಧ್ನ ಶಬ್ದಕ್ಕೆ ಆದಿತ್ಯನೆಂದು ಅರ್ಥಮಾಡಿರುವುದರಿಂದ ಆ ಬ್ರಾಹ್ಮಣವಾಕ್ಯದಿಂದಲೂ ವಿರೋಧವು ಬರುವುದು. ಮತ್ತು **ಕೇತುಂ ಕೃಣ್ವನ್** ಎಂಬ ಋಕ್ಕಿನಲ್ಲಿ **ಕೃಣ್ವನ್** ಇತ್ಯಾದ್ಯೇಕವಚನವೂ, **ಮರ್ಯಾಃ** ಎಂದು ಬಹುವಚನವೂ ಶ್ರುತವಾದ ಪ್ರಯುಕ್ತ ದೇವತೆಗಳಿಂದ ಭಿನ್ನವಾದ ಕೇವಲ ಇಂದ್ರ ರೂಪವಾದ ಅರ್ಥವು ಅಂಗೀಕರಿಸಲಾಗುವುದಿಲ್ಲ. **ಆದಹ** ಎನ್ನುವ ೪ನೇ ಋಕ್ಕಿನಲ್ಲಿ ಮರುತ್ ದೇವತೆಯೆಂದೂ, **ವೀಳುಚಿತ್** ಎಂಬ ೫ನೇ ಋಕ್ಕಿನಲ್ಲಿ ಇಂದ್ರ, ಮರುತ್‌ಗಳು ದೇವತೆಗಳೆಂದು ಇಬ್ಬರೂ ಅಂಗೀಕರಿಸಿರುವುದರಿಂದ ಅವುಗಳಲ್ಲಿ ವಿಪ್ರತಿಪತ್ತಿಯಿಲ್ಲ.) (**ದೇವಯಂತಃ**= ಮೊದಲಾದ ೪ಋಕ್ಕುಗಳಲ್ಲಿ ಪ್ರತಿಪಾದ್ಯವಾದ ವಸ್ತುವಿನಲ್ಲಿ) ಬಹುವಚನವು ಶ್ರುತವಾಗದಿರುವುದರಿಂದ ಇಂದ್ರನೆಂಬಅರ್ಥಕ್ಕಿಂತ ಬೇರೆಯಾದ ದೇವತೆಗಳೆಂಬ ಅರ್ಥವನ್ನು ಅಂಗೀ

ಕರಿಸಲಾಗುವುದಿಲ್ಲ. (ಇಂದ್ರ ಶಬ್ದಕ್ಕೆ ರೂಢಾರ್ಥವನ್ನು ಬಿಟ್ಟು ಅಧ್ಯಾಹಾರ ಮಾಡಿ ಕಥಂಚಿತ್ ಯೋಜನಾ ಮಾಡುವುದು ಅತಿಕ್ಲಿಷ್ಟವಾಗುವುದು.) (**ದೇವಯಂತಃ** ಎಂಬ ೬ನೇ ಋಕ್ಕಿನಲ್ಲಿಯೂ **ಅತಃಪರಿಜ್ಮನ್** ಎಂಬ ೯ನೇ ಋಕ್ಕಿನಲ್ಲಿಯೂ ಬಹುವಚನವು ಶ್ರುತವಾದ ಪ್ರಯುಕ್ತ ಬಹುವಚನವು ಕಾಣುವುದಿಲ್ಲ ಎಂದದ್ದು ಹೇಗೆಂದರೆ) **ದೇವಯಂತಃ, ಅತಃಪರಿಜ್ಮನ್** ಎಂಬ ೨ ಋಕ್ಕುಗಳಲ್ಲಿಯೂ (ಗಿರಃ) ವಚನಗಳು ಎಂಬುವುದೂ ಹೊರತು ಬೇರೆ ಬಹುವಚನವು ಕಾಣುವುದಿಲ್ಲ. (ಅಂದರೆ ಆ ೨ಋಕ್ಕುಗಳಲ್ಲಿ ಗಿರಃ ಎಂದು ವಚನಗಳಿಗೇನೇ ಬಹುವಚನ ವಿಷಯತ್ವವು. (ಪ್ರತಿಪಾದ್ಯವಾದ ಅರ್ಥಕ್ಕೆ ಬಹುತ್ವವಿಲ್ಲ.) **ಬಾಹುಲ್ಯಾತ್ ದೃಷ್ಟಿತಃ** ಎಂದು ಕ್ವಚಿತ್ ಪಾಠವು. (ಆ ಪಾಠದಲ್ಲಿ **ಯುಂಜಂತಿ** ಎಂಬಲ್ಲಿ ಬಹುವಚನವಿದ್ದ ಪ್ರಯುಕ್ತ ದೇವತೆಗಳೆಂಬ ಅರ್ಥವನ್ನೇ ಇಟ್ಟುಕೊಳ್ಳಬೇಕು. ಇಂದ್ರನೆಂಬ ಅರ್ಥವನ್ನು ಅಂಗೀಕರಿಸುವುದಿಲ್ಲ, ಎಂದು ಹೇಳಿದರೆ **ದೇವಯಂತಃ** ಎಂಬುವಲ್ಲಿಯೂ **ಅತಃ ಪರಿಜ್ಮನ್** ಎಂಬುವಲ್ಲಿಯೂ ಬಹುವಚನವಿದ್ದ ಪ್ರಯುಕ್ತ ದೇವತೆಗಳೆಂಬ ಅರ್ಥವನ್ನೇ ಇಟ್ಟುಕೊಳ್ಳಬೇಕು. ಇಂದ್ರನೆಂಬ ಅರ್ಥವನ್ನು ಅಂಗೀಕರಿಸಬಾರದೆಂದರೆ-) **ದೇವಯಂತಃ ಅತಃಪರಿಜ್ಮನ್** ಎಂಬಲ್ಲಿಯೂ ಗಿರಃ ಎಂದು ವೇದರೂಪ ವಚನಗಳಲ್ಲಿ ಬಹುವಚನವು ಹೊರತು ಬೇರೆ ಪ್ರತಿಪಾದ್ಯವಾದ ದೇವತಾ ರೂಪವಾದ ಅರ್ಥದಲ್ಲಿ ಬಹುವಚನವಿಲ್ಲ. ಗಿರಃ ಎನ್ನುವುದು ವಿಷಯಗಳೆಂದು ಸ್ಪಷ್ಟವಾಗಿ ತೋರುತ್ತದೆ. (ಏವಂಚ ೧. ೨. ೪. ಋಕ್ಕುಗಳು ಮರುತ್ ದೇವತಾಕಗಳು. ಇಲ್ಲಿ ಮರುತ್ ಶಬ್ದದಿಂದ ಬ್ರಹ್ಮಾದಿ ಸಮಸ್ತ ದೇವತೆಗಳನ್ನು ಇಟ್ಟು ಕೊಳ್ಳಬೇಕು. ೩. ೫. ಋಕ್ಕುಗಳು ಇಂದ್ರ ಮರುತ್ ದೇವತಾಕಗಳು. ಇತರ ಋಕ್ಕುಗಳು ಇಂದ್ರ ದೇವತಾಕಗಳು.) ॥ ೯ ॥

ಋ ॥ (೬೦) ಇತೊ ವಾ ಸಾತಿಮೀಮಹೇ ದಿವೋ ವಾ ಪಾರ್ಥಿವಾದಧಿ ।
ಇಂದ್ರಂ ಮಹೋ ವಾ ರಜಸಃ॥ ॥ ೧೦ ॥ ೧೨ ॥೬॥

ಅ ॥ ನಾವು) ಇತಃ = ವೈಕುಂಠಲೋಕಕ್ಕಿಂತ ದಿವೋ ವಾ=ಕೆಳಗಿನದ್ದಾದ ದ್ಯುಲೋಕಕ್ಕಿಂತಲಾಗಲೀ, ಪಾರ್ಥಿವಾತ್=ಪೃಥಿವೀ ಸಂಬಂಧಿಯಾದ ಪಾತಾಲಲೋಕಕ್ಕಿಂತವಾಗಲೀ, ಮಹಃ ಶ್ರೇಷ್ಠವಾದ, ಅಥವಾ ಶ್ರೇಷ್ಠರಾದ ಬ್ರಹ್ಮಾದಿಗಳನ್ನು, ರಜಸಃ = ವಾ ಅನುರಂಜಿಸುವ ವಿಷ್ಣುಲೋಕದಿಂದಲಾಗಲೀ, (ಅಂದರೆ ಈ ಲೋಕಗಳಲ್ಲಿ ನಿಯಾಮಕನಾಗಿರುವ) ಸಾತಿಂ = ಷಣ ಸಂಭಕ್ತೌ) ಲಾಭಸ್ವರೂಪನಾದ, ಇಂದ್ರಂ–ಪರಮೇಶ್ವರನನ್ನು ಅಧಿ ಈಮಹೇ =(ಇಕ್ ಸ್ಮರಣೇ) (ಇಙ್ ಅಧ್ಯಯನೇ) (ಅಥವಾ ಯಾಚ್ಞಾ ಕರ್ಮಸು ಪಾಠಃ)ಚೆನ್ನಾಗಿ ಸ್ಮರಿಸುತ್ತೇವೆ. ಸ್ತುತಿಸುತ್ತೇವೆ. ಬೇಡುತ್ತೇವೆ. ॥ ೧೦ ॥

ಭಾ॥ ಇತೋ ದಿವೋ ಅಪಿ ಪಾತಾಲಾತ್ ಸಾತಿಂ ಲಾಭಸ್ವರೂಪಿಣಂ । ಮಹತೋ ರಂಜಕಾದ್ವಿಷ್ಣೋರ್ಲೋಕಾದ್ವಾ ತಮಧೀಮಹೇ ॥ ೧೧ ॥ ೧೨ ॥ ೬ ॥

ಅ ॥ ನಾವು ವೈಕುಂಠಲೋಕಕ್ಕಿಂತ ಕೆಳಗಿನದ್ದಾದದ್ಯುಲೋಕದಿಂದ, ಪಾತಾಲಲೋಕದಿಂದಲಾಗಲೀ ಶ್ರೇಷ್ಠರನ್ನು ರಂಜಿಸುವ ವಿಷ್ಣುಲೋಕದಿಂದಲಾಗಲೀ, (ಅಂದರೆ ಆ ಲೋಕಗಳಲ್ಲಿ ನಿಯಾಮಕನಾಗಿರುವ) ಶ್ರೀಭಗವಂತನೇ ಏಕಾಂತ ಭಕ್ತರಿಗೆ ಲಾಭಸ್ವರೂಪನು, ಹೀಗೆ ಲಾಭ ಸ್ವರೂಪನಾದ ಆ ಶ್ರೀಹರಿಯನ್ನು ಸ್ಮರಿಸುತ್ತೇವೆ. ಸ್ತುತಿಸುತ್ತೇವೆ. ಅಥವಾ ಬೇಡುತ್ತೇವೆ. ॥ ೧೦ ॥ ೧೨ ॥ ೬ ॥

ಅವ ॥ ೧೦ ಋಕ್ಕು ೨ ವರ್ಗ, ಐಂದ್ರ ಸೂಕ್ತವು.

ಋ ॥ (೬೧) ಇಂದ್ರಮಿದ್ಗಾಥಿನೋ ಬೃಹದಿಂದ್ರಮರ್ಕೇಭಿರರ್ಕಿಣಃ ।
ಇಂದ್ರಂ ವಾಣೀರನೂಷತ ॥ ೧ ॥

ಅ ॥ ಬೃಹತ್=ಸರ್ವಗುಣ ಪರಿಪೂರ್ಣನಾದ, ಇಂದ್ರಮಿತ್=ಶ್ರೀ ಪರಮೇಶ್ವರನನ್ನೇ, ಗಾಥಿನಃ=(ಗೈಶಬ್ದೇ) ಗಾನವುಳ್ಳ ಸಾಮವೇದಿಗಳಾದ ಉದ್ಗಾತೃಗಳು. (ಸಾಮವೇದದಿಂದ) ಅನೂಷತ=(ಣುಸ್ತುತೌ) ಸ್ತುತಿಸಿದರು. (ಸದಾ ಸ್ತುತಿಸುತ್ತಿರುತ್ತಾರೆ.) ಅರ್ಕಿಣಃ=ಋಕ್ಕುಗಳುಳ್ಳ ಬಹ್ವೃಚರು. ಹೋತೃಗಳೂ ಕೂಡ ಅರ್ಕೇಭಿಃ=ಅರ್ಚಂತ್ಯೇಭಿರಿತಿ ಅರ್ಕಾಃ) (ಅರ್ಚ ಪೂಜಾಯಾಂ ಅರ್ಕ ಎನಿಸಿಕೊಂಡ ಋಕ್ಕುಗಳಿಂದ,(ಇಂದ್ರಂ=ಶ್ರೀ ಹರಿಯನ್ನು) ಸರ್ವದಾ ಸ್ತುತಿಸುತ್ತಿರುತ್ತಾರೆ. ವಾಣೀಃ=ಯಜುರಾದಿವಾಣಿಗಳು, ಅನೂಷತ=ಸರ್ವದಾ ಸ್ತುತಿಸುತ್ತಿರುತ್ತಾರೆ.(ಅಥವಾ ಅಧ್ವರ್ಯುರ್ಮೊದಲಾದವರು ಯಜುರಾದಿವಾಣಿಗಳಿಂದ ಸರ್ವದಾ ಸ್ತುತಿಸುತ್ತಾರೆ.) ॥ ೧ ॥

ಭಾ ॥ ತಮೇವ ಗಾಥಿನಃ ಸಾಮ್ನಾ ನಮ್ರಂತ್ಯೃಗ್ಭಿಶ್ಚ ಬಹ್ವೃಚಾಃ ।
ಬೃಹಂತಮನ್ಯವಾಣೀಭಿರಪಿ ॥ ೧ ॥

ಅ ॥ ಆ ಪೂರ್ಣನಾದ ಶ್ರೀ ಹರಿಯನ್ನೇ ಸಾಮವೇದಿಗಳು ಸಾಮದಿಂದಲೂ, ಬಹ್ವೃಚರು ಋಕ್ಕುಗಳಿಂದಲೂ, ಅಧ್ವರ್ಯುರ್ಮೊದಲಾದವರು ಯಜುರ್ವೇದಾದಿಗಳಿಂದಲೂ ಸದಾ ಸ್ತುತಿಸುತ್ತಿರುತ್ತಾರೆ. ॥ ೧ ॥

ಋ ॥ (೬೨) ಇಂದ್ರ ಇದ್ಧರ್ಯೋಃ ಸಚಾ ಸಂಮಿಶ್ಲ ಆ ವಚೋಯುಜಾ ।
ಇಂದ್ರೋ ವಜ್ರೀ ಹಿರಣ್ಯಯಃ ॥ ೨ ॥

ಅ ॥ ಇಂದ್ರ ಇತ್=ಇಂದ್ರನೇ, ವಚೋಯುಜಾ=ವಾಙ್ಮಾತ್ರದಿಂದಲೇ ಕೂಡಿರುವ, ಹರ್ಯೋಃ=ಅಶ್ವಗಳ, (ರಥದಲ್ಲಿ) ಸಚಾ=ಸುಖದಿಂದಲೇ, ಆ=ಚೆನ್ನಾಗಿ, ಸಂಮಿಶ್ಲಃ=ವಿಮಿಶ್ರಿತನಾದನು. (ಅಂದರೆ ಸಾರಥಿಯ ಅತಿ ಪ್ರಯತ್ನವಿಲ್ಲದೇನೇ ರಥವ ಸಂಬಂಧವುಳ್ಳ ಕುದುರೆಗಳಿಂದ ಕೂಡಿದ ರಥವನ್ನು ಏರಿದನು.) (ಅಧ್ಯಾತ್ಮ ರೂಪ ಅರ್ಥದಲ್ಲಿ) ಶ್ರೀಹರಿಯೇ (ಭಕ್ತರ ದೇಹದಲ್ಲಿ) ವೇದವಾಕ್ಯಗಳನ್ನನುಸರಿಸುವ ಮನೋ ಬುದ್ಧ್ಯಾಖ್ಯ ಅಶ್ವಗಳ ದೇಹಾಖ್ಯ ರಥದಲ್ಲಿ ಸುಖದಿಂದಲೇ ಆ=ಚೆನ್ನಾಗಿ ಮಿಶ್ರಿತನಾದನು. (ಅಂದರೆ ಮನೋಬುದ್ಧಿಗಳಿಂದ ಕೂಡಿದ ಆವಾವ ದೇಹಾಖ್ಯ ರಥವನ್ನು ನಿಶೇಷತಃ ಏರಿದನು.) ಮತ್ತು ಇಂದ್ರಃ=ಆ ಇಂದ್ರನು, ವಜ್ರೀ=ವಜ್ರಾಯುಧವುಳ್ಳವನು, ಶ್ರೀಹರಿಯು ವಜ್ರೀ=(ವ್ರಜಗತೌ, ರಮುಕ್ರೀಡಾಯಾಂ,) ಜ್ಞಾನಾನಂದವುಳ್ಳವನು. ಹಿರಣ್ಯಯಃ=ಹಿತಕರನೂ ರಮಣೀಯನೂ (ರಮುಕ್ರೀಡಾಯಾಂ) ಆಗಿರುತ್ತಾನೆ. ॥ ೨ ॥

ಭಾ ॥ (೧) ಹರ್ಯೋರ್ವಿಮಿಶ್ರಿತಃ। ರಥೇಽಥವಾ ಮನೋ ಬುದ್ಧ್ಯೋರ್ವಾಙ್ಮಾತ್ರೇಣೈವ ಯೋಗಿನೋಃ । ಸಚಾ ಸುಖೇನ ವಜ್ರೀ ಚ ಜ್ಞಾನಾನಂದೋ ಹಿ ಧಾತುತಃ ॥ ಹಿತಶ್ಚ ರಮಣೀಯಶ್ಚ ಹಿರಣ್ಯಯ ಇತೀರಿತಃ ॥ ೨ ॥

ಅ ॥ ಇಂದ್ರನೇ ವಾಙ್ಮಾತ್ರದಿಂದಲೇ ಸಂಬಂಧವುಳ್ಳ, ಕುದುರೆಗಳ ರಥದಲ್ಲಿ (ಸಚಾ=) ಸುಖದಿಂದಲೇ, ಚೆನ್ನಾಗಿ ಮಿಶ್ರಿತನಾದನು. (ಅಂದರೆ ಸಾರಥಿಯ ಅತಿ ಪ್ರಯತ್ನವಿಲ್ಲದೇನೇ ರಥ ಸಂಬಂಧವುಳ್ಳ ಅಶ್ವಗಳಿಂದ ಕೂಡಿದ ರಥವನ್ನು ಏರಿದನು.) ಅಥವಾ ಶ್ರೀಪರಮೇಶ್ವರನು ಭಕ್ತರ ಶರೀರದಲ್ಲಿ ವೇದವಾಕ್ಯಗಳನ್ನನುಸರಿಸಿರುವ

ಮನೋಬುದ್ಧಿಗಳಿಂದ ಯುಕ್ತನಾದವನು. (ಮನೋಬುದ್ಧಿಗಳಿಂದ ಕೂಡಿದ ಶರೀರದಲ್ಲಿ ವಿಶೇಷತಃ ಸನ್ನಿಹಿತನಾದವನು) ಪ್ರಸಿದ್ಧ ಇಂದ್ರನಲ್ಲಿ ವಜ್ರೀ=ವಜ್ರಾಯುಧವಿದ್ದ ಪ್ರಯುಕ್ತ ವಜ್ರೀ ಎಂದು ಸ್ಪಷ್ಟವು. ಶ್ರೀವಿಷ್ಣುವು ವಜ್ರೀ=ಜ್ಞಾನಾನಂದವುಳ್ಳವನು. ಹೇಗೆಂದರೆ ವಜ ಗತೌ, ರಮು ಕ್ರೀಡಾಯಾಂ ಎಂಬ ಧಾತುಗಳಿಂದ ಭಾವಾರ್ಥದಲ್ಲಿ ರ ಪ್ರತ್ಯಯವು. ಜ್ಞಾನ ಆನಂದಗಳುಳ್ಳವನು ವಜ್ರೀ ಎನಿಸುತ್ತಾನೆ. ಹಿತಕರನೂ ರಮಣೀಯನೂ ಆಗಿರುವುದರಿಂದ ಹಿರಣ್ಯಯಃ ಎನಿಸುತ್ತಾನೆ. ॥ ೨ ॥

ಋ ॥ (೬೩) ಇಂದ್ರೋ ದೀರ್ಘಾಯ ಚಕ್ಷಸ ಆ ಸೂರ್ಯಂ
ರೋಹಯದ್ದಿವಿ। ವಿ ಗೋಭಿರದ್ರಿಮೈರಯತ್ ॥ ೩ ॥

ಅ ॥ ಇಂದ್ರಃ=ಪ್ರಭುವಾದವನು. ಅಥವಾ ಪರಮೇಶ್ವರನು ದೀರ್ಘಾಯ ಚಕ್ಷಸೇ=ಜನರಿಗೆ ಹಗಲು ಎಂಬ ದೀರ್ಘಕಾಲದಲ್ಲಿ ಪದಾರ್ಥಗಳನ್ನು ನೋಡುವುದಕ್ಕಾಗಿ, ಸೂರ್ಯಂ=ಸೂರ್ಯನನ್ನು, ದಿವಿ=ಆಕಾಶದಲ್ಲಿ, ಆರೋಹಯತ್=(ಋಹದೇಃ ಣಿಜನ್ತಾತ್ ಲಙ್ಯುಪಧಾಯಾಃ) ಆರೋಹಿಸಿದನು. (ಏರಿಸಿದನು.) ಮತ್ತು, ಇಂದ್ರಃ=ಪ್ರಭುವಾದವನು. ಗೋಭಿಃ=ವಜ್ರಗಳಿಂದ. ಅದ್ರಿಂ=(ದೃಙ್ ಆದರೆ) (ಆದ್ರಿಯತೇ ಇತ್ಯದ್ರಿಃ) ಪರ್ವತವನ್ನು ವಿ ಐರಯತ್=(ಈರಕ್ಷೇಪೇ) ಕೊಂದನು. (ಅಂದರೆ ಪರ್ವತದ ರೆಕ್ಕೆಗಳನ್ನು ಛೇದಿಸಿದನು.) ಅಥವಾ ಗೋಭಿಃ=ಉದಕಗಳಿಂದ. (ವೃಷ್ಟಿಯಿಂದ) ಪರ್ವತವನ್ನು ಕೊಂದನು. (ಅತಿವೃಷ್ಟಿಯಿಂದ ಪರ್ವತವನ್ನು ಮುಳುಗಿಸಿದನು.) ಅಥವಾ ಗೋಭಿಃ=ಉದಕ ನಿಮಿತ್ತವಾಗಿ, ಅದ್ರಿಂ=ಮೇಘವನ್ನು ವಿ ಐರಯತ್=ವಿಶ್ಲೇಷಗೊಳಿಸಿದನು. (ನಿಯಮಿಸಿದನು) ಇಂದ್ರಃ=ಪರಮೇಶ್ವರನಾದರೂ ಅದ್ರಿಂ=(ಆದ್ರಿಯತೇ ಇತ್ಯದ್ರಿಃ) ಆದರಣ ಯೋಗ್ಯನಾದ ಮುಖ್ಯಪ್ರಾಣನನ್ನು, ಗೋಭಿಃ=ಜ್ಞಾನಗಳಿಂದ, ವಿ ಐರಯತ್=ಜ್ಞಾನಯುಕ್ತನನ್ನಾಗಿ ಪ್ರವರ್ತಿಸಿದನು. ॥ ೩ ॥

ಭಾ ॥ ದೀರ್ಘಕಾಲಂ ದರ್ಶನಾಯ ಸೂರ್ಯಮಾರೋಹಯದ್ದಿವಿ । ಜ್ಞಾನೈರಾದರ
ಯೋಗ್ಯಂಚ ಪ್ರಾಣಾಖ್ಯಂ ಸಮೈರಯತ್ ॥ ೩ ॥

ಅ ॥ ಇಂದ್ರನು ಅಹೋರೂಪ ದೀರ್ಘ ಕಾಲದಲ್ಲಿ (ಹಗಲಲ್ಲಿ) ಪದಾರ್ಥಗಳನ್ನು ನೋಡುವುದಕ್ಕಾಗಿ ಸೂರ್ಯನನ್ನು ಆಕಾಶಕ್ಕೆ ಏರಿಸಿದನು. ಆದರಕ್ಕೆ ಯೋಗ್ಯನಾದ ಮುಖ್ಯಪ್ರಾಣನನ್ನು ಜ್ಞಾನಯುಕ್ತನನ್ನಾಗಿ ಪ್ರವರ್ತಿಸಿದನು ॥ ೩ ॥

ಋ ॥ (೬೪) ಇಂದ್ರ ವಾಜೇಷು ನೋಽವ ಸಹಸ್ರ ಪ್ರಧನೇಷು ಚ ।
ಉಗ್ರ ಉಗ್ರಾಭಿರೂತಿಭಿಃ ॥ ೪ ॥

ಅ ॥ ಇಂದ್ರ=ಇಂದ್ರನೇ, ಉಗ್ರಃ=ಮತ್ತೊಬ್ಬರಿಗೆ ಕ್ರೂರನಾದ ನೀನು, ವಾಜೇಷು=ಯುದ್ಧಗಳಲ್ಲಿ, ಸಹಸ್ರ ಪ್ರಧನೇಷು ಚ=ಸಹಸ್ರದಿಂದ ಯುದ್ಧವುಳ್ಳವುಗಳಾಗುತ್ತಿರಲು (ಅಂದರೆ ನಾವು ಬಹುಮಂದಿಯಿಂದ ಯುದ್ಧ ಮಾಡಿದಾಗ್ಯೂ) ನಃ=ನಮ್ಮನ್ನು ಉಗ್ರಾಭಿಃ=ಮತ್ತೊಬ್ಬರಿಗೆ ಕರ್ಮವಶಾತ್ ಕ್ರೂರಗಳಾದ, ಸ್ವಭಾವತಃ ಉಗ್ರಗಳಾದೇನೆ ಇರುವ ಊತಿಭಿಃ=ಸದಭಿಪ್ರಾಯಗಳಿಂದ ಅವ=ಸರ್ವದಾ ರಕ್ಷಿಸು. ॥ ೪ ॥

ಭಾ ॥ ಬಹುಭಿರ್ಯುಧ್ಯಮಾನೇಷು ಯುದ್ಧೇಷ್ವಪಿ ಸದಾಽವ ನಃ । ದುಷ್ಪ್ರೋಗ್ರೈಃ ಸದಭಿ
ಪ್ರಾಯೈಃ ॥ ೪ ॥

ಅ ॥ ಬಹುಮಂದಿಯಿಂದ ಕೂಡಿ ಯುದ್ಧಗಳಲ್ಲಿ ನಾವು ಯುದ್ಧ ಮಾಡಿದಾಗ್ಯೂ ನಮ್ಮನ್ನು ಯುದ್ಧಗಳಿ ಶತ್ರುಗಳಾದ ವೃತ್ರ: ಶತ್ರುಗಳಾಗದೆ ಇರುವ ಅಧಿಕ್ಯಾಯುಗಳಿಂದ ನಮ್ಮನ್ನು ಸದಾ ರಕ್ಷಿಸುತ್ತಾನೆ. ॥ ೪ ॥

ಮೂ ॥ (೬೫) ಇಂದ್ರಂ ವಯಂ ಮಹಾಧನ ಇಂದ್ರಮರ್ಭೇ ಹವಾಮಹೇ ।
ಯುಜಂ ವೃತ್ರೇಷು ವಜ್ರಿಣಂ ॥ ॥ ೫ ॥

ಅ ॥ ವೃತ್ರೇಷು=ವೃತ್ರ ಶಬ್ದ ವಾಚ್ಯಗಳಾದ ಅಜ್ಞಾನಗಳಲ್ಲಿ, ಯುಜಂ=ಸಹಾಯಕನಾಗಿ ಕೂಡಿಸುವ (ಇಂದ್ರ ಶಬ್ದದಲ್ಲಿ) ವೃತ್ರೇಷು=ವೃತ್ರಾಸುರನಲ್ಲಿ, ಯುಜಂ=ಸಹಾಯಕನಾಗಿರುವ, ವಜ್ರಿಣಂ=(ವಜ್ರಾಯುಧನಿಂದ) ಶತ್ರುಗಳಿಂದ ಬಿಡಲ್ಪಟ್ಟ, (ಅಂದರೆ ಭಯದಿಂದ ಶತ್ರುಗಳು ಇಂದ್ರನ ಸಮೀಪಕ್ಕೇ ಬರುವುದಿಲ್ಲ) ಇಂದ್ರಂ=ಇಂದ್ರನನ್ನು, ಮಹಾಧನೇ=ಮೋಕ್ಷರೂಪ ಮಹಾ ಪುರುಷಾರ್ಥ ಸಿದ್ಧಿಗಾಗಿ, ಇಂದ್ರಂ=ಇಂದ್ರನನ್ನು, ಅರ್ಭೇ=(ಐಹಿಕ) ಅಲ್ಪಧನಕ್ಕಾಗಿಯೂ, (ಅಂದರೆ ಸಾಂಸಾರಿಕ ಪುರುಷಾರ್ಥಕ್ಕಾಗಿಯೂ) ವಯಂ=ಮಹಾ ಧನ ಅಲ್ಪ ಧನಗಳನ್ನು ಅರ್ಥಿಸುವ ನಾವು, ಹವಾಮಹೇ=ಕರೆಯುತ್ತೇವೆ. ॥ ೫ ॥

ಭಾ ॥ ಮಹದಲ್ಪಧನಾರ್ಥಿನಃ । ಹವಾಮಹೇಽರಿವರ್ಜನಂ ತಂ ಕಮಾಹ ಪ್ರತಿಯೋಗಿನಂ
॥ ೫ ॥ ೧೩ ॥

ಅ ॥ ಮಹಾಧನ ಅಲ್ಪಧನಗಳನ್ನು ಅರ್ಥಿಸುವ ನಾವು ಅಜ್ಞಾನಗಳಿಗೆ ಪರಿಪಂಥಿಯಾದ ಭಯದಿಂದ ಶತ್ರುಗಳಿಂದ ಬಿಡಲ್ಪಟ್ಟ (ಅಂದರೆ ವಸ್ತುತಃ ದೈತ್ಯರೇ ಮೊದಲಾದ ಶತ್ರುಗಳು ಇದ್ದರೂ ಆ ದೈತ್ಯರು ತಮಗೆ ಮರಣ ಬಂದೀತು ಎಂಬ ಹೆದರಿಕೆಯಿಂದ ಇಂದ್ರನ ಸಮೀಪಕ್ಕೇ ಬರುವುದಿಲ್ಲ) ಅಂತಹ ಇಂದ್ರನನ್ನು ಕರೆಯುತ್ತೇವೆ. ॥ ೫ ॥ ೧೩ ॥

ಮೂ ॥ (೬೬) ಸ ನೋ ವೃಷನ್ನಮುಂ ಚರುಂ ಸತ್ರಾದಾವನ್ನಪಾವೃಧಿ ।
ಅಸ್ಮಭ್ಯಮಪ್ರತಿಷ್ಕುತಃ ॥ ೬ ॥

ಅ ॥ ವೃಷನ್=(ವೃಷ ಶಕ್ತಿಬಂಧನೇ (ವೃಷ ಸೇಚನೇ)(ವೃಷ್ಟಿಕರ್ತನು) ಅಭೀಷ್ಟವನ್ನು ಕೊಡತಕ್ಕವನೇ ಸರ್ವಶಕ್ತಿಯುಳ್ಳವನೇ, ಸತ್ರಾದಾವನ್=(ಡುದಾಞ ದಾನೇ) ಸಮಸ್ತವನ್ನು ಕೊಡತಕ್ಕವನೇ, (ಸರ್ವಕಾಮಪ್ರದನಾದ) ಸಃ=ಅಂತಹ ನೀನು, ನಃ=ನಮ್ಮಗಾದ ಅಮುಂ=ಪರೋಕ್ಷವಾದ, (ಮೋಕ್ಷದಲ್ಲಿರುವ) ಚರುಂ= (ಚರ ಗತಿಭಕ್ಷಣಯೋಃ ಭಕ್ಷಣೀಯವಾದ, ಅನುಭವಿಸಲು ಯೋಗ್ಯವಾದ ಆನಂದವನ್ನು, ಅಸ್ಮಭ್ಯಂ=ನಮ್ಮ ಅನುಭವಕ್ಕಾಗಿ, ಅಪಾವೃಧಿ=ಅವಿದ್ಯೆಯಿಂದ ಆವೃತವಾಗಿರುವುದರಿಂದ ಆವರಣವನ್ನು ತೆರೆ. (ಏಕೆಂದರೆ ನೀನೇ) ಅಪ್ರತಿಷ್ಕುತಃ=(ಸ್ಕುಞ ಆಪ್ರವಣೇ) (ಆಗಮದಲ್ಲಿ) ವೈರಿಗಳಿಂದ ಯುದ್ಧದಲ್ಲಿ ಎದುರಾಗಿ ಬರಲ್ಪಟ್ಟವನಲ್ಲ (ಅಂದರೆ ನಿನ್ನ ಎದುರು ಯುದ್ಧಕ್ಕಾಗಿ ಶತ್ರುಗಳು ಬರುವುದೇ ಇಲ್ಲ.) ಅಥವಾ (ವೃಷ್ಟಿ ಇಂದ್ರ ಪಕ್ಷದಲ್ಲಿ) ಚರುಂ=ಹವಿಸ್ಸನ್ನು ಅಪಾವೃಧಿ=ಸ್ವೀಕರಿಸಿ ಸಫಲವನ್ನಾಗಿ ಮಾಡು. ಅಥವಾ ಚರುಂ=ಮೇಘವನ್ನು ಪರೋಪಕಾರಕ್ಕಾಗಿಯೇ ಈಶ್ವರನು ಸೃಷ್ಟಿಸಿರುವುದರಿಂದ ನಃ=ನಮಗಾಗಿಯೇ ವೃಷ್ಟಿಯನ್ನು ಅಸ್ಮಭ್ಯಂ=ನಮಗಾಗಿ ಅಪಾವೃಧಿ= ತೆರೆ (ಪರೋಪಕಾರಾಯ ಸತಾಂ ವಿಭೂತಯಃ ಎಂಬ ಉಕ್ತಿಯಂತೆ) (ವೃಷ್ಟಿ ಬರುವಂತೆ ಮಾಡು) ॥ ೬ ॥

ಭಾ ॥ ಅಸ್ಮದೀಯಂ ಚರುಂ ಭೋಜ್ಯಮಾನಂದಂ ತಮುಪಾವೃಣು । ಮೋಕ್ಷಗಂ ಸರ್ವದಾ ತಸ್ತ್ವಮುಪ್ರೇತಿದ್ವಂದ್ವ ನೋ ವೃಷನ್ ॥ ೬ ॥

ಅ ॥ ಭಕ್ತರಿಗೆ ಅಭೀಷ್ಟವನ್ನು ಕೊಡುವವನೇ, ಅಸದೃಶನಾದ ನೀನು, ನಮ್ಮದಾದ, ಮೋಕ್ಷದಲ್ಲಿರುವ, (ಚರುಂ=)ಭೋಜ್ಯವಾದ ಆನಂದವನ್ನು ಸರ್ವದಾ ಅವಿದ್ಯೆಯಿಂದ ಆವೃತವಾಗಿರುವುದರಿಂದ ನಮ್ಮ ಅನುಭವಕ್ಕಾಗಿ ಆವರಣವನ್ನು ತೆಗೆ. ॥ ೬ ॥

ಋ ॥ (೯೭)ತುಂಜೇ ತುಂಜೇ ಯ ಉತ್ತರೇ ಸ್ತೋಮಾ ಇಂದ್ರಸ್ಯ ವಜ್ರಿಣಃ। ನ ವಿಂಧೇ ಅಸ್ಯ ಸುಷ್ಟುತಿಂ ॥ ೭ ॥

ಅ ॥ ಎಲೋ ಇಂದ್ರನೇ, ತುಂಜೇ ತುಂಜೇ= ತುಜಿ ಗತೌ ದಾನೇವಾ) ನಿನ್ನಿಂದ ಗಮನ ಮಾಡಲ್ಪಡುತ್ತಿರಲು (ವ್ಯಾಪಾರವನ್ನು ಹೊಂದಿಸುತ್ತಿರಲು) ದಾನಮಾಡಲ್ಪಡುತ್ತಿರಲು ನಿನ್ನಿಂದಲೇ ಸ್ತೋತೃಗಳಿಗೆ ಪ್ರೇರಣೆಯುಂಟಾಗುತ್ತಿರಲು (ದೇಶಾಂತರ ಪ್ರಾಪ್ತಿಯಾಗಲೀ, ದಾನವಾಗಲೀ (ನಿನ್ನ ಪ್ರೇರಣೆಯಿದ್ದರೇನೇ ಆಗುತ್ತದೆ. ಯೇ=ಯಾವ ಪ್ರವೃತ್ತಗಳಾದ, ಉತ್ತರೇ-ಉತ್ತಮಗಳಾದ, ಸ್ತೋಮಾಃ—ಸ್ತುತಿ ವಿಶೇಷಗಳೋ, (ಅವುಗಳೂ ಕೂಡ) ಅಸ್ಯ ವಜ್ರಿಣಃ ಇಂದ್ರಸ್ಯ-ಈ ವಜ್ರಧಾರಿಯಾದ ಇಂದ್ರನಾದ ನಿನ್ನ, ಸುಷ್ಟುತಿಂ- ಶೋಭನವಾದ ಸ್ತುತಿತ್ವವನ್ನು, ನ ವಿಂಧೇ-(ವಿದ್ಲೃ ಲಾಭೇ) ಹೊಂದುವುದಿಲ್ಲ. (ಅಂದರೆ ಭಗವಂತನಿಗೆ ಅನಂತ ಗುಣಗಳಿದ್ದುದರಿಂದ ಸಮಸ್ತನನ್ನು ವಿಷಯೀಕರಿಸದಿರುವುದರಿಂದ ಅಥವಾ ಸಮಸ್ತ ಗುಣಗಳನ್ನು ವರ್ಣಿಸದಿರುವುದರಿಂದ ಹೊಂದುವುದಿಲ್ಲ. ॥ ೭ ॥

ಭಾ ॥ ತ್ವಯೈವ ಪ್ರೇರಣೇ ಜಾತೇ ತತ್ರತತ್ರ ಯ ಉತ್ತಮಾಃ । ತೇಽಪಿ ಸ್ತೋಮಾಃ ಸುಷ್ಟುತಿತ್ವಮುಸ್ಯಾನಂತ್ಯಾನ್ನ ಚಾಪ್ನುಯುಃ ॥ ೭ ॥

ಅ ॥ ಆವಾವ ಸ್ತೋತ್ರಗಳಲ್ಲಿ ನಿನ್ನಿಂದಲೇ ಪ್ರೇರೇಪಣೆಯುಂಟಾಗುತ್ತಿರಲು (ನೀನೇ ಪ್ರೇರೇಪಿಸುತ್ತಿರಲು) ಪ್ರವೃತ್ತಗಳಾದ ಉತ್ತಮಗಳಾದ ಸ್ತುತಿ ವಿಶೇಷಗಳಿದ್ದಾವೋ, ಅವುಗಳೂ ಕೂಡ ಇಂದ್ರನಾದ ನಿನ್ನ (ಗುಣಗಳು) ಅನಂತಗಳಾದುದರಿಂದ (ಸಂಪೂರ್ಣವಾಗಿ ಪ್ರತಿಪಾದಿಸದಿರುವುದರಿಂದ) ಶೋಭನವಾದ ಸ್ತುತಿತ್ವವನ್ನು ಹೊಂದುವುದಿಲ್ಲ. ॥ ೭ ॥

ಋ ॥ (೯೮) ವೃಷಾ ಯೂಥೇವ ವಂಸಗಃ ಕೃಷ್ಟೀರಿಯರ್ತ್ಯೋಜಸಾ । ಈಶಾನೋ ಅಪ್ರತಿಷ್ಕುತಃ ॥ ೮ ॥

ಅ ॥ ವಂಸಗಃ = ಒಂದು ವೃಷಭಕ್ಕೆ ಇದಿರು ಯುದ್ಧ ಮಾಡುವ ಇನ್ನೊಂದು ವೃಷಭವು ವಂಸ ಎನಿಸುತ್ತದೆ. ಅದನ್ನು ಕುರಿತು ನಿರ್ಭಯವಾಗಿ ಯುದ್ಧಕ್ಕಾಗಿ ಯಾವ ವೃಷಭವು ಹೋಗುತ್ತದೋ, ಆ ವೃಷಭವು ವಂಸಗಃ ಎನಿಸುತ್ತದೆ. ಅಂತಹ ವೃಷಾ = ವೃಷಭವು, ಯೂಥೇವ = ಎತ್ತುಗಳ ಸಮೂಹಗಳನ್ನು ಹೇಗೆ ಸೆಳೆಯುತ್ತದೋ ಹೀಗೆಯೇ ಈಶಾನಃ=ಪ್ರಭುವಾದ, ಅಪ್ರತಿಷ್ಕುತಃ = ಪ್ರತಿಭಟನಿಲ್ಲದಿರುವ ಇಂದ್ರನು, ಕೃಷ್ಟೀಃ = ಪ್ರಜೆಗಳನ್ನು ಓಜಸಾ = ಸಾಮರ್ಥ್ಯದಿಂದ, ಇಯರ್ತಿ =(ಋಗತೌ) ಪ್ರೇರೇಪಿಸುತ್ತಾನೆ. ॥ ೮ ॥

ಭಾ ॥ (೧) ಪ್ರತಿವೀರೋ ವೃಷಾ ವಂಸಸ್ತದ್ಗಂತಾ ವಂಸಗೋ ವಿಭೀಃ । ಯೂಥಾನ್ಯಾಕರ್ಷತಿ ಯಥಾ ಪ್ರಜಾಃ ಪ್ರೇರಯತಿ ಪ್ರಭುಃ ॥ (೨) ಅಲ್ಪಸ್ಯಾಪಿ ಪ್ರಸಿದ್ಧ್ಯೈವ ದೃಷ್ಟಾಂತತ್ವಂ ತು ಯುಜ್ಯತೇ ॥ ೮ ॥

ಅ ॥ (೧) ಪ್ರತಿಭಟವಾದ ಎತ್ತು ವಂಸ ಎನಿಸುತ್ತದೆ. ಅಂತಹ ಪ್ರತಿಭಟ ವೃಷಭವನ್ನು ಕುರಿತು ನಿರ್ಭಯವಾಗಿ ಯುದ್ಧಕ್ಕೆ ಹೋಗತಕ್ಕುದು ವಂಸಗ ಎನಿಸುತ್ತದೆ. ಅದು ಗೋವುಗಳ ಸಮೂಹಗಳನ್ನು ಹೇಗೆ ಸೆಳೆಯುತ್ತದೋ ಹಾಗೆಯೇ ಸರ್ವ ಸಮರ್ಥನಾದ ಶ್ರೀಹರಿಯು ಪ್ರಜೆಗಳನ್ನು ಪ್ರೇರೇಪಿಸುತ್ತಾನೆ. (೨)ಹಾಗಾದರೆ ಸರ್ವೇಶ್ವರನಿಗೆ ಅಲ್ಪವಾದ ವೃಷಭವು ದೃಷ್ಟಾಂತವೆಂದು ಹೇಗೆ ಹೇಳುವುದೆಂದರೆ (ವಿಶ್ವಾಸವು ಹುಟ್ಟುವುದಕ್ಕಾಗಿ ದೃಷ್ಟಾಂತವನ್ನು ಹೇಳಬೇಕು. ಅದು ಪ್ರಸಿದ್ಧವಾದುದೇ ಆಗಬೇಕು. ವಿವಕ್ಷಿತ ಧರ್ಮಗಳನ್ನು ತಿಳಿಸಿ ಕೊಡುವುದೇ ದೃಷ್ಟಾಂತದ ಕಾರ್ಯವು. ದೃಷ್ಟಾಂತಕ್ಕೆ ಅಲ್ಪತ್ವಾದಿಗಳು ಅಪ್ರಯೋಜಕವು ಆದ ಕಾರಣ) ಲೋಕದಲ್ಲಿ ಪ್ರಸಿದ್ಧಿಗೊಳಿಸುವುದಕ್ಕಾಗಿ ಅಲ್ಪವಾದುದಕ್ಕೂ ದೃಷ್ಟಾಂತತ್ವವು ಕೂಡುತ್ತದೆ. (ಅಲ್ಪವಾದುದೂ ದೃಷ್ಟಾಂತ (ವಾಗುವುದು) ॥ ೮ ॥

ಋ ॥ (೭೯) ಯ ಏಕಶ್ಚರ್ಷಣೀನಾಂ ವಸೂನಾಮಿರಜ್ಯತಿ ।

ಇಂದ್ರಃ ಪಂಚಕ್ಷಿತೀನಾಂ ॥ ೯ ॥

ಅ ॥ ಯಾವ ಇಂದ್ರನೊಬ್ಬನೇ. ಚರ್ಷಣೀನಾಂ=ಪ್ರಜೆಗಳನ್ನು, ವಸೂನಾಂ= ದ್ರವ್ಯಗಳನ್ನು ಪಂಚಕ್ಷಿತೀನಾಂ=ದೇವತೆಗಳು ಗಂಧರ್ವರು, ದೈತೇಯರು, ಪಿತೃಗಳು, ಮನುಷ್ಯರು ಎಂಬ ಐದುವಿಧ ಪ್ರಜೆಗಳನ್ನು ಇರಜ್ಯತಿ (ಇರಜ್ ಐಶ್ವರ್ಯೇ) ನಿಯಮಿಸುತ್ತಾನೊ, (ಆತನು ಪ್ರಜೆಗಳನ್ನು ಪ್ರೇರೇಪಿಸುತ್ತಾನೆ) ॥ ೯ ॥

ಭಾ ॥ ರಾಜಾ ಭವತಿ ವಿತ್ತಾನಾಂ ಪ್ರಜಾನಾಂಚೈಕ ಏವ ಯಃ । ದೇವಗಂಧರ್ವ ದೈತೇಯ ಪಿತೃಮಾನುಷ ಭೇದತಃ । ಪ್ರಜಾನಾಮಪಿ ಪಂಚಾನಾಂ ಸಾಮಾನ್ಯಾಚ್ಚ ವಿಶೇಷತಃ ॥ ೯ ॥

ಅ ॥ ಯಾವ ಇಂದ್ರನೊಬ್ಬನೇ, ದ್ರವ್ಯಗಳಿಗೂ ಪ್ರಜೆಗಳಿಗೂ ದೇವತೆಗಳು ಗಂಧರ್ವರು ದೈತ್ಯರು ಪಿತೃಗಳು ಮನುಷ್ಯರು ಎಂಬ ಭೇದದಿಂದ ಐದುವಿಧ ಪ್ರಜೆಗಳಿಗೂ ರಾಜನಾಗಿರುತ್ತಾನೋ, ಚರ್ಷಣೀನಾಂ ಎಂದು ಸಾಮಾನ್ಯವಾಗಿ ಹೇಳಿದ್ದು. ವಿಶೇಷವನ್ನು ವಿಧಿಸುವುದಕ್ಕಾಗಿ ಪಂಚಕ್ಷಿತೀನಾಂ ಎಂದು ವಿಶೇಷವಾಗಿ ಹೇಳಿದ್ದು. (ಆದಕಾರಣ ಪುನರುಕ್ತಿಯಿಲ್ಲ.) ॥ ೯ ॥

ಋ ॥ (೨೦) ಇಂದ್ರಂ ವೋ ವಿಶ್ವತಸ್ಪರಿ ಹವಾಮಹೇ ಜನೇಭ್ಯಃ।

ಅಸ್ಮಾಕಮಸ್ತು ಕೇವಲಃ ॥ ೧೧ ॥ ೧೪ ॥ ೭ ॥ ೨ ॥

ಅ ॥ (ಎಲೋಜನರೇ) ವಿಶ್ವತಃ=ಸರ್ವಗತನಾದ ಇಂದ್ರಂ=ಶ್ರೀಹರಿಯನ್ನು ಇಂದ್ರನನ್ನು, ಜನೇಭ್ಯಃವಃ= ಋತ್ವಿಕ್ ಯಜಮಾನರಾದ ನಿಮ್ಮ ಪ್ರಯೋಜನಕ್ಕಾಗಿ, ಪರಿ=ಚೆನ್ನಾಗಿ, ಹವಾಮಹೇ=ಸರ್ವರಿಗೆ ತೋರುವ

ಹಾಗೆ ಏಕತ್ರ ನಿಲ್ಲುವುದಕ್ಕಾಗಿ ಕರೆಯುತ್ತೇವೆ. ಕೇವಲಃ=ಕರೆಯಲ್ಪಟ್ಟ ಕೇವಲ ಈ ಇಂದ್ರನು, ಅಸ್ಮಾಕಂ= ನಮಗೆ, ಅಸ್ತು=ಇಷ್ಟಪ್ರದನಾಗಲಿ. ॥ ೧೦ ॥

ಭಾ ॥ ಸಮ್ಯಗ್ಹ್ವಾಮಹೇ ಸರ್ವಗತಂಚ ವ್ಯಕ್ತರೂಪತಃ। ಸ್ಥಾತುಮೇಕತ್ರ ವೋಽರ್ಥಾಯ ಜನಾ ನೋಽಸ್ತು ಸ ಕೇವಲಃ ॥ ೧೦ ॥ ೧೪ ॥ ೭ ॥ ೨ ॥

ಅ ॥ ಎಲೋ ಜನರೇ, ಸರ್ವತ್ರ ವ್ಯಾಪ್ತನಾದ ಇಂದ್ರನನ್ನು ಋತ್ವಿಜರು, ಯಜಮಾನರೂ ಆದ ನಿಮ್ಮ ಪ್ರಯೋಜನಕ್ಕಾಗಿ ಚೆನ್ನಾಗಿ, ಅಭಿವ್ಯಕ್ತ ಮಧ್ಯಮ ಪರಿಣಾಮ ರೂಪದಿಂದ ಏಕತ್ರ ನಿಲ್ಲುವುದಕ್ಕಾಗಿ ಕರೆಯುತ್ತೇವೆ. ಕರೆಯಲ್ಪಟ್ಟ ಅಸಹಾಯನಾದ ಇಂದ್ರನು ನಿಮಗೂ ನಮಗೂ ಎಲ್ಲರಿಗೂ ಇಷ್ಟಪ್ರದನಾಗಲಿ ॥ ೧೦ ॥ ೧೪ ॥ ೭ ॥ ೨ ॥

ಅವ ॥ ೧೦ ಋಕ್ಕು -ಅವರ್ಗ. ಐಂದ್ರ ಸೂಕ್ತವು. ।

ಋ ॥ (೭೧) ಏಂದ್ರ ಸಾನಸಿಂ ರಯಿಂ ಸಜಿತ್ವಾನಂ ಸದಾಸಹಂ । ವರ್ಷಿಷ್ಠಮೂತಯೇ ಭರ ॥ ೧ ॥

ಅ ॥ ಇಂದ್ರ=ಇಂದ್ರನೇ, ಸಾನಸಿಂ=(ವನ ಷಣ ಸಂಭಕ್ತೌ) (ಷಣು ದಾನೇ) ಸತ್ಪಾತ್ರದಾನ ಹರಿಭಜನಾದಿ ರೂಪವಾದ ಲಾಭದಿಂದ ಕೂಡಿರುವ, ಸಜಿತ್ವಾನಂ=(ಜಿಜಯೇ)ಜಯಿಸುವ ಪುತ್ರಾದಿಗಳಿಂದ ಕೂಡಿರುವ, ಸದಾ ಸಹಂ ಸರ್ವದಾ ಬಲವುಳ್ಳ, ವರ್ಷಿಷ್ಠಂ=ಅತಿ ವೃದ್ಧವಾದ, (ಅತಿ ಮಹತ್ತಾದ) ಊತಯೇ=ರಕ್ಷಾ ನಿಮಿತ್ತವಾಗಿ, ರಯಿಂ=ಜ್ಞಾನದ್ರವಿಣ ರೂಪವಾದ ದ್ರವ್ಯವನ್ನು, ಆಭರ-(ಹೃಞ ಹರಣೇ) ತೆಗೆದುಕೊಂಡು ಬಾ. (ಕೊಡು.) ॥ ೨ ॥

ಭಾ ॥ ಜಯಿನಾ ಸಹಿತಂ ಲಾಭಯುಕ್ತಂ ಸದಾ ಬಲಂ । ವರ್ಷಿಷ್ಠಂ ಸುಮಹದ್ರಕ್ಷಾ ನಿಮಿತ್ತಂ ನಿತ್ಯದಾ ಭರ ॥ ೧ ॥

ಅ ॥ ಇಂದ್ರನೇ, ಜಯಿಸುವ ಪುತ್ರಾದಿಗಳಿಂದ ಕೂಡಿರುವ, ಸತ್ಪಾತ್ರ ದಾನಾದಿ ಲಾಭಗಳಿಂದೊಡಗೂಡಿದ, ಸದಾ ಬಲವುಳ್ಳ, ವರ್ಷಿಷ್ಠಂ ಅಂದರೆ ಅತಿ ಮಹತ್ತಾದ, ರಕ್ಷಾನಿಮಿತ್ತವಾದ ದ್ರವ್ಯವನ್ನು ಸರ್ವದಾ ಕೊಡು. ॥ ೧ ॥

ಋ ॥ (೭೨) ನಿ ಯೇನ ಮುಷ್ಟಿಹತ್ಯಯಾ ನಿ ವೃತ್ರಾ ರುಣಧಾಮಹೈ । ತ್ವೋತಾಸೋ ನ್ಯರ್ವತಾ ॥ ೨ ॥

ಅ ॥ ಯೇನ=ಯಾವ ದ್ರವ್ಯ ನಿಮಿತ್ತದಿಂದ, ತ್ವೋತಾಸಃ=ನಿನ್ನಿಂದ ಪ್ರೇರಿತರಾದ ನಾವು, ಮುಷ್ಟಿಹತ್ಯಯಾ=ಮುಷ್ಟಿಪ್ರಹಾರದಿಂದ, (ಅರೀನ್=ಬಾಹ್ಯ ಶತ್ರುಗಳನ್ನು,) ನಿರುಣಧಾಮಹೈ=ತಡೆಯುತ್ತೇವೋ, ಮತ್ತು ಯಾವ ದ್ರವ್ಯ ನಿಮಿತ್ತದಿಂದ, ವೃತ್ರಾ=ಅಜ್ಞಾನಗಳನ್ನು ನಿರುಣಧಾಮಹೈ=(ರುಧಿರ್ ಆವರಣೇ)ತಡೆಯುತ್ತೇವೋ, ಯಾವ ದ್ರವ್ಯ ನಿಮಿತ್ತದಿಂದ, ಅರ್ವತಾ=ಅಶ್ವಾದಿಗಳಿಂದ, (ಕೆಲವು ಶತ್ರುಗಳನ್ನು) ನಿರುಣಧಾಮಹೈ=ತಡೆಯುತ್ತೇವೋ, (ಅಂತಹ ದ್ರವ್ಯವನ್ನೇ ಕೊಡು.) ॥ ೨ ॥

ಭಾ ॥ ಯೇನಾರೀನ್ಮುಷ್ಟಿಯುದ್ಧೇನ ತವಮಾಂಸಿ ಜ್ಞಾನಯುದ್ಧತಃ । ತ್ವತ್ಪ್ರೇರಿತಾ ನಿರುಂಧಾಮಃ ಕಾಂಶ್ಚಿದ್ವಾ ತುರಗಾದಿಭಿಃ । ಆವೃತ್ತ್ಯೈವೋಪಸರ್ಗಸ್ಯ ಕ್ರಿಯಾವೃತ್ತಿರ್ಭವಿಷ್ಯತಿ ॥ ೨ ॥

ಅ ॥ ಯಾವ ಜ್ಞಾನಾಖ್ಯ ದ್ರವ್ಯ ನಿಮಿತ್ತದಿಂದ ನಿನ್ನಿಂದ ಪ್ರೇರಿತರಾದ ನಾವು ಮುಷ್ಟಿಘಾತದಿಂದ ಬಾಹ್ಯ ಶತ್ರುಗಳನ್ನೂ ಜ್ಞಾನ ಯುದ್ಧದಿಂದ ಅಜ್ಞಾನಗಳನ್ನೂ, ಅಶ್ವಾದಿಗಳಿಂದ ಕೆಲವು ಶತ್ರುಗಳನ್ನೂ ತಡೆಯುತ್ತೇವೋ, (ಅಂತಹ ದ್ರವ್ಯವನ್ನು ಕೊಡು) ನಿ ಎಂಬ ಉಪಸರ್ಗವು (೩) ಮೂರು ಸಲ ಇದ್ದ ಪ್ರಯುಕ್ತ ರುಣಧಾಮಹೈ ಎಂಬ ಕ್ರಿಯೆಗೂ ಮೂರಾವೃತ್ತಿಯನ್ನು ಅಂಗೀಕರಿಸಲೇಬೇಕು. (ಉಪಸರ್ಗಾಃ ಕ್ರಿಯಾಯೋಗೇ ಎಂದು ಕ್ರಿಯಾ ಸಂಬಂಧವಿದ್ದರೇನೇ ಉಪಸರ್ಗಗಳೆನಿಸುವುದು.) ॥ ೨ ॥

ಋ ॥ (೭೩) ಇಂದ್ರ ತ್ವೋತಾಸ ಆ ವಯಂ ವಜ್ರಂ ಘನಾ ದದೀಮಹಿ ।
ಜಯೇಮ ಸಂ ಯುಧಿ ಸ್ಪೃಧಃ ॥ ೩ ॥

ಅ ॥ ಇಂದ್ರ=ಇಂದ್ರನೇ, ತ್ವೋತಾಸಃ=ನಿನ್ನಿಂದ ಪ್ರೇರಿತರಾದ ನಾವು, ವಜ್ರಂ=(ವಜಗತೌ, ರಮು ಕ್ರೀಡಾಯಾಂ) ಜ್ಞಾನಾನಂದಗಳನ್ನು, ಅಥವಾ ಜ್ಞಾನ ವಿಷಯಕ ರತಿಯನ್ನು, ಅಥವಾ ಜ್ಞಾನ ನಿಮಿತ್ತವಾದ ಆನಂದವನ್ನು ಘನಾ=ದೃಢವಾಗಿ, ಆ ದದೀಮಹಿ = (ಡುದಾಞ ದಾನೇ) ಹೊಂದುವೆವು. (ಅಂದರೆ ನಿನ್ನ ಪ್ರೇರಣೆಯಿಂದಲೇ ಜ್ಞಾನ ಆನಂದಗಳುಳ್ಳವರಾಗುವೆವು.) ನಿನ್ನಿಂದ ಪ್ರೇರಿತರಾಗಿಯೇ, ಯುಧಿ-ಯುದ್ಧದಲ್ಲಿ ಸ್ಪೃಧಃ=(ಸ್ಪರ್ಧ ಸಂಘರ್ಷೇ) ಸ್ಪರ್ಧೆಯುಳ್ಳವರನ್ನು (ಇತರರನ್ನು ತಿರಸ್ಕರಿಸುತ್ತೇವೆಂದು ಇಚ್ಛೆಯುಳ್ಳವರನ್ನು) ಅಥವಾ ಯುದ್ಧವು ಪ್ರಾಪ್ತವಾಗಲು, ಸ್ಪೃಧಃ=ಸ್ಪರ್ಧೆಯಿಂದ ಆಗತಕ್ಕ ಯುದ್ಧಗಳನ್ನು ಸಂಜಯೇಮ=ಚೆನ್ನಾಗಿ ಗೆಲ್ಲುವೆವು. (ಅಂದರೆ ಯುದ್ಧದಲ್ಲಿ ಸಂಪೂರ್ಣ ಜಯವುಳ್ಳವರಾಗುವೆವು) ॥ ೩ ॥

ಭಾ॥ ತ್ವತ್ಪ್ರೇರಿತಾ ಜ್ಞಾನರತಿಂ ದೃಢತ್ವೇನಾದದೀಮಹಿ ॥ ೩ ॥

ಅವ ॥ ಇಂದ್ರನೇ ನಾವು ನಿನ್ನಿಂದ ಪ್ರೇರಿತರಾಗಿಯೇ ಜ್ಞಾನಾನಂದಗಳನ್ನು ದೃಢವಾಗಿ ಹೊಂದುವೆವು. (ಅಂದರೆ ನಿನ್ನ ಪ್ರೇರಣೆಯಿಂದಲೇ ಜ್ಞಾನ ಆನಂದಗಳುಳ್ಳವರಾಗುವೆವು) ॥ ೩ ॥

ಋ ॥ (೭೪) ವಯಂ ಶೂರೇಭಿರಸ್ತೃಭಿರಿಂದ್ರ ತ್ವಯಾ ಯುಜಾ ವಯಂ ।
ಸಾಸಹ್ಯಾಮ ಪೃತನ್ಯತಃ॥ ॥ ೪ ॥

ಅ ॥ ಇಂದ್ರ=ಇಂದ್ರನೇ, ತ್ವಯಾ ಯುಜಾ=ನೀನು ಸಖನಾಗಿರುವಾಗ, (ನಿನ್ನ ಪ್ರಸಾದದಿಂದಲೇ) ಶೂರೇಭಿಃ=ಶೂರರಾದ, ಅಸ್ತೃಭಿಃ=(ಅಸು ಕ್ಷೇಪಣೇ,ಅಸ್ತೃಗಳುಳ್ಳ (ಮಂತ್ರ ಅಥವಾ ಆಯುಧಗಳುಳ್ಳ)ಅಥವಾ ಆಯುಧವನ್ನು ಪ್ರಯೋಗಿಸುವ ಸ್ವಭಾವವುಳ್ಳ, ಚೆನ್ನಾಗಿ ಯುದ್ಧ ಮಾಡುವ ಭೃತ್ಯರಿಂದೊಡಗೂಡಿ, ಪೃತನ್ಯತಃ =(ಯುಧ ಸಂಪ್ರಹಾರಣೇ)ಯುದ್ಧ ಮಾಡುವ ಶತ್ರುಗಳನ್ನು ವಯಂ= ನಾವು, ಸಾಸಹ್ಯಾಮ= ಅತಿಶಯವಾಗಿ ಪುನಃ ಪುನಃ ಸಹಿಸುವೆವು. ಮತ್ತು ಅವರಿಗೆ ಅಭಿಮುಖರೇ ಆಗುವೆವು ಮತ್ತು ವಯಂ=ನಾವು, ತ್ವಯಾ ಏವ= ನಿನ್ನ ಅಧೀನವಾದ ಸತ್ತಾವುಳ್ಳವರೇ ಆಗಿರುತ್ತೇವೆ. ॥ ೪ ॥

ಭಾ॥ ತ್ವಯಾ ಭೃತೈನ್ಯತಃ ಶತ್ರೂನಭಿಷ್ಯಾಮ ಸುಯೋದ್ಧೃಭಿಃ ॥ ೪ ॥

ಅ ॥ ನಿನ್ನ ಪ್ರಸಾದದಿಂದಲೇ ಚೆನ್ನಾಗಿ ಯುದ್ಧಮಾಡುವ ಭೃತ್ಯರಿಂದೊಡಗೂಡಿ ಯುದ್ಧಮಾಡುವ ಶತ್ರುಗಳನ್ನು ಇದಿರಾಗಿ ಹೋಗುವೆವು. ॥ ೪ ॥

ಋ॥ (೭೫) ಮಹಾಁ ಇಂದ್ರಃ ಪರಶ್ಚ ನು ಮಹಿತ್ವಮಸ್ತು ವಜ್ರಿಣೇ ।
ದ್ಯೌರ್ನ ಪ್ರಥಿನಾ ಶವಃ ॥ ೫ ॥ ೧೫ ॥

ಅ ॥ ನು=ಯಾವಕಾರಣದಿಂದ. ಇಂದ್ರಃ=ಈ ಶ್ರೀವಿಷ್ಣುವು ಮಹಾನ್=ಅನಂತ ಗುಣಗಳುಳ್ಳವನೋ, ಪರಶ್ಚ=ಅನಾದಿಯೋ, (ಸರ್ವ ಕಾಲದಿಂದಲೂ ನಾಶವಿಲ್ಲದವನೋ,) (ಸರ್ವದಾ ಇರುವವನೋ) ಪ್ರಥಿನಾ=ವ್ಯಾಪ್ತಿಯಿಂದ, ದ್ಯೌರ್ನ=ಆಕಾಶದಂತೆ, ದೇಶದಿಂದಲೂ ನಾಶವಿಲ್ಲದವನೋ,(ಸರ್ವತ್ರವ್ಯಾಪ್ತನೋ.) ಶವಃ=ಸುಖಸ್ವರೂಪನೂ ಬಲಸ್ವರೂಪನೂ ಆಗಿರುತ್ತಾನೋ, (ಆದ ಕಾರಣ) ಮಹಿತ್ವಂ=ಸರ್ವೋತ್ತಮವಾದ ಬ್ರಹ್ಮತ್ವವು ವಜ್ರಿಣೇ=ವಜ್ರೀ ಎನಿಸಿಕೊಂಡ, ಶ್ರೀವಿಷ್ಣುವಿಗೇನೇ ಅಸ್ತು=ಇರಲಿ. (ಆತನಿಗೇನೇ ಬ್ರಹ್ಮತ್ವವನ್ನು ತಿಳಿಯಬೇಕು.) ಜೀವನಿಗೆ ಬ್ರಹ್ಮತ್ವವನ್ನು ಸ್ಮರಿಸಬಾರದು ॥ ೫ ॥

ಭಾ॥ (೧) ಯಸ್ಮಾನ್ಮಹಾನನಾದಿಶ್ಚ ವಿಷ್ಣುರ್ಜೀವೋSವರಸ್ತಥಾ । ತಸ್ಮೈ ನಾಸ್ತು ಮಹತ್ತ್ವಂ ತನ್ನ ಜೀವ ಬ್ರಹ್ಮತಾಂ ಸ್ಮರೇತ್॥ ಆಕಾಶವತ್ಪ್ರಥಿಮ್ನಾSಸೌ ಶವಃ ಸುಖಬಲೇ ತಥಾ ॥ ೫ ॥ ೧೫ ॥

ಅ ॥ ಯಾವ ಕಾರಣದಿಂದ ಶ್ರೀವಿಷ್ಣುವು ಸರ್ವಶ್ರೇಷ್ಠನೋ, ದೇಶ ಕಾಲಗಳಿಂದ ಅನಾದಿಯೋ, ವ್ಯಾಪ್ತಿಯಿಂದ ಆಕಾಶದಂತೆ ಇರುವವನೋ, ಹಾಗೆಯೇ,(ಶವಃ=ನಿತ್ಯಾಭಿವ್ಯಕ್ತವಾದಸುಖ ಬಲ ಸ್ವರೂಪನೋ ಹಾಗೆಯೇ ಜೀವನು ಗುಣಾದಿಗಳಿಂದ ಅವರನೋ, ಆದಕಾರಣ ಅಂತಹ ಶ್ರೀವಿಷ್ಣುವಿಗೇನೇ ಸರ್ವಗುಣಪರಿಪೂರ್ಣತ್ವರೂಪವಾದ ಬ್ರಹ್ಮತ್ವವು ಇರಲಿ (ಬ್ರಹ್ಮತ್ವನ್ನು ತಿಳಿಯಬೇಕು) ಅಧಮರಾದ ಜೀವರಿಗೆ ಬ್ರಹ್ಮತ್ವವನ್ನು ಸರ್ವಥಾ ಸ್ಮರಿಸಬಾರದು (ತಿಳಿಯಬಾರದು.) ॥ ೫ ॥ ೧೫ ॥

ಋ ॥ (೭೬) ಸಮೋಹೇ ವಾ ಯ ಆಶತ ನರಸ್ತೋಕಸ್ಯ ಸನಿತೌ ।
ವಿಪ್ರಾಸೋ ವಾ ಧಿಯಾಯವಃ ॥ ೬ ॥

ಅ ॥ ಯೇ=ಯಾರು, ಸಮೋಹೇ=(ವಹಪ್ರಾಪಣೇ) ಅನ್ಯರಪ್ರೇರಣೆಯಿಂದಲೂ, (ಅಂದರೆ ಇತರರಿಂದ ಪ್ರೇರಿತರಾದಾಗ್ಯೂ) ತೋಕಸ್ಯ=ಜ್ಞಾನವೆಂಬ ಅಪತ್ಯದ,ಸನಿತೌ=ಲಾಭವಾಗುತ್ತಿರಲು,ಆಶತ=(ಅಶೂ ವ್ಯಾಪ್ತೌ ಸಂಘಾತೇಚ) (ಶ್ರೀವಿಷ್ಣುವನ್ನು ಶರಣು) ಹೊಂದಿದರೋ, (ಅವರೇ) ನರಃ=ಪುರುಷರು. (ಇತರರು ಪಶುಗಳು) ಮತ್ತು, ಧಿಯಾಯವಃ=ಯಾರು ಬುದ್ಧಿಯುಕ್ತರೋ, (ಭಗವಜ್ಜ್ಞಾನಿಗಳೋ,) (ಅವರೇ) ವಿಪ್ರಾಸಃ=ವಿಪ್ರರು. (ಬ್ರಾಹ್ಮಣರು,) ಭಗವಜ್ಜ್ಞಾನಿಗಳು. (ಭಗವಜ್ಜ್ಞಾನವಿಲ್ಲದವರು ತಾವೇ ಪಂಡಿತರೆಂದು ತಿಳಿದವರು ಯಾರು ಮೂರ್ಖರೋ, ಅವರು ಶೂದ್ರರಿಗೆ ಸಮಾನರು.) ॥ ೬ ॥

ಭಾ ॥ ಅನ್ಯಶಂಸವಹನೇನಾಪಿ ಯೇ ತಂ ಪ್ರಾಪ್ತಾ ಜನಾರ್ದನಂ । ಜ್ಞಾನಲಾಭೇನತು ನರಸ್ತ ಏವ ಪಶವೋಽಪರೇ॥ ವಿಪ್ರಾಶ್ಚೈವ ಧಿಯಾ ಯುಕ್ತಾಃ ಮೂರ್ಖಾಃ ಶೂದ್ರ ಸಮಾ ಮತಾಃ ॥ ೬ ॥

ಅ ॥ ಯಾರು ಅನ್ಯರ ಪ್ರೇರಣೆಯಿಂದಲೂ, (ಅನ್ಯರಿಂದ ಪ್ರೇರಿತರಾದಾಗ್ಯೂ) ಜ್ಞಾನವೆಂಬ ಮಗುವಿನ ಪ್ರಾಪ್ತಿಯಿಂದ (ಸತ್ಪುತ್ರನು ನರಕದಿಂದ ಉದ್ಧರಿಸುವನು, ಜ್ಞಾನವಾದರೂ ಸ್ವರೂಪವನ್ನೇ ಉದ್ಧರಿಸುವುದರಿಂದ ಜ್ಞಾನವೇ ಮುಖ್ಯ ಸತ್ಪುತ್ರನು.) ಯಾರು ಆ ಜನಾರ್ದನನನ್ನು ಶರಣುಹೊಂದುತ್ತಾರೋ, ಅವರೇ ಪುರುಷರು. ಇತರರು ಪಶುಪ್ರಾಯರು. ಯಾರು ಭಗವಜ್ಜ್ಞಾನಿಗಳೋ, ಅವರೇ ವಿಪ್ರರು. ಯಾರು ತಾವೇ ಪಂಡಿತರು ಎಂದು ತಿಳಿದ ಮೂರ್ಖರೋ, ಅವರು ಶೂದ್ರರಿಗೆ ಸಮಾನರು. ॥ ೬ ॥

ಋ ॥ (೭೭)ಯಃ ಕುಕ್ಷಿಃ ಸೋಮಪಾತಮಃ ಸಮುದ್ರ ಇವ ಪಿನ್ವತೇ ।
ಉರ್ವೀರಾಪೋ ನ ಕಾಕುದಃ ॥ ೭ ॥

ಅ ॥ (ಆ ಶ್ರೀಹರಿಯ,) ಯಃ ಕುಕ್ಷಿಃ=ಯಾವ ಕುಕ್ಷಿಯು ಸೋಮಪಾತಮಃ=ಅತಿಶಯವಾಗಿ ಸೋಮ ಪಾನ ಮಾಡತಕ್ಕದ್ದೋ, ಅದು,ಸಮುದ್ರ ಇವ=ರತ್ನಾಕರದಂತೆ,ಪಿನ್ವತೇ=(ಪಿವಿ ಸೇಚನೇ) ಯಾವ ಯಾಜ್ಞಿಕನ ಸೋಮವನ್ನು ಪಾನಮಾಡುತ್ತದೋ ಆತನಿಗೆ ಸಮಸ್ತ ಕಾಮಗಳನ್ನು ಸುರಿಸುತ್ತದೆ.ಕೊಡುತ್ತದೆ.(ಆ ಶ್ರೀಹರಿಯ) ಕಾಕುದಃ=ನಾಲಿಗೆಗಳು, ಉರ್ವೀಃ=ಬಹಳಗಳಾದ, ಆಪೋನ=ಮಹಾ ಜಲಗಳಂತೆಯೇ. (ಭಕ್ತರಿಗೆ ತೃಪ್ತಿ ಯನ್ನು ಹೊಂದಿಸುವವುಗಳು.) (ಶ್ರೀಹರಿಗೆ ಬಹುಮುಖಗಳಲ್ಲಿ ಬಹು ನಾಲಗೆಗಳು ಇದ್ದುದರಿಂದ ಕಾಕುದಃ ಎಂದು ಬಹುವಚನವು ಕೂಡುತ್ತದೆ.) ॥ ೭ ॥

ಭಾ ॥ ಯಃ ಕುಕ್ಷಿಸ್ತಸ್ಯ ದೇವಸ್ಯ ಸಮುದ್ರ ಇವ ಸೋಽಖಿಲಾನ್ । ಕಾಮಾನ್ ಕ್ಷರತಿ ಭಕ್ತಾಯ ಮಹಾಪ ಇವ ತರ್ಪಕಾಃ ॥ ಕಾಕುದಸ್ತಸ್ಯ ಜಿಹ್ವಾಃ ಸ್ಯುರ್ಬಹ್ವ್ಯೋ ಬಹುಮುಖೇಷು ಯಾಃ ॥ ೭ ॥

ಅ ॥ ಅತಿಶಯವಾಗಿ ಸೋಮಪಾನ ಮಾಡತಕ್ಕದು ಅಥವಾ ಪಾನ ಮಾಡಲ್ಪಟ್ಟ ಸೋಮವನ್ನು ರಕ್ಷಿಸ ತಕ್ಕದು ಯಾವುದು ಶ್ರೀಹರಿಯ ಕುಕ್ಷಿಯು (ಹೊಟ್ಟೆಯು) ಇದೆಯೋ, ಅದು ರತ್ನಾಕರದಂತೆಯೇ ಶ್ರೀಹರಿಯ ಕುಕ್ಷಿಯಲ್ಲಿ ಸೋಮವನ್ನು ಸಮರ್ಪಿಸಿರತಕ್ಕ ಭಕ್ತರಿಗೆ ಸಮಸ್ತ ಕಾಮಗಳನ್ನೂ ಸರ್ವದಾ ಕೊಡುತ್ತಿ ರುತ್ತದೆ. ಮತ್ತು (ಕಕುದ್ ತಾಲು (ದವಡೆ)ಯಲ್ಲಿ ಹುಟ್ಟತಕ್ಕ) ಆ ಶ್ರೀಹರಿಯ ನಾಲಗೆಗಳು ಕಾಕುದಃ ಎನಿಸು ತ್ತವೆ. ಅವುಗಳು ಮಹಾ ಜಲಗಳಂತೆಯೇ ಭಕ್ತರಿಗೆ ತೃಪ್ತಿಯನ್ನು ಹುಟ್ಟಿಸುತ್ತವೆ. (ಶ್ರೀಹರಿಯೂ ಒಬ್ಬನೇ. ಆತನ ನಾಲಿಗೆಯೂ ಒಂದೇ. ಆದಕಾರಣ **ಕಾಕುದಃ** ಎಂದು ಬಹು ವಚನವು ಹೇಗೆ ಕೂಡುತ್ತದೆ ಎಂದರೆ) **ಸಹಸ್ರಶೀರ್ಷಾ ಪುರುಷಃ** ಇತ್ಯಾದಿ ಉಕ್ತರೀತಿಯಾಗಿ ಶ್ರೀಹರಿಗೆ ಬಹುಮುಖಗಳು ಇದ್ದುದರಿಂದ ಅವುಗಳಲ್ಲಿ ನಾಲಿಗೆಗಳೂ ಬಹಳ ಇದ್ದ ಪ್ರಯುಕ್ತ, ಅವುಗಳು ಮಹಾ ಜಲಗಳಂತೆಯೇ ಭಕ್ತರಿಗೆ ತೃಪ್ತಿಯನ್ನು ಹೊಂದಿಸುತ್ತವೆ. ॥ ೭ ॥

ಋ ॥ (೭೮)ಏ ವಾ ಹ್ಯಸ್ಯ ಸೂನೃತಾ ವಿರಪ್ಶೀ ಗೋಮತೀ ಮಹೀ ।
ಪಕ್ವಾ ಶಾಖಾ ನ ದಾಶುಷೇ ॥ ೮ ॥

ಅ ॥ (ಯಾವ ನೀನು) ವಿರಪ್ಶೀ=ವಿಶಿಷ್ಟ ಬಲವುಳ್ಳವನೋ, 'ಬಲಿಷ್ಠವಾದ ವಾಣಿಯನ್ನು ಪ್ರತಿಪಾದಿಸು ವವನೋ' ಅಸ್ಯ=ಬಲಿಷ್ಠನಾದ ನಿನ್ನ ಸಂಬಂಧಿಯಾದ, ಗೋಮತೀ=ವಚನಗಳಿಂದ ಕೂಡಿದ (ವೇದಗಳಿಂದ ಕೂಡಿದ (ಸ್ತುತ್ಯವಾದ,) ಮಹೀ=ಮಹತ್ವಾದ,ಸೂನೃತಾ=ಯಾವುದು ಸಾಧುವಾದ ವಾಣಿಯೋ (ಅದೂ ಕೂಡ) ಏವಹಿ=ಹೀಗೆಯೇ ಕುಕ್ಷ್ಯಾದಿಗಳಂತೆಯೇ, ದಾಶುಷೇ=ಯಜಮಾನನಿಗೆ ಪಕ್ವಾ=ಪಕ್ವಫಲವುಳ್ಳ, ಶಾಖಾನ= ಕಲ್ಪತರು ಶಾಖೆಯಂತೆ, ಅಭೀಷ್ಟವನ್ನು ಕೊಡುತ್ತದೆ.) ॥ ೮ ॥

ಭಾ ॥ ಏವಮೇವಾಸ್ಯ ವಾಣೀ ಚ ವೇದೇತಾ ಮಹತೀ ತಥಾ । ಪಕ್ವಶಾಖೇವ ಯಜತೇ ವರದಾತ್ರೀ ವಿರಪ್ಶಿನಃ । ಬಲಿಷ್ಠಸ್ಯ ಹಿ ತೇ ॥ ೮ ॥

ಅ ॥ ವಿರಪ್ಶಿನಃ = ವಿಶಿಷ್ಟ ಬಲವುಳ್ಳ ಈ ನಿನ್ನ ಸಂಬಂಧಿಯಾದ, ವೇದಗಳಿಂದ ಸ್ತುತ್ಯವಾದ ಅತಿ ಶ್ರೇಷ್ಠವೂ ಪ್ರಶಸ್ತವೂ ಮಂಗಲ ರೂಪವೂ ಸತ್ಯವೂ ಪ್ರಿಯವೂ ಆದ ಮಾತು ಇದೆಯೋ, ಅದೂ ಕೂಡ ಕುಕ್ಷ್ಯಾದಿಗಳಂತೆಯೇ ಯಜಮಾನನಿಗೆ ಕಲ್ಪವೃಕ್ಷದ ಶಾಖೆಯಂತೆ ಸರ್ವಾಭೀಷ್ಟದಾಯಕವಾಗುತ್ತದೆ. ॥ ೮ ॥

ಋ ॥(೭೯) ಏವಾ ಹಿ ತೇ ವಿಭೂತಯ ಊತಯ ಇಂದ್ರ ಮಾವತೇ ।

ಸದ್ಯಶ್ಚಿತ್ಸಂತಿ ದಾಶುಷೇ ॥ ೯ ॥

ಅ ॥ ಇಂದ್ರ = ಇಂದ್ರನೇ, ತೇ ದಾಶುಷೇ=ನಿನ್ನನ್ನುದ್ದೇಶಿಸಿ (ಹವಿಸ್ಸು ಮೊದಲಾದುದನ್ನು ಕೊಡುವ ಮಾವತೇ=(ಮಾಜ್ ಮಾನೇ) ಜ್ಞಾನಿಗೆ ಕೊಡುವುದಕ್ಕಾಗಿ, ತೇ=ನಿನ್ನ ವಿಭೂತಯಃ = ಐಶ್ವರ್ಯಗಳು, ಊತಯಃ=ರಕ್ಷಣೆಗಳೂ ಕೂಡ, ಸದ್ಯಶ್ಚಿತ್ = ಈಗಲೂ ಕೂಡ, ನಿತ್ಯದಲ್ಲಿಯೂ ಸಂತ್ಯೇವ ಹಿ = ನಿಶ್ಚಯವಾ ಗಿಯೂ ಇವೆ. ॥ ೯ ॥

ಭಾ ॥ ಸಂತಿ ಸದ್ಯೋsಪಿ ಯಜತೇ ಹಿ ತೇ । ಮಾವತೇ ಜ್ಞಾನಿನೇ ನಿತ್ಯಮೂತಯಶ್ಚ ವಿಭೂತಯಃ ॥ ೯ ॥

ಅ ॥ ಎಲೋ ಇಂದ್ರನೇ, ನಿನ್ನನ್ನು ಕುರಿತು ಯಜ್ಞಮಾಡುವ (ಮಾವತೇ=) ಜ್ಞಾನಿಯಾದವನಿಗೆ ಕೊಡಲಿಕ್ಕಾಗಿ ನಿನ್ನ ಅಧೀನಗಳಾದ, ನೀನೇ ಸ್ವಾಮಿಯಾಗಿ ಉಳ್ಳ ಐಶ್ವರ್ಯಗಳೂ ನೀನು ಮಾಡತಕ್ಕ ರಕ್ಷಣೆ ಗಳೂ ಕೂಡ, ಸದ್ಯದಲ್ಲಿಯೂ ಅಂದರೆ ನಿತ್ಯದಲ್ಲಿಯೂ ನಿಶ್ಚಯವಾಗಿಯೂ ಭಕ್ತರ ವಿಷಯಕಗಳೇ ಆಗಿವೆ. ಭಕ್ತರಿಗೆ ಕೊಡುವುದಕ್ಕಾಗಿಯೇ ಇವೆ. (ತಾನು ನಿತ್ಯದಲ್ಲಿಯೂ ಆನಂದ ಪೂರ್ಣನಾದುದರಿಂದ ತನ್ನ ಅನುಭವ ಕ್ಕಾಗಿ ಸರ್ವಥಾ ಅಲ್ಲ.) ॥ ೯ ॥

ಋ ॥(೮೦) ಏವಾ ಹ್ಯಸ್ಯ ಕಾಮ್ಯಾ ಸ್ತೋಮ ಉಕ್ಥಂ ಚ ಶಂಸ್ಯಾ ।

ಇಂದ್ರಾಯ ಸೋಮಪೀತಯೇ ॥ ೧೦ ॥ ೧೬ ॥ ೮ ॥

ಅ ॥ ಅಸ್ಯ = ಈ ಪರಮೇಶ್ವರನಿಗೆ, ಕಾಮ್ಯಾ=ಇಚ್ಛೆಗೆ ವಿಷಯಗಳಾದ, (ಪ್ರಿಯಗಳಾದ) ಉಕ್ಥಂ— ಉಕ್ಥಗಳು, (ಋಗ್ರೂಪಗಳು)ಸೋಮಪೀತಯೆ=ಸೋಮಪಾನಕ್ಕಾಗಿ,ಇಂದ್ರಾಯ ಇಂದ್ರನನ್ನುದ್ದೇಶಿಸಿ ಶಂಸ್ಯಾ=

ಏವಹಿ=ಹೊಗಳಲರ್ಹಗಳೇ ಆಗಿವೆ. ಸ್ತೋಮಶ್ಚ=ಸಾಮ ವಿಶೇಷಗಳೂ ಕೂಡ, (ಇಂದ್ರನನ್ನುದ್ದೇಶಿಸಿ ಸೋಮ ಪಾನಕ್ಕಾಗಿ ಗಾನಾರ್ಹಗಳೇ ಆಗಿವೆ.) (ಸ್ತುತಿಯಿಂದ ಪ್ರಸನ್ನನಾದವನೇ ಸೋಮಪಾನ ಮಾಡುತ್ತಾನೆ. ಅಭಿ ಲಾಷೆಯಿಂದ ಸೋಮಪಾನ ಮಾಡುವುದಲ್ಲ) ಆಪ್ತಕಾಮಸ್ಯ ಕಾಸ್ಪೃಹಾ, ಎಂದು ಪ್ರಮಾಣವು) ||೧೦||

ಭಾ|| ಸ್ತೋಮಾ ಉಕ್ಥಾನಿ ಚೈವಾಸ್ಯ ತಸ್ಮೈ ಕಾಮ್ಯಾನಿ ಸರ್ವದಾ । ಗೇಯಾಃ ಶಂಸ್ಯಾನಿ ಸೋಮಸ್ಯ ಪೀತಯೇ ನಾನ್ಯಥಾ ಪಿಬೇತ್ || ೧೦ || ೧೬ || ೮ ||

ಅ || ಈ ಪರಮೇಶ್ವರನಿಗೆ ಪ್ರಿಯಗಳಾದ ಉಕ್ಥಗಳು (ಋಗ್ರೂಪ್ರಗಳು) ಸೋಮಪಾನಕ್ಕಾಗಿ ಇಂದ್ರ ನನ್ನುದ್ದೇಶಿಸಿ ಸರ್ವದಾಸ್ತುತ್ಯಗಳೇ ಆಗಿವೆ. ಸ್ತೋಮಗಳೂ (ಸಾಮವಿಶೇಷಗಳೂ) ಕೂಡ ಇಂದ್ರನನ್ನುದ್ದೇಶಿಸಿ ಗಾನಾರ್ಹಗಳೇ ಆಗಿವೆ. (ಸ್ತುತಿಯಿಂದ ಪ್ರಸನ್ನನಾಗಿಯೇ ಸೋಮಪಾನ ಮಾಡುತ್ತಾನೆ.) (ನಿತ್ಯದಲ್ಲಿಯೂ ಆನಂದ ಪೂರ್ಣನಾದುದರಿಂದ) **ಆಪ್ತಕಾಮಸ್ಯ ಕಾಸ್ಪೃಹಾ** ಇತ್ಯಾದಿ ಶ್ರುತಿಗಳಿಂದ ಅಭಿಲಾಷೆಯಿಂದ ಸೋಮಪಾನ ಮಾಡುವುದಲ್ಲ. || ೧೦ || ೧೬ || ೮ ||

ಅವ || ೧೦ ಋಕ್ಕು. ಐಂದ್ರಸೂಕ್ತವು.

ಋ || (೮೧) ಇಂದ್ರೇಹಿ ಮತ್ಸ್ಯಂಧಸೋ ವಿಶ್ವೇಭಿಃ ಸೋಮಪರ್ವಭಿಃ । ಮಹಾँ ಅಭಿಷ್ಟಿರೋಜಸಾ || ೧ ||

ಅ || (ಇಂದ್ರ ಆ ಇಹಿ ಎಂದು ವಿಭಾಗವು) ಇಂದ್ರ=ಪರಮೇಶ್ವರನೇ, ಓಜಸಾ=ಸಾಮರ್ಥ್ಯದಿಂದ, ಅಭಿಷ್ಟಿಃ – ಸರ್ವ ವಿಷಯದಲ್ಲಿಚ್ಛೆಯುಳ್ಳವನು. (ಸರ್ವ ಸಾಮರ್ಥ್ಯದಿಂದ ಸಮಸ್ತ ಜಗತ್ತು ಇಚ್ಛಾಧೀನವಾಗಿ ಉಳ್ಳವನು.) ಮಹಾನ್=ಸರ್ವೋತ್ತಮನು. (ಅಂತಹ ನೀನು) ವಿಶ್ವೇಭಿಃ=ಎಲ್ಲಾ, ಸೋಮಪರ್ವಭಿಃ= ಸೋಮಪಾನ ಮಾಡತಕ್ಕ ದೇವತೆಗಳಿಂದ ಕೂಡಿಕೊಂಡು, ಆ ಇಹಿ=ಬಾ. (ಬಂದು) ಅಂಧಸಃ=ನಾನು ಕೊಟ್ಟ ಹವಿಸ್ಸು ಮೊದಲಾದ ಅನ್ನ ಭೋಜನದಿಂದ, ಮತ್ಸಿ=ಸುಖವನ್ನು ಹೊಂದುವಿ. || ೧ ||

ಭಾ || (೧) ಸೋಮಪಾಃ ಸೋಮಪರ್ವಾಣಃ (೨) ಸರ್ವಂ ಯಸ್ಮಾತ್ತದಿಚ್ಛಯಾ । ಅಭಿಷ್ಟಿ ರೋಜಸಾ ನಿತ್ಯಂ (೩) ಮದಂ ಸುಖಮವಾಪ್ಸ್ಯಸಿ || ೧ ||

ಅ || (೧) ಸೋಮಪಾನ ಮಾಡಿದವರು ಸೋಮಪರ್ವಾಣಃ ಎನಿಸುತ್ತಾರೆ. ಅಥವಾ ಸೋಮಸ್ಯ ಪರ್ವಾಣಿ ಅವದಾನಾನಿ ಯೇಷಾಂ ಎಂಬ ವ್ಯುತ್ಪತ್ತಿಯಿಂದ ಸೋಮವನ್ನು ಖಂಡಿಸುವವರು. (ಯಾರಿಗೆ ಯಾವುದು ಆಹಾರವೋ ಅದು ಅವರವ್ದು ಆಗುತ್ತದೆ. ಆದಕಾರಣ ಸೋಮವು ಭೋಜ್ಯವು. ದೇವತೆಗಳು ಭೋಕ್ತೃಗಳು. ಹೀಗೆ ದೇವತೆಗಳು ಭೋಜ್ಯ ಭೋಕ್ತೃತ್ವರೂಪವಾದ ಸಂಬಂಧವುಳ್ಳವರಾದುದರಿಂದ ಸೋಮಪಾಃ ಎನಿಸುತ್ತಾರೆ. (೨) ಸರ್ವ ಸಾಮರ್ಥ್ಯದಿಂದ ಸಮಸ್ತ ಜಗತ್ತು ಯಾವಕಾರಣದಿಂದ ಶ್ರೀ ಹರಿಯ ಇಚ್ಛೆಯಿಂದಲೇ ಇರುತ್ತದೋ ಆದಕಾರಣ ಶ್ರೀಹರಿಯು ಅಭಿಷ್ಟಿಃ=ಎನಿಸುತ್ತಾನೆ. ಅಭಿತಃ=ಸರ್ವವಿಷಯದಲ್ಲಿ, ಇಷ್ಟಿಃ=ಇಚ್ಛೆಯುಳ್ಳವನು. (೩) ಮತ್ಸಿ=(ಮದೀಹರ್ಷೇ) ನಿತ್ಯದಲ್ಲಿಯೂ ಮದಂ=ಸುಖವನ್ನು ಹೊಂದುವಿ ||..||

ಋ || (೮೨) ಏಮೇನಂ ಸೃಜತಾ ಸುತೇ ಮಂದಿಮಿಂದ್ರಾಯ ಮಂದಿನೇ । ಚಕ್ರಿಂ ವಿಶ್ವಾನಿ ಚಕ್ರಯೇ || ೨ ||

ಅ ॥ (ಆ ಈಂ ಏನಂ ಎಂದು ಪದ ಚ್ಛೇದವು) (ಎಲೋ ಋತ್ವಿಜರೇ) ಏನಂ ಮಂದಿಂ=ಮದೀಹರ್ಷೇ) ಈ ಮದ(ಹರ್ಷ)ಕ್ಕೆ ಕಾರಣನಾದ, ಆ ಚಕ್ರಿಂ=ಚೆನ್ನಾಗಿ (ಜಗತ್ಸೃಷ್ಟ್ಯಾದಿ ಕರ್ಮಕ್ಕೆ ಸಾಧನನಾದ ಶ್ರೀವಿಷ್ಣುವನ್ನು ಮಂದಿನೇ=ಮದ ಸ್ವಭಾವವುಳ್ಳ, ವಿಶ್ವಾನಿಚಕ್ರಯೇ=ಜಗತ್ಸೃಷ್ಟ್ಯಾದಿ ಸಮಸ್ತ ಕಾರ್ಯಗಳನ್ನು ಮಾಡತಕ್ಕ ಇಂದ್ರಾಯ=ವಿಷ್ಣುವಿಗೋಸ್ಕರ, (ಶ್ರೀ ವಿಷ್ಣುವಿಗೆ ಪಾನಕ್ಕಾಗಿ) ಸುತೇ=ಚಂದ್ರನಿಂದ ಅಭಿಮನ್ಯಮಾನವಾದ ಸೋಮಲತೆಯಲ್ಲಿ ಆಸೃಜತ ಈಂ=ಅಭಿಮಂತ್ರಣಾದಿಗಳಿಂದಲೂ ಅನುಸಂಧಾನದಿಂದಲೂ ಸನ್ನಿಹಿತನನ್ನಾಗಿ ಮಾಡಲೇಬೇಕು. (ಅಂದರೆ ತನ್ನ ಸನ್ನಿಧಾನದಿಂದ ಪವಿತ್ರವಾಗಿಯೇ ಮಾಡಲ್ಪಟ್ಟ ಸೋಮವನ್ನು ಶ್ರೀಹರಿಯು ಪಾನಮಾಡುತ್ತಾನೆ. ಆವಕಾರಣ ಶ್ರೀಹರಿಯ ಸನ್ನಿಧಾನವು ಹೇಗೆ ಆಗುವುದೋ, ಹಾಗೆ ಮಾಡಿರಿ. ॥ ೨ ॥

ಭಾ ॥ ಏನಮಾಸೃಜತೇಂದ್ರೌ ಚ ವಿಷ್ಣುಂ ತಂ ಮದಕಾರಿಣಂ । ಮಂದಿನೇ ವಿಷ್ಣವೇ ಸಮ್ಯ
ಕ್ಕರ್ಮಿಣಂ ಸರ್ವಕರ್ಮಿಣೇ ॥ ೨ ॥

ಅ ॥ ಎಲೋ ಋತ್ವಿಜರೇ, ಈ ಮದಕಾರಿಯಾದ, ಚೆನ್ನಾಗಿ ಜಗತ್ಸೃಷ್ಟ್ಯಾದಿ ಸಮಸ್ತ ಕರ್ಮಗಳನ್ನು ಮಾಡತಕ್ಕ, ಆ ಈ ಶ್ರೀ ವಿಷ್ಣುವನ್ನು ಮದ ಸ್ವಭಾವವುಳ್ಳ ಜಗತ್ಸೃಷ್ಟ್ಯಾದಿ ಸಮಸ್ತ ಕರ್ಮಗಳನ್ನು ಮಾಡತಕ್ಕ ವಿಷ್ಣುವಿಗೆ ಪಾನಕ್ಕಾಗಿ ಚಂದ್ರನಿಂದ ಅಭಿಮನ್ಯಮಾನವಾದ ಸೋಮಲತೆಯಲ್ಲಿ ಸನ್ನಿಹಿತನನ್ನಾಗಿ ಮಾಡಲೇಬೇಕು (ತನ್ನ ಸನ್ನಿಧಾನದಿಂದ ಪವಿತ್ರಿತವಾದ ಸೋಮವನ್ನೇ ಶ್ರೀಹರಿಯು ಪಾನಮಾಡುತ್ತಾನೆ. ॥ ೨ ॥

ಋ ॥ (೬೩) ಮತ್ಸ್ವ ಸುಶಿಪ್ರ ಮಂದಿಭಿಃ ಸ್ತೋಮೇಭಿರ್ವಿಶ್ವಚರ್ಷಣೇ ।
ಸಚೈಷು ಸವನೇಷ್ವಾ ॥ ೩ ॥

ಅ ॥ ಸುಶಿಪ್ರ=ಶೋಭನ ಆನಂದವುಳ್ಳ, ವಿಶ್ವಚರ್ಷಣೇ=ಸರ್ವಜೀವ ನಿಯಾಮಕನೇ,ಏಷು ಸವನೇಷು=ಪ್ರಾತಸ್ಸವನ ಮೊದಲಾದ ಈ ಮೂರು ಸವನಗಳಲ್ಲಿ, ಸಚಾ=(ನಮ್ಮ ರಕ್ಷಣೆಯಿಂದ) ಒಡಗೂಡಿ, (ನಮ್ಮ ರಕ್ಷಣೆಯನ್ನು ಮಾಡುತ್ತಾ) ಮಂದಿಭಿಃ=ಮದ ಹೇತುಗಳಾದ, ಸ್ತೋಮೇಭಿಃ=ನಾವು ಮಾಡತಕ್ಕ ಸ್ತೋಮ (ಸ್ತುತಿ) ಗಳಿಂದ, ಆ ಮತ್ಸ್ವ=ಚೆನ್ನಾಗಿ ಸುಖವನ್ನು ಹೊಂದು. ॥ ೩ ॥

ಭಾ ॥ ಸ್ವಾನಂದ ವಿಶ್ವಜೀವೇಶ ಮತ್ಸ್ವಾಸ್ಮದ್ರಕ್ಷಯಾ ಸಹ ॥ ೩ ॥

ಅ ॥ ಸ್ವರೂಪಭೂತ ಶೋಭನ ಆನಂದವುಳ್ಳ, ಸಮಸ್ತ ಜೀವರಿಗೆ ನಿಯಾಮಕನಾದ ಶ್ರೀಹರಿಯೇ, ನಮ್ಮ ರಕ್ಷಣೆಯನ್ನು ಮಾಡುತ್ತಾ ಚೆನ್ನಾಗಿ ಸುಖವನ್ನು ಹೊಂದು. ॥ ೩ ॥

ಋ ॥ (೬೪) ಅಸೃಗ್ರಮಿಂದ್ರ ತೇ ಗಿರಃ ಪ್ರತಿ ತ್ವಾಮುದಹಾಸತ ।
ಅಜೋಷಾ ವೃಷಭಂ ಪತಿಂ ॥ ೪ ॥

ಅ ॥ ಇಂದ್ರ=ಎಲೋ ಶ್ರೀಹರಿಯೇ, ಅಜೋಷಾಃ=(ಜುಷೀಪ್ರೀತಿ ಸೇವನಯೋಃ) ನೀನು ಹೊರತು ಇನ್ನೊಬ್ಬರು ಸ್ತುತ್ಯರೂಪನಾಗಿ (ಇನ್ನೊಬ್ಬನು ಸ್ತುತ್ಯನು ಎಂಬ ನಿಮಿತ್ತದಿಂದ) ಎಲ್ಲಿಯೂ ಸರ್ವಥಾ ಸೇವ್ಯಗಳಾಗದಿರುವ, (ಅಂದರೆ ನೀನೇ ವೇದಗಳಿಂದ ಸ್ತುತ್ಯನು ಎಂಬ ಬುದ್ಧಿಯಿಂದ ಭಕ್ತರಿಂದ ವೇದಗಳು ಸೇವ್ಯಗಳು, ನಿನಗಿಂತ ಇನ್ನೊಬ್ಬನು ಸ್ತುತ್ಯನು ಎಂಬ ಬುದ್ಧಿಯಿಂದ ಸರ್ವಥಾ ಸೇವ್ಯಗಳಾಗದಿರುವ) ತೇ=ನಿನ್ನಿಂದ

ಹೊರಟಿರುವ, ಗಿರಃ=ವೇದವಚನಗಳು, ಅಸೃಗ್ರಂ=ಯಾವಾಗಲೂ, ವೃಷಭಂ=ಸರ್ವಶ್ರೇಷ್ಠನಾದ, ಪತಿಂ=ತನಗೆ ಪತಿಯಾದ, ತ್ವಾಂ ಪ್ರತಿ=ನಿನ್ನನ್ನೇ, ಉತ್=ಚೆನ್ನಾಗಿ (ಸರ್ವರಿಗಿಂತಲೂ) ಮುಖ್ಯನನ್ನಾಗಿಯೇ, ಅಹಾಸತ—(ಓಹಾಙ್‌ಗತೌ (ಹೊಂದಿದವು. (ಅಂದರೆ ನಿನ್ನಿಂದ ಉಚ್ಚರಿಸಲ್ಪಟ್ಟ ವೇದವಚನಗಳು ನಿನ್ನನ್ನೇ ಪರಮ ಮುಖ್ಯವೃತ್ತಿಯಿಂದ ಪ್ರತಿಪಾದಿಸುವುದಕ್ಕಾಗಿಯೇ ನಾವು ಅವುಗಳನ್ನು ಉಚ್ಚರಿಸಿದ್ದು, ಎಂದು ತಾತ್ಪರ್ಯವು) || ೪ ||

ಭಾ || ತ್ವನ್ನಿಃಸೃತಾ ವೇದವಾಚಸ್ತ್ವಾಂ ಪ್ರತ್ಯೇವಾಪ್ಯನಾರತಂ । ಉಚ್ಚೈರ್ಮುಖ್ಯತಯಾ ಸಮ್ಯಗ್ವಿಸೃಷ್ಟಾಃ ಸ್ವಪತಿಂ ಪ್ರತಿ ॥ ಅಜೋಷಾಃ ಸ್ತುತ್ಯರೂಪೇಣ ತ್ವತ್ತೋನ್ಯಸ್ತ್ವದೃತೇ ಕ್ವಚಿತ್ || ೪ ||

ಅ || ಶ್ರೀಹರಿಯೇ ನೀನು ಹೊರತು ಇನ್ನೊಬ್ಬನು ಸ್ತುತ್ಯನು ಎಂಬ ನಿಮಿತ್ತದಿಂದಲಾದರೂ ಎಲ್ಲಿಯೂ ಸರ್ವಥಾ ಸೇವಿಸಲ್ಪಡದಿರುವ ನಿನ್ನಿಂದ ಉಚ್ಚರಿಸಲ್ಪಟ್ಟಿರುವ ವೇದ ವಚನಗಳು ಯಾವಾಗಲೂ ತನಗೆ ಪತಿಯಾದ ನಿನ್ನನ್ನೇ ಸರ್ವೋತ್ತಮನನ್ನಾಗಿಯೇ ಮುಖ್ಯ ವೃತ್ತಿಯಿಂದ ಪ್ರತಿಪಾದಿಸುವುದಕ್ಕಾಗಿಯೇ ನಮ್ಮಿಂದ ಚೆನ್ನಾಗಿ ಉಚ್ಚರಿಸಲ್ಪಟ್ಟವೆ. || ೪ ||

ಋ || (೮೫) ಸಂಚೋದಯ ಚಿತ್ರಮರ್ವಾಗ್ರಾಧ ಇಂದ್ರ ವರೇಣ್ಯಂ।
ಅಸದಿತ್ತೇ ವಿಭು ಪ್ರಭು || ೫ || ೧೭ ||

ಅ || ಇಂದ್ರ=ಶ್ರೀಹರಿಯೇ, ಅರ್ವಾಕ್=ಕೆಳಗಿರತಕ್ಕ ನಮ್ಮನ್ನು ಕುರಿತು, ಚಿತ್ರಂ=ಮಂಗಲಕರವಾದ, ವರೇಣ್ಯಂ=ಅಂಗೀಕರಿಸಲರ್ಹವಾದ, ರಾಧಃ=ಐಶ್ವರ್ಯವನ್ನು ಸಂಚೋದಯ=(ನಮಗೆ) ಚೆನ್ನಾಗಿ ಪ್ರೇರೇಪಿಸು. (ನಮಗೆ ಕೊಡು) (ಕೊಡಲಿಕ್ಕೆ) ತೇ=ನಿನಗೆ, ವಿಶಿಷ್ಟವಾಗಿರುವ, ಪ್ರಭು=ವಿಶೇಷತಃ ಅತಿಪ್ರಕೃಷ್ಟವಾಗಿರುವ ನಾಶವಿಲ್ಲದಿರುವ ಮಂಗಲವು, (ಸಾಮರ್ಥ್ಯವು) ಅಸದಿತ್=(ಅಸಭುವಿ) ಉಂಟೇ ಉಂಟು. || ೫ ||

ಭಾ || ಆರ್ವಾಗ್ಜನ್ಮೀಚಾನ್ಪ್ರತಿ ತ್ವಸ್ಮಾನ್ ಭದ್ರಂ ರಾಧಃ ಪ್ರಚೋದಯ। ಅಸ್ತ್ಯೇವ ತೇ ವಿಶೇಷೇಣ ಪ್ರಕೃಷ್ಟಂ ಶುಭಮಚ್ಯುತಂ || ೫ ||

ಅ || ಶ್ರೀಹರಿಯೇ ಕೆಳಗಿರತಕ್ಕ ನಮ್ಮನ್ನು ಕುರಿತು ಮಂಗಲಕರವಾದ ಐಶ್ವರ್ಯವನ್ನು ನಮಗೆ ಕೊಡು. ಕೊಡುವುದಕ್ಕಾಗಿ ನಿನಗೆ ವಿಶೇಷವಾಗಿ ಪ್ರಕೃಷ್ಟವಾದ ಬಹಳವಾದ ಸದಾ ಅಭಿವೃದ್ಧವಾದ ನಾಶವಿಲ್ಲದಿರುವ ಮಂಗಲವು (ಸಾಮರ್ಥ್ಯವು) ಉಂಟೇ ಉಂಟು. || ೫ || ೧೭ ||

ಋ || (೮೬) ಅಸ್ಮಾನ್ಸು ತತ್ರ ಚೋದಯೇಂದ್ರ ರಾಯೇ ರಭಸ್ವತಃ।
ತುವಿದ್ಯುಮ್ನ ಯಶಸ್ವತಃ || ೬ ||

ಅ || ತುವಿದ್ಯುಮ್ನ=ಮಹಾಕೀರ್ತಿಯುಳ್ಳ, ಇಂದ್ರ=ಇಂದ್ರನೇ, ರಭಸ್ವತಃ=(ರೇಭಶಬ್ದೇ) ಶಬ್ದವುಳ್ಳ (ಸ್ತುತಿಸುವ,) ಯಶಸ್ವತಃ=ಕೀರ್ತಿಯುಳ್ಳ, ಅಸ್ಮಾನ್=ನಮ್ಮನ್ನು, ರಾಯೇ=(ರೈಶಬ್ದೇ) ಮಹೈಶ್ವರ್ಯ

ಸ್ವರೂಪನಾದ, ತತ್ರ=ಅಂತಹ ನಿನ್ನಲ್ಲಿ, ಸು ಚೋದಯ=(ಚುದಪ್ರೇರಣೇ) ಚೆನ್ನಾಗಿ ಪ್ರೇರೇಪಿಸು. (ನಿನ್ನಲ್ಲಿಯೇ ಬುದ್ಧ್ಯಾದಿಗಳು ಇರುವ ಹಾಗೆ ನಮ್ಮನ್ನು ಮಾಡು.) ॥ ೬ ॥

ಭಾ ॥ ರಭಸ್ವತಃ ಶಬ್ದವತಃ ಸ್ತೋತ್ರ್ಯನಸ್ಮಾನ್ಯಶಸ್ವತಃ । ತತ್ರ ತ್ವಯಿ ಮಹಾರಾಯೇ ಮಹಾಕೀರ್ತೇ ಸು ಚೋದಯ ॥ ೬ ॥

ಅ ॥ ಮಹಾ ಕೀರ್ತಿಯುಳ್ಳ ಶ್ರೀ ಹರಿಯೇ, ರಭಸ್ವತಃ=ಶಬ್ದವುಳ್ಳ, ಅಂದರೆ ಸ್ತೋತ್ರ ಮಾಡುವ, ಕೀರ್ತಿಯುಳ್ಳ, ನಮ್ಮನ್ನು ಮಹೈಶ್ವರ್ಯ ಸ್ವರೂಪನಾದ, (ತತ್ರ=) ಅಂತಹ ನಿನ್ನಲ್ಲಿ ಪ್ರೇರೇಪಿಸು. (ನಿನ್ನ ವಿಷಯಕ ಬುದ್ಧ್ಯಾದಿಗಳಿಂದ ಕೂಡಿದವರನ್ನಾಗಿ ಮಾಡು) ॥ ೬ ॥

ಋ ॥ (೮೭) ಸಂಗೋಮದಿಂದ್ರ ವಾಜವದಸ್ಮೇ ಪೃಥು ಶ್ರವೋ ಬೃಹತ್ ।
ವಿಶ್ವಾಯುರ್ಧೇಹ್ಯಕ್ಷಿತಂ ॥ ೭ ॥

ಅ ॥ ಇಂದ್ರ= ಇಂದ್ರನೇ, ವಿಶ್ವಾಯುಃ=ಸಂಪೂರ್ಣವಾದ ಆಯುಷ್ಯವುಳ್ಳ, ನಿತ್ಯನಾದ ನೀನು ಅಸ್ಮೇ=ನಮ್ಮಲ್ಲಿ, ಗೋಮತ್=ಗೋವುಗಳಿಂದ ಕೂಡಿದ, ವಾಜವತ್ ಅನ್ನಾದಿಗಳಿಂದ ಕೂಡಿದ, ಅಕ್ಷಿತಂ=ನಾಶವಿಲ್ಲದಿರುವ, ಪೃಥು=ಅತಿಶಯವಾಗಿ ಬಹಳವಾದ, ಶ್ರವಃ=ಶ್ರವಣೇಂದ್ರಿಯದಿಂದ ಉಂಟಾದ ಜ್ಞಾನವನ್ನು ಸಂಧೇಹಿ=(ಡುದಾಞ್ ದಾನೇ) ಚೆನ್ನಾಗಿ ಕೊಡು. ॥ ೭ ॥

ಭಾ ॥ ಅಸ್ಮಾಸ್ವತಿ ಬೃಹಜ್ಜ್ಞಾನಂ ನಿತ್ಯಂ ಸಂಧೇಹಿ ಚಾಕ್ಷಯಂ । ॥ ೭ ॥

ಅ ॥ ಎಲೋ ಇಂದ್ರನೇ, ನಮ್ಮಲ್ಲಿ ನಾಶವಿಲ್ಲದಿರುವ ಅತಿ ಮಹತ್ತಾದ ಜ್ಞಾನವನ್ನು ಸರ್ವದಾ ಇಡು (ಕೊಡು). ॥ ೭ ॥

ಋ ॥ (೮೮) ಅಸ್ಮೇ ಧೇಹಿ ಶ್ರವೋ ಬೃಹದ್ದ್ಯುಮ್ನಂ ಸಹಸ್ರಸಾತಮಂ ।
ಇಂದ್ರ ತಾ ರಥಿನೀರಿಷಃ ॥ ೮ ॥

ಅ ॥ ಇಂದ್ರ=ಇಂದ್ರನೇ, ಅಸ್ಮೇ=ನಮ್ಮಲ್ಲಿ, ಬೃಹತ್ ಶ್ರವಃ=ಮಹಾವಿದ್ಯೆಯನ್ನು. ಸಹಸ್ರಸಾತಮಂ=(ಸಹಸ್ರಪದೋಪಪದಾತ್ ವನಷಣ ಸಂಭಕ್ತೌ) ಅತಿಶಯವಾಗಿ ಸಹಸ್ರ ಲಾಭದಿಂದ ಕೂಡಿದ, (ಬಹು ಲಾಭವನ್ನು ಕೊಡತಕ್ಕ) ದ್ಯುಮ್ನಂ=ಕೀರ್ತಿಯನ್ನೂ, ರಥಿನೀಃ=ದೇಹವುಳ್ಳ, ಇಷಃ—ಅನ್ನಗಳನ್ನು, (ಅಂದರೆ ವೈಕಲ್ಯವಿಲ್ಲದಿರುವ ಆರೋಗ್ಯಯುಕ್ತವಾದ ದೇಹದಿಂದ ಕೂಡಿದ ಅನ್ನವನ್ನು) ಧೇಹಿ ಕೊಡು. ॥ ೮ ॥

ಭಾ ॥ (೧) ವಿದ್ಯಾಂ ಕೀರ್ತಿಂ ಸದೇಹಾನ್ನಂ ಬಹುಲಾಭಯುತಂ ಬೃಹತ್ (೨) ಪ್ರಾರ್ಥನೇ ಪೌನರುಕ್ತ್ಯಂ ನ ಚೋದಯೇತಿ ತತಃ ಪುನಃ ॥ ೮ ॥

ಅ ॥ (೧) ಎಲೋ ಇಂದ್ರನೇ, ಮಹಾ ಜ್ಞಾನವನ್ನು ಬಹುಲಾಭಪ್ರದವಾದ ಶ್ರೇಷ್ಠವಾದ ಆರೋಗ್ಯವಿರುವ ದೇಹದಿಂದ ಕೂಡಿದ ಅನ್ನವನ್ನೂ, ಕೀರ್ತಿಯನ್ನೂ ಕೊಡು. (೨) **ಸಂಚೋದಯಚಿತ್ರಂ ಚೋದಯ**

ಇತ್ಯಾದಿಗಳಿಂದ ಹೇಳಿದುದನ್ನೇ ತಿರುಗಿ **ಸಂಘೇಹಿ** ಇತ್ಯಾದಿಗಳನ್ನು ಹೇಳಿದುದರಿಂದ ಪುನರುಕ್ತಿ ದೋಷವು (ಎಂದರೆ ಪ್ರಾರ್ಥಿಸುವಾಗ ಪೌನರುಕ್ತ್ಯ ದೋಷವು) ಯಾವ ಕಾರಣದಿಂದ ಇಲ್ಲವೋ,ಆದ ಕಾರಣ **ಚೋದಯ** ಎಂದು ಹೇಳಿ ಪುನಃ **ಸಂಘೇಹಿ** ಇತ್ಯಾದಿ ವಚನವು ಕೂಡುತ್ತದೆ. (ಪುನಃ ಪುನಃ ಹೇಳಿದರೂ ಪ್ರಾರ್ಥನಾ ರೂಪವಾಗಿರುವುದರಿಂದ ಪುನರುಕ್ತಿ ದೋಷವಿಲ್ಲ.) ॥ ೮ ॥

ಋ ॥ (೮೯) ವಸೋರಿಂದ್ರಂ ವಸುಪತಿಂ ಗೀರ್ಭಿರ್ಗೃಣಂತ ಋಗ್ಮಿಯಂ ।
ಹೋಮ ಗಂತಾರಮೂತಯೇ ॥ ೯ ॥

ಅ ॥ ವಸೋಃ=ದೇವತೆಗಳಿಗೆ, ವಸುಪತಿಂ=(ವಸಂತಿ ದೇವಾಃ ಶರೀರೇಂದ್ರಿಯಾದಿಷು ಇತಿ ವಸವಃ ಎಂಬ ವ್ಯುತ್ಪತ್ತಿಯಿಂದ) ಯಾರು ದೇವತೆಗಳೋ ಅವರಿಗೆ ಅಧಿಪತಿಯಾದ, (ದೇವದೇವೇಶ್ವರನಾದ) ಋಗ್ಮಿಯಂ=(ಮಾ ಮಾನೇ) ಋಕ್ಕುಗಳಿಂದ ತಿಳಿಯಲರ್ಹನಾದ, ಇಂದ್ರಂ=ಶ್ರೀ ಹರಿಯನ್ನು ಗಂತಾರಂ=ಭಕ್ತರನ್ನು ಕುರಿತು ಹೋಗುವವನನ್ನಾಗಿ (ಭಕ್ತರಿಗೆ ಅಭೀಷ್ಟದಾಯಕನನ್ನಾಗಿ) ಗೀರ್ಭಿಃ=ವೇದ ವಚನಗಳಿಂದ ಗೃಣಂತಃ=ಸ್ತುತಿಸುವ ನಾವು, ಊತಯೇ=ಅಭೀಷ್ಟ ಸಿದ್ಧಿಗಾಗಿ, (ಶ್ರೀ ಹರಿಯನ್ನು) ಹೋಮ=(ಹ್ವೇಞಶಬ್ದೇ) ಕರೆಯುತ್ತೇವೆ ॥ ೯ ॥

ಭಾ ॥ ವಸೋರ್ವಸೂನಾಂ ಚ ಪತಿಂ ದೇವದೇವೇಶ್ವರಂ ಪ್ರಭುಂ। ಋಜ್ಮ್ಯೇಯಮಾಹ್ವಯಾ ಮೋಽತ್ರ ಗೃಣಂತೋಽಭೀಷ್ಟಸಿದ್ಧಯೇ ॥ ೯ ॥

ಅ ॥ ದೇವತೆಗಳಿಗೂ ಯಾರು ದೇವತೆಗಳೋ ಅವರಿಗೂ ಅಧಿಪತಿಯಾದ ಅಂದರೆ ದೇವದೇವೇಶ್ವರನೂ, ಋಕ್ಕುಗಳಿಂದ ಜ್ಞೇಯನೂ ಆದ ಶ್ರೀ ಹರಿಯನ್ನು ಅಭೀಷ್ಟ ಸಿದ್ಧಿಗಾಗಿ ನಾವು ಸ್ತುತಿಸುತ್ತಾ ಇಲ್ಲಿ ಕರೆಯುತ್ತೇವೆ ॥ ೯ ॥

ಋ ॥ (೯೦) ಸುತೇ ಸುತೇ ನ್ಯೋಕಸೇ ಬೃಹದ್ಬೃಹತ ಏದರಿಃ ।
ಇಂದ್ರಾಯ ಶೂಷಮರ್ಚತಿ ॥ ೧೦ ॥ ೧೮ ॥ ೯ ॥

ಅ ॥ ಅರಿಃ=(ರೀಙಕ್ಷಯೇ) ಅಥವಾ (ರಿಷಹಿಂಸಾಯಾಂ) (ನರಿಷ್ಯತಿ ನರೀಯತೇ ವಾ ಎಂಬ ವ್ಯುತ್ಪತ್ತಿಯಿಂದ) ಯಾವನು ನಾಶವಿಲ್ಲದವನೋ, (ತನಗೆ ಅವಿನಾಶವನ್ನು ಇಚ್ಛಿಸುವ ಪುರುಷನೋ) (ಆತನು) ಬೃಹತ್=ಬಹಳವಾದ, ಶೂಷಂ=ಸುಖವನ್ನುದ್ದೇಶಿಸಿ, ಸುತೇ ಸುತೇ=ಪ್ರತಿ ಸೋಮಸವನದಲ್ಲಿಯೂ, ಓಕಸೇ=ಸಜ್ಜನರಿಗೆ ಆಶ್ರಯನಾದ, ಬೃಹತೇ=ಸರ್ವಗುಣಪರಿಪೂರ್ಣನಾದ, ಇಂದ್ರಾಯ ಇತ್=ಪರಮೇಶ್ವರನಿಗೋಸ್ಕರವೇ, ಆ ನಿ ಅರ್ಚತಿ=ಚೆನ್ನಾಗಿ ಭಕ್ತಿ ಪೂರ್ವಕವಾಗಿ ಪೂಜಿಸುತ್ತಾನೆ. (ಅಂದರೆ ಇಷ್ಟಪ್ರಾಪ್ತಿ, ಅನಿಷ್ಟ ಪರಿಹಾರಗಳನ್ನು ಇಚ್ಛಿಸುತ್ತಾ ಶ್ರೀ ಪರಮೇಶ್ವರನನ್ನೇ ಚೆನ್ನಾಗಿ ಪೂಜಿಸಬೇಕು.) ॥ ೧೦ ॥ ೧೮ ॥ ೯ ॥

ಭಾ ॥ ಅವಿನಾಶ್ಯರಿರುದ್ದಿಷ್ಟೋ ಬೃಹಚ್ಛೂಷಂ ಸುಖಂ ಪ್ರತಿ। ಸುತೇ ಸುತೇ ಸದ್ಗೃಹಾಯ ದೇವಾಯ ಬೃಹತೇಽರ್ಚತಿ ॥ ೧೦ ॥ ೧೮ ॥ ೯ ॥

ಅ ॥ ತನಗೆ ಅವಿನಾಶವನ್ನು ಇಚ್ಛಿಸುವ ಪುರುಷನು ಅಥವಾ ದುರ್ಬುದ್ಧ್ಯಾದಿ ದೋಷಗಳಿಲ್ಲದಿರುವ ಪುರುಷನು ಅರಿಃ ಎನಿಸುತ್ತಾನೆ. ಬೃಹಚ್ಛ್ರುಷಂ=ಮಹಾ ಸುಖವನ್ನುದ್ದೇಶಿಸಿ ಪ್ರತಿಸೋಮಸವನದಲ್ಲಿ, ಸಜ್ಜನರಿಗೆ ಆಶ್ರಯನಾದ, ಗುಣಪೂರ್ಣನಾದ, ಶ್ರೀಪರಮಾತ್ಮನನ್ನೇ ಇಷ್ಟಾನಿಷ್ಟ ಪ್ರಾಪ್ತಿ ಪರಿಹಾರಗಳನ್ನು ಇಚ್ಛಿಸುವ ಪುರುಷನು ಪೂಜಿಸಬೇಕು. ॥ ೧೦ ॥ ೧೮ ॥ ೯ ॥

ಅವ ॥ ೧೨ ಋಕ್ಕು ಐಂದ್ರಸೂಕ್ತ. ಅನುಷ್ಟುಪ್ ಛಂದಸ್ಸು. ಅನುಷ್ಟುಪ್ ಛಂದಸ್ಸಿಗೆ ಬ್ರಹ್ಮಾಣೀ ರೋಹಿಣಿಯರು ಅಭಿಮಾನಿಯರು

ಋ ॥ (೯೧) ಗಾಯಂತಿ ತ್ವಾ ಗಾಯತ್ರಿಣೋಽರ್ಚಂತ್ಯರ್ಕಮರ್ಕಿಣಃ ।
ಬ್ರಹ್ಮಾಣಸ್ತ್ವಾ ಶತಕ್ರತ ಉದ್ವಂಶಮಿವ ಯೇಮಿರೇ ॥ ೯ ॥

ಅ ॥ ಶತಕ್ರತೋ=ಬಹುಜ್ಞಾನವುಳ್ಳವನೇ, ಅರ್ಕಂ=ಅತಿಶಯವಾಗಿ ಸುಖರೂಪನಾದ, ತ್ವಾ=ನಿನ್ನನ್ನು ಗಾಯತ್ರಿಣಃ=ಗಾಯತ್ರ ಸಾಮವುಳ್ಳ ಸಾಮವೇದಿಗಳು ಗಾಯಂತಿ=ಗಾನಮಾಡುತ್ತಾರೆ. ಅರ್ಕಿಣಃ ಋಕ್ಕುಗಳುಳ್ಳ ಋಗ್ವೇದಿಗಳು, ತ್ವಾ=ನಿನ್ನನ್ನು ಅರ್ಚಂತಿ=(ಋಚಸ್ತುತೌ) ಋಕ್ಕುಗಳಿಂದ ಹೊಗಳುತ್ತಾರೆ. ಬ್ರಹ್ಮಾಣಃ=ಚತುರ್ಮುಖ ಬ್ರಹ್ಮರು, ಉತ್‌ವಂಶಮಿವ-(ರಾಜಾದಿಗಳು ಬರುವ ಕಾಲದಲ್ಲಿ ಎತ್ತರವಾದ ಬಿದಿರಿಗೆ ವಸ್ತ್ರವನ್ನು ಜೋತಾಡಿಸಿ ಅದನ್ನು (ಅಂದರೆ ಮಕರ ತೋರಣವನ್ನು)ಪ್ರಾಸಾದಕ್ಕಿಂತಲೂ ಊರ್ಧ್ವದೇಶದಲ್ಲಿ ಸ್ಥಾಪಿಸುತ್ತಾರೆ. ಅಂತಹ ವಂಶಕ್ಕೆ ಶಕ್ರಕೇತುವೆಂದು ಹೆಸರು) ಶಕ್ರಕೇತುವನ್ನೆಂಬತೆ ಎತ್ತರನಾದವನನ್ನಾಗಿ (ಸರ್ವೋಚ್ಚನನ್ನಾಗಿ) ತ್ವಾ=ನಿನ್ನನ್ನು, ಯೇಮಿರೇ-ತಿಳಿದರು. ಅಥವಾ ಉತ್‌ಯೇಮಿರೇ=ಸರ್ವೋತ್ತಮನೆಂದು ತಿಳಿದರು. ॥ ೧ ॥

ಭಾ ॥ ಗಾಯಂತಿ ಸಾಮಗಾಸ್ತ್ವೃಗ್ಭಿಃ ಶಂಶಂತ್ಯೃಗ್ವೇದಿನೋಽತಿಕಂ । ವಿರಿಂಚಾಸ್ತ್ವಾಂ
ಬಹುಜ್ಞಾನ ಶಕ್ರಕೇತುಮಿವೋಚ್ಛ್ರಿತಂ । ವ್ಯಜಾನನ್ ॥ ೧ ॥

ಅ ॥ ಬಹುಜ್ಞಾನವುಳ್ಳವನೇ, ಅತಿಶಯರೂಪನಾದ ನಿನ್ನನ್ನು, ಸಾಮವೇದಿಗಳು ಸಾಮಗಳಿಂದ ಗಾನ ಮಾಡುತ್ತಾರೆ. ಋಗ್ವೇದಿಗಳು ಋಕ್ಕುಗಳಿಂದ ಹೊಗಳುತ್ತಾರೆ. ಚತುರ್ಮುಖರು ಶಕ್ರಕೇತುವನ್ನೆಂಬಂತೆ ಉಚ್ಛ್ರಿತನನ್ನಾಗಿ (ಸರ್ವೋತ್ತಮನನ್ನಾಗಿ) ತಿಳಿದರು ॥ ೧ ॥

ಋ ॥ (೯೨) ಯತ್ಸಾನೋಃ ಸಾನುಮಾರುಹದ್ಭೂರ್ಯಸ್ಪಷ್ಟ ಕರ್ತ್ವಂ ।
ತದಿಂದ್ರೋ ಅರ್ಥಂ ಚೇತತಿ ಯೂಥೇನ ವೃಷ್ಣಿರೇಜತಿ ॥ ೨ ॥

ಅ ॥ ಅಸ್ಪಷ್ಟ=ಗೂಢ ಶಕ್ತಿಯುಳ್ಳವನೇ, ಯತ್=ಯಾವ ಕಾರಣದಿಂದ, (ನಿನಗೆ) ಕರ್ತ್ವಂ=ಕರಣದಲ್ಲಿ ಸಾಮರ್ಥ್ಯವು (ಸಾಮರ್ಥ್ಯ ಲಾಭವು.) ಕರ್ತೃತ್ವವು ಸಾನೋಃ ಸಾಮಂ ಆ ಅರುಹತ್=ಉತ್ತಮಕ್ಕಿಂತಲೂ ಉತ್ತಮವಾಯ್ತೋ, ಭೂರಿ=ಅದಕ್ಕಿಂತಲೂ ಅಧಿಕವಾದುದೂ ಆಯ್ತೋ, ತತ್=ಆ ಕಾರಣದಿಂದ, ವೃಷ್ಣಿಃ=ಅಭೀಷ್ಟಸೇಚಕನಾದ, ಇಂದ್ರಃ=ಇಂದ್ರನೆನಿಸಿದ ನೀನು, ಅರ್ಥಂ=ಸರ್ವ ಪದಾರ್ಥಗಳನ್ನು, ಚೇತತಿ= (ಚಿತೀಸಂಜ್ಞಾನೇ) ತಿಳಿಯುತ್ತಿ. ಯೂಥೇನ=ಮುಕ್ತಾಮುಕ್ತ ಸಮೂಹದಿಂದ, ಏಜತಿ= (ಏಜೃದೀಪ್ತೌ) ;(ಏಜೃ ಭ್ರೇಜೃ ಭ್ರಾಜೃ ದೀಪ್ತೌ) ಶೋಭಿಸುತ್ತಿ. (ಪೂರ್ಣ ಶಕ್ತಿಯಿಲ್ಲದೆ ಸರ್ವಜ್ಞತ್ವವೂ ಸರ್ವ ಸೇವ್ಯತ್ವವೂ

ಕೂಡಲಾರವು.) ಅಥವಾ ಯತ್=ಯಾವ ಕಾರಣದಿಂದ, ಕರ್ತೃತ್ವಂ=ಶ್ರೀಹರಿಯ ಕರ್ತೃತ್ವವು, ಸಾನೋಃ ಸಾನುಂ=ಉತ್ತಮಕ್ಕಿಂತಲೂ ಉತ್ತಮವಾದ, ಬ್ರಹ್ಮಾದಿ ದೇವತಾ ಸಮುದಾಯವನ್ನು, ಆ ಅರುಹತ್= ಹೊಂದಿತೋ. (ಶ್ರೀಹರಿಯು ಅವರಲ್ಲಿದ್ದು ನಿಖಿಲ ಕಾರ್ಯಗಳನ್ನು ಮಾಡುತ್ತಾನೋ) ತತ್=ಆ ಕಾರಣ ದಿಂದ, ತತ್=ಕರ್ತೃತ್ವವು, ಭೂರಿ ಅಸ್ಪಷ್ಟ=(ಸ್ಪಶ ಅಜ್ಞಾತ ದೃಶೌ) ನಿಸ್ಸಂಶಯವಾಗಿ ಸ್ಪಷ್ಟವಾಯ್ತು. (ಮೊದಲು ಅಜ್ಞಾತವಾದುದು ಈಗ ಜ್ಞಾತವಾಯ್ತು.) (ಶ್ರೀ ಹರಿಯು ಇತರರಲ್ಲಿ ಅಂತರ್ಗತನಾಗಿದ್ದಾನೆಂಬು ದನ್ನು ಬಿಟ್ಟು ಸಾಕ್ಷಾತ್ತಾಗಿ ಶ್ರೀ ಹರಿಯೇ ಕರ್ತನೆಂಬುವುದನ್ನು (ಅಂದರೆ ಈಶ್ವರಗತ ಕರ್ತೃತ್ವವನ್ನು) ಮಂದ ಮತಿಗಳು ತಿಳಿಯಲಾರರು.) ತತ್=ಶ್ರೀ ಹರಿಯು ಸರ್ವಕರ್ಮಗಳಿಗೆ ಕರ್ತನಾದುದರಿಂದಲೇ, ಇಂದ್ರಃ=ಶ್ರೀ ಹರಿಯು, ಅರ್ಥಂ=ಅಶೇಷಾರ್ಥಗಳನ್ನು, ಚೇತತಿ=ತಿಳಿಯುತ್ತಾನೆ. ವೃಷ್ಣಿಃ=ಅಭೀಷ್ಟ ಸೇಚಕನಾದ ಶ್ರೀ ಹರಿಯು, ಯೂಥೇನ=ಮತ್ಸ್ಯ ಮೊದಲಾದ ತನ್ನ ರೂಪಗಳ ಮಹಾ ಸಮೂಹದಿಂದ, ಏಜತಿ-(ಏಜೃ ಕಂಪನೇ) ವ್ಯಾಪಾರ ಮಾಡುತ್ತಾನೆ. (ಜಗತ್ಸೃಷ್ಟ್ಯಾದಿಗಳನ್ನು ಮಾಡುತ್ತಾನೆ.) ॥ ೨ ॥

ಭಾ ॥ (೧) ಉಚ್ಚತೋಽಪ್ಯುಚ್ಚಂ ಸಾಮರ್ಥ್ಯಂ ಕರಣೇ ತವ । ತತೋऽಪಿ ಭೂರಿಯತ್ತೇನ ಚೇತತ್ಯರ್ಥಮತೋ ಭವಾನ್ ॥ಮುಕ್ತಾಮುಕ್ತಸಮೂಹೇನ ಶೋಭತೇ ಗೂಢ ಶಕ್ತಿ (ಮ) ಮಾನ್ ॥ (೨) ಉಚ್ಚಾದುಚ್ಚಂ ವಿರಿಂಚಾದಿಗತಂ ಕರ್ತೃತ್ವಮೇವ ಯತ್ । ಭೂರಿಸ್ಪಷ್ಟಮಭೂತ್ತೇನ ಪರೇಶಸ್ಯ ತತಶ್ಚ ಸಃ । ಚೇತತ್ಯರ್ಥಾನಶೇಷಾಂಶ್ಚ ಮಹಾ ಯೂಥೇನ ಚೇಷ್ಟತೇ ॥ ೨ ॥

ಅ ॥ (೧) ಗೂಢ ಶಕ್ತಿಯುಳ್ಳ ಶ್ರೀಹರಿಯೇ, ಯಾವ ಕಾರಣದಿಂದ ನಿನಗೆ ಸಾಮರ್ಥ್ಯ ಲಾಭವು ಉಚ್ಚ ವಾದ ಬ್ರಹ್ಮಾದಿಗಳ ಕರ್ತೃತ್ವಕ್ಕಿಂತಲೂ ಉಚ್ಚವಾಯ್ತೋ, (ಅಂದರೆ ಅದಕ್ಕಿಂತಲೂ ವಿಷ್ಣು ಕರ್ತೃತ್ವವು ಉತ್ತ ಮವೋ) ಬ್ರಹ್ಮಾದಿಗಳ ಕರ್ತೃತ್ವಕ್ಕಿಂತಲೂ ಅಧಿಕವೂ ಆಗಿಯದೋ, ಆದಕಾರಣ ಅತ್ಯುಚ್ಚವಾದ ಕರ್ತೃತ್ವ ವಿದ್ದ ಪ್ರಯುಕ್ತ ಭಕ್ತರಿಗೆ ಅಭೀಷ್ಟ ಸೇಚಕನಾದ ನೀನು ಸಮಸ್ತ ಪದಾರ್ಥಗಳನ್ನು ತಿಳಿಯುತ್ತಿ. ಆದುದ ರಿಂದಲೇ ಮುಕ್ತಾಮುಕ್ತರಸಮೂಹದಿಂದ ಶೋಭಿಸುತ್ತಿ. (ಅಂದರೆ ನಿರವಧಿಕ ಪೂರ್ಣ ಶಕ್ತಿಯಿಲ್ಲದೆ ಸರ್ವಜ್ಞ ತ್ವವೂ ಸರ್ವಸೇವ್ಯತ್ವವೂ ಕೂಡಲಾರದು.) (೨) (ಋಕ್ಕನ್ನು ರೀತ್ಯಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಯಾವ ಕಾರಣದಿಂದ ಶ್ರೀಹರಿಯ ಕರ್ತೃತ್ವವೇ, ಉತ್ತಮರಾದ ಇಂದ್ರಾದಿಗಳಿಗಿಂತ ಉತ್ತಮರಾದ ಬ್ರಹ್ಮ ರುದ್ರಾದಿ ದೇವತಾ ಸಮೂಹಗಳನ್ನು ಹೊಂದಿತೋ, (ಅಂದರೆ, ಶ್ರೀಹರಿಯು ಬ್ರಹ್ಮಾದಿ ದೇವತೆಗಳಲ್ಲಿದ್ದು ಸೃಷ್ಟ್ಯಾದಿ ಕಾರ್ಯಗಳನ್ನು ಮಾಡುತ್ತಾನೋ,) ಆ ಕಾರಣದಿಂದಲೇ, ಶ್ರೀಹರಿಯ ಕರ್ತೃತ್ವವು ಅತಿಶಯವಾಗಿ ಸ್ಪಷ್ಟವಾಯ್ತು. (ಮೊದಲು ಅಜ್ಞಾತವಾದುದು ಈಗ ಜ್ಞಾತವಾಯ್ತು.) (ಅಂದರೆ—ಶ್ರೀಹರಿಯು ಬ್ರಹ್ಮಾದಿಗಳಲ್ಲಿ ಅಂತರ್ಗತನಾಗಿಯೇ ಕಾರ್ಯ ಮಾಡುವುದು ಹೊರತು ಸಾಕ್ಷಾತ್ ಶ್ರೀಹರಿಯೇ ಕರ್ತನೆಂಬುವುದನ್ನು (ಈಶ್ವರ ಗತ ಕರ್ತೃತ್ವನನ್ನು) ಮಂದರು ತಿಳಿಯಲಾರರು.) ಅಂತೂ ಸರ್ವಕರ್ಮ ಕರ್ತೃತ್ವವಿದ್ದ ಪ್ರಯುಕ್ತವೇ ಆ ಶ್ರೀಹರಿಯು ಅಶೇಷಾರ್ಥಗಳನ್ನು ತಿಳಿಯುತ್ತಾನೆ. ಮತ್ಸ್ಯ ಮೊದಲಾದ ಸ್ವಕೀಯ ರೂಪಗಳ ಸಮೂಹದಿಂದಲೇ ಸೃಷ್ಟ್ಯಾದಿ ವ್ಯಾಪಾರ ಮಾಡುತ್ತಾನೆ. ॥ ೨ ॥

ಋ ॥ (೯೩) ಯುಕ್ಷ್ವಾ ಹಿ ಕೇಶಿನಾ ಹರೀ ವೃಷಣಾ ಕಕ್ಷ್ಯಪ್ರಾ ।

ಅಥಾ ನ ಇಂದ್ರ ಸೋಮಪಾ ಗಿರಾಮುಪಶ್ರುತಿಂ ಚರ ॥ ೩ ॥

ಅ ॥ ಸೋಮಪಾಃ=ಸೋಮಪಾನ ಮಾಡತಕ್ಕ, ಇಂದ್ರ=ಇಂದ್ರನೇ, ಕೇಶಿನಾ=ಜೋತಾಡತಕ್ಕ ಕೇಶ ಗಳುಳ್ಳ, ವೃಷಣಾ=ರೇತಸ್ಸನ್ನು ಸೇಚಿಸುವ, (ತರುಣಗಳಾದ) ಕಕ್ಷ್ಯಪ್ರಾ= (ಪ್ರಾ ಪಾಲನ ಪೂರಣಯೋಃ) (ಕಕ್ಷ

ಗಳಲ್ಲಿರತಕ್ಕದ್ದು ಕಕ್ಷ್ಯಾ. ಯಾವ ಹಗ್ಗದಿಂದ ಅಶ್ವವು ಉರಃ ಪ್ರದೇಶದಲ್ಲಿ ಕಟ್ಟಲ್ಪಡುತ್ತದೋ, ಆ ಹಗ್ಗವು ಕಕ್ಷ್ಯಾ ಎನಿಸಿಕೊಳ್ಳುತ್ತದೆ. ಪುಷ್ಟವಾಗಿರುವುದರಿಂದ) ಕಕ್ಷ್ಯೆಯನ್ನು ಪೂರ್ಣೀಕರಿಸತಕ್ಕ, (ಅಂದರೆ ತರುಣಗಳಾಗಿರುವುದರಿಂದ ಪುಷ್ಟದೇಹವುಳ್ಳ) ಹರೀ=ಅಶ್ವಗಳನ್ನು ಯುಕ್ಷ್ವ=ರಥದಲ್ಲಿ ಯೋಜಿಸಲೇಬೇಕು. ಅಥ=ಆ ಮೇಲೆ, (ಇಲ್ಲಿಗೆ ಬಂದು) ನಃ=ನಮ್ಮ, ಗಿರಾಂ=ಸ್ತುತಿರೂಪಗಳಾದ ವಚನಗಳ, ಉಪಶ್ರುತಿಂ=ಉಪಶ್ರವಣವನ್ನು ಚರ=ಮಾಡು. (ಸ್ತುತಿರೂಪಗಳಾದ ನಮ್ಮ ಮಾತನ್ನು ಕೇಳು.) ॥ ೩ ॥

ಭಾ ॥ ಕಕ್ಷ್ಯಾಭಿಪೂರಕೌ ಪುಷ್ಟ್ಯಾ ಯುಂಕ್ಷ್ವತ್ವಂ ಕೇಶಿನೌ ಹರೀ । ಅಥೋಪೇಗಮ್ಯ ಶೃಣು ನೋ ಗಿರಃ ॥ ೩ ॥

ಅ ॥ ಜೋತಾಡತಕ್ಕ ಕೇಶಗಳುಳ್ಳ, ಪುಷ್ಟತ್ವ ನಿಮಿತ್ತದಿಂದ ಕಕ್ಷ್ಯೆಯನ್ನು ಪೂರ್ಣೀಕರಿಸತಕ್ಕ, ಕುದುರೆಗಳನ್ನು, ರಥದಲ್ಲಿ ಯೋಜಿಸು ಆ ಮೇಲೆ ಇಲ್ಲಿಗೆ ಬಂದು ನಮ್ಮ ಸ್ತುತಿರೂಪಗಳಾದ ಮಾತುಗಳನ್ನು ಕೇಳು. ॥೩॥

ಋ ॥ (೯೪) ಏಹಿ ಸ್ತೋಮಾँ ಅಭಿಸ್ವರಾಭಿಗೃಣೀಹ್ಯಾರುವ ।

ಬ್ರಹ್ಮ ಚ ನೋ ವಸೋ ಸಚೇಂದ್ರ ಯಜ್ಞಂ ಚ ವರ್ಧಯ ॥ ೪ ॥

ಅ ॥ ಇಂದ್ರ=ಇಂದ್ರನೇ, ಆ ಇಹಿ=ಬಾ. ಸ್ತೋಮಾನ್=ಸ್ತುತಿಯನ್ನು, ಅಭಿಸ್ವರ=ಸೋಮವನ್ನು ಸ್ವೀಕಾರ ಮಾಡಿದ್ದನ್ನು ಅನುಸರಿಸಿ ಧ್ವನಿ ಮಾಡು. ಅಭಿಗೃಣೀಹಿ=(ಗೃ ಶಬ್ದೇ) ಎಲೈ ಸ್ತೋತೃಗಳಿರಾ ನೀವು ಚೆನ್ನಾಗಿ ಮಾಡಿದಿರಿ, ಎಂದು ನಮ್ಮ ಪ್ರಶಂಸೆ ವಾಕ್ಯವನ್ನುಚ್ಚರಿಸು. (ನಮ್ಮನ್ನು ಸ್ತುತಿಸು.) ಆರುವ=(ರುಶಬ್ದೇ) ಪುನಃ ಹರ್ಷದಿಂದ ಮಹತ್ತರವಾದ ಶಬ್ದವನ್ನು ಮಾಡು. ಹೇವಸೋ=ಸರ್ವತ್ರ ಆವಾಸ ಮಾಡುವವನೇ, ಸರ್ವ ವಸ್ತುಗಳ ಹೊರಗೂ ಒಳಗೂ ಇರುವವನೇ, ನಃ=ನಮ್ಮ, ಬ್ರಹ್ಮ ಚ=ವೇದವನ್ನು, ಸ್ತುತಿಯನ್ನು, ಯಜ್ಞಂ ಚ=ಯಾಗವನ್ನು, ಸಚಾ=(ಷಚಸೇಚನೇ, ಸೇವನೇಚ) ಕೂಡಿಕೊಂಡೇ, ಸುಖವೇ ಮುಖ್ಯ ಸೇವ್ಯವಾಗಿರುವುದುಂದ ಸುಖದಿಂದಲೇ, ವರ್ಧಯ=ಪ್ರವರ್ತಿಸು. ॥ ೪ ॥

ಭಾ ॥ ಅಭಿಸ್ವರ ಚ ಸ್ತುತಿಂ । ಪ್ರಶಂಸಾಂ ಕುರು ಶಬ್ದಂ ಚ ಪುನರ್ಹರ್ಷಾನ್ಮಹತ್ತರಂ । ಬ್ರಹ್ಮ ಯಜ್ಞಂ ಚ ನೋಽಂತಸ್ಥೋ ಬಹಿಸ್ಥಶ್ಚೈವ ವರ್ಧಯ ॥ ೪ ॥

ಅ ॥ ಸ್ತುತಿಯನ್ನು ಮಾಡು. (ಸೋಮದ ಸ್ವೀಕಾರಾನುಸಾರವಾಗಿ ಧ್ವನಿಮಾಡು.) ಚೆನ್ನಾಗಿ ಮಾಡಿದಿರಿ ಎಂದು ನಮ್ಮ ಪ್ರಶಂಸೆಯನ್ನು ಮಾಡು. ಪುನಃ ಹರ್ಷದಿಂದ ಮಹತ್ತರವಾದ ಶಬ್ದವನ್ನು ಮಾಡು. ಸಮಸ್ತ ವಸ್ತುಗಳ ಒಳಗೂ ಹೊರಗೂ ಇದ್ದವನಾಗಿ ನಮ್ಮ ವೇದವನ್ನು ಸ್ತುತಿಯನ್ನು ಯಜ್ಞವನ್ನು ಕೂಡ ಪ್ರವರ್ತಿಸು. ॥ ೪ ॥

ಋ ॥ (೯೫) ಉಕ್ಥಮಿಂದ್ರಾಯ ಶಂಸ್ಯಂ ವರ್ಧನಂ ಪುರುನಿಃಷಿಧೇ ।

ಶಕ್ರೋ ಯಥಾ ಸುತೇಷು ಣೋ ರಾರಣತ್ಸಖ್ಯೇಷು ಚ ॥ ೫ ॥

ಅ ॥ ಪುರುನಿಃ ಷಿಧೇ=(ನಿಸ್ ಶಬ್ದಾತ್ ಷಿಧುಗತ್ಯಾಂ) ಶತ್ರುಗಳನ್ನು ಬಹಳವಾಗಿ ನಿಷೇಧಿಸುವವನು (ಅಂದರೆ ದನುಜರನ್ನು ಸಂಹರಿಸುವವನು ಇಂತಹ) ಇಂದ್ರಾಯ ಪರಮೇಶ್ವರನಿಗೋಸ್ಕರ, ವರ್ಧನ=ಶ್ರೀಹರಿ

ಗೇನೆ ವೃದ್ಧಿಯನ್ನು ಮಾಡುವ, ವೃದ್ಧಿಸಾಧನವಾಧ (ಅಂದರೆ ಪ್ರಕಾಶವನ್ನು ಮಾಡುವ ಗುಣಗಳನ್ನು ತೋರಿಸುವ) ಉಕ್ಥಂ=ಉಕ್ಥನಾಮಕ ಋಕ್ಕುಗಳ ಸಮುದಾಯವನ್ನು ಶಂಸ್ಯಂ=ಹೊಗಳಬೇಕು. ಶಕ್ರಃ=ಆ ಇಂದ್ರನು, ಯಥಾ =ಹೇಗೆ, ಸುತೇಷು=ಸೋಮಗಳು ಹಿಂಡಲ್ಪಡುತ್ತಿರಲು, ರಾರಣತ್=(ರಣಶಬ್ದೇ) ಶಬ್ದಮಾಡುತ್ತಾನೋ,(ಅಂದರೆ ಋತ್ವಿಕ್‌ಗಳಲ್ಲಿದ್ದವನಾಗಿ ಸ್ತುತಿಯನ್ನು ಪ್ರವೃತ್ತಿಮಾಡಿಸುತ್ತಾನೋ)ಹೀಗೆಯೇ)ನಃ ಸಖ್ಯೇಷು=ನಮ್ಮ ಮೈತ್ರ್ಯ ಕ್ಕಾಗಿ, (ರಾರಣತ್=(ರಣಶಬ್ದೇ) ಶಬ್ದಮಾಡಿದನು. (ಅಂದರೆ ನಮ್ಮಲ್ಲಿದ್ದು ನಾನು ಸಖನಾಗಿರುತ್ತೇನೆಂದು ಶಬ್ದ ಮಾಡಿದನು.) ॥ ೫ ॥

ಭಾ ॥(೧) ನಿತ್ಯವೃದ್ಧತ್ವತೋ ವಿಷ್ಣೋರ್ವರ್ಧನಂ ತು ಪ್ರಕಾಶನಂ॥(೨) ಬಹುಶತ್ರೂನ್ನಿಷಿದ್ದಸೌ ಹರಿರ್ದನುಜಘಾತ್ಮಕಃ ॥ (೩) ಅಸ್ಮತಖ್ಯಾಯ ಶಬ್ದಂಚ ಚಕಾರಾಸ್ಮಾಸು ಸಂಸ್ಥಿತಃ । ಯಥಾ ಸುತೇಷು ಸೋಮೇಷು ಕರೋತ್ಯೃತ್ವಿಕ್ಷು ಚ ಸ್ಥಿತಃ ॥ ೫ ॥

ಅ ॥ (೧) ಶ್ರೀ ಹರಿಯು ನಿತ್ಯದಲ್ಲಿಯೂ ಅಭಿವೃದ್ಧನೇ ಆಗಿರುವುದರಿಂದ ಆವನಿಗೆ ವರ್ಧನವೆಂದರೆ ಪ್ರಕಾಶನವು. (ಪ್ರಕಾಶಕರವು) ಗುಣಗಳನ್ನು ಪ್ರಕಾಶ ಗೊಳಿಸುವುದು) (೨) ಶ್ರೀಹರಿಯು ಬಹು ಶತ್ರುಗಳನ್ನು ನಿಷೇಧಿಸಿರುವನು. (ಅಂದರೆ) ದಾನವರನ್ನು ನಾಶಗೊಳಿಸಿರುವನು (೩) ಹೇಗೆ ಸೋಮಗಳು ಹಿಂಡಲ್ಪಡುತ್ತಿರಲು ಋತ್ವಿಜರಲ್ಲಿದ್ದವನಾಗಿ ಸ್ತುತಿಗಳನ್ನು ಪ್ರವೃತ್ತಿಮಾಡಿಸುತ್ತಾನೋ, ಹೀಗೆಯೇ ನಮ್ಮ ಸಖ್ಯಕ್ಕಾಗಿ ನಮ್ಮಲ್ಲಿದ್ದವನಾಗಿ ನಾನು ಗೆಳೆಯನಾಗಿರುತ್ತೇನೆಂದು ಶಬ್ದ ಮಾಡಿದನು. ॥ ೫ ॥

ಋ ॥ (೯೬) ತಮಿತ್ಸಖಿತ್ವ ಈಮಹೇ ತಂ ರಾಯೇ ತಂ ಸುವೀರ್ಯೇ ।
ಸ ಶಕ್ರ ಉತನಃ ಶಕದಿಂದ್ರೋವಸು ದಯಮಾನಃ ॥ ೬ ॥ ೧೯ ॥

ಅ॥ತಮಿತ್=ಆ ಇಂದ್ರನನ್ನೇ,ಸಖಿತ್ವೇ=ಮೈತ್ರ್ಯಕ್ಕಾಗಿ,ಈಮಹೇ=(ಈಜ ಗತೌ)(ನಿತ್ಯದಲ್ಲಿಯೂ ಶರಣು) ಹೊಂದುತ್ತೇವೆ. ರಾಯೇ=ದ್ರವ್ಯಕ್ಕಾಗಿಯೂ. ಶರಣು ಹೊಂದುವೆವು. ಸುವೀರ್ಯೇ=ಸಾಧುವೀರ್ಯಕ್ಕಾಗಿಯೂ ಶರಣುಹೊಂದುತ್ತೇವೆ.ಸ ಶಕ್ರಃ=(ಶಕ್ಲೃಶಕ್ತೌ ರಮು ಕ್ರೀಡಾಯಾಂ)ಆತನು,ಶಕ್ತಿ ಸುಖರೂಪನಾಗಿರುವುದರಿಂದ ಶಕ್ರನೆನಿಸಿಕೊಂಡವನು. ಉತ=ಆದುದರಿಂದ,ಶಕತ್=(ಶಕ್ಲೃ ಶಕ್ತೌ) ಸರ್ವತ್ರಅವರವರಿಂದ ಪ್ರಾರ್ಥಿತವಾದುದನ್ನು ಸಂಪಾದಿಸುವ ವಿಷಯದಲ್ಲಿ ಶಕ್ತನಾಗಿಯೇ ಇರುತ್ತಾನೆ. ಇಂದ್ರಃ=ಆ ಇಂದ್ರನು, ನಃ= ನಮಗಾಗಿ, ವಸು=ದ್ರವ್ಯವನ್ನು ದಯಮಾನ ಇತ್=(ದಯ, ದಾನ ಗತಿ ರಕ್ಷಣ ಹಿಂಸಾದಾನೇಷು) ಕೊಡುವವನಾಗಿಯೇ, ಸರ್ವದಾ ಇರುತ್ತಾನೆ. (ಆದುದರಿಂದಲೂ ಶರಣು ಹೊಂದುತ್ತೇವೆ.) ॥ ೬ ॥

ಭಾ ॥ ತಮೇವ ಶರಣಂ ನಿತ್ಯಂ ಸಖಿತ್ವಾದ್ಯರ್ಥಮೀಮಹೇ। ಶಕ್ತ್ಯಾನಂದ ಸ್ವರೂಪತ್ವಾಚ್ಛಕ್ರಃ ಸರ್ವತ್ರ ಚಾಶಕತ್ । ಅಸ್ಮಾಕಂಚ ಸದಾ ವಿತ್ತಂ ದದದೇವ ಪ್ರವರ್ತತೇ ॥ ೬ ॥

ಅ ॥ ನಾವು ಸಖತನ ಇತ್ಯಾದಿಗಳಿಗಾಗಿ ಆ ಶ್ರೀಹರಿಯನ್ನೇ ನಿತ್ಯದಲ್ಲಿಯೂ ಶರಣು ಹೊಂದುವೆವು. ಆತನು ಶಕ್ತಿ ಅನಂದ ಸ್ವರೂಪನಾದುದರಿಂದ ಶಕ್ರ ಶಬ್ದ ವಾಚ್ಯನು. ಶ್ರೀಹರಿಯು ಸರ್ವದಾ ಸುಖರೂಪನಾಗಿರುವುದರಿಂದ ತನಗೆ ಪ್ರಯೋಜನವಿಲ್ಲದಿರುವುದರಿಂದಲೂ ಶಕ್ತಿರೂಪನಾಗಿರುವದರಿಂದಲೂ ಸರ್ವತ್ರ ಅವರವರು ಪ್ರಾರ್ಥಿಸಿದುದನ್ನು ಸಂಪಾದಿಸುವ ವಿಷಯದಲ್ಲಿ ಶಕ್ತನಾಗಿಯೇ ಆಗುತ್ತಾನೆ. ಮತ್ತು ಆ ಇಂದ್ರನು ನಮಗೆ ದ್ರವ್ಯವನ್ನು ಕೊಡುವವನಾಗಿಯೇ ಸದಾ ಪ್ರವರ್ತಿಸುತ್ತಾನೆ. (ಆದುದರಿಂದಲೂ ಶ್ರೀಹರಿಯನ್ನು ಶರಣು ಹೊಂದುವೆವು) ॥ ೬ ॥ ೧೯॥

ಋ ॥ (೯೭) ಸುವಿವೃತಂ ಸುನಿರಜಮಿಂದ್ರ ತ್ವಾದಾತಮಿದ್ಯಶಃ ।
ಗವಾಮಪವ್ರಜಂ ವೃಧಿ ಕೃಣುಷ್ವ ರಾಧೋ ಅದ್ರಿವಃ ॥ ೭ ॥

ಅ ॥ ಅದ್ರಿವಃ=(ಆಙ್ಪೂರ್ವಾತ್ ದೃಙ್ಧಾತೋಃ; ವೃತು ವರ್ತನೇ) ಮುಖ್ಯಪ್ರಾಣನಿಗೂ, ಪ್ರವರ್ತಕನಾದ, ಇಂದ್ರ=ವಿಷ್ಣುವೇ, ಅದ್ರಿವಃ=(ಅದ್ರಿಶಬ್ದೋಪಪದಾತ್ ವೃಶ್ಚ ಛೇದನೇ)ಪರ್ವತಗಳನ್ನು ಛೇದಿಸಿದ, ಇಂದ್ರ=ಪುರಂದರನೇ, ತ್ವಾದಾತಮಿತ್=(ದಾಣದಾನೇ) ನಿನ್ನಿಂದ ಕೊಡಲ್ಪಟ್ಟದ್ದೇ ಆದ, ಯಶಃ=ಕೀರ್ತಿಯು, ಸುವಿವೃತಂ=ವಿಸ್ಪಷ್ಟವಾಯ್ತು. (ಜಗತ್ತಿನಲ್ಲಿ ವಿಖ್ಯಾತವಾಯ್ತು.) ಸುನಿರಜಂ=(ಅಜಗತಿಕ್ಷೇಪಣಯೋಃ) ಚೆನ್ನಾಗಿ ಅತ್ಯಾಜ್ಯವು. ಯಾರಿಂದಲೂ ಅಪಹಾರ್ಯವಲ್ಲ. (ಅಂದರೆ ಇತರರಿಂದ ಸರ್ವಥಾ ಅಪ್ರಾಪ್ಯವು.) (ಯಾವ ಕಾರಣದಿಂದ ನಿನ್ನ ದಾನವು ಈ ರೀತಿಯಾಗಿರತಕ್ಕದೋ ಆದಕಾರಣ ನೀನು) ಗವಾಂ=ಜ್ಞಾನಗಳ, ವ್ರಜಂ=ಸಮೂಹವನ್ನು. (ಸ್ವರೂಪ ಭೂತವಾದುದನ್ನು) ಅಪ ವೃಧಿ=ಹೋಗಲ್ಪಟ್ಟ ಆವರಣವನ್ನು ಮಾಡು. (ವಿವರಿಸು.) (ನಮಗೆ) ರಾಧಃ=ವೃದ್ಧಿಯನ್ನು ಕೂಡ, ಕೃಣುಷ್ವ=ಮಾಡು ॥ ೭ ॥

ಭಾ ॥ (೧) ವಿಸ್ಪಷ್ಟಂ ಸುಷ್ಠ್ವಕಾಲ್ಯಂ ಚ ಯಶಸ್ತ್ವದ್ದತ್ತಮೇವಹಿ । ಗೂಢಂ ಜ್ಞಾನಸಮೂಹಂ ತ್ವಂ ವಿವೃಣ್ವೃದ್ಧಿಂ ಚ ನಃ ಕುರು ॥ (೨) ಅದ್ರಿರಾದರಣೀಯತ್ವಾತ್ಪ್ರಾಣಸ್ತತ್ಪ್ರವರ್ತಕೋಽದ್ರಿವಾಃ । ಹರಿಃ ಶಕ್ರಸ್ತಥಾಽದ್ರೀಣಾಂ ಛೇದನಾದ್ವಾರಣಾದಪಿ ॥ ೭ ॥

ಅ ॥ (೧) ಎಲೋ ಇಂದ್ರನೇ ನಿನ್ನಿಂದ ಕೊಡಲ್ಪಟ್ಟದ್ದೇ ಆದ ಕೀರ್ತಿಯು, ವಿಸ್ಪಷ್ಟವು. (ಜಗತ್ಪ್ರಸಿದ್ಧವು.) ಸರ್ವಥಾ ತ್ಯಾಜ್ಯವಲ್ಲ. (ಕಲಬಿಲಕ್ಷೇಪೇ) ಮತ್ತು ಇತರರಿಂದ ಸರ್ವಥಾ ಪ್ರಾಪ್ಯವಲ್ಲ. ಗೋಪ್ಯವಾದ ಜ್ಞಾನ ಸಮೂಹವನ್ನು ನೀನು ವಿವರಿಸು. ನಮಗೆ ಸಮೃದ್ಧಿಯನ್ನೂ ಕೂಡ ಮಾಡು.(ಡುಕೃಞ ಕರಣೇ) (೨)ಸರ್ವರಿಂದ ಆದರಣೀಯನಾದುದರಿಂದ ಮುಖ್ಯಪ್ರಾಣನು ಅದ್ರಿಃ ಎನಿಸುತ್ತಾನೆ. ಆ ಮುಖ್ಯಪ್ರಾಣನಿಗೂ ಪ್ರವರ್ತಕನಾದುದರಿಂದ ಶ್ರೀಹರಿಯು **ಅದ್ರಿವಾಃ** ಎನಿಸುತ್ತಾನೆ. ಹಾಗೆಯೇ ಪರ್ವತಗಳ ಪಕ್ಷ(ರೆಕ್ಕೆ) ವನ್ನು ಛೇದಿಸಿರುವುದರಿಂದಲೂ ತನ್ನ ಪತನದಿಂದ ಸರ್ವಲೋಕಗಳ ನಾಶವನ್ನು ನಿವಾರಿಸಿದುದರಿಂದಲೂ ಇಂದ್ರನು ಅದ್ರಿವಾಃ ಎನಿಸುತ್ತಾನೆ. ॥ ೭ ॥

ಋ ॥ (೯೮) ನಹಿ ತ್ವಾ ರೋದಸೀ ಉಭೇ ಋಘಾಯಮಾಣಮಿನ್ವತಃ ।
ಜೇಷಃ ಸ್ವರ್ವತೀರಪಃ ಸಂಗಾ ಅಸ್ಮಭ್ಯಂ ಧೂನುಹಿ ॥ ೮ ॥

ಅ ॥ (ಶ್ರೀ ಹರಿಯೇ, ಇಂದ್ರನೇ) ಋಘಾಯಮಾಣಂ=(ಋಘವೃದ್ಧೌ) ಅಭಿವೃದ್ಧಿಯನ್ನು ಹೊಂದಿದ, (ಸರ್ವಗತನಾದ)ತ್ವಾ=ನಿನ್ನನ್ನು, ರೋದಸೀ=ದ್ಯಾವಾ ಪೃಥಿವಿಗಳು, ತದಭಿಮಾನಿಗಳಾದ ಶ್ರೀ ಭೂಮಿಗಳೂ ಕೂಡ, ಉಭೇ=ಸಹಿತರಾಗಿ ನಹಿ ಇನ್ವತಃ=(ಇವಿ ವ್ಯಾಪ್ತೌ)ಹೊಂದುವುದೇ ಇಲ್ಲವಷ್ಟೆ. (ನಿನ್ನ ಅನುಗ್ರಹವಿಲ್ಲದೆ ನಿನ್ನನ್ನು ಹೊಂದುವುದಿಲ್ಲ.) (ಮತ್ತು ನೀನು ಸ್ವರ್ವತೀಃ=ಸುಖವುಳ್ಳ, ಅಪಃ=ಪ್ರಜೆಗಳನ್ನು (ಸ್ವರ್ಗಸ್ಥರನ್ನೂ ಮುಕ್ತರನ್ನೂ ಕೂಡ) ಜೇಷಃ=(ಜಿಜಯೇ) ಗೆದ್ದಿರುತ್ತಿ. (ವಶೀಕರಿಸಿರುತ್ತಿ.) ಇಂತಹ ನೀನು ತಾನಾಗಿಯೇ) ಅಸ್ಮಭ್ಯಂ=ನಮಗಾಗಿ, ಗಾಃ=ಜ್ಞಾನಗಳನ್ನು, ಸಂಧೂನುಹಿ=(ಧೂಞ ಕಂಪನೇ) ಚೆನ್ನಾಗಿ ಹೊಂದಿಸಿ

ಕೊಡು, (ಎಂದು ವಿಷ್ಣುವಿನಲ್ಲಿ.) (ಪುರಂದರನಲ್ಲಿ ಆದರೂ,) ಎಲೋ ಶಚೀಪತಿಯೇ ದ್ಯಾವಾಪೃಥಿವ್ಯಭಿಮಾನಿ ದೇವತೆಗಳು ಐಶ್ವರ್ಯಾದಿಗಳಿಂದ ಅಭಿವೃದ್ಧನಾದ ನಿನ್ನನ್ನು ಹೊಂದುವುದಿಲ್ಲ. (ಅಂದರೆ ನಿನಗೆ ಸದೃಶವಾದ ಐಶ್ವರ್ಯವನ್ನು ಹೊಂದುವುದೇ ಇಲ್ಲ) ಮತ್ತು ಸ್ವರ್ಗಸ್ಥ ಪ್ರಜೆಗಳನ್ನು ನಿನ್ನ ಅಧೀನರನ್ನಾಗಿ ಮಾಡುತ್ತಿ. ಆದಕಾರಣ ನಮಗಾಗಿ ಪ್ರಸಿದ್ಧ ಪಶುಗಳನ್ನು ಕೊಡು. ॥ ೮ ॥

ಭಾ ॥ (೧) ನ ತ್ವಾಮೃಘಾಯಮಾಣಂ ಹಿ ವರ್ಧಮಾನಂ ತು ರೋದಸೀ।ಸಂಪ್ರಾಪ್ನುತಃ ಶ್ರೀಭೂಮೀ ಚ ಸಹಿತೇ ತ್ವತ್ಪ್ರಸಾದತಃ ॥(೨)ಅಪಃ ಪ್ರಜಾಃ ಸುಖವತೀ ರಜಯು- ಸ್ತ್ವದ್ವಶತ್ವತಃ।ಜ್ಞಾನಾನಿ ಸಂಧೂನುಹಿ ಚ ಪ್ರಾಪಯೋಽಚ್ಛಾ ಅಪಿ ಸ್ವಯಂ ॥ ೮ ॥

ಅ ॥ (೧) ಎಲೋ ಇಂದ್ರನೇ ಋಘಾಯಮಾಣಂ ಅಂದರೆ ಅಭಿವೃದ್ಧಿಯನ್ನು ಹೊಂದಿರುವ, ಅಂದರೆ ಸರ್ವಗತನಾದ, ನಿನ್ನನ್ನು ದ್ಯಾವಾಪೃಥಿವಿಗಳೂ ಅವುಗಳಿಗೆ ಅಭಿಮಾನಿಗಳಾದ ಶ್ರೀ ಭೂಮಿಯರೂ ಕೂಡ, ಇಬ್ಬರೂ ಸಹಿತರಾಗಿ ಆಗಲೀ, ನಿನ್ನ ಅನುಗ್ರಹವಿಲ್ಲದೆ ಹೊಂದಲಾರರು. (೨) ಸುಖವುಳ್ಳ, ಅಪಃ = ಪ್ರಜೆಗಳನ್ನು (ಸ್ವರ್ಗಸ್ಥರನ್ನು ಮುಕ್ತರನ್ನು ಕೂಡ) ಮುಕ್ತಾದಿ ಪ್ರಜೆಗಳು ನಿನ್ನ ಅಧೀನರೇ ಆಗಿರುವುದರಿಂದ ಗೆದ್ದಿರುತ್ತಿ. (ವಶೀಕರಿಸಿರುತ್ತಿ.) ನಮಗೆ ಜ್ಞಾನಗಳನ್ನು ಸಂಧೂನುಹಿ = ಹೊಂದಿಸಿಕೊಡು. (ಇಂದ್ರನಲ್ಲಿ ಆದರೂ) (ಎಲೋ ಪುರಂದರನೇ ದ್ಯಾವಾಪೃಥಿವ್ಯಭಿಮಾನಿ ದೇವತೆಗಳೂ ಕೂಡ ಐಶ್ವರ್ಯಾದಿಗಳಿಂದ ಅಭಿವೃದ್ಧಿಯನ್ನು ಹೊಂದಿದ ನಿನಗೆ ಸದೃಶವಾದ ಐಶ್ವರ್ಯವನ್ನು ಹೊಂದಲಾರರು. ಸ್ವರ್ಗದಲ್ಲಿರುವ ಪ್ರಜೆಗಳನ್ನು ನೀನು ವಶೀಕರಿಸಿ ಕೊಂಡಿರುತ್ತಿ. ಆದಕಾರಣ ನಮಗಾಗಿ ಪ್ರಸಿದ್ಧಗಳಾದ ಉತ್ತಮಗಳಾದ ಪಶುರೂಪಗಳಾದ ಗೋವುಗಳನ್ನು ತಾನಾಗಿಯೇ ಹೊಂದಿಸಿ ಕೊಡು. ॥ ೮ ॥

ಮ ॥ (೯೯) ಆಶ್ರುತ್ಕರ್ಣ ಶ್ರುಧೀ ಹವಂ ನೂಚಿದ್ದಧಿಷ್ವ ಮೇ ಗಿರಃ। ಇಂದ್ರ ಸ್ತೋಮಮಿಮಂ ಮಮಕೃಷ್ವಾ ಯುಜಶ್ಚಿದಂತರಂ ॥ ೯ ॥

ಅ ॥ ಆಶ್ರುತ್ಕರ್ಣ=ಚೆನ್ನಾಗಿ ಕೇಳತಕ್ಕ ಕಿವಿಗಳುಳ್ಳವನೇ (ಬಹಳ ಕೇಳತಕ್ಕ ಕಿವಿಗಳುಳ್ಳವನೇ) ಹವಂ= ನಮ್ಮ ಆಹ್ವಾನವನ್ನು ಶ್ರುಧಿ=(ಶ್ರು ಶ್ರವಣೇ) ಕೇಳು. ನುಚಿತ್=ಈಗಲೇ, ಮೇ=ನನ್ನಲ್ಲಿ, ಗಿರಃ = ವೇದರೂಪಗಳಾದ ವಚನಗಳನ್ನು,ದಧಿಷ್ವ=(ದಧ ಧಾರಣೇ)ಕೊಡು(ನನ್ನನ್ನು ವೇದಜ್ಞನನ್ನಾಗಿ ಮಾಡು.)ಇಂದ್ರ=ಇಂದ್ರನೇ, ಇಮಂ ಮಮ ಸ್ತೋಮಂ = ಈ ನಾನು ಮಾಡಿದ ಸ್ತುತಿವಿಶೇಷವನ್ನು, ಯುಜಶ್ಚಿತ್=ಸಮಾಧಿರೂಪವಾದ ಯೋಗಕ್ಕಿಂತಲೂ, ಅಂತರಂ=ತನ್ನ ಮನಸ್ಸಿಗೆ ಸನ್ನಿಕೃಷ್ಟವನ್ನಾಗಿ (ಪ್ರಿಯವನ್ನಾಗಿ) ಕೃಷ್ವ=(ಕೃಜ್ ಕರಣೇ) ಮಾಡು. ॥ ೯ ॥

ಭಾ ॥ ಬಹುಶ್ರವಣಕರ್ಣಾಸ್ಮದಾಹ್ವಾನಂ ಶೃಣು ಚಾದರಾತ್। ಅದ್ಯೈವ ಚ ಗಿರೋ ಧೇಹಿ ಮಯಿ ಸ್ತೋಮಂ ಚ ಮತ್ಕೃತಂ ।ಪ್ರಿಯಂ ಯೋಗಾದಪಿ ಕುರು ॥ ೯ ॥

ಅ ॥ ಬಹು ವಿಧವಾದುದನ್ನು ಕೇಳತಕ್ಕ ಕಿವಿಗಳುಳ್ಳವನೇ ನಮ್ಮ ಆಹ್ವಾನವನ್ನು ಅತ್ಯಾದರದಿಂದ ಕೇಳು. ಅಷ್ಟು ಮಾತ್ರವಲ್ಲದೆ ಈಗಲೇ ನನ್ನಲ್ಲಿ ವೇದರೂಪ ವಚನಗಳನ್ನು ಇಡು (ನನ್ನನ್ನು ವೇದಜ್ಞನನ್ನಾಗಿ ಮಾಡು.) ಮತ್ತು ನಾನು ಮಾಡಿದ ಸ್ತುತಿವಿಶೇಷವನ್ನು ಸಮಾಧಿ ರೂಪಯೋಗಕ್ಕಿಂತಲೂ ಪ್ರಿಯವನ್ನಾಗಿ ಮಾಡು. ॥ ೯ ॥

ಋ ॥ (೧೦೦) ವಿದ್ಮಾ ಹಿ ತ್ವಾ ವೃಷಂತಮಂ ವಾಜೇಷು ಹವನಶ್ರುತಂ ।
ವೃಷಂತಮಸ್ಯ ಹೂಮಹ ಊತಿಂ ಸಹಸ್ರಸಾತಮಾಂ ॥ ೧೦ ॥

ಅ ॥ ಹಿ=ಯಾವ ಕಾರಣದಿಂದ, ವೃಷಂತಮಂ=(ವೃಷು ಸೇಚನೇ) ಸರ್ವರಿಗಿಂತಲೂ ಅತಿಶಯವಾಗಿ ಶಕ್ತಿಯುಳ್ಳವನೂ. ವಾಜೇಷು=ಯುದ್ಧಗಳಲ್ಲಿ (ಯುಧ ಸಂಪ್ರಹಾರೇ) ಹವನ ಶ್ರುತಂ=ಆಹ್ವಾನವನ್ನು ಕೇಳುವವನೂ ಆದ,ತ್ವಾ=ನಿನ್ನನ್ನು,ವಿದ್ಮ=ತಿಳಿಯುತ್ತೇವೋ,(ಆ ಕಾರಣ) ವೃಷಂತಮಸ್ಯ=ಅತಿಶಯವಾಗಿ ಶಕ್ತಿಯುಳ್ಳ ನಿನಗೆ,ಸಹಸ್ರಸಾತಮಾಂ-(ಸಹ್ರಸಂತನೋತಿ ಸಹಸ್ರಸಾ.ಷಣುದಾನೇ.)ಷಣುಲಾಭೇ ಅತಿಶಯವಾಗಿ ಬಹುಲಾಭವನ್ನು ಮಾಡತಕ್ಕ,ಊತಿಂ=ರಕ್ಷಣೆಯನ್ನು,ಹೂಮಹೇ=(ಹ್ವೇಇಶಬ್ದೇ) ಕರೆಯುತ್ತೇವೆ.(ಪ್ರಾರ್ಥಿಸುತ್ತೇವೆ.)॥೧೦॥

ಭಾ ॥ (೧) ವಿದ್ಮ ತ್ವಾಂ ಶಕ್ತಿಮತ್ತಮಂ । ಶ್ರೋತಾರಂ ಯುತ್ಸು ಚಾಹ್ವಾನಮಾಹ್ವಯಾಮ ಸ್ತನಾವನಂ । ಬಹುಲಾಭೋತ್ತಮಮಿತಿ ॥ ೧೦ ॥ (೨) ಸ್ಥಾನಾಂತರಗತೇ ಋಚೌ (೩) ದೃಷ್ಟ್ವೇಂದ್ರಂ ಯಜ್ಞಗಂ ಯಾಭ್ಯಾಂ ಮಧುಚ್ಛಂದಾಃ ಸಮಸ್ತುವತ್ । ಆತೂನ ಇತಿ ತೇನೈವ ನ ವಿರುದ್ಧಾ ಶತರ್ಚಿತಾ ॥ ೧೦ ॥

ಅ ॥ (೧) ನಿನ್ನನ್ನು ಸರ್ವರಿಗಿಂತ ವಿಶೇಷವಾಗಿ ಶಕ್ತಿಯುಳ್ಳವನನ್ನಾಗಿಯೂ ಯುದ್ಧಗಳಲ್ಲಿ ಭಕ್ತರ ಆಹ್ವಾನವನ್ನು ಕೇಳುವವನನ್ನಾಗಿಯೂ ತಿಳಿಯುತ್ತೇವೆ. ನಿನಗೆ ಅತಿ ಲಾಭದಿಂದ ಕೂಡಿದ ರಕ್ಷಣೆಯನ್ನು ಪ್ರಾರ್ಥಿಸುತ್ತೇವೆ. (ಇತಿ=) ಹೀಗೆ ೧೦೦ (ನೂರು) ಋಕ್ಕುಗಳ ವ್ಯಾಖ್ಯಾನವು ಸಮಾಪ್ತವಾಯ್ತು. ॥ ೧೦ ॥

(೨) (ಹಾಗಾದರೆ ಇದಕ್ಕಿಂತ ಮೇಲಿನ ೨ ಋಕ್ಕುಗಳನ್ನು ಮಧು ಛಂದಸರೇ ಕಂಡದ್ದು. ಬೇರೆ ಋಷಿಗಳು ಕಂಡದ್ದೆನ್ನುವಲ್ಲಿ ಪ್ರಮಾಣವಿಲ್ಲ. ಆದಕಾರಣ ೨ ಋಕ್ಕುಗಳು ಹೆಚ್ಚು ಇದ್ದ ಪ್ರಯುಕ್ತ ಮಧು ಛಂದಸರಿಗೆ ಶತರ್ಚಿ ಎಂಬ ನಾಮವು ಹೇಗೆ ಕೂಡುತ್ತದೆ ಎಂದರೆ) ಯಾವ ಕಾರಣದಿಂದ **ಆತೂನಃ** ಇತ್ಯಾಡಿ ೨ಋಕ್ಕುಗಳು ಸ್ಥಾನಾಂತರದಲ್ಲಿರುವವುಗಳೋ, ಆ ಕಾರಣದಿಂದ ಮಧು ಛಂದಸರಿಗೆ ಶತರ್ಚಿ ಎಂಬ ಹೆಸರು ವಿರುದ್ಧವಲ್ಲ. ಒಂದೇ ಭಾಗದಲ್ಲಿರತಕ್ಕ ೧೦೦ ಋಕ್ಕುಗಳನ್ನು ಕಂಡ ಪ್ರಯುಕ್ತವೇ ಶತರ್ಚಿ ಎಂಬ ಹೆಸರು (ಅಂದರೆ ಮಧುಛಂದಸರು ಉಪವೇದದ ಏಕಭಾಗದಲ್ಲಿ ಋಕ್ಕುಗಳದ್ದು ಯಾವುದು ಕ್ರಮವಿದೆಯೋ ಆಕ್ರಮದಿಂದಲೇ ೧೦೦ ಋಕ್ಕಗಳನ್ನು ಕಂಡಿರುವರು **ಆತೂನಃ** ಇತ್ಯಾದಿ ೨ ಋಕ್ಕುಗಳನ್ನು ಅವರೇ(ಭಾಗಾಂತರದಲ್ಲಿ ಕಂಡದ್ದು.) (೩) (ದೇಶಾಂತರದಲ್ಲಿ ಕಾಲಾಂತರದಲ್ಲಿ ಅವಸ್ಥಾಂತರದಲ್ಲಿಯೂ ಈ ೨ ಋಕ್ಕುಗಳನ್ನು ಕಂಡಿರುವುದರಿಂದ ಈ ಮಧುಛಂದಸರಿಗೆ ಶತರ್ಚಿ ಎಂಬ ನಾಮವು ಬಾಧಿತವಲ್ಲವೆನ್ನುತ್ತಾರೆ.) ಮಧುಛಂದಸರು ಯಜ್ಞದಲ್ಲಿರ ತಕ್ಕ ಇಂದ್ರನನ್ನು ನೋಡಿ ಆತೂನ ಇತ್ಯಾದಿ ಯಾವ ಋಕ್ಕುಗಳಿಂದ ಸ್ತೋತ್ರಮಾಡಿರುವರೋ, ಆ ಕಾರಣದಿಂದಲೇ ಶತರ್ಚಿ ಎಂಬ ನಾಮವು ವಿರುದ್ಧವಲ್ಲ. (ಅಂದರೆ ಯಜ್ಞ ಭೂಮಿಯಲ್ಲಿ ಯಜಮಾನನು ಕೊಟ್ಟ ಆಹುತಿಯನ್ನು ತೆಗೆದು ಕೊಳ್ಳುವುದಕ್ಕಾಗಿ ಬಂದಿರುವ ಇಂದ್ರನನ್ನು ನೋಡುವ ಸಮಯದಲ್ಲಿ ಯಜಮಾನತ್ವಾದ್ಯವಸ್ಥೆಯಲ್ಲಿ **ಆತೂನಃ** ಇತ್ಯಾದಿ ೨ ಋಕ್ಕುಗಳನ್ನು ಕಂಡದ್ದು. ೧೦೦ ಋಕ್ಕುಗಳನ್ನು ಅನ್ಯತ್ರಕಂಡದ್ದು ಶತರ್ಚಿಎಂಬನಾಮಕ್ಕೆ ದೇಶೈಕ್ಯಾದಿಗಳು ನಿಮಿತ್ತವಾಗಿರುವುದರಿಂದ ಈ ೨ ಋಕ್ಕುಗಳನ್ನು ಮಧುಛಂದಸರೇ ಅನ್ಯತ್ರ ನೋಡಿ ರುವುದರಿಂದ ಶತರ್ಚಿ ಎಂಬ ನಾಮವು ವಿರುದ್ಧವಾಗುವುದಿಲ್ಲ. ॥ ೧೦ ॥

ಋ ॥ (೧೦೧) ಆತೂ ನ ಇಂದ್ರ ಕೌಶಿಕ ಮಂದಸಾನಃ ಸುತಂ ಪಿಬ।
ನವ್ಯಮಾಯುಃ ಪ್ರಸೂತಿರ ಕೃಧೀ ಸಹಸ್ರಸಾಮೃಷಿಂ ॥ ೧೧ ॥

ಅ ॥ ಕೌಶಿಕ=(ಕೋಶೇಭವಃ ಕೌಶಕಃ ಎಂದು ವ್ಯುತ್ಪತ್ತಿಯು) ಬ್ರಹ್ಮಾಂಡ ಕೋಶದಲ್ಲಿರತಕ್ಕ, ಇಂದ್ರ= ಶ್ರೀ ವಿಷ್ಣುವೇ, ಕೌಶಿಕ=ಇಂದ್ರನು ಹುಟ್ಟುವಕಾಲದಲ್ಲಿ ಅದಿತಿ ದೇವಿಯು ಕುಶಗಳಿಂದ ಗ್ರಹಣ ಮಾಡಿರುವು ದರಿಂದ ಕೌಶಿಕ ಎನಿಸಿಕೊಂಡ, ಅಥವಾ ಇಂದ್ರನ ಸ್ವರೂಪ ಭೂತನಾದ ಗಾಧಿರಾಜನು ಕುಶಿಕರಾಜನ ಮಗ ನಾಗಿರುವುದರಿಂದ ಕೌಶಿಕ ಎನಿಸಿಕೊಂಡ ಇಂದ್ರ=ಪುರಂದರನೇ, ಮಂದಸಾನಃ=(ಮದೀಹರ್ಷ್ಣೇ) (ಮದಿಸ್ತುತಿ ಮೋದ ಮದ ಸ್ವಪ್ನ ಕಾಂತಿಗತಿಷು) ನಿತ್ಯಸುಖದ ಲಾಭವುಳ್ಳ. (ವನಷಣ ಸಂಭಕ್ತೌ.) (ನಿತ್ಯ ಸುಖಿಯಾದ) ನೀನು, ನಃ=ನಮ್ಮ ಸುತಂ=ಸೋಮವನ್ನು, ತು=ಶೀಘ್ರವಾಗಿ, ಆ ಪಿಬ=(ಪಾಪಾನೇ) ಪಾನಮಾಡು. ನವ್ಯಂ= (ಣುಸ್ತುತೌ) ಸ್ತುತ್ಯವಾದ, ಆಯುಃ=ಆಯುಷ್ಯವನ್ನು ಕೂಡ, ನಃ=ನಮಗಾಗಿ, ಪ್ರಸುತಿರ=(ತ್ಯಾಪ್ಲವನ ತರ ಣಯೋಃ) ಅತಿ ಪ್ರಕೃಷ್ಟವಾಗಿ ಕೊಡು. (ನನ್ನನ್ನು) ಸಹಸ್ರಸಾಮ್=ಸಹಸ್ರ ಲಾಭದಿಂದ ಕೂಡಿದವನ್ನಾಗಿಯೂ ಋಷಿಂ=ಜ್ಞಾನಿಯನ್ನಾಗಿಯೂ, ಕೃಧಿ=(ಡುಕೃಞಕರಣೇ) ಮಾಡು ॥ ೧೧ ॥

ಭಾ ॥ ಮಾತ್ರಾ ಕುಶೈರ್ಗೃಹೀತತ್ವಾಜ್ಜನ್ಮನ್ಯಾಸೀತ್ಸಕೌಶಿಕಃ । ಗಾಧಿತ್ವಾದ್ವಾ ಹಿರಣ್ಯಾಂಡ ಕೋಶಸ್ಥತ್ವಾದ್ಧರಿಸ್ತಥಾ । ಮಂದಸಾನೋ ನಿತ್ಯಸುಖೀ ಸ್ತುತ್ಯಮಾಯುಃಶ್ಚ ನಸ್ತಿರ । ಋಷಿಂ ಸಹಸ್ರ ಲಾಭಂ ಮಾಂ ಕುರು ಚ ॥ ೧೧ ॥

ಅ ॥ ತಾಯಿಯಾದ ಅದಿತಿಯಿಂದ,=ಜನ್ಮ ಸಮಯದಲ್ಲಿ, ದರ್ಭೆಗಳಿಂದ, ಸ್ವೀಕರಿಸಲ್ಪಟ್ಟಿರುವುದರಿಂ ದಲೂ, ಇಂದ್ರ ಸ್ವರೂಪನಾದ ಗಾಧಿರಾಜನು ಕುಶಿಕರಾಜನ ಮಗನಾಗಿರುವುದರಿಂದಲೂ, ಆ ಇಂದ್ರನು ಕೌಶಿಕ ನೆನಿಸುತ್ತಾನೆ. ಹಾಗೆಯೇ ಶ್ರೀಹರಿಯೂ ಹಿರಣ್ಮಯವಾದ ಬ್ರಹ್ಮಾಂಡಕೋಶದಲ್ಲಿದ್ದ ಪ್ರಯುಕ್ತ ಕೌಶಿಕ ಎನಿಸು ತ್ತಾನೆ. ಮಂದಸಾನಃಅಂದರೆ ನಿತ್ಯ ಸುಖವುಳ್ಳ, ಅಥವಾ ಸುಖವನ್ನೇ ನಿತ್ಯದಲ್ಲಿಯೂ ಅನುಭವಿಸುತ್ತಿರುವ, ನೀನು ಸ್ತುತ್ಯವಾದ ಆಯುಷ್ಯವನ್ನು ಅತ್ಯುತ್ಕರ್ಷದಿಂದ ಕೊಡು. (ದೀರ್ಘಾಯುಷ್ಮಂತನನ್ನಾಗಿಮಾಡು) ನನ್ನನ್ನು ಸಹಸ್ರ ಲಾಭಗಳಿಂದ ಕೂಡಿದವನನ್ನಾಗಿಯೂ ಜ್ಞಾನಿಯನ್ನಾಗಿಯೂ ಮಾಡು ॥ ೧೧ ॥

ಋ ॥ (೧೦೨)ಪರಿ ತ್ವಾ ಗಿರ್ವಣೋ ಗಿರಃ ಇಮಾ ಭವಂತು ವಿಶ್ವತಃ ।
ವೃದ್ಧಾಯುಮನು ವೃದ್ಧಯೋ ಜುಷ್ಟಾ ಭವಂತು ಜುಷ್ಟಯಃ
॥ ೧೨ ॥ ೨೦ ॥ ೧೦ ॥

ಅ ॥ ಗಿರ್ವಣಃ=ವೇದ ವಚನಗಳಿಂದ ಭಜಿಸಲು ಯೋಗ್ಯನೇ, ಇಮಾಃ=ನನ್ನದ್ದಾದ, ಗಿರಃ=ಸ್ತುತಿರೂಪ ಗಳಾದ ವಚನಗಳು, ವಿಶ್ವತಃ=ಸರ್ವ ಕಾಲದಲ್ಲಿ, (ಸರ್ವದಾ) ವೃದ್ಧಾಯುಂ=ಪೂರ್ಣ (ಸರ್ವ) ಲಾಭವುಳ್ಳ ತ್ವಾ=ನಿನ್ನನ್ನು, ಪರಿಭವಂತು=ಸುತ್ತ ಮುತ್ತಲೂ ಇರಲಿ. (ಅಂದರೆ ಅತಿಶಯವಾಗಿ ನಿನ್ನನ್ನೇ ವಿಷಯೀಕರಿಸಲಿ) ವೃದ್ಧಯಃ=ವೃದ್ಧಿ ರೂಪಗಳಾದ (ನಿನ್ನ ವೃದ್ಧಿಯನ್ನು ಪ್ರಕಾಶಗೊಳಿಸುವ) ಜುಷ್ಟಾಃ=ಸೇವ್ಯಗಳಾದ, ನಮ್ಮ ಮಾತುಗಳು, ಜುಷ್ಟಯಃ ಅನುಭವಂತು=ನಿನ್ನ ಸೇವಾನುರೂಪಗಳೂ ಆಗಲಿ ॥ ೧೨ ॥ ೨೦ ॥ ೧೦ ॥

ಭಾ ॥ ತ್ವಾ ಇಮಾ ಗಿರಃ । ಸರ್ವದಾ ಪರಿತಃ ಸಂತು ಮದೀಯಾಸ್ಸರ್ವಲಾಭಿನಂ । ವೃದ್ಧಿ ರೂಪಾ ಗಿರೋ ಜುಷ್ಟಾಃ ಸೇವಾರೂಪಾಶ್ಚ ಸಂತು ನಃ ॥ ೧೨ ॥ ೨೦ ॥ ೧೦ ॥

ಅ ॥ ನನ್ನ ಈ ಸ್ತುತಿ ರೂಪಗಳಾದ ವಚನಗಳು, ಸರ್ವಲಾಭವುಳ್ಳ, ನಿನ್ನನ್ನು ಅತಿಶಯವಾಗಿ ವಿಷಯೀ ಕರಿಸಿಕೊಂಡಿರಲಿ. ನಿನ್ನ ವೃದ್ಧಿಯನ್ನು ಪ್ರಕಾಶಗೊಳಿಸುವ (ವೃದ್ಧಿಂ ರೂಪಯಂತಿ ನಿರೂಪಯಂತಿ ಪ್ರಕಾಶಯಂ ತೀತಿ ವೃದ್ಧಿ ರೂಪಾಃ) ಸರ್ವಸೇವ್ಯಗಳಾದ, ನಮ್ಮ ಮಾತು ನಿನ್ನ ಸೇವೆಗೆ ಅನುರೂಪಗಳಾಗಲಿ ॥ ೧೨॥ ೨೦॥೧೦॥

ಅವ || ೮ ಋಕ್ಕು. ೧ವರ್ಗ- ಐಂದ್ರಸೂಕ್ತ. ಅನುಷ್ಟುಪ್ ಛಂದಸ್ಸು.

ಋ || (೧೦೩)ಇಂದ್ರಂ ವಿಶ್ವಾ ಅವೀವೃಧನ್ ಸಮುದ್ರವ್ಯಚಸಂ ಗಿರಃ ।
ರಥೀತಮಂ ರಥೀನಾಂ ವಾಜಾನಾಂ ಸತ್ಪತಿಂ ಪತಿಂ || ೧ ||

ಅ || ಸಮುದ್ರವ್ಯಚಸಂ=(ರಿಚವಿಯೋಜನ ಸಂಪರ್ಕಯೋಃ) ಚೆನ್ನಾಗಿ ಉತ್ಕೃಷ್ಟಗಳಾದ ಗುಣಗಳ ವ್ಯಕ್ತಿಯುಳ್ಳ, ರಥೀನಾಂ=ರಥವುಳ್ಳವರಲ್ಲಿ, ರಥಿತಮಂ=ಮುಖ್ಯ ರಥವುಳ್ಳವನೂ, ವಾಜಾನಾಂ=ಅನ್ನಗಳಿಗೆ, ಪತಿಂ=ಸ್ವಾಮಿಯೂ,(ಯಥೇಷ್ಟಭೋಜ್ಯ ವಸ್ತುಗಳನ್ನು ಕೊಡುವವನೂ.) ಸತ್ಪತಿಂ=ಸಜ್ಜನರಿಗೆ ಸ್ವಾಮಿಯೂ ಆದ ಇಂದ್ರಂ=ಇಂದ್ರನನ್ನು, ವಿಶ್ವಾಃ ಗಿರಃ=ಸಮಸ್ತವೇದ ವಚನಗಳು, ಅವೀವೃಧನ್ (ವೃಧವೃದ್ಧೌ) ಪ್ರಕಾಶಗೊಳಿಸಿದವು. (ಭಗವದ್ಗುಣಗಳನ್ನು ಪ್ರಕಾಶಗೊಳಿಸಿದವು) (ಶ್ರೀಹರಿಯು ನಿತ್ಯದಲ್ಲಿಯೂ ಅಭಿವೃದ್ಧನೇ ಆಗಿರುವುದರಿಂದ ತಿರುಗಿ ವೃದ್ಧಿಯು ಕೂಡದಿರುವುದರಿಂದ ಇಲ್ಲಿ ವೃದ್ಧಿಯೆಂದರೆ ಪ್ರಕಾಶವೆಂದರ್ಥವನ್ನು ಇಟ್ಟುಕೊಳ್ಳಬೇಕು.) || ೧ ||

ಭಾ || (೧) ಅಪ್ಸ್ವಾವ್ಯಚಃ ಪುನಸ್ತೇನ ದೃಷ್ಟಾ ಅನ್ಯತ್ರಗಾಸ್ತಪಃ । ಕುರ್ವತಾ (೨) ಸಮ್ಯಗುದ್ರಿಕ್ತಗುಣವ್ಯಕ್ತಿಸ್ತಥ್ಯಾಭಿಧಃ || ೧ ||

ಅ || (೧) ಪುನಃ ತಪಸ್ಸನ್ನು ಮಾಡತಕ್ಕ ಮಧುಛಂದಸ ಋಷಿಗಳಿಂದಲೇ ಮುಂದಿನ ೮ ಋಕ್ಕುಗಳು ಸ್ಥಳಾಂತರದಲ್ಲಿ (ಆನುಪೂರ್ವ್ಯಂತರದಲ್ಲಿರತಕ್ಕವುಗಳಾಗಿ ದೃಷ್ಟಗಳಾಗಿವೆ. (ಈ ೮ ಋಕ್ಕುಗಳಿಗೆ ಮಾಧುಛಂದಸರು ಋಷಿಗಳಲ್ಲವೆಂದಾದರೆ ಪ್ರಮಾಣ ವಿರೋಧವು. ಅಪ್ರಾಮಾಣಿಕವೂ ಆಗುವುದು) ಆದ ಕಾರಣ ಶತರ್ಚಿ ಎಂಬ ನಾಮವು ಯುಕ್ತವೇ ಸರಿ). (೨) ಚೆನ್ನಾಗಿ ಉತ್ಕೃಷ್ಟಗಳಾದ ಗುಣಗಳ ಅಭಿವ್ಯಕ್ತಿಯುಳ್ಳವನು ಸಮುದ್ರವ್ಯಚಾಃ ಎನಿಸುತ್ತಾನೆ. || ೧ ||

ಋ || (೧೦೪)ಸಖ್ಯೇ ತ ಇಂದ್ರ ವಾಜಿನೋ ಮಾಭೇಮ ಶವಸಸ್ಪತೇ ।
ತ್ವಾಮಭಿ ಪ್ರ ಣೋನುಮೋ ಜೇತಾರಮಪರಾಜಿತಂ || ೨ ||

ಅ || ಶವಸಸ್ಪತೇ=ಸುಖಕ್ಕೆ ಅಥವಾ ಬಲಕ್ಕೆ ಸ್ವಾಮಿಯಾದ, ಇಂದ್ರ=ಇಂದ್ರನೇ,ತೇ ಸಖ್ಯೇ=ನಿನ್ನ ಸಖ್ಯವಾಗುತ್ತಿರಲು, (ನಿನ್ನ ಅನುಗ್ರಹವಾಗುತ್ತಿರಲು) ವಾಜಿನಃ=ಯುದ್ಧವುಳ್ಳ, ನಾವು, ಮಾಭೇಮ=(ಞಭೀ ಭಯೇ) ಭಯ ಹೊಂದುವುದಿಲ್ಲ. (ಶತ್ರುಗಳನ್ನು ಗೆಲ್ಲುವೆವು.) ಜೇತಾರಂ=(ನಮಗೆ ಅನುಗ್ರಹಿಸುವುದಕ್ಕಾಗಿ ನಮ್ಮಲ್ಲಿದ್ದು) ಪರರನ್ನು ಗೆಲ್ಲುವ, ಅಪರಾಜಿತಂ=ಸ್ವತಃ ಪರಾಜಯವಿಲ್ಲದಿರುವ, ತ್ವಾಂ=ನಿನ್ನನ್ನು, ಅಭಿ ಪ್ರನೋನುಮಃ=(ಣು ಸ್ತುತೌ) ಚೆನ್ನಾಗಿ ಮತ್ತು ಮತ್ತು ಸ್ತುತಿಸುತ್ತೇವೆ. || ೨ ||

ಋ || (೧೦೫)ಪೂರ್ವೀರಿಂದ್ರಸ್ಯ ರಾತಯೋ ನ ವಿದಸ್ಯಂತ್ಯೂತಯಃ ।
ಯದೀ ವಾಜಸ್ಯ ಗೋಮತಃ ಸ್ತೋತೃಭ್ಯೋ ಮಂಹತೇ ಮಘಂ || ೩ ||

ಅ ॥ ಯದಿ=ಯಾವ ಪಕ್ಷದಲ್ಲಿ, (ಇಂದ್ರನು) ಗೋಮತಃ ವಾಜಸ್ಯ=ಗೋವುಗಳಿಂದ ಕೂಡಿದ ಅನ್ನವನ್ನು, ಮಘಂ=ಧನವನ್ನು ಯಶಸ್ಸನ್ನು, ಸ್ತೋತೃಭ್ಯಃ=ಸ್ತುತಿಸುವವರಿಗೋಸ್ಕರ, ಮಂಹತೇ=(ಮಂಹ ದಾನೇ.) ಕೊಡುತ್ತಾನೋ, ಹಾಗಾದರೆ (ಧನ, ಯಶಸ್ಸು, ಅನ್ನ ಗೋವು ಇವುಗಳನ್ನು ಕೊಡುವುದಾದರೆ) ಇಂದ್ರಸ್ಯ=ಇಂದ್ರನಾದ ನಿನ್ನ, ರಾತಯ=(ರಾದಾನೇ)ದಾನಗಳು, ಊತಯಃ=ರಕ್ಷಣೆಗಳೂ ಕೂಡ, ಪೂರ್ವೀಃ=ಮಹತ್ತ್ವ ಕಾರಣದಿಂದ ಶ್ರೇಷ್ಠಗಳು. ಮತ್ತು ನ ವಿದಸ್ಯಂತಿ=(ದಸು ವಿಭೇದನೇ.) ಭೇದಿಸಲ್ಪಡುವುದಿಲ್ಲ. ಅಥವಾ (ದಸು ಕ್ಷಯೇ) ನಾಶಹೊಂದುವುದಿಲ್ಲ. ॥ ೩ ॥

ಭಾ ॥ ಪ್ರಥಮಾನಿ ಮಹತ್ತ್ವೇನ ತೇ ದಾನಾನ್ಯವನಾನಿ ಚ । ನ ಭಿದ್ಯಂತೇ ನ ನಶ್ಯಂತಿ ಗೋಮದನ್ನಂ ಯಶಸ್ತಥಾ । ಯದಿ ಮಂಹತೇ ದದಾತೀಶೋ ॥ ೩ ॥

ಅ ॥ ಶ್ರೀಹರಿಯು ಗೋವುಗಳಿಂದ ಕೂಡಿದ ಅನ್ನವನ್ನು ಹಾಗೆಯೇ ಯಶಸ್ಸನ್ನು (ಮಂಹತೇ=) ಕೊಡುತ್ತಾನೋ, ಹಾಗಾದರೆ ನಿನ್ನ ದಾನಗಳೂ ರಕ್ಷಣೆಗಳೂ ಕೂಡ ಮಹತ್ತ್ವ (ಇತರರಿಗೆ ಅಸಾಧ್ಯವಾಗಿರುವುದರಿಂದ ಶ್ರೇಷ್ಠತ್ವ) ಕಾರಣದಿಂದ ಶ್ರೇಷ್ಠಗಳು. ಮತ್ತು ಅವುಗಳು ಭೇದಿಸಲ್ಪಡುವುದಿಲ್ಲ. ಅಥವಾ ನಾಶಹೊಂದುವುದಿಲ್ಲ. ಸರ್ವದಾ ಇರುತ್ತವೆ. ಏವಂಚ ಶ್ರೀಹರಿಯು ಸ್ತೋತ್ರ ಮಾಡುವವರಿಗೆ ಧನ ಯಶಸ್ಸು ಅನ್ನ ಗೋವು ಮೊದಲಾದವುಗಳನ್ನು ಕೊಡುವುದಾದರೆ ಅಂತಹ ರಕ್ಷಣೆಗಳೇ ಮುಖ್ಯಗಳು. ॥ ೩ ॥

ಋ ॥ (೧೦೩)ಪುರಾಂ ಭಿಂದುರ್ಯುವಾ ಕವಿರಮಿತೌಜಾ ಅಜಾಯತ ।
ಇಂದ್ರೋ ವಿಶ್ವಸ್ಯ ಕರ್ಮಣೋ ಧರ್ತಾ ವಜ್ರೀ ಪುರುಷ್ಟುತಃ ॥ ೪ ॥

ಅ ॥ ಪುರಾಂ=(ವಿಷ್ಣು ಪಕ್ಷದಲ್ಲಿ) ಶರೀರಾಖ್ಯಪುರಗಳ ಮತ್ತು (ಇಂದ್ರಪಕ್ಷದಲ್ಲಿ) ಶಂಬರಾಸುರನ ಪುರ (ಪಟ್ಟಣ)ಗಳನ್ನು, ಭಿಂದುಃ=(ಭಿದಿರ ವಿದಾರಣೇ) ಭೇದಿಸಿರುವ (ಪಾಂಚಭೌತಿಕ ಶರೀರವನ್ನು ನಾಶಗೊಳಿಸಿ ಮೋಕ್ಷವನ್ನು ಕೊಡುವ) ಯುವಾ=ತರುಣನಾದ, ಕವಿಃ=ಸರ್ವಜ್ಞನಾದ, ಅಮಿತೌಜಾಃ=ಬಹುಸಾಮರ್ಥ್ಯವುಳ್ಳ, ವಿಶ್ವಸ್ಯ ಕರ್ಮಣಃ ಧರ್ತಾ=ಸಮಸ್ತ ಕರ್ಮಗಳಿಗೆ ಪ್ರೇರಕನಾದ, ವಜ್ರೀ=ಜ್ಞಾನಾನಂದಗಳುಳ್ಳ ಅಥವಾ ವಜ್ರಾಯುಧವುಳ್ಳ, ಪುರುಷ್ಟುತಃ=ಬಹುಮಂದಿ ದೇವತೆಗಳಿಂದ್ದ ಸ್ತುತಿಸಲ್ಪಟ್ಟ, ಇಂದ್ರಃ=ಇಂದ್ರನು, ಅಜಾಯತ=(ಜನೀ ಪ್ರಾದುರ್ಭಾವೇ) ಯಜ್ಞದಲ್ಲಿ ಅಭಿವ್ಯಕ್ತನಾದನು. ॥ ೪ ॥

ಋ ॥ (೧೦೪)ತ್ವಂ ವಲಸ್ಯ ಗೋಮತೋಽಪಾವರದ್ರಿವೋ ಬಿಲಂ ।
ತ್ವಾಂ ದೇವಾ ಅಬಿಭ್ಯುಷಸ್ತುಜ್ಯಮಾನಾಸ ಆವಿಷುಃ ॥ ೫ ॥

ಅ ॥ ಅದ್ರಿವಃ=ಮುಖ್ಯಪ್ರಾಣನಿಗೆ ಪ್ರವರ್ತಕನಾದ ಶ್ರೀವಿಷ್ಣುವೇ ತ್ವಂ=ನೀನು, ಗೋಮತಃ=ಗೋಸಂಬಂಧಿಯಾದ (**ಭೂವಾಗ್ಗ್ವಾಂರಿಷು ಗೌರ್ಮತಃ** ಎಂಬ ಪ್ರಮಾಣದಿಂದ ವೇದವಚನ ಸಂಬಂಧಿ) ವಲಸ್ಯ=ಮಿಥ್ಯಾಜ್ಞಾನಕ್ಕೆ,(ವೇದವಚನಗಳ ಅನ್ಯಾರ್ಥ ಜ್ಞಾನಕ್ಕೆ ಅಥವಾ ಅರ್ಥವನ್ನು ವಿಪರೀತವಾಗಿ ವಿಷಯೀಕರಿಸುವ ಜ್ಞಾನಕ್ಕೆ) (ಯಾವುದು) ಬಿಲಂ=ಮೂಲಕಾರಣವಾದ ಅಜ್ಞಾನವೋ, (ಅದನ್ನು) ಅಪಅವಃ=(ಅಪಪೂರ್ವಾತ್ ವೃಞವರಣೇ) ತಿರಸ್ಕರಿಸಿರುತ್ತಿ. (ಅಂದರೆ ತತ್ವಜ್ಞಾನವನ್ನು ಹುಟ್ಟಿಸಿ ಅಜ್ಞಾನವನ್ನು ಹೋಗಲಾಡಿಸುತ್ತಿ.) (ಅಂತೂ ಅಜ್ಞಾನ ಮಿಥ್ಯಾಜ್ಞಾನಗಳು ನಾಶವಾಗೋಣ) ದೇವಾಃ=ಸತ್ವಸ್ವಭಾವವುಳ್ಳ ಪುರು

ಷರು, ಅಬಿಭ್ಯುಷಃ=ಸಂಸಾರ ಭಯರಹಿತರಾಗಿ, ತುಜ್ಯಮಾನಾಸಃ=ನಿನ್ನಿಂದಲೇ ಪ್ರೇರೇಪಿಸಿಕೊಳ್ಳಲ್ಪಟ್ಟವರಾಗಿಯೂ, ತ್ವಾಂ=ನಿನ್ನನ್ನು, ಆವಿಷುಃ=ದೈತ್ಯರಿಂದ ಕೆಟ್ಟ ಮಾತಿನಿಂದ ಆಚ್ಛಾದಿತನಾದವನನ್ನು ನಿರ್ದುಷ್ಟವಾದ ವಚನಗಳಿಂದ ರಕ್ಷಣೆ ಮಾಡಿದವರಂತೆ ಆದರು. (ಪ್ರಕಾಶಗೊಳಿಸಿದರು.) (ಪುರಂದರ ಪಕ್ಷದಲ್ಲಿ) ಅದ್ರಿವಃ=ಪರ್ವತಗಳನ್ನು ಭೇದಿಸತಕ್ಕ ಪುರಂದರನೇ, ತ್ವಂ=ನೀನು, ಗೋಮತಃ=ಗೋವುಗಳಿಂದ ಕೂಡಿದ, ವಲಸ್ಯ=ಬಲ ಎಂಬ ದೈತ್ಯನ. ಬಿಲಂ=ಗಿರಿ ಕೂಟದ ಕೆಳಗಿನ ವಿವರವನ್ನು ಅಪಅವಃ=ತಿರಸ್ಕರಿಸಿರುತ್ತಿ. (ಆಗ)ದೇವಾಃ=ದೇವತೆಗಳು, ತುಜ್ಯಮಾನಾಸಃ=ನಿನ್ನಿಂದಲೇ ಪ್ರೇರೇಪಿಸಲ್ಪಟ್ಟವರಾಗಿ, ಅಬಿಭ್ಯುಷಃ=ಭಯರಹಿತರಾಗಿ, ತ್ವಾಂ=ನಿನ್ನನ್ನು, ಆವಿಷುಃ=(ಅವರಕ್ಷಣೇ) ಭಯವಿಲ್ಲದೇನೇ ನಿನ್ನನ್ನು ಸುತ್ತಮುತ್ತಲೂ ರಕ್ಷಣೆ ಮಾಡಿದರು. ॥ ೫ ॥

ಭಾ ॥ (೧) ವಲಸ್ತಿರ್ಯಗ್ಗತಿರ್ಧೀಯಃ ॥ (೨) ವಾಚಾಮನ್ಯಾರ್ಥಬುದ್ಧೇಸ್ತು ಬಿಲಂ ಮೂಲಂ ತಮೋ ಹಿ ಯತ್ । ತದಪಾವೃತವಾಂಸ್ತ್ವಂ ಚ ಪ್ರದರ್ಶ್ಯ ವಿಧಿವಾರ್ಯ ಚ ॥ (೩) ತ್ವಾಂ ಹಿ ದೇವಾ ಭಯಾಪೇತಾಃ ಪ್ರೇರ್ಯಮಾಣಾಸ್ತ್ವಯೈವ ಚ । ಛಾದ್ಯಮಾನಂ ಗಿರಾ ದೈತ್ಯೈರರಕ್ಷನ್ನಿವ ಸದ್ಗಿರಾ ॥ (೪) ಇಂದ್ರಸ್ಯ ಗೋಸವಾರ್ಥೇ ಚ ಸಮುತ್ಸೃಷ್ಟಾ ಜಗತ್ಯಪಿ । ಚತುರ್ಗಾವೋ ಹೃತಾ ದೈತ್ಯೈಃ ಸರಮಾ ರಕ್ಷಿತಾಃ ಪುರಾ । ತಸ್ಯಾಃ ಸ್ವಸೃತ್ವಮುಕ್ತ್ವೈವ ತಯೋಶ್ಛಿಷ್ಟಂ ಚ ಗೋಪಯಃ । ತದರ್ಥಂ ಪಣಯೋ ನಾಮ ತೇ ದೈತ್ಯಾ ಬಲಪೂರ್ವಕಾಃ । ಇಂದ್ರೇಣ ನಿಹತಾಃ ಪಶ್ಚಾಜ್ಜ್ಞಾತ್ವಾ ಚ ಸರಮಾಕೃತಂ । ತಾಡಯಿತ್ವಾ ಪದಾ ವಕ್ತ್ರಾತ್ಸ್ಯತೇ ಪಯಸಿ ತಾಂ ಭಯಾತ್ । ಶರಣಾಗತಾಂ ಪ್ರೇಷಯಿತ್ವಾ ದೂತ್ಯೇನ ಪಣಿನಾಂ ಪುನಃ । ಭಿತ್ವಾ ಗಿರಿವ್ರಜಂ ತಂ ಚ ಗಾವೋ ಯತ್ರ ಪ್ರತಿಷ್ಠಿತಾಃ । ನಿಃಸಾರಿತಾಃ ಪುನಸ್ತಾಶ್ಚ ಗೋಸವೇನೇಷ್ಟಮೇವ ಚ । ತದಾ ದೇವಾಃ ಅಭೀತ್ಯೈವ ಪರಿತೋ ಜುಗುಪುಃ ಪತಿಂ ॥ ೫ ॥

ಅ ॥ (೧) ಮನಸ್ಸು ಅಥವಾ ಜ್ಞಾನವು ಯಾವುದಕ್ಕಾಗಿ ವಿಷಯಗಳನ್ನು ವಿಪರೀತವಾಗಿ ವಿಷಯೀಕರಿಸುತ್ತದೋ, ಅದು ವಲವೆನ್ನಿಸುತ್ತದೆ. ಅಂದರೆ ಯಥೇಷ್ಟ ಪ್ರವೃತ್ತಿಯು. ವಿಷಯಗಳಲ್ಲಿ ವಿಪರೀತವಾಗಿ ಪ್ರವೃತ್ತಿಯು. ಅಂದರೆ ವಿಪರೀತ ಜ್ಞಾನವು. (೨) ವೇದವಚನಗಳ ಅನ್ಯಾರ್ಥ ಬುದ್ಧಿಗೆ ಯಾವುದು ಮೂಲ ಕಾರಣವಾದ ಅಜ್ಞಾನವೋ ಆ ಅಜ್ಞಾನವನ್ನು ತತ್ವಾರ್ಥವನ್ನು ತೋರಿಸಿ ಆ ಅನ್ಯಾರ್ಥವನ್ನು ನಿರಾಕರಿಸುತ್ತಾ ನಾಶಗೊಳಿಸುತ್ತಿ. (ಅಂದರೆ ತತ್ವಮಸ್ಯಾದಿವೇದ ವಾಕ್ಯಗಳಿಗೆ ಅದ್ವೈತಾದ್ಯರ್ಥ ಜ್ಞಾನಕ್ಕೆ ಕಾರಣವಾದ ಅಜ್ಞಾನದ ನಾಶವು ಯಾವುದರಿಂದ ಆಗುವುದು? ಯಾವುದರಿಂದಲೂ ಆಗಲಾರದು. ಉಪಕ್ರಮಾದಿ ಲಿಂಗಗಳಿಂದ ಅದ್ವೈತ ಜ್ಞಾನವೇ ದೃಢವಾಗಿದೆ. ಎಂದರೆ ತತ್ತ್ವಮಸ್ಯಾದಿ ವೇದ ವಾಕ್ಯಗಳಿಗೆ ಭೇದಾದಿ ರೂಪವಾದ ತತ್ವಾರ್ಥದಲ್ಲಿ ಉಪಕ್ರಮಾದ್ಯಾನುಕೂಲ್ಯವಿದೆ ಎಂದು ತೋರಿಸಬೇಕು. ಅಭೇದಾದ್ಯರ್ಥಕ್ಕೆ ಆನುಕೂಲ್ಯವಿಲ್ಲವೆಂದೂ ತೋರಿಸಿ ಅದ್ವೈತಾದ್ಯರ್ಥವನ್ನು ನಿರಾಕರಿಸಿದರೆ ಅಜ್ಞಾನವು ನಾಶಗೊಳ್ಳುತ್ತದೆ.) (೩) ವೇದಗಳಿಗೆ ಅನ್ಯಾರ್ಥವನ್ನು ನಿರಾಕರಿಸಿದುದರಿಂದ ಅಜ್ಞಾನಮಿಥ್ಯಾಜ್ಞಾನಗಳು ನಾಶ ಹೊಂದೋಣ ಸಾತ್ವಿಕ ಪುರುಷರು ಸಂಸಾರ ಭಯರಹಿತರಾಗಿ ನಿನ್ನಿಂದಲೇ ಪ್ರೇರೇಪಿಸಲ್ಪಟ್ಟವರಾಗಿ ದೈತ್ಯರಿಂದ ಕೆಟ್ಟ ವಚನಗಳಿಂದ ಮರೆಯಾದವನನ್ನು ಸದ್ವಚನಗಳಿಂದ ಪ್ರಕಾಶಗೊಳಿಸಿದರು. ೪) (ಈ ಋಕ್ಕನ್ನು ಇಂದ್ರ ಪರವಾಗಿ ವ್ಯಾಖ್ಯಾನ ಮಾಡುತ್ತಾ ಈ ಋಕ್ಕು ಇತಿಹಾಸ ಗರ್ಭಿತವಾದ ಪ್ರಯುಕ್ತ ಇತಿಹಾಸವನ್ನು ಹೇಳುತ್ತಾರೆ.) ಇಂದ್ರದೇವರು ಮಾಡತಕ್ಕ ಗೋಸವ ಎನ್ನುವ ಯಜ್ಞ ವಿಶೇಷದಲ್ಲಿ ಕ್ಲೃಪ್ತಗಳಾದ ಗೋವುಗಳನ್ನು (ಅಶ್ವಮೇಧ ಯಾಗದಲ್ಲಿ ಅಶ್ವದಂತೆಯೇ) ಜಗತ್ತಿನಲ್ಲಿ ಸಂಚರಿಸುವುದಕ್ಕಾಗಿ ಇಂದ್ರ ದೇವರು ಬಿಟ್ಟರು. ಅಂತಹ ಗೋವುಗಳನ್ನು ಮೊದಲು ದೇವತೆಗಳ ಆಜ್ಞೆಯನ್ನು ಪರಿಪಾಲಿಸಿಕೊಂಡಿರುವ ಸರಮಾ ಎನ್ನುವ ದೇವತೆಗಳ ನಾಯಿಯು ಇಂದ್ರ ದೇವರ ಆಜ್ಞಾನುಸಾರವಾಗಿ ರಕ್ಷಿಸು

ತ್ತಿದ್ದಿತು. ಗೋರಕ್ಷಣಾರ್ಥವಾಗಿ ನಿಯುಕ್ತವಾದ ಸರಮಾ ಎಂಬ ದೇವತೆಗಳ ನಾಯಿಯೊಡನೆ ಸ್ವಸ್ವತ್ವಾದಿಗಳನ್ನು (ಸರಮೆಯೇ ನೀನು ನಮ್ಮ ತಂಗಿ ಇತ್ಯಾದಿಗಳನ್ನು) ದೈತ್ಯರು (ಮಿಥ್ಯೆಯಾದುದನ್ನೇ) ಹೇಳಿ (ಅಸರಮೆಯನ್ನು ವಂಚಿಸಿ ಅದನ್ನು ಬಿಟ್ಟು ಮಹಾ ಸಮರ್ಥರಾದ ಇಂದ್ರ ದೇವರ) ಗೋವುಗಳನ್ನು ಕೂಡ ಅಪಹರಿಸಿ ಬಿಟ್ಟರು. (ಇಷ್ಟು ಮಾತ್ರವಲ್ಲದೆ ತನ್ನಧ್ಯೇ ಗೋವುಗಳ ಹಾಲನ್ನು ಸರಮೆಯು ಕುಡಿದಿದೆ. ಆದಕಾರಣ) ಗೋವುಗಳ ಹಾಲು ಸರಮೆಯ ಉಚ್ಛಿಷ್ಟವೂ ಆಯ್ತು. (ಪಣಿಗಳಿಗಾಗಿ ಸರಮೆಯು ಗೋವುಗಳನ್ನು ಬಿಟ್ಟು ಬಿಟ್ಟಿದೆ.ಹೀಗೆ ದೈತ್ಯರು ಗೋವುಗಳನ್ನು ಅಪಹರಿಸಿ ಪರ್ವತದ ಕೆಳಗಿನ ಬಿಲದಲ್ಲಿ ಆ ಗೋವುಗಳನ್ನು ಇರಿಸಿದರು.) (ಇಂದ್ರ ದೇವರು ಸರಮೆಯ ಸಮೀಪಕ್ಕೆ ಬಂದು ಗೋವುಗಳು ಕಾಣದಿರಲು ಸರಮೆಯ ಹತ್ತಿರ ಗೋವುಗಳು ಎಲ್ಲಿ ಎಂದು ಕೇಳಿದಾಗ ಸುಮ್ಮನೆ ಇರಲು ಸಿಟ್ಟಿನಿಂದ ಸರಮೆಗೆ) ತನ್ನ ಕಾಲಿನಿಂದ ಒದ್ದಿದಾಗ ಸರಮೆಯ ಮುಖದಿಂದ ಹಾಲು ಹೊರಡುತ್ತಿರಲು (ಆ ಮೇಲೆ ಆ ಗೋವುಗಳ ಹಾಲು ಸರಮೆಯ ಉಚ್ಛಿಷ್ಟವೆಂದೂ ಸರಮೆಯು ಪಣಿನಾಮಕ ದೈತ್ಯರಿಗೆ ಗೋವುಗಳನ್ನು ಬಿಟ್ಟುಕೊಟ್ಟಿದೆ ಎಂದೂ, ಹೀಗೆ) ಸರಮೆಯು ಮಾಡಿದ ಪಯಃಪಾನಾದಿರೂಪ ವ್ಯಾಪಾರವನ್ನು ತಿಳಿದಾಗ ತನ್ನನ್ನು ಇಂದ್ರದೇವರು ಕೊಲ್ಲುತ್ತಾರೆಂಬ ಭಯದಿಂದ ಸ್ವಾಮಿಯೇ ತನ್ನನ್ನು ರಕ್ಷಿಸಬೇಕೆಂದು ಸರಮೆಯು ಇಂದ್ರ ದೇವರನ್ನು ಶರಣು ಹೊಂದಲು ಆ ಸರಮೆಯನ್ನೇ ದೈತ್ಯರ ಸ್ಥಲ ವಿಚಾರಕ್ಕಾಗಿ ಪಣಿಗಳ ಸಕಾಶಕ್ಕೆ ದೂತಭಾವದಿಂದ ಇಂದ್ರ ದೇವರು ಕಳುಹಿಸಿಕೊಟ್ಟು ಆ ಸರಮೆಯಿಂದ ಆ ದೈತ್ಯರ ಸ್ಥಳವನ್ನು ತಿಳಿದು ಎಲ್ಲಿ ಗೋವುಗಳು ಇರಿಸಲ್ಪಟ್ಟಿದ್ದಾವೋ, ಅಂತಹ ಗಿರಿರಾಶಿಯನ್ನು ಭೇದಿಸಿ ಇಂದ್ರ ದೇವರು ಗೋವುಗಳ ಅಪಹಾರ ನಿಮಿತ್ತವಾಗಿ ಪಣಿಗಳೆಂದು ಪ್ರಸಿದ್ಧರಾದ ಬಲನೇ ಮೊದಲಾದ ಆ ದೈತ್ಯರನ್ನು ಸಂಹರಿಸಿದರು. ಆ ಮೇಲೆ ಆ ಗೋವುಗಳನ್ನು ಇಂದ್ರ ದೇವರು (ಬಿಲದಿಂದ) ಹೊರಡಿಸಿದ ಮೇಲೆ ಗೋಸವಾಖ್ಯ ಯಜ್ಞವನ್ನು ಮಾಡಿ ಆದರಿಂದ ಇಷ್ಟವನ್ನೇ ಮಾಡಿದರು. ಆಗ ದೇವತೆಗಳು ದೈತ್ಯರ ಭಯವಿಲ್ಲದವರಾಗಿಯೇ ತಮಗ ಸ್ವಾಮಿಯಾದ ಇಂದ್ರನೆನಿಸಿಕೊಂಡ ನಿನ್ನನ್ನು ಸುತ್ತಮುತ್ತಲೂ ರಕ್ಷಿಸಿದರು. (ಸ್ತೋತ್ರಾದಿಗಳನ್ನು ಮಾಡುತ್ತಿದ್ದರು.) ‖ ೫ ‖

ಋ ‖ (೧೦೮) ತವಾಹಂ ಶೂರ ರಾತಿಭಿಃ ಪ್ರತ್ಯಾಯಂ ಸಿಂಧುಮಾವದನ್ ।
ಉಪಾತಿಷ್ಠಂತ ಗಿರ್ವಣೋ ವಿದುಷ್ಟೇ ತಸ್ಯ ಕಾರವಃ ‖ ೬ ‖

ಅ ‖ ಶೂರ=ಇಂದ್ರನೇ, ಅಹಂ=ನಾನು, ತವ=ನಿನ್ನ ರಾತಿಭಿಃ=ದಾನ ನಿಮಿತ್ತಗಳಿಂದ, (ಯಜ್ಞದೀಕ್ಷೆಗಾಗಿ ಉದ್ಯುಕ್ತನಾಗಿ) ಸಿಂಧುಂ=ನದಿಯನ್ನು ಕುರಿತು, ಪ್ರತ್ಯಾಯಂ=ಬಂದಿರುವೆನು. (ಬಂದು ಪುನಃ) ಆವದನ್=ಸ್ತುತಿ ರೂಪಗಳಾದ ವೇದ ಪದಗಳಿಂದ ನಿನ್ನನ್ನು ಚೆನ್ನಾಗಿ ಸ್ತುತಿಸುತ್ತಿರುತ್ತೇನೆ. ಅಥವಾ ಸರ್ವದಾ ನಿನ್ನನ್ನು ಸ್ತುತಿಸುತ್ತಾ ನಾನು ನದಿಯನ್ನು ಕುರಿತು ಬಂದಿರುವೆನು. ಗಿರ್ವಣಃ=(ಗಿರ್‌ಶಬ್ದೋಪಪದಾತ್ ವನ ಸಂಭಕ್ತೌ.) ವೇದವಾಕ್ಯಗಳಿಂದ ಹೇಳಲ್ಪಟ್ಟವನೇ. ತಸ್ಯ ತೇ=ಅಂತಹ ನಿನ್ನನ್ನು, ವಿದುಃ=ಯಾರು ತಿಳಿಯುತ್ತಾರೋ, (ಅವರು) ಕಾರವಃ=ಕರ್ತೃಗಳಾದ ಋತ್ವಿಜರು. (ಅಂತಹ ನಿನ್ನನ್ನು) ಉಪಾತಿಷ್ಠಂತ= ಮಂತ್ರಗಳಿಂದ ನಿನ್ನನ್ನು ಪೂಜಿಸಿದರು. ‖ ೬ ‖

ಭಾ ‖ ತವ ದಾನೈರಹಂ ಸಿಂಧುಂ ನದೀಂ ಪ್ರತ್ಯಾಗಮಂ ಪುನಃ । ತ್ವಾಮಾವದನ್ ಸ್ತುತಿ ಪದೈರ್ಯಜ್ಞದೀಕ್ಷಾರ್ಥಮುದ್ಯತಃ । ಉಪಾತಿಷ್ಠಂತ ಕರ್ತಾರೋ ವಿದುಸ್ತ್ವಾಂ ಯೇ ಗಿರೋದಿತ ‖ ೬ ‖

ಅ ‖ ಎಲೋ ಇಂದ್ರನೇ, ನಾನು ನಿನ್ನ ದಾನ ನಿಮಿತ್ತಗಳಿಂದ ಯಜ್ಞದೀಕ್ಷೆಗೆ ಉದ್ಯುಕ್ತನಾಗಿ ಸಿಂಧುಂ= ನದಿಯನ್ನು ಕುರಿತು ಬಂದಿರುವೆನು. (ಅಂದರೆ ನೀನು ಭಕ್ತರಿಗೆ ಬಹಳವಾಗಿ ಕೊಡುತ್ತಿದ್ದಿ ಎಂಬ ನಿಮಿತ್ತದಿಂದ

ನಾನು ಕೂಡ ಬಹು ಹೊಂದಬೇಕೆನ್ನುವ ಅಭಿಪ್ರಾಯದಿಂದ ಯಜ್ಞಮಾಡಲಿಕ್ಕೆ ಬಂದಿರುವೆನು) ಬಂದು ಪುನಃ ಸ್ತುತಿರೂಪಗಳಾದ ವೇದ ಪದಗಳಿಂದ ಚೆನ್ನಾಗಿ ಸ್ತುತಿಸುವವನಾಗಿರುತ್ತೇನೆ. ಅಥವಾ ಸರ್ವದಾ ನಿನ್ನನ್ನು ಸ್ತುತಿಸುವ ನಾನು ಪುನಃ ಯಜ್ಞಮಾಡಲಿಕ್ಕಾಗಿ ನದಿಗೆಬಂದಿರುವೆನು.ವೇದ ವಾಕ್ಯಗಳಿಂದ ಪ್ರತಿಪಾದಿತನೇಆದ ನಿನ್ನನ್ನು ಯಾರು ತಿಳಿಯುತ್ತಾರೋ,ಅಂತಹ ಕರ್ತೃಗಳಾದ ಋತ್ವಿಜರು ಮಂತ್ರಗಳಿಂದ ನಿನ್ನನ್ನು ಪೂಜಿಸಿದರು. ॥ ೬ ॥

ಋ ॥ (೧೦೯) ಮಾಯಾಭಿರಿಂದ್ರ ಮಾಯಿನಂ ತ್ವಂ ಶುಷ್ಣಮವಾತಿರಃ ।
ವಿದುಷ್ಟೇ ತಸ್ಯ ಮೇಧಿರಾಸ್ತೇಷಾಂ ಶ್ರವಾಂಸ್ಯುತ್ತಿರ ॥ ೭ ॥

ಅ ॥ ಇಂದ್ರ=ಶ್ರೀ ಪರಮೇಶ್ವರನೇ, ತ್ವಂ=ನೀನು, ಮಾಯಿನಂ=ಶಕ್ತಿಯುಳ್ಳ ಶುಷಂ=(ಶುಷ ಶೋಷಣೇ) ಶೋಷಕನಾದ ವೃತ್ರಾಸುರನನ್ನು, (ಅಧ್ಯಾತ್ಮಾರ್ಥದಲ್ಲಿ) ತಮಸ್ಸನ್ನು, ಮಾಯಾಭಿಃ=ಶಕ್ತಿಗಳಿಂದ, ಅವಾತಿರ!=(ತಿರವೇಧೇ) ಸಂಹರಿಸಿರುತ್ತಿ. ಮೇಧಿರಾಃ=ಯಾರು ಅತಿಶಯವಾಗಿ ಯಜ್ಞದಲ್ಲಿಯೇ ಆಸಕ್ತರಾಗಿ, ತಸ್ಯತೇ=ಅಂತಹ ನಿನ್ನನ್ನು, ವಿದುಃ=ತಿಳಿಯುತ್ತಾರೋ, ತೇಷಾಂ=ಅಂತಹವರಿಗೆ, ಶ್ರವಾಂಸಿ=(ಶ್ರು ಶ್ರವಣೇ ಶ್ರೂಯಂತೇ ಇತಿ ಶ್ರವಾಂಸಿ.) ವಿದ್ಯೆಗಳನ್ನು, ಉತ್ತಿರ=ಅತಿಶಯವಾಗಿ ಕೊಡು. ॥ ೭ ॥

ಭಾ ॥ ಶಕ್ತಿಭಿಃ ಶಕ್ತಿಮಂತಂ ತ್ವಾಂ ಶೋಷಕಂ ವೃತ್ರಮತಿರಃ । ತನೋ ವಾ ತ್ವಾಂ ವಿದುರ್ಮೇಧಾರತಾಸ್ತೇಷಾಂ ಶ್ರವಾಂಸಿ ಚ । ವಿದ್ಯಾ ಉಚ್ಚೈಸ್ತರಾಂ ದೇಹಿ ॥ ೭ ॥

ಅ ॥ ಇಂದ್ರನೇ ಶಕ್ತಿಯುಳ್ಳ, ಶೋಷಕನಾದ ವೃತ್ರನನ್ನು (ಅಧ್ಯಾತ್ಮಾರ್ಥ) ಅಜ್ಞಾನವನ್ನು ಸಾಮರ್ಥ್ಯಗಳಿಂದ ತಿರಸ್ಕರಿಸಿರುತ್ತಿ. ಯಾಗದಲ್ಲಿಯೇ ಅತಿಶಯವಾಗಿ ಆಸಕ್ತರಾಗಿ ಯಾರು ನಿನ್ನನ್ನೇ ತಿಳಿಯುತ್ತಾರೋ ಅಂತಹವರಿಗೆ ಶ್ರವಾಂಸಿ=ವಿದ್ಯೆಗಳನ್ನು ಅತಿಶಯವಾಗಿ ಕೊಡು. ॥ ೭ ॥

ಋ ॥ (೧೧೦) ಇಂದ್ರಮೀಶಾನಮೋಜಸಾಽಭಿ ಸ್ತೋಮಾ ಅನೂಷತ ।
ಸಹಸ್ರಂ ಯಸ್ಯ ರಾತಯ ಉತ ವಾ ಸಂತಿ ಭೂಯಸೀಃ ॥
॥ ೮ ॥ ೨೧ ॥ ೧೧ ॥ ೩ ॥

ಅ ॥ ಯಸ್ಯ=ಯಾವ ಇಂದ್ರನಿಗೆ, ಸಹಸ್ರಂ=ಸಹಸ್ರ ಸಂಖ್ಯಾಕಗಳಾದ,ಉತ ವಾ=ಅವುಗಳಿಗಿಂತಲೂ ಭೂಯಸೀಃ=ಬಹಳಗಳಾದ, ರಾತಯಃ=ಅಭೀಷ್ಟ ದಾನಗಳು, ಸಂತಿ=ಇರುತ್ತವೋ, ಈಶಾನಂ=ಅಂತಹ ಸರ್ವಸ್ವಾಮಿಯಾದ, ಇಂದ್ರಂ=ಪರಮೈಶ್ವರ್ಯ ಸಂಪನ್ನನಾದ ನಿನ್ನನ್ನು, ಓಜಸಾ=ಶಕ್ತಿ ಮೊದಲಾದ ಗುಣಗಳಿಂದ, ಕೂಡಿ ಸ್ತೋಮಾಃ=ಸ್ತುತಿ ವಿಶೇಷಗಳು, ಅಭಿ ಅನೂಷತ=(ಣು ಸ್ತುತೌ.)ಸರ್ವದಾ ಸ್ತುತಿಸುತ್ತವೆ ॥೮॥

ಭಾ ॥ ಸ್ತುವಂತಿ ತ್ವಾಂ ಸಹೌಜಸಾ ॥ ೮ ॥

ಅ ॥ ನಿನ್ನನ್ನು ಶಕ್ತಿ ಮೊದಲಾದ ಗುಣಗಳಿಂದ ಕೂಡಿದವನನ್ನಾಗಿ ಸ್ತುತಿಸುತ್ತವೆ. ॥ ೮ ॥ ೨೧ ॥ ೧೧ ॥ ೩ ॥

ಅವ ॥ಶತರ್ಚಿತ್ವಕ್ಕೆ ಗತಿಯನ್ನು (ಶತರ್ಚಿ ಎಂಬ ನಾಮಕ್ಕೆ ಸಮರ್ಪಕ ಕಾರಣವನ್ನು) ಹೇಳಿದಾಗ್ಯೂ ಈ ಋಕ್ಕುಗಳಿಗೆ ಮಧುಛಂದಸರು ಋಷಿಗಳೆಂದು ಏಕೆ ಹೇಳುವುದು? ಮಾಧುಛಂದಸೋ ಜೇತಾ ಎಂಬ ಋಷಿಯು ಏಕೆ ಆಗಲಾರದೆಂದರೆ-

ಭಾ ॥ (೧) ಋಕ್ಸಂಹಿತಾಯಾಃ . ಸ್ವಾಧ್ಯಾಯಾತ್ ಪ್ರಬಂಧಾದ್ವ್ಯಾಸನಿರ್ಮಿತಾತ್ । ಬ್ರಾಹ್ಮಣೇಭ್ಯಸ್ತಥಾ ಮಾನಾತ್ರೋಕ್ತಾಃ ಸ್ಯುರ್ಮುನಯೋಽತ್ರ ಯೇ ॥ (೨) ಶ್ರುತ್ಯಭಾವಾದಲಿಂಗಾಚ್ಚ ಮುನಿರ್ನಾನ್ಯಃ ಪ್ರತೀಯತೇ । (೩) ಶ್ರುತಿಲಿಂಗಾನ್ಯತಾ ಯಾವತ್ತಾವತ್ಪೂರ್ವಾ ಪ್ರಮಾ ಭವೇತ್ ॥

ಅ ॥ (೧) ಋಕ್ಸಂಹಿತಾಪ್ರಮಾಣದಿಂದಲೂ, ವೇದದಿಂದಲೂ, ವೇದ ವ್ಯಾಸರು ಮಾಡಿದ ಪ್ರಬಂಧದಿಂದಲೂ, ಬ್ರಾಹ್ಮಣಗಳಿಂದಲೂ (ಜ್ಯೋತಿಷ್ಟೋಮೇನ ಸ್ವರ್ಗ ಕಾಮೋ ಯಜೇತ ಇದು ಮೊದಲಾದ ವಿಧಾಯಕ ವಾಕ್ಯವು ಬ್ರಾಹ್ಮಣವು.) ಇಂತಹ ಪ್ರಮಾಣಗಳಿಂದ, ಅಥವಾ ಇತರ ಪ್ರಮಾಣಗಳಿಂದಲೂ, ಯಾರು ಈ ಗ್ರಂಥದಲ್ಲಿ ಋಷಿಗಳೆಂದು ನಮ್ಮಿಂದ ಹೇಳಲ್ಪಟ್ಟಿದ್ದಾರೋ, ಅವರು ಋಕ್ಸಂಹಿತಾದಿ ಪ್ರಮಾಣಗಳ ಅನುಸಾರವಾಗಿಯೇ ಅವರೇ ಋಷಿಗಳಾಗುವರು. ಅಥವಾ ಋಕ್ಸಂಹಿತಾ ಮೊದಲಾದ ಪ್ರಮಾಣಗಳಿಂದ ಯಾರು ಈ ಗ್ರಂಥದಲ್ಲಿ ಋಷಿಗಳೆಂದು ಹೇಳಲ್ಪಟ್ಟಿರುವರೋ ಅವರನ್ನೇ ಋಷಿಗಳೆಂದು ಸ್ವೀಕರಿಸಬೇಕು. (ಸಾಯಣ ಮೊದಲಾದ ಮನುಷ್ಯರು ರಚಿಸಿದ ಗ್ರಂಥವಲ್ಲಿ ಹೇಳಿದವರನ್ನು ಋಷಿಗಳೆಂದು ಸರ್ವಥಾ ಸ್ವೀಕರಿಸಬಾರದು. (೨) ಯುಕ್ತ್ಯಂತರವನ್ನು ಹೇಳುತ್ತಾರೆ. (ಲಿಂಗ ಶಬ್ದ ಸಮಭಿವ್ಯಾಹಾರದಿಂದ ಶ್ರುತಿ ಶಬ್ದವು ನಾಮಧೇಯ ಪರವು ವೇದಪರವಲ್ಲ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ.) (1) **ಶುನಶ್ಶೇಪೋ ಹ್ಯಹ್ವತ್** ಇತ್ಯಾದಿಗಳಂತೆ ಮಧುಛಂದಸರಿಗಿಂತ ಇತರರಾದ ಮುನಿಗಳ ನಾಮವು ಇಲ್ಲ. (೨ನೇ ಋಕ್ಕಿನಲ್ಲಿದ್ದ **ಜೇತಾರಮಪರಾಜಿತಂ** ಎನ್ನುವುದು ಜೇತೃವೆಂಬ ಋಷಿಯ ನಾಮವಲ್ಲ. ಏಕೆಂದರೆ-**ಜೇತಾರಂ** ಎನ್ನುವುದು ಆ ಋಕ್ಕಿನಲ್ಲಿಯೇ ಇದ್ದ ತ್ವಾಂ ಎನ್ನುವ ಶಬ್ದದಿಂದ ಹೇಳಲ್ಪಟ್ಟ ಇಂದ್ರನಿಗೆ ವಿಶೇಷಣವಾಗಿದೆ. ಆದಕಾರಣ ಮಾಧುಛಂದಸ ಜೇತೃವನ್ನು ಪ್ರತಿಪಾದಿಸುತ್ತದೆನ್ನುವುದು ಕೂಡುವುದಿಲ್ಲ.) (೩) **ತ್ರಿಷ್ವಾದಿತ್ಯಂ ದ್ರುಪದೇಷು ಬದ್ಧಃ** ಇತ್ಯಾದಿಗಳಂತೆ ಬೇರೆ ಋಷಿಗಳ ಲಿಂಗವಿಲ್ಲ. (ಅಂದರೆ—ಸ್ಥಾನತ್ರಯದಲ್ಲಿ ಬಂಧನವು ಶುನಃಶೇಪನ ಚಿಹ್ನೆಯು. (ಲಿಂಗವು) ಅಂತಹ ಚಿಹ್ನೆಯು ಮಾಧುಛಂದಸ ಜೇತೃ ಋಷಿಗೆ ಹೇಳಲಿಲ್ಲ.) (ಮತ್ತು ಬೇರೆ ಋಷಿಗಳನ್ನು ಜ್ಞಾಪಿಸುವ ವಾಕ್ಯ ಪ್ರಕರಣ ಮೊದಲಾದ ಪ್ರಮಾಣಗಳು ಇಲ್ಲ. ಆದುದರಿಂದಲೂ) ಮಧುಛಂದಸ ಋಷಿಗಳಿಂದ ಇತರರಾದ ಋಷಿಗಳು. ತೋರುವುದಿಲ್ಲ. (ಮತ್ತು **ಗಾಯತ್ರಂ ಪ್ರಉಗಂ ಕುರ್ಯಾದಿತ್ಯಾಹುಃ** ಇತ್ಯಾದಿಗಳಿಂದ ಪ್ರಉಗ ಶಸ್ತ್ರ ಸ್ವರೂಪಗಳಾದ ಗಾಯತ್ರೀ ಉಷ್ಣಿಕ್ ಮೊದಲಾದ ಛಂದಸ್ಸುಳ್ಳ ಋಕ್ಕುಗಳಿಗೆ ಪ್ರತ್ಯೇಕ ಫಲ ಹೇಳಿ **ತದು ಗಾಯತ್ರಮೇವ ಕುರ್ಯಾತ್** ಎಂದು ಗಾಯತ್ರಕ್ಕೆ ಬ್ರಹ್ಮಪ್ರಾಪ್ತಿರೂಪವಾದ ವಿಶೇಷ ಫಲವನ್ನು ಹೇಳೋಣ ಅಂತಹ ಗಾಯತ್ರವು ಯಾವುದು? ಎಂದರೆ **ತದು ಮಾಧುಛಂದಸಂ** ಗಾಯತ್ರವೇ ಮಾಧುಛಂದಸವು ಎಂದು ಮಧುಛಂದಸರು ಕಂಡ ಸೂಕ್ತ ಸಮುದಾಯವನ್ನು ಹೇಳಿ **ವಾಯವಾಯಾಹಿ** ಎಂಬ ಉತ್ತರ ಖಂಡದಲ್ಲಿ **ವಾಯವಾಯಾಹಿ ಅಶ್ವಿನಾ ಯಜ್ವರೀಃ** ಎಂದು ೨ ಸೂಕ್ತಗಳನ್ನು ಗ್ರಹಣ ಮಾಡಿದುದರಿದ ಪೂರ್ವೋತ್ತರ ಸೂಕ್ತಗಳನ್ನು ಮಧುಛಂದಸರೇ ಕಂಡದ್ದು ಎಂದು ಹೇಳಬೇಕು. ಆದುದರಿಂದಲೂ ಮಧುಛಂದಸರೇ **ಇಂದ್ರಂ ವಿಶ್ವಾ** ಎಂಬ ಸೂಕ್ತದಲ್ಲಿಯೂ ದ್ರಷ್ಟೃಗಳೆಂದು ಅಂಗೀಕರಿಸಲೇಬೇಕು.) (೩) (ಹೀಗಾದರೆ **ಅಗ್ನಿಂ ದೂತಂ** ಇತ್ಯಾದಿಗಳಲ್ಲಿಯೂ ಮಧುಛಂದಸರೇ ದ್ರಷ್ಟೃಗಳೆಂದಾಗಲಿ, ಎಂದರೆ) ಇತರ ವಿಷಯವನ್ನು ತಿಳಿಸಿಕೊಡತಕ್ಕ ಶ್ರುತಿ ಲಿಂಗಾದಿಗಳು ಎಷ್ಟು ಇದೆಯೋ, ಅಷ್ಟೇ (ಅಂದರೆ ಇತ್ಯಾದಿಗಳು ಇದ್ದರೇನೇ.) ಸಾಮಾನ್ಯ ಪ್ರಮಾಣವು ಜ್ಞಾಪಕವು ಆಗುವುದು. (ಅಂದರೆ **ತದು ಮಾಧುಛಂದಸಂ** ಎನ್ನುವುದು ಸಾಮಾನ್ಯ ವಚನವು. ಅಪವಾದವಿಲ್ಲವಾದರೆ ಅದು ಪ್ರಮಾಣವೇ. ಅಪವಾದವಿದ್ದರೆ ಸಂಕೋಚ ಮಾಡಬೇಕು. ಇಲ್ಲಿ ಅಪವಾದಕವಾದ ಶ್ರುತ್ಯಾದಿ ಪ್ರಮಾಣಗಳಿಲ್ಲ. **ಅಗ್ನಿಂದೂತಂ** ಇತ್ಯಾದಿಗಳಲ್ಲಿ ಆದರೂ ಸ್ವಾಧ್ಯಾಯ ಮೊದಲಾದ ಅಪವಾದಕ ಪ್ರಮಾಣವಿದೆ. ಅದಕಾರಣ ಇಲ್ಲಿ ಮಧುಛಂದಸರು ಋಷಿಗಳಲ್ಲ. ॥ ೨೧ ॥

ಅವ ॥ ವ್ಯಾಖ್ಯಾನ ಮಾಡಲಿಕ್ಕೆ ಇಷ್ಟಗಳಾದ ಋಕ್ಕುಗಳಿಗೆ ಋಷಿಯನ್ನು ಹೇಳುತ್ತಾರೆ.

ಭಾ ॥ (೧) ಶತರ್ಚ್ಗಿರುತ್ತರಾಭಿಸ್ತು ವಹ್ನಿನಾವಾಸಮುಚ್ಯತಂ । ಆತ್ಮೈನ್ಮೇಧಾತಿಥಿಸ್ತ್ವಭ್ಯಃ ಉತ್ತರಾ ಅಪಿ ತದ್ದೃಶಃ॥ (೨) ಅನ್ಯತ್ರಗಾಸ್ತ್ರಪಸ್ಯನ್ಸಃ ತಾ ದದರ್ಶ ಕದಾಚನ॥(೩) ಕಾಲಸ್ಥಾನಾಂತರತ್ವಂಚೇತ್ಸಂಖ್ಯಾತೋಽಭ್ಯಧಿಕಂ ಭವೇತ್ । (೪) ಅನ್ಯಸ್ಥಾನಗತಾ ಅನ್ಯದೃಷ್ಟಾ ಅಪ್ಯತ್ರಗಾ ಯದಿ। ಸಂಖ್ಯಾಂತರ್ಭಾವಮೇಷ್ಯಂತಿ ತಾ ಇತೋಽಪಗತಾ ಯತಃ॥

॥ (೧) (ಶತಂ ಚತಾಃ ಋಚಶ್ಚ) ಮೇಲಿನ ೧೦೦ ಋಕ್ಕುಗಳಿಂದಲಾದರೂ ವಹ್ನಿ ಇತ್ಯಾದಿ ನಾಮಗಳುಳ್ಳ, ಶ್ರೀಪರಮಾತ್ಮನನ್ನು ಮೇಧಾತಿಥಿ ಋಷಿಗಳು ಸ್ತುತಿಸಿದರು. (ಹೀಗಾದರೆ **ಕಸ್ಯ ನೂನಂ** ಎನ್ನುವುದಕ್ಕಿಂತ ಹಿಂದಿನ **ಯಾವಾಂಕಶಾಮಧುಮತೀ** ಇದು ಮೊದಲಾದವುಗಳಿಗೆ ಬೇರೆ ಋಷಿಗಳನ್ನು ಹೇಳಬೇಕಾಗುವುದು ಎಂದರೆ) ಆ ೧೦೦ ಋಕ್ಕುಗಳ ದೆಶೆಯಿಂದ ಮೇಲಿನ ೪೯ ಋಕ್ಕುಗಳೂ ಕೂಡ ಮೇಧಾತಿಥಿ ಋಷಿಗಳೇ ದೃಷ್ಟ್ರು ಆಗಿ ಉಳ್ಳವುಗಳು. (ಆ ೪೯ ಋಕ್ಕುಗಳನ್ನು ಅವರೇ ಕಂಡದ್ದು.) (೨)(ಹಾಗಾದರೆ ಅವರಿಗೆ ಶತರ್ಚಿ (೧೦೦ ಋಕ್ಕುಗಳನ್ನು ಕಂಡವರು) ಎಂಬ ನಾಮವು ಹೇಗೆ? ಎಂದರೆ) ಆಮೇಧಾತಿಥಿ ಋಷಿಗಳೇ ತಪಸ್ಸುಮಾಡಿಕೊಂಡಿರುವವರು ಒಂದಾನೊಂದು ಸಮಯದಲ್ಲಿ ಬೇರೆ ಆನುಪೂರ್ವಿಗಳಲ್ಲಿರತಕ್ಕ ೪೯ ಋಕ್ಕುಗಳನ್ನು ಕಂಡದ್ದು. (ಅನ್ಯತ್ರಗಾಃ ಎನ್ನುವುದರಿಂದ ಬೇರೆ ಆನು ಪೂರ್ವಿಯೆಂದೂ **ತಪಸ್ಯನ್** ಎನ್ನುವುದರಿಂದ ಅವಸ್ಥಾಂತರವೆಂದೂ,ಕದಾಚನ ಎನ್ನುವುದರಿಂದ ಕಾಲಾಂತರವೆಂದೂ ಉಕ್ತವಾಯ್ತು.) (೩) (ಪ್ರಕೃತವೇನಾಯಿತೆಂದರೆ) ಕಾಲಾಂತರದಲ್ಲಿ ವೇದದಲ್ಲಿಯೇ ಬೇರೆ ಪ್ರದೇಶಗಳಲ್ಲಿ (ಅನ್ಯಸ್ಥಾನದಲ್ಲಿ) (ಇತರರು ಕಂಡದ್ದನ್ನು) ನೋಡಿದ್ದು ಎಂದಾದರೆ— ೧೦೦ ಸಂಖ್ಯೆಗಳಿಂದ ಅಭ್ಯಧಿಕವಾದುದೂ ೧೦೦ ಸಂಖ್ಯೆಗಳಲ್ಲಿ ಅಂತರ್ಭೂತವೇ ಆಗುವುದು. (ಅದರಲ್ಲಿಯೇ ಸೇರುವುವು.) (೪) (ಈ ವಿಷಯದಲ್ಲಿ ಯುಕ್ತಿಯನ್ನು ಹೇಳುತ್ತಾರೆ) ಬೇರೆ ಸ್ಥಾನಗಳಲ್ಲಿ (ವೇದದಲ್ಲಿಯೇ ಬೇರೆ ಪ್ರದೇಶದಲ್ಲಿ) ಬೇರೆ ಕಾಲಗಳಲ್ಲಿ, ಬೇರೆ ಅವಸ್ಥೆಗಳಲ್ಲಿ ಇತರಕ್ಕವುಗಳು, ಇತರರಿಂದ ಕಾಣಲ್ಪಟ್ಟವುಗಳೂ ಇಲ್ಲಿ ಇರುವವುಗಳೆಂದಾದರೆ, ಅವುಗಳು (ಅಂದರೆ ಕಾಲಾಂತರದಲ್ಲಿ ದೇಶಾಂತರದಲ್ಲಿ ಅವಸ್ಥಾಂತರದಲ್ಲಿಯೂ ಕಾಣಲ್ಪಟ್ಟವುಗಳೂ ಬೇರೆ ಋಷಿಗಳಿಂದ ಕಾಣಲ್ಪಟ್ಟವುಗಳೂ ಬೇರೆ ಆನುಪೂರ್ವಿಗಳಲ್ಲಿ ಇರತಕ್ಕವುಗಳೂ) ಇಲ್ಲಿ ಇದ್ದರೂ, ಯಾವ ಕಾರಣದಿಂದ ಇಲ್ಲದವುಗಳಿಗೆ ಸದೃಶಗಳೋ,ಆದ ಕಾರಣ ಅವುಗಳು ೧೦೦ಸಂಖ್ಯೆಗಳಲ್ಲಿಯೇ ಅಂತರ್ಭಾವವನ್ನು ಹೊಂದುತ್ತವೆ.(ಅಂದರೆ ಆ ೪೯ ಋಕ್ಕುಗಳು ಹೆಚ್ಚು ಇದ್ದರೂ೧೦೦ನೂರು ಎಂದೇ ಹೇಳಲ್ಪಡುತ್ತದೆ.) (ಏವಂಚ ಒಂದೇ ದೇಶ, ಒಂದೇ ಕಾಲ, ಒಂದೇ ಅವಸ್ಥೆಗಳಲ್ಲಿ ಆಮೇಧಾತಿಥಿ ಋಷಿಗಳೇ ಕಂಡದ್ದು ಮೂಲವೇದದಲ್ಲಿ ಅಂದರೆ ಉಪವೇದದಲ್ಲಿಯೂ ಒಂದೇ ಅನುಪೂರ್ವಿಯಲ್ಲಿರತಕ್ಕುದೇ ಆದ೧೦೦ಋಕ್ಕುಗಳನ್ನು ಕಂಡದ್ದೆ ಶತರ್ಚಿ ಎಂದು ನಾಮ ಬರಲಿಕ್ಕೆ ಕಾರಣವು.)(ಆ ೪೯ ಋಕ್ಕುಗಳು ಬೇರೆ ಕಡೆ ಇದ್ದುದ್ದು.)॥೧॥

ಋ ॥ (೧೧೧) ಅಗ್ನಿಂ ದೂತಂ ವೃಣೀಮಹೇ ಹೋತಾರಂ ವಿಶ್ವವೇದಸಂ ।
ಅಸ್ಯ ಯಜ್ಞಸ್ಯ ಸುಕ್ರತುಂ ॥ ೧ ॥

ಆ ॥ (ಈ ಋಕ್ಕನ್ನು ಆರಂಭಿಸಿ ಮೇಲಿನ ೪೯ ಋಕ್ಕಗಳಿಗೆ ಕೇವಲ ಮೇಧಾತಿಥಿ ಋಷಿಗಳು. ಅದರಲ್ಲಿ ಅಗ್ನಿಂ ದೂತಂ ಎನ್ನುವುದು ಆಗ್ನೇಯ ಸೂಕ್ತವು. ೧೨ ಋಕ್ಕುಗಳು. ಗಾಯತ್ರೀ ಛಂದಸ್ಸು.) ವಿಶ್ವವೇದಸಂ=(ವಿದ ಜ್ಞಾನೇ) ಸರ್ವವನ್ನು ತಿಳಿದಿರುವ, ಅಸ್ಯ=ಪ್ರಮಾಣ ಪ್ರಮಿತವಾದ, ಯಜ್ಞಸ್ಯ=ಯಾಗ ಸಮುದಾಯದ, ಸುಕ್ರತುಂ=ಚೆನ್ನಾಗಿ ಜ್ಞಾನವುಳ್ಳ.ದೂತಂ=ದೇವತೆಗಳ ಪ್ರಾರ್ಥನೆಯನ್ನು ಮಾಡುವುದರಿಂದ ದೂತನೆನಿಸಿಕೊಂಡ ದೇವತೆಗಳಿಗೆ ಹವಿರ್ಭಾಗವನ್ನು ತಂದುಕೊಡುವುದಕ್ಕಾಗಿ ದೇವತೆಗಳಿಂದ ಕಳುಹಿಸಲ್ಪಡುವುದರಿಂದ ದೂತರೆಂದು

ಪ್ರಸಿದ್ಧನಾದ ಹೋತಾರಂ=ಹೋತನಲ್ಲಿ ನಿಯಾಮಕನಾಗಿದ್ದುದರಿಂದ ಹೋತೃ ಎನಿಸಿಕೊಂಡ, ಅಗ್ನಿಂ=ಅಗ್ನಿಯಲ್ಲಿರತಕ್ಕ ಅಗ್ನಿನಾಮಕನಾದ ಪರಶುರಾಮನನ್ನು ಅಗ್ನಿಯನ್ನು (ನಾವು) ವೃಣೀಮಹೇ (ವೃಞ್ಸಂಭಕ್ತೌ)= ಪ್ರಾರ್ಥಿಸುತ್ತೇವೆ. ॥ ೧ ॥

ಭಾ ॥ (೧) ಯಜ್ಞಭಾಗಾರ್ಥಮಾತ್ರಸ್ಥೋ ದೇವೈಃ ಸಂಪ್ರೇಷಿತೋ ಯತಃ । ದೂತೋಽಗ್ನಿರ್ವಾಸುದೇವಶ್ಚ ತತ್ತತ್ಪ್ರಾರ್ಥಿತಕೃದ್ಯತಃ ॥ (೨) ವಿಶ್ವವೇದಾಃ ಸ ಸರ್ವಜ್ಞೋ ಯಜ್ಞಜ್ಞೋ ಯಜ್ಞಸುಕ್ರತುಃ ॥ ೧ ॥

ಅ ॥ (೧) ಯಾವ ಕಾರಣದಿಂದ ಅಗ್ನಿಯು ಯಜ್ಞಭಾಗವನ್ನು ತೆಗೆದುಕೊಳ್ಳುವುದಕ್ಕಾಗಿ ದೇವತೆಗಳಿಂದ ಕಳುಹಿಸಲ್ಪಡುತ್ತಾನೋ, ಆದ ಕಾರಣ ದೂತನೆನಿಸುತ್ತಾನೆ.(ಆಜ್ಞೆಮಾಡಿ ಕಳುಹಿಸಲ್ಪಡುವವನು ದೂತನೆನಿಸುತ್ತಾನೆ.) ಅಗ್ನಿಯಲ್ಲಿ ನಿಯಾಮಕನಾಗಿರತಕ್ಕ ಶ್ರೀವಾಸುದೇವನು ಆಯಾವ ದೇವತೆಗಳ ಪ್ರಾರ್ಥನೆಯನ್ನು ಮಾಡುವವನೋ, ಆದ ಕಾರಣ ದೂತನಾದ ಅಗ್ನಿಗೆ ಅಂತಃಪ್ರೇರೇಪಿಸುವುದಕ್ಕಾಗಿ ಇದ್ದು ಅಗ್ನಿದ್ವಾರಾ ಅವರವರ ಇಷ್ಟವನ್ನು ಮಾಡುವುದರಿಂದ ದೂತನಂತೆ ಇರುವವನು. (೨) ಆ ಶ್ರೀವಿಷ್ಣುವು ವಿಶ್ವವನ್ನು ತಿಳಿದವನು. ಅಂದರೆ ಸರ್ವಜ್ಞನು. ಯಜ್ಞಸುಕ್ರತುಃ ಯಜ್ಞ ಸಮುದಾಯವನ್ನು ತಿಳಿದವನು ॥ ೧ ॥

ಋ ॥ (೧೧೨) ಅಗ್ನಿಮಗ್ನಿಂ ಹವೀಮಭಿಃ ಸದಾ ಹವಂತ ವಿಶ್ಪತಿಂ । ಹವ್ಯವಾಹಂ ಪುರುಪ್ರಿಯಂ ॥ ೨ ॥

ಅ ॥ (ಋತ್ವಿಜರು) ವಿಶ್ಪತಿಂ=ಪ್ರಜೆಗಳಿಗೆ ಅಧಿಪತಿಯಾದ, ಹವ್ಯವಾಹಂ=(ವಹ ಪ್ರಾಪಣೇ) ಹವಿರ್ಭಾಗವನ್ನು ಸ್ವೀಕರಿಸುವ, ಪುರುಪ್ರಿಯಂ=ಪೂರ್ಣಸುಖವುಳ್ಳ, ಅಗ್ನಿಮಗ್ನಿಂ=ಅಗ್ನಿನಾಮಕ ಬಹು ಭಗವದ್ರೂಪಗಳನ್ನು, ಗಾರ್ಹಪತ್ಯಾದಿ ಅಗ್ನಿಗಳನ್ನು, ಹವೀಮಭಿಃ=ಋಗ್ರೂಪ ಆಹ್ವಾನಗಳಿಂದ, ಸದಾ=ಯಾವಾಗಲೂ, ಹವಂತ=ಕರೆದರು (ಪ್ರಾರ್ಥಿಸಿದರು.) ॥ ೨ ॥

ಭಾ ॥ (೧) ಅಗ್ನಿನಾಮಾ ಜಾಮದಗ್ನ್ಯೋ ಭಗವಾನ್ ಸಂಪ್ರಕೀರ್ತಿತಃ । ತಸ್ಯ ರೂಪಬಹುತ್ವೇನ ವೀಪ್ಸಾ ಚೈವೋಪಪದ್ಯತೇ ॥ (೨) ಹವೀಮಭಿರ್ಋಗಾಹ್ವಾನೈರಾಹ್ವಯಂತಃ ಪ್ರಜಾಪತಿಂ ॥ ೨ ॥

ಅ ॥ (೧) ಗಾರ್ಹಪತ್ಯಾದಿ ರೂಪಗಳಿಂದ ಅಗ್ನಿಗಳು ಅನೇಕಗಳಾದ ಪ್ರಯುಕ್ತ ಅಗ್ನಿಮಗ್ನಿಂ ಎಂದು ವೀಪ್ಸಾದಲ್ಲಿ ದ್ವಿರುಕ್ತಿಯು ಕೂಡುತ್ತದೆ. ಶ್ರೀ ಹರಿಯು ಒಬ್ಬನೇ ಆದ ಪ್ರಯುಕ್ತ ದ್ವಿರುಕ್ತಿಯು ಹೇಗೆ ಕೂಡುತ್ತದೆ? ಎಂದರೆ) ಅಗ್ನಿಯಲ್ಲಿರತಕ್ಕವನು ಅಗ್ನಿಯೆಂದು ಹೆಸರುಳ್ಳವನು ಷಡ್ಗುಣೈಶ್ವರ್ಯ ಸಂಪನ್ನನಾದ ಪರಶುರಾಮನು ಹೇಳಿಸಿಕೊಳ್ಳಲ್ಪಡುತ್ತಾನೆ. ಶ್ರೀ ಹರಿಗೆ ಬಹುರೂಪಗಳಿದ್ದುದರಿಂದ ವೀಪ್ಸಾ ಮೂಲಕವಾದ ದ್ವಿರುಕ್ತಿಯೂ ಕೂಡುತ್ತದೆ. (೨) ಪ್ರಜೆಗಳಿಗೆ ಅಧಿಪತಿಯಾದ ಶ್ರೀ ಹರಿಯನ್ನು ಹವೀಮಭಿಃ=ಋಗ್ರೂಪಗಳಾದ ಆಹ್ವಾನಗಳಿಂದ (ಋತ್ವಿಜರು) ಕರೆದರು. (ಪ್ರಾರ್ಥಿಸಿದರು.) ॥ ೨ ॥

ಋ ॥ (೧೧೩) ಅಗ್ನೇ ದೇವಾँ ಇಹಾ ವಹ ಜಜ್ಞಾನೋ ವೃಕ್ತಬರ್ಹಿಷೇ । ಅಸಿ ಹೋತಾ ನ ಈಡ್ಯಃ ॥ ॥ ೩ ॥

ಅ || ಅಗ್ನೇ=ಎಲೋ ಅಗ್ನಿಯೇ, ಜಜ್ಞಾನಃ=(ಜನೀಪ್ರಾದುರ್ಭಾವೇ) ಹುಟ್ಟಿತಕ್ಕ (ನಮ್ಮ ಯಜ್ಞದಲ್ಲಿ ಅಭಿವ್ಯಕ್ತನಾದ ನೀನು) ವೃಕ್ತಬರ್ಹಿಷೇ=ವಿಸ್ತೃತವಾದ ಬರ್ಹಿಸ್ಸುಳ್ಳ ಯಜಮಾನನ ಪ್ರಯೋಜನಕ್ಕಾಗಿ, ದೇವಾನ್=ದೇವತೆಗಳನ್ನು ಇಹ=ಯಜ್ಞದಲ್ಲಿ ಆ ವಹ=ಚೆನ್ನಾಗಿ ಹೊಂದಿಸಿಕೊಡು. ಹೋತಾ ಅಸಿ=(ಯಾವ ಕಾರಣದಿಂದ ನೀನು) ಹೋತೃ ಆಗಿರುತ್ತಿಯೋ (ಆದ ಕಾರಣ) ನಃ=ನಮಗೆ,ಈಡ್ಯಶ್ಚಾಸಿ=ಸ್ತುತ್ಯನೂ ಆಗಿರುತ್ತಿ. || ૩ ||

ಭಾ || ಜಜ್ಞಾನೋ ವ್ಯಜ್ಯಮಾನಸ್ತು ವೃಕ್ತಂ ಪ್ರಸ್ತೃತಮುಚ್ಯತೇ | ಯಜಮಾನೋ ವೃಕ್ತಬರ್ಹಿಃ || ૩ ||

ಅ || ಜಜ್ಞಾನಃ=ನಮ್ಮ ಯಜ್ಞದಲ್ಲಿ ಅಭಿವ್ಯಕ್ತನಾದವನು. ವೃಕ್ತಂ=ಚೆನ್ನಾಗಿ ವಿಸ್ತೃತವಾದುದು, ಹೇಳಲ್ಪಡುತ್ತದೆ. ಚೆನ್ನಾಗಿ ವಿಸ್ತೃತವಾದ ಬರ್ಹಿಸ್ಸುಳ್ಳವನು (ಬರ್ಹಿಸ್ಸನ್ನು ವಿಸ್ತರಿಸುವವನು) ಯಜಮಾನನು || ૩ ||

ಋ ||(೧೧೪) ತಾಁ ಉಶತೋ ವಿ ಬೋಧಯ ಯದಗ್ನೇ ಯಾಸಿ ದೂತ್ಯಂ |
ದೇವೈರಾಸತ್ಸಿ ಬರ್ಹಿಷಿ || ೪ ||

ಅ || ಅಗ್ನೇ=ಶ್ರೀ ಹರಿಯೇ, ಯತ್=ಯಾವ ಕಾರಣದಿಂದ, ದೂತ್ಯಂ=ದೂತತ್ವವನ್ನು ಅಥವಾ ದೂತನ ಕರ್ಮವನ್ನು, ಯಾಸಿ=(ಯಾ ಪ್ರಾಪಣೇ) ಹೊಂದಿರುತ್ತಿಯೋ, (ದೇವತೆಗಳ ಪ್ರಾರ್ಥನೆಯನ್ನು ಮಾಡುವುದರಿಂದ ಯಾವ ಕಾರಣದಿಂದದೇವತೆಗಳ ದೂತನಾಗಿರುತ್ತಿಯೋ) (ಆದಕಾರಣ) ಉಶತಃ=(ವಶಕಾಂತೌ) ಯಜ್ಞವನ್ನು ಕುರಿತು ಬರಲಿಕ್ಕೆ ಇಚ್ಛಿಸುವ, ತಾನ್= ಆ ದೇವತೆಗಳನ್ನು ವಿಬೋಧಯ=ಈತನ ಯಜ್ಞಕ್ಕೆ ನೀವು ಬರಬೇಕೆಂದು ವಿಜ್ಞಾಪಿಸಿಕೊಳ್ಳು. ದೇವೈಃ= ದೇವತೆಗಳಿಂದ ಕೂಡಿಕೊಂಡು, ಬರ್ಹಿಷಿ=ಬರ್ಹಿಸ್ಸಿನಲ್ಲಿ ಆ ಸತ್ಸಿ=(ಸದೃಲ್ ವಿಶರಣಗತ್ಯವಸಾದನೇಷು) ಕೂತು ಕೊಳ್ಳುತ್ತಿ. ಕೂತುಕೊಳ್ಳುವಿ. || ೪ ||

ಭಾ || ಬೋಧಯೇಶೇಚ್ಛತಃ ಸುರಾನ್ | ದೇವೈಃ ಸಹೋಪವಿಶಸಿ || ೪ ||

ಅ || ಬರಲು ಇಚ್ಛಿಸತಕ್ಕ ದೇವತೆಗಳನ್ನು ಈ ಯಜ್ಞಕ್ಕೆ ಬಂದು ನೀವು ಅನುಗ್ರಹಿಸಬೇಕು ಎಂದು ವಿಜ್ಞಾಪಿಸಿಕೊಳ್ಳು. ದೇವತೆಗಳಿಂದ ಕೂಡಿಕೊಂಡು ಕೂತುಕೊಳ್ಳುತ್ತಿ. || ೪ ||

ಋ ||(೧೧೫) ಘೃತಾಹವನ ದೀದಿವಃ ಪ್ರತಿ ಷ್ಮ ರಿಷತೋ ದಹ |
ಅಗ್ನೇ ತ್ವಂ ರಕ್ಷಸ್ವಿನಃ || ೫ ||

ಅ || ಘೃತಾಹವನ=ಶುದ್ಧವಾದ, (ಯಜ್ಞಕ್ಕೆ ಯೋಗ್ಯವಾದ) ಪ್ರಶಸ್ತ ತುಪ್ಪವು ಹವಿಸ್ಸಾಗಿ ಉಳ್ಳ, ದೀದಿವಃ=ಅತಿಶಯವಾಗಿ ಪ್ರಕಾಶಿಸಿಕೊಂಡಿರತಕ್ಕ, ಅಗ್ನೇ=ಅಗ್ನಿಯೇ,ತ್ವಂ=ನೀನು, ರಿಷತಃ=(ರಿಷಹಿಂಸಾಯಾಂ) ನಾಶಕರಾದ, ರಕ್ಷಸ್ವಿನಃ=ರಾಕ್ಷಸರಿಗೆ ಸಂಬಂಧಪಟ್ಟ ಯಜ್ಞಗಳನ್ನು ಕೆಡಿಸುವ ಜನರನ್ನು, ಪ್ರತಿದಹಸ್ಮ= (ದಹಭಸ್ಮೀಕರಣೇ) ಸುಡಲೇಬೇಕು. (ನಾಶಗೊಳಿಸಲೇ ಬೇಕು.) || ೫ ||

ಭಾ || ಯಸ್ಯ ತೇ ಸುಘೃತಂ ಹವಿಃ | ರಿಷತೋ ನಾಶಕಾನ್ರಕ್ಷೋ ಜನಾನ್ ಪ್ರತಿದಹೈವ ಚ || ೫ ||

ಅ || ಎಲೋ ಅಗ್ನಿಯೇ ಯಾವ ನಿನಗೆ ಶುದ್ಧವಾದ ಘೃತರೂಪ ಹವಿಸ್ಸು ಇದೆಯೋ, ಅಂತಹ ನೀನು, ರಿಷತಃ=ಯಜ್ಞನಾಶಕರಾದ ಸ್ವಾಮಿಭೂತರಾದ ಶ್ರೇಷ್ಠ ರಾಕ್ಷಸರನ್ನು ನಾಶಗೊಳಿಸಲೇಬೇಕು. || ೫ ||

ಋ || (೧೧೬) ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ |
ಹವ್ಯವಾಡ್ಜುಹ್ವಾಸ್ಯಃ || ೬ || ೧೧ ||

ಅ || ಜುಹ್ವಾಸ್ಯಃ=ಜುಹೂ=ಹವನಕ್ಕೆ ಅಧಿಕರಣವಾದ, ಆಸ್ಯಃ=ಮುಖವುಳ್ಳ, ಕವಿಃ=ಸರ್ವಜ್ಞನಾದ, ಗೃಹಪತಿಃ=ಮಂದಿರಗಳಿಗೆ ಅಧಿಪತಿಯಾದ, ಯುವಾ=ತರುಣನಾದ,ಹವ್ಯವಾಟ್=ಅಗ್ನಿಯು,ಅಗ್ನಿನಾ= ಸರ್ವೋತ್ತಮನಾದ ನಿನ್ನಿಂದ, ಸಮಿಧ್ಯತೇ=(ಇಂಧೀ ದೀಪ್ತೌ) ಚೆನ್ನಾಗಿ ಪ್ರಕಾಶಿಸಲ್ಪಡುತ್ತಾನೆ. (ಅಂದರೆ ಎಲೋ ಶ್ರೀಹರಿಯೇ ನೀನು ಅಗ್ನ್ಯಾದಿಗಳಿಗೆ ಪ್ರಕಾಶಾದಿಗಳನ್ನು ಕೊಡತಕ್ಕವನು.) (ಪ್ರಸಿದ್ಧಾಗ್ನಿ ಪಕ್ಷದಲ್ಲಿ) ಹೋಮಾಧಾರನಾಗಿರುವುದರಿಂದ ಆಹವನೀಯಾಗ್ನಿಯು ಮಥಿತವಾದ ಗಾರ್ಹಪತ್ಯಾದ್ಯಗ್ನಿಯಿಂದಚೆನ್ನಾಗಿಪ್ರಕಾಶಿತನಾಗುತ್ತಾನೆ.) || ೬ || ೧೧ ||

ಭಾ || ಯಸ್ಯಾಸ್ಯೇ ಹೂಯತೇ ಸೋಽಗ್ನಿಃ ಪರೇಶೇನ ಸಮಿಧ್ಯತೇ |
ಅಥವಾಽಽಹವನೀಯೋಽಗ್ನಿರ್ಮಥಿತೇನ ಸಮಿಧ್ಯತೇ || ೬ || ೧೧ ||

ಅ || ಯಾರ ಮುಖದಲ್ಲಿ ಹವಿಸ್ಸು ಹೋಮಿಸಲ್ಪಡುತ್ತದೋ ಆ ಅಗ್ನಿಯು ಜುಹ್ವಾಸ್ಯನು. ಆತನು ಸರ್ವೋತ್ತಮನಾದ ನಿನ್ನಿಂದ ಚೆನ್ನಾಗಿ ಪ್ರಕಾಶಿತನಾಗುತ್ತಾನೆ. (ಅಂದರೆ ಅಗ್ನ್ಯಾದಿಗಳಿಗೆ ಪ್ರಕಾಶಾದಿ ಗುಣಗಳನ್ನು ಕೊಡತಕ್ಕವನು ನೀನು) ಅಥವಾ ಪ್ರಸಿದ್ಧ ಅಗ್ನಿ ವಿಷಯದಲ್ಲಿ ಆಹವನೀಯಾಖ್ಯ ಅಗ್ನಿಯು ಮಥಿತವಾದ ಗಾರ್ಹಪತ್ಯಾಗ್ನಿಯಿಂದ ಕೂಡಿಕೊಂಡು ಪ್ರಕಾಶಿತವಾಗುತ್ತದೆ. (ಅಂದರೆ ಗಾರ್ಹಪತ್ಯ ಮೊದಲಾದ ೩ ಅಗ್ನಿಗಳು ಹೋಮಕಾಲದಲ್ಲಿ ಒಟ್ಟಿಗೇನೇ ಪ್ರಕಾಶಿಸುತ್ತವೆ.) (ಕವ್ಯಾದಿ ಶಬ್ದಾರ್ಥಗಳು ಹಿಂದಿನಂತೆಯೇ) || ೬ || ೧೧ ||

ಋ || (೧೧೭) ಕವಿಮಗ್ನಿಮುಪಸ್ತುಹಿ ಸತ್ಯಧರ್ಮಾಣಮಧ್ವರೇ |
ದೇವಮಮೀವಚಾತನಂ || ೭ ||

ಅ || ಕವಿಂ=ಸರ್ವಜ್ಞನೂ, ಸತ್ಯ ಧರ್ಮಾಣಂ=ಯಥಾರ್ಥಗಳಾದ ಗುಣಗಳುಳ್ಳವನು, ಅಮೀವಚಾತನಂ=ದುಃಖವನ್ನು ನಾಶಗೊಳಿಸುವವನು, ಅಥವಾ ದುಃಖವನ್ನು ಹೋಗಲಾಡಿಸುವವನು ಇಂತಹ, ಅಗ್ನಿಂದೇವಂ= ಅಗ್ನಿನಾಮಕ ಶ್ರೀಪರಶುರಾಮನನ್ನು ಅಧ್ವರೇ=ಯಜ್ಞದಲ್ಲಿ, ಉಪಸ್ತುಹಿ= ಸ್ತೋತ್ರಮಾಡು. (ಎಂದು ತನ್ನನ್ನು ಕುರಿತು, ಅಥವಾ ತನ್ನ ಅಂತರ್ಯಾಮಿಯನ್ನು ಕುರಿತು ಅಥವಾ ಹೋತೃವಿನಲ್ಲಿರತಕ್ಕ ಶ್ರೀಹರಿಯನ್ನು ಕುರಿತು ಹೇಳಿದ್ದು.) || ೭ ||

ಭಾ || ಸತ್ಯಧರ್ಮಾ ಸದ್ಗುಣಭೃದ್ದುಃಖಘ್ನೋಽಮೀವಚಾತನಃ | ಚಾತನಂ ಕಾಲನಂ ವಾ ಸ್ಯಾತ್ || ೭ ||

ಅ ॥ ಸತ್ಯಧರ್ಮಾ=ಸದ್ಗುಣಗಳನ್ನು ಧರಿಸಿರುವವನು. ಅಮೀವಚಾತನಃ=ದುಃಖಗಳನ್ನು ನಾಶಗೊಳಿಸುವವನು. ಅಥವಾ ಚಾತನಂ— ಕಾಲನವು ಅಂದರೆಅಪಸರಣವು (ದೂರಕ್ಕೆ ಮಾಡುವುದು) ಅಂತೂ ಅಮೀವಚಾತನಃ= ದುಃಖಗಳನ್ನು ದೂರಕ್ಕೆ ಹೋಗಲಾಡಿಸುವವನು ॥ ೭ ॥

ಋ ॥(೧೧೮) ಯಸ್ತ್ವಾಮಗ್ನೇ ಹವಿಷ್ಪತಿರ್ದೂತಂ ದೇವ ಸಪರ್ಯತಿ।
ತಸ್ಯ ಸ್ಮ ಪ್ರಾವಿತಾ ಭವ॥ ॥ ೮ ॥

ಅ ॥ ಅಗ್ನೇ=ಶ್ರೀಹರಿಯೇ, ಯಃ=ಯಾವ, ಹವಿಷ್ಪತಿಃ= ಯಜಮಾನನು, ದೂತಂತ್ವಾಂ= ಪ್ರಾರ್ಥನೆಯನ್ನುಮಾಡುವುದರಿಂದ ದೂತನೆನಿಸಿಕೊಂಡ ನಿನ್ನನ್ನು,ಸಪರ್ಯತಿ=(ಸಪರ ಪೂಜಾಯಾಂ)ಪೂಜಿಸುತ್ತಾನೋ, ಪೂಜಿಸಿದವನೋ, ತಸ್ಯ=ಅಂತಹ ಯಜಮಾನನನ್ನು ಪ್ರಾವಿತಾ ಭವ=ಚೆನ್ನಾಗಿ ರಕ್ಷಿಸತಕ್ಕವನು ಆಗು ॥ ೮ ॥

ಋ ॥ (೧೧೯) ಯೋ ಅಗ್ನಿಂ ದೇವವೀತಯೇ ಹವಿಷ್ಮಾँ ಆ ವಿವಾಸತಿ।
ತಸ್ಮೈ ಪಾವಕ ಮೃಳಯ ॥ ೯ ॥

ಅ ॥ ದೇವ ವೀತಯೇ=(ವೀಗತಿ ವ್ಯಾಪ್ತಿಪ್ರಜನ ಕಾಂತ್ಯಸನ ಖಾದನೇಷು)ದೇವತೆಗಳು ಬರುವುದಕ್ಕಾಗಿ, ಅಥವಾ ದೇವತೆಗಳ ಪ್ರಾಪ್ತಿ ರೂಪವಾದ ಫಲಕ್ಕಾಗಿ, ಯಃ ಹವಿಷ್ಮಾನ್=ಯಾವ ಯಜಮಾನನು ಅಗ್ನಿಂ= ಸರ್ವಾಂಗಗಳಿಗೆ ಪ್ರೇರಕನಾದ ನಿನ್ನನ್ನು, ಆವಿವಾಸಯತಿ=(ವಸನಿವಾಸೇ) ಆವಾಸಗೊಳಿಸುತ್ತಾನೋ, ಅಥವಾ ಶ್ರುತ್ಯುಕ್ತ ಅಗ್ನ್ಯಾಧಾನಮಾಡುತ್ತಾನೋ, ಅಥವಾ ಪೂಜಿಸುತ್ತಾನೋ, ಪಾವಕ=ಪವಿತ್ರೀಕರಿಸತಕ್ಕ ಶ್ರೀಹರಿಯೇ, (ನೀನು)ತಸ್ಮೈ=ಅಂತಹ ಯಜಮಾನನನ್ನು ಮೃಳಯ=ಸರ್ವದಾ ರಕ್ಷಿಸು ॥ ೯ ॥

ಭಾ ॥ ದೇವವೀತಿಸ್ತು ತದ್ಗತಿಃ। ಆವಾಸಯತಿ ಯಸ್ತ್ವಾಂ ಚ ತಂ ತ್ವಂ ಮೃಳಯ ಸರ್ವದಾ ॥ ೯ ॥

ಅ ॥ ದೇವವೀತಿಯೆಂದರೆ=ದೇವತೆಗಳ ಗತಿಯು. ಅಂದರೆ- ಯಜ್ಞಕ್ಕೆ ದೇವತೆಗಳ ಆಗಮನವು. ಅಥವಾ ದೇವತೆಗಳ ಪ್ರಾಪ್ತಿರೂಪವಾದ ಫಲವು. ಯಾವ ಯಜಮಾನನು ನಿನ್ನನ್ನು ಆವಾಸಗೊಳಿಸುತ್ತಾನೋ, ಅಥವಾ ಶ್ರುತ್ಯುಕ್ತವಾದ ಅಗ್ನ್ಯಾಧಾನ ಮಾಡುತ್ತಾನೋ, ಅಥವಾ ಪೂಜಿಸುತ್ತಾನೋ, ಅಂತಹ ಯಜಮಾನನನ್ನು, ನೀನು ಸರ್ವದಾ ಸುಖಪಡಿಸು. ॥ ೯ ॥

ಋ ॥ (೧೨೦) ಸ ನಃ ಪಾವಕ ದೀದಿವೋಽಗ್ನೇ ದೇವಾँ ಇಹಾ ವಹ।
ಉಪ ಯಜ್ಞಂ ಹವಿಶ್ಚ ನಃ ॥ ೧೦ ॥

ಅ ॥ ಪಾವಕ=(ಪೂಞ್ಪವನೇ) (ಪುನಾತಿ ಪವಿತ್ರಯತೀತಿ ಪಾವಕಃ) ಪವಿತ್ರೀಕರಿಸತಕ್ಕ, ದೀದಿವಃ= (ದಿವು ಕ್ರೀಡಾ ವಿಜಿಗೀಷಾವ್ಯವಹಾರದ, ದ್ಯುತಿಸ್ತುತಿ ಮೋದಮದ ಸ್ವಪ್ನಕಾಂತಿ ಗತಿಷು) ಪ್ರಕಾಶಿಸಿಕೊಂಡಿರುವ, ಅಗ್ನೇ=ಶ್ರೀಹರಿಯೇ, ಸಃ=ಅಂತಹ ನೀನು, ಇಹ=ಇಲ್ಲಿಗೆ, ನಃ=ನಮ್ಮ, ಯಜ್ಞಂ= ಯಾಗವನ್ನು ಕುರಿತು,

ನಃ=ನಮ್ಮ.ಹವಿಶ್ಚ=ಹವಿಸ್ಸನ್ನು ಕೂಡ ಕುರಿತು, ದೇವಾನ್=ದೇವತೆಗಳನ್ನು ಉಪ ಆ ವಹ=ಬರುವಂತೆ ಮಾಡು. (ವಿಶೇಷತಃ ಸನ್ನಿಹಿತರನ್ನಾಗಿ ಮಾಡು.) (ಅಧ್ಯಾತ್ಮರೂಪ ಅರ್ಥದಲ್ಲಿ) ಇಹ=ಈ ಶರೀರದಲ್ಲಿ ದೇವಾನ್=ತತ್ವಾಭಿಮಾನಿಗಳಾದ ದೇವತೆಗಳನ್ನು ನಮ್ಮ ಯಜ್ಞ, ನಮ್ಮ ಹವಿಸ್ಸುಗಳನ್ನು ಕುರಿತು (ಅಂದರೆ—ನಿನ್ನ ಪೂಜಾ ರೂಪವಾದ ಯಜ್ಞಾದಿ ವಿಷಯಗಳ ಸಿದ್ಧಿಗಾಗಿ) ಉಪಾವಹ=ವಿಶೇಷತಃ ಸನ್ನಿಹಿತರನ್ನಾಗಿ ಮಾಡು. ॥ ೧೦ ॥

ಭಾ ॥ ತ್ವತ್ಪೂಜಾವಿಷಯೇ ದೇವಾನಾವಹೇಂದ್ರಿಯಮಾನಿನಃ ॥ ೧೦ ॥

ಅ ॥ (ಬಾಹ್ಯಾರ್ಥವು ಸ್ಫುಟವಾಗಿರುವುದರಿಂದ ಅಧ್ಯಾತ್ಮಾರ್ಥವನ್ನು ಹೇಳುತ್ತಾರೆ.) ನಿನ್ನ ಪೂಜಾರೂಪ ಯಜ್ಞಾದಿ ವಿಷಯಗಳ ಸಿದ್ಧಿಗಾಗಿ(ಅಂದರೆ ಯಜ್ಞಾದಿಗಳಿಗೆ ಫಲವನ್ನು ಕೊಡಲಿಕ್ಕೆ ಉದ್ಯುಕ್ತರಾಗುವುದಕ್ಕಾಗಿ) ಚಕ್ಷುರಾದೀಂದ್ರಿಯಗಳಿಗೆ ಅಭಿಮಾನಿಗಳಾದ ದೇವತೆಗಳನ್ನು ಈ ಶರೀರದಲ್ಲಿ ವಿಶೇಷತಃಸನ್ನಿಹಿತರನ್ನಾಗಿ ಮಾಡು ॥ ೧೦ ॥

ಋ ॥ (೧೨೧) ಸ ನಃ ಸ್ತವಾನ ಆ ಭರ ಗಾಯತ್ರೇಣ ನವೀಯಸಾ ।

ರಯಿಂ ವೀರವತೀಮಿಷಂ ॥ ॥ ೧೧ ॥

ಅ ॥ (ಎಲೋ ಅಗ್ನಿಯೇ) ನವೀಯಸಾ–ಅತಿ ನೂತನವಾಗಿ ಕಾಣಲ್ಪಡುವ (ಈಗಲೇ ಅಭಿವ್ಯಕ್ತವಾಗುವ) ಗಾಯತ್ರೇಣ=ಗಾಯತ್ರ ಎಂಬ ಸಾಮದಿಂದ, ಸ್ತವಾನಃ=(ಷ್ಟುಇಸ್ತುತೌ) ಸ್ತುತಿಸಲ್ಪಡತಕ್ಕ, ಸಃ=ಅಂತಹ ನೀನು, ನಃ=ನಮಗೆ, ರಯಿಂ=ವಿತ್ತವನ್ನು, ವೀರವತೀಂ=ಪುತ್ರ (ಸತ್ಸಂತಾನ) ಯುಕ್ತವಾದ, ಅಥವಾ ವೀರ್ಯ ಯುಕ್ತವಾದ, ಇಷಂ=ಅನ್ನವನ್ನು ಕೂಡ, ಆ ಭರ=ಕೊಡು. ॥ ೧೧ ॥

ಭಾ ॥ ಗಾಯತ್ರೇಣ ಸ್ತೂಯಮಾನೋ ದೃಶ್ಯಮಾನೇನ ನೋ ರಯಿಂ। ಪುತ್ರಯುಕ್ತಾಮಿಷಂ ಚೈವ ವೀರ್ಯಯುಕ್ತಾಮಥಾವಹ ॥ ೧೧ ॥

ಅ ॥ (ವೇದವು ಅಪೌರುಷೇಯವಾದುದರಿಂದ ಈಗಲೇ) ಕಾಣಲ್ಪಡತಕ್ಕ. (ಅಭಿವ್ಯಕ್ತವಾಗುವ, ಗಾಯತ್ರ ಎಂಬ ಸಾಮದಿಂದ, ಸ್ತುತಿಸಲ್ಪಡತಕ್ಕ ನೀನು ನಮಗೆ ದ್ರವ್ಯವನ್ನೂ, ಪುತ್ರರಿಂದ ಕೂಡಿದ, ಅಥವಾ ವೀರ್ಯ ದಿಂದ ಕೂಡಿದ, ಅನ್ನವನ್ನೂ ಕೂಡ ಕೊಡು ॥ ೧೧ ॥

ಋ ॥ (೧೨೨) ಅಗ್ನೇ ಶುಕ್ರೇಣ ಶೋಚಿಷಾ ವಿಶ್ವಾಭಿರ್ದೇವಹೂತಿಭಿಃ ।

ಇಮಂ ಸ್ತೋಮಂ ಜುಷಸ್ವ ನಃ ॥೧೨ ॥ ೨೩ ॥ ೧೨ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ಶುಕ್ರೇಣ=ಶುಭ್ರವಾದ, (ಜ್ವಲಿಸಿ ಕೊಂಡಿರುವ) ಶೋಚಿಷಾ=ತೇಜಸ್ಸಿನಿಂದ, (ಕೂಡಿದ ನೀನು) ವಿಶ್ವಾಭಿಃ=ಎಲ್ಲಾ. ದೇವಹೂತಿಭಿಃ= ದೇವತೆಗಳ ಆಹ್ವಾನಗಳಿಂದ ಕೂಡಿಕೊಂಡು, ನಃ=ನಮ್ಮ,ಇಮಂ ಸ್ತೋಮಂ=ಈ ಸ್ತುತಿಯನ್ನು ಜುಷಸ್ವ (ಜುಷೀಪ್ರೀತಿಸೇವನಯೋಃ) ಪ್ರೀತಿಯಿಂದ ಅಂಗೀಕರಿಸು. (ದೇವತೆಗಳು ಆಹ್ವಾನವನ್ನು ನಿಮ್ಮ ಸ್ತುತಿಯನ್ನು ಕೂಡ ನಮ್ಮಲ್ಲಿ ದಯೆಯಿಂದ ಕೇಳು) ॥ ೧೨ ॥

ಭಾ ॥ ಜ್ವಲತಾ ತೇಜಸಾ ವಿಶ್ವದೇವಾಹ್ವಾನೈರ್ನೃಣಾ ಸ್ತುತಿಂ ॥ ೧೨ ॥ ೨೩ ॥ ೧೨ ॥

ಅ || ಜ್ವಲಿಸಿ ಕೊಂಡಿರತಕ್ಕ ತೇಜಸ್ಸಿನಿಂದ ಕೂಡಿದ ನೀನು ಎಲ್ಲಾ ದೇವತಾಹ್ವಾನಗಳಿಂದಲೂ ಕೂಡಿ ಕೊಂಡು ನಮ್ಮ ಸ್ತೋತ್ರವನ್ನು ಅಂಗೀಕರಿಸು. (ಅಂದರೆ ದೇವತೆಗಳ ಆಹ್ವಾನಗಳನ್ನೂ, ನಿನ್ನ ಸ್ತೋತ್ರವನ್ನು ಕೂಡ ನಮ್ಮಲ್ಲಿ ದಯೆಯಿಂದ ಕೇಳು) || ೧೨ || ೧೨ || ೧೨ ||

ಅವ || ೧. ಋಕ್ಕು. ೨ ವರ್ಗ. ಆಪ್ರೀಸೂಕ್ತವು. (ಆ ಸಮ್ಯಕ್ ಪ್ರೀಯತೆ (ಯಾಭಿಃ ಋಗ್ಭಿಃ ಅಥವಾ ಯೇನ ವಿಷ್ಣುಃ=ಯಾವ ಋಕ್ಕುಗಳಿಂದ ಯಾವ ಸೂಕ್ತದಿಂದ ಶ್ರೀ ವಿಷ್ಣುವು ಚೆನ್ನಾಗಿ ಪ್ರೀತನಾಗುತ್ತಾನೋ ಆ ಸೂಕ್ತವು ಅಥವಾ ಆ ಋಕ್ಕುಗಳು, ಸಮಿದ್ಧ ಅಗ್ನ್ಯಾದಿ ದೇವತೆಗಳುಳ್ಳದ್ದು ಆ ಪ್ರೀಎನಿಸುತ್ತದೆ.) ಗಾಯ ತ್ರೀಛಂದಸ್ಸು. ಪ್ರತಿಋಕ್ಕುಗಳಿಗೂ ಬೇರೆಬೇರೆ ದೇವತೆಗಳು. ಪ್ರಥಮ ಋಕ್ಕಿಗೆ ಇಧ್ಮಾಗ್ನಿಯು, ಸಮಿದ್ಧಾಗ್ನಿ ಯಾಗಲೀ ದೇವತೆಯು.(ಏವಂಚ ಯಾವ ಋಕ್ಕುಗಳಿಂದ ಶ್ರೀ ವಿಷ್ಣುವು ಪ್ರೀತನಾಗುತ್ತಾನೋ ಆ ಋಕ್ಕುಗಳು ಆಪ್ರಿಯಃ ಎನಿಸುತ್ತವೆ. ಅಂತಹ ಋಕ್ಕುಗಳಿಂದ ಯುಕ್ತವಾದ ಸೂಕ್ತವು ಆಪ್ರೀಸೂಕ್ತವೆನಿಸುತ್ತದೆ.)

ಋ || (೧೨೩) ಸುಸಮಿದ್ಧೋ ನ ಆ ವಹ ದೇವಾಁ ಅಗ್ನೇ ಹವಿಷ್ಮತೇ ।
ಹೋತಃ ಪಾವಕ ಯಕ್ಷಿ ಚ || ೧ ||

ಅ|| ಹೋತಃ ಪಾವಕ ಅಗ್ನೇ=ಎಲೋ ಅಗ್ನಿಯೇ, ಸುಸಮಿದ್ಧಃ=ಅತಿ ಪ್ರಕಾಶಿತನಾದ ನೀನು, ನಃ ಹವಿ ಷ್ಮತೇ=ನಮ್ಮ ಯಜಮಾನನ ಉದ್ದಿಶ್ಯ, ದೇವಾನ್=ದೇವತೆಗಳನ್ನು ಆ ವಹ=ಕರೆ. ಯಕ್ಷಿಚ=ಕರೆದು ಅವರ ಉದ್ದಿಶ್ಯ ಯಜ್ಞ ಮಾಡು. (ಪೂಜಿಸು)(ದೇವಾನ್ ಆ ವಹ ಎಂದು ಬಹ್ವಾವರ್ತಿ ಹೇಳಿದ್ದು ಅತ್ಯಾದರದಿಂದ)||೧||

ಭಾ || ಅಸ್ಮದ್ಧವಿಷ್ಮತೇ ದೇವಾನಾಹೂಯ ಯಜ ಚಾದರಾತ್ || ೧ ||

ಅ|| ನಮ್ಮ ಯಜಮಾನನ ಉದ್ದಿಶ್ಯ ದೇವತೆಗಳನ್ನು ಕರೆದು ಅತ್ಯಾದರದಿಂದ ಯಜ್ಞ ಮಾಡು. (ಪೂಜಿಸು) || ೧ ||

ಋ || (೧೨೪) ಮಧುಮಂತಂ ತನೂನಪಾದ್ಯಜ್ಞಂ ದೇವೇಷು ನಃ ಕವೇ ।
ಅದ್ಯಾ ಕೃಣುಹಿ ವೀತಯೇ ॥ || ೨ ||

ಅ||(ಈ ಋಕ್ಕಿಗೆ ತನೂನಪಾತ್ ದೇವತೆಯು) ಕವೇ=ಸರ್ವಜ್ಞನೇ, ತನೂನಪಾತ್=ತನೂನಪಾತ್‌ಎಂಬ ನೀನು, ವೀತಯೇ= ಯಜಮಾನನಿಗೆ ದೇವತಾಪ್ರಾಪ್ತಿಗಾಗಿ, ನಃ=ನಮ್ಮದ್ದಾದ, ಮಧುಮಂತಂ=ಸ್ವಾದುವಾದ ಹವಿರಾದಿಗಳುಳ್ಳ ಯಜ್ಞಂ=ಯಜ್ಞವನ್ನು, ಅದ್ಯ=ಈಗಲೇ ದೇವೇಷು=ದೇವತೆಗಳಲ್ಲಿ ಕೃಣುಹಿ (ಕೃವಿ ಹಿಂ ಸಾಯಾಂ ಕರಣೇಚ) ಮಾಡು (ದೇವತೆಗಳನ್ನು ಹೊಂದಿಸಿ ಕೊಡು.) || ೨ ||

ಭಾ || ತನೂಭ್ಯೋ ವಾಕ್ತತೋ ದೇವೋ ವ್ಯಕ್ತ (ಜ್ಞೇಯ) ಸ್ತೇನ ತನೂನಪಾತ್ || ೨ ||

ಅ || (ಅಗ್ನಿಗೆ ಸಮಿತ್ ತನೂನಪಾತ್ ಇಳೋ ಬರ್ಹಿಃ ಸ್ವಾಹಾಕಾರಃ ಇತ್ಯಾದಿ ಬಹುವಿಧ ನಾಮಗಳಿ ದ್ದುದರಿಂದ) ತನೂನಪಾತ್ ಎನ್ನುವುದು ಅಗ್ನಿ ವಿಶೇಷಕ್ಕೆ ಪ್ರಸಿದ್ಧನಾಮವು. (ಶ್ರೀ ವಿಷ್ಣುವಿಗಾದರೂ ಶರೀರ ಗಳ ದೆಸೆಯಿಂದ ವಾಕ್ ಹುಟ್ಟಿತು. ಶರೀರಾಶ್ರಯತ್ವವಿದ್ದ ಪ್ರಯುಕ್ತ ವಾಗಿಂದ್ರಿಯದಿಂದ ಪರಮೇಶ್ವರನು

ವ್ಯಕ್ತನು. (ಅಂದರೆ ಜ್ಞೇಯನು) ಆದಕಾರಣ ಶ್ರೀ ಹರಿಯು ವಾಕ್ಕಿನ ಪುತ್ರನೆನಿಸುತ್ತಾನೆ. ಅಂದರೆ ತನ್ನ ಉತ್ಪತ್ತಿಯಿಂದ ಪಿತೃಕುಲವನ್ನು ನ ಪಾತಯತಿ ಕೆಡಿಸುವುದಿಲ್ಲ ಎಂಬ ವ್ಯುತ್ಪತ್ತಿಯಿಂದ ನಪಾತ್ ಅಂದರೆ ಪೌತ್ರನು. ತನು=ಶರೀರಗಳಿಂದ ಹುಟ್ಟಿದ ವಾಗಿಂದ್ರಿಯದಿಂದ ಶ್ರೀ ಹರಿಯು ವ್ಯಕ್ತನಾಗುವ ಪ್ರಯುಕ್ತ ಶರೀರ ಗಳ ಪೌತ್ರನೆನಿಸುತ್ತಾನೆ. ಏವಂಚ ದೇಹದಿಂದ ಹುಟ್ಟಿದ ವಾಗಿಂದ್ರಿಯದಿಂದ ಜ್ಞೇಯನಾದುದರಿಂದ ತನೂನ ಪಾತ್ ಎನ್ನುವುದು ಶ್ರೀ ಹರಿಯನಾಮವು ॥ ೨ ॥

ಋ ॥ (೧೨೫) ನರಾಶಂಸಮಿಹ ಪ್ರಿಯಮಸ್ಮಿನ್ ಯಜ್ಞ ಉಪಹ್ವಯೇ ।
ಮಧುಜಿಹ್ವಂ ಹವಿಷ್ಕೃತಂ ॥ ೩ ॥

ಅ ॥ (ಈ ಋಕ್ಕಿಗೆ ನರಾಶಂಸನು ದೇವತೆಯು.) ಇಹ=ಸಮಸ್ತ ಪ್ರಾಣಿಗಳಿಗೆ, ಪ್ರಿಯಂ=ಪ್ರಿಯನಾದ ಮಧುಜಿಹ್ವಂ=ಸ್ವಾದುವಾದ ನಾಲಿಗೆವುಳ್ಳ, ಹವಿಷ್ಕೃತಂ=ಹವಿಸ್ಸನ್ನು ಮಾಡುವ, ನರಾಶಂಸಂ=(ಶಂಸಸ್ತುತೌ, ಆಶಂಸ್ಯತೇ ಇತಿ ಆಶಂಸಃ । ನರಾಣಾಮಾಶಂಸಃ ಎಂಬ ವ್ಯುತ್ಪತ್ತಿಯಿಂದ ಮನುಷ್ಯಾದಿಗಳಿಂದ ಚೆನ್ನಾಗಿ ಸ್ತುತಿಸ ಲ್ಪಡುವುದರಿಂದ ನರಾಶಂಸನಾಮಕ ಅಗ್ನಿ ವಿಶೇಷವನ್ನೂ ಶ್ರೀ ಹರಿಯನ್ನೂ ಕೂಡ, ಅಸ್ಮಿನ್ ಯಜ್ಞೇ=ಈ ಯಜ್ಞದಲ್ಲಿ, ಉಪಹ್ವಯೇ= (ನಾನು) ಕರೆಯುತ್ತೇನೆ. (ಪ್ರಾರ್ಥಿಸುತ್ತೇನೆ) ॥ ೩ ॥

ಭಾ ॥ ನರೈಃ ಸ್ತುತ್ಯೋ ನರಾಶಂಸೋ ವಹ್ನೇರನ್ಯಾs ಥವಾ ತನೂಃ ॥ ೩ ॥

ಅ ॥ ಮನುಷ್ಯಾದಿಗಳಿಂದ ಚೆನ್ನಾಗಿ ಸ್ತುತಿಸಲ್ಪಡುವವನು ನರಾಶಂಸನು ಶ್ರೀಹರಿಯು. ಅಥವಾ ಅಗ್ನಿಗಿಂತ ಇತರವಾದ ಶರೀರವು. (ವಹ್ನಿಃ ಎಂದು ಹೇಳದೆ ವಹ್ನೇರನ್ಯಾತನೂಃ ಎಂದು ಹೇಳಿದುದರಿಂದ ಈ ಸೂಕ್ತದಲ್ಲಿ ಸುಸಮಿದ್ಧ ಮೊದಲಾದವರು ಪ್ರತ್ಯೇಕ ಅಗ್ನಿ ವಿಶೇಷಗಳಿವೆ ಎಂದು ಸೂಚಿತವಾಯ್ತು. ॥ ೩ ॥

ಋ ॥ (೧೨೬)ಅಗ್ನೇ ಸುಖತಮೇ ರಥೇ ದೇವಾঁ ಈಳಿತ ಆ ವಹ ।
ಅಸಿ ಹೋತಾ ಮನುರ್ಹಿತಃ ॥ ೪ ॥

ಅ ॥ (ಈ ಋಕ್ಕಿಗೆ ಇಳೋ ದೇವತೆಯು.) ಅಗ್ನೇ=ಶ್ರೀಹರಿಯೇ, ಈಳಿತಃ (ಈಡ ಸ್ತುತೌ. ಸ್ತುತಿಸಲ್ಪಟ್ಟ) ನೀನು, ಸುಖತಮೇರಥೇ=ಅತಿಶಯವಾಗಿ ಸುಖವನ್ನು ಮಾಡತಕ್ಕ ರಥದಿಂದ, ದೇವಾನ್=ದೇವತೆಗಳನ್ನು ಆವಹ= ಕರೆ. (ಯಾವ ಕಾರಣದಿಂದನೀನು) ಹೋತಾ ಅಸಿ=ಹೋತೃ ಆಗಿರುತ್ತಿಯೋ, ಮನುರ್ಹಿತಃ=ದೇವತೆಗಳಿಗೆ ಹಿತನೂ, ಅಸಿ=ಆಗಿರುತ್ತಿಯೋ. (ಅಧ್ಯಾತ್ಮದಲ್ಲಿ) ಇಂದ್ರಿಯಾಭಿಮಾನಿ ದೇವತೆಗಳನ್ನು ಅತಿಶಯ ಸುಖಕಾರಿ ಯಾದ ದೇಹದಲ್ಲಿ ಬರುವಂತೆ ಕರೆ (ಬಾಹ್ಯಾಗ್ನಿಪಕ್ಷದಲ್ಲಿಯೂ ವಿಷ್ಣುಪಕ್ಷದಲ್ಲಿಯೂ ಯಜ್ಞಕ್ಕಾಗಿ ದೇವತೆ ಗಳನ್ನು ಕರೆದುಕೊಂಡು ಬರಲಿಕ್ಕೆ ರಥವು ಕರಣವಾಗಿರುವುದರಿಂದ ಸಪ್ತಮೀ ವಿಭಕ್ತಿಯನ್ನು ರಥದಿಂದ ಎಂದು ತೃತೀಯಾಂತವಾಗಿ ವಿಪರಿಣಾಮಮಾಡಿರುತ್ತಾರೆ. ಅಧ್ಯಾತ್ಮಾರ್ಥದಲ್ಲಿ ಆದರೂ ದೇಹದಲ್ಲಿಯೇ ಸಮಸ್ತ ದೇವತೆ ಗಳ ಸಾನ್ನಿಧ್ಯವು ಅಪೇಕ್ಷಿತವಾದ ಪ್ರಯುಕ್ತ ವ್ಯತ್ಯಾಸಮಾಡಲಿಲ್ಲ) ॥ ೪ ॥

ಭಾ ॥ ಮನೂನಾಂ ಚ ಹಿತತ್ವೇನ ಮನುರ್ಹಿತ ಇತೀರಿತಃ ॥ ೪ ॥

ಅ ॥ ಜ್ಞಾನಿಗಳಾದ ದೇವತೆಗಳಿಗೆ ಹಿತಕರನಾಗಿರುವುದರಿಂದ ಶ್ರೀ ಹರಿಯು ಮನುರ್ಹಿತನೆನಿಸುತ್ತಾನೆ. ॥೪॥

ಋ ॥ (೧೨೭) ಸ್ತೃಣೀತ ಬರ್ಹಿರಾನುಷಗ್ಘೃತಪೃಷ್ಠಂ ಮನೀಷಿಣಃ ।
ಯತ್ರಾಮೃತಸ್ಯ ಚಕ್ಷಣಂ ॥ ೫ ॥

ಅ ॥ (ಈ ಋಕ್ಕಿಗೆ ಬರ್ಹಿರ್ದೇವತೆಯು) ಮನೀಷಿಣಃ=ಬುದ್ಧಿಯುಳ್ಳ ಋತ್ವಿಜರೇ, ಯತ್ರ=ಯಾವ ಸ್ಥಾನದಲ್ಲಿ, ಅಮೃತಸ್ಯ=ದೇವತಾ ಸಮುದಾಯದ, ಚಕ್ಷಣಂ=ದರ್ಶನವು(ಆಗುತ್ತದೋ)(ಅಂತಹ) ಘೃತಪೃಷ್ಠಂ= (ಆಹವನೀಯಾಗ್ನಿಯ ಪಶ್ಚಿಮ ಭಾಗದಲ್ಲಿ ಘೃತಸ್ಥಾನವು. ಅದಕ್ಕಿಂತ ಪಶ್ಚಿಮ ಭಾಗದಲ್ಲಿ ದೇವತೆಗಳು ಇರುತ್ತಾರೆ.) ಘೃತಸ್ಥಾನ ದೆಶೆಯಿಂದ ಪಶ್ಚಿಮ ಭಾಗದಲ್ಲಿರುವ ದೇವಸ್ಥಾನದಲ್ಲಿ ಆನುಷಕ್= (ಆಜ್ ಅನುಪೂರ್ವಾತ್ ಷಂಜಸಂಗೇ) (ಆ ಸಮಂತಾತ್ ಅನುಸಂಜನಂ ಸಂಬಂಧಃ) ಸರ್ವ ಪ್ರದೇಶದಲ್ಲಿಯೂ ಸುತ್ತಲೂ, ಬರ್ಹಿಃ=ಬರ್ಹಿಸ್ಸನ್ನು, ಸ್ತೃಣೀತ=ವಿಸ್ತರಿಸಿರಿ. (ಅಧ್ಯಾತ್ಮದಲ್ಲಿ) ದೇವತೆಗಳಿರಾ, ಯತ್ರ=ಯಾವ ಮನಸ್ಸಿನಲ್ಲಿ, ಅಮೃತಸ್ಯ=ಮರಣವಿಲ್ಲದಿರುವ, ಶ್ರೀ ವಿಷ್ಣುವಿನ, ಚಕ್ಷಣಂ=(ಚಕ್ಷದರ್ಶನೇ) ದರ್ಶನವಾಗುತ್ತದೋ, ಅಂತಹ, ಘೃತಪೃಷ್ಠಂ=(ಘೃಕ್ಷರಣದೀಪ್ತ್ಯೋಃ) ಘೃತ= ಶುದ್ಧನಾದ ಶ್ರೀ ವಿಷ್ಣುವು, ಪೃಷ್ಠೇ ಯಸ್ಯ=ಯಾವ ಮನಸ್ಸಿನ ಮೇಲು ಭಾಗದಲ್ಲಿ ಇದ್ದಾನೋ ಎಂಬ ವ್ಯುತ್ಪತ್ತಿಯಿಂದ) ಮನಸ್ಸಿನಲ್ಲಿ, ಆನುಷಕ್=ಸರ್ವಪ್ರದೇಶದಲ್ಲಿಯೂ, ಬರ್ಹಿಃ=(ಬೃಹ ಬೃಹಿ ವೃದ್ಧೌ) ಶ್ರೇಷ್ಠವಾಗಿರುವುದರಿಂದ ಬರ್ಹಿಃ ಎನಿಸಿಕೊಂಡ ವೇದವಾಕ್ಯವನ್ನು, ಸ್ತೃಣೀತ= (ಸ್ತೃಞ ಆಚ್ಛಾದನೇ) ವೇದಿಕೆಯಲ್ಲಿ ವಿಸ್ತರಿಸಿರಿ. (ಅಂದರೆ ವೇದವಾಕ್ಯದಿಂದ ಮನಸ್ಸನ್ನು ಕೂಡಿಸಿರಿ. (ಈ ಋಕ್ಕಿನಲ್ಲಿ ಮನೀಷಿಣಃ ಎನ್ನುವುದಕ್ಕೆ ದೇವತಾತ್ವವು ಸಂದಿಗ್ಧವಾದ ಪ್ರಯುಕ್ತ ಈ ಋಕ್ಕಿನಲ್ಲಿ ಬರ್ಹಿಃ=ಬರ್ಹಿರ್ನಾಮಕ ಅಗ್ನಿಯು ದೇವತೆಯು ಎಂದದ್ದು. ॥ ೫ ॥

ಭಾ ॥ (೧) ಆನುಷಕ್ ಸರ್ವಶೋ ದೇವಸ್ಥಾನಂ ಬರ್ಹಿಃ ಸ್ತೃಣೀತ ಚ ॥ (೨) ಶುದ್ಧಸ್ಯ ವಿಷ್ಣೋರ್ಯತ್ಸ್ಥಾನಂ ಘೃತಪೃಷ್ಠಂ ಹಿ ತನ್ಮನಃ । ಯತ್ರ ಸ್ಯಾದ್ದರ್ಶನಂ ವಿಷ್ಣೋರ್ನಿತ್ಯಾಮರಣಧರ್ಮಿಣಃ ॥ ೫ ॥

ಅ ॥ (೧) ಘೃತಸ್ಥಾನ ದೆಶೆಯಿಂದ ಪಶ್ಚಿಮ ದಿಕ್ಕಿನಲ್ಲಿರತಕ್ಕ ದೇವತೆಗಳಿರುವ ಸ್ಥಾನದಲ್ಲಿ ಆನುಷಕ್= ಸುತ್ತಮುತ್ತಲೂ ಬರ್ಹಿಸ್ಸನ್ನು ವಿಸ್ತರಿಸಿ. (೨) (ಅಧ್ಯಾತ್ಮದಲ್ಲಿ) ನಿರ್ದುಷ್ಟನಾದ ಶ್ರೀ ವಿಷ್ಣುವಿಗೆ ಯಾವ ಮನಸ್ಸು ಸ್ಥಾನವಾಗಿದೆಯೋ, ಅಂತಹ ಮನಸ್ಸು ಘೃತಪೃಷ್ಠವೆನಿಸುತ್ತದೆ. ಸರ್ವದಾ ಮರಣವಿಲ್ಲದಿರುವ ಶ್ರೀ ವಿಷ್ಣುವಿಗೆ ಯಾವ ಮನಸ್ಸಿನಲ್ಲಿ ದರ್ಶನವಾಗುತ್ತದೋ, ಅಂತಹ ಮನಸ್ಸು ಘೃತಪೃಷ್ಠವೆನಿಸುತ್ತದೆ. ॥ ೫ ॥

ಋ ॥ (೧೨೮) ವಿ ಶ್ರಯಂತಾಮೃತಾವೃಧೋ ದ್ವಾರೋ ದೇವೀರಸಶ್ಚತಃ ।
ಅದ್ಯಾ ನೂನಂ ಚ ಯಷ್ಟವೇ । ॥ ೬ ॥ ೨೪ ॥

ಅ ॥ (ಈ ಋಕ್ಕಿಗೆ ದ್ವಾರೋ ದೇವಿಯರು ದೇವತೆಯರು) ಋತವೃಧಃ=ಯಥಾರ್ಥ ಜ್ಞಾನರೂಪಿಯಾದ ಶ್ರೀಹರಿಯಿಂದ ಸಮೃದ್ಧರಾದ, ಅಸಶ್ಚತಃ=(ಸಶ್ಚಗತೌ) ವಿಷಯಗಳ ಕಡೆಗೆ ಹೋಗುವಿಕೆ (ಅಂದರೆ ವಿಷಯಗಳ

ಸಂಗ)ವಿಲ್ಲದಿರುವ, ದ್ವಾರಃ ದೇವೀಃ=ಲಕ್ಷ್ಮೀದೇವಿಯ ದ್ವಾರಭೂತರಾದ(ಉಪಸರ್ಜನ ಭೂತರಾದ) ದೇವಿಯರು, ಅದ್ಯ=ಈ ದಿವಸದಲ್ಲಿ, ನೂನಂ=ನಿಶ್ಚಿತವಾಗಿ (ಈ ದಿವಸದಲ್ಲಿಯೇ) ಯಷ್ಟವೇಚ= ಯಾಗ ಮಾಡುವುದಕ್ಕಾಗಿ, ಯಜನರೂಪ ಪ್ರಯೋಜನಕ್ಕಾಗಿಯೂ ವಿಶ್ರಯಂತಾಂ=ನಮ್ಮ ಮಾನಸ ಯಜ್ಞದಲ್ಲಿಯೂ ಬಾಹ್ಯಯಜ್ಞ ದಲ್ಲಿಯೂ, ಇರಲಿ. (ಭಗವದ್ವಿಷಯದಲ್ಲಿ ಆದರೂ) ಋತವೃಧಃ=(ಋತಂ=ಅನಾಗತಂ ಸರ್ವಕಾಲೇ) ನಿತ್ಯದ ಲ್ಲಿಯೂ ವೃದ್ಧಗಳು (ಪೂರ್ಣಗಳು) ಅಥವಾ ಜ್ಞಾನರೂಪಗಳೂ ಸರ್ವಗುಣ ಸಮೃದ್ಧಗಳೂ, ದ್ವಾರಃ=ಮುಮು ಕ್ಷುಗಳಿಗೆ ಮುಖ್ಯವಾಗಿ ದ್ವಾರ ಭೂತಗಳೂ (ಮುಕ್ತಿಗೆ ಮುಖ್ಯ ಸಾಧನಗಳೂ) ಅಸಶ್ಚತಃ= ಯಾವುದೊಂದು ವಸ್ತುವಿನ ಸಂಗವೂ ಇಲ್ಲದಿರುವ, ಇಂತಹ ದೇವೀಃ=ಕ್ರೀಡಾದಿ ಗುಣಗಳುಳ್ಳ ಶ್ರೀಹರಿಯ ಸ್ತ್ರೀರೂಪ ವಿಶೇಷಗಳು, ಅದ್ಯ=ಈಗಲೇ, ಯಷ್ಟವೇಚ=ಯಾಗ ಮಾಡಲಿಕ್ಕೂ ಯಜನ ರೂಪ ಪ್ರಯೋಜನಕ್ಕಾಗಿಯೂ, ವಿಶ್ರಯಂತಾಂ= ನಮ್ಮ ಬಾಹ್ಯಾಭ್ಯಂತರಯಜ್ಞದಲ್ಲಿ ಸನ್ನಿಹಿತರಾಗಿರಲಿ ||

ವಿ || (1) **ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್** ಎಂಬಲ್ಲಿ ಹೇಳಿದ ಪ್ರಕಾರ 'ವ್ಯವಧಾನವಿಲ್ಲದೆ ಪ್ರಸೂತಿಗೆ ಕಾರಣತ್ವ ರೂಪವಾದ ಸ್ತ್ರೀತ್ವವು ಇದ್ದ ಪ್ರಯುಕ್ತ **ದ್ವಾರಃ ದೇವೀಃ** ಎಂದು ಸ್ತ್ರೀಲಿಂಗ ಪ್ರಯೋಗವೂ. (2) **ಗುಹಾಂ ಪ್ರವಿಷ್ಟೌ** ಇತ್ಯಾದಿಗಳಲ್ಲಿ ಹೇಳಿದ ಪ್ರಕಾರ ಶ್ರೀಹರಿಗೆ ಬಹುರೂಪ ಗಳಿದ್ದುದರಿಂದ ಬಹು ವಚನವೂ, (3) **ಫಲಮತ ಉಪಪತ್ತೇಃ** ಎಂಬಲ್ಲಿ ಹೇಳಿದ ನ್ಯಾಯದಿಂದ ಶ್ರೀಹರಿಯೇ ಮೋಕ್ಷವನ್ನು ಕೊಡುವವನೆಂಬುವುದೂ ಉಪಪನ್ನವಾಗುತ್ತದೆ. ಮತ್ತು (1) **ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ** (2) **ಏಷ ಏವ ಸದಾಪಂಥಾಃ ಭಗವಾನ್ ಪುರುಷೋತ್ತಮಃ । ನಿತ್ಯಂ ಸ್ವಪ್ರಾಪ್ತಿ ಹೇತುತ್ವಾತ್** ಇತ್ಯಾದಿ ಪ್ರಮಾಣಗಳಿಂದ ಭಗವತ್ಪ್ರಾಪ್ತಿರೂಪ ಮೋಕ್ಷಕ್ಕೆ ಭಗವಂತನೇ ಮುಖ್ಯೋಪಾಯನು. ಮುಖ್ಯ ಸಾಧನನು. ಎಂದು ಸಿದ್ಧವಾಗುತ್ತದೆ. || ೬ ||

ಭಾ || ಋತರೂಪೇಣ ಹರಿಣಾ ಸಮೃದ್ಧಾಃ ಯಾ ಋತಾವೃಧಃ। ದ್ವಾರೋ ದೇವ್ಯಃಶ್ರಿಯೋ ದಾಸ್ಯಃ ಶ್ರಯಂತಾಮಿಹ ನೋ ಮಖೇ। ಮಾನಸೇ ಬಾಹ್ಯಯಜ್ಞೇ ವಾ ಹ್ಯಸಂಗ ತ್ವಾದಸಶ್ಚತಃ । ಅದ್ಯಾಹನಿ ತಥಾ ನೂನಮದ್ಯೈವ ಯಜನಾರ್ಥತಃ || (೨) ದ್ವಾರಭೂತಃ ಸ ಭಗವಾನಪಿ ಸಾಕ್ಷಾನ್ಮುಮುಕ್ಷತಃ । ಸ್ತ್ರೀರೂಪಶ್ಚ ಸಃ || ೬ || ೨೪ ||

ಅ || (೧) ಯಥಾರ್ಥ ಜ್ಞಾನರೂಪನಾದ ಶ್ರೀಹರಿಯಿಂದ ಸಮೃದ್ಧಗಳಾದವರು ಯಾವ ದೇವಿಯರೋ ಅವರು ಋತಾವೃಧಃ ಎನಿಸುತ್ತಾರೆ. ವಿಷಯಗಳ ಸಂಬಂಧವಿಲ್ಲದಿರುವುದರಿಂದ ಅಸಶ್ಚತಃ ಎನಿಸುತ್ತಾರೆ. ದ್ವಾರೋ ದೇವೀಃ= ಧ್ವಾರಃ=ದ್ವಾರ ಭೂತರಾದ (ಉಪಸರ್ಜನ ಭೂತರಾದ ಅಂದರೆ ಅಮುಖ್ಯರಾದ) ದೇವಿಯರು (ದಾಸಿಯರು) ಏವಂಚ ಲಕ್ಷ್ಮೀ ದೇವಿಯ ದಾಸಿಯರು, ಅದ್ಯ=ಈ ದಿವಸದಲ್ಲಿ ಹಾಗೆಯೇ, ನಿಶ್ಚಯವಾಗಿ. ಅಂದರೆ ಈಗಲೇ, ಯಜನ ರೂಪ ಪ್ರಯೋಜನಕ್ಕಾಗಿ ನಮ್ಮ ಮಾನಸ ಯಜ್ಞದಲ್ಲಿಯೂ, ನಮ್ಮ ಬಾಹ್ಯ ಯಜ್ಞದಲ್ಲಿಯೂ, ಸನ್ನಿಹಿತರಾಗಿರಲಿ. (೨) (ಭಗವದ್ವಿಷಯದಲ್ಲಿ ಆದರೂ ಶ್ರೀಭಗವಂತನು ಮುಮುಕ್ಷುಗಳಿಗೆ ಮುಖ್ಯವಾಗಿ ದ್ವಾರ ಭೂತನು. ಅಂದರೆ ಮೋಕ್ಷಕ್ಕೆ ಮುಖ್ಯ ಸಾಧನನು. ಆ ಶ್ರೀಹರಿಯು ಸ್ತ್ರೀರೂಪನೂ ಬಹು ರೂಪಗಳುಳ್ಳವನೂ ಆಗಿರುತ್ತಾನೆ. (ಆದ ಕಾರಣ ಬಹು ವಚನವೂ ಕೂಡುತ್ತದೆ.) || ೬ || ೨೪ ||

ಋ || (೧೭) ನಕ್ತೋಷಾಸಾ ಸುಪೇಶಸಾಽಸ್ಮಿನ್ಯಜ್ಞ ಉಪಹ್ವಯೇ ।

ಇದಂ ನೋ ಬರ್ಹಿರಾಸದೇ || ೭ ||

ಅ || (ನಕ್ತಾ ಉಷಾಸಾ ಎಂಬುವರು ದೇವತೆಯರು) ಸುಪೇಶಸಾ=ಶೋಭನ ರೂಪಗಳಿಂದ ಕೂಡಿರುವ, ನಕ್ತೋಷಸಾ=ರಾತ್ರಿಗೆ ಅಭಿಮಾನಿನಿಯಾದ ದುರ್ಗಾದೇವಿಯೂ. ಅಪರ ರಾತ್ರಿಯನ್ನು ಮಾಡುವ ಜ್ಯೋತಿಸ್ಸಿಗೆ ದೇವತೆಯಾದ ಅಂದರೆ ಉಷಃಕಾಲಕ್ಕೆ ಅಭಿಮಾನಿನಿಯಾದ ಅಶ್ವಿನೀ ದೇವತೆಗಳ ಹೆಂಡತಿಯಾದ ಉಷಾದೇವಿಯೂ, ಅಥವಾ ಪಾಪ ಭಯ ದುಃಖಾದಿಗಳ ಸಂಬಂಧವಿಲ್ಲದಿರುವಿಕೆ, ಪ್ರಕಾಶ ಸ್ವರೂಪತ್ವ ನಿಮಿತ್ತಗಳಿಂದ ಭಗವತ್ಸಂಬಂಧಿಗಳಾದ ಸ್ತ್ರೀರೂಪ ವಿಶೇಷಗಳು, ನಃ=ನಮ್ಮ, ಅಸ್ಮಿನ್ಯಜ್ಞೇ=ಈ ಯಜ್ಞದಲ್ಲಿ, ಇದಂ ಬರ್ಹಿಃ=ಈ ಬರ್ಹಿಸ್ಸಿನಲ್ಲಿ, ಆಸದೇ=ನಿಲ್ಲುವುದಕ್ಕಾಗಿ, ಉಪಹ್ವಯೇ=ಕರೆಯುತ್ತೇನೆ. || ೭ ||

ಭಾ || (೧) ನಕ್ತಾ ಸ್ಯಾನ್ನಾಕ್ತೋ ಯಸ್ಮಾತ್ಸ ಸರ್ವತಃ| (೨) ಉಷಾಃ ಪ್ರಕಾಶರೂಪತ್ವಾತ್ಸ ಭದ್ರೇ ತೇ ಉಪಹ್ವಯೇ || ಅಸ್ಮಿನ್ ಬರ್ಹಿಷಿ ಸಂಸ್ಥಿತ್ಯೈ || ೭ ||

ಅ || (೧) (ಈ ಮಂತ್ರಕ್ಕೆ ನಕ್ತಾ, ಉಷಾಸಾ ಎಂಬುವರು ದೇವತೆಯರು) (ನಕ್ತಾ=ರಾತ್ರಿಗೆ ಅಭಿಮಾನಿನಿಯಾದ ದುರ್ಗಾದೇವಿಯು. ಉಷಾಸಾ=ಅಪರ ರಾತ್ರಿಯನ್ನು ಮಾಡುವ ಜ್ಯೋತಿಸ್ಸಿಗೆ ದೇವತೆಯಾದ ಉಷಃಕಾಲಕ್ಕೆ ಅಭಿಮಾನಿನಿಯಾದ ಅಶ್ವಿನೀ ದೇವತೆಗಳ ಹೆಂಡತಿಯಾದ ಉಷಾದೇವಿಯು.) (ಈ ಶಬ್ದಗಳನ್ನು ಶ್ರೀ ವಿಷ್ಣುವಿನಲ್ಲಿ ಯೋಜನಾ ಮಾಡುತ್ತಾರೆ.) ಯಾವ ಕಾರಣದಿಂದ ಆ ಶ್ರೀ ವಿಷ್ಣುವು (ಶ್ರೀ ವಿಷ್ಣುವಿನ ಸ್ತ್ರೀರೂಪವು) ಪಾಪ ಭಯ ದುಃಖಾದಿಗಳಿಂದ ಸಂಬದ್ಧವಲ್ಲವೋ, (ಪಾಪಾದಿಗಳಿಂದ ರಹಿತವಾದುದೋ) ಆದ ಕಾರಣ (ಅಂಜೂ ವ್ಯಕ್ತಿ ಮ್ಲಕ್ಷಣಕಾಂತಿ ಗತಿಷು ಎಂಬುವಲ್ಲಿ ಮ್ಲಕ್ಷಣ ಶಬ್ದದಿಂದ ಸಂಬಂಧವನ್ನು ಹೇಳಿ) ನ ಅಕ್ತಃ=ಪಾಪಾದಿಗಳಿಂದ ಸಂಬದ್ಧನಾಗುವುದಿಲ್ಲ. ಆದ ಪ್ರಯುಕ್ತ ಪರರೂಪವಾಗಿ ನಕ್ತಾ ಎನಿಸುತ್ತಾನೆ. ಎನಿಸುತ್ತದೆ. (೨) (ವಶ ಕಾಂತೌ ಕಾಂತಿಃ=ಪ್ರಕಾಶವು. ವಾ. ಕಾಂತಿಃ=ಇಚ್ಛೆಯು ಎಂಬ ವ್ಯುತ್ಪತ್ತಿಯಿಂದ) ಪ್ರಕಾಶ ಸ್ವರೂಪವಾಗಿರುವುದರಿಂದ ಉಷಾಃ ಎನಿಸುತ್ತದೆ. ಈ ಯಜ್ಞದಲ್ಲಿ ಈ ಬರ್ಹಿಸ್ಸಿನಲ್ಲಿ ಚೆನ್ನಾಗಿ ಸ್ಥಿತಿಗಾಗಿ ಅತಿ ಮಂಗಲ ಸ್ವರೂಪರಾದ ಭಗವಂತನ ಸ್ತ್ರೀರೂಪ ವಿಶೇಷಗಳನ್ನು ಕರೆಯುತ್ತೇನೆ. ಪ್ರಾರ್ಥಿಸುತ್ತೇನೆ. || ೭ ||

ಅವ || ಈ ಋಕ್ಕಿಗೆ ಪ್ರಚೇತಸರೆಂದು ಹೆಸರುಳ್ಳ ದೇವತೆಗಳ ದೂತರಾದ ಹೋತೃಗಳು ದೇವತೆಗಳು. ಪೂರ್ವಮಂತ್ರದಲ್ಲಿ ಹೇಳಲ್ಪಟ್ಟ ನಕ್ತೋಷಸರು ಮಾತ್ರವಲ್ಲ.

ಋ || (೧೩೦) ತಾ ಸುಜಿಹ್ವಾ ಉಪಹ್ವಯೇ ಹೋತಾರಾ ದೈವ್ಯಾ ಕವೀ |
ಯಜ್ಞಂ ನೋ ಯಕ್ಷತಾಮಿಮಂ || ೮ ||

ಅ || ಸುಜಿಹ್ವೌ=ಶೋಭನವಾದ ನಾಲಿಗೆಯುಳ್ಳ, ಕವೀ=ಸರ್ವಜ್ಞಗಳಾದ, ದೈವ್ಯಾ=ದೂತರಾಗಿ ದೇವತೆಗಳಿಗೆ ಸಂಬಂಧಿಗಳಾದ, (ದೇವತೆಗಳಿಗೆ ಆಹುತಿಗಳನ್ನು ತಂದುಕೊಡುವ) (ಮತ್ತು ದೇವತೆಗಳ ಪ್ರಾರ್ಥನೆಯನ್ನು ಮಾಡುವುದರಿಂದ ದೂತರೆನಿಸಿಕೊಂಡ) ಹೋತಾರೌ ಗಾರ್ಹಪತ್ಯ ಆಹವನೀಯಾಗ್ನಿಗಳನ್ನು, ಅಥವಾ ಆ ಹೋತೃಗಳಾದ ಗಾರ್ಹಪತ್ಯ ಆಹವನೀಯಾಗ್ನಿಗಳಲ್ಲಿರತಕ್ಕ ಭಗವದ್ರೂಪವಿಶೇಷಗಳನ್ನು ಉಪಹ್ವಯೇ=ಕರೆಯುತ್ತೇನೆ. (ಬರುವಂತೆ ಮಾಡುತ್ತೇನೆ) (ಬಂದು) ತಾ=ಅವರು, ನಃ=ನಮ್ಮದಾದ, ಇಮಂ ಯಜ್ಞಂ=ಈ ಯಜ್ಞವನ್ನು ಯಕ್ಷತಾಂ=ದೇವತೆಗಳಲ್ಲಿ ಸದಾ ಯಜ್ಞ ಮಾಡಲಿ. (ದೇವತೆಗಳಿಗೆ ತಂದು ಕೊಡಲಿ, || ೮ ||

ಭಾ || ಹೋತಾರೌ ದೇವಗಾವಪಿ | ಮಥ್ಯಮಾನೋಽಪರಶ್ಚೈವ ವಹ್ನೀ ತದ್ಗೋಽಥವಾ ಹರಿಃ| ಆತ್ಮಾಂತರಾತ್ಮರೂಪೇಣ ದ್ವಿರೂಪೋ ವಾ ವ್ಯವಸ್ಥಿತಃ| ದೇವೇಷು ಯಜತಾಂ ಯಜ್ಞಮಸ್ಮದೀಯಮಿಮಂ ಸದಾ || ೮ ||

ಅ ॥ (ಪೂರ್ವಮಂತ್ರದಲ್ಲಿ ಹೇಳಿದ ನಕ್ತೋಷಸರನ್ನು ಮಾತ್ರ ದೇವತ್ವೇನ ಕರೆದದ್ದಲ್ಲ ಮತ್ತೆ) ದೂತರಾಗಿ ದೇವತೆಗಳ ಸಂಬಂಧಿಗಳಾದ, ಗಾರ್ಹಪತ್ಯ ಆಹವನೀಯಗಳೆಂದು ಹೋತೃಗಳೆನಿಸಿಕೊಂಡ ವಹ್ನಿಗಳನ್ನು ಕರೆಯುತ್ತೇನೆ.ಆ ೨ ವಹ್ನಿಗಳಲ್ಲಿರತಕ್ಕ ಶ್ರೀಹರಿಯು ಆತ್ಮಾ ಅಂತರಾತ್ಮ ಎಂಬ ೨ ರೂಪಗಳುಳ್ಳವನಾಗಿ ಇರುತ್ತಾನೆ. ಅವನು ಬಂದು ನಮ್ಮ ಯಜ್ಞವನ್ನು ದೇವತೆಗಳಲ್ಲಿ ಸದಾ ಕೊಡಲಿ. ॥ ೮ ॥

ಋ ॥ (೧೩೧) ಇಳಾ ಸರಸ್ವತೀ ಮಹೀ ತಿಸ್ರೋ ದೇವೀರ್ಮಯೋಭುವಃ ।
ಬರ್ಹಿಃ ಸೀದಂತ್ವಸ್ರಿಧಃ ॥ ೯ ॥

ಅ ॥ (ಈ ಋಕ್ಕಿಗೆ ಸರಸ್ವತೀ, ಇಳಾ ಭಾರತಿಯರು ೩ದೇವಿಯರು ದೇವತೆಗಳು) ಇಳಾ=ಬ್ರಹ್ಮಾದಿಗಳಿಂದ ಸ್ತುತ್ಯಳಾದುದರಿಂದ ಇಳಾ ಎನಿಸಿಕೊಂಡ ಶ್ರೀದೇವಿಯು, ಸರಸ್ವತೀ=ಸರಸ್ವತೀದೇವಿಯು, ಮಹೀ=ಶ್ರೈಷ್ಠ್ಯನಿಮಿತ್ತದಿಂದ ಮಹೀ ಎನಿಸಿಕೊಂಡ ಶ್ರೀದೇವಿಯ ಸ್ವರೂಪಭೂತಗಳಾದ ಭೂದೇವಿಯು, ಅಥವಾ ವಾಯುಪತ್ನಿಯಾದ ಭಾರತೀದೇವಿಯು, ಮತ್ತು ಈ ಮೂವರಲ್ಲಿ ನಿಯಾಮಕರಾಗಿರುವ ಈಡಸ್ತುತೌ ಎಂಬ ಧಾತುವ್ಯಾಖ್ಯಾನದಿಂದ ಸ್ತುತ್ಯಳಾದುದರಿಂದ ಇಳಾ ಮೊದಲಾದ ನಾಮಗಳುಳ್ಳ ಭಗವಂತನ ಸ್ತ್ರೀರೂಪ ವಿಶೇಷಗಳೂ, ಮಯೋಭುವಃ=ಸುಖಾಶ್ರಯ ಭೂತಗಳು, ಅಸ್ರಿಧಃ ವಿನಾಶವಿಲ್ಲದಿರುವವುಗಳು. ತಿಸ್ರಃ ದೇವೀಃ= ಹಿಂದೆ ಹೇಳಿದ ಈ ಲಕ್ಷ್ಮೀ ಸರಸ್ವತೀ ಭಾರತೀ ಮೂರು ದೇವಿಯರು ಬರ್ಹಿಃ=ಬರ್ಹಿಸ್ಸಿನಲ್ಲಿ, ಸೀದಂತು= ಕೂತು ಕೊಳ್ಳಲಿ. (ಸನ್ನಿಹಿತರಾಗಿರಲಿ.) ॥ ೯ ॥

ಭಾ ॥ (೧) ಇಳೇಡ್ಯತ್ವಾದ್ಧರಿಃ ಶ್ರೀರ್ವಾ ಭೂರೂಪಾ ಸೈವ ಚಾಪರಾ । ಮಹೀ ತು ಭಾರತೀ ನಾಮ ವಾಯುವಶ್ಯಾ ಬ್ರಹ್ಮಣೋಽಪರಾ ॥(೨) ತದ್ಗತಸ್ತಾದೃಶೈರೂಪೈಃ ಪೃಥಕ್ಸ್ಥೋ ವಾ ಹರಿಸ್ತಥಾ ॥ ೯ ॥

ಅ ॥ (೧) (ಸರಸ್ವತೀ ಶಬ್ದವನ್ನು ವ್ಯಾಖ್ಯಾನ ಮಾಡಿಯಾಗಿದೆ. ಮಹೀಶಬ್ದವನ್ನು ವ್ಯಾಖ್ಯಾನ ಮಾಡುವರು. ಆದ ಕಾರಣ ಪ್ರಕೃತ ಇಳಾ ಶಬ್ದವನ್ನು ವಾಖ್ಯಾನ ಮಾಡುತ್ತಾರೆ) (ಈಡ ಸ್ತುತೌ) ಬ್ರಹ್ಮಾದಿಗಳಿಂದ ಸ್ತುತ್ಯನಾದುದರಿಂದ ಶ್ರೀ ಹರಿಯು ಇಳಾ ಎನಿಸುತ್ತಾನೆ. ಸ್ತುತ್ಯಳಾದುದರಿಂದಲೇ ಶ್ರೀ ದೇವಿಯೂ ಇಳಾ ಎನಿಸುತ್ತಾಳೆ. ಇಳಾ ಸರಸ್ವತಿಯರಿಂದ ಇತರಳಾದ ಶ್ರೇಷ್ಠತ್ವ ನಿಮಿತ್ತದಿಂದ ಮಹೀ ಎನಿಸಿಕೊಂಡವಳು ಭೂರೂಪಳಾದ ಲಕ್ಷ್ಮೀದೇವಿಯೇ. ವಾಯುದೇವರ ಹೆಂಡತಿಯಾದ ಭಾರತೀ ದೇವಿಯೂಕೂಡ ಮಹೀ ಎಂದು ಪ್ರಸಿದ್ಧಳು. ಬ್ರಹ್ಮದೇವರ ಹೆಂಡತಿಯು ಇಳಾ ಮಹೀ ಇವರಿಂದ ಇತರಳಾದವಳು ಸರಸ್ವತೀ ಶಬ್ದದಿಂದ ಹೇಳಲ್ಪಡುತ್ತಾಳೆ. (೨) ಲಕ್ಷ್ಮ್ಯಾದಿಗಳಲ್ಲಿರತಕ್ಕ ಶ್ರೀಹರಿಯೂ ಸ್ತ್ರೀಯ ಆಕಾರವುಳ್ಳ ರೂಪವಿಶೇಷಗಳಿಂದ ಸ್ತ್ರೀಲಿಂಗ ಬಹುವಚನಗಳಿಗೆ ವಿಷಯನು ಅಥವಾ ಪ್ರತ್ಯೇಕವಾಗಿರತಕ್ಕ ಶ್ರೀಹರಿಯೂ ಸ್ತ್ರೀಲಿಂಗ ಬಹುವಚನಗಳಿಗೆ ವಿಷಯನು. ॥ ೯ ॥

ಋ ॥ (೧೩೨) ಇಹ ತ್ವಷ್ಟಾರಮಗ್ರಿಯಂ ವಿಶ್ವರೂಪಮುಪಹ್ವಯೇ ।
ಅಸ್ಮಾಕಮಸ್ತು ಕೇವಲಃ ॥ ೧೦ ॥

ಅ ॥ (ಈ ಋಕ್ಕಿಗೆ ತ್ವಷ್ಟೃ ದೇವತೆಯು.) ತ್ವಷ್ಟಾರಂ=(ತ್ವಿಷ ದೀಪ್ತೌ) ತೇಜಸ್ಸುಳ್ಳ ಅಥವಾ ಬಲವುಳ್ಳ, ಅಗ್ರಿಯಂ=(ಸರ್ವರಿಗಿಂತ ಪ್ರಥಮದಲ್ಲಿರುವ) ಪ್ರಧಾನನಾದ, ವಿಶ್ವರೂಪಂ=ಸರ್ವ ವಸ್ತುಗಳನ್ನು ಸೃಷ್ಟಿಸ ತಕ್ಕ

ಅಥವಾ ಪೂರ್ಣರೂಪವುಳ್ಳ, ಶ್ರೀಹರಿಯನ್ನು ಇಹ=ಯಜ್ಞದಲ್ಲಿ ಉಪಹ್ವಯೇ=ಕರೆಯುತ್ತೇನೆ. (ಅಂತಹ ಶ್ರೀಹರಿಯು) ಅಸ್ಮಾಕಂ ಕೇವಲಃ ಅಸ್ತು=ನಮಗೇನೇ ರಕ್ಷಕನಾಗಲಿ. ॥ ೧೦ ॥

ಭಾ ॥ ತ್ವಷ್ಟಾ ತೇಜಸ್ತ್ವತೋ ವಿಷ್ಣುರ್ಬಲತ್ವಾದ್ವಾ ಸಮೀರಿತಃ । ವಿಶ್ವರೂಪಕರತ್ವಾಚ್ಚ ವಿಶ್ವರೂಪೋಽಥ ಪೂರ್ತಿತಃ ॥ ೧೦ ॥

ಅ ॥ ದೀಪ್ತಿಃ=ತೇಜಸ್ಸು, ಮತ್ತು ಬಲವು (ತ್ವಿಷದೀಪ್ತೌ ಎಂಬ ಧಾತು ವ್ಯಾಖ್ಯಾನದಿಂದ) ತೇಜಸ್ಸುಳ್ಳವನಾದುದರಿಂದಲೂ ಬಲಿಷ್ಠನಾದುದರಿಂದಲೂ ಶ್ರೀ ಹರಿಯು ತ್ವಷ್ಟಾ ಎನಿಸುತ್ತಾನೆ. ಸಮಸ್ತ ವಸ್ತುಗಳನ್ನು ಸೃಷ್ಟಿಸುವವನಾದುದರಿಂದ ಅಥವಾ ಸರ್ವ ಗುಣಪರಿಪೂರ್ಣನಾದುದರಿಂದ ವಿಶ್ವರೂಪಃ ಎನಿಸುತ್ತಾನೆ. ॥ ೧೦ ॥

ಋ (೧೩೩) ಅವ ಸೃಜಾ ವನಸ್ಪತೇ ದೇವ ದೇವೇಭ್ಯೋ ಹವಿಃ । ಪ್ರ ದಾತುರಸ್ತು ಚೇತನಂ ॥ ೧೧ ॥

ಅ ॥ (ಈ ಋಕ್ಕಿಗೆ ವನಸ್ಪತಿಯು ದೇವತೆಯು) ವನಸ್ಪತೇ=ಭಜಿಸಿಕೊಳ್ಳಲು ಯೋಗ್ಯರಾದವರಿಗೆ ಅಧಿಪತಿಯಾದ, ದೇವ=ಶ್ರೀ ಹರಿಯೇ (ನೀನು) ದೇವೇಭ್ಯಃ=ದೇವತೆಗಳಿಗಾಗಿ, ಹವಿಃ=ಹವಿಸ್ಸನ್ನು ಅವಸೃಜ=(ಸೃಜವಿಸರ್ಗೇ)=ಕೊಡು (ವಿಸರ್ಗವು ತ್ಯಾಗರೂಪವು. ದಾನವೂ ತ್ಯಾಗರೂಪವೇ ಆದರಿಂದ) ಪ್ರದಾತುಃ=ಯಜಮಾನನಿಗೆ, ಚೇತನಂ=(ಚಿತೀ ಸಂಜ್ಞಾನೇ) ಜ್ಞಾನವು, ಅಸ್ತು=ಆಗಲಿ (ಉಂಟಾಗಲಿ). ॥ ೧೧ ॥

ಭಾ ॥ ವನನೀಯಪತಿತ್ವೇನ ವನಸ್ಪತಿರಿತೀರಿತಃ । ಜ್ಞಾನಂ ತು ಚೇತನಂ ॥ ೧೧ ॥

ಅ ॥ (ವನಸಂಭಕ್ತೌ) ಭಜಿಸಿಕೊಳ್ಳಲು ಯೋಗ್ಯರಾದವರಿಗೆ ಅಧಿಪತಿಯಾಗಿರುವುದರಿಂದ ಶ್ರೀ ಹರಿಯು ವನಸ್ಪತಿ ಎನಿಸುತ್ತಾನೆ. (ಅದರಿಂದ ಯಜಮಾನನಿಗೆ) ಚೇತನಂ=ಜ್ಞಾನವುಂಟಾಗಲಿ ॥ ೧೧ ॥

ಋ ॥ (೧೩೪) ಸ್ವಾಹಾ ಯಜ್ಞಂ ಕೃಣೋತನೇಂದ್ರಾಯ ಯಜ್ವನೋ ಗೃಹೇ। ತತ್ರ ದೇವಾಁ ಉಪಹ್ವಯೇ ॥ ೧೨ ॥ ೨೫ ॥ ೧೩ ॥

ಅ ॥ (ಈ ಋಕ್ಕಿಗೆ ಸ್ವಾಹಾಕೃತಿಗಳು ದೇವತೆಗಳು) ಸ್ವಾಹಾ=ತನ್ನ ಭಾಗವನ್ನು ತೆಗೆದುಕೊಳ್ಳುವುದಕ್ಕಾಗಿ ಬರುವುದರಿಂದ ಸ್ವಾಹಾ ಎನಿಸಿಕೊಂಡವನು, ಅಥವಾ ಸುಷ್ಠು ಆ ಸಮಂತಾನ್ನ ಹೀಯತೇ=ಚೆನ್ನಾಗಿ ಸರ್ವರಿಂದಲೂ ಬಿಡಲ್ಪಡದೆ ಇದ್ದವನು (ಭಜಿಸಲ್ಪಡುವವನು) ಅಥವಾ ಸುಷ್ಠು ಆ ಸಮಂತಾತ್ ನಹ್ರಿಯತೇ=ಚೆನ್ನಾಗಿ ಸರ್ವಥಾ ಯಾರಿಂದಲೂ ಅಪಹರಿಸಲ್ಪಡದಿದ್ದವನು (ಅಂದರೆ ಸರ್ವಥಾ ತಿರಸ್ಕಾರ ಅಪಹಾರಾದಿಗಳಿಗೆ ಅಶಕ್ಯನು) ಎಂಬ ವ್ಯುತ್ಪತ್ತಿಗಳಿಂದ ಸ್ವಾಹಾ ಎನಿಸಿಕೊಂಡ ಸ್ತ್ರೀರೂಪನಾದ ಶ್ರೀ ಹರಿಯು, ಯಜ್ವನಃ=ಯಜಮಾನನ, ಗೃಹೇ=ಮನೆಯಲ್ಲಿ, (ಇರತಕ್ಕ) ಯಜ್ಞಂ=ಯಾಗವನ್ನು, ಇಂದ್ರಾಯ=ಇಂದ್ರನಿಗೋಸ್ಕರ ಕೃಣೋತನ=(ಕೃವಿ ಹಿಂಸಾಕರಣಯೋಃ) ಮಾಡಲಿ. (ಇಂದ್ರನನ್ನು ಹೊಂದಿಸಿ ಕೊಡಲಿ) (ಸ್ವಾಹಾಕಾರಂ ಯಜತಿ ಎಂಬ ವಾಕ್ಯೋಕ್ತವಾದ ಉತ್ತಮ ಪ್ರಯಾಜಾಖ್ಯ ಯಜ್ಞದಲ್ಲಿ ಸ್ವಾಹಾದೇವಿಯು ಹೋಮಿಸಲ್ಪಡತಕ್ಕವಳು. ಅಲ್ಲಿ ಇಂದ್ರನ ಸಂಬಂಧವಿಲ್ಲದಿರುವುದರಿಂದ ಇದು ಹೇಗೆ ಕೂಡುತ್ತದೆ ಎಂದರೆ) ಇಂದ್ರಾಯ=ಇಂದ್ರ ಸಂಬಂಧಿ

ಯಾವ ಯಜಮಾನನ=ಮನೆಯಲ್ಲಿರತಕ್ಕ ಯಜ್ಞವನ್ನು, ಕೃಣೋತನ=ಪ್ರವರ್ತಿಸಲಿ. ಮತ್ತು ತತ್ರ=ಆ ಯಜ್ಞದಲ್ಲಿ, ದೇವಾನ್=ದೇವತೆಗಳನ್ನು ಉಪಹ್ವಯೇ ಕರೆಯುತ್ತೇನೆ (ತೃಪ್ತಿಗೊಳಿಸುತ್ತೇನೆ.) ॥ ೧೨ ॥ ೨೫ ॥ ೧೩ ॥

ಭಾ ॥ ಸ್ವಾಹಾ ಸ್ವಭಾಗಗತಿಮಾನ್ ಸ್ಮೃತಃ । ಅನ್ಯಯತ್ಸ್ವದಮೋಽಪಹೃತ ॥ ೧೨॥ ೨೫ ॥ ೧೪॥

ಅ ॥ (ಸ್ವಾಹಾ ಶಬ್ದವನ್ನು ಶ್ರೀ ಹರಿಯಲ್ಲಿ ಮೂರು ಪ್ರಕಾರ ವ್ಯಾಖ್ಯಾನ ಮಾಡುತ್ತಾರೆ.) (೧) ಶ್ರೀ ಹರಿಯು ತನ್ನ ಭಾಗವನ್ನು ಹೊಂದಲಿಕ್ಕಾಗಿ ಗತಿಯುಳ್ಳವನು (ಆಙಪೂರ್ವಾತ್ ಓಹಾಙಗತೌ) (೨) ಸುಷ್ಠು ಆ ಸಮಂತಾನ್ನ ಹೀಯತೇ=ಸರ್ವಥಾ ನಾಶಮಾಡಲ್ಪಡುವುದಿಲ್ಲ (ಓಹಾಕ್‌ತ್ಯಾಗೇ) ಅಂದರೆ ಅನಿತ್ಯತ್ವಂ ದೇಹ **ಹಾನಿಃ ದುಃಖಪ್ರಾಪ್ತಿರಪೂರ್ಣತಾ ।** ಎಂಬ ನಾಲ್ಕು ವಿಧ ನಾಶವೂ ಇಲ್ಲದಿರವವನು, (೩) ಸುಷ್ಠು ಆ ಸಮಂತಾನ್ನಹ್ರಿಯತೇ(ಸ್ವಾಙಪೂರ್ವಕಾತ್‌ಹೃಞಹರಣೇ)ಸರ್ವಥಾ ಯಾರಿಂದಲೂ ಅಪಹರಿಸಲ್ಪಟ್ಟಡದಿದ್ದವನು (ಎಂಬ ವ್ಯುತ್ಪತ್ತಿಯಿಂದ ಸ್ವಾಹಾ ಎಂದು ಹೇಳಲ್ಪಟ್ಟವನು ಸ್ತ್ರೀರೂಪನಾದ ಶ್ರೀ ಹರಿಯು) ಪ್ರಸಿದ್ಧ ಸ್ವಾಹಾ ದೇವಿಯಲ್ಲಿಯೂ ಯಥಾ ಯೋಗ್ಯವಾಗಿ ಅವಯವಾರ್ಥವನ್ನು ಇಟ್ಟು ಕೊಳ್ಳಬೇಕು ॥ ೧೨ ॥ ೨೫ ॥ ೧೩ ॥

ಅವ ॥ ೧- ಋಕ್ಕು. ೨ವರ್ಗ. ಗಾಯತ್ರೀಛಂದಸ್ಸು. ವೈಶ್ವದೇವ ಸೂಕ್ತವು. ವಿಶ್ವೇದೇವತೆಗಳು ದೇವತೆಗಳು.

ಋ॥ (೧೩೫) ಏಭಿರಗ್ನೇ ದುವೋ ಗಿರೋ ವಿಶ್ವೇಭಿಃ ಸೋಮಪೀತಯೇ ।
ದೇವೇಭಿರ್ಯಾಹಿ ಯಕ್ಷಿ ಚ॥ ॥ ೧ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ದುವಃ=(ದುಹ ಪ್ರಪೂರಣೇ) ಸರ್ವಕಾಮಗಳನ್ನು ಹೊಂದಿಸಿಕೊಡುವ ಗಿರಃ=ನಮ್ಮ ಸ್ತುತಿರೂಪಗಳಾದ ವಚನಗಳನ್ನು ಕುರಿತು, ಸೋಮಪೀತಯೇ=ಸೋಮಪಾನ ಮಾಡುವುದಕ್ಕಾಗಿ ಏಭಿಃ ವಿಶ್ವೇಭಿಃ ದೇವೇಭಿಃ=ಈ ವಿಶ್ವೇ ದೇವತೆಗಳಿಂದ ಕೂಡಿಕೊಂಡು, ಆಯಾಹಿ=ಬಾ. ಯಕ್ಷಿ ಚ=ಬಂದು ಯಜ್ಞಮಾಡು. ಪೂಜಿಸು. ॥ ೧ ॥

ಭಾ ॥ ಕಾಮದೋಹಾಃ ದುವಃ ಸ್ಮೃತಾ: ॥ ೧ ॥

ಅ ॥ ದುವಃ=ಸರ್ವಾಭೀಷ್ಟಗಳನ್ನು ಹೊಂದಿಸಿ ಕೊಡತಕ್ಕವುಗಳು, ಎಂದು ಸ್ಮೃತಗಳಾಗಿವೆ. ॥ ೧ ॥

ಋ ॥ (೧೩೬) ಆತ್ವಾ ಕಣ್ವಾ ಅಹೂಷತ ಗೃಣಂತಿ ವಿಪ್ರ ತೇ ಧಿಯಃ ।
ದೇವೇಭಿರಗ್ನ ಆ ಗಹಿ ॥ ೨ ॥

ಅ ॥ ವಿಪ್ರ=ಮೇಧಾವುಳ್ಳ, ಅಗ್ನೇ=ಅಗ್ನಿಯೇ, ಕಣ್ವಾಃ=ಪ್ರತಿಭೆಯುಳ್ಳ ಅಥವಾ ಕಣ್ವಗೋತ್ರದಲ್ಲಿ ಹುಟ್ಟಿದ (ಕಣ್ವ ಸಂಬಂಧಿಗಳಾದ) ವರು (ನಾವು,) ತ್ವಾ=ನಿನ್ನನ್ನು ಆ ಅಹೂಷತ=(ಹ್ವೇಞ ಶಬ್ದೇ) ಕರೆದರು. (ಕರೆದೆವು) (ಪ್ರಾರ್ಥಿಸಿದರು) ಪ್ರಾರ್ಥಿಸಿದೆವು. ತೇ=ಅಂತಹವರು ತೇ=ನಿನ್ನ, ಧಿಯಃ=ಬುದ್ಧಿಗಳನ್ನು ಗೃಣಂತಿ=(ಗೈಶಬ್ದೇ) ನೀನು ಅತಿಶಯಿತ ಬುದ್ಧಿಯುಳ್ಳವನು ಇತ್ಯಾದಿ ರೂಪದಿಂದ ನಿನ್ನನ್ನು ಸ್ತುತಿಸು

ತ್ತಾರೆ.(ಅಂತಹ ನೀನು)ದೇವೇಭಿಃ=ದೇವತೆಗಳಿಂದ ಕೂಡಿಕೊಂಡು, ಆಗಹಿ=(ಗಮ್ಲೃ ಗತೌ) (ಸ್ಪಷ್ಟವಾದು ದರಿಂದ ಆಚಾರ್ಯರು ವ್ಯಾಖ್ಯಾನ ಮಾಡಲಿಲ್ಲ.).(ನಾವು ನಿನ್ನನ್ನು ಪ್ರಾರ್ಥಿಸಿದೆವು ಎಂದು ತಾತ್ಪರ್ಯವು)॥೨॥

ಋ॥ (೧೩೮) ಇಂದ್ರ ವಾಯೂ ಬೃಹಸ್ಪತಿಂ ಮಿತ್ರಾಽಗ್ನಿಂ ಪೂಷಣಂ ಭಗಂ।
ಆದಿತ್ಯಾನ್ಮಾರುತಂ ಗಣಂ ॥ ೩ ॥

ಅ॥ ಇಂದ್ರ ವಾಯೂ=ಇಂದ್ರ ವಾಯು ಶಬ್ದ ವಾಚ್ಯಗಳಾದ ಭಗವದ್ರೂಪವಿಶೇಷಗಳನ್ನು, ಬೃಹಸ್ಪತಿಂ ಸರ್ವೋತ್ತಮನೂ, ಸರ್ವಸ್ವಾಮಿಯೂ ಆದ ಶ್ರೀಹರಿಯನ್ನು ಅಥವಾ ವಾಗಭಿಮಾನಿನಿಯಾದ ಸರಸ್ವತಿಗೆ ಪತಿಯಾದ ಬ್ರಹ್ಮನನ್ನು ಮಿತ್ರಾ=ಮಿತ್ರಾ ವರುಣ ಶಬ್ದವಾಚ್ಯಗಳಾದ ಭಗವದ್ರೂಪವಿಶೇಷಗಳನ್ನು, ಅಗ್ನಿಂ=ಅಗ್ನಿ ಎನಿಸಿಕೊಂಡ ಶ್ರೀ ಹರಿಯನ್ನು ಪೂಷಣಂ=(ಪುಷಪುಷ್ಟೌ) (ಪೋಷಯತಿ ಅಥವಾ ಪೂರ್ಣತ್ವಾತ್) ಸರ್ವರನ್ನು ಪೋಷಿಸುವುದರಿಂದ ಅಥವಾ ಸರ್ವಗುಣ ಪರಿಪೂರ್ಣನಾದುದರಿಂದ ಪೂಷಾ ಎನಿಸಿಕೊಂಡ ಶ್ರೀ ಹರಿಯನ್ನು ಭಗಂ=ಪೂರ್ಣ ಐಶ್ವರ್ಯಾದಿಗಳಿದ್ದುದರಿಂದ ಭಗ ಎನಿಸಿಕೊಂಡ ಶ್ರೀ ಹರಿಯನ್ನು ಆದಿತ್ಯಾನ್=(ಆಙ ಪೂರ್ವಕಾತ್ ದಾಣ್ ದಾನೇ ಆದಿತ್,ಯಾ ಪ್ರಾಪಣೇ ಆದಿತ್‌ಚಾಸೌ ಯಶ್ಚ)ಎಲ್ಲರಿಗಿಂತಲೂ ಆದಿಯಲ್ಲಿದ್ದುದರಿಂದ, ಅಥವಾ ಸರ್ವವನ್ನು (ಪೃಥಿವೀರಸವನ್ನು) ತೆಗೆದುಕೊಂಡು ಹೋಗುವುದರಿಂದ ಆದಿತ್ಯರೆನಿಸಿಕೊಂಡ ಭಗವದ್ರೂಪಗಳನ್ನು, ಮಾರುತಂ (ಮಾಭಿಃ=ರುತಂ=(ರು ಶಬ್ದೇ) ಪ್ರತಿಪಾದಿತಂ=ವೇದರೂಪ ಪ್ರಮಾಣಗಳಿಂದ ಪ್ರತಿಪಾದಿಸಲ್ಪಟ್ಟ ಭಗವಂತನನ್ನು ಗಣಂ=ಇತರ ದೇವತಾ ಸಮೂಹದಲ್ಲಿ ನಿಯಾಮಕ ಭಗವದ್ರೂಪವನ್ನು (ಕಾಣ್ವರು) ಆ ಅಹೂಷತ ಕರೆದರು. (ಪ್ರಾರ್ಥಿಸಿದರು) (ಆವಾಹನಶಬ್ದವಾಚ್ಯರಾದ ಇಂದ್ರಾದಿ ದೇವತೆಗಳನ್ನು ಯಥಾಯೋಗ್ಯವಾಗಿ ಇಟ್ಟುಕೊಳ್ಳಬೇಕು) ॥ ೩ ॥

ಭಾ ॥ (೧) ಬೃಹನ್ಮತಿರ್ಬೃಹತ್ಯಾ ವಾ ವಾಚ ಏವ ಬೃಹಸ್ಪತಿಃ ॥ (೨) ಮಿತ್ರೇತಿ ಮಿತ್ರಾವರುಣೌ ಪೂಷಾನಾಮ ಸ ಪೋಷಣಾತ್। ಪೂರ್ಣತ್ವಾದ್ವಾ (೩) ಭಗಃ ಪ್ರೋಕ್ತಃ ಪೂರ್ಣೈಶ್ವರ್ಯಾದಿಕತ್ವತಃ । (೪) ಆದಿಸ್ಥತ್ವಾತ್ಸ ಆದಿತ್ಯಃ ಆದದಾನಃ ಪ್ರಯಾತಿ ವಾ । ಬಹುರೂಪತ್ವತಶ್ಚೈವ ಮಾನೋಕ್ತತ್ವಾತ್ತು ಮಾರುತಃ ॥ ೩ ॥

ಅ॥ (೧) (ಮೊದಲು ವ್ಯಾಖ್ಯಾನ ಮಾಡದಿರುವುದರಿಂದ ಬೃಹಸ್ಪತ್ಯಾದಿ ಶಬ್ದಗಳನ್ನು ಭಗವತ್ಪರಗಳನ್ನಾಗಿ ವ್ಯಾಖ್ಯಾನ ಮಾಡುತ್ತಾರೆ.)ಸರ್ವಶ್ರೇಷ್ಠನೂ ಸರ್ವಸ್ವಾಮಿಯೂ ಆದುದರಿಂದ ಶ್ರೀವಿಷ್ಣುವೇ ಬೃಹಸ್ಪತಿಃ ಎನಿಸಿಕೊಂಡವನು.ಅಥವಾ ಬೃಹತ್ಯಾಃ=ವಾಕಿಗೆ ಸ್ವಾಮಿಯಾದುದರಿಂದ ಬೃಹಸ್ಪತಿಃ ಎನಿಸುತ್ತಾನೆ. (೨) ಒಬ್ಬ ಮಿತ್ರನೆಂಬ ದೇವತೆಯಲ್ಲಿ ಮಿತ್ರೌ ಎಂದು ದ್ವಿವಚನವು ಹೇಗೆ (ಯಜ್ಞಾದಿಗಳಲ್ಲಿ ಮಿತ್ರಾವರುಣರು ಹವಿಸ್ಸನ್ನು ತೆಗೆದುಕೊಳ್ಳಲಿಕ್ಕೆ ಒಟ್ಟಿಗೆ ಹೋಗುವುದರಿಂದ ಇಬ್ಬರಿಗೆ ಒಂದೇ ನಾಮವು. ಆದ ಕಾರಣ) ಮಿತ್ರಪದದಿಂದ ವರುಣನನ್ನು ತೆಗೆದುಕೊಳ್ಳಬೇಕು. ಆ ಶ್ರೀಹರಿಯು (ಪುಷ ಪುಷ್ಟೌ) ಸರ್ವರನ್ನು ಪೋಷಿಸುವುದರಿಂದ ಅಥವಾ ಸರ್ವಗುಣ ಪರಿಪೂರ್ಣನಾದುದರಿಂದ ಪೂಷಾ ಎನಿಸುತ್ತಾನೆ. (೩) **ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ । ಜ್ಞಾನವಿಜ್ಞಾನಯೋಶ್ಚೈವ ಷಣ್ಣಾಂ ಭಗ ಇತೀರಣಾ** ॥ ಎಂಬ ಪ್ರಮಾಣದಿಂದ) ಪೂರ್ಣ ಐಶ್ವರ್ಯ, ಪೂರ್ಣವೀರ್ಯಾದಿ ಗುಣಗಳುಳ್ಳವನಾದುದರಿಂದ ಶ್ರೀಹರಿಯು ಭಗಃ ಎನಿಸುತ್ತಾನೆ. (೪) ಸರ್ವರಿಗಿಂತ ಆದಿಯಲ್ಲಿದ್ದುದರಿಂದ ಅಥವಾ ಪೃಥಿವೀಜಲವನ್ನು ತೆಗೆದುಕೊಂಡು ಹೋಗುವುದರಿಂದ ಶ್ರೀಹರಿಯು ಆದಿತ್ಯನೆನಿಸುತ್ತಾನೆ. **ಏತೇ ಹೀದಂ ಸರ್ವಮಾದದಾನಾ ಯಂತಿ**=ಈ ಸೂರ್ಯರು ಯಾವ ಕಾರಣದಿಂದ ಈ ಸಮಸ್ತಜಗತ್ತನ್ನು (ಪೃಥಿವೀ ಜಲವನ್ನು) ತೆಗೆದುಕೊಳ್ಳುತ್ತಾ ಹೋಗುತ್ತಾರೋ, ಆದಕಾರಣ

ಆದಿತ್ಯರೆನಿಸುತ್ತಾರೆ.) ಶ್ರೀಹರಿಗೆ ಬಹುರೂಪಗಳಿದ್ದುದರಿಂದ **ಆದಿತ್ಯಾನ್** ಇತ್ಯಾದಿಯೂ, ದೇವತಾಂತರ ಸಮೂಹವನ್ನು ಹೇಳುವ **ಗಣಂ** ಇತ್ಯಾದಿಯೂ ಎರಡು ರೂಪಗಳಿದ್ದುದರಿಂದ **ಮಿತ್ರಾ** ಇತ್ಯಾದಿಯೂಯುಕ್ತವಾಗುತ್ತದೆ. ಅಂದರೆ ಒಂದು ಹವಿಸ್ಸನ್ನು ತೆಗೆದುಕೊಳ್ಳಲಿಕ್ಕೆ ಮಾತ್ರ ಮಿತ್ರ ವರುಣರು ಒಟ್ಟಿಗೆ ಹೋಗುವುದರಿಂದ ದಸ್ರರಂತೆ ಮಿತ್ರವರುಣರಿಗೆ ಮಿತ್ರಾ ಎಂದು ಒಂದು ನಾಮವು. ನಾಸತ್ಯ, ದಸ್ರ, ಎಂದು ನಾಮಗಳುಳ್ಳ ಅಶ್ವಿನೀ ದೇವತೆಗಳಿಗೆ ಸಮಸ್ತ ವ್ಯಾಪಾರಗಳಲ್ಲಿಯೂ ಸಾಹಚರ್ಯವಿದ್ದುದರಿಂದ ದಸ್ರ ಎಂಬ ನಾಮದಿಂದ ನಾಸತ್ಯನೂ ಹೇಳಿಸಲ್ಪಡುತ್ತಾನೆ. ಮಿತ್ರ ವರುಣರಿಗಾದರೂ ಯಜ್ಞಗಳಲ್ಲಿ ಮಾತ್ರ ಸಾಹಚರ್ಯವಿದ್ದುದರಿಂದ ವರುಣನಲ್ಲಿ ಮಿತ್ರ ಶಬ್ದಕ್ಕೆ ಲಕ್ಷಣಯಾ ಕ್ವಚಿತ್ಪ್ರಯೋಗವು. ನಾಸತ್ಯದಸ್ರರಿಗಾದರೂ ಸರ್ವ ವ್ಯಾಪಾರಗಳಲ್ಲಿಯೂ ಸಾಹಚರ್ಯವಿದ್ದುದರಿಂದ ಆ ಎರಡು ಶಬ್ದಗಳಿಂದಲೂ ಪ್ರಪ್ರತ್ಯೇಕ ಇಬ್ಬರೂ ವಾಚ್ಯರಾಗುತ್ತಾರೆ. ಆದುದರಿಂದಲೇ **ನಾಸತ್ಯಾವಶ್ವಿನೌ ದಸ್ರಾವಾಶ್ವಿನೇಯೌಚ ತಾವುಭೌ** ॥ ಎಂದು ಅಮರವು.) ವೇದಾದಿ ಪ್ರಮಾಣಗಳಿಂದ ಪ್ರತಿಪಾದಿಸಲ್ಪಡುವುದರಿಂದ ಶ್ರೀಹರಿಯು ಮಾರುತಃ ಎನಿಸುತ್ತಾನೆ. ॥ ೩ ॥

ಋ ॥ (೧೩೮) ಪ್ರವೋ ಭ್ರಿಯಂತ ಇಂದವೋ ಮತ್ಸರಾ ಮಾದಯಿಷ್ಣವಃ । ದ್ರಪ್ಸಾ ಮಧ್ವಶ್ಚಮೂಷದಃ ॥ ೪ ॥

ಅ ॥ (ಎಲೋ ದೇವತೆಗಳೇ) ಮತ್ಸರಾಃ=ಮದಕಾರಿಗಳಾದ (ಮದವನ್ನು ಹೊಂದಿಸಿ ಕೊಡುವ) ಮತ್= ಮದಂ ಸರಂತಿ ಸಾರಯಂತಿ ಗಮಯಂತಿ, ಮತ್‌ಪೂರ್ವಾತ್ ಸೃಗತೌ.) ಮಾದಯಿಷ್ಣವಃ=(ಮದೀಹರ್ಷೇ) ಮದವನ್ನು ಹೊಂದಿಸಿಕೊಡುವ ಸ್ವಭಾವವುಳ್ಳ, (ಸೋಮಕ್ಕೆ ಮದವನ್ನು ಹುಟ್ಟಿಸುವುದು ಸ್ವಭಾವವು ಎಂಬುವುದನ್ನು ಅಧಿಕವಾಗಿ ಹೇಳುವುದಕ್ಕಾಗಿ ಈ ಪದವನ್ನು ಹೇಳಿದ್ದು. ಆದುದರಿಂದ ಮತ್ಸರಾಃ ಎನ್ನುವ ಪೂರ್ವಪದದಿಂದ ಪುನರುಕ್ತಿಯಿಲ್ಲ.) ದ್ರಪ್ಸಾಃ=(ದ್ರುಗತೌ) ದ್ರವಣ ರೂಪಗಳಾದ (ಹರಿದುಕೊಂಡು ಹೋಗುವಿಕೆ) ಮಧ್ವಃ= ರುಚಿಕರಗಳಾದ, ಚಮೂಷದಃ= (ಷದ್ಲೃ ವಿಶರಣಗತ್ಯವಸಾದನೇಷು) ಚಮಸ (ಪಾನಭಾಜನ) ದಲ್ಲಿರುವ, ಇಂದವಃ=ಸೋಮಗಳು, ವಃ=ನಿಮಗಾಗಿ, ಪ್ರಭ್ರಿಯಂತೇ=(ಭೃಞ ಭರಣೇ) ಸಂಪಾದಿಸಲ್ಪಡುತ್ತವೆ. (ಅವುಗಳನ್ನು ಕುಡಿಯಿರಿ.) (ಅಧ್ಯಾತ್ಮಾರ್ಥದಲ್ಲಿ) (ಎಲೋ ತತ್ವ ದೇವತೆಗಳೇ) ಮತ್ಸರಾಃ ಮಾದಯಿಷ್ಣವಃ, ದ್ರಪ್ಸಾಃ= ಚಂಚಲಗಳಾದ, ಚಮೂಷದಃ=ಶಿರೋರೂಪಚಮಸದಲ್ಲಿರತಕ್ಕ, ಇಂದವಃ=ಇಷ್ಟವನ್ನು ಹೊಂದಿಸಿ ಕೊಡುವ ಮನೋ ವೃತ್ತಿಗಳು, ವಃ=ನಿಮಗಾಗಿ, ಪ್ರಭ್ರಿಯಂತೇ=ಸಮಾಧಾನ ಮಾಡಲ್ಪಡುತ್ತವೆ. (ಅಂದರೆ ನಿಮ್ಮ ವಿಷಯದಲ್ಲಿ ಸಾವಧಾನವಾಗಿ ಮಾಡಲ್ಪಡುತ್ತವೆ.) ॥ ೪ ॥

ಭಾ ॥ (೧) ಮತ್ಸರಾ ಮದಕಾರಿತ್ವಾತ್ತಾಚ್ಛೀಲ್ಯಾದುತ್ತರಂ ಪದಂ ॥ (೨) ದ್ರಪ್ಸಾಸ್ತೇ ದ್ರವಣಾಚ್ಚೈವ ಚಮಸಸ್ಥಾಶ್ಚಮೂಷದಃ ॥ (೩) ಶಿರಶ್ಚ ಚಮಸಃಪ್ರೋಕ್ತಮಿಷ್ಟದಾನಾತ್ತಥೇಂದವಃ ॥ ೪ ॥

ಅ ॥ (೧) (ಮತ್‌ಮದಂ ಸರಂತಿ ಸಾರಯಂತಿ ಗಮಯಂತಿ ಎಂಬ ವ್ಯುತ್ಪತ್ತಿಯಿಂದ) ಮದವನ್ನು ಹೊಂದಿಸಿ ಕೊಡುವುದರಿಂದ ಮತ್ಸರಾಃ ಎನಿಸುತ್ತವೆ. ಮದಕಾರಿತ್ವವು ಸೋಮದ ಸ್ವಭಾವವು ಎಂದು ಅಧಿಕವಾಗಿ ಹೇಳುವುದಕ್ಕಾಗಿ **ಮಾದಯಿಷ್ಣವಃ** ಎಂಬುವ ಉತ್ತರ ಪದವನ್ನು ಹೇಳಿದ್ದು (೨) ಆ ಸೋಮಗಳು ದ್ರವಣರೂಪ (ಹರಿದು ಹೋಗುವಿಕೆ) ಅರ್ಥದಿಂದಲೇ ದ್ರಪ್ಸಾಃ ಎನಿಸುತ್ತವೆ. (ಏನ ಶಬ್ದದಿಂದ ದ್ರಪ್ಸಾಃ=ರಸವುಳ್ಳದ್ದು ಎಂಬ ವ್ಯಾಖ್ಯಾನವು ಅಪ್ರಾಮಾಣಿಕವು) ಚಮೂಷದಃ=(ಚಮೂಷು ಸೀದಂತಿ) ಚಮಸದಲ್ಲಿರುವವುಗಳು. (೩) (ಅಧ್ಯಾತ್ಮ ರೂಪವಾದ ಅರ್ಥದಲ್ಲಿ ಆದರೂ) (ಮತ್ಸರಾದಿ ಶಬ್ದಗಳಿಗೆ ಮನೋ ವೃತ್ತಿಗಳಲ್ಲಿ ಅರ್ಥವು ಸುಲಭವಾಗಿರುವುದ

ರಿಂದ ಅವುಗಳನ್ನು ಹೇಳದೆ ಮನೋ ವೃತ್ತಿಗಳಿಗೆ ಚಮಸವು ಸ್ಥಾನವು ಎನ್ನುವುದನ್ನು ಕೊಡಿಸುತ್ತಾರೆ.) ಇದಂ ತಚ್ಛಿರಃ ಏಷ ಹ್ಯರ್ವಾಗ್ಬಿಲಶ್ಚಮಸ ಊರ್ಧ್ವಬುಧ್ನಃ ಎಂಬ ಶ್ರುತಿಯಿಂದ ಚಮೂ ಎನಿಸಿದ ಚಮಸ ಶಬ್ದವು ಶಿರಸ್ಸು ಎಂಬ ಅರ್ಥವನ್ನು ಹೇಳುತ್ತದೆ. ತಾ ಏತಾ ಶೀರ್ಷನ್ ಶ್ರಿಯಃ ಶ್ರಿತಾಃ ಚಕ್ಷುಃ ಶ್ರೋತ್ರಂ ಮನೋ ವಾಕ್ಪ್ರಾಣಃ ಎಂಬ ಶ್ರುತಿಯಿಂದ ಮನಸ್ಸು ಶಿರಸ್ಸಿನಲ್ಲಿರುತ್ತದೆ. (ಅಂದರೆ ಮನಸ್ಸಿಗೆ ಶಿರಸ್ಸು ಸ್ಥಾನವು.) ಮನೋ ವೃತ್ತಿಗಳೂ ಸೋಮವೂ ಕೂಡ ಅಭೀಷ್ಟವನ್ನು ಕೊಡತಕ್ಕವುಗಳಾದುದರಿಂದ ಇಂದವಃ ಎನಿಸುತ್ತವೆ.॥೪॥

ಋ ॥ (೧೪೯) ಈಳತೇ ತ್ವಾಮವಸ್ಯವಃ ಕಣ್ವಾಸೋ ವೃಕ್ತಬರ್ಹಿಷಃ ।

ಹವಿಷ್ಮಂತೋ ಅರಂಕೃತಃ ॥ ೫ ॥

ಅ ॥ (ಎಲೋ ಅಗ್ನಿಯೇ)ಹವಿಷ್ಮಂತಃ=ಭೂಮನಿಂದಾ ಪ್ರಶಂಸಾಸು ನಿತ್ಯಯೋಗೇಽತಿಶಾಯನೇ। ಸಂಬಂಧೇಽಸ್ತಿವಿವಕ್ಷಾಯಾಂ ಭವಂತಿ ಮತುಬಾದಯಃ ಎಂಬ ವಚನದಿಂದ ಪ್ರಶಸ್ತವಾದ ಹವಿಸ್ಸಿನಿಂದ ಕೂಡಿರುವ ಅವಸ್ಯವಃ=ತಮಗೆ ರಕ್ಷಣೆಯನ್ನು ಇಚ್ಛಿಸುವ, ವೃಕ್ತ ಬರ್ಹಿಷಃ=ಚೆನ್ನಾಗಿ ವಿಸ್ತೃತವಾದ ಬರ್ಹಿಸ್ಸುಳ್ಳ, ಅರಂಕೃತಃ=ಅತ್ಯಂತ ಅತಿಶಯವಾಗಿ ಕರ್ಮಗಳನ್ನು ಮಾಡುವ, ಅಥವಾ ದೇವಾದಿಗಳಿಗೆ ಅಲಂಕಾರವನ್ನು ಮಾಡುವ, ಕಣ್ವಾಸಃ=ಕಣ್ವರೆನಿಸಿಕೊಂಡ ನಾವು ಅಥವಾ ಕಣ್ವ ಋಷಿಗಳೇ ಮೊದಲಾದ ಋಷಿಗಳು ತ್ವಾಂ=ನಿನ್ನನ್ನು ಈಳತೇ=(ಈಡಸ್ತುತ್.) ಸ್ತುತಿಸುತ್ತಾರೆ.॥

ವಿ॥ ಕಣ್ವಾಃ ಎನ್ನುವುದಕ್ಕೆ ವಯಂ ಎನ್ನುವುದು ತಾತ್ಪರ್ಯಾರ್ಥವನ್ನು ಹೇಳಿದ್ದು ವಯಂ ಎನ್ನುವುದು ಅಧ್ಯಾಹಾರವಲ್ಲ. ಹಾಗಿದ್ದರೆ ಸ್ತುವಂತಿ ಎಂಬ ಉಕ್ತಿಯು ಆಗದೆ ಹೋಗಬೇಕಿತ್ತು ಸ್ತುಮಃ ಎಂದು ಹೇಳಬೇಕಿತ್ತು. ॥ ೫ ॥

ಭಾ ॥ (೧) ಅವಸ್ಯುರ್ಯಜಮಾನಃ ಸ್ಯಾದವನಾರ್ಥ ಪ್ರವೃತ್ತಿತಃ ॥ (೨) ಆತ್ಮಸ್ಥಂ ವಾ ಬಹುವಚೋ ಬಹವೋ ಮುನಯೋಽತ್ರ ವಾ (೩) ಉತ್ತರಾಣಾಂ ವಚಸ್ತ್ವೇನ ಸ್ವಯಂ ವದತಿ ಚೇಶ್ವರಃ ॥ ಅರಂಕೃತೋಽತಿಕರ್ತಾರಸ್ತ್ವಲಂ ಕರ್ತಾರ ಏವ ವಾ ॥ ೫ ॥

ಅ ॥ (೧) (ಅವಃ=ಅವನಂ. ಆತ್ಮನ ಇಚ್ಛತಿ ಎಂಬ ವ್ಯುತ್ಪತ್ತಿಯಿಂದ) ತನ್ನ ರಕ್ಷಣೆಯನ್ನು ಇಚ್ಛಿಸುವುದರಿಂದ (ಅಂದರೆ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಪ್ರವೃತ್ತಿ ಮಾಡುವುದರಿಂದ) ಅವಸ್ಯುಃ ಅಂದರೆ ಯಜಮಾನನಾಗುವನು. (೨) (ಮೇಧಾತಿಥಿಯೆಂಬ ಒಬ್ಬ ಯಜಮಾನನಲ್ಲಿ ಕಣ್ವಾಸಃ ಎಂಬ ಬಹುವಚನವು ಹೇಗೆ ಕೂಡುತ್ತದೆ? ಎಂದರೆ) ಅಸ್ಮದೋ ದ್ವಯೋಶ್ಚ=ಅಸ್ಮತ್ ಶಬ್ದಕ್ಕೆ ಏಕತ್ವ ಅಥವಾ ದ್ವಿತ್ವವು ವಿವಕ್ಷಿತವಾದರೆ ಆತ್ಮವಾಚಿಯಾದ ಅಸ್ಮಚ್ಛಬ್ದಕ್ಕೆ ಬಹುವಚನವು ವಿಕಲ್ಪವಾಗಿ ಬರುತ್ತದೆ,ಎಂಬ ಸೂತ್ರದಿಂದ ಕಣ್ವಾಸಃಎಂಬ ಶಬ್ದವು ಸ್ವಾತ್ಮನನ್ನು ವಿಷಯೀಕರಿಸುವುದರಿಂದ ಮೇಧಾತಿಥಿಗೂ ಮೇಧಾತಿಥಿಯ ಇಂದ್ರಿಯಗಳಿಗೂ ಸ್ವತಂತ್ರವಾಗಿ ಪರೋಕ್ಷವಾಗಿ ಕರ್ತೃತ್ವವನ್ನು ವಿವಕ್ಷಾ ಮಾಡುವಾಗ ಬಹುತ್ವವಿದ್ದ ಪ್ರಯುಕ್ತ ಬಹುವಚನವು ಕೂಡುತ್ತದೆ. ಅಥವಾ ಕಣ್ವ ಮೊದಲಾದ ಬಹು ಋಷಿಗಳಿದ್ದ ಪ್ರಯುಕ್ತ ಕಣ್ವ ಮೊದಲಾದ ಬಹು ಋಷಿಗಳೇ ಈ ಋಕ್ಕಿನಲ್ಲಿ ಕಣ್ವಾಸಃ ಎಂಬ ಪದದಿಂದ ವಿವಕ್ಷಿತರು. (೩) (ಹಾಗಾದರೆ ಈವಾಕ್ಯಕ್ಕೆ ವಿಷ್ಣು ಮೊದಲಾದವರೂ ಋಷಿಗಳಾಗುತ್ತಾರೆ. ಆದ ಕಾರಣ ಕಣ್ವಾ ವಯಂ ಎಂದೂ ವಿಷ್ಣ್ವಾದಿಗಳು ರಕ್ಷಣೆಯನ್ನು ಇಚ್ಛಿಸುವುದು ಸ್ತುತಿಸುವುದು ಇತ್ಯಾದಿಗಳುಹೇಗೆ ಕೂಡುತ್ತವೆ? ಎಂದರೆ) ಮೇದಾತಿಥ್ಯಾದಿಗಳು ಶ್ರೀ ವಿಷ್ಣು ಮೊದಲಾದ ಋಷಿಗಳಿಗಿಂತ

ಅತ್ಯಂತ ಮೇಲಿನವರಾದುದರಿಂದ ಆ ಮೇಧಾತಿಥ್ಯಾದಿಗಳ ವಚನವೆಂದು ಶ್ರೀ ಹರಿಯೂ ಬ್ರಹ್ಮಾದಿಗಳೂ ತಾವಾಗಿಯೇ ಹೇಳುತ್ತಾರೆ. (ಅಲ್ಲದೆ ಅವರೇ ತಮ್ಮ ರಕ್ಷಣಾದಿಗಳನ್ನು ಇಚ್ಛಿಸುವುದಲ್ಲ.) ಉತ್ತರಾಣಾಂ ಎಂಬಲ್ಲಿ ಊರ್ಧ್ವ ಎಂಬ ಅರ್ಥವುಳ್ಳ ಉತ್ ಶಬ್ದದಿಂದ ತರಬ್ ಪ್ರತ್ಯಯವು. ಅಖಂಡ ಪ್ರಾತಿಪದಿಕವಲ್ಲ. ಆದ ಕಾರಣ ಸರ್ವನಾಮಸಂಜ್ಞೆಯಿಲ್ಲದಿರುವುದರಿಂದ ಉತ್ತರಾಣಾಂ ಎಂದು ಯುಕ್ತವು. ಇಲ್ಲವಾದರೆ ಉತ್ತರೇಷಾಂ ಎಂದಾಗ ಬೇಕಿದ್ದಿತು. ವಿಷ್ಣ್ವಾದಿ ಋಷ್ಯಂತರರನ್ನು ವಿವಕ್ಷಾ ಮಾಡಿಕೊಂಡು ಮೇಧಾತಿಥ್ಯಾದಿಗಳು ಮೇಲಿನವರಾದ ಪ್ರಯುಕ್ತ ತರಬ್ ಪ್ರತ್ಯಯವು ಕೂಡುತ್ತದೆ. **ತಸ್ಯಾಂ ತಸ್ಯಾಮುವಸ್ಥಾಯಾಂ ತತ್ತತ್ಪ್ರಾಪ್ತಿ ವಿಶೇಷತಃ । ತೇಷಾಂ ವಾಕ್ಯಸ್ವರೂಪೇಣ ಪಾರ್ಥನಾದಿಷು ಪಶ್ಯತಿ । ವಿಷ್ಣುರ್ಬ್ರಹ್ಮಾಸುಪರ್ಣೋ ವಾ** ಎಂದು ಹಿಂದೆ ಪರಿಹಾರ ಮಾಡಿದ್ದರಿಂದ ಇಲ್ಲಿ ಪುನಃ ಪರಿಹಾರ ಮಾಡಿದರೆ ಪುನರುಕ್ತಿಯು ಬರುವುದು ಎಂದರೆ ಸ್ತುತಿಸುತ್ತಾರೆ ಇತ್ಯಾದ್ಯವಸ್ಥೆಯಲ್ಲಿ ವಿಷ್ಣುಬ್ರಹ್ಮ ಮೊದಲಾದವರು ಕಣ್ವಾದಿ ಋಷಿಗಳ ವಾಕ್ಯವೆಂದು ನೋಡುತ್ತಾರೆ ಎಂದು **ತಸ್ಯಾಂ ತಸ್ಯಾಮುವಸ್ಥಾಯಾಂ** ಎಂದು ಹೇಳಿದುದಕ್ಕೆ ಉದಾಹರಣವನ್ನು ತೋರಿಸುವುದಕ್ಕಾಗಿ ಇದನ್ನು ಹೇಳಿದ್ದು. (೪) ಅರಂಕೃತಃ=ಅತಿಶಯವಾಗಿ ಕರ್ಮಗಳನ್ನು ಮಾಡುವವರು. ಅಥವಾದೇವಾದಿಗಳಿಗೆ ಅಲಂಕಾರ ಮಾಡುವವರು. (ಲಕಾರಕ್ಕೆ ರೇಫಾದೇಶವು.) ॥ ೫ ॥

ಋ॥ (೧೪೦) ಘೃತಪೃಷ್ಠಾ ಮನೋಯುಜೋ ಯೇ ತ್ವಾ ವಹಂತಿ ವಹ್ನಯಃ।
ಆ ದೇವಾನ್ ಸೋಮಪೀತಯೇ ॥ ೬ ॥ ೨೬ ॥

ಋ ॥ (೧೪೧) ತಾನ್ಯಜತ್ರಾँ ಋತಾವೃಧೋಽಗ್ನೇ ಪತ್ನೀವತಸ್ಕೃಧಿ ।
ಮಧ್ವಃ ಸುಜಿಹ್ವ ಪಾಯಯ ॥ ೭ ॥

ಅ॥ (ಎಲೋ ಅಗ್ನಿಯೇ) ಯೇ=ಯಾವ, ಘೃತಪೃಷ್ಠಾಃ=(ಕುದುರೆಯು ಉತ್ತಮವಾಗಿರುವುದರಿಂದಲೂ, ಪುಷ್ಟಗಳಾದ ಅಂಗಗಳು ಇದ್ದುದರಿಂದಲೂ,) ಘೃತದಂತೆ ಸ್ನಿಗ್ಧವಾದ (ಮೆತ್ತಗೆಯಾದ)ಬೆನ್ನುಳ್ಳವುಗಳು, ಅಥವಾ ಶುದ್ಧನಾದ (ನಿರ್ದೋಷನಾದ) ಶ್ರೀಹರಿಯು ಪೃಷ್ಠದಲ್ಲಿ ಉಳ್ಳವುಗಳು, ಅಂದರೆ ದೋಷಲೇಶರಹಿತನಾದ ಶ್ರೀಹರಿಯಿಂದ ಆರೂಢಗಳಾದವುಗಳು) ಮನೋಯುಜಃ=ಸಾರಥಿಯ ಕೇವಲ ಮನಸ್ಸಿನಿಂದ ರಥದಲ್ಲಿ ಕಟ್ಟಲ್ಪಡತಕ್ಕವುಗಳು, ಇಂತಹ, ವಹ್ನಯಃ=(ವಹಪ್ರಾಪಣೇ ವಾಹಕತ್ವಾತ್ ರಥವನ್ನು ಸೆಳೆಯುವುದರಿಂದ ವಹ್ನಯಃ ಎನಿಸಿಕೊಂಡ) ಕುದುರೆಗಳು, ಸೋಮಪೀತಯೇ=ಸೋಮಪಾನ ಮಾಡುವುದಕ್ಕಾಗಿ, ತ್ವಾ=ನಿನ್ನನ್ನು,ದೇವಾನ್=ದೇವತೆಗಳನ್ನು ಕೂಡ, ಆ ವಹಂತಿ=(ಯಜ್ಞವನ್ನು ಕುರಿತು) ಹೊತ್ತುಕೊಂಡು ಹೋಗುತ್ತಾವೋ ॥ ೬ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ತಾನ್=ಅಂತಹ ಕುದುರೆಗಳಿಂದ, ಯಜತ್ರಾನ್=ವಿಷ್ಣುವನ್ನುದ್ದೇಶಿಸಿ ಯಜ್ಞ ಮಾಡುವ, ಪೂಜಿಸುವ, ಅಥವಾ ಸ್ತೋತ್ರ ಮಾಡುವ, (ವಿಷ್ಣುವು ಯಾಗವನ್ನು ಸ್ತುತಿಸುತ್ತಾನೆನ್ನುವುದು ಕೂಡದಿರುವುದರಿಂದ ಆ ಪಕ್ಷದಲ್ಲಿ) ಪೂಜಿಸಲ್ಪಡತಕ್ಕ ಋತವೃಧಃ=ಚೆನ್ನಾಗಿ ಜ್ಞಾನ ಸ್ವರೂಪನಾದ ಶ್ರೀಹರಿಯಿಂದ ಅಭಿವೃದ್ಧರಾದ, ಅಥವಾ ವೇದಾದಿ ಪ್ರಮಾಣಗಳಿಂದ ಚೆನ್ನಾಗಿ ತಿಳಿಯಲ್ಪಟ್ಟ ಶ್ರೀಹರಿಯಿಂದ ಪುಷ್ಟರಾದ, ತಾನ್=ಆ ದೇವತೆಗಳನ್ನು ಪತ್ನೀವತಃ=ಪತ್ನಿಯುಳ್ಳವರನ್ನಾಗಿ, ಕೃಧಿ=ಮಾಡು. (ಅಂದರೆ ಯಜ್ಞವನ್ನು ಕುರಿತು ಬರಲಿಕ್ಕೆ ಅವರವರ ಪತ್ನಿಯರಿಂದೊಡಗೂಡಿಸು. ಅಂತೂ ಸಪತ್ನೀಕರಾದ ದೇವತೆಗಳನ್ನು ಹಿಂದೆ ಹೇಳಿದ ಕುದುರೆಗಳಿಂದ (ಕುದುರೆಗಳಲ್ಲಿ ಕೂಡ್ರಿಸಿ) ಇಲ್ಲಿಗೆ ಕರಕೊಂಡು ಬಾ.) (ಕರಕೊಂಡು ಬಂದು) ಸುಜಿಹ್ವ=ಶೋಭನವಾದ ನಾಲಿಗೆಯುಳ್ಳ ಅಗ್ನಿಯೇ, ಮಧ್ವಃ=ರುಚಿಕರವಾದ ಸೋಮವನ್ನು ಪಾಯಯ=ಕುಡಿಸು. ॥ ೭ ॥

ಭಾ || (೧) ಸ್ನಿಗ್ಧಪೃಷ್ಠಾಸ್ಸಮಾರೂಢಾ ಹರಿಣಾ ವಾ ವಿದೋಷಿಣಾ || (೨) ಮನೋ ಮಾತ್ರೇಣ ಯೋಜ್ಯಾಶ್ಚ ತ್ವಾಂ ದೇವಾಂಶ್ಚ ವಹಂತಿ ಯೇ || ೬ || ೨೬ ||

ಅ || (೧) ಘೃತದಂತೆ ಸ್ನಿಗ್ಧವಾದ ಬೆನ್ನುಳ್ಳವುಗಳು, ಅಥವಾ ನಿರ್ದೋಷನಾದ ಶ್ರೀಹರಿಯಿಂದ ಚೆನ್ನಾಗಿ ಏರಲ್ಪಟ್ಟವುಗಳು, (ಎಂದು ಘೃತಪೃಷ್ಠಾಃ ಎನ್ನುವುದರ ಅರ್ಥವು.) (೨) ಸಾರಥಿಯ ಕೇವಲ ಮನಸ್ಸಿನಿಂದಲೇ ರಥದಲ್ಲಿ ಸಂಬಂಧಿಸಲ್ಪಡತಕ್ಕವುಗಳೂ ಇಂತಹ ಯಾವ ಅಶ್ವಗಳು ನಿನ್ನನ್ನು ದೇವತೆಗಳನ್ನು (ಯಜ್ಞವನ್ನು ಕುರಿತು) ಹೊರುತ್ತವೋ || ೬ || ೨೬ ||

ಭಾ || ತೈರ್ದೇವಾನ್ನಜತಃ ಸ್ತೋತೄನ್ ಜ್ಞಾನೇನ ಬ್ರಹ್ಮಣೈಧಿತಾನ್ | ಪತ್ನೀಭಿರ್ಯೋಜಯಾಗಂತುಂ ಸಹ ಮಧ್ವಶ್ಚ ಪಾಯಯ || ೭ ||

ಅ || ಅಂತಹ ಕುದುರೆಗಳಿಂದ ಶ್ರೀ ವಿಷ್ಣುವನ್ನು ಪೂಜಿಸುವ, ಅಥವಾ ಸ್ತುತಿಸುವ, ಜ್ಞಾನ ಸ್ವರೂಪನಾದ ಬ್ರಹ್ಮನಿಂದ ಅಭಿವೃದ್ಧರಾದ, ದೇವತೆಗಳನ್ನು ಯಜ್ಞಕ್ಕೆ ಬರಲಿಕ್ಕಾಗಿ ಅವರವರ ಪತ್ನಿಯರಿಂದೊಡಗೂಡಿಸು. (ಅಂದರೆ ಸಪತ್ನೀಕರಾದ ದೇವತೆಗಳನ್ನು ಇಲ್ಲಿಗೆ ಕರೆಸು) ಸ್ವಾದುವಾದ ಸೋಮವನ್ನೂ ಕೂಡ ಪಾನ ಮಾಡಿಸು. || ೭ ||

ಋ || (೧೪೨) ಯೇ ಯಜ॑ತ್ರಾ॒ ಯ ಈಡ್ಯಾ॒ಸ್ತೇ ತೇ॑ ಪಿಬಂತು ಜಿ॒ಹ್ವಯಾ॑ | ಮಧೋ॑ರಗ್ನೇ॒ ವಷ॑ಟ್ಕೃತಿ || ೮ ||

ಅ || ಅಗ್ನೇ=ಎಲೋ ಅಗ್ನಿಯೇ, ಯಜತ್ರಾಃ=(ಯಜ ದೇವಪೂಜಾಸಂಗತಿ ಕರಣದಾನೇಷು) ಯಜ್ಞಮಾಡುವ, ಅಥವಾ ಪೂಜಿಸಲ್ಪಡುವ, ಈಡ್ಯಾಃ=(ಈಡಸ್ತುತೌ.) ಸ್ತುತ್ಯರೂ ಆದ, ಯೇ ಯೇ=ಯಾವ ಯಾವ ದೇವತೆಗಳು, (ಇರುತ್ತಾರೋ) ತೇ ತೇ=ಅವರೆಲ್ಲರೂ, ವಷಟ್ಕೃತಿ=ವಷಟ್ ಎಂದು ಉಚ್ಚಾರಣ ಮಾಡುವಾಗ, ತೇ=ನಿನ್ನದ್ದಾದ, ಜಿಹ್ವಯಾ=ನಾಲಿಗೆಯಿಂದ, ಮಧೋಃ=ಮಧುವನ್ನು, ಪಿಬಂತು = ಕುಡಿಯಲಿ. || ೮ ||

ಭಾ || (೧) ತೇ ಷಷ್ಠ್ಯಂತೋಽನುದಾತ್ತಃ ಸ್ಯಾದುದಾತ್ತೋ ಬಹುವಾಚಕಃ || (೨) ಆವೃತ್ತಸ್ತು ಭ.(ವೇದ) ಪತ್ಯರ್ಥಸ್ತೇ ಪಿಬಂತು ವಷಟ್ಕೃತೌ || ೮ ||

ಅ || (೧) (ಇಲ್ಲಿ ಯೇ ಯೇ ಎಂದು ದ್ವಿರುಕ್ತಿಯು ಕಾಣುತ್ತದೆ. ಅದರಿಂದ ತೇ ತೇ ಎನ್ನುವುದೂ ದ್ವಿರ್ವಚನವೆಂದು ಪ್ರತೀತಿಯು ಬರುವುದು. ಅದನ್ನು ನಿರಾಕರಿಸುತ್ತಾರೆ.) ಇಲ್ಲಿ ೨ನೇದ್ದಾದ ತೇ ಎಂಬ ಶಬ್ದವು ಷಷ್ಠ್ಯಂತವು. (ಷಷ್ಠ್ಯೇಕವಚನಾಂತವಾದ ಯುಷ್ಮತ್ ಶಬ್ದಕ್ಕೆ. **ತೇಮಯಾವೇಕವಚನಸ್ಯ** ಎನ್ನುವುದರಿಂದ **ತೇ** ಎಂದಾದೇಶವು.) (ಷಷ್ಠ್ಯಂತವಾದ ಯುಷ್ಮತ್ ಶಬ್ದಕ್ಕೆ ತೇ ಎನ್ನುವುದು ಆದೇಶವಾಗಿರುವುದರಿಂದಲೇ **ತೇ** ಎನ್ನುವುದಕ್ಕೆ ಅನುದಾತ್ತರೂಪವಾದ ಸ್ವರವು ಆಗುವುದು. **ಅನುದಾತ್ತಂ ಸರ್ವಮಪಾದಾದೌ** ಎಂದು ಆದೇಶಕ್ಕೇನೇ ಅನುದಾತ್ತತ್ವವು ಸ್ಮೃತವಾಗಿದೆ.) ೧ನೇ **ತೇ** ಶಬ್ದವು ಪ್ರಥಮಾಬಹುವಚನಾಂತವಾದ ತತ್ ಶಬ್ದದ ರೂಪವು. ತಚ್ಛಬ್ದವಾಗಿರುವುದರಿಂದಲೇ ಉದಾತ್ತಸ್ವರವು. (ಅಂತೂ ಉದಾತ್ತವಾಗಿರುವುದರಿಂದ **ತೇ** ಎನ್ನುವುದು ತತ್ ಶಬ್ದದ ರೂಪವು.) (ಇಲ್ಲವಾದರೆ ೧ನೇ **ತೇ** ಎಂಬ ಶಬ್ದವೂ ಅನುದಾತ್ತವಾಗಬೇಕಾಗುವುದು.) (೨) (ಹಾಗಾದರೆ ಯೇ ಯೇ ಎನ್ನುವುದರಿಂದ ಅನ್ವಯವು ಬಾರದೆ ಹೋಗುವುದು ಎಂದರೆ) ಯಾವುದು ಬಹ

ವಚನಾಂತವಾದ ತೇ ಶಬ್ದವೋ, ಅದನ್ನು ೨ ಸಲ ಇಟ್ಟುಕೊಳ್ಳಬೇಕು. ಅದರಿಂದ ಅರ್ಥವು ಅನ್ವಿತವಾಗುವುದು. ಅವರೆಲ್ಲರೂ ನಿನ್ನ (ನಾಲಿಗೆಯಿಂದ) ವಷಟ್ ಎಂದುಚ್ಚಾರಣ ಮಾಡುವಾಗ ಮಧುವನ್ನು ಪಾನಮಾಡಲಿ. ॥ ೮ ॥

ಋ॥(೧೪೩)ಆಕೀಂ ಸೂರ್ಯಸ್ಯ ರೋಚನಾದ್ವಿಶ್ವಾನ್ ದೇವಾಁ ಉಷರ್ಬುಧಃ।
ವಿಪ್ರೋ ಹೋತೇಹ ವಕ್ಷತಿ ॥ ೯ ॥

ಅ ॥ ಹೋತಾ ವಿಪ್ರಃ=ಅಗ್ನಿಯು, ಉಷರ್ಬುಧಃ=(ಉಷಃ=ಬುಧ್ಯಂತಿ ಎಂಬ ವ್ಯುತ್ಪತ್ತಿಯಿಂದ) ಪ್ರಕಾಶ ಸ್ವರೂಪನಾದುದರಿಂದ ಉಷಃ=ಎನಿಸಿಕೊಂಡ ಪರಬ್ರಹ್ಮನ ಜ್ಞಾನಿಗಳಾದ, ವಿಶ್ವಾನ್ ದೇವಾನ್=ಎಲ್ಲಾದೇವತೆಗಳನ್ನು, ಸೋಮಪಾನ ಮಾಡುವವರನ್ನಾಗಿ, ಸೂರ್ಯಸ್ಯ ರೋಚನಾತ್=ಸೂರ್ಯನ ಸಂಬಂಧದಿಂದ ಅತಿ ಪ್ರಕಾಶಮಾನವಾಗಿರುವುದರಿಂದ ರೋಚನ ಎನಿಸಿಕೊಂಡ ಸ್ವರ್ಗದೆಶೆಯಿಂದ ಇಹ=ಯಜ್ಞವನ್ನು ಕುರಿತು, ಆಕೀಂ ವಕ್ಷತಿ=(ವಹಪ್ರಾಪಣೇ) ಬರುವಂತೆ ಮಾಡಬೇಕು ॥ ೯ ॥

ಭಾ ॥ ಸೂರ್ಯಸ್ಯ ರೋಚನಾತ್ಸ್ವರ್ಗಾದಾವಕ್ಷತ್ಯಗ್ನಿರಿಂದುಪಾನ್ । ಉಷಃ ಪ್ರಕಾಶನಾದ್ಬ್ರಹ್ಮ ತದ್ವಿದಸ್ತ ಉಷರ್ಬುಧಃ ॥ ೯ ॥

ಅ॥ ಪ್ರಕಾಶ ಸ್ವರೂಪನಾದುದರಿಂದ ಉಷಃ=ಶಬ್ದದಿಂದ ಪರಬ್ರಹ್ಮನು ಹೇಳಲ್ಪಡುತ್ತಾನೆ. ಆ ಪರಬ್ರಹ್ಮ ಜ್ಞಾನಿಗಳಾದ ದೇವತೆಗಳು ಉಷರ್ಬುಧಃ ಎನಿಸುತ್ತಾರೆ. ಅಂತಹ ವಿಶ್ವೇದೇವತೆಗಳನ್ನು ಸೋಮಪಾನ ಮಾಡುವವರನ್ನಾಗಿ ಅಗ್ನಿಯು ಸೂರ್ಯನ ಸಂಬಂಧದಿಂದ ಪ್ರಕಾಶಮಾನವಾದ ಸ್ವರ್ಗದಿಂದ (ಈ ಯಜ್ಞಕ್ಕೆ) ಬರುವಂತೆ ಮಾಡಲಿ ॥ ೯ ॥

ಋ ॥ (೧೪೪) ವಿಶ್ವೇಭಿಃ ಸೋಮ್ಯಂ ಮಧ್ವಗ್ನ ಇಂದ್ರೇಣ ವಾಯುನಾ ।
ಪಿಬಾ ಮಿತ್ರಸ್ಯ ಧಾಮಭಿಃ ॥ ೧೦ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ಮಿತ್ರಸ್ಯ=ಮಿತ್ರನಾಮಕ ಶ್ರೀ ವಿಷ್ಣುವಿಗೆ. ಧಾಮಭಿಃ=ಅಧಿಷ್ಠಾನ ಭೂತರಾದ, ವಿಶ್ವೇಭಿಃ=ವಿಶ್ವೇದೇವತೆಗಳಿಂದಲೂ,ಇಂದ್ರೇಣ=ಇಂದ್ರ ದೇವರಿಂದಲೂ,ವಾಯುನಾ=ವಾಯುದೇವರಿಂದಲೂ ಕೂಡಿಕೊಂಡು,ಸೋಮ್ಯಂ=ಸೋಮ ಸ್ವರೂಪವಾದ, ಮಧು=ಮಧುವನ್ನು, ಪಿಬ=ಕುಡಿ.(ವಾಯುದೇವರು ಸರ್ವಾಧಿಕಾರಿಗಳಲ್ಲಿ ಉತ್ತಮರಾದುದರಿಂದಲೂ, ಇಂದ್ರದೇವರು ಸ್ವರ್ಗದಲ್ಲಿರುವ ದೇವತೆಗಳಲ್ಲಿ ಉತ್ತಮರಾದುದರಿಂದಲೂ ಸ್ವರ್ಗಪಾಲಕರಾದುದರಿಂದಲೂ ಅವರಿಬ್ಬರನ್ನು ಪ್ರತ್ಯೇಕ ಹೇಳಿದ್ದು) ॥ ೧೦ ॥

ಭಾ ॥ ದೇವಾಸ್ತೇ ವಿಷ್ಣುಧಾಮತ್ವಾನ್ಮಿತ್ರಧಾಮಾನ ಈರಿತಾಃ ॥ ೧೦ ॥

ಅ ॥ ಆ ದೇವತೆಗಳು ಶ್ರೀವಿಷ್ಣುವಿಗೆ ಅಧಿಷ್ಠಾನಭೂತರಾದುದರಿಂದ ಮಿತ್ರಧಾಮಾನಃ ಎನಿಸುತ್ತಾರೆ. ॥ ೧೦ ॥

ಋ ॥ (೧೪೫) ತ್ವಂ ಹೋತಾ ಮನುರ್ಹಿತೋಽಗ್ನೇ ಯಜ್ಞೇಷು ಸೀದಸಿ ।
ಸೇಮಂ ನೋ ಅಧ್ವರಂ ಯಜ ॥ ೧೧ ॥

ಅ || ಅಗ್ನೇ=ಅಗ್ನಿಯೇ, ಮನುರ್ಹಿ:ತ=ದೇವತೆಗಳಿಗೆ ಹಿತಕರನಾದುದರಿಂದ, ಹೋತಾ ತ್ವಂ=ಹೋತೆನಾದ ನೀನು, ಯಜ್ಞೇಷು=ಯಜ್ಞಗಳಲ್ಲಿ (ಳಿಗೆ) ಸೀದಸಿ=(ದೇವತೆಗಳಿಗೋಸ್ಕರ) ಅಧಿಷ್ಠಾತನು ಆಗಿರುತ್ತಿ. (ಅದ ಕಾರಣ) ಸಃ=ಅಂತಹ ನೀನು, ನಃ=ನಮ್ಮ, ಇಮಂ ಅಧ್ವರಂ=ಈ ಯಾಗವನ್ನು, ಯಜ=ದೇವತೆಗಳಿಗೆ ಕೊಡು. (ಅಂದರೆ—ದೇವತೆಗಳಿಗೆ ಹಿತಕರನಾದುದರಿಂದ ಯಜ್ಞದಲ್ಲಿ ದೇವತೆಗಳ ಉದ್ದಿಶ್ಯ ಅಧಿಷ್ಠಾತನು ಆಗಿ ಯಜ್ಞವನ್ನು ದೇವತೆಗಳಿಗೆ ಕೊಡು) (ಸೋಽಚಿ ಲೋಪೇಚೇತ್ಪಾದ ಪೂರಣಂ, ಎನ್ನುವುದರಿಂದ ಸೇಮಂ ಎನ್ನುವುದು ಯುಕ್ತವು.) || ೧೧ ||

ಋ || (೧೪೬) ಯುಕ್ಷ್ವಾ ಹ್ಯರುಷೀ ರಥೇ ಹರಿತೋ ದೇವ ರೋಹಿತಃ |
ತಾಭಿರ್ದೇವಾಁ ಇಹಾವಹ || ೧೨ || ೨೭ || ೧೪ ||

ಅ || ದೇವ=ಎಲೋ ಅಗ್ನಿಯೇ, (ನೀನು) ಹಿ ರಥೇ=ಪ್ರಸಿದ್ಧ ರಥದಲ್ಲಿ, ಅರುಷೀಃ=ಅರುಣಗಳಾದ, (ಸ್ವಲ್ಪ ಕೆಂಪು ಬಣ್ಣವುಳ್ಳ) (ಅಗ್ನಿಗೆ ಸಮಾನವಾದ ಪ್ರಭೆಯುಳ್ಳ,) ಅಶ್ವತರಿಗಳನ್ನು, (ಗರ್ದಭ ಜಾತಿ ವಿಶೇಷ. ಹಾಸರಕತ್ತೆ ಮಹಾರಾಷ್ಟ್ರ ಭಾಷೆಯಿಂದ,ವೇಸರು) ಯುಕ್ಷ್ವ=ಕೂಡಿಸು.ಅಥವಾ ಕೆಂಪಾದ ಹೆಣ್ಣು ಕುದುರೆಗಳನ್ನು ಕೂಡಿಸು. ಹರಿತಃ=ಹಸುರು ಬಣ್ಣವುಳ್ಳ, (ದೂರ್ವಾಕ್ಕೆ (ಗರಿಕೆಗೆ) ಸಮಾನವಾದ ಪ್ರಭೆಯುಳ್ಳ) ಅಶ್ವತರಿಗಳನ್ನು ಕೂಡಿಸು. ರೋಹಿತಃ=ರೋಹಿನ್ಮೃಗಗಳನ್ನು (ಚುಕ್ಕೆ ಇದ್ದ ಜಿಂಕೆ) ಕೂಡಿಸು. ತಾಭಿಃ=ಆ ಹೆಣ್ಣು ಕುದುರೆಗಳಿಂದ, ಅಶ್ವತರಿಗಳಿಂದ, ಅಥವಾ ರೋಹಿನ್ಮೃಗಗಳಿಂದ, (ಯುಕ್ತವಾದ ರಥದಿಂದ) ದೇವಾನ್ ದೇವತೆಗಳನ್ನು, ಇಹ=ಈ ಯಜ್ಞದಲ್ಲಿ. ಆ ವಹ=ಹೊಂದಿಸಿ ಕೊಡು. (ಕರೆದುಕೊಂಡು ಬಾ.) || ೧೨ || ೨೭ ||೧೪ ||

ಭಾ || ಅಗ್ನಿವಾಹಾ ಅಶ್ವತರ್ಯೋ ದೂರ್ವಾಪದ್ಮಾಗ್ನಿಸಪ್ರಭಾಃ | ಲೋಹಿತಾಃ ಕ್ವಚಿದಶ್ವಾಶ್ಚ ರೋಹಿನ್ಮೃಗ್ಯೋಽಪಿ ಕುತ್ರಚಿತ್ || ೧೨ || ೨೭ || ೧೪ ||

ಅ || (ಅರುಷೀಃ ಇತ್ಯಾದಿಗಳಿಂದ ಅಗ್ನಿಯ ವಾಹನಗಳು ಹೇಳಲ್ಪಡುತ್ತವೆ. ಅದನ್ನು ವಿವರಿಸುತ್ತಾರೆ.) ಅಗ್ನಿಂ ವಹಂತೀತಿ ಅಗ್ನಿವಾಹಾಃ=ಅಗ್ನಿಯನ್ನು ಹೊರುವವುಗಳು (ಎಂದುಯೌಗಿಕ ಶಬ್ದವು. ರೂಢವಲ್ಲ.) ಅಶ್ವತರಿಗಳು. ಕೆಲವು ದೂರ್ವೆಗೆ (ಗರಿಕೆಗೆ) ಸಮಪ್ರಭೆಯುಳ್ಳವುಗಳು. ಕೆಲವು ಕಮಲಕ್ಕೆ ಸಮಪ್ರಭೆಯುಳ್ಳವುಗಳು. (ಇದು ಪ್ರಸಂಗ ಸಂಗತಿಯಿಂದ ಸ್ಥಲಾಂತರದಲ್ಲಿ ಹೇಳಿದ್ದ ರಕ್ತಾದಿ ಪದಗಳ ವಿವರಣವು.) ಕೆಲವು ಅಶ್ವತರಿಗಳು ಅಗ್ನಿಗೆ ಸಮಪ್ರಭೆಯುಳ್ಳವುಗಳು. ಕೆಲವು ಕಡೆ ಕೆಂಪು ಬಣ್ಣವುಳ್ಳ ಕುದುರೆಗಳೂ ಕೆಲವು ಕಡೆ ರೋಹಿತ್ ಮೃಗಗಳೂ ಅಗ್ನಿಗೆ ವಾಹನಗಳು. || ೧೨ || ೨೭ || ೧೪ ||

ಅವ || ೧೨ ಋಕ್ಕು ೨ ವರ್ಗ. ಋತುದೇವತಾಕವು. ಋತವ್ಯ ಸೂಕ್ತವು. ಗಾಯತ್ರೀ ಛಂದಸ್ಸು.

ಋ || (೧೪೭) ಇಂದ್ರ ಸೋಮಂ ಪಿಬ ಋತುನಾಽಽತ್ವಾ ವಿಶಂತ್ವಿಂದವಃ |
ಮತ್ಸರಾಸಸ್ತದೋಕಸಃ || ೧ ||

ಅ|| ಇಂದ್ರ=ಶ್ರೀ ಹರಿಯೇ ಋತುನಾ=(ಋ ಗತಿ ಪ್ರಾಪಣಯೋಃ ಎಂಬ ಧಾತು ವ್ಯಾಖ್ಯಾನದಿಂದ ಅರ್ಯತೇ ಗಮ್ಯತೇ ಅನೇನ ಎಂಬ ವ್ಯುತ್ಪತ್ತಿಯಿಂದ ಋತುಃ=ಮಾರ್ಗವು) ಗಮನಕ್ಕೆ ಕಾರಣವಾಗಿರುವುದರಿಂದ ಋತು ಎನಿಸಿಕೊಂಡ ಮಾರ್ಗದಿಂದ (ಗತಿಯಿಂದ) (ಅಂದರೆ ಸೂರ್ಯನಿಗೆ ಮಾರ್ಗಭೂತವಾದ ವಸಂತಾದಿ ಋತುವಿನಿಂದ) (ಬಂದು) (ಏವಂಚ ಋತು ಶಬ್ದಗಳು ಮಾರ್ಗ, ಪಾತ್ರ, ದೇವತಾರೂಪಗಳಾದ ೩ ಅರ್ಥಗಳನ್ನು ಪ್ರತಿ

ಪಾದಿಸುವವುಗಳು) ಋತುನಾ=ಪುಷ್ಪಗಳ ಉದ್ಭವಾದಿರೂಪ ಸ್ವಲಿಂಗಗಳನ್ನು ತಿಳಿದುಕೊಳ್ಳುವುದಕ್ಕೆ ಕಾರಣವಾಗಿರುವುದರಿಂದ ಋತು ಎಂದು ಹೆಸರುಳ್ಳ ಋತುದೇವತೆಯಿಂದ ಕೂಡಿಕೊಂಡು,ಋತುನಾ=ಋತು ಸಂಬಂಧಿ ಪಾತ್ರದಿಂದ ಸೋಮಂ=ಸೋಮವನ್ನು ಪಿಬ=ಕುಡಿ. ತನೋಕಸಃ=ಆ ಋತು ಪಾತ್ರವೇ ಸ್ಥಾನವಾಗಿಉಳ್ಳ (ಋತು ಪಾತ್ರದಲ್ಲಿರುವ (ಮದಂ ಸರಂತಿ) ಸಾರಯಂತಿ ಗಮಯಂತಿ ಎಂಬ ವ್ಯುತ್ಪತ್ತಿಯಿಂದು ಮತ್ಸರಾಸಃ=ಮದವನ್ನು ಹುಟ್ಟಿಸುವ, ಇಂದವಃ=ಇಷ್ಟವನ್ನು ಕೊಡುವ ಸೋಮಗಳು,ತ್ವಾ=ನಿನ್ನನ್ನು ಆ ವಿಶಂತು= (ವಿಶಪ್ರವೇಶನೇ) ಹೊಂದಲಿ. (ನಿನ್ನ ಉದರದಲ್ಲಿರತಕ್ಕವುಗಳಾಗಲಿ) ॥ ೧ ॥

ಋ ॥ (೧೪೮) ಮರುತಃ ಪಿಬತ ಋತುನಾ ಪೋತ್ರಾದ್ಯಜ್ಞಂ ಪುನೀತನ ।
ಯೂಯಂ ಹಿಷ್ಠಾ ಸುದಾನವಃ ॥ ೨ ॥

ಅ॥ ಮರುತಃ=ಎಲೋ ಮರುತ್‌ಗಳೇ, ಋತುನಾ=(ಹಿಂದಿನಂತೆ ಅರ್ಥ) ಪೋತ್ರಾತ್=ಪಾವಿತ್ರ್ಯಕ್ಕೆ ಕಾರಣವಾಗಿರುವುದರಿಂದಲೂ, ಹೋತನಿಗೆ ದೇವತೆಯಾಗಿರುವುದರಿಂದಲೂ, ಪೋತ್ರ ಎಂದು ಹೆಸರುಳ್ಳ ನಿಮ್ಮ ಸಂಬಂಧಿಯಾದ, ಪೋತ್ರಪಾತ್ರದಿಂದ,ಪಿಬತ=ಸೋಮವನ್ನು ಕುಡಿಯಿರಿ.ಯಜ್ಞಂ ಪುನೀತನ= (ಪೂಞಪವನೇ (ಸೋಮಪಾನ ಮಾಡಿ) ಯಾಗವನ್ನು ಪವಿತ್ರೀಕರಿಸಿರಿ (ಅಂತೂ) ಯೂಯಂ=ನೀವು, ಹಿ=ಯಾವ ಕಾರಣದಿಂದ ಸುದಾನವಃ=ಶೋಭನದಾನ ಸ್ವಭಾವವುಳ್ಳವರ, ಸ್ಥಃ=ಆಗಿರುತ್ತೀರೋ (ಆದ ಕಾರಣ ನಮಗೆ ಅಭಿಮತವಾದುದನ್ನು ಕೊಡಿರಿ) ॥ ೨ ॥

ಋ॥ (೧೪೯)ಅಭಿ ಯಜ್ಞಂ ಗೃಣೀಹಿ ನೋ ಗ್ನಾವೋ ನೇಷ್ಟಃಪಿಬ ಋತುನಾ।
ತ್ವಂ ಹಿ ರತ್ನಧಾಃ ಅಸಿ ॥ ೩ ॥

ಅ ॥ ನೇಷ್ಟಃ=ನ ವಿದ್ಯತೇಈಷ್ಟಾ ಯಸ್ಯ ಎಂಬ ವ್ಯುತ್ಪತ್ತಿಯಿಂದ ನಿಯಾಮಕ ನಿಲ್ಲದಿರುವುದರಿಂದಲೇ ನೇಷ್ಟೃ ಎನಿಸಿಕೊಂಡ ಶ್ರೀವಿಷ್ಣುವೇ. ನೇಷ್ಟಃ=ಹೊಂದಿಸಿಕೊಡುವುದರಿಂದಲೂ, ನೇಷ್ಟೃ ಎಂಬ ಋತ್ವಿಜನಿಗೆ ದೇವತೆಯಾದುದರಿಂದಲೂ ನೇಷ್ಟೃ ಎನಿಸಿಕೊಂಡ ಇಂದ್ರನೇ,ಅಗ್ನಿಯೇ,ತ್ವಷ್ಟೃದೇವತೆಯೇ,ಗ್ನಾವಃ=ಗಮನಶೀಲಗಳಾದ ನದಿಗಳುಳ್ಳವನೇ,(ನದ್ಯಭಿಮಾನಿ ದೇವಿಯರಿಂದ ಸಹಿತನಾದವನೇ)ಋತುನಾ= ಋತು ಪಾತ್ರದಿಂದ ಪಿಬ= (ಸೋಮವನ್ನು, ಕುಡಿ. (ಪಾನಮಾಡಿ) ನಃಯಜ್ಞಂ=ನಮ್ಮ ಯಜ್ಞವನ್ನು, ಅಭಿಗೃಣೀಹಿ=ಸ್ತುತಿಸು (ಈ ಯಜ್ಞವು ಸಾಧುವಾಗಿದೆ ಎಂದು ಪ್ರಶಂಸಾ ವಾಕ್ಯವನ್ನು ಹೇಳು.) ತ್ವಂ=ನೀನು, ಹಿ=ಯಾವ ಕಾರಣದಿಂದ, ರತ್ನಧಾಃ=ರತಿ(ಸುಖ) ಧಾರಕನು, ಅಸಿ=ಆಗಿರುತ್ತಿಯೋ, (ಆದ ಕಾರಣ ನಮಗೆ ಸುಖವನ್ನು ಕೊಡು.)॥ ೩ ॥

೬ವ ॥ ಈ ಸೂಕ್ತದಲ್ಲಿ ೧೨ಋಕ್ಕುಗಳು. ಅವಾಂತರ ದೇವತಾ ಭೇದವನ್ನು ಅಲ್ಲಿ ಆಲ್ಲಿ ಹೇಳುವ ಪ್ರಕಾರ ತಿಳಿಯಬೇಕು. ಈ ಸೂಕ್ತದಲ್ಲಿ ಋತು ಶಬ್ದವು ಬಹುಧಾಶ್ರುತವಾಗುತ್ತದೆ. ಸಾಮಾನ್ಯವಾಗಿ ಅದರ ಅರ್ಥವನ್ನು ಹೇಳುತ್ತಾರೆ.

ಭಾ॥ (೧) ಋತುರ್ಮಾರ್ಗಸ್ತು (೨) ನೇತೃತ್ವಾನ್ನೇಷ್ಟಾಽಗ್ನಿರ್ಹರಿರೀವವಾ । ಈಷ್ಟೇ ನ ಕಶ್ಚಿದಸ್ಯೇತಿ (೩) ಗ್ನಾ ನದ್ಯಶ್ಚ ಸಮೀರಿತಾಃ ॥ ಗತಿಶೀಲತ್ವತೋ ಗ್ನಾಸ್ತಾ, ಜ್ಞಾತೃ ನೇತೃತ್ವತೋ ಹರಿಃ ।ಗಮನಾನ್ನಯನಾದ್ವಾ ಗ್ನಾ (೪) ಋತುಪಾತ್ರಮೃತುಸ್ತಥಾ ।

ಸೋಮಾಸ್ತದೋಕಸಃ ಪ್ರೋಕ್ತಾ ಋತು ಪಾತ್ರಸ್ಥಿತಾ ಯತಃ। (೫)ಪತ್ನೀರ್ನೇತೃತ್ವತೋ ನೇಷ್ಟಾ ನೇಷ್ಟೃತ್ವಿಕ್ಸಂಪ್ರಕೀರ್ತಿತಃ॥ (೬) ಜ್ಞಾಪಯಂತಿ ಸ್ವಲಿಂಗಾನೀತ್ಯೃತವಃ ಸಂ ಪ್ರಕೀರ್ತಿತಾಃ॥ (೭) ಪಾವನಾಚ್ಚೈವ ಪೋತಾರೋ ಮರುತಃ ಪೋತೃದೇವತಾಃ॥ (೮)ಅಗ್ನಿಸ್ತು ದೇವತಾ ನೇಷ್ಟು[illegible]ಷ್ಟೇಂದ್ರೋ ವಿಷ್ಣುರೇವ ವಾ ॥೧॥೨॥೩॥

ಅ॥ (೧) ಅರ್ಯತೇ ಗಮ್ಯತೇ ಅನೇನ ಎಂಬ ವ್ಯುತ್ಪತ್ತಿಯಿಂದ ಋತುಃ=ಮಾರ್ಗವು. ಅಂತೂ ಆದಿತ್ಯ ಮಾರ್ಗದಲ್ಲಿರತಕ್ಕ ಕಾಲಾಭಿಮಾನಿದೇವತೆಗಳು ಋತುಶಬ್ದ ವಾಚ್ಯರು (ಈ ಋತವ್ಯಸೂಕ್ತದಲ್ಲಿ (೧) ಐಂದ್ರೀ (೨) ಮಾರುತೀ (೩) ತ್ವಾಷ್ಟ್ರೀ (೪) ಆಗ್ನೇಯಿಾ(೫) ಐಂದ್ರೀ (೬) ಮೈತ್ರಾವರುಣೀ (೭.೮.೯.೧೦.) ದ್ರಾವಿಣೋದಸೀ(೧೧)ಆಶ್ವಿನೀ(೧೨)ಆಗ್ನೇಯಿಾ ಈ ದೇವತೆಗಳುಳ್ಳವುಗಳಾದಾಗ್ಯೂ ಈ ಎಲ್ಲಾ ಋಕ್ಕುಗಳೂ ಋತುದೇವತೆಯಾಗಿಯೂ ಉಳ್ಳವುಗಳು) (೨)(ಅಭಿಯಜ್ಞಂ ಎಂಬ ೩ ನೇ ಋಕ್ಕಿನಲ್ಲಿ ನೇಷ್ಟನನ್ನು ಕುರಿತು ಪಿಬ ಎಂದು ಹೇಳುತ್ತದೆ. ಋತ್ವಿಗ್ವಿಶೇಷನಾದ ನೇಷ್ಟನನ್ನು ಕುರಿತು ಸೋಮವನ್ನು ಪಾನ ಮಾಡು ಎಂದು ಪ್ರಾರ್ಥಿಸುವುದು ಸಂಗತವಲ್ಲ ಎಂದರೆ) ಪ್ರೇರಕನಾಗಿರುವುದರಿಂದ ನೇಷ್ಟಾ=ಅಗ್ನಿಯು. ಮತ್ತು ಸರ್ವರಿಗೂ ಆಯಾವ ಕಾರ್ಯಗಳಲ್ಲಿ ಪ್ರೇರೇಪಿಸುವುದರಿಂದಲೂ, ಶ್ರೀಹರಿಗೆ ಯಾರೊಬ್ಬನೂ ನಿಯಾಮಕನು, ಪ್ರೇರೇಪಿಸುವವನು ಇಲ್ಲ, ಎಂಬ ವ್ಯುತ್ಪತ್ತಿಯಿಂದ ನಿಯಾಮಕನಿಲ್ಲದಿರುವುದರಿಂದಲೂ ನೇಷ್ಟಾ=ಶ್ರೀಹರಿಯೇ. (ನವಿದ್ಯತೇ ಈಷ್ಟಾ=ಈಶಿತಾ, ಯಸ್ಯಾಸೌ ಯಾರಿಗೆ ನಿಯಾಮಕನಿಲ್ಲವೋ ಅವನು ನೇಷ್ಟಾ, ಎಂದು ವಿಗ್ರಹವು. ಈಷ್ಟೇನ ಕಶ್ಚಿತ್ ಅಸ್ಯ ಇವನಿಗೆ ಯಾರೊಬ್ಬರೂ ನಿಯಾಮಕನಿಲ್ಲ ಎಂದು ತಾತ್ಪರ್ಯವು.) (೩) (ಗ್ನಾ ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ.) ಗಮನ ಸ್ವಭಾವವುಳ್ಳವುಗಳಾದುದರಿಂದ ಗ್ನಾಃ ಎಂಬ ಪದದಿಂದ ನದಿಗಳು, ಹೇಳಲ್ಪಡುತ್ತವೆ. ಮತ್ತು ತತ್ವಜ್ಞಾನವುಳ್ಳವರನ್ನು ಉತ್ತಮಲೋಕಕ್ಕೆ ಒಯ್ಯುವುದರಿಂದಲೂ ಅಥವಾ ಸರ್ವಜ್ಞನಾದುದರಿಂದಲೂ, ಸರ್ವಪ್ರೇರಕನಾದುದರಿಂದಲೂ ಗ್ನಾಃ=ಶ್ರೀಹರಿಯು. ಅಥವಾ ಜ್ಞಾನಸ್ವರೂಪನಾದುದರಿಂದಲೂ ಆಯಾವ ಕಾರ್ಯಗಳಲ್ಲಿ ಪ್ರೇರೇಪಿಸುವವನಾದುದರಿಂದಲೂ ಗ್ನಾಃ=ಶ್ರೀಹರಿಯು. (ಶ್ರೀ ಭಗವಂತನಿಗೆ ಸ್ತ್ರೀರೂಪವಿದ್ದುದರಿಂದಲೂ ಬಹುರೂಪಗಳು ಇದ್ದುದರಿಂದಲೂ ಗ್ನಾಃ ಎಂದು ಸ್ತ್ರೀಲಿಂಗವೂ ಬಹುವಚನವೂ ಕೊಡುತ್ತದೆ.) (೪) (ಋತು ಶಬ್ದದಿಂದ ದೇವತೆಗಳನ್ನು ಇಟ್ಟುಕೊಳ್ಳುವುದಾದರೆ **ಮತ್ಸರಾಸಃ ತದೋಕಸಃ** ಎಂಬುವುದು ಅಯುಕ್ತವಾಗಬೇಕಾಗುವುದು. ಹೇಗೆಂದರೆ ಋತು ದೇವತೆಗಳಿಗೆ ಸೋಮವು ಸ್ಥಾನವು ಎಂಬುವುದು ಸರ್ವಥಾ ಕೂಡಲಾರದು, ಎಂದರೆ—) ಋತುಃ=ಋತು ಪಾತ್ರವು. (ಅಂದರೆ ಋತು ಶಬ್ದದಿಂದ ದೇವತೆಯು ಹೇಳಲ್ಪಡುತ್ತದೆ ಎಂಬುವುದು ಸತ್ಯವೇ. ಆದರೆ ಉಪಲಕ್ಷಣಯಾ ಋತು ಶಬ್ದದಿಂದ ಋತುದೇವತಾ ಪಾತ್ರವನ್ನು ಇಟ್ಟುಕೊಳ್ಳಬೇಕು.) ತಥಾ=ಋತು ಶಬ್ದದಿಂದ ಋತು ಪಾತ್ರವನ್ನು ಇಟ್ಟುಕೊಂಡರೆ, ಯಾವಕಾರಣದಿಂದ ಸೋಮಗಳು ಋತು ಪಾತ್ರದಲ್ಲಿರುತ್ತಾವೋ, ಆದಕಾರಣ ಸೋಮಗಳು ಋತು ಪಾತ್ರವೇ ಸ್ಥಾನವಾಗಿ ಉಳ್ಳವುಗಳು ಎಂದು ಹೇಳಿದ್ದು ಯುಕ್ತವೇ. (೫) (ನೇಷ್ಟೃ ಎಂಬ ಋತ್ವಿಜನಿಗೆ ಅಗ್ನಿಯು ದೇವತೆಯು ಎಂಬ ಅಭಿಪ್ರಾಯದಿಂದ **ನೇಷ್ಟಾಽಗ್ನಿಃ** ಎಂದದ್ದು. ಆದರಲ್ಲಿ ನೇಷ್ಟೃ ಎಂಬ ನಾಮವು ಬರಲು ಕಾರಣವೇನಂದರೆ) ಪತ್ನೀ ಶಾಲೆಯನ್ನು ಕುರಿತು ಯಜಮಾನನ ಪತ್ನಿಯನ್ನು ಕರೆದುಕೊಂಡು ಹೋಗುವ ಪ್ರಯುಕ್ತ ನೇಷ್ಟನು ನೇಷ್ಟೃ ಋತ್ವಿಜನು ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ. (೬) (ಋತು ಶಬ್ದಕ್ಕೆ ಮಾರ್ಗವೆಂದು ಅರ್ಥವು. ಲಕ್ಷಣಯಾ ಋತು ಶಬ್ದದಿಂದ ಋತುದೇವತೆಗಳನ್ನು ಇಟ್ಟುಕೊಳ್ಳಬೇಕು ಎಂದು ಹೇಳಿದೆ. ಈಗ ಋತು ಶಬ್ದವನ್ನು ದೇವತೆಗಳಲ್ಲಿಯೇ ನಿರ್ವಚನ ಮಾಡುತ್ತಾರೆ.) ಕುಸುಮೋದ್ಭವ (ಪುಷ್ಪಗಳ ಹುಟ್ಟುವಿಕೆ) ಮೊದಲಾದ ಋತು ಲಿಂಗಗಳನ್ನು ತಿಳಿಸಿಕೊಡುವುದರಿಂದ ಋತವಃ=ಆರು ಋತ್ವಭಿಮಾನಿ ದೇವತೆಗಳು ಎಂದು ಹೇಳಿಸಿಕೊಳ್ಳಲ್ಪಡುತ್ತಾರೆ. ಅಥವಾ ಋಚ್ಛಂತಿ ಜಾನಂತ್ಯನೇನ ಋತುದೇವೇನ ಕುಸುಮೋದ್ಭವಾದಿಕಂ ಸಃ ಋತುಃ ಎಂದು ವಿಗ್ರಹವು. ಜ್ಞಾಪಯಂತಿ ಎನ್ನುವುದು ತಾತ್ಪರ್ಯಾರ್ಥವು. ಅಥವಾ ಪೂರ್ವದಲ್ಲಿ ಋತು ಶಬ್ದವನ್ನು ಮಾರ್ಗ ಎಂಬ ಅರ್ಥದಲ್ಲಿ ನಿರ್ವಚನ ಮಾಡಿರುತ್ತಾರೆ. ಈಗಲಾದರೂ ಋತು

ದೇವತೆಗಳಲ್ಲಿ ನಿರ್ವಚನ ಮಾಡಿದ್ದು (೭) (ಮರುತಃ ಪಿಬತ ಎಂಬಲ್ಲಿ ಮಾರುತೇನ ಪಾತ್ರೇಣ ,ಎಂದನ್ನಬೇಕಿತ್ತು. ಪರಕೀಯ ಪಾತ್ರದಿಂದ ಪಾನವು ನಿಷಿದ್ಧವಾದುದರಿಂದ ಪೋತ್ರಾತ್=ಪೋತೃಪಾತ್ರದಿಂದ ಎಂದದ್ದು ಹೇಗೆಂದರೆ) ಮರುತ್‌ಗಳು ಸರ್ವಜಗತ್ತನ್ನು ಪವಿತ್ರೀಕರಿಸುವುದರಿಂದಲೇ ಪೋತಾರಃ ಎನಿಸುತ್ತಾರೆ. ಅವರು ಪೋತೃ ಎಂಬ ಋತ್ವಿಜನ ದೇವತೆಗಳು. ಪೋತೃನಾಮಕ ಋತ್ವಿಜನಿಗೆ ದೇವತೆಗಳಾದುದರಿಂದಲೇ ಮರುತ್‌ಗಳು ಪೋತೃಗಳೆನಿಸುತ್ತಾರೆ. ಪೋತೃಪಾತ್ರವೇ ಮರುತ್‌ಗಳ ಪಾತ್ರವು.(೮)ನೇಷ್ಟೃ ಎಂಬ ಋತ್ವಿಜನಿಗೆ ಶ್ರೀವಿಷ್ಣುವು ಇಂದ್ರನು ಅಗ್ನಿಯು ಅಥವಾ ತ್ವಷ್ಟೃ ಇವರು ದೇವತೆಗಳು. (ಏವಂಚ ಎಲೋ ಇಂದ್ರನೇ ಋತು ಮಾರ್ಗದಿಂದ ಬಂದು ಋತು ಪಾತ್ರದಿಂದ ಋತು ದೇವತೆಯಿಂದ ಕೂಡಿಕೊಂಡು ಸೋಮವನ್ನು ಕುಡಿ.) ॥ ೧ ॥ ೨ ॥ ೩ ॥

ಋ ॥ (೧೫೦) ಅಗ್ನೇ ದೇವಾಁ ಇಹಾ ವಹ ಸಾದಯಾ ಯೋನಿಷು ತ್ರಿಷು ।
ಪರಿ ಭೂಷ ಪಿಬ ಋತುನಾ ॥ ೪ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ದೇವಾನ್=ದೇವತೆಗಳನ್ನು, ಇಹ=ಈ ಯಜ್ಞದಲ್ಲಿ,ಆ ವಹ=ಹೊಂದಿಸಿಕೊಡು (ಬಂದವರನ್ನು) ತ್ರಿಷು ಯೋನಿಷು=ಉತ್ತರವೇದಿ, ಸದಃ ಪ್ರಾಗ್ವಂಶ ಎಂಬ ೩ ಸ್ಥಾನಗಳಲ್ಲಿ, ಸಾದಯ=ಕುಳ್ಳಿರಿಸು. ಪರಿಭೂಷ=ದೇವತೆಗಳನ್ನು ಕುಳ್ಳಿರಿಸುವುದರಿಂದ ನಮ್ಮ ಯಜ್ಞವನ್ನು ಅಲಂಕರಿಸು. ॥ ೪ ॥

ಭಾ ॥ ವೇದ್ಯುತ್ತರಾ ಸದಶ್ಚೈವ ಪ್ರಾಗ್ವಂಶೋ ಯೋನಯಃ ಸ್ಮೃತಾಃ। ಭೂಷ ಭೂಷಯ ನೋ ಯಜ್ಞಂ ॥ ೪ ॥

ಅ ॥ (ಆ ಯೋನಿಗಳು ಯಾವವು ಎಂದರೆ) ಉತ್ತರವೇದಿ, ಸದಃ,ಪ್ರಾಗ್ವಂಶ, ಎಂಬ ಮೂರು ಸ್ಥಾನಗಳೇ ಯೋನಿಗಳೆನಿಸುತ್ತವೆ. (ಏವ=ಪ್ರಾತಸ್ಸವನಾದಿ ಮೂರು ಸವನಗಳಲ್ಲ.) ನಮ್ಮ ಯಜ್ಞವನ್ನು ಭೂಷ=ಅಲಂಕರಿಸು. ॥ ೪ ॥

ಋ ॥ (೧೫೧) ಬ್ರಾಹ್ಮಣಾದಿಂದ್ರ ರಾಧಸಃ ಪಿಬಾ ಸೋಮಮೃತೂಁರನು ।
ತವೇದ್ಧಿ ಸಖ್ಯಮಸ್ತೃತಂ ॥ ೫ ॥

ಅ ॥ ಇಂದ್ರ=ಇಂದ್ರನೇ, (ನೀನು) ರಾಧಸಃ=ನಮ್ಮ ಇಷ್ಟಸಿದ್ಧಿಗಾಗಿ, ಋತೂನ್ಅನು=ಋತುದೇವತೆಗಳಿಂದ ಕೂಡಿಕೊಂಡು, ಬ್ರಾಹ್ಮಣಾತ್=(ಬ್ರಹ್ಮಾ=) ಬ್ರಾಹ್ಮಣಾಚ್ಛಂಸಿರೂಪ ಋತ್ವಿಗ್ವಿಶೇಷನಿಗೆ (ಬ್ರಾಹ್ಮಣಾಚ್ಛಂಸಿ ಎಂಬ ಋತ್ವಿಜನೂ ಬ್ರಹ್ಮಗಣದಲ್ಲಿ ಸೇರಿರುವುದರಿಂದ ಇವನಿಗೂ ಬ್ರಹ್ಮಾ ಎಂಬ ಹೆಸರು) ಸಂಬಂಧಿಯಾದ ಬ್ರಾಹ್ಮಣಾಚ್ಛಂಸಿ ಪಾತ್ರದಿಂದ, ಸೋಮಮ್ ಪಿಬ=ಸೋಮವನ್ನು ಕುಡಿ. ಹಿ=ಯಾವ ಕಾರಣದಿಂದ, ತವಇತ್=ನಿನ್ನದ್ದೇ ಆದ, ಸಖ್ಯಂ=ಮೈತ್ರ್ಯವು, ಅಸ್ತೃತಂ=ಭಿನ್ನವಾಗುವುದಿಲ್ಲವೋ,) (ಸಾರ್ವಕಾಲಿಕವೋ (ಆದಕಾರಣ,ನಮ್ಮ ಸಖಿಯಾದ ನೀನು ಸೋಮವನ್ನು ಕುಡಿ.) ॥ ೫ ॥

ಭಾ ॥ ಬ್ರಾಹ್ಮಣಾಚ್ಛಂಸಿಪಾತ್ರತಃ । ಪಿಬೇಂದ್ರ ನೋ ರಾಧಸೋಽರ್ಥೇ ತ್ವಮನು ತ್ವೃತು ದೇವತಾಃ । ಸ್ತೃತಂ ಭಿನ್ನಮಿತಿ ಪ್ರೋಕ್ತಂ ॥ ೫ ॥

ಅ || ಎಲೋ ಇಂದ್ರನೇ, ನಮ್ಮ ಇಷ್ಟಸಿದ್ಧಿಗಾಗಿ, ಋತು ದೇವತೆಗಳನ್ನು ಅನುಸರಿಸಿ, ನಿನ್ನನ್ನು (ಅಂದರೆ ಋತು ದೇವತೆಗಳಿಂದ ಕೂಡಿಕೊಂಡು ಬ್ರಾಹ್ಮಣಾಚ್ಛಂಸಿ ಪಾತ್ರದಿಂದ ಸೋಮವನ್ನು ಕುಡಿ) (ಋತು ದೇವತೆಗಳನ್ನು ಅನುಸರಿಸಿ. ಎಂದು ಇಲ್ಲಿ ಋತು ದೇವತೆಗಳಿಗೂ ಇಂದ್ರನಿಗೂ ಸಾಹಿತ್ಯ ಮಾತ್ರವು ವಿವಕ್ಷಿತವು. ಇಂದ್ರನಿಗೆ ಅಪ್ರಾಧಾನ್ಯವಲ್ಲ, ಎಂಬ ಅಭಿಪ್ರಾಯದಿಂದ ತ್ವಾಂ ಅನು ಋತು ದೇವತಾಃ ಎಂದು ವ್ಯತ್ಯಾಸವಾಗಿ ವ್ಯಾಖ್ಯಾತವಾಗಿದೆ. ಋತು ದೇವತೆಗಳಿಂದ ಕೂಡಿಕೊಂಡು ಎಂದು ತಾತ್ಪರ್ಯವು.) ಸ್ತೃತಂ ಎಂದರೆ ಛಿನ್ನವು (ನಷ್ಟವು) ಎಂದು ಹೇಳಲ್ಪಟ್ಟಿದೆ. (ಅಸ್ತೃತಂ=ಅಚ್ಛಿನ್ನವು.) (ನಿತ್ಯವು. ಸಾರ್ವಕಾಲಿಕವು.) || ೫ ||

ಋ || (೧೫೨) ಯುವಂ ದಕ್ಷಂ ಧೃತವ್ರತ ಮಿತ್ರಾವರುಣ ದೂಳಭಂ |

ಋತುನಾ ಯಜ್ಞಮಾಶಾಥೇ || ೬ || ೨೮ ||

ಅ || ಮಿತ್ರಾವರುಣಾ=ಮಿತ್ರಾವರುಣರೇ, ಧೃತವ್ರತಾ=ಧೃತಂವ್ರತಂ ಜಗದ್ರಕ್ಷಣಾದಿಕರ್ಮ ಯಾಭ್ಯಾಂ= ಯಾವ ಭಗವದ್ರೂಪಗಳಿಂದ ಜಗದ್ರಕ್ಷಣಾದಿರೂಪವಾದ ಕರ್ಮವು ಧರಿಸಲ್ಪಡುತ್ತದೋ ಎಂಬ ವ್ಯುತ್ಪತ್ತಿಯಿಂದ ಜಗದ್ರಕ್ಷಣಾದಿ ಕರ್ಮಗಳನ್ನು ಮಾಡುತ್ತಿರುವ, ಯುವಂ=ನೀವಿಬ್ಬರೇ, ಋತುನಾ=ಋತುಪಾತ್ರದಿಂದ, (ಸೋಮ ಪಾನ ಮಾಡಿ) (ಋತುದೇವತೆಗಳಿಂದ ಕೂಡಿಕೊಂಡು, ದೂಳಭಂ=ಹಂದಾಡಿಸಲಿಕ್ಕೆ ಅಶಕ್ಯನಾದ,(ತನ್ನ ಕರ್ಮಾ ಚರಣದಲ್ಲಿಯೇ ಆಸಕ್ತನಾದ) ದಕ್ಷಂ=ದಕ್ಷನೆನಿಸಿದ ಯಜಮಾನನನ್ನು, ಯಜ್ಞಂ ಚ=ಯಾಗವನ್ನು ಕೂಡ, ಆಶಾಥೇ=ನಿಯಮಿಸುತ್ತೀರಿ. (ಆದಕಾರಣ ಆತನದ್ದಾದ ಸೋಮಪಾನದಿಂದ ಪ್ರಸನ್ನರಾಗಿ ಪುನಃ ಆತನನ್ನು ಪ್ರವರ್ತಿಸುತ್ತೀರಿ.)

ವಿ || (1) ಧೃತವ್ರತ, ಮಿತ್ರಾವರುಣ, ಇತ್ಯಾದಿಗಳಲ್ಲಿ ಸಂಹಿತೆಯಲ್ಲಿ ಹ್ರಸ್ವತ್ವವು. ದೀರ್ಘಾಂತವಾಗಿ ಪದಚ್ಛೇದವು, ಅವರಿಗೆ ಐಕ್ಯವನ್ನು ತೋರಿಸುವುದಕ್ಕಾಗಿ, ಅದರಲ್ಲಿ ವಿಷ್ಣುರೂಪಗಳಿಗೆ ಸ್ವರೂಪೈಕ್ಯವು. ಮಿತ್ರಾ ವರುಣರಿಗಾದರೂ ಮತ್ಯೈಕ್ಯವು, ಎಂದು ತಿಳಿಯಬೇಕು. || ೬ ||

ಭಾ || ಅಸ್ತಭ್ಯಂ ದುರ್ದಭಂ ಸ್ಮೃತಂ | ದಕ್ಷಾಖ್ಯಂ ಯಜಮಾನಂ ಚಾಪೀಶಾಥೇ ಯಜ್ಞ ಮೇವ ಚ| ಸೋಮಂ ಪೀತ್ವರ್ತುಪಾತ್ರೇಣ ಸಹ ವಾ ತೇನ ಚರ್ತುನಾ|| ೬ || ೨೮ ||

ಅ || (ದೂಳಭಂ) ದುರ್ದಭವೆಂದರೆ ಹಂದಾಡಿಸಲಿಕ್ಕೆ ಅಶಕ್ಯನು, ಅಂದರೆ ತಮ್ಮ ಕರ್ಮದಲ್ಲಿಯೇ ಇರು ವವನು. ದಕ್ಷಾಖ್ಯ ಯಜಮಾನನನ್ನು, ಯಾಗವನ್ನು ಕೂಡ, ಋತುಪಾತ್ರದಿಂದ ಸೋಮವನ್ನು ಪಾನಮಾಡಿ ಅಥವಾ ಋತುದೇವತೆಯಿಂದ ಕೂಡಿಕೊಂಡು ನಿಯಮಿಸುತ್ತೀರಿ. (ಅಂದರೆ ಸೋಮಪಾನದಿಂದ ಪ್ರಸನ್ನರಾಗಿ ಪ್ರವರ್ತಿಸುತ್ತೀರಿ.

ವಿ || ಸೋಮಂ ಪೀತ್ವಾ ಎಂದು ಅಧ್ಯಾಹಾರ ಮಾಡಿ ಋತುನಾ ಎನ್ನುವುದಕ್ಕೆ ಯೋಜನಾ ಮಾಡಿದರು. (ಅಧ್ಯಾಹಾರ ಮಾಡದೇನೇ ವ್ಯಾಖ್ಯಾನ ಮಾಡುತ್ತಾರೆ.) ಋತುನಾ=ಋತುದೇವತೆಯಿಂದ ಕೂಡಿಕೊಂಡು ಎಂದು. ಋತುದೇವತೆಯೂ ಕೂಡ ಯಜಮಾನನಿಗೆ ಯಜ್ಞದಿಂದ ಅಭೀಷ್ಟ ಕೊಡಲು ಸಮರ್ಥವಾಗಿದೆ. || ೬ || ೨೮ ||

ಋ || (೧೫೩) ದ್ರವಿಣೋದಾ ದ್ರವಿಣಸೋ ಗ್ರಾವಹಸ್ತಾಸೊ ಅಧ್ವರೇ |

ಯಜ್ಞೇಷು ದೇವಮೀಳತೇ || ೭ ||

ಅ || (ಈ ೪ ಋಕ್ಕುಗಳಿಗೆ ದ್ರವಿಣೋದಾ ಎಂಬವನು ದೇವತೆಯು) ದ್ರವಿಣೋದಾಃ=(ದ್ರವಿಣೋಭ್ಯೋ ದದಾತಿ) ದ್ರವ್ಯವನ್ನು ಇಚ್ಛಿಸುವವರಿಗೆ ಕೊಡುವ ಹೋತನು, ದ್ರವಿಣಸಃ–ದ್ರವ್ಯವನ್ನು ಇಚ್ಛಿಸುವ ಹೋತೃಗಳೂ ಕೂಡ, ಅಧ್ವರೇ=ವಿಧಿಪ್ರಕಾರ ಅನುಷ್ಠಾನ ಮಾಡಲ್ಪಟ್ಟ ಯಜ್ಞೇಷು=ಯಾಗಗಳಲ್ಲಿ, ಗ್ರಾವಹಸ್ತಾಸಃ= ಸೋಮ ಸವನಕ್ಕಾಗಿ ಪಾಷಾಣವೇ ಕೈಯಲ್ಲಿ ಉಳ್ಳವರಾಗಿ, ದೇವಂ=ಶ್ರೀವಿಷ್ಣುವನ್ನೂ ಅಗ್ನಿಗಳಿಂದ ಕೂಡಿದ ಪ್ರಧಾನಾಗ್ನಿಯನ್ನೂ ಕೂಡ, ಈಳತೇ=(ಈಡಸ್ತುತೌ) ಸ್ತುತಿಸುತ್ತಾರೆ || ೭ ||

ಭಾ || (೧) ಹೋತಾಚ ಹೋತೃಕಾಶ್ಚೈವ ದ್ರವಿಣೋದಾ ದ್ರವೀಣಸಃ || (೨) ಅಗ್ನಿಶ್ಚೈವಾಗ್ನಯಸ್ತೇಷಾಂ ದೇವತಾ ವಿಷ್ಣುವೀಳತೇ || ೭ ||

ಅ || (೧) ದ್ರವಿಣೋದಾಃ=ದ್ರವ್ಯವನ್ನಿಚ್ಛಿಸುವವರಿಗೆ ಕೊಡುವ ಹೋತನು. ದ್ರವೀಣಸಃ=ದ್ರವ್ಯಾಭಿಲಾಷೆಯುಳ್ಳ ಹೋತೃಗಳು. (ಏವ ಶಬ್ದದಿಂದ ದ್ರವಿಣೋದಾಃ ಎಂಬ ಪ್ರಥಮಾಂತವನ್ನು ದ್ವಿತೀಯಾ ವಿಭಕ್ತಿಯಾಗಿ ವಿಪರಿಣಮಿಸಿಕೊಂಡು ಅಗ್ನಿಯನ್ನು ಎಂದು ವ್ಯಾಖ್ಯಾನ ಮಾಡಿದ್ದೂ ಅಯುಕ್ತವು.) (೨) (ಇಲ್ಲಿ ದ್ರವಿಣೋದಾಃ ಎನ್ನುವುದರಿಂದ ಹೋತನು ವಿವಕ್ಷಿತನಾದರೆ **ದ್ರವಿಣೋದಾ ದದಾತು ನಃ** ಇತ್ಯಾದಿಗಳು ಅಯುಕ್ತವಾಗ ಬೇಕಾಗುವುದು ಎಂದರೆ) ಯದ್ಯಪಿ ಇಲ್ಲಿ ಹೋತನೇ ದ್ರವಿಣೋದಾಃ ಎನಿಸುತ್ತಾನೆ. ಆದಾಗ್ಯೂ ಹೋತನಿಗೆ ದೇವತೆಯಾದುದರಿಂದ ಅಗ್ನಿಯೂ ದ್ರವಿಣೋದಾಃ ಎನಿಸುತ್ತಾನೆ. ಅಗ್ನಿ ಪುತ್ರರೂ ಕೂಡ ಆ ಮಂತ್ರಗಳಿಗೆ ದೇವತೆಗಳು. ಶ್ರೀ ವಿಷ್ಣುವನ್ನೂ. ಅಗ್ನಿ ಪುತ್ರರಿಂದಕೂಡಿದ ಪ್ರಧಾನಾಗ್ನಿಯನ್ನೂ ಸ್ತುತಿಸುತ್ತಾರೆ || ೭ ||

ಋ || (೧೫೪) ದ್ರವಿಣೋದಾ ದದಾತು ನೋ ವಸೂನಿ ಯಾನಿ ಶೃಣ್ವಿರೇ ।

ದೇವೇಷು ತಾ ವನಾಮಹೇ || ೮ ||

ಅ || ದ್ರವಿಣೋದಾಃ= ಹೋತೃದೇವತೆಯಾದ ಅಗ್ನಿಯೂ, ಯಾನಿ ವಸೂನಿ= ಯಾವ ದ್ರವ್ಯಗಳು, ಶೃಣ್ವಿರೇ=ಶ್ರುತಗಳಾಗಿವೆಯೋ,(ಪ್ರಸಿದ್ಧಗಳಾಗಿವೆಯೋ) ತಾಃ=ಅವುಗಳನ್ನು, ನಃ=ನಮಗೆ, ದದಾತು=ಕೊಡಲಿ. ತಾ=ಅವುಗಳನ್ನು, (ನಾವು) ದೇವೇಷು=ದೇವತೆಗಳ ನಿಮಿತ್ತವಾಗಿಯೇ, ವನಾಮಹೇ=(ವನಷಣ ಸಂಭಕ್ತೌ) ವಿಭಾಗಿಸುತ್ತೇವೆ. (ತಮ್ಮ ದೇಹ ಪೋಷಣಕ್ಕಾಗಿ ಅಲ್ಲ.) ಅಥವಾ ಅವುಗಳನ್ನು, (ನಾವು) ದೇವೇಷು=ದೇವತೆಗಳಿಗಾಗಿ, ವನಾಮಹೇ=ಕೊಡುತ್ತೇವೆ || ೮ ||

ಋ || (೧೫೫) ದ್ರವಿಣೋದಾಃ ಪಿಪೀಷತಿ ಜುಹೋತ ಪ್ರಚತಿಷ್ಠತ ।

ನೇಷ್ಟ್ರಾದೃತುಭಿರಿಷ್ಯತ || ೯ ||

ಅ || ದ್ರವಿಣೋದಾಃ=ಅಗ್ನಿಯು, ಪಿಪೀಷತಿ=(ಪೀಙ್‌ಪಾನೇ) ಪಾನಮಾಡಲು ಇಚ್ಛಿಸುತ್ತಾನೆ. (ಸೋಮಗಳು ಕೂಡ ಅವನಿಗಾಗಿ) ಪ್ರತಿಷ್ಠತ=ಇರುತ್ತವೆ. (ಆತನ ಉದ್ದೇಶದಿಂದಲೇ ಪ್ರತಿಷ್ಠಿತಗಳಾಗುತ್ತವೆ.) (ಆದಕಾರಣ ಅವುಗಳನ್ನು ಆತನಿಗಾಗಿ(ಜುಹೋತ=ಹೋಮಿಸಿರಿ. (ಮತ್ತು) ನೇಷ್ಟ್ರಾತ್= ಪತ್ನಿಯನ್ನು ಕರೆದುಕೊಂಡು ಹೋಗುವುದರಿಂದ ನೇಷ್ಟೃ ಎಂದು ಹೆಸರುಳ್ಳ ಋತ್ವಿಜನ ಸಂಬಂಧಿಯಾದ ನೇಷ್ಟೃ ಪಾತ್ರದಿಂದ, ಋತುಭಿಃ=ಋತು ಪಾತ್ರಗಳಿಂದ, ಅಥವಾ ಋತು ದೇವತೆಗಳಿಂದ ಕೂಡಿಕೊಂಡು. (ಈ ಅಗ್ನಿಯನ್ನು) ಇಷ್ಯತ=(ಇಷು ಇಚ್ಛಾಯಾಂ) ಪೂಜ್ಯನನ್ನಾಗಿ ಇಚ್ಛಿಸಿದರು || ೯ ||

ಭಾ ॥ ಪಾತುಮಿಚ್ಛತಿ ಸೋಮಂ ಸ ಸೋಮಾಸ್ತಸ್ಮೈ ಪ್ರೇಷಿತಾಃ । ಋತುಪಾತ್ರೈರ್ದೇವತಾಭಿಃ ಸಹೈವೈನಮಭೀಪ್ಸತ ॥ ೯ ॥

ಅ ॥ ಅಗ್ನಿಯು ಸೋಮವನ್ನು ಪಾನಮಾಡಲಿಕ್ಕೆ ಇಚ್ಛಿಸುತ್ತಾನೆ. ಸೋಮಗಳು ಅಗ್ನಿಯ ಉದ್ದೇಶದಿಂದಲೇ ಸ್ಥಾಪಿತಗಳಾಗುತ್ತವೆ. ನೇಷ್ಟೃ ಪಾತ್ರದಿಂದಲೂ, ಋತುಪಾತ್ರಗಳಿಂದಲೂ, ಅಥವಾ ಋತು ದೇವತೆಗಳಿಂದ ಕೂಡಿಕೊಂಡೇ ಈ ಅಗ್ನಿಯನ್ನು ಪೂಜ್ಯನನ್ನಾಗಿ ಇಚ್ಛಿಸುವಿರಿ ॥ ೯ ॥

ಋ ॥ (೧೫೬) ಯತ್ತ್ವಾ ತುರೀಯಮೃತುಭಿರ್ದ್ರವಿಣೋದೋ ಯಜಾಮಹೇ । ಅಧ ಸ್ಮಾ ನೋ ದದಿರ್ಭವ ॥ ೧೦ ॥

ಅ ॥ ದ್ರವಿಣೋದಃ=ಅಗ್ನಿಯೇ, ಋತುಭಿಃ=ಋತುಪಾತ್ರಗಳಿಂದ, ಅಥವಾ ಋತುದೇವತೆಗಳಿಂದ, ಕೂಡಿಕೊಂಡು ತುರೀಯಂ=ನಾಲ್ಕು ಆವರ್ತಿಯೂ, ಯತ್=ಯಾವಕಾರಣದಿಂದ, ತ್ವಾ=ನಿನ್ನನ್ನು ಯಜಾಮಹೇ=ಪೂಜಿಸುತ್ತೇವೋ, ಅಧ=ಆ ಕಾರಣದಿಂದ, ನಃ=ನಮಗಾಗಿ, ದದಿಃ=(ದದದಾನೇ) ಕೊಡುವವನು, ಭವ=ಆಗು. ಸ್ಮ=ಪ್ರಸಿದ್ಧ ॥ ೧೦ ॥

ಭಾ ॥ ಚತುರ್ಥವಾರಮಪಿ ಯತ್ತ್ವಾಂ ಯಜಾಮಹೇ [illegible] ನೋ ದದಿರ್ಭವ ॥ ೧೦ ॥

ಅ ॥ ನಾಲ್ಕು ಆವರ್ತಿಯೂ ಯಾವಕಾರಣದಿಂದ ನಿನ್ನನ್ನು ಪೂಜಿಸುತ್ತೇವೋ, ಆದಕಾರಣ ಅಭೀಷ್ಟವನ್ನು ಕೊಡುವವನಾಗು.

ವಿ ॥ ತುರೀಯಂ ಎನ್ನುವುದಕ್ಕೆ ನಾಲ್ಕಾವರ್ತಿ ಎಂಬ ವ್ಯಾಖ್ಯಾನವು ಹೇಗೆಂದರೆ—ಯಾವ ಋಕ್ಕಿನಲ್ಲಿ ದ್ರವಿಣೋದಾ ಎಂಬವಳು ದೇವತೆಯೋ ಅಂತಹ ಋಕ್ಕು ದ್ರಾವಿಣೋದಸೀ. ದೇವ ಪೂಜಾರ್ಥವಾಗಿ ಆ ೪ ಋಕ್ಕುಗಳಲ್ಲಿಯೂ ದ್ರವಿಣೋದಸ್ ದೇವತೆಯ ಸ್ತುತಿರೂಪವಾದ ಪೂಜೆಯು ಇದೆ. ಅದರಲ್ಲಿ ಈ ಋಕ್ಕು ೪ ನೇದ್ದು. ಆದಕಾರಣ ಚತುರ್ಥವಾರಂ ಎಂದದ್ದು. ॥ ೧೦ ॥

ಋ ॥ (೧೫೭) ಅಶ್ವಿನಾ ಪಿಬತಂ ಮಧು ದೀದ್ಯಗ್ನೀ ಶುಚಿವ್ರತಾ । ಋತುನಾ ಯಜ್ಞವಾಹಸಾ ॥ ೧೧ ॥

ಅ ॥ (ಇದಕ್ಕೆ ಅಶ್ವಿನೀ ದೇವತೆಗಳೇ ದೇವತೆಗಳು.) ಅಶ್ವಿನಾ=ಅಶ್ವಿನೀ ದೇವತೆಗಳಿರಾ, ದೀದ್ಯಗ್ನೀ=(ದೀಪೀ ದೀಪ್ತೌ) ಅತಿಶಯವಾಗಿ ಪ್ರಕಾಶಮಾನವಾದ ಅಗ್ನಿಗೆ ಸದೃಶರಾದ, ಶುಚಿವ್ರತಾ=ಪವಿತ್ರವಾದ ಜಗತ್ಸರ್ಜನಾದಿರೂಪ ವ್ಯಾಪಾರವುಳ್ಳ, ಯಜ್ಞವಾಹಸಾ. ಯಜ್ಞಗಳಿಗೆ ಪ್ರವರ್ತಕರಾದ, (ನೀವಿಬ್ಬರು) ಋತುನಾ=ಋತುಪಾತ್ರದಿಂದ ಅಥವಾ ಋತುದೇವತೆಗಳಿಂದ ಕೂಡಿಕೊಂಡು ಮಧು=ಸೋಮವನ್ನು, ಪಿಬತಂ=ಕುಡಿಯಿರಿ ॥ ೧೧ ॥

ಭಾ ॥ ದೀದ್ಯಗ್ನೀ ಇತಿ ದೀಪ್ತಾಗ್ನೀ ॥ ೧೧ ॥

ಅ ॥ ದೀದ್ಯಗ್ನೀ ಅಂದರೆ ದೀಪ್ತವಾದ ಅಗ್ನಿವುಳ್ಳ ಅಂದರೆ ಅತಿಶಯವಾಗಿ ಪ್ರಕಾಶಮಾನವಾದ ಅಗ್ನಿಗೆ ಸದೃಶರು. ॥ ೧೧ ॥

ಋ ॥ (೧೫೮) ಗಾರ್ಹ॑ಪತ್ಯೇನ ಸಂತ್ಯ ಋತುನಾ॑ ಯಜ್ಞ॒ನೀ॑ರಸಿ ।

ದೇ॒ವಾನ್ ದೇ॑ವಯ॒ತೇ ಯ॑ಜ ॥ ೧೨ ॥ ೨೯ ॥ ೧೫ ॥

ಅ ॥ (ವಿಷ್ಣುವು ಅಗ್ನಿಯಾಗಲೀ ದೇವತೆಗಳು.) ಸಂತ್ಯ = ವ್ಯಾಪ್ತತ್ವರೂಪ ಸಂತತತ್ವದಿಂದ ಅಂದರೆ ಸರ್ವತ್ರ ವ್ಯಾಪ್ತನಾದುದರಿಂದ ಸಂತ್ಯ ಎನಿಸಿಕೊಂಡ ಶ್ರೀ ವಿಷ್ಣುವೇ, ಗಾರ್ಹಪತ್ಯಾಗ್ನಿಯು ನಿತ್ಯದಲ್ಲಿಯೂ ಮನೆಯಲ್ಲಿದ್ದುದರಿಂದ ಸಂತ್ಯ ಎನಿಸಿಕೊಂಡ ಅಗ್ನಿಯೇ, (ಯಾವ ನೀನು) ಗಾರ್ಹಪತ್ಯೇನ=ಗಾರ್ಹಪತ್ಯ ಪಾತ್ರದಿಂದಲೂ, ಋತುನಾ=ಋತು ಪಾತ್ರದಿಂದಲೂ, ಅಥವಾ ಋತು ದೇವತೆಯಿಂದ ಕೂಡಿಕೊಂಡು,(ಸೋಮವನ್ನು ಪಾನ ಮಾಡಿ) ಯಜ್ಞನೀಃ=ಯಜ್ಞಗಳಿಗೆ ಪ್ರವರ್ತಕನು, ಅಸಿ=ಆಗಿರುತ್ತಿ. (ಅಂತಹ ನೀನು) ದೇವಯತೇ=ಯಜಮಾನನ ಪ್ರಯೋಜನಕ್ಕಾಗಿ, ದೇವಾನ್=ದೇವತೆಗಳನ್ನು ಯಜ=ಪೂಜಿಸು. ॥ ೧೨ ॥ ೨೯ ॥ ೧೫ ॥

ಭಾ ॥ (೧) ಸಂತ್ಯೋಽಗ್ನಿಸ್ಸಂತತತ್ವತಃ । (೨) ವಿಷ್ಣುರ್ವರ್ತ್ವರ್ಧಿಪೋ ವಿಷ್ಣುಃ ಕೇಶವಾದಿ ಸ್ವರೂಪತಃ । (೩) ಗ್ರಹಾನ್ ಸೋಮಸ್ಯ ಮಿಮತ ಇತಿ ತಸ್ಯೈವ ಕಥ್ಯತೇ । (೪) ಗಾರ್ಹಪತ್ಯೇನ ಪಾತ್ರೇಣ ಯಜಮಾನಸ್ತು ದೇವಯನ್ । ದೇವಾನ್ಯಾತೀತಿ ॥ ೧೨ ॥ ೨೯ ॥ ೧೫ ॥

ಅ ॥ (೧) (ಸಂಪೂರ್ವಾತ್ ತನು ವಿಸ್ತಾರೇ ಕರಣೇಚ) ಗಾರ್ಹಪತ್ಯಾಗ್ನಿಯು ನಿತ್ಯದಲ್ಲಿಯೂ ಮನೆಯಲ್ಲಿದ್ದುದರಿಂದ ಸಂತ್ಯಃ=ಅಗ್ನಿಯು. ಅಥವಾ ಶ್ರೀ ವಿಷ್ಣುವು ಸರ್ವತ್ರವ್ಯಾಪ್ತನಾದುದರಿಂದ ಸಂತ್ಯಃ=ಶ್ರೀ ವಿಷ್ಣುವು. (೨) (ಇಲ್ಲಿಯೂ ಹಿಂದೆಯೂ ಋತು ಶಬ್ದದಿಂದ ಯಾವ ದೇವತೆಯನ್ನು ಇಟ್ಟುಕೊಳ್ಳಬೇಕೆಂದರೆ) ಕೇಶವಾದಿ ಸ್ವರೂಪದಿಂದ ಶ್ರೀ ವಿಷ್ಣುವು ೬ ಋತುಗಳಿಗೆ ಅಧಿಪತಿಯು. (ಮುಖ್ಯ ದೇವತೆಯು.) (ಧಾತೃ ಮೊದಲಾದ ೧೨ ಆದಿತ್ಯರು ಅವಾಂತರ ದೇವತೆಗಳು.) (ಒಂದೊಂದು ಋತುವಿಗೆ ಎರಡೆರಡು ಮಾಸಗಳಾಗಿರುವುದರಿಂದ ಎರಡೆರಡು ಕೇಶವಾದಿ ಭಗವದ್ರೂಪಗಳು ಒಂದೊಂದು ಋತುವಿಗೆ ಮುಖ್ಯ ದೇವತೆಯು.) (೩) (ಅದು ಹೇಗೆಂದರೆ) **ಸುಪರ್ಣಂ ವಿಪ್ರಾಃ ಕವಯೋ ವಚೋಭಿರೇಕಂ ಸಂತಂ ಬಹುಧಾ ಕಲ್ಪಯಂತಿ । ಛಂದಾಂಸಿ ಚ ದಧತೋ ಅಧ್ವರೇಷು ಗ್ರಹಾಂತ್ಸೋಮಸ್ಯ ಮಿಮತೇ ದ್ವಾದಶ ॥** ಎಂಬ ಶ್ರುತಿಯಲ್ಲಿ ಆ ಶ್ರೀ ವಿಷ್ಣುವಿಗೇನೇ ೬ ಋತುಗಳ ಆಧಿಪತ್ಯವು (ಮುಖ್ಯ ದೇವತಾತ್ವವು) ಹೇಳಲ್ಪಡುತ್ತದೆ. (ಹೇಗೆಂದರೆ ಕವಯಃ ವಿಪ್ರಾಃ = ಜ್ಞಾನಿಗಳಾದ ಬ್ರಾಹ್ಮಣರು, ಸುಪರ್ಣಂ = ಚೆನ್ನಾಗಿ ಪರಮಾನಂದಸ್ವರೂಪನಾದ, ಶ್ರೀ ವಿಷ್ಣುವನ್ನು, ಏಕಂ ಸಂತಂ=ಒಬ್ಬನನ್ನೇ, ವಚೋಭಿಃ=ಋತು ಶಬ್ದಗಳಿಂದಲೇ, (ಸ್ವರೂಪದಿಂದ ಅಲ್ಲ.) ಬಹುಧಾ ಋತುಗಳಿಗೆ ಅಧಿಪತಿಯಾಗಿ, ಕೇಶವಾದಿ ೧೨ ಭಗವದ್ರೂಪಗಳಿಂದ ಇರತಕ್ಕವನನ್ನಾಗಿ, ಕಲ್ಪಯಂತಿ= ಧ್ಯಾನಿಸುತ್ತಾರೆ. ಮತ್ತು ದ್ವಾದಶ=ಆ ೧೨ ರೂಪಗಳಿಂದ ಇರತಕ್ಕ ಭಗವಂತನನ್ನು ಅಧ್ವರೇಷು=ಪ್ರತಿಯಜ್ಞಗಳಲ್ಲಿ, ಛಂದಾಂಸಿ=ಮಂತ್ರಗಳನ್ನು ದಧತಃ=ಧರಿಸಿರುವ ಋತ್ವಿಜರು, ಸೋಮಸ್ಯ ಗ್ರಹಾನ್=ಸೋಮದ ಪಾತ್ರಗಳನ್ನು, ಮಿಮತೇ=ನಿರ್ಮಿಸುತ್ತಾರೆ. ಎಂದು ಶ್ರುತಿಯಲ್ಲಿ ಶ್ರೀ ವಿಷ್ಣುವೇ ಋತುಗಳಿಗೆ ಮುಖ್ಯ ದೇವತೆಯೆಂದು ಹೇಳಲ್ಪಡುತ್ತಾನೆ.) (೪) (ಗಾರ್ಹಪತ್ಯ, ದೇವಯತ್ ಎಂಬ ಶಬ್ದಗಳಿಗೆ ವ್ಯಾಖ್ಯಾನ ಮಾಡುತ್ತಾರೆ.) ಗಾರ್ಹಪತ್ಯೇನ = ಗಾರ್ಹಪತ್ಯ ಪಾತ್ರದಿಂದ. ದೇವಾನ್ ಏತಿ=ಎಂಬ ವ್ಯುತ್ಪತ್ತಿಯಿಂದ ದೇವಯನ್=ಯಜ

ಮಾನನು. ಅಥವಾ ದೇವಾನ್ ಯಾತೀತಿ=ದೇವತೆಗಳನ್ನು ಹೊಂದುವುದರಿಂದ ದೇವಯನ್=ಯಜಮಾನನು.
(ಇದು ಅರ್ಥ ನಿರ್ದೇಶವು.) ‖ ೧೨ ‖ ೨೯ ‖ ೧೫ ‖

ಅವ ‖ ೯ ಋಕ್ಕು. ೨ ವರ್ಗ, ಐಂದ್ರ ಸೂಕ್ತ. ಗಾಯತ್ರೀ ಛಂದಸ್ಸು.

ಋ ‖ (೧೫೯)ಆ ತ್ವಾ ವಹಂತು ಹರಯೋ ವೃಷಣಂ ಸೋಮಪೀತಯೇ ।
ಇಂದ್ರ ತ್ವಾ ಸೂರಚಕ್ಷಸಃ ‖ ೧ ‖

ಅ ‖ ಇಂದ್ರ=ಇಂದ್ರನೇ, ವೃಷಣಂ=ಅಭೀಷ್ಟವನ್ನು ಸುರಿಸುವ, ತ್ವಾ=ನಿನ್ನನ್ನು,ಸೋಮ ಪೀತಯೇ=ಸೋಮಪಾನ ಮಾಡುವುದಕ್ಕಾಗಿ, ಸೂರಚಕ್ಷಸಃ=ಸೂರಾಣಿ=ಸುಷ್ಠು ಊರಾಣಿ=ಚೆನ್ನಾಗಿ ವಿಷಯಗಳನ್ನು ವಿಷಯೀಕರಿಸುವ,ಚಕ್ಷಾಂಸಿ=ಚಕ್ಷುಸ್ಸುಗಳು,ಯೇಷಾಂ ತೇ=ಯಾರಿಗೆ ಇವೆಯೋ, ಅಂತಹ, ತ್ವಾ= ನಿನ್ನ, ಹರಯಃ=ಕುದುರೆಗಳು, ಆ ವಹಂತು=ಹೊರಲಿ- ‖ ೧ ‖

ಭಾ ‖ ಸುಷ್ಠೂರೀಕುರ್ವಂತಿ ವಿಷಯಾನ್ಯತಃ । ಚಕ್ಷೂಂಷೀಂದ್ರಸ್ಯ ಹರಯಸ್ತೇಸೋಕ್ತಾ ಸೂರಚಕ್ಷಸಃ ‖ ೧ ‖

ಅ ‖ (ಸುಷ್ಠು ಊರೀಕುರ್ವಂತಿ=ಗೃಹ್ಣಂತಿ ಊರಾಣಿ=ವಿಷಯಾನ್, ಎಂಬ ವ್ಯುತ್ಪತ್ತಿಯಿಂದ ಸೂರಾಣಿ. ಸೂರಾಣಿ ಚಕ್ಷಾಂಸಿ ಚಕ್ಷೂಂಷಿ ಯೇಷಾಂತೇ ಸೂರ ಚಕ್ಷಸಃ=ಚೆನ್ನಾಗಿ ವಸ್ತುಗಳನ್ನು ವಿಷಯೀಕರಿಸುವ ಕಣ್ಣುಗಳುಳ್ಳವುಗಳು.) ಯಾವ ಕಾರಣದಿಂದ ಇಂದ್ರನ ಕುದುರೆಗಳಿಗೆ ಚೆನ್ನಾಗಿ ಸಮಸ್ತ ವಿಷಯಗಳನ್ನು ವಿಷಯೀಕರಿಸುವ ಕಣ್ಣುಗಳು ಇವೆಯೋ, ಆದಕಾರಣ ಇಂದ್ರನ ಕುದುರೆಗಳು ಸೂರಚಕ್ಷಸಃ ಎಂದು ಹೇಳಲ್ಪಡುತ್ತವೆ. ‖ ೧ ‖

ಋ ‖ (೧೬೦) ಇಮಾ ಧಾನಾ ಘೃತಸ್ನುವೋ ಹರೀ ಇಹೋಪ ವಕ್ಷತಃ ।
ಇಂದ್ರಂ ಸುಖತಮೇ ರಥೇ ‖ ೨ ‖

ಅ ‖ ಹರೀ=ಇಂದ್ರ ಸಂಬಂಧಿ ಕುದುರೆಗಳೇ, (ನಿಮಗಾಗಿ) ಇಮಾ ಧಾನಾಃ=ಈ ಪ್ರಸಿದ್ಧ ಚಣಕಾದಿ ಧಾನ್ಯಗಳು, ಘೃತಸ್ನುವಃ=(ಷ್ಣು ಪ್ರಸ್ರವಣೇ) ಘೃತೇನಸ್ನುತಾಃ=ಘೃತದಿಂದ ಆರ್ದ್ರಗಳಾಗಿವೆ (ಆದಕಾರಣ ಇಂದ್ರಂ=ಇಂದ್ರನನ್ನು, ಸುಖತಮೇ ರಥೇ= ಅತಿ ಸುಖವುಳ್ಳ ರಥದಲ್ಲಿರತಕ್ಕವನನ್ನಾಗಿ ಅಥವಾ ಅಂತಹ ರಥದಿಂದ, ಇಹ=ಈ ಯಜ್ಞದಲ್ಲಿ, ಉಪವಕ್ಷತಂ=ಹೊತ್ತುಕೊಂಡು ಬನ್ನಿರಿ. (ಅಧ್ಯಾತ್ಮದಲ್ಲಿ) ಹರೀ=ಮನೋಬುದ್ಧಿಗಳೇ, (ಇಂದ್ರನ ಉದ್ದೇಶ್ಯಗಳಾದ)ಘೃತಸ್ನುವಃ=ಭಕ್ತಿಯುಕ್ತಗಳಾದ, ಇಮಾಃ ಧಾನಾಃ=ಈ ಬುದ್ಧಿವೃತ್ತಿ ವಿಶೇಷಗಳು ಇವೆ. (ಆದಕಾರಣ) ಇಹಸುಖತಮೇ ರಥೇ=ಈ ಸುಖಮಯವಾದ ಶರೀರದಲ್ಲಿ, ಇಂದ್ರಂ=ಇಂದ್ರನನ್ನು ಉಪವಕ್ಷತಃ=(ವಹಪ್ರಾಪಣೇ) ಸನ್ನಿಹಿತನನ್ನಾಗಿ ಮಾಡಿರಿ. (ಭೋಜನ ಮಾಡುವವರಿಗೆ ಘೃತದಲ್ಲಿ ಸ್ನೇಹವು. ಭಜನಾದಿಗಳನ್ನು ಮಾಡುವವನಿಗೆ ಭಕ್ತಿಯಲ್ಲಿ ಸ್ನೇಹವು. ‖ ೨ ‖

ಭಾ ‖ ಭಕ್ತಿಸ್ನುತಾನಿ ಧಾನಾನಿ ಬುದ್ಧೇರ್ಧಾನಾನಿ ಇತಿ ಹ್ಯಪಿ ‖ ೨ ‖

ಅ ॥ (ಅಧ್ಯಾತ್ಮಾರ್ಥದಲ್ಲಿ) (ಮಾಹಾತ್ಮ್ಯಜ್ಞಾನ ಪೂರ್ವಸ್ತು ಸುದೃಢಃ ಸರ್ವತೋಽಧಿಕಃ । ಸ್ನೇಹೋ ಭಕ್ತಿರಿತಿ ಪ್ರೋಕ್ತಃ ಎಂದು ಹೇಳಿದುದರಿಂದ ಭಕ್ತಿಯು ಸ್ನೇಹ ಎನಿಸುತ್ತದೆ. ಘೃತ ತೈಲಾದಿಗಳಿಗೆ ಚಿಕ್ಕಣತಾ ರೂಪಗುಣ ಸಂಬಂಧದಿಂದಲೂ ರೂಢಿಯಿಂದಲೂ ಸ್ನೇಹ ಶಬ್ದವಾಚ್ಯತ್ವವು. ಆದಕಾರಣ ಘೃತ ಶಬ್ದವು ಭಕ್ತಿಯಲ್ಲಿ ಗೌಣವು.) ಭಕ್ತಿಯಿಂದ ಆರ್ದ್ರಗಳಾದ ಧಾನ್ಯಗಳೆಂದರೆ ಬುದ್ಧಿಯ ವೃತ್ತಿ ವಿಶೇಷಗಳು. ವಿಜ್ಞಾನ ವೈರಾಗ್ಯ ಶ್ರದ್ಧಾಧೃತಿ ಮೊದಲಾದವುಗಳು. ಬಾಹ್ಯಾರ್ಥದಲ್ಲಿ ಧಾನಾ ಶಬ್ದದಿಂದ ಪ್ರಸಿದ್ಧ ಚಣಕ (ಕಡಲೆ) ಮೊದಲಾದವುಗಳು. ॥ ೨ ॥

ಋ ॥ (೧೬೧) ಇಂದ್ರಂ ಪ್ರಾತರ್ಹವಾಮಹ ಇಂದ್ರಂ ಪ್ರಯತ್ಯಧ್ವರೇ ।

ಇಂದ್ರಂ ಸೋಮಸ್ಯ ಪೀತಯೇ ॥ ೩ ॥

ಅ ॥ ಪ್ರಾತಃ=ಪ್ರಾತಸ್ಸವನದಲ್ಲಿ, ಇಂದ್ರಂ=ಇಂದ್ರನನ್ನು ಹವಾಮಹೇ=(ನಾವು) ಕರೆಯುತ್ತೇವೆ. (ಹೋಮಿಸುತ್ತೇವೆ.) ಅಧ್ವರೇ=ಯಾಗವು, ಪ್ರಯತಿ=ಪ್ರವರ್ತಿಸುತ್ತಿರಲು, (ಮಾಧ್ಯಂ ದಿನಸವನದಲ್ಲಿ) ಇಂದ್ರಂ= ಇಂದ್ರನನ್ನು ಹವಾಮಹೇ=ಕರೆಯುತ್ತೇವೆ. (ಹೋಮಿಸುತ್ತೇವೆ.) ಸೋಮಸ್ಯ ಪೀತಯೇ-(ತೃತೀಯ ಸವನದಲ್ಲಿಯೂ) ಸೋಮಪಾನಾರ್ಥವಾಗಿ, ಇಂದ್ರಂ=ಇಂದ್ರನನ್ನು ಹವಾಮಹೇ=ಕರೆಯುತ್ತೇವೆ (ಹೋಮಿಸುತ್ತೇವೆ) ॥ ೩ ॥

ಭಾ ॥ (೧) ಪ್ರಾತರಿತ್ಯಾದಿವಾಕ್ಯೇನ ಸವನತ್ರಯಮೀರಿತಂ । (೨) ಸಮಾಪ್ತತ್ವಾತ್ಸೋಮಪೀತಿಸ್ತೃತೀಯಂ ಸವನಂ ಸ್ಮೃತಂ । ಸದಾ ॥ ೩ ॥

ಅ ॥ (೧) (ಋಕ್ಕಿನ ತಾತ್ಪರ್ಯವನ್ನು ಹೇಳುತ್ತಾರೆ.) ಇಂದ್ರಂ ಪ್ರಾತಃ ಇತ್ಯಾದಿ ವಾಕ್ಯದಿಂದ ಪ್ರಾತಸ್ಸವನ, ಮಾಧ್ಯಂಸವನ, ಸಾಯಂಸವನ ಎಂದು ೩ ಸವನಗಳು ಹೇಳಲ್ಪಡುತ್ತವೆ. (೨) ಸೋಮಪಾನವು ಪ್ರಾತಸ್ಸವನ, ಮಾಧ್ಯಂದಿನಸವನಗಳಲ್ಲಿಯೂ ಇದ್ದ ಪ್ರಯುಕ್ತ ಸೋಮಪೀತಿ ಶಬ್ದದಿಂದ ತೃತೀಯ ಸವನವು ಹೇಳಲ್ಪಡುವುದು ಹೇಗೆಂದರೆ) ಸೋಮಪಾನವು ಅನ್ಯತ್ರ ಇದ್ದರೂ ತೃತೀಯ ಸವನಾನಂತರದಲ್ಲಿ ಸೋಮಪಾನವಿಲ್ಲದಿರುವುದರಿಂದ ತೃತೀಯ ಸವನದಲ್ಲಿ ಸಮಾಪ್ತವಾಗುವ ಪ್ರಯುಕ್ತ (ಪೂರ್ಣವಾಗುವ ಪ್ರಯುಕ್ತ) (ಅಸಾಧಾರಣ್ಯೇನ ವ್ಯಪದೇಶಾ ಭವಂತಿ ಎಂಬ ವಿವಕ್ಷೆಯಿಂದ) ಸೋಮಪೀತಿ ಶಬ್ದದಿಂದ ತೃತೀಯ ಸವನವು ಹೇಳಲ್ಪಡುತ್ತದೆ. ಹೀಗೆ ಸದಾ ಆ ಇಂದ್ರನನ್ನು ಹೋಮಿಸುತ್ತೇವೆ. (ಹೀಗೆ ಸದಾ ಎಂದು ಅರ್ಥವನ್ನು ಅಂಗೀಕರಿಸದಿದ್ದರೆ ಪುನಃ ಇಂದ್ರಂ ಎಂಬುವುದು ವ್ಯರ್ಥವಾಗಬೇಕಾಗುವುದು.) (ಹಾಗಾದರೆ ೩ನೇ ಇಂದ್ರಶಬ್ದವು ಇದಿ ಪರಮೈಶ್ವರ್ಯೇ ಎಂಬ ಧಾತು ನಿಷ್ಪನ್ನವಾಗಿ ಯೌಗಿಕವಾದುದರಿಂದ ವಿಶೇಷಣವು. ಪೂರ್ವ ಪಾದದಲ್ಲಿದ್ದ ಇಂದ್ರ ಶಬ್ದವು ರೂಢವಾಗಿರುವುದರಿಂದ ವಿಶೇಷ್ಯವು. ಆದಕಾರಣ ವೈಯರ್ಥ್ಯವಿಲ್ಲವೆಂದರೆ— ಈ ಋಕ್ಕಿನಲ್ಲಿ ೩ ಇಂದ್ರ ಶಬ್ದಗಳಿವೆ. ೨ನೇ ಇಂದ್ರಶಬ್ದಕ್ಕೂ ಯೌಗಿಕತ್ವವಿದ್ದುದರಿಂದ ವಿಶೇಷಣತ್ವವು ಕೂಡುವ ಪ್ರಯುಕ್ತ ೩ನೇ ಇಂದ್ರ ಶಬ್ದವು ವ್ಯರ್ಥವಾಗುವುದರಿಂದ ವಿಶೇಷಣತ್ವವು ಕೂಡಲಾರದು. ಅಂತೂ ಎರಡೇ ಇಂದ್ರ ಶಬ್ದಗಳು ಇದ್ದಲ್ಲಿ ೧ಕ್ಕೆ ಯೌಗಿಕತ್ವ ೧ಕ್ಕೆ ರೂಢತ್ವವನ್ನು ಅಂಗೀಕರಿಸಲಿಕ್ಕೆ ಬಂದರೂ ಇಲ್ಲಿ ೩ನೇ ಇಂದ್ರಶಬ್ದವಿದ್ದ ಪ್ರಯುಕ್ತ ವೈಯರ್ಥ್ಯವೇ ಬರುವುದರಿಂದ ಹಾಗೆ ಆಶ್ರಯಿಸುವುದು ಯುಕ್ತವಲ್ಲ.) ॥ ೩ ॥

ಋ ॥ (೧೬೨) ಉಪ ನಃ ಸುತಮಾಗಹಿ ಹರಿಭಿರಿಂದ್ರ ಕೇಶಿಭಿಃ ।

ಸುತೇ ಹಿ ತ್ವಾ ಹವಾಮಹೇ ॥ ೪ ॥

ಅ || ಇಂದ್ರ=ಇಂದ್ರನೇ ಹಿ=ಯಾವಕಾರಣದಿಂದ, ತ್ವಾ=ನಿನ್ನನ್ನು, ಸುತೇ=ಸೋಮವು ಹಿಂಡಲ್ಪಡುತ್ತಿರಲು, ಹವಾಮಹೇ=ಹೋಮಿಸುತ್ತೇವೋ, (ಆಕಾರಣ) ಕೇಶಿಭಿಃ=ಜೋತಾಡತಕ್ಕ ಕೇಶಗಳಿಂದ ಕೂಡಿದ, ಹರಿಭಿಃ=ಕುದುರೆಗಳಿಂದ, ನಃ=ನಮ್ಮ, ಸುತಂ=ಸೋಮವನ್ನು ಉಪ ಆಗಹಿ=ಬಾ. || ೪ ||

ಋ || (೧೬೩) ಸೇಮಂ ನಃ ಸ್ತೋಮಮಾ ಗಹ್ಯುಪೇದಂ ಸವನಂ ಸುತಂ |
ಗೌರೋ ನ ತೃಷಿತಃ ಪಿಬ || ೫ || ೩೦ ||

ಅ || (ಎಲೋ ಇಂದ್ರನೇ) ನಃ=ಅಂತಹ ನೀನು, ನಃ=ನಮ್ಮ, ಇಮಂ ಸ್ತೋಮಂ=ಈ ಸ್ತುತಿಯನ್ನು ಇದಂಸವನಂ=ಈ ಕಂಡನ (ತುಂಡರಿಸುವ) ಸ್ಥಲವನ್ನು, ಸುತಂ=ತುಂಡರಿಸಿದ ಸೋಮವನ್ನು ಕೂಡ, ಉಪ ಆಗಹಿ=ಬಾ. (ಬಂದು) ತೃಷಿತಃ=ತೃಷೆಯುಕ್ತವಾದ, ಗೌರಃ ನ=ಮೃಗ ವಿಶೇಷದಂತೆ (ಪಾನೇಚ್ಛೆಯಿಂದ ಕೂಡಿದವನಾಗಿ) ಪಿಬ=(ಸೋಮವನ್ನು) ಕುಡಿ. (ಪಾನೇಚ್ಛೆಯಿಲ್ಲದಿದ್ದರೆ ಪಾನವೇ ಕೂಡಲಾರದು) || ೫ || ೩೦ ||

ಋ || (೧೬೪) ಇಮೇ ಸೋಮಾಸ ಇಂದವಃ ಸುತಾಸೋ ಅಧಿ ಬರ್ಹಿಷಿ |
ತಾँ ಇಂದ್ರ ಸಹಸೇ ಪಿಬ || ೬ ||

ಅ || ಇಂದ್ರ=ಇಂದ್ರನೇ,ಇಮೇ ಇಂದವಃ=ಈದಾವ, ಇಂ=ಕಾವ್ಯವನ್ನು=ದದತಿ=ಕೊಡುತ್ತವೆ, ಎಂಬ ವ್ಯುತ್ಪತ್ತಿಯಿಂದ ಇಷ್ಟಪ್ರದಗಳಾದ, ಸುತಾಸಃ-ಹಿಂಡಲ್ಪಟ್ಟ,ಸೋಮಾಸಃ=ಸೋಮಗಳು, ಅಧಿ ಬರ್ಹಿಷಿ=ಬರ್ಹಿಸ್ಸಿನ ಮೇಲೆ, (ಇರುತ್ತವೆ.) ತಾನ್=ಆಸೋಮಗಳನ್ನು, ಸಹಸೇ=ಬಲಕ್ಕಾಗಿ, ಪಿಬ=ಕುಡಿ. (ಇಂದ್ರ ಶಬ್ದದಿಂದ ವಿಷ್ಣುವನ್ನು ಇಟ್ಟುಕೊಂಡರೆ.) ಸಹಸೇ—ಯಜಮಾನನಿಗೆ ಬಲವು ಲಭಿಸುವುದಕ್ಕಾಗಿ, ಅಥವಾ ನಿನ್ನ ಬಲವು ಅಭಿವ್ಯಕ್ತಿಯಾಗುವುದಕ್ಕಾಗಿ ಎಂದರ್ಥವು. ಬಲಾಭಿವ್ಯಕ್ತಿಯೆಂದರೆ ಭಕ್ತರಿಗೆ ಅಭೀಷ್ಟವನ್ನು ಕೊಡುವುದು,ಎಂದು ತಿಳಿಯಬೇಕು. || ೬ ||

ಭಾ || (೧) ವಿಷ್ಣುವಿವಕ್ಷಯಾಂ ಯಜಮಾನಬಲಂ ಸಹಃ || (೨) ತದಿಷ್ಟಸ್ಯೈವ ದಾನಾಯ ತದ್ಗುಣ ವ್ಯಕ್ತಿರೇವ ವಾ || (೩) ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ || (೪) ಹೇಯೋಪಾದೇಯರಹಿತಗುಣಪೂರ್ಣೋ ಹರಿಸ್ಸದಾ || (೫) ಅನುಗ್ರಹವ್ಯಕ್ತಿರೇವ ತದ್ಗುಣಾನಾಂ ಚ ನಾನ್ಯಥಾ | ಇತ್ಯಾದಿವೇದವಾಕ್ಯೇಭ್ಯೋ ನೈವ ವೃದ್ಧಿರ್ಹರೇಃ ಕ್ವಚಿತ್ ||೬||

ಅ || (೧) ಸೋಮಪಾನಾದಿಗಳಿಂದ ಇಂದ್ರನಿಗೆ ಬಲವೃದ್ಧಿಯಿದ್ದ ಪ್ರಯುಕ್ತ ಆ ವ್ಯಾಖ್ಯಾನವು ಪ್ರಸಿದ್ಧ ಇಂದ್ರನಲ್ಲಿ ಕೂಡುತ್ತದೆ.) (ಪರಮೇಶ್ವರನಲ್ಲಿ ಆದರೂ ಯೋಜನಾಂತರವನ್ನು ಸೂಚಿಸುತ್ತಾರೆ.) ಇಂದ್ರಶಬ್ದದಿಂದ ವಿಷ್ಣುವನ್ನು ವಿವಕ್ಷಾ ಮಾಡಿದರೆ ಯಜಮಾನನ ಬಲವು ಸಹಃ ಎನಿಸುತ್ತದೆ. (೨) ಸಹಸೇ=ಬಲಕ್ಕಾಗಿ, ಅಂದರೆ-ಯಜಮಾನನಿಗೆ ಯಾವುದು ಇಷ್ಟವಾದ ಬಲವು (ಜ್ಞಾನಾದಿರೂಪವಾದುದು) ಇದೆಯೋ, ಅದನ್ನು ಕೊಡುವುದಕ್ಕಾಗಿಯೇ, (ಸೋಮವನ್ನು ಕುಡಿ.) (ಸಹಃ ಶಬ್ದದಿಂದ ಶ್ರೀಹರಿಯ ಬಲವನ್ನು ಎಂದು ಅಂಗೀಕರಿಸಿಕೊಂಡು ಕೂಡಿಸುತ್ತಾರೆ.) ಆ ವಿಷ್ಣುವಿನಲ್ಲಿ ಯಾವುದು ಬಲಾಖ್ಯಗುಣವಿದೆಯೋ ಅದರ ವ್ಯಕ್ತಿಯು ಬಲಸಾಧ್ಯವಾದ ಅಭೀಷ್ಟ ಸಂಪಾಧನೆಯು. ಅಂದರೆ ಭಕ್ತರಿಗೆ ಇಷ್ಟಪ್ರದಾನಕ್ಕೆ ಅನುಕೂಲವಾದ ವ್ಯಾಪಾರವು. ಏವಂಚ ನಿನ್ನ

ಬಲವ್ಯಕ್ತವಾಗುವುದಕ್ಕಾಗಿಯೇ. ಎರಡು ಏವ ಶಬ್ದಗಳಿಂದ ಶ್ರೀಹರಿಯ ಬಲವು ಸೋಮದಿಂದ ವೃದ್ಧಿಯನ್ನು ಹೊಂದುವುದಲ್ಲ ಎಂದುಕ್ತವಾಯ್ತು. ಏವಂಚ ಯಜಮಾನನಿಗೆ ಇಷ್ಟವಾದ ಬಲವನ್ನು ಕೊಡುವುದಕ್ಕಾಗಿಯೇ ಸೋಮಪಾನವು. ತನ್ನ ಬಲವೃದ್ಧಿಗಾಗಿ ಅಲ್ಲ. ಅಥವಾ ಶ್ರೀ ವಿಷ್ಣುವಿನ ಬಲಾಭಿವ್ಯಕ್ತಿಯೇ ಸಹಃ ಎನಿಸುತ್ತದೆ. ವಿಷ್ಣುವಿಗೆ ಬಲವೃದ್ಧಿಯಲ್ಲ.) (೩) ಅದು ಹೇಗೆಂದರೆ) ಅದಃ=ಈ ನಾರಾಯಣಾಖ್ಯ ಮೂಲರೂಪವೂ, ಪೂರ್ಣಂ=ಜ್ಞಾನಾದಿ ಗುಣವ್ಯಕ್ತಿಯುಳ್ಳದ್ದು, ಇದಂ=ರಾಮಕೃಷ್ಣಾದಿ ಅವತಾರರೂಪವೂ, ಪೂರ್ಣಂ=ಪೂರ್ಣವು. ಪೂರ್ಣಾತ್=ಪೂರ್ಣವಾದ ಮೂಲರೂಪದಿಂದ, ಪೂರ್ಣಂ=ಅವತಾರರೂಪವು, ಉದಚ್ಯತೇ=ಅಭಿವ್ಯಕ್ತವಾಗುತ್ತದೆ. (ಇಲ್ಲಿ ಪೂರ್ಣತ್ವವನ್ನು ಹೇಳಿದುದರಿಂದ ಶ್ರೀಹರಿಗೆ ನಿತ್ಯದಲ್ಲಿಯೂ ಅಭಿವ್ಯಕ್ತಿಯೇ ಉಕ್ತವಾಯ್ತು.) (೪) ಸರ್ವದಾ ಶ್ರೀಹರಿಯು ಹೇಯತ್ವವೂ ಉಪಾಧೇಯತ್ವವೂ ಇಲ್ಲದಿರುವ ಸರ್ವಗುಣಗಳಿಂದ ಪರಿಪೂರ್ಣನೇ. (೫) ಶ್ರೀಹರಿಯ ಗುಣಗಳಿಗೆ ವ್ಯಕ್ತಿಯೆಂದರೆ–ಅನುಗ್ರಹದ (ಪರರಿಗೆ ಅಭೀಷ್ಟವನ್ನು ಹೊಂದಿಸಿ ಕೊಡುವಿಕೆ) ವ್ಯಕ್ತಿಯೇ. ಬೇರೆ ರೀತಿ ಸರ್ವಥಾ ಅಲ್ಲ. ಇದು ಮೊದಲಾದ ವೇದವಾಕ್ಯಗಳಿಂದ ಎಲ್ಲಿಯೂ ಶ್ರೀಹರಿಗೆ ವೃದ್ಧಿಯೆಂಬುವುದು ಸರ್ವಥಾ ಇಲ್ಲವೇ ಇಲ್ಲ. ॥ ೭ ॥

ಋ ॥ (೧೬೫) ಅಯಂ ತೇ ಸ್ತೋಮೋ ಅಗ್ರಿಯೋ ಹೃದಿಸ್ಪೃಗಸ್ತು

ಶಂತಮಃ । ಅಥಾ ಸೋಮಂ ಸುತಂ ಪಿಬ ॥ ೭ ॥

ಅ ॥ (ಇಂದ್ರನೇ) ಅಗ್ರಿಯಃ=ಶ್ರೇಷ್ಠವಾದ, ಶಂತಮಃ=ಶ್ರೋತೃಗಳಿಗೆ ಅತಿಶಯವಾಗಿ ಸುಖವನ್ನು ಕೊಡುವ, ಅಯಂಸ್ತೋಮಃ=ಈ ಸ್ತುತಿಯು, ತೇ=ನಿನಗೆ,ಹೃದಿಸ್ಪೃಕ್=ಹೃದಯಂಗಮವು, ಅಸ್ತು=ಆಗಲಿ. ಅಥ=ಆ ಮೇಲೆ, ಸ್ತುತಿಯಿಂದ ಪ್ರೀತನಾದ ನೀನು, ಸುತಂ=ಹಿಂಡಲ್ಪಟ್ಟ, ಸೋಮಂ–ಸೋಮವನ್ನು, ಪಿಬ=ಕುಡಿ. ॥ ೭ ॥

ಋ ॥ (೧೬೬) ವಿಶ್ವಮಿತ್ಸವನಂ ಸುತಮಿಂದ್ರೋ ಮದಾಯ ಗಚ್ಛತಿ ।

ವೃತ್ರಹಾ ಸೋಮಪೀತಯೇ ॥ ೮ ॥

ಅ ॥ ವೃತ್ರಹಾ=ವೃತ್ರಾಸುರನನ್ನು ಸಂಹರಿಸಿದ, ಇಂದ್ರಃ=ಇಂದ್ರನು, (ಇಂದ್ರಪಕ್ಷದಲ್ಲಿ) ಮದಾಯ=ತನಗೆ ಹರ್ಷವಾಗುವುದಕ್ಕಾಗಿ, (ವಿಷ್ಣುಪಕ್ಷದಲ್ಲಿ) ಮದಾಯ=ಯಜಮಾನನಿಗೆ ಸಂತೋಷವುಂಟಾಗುವುದಕ್ಕಾಗಿ, ಅಥವಾ ತನ್ನ ಗುಣಗಳ ಅಭಿವ್ಯಕ್ತಿಗಾಗಿ, ಸೋಮಪೀತಯೇ=ಸೋಮಪಾನ ಮಾಡುವುದಕ್ಕಾಗಿ, ವಿಶ್ವಮಿತ್ ಸವನಂ=ಎಲ್ಲಾ ಸವನಗಳಲ್ಲಿಯೂ, ಸುತಂ=ಸೋಮವನ್ನು ಕುರಿತು, ಗಚ್ಛತಿ-ಹೋಗುತ್ತಾನೆ. ॥ ೮ ॥

ಋ ॥ (೧೬೭) ಸೇಮಂ ನಃ ಕಾಮಮಾ ಪೃಣ ಗೋಭಿರಶ್ವೈಃ ಶತಕ್ರತೋ ।

ಸ್ತವಾಮ ತ್ವಾ ಸ್ವಾಧ್ಯಃ ॥ ೯ ॥ ೩೧ ॥ ೧೬ ॥

ಅ ॥ ಶತಕ್ರತೋ=ಇಂದ್ರನೇ, ಸಃ=ಅಂತಹ ನೀನು, ನಃ=ನಮಗೆ, ಇಮಂ=ಗವಾದಿ ವಿಷಯಕವಾದ, ಕಾಮಂ=ಅಭಿಲಾಷೆಯನ್ನು, ಗೋಭಿಃ=ಗೋವುಗಳಿಂದಲೂ, ಅಶ್ವೈಃ=ಅಶ್ವಗಳಿಂದಲೂ, (ಗೋವುಗಳನ್ನು ಅಶ್ವಗಳನ್ನು ಕೊಟ್ಟು) ಆ ಪೃಣ=(ಪೃಣಪ್ರೀಣನೇ) ಸಂಪೂರ್ತೀಕರಿಸು. (ನಾವು) ಸ್ವಾಧ್ಯಃ-(ಸೂಆಙ್ಪೂರ್ವ

ಕಾರ್ತ್ಸ್ನ್ಯೈಕಚಿಂತಾಯಾಂ) ಒಳ್ಳೇ ಬುದ್ಧಿಯುಳ್ಳವರು (ಒಳ್ಳೇ ಜ್ಞಾನವುಳ್ಳವರು ಆಗಿ) ತ್ವಾ=ನಿನ್ನನ್ನು, ಸ್ತವಾಮ=ಸ್ತುತಿಸುತ್ತೇವೆ. ॥ ೯ ॥ ೩೧ ॥ ೧೬ ॥

ಭಾ ॥ ಪೃಣ ಸಂಪೂರಯ ಸ್ವಾಧ್ಯಃ ಸುಧೀತಯ ಇತೀರಿತಾಃ ॥ ೯ ॥ ೩೧ ॥ ೧೬ ॥

ಅ ॥ ಪೃಣ, ಸ್ವಾಧ್ಯಃ ಈ ಎರಡು ಪದಗಳನ್ನು ವ್ಯಾಖ್ಯಾನ ಮಾಡುತ್ತಾರೆ,) ಪೃಣ=ಸಂಪೂರ್ಣೀಕರಿಸು. ಸ್ವಾಧ್ಯಃ=ಒಳ್ಳೇ ಬುದ್ಧಿಯುಳ್ಳವರು (ಸಮೀಚೀನವಾದ ಜ್ಞಾನವುಳ್ಳವರು) ಎಂದು ಹೇಳಲ್ಪಡುತ್ತಾರೆ. ॥ ೯ ॥ ೩೧ ॥ ೧೬ ॥

ಅವ ॥ ೯ಋಕ್ಕು. ಐಂದ್ರಾವರುಣ ಸೂಕ್ತವು. ಇಂದ್ರವರುಣದೇವತಾಕವು. ಗಾಯತ್ರೀ ಛಂದಸ್ಸು.

ಋ ॥ (೧೬೪) ಇಂದ್ರಾವರುಣಯೋರಹಂ ಸಮ್ರಾಜೋರವ ಆ ವೃಣೇ । ತಾ ನೋ ಮೃಳಾತ ಈದೃಶೇ ॥ ೧ ॥

ಅ ॥ ಅಹಂ=ನಾನು, ಸಮ್ರಾಜೋಃ=(ರಾಜೃದೀಪ್ತೌ) ಚೆನ್ನಾಗಿ ಪ್ರಕಾಶವನ್ನು ಹೊಂದಿಕೊಂಡಿರುವ, ಇಂದ್ರಾವರುಣಯೋಃ=ಇಂದ್ರವರುಣರು ಮಾಡತಕ್ಕ, ಅವಃ= ರಕ್ಷಣೆಯನ್ನು ಆ ವೃಣೇ=ಪ್ರಾರ್ಥಿಸುತ್ತೇನೆ. ತಾ=ಆ ಇಂದ್ರ ವರುಣರು, ನಃ=ನಮಗೆ, ಈದೃಶೇ=ಅವಿಕಾರದಿಂದಲೇ (ವಿಕಾರವಿಲ್ಲದೇನೇ) ಇರುವುದಕ್ಕಾಗಿ ಮೃಳಾತ=(ಮೃಡಸುಖನೇ)(ನಮ್ಮನ್ನು) ರಕ್ಷಿಸಲಿ ॥ ೧ ॥

ಭಾ ॥ ಅವಿಕಾರೇಣ ಸಂಸ್ಥಾನಮೀದೃಕ್ತ್ವಂ ನಾಮ ಕೀರ್ತಿತಂ ॥ ೧ ॥

ಅ ॥ ಈಗ ಹೇಗೆ ಇರುವುದೋ, ಹಾಗೆಯೇ ಸರ್ವದಾ ಇರುವಿಕೆಯು ಈದೃಕ್ತ್ವವು. ಅಂದರೆ ಯಾವುದೊಂದು ವಿಕಾರವಿಲ್ಲದೆ ಇರುವಿಕೆಯು ಎಂದು ಹೇಳಲ್ಪಟ್ಟಿದೆ. ॥ ೧ ॥

ಋ ॥ (೧೬೫) ಗಂತಾರಾ ಹಿ ಸ್ಥೋಽವಸೇ ಹವಂ ವಿಪ್ರಸ್ಯ ಮಾವತಃ । ಧರ್ತಾರಾ ಚರ್ಷಣೀನಾಂ ॥ ೨ ॥

ಅ ॥ (ಇಂದ್ರ ವರುಣರೇ) ಹಿ=ಯಾವ ಕಾರಣದಿಂದ ಚರ್ಷಣೀನಾಂ= ಪ್ರಜೆಗಳನ್ನ, ಧರ್ತಾರಾ (ಧೃಧಾರಣೇ) ಧರಿಸಿಕೊಂಡಿರುವ, (ನೀವಿಬ್ಬರು) ಮಾವತಃ=ಜ್ಞಾನವುಳ್ಳ, ವಿಪ್ರಸ್ಯ=ಬ್ರಾಹ್ಮಣನ, ಹವಂ=ಆಹ್ವಾನವನ್ನು ಕುರಿತು, ಅವಸೇ=ಯಜಮಾನನ ರಕ್ಷಣೆಗಾಗಿ, ಗಂತಾರಾ=ಹೋಗುವವರು, ಸ್ಥಃ=ಆಗಿರುತ್ತೀರೋ, (ಆದಕಾರಣ ಬನ್ನಿರಿ.) (ಗಾಯತ್ರೀಛಂದಸ್ಕವು) ॥ ೨ ॥

ಭಾ ॥ ಮಾವತೋ ಜ್ಞಾನಯುಕ್ತಸ್ಯ ಪ್ರಜಾಶ್ಚರ್ಷಣಯಃ ಸ್ಮೃತಾಃ ॥ ೨ ॥

ಅ ॥ ಮಾವತಃ — ಜ್ಞಾನದಿಂದ ಕೂಡಿದವನ, ಎಂದರ್ಥವು. ಚರ್ಷಣಯಃ = ಪ್ರಜೆಗಳು, ಎಂದು ಹೇಳಿಸಿಕೊಳ್ಳಲ್ಪಡುತ್ತಾರೆ. ॥ ೨ ॥

ಋ ॥ (೧೨೦) ಅನುಕಾಮಂ ತರ್ಪಯೇಥಾಮಿಂದ್ರಾವರುಣ ರಾಯಃ ಆ ।
ತಾ ವಾಂ ನೇದಿಷ್ಠಮೀಮಹೇ ॥ ೩ ॥

ಅ ॥ ಇಂದ್ರಾವರುಣಾ=ಇಂದ್ರ ವರುಣರೇ, (ನಮ್ಮನ್ನು) ರಾಯಃ-ದ್ರವ್ಯದ ವಿಷಯದಲ್ಲಿ, ಅನುಕಾಮಂ =ಯಥೇಷ್ಟವಾಗಿ, ಆ ತರ್ಪಯೇಥಾಂ=ತೃಪ್ತರನ್ನಾಗಿ ಮಾಡಿರಿ. (ನಾವು) ತಾ ವಾಂ=ಅಂತಹ ನಿಮ್ಮನ್ನು, ನೇದಿಷ್ಠಂ-ಶೀಘ್ರವಾಗಿ, ಈಮಹೇ-ಶರಣು ಹೊಂದುವೆವು. (ಗಾಯತ್ರೀ ಛಂದಸ್ಸವು.) ॥ ೩ ॥

ಭಾ ॥ ನೇದಿಷ್ಠತ್ವಂ ಸಮೀಪತ್ವಂ ಕ್ಷಿಪ್ರಂ ಶರಣಮೀಮಹೇ ॥ ೩ ॥

ಅ ॥ ನೇದಿಷ್ಠತ್ವಂ= ಕಾಲತಃ ಸಾಮೀಪ್ಯವು. ಅಂದರೆ ಶೀಘ್ರದಲ್ಲಿ ಶರಣು ಹೊಂದುವೆವು. ॥ ೩ ॥

ಋ ॥ (೧೨೧) ಯುವಾಕು ಹಿ ಶಚೀನಾಂ ಯುವಾಕು ಸುಮತೀನಾಂ ।
ಭೂಯಾಮ ವಾಜದಾವ್ನಾಂ ॥ ೪ ॥

ಅ ॥ ಈ ಋಕ್ಕಿಗೆ ಗಾಯತ್ರಿಯ ವಿಶೇಷವಾದ ನಿಚೃ ಛಂದಸ್ಸು

ಅ ॥ (ಎಲೋ ಇಂದ್ರ ವರುಣರೇ ನಾವು) ಯುವಾಕು=ನಿಮ್ಮ ಸಂಬಂಧಿಗಳಾದ, ಶಚೀನಾಂ=ನೀವು ಬಹು ಸಾಧುಗಳು ಇಂತಹ ವಾಕ್ಯಗಳಿಗೆ, (ಹಾಗೆಯೇ) ಯುವಾಕು ಸುಮತೀನಾಂ=ನಿಮ್ಮ ಸಂಬಂಧಿಗಳಾದ ಬುದ್ಧಿಗಳಿಗೂ, ಭೂಯಾಮ= ಸರ್ವದಾ ವಿಷಯರಾಗುತ್ತೇವೆ. ಮತ್ತು ವಾಜದಾವ್ನಾಂ=ಅನ್ನವನ್ನು ಕೊಡುವವರಿಗೆ ಭೂಯಾಮ=ಸರ್ವದಾ ವಿಷಯರಾಗುತ್ತೇವೆ. (ಸರ್ವ ಪೂಜ್ಯರಾಗುತ್ತೇವೆ.) ಹಿ=ನಿಶ್ಚಯ ॥ ೪ ॥

ಭಾ ॥ ಯುವಯೋರೇವ ವಾಕ್ಯಾನಾಂ ಸುಮತೀನಾಂ ಚ ಸರ್ವಶಃ । ಭವೇಮಾನ್ನಪ್ರದಾತ್ಯಣಾಂ ಸರ್ವದಾ ವಿಷಯಾ ವಯಂ ॥ ೪ ॥

ಅ ॥ ನಿಮ್ಮ ಸಂಬಂಧಿಗಳಾದ (ನೀವು ಯೋಗ್ಯರು ಎಂಬೀ) ವಾಕ್ಯಗಳಿಗೂ ಸದ್ಬುದ್ಧಿಗಳಿಗೂ ಸರ್ವಕಾಲದಲ್ಲಿಯೂ ವಿಷಯರಾಗುತ್ತೇವೆ. ಮತ್ತು ಅನ್ನವನ್ನು ಕೊಡುವವರಿಗೂ ನಾವು ಸರ್ವದಾ ವಿಷಯರಾಗುತ್ತೇವೆ. ಅಂದರೆ ಸರ್ವಪೂಜ್ಯರಾಗುತ್ತೇವೆ. ॥ ೪ ॥

ಋ ॥ (೧೨೨) ಇಂದ್ರಃ ಸಹಸ್ರದಾವ್ನಾಂ ವರುಣಃ ಶಂಸ್ಯಾನಾಂ ।
ಕ್ರತುರ್ಭವತ್ಯುಕ್ಥ್ಯಃ ॥ ೫ ॥ ೩೨ ॥

ಅ ॥ (ಈ ಋಕ್ಕಿಗೆ ಗಾಯತ್ರಿ (ವಿಶೇಷವಾದ ಪಾದನಿಚೃತ್ ಬ್ರಸೀಯಸೀ ಎಂದಾಗಲೀ)ಛಂದಸ್ಸು.)ಇಂದ್ರಃ= ಇಂದ್ರನು,ಸಹಸ್ರದಾವ್ನಾಂ= ಬಹಳವಾಗಿ ದಾನ ಮಾಡುವವರಿಗೂ, ಶಂಸ್ಯಾನಾಂ= ಸ್ತುತ್ಯರಾದವರಿಗೂ, ಕ್ರತುರ್ಭವತಿ= ಕ್ರತುವಿನಂತೆ ಆಗುತ್ತಾನೆ. (ಅಂದರೆ ಕ್ರತುವು ಕರ್ಮಗಳ ಮಧ್ಯದಲ್ಲಿ ಹೇಗೆ ಪ್ರಧಾನವೋ ಹಾಗೆಯೇ ಪ್ರಧಾನನು.) ಉಕ್ಥ್ಯಃ=ಮಂತ್ರ ವಿಶೇಷಗಳಲ್ಲಿ ಸ್ತುತ್ಯನು ಆಗಿರುತ್ತಾನೆ. (ಅಂದರೆ ಮಂತ್ರವಿಶೇಷಗಳಿಂದ ಸ್ತುತ್ಯನೂ ಆಗಿರುತ್ತಾನೆ.) ಹೀಗೆಯೇ ವರುಣೋಪಿ=ವರುಣನೂಕೂಡ ಪ್ರಧಾನನೂ ಸ್ತುತ್ಯನೂ ಆಗಿರುತ್ತಾನೆ. ॥ ೫ ॥ ೩೨ ॥

ಭಾ ॥ ಕ್ರತುಃ ಪ್ರಧಾನ ಉಕ್ಥೈಶ್ಚ ಶಸ್ತ್ರೈಃ ಸ್ತುತ್ಯೋ ವಿಶೇಷತಃ ॥ ೫ ॥ ೩೨ ॥

ಅ ॥ ಕ್ರತುವು ಹೇಗೆ ಕರ್ಮಗಳ ಮಧ್ಯದಲ್ಲಿ ಪ್ರಧಾನವೋ, ಹಾಗೆಯೇ ಇಂದ್ರನು ಪ್ರಧಾನನು ಉಕ್ಥೈಶ್ಚ =ಮಂತ್ರ ವಿಶೇಷಗಳಿಂದ ವಿಶೇಷತಃ ಸ್ತುತ್ಯನು. **ತಸ್ಮಾದ್ಭೂವಮಾ ಗುಣತೋ ನ್ಯೈ ವಿಶಿಷ್ಟೋ ಯಥಾ ಕ್ರತುಃ ಕರ್ಮಮಧ್ಯೇ ವಿಶಿಷ್ಟಃ ॥** ಎಂಬ ಶ್ರುತಿಯು ಸೂಚಿತವಾಯ್ತು ॥ ೫ ॥ ೩೨ ॥

ಋ ॥ (೧೭೩) ತಯೋರಿದವಸಾ ವಯಂ ಸನೇಮ ನಿ ಚ ಧೀಮಹಿ ।

ಸ್ಯಾದುತ ಪ್ರರೇಚನಂ ॥ ೬ ॥

ಅ ॥ ವಯಂ=ನಾವು, ತಯೋರಿತ್= ಆ ಇಂದ್ರ ವರುಣರದ್ದೇ ಆದ, ಅವಸಾ= ರಕ್ಷಣೆಯಿಂದ, ಸನೇಮ =(ಷಣ ಸಂಭಕ್ತೌ) (ದ್ರವ್ಯವನ್ನು ಅಥವಾ ಜ್ಞಾನವನ್ನು) ಸದಾ ಹೊಂದುವೆವು. ಮತ್ತು ನಿ ಧೀಮಹಿ ಚ-ಭೂಮಿಯನ್ನು ಅಗೆದು ದ್ರವ್ಯವನ್ನು ಸ್ಥಾಪಿಸುತ್ತೇವೆ. ಅಥವಾ ಸದಾ ಆ ಇಂದ್ರ ವರುಣರನ್ನು (ಧ್ಯೈ ಚಿಂತಾಯಾಂ) ಧ್ಯಾನಿಸುವೆವು. (ನಮಗೆ) ಪ್ರರೇಚನಂ= (ರಿಚವಿಯೋಜನ ಸಂಪರ್ಚನಯೋಃ) ವಿಸರ್ಜನವು, ತನ್ನಿಂದ ಬಿಡುಗಡೆಯು ಸ್ವತ್ವತ್ಯಾಗವು, ಅಂದರೆ ಅರ್ಥಿಗಳಿಗೆ ದಾನವು, ಸ್ಯಾದುತ= ಆಗಿಯೇ ಆಗುವುದು. ॥ ೬ ॥

ಭಾ ॥ ರಕ್ಷಣೇನ ತಯೋರ್ವಿತ್ತಂ ಜ್ಞಾನಂ ವಾ ಪ್ರಾಪ್ನುಮಸ್ಸದಾ। ನಿಧೀಮಹಿ ಚ ದಾನಂ ಚ ಸ್ಯಾದೇವಾಸ್ಮಾಕಮರ್ಥಿನೇ ॥ ೬ ॥

ಅ ॥ ಆ ಇಂದ್ರವರುಣರು ಮಾಡತಕ್ಕ ರಕ್ಷಣೆಯಿಂದ ಸದಾ ದ್ರವ್ಯವನ್ನು ಜ್ಞಾನವನ್ನಾಗಲೀ ಹೊಂದುವೆವು. ಭೂಮಿಯನ್ನು ಅಗೆದು ದ್ರವ್ಯವನ್ನು ಸ್ಥಾಪಿಸುವೆವು. ಯಾಚಿಸುವವರಿಗೆ ದಾನವು ನಮಗೆ ಆಗಲೇ ಬೇಕು (ಯಥೇಷ್ಟ ದಾನಕೊಡುವಂತೆ ಆಗಬೇಕು.) ॥ ೬ ॥

ಋ॥(೧೭೪) ಇಂದ್ರಾವರುಣ ವಾಮಹಂ ಹುವೇ ಚಿತ್ರಾಯ ರಾಧಸೇ ।

ಅಸ್ಮಾನ್ತ್ಸು ಜಿಗ್ಯುಷಸ್ಕೃತಂ ॥ ೭ ॥

ಅ ॥ ಇಂದ್ರಾವರುಣಾ= ಇಂದ್ರವರುಣರೇ, ಅಹಂ= ನಾನು, ಚಿತ್ರಾಯ= ಮಂಗಲಕ್ಕಾಗಿ, ರಾಧಸೇ= ಸಂಸಿದ್ಧಿಗಾಗಿ, ವಾಂ= ನಿಮ್ಮಿಬ್ಬರನ್ನು, ಹುವೇ= ಕರೆಯುತ್ತೇನೆ (ನೀವಿಬ್ಬರು) ಅಸ್ಮಾನ್= ನಮ್ಮನ್ನು ಸು ಜಿಗ್ಯುಷಃ= (ಜಿಜಯೇ) ಸರ್ವತ್ರ ವಿಜಯವನ್ನು ಹೊಂದುವವರನ್ನಾಗಿ, ಕೃತಂ= ಮಾಡಿರಿ ॥ ೭ ॥

ಭಾ ॥ (೧) ಹ್ರಸ್ವತಾ ಸಂಹಿತಾಯಾಂತು ದೇವತೈಕ್ಯ ಪ್ರದರ್ಶಿನೀ ॥ (೨) ಸ್ವರೂಪೈಕ್ಯಂ ಹರೌ ತತ್ತು ಮತ್ಯೈಕ್ಯಂ ಭಿನ್ನಯೋರಪಿ ॥ ೭ ॥

ಅ ॥ (೧) ಇಲ್ಲಿ ಇಂದ್ರವರುಣ ಎಂದು ಸಂಹಿತೆಯಲ್ಲಿ ಹ್ರಸ್ವಾಂತವಾಗಿ ಪಠಿತವಾಗಿದೆ. (ಪದಚ್ಛೇದವಾದರೂ ಇಂದ್ರಾವರುಣಾ ಎಂದು ದೀರ್ಘಾಂತವಾಗಿ ಭೇದಿಸಲ್ಪಡುತ್ತದೆ.) ಆದಾದರೂ ದೇವತೆಗಳಿಗೆ ಐಕ್ಯವನ್ನು ತೋರಿಸುತ್ತದೆ. (೨) (ಮುಖ್ಯಪ್ರತಿಪಾದ್ಯ, ಅಮುಖ್ಯ ಪ್ರತಿಪಾದ್ಯ ಭೇದದಿಂದ ಆ ಐಕ್ಯವನ್ನು ತೋರಿಸುತ್ತಾರೆ.) ಶ್ರೀ ಹರಿಯನ್ನು ಇಟ್ಟುಕೊಳ್ಳುವಾಗ ಇಂದ್ರಾವರುಣ ಎಂಬ ಹ್ರಸ್ವಾಂತ ಪದದಿಂದ ಪ್ರಕಾಶಿತವಾದ ಐಕ್ಯವೆಂ

ವರೆ ಮುಖ್ಯತಃ ಭಗವಂತನ ಸ್ವರೂಪಗಳಿಗೆ ಐಕ್ಯವೆಂದೂ, ಸ್ವರೂಪತಃ ಭಿನ್ನರಾದ ಇಂದ್ರವರುಣರನ್ನು ಇಟ್ಟು ಕೊಳ್ಳುವಾಗ ಅವರಿಗೆ ಮತ್ಯೈಕ್ಯವೆಂದೂ ತಿಳಿದುಕೊಳ್ಳಬೇಕು. ॥ ೭ ॥

ಋ ॥ (೧೭೫) ಇಂದ್ರಾವರುಣಾ ನೂ ನು ವಾಂ ಸಿಷಾಸಂತೀಷು ಧೀಷ್ವಾ ।
ಅಸ್ಮಭ್ಯಂ ಶರ್ಮ ಯಚ್ಛತಂ ॥ ೮ ॥

ಅ ॥ ಇಂದ್ರಾವರುಣಾ=ಎಲೋ ಇಂದ್ರವರುಣರೇ, ನೂ=ಈಗ, ವಾಂ=ನಿಮ್ಮನ್ನು, ನು=(ಣುಸ್ತುತೌ) ಸ್ತುತಿಸುತ್ತೇವೆ. ಧೀಷು=ನಮ್ಮ ಬುದ್ಧಿಗಳು, ನಿಮ್ಮನ್ನು ಆಸಿಷಾಸಂತೀಷು=ಚೆನ್ನಾಗಿ ಪ್ರಕಾಶಿಸುತ್ತಿರಲು, ಅಸ್ಮಭ್ಯಂ=ನಮಗೆ, ವಾಂ=ನೀವಿಬ್ಬರು, ಶರ್ಮ=ಸುಖವನ್ನು, ಯಚ್ಛತಂ=ಕೊಡಿರಿ. (ಅಂದರೆ ನಿಮ್ಮನ್ನು ನಮ್ಮ ಬುದ್ಧಿಗಳು ಪ್ರಕಾಶಗೊಳಿಸುವುದರಿಂದ ನಮಗೆ ಸುಖವನ್ನು ಕೊಡಿರಿ.) ॥ ೮ ॥

ಭಾ ॥ (೧) ಅದ್ಯ ನಾಂ ನುನುವೋ ಲೋಪಃ ಸ್ವಾತಂತ್ರ್ಯಾರ್ಥೇಽಹಿ ಸೂತ್ರತಃ ॥ (೨)
ಸಾಧಯಂತೀಷು ಧೀಷ್ವೇವ ಶರ್ಮಾಸ್ಮಭ್ಯಂ ಪ್ರಯಚ್ಛತಂ ॥ ೮ ॥

ಅ ॥ (೧) (ನು=ಈಗ, ನಿಮ್ಮಿಬ್ಬರನ್ನು ನು=ಸ್ತುತಿಸುತ್ತೇವೆ. (ಇಲ್ಲಿ ಮಸ್ ಪ್ರತ್ಯಯವು ಕಾಣುವುದಿಲ್ಲ. **ನ ಕೇವಲಾ ಪ್ರಕೃತಿಃ ಪ್ರಯೋಕ್ತವ್ಯಾ ನಾಪಿ ಪ್ರತ್ಯಯಃ** ಎಂದು ನಿಷೇಧವಿದ್ದ ಪ್ರಯುಕ್ತ ಧಾತು ಮಾತ್ರಕ್ಕೆ ಪ್ರಯೋಗವು ಕೂಡುವುದಿಲ್ಲ, ಭೂಃ ಶ್ರೀಃ ಇತ್ಯಾದಿಗಳಂತೆಯೇ ಕರ್ತೃಕಾರಕಾದಿ ಪ್ರತೀತಿಯೂ ಇಲ್ಲಿ ತೋರುವುದಿಲ್ಲ. ಆದಕಾರಣ ನುಮಃ ಎಂದು ಹೇಳದೆ ನು ಎಂದಿಷ್ಟು ಮಾತ್ರ ಹೇಳಿದ್ದು ಹೇಗೆ? ಎಂದರೆ) ಸ್ತೋತ್ರಾದಿಗಳನ್ನು ಮಾಡಲಿಕ್ಕೆ ನಮಗೆ (ಸ್ತುತಿಸತಕ್ಕ ಜೀವರಿಗೆ) ಕರ್ತೃತ್ವ (ಸ್ವಾತಂತ್ರ್ಯ) ವಿಲ್ಲ, ಪರಮೇಶ್ವರನಾದ ನಿನಗೇನೇ ಸ್ವಾತಂತ್ರ್ಯವು, ಎಂದು ತಿಳಿಸುವುದಕ್ಕಾಗಿ **ಲೋಪಃ ಸ್ವಾತಂತ್ರ್ಯಾರ್ಥೇ** ಎಂಬ ಚಿರಂತನ ವ್ಯಾಕರಣ ಸೂತ್ರದಿಂದ, **ಣುಸ್ತುತೌ** ಕರ್ತ್ರರ್ಥಕಲಾದೇಶವಾದ ಮಸ್ ಪ್ರತ್ಯಯಕ್ಕೆ ಲೋಪ ಮಾಡಿ ನು ಎಂಬ ಧಾತು ಮಾತ್ರ ನಿರ್ದೇಶವು. ಹಿ ಶಬ್ದದಿಂದ ಈ ಅರ್ಥವು ಅನುಭವ ಸಿದ್ಧವೆಂದುಕ್ತವಾಯ್ತು. (ಮಸ್ ಪ್ರತ್ಯಯದಿಂದ ಸ್ತುತಿಸತಕ್ಕ ಜೀವನಿಗೆ ಸ್ವಾತಂತ್ರ್ಯರೂಪ ಕರ್ತೃತ್ವವನ್ನು ಹೇಳಬೇಕು. ಮಸ್ ಎಂಬ ಪ್ರತ್ಯಯವನ್ನು ಲೋಪ ಮಾಡಿದುದರಿಂದ ಕರ್ತೃತ್ವ (ಸ್ವಾತಂತ್ರ್ಯ) ಕ್ಕೆ ಲೋಪವು. (ಕರ್ತೃತ್ವವಿಲ್ಲವೆಂದೂ ಜ್ಞಾಪಿತವಾಯ್ತು.) (೨) ನಮ್ಮ ಬುದ್ಧಿಗಳು ನಿಮ್ಮನ್ನು ಪ್ರಕಾಶಗೊಳಿಸಿದರೇನೇ ನಮಗೆ ಸುಖವನ್ನು ಕೊಡಿರಿ. (ಅಂದರೆ ಯಾವ ಕಾರಣದಿಂದ ನಮ್ಮ ಬುದ್ಧಿಗಳು ನಿಮ್ಮನ್ನು ಪ್ರಕಾಶಗೊಳಿಸುತ್ತವೋ ಆದಕಾರಣ ಸುಖವನ್ನು ಕೊಡಿರಿ.) ॥ ೮ ॥

ಋ ॥ (೧೭೬) ಪ್ರ ವಾಮಶ್ನೋತು ಸುಷ್ಟುತಿರಿಂದ್ರಾವರುಣ ಯಾಂ ಹುವೇ।
ಯಾಮೃಧಾಥೇ ಸಧಸ್ತುತಿಂ ॥ ೯ ॥ ೩೩ ॥ ೧೭ ॥ ೪ ॥

ಅ ॥ ಇಂದ್ರಾವರುಣಾ=ಇಂದ್ರವರುಣರೇ, (ನಾನು) ಯಾಂ=ಯಾವ ಒಳ್ಳೇ ಸ್ತೋತ್ರವನ್ನು, ಹುವೇ (ಹ್ವೇಞ ಸ್ಪರ್ಧಾಯಾಂ) ಕರೆಯುತ್ತೇನೋ, (ಸಂಪಾದಿಸುತ್ತೇನೋ) ಅಥವಾ ಯಾವ ಸ್ತುತಿಯಿಂದ ನಿಮ್ಮನ್ನು ಕರೆಯುತ್ತೇನೋ, ಸುಷ್ಟುತಿಃ=ಅಂತಹ ಶೋಭನವಾದ ಸ್ತುತಿಯು, ವಾಂ=ನಿಮ್ಮನ್ನು ಪ್ರ ಅಶ್ನೋತು=(ಅಶೂ ವ್ಯಾಪ್ತೌ) ಚೆನ್ನಾಗಿ ಹೊಂದಲಿ. (ಅಂತಹ ಸ್ತೋತ್ರದಲ್ಲಿಯೂ ನನಗೆ ಸರ್ವಥಾ ಸ್ವಾತಂತ್ರ್ಯವಿಲ್ಲ.) ಮತ್ತೆ

ಯಾಂ ಸಥಸ್ತುತಿಂ—ಯಾವ ಅರ್ಥ ಸಹಿತವಾದ ಸ್ತೋತ್ರವನ್ನು, (ಯಥಾಸ್ಥಿತವಾದ ಸೋತ್ರವನ್ನು) (ನನಗೆ ಯಾವಾಗಲೂ) ಋಧಾಥೇ—(ಋಾಧು ವೃದ್ಧೌ) ಅಭಿವೃದ್ಧೀಕರಿಸುತ್ತೀರೋ, ಪ್ರವರ್ತಿಸುತ್ತೀರೋ (ಅಂತಹ ಸ್ತೋತ್ರವು ನಿಮ್ಮನ್ನು ಹೊಂದಲಿ.) || ೯ ||

ಭಾ || ಯಥಾಸ್ಥಿತಸ್ತುತಿಂ ಯಾಂ ಚ ವರ್ಧಯೇಥೇ ಸದೈವ ಮೇ || ೯ || ೩೩ || ೧೭ || ೪ ||

ಅ || ಯಾವ ಯಥಾಸ್ಥಿತವಾದ ಸ್ತೋತ್ರವನ್ನು ಯಾವಾಗಲೂ ಅಭಿವೃದ್ಧೀಕರಿಸುತ್ತೀರೋ, (ಅಂತಹ ಸ್ತೋತ್ರವು ನಿಮ್ಮನ್ನು ಹೊಂದಲಿ.) || ೯ || ೩೩ || ೧೭ || ೪ ||

ಅವ || ಈ ಸೂಕ್ತದಲ್ಲಿ ೯ ಋಕ್ಕುಗಳು ೨ ವರ್ಗ. ಗಾಯತ್ರೀ ಛಂದಸ್ಸು ೧. ೨. ೩. ೪. ೫. ಇವುಗಳಿಗೆ ಬ್ರಾಹ್ಮಣಸ್ಪತ್ಯರು, ೪. ೫.ಕ್ಕೆ ಇಂದ್ರ ಸೋಮರೂ ದೇವತೆಗಳು. ೫ಕ್ಕೆದಕ್ಷಿಣೆಯೂ ದೇವತೆಯು. ೬. ೭. ೮. ೯. ಗಳಿಗೆ ಸಾದಸಸ್ಪತ್ಯರು ದೇವತೆಗಳು. ೯ಕ್ಕೆ ನಾರಾಶಂಸಿಯೂ ದೇವತೆಯು

ಋ|| (೧೭೭)ಸೋಮಾನಂ ಸ್ವರಣಂ ಕೃಣುಹಿ ಬ್ರಹ್ಮಣಸ್ಪತೇ ।
ಕಕ್ಷೀವಂತಂ ಯ ಔಶಿಜಃ || ೧ ||

ಅ || ಬ್ರಹ್ಮಣಸ್ಪತೇ=ಶೋಭನ ವಚನಗಳಿಗೆ ಅಧಿಪತಿಯಾದ, ವೇದಗಳಿಗೆ ಸ್ವಾಮಿಯಾದ, ಎಲೋ ವಿಷ್ಣುವೇ, ಎಲೋ ವಾಯುವೇ, (ನೀನು ನಮ್ಮನ್ನು ಕುರಿತು) (ಕೃಪೆಯಿಂದ) ಯಃ=ಯಾವ ಶಬ್ದವು, (ಮೊದಲು) ಕಕ್ಷೀವಂತಂ=ಕಕ್ಷೀವನ್ನಾಮಕ ಋಷಿಯನ್ನು (ನನ್ನನ್ನು) (ಕುರಿತು ಕೊಡಲ್ಪಟ್ಟದೋ) ಅಂತಹ, ಸೋಮಾನಂ ಸ್ವರಣಂ=(ಸ್ಪೃಶಬ್ದೋಪತಾಪಯೋಃ) ಸೌಮ್ಯ ಶಬ್ದವನ್ನು ಕೃಣುಹಿ=ಮಾಡು. ಯಃ ಔಶಿಜಃ = ಯಾರು ಉಶಿಕ್ ಎಂಬುವನ ಪುತ್ರನೋ, (ಆತನೇ ಕಕ್ಷೀವಾನ್ ಎಂಬ ಋಷಿಯು.) || ೧ ||

ಭಾ || (೧) ಸೌಮ್ಯಂ ಶಬ್ದಂ ಕೃಣು ತ್ವಂ ನೋ ವಿಷ್ಣೋ ವಾಯೋ ಸುವಾಕ್ಪತೇ || ಕಕ್ಷೀವಂತಂ ಪ್ರತಿ ಹಿ ಯೋ ದತ್ತೋಯಃ ಸ ಉಶಿಕ್ಸುತಃ। (೨)ವಿವಕ್ಷಿತೋ ಮುನಿಸ್ಸೋಽಪಿ ತಸ್ಮಾದರ್ಥೋಽಪಿಮಾಂ ಪ್ರತಿ || ೧ ||

ಅ || (೧) ವೇದಗಳಿಗೆ ಅಧಿಪತಿಯಾದ ಶ್ರೀ ವಿಷ್ಣುವೇ, ಎಲೋ ವಾಯುವೇ, ನೀನು ನಮ್ಮನ್ನು ಕುರಿತು ಕೃಪೆಯಿಂದ ಯಾವ ಶಬ್ದವು ಮೊದಲು ಕಕ್ಷೀವನ್ನಾಮಕಋಷಿಯನ್ನು ಕುರಿತು ಕೊಡಲ್ಪಟ್ಟದೋ ಉಪದೇಶಿಸಿಯದೋ ಅಂತಹ ಸೌಮ್ಯಂ(ಅತಿಸುಂದರವಾದ)ಶಬ್ದವನ್ನು ಮಾಡು.ಯಾವನು ಉಶಿಕ್ಎಂಬ ಋಷಿಯ ಮಗನೋ ಆತನೇ ಕಕ್ಷೀವಾನ್ ಎಂಬ ಋಷಿಯು.(೨)(ಮಾಂ!ಎಂದು ಹೇಳದೆ ಕಕ್ಷೀವಂ ತಂ–ಎಂದು ಪರೋಕ್ಷವಾಗಿ ಹೇಳಿದುದರಿಂದ ಮೇಧಾತಿಥಿಯು ಬೇರೆ, ಕಕ್ಷಿವಂತನು ಬೇರೆ ಎಂಬ ಶಂಕೆಯನ್ನು ಪರಿಹರಿಸುತ್ತಾರೆ) ಯಾವ ಮೇಧಾತಿಥಿಯುಎಂಬ ಮುನಿಯು ಇಲ್ಲಿ ವಿವಕ್ಷಿತನೋ, ಆತನೇ ಕಕ್ಷೀವಾನ್ ಎಂಬವನೂ ಕೂಡ.ಆದ ಕಾರಣ ಕಕ್ಷೀವಂತಂ ಎನ್ನುವುದಕ್ಕೆ ಮಾಂಪ್ರತಿ ನನ್ನನ್ನು ಕುರಿತು ಎಂದೇ ಅರ್ಥವು ಆಗುತ್ತದೆ.

ವಿ || ಸೋಮ ಃಶಬ್ದಕ್ಕೆ ಸೌಮ್ಯತ್ವಾರ್ಥಕತ್ವವೂ ಸೌಮ್ಯ ಶಬ್ದಕ್ಕೆ ಸೌಂದರ್ಯಾರ್ಥಕತ್ವವೂ ಅಭಿಯುಕ್ತತಮರಾದ ಆಚಾರ್ಯರ ಉಕ್ತಿ ಬಲದಿಂದ ಸಿದ್ಧವಾಗುತ್ತದೆ. ಮಧ್ವಮುನಿಗಳು ವಾಯುದೇವರ ಅವತಾರಭೂತರಾದುದರಿಂದ ಅಭಿಯುಕ್ತತಮರೆಂದು ಸಿದ್ಧಿಸುವುದು. ವಾಯುದೇವರ ಅವತಾರಭೂತರೆನ್ನುವುದು,

(1)ಯದೀಮನು ಪ್ರದಿವೋ ಮಧ್ವ ಆಧವೇ ಗುಹಾಸಂತಂ ಮಾತರಿಶ್ವಾ ಮಥಾಯತಿ ಇತ್ಯಾದಿ ಶ್ರುತಿ, (2) ಏವಂ ಧರ್ಮೇಷು ನಷ್ಟೇಷು ಶಾಸ್ತ್ರೇಷು ಚ ಕಲೌಯುಗೇ । ದೇವೈರ್ವಿಜ್ಞಾಪಿತೋ ವಿಷ್ಣುಃ ವಾಯುಮಾಜ್ಞಾಪಯಿಷ್ಯತಿ । ಉದ್ಧರಸ್ವ ಮಹಾಬಾಹೋ ಮಮ ಧರ್ಮಾನ್ ಸನಾತನಾನ್ । ಇತ್ಯಾಜ್ಞಪ್ತೋ ಭಗವತಾ ಕಲೌ ವಾಯುರ್ಭವಿಷ್ಯತಿ । ಮಧ್ವನಾಮ್ನಾ ಯತಿರಸೌ ಸಚ್ಛಾಸ್ತ್ರಾಣಿ ಕರಿಷ್ಯತಿ । ಗೀತಾಯಾಶ್ಚೋಪನಿಷದಾಂ ಭಾಷ್ಯಾಣಿ ಚ ಕರಿಷ್ಯತಿ। ನಿರಸಿಷ್ಯತಿ ಪಾಷಂಡಾನ್ ದುಶ್ಶಾಸ್ತ್ರಾಣಿ ಮಹಾಮತಿಃ। ಸ್ಥಾಪಯಿಷ್ಯತಿ ಸದ್ಧರ್ಮಾನ್ ಸಚ್ಛಾಸ್ತ್ರಂ ವ್ಯಾಕರಿಷ್ಯತಿ । ಶ್ರೋಷ್ಯಂತಿ ಮುನಯಸ್ಸರ್ವೇ ಶುಕಾದ್ಯಾ ದೇವರೂಪಿಣಃ ॥ ಇತಿ ಕೂರ್ಮಪುರಾಣದಲ್ಲಿದ್ದ ಶ್ರೀಮುಷ್ಣ ಮಾಹಾತ್ಮ್ಯ ಗತ ವಚನ, (3) ಕಲೌ ಪಾಷಂಡಭೂಯಿಷ್ಠೇ ಧರ್ಮಲೇಶವಿವರ್ಜಿತೇ । ವೈವಸ್ವತೇಂತರೇ ಪ್ರಾಪ್ತೇ ಹ್ಯಷ್ಟಾವಿಂಶೇ ಕಲೌ ಯುಗೇ । ತ್ರಿಪುರಾ ಭಾರತೇ ಯುದ್ಧೇ ನಿಹತಾ ರಾಕ್ಷಸಾ ಭುವಿ।ಯದಾ ಪ್ರವರ್ತಯಿಷ್ಯಂತಿ ಮಾರ್ಗಂ ಪಾಷಂಡಗೋಚರಂ । ತದಾ ಸಂಪ್ರಾರ್ಥಿತೋ ದೇವೈಃಭಗವಾನ್ ಹರಿರೀಶ್ವರಃ । ತತ್ಕರ್ಮರಕ್ಷಂ ವಿನತಮಾತರಿಶ್ವಾನಮಾದಿಶತ್ । ವಾಯುಸ್ತು ಯತಿರೂಪೇಣ ಜನಿಷ್ಯತಿ ಕಲೌಯುಗೇ। ಸ ದಶಪ್ರಮತಿರ್ಭೂತ್ವಾ ಕಲೌ ಧರ್ಮಾನ್ ವದಿಷ್ಯತಿ । ಕೃತ್ವಾ ತಚ್ಛಾಸ್ತ್ರ ಸಂದರ್ಭಂ ಸ್ಥಾಪಯಿಷ್ಯತಿ ಸತ್ಪಥಃ॥ ಇತಿ ಸ್ಕಾಂದ ಪುರಾಣದಲ್ಲಿದ್ದ ಶ್ರೀ। ಮುಷ್ಣಮಾಹಾತ್ಮ್ಯಗತ ವಚನ, [೫] ತ್ವಂಚಾಪಿಗಚ್ಛ ಶೈಲೇಂದ್ರಂ ಪೂರ್ವಂ ಸ್ವರ್ಣಮುಖೀತಟೇ ಯತ್ರ ಬ್ರಹ್ಮಶಿಲಾ ನಾಮ ಸರಿನ್ಮಧ್ಯೇಽವ ತಿಷ್ಠತೇ । ಅಗಸ್ತ್ಯತಪಸಾ ಪಶ್ಚಾದ್ಗಯಾಸಾನ್ನಿಧ್ಯಮತ್ರವೈ । ಪಾದಾ ಈಶಾನ ವಿಷ್ಣ್ವಾದಿದೇವತಾಸ್ತತ್ರ ಸಂತಿಹಿ । ಯತಿರೂಪೋ ಮಾತರಿಶ್ವಾ ಅಷ್ಟಾವಿಂಶತಿಮೇ ಕಲೌ । ಯಜತ್ರಾಯಂ ವದಂತ್ಯತ್ರ ಮಧ್ವನಾಮ್ನಾ ಪರಂ ವಿಭುಂ । ತಸ್ಯೈವ ತಪಸಾ ಪುಣ್ಯೇ ಪ್ರೀತ್ಯಾ ಚಾಗಸ್ತ್ಯಯೋಗಿನಃ।ತತ್ಸ್ಥಾಪಿತಾಲಯೇ ಪುಣ್ಯೇ ಚಾತುರ್ಮಾಸ್ಯಂ ಕರಿಷ್ಯತಿ । ಶುಕಃ ಶ್ರೋಷ್ಯತಿ ಸಚ್ಛಾಸ್ತ್ರಂ ಪದ್ಮತೀರ್ಥಾದಿಕೈರ್ಯುತಃ। ಇತಿ ಬ್ರಹ್ಮ ಪುರಾಣಸ್ಥ ವೆಂಕಟಗಿರಿ ಮಾಹಾತ್ಮ್ಯಗತ ವಚನ, ಇತ್ಯಾದಿ ಪ್ರಮಾಣಗಳಿಂದ ಸಿದ್ಧವಾಗುತ್ತದೆಂದು ತಿಳಿಯಬೇಕು.) ॥ ೧ ॥

ಋ ॥ (೧೭೮) ಯೋ ರೇವಾನ್ಯೋ ಅಮೀವಹಾ ವಸುವಿತ್ಪುಷ್ಟಿವರ್ಧನಃ ।
ಸ ನಃ ಸಿಷಕ್ತು ಯಸ್ತುರಃ ॥ ೨ ॥

ಅ ॥ ಯಃ-ಯಾವಾತನು, ರೇವಾನ್=ದ್ರವ್ಯವುಳ್ಳವನೋ, ಯಃ= ಯಾವಾತನು, ಅಮೀವಹಾ=ರೋಗಪರಿಹಾರಕನೋ, ವಸುವಿತ್=ಜ್ಞಾನಾಖ್ಯ ವಸ್ತುವನ್ನು ತಿಳಿದವನೋ, (ತಿಳಿಯಲರ್ಹವಾದುದನ್ನು ಎಲ್ಲವನ್ನು ತಿಳಿದವನೋ, ಯಾವಾತನು, ಪುಷ್ಟಿವರ್ಧನಃ=(ಪುಷ್ಟಿಂ ವರ್ಧಯತಿ) ಭಕ್ತರಿಗೆ ಪುಷ್ಟಿಯನ್ನು ಅಭಿವೃದ್ಧಿ ಕರಿಸುವವನೋ, ಯಾವಾತನು, ತುರಃ=(ತುರತ್ವರಣೇ)ವೇಗರೂಪಪ್ರವೃತ್ತಿನಿಮಿತ್ತದಿಂದ ತುರಶಬ್ದವಾಚ್ಯನೋ, ಸಃ=ಅಂತಹ ಶ್ರೀವಿಷ್ಣುವು ವಾಯುವಾಗಲೀ, ನಃ-ನಮ್ಮನ್ನು, ಸಿಷಕ್ತು = (ಷಚಸಮವಾಯೇ) ಕೂಡಲಿ. (ಅಂದರೆ ನಮ್ಮಿಂದ ಸಂಯುಕ್ತನಾಗಲಿ.) (ನಮ್ಮ ಬುದ್ಧಿಗೆ ವಿಷಯನಾಗಲಿ) ॥ ೨ ॥

ಭಾ ॥ ವಿತ್ತವಾನ್ ರೋಗಹಾ ಜ್ಞಾನವೇತ್ತಾಽಸ್ಮಾಭಿಃ ಸಯುಗ್ಭವೇತ್ । ತುರೋ ವೇಗಾದ್ಧರಿರ್ವಾಯುಃ ॥ ೨ ॥

ಅ ॥ ಯಾವಾತನು ದ್ರವ್ಯವುಳ್ಳವನೋ ರೋಗಪರಿಹಾರಕನೋ, ತಿಳಿಯಲರ್ಹವಾದುದನ್ನು ಎಲ್ಲವನ್ನು ತಿಳಿದವನೋ, ವೇಗವೆಂಬ ಪ್ರವೃತ್ತಿ ನಿಮಿತ್ತದಿಂದ ತುರಶಬ್ದವಾಚ್ಯನಾದ ಶ್ರೀಹರಿಯೋ,ಅಥವಾ ವಾಯುವೋ, ಅಂತಹವನು ನಮ್ಮಿಂದ ಸಂಯುಕ್ತನು ಆಗಬೇಕು. ॥ ೨ ॥

ಋ ॥ (೧೭೯) ಮಾನಃ ಶಂಸೋ ಅರರುಷೋ ಧೂರ್ತಿಃ ಪ್ರಣಙ್ಮರ್ತ್ಯಸ್ಯ ।
ರಕ್ಷಾ ಣೋ ಬ್ರಹ್ಮಣಸ್ಪತೇ ॥ ೩ ॥

ಅ॥ ಅರರುಷಃ-(ರುಷಹಿಂಸಾಯಾಂ) ಅಲಂರುಷ್ಯತೀತಿ ಅತಿಹಿಂಸಕನಾದ, ಮರ್ತ್ಯಸ್ಯ=ಅಸ್ಥಾನದಲ್ಲಿ ಕೋಪವುಳ್ಳ ದೈತ್ಯಾದಿರೂಪ ಮನುಷ್ಯನಿಗೆ, ಧೂರ್ತಿಃ-(ತುರ್ವೀಧುರ್ವೀಹಿಂಸಾಯಾಂ)ಹಿಂಸಕವಾದ, ಶಂಸಃ=(ಶಂಸಕಥನೇ) ವಚನವು, (ಉಪದ್ರವಕ್ಕೆ ಸಾಧನವಾದ ಉಪದ್ರವಕಾರಿಯಾದ ಮಾತು) ನಃ=ನಮ್ಮನ್ನು, ಮಾ ಪ್ರಣಕ್=(ಪ್ರಾಪೂರಣೇ) (ಪೃಚೀಸಂಪರ್ಕೇ) ಪ್ರವೇಶಿಸಬಾರದು. (ಹೊಂದಬಾರದು) ಬ್ರಹ್ಮಣಃ ಪತೇ= ಶ್ರೀಹರಿಯೇ ವಾಯುವೇ, ನಃ= ನಮ್ಮನ್ನು, ರಕ್ಷ= ರಕ್ಷಿಸು. (ಅಂದರೆ ಹೇಗೆ ಅಂತಹ ಕೆಟ್ಟ ಮಾತು ನಮ್ಮನ್ನು ಹೊಂದಲಿಕ್ಕಿಲ್ಲವೋ ಹಾಗೆ ರಕ್ಷಿಸು.) ॥ ೩ ॥

ಭಾ ॥ ಅರರುಟ್ ಚಾತಿರೋಷಣಾತ್ । ತಸ್ಯ ಧೂರ್ತಿರ್ವಚೋ ನಾಸ್ಮಾನ್ ಪೂರಯೇದ್ರಕ್ಷ ನೋ ಹರೇ ॥ ೩ ॥

ಅ ॥ ಯಾವಾತನು ಅತಿಶಯವಾಗಿ ಹಿಂಸೆ ಮಾಡುವುದರಿಂದ ಅಲಂ ರುಷ್ಯತಿ ಎಂಬ ವ್ಯುತ್ಪತ್ತಿಯಿಂದ ಅರರುಟ್ ಎನಿಸುತ್ತಾನೋ, ಅಂತಹ ಅಸ್ಥಾನದಲ್ಲಿ ಕೋಪಗೊಳ್ಳತಕ್ಕ ದೈತ್ಯ ಮೊದಲಾದವರಿಗೆ ಉಪದ್ರವ ಕಾರಿಯಾದ ಮಾತು ನಮ್ಮನ್ನು ಹೊಂದಬಾರದು. ಎಲೋ ಶ್ರೀಹರಿಯೇ ಅಂತಹ ಮಾತು ನಮ್ಮನ್ನು ಹೇಗೆ ಹೊಂದಲಾರದೋ, ಹಾಗೆ ರಕ್ಷಿಸು. ॥ ೩ ॥

ಋ ॥ (೧೮೦) ಘಾ ವೀರೋ ನ ರಿಷ್ಯತಿ ಯಮಿಂದ್ರೋ ಬ್ರಹ್ಮಣಸ್ಪತಿಃ ।
ಸೋಮೋ ಹಿನೋತಿ ಮರ್ತ್ಯಂ ॥ ೪ ॥

ಅ ॥ ಯಂ ಮರ್ತ್ಯಂ= ಯಾವ ಮನುಷ್ಯನನ್ನು, ಇಂದ್ರಃ= ಇಂದ್ರನೂ, ಬ್ರಹ್ಮಣಸ್ಪತಿಃ= ಶ್ರೀಹರಿಯೂ, ವಾಯುವೂ, ಸೋಮಃ= ಸೋಮನೂ ಕೂಡ, ಹಿನೋತಿ= (ಹಿ ಗತೌ ವೃದ್ಧೌ ಚ) ಹೊಂದುತ್ತಾನೋ, ಅಭಿವೃದ್ಧೀಕರಿಸುತ್ತಾನೋ, ಸಃಘ=ಆ ಮನುಷ್ಯನೇ, ವೀರಃ= ಶೂರನು. ನ ರಿಷ್ಯತಿ= (ರಿಷ ಹಿಂಸಾಯಾಂ) ಸಂಹರಿಸಲ್ಪಡುವುದಿಲ್ಲ. ಘ= ಪ್ರಸಿದ್ಧವು. ॥ ೪ ॥

ಭಾ ॥ ಘೇತಿ ಹ್ಯಾವಧೃತಿಶ್ಚೈವ ಸೋಮಃ ಸೌಮ್ಯತ್ವತೋ ಹರಿಃ । ಉನಾ ಮಯಾ ಚ ಯುಕ್ತತ್ವಾದೂರ್ಮ್ಯೈರ್ಯುಕ್ತತ್ವತೋಽಪಿ ವಾ । ಅಮಃ ಸ ಇತಿ ವಾ ॥ ೪ ॥

ಅ ॥ ಘ ಎಂಬ ಶಬ್ದವು ಹ ಎಂಬ ಅರ್ಥದಲ್ಲಿದೆ. ಅಂದರೆ ಪ್ರಸಿದ್ಧಿ ಎಂಬ ಅರ್ಥವನ್ನು ತೋರಿಸುತ್ತದೆ. ಮತ್ತು ಅವಧೃತಿ:ಏವ=ನಿಶ್ಚಯವೆಂಬ ಅರ್ಥದಲ್ಲಿಯೂ ಇದೆ. (ಸೋಮ ಶಬ್ದವನ್ನು ಶ್ರೀಹರಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ.) (1) ಶ್ರೀ ಹರಿಯು ಸೌಮ್ಯನಾದುದರಿಂದ (ಕ್ರೌರ್ಯವಿಲ್ಲದಿರುವುದರಿಂದ) ಸೋಮಃ ಎನಿಸುತ್ತಾನೆ. ಅಥವಾ (2) ಉಶ್ಚ ಮಾ ಚ ಉಮೇ । ಉಮಾಭ್ಯಾಂ ಸಹ ವರ್ತತೇ ಎಂಬ ವ್ಯುತ್ಪತ್ತಿಯಿಂದ, **ಉಕಾರಃ ಶಂಕರಃ ಪ್ರೋಕ್ತಃ** ಎಂಬ ಪ್ರಮಾಣದಿಂದ ರುದ್ರನಿಂದಲೂ ಲಕ್ಷ್ಮೀ ದೇವಿಯಿಂದಲೂ ಕೂಡಿಕೊಂಡಿರುವುದರಿಂದಲೂ, (3) ಊರ್ಮ್ಯೈಃಸಹ ವರ್ತತೇ ಎಂಬ ವ್ಯುತ್ಪತ್ತಿಯಿಂದ **ಭೂತಾನಿ ವೈ ವಿಶ್ವ ಊಮಾಃ** ಎಂಬ ಶ್ರುತಿ

ಯಿಂದ ಸಮಸ್ತ ಭೂತಗಳಿಂದ ಕೂಡಿಕೊಂಡು ಪ್ರೇರಕನಾಗಿರುವುದರಿಂದ,ಅಂದರೆ ಸಮಸ್ತ ಭೂತಗಳನ್ನು ಪ್ರೇರೇಪಿಸುವುದರಿಂದಲೂ, (೫) ನ ವಿದ್ಯತೇ ಮಾ ಪರಿಮಿತಿಃ (ಪರಿಮಾಣವು) ಯಸ್ಯ ಎಂಬ ವ್ಯುತ್ಪತ್ತಿಯಿಂದ ಅಮಃ ಸಾರತ್ವಾತ್ ಸಃ, ಏವಂಚ ಸಶ್ಚಾಸೌ ಅಮಶ್ಚ ಎಂಬ ವ್ಯುತ್ಪತ್ತಿಯಿಂದ ಸರ್ವರಿಗಿಂತ ಶ್ರೇಷ್ಠನಾಗಿದ್ದು ಇಯತ್ತಾ ಇಲ್ಲದಿರುವುದರಿಂದ ಶ್ರೀ ಹರಿಯು ಸೋಮಃ ಎನಿಸುತ್ತಾನೆ. ॥ ೪ ॥

ಋ ॥ (೧೮೧) ತ್ವಂ ತಂ ಬ್ರಹ್ಮಣಸ್ಪತೇ ಸೋಮ ಇಂದ್ರಶ್ಚ ಮರ್ತ್ಯಂ ।
ದಕ್ಷಿಣಾ ಪಾತ್ವಂಹಸಃ ॥ ೫ ॥ ೩೪ ॥

ಅ ॥ ಬ್ರಹ್ಮಣಸ್ಪತೇ=ಎಲೋ ಶ್ರೀ ಹರಿಯೇ, ವಾಯುವೇ, ತಂ ಮರ್ತ್ಯಂ=(ಯಾರು ನಿನ್ನ ಭಕ್ತನೋ) ಅಂತಹ ಮನುಷ್ಯನನ್ನು, ತ್ವಂ=ನೀನು, ಅಂಹಸಃ= ಪಾಪದ್ವೆಶೆಯಿಂದ (ರಕ್ಷಿಸು.); ಸೋಮಃ=ಸೋಮನೂ, ಇಂದ್ರಃ= ಇಂದ್ರನೂ, ದಕ್ಷಿಣಾ ಚ=ಲಕ್ಷ್ಮೀ ದೇವಿಯೂ, ಶ್ರೀ ಹರಿಯೂ ಕೂಡ, ಪಾತು=ರಕ್ಷಿಸಲಿ. ॥ ೫ ॥

ಭಾ ॥ ಸಾಕ್ಷಾಚ್ಛ್ರೀರ್ದಕ್ಷೇಣೇತಿ ದಕ್ಷಿಣಾ । ದಕ್ಷಿಣಾ ಚತುರತ್ವಾದ್ವಾ ಸ್ವಯಮೇವ ಜನಾರ್ದನಃ ॥ ೫ ॥ ೩೪ ॥

ಅ ॥ ದಕ್ಷೇ=ದಕ್ಷಿಣ ಭಾಗದಲ್ಲಿ, ಇನಃ=ಸ್ವಾಮಿಯಾದ ಶ್ರೀವಿಷ್ಣುವು ಯಸ್ಯಾಃ ಎಂಬ ವ್ಯುತ್ಪತ್ತಿಯಿಂದ ಸಾಕ್ಷಾತ್ ಶ್ರೀ ದೇವಿಯೇ ದಕ್ಷಿಣಾ ಎನಿಸುತ್ತಾಳೆ. (ಸಾಕ್ಷಾತ್ ಎಂಬ ಪದದಿಂದ **ಶಂರೂಪಮಾಶ್ರಿತಾ ವಾಯುಂ ಶ್ರೀರಿತ್ಯೇವ ಚ ಕೀರ್ತಿತಾ ತಾಶ್ಚೇಂದ್ರಧರ್ಮನಾಸತ್ಯಶ್ರಯಣಾಶ್ಛ್ರಿಯ** ಇತ್ಯಾದಿ ಪ್ರಮಾಣಗಳಿಂದ ಶ್ರೀ ಶಬ್ದವಾಚ್ಯರಾದ ಸರಸ್ವತ್ಯಾದಿಗಳು ಅಲ್ಲವೆಂದುಕ್ತವಾಯ್ತು.) ಅಥವಾ **ದಕ್ಷಿಣೇ ಸರಳೋದಾರೌ** ಎಂಬ ಪ್ರಮಾಣದಿಂದ ಪರೇಚ್ಛಾನುಸಾರ ಪ್ರವೃತ್ತಿರೂಪವಾದ ಚಾತುರ್ಯನಿಮಿತ್ತದಿಂದಲೂ ಪ್ರಾವಿಣ್ಯದಿಂದಲೂ ಸಾಕ್ಷಾತ್ ಸ್ತ್ರೀ ರೂಪನಾದ ಶ್ರೀ ಹರಿಯೇ ದಕ್ಷಿಣಾ ಎನಿಸುತ್ತಾನೆ. ॥ ೫ ॥ ೩೪ ॥

ಋ ॥ (೧೮೨) ಸದಸಸ್ಪತಿಮದ್ಭುತಂ ಪ್ರಿಯಮಿಂದ್ರಸ್ಯ ಕಾಮ್ಯಂ ।
ಸನಿಂ ಮೇಧಾಮಯಾಸಿಷಂ ॥ ೬ ॥

ಅ ॥ (ನಾನು) ಅದ್ಭುತಂ=ಆಶ್ಚರ್ಯ ಸ್ವರೂಪನೂ, ಇಂದ್ರಸ್ಯ ಪ್ರಿಯಂ=ಇಂದ್ರನಿಗೆ ಪ್ರಿಯನಾದವನೂ, ಕಾಮ್ಯಂ=ಸಮಸ್ತ ಜನರಿಗೂ ಇಚ್ಛಾ ವಿಷಯನೂ, ಸನಿಂ=ಲಾಭಸ್ವರೂಪನೂ, ಮೇಧಾಂ-ಜ್ಞಾನಸ್ವರೂಪನೂ, ಸದಸಃ ಪತಿಂ-(ಪಾರಕ್ಷಣೇ)ಸಭೆಗೆ ಪಾಲಕನೂ **ಸ್ರಷ್ಟಾಪಾತಾ ತಥೈವಾತ್ತಾನಿಖಿಲಸ್ಯೈಕ ಏವತು** ಇತ್ಯಾದಿ ಪ್ರಮಾಣಗಳಿಂದ ಸರ್ವಪಾಲಕನೂ ಆದ ಶ್ರೀ ವಿಷ್ಣುವನ್ನು ಅಥವಾ ಪ್ರಧಾನ ವಾಯುವನ್ನು, ಪ್ರಧಾನಾಗ್ನಿಯನ್ನಾಗಲೀ, ಅಯಾಸಿಷಂ-(ಯಾಪ್ರಾಪಣೇ) ಶರಣು ಹೊಂದುವೆನು. ॥ ೬ ॥

ಭಾ ॥ (೧) ಸದಸಸ್ಪತಿರ್ಹರಿಃ ಸಾಕ್ಷಾದ್ವಾಯುರಗ್ನಿರಥಾಪಿ ವಾ ॥ (೨) ಲಾಭಜ್ಞಾನ ಸ್ವರೂಪೋಽಸೌ ಶರಣಂ ತಮಯಾಸಿಷಂ ॥ ೬ ॥

ಅ ॥ (೧) ಶ್ರೀ ಹರಿಯೇ ಮುಖ್ಯವೃತ್ತಿಯಿಂದ ಸಭೆಗೆ ರಕ್ಷಕನು. ಪಾಲಕನು. ಹಾಗೆಯೇ ಮುಖ್ಯವಾಯುವೂ ಕೂಡ. (ಪ್ರವಹಾದಿ ವಾಯುಗಳಲ್ಲ) ಅಥವಾ ಮುಖ್ಯಾಗ್ನಿಯೂ ಕೂಡ ಸದಸಸ್ಪತಿಯು. (ಅಗ್ನಿಪುತ್ರರಲ್ಲ) (೨) (ಸನಿಮೇಧಾ ಶಬ್ದಾರ್ಥವನ್ನು ಹೇಳುತ್ತಾರೆ.) ಈ ಶ್ರೀ ಹರಿಯು ಲಾಭಸ್ವರೂಪನೂ ಜ್ಞಾನಸ್ವರೂಪನೂ ಆಗಿರುತ್ತಾನೆ. ಆತನನ್ನು ಶರಣು ಹೊಂದುವೆನು. ॥ ೬ ॥

ಋ ॥ (೧೮೩) ಯಸ್ಮಾದೃತೇ ನ ಸಿಧ್ಯತಿ ಯಜ್ಞೋ ವಿಪಶ್ಚಿತಶ್ಚನ ।
ಸ ಧೀನಾಂ ಯೋಗಮಿನ್ವತಿ ॥ ೭ ॥

ಅ ॥ ಯಸ್ಮಾದೃತೇ= ಯಾವ ಸದಸಸ್ಪತಿಯ ಅನುಗ್ರಹವಿಲ್ಲದೆ, ವಿಪಶ್ಚಿತಶ್ಚನ= ಜ್ಞಾನಿಗೂ ಕೂಡ, ಯಜ್ಞಃ= ಯಾಗವು, ನ ಸಿಧ್ಯತಿ= ಸಿದ್ಧಿಸುವುದಿಲ್ಲವೋ. ಸಃ= ಅಂತಹ ಸದಸಸ್ಪತಿಯು, ಧೀನಾಂ= ಬುದ್ಧಿಗಳ, ಯೋಗಂ= ಸಂಬಂಧವನ್ನು ಇನ್ವತಿ= (ಇವಿ ವ್ಯಾಪ್ತೌ) ಹೊಂದುತ್ತಾನೆ. ॥ ೭ ॥

ಭಾ ॥ ಧೀಪ್ರೇರಕಃ ಸ ಧ್ಯೇಯಶ್ಚ ಧೀಭಿರ್ಯೋಗಂ ತದಾಪ್ನುತೇ (೭

ಅ ॥ ಯಾವ ಕಾರಣದಿಂದ ಆ ಶ್ರೀಹರಿಯು ಸರ್ವರ ಬುದ್ಧಿಗಳಿಗೆ ಪ್ರೇರಕನೋ, (ಬುದ್ಧಿಗಳಿಗೆ ವಿಷಯನೋ) ಧ್ಯಾನಾರ್ಹನೂ ಆಗಿರುತ್ತಾನೋ, ಆದಕಾರಣ ಬುದ್ಧಿಗಳಿಂದ ಸಂಬಂಧವನ್ನು ಹೊಂದುತ್ತಾನೆ. (ಏವಂಚ ಬುದ್ಧಿಗಳಿಗೆ ಪ್ರೇರಕನಾಗಿರುವುದರಿಂದಲೂ ಧ್ಯೇಯನಾಗಿರುವುದರಿಂದಲೂ ಬುದ್ಧಿ ಸಂಬಂಧವನ್ನು ಹೊಂದುತ್ತಾನೆಂದು ಶ್ರುತಿಯಲ್ಲಿ ಹೇಳಿದ್ದು ಯುಕ್ತವು.) ॥ ೭ ॥

ಋ ॥ (೧೮೪) ಆದೃಧ್ನೋತಿ ಹವಿಷ್ಕೃತಿಂ ಪ್ರಾಂಚಂ ಕೃಣೋತ್ಯಧ್ವರಂ ।
ಹೋತ್ರಾ ದೇವೇಷು ಗಚ್ಛತಿ ॥ ೮ ॥

ಅ ॥ (ಸದಸಸ್ಪತಿಯಿಲ್ಲದೆ ಯಜ್ಞವು ಸಿದ್ಧಿಸುವುದಿಲ್ಲ ಎಂದದ್ದನ್ನುಪಪಾದಿಸುತ್ತಾರೆ.) (ಯಾವ ಕಾರಣದಿಂದ ಸರ್ವಸ್ವಾಮಿಯಾದ ಸದಸಸ್ಪತಿಯು ಹವಿಷ್ಕೃತೀ=(ಹವಿಷಃ ಕೃತಿಃ ಯಸ್ಮಿನ್ ಯಜಮಾನೇ ಸಾ ಹವಿಷ್ಕೃತಿಃ ಎಂಬ ವ್ಯುತ್ಪತ್ತಿಯಿಂದ ಅಥವಾ ಹವಿಷು ಕೃತಿಃಂ ಸಂಪಾದನಂ ಯಸ್ಯ ಎಂಬವ್ಯುತ್ಪತ್ತಿಯಿಂದ)ಯಜಮಾನನನ್ನು, ಋಧ್ನೋತಿ=(ಯಜ್ಞಮಾಡತಕ್ಕ ಯಜಮಾನನಿಗೆ) ಸಮೃದ್ಧನನ್ನಾಗಿ ಮಾಡುತ್ತಾನೋ, ಯಾವ ಕಾರಣದಿಂದ ಅಧ್ವರಂ= ಯಜ್ಞವನ್ನು, ಪ್ರಾಂಚಂ= (ಪ್ರಕೃಷ್ಟತಯಾ ಅಂಚತಿ= ಪ್ರವರ್ತತೇ ಎಂಬ ವ್ಯುತ್ಪತ್ತಿಯಿಂದ ಉತ್ತಮನನ್ನಾಗಿ, ಕೃಣೋತಿ= ಮಾಡುತ್ತಾನೋ, ಯಾವ ಕಾರಣದಿಂದ, ದೇವೇಷು= ದೇವ ವಿಷಯಗಳಾದ; ಹೋತ್ರಾ= ದೇವತೆಗಳ ಆಹ್ವಾನಗಳನ್ನು, ಗಚ್ಛತಿ= ಹೊಂದುತ್ತಾನೋ, (ಸ್ವೀಕರಿಸುತ್ತಾನೋ,) ಅತ್= ಆ ಕಾರಣ, ಸದಸಸ್ಪತಿಯಿಲ್ಲದೆ ಯಜ್ಞವು ಸಿದ್ಧಿಸುವುದಿಲ್ಲ. ॥ ೮ ॥

ಭಾ ॥ ತಸ್ಮಾದ್ಧವಿಷ್ಕೃತಸ್ಸಮೃದ್ಧಿಂ ಕರೋತಿ ಯಜತೋ ವಿಭುಃ । ಕರೋತಿ ಚೋತ್ತಮಂ ಯಜ್ಞಂ ದೇವಾಹ್ವಾನಾನಿ ಗಚ್ಛತಿ ॥ ೮ ॥

ಅ ॥ ಆದಕಾರಣ ಶ್ರೀಹರಿಯು ಯಜ್ಞ ಮಾಡತಕ್ಕ ಯಜಮಾನನಿಗೆ ಅಭಿವೃದ್ಧಿಯನ್ನು ಮಾಡುತ್ತಾನೆ. (ಅಂದರೆ ಸಫಲೀಕರಿಸುತ್ತಾನೆ. ಅಂತೂ ಸಂತಾನಾಭಿವೃದ್ಧಿಯನ್ನು ಮಾಡುತ್ತಾನೆ.) ಯಾಗವನ್ನು ಉತ್ತಮವನ್ನಾಗಿ ಮಾಡುತ್ತಾನೆ. (ಅಂದರೆ ದೇವತೆಗಳುಪಭೋಗಿಸುವಂತೆ ಮಾಡುವುದು. ಮತ್ತೂ ಸ್ವರ್ಗಾದಿರೂಪ ಉತ್ತಮ ಫಲವನ್ನು ಕೊಡುವಂತೆ ಮಾಡುವುದು) ದೇವತೆಗಳ ಆಹ್ವಾನಗಳನ್ನು ಸ್ವೀಕರಿಸುತ್ತಾನೆ.

ವಿ ॥ ಈ ಮೂರರ ಮಧ್ಯದಲ್ಲಿ ಮೊದಲು ಮೊದಲಿನದ್ದನ್ನು ಕುರಿತು ಮೇಲು ಮೇಲಿನದ್ದು ಕಾರಣವು. ದೇವತೆಗಳ ಆಹ್ವಾನಗಳು ವಿಷ್ಣು ವಿಷಯಕಗಳೆಂದು ಅನುಸಂಧಾನ ಮಾಡಿದರೇನೇ ಯಜ್ಞವು ದೇವತೆಗಳಿಗೆ ಉಪಭೋಗ್ಯವಾಗುವುದು (ವಿಷ್ಣುವಿಷಯಕಗಳಾಗದೆ. ಇದ್ದರೆ ದೈತ್ಯರಿಗೆ ಉಪಭೋಗ್ಯ. ದೇವತೆಗಳಿಂದುಪಭುಕ್ತ

ವಾದ ಯಜ್ಞದಿಂದಲೇ ಯಜಮಾನನಿಗೆ ಫಲವು ದೃಷ್ಟವಾಗುತ್ತದೆ. ಏವಂಚ ಇವೆಲ್ಲವನ್ನೂ ನೀನೇ ಮಾಡುವುದರಿಂದ ನೀನು ಇಲ್ಲದೆ ಯಾಗವು ಸಿದ್ಧಿಸುವುದಿಲ್ಲ. ಎಂಬದ್ದು ಯುಕ್ತವು. ॥ ೮ ॥

ಋ ॥ (೧೮೫) ನರಾಶಂಸಂ ಸುಧೃಷ್ಟಮಮಪಶ್ಯಂ ಸಪ್ರಥಸ್ತಮಂ ।
ದಿವೋ ನ ಸದ್ಮಮಖಸಂ ॥ ೯ ॥ ೩೫ ॥ ೧೮ ॥

ಅ ॥ (ಯಾವ ನರಾಶಂಸನಿಗೆ] ಸದ್ಮಮಖಸಂ= ಗೃಹ ರೂಪವಾದ ಯಜ್ಞವು, ಅಥವಾ ದೇವತೆಗಳಿಗೆ ಪ್ರಿಯವಾದ ಅಗ್ನಿ ಗೃಹವೂ ಯಜ್ಞವೂ ಕೂಡ, ದಿವಃ= ಸ್ವರ್ಗಕ್ಕಿಂತಲೂ ಅತಿಶಯವಾಗಿ ಪ್ರಿಯಂನ= ಪ್ರಿಯವಾದುದಂತೆ ತೋರುತ್ತದೋ, [ಅಂತಹ] ಸುಧೃಷ್ಟಮಂ= ಅತಿಧಾರ್ಷ್ಟ್ಯವಿರುವ, ಸಪ್ರಥಸ್ತಮಂ= (ಪ್ರಥು ಪ್ರಖ್ಯಾನೇ)ಅತಿಶಯಿತ ಗುಣ ವಿಸ್ತಾರದಿಂದ ಸಹಿತನಾದ, ನರಾಶಂಸಂ= ನರೈಃ ಆ ಶಂಸ್ಯತೇ [ಶಂಸು ಸ್ತುತೌ] ಎಂಬ ವ್ಯುತ್ಪತ್ತಿಯಿಂದ ಬ್ರಹ್ಮಾದಿ ಪುರುಷರಿಂದ ಚೆನ್ನಾಗಿ ಸ್ತುತಿಸಲ್ಪಡುವ ಶ್ರೀವಿಷ್ಣುವನ್ನು(ನಾನು)ಅಪಶ್ಯಂ= ನೋಡಿರುವೆನು. ॥ ೩೫ ॥೧೮ ॥

ಭಾ ॥ (೧) ನರೈಃ ಸ್ತುತ್ಯೋ ನರಾಶಂಸೋ ಹರಿರ್ಧೃಷ್ಟತಮಶ್ಚ ಸಃ ॥ [೨] ಗುಣಾನಾಂ ಪ್ರಥಮಾಧಿಕ್ಯಾತ್ಸಪ್ರಥಸ್ತಮ ಈರಿತಃ॥ [೩] ಯಸ್ಯ ಸ್ವರ್ಗಾದಪಿ ಗೃಹಂ ಮಖಃ ಪ್ರಿಯಮಿವೇಯತೇ ॥ ೯ ॥ ೩೫ ॥ ೧೮ ॥

ಅ ॥(೧) ಶ್ರೀಹರಿಯು ಬ್ರಹ್ಮಾದಿ ಪುರುಷರಿಂದ ಸ್ತುತ್ಯನಾದುದರಿಂದ ನರಾಶಂಸನೆನಿಸುತ್ತಾನೆ. ಆ ಶ್ರೀಹರಿಯು ಅತಿಧಾರ್ಷ್ಟ್ಯವಿರುವವನು. (೨)ಆತನು ಗುಣಗಳ ಅತಿಶಯಿತ ವಿಸ್ತಾರಾಧಿಕ್ಯದಿಂದ ಸಪ್ರಥಸ್ತಮಃ ಎನಿಸುತ್ತಾನೆ. (೩) ಯಾವ ಶ್ರೀಹರಿಗೆ ದೇವತೆಗಳಿಗೆ ಪ್ರಿಯವಾದ ಅಗ್ನಿ ಗೃಹವೂ ಯಾಗವೂ ಕೂಡ ಸ್ವರ್ಗಕ್ಕಿಂತಲೂ ಪ್ರಿಯದಂತೆ ತೋರುತ್ತದೋ, ಅಂತಹನು. ॥೯ ॥ ೩೫ ॥ ೧೮ ॥

ಅವ ॥ ೯ ಋಕ್ಕು-೨ ವರ್ಗ. ಅಗ್ನಿಮಾರುತ ದೇವತಾಕವು. ಗಾಯತ್ರ ಸೂಕ್ತ. ।

ಋ ॥(೧೮೬) ಪ್ರತಿ ತ್ಯಂ ಚಾರುಮಧ್ವರಂ ಗೋಪೀಥಾಯ ಪ್ರ ಹೂಯಸೇ ।
ಮರುದ್ಭಿರಗ್ನ ಆಗಹಿ ॥ ೧ ॥

ಅ ॥ ಅಗ್ನೇ= ಎಲೋ ವಿಷ್ಣುವೇ, ಪ್ರಧಾನಾಗ್ನಿಯೇ, ಗೋಪೀಥಾಯ= ರಕ್ಷಣೆಗಾಗಿ, ಚಾರುಂ= ಮಂಗಲಕರವಾದ, (ಅಂದರೆ ಚೆನ್ನಾಗಿ ಶಾಸ್ತ್ರೋಕ್ತ ಲಕ್ಷಣಗಳುಳ್ಳ) ತ್ಯಂ= ಪ್ರಸಿದ್ಧವಾದ, ಅಧ್ವರಂ ಪ್ರತಿ= ಎಲ್ಲಾ ಯಜ್ಞಗಳನ್ನು ಕುರಿತು, ಪ್ರಹೂಯಸೇ= (ನೀನು ಯಾವ ಕಾರಣದಿಂದ) ಕರೆಯಲ್ಪಡುತ್ತಿಯೋ, (ಆ ಕಾರಣ) ಮರುದ್ಭಿಃ= ವಾಯುಗಳಿಂದ (ಕೂಡಿಕೊಂಡು,) ಆಗಹಿ= ಬಾ. ॥ ೧ ॥

ಭಾ ॥ ಯಜ್ಞಂ ಪ್ರತಿಪ್ರತಿ ತ್ಯಂ ತಂ ಸಮ್ಯಕ್ ಶಾಸ್ತ್ರೋಕ್ತಲಕ್ಷಣಂ । ಆಹೂಯಸೇ ।೧॥

ಅ ॥ ಚೆನ್ನಾಗಿ ಶಾಸ್ತ್ರಗಳಲ್ಲಿ ಹೇಳಿದ ಲಕ್ಷಣಗಳುಳ್ಳ ಆ ಪ್ರಸಿದ್ಧ ಎಲ್ಲಾ ಯಜ್ಞಗಳನ್ನು ಕುರಿತು ಕರೆಯಲ್ಪಡುತ್ತಿಯೋ, (ಆ ಕಾರಣ ಇಷ್ಟವನ್ನು ಕೊಡುವುದಕ್ಕಾಗಿ ಬಾ.) ॥ ೧ ॥

**ಋ ॥ (೧೮೭) ನ ಹಿ ದೇವೋ ನ ಮರ್ತ್ಯೋ ಮಹಸ್ತವ ಕ್ರತುಂ ಪರಃ।
ಮರುದ್ಭಿರಗ್ನ ಆಗಹಿ ॥ ೨ ॥**

ಅ॥ ಅಗ್ನೇ=ಎಲೋ ಶ್ರೀ ವಿಷ್ಣುವೇ, ಕ್ರತುಂ=ಯಾಗವನ್ನು (ಕುರಿತು ಬರಲಿಕ್ಕೆ) ತವ=ನಿನಗಿಂತ, ಪರಃ=ಬೇರೆಯಾದ, ದೇವಃ=ದೇವನು, ಮಹಃ=ಶ್ರೇಷ್ಠನು ಪೂಜ್ಯನು, ನ ಹಿ=ಇಲ್ಲವೇ ಇಲ್ಲ. ಮರ್ತ್ಯಃನ=ಮನುಷ್ಯನಾದರೂ ಇಲ್ಲವೇ ಇಲ್ಲ ಎನ್ನುವುದು ಸುತರಾಂಸಿದ್ಧವು(ಆದ ಕಾರಣ) ಮರುದ್ಭಿಃ ಆಗಹಿ=ವಾಯುಗಳಿಂದ ಕೂಡಿಕೊಂಡು ಬಾ ॥ ೨ ॥

ಭಾ ॥ (೧) ಮಹಾನ್ನೈವ ತ್ವದನ್ಯೋಽಸ್ತಿ ಕ್ರತುಂಪ್ರತಿ । (೨) ವಿಷ್ಣೌ ಹಿ ಮುಖ್ಯತೋಽರ್ಥೋಽಯಮಗ್ನೌ ಕಾಂಶ್ಚಿದೃತೇ ಸುರಾನ್ ॥ ೨ ॥

ಅ ॥ (೧) ಯಾಗಗಳನ್ನು ಕುರಿತು ಬರಲಿಕ್ಕೆ ನಿನ್ನಿಂದ ವ್ಯತಿರಿಕ್ತನಾದವನು ಶ್ರೇಷ್ಠನು ಪೂಜ್ಯನು ಇಲ್ಲವೇ ಇಲ್ಲ. (೨) (ಇಲ್ಲಿ ಅಗ್ನಿಗೆ ಸರ್ವೋತ್ತಮತ್ವವು ಉಕ್ತವಾಗಿದೆ. ಆ ಸರ್ವೋತ್ತಮತ್ವವನ್ನು ವಿಷ್ಣು ಪ್ರಸಿದ್ಧಾಗ್ನಿ ಭೇದದಿಂದ ವ್ಯಾಖ್ಯಾನ ಮಾಡುತ್ತಾರೆ) ನಿನಗಿಂತ ಇತರನು ಶ್ರೇಷ್ಠನು ಇಲ್ಲವೇ ಇಲ್ಲ ಎಂಬೀ ಅರ್ಥವು ಅಗ್ನಿ ಶಬ್ದದಿಂದ ಶ್ರೀ ವಿಷ್ಣುವನ್ನು ವಿವಕ್ಷಾ ಮಾಡಿದರೆ ಮುಖ್ಯವಾಗಿ (ಸಂಕೋಚವಿಲ್ಲದೆ) ಸರ್ವೋತ್ತಮನೆಂದು ವ್ಯಾಖ್ಯಾನ ಮಾಡಬೇಕು. ಪ್ರಸಿದ್ಧಾಗ್ನಿಯನ್ನು ವಿವಕ್ಷಾ ಮಾಡಿಕೊಂಡರೆ ಕೆಲವು ದೇವತೆಗಳನ್ನು (ವಿಷ್ಣ್ವಾದಿ ದೇವತೆಗಳನ್ನು ಆರಂಭಿಸಿಕೊಂಡು ನಾರದ ಪರ್ಯಂತರಾದವರನ್ನು)ಬಿಟ್ಟು ಕೆಳಗಿನವರಿಂದುತ್ತಮನೆಂದು ಸಂಕೋಚದಿಂದವ್ಯಾಖ್ಯಾನ ಮಾಡಬೇಕು ॥ ೨ ॥

**ಋ (೧೮೮) ಯೇ ಮಹೋ ರಜಸೋ ವಿದುರ್ವಿಶ್ವೇ ದೇವಾಸೋ ಅದ್ರುಹಃ
ಮರುದ್ಭಿರಗ್ನ ಆಗಹಿ ॥ ೩ ॥**

ಅ॥ ಅದ್ರುಹಃ=(ನದ್ರುಹ್ಯಂತೀತಿ) ಸಜ್ಜನರಿಗೆ ದ್ರೋಹ ಮಾಡದಿರುವ, ಯೇ ವಿಶ್ವೇದೇವಾಸಃ=ಯಾವ ಮರುತ್‌ಗಳು, ಮಹಃ=ಶ್ರೇಷ್ಠವಾದ, ರಜಸಃ=ಅನುರಾಗವನ್ನು ಹುಟ್ಟಿಸುವ ಸ್ವರ್ಗದಲ್ಲಿದ್ದೇ ವಿದುಃ=ಎಲ್ಲವನ್ನು ತಿಳಿಯುತ್ತಾರೋ, (ಅಂತಹ ದೂರದರ್ಶನಾದಿಗಳುಳ್ಳ) ಮರುದ್ಭಿಃ=ಮರುತ್‌ಗಳಿಂದ ಕೂಡಿಯೇ ಆಗಹಿ=ಬಾ ॥ ೩ ॥

ಭಾ ॥ ಮಹತೋ ರಂಜಕಾತ್ಸ್ವರ್ಗಾದದ್ರೋಗ್ಧಾರೋಽಖಿಲಂ ವಿದುಃ ॥ ೩ ॥

ಅ॥ ಸಜ್ಜನರಿಗೆ ದ್ರೋಹ ಮಾಡದಿರುವ ಮರುತ್‌ಗಳು ಶ್ರೇಷ್ಠವಾದ ಅನುರಾಗವನ್ನು ಹುಟ್ಟಿಸುವ ಸ್ವರ್ಗದಲ್ಲಿ ಕೂತಕೊಂಡೇ ಎಲ್ಲವನ್ನು ತಿಳಿಯುತ್ತಾರೆ ॥ ೩ ॥

**ಋ ॥ (೧೮೯) ಯ ಉಗ್ರಾ ಅರ್ಕಮಾನೃಚುರನಾಧೃಷ್ಟಾಸ ಓಜಸಾ ।
ಮರುದ್ಭಿರಗ್ನ ಆಗಹಿ ॥ ೪ ॥**

ಅ || ಯೇ= ಯಾವ, ಉಗ್ರಾಃ= ದೈತ್ಯರನ್ನು ಕುರಿತು ಕ್ರೂರರಾದ ಮರುತ್‌ಗಳು ಓಜಸಾ= ಸಾಮರ್ಥ್ಯದಿಂದ, ಅನಾಧೃಷ್ಟಾಸಃ= (ಧೃಷುಶಕ್ತಿಬಂಧನೇ) ಅಭಿಭೂತರು (ಪರರಿಂದ ಪ್ರತಿಬದ್ಧವಾದ ಶಕ್ತಿಯುಳ್ಳವರು) ಆಗದಿರುವವರಾಗಿ, ಅರ್ಕಂ=ಸೂರ್ಯನನ್ನು ಆನೃಚುಃ=(ಅರ್ಚ ಗತಿ ಪೂಜನಯೋಃ) ಹೊಂದಿರುತ್ತಾರೋ, (ಸೂರ್ಯನಲ್ಲಿ ವಿಶೇಷತಃ ಸನ್ನಿಹಿತರಾಗಿರುತ್ತಾರೋ) ಅಂತಹ, ಮರುದ್ಭಿಃ=ವೇದ ಪ್ರತಿಪಾದ್ಯ ಭಗವದ್ರೂಪಗಳಿಂದಲೂ ಪ್ರಸಿದ್ಧ ವಾಯುಗಳಿಂದಲೂ ಕೂಡಿಕೊಂಡು, ಆಗಹಿ=ಬಾ. || ೪ ||

ಭಾ || ಪ್ರಾಪ್ತಾ ಅರ್ಕಂ ವಿಶೇಷೇಣ ಸನ್ನಿಧಿಸ್ತತ್ರ ಯದ್ಧರೇಃ || ೪ ||

ಅ || (ಸರ್ವತ್ರ ವ್ಯಾಪ್ತನಾದ ಶ್ರೀಹರಿಗೆ ವಿಶೇಷವಾಗಿ ಸೂರ್ಯ ಪ್ರಾಪ್ತಿಯನ್ನು ಹೇಳಲು ಕಾರಣವೇನಂದರೆ) ಯಾವ ಕಾರಣದಿಂದ ವಿಶೇಷತಃ ಆ ಸೂರ್ಯನಲ್ಲಿ ಶ್ರೀಹರಿಯ ಸನ್ನಿಧಾನವು ಅಧಿಕವಾಗಿ ಇದೆಯೋ ಆ ಕಾರಣ ಅರ್ಕಂ ಪ್ರಾಪ್ತಾಃ ಎಂದು ವಿಶೇಷೋಕ್ತಿಯು ಯುಕ್ತವು. || ೪ ||

ಋ || (೧೯೦) ಯೇ ಶುಭ್ರಾ ಘೋರವರ್ಪಸಃ ಸುಕ್ಷತ್ರಾಸೋ ರಿಶಾದಸಃ |
ಮರುದ್ಭಿರಗ್ನ ಆಗಹಿ || ೫ || ೩೬ ||

ಅ || ಅಗ್ನೇ=ಶ್ರೀಹರಿಯೇ, ಶುಭ್ರಾಃ=ಚೆನ್ನಾಗಿ ಪ್ರಕಾಶಿಸುತ್ತಿರುವ, (ಅಂದರೆ ಶುದ್ಧಗಳಾದ) (ಘೋರವರ್ಪಸಃ= ದೈತ್ಯರನ್ನು ಕುರಿತು ಕ್ರೂರವಾದ ಬಲವುಳ್ಳ, ಸುಕ್ಷತ್ರಾಸಃ= (ಕ್ಷಿ, ಕ್ಷಯೇ, ಅಥವಾ ಕ್ಷಿನಿವಾಸೇ, ತ್ರೈಙ್ ಪಾಲನೇ) ಚೆನ್ನಾಗಿ ಶರೀರವನ್ನು ಅಥವಾ ಭೂಮ್ಯಾದಿಗಳನ್ನು ರಕ್ಷಿಸುವ, ಅಥವಾ ದ್ರವ್ಯಾದಿ ನಾಶದಿಂದಲೂ ರಕ್ಷಿಸುವ, (ರಿಂ=ರಮ್ಯವಾದ ಶಂ=ಸುಖವನ್ನು ಅದಂತಿ ಎಂಬ ವ್ಯುತ್ಪತ್ತಿಯಿಂದ) ರಿಶಾದಸಃ=ರಮ್ಯವಾದನಿರ್ದೋಷವಾದ ಸುಖವನ್ನು ಭೋಗಿಸುವ, ಇಂತಹ, ಯೇ=ಯಾವ ಮರುತ್‌ಗಳು ಇದ್ದಾವೋ ಅಂತಹ, ಮರುದ್ಭಿಃ= ವೇದ ಪ್ರತಿಪಾದ್ಯ ಭಗವದ್ರೂಪ ವಿಶೇಷಗಳಿಂದ ಕೂಡಿಕೊಂಡು ಆಗಹಿ= ಬಾ. || ೫ ||

ಭಾ || (೧) ಶುದ್ಧಾಃ ಘೋರಬಲಾಃ ಕ್ಷೇತ್ರತ್ರಾತಾರಃ ಕ್ಷತಿತೋಽಪಿವಾ | ರಮ್ಯಸತ್ಸುಖಭೋಕ್ತಾರೋ ಮರುತೋ ಮಾರುತಸ್ತತಃ (೨) ಏತಾದೃಶಾನಿ ರೂಪಾಣಿ ಪ್ರಾಣಾಗ್ನಿಸ್ಥಾನಿ ಚೇಶಿತುಃ || ಪೃಥಗ್ವಾ ತಾದೃಶಾನ್ಯೇವ ದೇವಗಾನ್ಯಪಿ ಸರ್ವಶಃ || ೫ || ೩೬ ||

ಅ || (೧) ಶುದ್ಧಗಳಾದ (ನಿರ್ದುಷ್ಟಗಳಾದ) ದೈತ್ಯರ ಮೇಲೆ ಕ್ರೂರವಾದ ಬಲವನ್ನು ತೋರಿಸುವವುಗಳು, ಚೆನ್ನಾಗಿ ಶರೀರ ಭೂಮ್ಯಾದಿಗಳನ್ನು ರಕ್ಷಿಸುವವುಗಳು, ಅಥವಾ ದ್ರವ್ಯಾದಿ ನಾಶದಿಂದ ರಕ್ಷಿಸುವವುಗಳು (ದ್ರವ್ಯಾದಿಗಳು ನಾಶವಾಗದಂತೆ ಮಾಡುವವರು) ಮನೋಹರವಾದ ನಿರ್ದುಷ್ಟವಾದ ಸುಖವನ್ನುಣ್ಣುವ, ಇಂತಹವುಗಳು ವೇದಪ್ರತಿ ಪಾದ್ಯಗಳಾಗಿರುವುದರಿಂದ ಮರುತ್ ಎನ್ನಿಸಿ ಕೊಳ್ಳುವ ಭಗವದ್ರೂಪವಿಶೇಷಗಳು) (ಅಂತಹ ರೂಪ ವಿಶೇಷಗಳಿಂದ ಕೂಡಿಕೊಂಡು ಬಾ.) (೨) (ಇಲ್ಲಿ ಮರುತ್ ಅಗ್ನಿ ಶಬ್ದಗಳಿಂದ ಮುಖ್ಯವಾಗಿ ಶ್ರೀವಿಷ್ಣುವೇ ಹೇಳಲ್ಪಡುತ್ತಾನೆಂಬುವುದು ಸಿದ್ಧವೇ. ಅಲ್ಲದೆ ರೂಪ ವಿಶೇಷವನ್ನು ಪ್ರತಿಪಾದಿಸುತ್ತಾರೆ.) ಸರ್ವೇಶ್ವರನಾದ ಶ್ರೀಹರಿಯ ಹಿಂದೆ ಹೇಳಿದ ಗುಣಗಳುಳ್ಳ ರೂಪಗಳು ಪ್ರಾಣಸ್ಥಾನಿ= ಇಂದ್ರಿಯಗಳಲ್ಲಿ ನಿಯಾಮಕಗಳಾಗಿರತಕ್ಕವುಗಳು ಅಥವಾ ಪ್ರಾಣ ಅಪಾನಾದಿ ವಾಯುಗಳಲ್ಲಿರತಕ್ಕವುಗಳು ಇವು ಮರುತ್ ಶಬ್ದವಾಚ್ಯಗಳು. ಅಗ್ನಿಸ್ಥಾನಿ= ಜಾಠರಾಗ್ನಿಯಲ್ಲಿ ನಿಯಾಮಕಗಳಾಗಿರುವ ಭಗವದ್ರೂಪಗಳು ಅಗ್ನಿಶಬ್ದ ವಾಚ್ಯಗಳು. ರಾಮಕೃಷ್ಣ ಮೊದಲಾದ ರೂಪಗಳಂತೆಯೇ ಮರುತ್ ಅಗ್ನಿಶಬ್ದ ವಾಚ್ಯ ಭಗವದ್ರೂಪಗಳೂ ಪ್ರತ್ಯೇಕವಾಗಿಯೇ ಇವೆ. ಅಧಿಷ್ಠಾ

ನಾಂತರಗಳಲ್ಲಿ ಇರುಸವುಗಳಲ್ಲ. (ಇವು ಅಧ್ಯಾತ್ಮ ರೂಪಗಳು) ಅಂತಹ ಎಲ್ಲಾ ರೂಪಗಳೂ ಮರುತ್, ಅಗ್ನಿ ದೇವತೆಗಳಲ್ಲಿಯೂ ಇವೆ. (ಇದರಿಂದ ಅಧಿದೈವದಲ್ಲಿರತಕ್ಕ ರೂಪವು ಉಕ್ತವಾಯ್ತು.) ಇದು ಬಾಹ್ಯಾರ್ಥವು. ॥ ೫ ॥ ೩೬ ॥

ಋ (೧೯೧) ಯೋ ನಾಕಸ್ಯಾಧಿ ರೋಚನೇ ದಿವಿ ದೇವಾಸ ಆಸತೇ।
ಮರುದ್ಭಿರಗ್ನ ಆಗಹಿ ॥ ೬ ॥

ಅ॥ ಯೇ ದೇವಾಸಃ= ಯಾವ ಮರುತ್ ನಾಮಕ ದೇವತೆಗಳು, ನಾಕಸ್ಯ= ನಿರ್ದುಃಖವಾದ ಸ್ವರ್ಗದ, ಅಧಿ= ಮೇಲೆ, ದಿವಿ ರೋಚನೇ= (ರುಚದೀಪ್ತೌ) ಸೂರ್ಯಾದಿ ಪ್ರಕಾಶದಲ್ಲಿ, ಆಸತೇ= ಇರುತ್ತಾರೋ, ಅಂತಹ ಮರುತ್‌ಗಳಿಂದ ಕೂಡಿಕೊಂಡು ಬಾ. (ಅಂತೂ ಸ್ವರ್ಗದ ಮೇಲೆ ಇರತಕ್ಕ ಸೂರ್ಯಾದಿ ರೂಪ ಪ್ರಕಾಶದಲ್ಲಿ ಮರುತ್‌ಗಳು ಸನ್ನಿಹಿತರಾಗಿರುತ್ತಾರೆ.) ॥ ೬ ॥

ಭಾ ॥ (೧) ಸ್ವರ್ಗೋಪರಿ ಪ್ರಕಾಶೇ ಚ ಸೂರ್ಯಾದಾವಾಸತೇ ಸುರಾಃ । (೨) ನಾಕೋ ನಿರ್ದುಃಖರೂಪತ್ವಾದ್ದ್ಯೌಃ ಪ್ರಕಾಶಸ್ವರೂಪತಃ ॥ ೬ ॥

ಅ ॥ (೧) ಸ್ವರ್ಗದ ಮೇಲೆ ಇರತಕ್ಕ ಸೂರ್ಯ ಮೊದಲಾದ ಪ್ರಕಾಶದಲ್ಲಿ ಮರುತ್ ದೇವತೆಗಳು ಸನ್ನಿಹಿತರಾಗಿರುತ್ತಾರೆ. (೨) (ಇಲ್ಲಿ ನಾಕಸ್ಯ = ಸ್ವರ್ಗಕ್ಕೆ ಎನ್ನುವುದಕ್ಕೆ ದಿವಿ=ಸ್ವರ್ಗದಲ್ಲಿ ಎನ್ನುವುದರಿಂದ ಪುನರುಕ್ತಿಯು ಎಂದರೆ) ಕಂ=ಸುಖವು. ಅಕಂ=ಸುಖ ವಿರುದ್ಧವಾದ ದುಃಖವು. ನ ವಿದ್ಯತೇ ಅಕಂ ಅಸ್ಮಿನ್ ಎಂಬ ವ್ಯುತ್ಪತ್ತಿಯಿಂದ ನಿರ್ದುಃಖ ಸುಖರೂಪವಾಗಿರುವುದರಿಂದ ನಾಕಃ, ಏವಂಚ .ಸರ್ವಥಾ ದುಃಖಶೂನ್ಯವಾಗಿರುವುದರಿಂದ ನಾಕ ಶಬ್ದವಾಚ್ಯವಾದುದು ಸ್ವರ್ಗವು. ಪ್ರಕಾಶಸ್ವರೂಪವಾಗಿರುವುದರಿಂದ ದ್ಯೌಃ ಎಂಬ ಪದವು ಸೂರ್ಯಾದಿ ರೂಪ ಅರ್ಥವುಳ್ಳದ್ದು. (ಏವಂಚ ದಿವಿ ಎನ್ನುವುದಕ್ಕೆ ಸ್ವರ್ಗದಲ್ಲಿ ಎಂದರ್ಥವಲ್ಲ. ಮತ್ತೆ ಸೂರ್ಯಾದಿರೂಪ ಪ್ರಕಾಶದಲ್ಲಿ ಎಂದರ್ಥವು. ಆದಕಾರಣ ಪುನರುಕ್ತಿಯಿಲ್ಲ.) ॥ ೬ ॥

ಋ ॥ (೧೯೨) ಯ ಈಂಖಯಂತಿ ಪರ್ವತಾನ್ ತಿರಃ ಸಮುದ್ರಮರ್ಣವಂ।
ಮರುದ್ಭಿರಗ್ನ ಆಗಹಿ ॥ ೭ ॥

ಅ ॥ ಯೇ=ಯಾವ ದೇವತೆಗಳು, ಪರ್ವತಾನ್ = ಪರ್ವತಗಳನ್ನು, ಈಂಖಯಂತಿ=(ಈಖಿಗತೌ) ಕೈಯಲ್ಲಿ ಹಿಡಿದುಕೊಂಡು ತಿರುಗಾಡಿಸುತ್ತಾರೋ, ಹಾಗೆಯೇ,ಅರ್ಣವಂ=ಜಲಗಳುಳ್ಳ, ಸಮುದ್ರಂ=ಸಾಗರವನ್ನು, ತಿರಃ= ತಿರಸ್ಕರಿಸಿ ಇರುತ್ತಾರೋ, (ವಿಷ್ಣುಪಕ್ಷದಲ್ಲಿ ಆದರೂ) ಪರ್ವತಾನ್ = ಜನ್ಮಗಳುಳ್ಳ ಪುರುಷರನ್ನು, ಈಂಖಯಂತಿ=ಪ್ರೇರೇಪಿಸುತ್ತಾರೋ, ಅರ್ಣವಂ=ಜಲಾದಿಭೂತಗಳಿಗೆ ಆಧಾರವಾಗಿರುವುದರಿಂದ ನೀರುಳ್ಳ,ಸಮುದ್ರಂ= ಪ್ರಕೃತಿಯನ್ನು, ತಿರಃ=ತಿರಸ್ಕರಿಸುತ್ತಾರೋ, ನಿಯಮಿಸುತ್ತಾರೋ, ಅಂತಹ ಮರುನ್ನಾಮಕ ದೇವತೆಗಳಿಂದ ಕೂಡಿಕೊಂಡು, ಮರುದಂತರ್ಗತಗಳಾದ ಅಥವಾ ಪ್ರತ್ಯೇಕ ಇರುವ, ಭಗವದ್ರೂಪವಿಶೇಷಗಳಿಂದ ಕೂಡಿ, ಅಗ್ನೇ=ಶ್ರೀವಿಷ್ಣುವೇ, ಪ್ರಸಿದ್ಧ ಅಗ್ನಿಯೇ, ಆಗಹಿ=ಬಾ. ॥ ೭ ॥

ಭಾ ॥ (೧) ಪ್ರತೋಲಯಂತಿ ಚ ಗಿರೀಂಸ್ತಿರಸ್ಕೃತ್ಯ ಚ ಸಾಗರಂ ॥ (೨)ಪುರುಷಾನ್ ಪ್ರಕೃತಿಂ ನಾಪಿ ಪರ್ವವಂತೋ ಹಿ ಜನ್ಮನಾ । ಪುರುಷಾಃ ಸುಸಮುದ್ರೇಕಾತ್ಸಮುದ್ರಃ ಪ್ರಕೃತಿ

ವರ್ಣನಾ ॥ (೩) ಪ್ರಕೃತೇಃ ಪುರುಷಾಣಾಂ ಚ ಪ್ರೇರಕಃ ಸನ್ ಸದಾ ಹರೇ । ಸ್ವರೂಪೈರ್ಬಹುಭಿರ್ಯುಕ್ತ ಆಯಾಹಿ ಸಮುಸದ್ಗುಣೈಃ ॥ ೭ ॥

ಅ ॥ (೧) ಮರುತ್‌ಗಳು ಪರ್ವತಗಳನ್ನು ಕೈಯಲ್ಲಿ ಹಿಡಿದುಕೊಂಡು ಹಾರಿಸುತ್ತಿರುತ್ತಾರೆ. ತಿರುಗಾಡಿಸುತ್ತಾರೆ. ಹಾಗೆಯೇ ಜಲಭರಿತವಾದ ಸಮುದ್ರವನ್ನು ತಿರಸ್ಕರಿಸುತ್ತಾರೆ. [೨] [ವಿಷ್ಣು ವಿಷಯದಲ್ಲಿ ಪರ್ವತಾನ್ ಸಮುದ್ರಂಚ ಎಂಬುವುದನ್ನು ವ್ಯಾಖ್ಯಾನ ಮಾಡುತ್ತಾರೆ.] ಯಾವ ಕಾರಣದಿಂದ ಪುರುಷರು ಜನ್ಮರೂಪವಾದ ಪರ್ವವುಳ್ಳವರೋ, ಆದಕಾರಣ ಪುರುಷರು ಪರ್ವತಾಃ ಎನಿಸುತ್ತಾರೆ. ಚೆನ್ನಾಗಿ ಬ್ರಹ್ಮಾದಿಗಳಿಗಿಂತ ಆಧಿಕ್ಯ [ಉತ್ತಮತ್ವ] ವಿದ್ದುದರಿಂದ ಪ್ರಕೃತಿಯು ಸಮುದ್ರಃ ಎನಿಸುತ್ತಾಳೆ. [ಜಲ ಮೊದಲಾದ ಸಮಸ್ತ ಭೂತಗಳಿಗೆ ಆಧಾರಳಾದುದರಿಂದ ಪ್ರಕೃತಿಯು ಅರ್ಣವ ಎನಿಸುತ್ತಾಳೆ.]ಹೀಗೆಮರುತ್‌ಗಳು ಪುರುಷರನ್ನೂ ಪ್ರಕೃತಿಯನ್ನೂ ಪ್ರೇರೇಪಿಸುತ್ತಾರೆ. [೩] ಶ್ರೀ ಹರಿಯೇ ಸದಾ ಪ್ರಕೃತಿಗೂ ಪುರುಷರಿಗೂ ಪ್ರೇರಕನಾಗಿ ತನ್ನಿಂದ ನ್ಯೂನವೂ ಅಧಿಕವೂ ಆಗದಿರುವ ಸಮಗಳೇ ಆದ ಜ್ಞಾನಾನಂದಾದಿ ನಿರ್ದುಷ್ಟ ಗುಣಗಳುಳ್ಳ ನಿನ್ನ ಬಹು ರೂಪಗಳಿಂದ ಕೂಡಿದವನಾಗಿಯೇ ಬಾ. [ರಾಜ್ಞಾ ಸಹ ಮಂತ್ರೀ ಸಮಾಗತಃ ಇತ್ಯಾದಿಗಳಂತೆಯೇ ಮರುತ್ ನಾಮಕ ಭಗವದ್ರೂಪಗಳಿಗೆ ಅಪ್ರಾಧಾನ್ಯವಿಲ್ಲವೆಂದು ತೋರಿಸುವುದಕ್ಕಾಗಿ ಸಮುಸದ್ಗುಣೈಃ ಎಂದದ್ದು.] ॥ ೭ ॥

ಋ ॥ (೧೯೩) ಆ ಯೇ ತನ್ವಂತಿ ರಶ್ಮಿಭಿಸ್ತಿರಃ ಸಮುದ್ರಮೋಜಸಾ ।
ಮರುದ್ಭಿರಗ್ನ ಆಗಹಿ ॥ ೮ ॥

ಅ ॥ ಯೇ= ಯಾರು, ರಶ್ಮಿಭಿಃ= ತೇಜಸ್ಸುಗಳಿಂದ, ಜ್ಞಾನವಿಶೇಷಗಳಿಂದ, ಅಥವಾ ಪ್ರಕಾಶಗಳಿಂದ, (ಸಮಸ್ತವನ್ನು) ಆ ತನ್ವಂತಿ = ವ್ಯಾಪಿಸುತ್ತಾರೋ, ಹಾಗೆಯೇ, ಓಜಸಾ=ಸಾಮರ್ಥ್ಯದಿಂದ, ಸಮುದ್ರಂ= ಸಮುದ್ರವನ್ನು, ತಿರಃ=ತಿರಸ್ಕರಿಸುತ್ತಾರೋ, [ಅಂದರೆ ಸಮುದ್ರಕ್ಕಿಂತಲೂ ಹೆಚ್ಚು ಗಾಂಭೀರ್ಯವುಳ್ಳವರಾಗಿರುತ್ತಾರೋ] ಅಂತಹ ಮರುತ್‌ಗಳಿಂದ ಕೂಡಿಕೊಂಡು ಅಗ್ನಿಯೇ ಬಾ. ॥ ೮ ॥

ಋ ॥ (೧೯೪) ಅಭಿ ತ್ವಾ ಪೂರ್ವಪೀತಯೇ ಸೃಜಾಮಿ ಸೋಮ್ಯಂ ಮಧು ।
ಮರುದ್ಭಿರಗ್ನ ಆಗಹಿ ॥ ೯ ॥ ೩೭ ॥ ೧ ॥ ೧೯ ॥

ಅ ॥ (ನಾನು)ತ್ವಾ ಅಭಿ= ನಿನ್ನನ್ನು ಕುರಿತು,ಪೂರ್ವಪೀತಯೇ= ಪ್ರಥಮತಃ ಪಾನ ಮಾಡುವುದಕ್ಕಾಗಿ ಸೋಮ್ಯಂ= ಸೋಮ ರೂಪವಾದ, ಮಧು= ಸ್ವಾದುವಾದ ದ್ರವ್ಯವನ್ನು, ಸೃಜಾಮಿ= ನಿರ್ಮಿಸುತ್ತೇನೆ. ಆದ ಕಾರಣ ಮರುತ್‌ಗಳಿಂದ ಕೂಡಿ ಅಗ್ನಿಯೇ ಬಾ॥ ॥ ೯ ॥ ೩೭ ॥ ೧ ॥೧೯

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದೃಗ್ಭಾಷ್ಯೇ ಪ್ರಥಮೋಧ್ಯಾಯಃ

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ವಿರಚಿಸಿದ ಋಗ್ಭಾಷ್ಯದಲ್ಲಿ
೧ನೇ ಅಧ್ಯಾಯವು ಸಮಾಪ್ತವಾಯ್ತು.

ಅಶೇಷಗುಣಸಂಪೂರ್ಣಂ ಸರ್ವದೋಷವಿವರ್ಜಿತಂ ।
ಅನಂತಾಮ್ನಾಯಸಂವೇದ್ಯಂ ವಂದೇಽಹಂ ಕಮಲಾಪತಿಂ ॥
ಪ್ರಣಮ್ಯ ಶ್ರೀಮದಾನಂದತೀರ್ಥಾದಿ ಗುರುಶೇಖರಾನ್
ಆದ್ಯಾಧ್ಯಾಯಸ್ಯ ಮಂತ್ರಾರ್ಥಾನ್ ಭಾಷ್ಯಟೀಕಾದಿರೂಪಿತಾನ್
ಸಮಗ್ರಹೀಷ್ಮ ಬಾಲಾನಾಂ ಬೋಧಾಯ ಪ್ರೀತಯೇ ಹರೇಃ ॥
ಕರೋತು ಮಮ ಕಲ್ಯಾಣಂ ಹರಿರ್ಹಯಮುಖಾಭಿಧಃ ।
ಗುರುಶ್ಚ ಮಧ್ವನಾಮಾ ಮೇ ವರದೋಽಸ್ತು ನಿರಂತರಂ ॥ ॥ ೧ ॥

ತಂತ್ರಿ ನಾರಾಯಣೇನಾಸ್ಯ ವ್ಯಾಖ್ಯಾ ಕಾರ್ಣಾಟಕೀ ಕೃತಾ ।
ಭೂಯಾತ್ ಕುಸುಮಮಾಲೇವ ಪ್ರೀತ್ಯೈ ಮಾಧವಮಧ್ವಯೋಃ ॥

॥ ಶ್ರೀಃ ॥

॥ ಶ್ರೀ ॥

ಎರಡನೇ ಅಧ್ಯಾಯವು

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ
ಲಕ್ಷ್ಮೀಹಯಗ್ರೀವಾಯ ನಮಃ
ಶ್ರೀಮಧ್ವಗುರುಸಂಸೇವ್ಯಂವೇದವೇದ್ಯಗುಣಾರ್ಣವಂ ।
ನಿರ್ದೋಷಂ ಶ್ರೀಹರಿಂ ವಂದೇ ಪೂರ್ಣಪ್ರಜ್ಞಗುರೂನಪಿ ॥

ಅವ ॥ ೮ ಋಕ್ಕುಗಳು. ೨ ವರ್ಗಗಳು. ಆರ್ಭವ. (ಋಭುದೇವತಾಕ) ವಾದುದು. ಗಾಯತ್ರ ಸೂಕ್ತವು.

ಋ । (೧೯೫) ಅಯಂ ದೇವಾಯ ಜನ್ಮನೇ ಸ್ತೋಮೋ ವಿಪ್ರೇಭಿ ರಾಸಯಾ।

ಅಕಾರಿ ರತ್ನಧಾತಮಃ ॥ ೧ ॥

ಅ ॥ ವಿಪ್ರೇಭಿಃ=ಮೇಧಾತಿಥಿ ಮೊದಲಾದ ಜ್ಞಾನಿಗಳಿಂದ, ಅಯಂ=ಈ ಬುದ್ಧಿಯಲ್ಲಿರತಕ್ಕ, ರತ್ನಧಾತಮಃ=ಅತಿಶಯಿತ ಸುಖವನ್ನು ! ಕೊಡುವವನಾದುದರಿಂದ, ಸ್ತೋಮಃ=ಸ್ತುತಿಯು, ಜನ್ಮನೇ= ಸಮಸ್ತರ ಉತ್ಪತ್ತಿಕರ್ತನಾದ, ದೇವಾಯ=ಕ್ರೀಡಾದಿ ಗುಣವಿಶಿಷ್ಟನಾದ, ವಿಷ್ಣುವಿಗೋಸ್ಕರ,ಆಸಯಾ=ಅಸು ಕ್ಷಿಪಣೇ ಆಸ್ಯಂತೇ ಕ್ಷಿಪ್ಯಂತೇ=ಉಚ್ಚರಿಸಲ್ಪಡುತ್ತವೆ. ವರ್ಣಾಃ ಅನಯಾ ಎಂಬ ವ್ಯುತ್ಪತ್ತಿಯಿಂದ) ಮುಖದಿಂದ, (ಮನಸ್ಸಿನಿಂದ ಮಾತ್ರವಲ್ಲ, ಮತ್ತೆ ವಚನದಿಂದಲೂ,) ಅಕಾರಿ=ಮಾಡಲ್ಪಟ್ಟಿತು. ಏವಂಚ ವಿಷ್ಣುವಿಗಾಗಿ ಸ್ತೋತ್ರವು ಮಾಡಲ್ಪಟ್ಟಿತು.) (ಋಭುವಿಷಯದಲ್ಲಿ) ಜನ್ಮನೇ (**ಮಾನುಷಾ ಏವ ಹಿ ತೇ ದೇವಾ ಜಾತಾಃ** ಎಂಬ ನಿಗಮದಿಂದ) ಮನುಷ್ಯರಾಗಿರತಕ್ಕವರೇ ದೇವತೆಗಳಾಗಿ ಹುಟ್ಟಿರುವ, ದೇವಾಯ=ಋಭುಗಳಿಗೋಸ್ಕರ, (ಬಾಕಿ ಎಲ್ಲವೂ ಹಿಂದಿನಂತೆ) (ಋಭು ಎಂಬವನು ಒಬ್ಬನೇ ಆದಾಗ್ಯೂ, ವಿಭ್ವಾ ವಾಜಃ, ಎಂಬಿಬ್ಬರನ್ನು ಸಾಹಚರ್ಯದಿಂದ ಋಭು ಎಂಬ ನಾಮದಿಂದಲೇ ೩ ಮಂದಿಯನ್ನು ತೆಗೆದುಕೊಳ್ಳಬೇಕು. (ಏವಂಚ ಒಂದೇ ಸ್ತುತಿಗೂ ಋಷಿಗಳು ಬಹು ಮಂದಿ ಇದ್ದಾರೆ.) ॥ ೧ ॥

ಭಾ ॥ ಸರ್ವಜನ್ಮಕೃತೇ ವಿಷ್ಣು ದೇವಾಯೇಯಂ ಸ್ತುತಿಃ ಕೃತಾ ।
ಮುಖೇನ ವಿಪ್ರೈಃ ಕಾಣ್ವಾದ್ಯೈಃ ಸೈವ ಯದ್ರತಿಧಾತಮಾ ॥ ೧ ॥

ಅ ॥ ಯಾವ ಕಾರಣದಿಂದ ಆ ವಿಷ್ಣುವಿನ ಸ್ತುತಿಯೇ ಅತಿಶಯವಾಗಿ ಸುಖವನ್ನು ಕೊಡತಕ್ಕುದೋ ಆ ಕಾರಣ ಪ್ರತಿಭೆಯುಳ್ಳ ಕಣ್ವ ಋಷಿಗಳ ಪುತ್ರರಾದ ಮೇಧಾ ತಿಥಿ ಮೊದಲಾದವರಿಂದ, ಸಮಸ್ತ ಕಾರ್ಯಗಳಿಗೆ ಉತ್ಪಾದಕನಾದ (ವಿಷ್ಣು ವ್ಯತಿರಿಕ್ತ ಬ್ರಹ್ಮಾದಿಗಳಿಗೂ ಉತ್ಪಾದಕನಾದ) ಶ್ರೀ ವಿಷ್ಣು ದೇವನಿಗೋಸ್ಕರ, ಮುಖದಿಂದ ಈ ಸ್ತೋತ್ರವು ಮಾಡಲ್ಪಟ್ಟಿತು.

ವಿ ॥ (1) ಯದ್ಯಪಿ ಮೂವರ ಮಧ್ಯದಲ್ಲಿ ಋಭು ಎಂಬ ಹೆಸರು ಒಬ್ಬನಿಗೇನೇ ಆದಾಗ್ಯೂ **ಋಭುರ್ವಿಭ್ವಾ ವಾಜೋ ದೇವಾ ಆ ಗಚ್ಛತ** ಇತ್ಯಾದಿಗಳಲ್ಲಿ ಸಾಹಚರ್ಯವಿದ್ದುದರಿಂದ ಋಭು ಎಂಬ ಒಬ್ಬನ ನಾಮದಿಂದಲೇ ಮೂವರನ್ನೂ ಇಟ್ಟುಕೊಳ್ಳಬೇಕು.(2`ಸ್ತೋಮಃ ಎನ್ನುವುದರಿಂದ ಒಂದುಸ್ತುತಿಯುಒಬ್ಬನದ್ದು ಎಂದು ಹೇಳಿಯದೆ. ಆದ ಕಾರಣ **ವಿಪ್ರೇಭಿಃ** ಎಂದು ಸ್ತೋತೃಗಳಿಗೆ ಬಹುತ್ವ ಹೇಳಿದ್ದು ಹೇಗೆ ಕೂಡುತ್ತದೆ.

ಎಂದರೆ ಒಂದೇ ವೇದಾದಿ ಸ್ತೋತ್ರಕರ್ತೃ ಸ್ತೋತೃಗಳು ಬಹುಮಂದಿ ಇರುತ್ತಾರೆ, ಆದಕಾರಣ ವಿಪ್ರೇಭಿಃ ಎಂದು ಬಹುವಚನವು ಕೂಡುತ್ತದೆ. (3) ಅಕಾರಿ ಎಂದು ಭೂತ ಕಾಲಿಕವನ್ನು ಹೇಳಿದುದರಿಂದ ಹಿಂದೆ ಮಾತ್ರ ಸ್ತೋತ್ರ ಮಾಡಿದ್ದು ವರ್ತಮಾನ ಕಾಲದಲ್ಲಿಯೂ ಭವಿಷ್ಯತ್ಕಾಲದಲ್ಲಿಯೂ ಸ್ತೋತ್ರ ಮಾಡುವುದಿಲ್ಲ ಎಂಬ ಶಂಕೆಯು ಪ್ರಾಪ್ತವಾಗುತ್ತದೆಂದರೆ—ವೇದವು ಅನಾದಿ ನಿತ್ಯವಾದುದರಿಂದ ಸ್ತೋತ್ರ ಮಾಡುವುದೂ ಪ್ರವಾಹತಃ ಅನಾದಿ ನಿತ್ಯವಾದ ಪ್ರಯುಕ್ತ ಉತ್ತರೋತ್ತರ ಕಾಲದಲ್ಲಿ ಪೂರ್ವ ಪೂರ್ವ ಕಾಲೀನ ಸ್ತುತಿಯನ್ನು ವಿವಕ್ಷಾ ಕಾಲೀನ ಸ್ತುತಿಯನ್ನು ವಿವಕ್ಷಾ ಮಾಡಿಕೊಂಡು ಅಕಾರಿ ಎಂದು ಭೂತಕಾಲಿಕ ಪ್ರಯೋಗವನ್ನು ಮಾಡಿದ್ದು. (4) ಮತ್ತು ಋಷಿಗಳ ಪ್ರವಾಹವೂ ಅನಾದಿಯಾಗಿರುವುದರಿಂದ ಮೊದಲಿನ ಮೇಧಾತಿಥಿ ಮೊದಲಾದ ಋಷಿಗಳು ಸ್ತೋತ್ರ ಮಾಡಿರುವುದರಿಂದ ಅಕಾರಿ ಎಂದು ಭೂತಾರ್ಥಕ ಲುಙ್ ಪ್ರಯೋಗವು ಯುಕ್ತವು.(5) ಋಭು ವಿಷಯದಲ್ಲಿ ಆದರೂ **ಮಾನುಷಾ ಏವ ಹಿ ತೇ ದೇವಾಃ ಜಾತಾಃ** ಎಂದುಸಿಗಮವು (ಸಮಾಖ್ಯಾ ಶ್ರುತಿಯು) **ತದುಪರ್ಯಪಿ ಬಾದರಾಯಣಸ್ಸಂಭವಾತ್, ಮನುಷ್ಯಾನಾಮೇವ ಸತಾಂ ದೇವಾದಿತ್ವ ಪ್ರಾಪ್ತ್ಯುಕ್ತೇ:** (ಬ್ರ. ಸೂ. ೧. ೩. ೨೬) ಎಂದು ಹೇಳಿದ ನ್ಯಾಯ, ಇವುಗಳಿಂದ ಒಂದೇ ಜನ್ಮದಲ್ಲಿ ಮನುಷ್ಯರಾಗಿರತಕ್ಕವರೇ ದೇವತೆಗಳಾಗಿ ಹುಟ್ಟಿರುವ ಋಭುಗಳಿಗೋಸ್ಕರ ಎಂದರ್ಥವು. (6) **ಮರ್ತಾಸಃ ಸಂತೋ ಅಮೃತತ್ವಮಾನಶುಃ । ಸೌಧನ್ವನಾ ಋಭವಃ ಸೂರಚಕ್ಷಸಃ** ಎಂದು ಉತ್ತರತ್ರ ಇದ್ದ ಪ್ರಯುಕ್ತವೂ ಒಂದೇ ಜನ್ಮದಲ್ಲಿ ಎಂದು ಅರ್ಥ ಮಾಡಬೇಕು. ಬಾಕಿ ಹಿಂದಿನಂತೆ ಅರ್ಥ ॥ ೧ ॥

ಋ ॥ (೧೯೬) ಯ ಇಂದ್ರಾಯ ವಚೋಯುಜಾ ತತಕ್ಷುರ್ಮನಸಾ ಹರೀ ।
ಶಮೀಭಿರ್ಯಜ್ಞಮಾಶತ ॥ ೨ ॥

ಅ ॥ ಯೇ=ಯಾವ ಋಭುಗಳು. ಇಂದ್ರಾಯ=ಇಂದ್ರನ ಉದ್ದಿಶ್ಯ, ವಚೋಯುಜಾ=ವಚಸಾಯುಜ್ಯೇತೇ ಎಂಬ ವ್ಯುತ್ಪತ್ತಿಯಿಂದ ಸಾರಥಿಯ ವಾಙ್ಮಾತ್ರದಿಂದಲೇ ರಥದಲ್ಲಿ ಸಂಬದ್ಧಗಳಾಗುವ, ಹರೀ=ಕುದುರೆಗಳನ್ನು ಮನಸಾ=ಸಂಕಲ್ಪ ಮಾತ್ರದಿಂದಲೇ, ತತಕ್ಷುಃ=(ತಕ್ಷಕರಣೇ)ಮಾಡಿರುವರೋ, ಯೇಚ=ಯಾರು, ಶಮೀಭಿಃ= **ಶನೋ ಮನ್ನಿಷ್ಠತಾಬುದ್ಧೇಃ** ಎಂಬ ಪ್ರಮಾಣದಿಂದ ಶ್ರೀಪರಮಾತ್ಮನಲ್ಲಿಯೇ ಆಸಕ್ತಗಳಾದ ಬುದ್ಧಿಗಳಿಂದ ಯಜ್ಞಂ=ಯಜ್ಞ ಭಾಗವನ್ನು, ಆಶತ=(ಅಶೂ ವ್ಯಾಪ್ತೌ) ಹೊಂದಿರುವರೋ, (ಅಂತಹವರಿಗೋಸ್ಕರ ಸ್ತುತಿಯು ಮಾಡಲ್ಪಟ್ಟಿತು. (ಇಲ್ಲಿ ಋಭ್ವಾದಿ ದೇವತೆಗಳಲ್ಲಿರತಕ್ಕ ಲಿಂಗಗಳು ಆಯಾವ ಅಂತರ್ಯಾಮಿ ಭಗವದ್ರೂಪಗಳಲ್ಲಿ ಮುಖ್ಯಗಳೆಂದು **ಶಾಸ್ತ್ರದೃಷ್ಟ್ಯಾತೂಪದೇಶೋಃ ವಾಮದೇವವತ್**(೧.೧.೩೧),ಇತ್ಯಾದಿ ಸೂತ್ರಗಳಲ್ಲಿ ವ್ಯಕ್ತಗಳಾಗಿವೆ ಎಂದು ಅವರವರಲ್ಲಿ ಅಂತರ್ಗತ ರೂಪವನ್ನು ಅಪೇಕ್ಷಿಸಿ ಮಂತ್ರಗಳನ್ನು ಶ್ರೀ ವಿಷ್ಣುವಿನಲ್ಲಿ ಯೋಜನಾ ಮಾಡಬೇಕು.) (ಪ್ರತ್ಯೇಕವಾಗಿರುವ ಭಗವದ್ರೂಪಗಳೆನ್ನುವ ಪಕ್ಷದಲ್ಲಿ ಆದರೂ) (ಯೇ=ಯಾವ ಭಗವದ್ರೂಪ ವಿಶೇಷಗಳು, ಶಮೀಭಿಃ=ಇಂದ್ರದೇವರು ಮಾಡಿರುವ, ಶ್ರೀ ಪರಮಾತ್ಮನಲ್ಲಿಯೇ ಆಸಕ್ತವಾದ ಬುದ್ಧಿಸಾಧ್ಯಕ್ರಿಯೆಗಳಿಂದ, (ಸಂತುಷ್ಟಗಳಾಗಿ) ಯಜ್ಞಂ=ಇಂದ್ರನ ಸಂಬಂಧಿಯಾದ ಯಜ್ಞವನ್ನು (ಋಭುಗಳಿಂದ) ಆಶತ=ಹೊಂದಿರುತ್ತಾವೋ, ಇಂದ್ರನ ಉದ್ದಿಶ್ಯ ಸಂಕಲ್ಪ ಮಾತ್ರದಿಂದ ವಾಙ್ಮಾತ್ರದಿಂದಲೇ ರಥದಲ್ಲಿ ಯೋಜಿಸಲ್ಪಟ್ಟವುಗಳನ್ನಾಗಿ ಕುದುರೆಗಳನ್ನು ಮಾಡಿರುತ್ತಾವೋ ಅಂತಹ ಭಗವದ್ರೂಪಗಳಿಗಾಗಿ ಸ್ತುತಿಯು ಮಾಡಲ್ಪಟ್ಟಿತು. (ಹೀಗೆಯೇ ಮೇಲಿನ ಋಕ್ಕುಗಳಲ್ಲಿಯೂ ಇತರರಿಗಾಗಿ ರಥ ಕರಣಾದಿಗಳನ್ನು ಹೇಳಿದರೆ ಅಂತರ್ಯಾಮಿ ವಿವಕ್ಷೆಯಿಂದ ಅಥವಾ ಇತರ ಕರಗಣಗಳಿಂದ ಎಂದು ತಿಳಿಯಬೇಕು.) (ಅಧ್ಯಾತ್ಮರೂಪವಲ್ಲಿ ಯಾವ ಋಭುನಾಮಕ ಭಗವದ್ರೂಪ ವಿಶೇಷಗಳು ಶರೀರದಲ್ಲಿತಕ್ಕವುಗಳು ಬಿಂಬಾದಿರೂಪಿಯಾದ ಪರಮಾತ್ಮನನ್ನು ವಿಷಯೀಕರಿಸಲಿಕ್ಕಾಗಿ ಭಕ್ತರ ಮನೋಬುದ್ಧಿಗಳನ್ನು ವೇದಾನುಸಾರಿಗಳನ್ನಾಗಿ ಸಂಕಲ್ಪ ಮಾತ್ರ

ದಿಂದಲೇ ಮಾಡಿರುತ್ತಾರೋ ತತ್ಸಂಬಂಧಿಗಳಾದ ಪರಮಾತ್ಮನಲ್ಲಿಯೇ ಆಸಕ್ತ ಬುದ್ಧಿಗಳಿಂದ ಜ್ಞಾನಯಜ್ಞವನ್ನು ಹೊಂದಿರುತ್ತಾರೋ ಅಂತಹ ಭಗವದ್ರೂಪಗಳಿಗಾಗಿ ಸ್ತೋತ್ರವು ಮಾಡಲ್ಪಟ್ಟಿತು. ॥ ೨ ॥

ಭಾ ॥ (೧) ವಾಙ್ಮಾತ್ರೇಣೈವ ಯೋಜ್ಯೌ ಯೈಃ ಚಕ್ಷುರಿಂದ್ರಾಯ ವಾಜಿನೌ ।ಶಮೀಭಿರ್ವಿಷ್ಣು ನಿಷ್ಠಾಭಿರ್ಯಜ್ಞಂ ಭಾಗಂ ಚ ಲೇಭಿರೇ ॥ (೨) ಭಗವಾಂಶ್ಚೈತದಖಿಲಂ ಕೃತವಾನೃಭುಷು ಸ್ಥಿತಃ ॥ ಪೃಥಗ್ವಾ ಫಲದಾತೃತ್ವಾತ್ ॥ ೨ ॥

ಅ ॥ (೧) ಯಾವ ಋಭುಗಳು ಇಂದ್ರನ ಉದ್ದಿಶ್ಯ ಕುದುರೆಗಳನ್ನು ಸಾರಥಿಯ ವಾಙ್ಮಾತ್ರದಿಂದಲೇ ರಥದಲ್ಲಿ ಸಂಬದ್ಧಗಳನ್ನಾಗಿ ಸಂಕಲ್ಪ ಮಾತ್ರದಿಂದಲೇ ಮಾಡುತ್ತಾರೋ, ಯಾರು ವಿಷ್ಣುವಿನಲ್ಲಿಯೇ ಆಸಕ್ತಗಳಾದ ಬುದ್ಧಿಗಳಿಂದ ಯಜ್ಞ ಭಾಗವನ್ನು ಹೊಂದಿರುತ್ತಾರೋ, ಅಂತಹವರಿಗೆ ನಮಸ್ಕಾರವು ಮಾಡಲ್ಪಟ್ಟಿತು. (೨) (ಹಾಗಾದರೆ ಋಭುಗಳು ಇಂದ್ರನ ಭೃತ್ಯರಾದುದರಿಂದ ಇಂದ್ರನಿಗಾಗಿ ಋಭುಗಳಿಗೆ ರಥದಲ್ಲಿ ಅಶ್ವಸಂಯೋಜನಾದಿಗಳು ಕೂಡುತ್ತವೆ. ಮತ್ತು ಮೊದಲು ಮನುಷ್ಯರಾಗಿದ್ದವರು ದೇವತ್ವವನ್ನು ಹೊಂದಿರುವುದರಿಂದ ಯಜ್ಞ ಭಾಗವನ್ನು ಹೊಂದಿರುತ್ತಾರೆಂಬುವುದೂ ಕೂಡುತ್ತದೆ. ಆದರೆ ಶ್ರೀ ವಿಷ್ಣುವು ಇಂದ್ರನ ಭೃತ್ಯನಾಗದಿರುವುದರಿಂದಲೂ ಹೊಸತಾಗಿ ದೇವತ್ವವನ್ನು ಹೊಂದದಿರುವುದರಿಂದಲೂ ಆತನಿಗೆ ಇಂದ್ರನ ಉದ್ದಿಶ್ಯ ಇತರ ದೇವತೆಗಳಲ್ಲಿ ಕೂಡತಕ್ಕ ಅಶ್ವ ನಿರ್ಮಾಣಾದಿಗಳು ಹೇಗೆ ಕೂಡುತ್ತವೆಂದರೆ) ಶ್ರೀ ಭಗವಂತನು ಋಭುಗಳಲ್ಲಿದ್ದವನಾಗಿ ಈ ಎಲ್ಲಾ ಅಶ್ವ ನಿರ್ಮಾಣಾದಿಗಳನ್ನು ಮಾಡಿದನು. (ಏತತ್ ಎನ್ನುವುದರಿಂದಲೇ ಅಶ್ವ ನಿರ್ಮಾಣಾದಿಗಳು ಎನ್ನುವ ಅರ್ಥವು ಸಿದ್ಧವಾಗುವುದಾದರೂ ಮುಂದೆ ಹೇಳುವ ರಥ ನಿರ್ಮಾಣಾದಿಗಳಿಗೂ ಸಂಗ್ರಹವಾಗಬೇಕೆನ್ನುವ ಉದ್ದಿಶ್ಯ ಅಖಿಲಂ ಎಂಬ ಪದವನ್ನು ಹೇಳಿದ್ದು.) (**ತತ್ರ ತತ್ರ ಸ್ಥಿತೋ ವಿಷ್ಣುಸ್ತತ್ತಚ್ಛಕ್ತೀಃ ಪ್ರಬೋಧಯನ್** ಎಂಬ ಪ್ರಮಾಣದಿಂದ ಆಯಾವ ಕ್ರಿಯೆಗಳು ಅವರವರಲ್ಲಿ ಅಂತರ್ಗತವಾದ ಶ್ರೀ ಭಗವಂತನಿಂದಲೇ ಮಾಡಲ್ಪಡುತ್ತವೆ ಎಂದು ಪ್ರಸಿದ್ಧವು.) ಅಥವಾ ಶ್ರೀ ಹರಿಯೇ ಇಂದ್ರಾದಿಗಳಿಗೆ ಫಲವನ್ನು ಕೊಡುವವನಾದುದರಿಂದ ಋಭುಗಳಲ್ಲಿರತಕ್ಕ ರೂಪವನ್ನು ಹೊರತೇ ಪ್ರತ್ಯೇಕವಾದ ತನ್ನ ಈಶ್ವರ ರೂಪದಿಂದಲೇ ಅಶ್ವ ನಿರ್ಮಾಣಾದಿಗಳೆಲ್ಲವನ್ನು ಮಾಡಿದನು. ॥ ೨ ॥

ಋ ॥ (೧೯೭) ತಕ್ಷನ್ನಾಸತ್ಯಾಭ್ಯಾಂ ಪರಿಜ್ಮಾನಂ ಸುಖಂ ರಥಂ ।

ತಕ್ಷನ್ ಧೇನುಂ ಸಬರ್ದುಘಾಂ ॥ ೩ ॥

ಅ ॥ (ಋಭುಗಳು) ನಾಸತ್ಯಾಭ್ಯಾಂ=ಅಶ್ವಿನೀ ದೇವತೆಗಳಿಗಾಗಿ, ಪರಿಜ್ಮಾನಂ=ಸಮಸ್ತ ಭೂಮಿಗಳ ಸುತ್ತಮುತ್ತಲೂ ಹೋಗುವ, (ತಡೆಯಿಲ್ಲದ ಗತಿಯುಳ್ಳ) ಸುಖಂ=ಅನಾಯಾಸದಿಂದ ಹೊರಲಿಕ್ಕೆ ಯೋಗ್ಯವಾದ, ರಥಂ=ರಥವನ್ನು, ತಕ್ಷನ್=ಮಾಡಿದರು. ಸಬರ್ದುಘಾಂ=(ಬಕಾಮನೇ) ಸಮಸ್ತ ಕಾಮ್ಯಗಳನ್ನು ಕರೆಯುವ, (ಕೊಡುವ) ಧೇನುಂ=ಬೃಹಸ್ಪತಿಯ ಕಾಮಧೇನುವನ್ನೂ, ತಕ್ಷನ್=ಮಾಡಿದರು. (ಯದ್ಯಪಿ ಅಶ್ವಿನೀ ದೇವತೆಗಳಲ್ಲಿ ಒಬ್ಬನಿಗೆ ಮಾತ್ರ ನಾಸತ್ಯವೆಂದು ಹೆಸರು. ಆದರೂ ಆತನ ಸಾಹಚರ್ಯದಿಂದ (**ಸದಾಽವಿಯೋಗೌ ದಿವಿಜೇಷು ದಸ್ರೌ** ಎಂಬ ಪ್ರಮಾಣದಿಂದ ನಿತ್ಯದಲ್ಲಿಯೂ ಅವಿಯುಕ್ತರಾದುದರಿಂದ ಇಬ್ಬರೂ ನಾಸತ್ಯರೆಂದು ಹೇಳಲ್ಪಡುತ್ತಾರೆ. ಪೃಥಕ್ ಪೃಥಕ್ ನಾಮಗಳಿದ್ದುದರಿಂದಲೇ **ನಾಸತ್ಯದಸ್ರೌ ಕ್ರಮಶಃ ಪ್ರಸೂತೌ**, ಎಂದು ತಾತ್ಪರ್ಯ ನಿರ್ಣಯದಲ್ಲಿಯೂ **ನಾಸತ್ಯದಸ್ರೌ ಪರಮಸ್ಯ ನಾಸ** ಎಂದು ಭಾಗವತದಲ್ಲಿಯೂ ಹೇಳಿರುವರು.) ॥ ೩ ॥

ಭಾ ॥ (೧) ಪರಿತೋಽಜ್ಮಾಂ ಯತಶ್ಚರೇತ್ । ಪರಿಜ್ಮಾSತೋ ರಥಃ (೨) ಕಾಮ್ಯಂ ಸಬರಿತ್ಯ ಭಿಧೀಯತೇ । ಬ ಕಾಮನ ಇತಿ ಹ್ಯಸ್ಮಾತ್ ॥ ೩ ॥

ಅ ॥ (೧) ಯಾವ ಕಾರಣದಿಂದ ಭೂಮಿಯ ಸುತ್ತಮುತ್ತಲೂ ರಥವು ಸಂಚರಿಸುತ್ತದೋ, ಆದಕಾರಣ ರಥವು ಪರಿಜ್ಮಾ ಎನಿಸುತ್ತದೆ. (೨) (ಸಬರ್ದುಘಾಂ ಎನ್ನುವಲ್ಲಿದ್ದ ಸಬರ್ ಎನ್ನುವುದರ ಅರ್ಥ ಹೇಳುತ್ತಾರೆ.) ಬ ಕಾಮನೇ ಎನ್ನುವ ಧಾತು ವ್ಯಾಖ್ಯಾನದಿಂದ ಕರ್ಮಾರ್ಥದಲ್ಲಿ ರ ಪ್ರತ್ಯಯವೂ ಸಡಾಗಮವೂ ಬಂದರೆ ಸಬರ್ ಎಂದಾಗುತ್ತದೆ. ಸಬರ್ ಎನ್ನುವ ಶಬ್ದದಿಂದ ಸರ್ವಕಾಮ್ಯವು ಹೇಳಲ್ಪಡುತ್ತದೆ. ॥ ೩ ॥

ಋ ॥ (೧೯೮) ಯುವಾನಾ ಪಿತರಾ ಪುನಃ ಸತ್ಯಮಂತ್ರಾ ಋಜೂಯವಃ। ಋಭವೋ ವಿಷ್ಟ್ಯಕ್ರತ ॥ ೪ ॥

ಅ ॥ ಋಭವಃ=ಜ್ಞಾನಕ್ಕೆ ಆಶ್ರಯರಾದುದರಿಂದ ಋಭು ಎನಿಸಿಕೊಂಡ ವಿಷ್ಣುರೂಪ ವಿಶೇಷಗಳೂ ಅಥವಾ ಕರ್ಮವು ಸತ್ಯವಾಗಿ ಉಳ್ಳವರು, ಅಥವಾ ಋತಂ=ಯಜ್ಞಭಾಗವನ್ನು ಭಾತಾಃ=ಹೊಂದಿರುವ ಋಭುಗಳೆನಿಸಿಕೊಂಡ ಪ್ರಸಿಧ್ಧ ದೇವತೆಗಳೂ ಕೂಡ, ಋಜೂಯವಃ=ಬ್ರಹ್ಮತ್ವಕ್ಕೆ ಯೋಗ್ಯರಾದ ಋಜುಗಳನ್ನು ತಮಗೆ ಸ್ವಾಮಿಗಳನ್ನಾಗಿ ಇಚ್ಛಿಸುವವರಾಗಿ (ಅಂದರೆ ಋಜುಗಳ ಭಕ್ತರಾಗಿ) ಸತ್ಯಮಂತ್ರಾಃ=ಅಮೋಘ ಮಂತ್ರಗಳುಳ್ಳವರಾಗಿ, ಪಿತರಾ=ಸುಧನ್ವಾ ಎನ್ನುವ ತನ್ನ ತಂದೆಯನ್ನು, ತನ್ನ ತಾಯಿಯನ್ನು ಕೂಡ, ಪುನಃ=ತಿರುಗಿ, ಯುವಾನಾ=ತರುಣರನ್ನಾಗಿ, ಅಕ್ರತ=ಮಾಡಿದರು. (ಜೀರ್ಣರಾದ ಮಾತಾಪಿತೃಗಳನ್ನು ತಿರುಗಿ ತರುಣರನ್ನಾಗಿ ಮಾಡಿದರು.) ಮತ್ತು, ವಿಷ್ಟೀ=(ವೇತನವಿಲ್ಲದೆ ಸ್ವಾಮಿಯ ಬಲಾತ್ಕಾರದಿಂದ ಯಾವ ಕರ್ಮವು ಮಾಡಲ್ಪಡುತ್ತದೋ, ಅದು ವಿಷ್ಟಿಯೆನಿಸುತ್ತದೆ.) ಅಂತಹ ಕರ್ಮವನ್ನು (**ಏಕಂ ಚಮಸಂ ಚತುರಃ ಕೃಣೋತನ** ಎಂದು ಹೇಳುವ ಪ್ರಕಾರ, ಅಕ್ರತ= (ಡುಕೃಞ ಕರಣೇ) ದೇವತೆಗಳಿಗಾಗಿ ಮಾಡಿದರು. (ಇಲ್ಲಿ ಋಜು ಭಕ್ತತ್ವ ಮೊದಲಾದ, ಅನ್ಯರಲ್ಲಿರತಕ್ಕ ಲಿಂಗಗಳನ್ನು ಅವರ ಅಂತರ್ಯಾಮಿಯನ್ನು ಇಟ್ಟುಕೊಂಡು ಹೇಳಿದ್ದೆಂದು ತಿಳಿಯಬೇಕು. ಹಾಗಾದರೆ ನೀಚತ್ವವನ್ನು ಹೊಂದಿಸಿ ಕೊಡುವ ಲಿಂಗವು ಶ್ರೀ ವಿಷ್ಣುವಿನಲ್ಲಿ ಹೇಗೆ ಕೂಡುತ್ತದೆಂದರೆ ಸರ್ವಶಾಸ್ತ್ರತ್ವರೂಪವಾದ ಸಮಸ್ತ ವ್ಯಾಪಾರ ಕರ್ತೃತ್ವರೂಪವಾದ ಸ್ವಾತಂತ್ರ್ಯವು ಶ್ರೀ ವಿಷ್ಣುವಿಗೇನೇ ಇದ್ದ ಪ್ರಯುಕ್ತ ಕೂಡುತ್ತದೆ.) ॥ ೪ ॥

ಭಾ ॥ (೧) ಸುಧನ್ವೈಷಾಂ ಪಿತಾ ಸ್ಮೃತಃ। (೨) ಬೃಹಸ್ಪತೇಃ ಕಾಮಧೇನುಮೃಜುಭಕ್ತಾ ಋಜೂಯವಃ॥ (೩) ಅವೇತನಂ ಸ್ವಾಮಿಬಲಾತ್ಕರ್ಮ ವಿಷ್ಟ್ಯತ್ರ ತೇಽಕೃತ ॥ (೪) ಋತಭೂಮಿಜ್ಞಾನಭೂಮಿರ್ಭಗವಾನೃಭುರೀರಿತಃ ॥ (೫) ಯೇಷಾಂ ಭೂತಮೃತಂ ಕರ್ಮ ಯಜ್ಞಭಾಗಾಸ್ತಿತೋಽಪಿ ತೇ ॥ ೪ ॥

ಅ॥ (೧) (ಋಭುಗಳಿಗೆ ತಂದೆಯು ಯಾರೆಂದರೆ) (ಸುಧನ್ವಾ ಎಂಬ ಆಂಗೀರಸನಿಗೆ ಋಭುಃ ವಿಭ್ವಾ ವಾಜಃ ಎಂಬ ಮೂವರು ಮಕ್ಕಳು ರಥಕಾರರಾದರು, ಎಂದು **ಅಶ್ವಾದಶ್ವಮತಕ್ಷತ** ಇತ್ಯಾದಿಗಳಲ್ಲಿ ಹೇಳುವರು. ಆದ ಕಾರಣ) ಸುಧನ್ವಾ ಎನ್ನುವವನು ಈ ಋಭುಗಳ ತಂದೆಯು. (೨) (ಹಿಂದಿನ ಋಕ್ಕಿನಲ್ಲಿ **ಸಬರ್ದುಘಾಂ ಧೇನುಮತಕ್ಷನ್** ಎಂದು ಹೇಳಿದೆ. ಈ ಕಾಮಧೇನುವು ಯಾರದ್ದೆಂದರೆ) (**ಇಂದ್ರೋ ಹರೀ ಯುಯುಜೇ ಅಶ್ವಿನಾ ರಥಂ ಬೃಹಸ್ಪತಿರ್ವಿಶ್ವರೂಪಾಮುಪಾಜತ** ಎನ್ನುವಲ್ಲಿ ಇಂದ್ರನು ಕುದುರೆಗಳನ್ನು ಹೊಂದಿದನು. ಅಶ್ವಿನೀ ದೇವತೆಗಳು ರಥವನ್ನು ಹೊಂದಿದರು, ಬೃಹಸ್ಪತಿಯು ವಿಶ್ವರೂಪವುಳ್ಳ ಕಾಮಧೇನು

ವನ್ನು ಹೊಂದಿದನು ಎಂದು ಮುಂದೆ ಹೇಳುವವದರಿಂದ) ಬೃಹಸ್ಪತಿಯ ಕಾಮಧೇನುವನ್ನು ಎಂದರ್ಥವು. (ಋಜೂಯುವ ಶಬ್ದಾರ್ಥವನ್ನು ಹೇಳುತ್ತಾರೆ.) ಬ್ರಹ್ಮ ಪದವಿಗೆ ಯೋಗ್ಯರಾದ ದೇವತೆಗಳನ್ನು ತಮ್ಮಿಂದ ಸೇವ್ಯರನ್ನಾಗಿ ಇಚ್ಛಿಸುವವರು ಋಜೂಯವರು. ಋಜುಗಳ ಭಕ್ತರು. (ಭಕ್ತರು ತಮ್ಮ ನಿಯಾಮಕರನ್ನು ಇಚ್ಛಿಸುತ್ತಾರಷ್ಟೆ.) (೩) (ವಿಷ್ಟ್ಯಕ್ರತ ಎನುವುದನ್ನು ವ್ಯಾಖ್ಯಾನಮಾಡುತ್ತಾರೆ.) (ಯದ್ಯಪಿ ವಿಷ್ಟಿ ಎಂಬ ಪದವು ವಿಷ್ಟಿರ್ವ್ರತಂ ಎಂದು ಕರ್ಮ ಸಾಮಾನ್ಯ ನಾಮಗಳಲ್ಲಿ ಪಠಿತವಾಗಿದೆ. ಆದಾಗ್ಯೂರೂಢ್ಯನುಸಾರವಾಗಿ)ಸಂಬಳವಿಲ್ಲದೆಸ್ವಾಮಿಯ ಬಲಾತ್ಕಾರದಿಂದ ಯಾವುದು ಕರ್ಮವು ಮಾಡಲ್ಪಡುತ್ತದೋ, ಅದು ವಿಷ್ಟಿ ಎನಿಸುತ್ತದೆ. ಋಭುಗಳು ತಮ್ಮ ಮಾತಾ ಪಿತೃಗಳನ್ನು ಜೀರ್ಣರಾದವರನ್ನು ತರುಣರನ್ನಾಗಿ ಮಾಡಿದರು. (ಹೇಗೆಂದರೆ ಅಮೋಘ ಮಂತ್ರವುಳ್ಳವರಾದ ಪ್ರಯುಕ್ತ. ಅದೂ ಹೇಗೆಂದರೆ ಋಜುಗಳ ಭಕ್ತರಾದ ಪ್ರಯುಕ್ತವೇ. ಅಂತಹ ಕರ್ಮವನ್ನು **ಏಕಂಚಮಸಂಚಂತುರಃ ಕೃಣೊತನ** ಎಂದು ಹೇಳುವ ಪ್ರಕಾರ ದೇವತೆಗಳಿಗಾಗಿಮಾಡಿದರು.)(೪)ಋಭು ಶಬ್ದವನ್ನು ಶ್ರೀಪರಮಾತ್ಮನಲ್ಲಿ ನಿರ್ವಚನಮಾಡುತ್ತಾರೆ. ಯಾವ ಕಾರಣದಿಂದ ಶ್ರೀಪರಮಾತ್ಮನು ಋತ ಭೂಮಿಃ=ಜ್ಞಾನಕ್ಕೆ ಆಶ್ರಯನೋ, ಆದ ಕಾರಣ ಋಭುಃ ಎನಿಸುತ್ತಾನೆ. (೫) ಋಭು ಶಬ್ದವನ್ನು ಇತರ ದೇವತೆಗಳಲ್ಲಿ ನಿರ್ವಚನ ಮಾಡುತ್ತಾರೆ.) ಯಾವ ದೇವತೆಗಳ, ಋತಂ= (**ಋತಂ ಸತ್ಯಂ ತಥಾ ಧರ್ಮಃ** ಎಂಬ ಸ್ಮೃತಿಯಿಂದ) ಕರ್ಮವು,ಭೂತಂ=(ಭೂಸತ್ತಾಯಾಂ ಎಂಬ ಧಾತುವಿನಿಂದ) ಸತ್ಯವಾಗಿದೆಯೋ, ಆ ದೇವತೆಗಳು ಋಭುಗಳೆನಿಸುತ್ತಾರೆ. (ಅವರುಯಾವುದು ಅಸಾಧ್ಯ ಕರ್ಮವನ್ನು ಮಾಡುತ್ತಾರೋ ಅದು ಸತ್ಯವೇ. ಅದು ಐಂದ್ರಜಾಲಿಕವಲ್ಲ.) ಅಥವಾಭಾಗವನ್ನು ಹೊಂದಿದವರು ಋಭುಗಳು.(ಋತ ಶಬ್ದಕ್ಕೆ ಋಕಾರವು.ಭಾಗ ಶಬ್ದಕ್ಕೆ ಭುಶಬ್ದವು.) ಅಥವಾ ಋತಂ=ಯಜ್ಞ ಭಾಗವನ್ನುಭೂತಾಃ=ಹೊಂದಿದವರು ಆ ಕಾರಣದಿಂದಲೂ ಅವರು ಋಭುಗಳೆನಿಸುತ್ತಾರೆ .॥ ೪ ॥

ಋ ॥ (೧೯೯) ಸಂ ವೋ ಮದಾಸೋ ಅಗ್ಮತೇಂದ್ರೇಣ ಚ ಮರುತ್ವತಾ ।

ಆದಿತ್ಯೇಭಿಶ್ಚರಾಜಭಿಃ ॥ ॥ ೫ ॥ ೧ ॥

ಅ ॥ (ಎಲೋ ಋಭುಗಳೇ) ಮದಾಸಃ=ಮದಕ್ಕೆ ಕಾರಣಗಳಾದ (ಹರ್ಷ ಹೇತುಗಳಾದ) ಇಂದವಃ= ಸೋಮಗಳು ಮರುತ್ವತಾ=ಮರುತಃ ಅಸ್ಯಸಂತಿ ಎಂಬ ವ್ಯುತ್ಪತ್ತಿಯಿಂದ ಮರುತ್‌ಗಳು ನಿಯಮ್ಯರಾಗಿ ಉಳ್ಳ, ಇಂದ್ರೇಣಚ=ಇಂದ್ರನಿಂದಲೂ, ರಾಜಭಿಃ=(ರಾಜರ್ದೀಪ್ತೌ) ಪ್ರಕಾಶಮಾನರಾದ, ಆದಿತ್ಯೇಭಿಶ್ಚ=ಆದಿತ್ಯರಿಂದಲೂ ಕೂಡಿಕೊಂಡು, ವಃ=ನಿಮ್ಮನ್ನು ಸಮಗ್ಮತ=(ಸಮ ಪೂರ್ವಾತ್ ಗಮ್ಲೃಗತೌ) ಹೊಂದಿದವು ॥ ೫ ॥

ಭಾ ॥ ಸಹೇಂದ್ರೇಣ ಸಹಾದಿತ್ಯೈಃ ಪ್ರಾಪ್ತಾ ಯುಷ್ಮಾನಿಮಿಂದವಃ ॥ ೫ ॥ ೧ ॥

ಅ ॥ ಎಲೋ ಋಭುಗಳೇ ಚಂದ್ರನಿಂದ ಅಭಿಮನ್ಯಮಾನಗಳಾದ ಸೋಮಗಳು ಇಂದ್ರನಿಂದಲೂ ಆದಿತ್ಯರಿಂದಲೂ ಕೂಡಿಕೊಂಡೇ ನಿಮ್ಮನ್ನು ಹೊಂದಿದವು. (ಇದರಿಂದ ಋಭುಗಳಿಗೆ ಇಂದ್ರ, ಆದಿತ್ಯರಿಂದ ಕೂಡಿ ಸೋಮಪಾನವಿದೆ ಎಂದು ಅಭಿಪ್ರಾಯವು) ॥ ೫ ॥ ೧ ॥

ಋ ॥(೨೦೦) ಉತತ್ಯಂ ಚಮಸಂ ನವಂ ತ್ವಷ್ಟುರ್ದೇವಸ್ಯ ನಿಷ್ಕೃತಂ ।

ಅಕರ್ತ ಚತುರಃ ಪುನಃ ॥ ೬ ॥

ಅ ॥ ಉತ=ಮತ್ತೂ (ಋಭುಗಳು) ತ್ಯಂ=ಪ್ರಸಿದ್ಧವಾದ, (ಪೂರ್ವದಲ್ಲಿ ಮಾಡಲ್ಪಟ್ಟ ಜೀರ್ಣವಾದ ಒಂದೇ) ಚಮಸಂ=ಪಾನಭಾಜನವನ್ನು ಪುನಃ=ತಿರುಗಿ, ನವಂ=ನೂತನಗಳಾದ, ಚತುರಃ= ನಾಲ್ಕು ಚಮಸ

ಗಳನ್ನು, ಅಕರ್ತ=ಮಾಡಿದರು. ಹೀಗೆ ತ್ವಷ್ಟುರ್ದೇವಸ್ಯ ತ್ವಷ್ಟೃದೇವತೆಯ, ನಿಷ್ಕೃತಂ=ಶುಶ್ರೂಷಣೆಯನ್ನು, ಅಕರ್ತ=ಮಾಡಿದರು.

ವಿ || ದೇವತೆಗಳಿಂದ ಕಳುಹಿಸಲ್ಪಟ್ಟ, ಅಗ್ನಿಯೂ ತ್ವಷ್ಟೃದೇವತೆಯೂ ಕೂಡ ಋಭುಗಳೊಡನೆ ಇದೊಂದು ಜೀರ್ಣವಾದ ಚಮಸವು. ಇದರಂತೆ ಇರುವ ಹೊಸ ನಾಲ್ಕು ಚಮಸಗಳನ್ನು ಮಾಡಿರಿ ಎಂದು ಹೇಳಿದರು. ಆಗ ಆ ಋಭುಗಳು ೨. ಅಥವಾ ೩ ಚಮಸಗಳನ್ನು ಮಾಡುವೆವು ೪ ಚಮಸಗಳನ್ನು ಮಾಡಲಶಕ್ಯವೆಂದರು. ತಿರುಗಿ ಅಗ್ನಿಯೂ ತ್ವಷ್ಟೃದೇವತೆಯೂ ನಿರ್ಬಂಧ ಮಾಡಲು, ೨. ೩. ಮಾಡುತ್ತೇವೆಂದು ತಾವು ಹೇಳಿದ ಮಾತನ್ನು ಬಿಟ್ಟು ಬಿಟ್ಟ ತ್ವಷ್ಟ್ರಾದಿಗಳ ಸೇವೆಯನ್ನು (ನಾಲ್ಕು ಚಮಸಗಳ ನಿರ್ಮಾಣ ರೂಪಸೇವೆಯನ್ನು) ಮಾಡಿದರು. || ೬ ||

ಭಾ || ಏಕಂ ಚಮಸಂ ಚತುರಃ ಕುರುತೇತ್ಯಾಹ ತಾನ್ಪುರಾ । ತ್ವಷ್ಟಾಽಗ್ನಿಶ್ಚೈವ ದೇವಾನಾಂ ವಾಕ್ಯಾತ್ತದಪಿ ತೈಃಕೃತಂ। ದ್ವ್ಯಾದಿಸ್ವೋಕ್ತಂ ಪರಿತ್ಯಜ್ಯ ತ್ವಷ್ಟುಃ ಶುಶ್ರೂಷಣಂ ಕೃತಂ। ತಂ ಪೂರ್ವಕೃತಮೇಕೈಕಂ ಚಮಸಂ ಚತುರೋಽಕ್ರತ || ೬ ||

ಅ || ತ್ವಷ್ಟೃ ದೇವತೆಯೂ ಅಗ್ನಿಯೂ ಕೂಡ ದೇವತೆಗಳ ವಾಕ್ಯಾನುಸಾರ ಆ ಋಭುಗಳೊಡನೆ ಒಂದು ಚಮಸವನ್ನು ಪುನಃ ಇದರಂತೆ ಇರುವ ನಾಲ್ಕು ಹೊಸ ಚಮಸಗಳನ್ನು ಮಾಡಿರಿ ಎಂದು ಮೊದಲು ಹೇಳಿರುವರು. ಆ ಋಭುಗಳಿಂದ ದುಷ್ಕರವಾದುದಾಗ್ಯೂ ಅದು ಮಾಡಲ್ಪಟ್ಟಿತು. ಅವರ ನಿರ್ಬಂಧದಿಂದ ತಾವು ಹೇಳಿದ ೨ ಯಾ ೩ ಮಾಡುತ್ತೇವೆಂಬುದನ್ನು ಬಿಟ್ಟು ತ್ವಷ್ಟೃ ದೇವತೆಯ ನಾಲ್ಕು ಚಮಸಗಳ ನಿರ್ಮಾಣರೂಪವಾದ ಸೇವೆಯು ಮಾಡಲ್ಪಟ್ಟಿತು. ಆ ಪೂರ್ವದಲ್ಲಿ ಮಾಡಲ್ಪಟ್ಟ ಜೀರ್ಣವಾದ ಒಂದೇ ಒಂದು ಚಮಸವನ್ನು ನಾಲ್ಕು ಹೊಸ ಚಮಸಗಳನ್ನಾಗಿ ಮಾಡಿದರು. || ೬ ||

ಋ || (೨೦೧) ತೇ ನೋ ರತ್ನಾನಿ ಧತ್ತನ ತ್ರಿರಾ ಸಾಪ್ತಾನಿ ಸುನ್ವತೇ। ಏಕಮೇಕಂ ಸುಶಸ್ತಿಭಿಃ || ೭ ||

ಅ || (ಯೇ=) ಇಂತಹ ಯಾವ ಋಭುಗಳು ಇದ್ದಾರೋ ತೇ=ಅಂತಹ ನೀವು ನಃ=ನಮ್ಮ, ಸುನ್ವತೇ=ಯಜಮಾನನಿಗೋಸ್ಕರ, ತ್ರಿಃ=ತ್ರಿಕಾಲಗಳಲ್ಲಿಯೂ ಕೂಡ, ಸಾಪ್ತಾನಿ=ಸಪ್ತ ಸಂಖ್ಯಾಕಗಳಾದ, ರತ್ನಾನಿ=ಚತುರ್ವೇದ, ಇತಿಹಾಸ, ಪುರಾಣ, ಪಂಚರಾತ್ರಗಳೆಂಬ ರತ್ನಗಳನ್ನು, ಅಥವಾ ತರ್ಕ, ಮೀಮಾಂಸ ಸಹಿತ ಪಂಚವೇದಗಳೆಂಬ ರತ್ನಗಳನ್ನು ಅಥವಾ ಗಾಯತ್ರೀ ಮೊದಲಾದ ಸಪ್ತ ಛಂದಸ್ಸುಗಳನ್ನು, (ಉಷ್ಣಿಕ್, ಅನುಷ್ಟುಪ್, ಬೃಹತೀ, ವಿರಾಟ್, ತ್ರಿಷ್ಟುಪ್, ಜಗತೀ ಛಂದಸ್ಸುಗಳನ್ನು,) (ದೇವತಾಂತರ ಪಕ್ಷದಲ್ಲಿ) **ಚಕ್ರಂ ರಥೋ ಮಣಿರ್ಭಾರ್ಯಾ ನಿಧಿರಶ್ವೋ ಗಜಸ್ತಥಾ । ಏತಾನಿ ಸಪ್ತ ರತ್ನಾನಿ ಪೂರ್ವೇಷಾಂ ಚಕ್ರವರ್ತಿನಾಂ ||** ಚಕ್ರಂ=ಸೇನೆಯು, ಅಥವಾ (ಚಕ್ರಂ ರಾಷ್ಟ್ರೇ ಪ್ಯಕ್ಷರಂತು ಎಂಬ ಕೋಶದಿಂದ) ರಾಷ್ಟ್ರವು, ರಥಃ=ರಥವು, ಮಣಿಃ=ಪುಷ್ಯ ರಾಗ ಮೊದಲಾದ ಮಣಿಯು, ಭಾರ್ಯಾ=ಹೆಂಡತಿಯು ನಿಧಿಃ= (**ನಿಧಿರ್ನಾ ಶೇವಧಿರ್ಭೇದಾಃ ಪದ್ಮ ಶಂಖಾದಯೋ ನಿಧೇಃ ।** ಎಂಬ ಕೋಶದಿಂದ ಪದ್ಮ ಶಂಖಾದಿರೂಪವಾದುದು ನಿಧಿಯು. **ಮಹಾ ಪದ್ಮಶ್ಚ ಶಂಖಶ್ಚ ಶಂಖೋ ಮಕರ ಕಚ್ಛಪೌ । ಮುಕುಂದ ಕುಂದ ನೀಲಾಶ್ಚ್ಚವರಾಶ್ಚ ನಿಧಯೋ ನವ ।** ಎಂದು ಒಂಭತ್ತು ನಿಧಿ ಪ್ರಭೇದಗಳು.) (**ಚಕ್ರಂ ರಾಷ್ಟ್ರಂ ವರ್ತಯಂತೀತಿ ಚಕ್ರವರ್ತಿನಃ**) ಅಶ್ವಃ=ಕುದುರೆಯು, ಗಜಃ=ಆನೆಯು, ಇವು ಏಳು **ಮೊದಲಿನ ಚಕ್ರವರ್ತಿಗಳ** ಪುರಾ

ಹೋಕ್ತಗಳಾದ ಸಪ್ತ ರತ್ನಗಳು. ಎಂದು ಹೇಳಿದ ರತ್ನಗಳನ್ನು, ಅಧತ್ತನ=ಕೊಡಿರಿ. ಸುಶಸ್ತಿಭಿಃ=(ಶಂಸು ಸ್ತುತೌ) ಪ್ರಶಂಸೆಗೆ ಕಾರಣಗಳಾದ, ಆವಾವ ಎಲ್ಲಾ ಗುಣಗಳಿಂದ ಕೂಡಿರುವ, ಏಕಮೇಕಂ ವಾ=ಈ ರತ್ನಗಳ ಮಧ್ಯದಲ್ಲಿ ಒಂದೊಂದು ರತ್ನವನ್ನಾಗಲೀ, ಅಧತ್ತನ=ಕೊಡಿರಿ. ಅಂತಹ ರತ್ನಗಳನ್ನು ಕೊಡಿರಿ. ॥ ೭ ॥

ಭಾ ॥ (೧) ಸಪ್ತಸಂಖ್ಯಾನಿ ರತ್ನಾನಿ ತ್ರಿಕಾಲೇಷ್ವಪಿ ಧತ್ತನ ॥ (೨) ಪುರಾಣ ಪಂಚರಾತ್ರೇತಿಹಾಸವೇದಾನ್ ಹರಿಸ್ತಥಾ । ಮೀಮಾಂಸಾತರ್ಕಸಹಿತಾನ್ ಪಂಚವೇದಾನಥಾಪಿವಾ । ಸಪ್ತ ಛಂದಾಂಸಿ ನೈಕೈಕಂ ತದ್ಗುಣ್ಯೈಃಖಿಲೈಃ ಸಹ ॥ ೭ ॥

ಅ ॥ (೧)ಅತೀತಾದಿ ಕಾಲಗಳಲ್ಲಿಯೂ,ಏಳು ಸಂಖ್ಯಾಕ ರತ್ನಗಳನ್ನು ಕೊಡಿರಿ. (ದೇವತಾಂತರ ಪಕ್ಷದಲ್ಲಿ ಚಕ್ರಂ ರಥಃ ಇತ್ಯಾದಿ ರತ್ನರೂಪ ವಸ್ತುಗಳ ಸಮೂಹಗಳು. ೨) (ವಿಷ್ಣುಪಕ್ಷದಲ್ಲಿ ಆದರೂ) ಶ್ರೀಹರಿಯು ವಿವಕ್ಷಿತನಾದರೆ—ಪುರಾಣ, ಪಂಚರಾತ್ರಾಗಮ, ಇತಿಹಾಸ, ೪ ವೇದಗಳು, ಇವುಗಳನ್ನು, ಹಾಗೆಯೇ ಮೀಮಾಂಸಾತರ್ಕಗಳಿಂದ ಕೂಡಿರುವ ಐದು ವೇದಗಳನ್ನು, ಅಥವಾ ಗಾಯತ್ರೀ ಮೊದಲಾದ ಏಳು ಛಂದಸ್ಸುಗಳನ್ನು ಕೊಡಿರಿ. ಈ ರತ್ನಗಳ ಮಧ್ಯದಲ್ಲಿ ಒಂದೊಂದು ರತ್ನವನ್ನು ಪ್ರಶಂಸೆಗೆ ಕಾರಣಗಳಾದ ಆವಾವ ಎಲ್ಲಾ ಗುಣಗಳಿಂದೊಡಗೂಡಿ ಇರುವುದನ್ನಾಗಿಯೂ ಕೊಡಿರಿ. ॥ ೭ ॥

ಋ ॥ (೨೦೨) ಅಧಾರಯಂತ ವಹ್ನಯೋಽಭಜಂತ ಸುಕೃತ್ಯಯಾ । ಭಾಗಂ ದೇವೇಷು ಯಜ್ಞಿಯಂ ॥ ೮ ॥ ೨ ॥ ೧೦ ॥

ಅ ॥ ವಹ್ನಯಃ=(**ಧೃತಿರ್ಧಾರಣಧೈರ್ಯಯೋಃ ಧಾರಣ, ಸ್ಥೈರ್ಯ**) ಜಗತ್ತಿಗೆ ಧಾರಕರಾಗಿರುವುದರಿಂದಲೂ, ತಾವೇ ಸ್ಥಿರವಾಗಿರುವುದರಿಂದಲೂ ವಹ್ನಿ ಎಂದು ಹೆಸರುಳ್ಳ, ಋಭವಃ=ಋಭುಗಳು, ಸುಕೃತ್ಯಯಾ=ಒಳ್ಳೇ ಕರ್ಮದಿಂದ, ದೇವೇಷು=ದೇವತೆಗಳ ಮಧ್ಯದಲ್ಲಿದ್ದು, ಯಜ್ಞಿಯಂ ಭಾಗಂ=ಯಜ್ಞಕ್ಕೆ ಅರ್ಹವಾದ ಭಾಗವನ್ನು, ಅಭಜಂತ=ಹೊಂದಿದರು. ಅಧಾರಯಂತಚ=ಪ್ರಾಪ್ತವಾದ ಯಜ್ಞಭಾಗವನ್ನು ಅವಿಚ್ಛಿನ್ನ ಹೇಗೆ ಆದೀತೋ ಹಾಗೆ ಧರಿಸಿದರು.(ಅಂದರೆ ಕಾಲಾಂತರದಲ್ಲಿಯೂ ಸ್ಥಿರೀಕರಿಸಿದರು.) (ಏವಂಚ ಧೃ ಧಾತುವಿಗೆ ಸ್ಥೈರ್ಯವೂ ಧಾರಕತ್ವವೂ ಹೀಗೆ ೨ ಅರ್ಥಗಳು) ॥ ೮ ॥ ೨ ॥ ೧೦ ॥

ಭಾ ॥ ಸುಕರ್ಮಣಾ ಯಜ್ಞಭಾಗಮಭಜನ್ನಪ್ಯಧಾರಯನ್ । ವಹ್ನಯೋ ಧಾರಕತ್ವೇನ ಸ್ಥಿರತ್ವೇನ ಯಥಾಗತಿಃ ॥ ೮ ॥ ೨ ॥ ೧ ॥

ಅ ॥ ಜಗತ್ತನ್ನು ಧರಿಸುವುದರಿಂದಲೂ ಸ್ಥಿರವಾಗಿರಿಸಿರುವುದರಿಂದಲೂ, ವಹ್ನಿ ಎನಿಸಿಕೊಂಡ ಋಭುಗಳು ಸತ್ಕರ್ಮದಿಂದ ದೇವತೆಗಳ ಮಧ್ಯದಲ್ಲಿ ಆಗಿ ಯಜ್ಞಾರ್ಹ ಭಾಗವನ್ನು ಹೊಂದಿದರು. ಮತ್ತು ಧರಿಸಿದರು. (ಭಜನಾತಿರಿಕ್ತವಾದ ಧಾರಣವಿಲ್ಲದಿರುವುದರಿಂದ ಪೌನರುಕ್ತ್ಯವೆಂದರೆ) ಯಾವ ಪ್ರಕಾರದಿಂದ ಪ್ರಾಪ್ತವಾದ ಭಾಗಕ್ಕೆ ವಿಚ್ಛೇದವಿಲ್ಲದಂತೆ ಆಗುವುದೋ ಹಾಗೆ ಧರಿಸಿದರು. (ಅಂತೂ ಈಗ ಹೊಂದಿದರು. ಅಧಾರಯಂತ=ಕಾಲಾಂತರದಲ್ಲಿಯೂ ಸ್ಥಿರೀಕರಿಸಿಕೊಂಡರು. ಅಥವಾ ಜಗತ್ತಿನ ಪ್ರವೃತ್ತಿಯು ಹೇಗೆ ಆಗುವುದೋ ಹಾಗೆ ಧಾರಕರಾಗಿ ಪ್ರವೃತ್ತಿ ಮಾಡಿದರು. ಏವಂಚ ಅಧಾರಯಂತ=ಯಜ್ಞಭಾಗವನ್ನು ತಮ್ಮಲ್ಲಿ ಸ್ಥಿರೀಕರಿಸಿಕೊಂಡರು. ತಾವು ಪ್ರವರ್ತಕರೂ ಆದರು. ಅಭಜಂತ=ವಿಭಾಗಿಸಿದರು. ಪ್ರವರ್ತಿಸುವಂತೆ ಮಾಡಿದರು. ಎಂದರ್ಥವು. ॥ ೮ ॥ ೨ ॥ ೧ ॥

❤ ॥ ೬ ಋಕ್ಕು. ೧ ವರ್ಗ. ಐಂದ್ರಾಗ್ನವು. ಗಾಯತ್ರ ಸೂಕ್ತವು.

ಋ ॥ (೨೦೩) ಇಹೇಂದ್ರಾಗ್ನೀ ಉಪಹ್ವಯೇ ತಯೋರಿತ್ಸ್ತೋಮಮುಶ್ಮಸಿ।
ತಾ ಸೋಮಂ ಸೋಮಪಾತಮಾ ॥ ೧ ॥

ಅ ॥ ಯಾವ ಕಾರಣದಿಂದ, ತಯೋರಿತ್=ಇಂದ್ರ ಅಗ್ನಿಗಳದ್ದೇ, ಸ್ತೋಮಂ=ಸ್ತುತಿಯನ್ನು, (ವಶ ಕಾಂತೌ ಕಾಂತಿಶಬ್ದದಿಂದ ಕಾಮನೆಯೂ ಹೇಳಲ್ಪಡುತ್ತದೆ.) ತಥಾಚ ಉಶ್ಮಸಿ=ನಾವೆಲ್ಲರೂ ಇಚ್ಛಿಸುತ್ತೇವೋ, (ಆದಕಾರಣ ನಾನು) ಇಹ=ಈ ಯಜ್ಞದಲ್ಲಿ, ಇಂದ್ರಾಗ್ನೀ=ಇಂದ್ರ ಅಗ್ನಿ ದೇವತೆಗಳನ್ನು, ಉಪಹ್ವಯೇ= ಕರೆಯುತ್ತೇನೆ. ಮತ್ತು, ತಾ=ಆ ಇಂದ್ರಾಗ್ನಿಗಳೂ ಸೋಮಪಾತಮಾ=ಅತಿಶಯವಾಗಿ ಸೋಮಗಳನ್ನು ಪಾನ ಮಾಡುವವರೋ, (ಆದಕಾರಣ) ಸೋಮಂ=ಸೋಮವನ್ನು ಕೂಡ ಕುರಿತು ಉಪಹ್ವಯೇ=ಕರೆಯುತ್ತೇನೆ. ॥ ೧ ॥

ಭಾ ॥ ಹ್ವಯೇ ಸೋಮಂ ಪ್ರತಿ ಚ ತೌ ॥ ೧ ॥

ಅ ॥ ಆ ಇಂದ್ರಾದಿಗಳನ್ನು, ಸೋಮವನ್ನು ಕುರಿತು ಕರೆಯುತ್ತೇನೆ. ॥ ೧ ॥

ಋ ॥ (೨೦೪) ತಾ ಯಜ್ಞೇಷು ಪ್ರಶಂಸತೇಂದ್ರಾಗ್ನೀ ಶುಂಭತಾ ನರಃ ।
ತಾ ಗಾಯತ್ರೇಷು ಗಾಯತ ॥ ೨ ॥

ಅ ॥ ಹೇ ನರಃ=ಋತ್ವಿಜರೇ, (ನೀವು) ತಾ=ಪ್ರಸ್ತುತರಾದ, ಇಂದ್ರಾಗ್ನೀ=ಇಂದ್ರ ಅಗ್ನಿ ದೇವತೆಗಳನ್ನು, ಯಜ್ಞೇಷು=ಯಜ್ಞಗಳಲ್ಲಿ, ಪ್ರಶಂಸತ=ಚೆನ್ನಾಗಿ ಸ್ತೋತ್ರ ಮಾಡಿರಿ. ಶುಂಭತ=(ಶುಭ ಶುಂಭಶೋಭಾರ್ಥೇ) ಮತ್ತು ಅಲಂಕರಿಸಿರಿ. ತಾ=ಆ ಇಂದ್ರಾಗ್ನಿಗಳನ್ನು, ಗಾಯತ್ರೇಷು=ಗಾಯತ್ರ ಸಾಮಗಳಿಂದ, ಗಾಯತ=ಸ್ತುತಿಸಿರಿ. ॥ ೨ ॥

ಭಾ ॥ ಶುಂಭನಂ ಭೂಷಣಂ ಮತಂ ॥ ೨ ॥

ಅ ॥ (ಶುಭ ಶುಂಭ ಶೋಭಾರ್ಥೇ ಎಂಬ ಧಾತು ವ್ಯಾಖ್ಯಾನದಿಂದ) ಶುಂಭನವೆಂದರೆ ಭೂಷಣವು ಅಲಂಕಾರವು ಎಂದರ್ಥವು. ಶುಂಭತ=ಅಲಂಕರಿಸಿರಿ ಎಂದರ್ಥವು. ॥ ೨ ॥

ಋ ॥ (೨೦೫) ತಾ ಮಿತ್ರಸ್ಯ ಪ್ರಶಸ್ತಯ ಇಂದ್ರಾಗ್ನೀ ತಾ ಹವಾಮಹೇ ।
ಸೋಮಪಾ ಸೋಮಪೀತಯೇ ॥ ೩ ॥

ಅ ॥ ತಾ=ಯಾವಪ್ರಸಿದ್ಧರಾದ ಇಂದ್ರಾಗ್ನಿಗಳು, ಮಿತ್ರಸ್ಯ=ಶ್ರೀಹರಿಯ, ಪ್ರಶಸ್ತಯೇ= ಪ್ರಶಂಸೆಗಾಗಿ (ಪ್ರಶಂಸೆಯುಳ್ಳವರು) (ಆಗುತ್ತಾರೋ) (ದೇವತೆಗಳು ಪರಮಾತ್ಮನ ಪ್ರಶಂಸೆಯನ್ನು ಲೋಕಗಳಲ್ಲಿ ಪ್ರಸಿದ್ಧಿಗೊಳಿಸುತ್ತಾರೆ. ತಾ=ಅಂತಹ, ಸೋಮಪಾ=ಸೋಮಪಾನ ಮಾಡತಕ್ಕ, ಇಂದ್ರಾಗ್ನೀ=ಇಂದ್ರ ಅಗ್ನಿಗಳನ್ನು,ಸೋಮಪೀತಯೇ=ಸೋಮಪಾನ ಮಾಡುವುದಕ್ಕಾಗಿ, ಹವಾಮಹೇ=ಕರೆಯುತ್ತೇವೆ. ॥ ೩ ॥

ಭಾ ॥ ತೌ ಮಿತ್ರಸ್ಯ ಪ್ರಶಸ್ತ್ಯರ್ಥೌ ಹರೇಃ ॥ ೩ ॥

ಅ ॥ ಆ ಇಂದ್ರಾಗ್ನಿಗಳು ಮಿತ್ರನೆನಿಸಿಕೊಂಡ ಶ್ರೀ ಹರಿಯ ಪ್ರಶಂಸಾ ರೂಪ ಪ್ರಯೋಜನವುಳ್ಳವರು. ॥ ೩ ॥

ಋ ॥ (೨೦೬)ಉಗ್ರಾ ಸಂತಾ ಹವಾಮಹ ಉಪೇದಂ ಸವನಂ ಸುತಂ।
ಇಂದ್ರಾಗ್ನೀ ಏಹ ಗಚ್ಛತಾಂ ॥ ೪ ॥

ಅ ॥ (ನಾವು) ಉಗ್ರಾ=ಶತ್ರುಗಳಿಗೆ ಕ್ರೂರರಾದ, ಸಂತಾ=ಪ್ರಶಸ್ತರಾದ, ಇಂದ್ರಾಗ್ನೀ=ಇಂದ್ರ ಅಗ್ನಿಗಳನ್ನು ಇದಂ ಸವನಂ=ಈ ಯಜ್ಞವನ್ನು, ಸುತಂ ಉಪ=ಸೋಮವನ್ನು ಕೂಡ ಕುರಿತು, ಹವಾಮಹೇ=ಕರೆಯುತ್ತೇವೆ. (ಆ ಆಹ್ವಾನವನ್ನು ಕೇಳಿ) ಇಂದ್ರ ಅಗ್ನಿಗಳು, ಇಹ=ಇಲ್ಲಿಗೆ, ಆ ಗಚ್ಛತಾಂ=ಬರಲಿ. ॥ ೪ ॥

ಋ ॥(೨೦೭) ತಾ ಮಹಾಂತಾ ಸದಸ್ಪತೀ ಇಂದ್ರಾಗ್ನೀ ರಕ್ಷ ಉಬ್ಜತಂ।
ಅಪ್ರಜಾಃ ಸಂತ್ವತ್ರಿಣಃ ॥ ೫ ॥

ಅ ॥ ಇಂದ್ರಾಗ್ನೀ=ಎಲೋ ಇಂದ್ರಾಗ್ನಿಗಳೇ, (ಯಾವ ನೀವಿಬ್ಬರು,) ಮಹಾಂತಾ=ಪೂಜ್ಯರೋ, ಸದಸ್ಪತೀ=ಯಜ್ಞ ಗೃಹ ವಿಶೇಷಕ್ಕೆ ಅಧಿಪತಿಗಳೋ, ತಾಃ=ಅಂತಹ ನೀವಿಬ್ಬರು, ರಕ್ಷಃ=ರಾಕ್ಷಸರನ್ನು ಉಬ್ಜತಂ=ಉಬ್ಜ ಆರ್ಜವೇ) ಸಂಹರಿಸಿರುವಿರಿ. ಮತ್ತು, ಅತ್ರಿಣಃ=(ತ್ರಯಃ ಏಷಾಂ ಸಂತೀತಿ ತ್ರಿಣಃ । ನತ್ರಿಣಃ ಅತ್ರಿಣಃ।) (ತಮಸ್ಸನ್ನು ಹೊಂದುವುದರಿಂದ) ಸ್ವರ್ಗ ಮೋಕ್ಷ ಪೃಥಿವೀ ರೂಪ ಪಿತೃಮಾರ್ಗ, ದೇವಮಾರ್ಗ, ಮನುಷ್ಯ ಮಾರ್ಗಗಳೆಂಬ 3ಮಾರ್ಗಗಳೂ ಇಲ್ಲದಿರುವ, ರಾಕ್ಷಸರ ಸಂಬಂಧಿಗಳಾದ ಜನರು, ಅಪ್ರಜಾಃ=ಪ್ರಜೆಗಳು ಇಲ್ಲದಿದ್ದವರು (ಸಂತತಿ ಇಲ್ಲದವರು,) ಸಂತು=ಆಗಲಿ. ॥ ೫ ॥

ಭಾ ॥ ರಕ್ಷಾಂಸಿ ಚೋಬ್ಜತಂ । ರಕ್ಷೋರಕ್ಷ್ಯಾಃ ಪ್ರಜಾ ಯಸ್ಮಾದತ್ರ್ಯೋ ಮಾರ್ಗತ್ರಯೋಜ್ಝಿತಾಃ । ಪಿತೃದೇವ ಮನುಷ್ಯಾಣಾಂ ಗತ್ಯಭಾವಾದಥೋಗತೇಃ ॥ ೫ ॥

ಅ ॥ ಎಲೋ ಇಂದ್ರಾಗ್ನಿಗಳೇ ರಾಕ್ಷಸರನ್ನು ಕೊಲ್ಲಿರಿ. ಯಾವ ಕಾರಣದಿಂದ ತಮಸ್ಸನ್ನು ಹೊಂದುವುದರಿಂದ, ಪಿತೃಗಳ ಗತಿಯಾದ ಸ್ವರ್ಗ ದೇವತೆಗಳ ಗತಿಯಾದ ಮೋಕ್ಷ, ಮನುಷ್ಯರ ಗತಿಯಾದ ಪೃಥಿವೀ, ಇವುಗಳು ಲಭಿಸದಿರುವುದರಿಂದ ಪಿತೃಮಾರ್ಗ, ದೇವಮಾರ್ಗ, ಮನುಷ್ಯಮಾರ್ಗ ಎಂಬ 3 ಮಾರ್ಗಗಳಿಂದಲೂ ಹೀನರಾಗಿರುತ್ತಾರೋ, ಆದಕಾರಣ ರಾಕ್ಷಸ ಜನರು ಅತ್ರ್ಯಃ ಎನಿಸುತ್ತಾರೆ. (ನವಿದ್ಯಂತೆ ತ್ರಯೋ ಯಾಸಾಂ) ಆದ ಪ್ರಯುಕ್ತ ರಾಕ್ಷಸರಿಂದ ರಕ್ಷಿಸಲ್ಪಡತಕ್ಕ ಪ್ರಜೆಗಳು (ಸಂತತಿಯಿಲ್ಲದವರಾಗಲಿ.) ॥ ೫ ॥

ಋ ॥(೨೦೮) ತೇನ ಸತ್ಯೇನ ಜಾಗೃತಮಧಿ ಪ್ರಚೇತುನೇ ಪದೇ।ಇಂದ್ರಾಗ್ನೀ
ಶರ್ಮ ಯಚ್ಛತಂ ॥ ೬ ॥ ೩ ॥ ೨೧ ॥

ಅ ॥ ಇಂದ್ರಾಗ್ನೀ=ಎಲೋ ಇಂದ್ರಾಗ್ನಿಗಳೇ (ನೀವಿಬ್ಬರು) ತೇನ=ಪ್ರಸಿದ್ಧನಾದ, ಸತ್ಯೇನ=ಗುಣಪೂರ್ಣನಾದ ಶ್ರೀ ವಿಷ್ಣುವಿನ ಪ್ರಸಾದದಿಂದ, ಪ್ರಚೇತುನೇ=ಪ್ರಕೃಷ್ಟ ಚೇತನನಾದ **ಆಧಿಕ್ಯೇಽಧಿಕಂ** ಎಂಬ ಸೂತ್ರದಿಂದ ಪ್ರಚೇತನೇ ಎಂಬಲ್ಲಿದ್ದ ಅಕಾರಕ್ಕೆ ಉಕಾರವು.) (ಉಕಾರಕ್ಕೆ ಆಧಿಕ್ಯವೆಂದು ಅರ್ಥವು.) ಪದೇ=(ಪದಗತೌ) ಗಮ್ಯನಾದ, ಶ್ರೀಹರಿಯಲ್ಲಿ, ಅಧಿ=ಚೆನ್ನಾಗಿ, (ಇತರ ದೇವತಾ ಸಾಧಾರಣವಾಗದೆ) ಅಥವಾ ಸ್ವಾಭಾವಿಕವಾಗಿ (ಅಂದರೆ ಫಲಾಪೇಕ್ಷೆಯಿಲ್ಲದೆ,) ಜಾಗೃತಂ=ಜಾಗರೂಕರಾಗಿಯೇ ಇದ್ದೀರಿ. (ಭಗವದ್ವಿಷಯದಲ್ಲಿ ಜಾಗರಣವುಳ್ಳವರು ಆಗಿರುತ್ತೀರಿ.) (ಇಂತಹ ನೀವಿಬ್ಬರು ನಮಗೆ) ಶರ್ಮ=ಸುಖವನ್ನು, ಯಚ್ಛತಂ=ಕೊಡಿರಿ. (ವಿಷ್ಣು ಪಕ್ಷದಲ್ಲ ಆದರೂ) ಇಂದ್ರಾಗ್ನೀ=ಇಂದ್ರ ಅಗ್ನಿ ಶಬ್ದವಾಚ್ಯಗಳಾದ ಎಲೋ ಭಗವದ್ರೂಪಗಳೇ, (ನೀವಿಬ್ಬರು) ತೇನ ಸತ್ಯೇನ=ಪ್ರಸಿದ್ಧವಾದ ಇಚ್ಛಾದಿ ರೂಪಗುಣದಿಂದ, ಸ್ವವಿಷಯದಲ್ಲಿ ಜಾಗರೂಕರಾಗಿದ್ದೀರಿ. (ಅಂದರೆ ತಮ್ಮ ಸಾಮರ್ಥ್ಯದಿಂದಲೇ ಸ್ವಪ್ರಕಾಶರಾಗಿದ್ದೀರಿ.) (**ಸದ್ಭಾವೇ ಸಾಧುಭಾವೇಚ** ಇತ್ಯಾದಿ ಪ್ರಮಾಣಗಳಿಂದ ಸತ್ ಶಬ್ದವು ಗುಣವಾಚಕವಾಗಿರುವುದರಿಂದ, ಸದ್ಭಿಃ=ಗುಣಗಳಿಂದ, ತ್ಯಃ=ವ್ಯಾಪ್ತನು, ಹೀಗೆ ಸತ್ಯ ಶಬ್ದವು ಗುಣಪೂರ್ತಿ ವಾಚಕವು. ಏವಂಚ ಸತ್ಯ ಶಬ್ದವು ಜ್ಞಾನ ಇಚ್ಛಾ ಮೊದಲಾದ ಗುಣವಾಚಕವೆಂದು ತಿಳಿಯಬೇಕು.) ॥ ೬ ॥ ೩ ॥ ೨೧ ॥

ಭಾ ॥ ಸತ್ಯೇನ ಗುಣಪೂರ್ಣೇನ ವಿಷ್ಣುನಾ ತೇನ ಜಾಗೃತಂ । ಸ್ವಗುಣೈರೇವ ವಿಷ್ಣುಸ್ತು ಪ್ರಕೃಷ್ಟೇ ಚೇತನೇ ಹರೌ ॥ ಪದೇ ಗಮ್ಯತ್ವತಃ ಸಮ್ಯಕ್ತಸ್ಮಿನ್ನೇವ ಸ್ವಭಾವತಃ । ತಥಾ ಸ್ಥಿತೌ ತು ಜಾಗೃತಮಿತಿ ವಿಷ್ಣುರ್ವಿಶೇಷತಃ ॥ ಉಕ್ತಃ ॥ ೬ ॥ ೩ ॥ ೨೧ ॥

ಅ ॥ (ಇಂದ್ರಾಗ್ನಿಗಳೇ) ಪ್ರಸಿದ್ಧನಾದ (ಸತ್ಯೇನ)=ಗುಣ ಪೂರ್ಣನಾದ ವಿಷ್ಣುವಿನ ಪ್ರಸಾದದಿಂದ ವಿಷ್ಣುವು ವಿವಕ್ಷಿತನಾದರೆ ಆಗಸತ್ಯೇನ ಎನ್ನುವುದಕ್ಕೆ, ತನ್ನ ಇಚ್ಛಾ ಮೊದಲಾದ ಗುಣಗಳಿಂದಲೇ, ಸರ್ವೋತ್ಕೃಷ್ಟ ಚೇತನನಾದ, ಜ್ಞಾನಿಗಳಿಂದ ಹೊಂದಲ್ಪಡುವುದರಿಂದ ಪದ ಎನಿಸಿಕೊಂಡ, ಶ್ರೀಹರಿಯಲ್ಲಿ ಚೆನ್ನಾಗಿ ಅಂದರೆ ಆ ಶ್ರೀಹರಿ ವಿಷಯದಲ್ಲಿಯೇ ಸ್ವಭಾವತಃ= ಫಲಾಪೇಕ್ಷೆಯಿಲ್ಲದೆ ಜಾಗರೂಕರಾಗಿದ್ದೀರಿ. (ಹಾಗಾದರೆ ಇಂದ್ರಾಗ್ನಿಗಳು ಸರ್ವದಾಭಗದ್ವಿಷಯದಲ್ಲಿ ಜಾಗರೂಕರಾಗಿಯೇ ಇರುತ್ತಾರೆ. ಆದಕಾರಣ ತಿರುಗಿ ಜಾಗ್ರತಂ=ಜಾಗರೂಕರಾಗಿರಿರಿ ಎಂದದ್ದು ಹೇಗೆ? ಎಂದರೆ) ಸ್ವಭಾವತಃ=ವಿಧಾನವಿಲ್ಲದೆ ಇಂದ್ರಾಗ್ನಿಗಳು ಜಾಗರೂಕರಾಗಿಯೇ ಇರುತ್ತಾರೆ. ಆದುದರಿಂದಲೇ ಜಾಗೃತಂ ಎಂದು ಲಕಾರ ವ್ಯತ್ಯಾಸವು (ಲಡರ್ಥದಲ್ಲಿ ಲೋಟ ಪ್ರಯೋಗವು) ಉಕ್ತವಾಗಿದೆ. (ಹಾಗಾದರೆ ಈ ವಾಕ್ಯವನ್ನು ಶ್ರೀವಿಷ್ಣುವಿನಲ್ಲಿ ಕೂಡಿಸಲಿಕ್ಕೆ ಶಕ್ಯವಿಲ್ಲ. ಏಕೆಂದರೆ ಕರಣ ಅಧಿಕರಣ ಕರ್ತೃತ್ವಾದಿಗಳಿಗೆ ಭೇದವು ಇರಬೇಕು. ಪ್ರಕೃತ ಕರಣಗಳಾದ ಸತ್ಯಪದೋಕ್ತ ಗುಣಗಳಿಗೂ ಪ್ರಚೇತನ ಪದೋಕ್ತ ಹರಿರೂಪ ಅಧಿಕರಣಕ್ಕೂ, ಇಂದ್ರಾಗ್ನೀ ಪದೋಕ್ತ ಕರ್ತೃಗಳಿಗೂ, ದ್ವಿತ್ವಾದಿಗಳಿಗೂ ಶ್ರೀವಿಷ್ಣುವಿನಲ್ಲಿ ಅಭೇದವೇ ಇದ್ದ ಪ್ರಯುಕ್ತ ಈ ವಾಕ್ಯವನ್ನು ಕೂಡಿಸಲಿಕ್ಕೇನೇ ಅಶಕ್ಯವು ಎಂದರೆ) ಶ್ರೀವಿಷ್ಣುವು ಭೇದ ಪ್ರತಿನಿಧಿರೂಪವಾದ ವಿಶೇಷ ಶಕ್ತಿಯಿಂದ ಒಬ್ಬನೇ ಕರಣನೂ, ಅಧಿಕರಣನೂ ಕರ್ತನೂ ಆಗುತ್ತಾನೆ. ಆದಕಾರಣ ಕರಣತ್ವಾದಿ ರೂಪಗಳಿಂದ ಹೇಳಲ್ಪಟ್ಟಿದ್ದಾನೆ. (ಆದಕಾರಣ ದೋಷವಿಲ್ಲ)

॥ ೬ ॥ ೩ ॥ ೨೧ ॥

ಅವ॥ ೨೧ ಋಕ್ಕುಗಳು. ೪ ವರ್ಗಗಳು. ನಾನಾ ದೇವತೆಗಳು. ಗಾಯತ್ರಸೂಕ್ತವು. ಆದಿಯ ೪ ಋಕ್ಕುಗಳು ಅಶ್ವಿನೀ ದೇವತಾಕಗಳು. ಆ ಮೇಲಿನ ೪ ಋಕ್ಕುಗಳು ಸವಿತೃ ದೇವತಾಕಗಳು, ಆ ಮೇಲಿನ ೨ ಋಕ್ಕುಗಳು ಅಗ್ನಿ ದೇವತಾಕಗಳು. ೧ ಋಕ್ಕು ದೇವಿಯರನ್ನು ಪ್ರತಿಪಾದಿಸತಕ್ಕದು. ಆ ಮೇಲಿನ ೧ಋಕ್ಕುಗೆ ಇಂದ್ರಾಣೀ ವರುಣಾನೀ=ಅಗ್ನಾಯಿ ಇವರು ದೇವತೆಯರು. ಆ ಮೇಲಿನ ೨ ಋಕ್ಕುಗಳಗೆ ದ್ಯಾವಾಪೃಥಿವೀ ದೇವತೆಗಳೂ. ಆ ಮೇಲಿನ ೧ ಋಕ್ಕುಗೆ ಪೃಥಿವೀ ದೇವತೆಯೂ ಮೇಲಿನ ೬ ಋಕ್ಕುಗಳಿಗೆ ವಿಷ್ಣು ದೇವತೆಯು ಆ ೬ ಋಕ್ಕುಗಳಲ್ಲಿ ೧ನೇದ್ದಾದ **ಅತೋದೇವಾ** ಎಂಬ ಋಕ್ಕು ದೇವ ದೇವತಾಕವು.

ಋ ॥ (೨೦೯) ಪ್ರಾತರ್ಯುಜಾ ವಿಬೋಧಯಾಶ್ವಿನಾವೇಹ ಗಚ್ಛತಾಂ।

ಅಸ್ಯ ಸೋಮಸ್ಯ ಪೀತಯೇ ॥ ೧ ॥

ಅ॥ (ಎಲೋ ಹೋತನೇ,) ಪ್ರಾತರ್ಯುಜಾ = ಪ್ರಾತಸ್ಸವನದಲ್ಲಿ ಸ್ತುತಿವಿಷಯರಾಗಿ ಸಂಬದ್ಧರಾದ ಅಶ್ವಿನೌ = ಪ್ರಸಿದ್ಧರಾದ ಅಶ್ವಿನೀ ದೇವತೆಗಳನ್ನು ಹಾಗೆಯೇ ಪ್ರಾತರ್ಯುಜಾ=ಪ್ರಾತಃಕಾಲದಲ್ಲಿ ಮಾಡಲ್ಪಡತಕ್ಕ ಹಂಸೋಪಾಸನಾ ರೂಪವಾದ ಸಮಾಧಿಗೆ ವಿಷಯರಾದ, ಅಶ್ವಿನೌ=ವಿಷ್ಣುರೂಪ ವಿಶೇಷಗಳನ್ನು ವಿಬೋಧಯ=ಸರ್ವದಾ ವಿಬುದ್ಧರಾಗಿಯೇ ಇರುವವರನ್ನು, ಪ್ರಾರ್ಥನೆ ಮಾಡು. (ಅವರು) ಇಹ= ಇಲ್ಲಿಗೆ ಅಸ್ಯ ಸೋಮಸ್ಯ ಪೀತಯೇ=ಈ ಸೋಮವನ್ನು ಪಾನ ಮಾಡುವುದಕ್ಕಾಗಿ, ಆಗಚ್ಛತಾಂ=ಬರಲಿ ॥ ೧ ॥

ಭಾ ॥ (೧) ಪ್ರಾತಃ ಸ್ತುತತ್ವೇನ ಪ್ರೋಕ್ತೌ ಪ್ರಾತರ್ಯುಜಾವಿತಿ। ಅಶ್ವಿನೌ (೨) ಭಗವಾಂಶ್ಚೈವ ಪ್ರಾತರ್ಯೋಗೇನ ಗಮ್ಯತೇ॥ (೩) ಸ್ತುತಿ ಶಬ್ದಃ ಸ್ತುತೌ ಯಸ್ಮಾದ್ಬುಧ್ಯತೇ ವರ್ತಮಾನಕಃ। ಬೋಧಯೇತ್ಯತ ಉಕ್ತಂ ತತ್ಪರತೋ ಬುಧ್ಯತೇ ಕಥಂ ॥೧ ॥

ಅ ॥ (೧) ಪ್ರಾತಃ ಸವನದಲ್ಲಿ ಸ್ತುತಿಸಲ್ಪಡುವವರಾದುದರಿಂದ ಅಶ್ವಿನೀ ದೇವತೆಗಳು ಪ್ರಾತರ್ಯುಜಾ ಎಂದು ಹೇಳಿಸಿಕೊಳ್ಳಲ್ಪಡುತ್ತಾರೆ. (೨) **ಶ್ವಾಸರೂಪೋ ಜಪೋ ನಿತ್ಯಮುಭಯೋರ್ವಿದ್ವದಜ್ಞಯೋಃ। ಏಕವಿಂಶತ್ಸಹಸ್ರಾತ್ಮಾ ಸಷಟ್ ಶತಮಹರ್ನಿಶಂ । ಅರ್ಪಣೀಯೋ ಹರೌನಿತ್ಯಂ ಪ್ರಾತರ್ಯೋಗೋ ಮಹಾನಯಂ ॥** ಎಂದು ತಂತ್ರಸಾರದಲ್ಲಿ ಹಂಸೋಪಾಸನೆಯನ್ನು ಪ್ರಾತರ್ಯೋಗವೆಂದು ಹೇಳಿದುದರಿಂದ ಶ್ವಾಸಾತ್ಮಕ ಹಂಸಮಂತ್ರ ಜಪರೂಪ ಉಪಾಸನಾಸ್ವರೂಪವಾದ ಪ್ರಾತರ್ಯೋಗದಿಂದ ಶ್ರೀ ಪರಮಾತ್ಮನು ಹೊಂದಲ್ಪಡುತ್ತಾನೆ. ಆದಕಾರಣ ಶ್ರೀಹರಿಯು ಪ್ರಾತರ್ಯುಕ್ ಎನಿಸುತ್ತಾನೆ. (ಹಾಗಾದರೆ ಶ್ರೀ ವಿಷ್ಣುವು ಉಪಾಸನೆಗೆ ವಿಷಯನಾದುದರಿಂದ ಹಂಸೋಪಾಸನಾ ಎಂದರ್ಥವುಳ್ಳ ಪ್ರಾತರ್ಯುಕ್ ಶಬ್ದವು ಶ್ರೀ ವಿಷ್ಣುವಿಗೆ ವಿಶೇಷಣವಾಗುವುದು ಹೇಗೆಂದರೆ ಮೋಕ್ಷೋಪಾಯವಾದ ಹಂಸೋಪಾಸನೆಗೂ ಉಪೇಯನಾದ ವಿಷ್ಣುವಿಗೂ ಅಭೇದೋಪಚಾರವು.) (೩) (ಮೊದಲು ಅಜ್ಞಾನವಿದ್ದರೇನೇ ಬೋಧನವು (ತಿಳಿಸಿಕೊಡುವಿಕೆಯು) ಕೂಡುವುದರಿಂದ ವಿಬೋಧಯ=ತಿಳಿಸಿಕೊಡು ಎನ್ನುವುದರಿಂದ ಅಜ್ಞಾನವು ಸೂಚಿತವಾಗುತ್ತದೆ. ಆದಕಾರಣ ಸಯುಕ್ತಿಕವಾಗಿ ಅನ್ಯಥಾ ವ್ಯಾಖ್ಯಾನ ಮಾಡುತ್ತಾರೆ.) ಯಾವ ಕಾರಣದಿಂದ ಸ್ತುತ್ಯರ್ಥಕವಾದ ಶಬ್ದವನ್ನು ಗುಣಸಂಕೀರ್ತನ ರೂಪವಾದ ಸ್ತುತಿಯಲ್ಲಿಯೇ (ವ್ಯಾಖ್ಯಾನ ಮಾಡಬೇಕು. ಸ್ತುತಿ ಪ್ರಕರಣದಿಂದ ಸಂಗತಿಯಿಲ್ಲದಿರುವ ಪ್ರಯುಕ್ತ ದೋಷ ಸೂಚಕವಾಗಿ ವ್ಯಾಖ್ಯಾನ ಮಾಡಬಾರದು.) ಆದಕಾರಣ ಬೋಧಯ ಎಂದು ಯಾವುದು ಉಕ್ತವಾಗಿದೆಯೋ, ಅಲ್ಲಿ ಲೋಟ್ ಪ್ರತ್ಯಯವನ್ನು ಬುಧ್ಯತೇ ಎಂದು ವರ್ತಮಾನಾರ್ಥಕವನ್ನಾಗಿಯೂ ಸ್ವಾರ್ಥೇಣಿಚ್ ಎಂದೂ ವ್ಯಾಖ್ಯಾನ ಮಾಡಬೇಕು ಪ್ರಾರ್ಥಿಸು ಎಂದು. (ಇದ್ದ ಹಾಗೆ ವ್ಯಾಖ್ಯಾನ ಮಾಡಿದರೆ ಸ್ತುತಿತ್ವಕ್ಕೆ ವ್ಯಾಹತಿ ಬರುವುದು ಹೇಗೆ? ಎಂದರೆ)(ಸರ್ವಜ್ಞನಾದುದರಿಂದ ಶ್ರೀಹರಿಯು) ಋತ್ವಿಗಾದಿಗಳಿಂದ ಹೇಗೆ ತಿಳಿಯುತ್ತಾನೆ. ॥ ೧ ॥

ಋ ॥ (೨೧೦) ಯಾ ಸುರಥಾ ರಥೀತಮೋಭಾ ದೇವಾ ದಿವಿಸ್ಪೃಶಾ ।

ಅಶ್ವಿನಾ ತಾ ಹವಾಮಹೇ ॥ ೨ ॥

ಅ ॥ ಯಾ=ಯಾವ, ಉಭಾ ದೇವಾ=ಇಬ್ಬರು ದೇವತೆಗಳಾದ ಅಶ್ವಿನಾ=ಅಶ್ವಿನೀ ದೇವತೆಗಳು ಸುರಥಾ=ಪ್ರಶಸ್ತ ರಥವುಳ್ಳವರೋ, ರಥೀತಮಾ=ಅತಿಶಯಿತ ಶ್ರೇಷ್ಠ ರಥವುಳ್ಳವರೋ, ದಿವಿಸ್ಪೃಶಾ=ಸ್ವರ್ಗದಲ್ಲಿರುವವರೋ, ತಾ=ಅವರಿಬ್ಬರನ್ನು ಹವಾಮಹೇ=ಕರೆಯುತ್ತೇವೆ. ॥ ೨ ॥

ಋ ॥ (೨೧೧) ಯಾ ವಾಂ ಕಶಾ ಮಧುಮತ್ಯಶ್ವಿನಾ ಸೂನೃತಾವತೀ ।

ತಯಾ ಯಜ್ಞಂ ಮಿಮಿಕ್ಷತಂ ॥ ೩ ॥

ಅ ॥ ಅಶ್ವಿನಾ=ಅಶ್ವಿನೀ ದೇವತೆಗಳೇ, ಯಾ=ಯಾವ, ವಾಂ=ನಿಮ್ಮಿಬ್ಬರ ಸಂಬಂಧಿಯಾದ, ಮಧುಮತೀ=ಅಮೃತವನ್ನು ಸುರಿಸುವುದರಿಂದ ಸ್ಪರ್ಶ ಮಾತ್ರದಿಂದಲೇ ಸಮಸ್ತ ಪದಾರ್ಥಗಳಿಗೂ ಸ್ವಾದುತ್ವ (ರುಚಿ) ವನ್ನುಂಟು ಮಾಡುವ, ಸೂನೃತಾವತೀ=ವೇದವಾಣಿಯಿಂದ ಸ್ತುತ್ಯವಾಗಿರುವ, ಕಶಾ=ತಂತು ಚರ್ಮಾದಿಗಳಿಂದ ನಿರ್ಮಿತವಾದ, ಅಶ್ವಾದಿಗಳಿಗೆ ಹೊಡೆಯುವುದಕ್ಕಾಗಿ ಮಾಡಿರತಕ್ಕ ರಜ್ಜು ವಿಶೇಷವೋ, (ಬಾರ್ಕೋಲು) ತಯಾ=ಅದರಿಂದ, ಯಜ್ಞಂ=ನಮ್ಮ ಯಜ್ಞವನ್ನು (ಅಂದರೆ ಯಜ್ಞ ಸಂಬಂಧಿಯಾದ ಘೃತಸೋಮ ಮೊದಲಾದ ವಸ್ತುಗಳ ಸಮೂಹವನ್ನು ಮಿಮಿಕ್ಷತಂ=(ಮಿಹ ಸ್ಪರ್ಶನೇ) ಸ್ಪರ್ಶಿಸಿರಿ ॥ ೩ ॥

ಭಾ॥(೧) ಕಶಯಾ ಸ್ಪೃಷ್ಟಿಮಾತ್ರೇಣ ಮಧುರಂ ಕುರುತೋಽಖಿಲಂ ।ಅತೋ ಮಿಮಿಕ್ಷತಮಿತಿ (೨) ಸ್ಪರ್ಶೋ ಮೇಕ್ಷಣಮುಚ್ಯತೇ॥(೩) ವೇದವಾಕ್ಯಸ್ತುತತ್ವೇನ ಕಶಾ ಸಾ ಸೂನೃತಾವತೀ। (೪) ತಯೈವ ಘೃತಸೋಮಾದಿ ಸ್ಪೃಶತಂ ಯಾಜ್ಞಿಕಂ ವಸು ॥ ೩ ॥

ಅ ॥ (ಬಾರ್ಕೋಲಿನಿಂದ ಯಜ್ಞ ಸಾಮಾಗ್ರಿಯನ್ನು ಮುಟ್ಟಬೇಕೆಂದು ಪ್ರಾರ್ಥಿಸಲಿಕ್ಕೆ ಏನು ಕಾರಣವೆಂದರೆ) (ಅಶ್ವಿನೀ ದೇವತೆಗಳು) ಬಾರ್ಕೋಲಿನಿಂದ ಕೇವಲ ಸ್ಪರ್ಶ ಮಾತ್ರದಿಂದ ಯಜ್ಞ ಸಂಬಂಧಿ ಘೃತ ಮೊದಲಾದ ಎಲ್ಲಾ ವಸ್ತುಗಳನ್ನು ಮಧುರಗಳನ್ನಾಗಿ ಮಾಡುತ್ತಾರೆ. ಆದ ಕಾರಣ ಸ್ಪರ್ಶಮಾಡಿರಿ ಮುಟ್ಟಬೇಕೆಂದು ಅಶ್ವಿನೀ ದೇವತೆಗಳ ಪತ್ತಿರ ಪ್ರಾರ್ಥಿಸಿದ್ದು. (೨) ಮೇಕ್ಷಣವೆಂಬ ಪ್ರಕೃತಿಯಿಂದ ಸ್ಪರ್ಶವು ಹೇಳಲ್ಪಟ್ಟಿದೆ. (೩) ವೇದ ವಾಕ್ಯಗಳಿಂದ ಸ್ತುತಿಸಲ್ಪಡುವುದರಿಂದ ಆ ಕಶೆಯು ಸೂನೃತಾವತೀ ಎನಿಸುತ್ತದೆ. (೪) (ಯಜ್ಞವು ಕ್ರಿಯಾರೂಪವಾಗಿರುವುದರಿಂದ ಕಶೆಯಿಂದ ಯಜ್ಞವನ್ನು ಮುಟ್ಟುವುದು ಹೇಗೆ? ಮತ್ತು ಯಜ್ಞವು ಮಧುರವಾಗುವುದೆಂದದ್ದೂ ಹೇಗೆ ಎಂದರೆ) ಆ ಭಾರ್ಕೋಲಿನಿಂದಲೇ ಘೃತಸೋಮ ನೊದಲಾದ ಯಜ್ಞ ಸಂಬಂಧಿ ವಸ್ತುಗಳನ್ನು ಸ್ಪರ್ಶಮಾಡಿರಿ ಎಂದರ್ಥವು ॥ ೩ ॥

ಋ ॥ (೨೧೨) ನ ಹಿ ವಾಮಸ್ತಿ ದೂರಕೇ ಯತ್ರಾ ರಥೇನ ಗಚ್ಛಥಃ।

ಅಶ್ವಿನಾ ಸೋಮಿನೋ ಗೃಹಂ ॥ ೪ ॥

ಅ ॥ ಅಶ್ವಿನಾ=ಅಶ್ವಿನೀ ದೇವತೆಗಳಿರಾ, ಸೋಮಿನಃ=ಸೋಮಪಾನಮಾಡುವ ಯಜಮಾನನ, ಯತ್ರ ಗೃಹಂ=ಯಾವ ಮನೆಯನ್ನು ಕುರಿತು, ರಥೇನ=ರಥದಿಂದ, ಗಚ್ಛಥಃ=ಬರುತ್ತೀರೋ, (ಆ ಮನೆಯು) ವಾಂ=ನಿಮಗೆ ದೂರಕೇ=ದೂರದಲ್ಲಿ। ನಾಸ್ತಿ ಹಿ=ಇಲ್ಲವಷ್ಟೆ, ದೂರವಾಗುವುದಿಲ್ಲವಷ್ಟೆ. (ಆದ ಕಾರಣ ಬನ್ನಿರಿ) ॥ ೪ ॥

ಋ ॥ (೨೧೩) ಹಿರಣ್ಯಪಾಣಿಮೂತಯೇ ಸವಿತಾರಮುಪಹ್ವಯೇ ।

ಸ ಚೇತ್ತಾ ದೇವತಾ ಪದಂ ॥ ॥ ೫ ॥

ಅ ॥ (ನಾನು) ಹಿರಣ್ಯ ಪಾಣಿಂ=ಹಿತವೂ ರಮಣೀಯವೂ ಆಗಿರುವ, ಅಥವಾ ಹಿರಣ್ಯ ವರ್ಣವುಳ್ಳ, ಸಮಸ್ತ ಅವಯವಗಳಿಂದ ಕೂಡಿದ ರೂಪವುಳ್ಳ, ಸವಿತಾರಂ= (ಷೂಜ ಪ್ರಾಣಿ ಪ್ರಸವೇ) ಜಗತ್ತನ್ನು ಸೃಷ್ಟಿಸುವುದರಿಂದ ಸವಿತೃ ಎನಿಸಿಕೊಂಡ ಶ್ರೀಹರಿಯನ್ನು, ಊತಯೇ=ರಕ್ಷಾರ್ಥವಾಗಿ, ಉಪಹ್ವಯೇ=ಕರೆಯುತ್ತೇನೆ. (ಏಕೆಂದರೆ)ಸಃ=ಆ ಶ್ರೀಹರಿಯೇ, ಪದಂ=ತನ್ನ ಸ್ವರೂಪವನ್ನು. ಇತರರ ಸ್ವರೂಪವನ್ನು ಚೇತ್ತಾ=(ಚಿತೀ ಸಂಜ್ಞಾನೇ) ತಿಳಿದವನು. ಸಃ=ಆತನೇ, ದೇವತಾ=ಕ್ರೀಡಾದಿ ಗುಣವಿಶಿಷ್ಟನಾದ ದೇವನು. (ಇತರರು ದೇವತಾಭಾಸರು.) ಅಥವಾ ದೇವತಾ=ದೇವ ಶಬ್ದ ಪ್ರವೃತ್ತಿ ನಿಮಿತ್ತವಾದ ಕ್ರೀಡಾದಿಗುಣ ಸಮುದಾಯವು, ಸಃ= ಅವನೇ (ಗುಣಗಳಿಂದ ಅಭಿನ್ನನೇ.) (ಪ್ರಸಿದ್ಧ ಸೂರ್ಯನಲ್ಲಿ ಯಥಾಯೋಗ್ಯವಾಗಿ ಇಟ್ಟುಕೊಳ್ಳಬೇಕು.)॥ ೫ ॥

ಭಾ ॥ (೧) ಹಿತತ್ವಾದ್ರಮಣೀಯತ್ವಾದ್ಧಿರಣ್ಯಂ ವರ್ಣತೋಽಪಿ ವಾ।ರೂಪಂ ನಾರಾಯಣಸ್ಯೈವ ಪಾಣಿ ಶಬ್ದೋಪಲಕ್ಷಿತಂ॥(೨)ಸ್ರಷ್ಟೃತ್ವಾತ್ಸವಿತಾ ವಿಷ್ಣುಃ ಸಜ್ಞಾತಾ ಸ್ವಪದಾದಿಕಂ॥ ಸ ಏವ ದೇವತಾ ಮುಖ್ಯಾ ತದ್ಗುಣೈಕ್ಯೇನ ದೇವತಾ॥ ॥ ೫ ॥ ೪ ॥

ಅ ॥ (೧) (ಶ್ರೀ ವಿಷ್ಣುವಿನಲ್ಲಿ ಹಿರಣ್ಯಪಾಣಿ ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ.) (ಶ್ರೀ ನಾರಾಯಣನ ಸ್ವರೂಪವೇ (ಪಾಣಿ ಮಾತ್ರವಲ್ಲ.) ಜಗತ್ತಿಗೆ ಹಿತಕರವಾಗಿರುವುದರಿಂದಲೂ ಜಗತ್ತಿಗಿಂತ ಅತಿ ರಮಣೀಯವಾಗಿರುವುದರಿಂದಲೂ ಹಿರಣ್ಯವು. ಮತ್ತು ಹಿರಣ್ಯ ಸದೃಶವಾಗಿರುವುದರಿಂದಲೂ ಹಿರಣ್ಯವು. ಲಕ್ಷಣಯಾ ಪಾಣಿಶಬ್ದದಿಂದ ಸಮಸ್ತ ಅವಯವಗಳಿಂದ ಕೂಡಿದ ರೂಪವನ್ನು ಇಟ್ಟುಕೊಳ್ಳಬೇಕು. ಏವಂಚ ಶ್ರೀಪರಮಾತ್ಮನಿಗೆ **ಯದಾ ಪಶ್ಯಃ ಪಶ್ಯತೇ ರುಗ್ಮವರ್ಣಂ** ಇತ್ಯಾದಿಪ್ರಮಾಣಗಳಿಂದ ಅಂತಹ ಹಿರಣ್ಯ ರೂಪವಿದ್ದ ಪ್ರಯುಕ್ತ ಆ ಶ್ರೀಹರಿಯು ಹಿರಣ್ಯಪಾಣಿಯೆನಿಸುತ್ತಾನೆ, (೨) (ಸವಿತೃ ಶಬ್ದವನ್ನು ಗಾಯತ್ರೀ ವ್ಯಾಖ್ಯಾನ ಮಾಡುವಾಗ ವ್ಯಾಖ್ಯಾನಮಾಡಿರುವುದರಿಂದ ತಿರುಗಿ ಸ್ಮೃತಿಪಥಕ್ಕೆ ತರುತ್ತಾರೆ) ಶ್ರೀ ವಿಷ್ಣುವು ಜಗತ್ತನ್ನು ಸೃಷ್ಟಿಸುವುದರಿಂದ ಸವಿತಾ ಎನಿಸುತ್ತಾನೆ. ಆ ಶ್ರೀ ಹರಿಯು ತನ್ನ ಸ್ವರೂಪವನ್ನು ಇತರರ ಸ್ವರೂಪವನ್ನೂ ತಿಳಿಯುತ್ತಾನೆ. ಆ ಶ್ರೀಹರಿಯೇ ಮುಖ್ಯ ದೇವನು. (ಇತರರು ದೇವತಾಭಾಸರು.) ಅಥವಾ ಆ ಶ್ರೀಹರಿಯೇ ದೇವಸ್ಯ ಭಾವಃ= ದೇವತಾ, ದೇವಶಬ್ದ ಪ್ರವೃತ್ತಿ ನಿಮಿತ್ತವು, ಕ್ರೀಡಾದಿ ಗುಣಗಳ ಸಮುದಾಯವು. (ಹಾಗಾದರೆ ದೇವತಾ ಎಂದು ವ್ಯಪದೇಶವು ಹೇಗೆಂದರೆ) (**ಉಭಯವ್ಯಪದೇಶಾತ್ತ್ವಹಿ ಕುಂಡಲವತ್** (೩-೨-೨೮) ಇತ್ಯಾದಿಗಳಲ್ಲಿ ಗುಣ ಗುಣಿಗಳಿಗೆ ಅಬೇಧವು ಸಿದ್ಧವಾದ ಪ್ರಯುಕ್ತ) ಆ ಶ್ರೀಹರಿಗೂ ಆತನ ಕ್ರೀಡಾದಿ ಗುಣಗಳಿಗೂ ಐಕ್ಯವಿರುವ ಕಾರಣ ದೇವತಾ=ದೇವತ್ವವು ಕ್ರೀಡಾದಿ ಗುಣಗಳ ಸಮುದಾಯವು ಆ ಶ್ರೀ ಹರಿಯೇ. (ಶ್ರೀ ಹರಿಯಿಂದ ಅಭಿನ್ನವೇ.) ॥ ೫ ॥ ೪ ॥

ಋ ॥ (೨೧೪) ಅಪಾಂ ನಪಾತಮವಸೇ ಸವಿತಾರಮುಪಸ್ತುಹಿ ।

ತಸ್ಯ ವ್ರತಾನ್ಯುಶ್ಮಸಿ ॥ ೬ ॥

ಅ ॥ (ಎಲೋ ಹೋತನೇ) ಅಪಾಂ ನಪಾತಂ= **ಅದ್ಭ್ಯಃ ಪೃಥಿವೀ** ಎಂಬ ಶ್ರುತಿಯಿಂದ ಪೃಥಿವಿಯು ಜಲಗಳ ಪುತ್ರಿಯು. ಪೃಥಿವ್ಯಾತ್ಮಕವಾದುದರಿಂದ ದೇಹವೂ ಕೂಡ ಜಲಗಳ ಪುತ್ರವು. ಅಂತಹ ಪಾರ್ಥಿವ

ದೇಹದಲ್ಲಿ ಶ್ರೀಹರಿಯು ವ್ಯಕ್ತನಾಗುವುದರಿಂದ ಪೃಥಿವೀ ಪುತ್ರನೆನಿಸುತ್ತಾನೆ. ಈ ರೀತಿಯಾಗಿ) ಜಲಗಳಿಂದ ಹುಟ್ಟಿದ ಪೃಥಿವ್ಯಾತ್ಮಕ ದೇಹದಲ್ಲಿ ಶ್ರೀ ಹರಿಯು ವ್ಯಕ್ತನಾಗುವುದರಿಂದ ಜಲಗಳಪೌತ್ರನಾದುದರಿಂದ ಅಪಾಂನ ಪಾತ್ ಎನಿಸಿಕೊಂಡು ಸವಿತಾರಂ=ಜಗತ್ಸರ್ಜಕನಾದ ಶ್ರೀಹರಿಯನ್ನು, ಹಾಗೆಯೇ ಜಲಗಳ ಕಾರ್ಯವಾದ ಬ್ರಹ್ಮಾಂಡದಲ್ಲಿ ಸೂರ್ಯನು ಹುಟ್ಟಿರುವುದರಿಂದ ಜಲಗಳಿಗೆ ಪೌತ್ರನಾದುದರಿಂದ ಅಪಾಂನಪಾತ್ ಎನಿಸಿಕೊಂಡ ಅಥವಾ ಶ್ರೀವಿಷ್ಣುವಿನ ರೇತಸ್ಸಿನಿಂದ ಹುಟ್ಟಿರುವುದರಿಂದ ಅಪಾಂನಪಾತ್ ಎನಿಸಿಕೊಂಡ ಬ್ರಹ್ಮಾಂಡವು ಅಪ್ ತತ್ವಗಳ ಕಾರ್ಯವಾಗಿರುವುದರಿಂದಜಲರೂಪ ಸೂರ್ಯನನ್ನು,ಅವಸೇ=ರಕ್ಷಣೆಗೋಸ್ಕರ, ಉಪಸ್ತು ಹಿ=ಸ್ತೋತ್ರ ಮಾಡು.(ಏಕೆಂದರೆ) ತಸ್ಯ=ಸವಿತೃ ಎನಿಸಿಕೊಂಡ ಶ್ರೀಹರಿಯ ಮತ್ತು ಸೂರ್ಯನ, ವ್ರತಾನಿ=ಜಗತ್ಸರ್ಜನಾದಿ ಕರ್ಮಗಳನ್ನು, ಉಶ್ಮಸಿ=ವಶಕಾಂತೌ) ನಾವೆಲ್ಲರೂ ಇಚ್ಛಿಸುತ್ತೇವೆ. ॥ ೬ ॥

ಭಾ ॥ ವ್ಯಕ್ತತ್ವಾತ್ಪಾರ್ಥಿವೇ ದೇಹೇ ಸೋಽಪಾಂ ನಪ್ತಾ ಜನಾರ್ದನಃ ॥ ೬ ॥

ಅ॥ (ಮಗನ, ಮತ್ತು ಮಗಳ ಮಗನು ನಪ್ತಾ ಎನಿಸುತ್ತಾನೆ. ನ ಪಾತಯತಿ ಸ್ವಕುಲಂ, ಕಿಂತು ಉದ್ಧರತಿ, ತಮ್ಮ ಕುಲವನ್ನು ಅಧೋ ಲೋಕಕ್ಕೆ ಬೀಳಿಸುವುದಿಲ್ಲ, ಮತ್ತೆ ಉದ್ಧರಿಸುತ್ತಾನೆ. ಎಂಬ ವ್ಯುತ್ಪತ್ತಿಯಿಂದ ನಪಾತ್=ಪೌತ್ರನು.) ಹೀಗೆ ಜಲಗಳಿಂದ ಹುಟ್ಟಿದ ಪಾರ್ಥಿವ ದೇಹದಲ್ಲಿ ಶ್ರೀ ಹರಿಯು ವ್ಯಕ್ತನಾಗುವುದರಿಂದ ಜಲಗಳ ಪೌತ್ರನು. (ದೇಹದಲ್ಲಿ ಉತ್ಪನ್ನತ್ವಾತ್ ಎಂದು ಹೇಳಬೇಕಿತ್ತು. ವ್ಯಕ್ತತ್ವಾತ್=ಎಂದದ್ದು ಹೇಗೆ ಎಂದರೆ(ಸಃ=ಆಶ್ರೀ ಹರಿಯು ಅಜಃ ಉತ್ಪತ್ತಿಯಿಲ್ಲದ ವನೆಂದೇ ಪ್ರಸಿದ್ಧನು. ಆದುದುರಿಂದಲೇ ಜನಾರ್ದನನು. ಜನಂ=ಜನನವನ್ನು ಅರ್ದಯತಿ, ತನಗೆ ಉತ್ಪತ್ತ್ಯ ಭಾವವನ್ನು ಮಾಡುತ್ತಾನೆ, ಆದಕಾರಣ ಜನಾರ್ದನಃ=ಎನಿಸುತ್ತಾನೆ. ॥ ೬ ॥

ಋ ॥ (೨೧೫) ವಿಭಕ್ತಾರಂ ಹವಾಮಹೇ ವಸೋಶ್ಚಿತ್ರಸ್ಯ ರಾಧಸಃ ।
ಸವಿತಾರಂ ನೃಚಕ್ಷಸಂ ॥ ೭ ॥

ಅ॥ (ನಾವು) ಚಿತ್ರಸ್ಯ ರಾಧಸಃ=ಉತ್ತನು ಸಿದ್ಧಿ ರೂಪವಾದ, ವಸೋಃ=ಜ್ಞಾನ ಧನವನ್ನೂ ಪ್ರಸಿದ್ಧ ಧನವನ್ನು, ವಿಭಕ್ತಾರಂ=ಸದಾ ವಿಭಾಗಿಸಿ ಕೊಡತಕ್ಕ, (ಅಂದರೆ ಯಾರಿಗೆ ಎಷ್ಟು ಯೋಗ್ಯವೋ ಅವರಿಗೆ ಅಷ್ಟು ಕೊಡತಕ್ಕ) ನೃ ಚಕ್ಷಸಂ=ಜೀವರನ್ನು ಚೆನ್ನಾಗಿ ನೋಡತಕ್ಕ (ಅಂದರೆ ಸಮಸ್ತ ಪುಣ್ಯ ಪಾಪಾದಿ ರೂಪ ವಿಶೇಷ ಧರ್ಮಗಳಿಂದೊಡಗೂಡಿ ಜೀವ ಚೈತನ್ಯಕ್ಕೆ ಸಾಕ್ಷಿಯಾದ, ಸವಿತಾರಂ=ಶ್ರೀ ಹರಿಯನ್ನು ಸೂರ್ಯನನ್ನು, ಹವಾಮಹೇ=ಕರೆಯುತ್ತೇವೆ. ॥ ೭ ॥

ಭಾ ॥ ಸದಾ ವಿಭಜ್ಯ ದಾತಾರಂ ವಸೋರುತ್ತಮರಾಧಸಃ । ಅಶೇಷ ಪುಣ್ಯ ಪಾಪಾದಿ
ವಿಶೇಷೈಶ್ಚಿತಿ ದರ್ಶಕಂ। ಆಹ್ವಯಾಮಃ ॥ ೭ ॥

ಅ ॥ ನಾವು ಉತ್ತಮ ಸಿದ್ಧಿ ರೂಪವಾದ, ಜ್ಞಾನ ಧನ ಪ್ರಸಿದ್ಧ ಧನಗಳನ್ನು ಸದಾ ಯಾರಿಗೆ ಎಷ್ಟು ಯೋಗ್ಯವೋ ಅವರಿಗೆ ಅಷ್ಟನ್ನು ವಿಭಾಗಿಸಿ ಕೊಡತಕ್ಕ, ಸಮಸ್ತ ಪುಣ್ಯ ಪಾಪಾದಿ ವಿಶೇಷ ಧರ್ಮಗಳಿಂದೊಡಗೂಡಿ ಜೀವ ಚೈತನ್ಯಕ್ಕೆ ಸಾಕ್ಷಿಯಾದ, ಸವಿತೃ ಎನಿಸಿದ ಶ್ರೀಹರಿಯನ್ನು ಸೂರ್ಯನನ್ನು ಕರೆಯುತ್ತೇವೆ ॥ ೭ ॥

ಋ ॥ (೨೧೬) ಸಖಾಯ ಆ ನಿಷೀದತ ಸವಿತಾ ಸ್ತೋಮ್ಯೋನು ನಃ ।
ದಾತಾ ರಾಧಾಂಸಿ ಶುಂಭತಿ ॥ ೮ ॥

ಅ ॥ ಹೇ ಸಖಾಯಃ=ಎಲೋ ಋತ್ವಿಜರೇ, ಆ=ನಮ್ಮ ಸಮೀಪಕ್ಕೆ ಬಂದು, ನಿಷೀದತ=ಕೂತು ಕೊಳ್ಳಿರಿ. (ಏಕೆಂದರೆ) ಯಃ ಸವಿತಾ=ಯಾವ ಶ್ರೀ ಹರಿಯು, ರಾಧಾಂಸಿ=ಸಿದ್ಧಿಗಳನ್ನು ಶುಂಭತಿ=(ಶುಭ ಶುಂಭ ಶೋಭಾರ್ಥೇ) ಭಗವನ್ಮಾಹಾತ್ಮ್ಯೆಯನ್ನು ವಿಶೇಷತಃ ಪ್ರತಿಪಾದಿಸುವುದಕ್ಕಾಗಿ ಚೆನ್ನಾಗಿ ಶೋಭೆ ಬರುವಂತೆ ಮಾಡುತ್ತಾನೋ, (ಆದಕಾರಣ) ನು=ಈಗ, ನಃ=ನಮಗೆ, (ಸಃ=ಅಂತಹ) ದಾತಾ=ಅಭೀಷ್ಟವನ್ನು ಕೊಡುವ, ಸವಿತಾ=ಶ್ರೀ ಹರಿಯು ಸೂರ್ಯನು, ಸ್ತೋತ್ವ್ಯಃ=ಸ್ತುತಿಸಿ ಕೊಳ್ಳಲಿಕ್ಕೆ ಅರ್ಹನು. ॥ ೮ ॥

ಭಾ ॥ ಸ ರಾಧಾಂಸಿ ಶೋಭಯಾತ್ಮಂಜಸಾ ಹರಿಃ ॥ ೮ ॥

ಅ ॥ (ರಾಧಾಂಸಿ ಶುಂಭತಿ ಎಂಬುವುದನ್ನು ವ್ಯಾಖ್ಯಾನ ಮಾಡುತ್ತಾರೆ.) ಆ ಶ್ರೀ ಹರಿಯು (ಶುಭ ಶುಂಭ ಶೋಭಾರ್ಥೇ (ಎಂಬ ಧಾತುವ್ಯಾಖ್ಯಾನದಿಂದ) ಸಿದ್ಧಿಗಳನ್ನು ಚೆನ್ನಾಗಿ ಶೋಭೆ ಬರುವಂತೆ ಮಾಡು ತ್ತಾನೆ. ಅಥವಾ ಸ್ವರಾಧಾಂಸಿ ಎಂಬ ಪಾಠದಲ್ಲಿ ತನ್ನಿಂದ ಕೊಡಲ್ಪಟ್ಟ ಸಿದ್ಧಿಗಳನ್ನು ಎಂದರ್ಥವು. (ಹರಿಗೆ ಸಿದ್ಧಿ ಶೋಭಕತ್ವವು ಹೇಗೆಂದರೆ–ಅಧಿಪತಿಗಳಿಲ್ಲದಿರುವ ಸಿದ್ಧಿಗಳಿಗೆ ಉಪಯೋಗವಿಲ್ಲದಿರುವುದರಿಂದ ಶೋಭೆಯು ಬರುವುದಿಲ್ಲ. ತಥಾಚ ಯಾವಕಾರಣದಿಂದ ಶ್ರೀ ಹರಿಯು ಸಿದ್ಧಿಗಳಿಗೆ ಶೋಭೆಯನ್ನುಂಟು ಮಾಡುತ್ತಾನೋ, ಅಂದರೆ—ಭಕ್ತರಿಗೆ ಅಭಿಲಷಿತ ವಸ್ತುವನ್ನು ಕೊಡುವವನೆಂದು ಮಾಡಿಕೊಂಡು ಸ್ತುತಿಸಿಕೊಳ್ಳಲಿಕ್ಕೆ ಅರ್ಹನೋ, ಆದಕಾರಣ ಆ ಶ್ರೀ ಹರಿಯನ್ನು ಸ್ತುತಿಸುವುದಕ್ಕಾಗಿ ಋತ್ವಿಜರೇ ಯಜಮಾನನ ಸಮೀಪಕ್ಕೆ ಬಂದು ಕೂತು ಕೊಳ್ಳಿರಿ ಎಂದು ಋಕ್ಕಿನ ಅಭಿಪ್ರಾಯವು. ॥ ೮ ॥

ಋ ॥ (೨೧೭) ಅಗ್ನೇ ಪತ್ನೀರಿಹಾವಹ ದೇವಾನಾಮುಶತೀರುಪ ।
ತ್ವಷ್ಟಾರಂ ಸೋಮಪೀತಯೇ ॥ ೯ ॥

ಅ ॥ ಅಗ್ನೇ=ಎಲೋ ಶ್ರೀ ಹರಿಯೇ, ಎಲೋ ಅಗ್ನಿಯೇ ಉಶತೀಃ=(ವಶಕಾಂತೌ) ಯಜ್ಞಕ್ಕೆ ಬರ ಬೇಕೆಂದಿಚ್ಛಿಸುವ, ದೇವಾನಾಂ ಪತ್ನೀಃ=ದೇವತೆಗಳನ್ನು ರಕ್ಷಿಸುವುದರಿಂದ ಪತ್ನೀ ಎಂದು ಹೇಳಲ್ಪಟ್ಟ ಶ್ರೀ ಹರಿಯ ಸ್ತ್ರೀರೂಪಗಳನ್ನು, ಮತ್ತು ದೇವತೆಗಳ ಹೆಂಡಂದಿಯರನ್ನು, ತ್ವಷ್ಟಾರಂ=ತ್ವಷ್ಟೃ ಎನಿಸಿಕೊಂಡ ಶ್ರೀ ಹರಿಯನ್ನು, ಪ್ರಸಿದ್ಧ ತ್ವಷ್ಟೃ ದೇವತೆಯನ್ನೂ, ಸೋಮಪೀತಯೇ=ಸೋಮಪಾನ ಮಾಡುವುದಕ್ಕಾಗಿ, ಇಹ=ಈ ಯಜ್ಞದಲ್ಲಿ, ಉಪ ಆವಹ=ಸನ್ನಿಹಿತರನ್ನಾಗಿ ಮಾಡು.

ವಿ ॥ ಇಲ್ಲಿ ಅನುಕ್ರಮಣಿಕೆಯಲ್ಲಿ ಹೇಳಿದ್ದ ಅಗ್ನಿ ಎಂಬ ದೇವತೆಯು ಅನುಪಪನ್ನವು. ಏಕೆಂದರೆ ಅಗ್ನಿಯು ಪ್ರೈಷ (ಕಾರ್ಯ ವಿಶೇಷವನ್ನು ಮಾಡುವುದಕ್ಕಾಗಿ ಪ್ರೇರೇಪಿಸುವಿಕೆ) ಗೋಚರ ವಾಗಿದೆ. **ಸಖಾಯ ಆನಿಷೀದತ** ಎಂಬಲ್ಲಿ ಋತ್ವಿಜರಿಗೆ ಪ್ರೈಷವಿಷಯತ್ವವಿದ್ದರೂ ದೇವತಾತ್ವವಿಲ್ಲ. ಆದಕಾರಣ ಪ್ರೈಷವಿಷಯಕವಾದದ್ದು ಲಿಂಗವಾಗುವುದಿಲ್ಲ. ಮತ್ತೆ ಇಲ್ಲಿ ಅಗ್ನಿಗೂ, ದೇವಪತ್ನಿಯರಿಗೂ ತ್ವಷ್ಟೃವಿಗೂ ದೇವತಾತ್ವವಿದೆ ಎಂದು ಪ್ರತೀತ್ಯನುಸಾರವಾಗಿಯೇ ದೇವತೆಗಳನ್ನು ತಿಳಿದುಕೊಳ್ಳಬೇಕು.) ॥ ೯ ॥

ಋ ॥ (೨೧೮) ಆಗ್ನಾ ಅಗ್ನ ಇಹಾವಸೇ ಹೋತ್ರಾಂ ಯವಿಷ್ಠ ಭಾರತೀಂ ।
ವರೂತ್ರೀಂ ಧಿಷಣಾಂ ವಹ ॥ ೧೦ ॥ ೫ ॥

(ಇಲ್ಲಿ ನದಿಗಳು, ಅಗ್ನಿ ಭಾರತೀ, ಶ್ರೀ ದೇವಿ, ಇವರು ದೇವತೆಗಳು.)

ಅ ॥ ಯವಿಷ್ಠ=ಅತಿಶಯವಾಗಿ ತರುಣನಾದ ಅಗ್ನೇ=ಎಲೋ ಅಗ್ನಿಯೇ, ಗ್ನಾಃ= (ಅಭಿಯಜ್ಞಂಗೃಣೇಹಿ ಎಂಬಲ್ಲಿ ಹೇಳಿದ ಪ್ರಕಾರ) ನಿನ್ನದ್ದಾದ ಸ್ತ್ರೀರೂಪಗಳನ್ನೂ ನದಿಗಳನ್ನೂ; ಹೋತ್ರಾಂ=(ಹ್ವೇಞಶಬ್ದೇ) ಕರೆಯಲ್ಪಡುವುದರಿಂದಲೂ ಆಹ್ವಾನ ಮಂತ್ರಗಳಿಗೆ ಅಭಿಮಾನಿನಿಯಾದುದರಿಂದಲೂ. ಹೋತ್ರಾ ಎನಿಸಿಕೊಂಡ, ವರೂತ್ರೀಂ= ವೃಞ ವರಣೇ) (ತ್ರೈಜಪಾಲನೇ) ಸರ್ವರಿಗೂ ಅಂಗೀಕಾರಾರ್ಹಳಾದುದರಿಂದಲೂ ಜಗತ್ತನ್ನು ರಕ್ಷಿಸುವುದರಿಂದಲೂ ವರೂಶ್ಚಾಸೌ ತ್ರೀಚ ಎಂಬ ವ್ಯುತ್ಪತ್ತಿಯಿಂದ ವರೂತ್ರೀ ಎನಿಸಿಕೊಂಡ, ಧಿಷಣಾಂ-ಬುದ್ಧಿ ಸ್ವರೂಪಿಣಿಯೂ, ಸರ್ವರ ಬುದ್ಧಿಗೆ ಪ್ರೇರಕಳೂ ಸರ್ವರ ಬುದ್ಧಿಗೆ ಅಭಿಮಾನಿನಿಯೂ ಆದ, ಭಾರತೀಂ=ಭರತನೆನಿಸಿದ ವಾಯುವಿಗೆ ಸ್ವಾಮಿಯಾದುದರಿಂದ ಭಾರತೀ ಎನಿಸಿದ ಶ್ರೀ ಹರಿಯ ಸ್ತ್ರೀರೂಪವನ್ನೂ, ಅಥವಾ ವಾಯುವಿನ ಪತ್ನಿಯಾದ ಭಾರತೀ ದೇವಿಯನ್ನೂ; ಅಥವಾ ಶ್ರೀ ದೇವಿಯನ್ನು ಅವಸೇ=ನಮ್ಮ ರಕ್ಷಣೆಗಾಗಿ, ಇಹ = ಯಜ್ಞದಲ್ಲಿ ಆವಹ=ಸನ್ನಿಹಿತರನ್ನಾಗಿಮಾಡು. ॥ ೧೦ ॥ ೫ ॥

ಭಾ ॥ (೧) ನದೀಶ್ಚ ಭಾರತೀಂ ಚೈವ ಹೋತ್ರಾಮಾಹುತಿರೂಪತಃ। ವರೂತ್ರೀಂ ವರಣೀಯತ್ವಾತ್ತ್ರಾಣಾದ್ಬುದ್ಧಿಸ್ವರೂಪಿಣೀಂ ॥ (೨) ವಿಷ್ಣುಶ್ಚ ಪ್ರಾಣಸಂಬಂಧಾದ್ಭಾರತೀತ್ಯೇವ ಚೋದಿತಃ। (೩) ಪ್ರಾಣಸ್ತು ಭರತೋ ಭಾರತತತ್ವಾದ್ಭರ್ತೃರೂಪತಃ॥ (೪) ಹೋತ್ರಾ ಹುತತ್ವತೋ ವಿಷ್ಣುಃ ಶ್ರೀರ್ವಾಪಿ ಧಿಷಣಾ ಮತಾ ॥ ೧೦ ॥ ೫ ॥

ಅ ॥ (೧ ನದಿಗಳನ್ನು ಚ=ನಿನ್ನ ಸ್ತ್ರೀ ರೂಪಗಳನ್ನೂ, (ಆಹೂಯಂತೇಯೈಸ್ತೇ ಹೋತ್ರಾಃ ಮಂತ್ರಾಃ ಎಂಬ ವ್ಯುತ್ಪತ್ತಿಯಿಂದ) ಆಹ್ವಾನ ಮಂತ್ರಗಳಿಗೆ ಅಭಿಮಾನಿನಿಯಾದುದರಿಂದ ಹೋತ್ರಾ ಎನಿಸಿಕೊಂಡ, ಸರ್ವರಿಗೂ ಅಂಗೀಕಾರಾರ್ಹಳಾದುದರಿಂದಲೂ ಸರ್ವ ಜಗತ್ತನ್ನು ರಕ್ಷಿಸುವುದರಿಂದಲೂ ವರೂತ್ರೀ ಎನಿಸಿಕೊಂಡ, ಬುದ್ಧಿ ಸ್ವರೂಪಿಣಿಯೂ, ಸರ್ವರ ಬುದ್ಧಿಗೆ ಅಭಿಮಾನಿನಿಯೂ, ಆದ, ವಿಷ್ಣುವಿನ ಸ್ತ್ರೀರೂಪವನ್ನೂ ಭಾರತೀ ದೇವಿಯನ್ನೂ ಕೂಡ (ನಮ್ಮ ರಕ್ಷಣೆಗಾಗಿ ಈ ಯಜ್ಞದಲ್ಲಿ ಸನ್ನಿಹಿತರನ್ನಾಗಿ ಮಾಡು.) (೨) (ಭಾರತೀ ಶಬ್ದವನ್ನು ಶ್ರೀ ವಿಷ್ಣುವಿನಲ್ಲಿ ನಿರ್ವಚನ ಮಾಡುತ್ತಾರೆ.) ಶ್ರೀ ವಿಷ್ಣುವು ಮುಖ್ಯಪ್ರಾಣನಿಗೆ ಸ್ವಾಮಿತ್ವರೂಪ ಸಂಬಂಧದಿಂದ (ಸ್ವಾಮಿಯಾದುದರಿಂದ) ಭಾರತೀ ಎಂದೇ ಹೇಳಿಸಿಕೊಳ್ಳಲ್ಪಡುತ್ತಾನೆ. ಅಥವಾ ಶ್ರೀಹರಿಯ ಸ್ತ್ರೀರೂಪವು ಭಾರತೀ ಎನಿಸಿಕೊಳ್ಳುತ್ತದೆ. ಚ =ಮುಖ್ಯಪ್ರಾಣನ ಪತ್ನಿಯಾದುದರಿಂದ ವಾಯುಪತ್ನಿಯು ಭಾರತೀ ಎಂದು ಹೇಳಿಸಿಕೊಳ್ಳಲ್ಪಡುತ್ತಾಳೆ. ೨ನೇ ಚ ಶಬ್ದದಿಂದ ಶ್ರೀವಿಷ್ಣುವು ದೇವತೆಗಳನ್ನು ರಕ್ಷಿಸುವುದರಿಂದ ದೇವಾನಾಂ ಪತ್ನೀ ಎಂದೂ ಹೇಳಲ್ಪಡುತ್ತಾನೆ. (೩) (ಪ್ರಾಣಸಂಬಂಧದಿಂದ ಭಾರತೀ ಎಂದು ಹೇಗೆ ಸಿಗುತ್ತದೆಂದರೆ) (ಸಮಸ್ತ ಗುಣಗಳ, ಭಾರ (ಧರಿಸುವಿಕೆ) ದಿಂದ ವ್ಯಾಪ್ತನಾದುದರಿಂದಲೂ (ನಿರವಧಿಕ ಗೌರವದಿಂದಲೂ, (ಅಂದರೆ ಅತಿ ಶ್ರೇಷ್ಠನಾಗಿರುವುದರಿಂದಲೂ) (ಸಮಸ್ತ ಜಗತ್ತಿಗೆ) ಪೋಷಕನಾಗಿರುವುದರಿಂದಲೂ ಮುಖ್ಯಪ್ರಾಣನಾದರೂ ಭರತನೆನಿಸುತ್ತಾನೆ. (ಭರತಸ್ಯ ಇಯಂ ಭಾರತೀ. ಮುಖ್ಯಪ್ರಾಣನಿಗೆ ಸ್ವಾಮಿಯಾದವನು ಶ್ರೀಹರಿಯು. (೪) (ಶ್ರೀ ವಿಷ್ಣುವಿಗೆ ಮಂತ್ರಾದಿಗಳ ಅಭಿಮಾನಿತ್ವವಿಲ್ಲದಿರುವುದರಿಂದ ಶ್ರೀ ವಿಷ್ಣುವಿನಲ್ಲಿ ಹೋತ್ರಾ ಎಂಬ ಶಬ್ದವು ಹೇಗೆ ಕೂಡುತ್ತದೆ ಎಂದರೆ ಶ್ರೀ ವಿಷ್ಣುವು ಹೋಮಿಸಲ್ಪಡುವುದರಿಂದ (ಅಂದರೆ ಶ್ರೀ ವಿಷ್ಣುವನ್ನುದ್ದೇಶಿಸಿ ಋತ್ವಿಜರು ಹೋಮಾದಿಗಳನ್ನು ಮಾಡುವುದರಿಂದ) ಶ್ರೀ ವಿಷ್ಣುವು ಹೋತ್ರಾ ಎನಿಸುತ್ತಾನೆ. ಸರ್ವರ ಬುದ್ಧಿಗಳಿಗೆ ಪ್ರೇರಕಳಾದುದರಿಂದಲೂ ಸರ್ವರ ಬುದ್ಧಿಗಳಿಗೆ ಅಭಿಮಾನಿನಿಯಾದುದರಿಂದಲೂ ಲಕ್ಷ್ಮೀದೇವಿಯು ಧಿಷಣಾ ಎನಿಸುತ್ತಾಳೆ. ॥ ೧೦ ॥ ೫ ॥

ಋ ॥ (೨೧೯) ಅಭಿನೋ ದೇವೀರವಸಾ ಮಹಃ ಶರ್ಮಣಾ ನೃಪತ್ನೀಃ ।
ಅಚ್ಛಿನ್ನಪತ್ರಾಃ ಸಚಂತಾಂ ॥ ೧೧ ॥

ಅ || ಅಚ್ಛಿನ್ನ ಪತ್ರಾಃ=ನಿರಂತರದಲ್ಲಿಯೂ ಇರುವ ತಾಟಂಕವೆಂಬ ಕರ್ಣಾಭರಣಗಳುಳ್ಳ, (ಸರ್ವದಾ ಅವೈಧವ್ಯಕ್ಕೆ ಕಾರಣವಾದ ಸೌಮಂಗಲ್ಯದಿಂದ ಕೂಡಿರುವ) ನೃಪತ್ನೀಃ=ಪ್ರಧಾನ ಪುರುಷರಾದ ದೇವತೆಗಳ ಪತ್ನಿಯರು, ಅಥವಾ ಮನುಷ್ಯಾದಿಗಳನ್ನು ರಕ್ಷಿಸತಕ್ಕ ಶ್ರೀಹರಿಯ ಸ್ತ್ರೀರೂಪಗಳಾದ ದೇವೀಃ=ದೇವಿಯರು, ಅವಸಾ=ಜಗದ್ರಕ್ಷಣ ಮಾಡತಕ್ಕ ಮುಖ್ಯಪ್ರಾಣನಿಂದ ಕೂಡಿಕೊಂಡು, ಮಹಃ=ಸರ್ವೋತ್ತಮನಾದ ಶ್ರೀಹರಿಯ, ಶರ್ಮಣಾ=ಸಂಬಂಧಿಯಾದ ಮೋಕ್ಷಾದಿ ಸುಖವನ್ನು ಕೊಟ್ಟು, ನಃ=ನಮ್ಮನ್ನು, ಅಭಿ=ಸುತ್ತಲೂ, ಸಚಂತಾಂ=(ಷಚರಕ್ಷಣೇ) ರಕ್ಷಿಸಲಿ. ||೧೧||

ಭಾ || (೧) ಶರ್ಮ ದತ್ತ್ವೈವ ಮಹತೋ ವಿಷ್ಣೋ ರಕ್ಷಂತು ನೋಽಭಿತಃ । ಪ್ರಾಣೇನೈವಾವಸಾ ಸಾಕಂ (೨) ಯಸ್ಮಾದವಿಧವಾಸ್ಸದಾ । ಅತೋ ಹ್ಯಚ್ಛಿನ್ನಪತ್ರಾಸ್ತಾಃ ಸದಾ ಯುಕ್ತಕರ್ಣಭೂಷಣಾಃ || ೧೧ ||

ಅ || (೧) ರಕ್ಷಣೆ ಮಾಡತಕ್ಕ ಮುಖ್ಯಪ್ರಾಣನಿಂದ ಕೂಡಿಕೊಂಡೇ ಸರ್ವೋತ್ತಮನಾದ ಶ್ರೀ ವಿಷ್ಣುವಿನ ಸಂಬಂಧಿಯಾದ ಮೋಕ್ಷಾದಿರೂಪವಾದ ಸುಖವನ್ನು ಕೊಟ್ಟೇ (ದೇವಿಯರು ನಮ್ಮನ್ನು ರಕ್ಷಿಸಲಿ) (೨) (ಅಚ್ಛಿನ ಪತ್ರಾಃ ಎಂಬುವುದನ್ನು ವ್ಯಾಖ್ಯಾನ ಮಾಡುತ್ತಾರೆ) ಯಾವ ಕಾರಣದಿಂದ ಸರ್ವದಾ ಆ ದೇವಿಯರು ಅವಿಧವೆಯರೋ, ಆದಕಾರಣ ಅವರು ಅಚ್ಛಿನ್ನಪತ್ರರೆನಿಸುತ್ತಾರೆ. ಸರ್ವದಾ ತಾಟಂಕವೆಂಬ ಕರ್ಣಾಭರಣದ ಸಂಬಂಧವುಳ್ಳವರು. (ಆ ಸಂಬಂಧವು ಅವಿಧವೆಯರಿಗೇನೀ ಕೂಡುತ್ತದೆ.) || ೧೧ ||

ಋ || (೨೨೦) ಇಹೇಂದ್ರಾಣೀ ಮುಪಹ್ವಯೇ ವರುಣಾನೀಂ ಸ್ವಸ್ತಯೇ ।
ಅಗ್ನಾಯೀಂ ಸೋಮಪೀತಯೇ || ೧೨ ||

ಅ || (ನಾನು) ಇಂದ್ರಾಣೀಂ=ಇಂದ್ರನ ಪತ್ನಿಯಾದ ಶಚೀದೇವಿಯನ್ನೂ ವರುಣಾನೀಂ=ವರುಣನ ಪತ್ನಿಯನ್ನು, ಅಗ್ನಾಯೀಂ=ಅಗ್ನಿಯ ಪತ್ನಿಯನ್ನು ಕೂಡ, ಸೋಮಪೀತಯೇ=ಸೋಮಪಾನಕ್ಕಾಗಿ, ಸ್ವಸ್ತಯೇ=ಸೋಮಪಾನ ಮಾಡಿ ನಮಗೆ ನಿರಂತರದಲ್ಲಿಯೂ ಸೌಖ್ಯವನ್ನು ಕೊಡುವುದಕ್ಕಾಗಿ, ಇಹ=ಈ ಯಜ್ಞದಲ್ಲಿ, ಉಪಹ್ವಯೇ= ಕರೆಯುತ್ತೇನೆ. (ವಿಷ್ಣು ಪಕ್ಷದಲ್ಲಿ ಆದರೂ) ಇಂದ್ರಾದಿಗಳಿಗೆ ಸ್ವಾಮಿಯಾದುದರಿಂದ ಇಂದ್ರನೆನಿಸಿದ ಶ್ರೀಹರಿಯ ಸಂಬಂಧಿಯಾದ ಸ್ತ್ರೀ ರೂಪವು. ಇಂದ್ರಾಣಿಯು. ಇಂದ್ರಾದಿಗಳನ್ನು (ರಕ್ಷಿಸು) ವುವರಿಂದ ಇಂದ್ರ ಪತ್ನೀ ಎನಿಸಿದ ಸ್ತ್ರೀ ರೂಪವು. ಹೀಗೆ ಇಂದ್ರಾಣ್ಯಾದಿ ಶಬ್ದಗಳಿಂದ ಶ್ರೀಹರಿಯ ಸ್ತ್ರೀರೂಪಗಳು ಹೇಳಲ್ಪಡುತ್ತವೆ. || ೧೨ ||

ಋ || (೨೨೧) ಮಹೀ ದ್ಯೌಃಪೃಥಿವೀ ಚ ನಃ ಇಮಂ ಯಜ್ಞಂ ಮಿಮಿಕ್ಷತಾಂ।
ಪಿಪೃತಾಂ ನೋ ಭರೀಮಭಿಃ || ೧೩ ||

ಅ || ಮಹೀ=ಶ್ರೇಷ್ಠಳಾದ, ದ್ಯೌಃ ಪೃಥಿವೀಚ=ವಿಷ್ಣುವಿನ ಸ್ತ್ರೀರೂಪಗಳು, ಶ್ರೀಭೂಮಿಗಳಾಗಲೀ, ಸ್ವರ್ಗ ಪೃಥಿವೀ ಲೋಕಗಳಿಗೆ ಅಭಿಮಾನಿನಿಯರಾಗಲೀ, ನಃ=ನಮ್ಮ, ಇಮಂ ಯಜ್ಞಂ=ಈ ಯಜ್ಞವನ್ನು ಮಿಮಿಕ್ಷತಾಂ= ಮುಟ್ಟಲಿ. (ಬರಲಿ) (ಬಂದು) ಭರೀಮಭಿಃ= (ಭೃಞಭರಣೇ) ಯಜ್ಞ ಸಾಧನ ಸಮೂಹಗಳಿಂದ ಅಥವಾ ಯಜ್ಞ ಸಮೂಹಗಳಿಂದ, ನಃ=ನಮ್ಮನ್ನು ಪಿಪೃತಾಂ=(ಪೃಪಾಲನ ಪೂರಣಯೋಃ) (ದುಃಖಗಳಿಂದ) ದಾಟಿಸಲಿ. || ೧೩ ||

ಭಾ ॥ ಭರಣೈರ್ನಃ ಪಾರಯೇತಾಂ ದುಃಖೇಭ್ಯಃ ಶ್ರೀಶ್ಚ ಭೂಶ್ಚ ತೇ । ಸ್ವಯಂ ವಾ ಭಗವಾನನ್ಯೇ ರೋದಸೀ ಲೋಕದೇವತೇ ॥ ೧೩ ॥

ಅ ॥ ಶ್ರೀಭೂಮಿಗಳು ದ್ಯಾವಾಪೃಥಿವೀ ಶಬ್ದ ವಾಚ್ಯಗಳು. ಮತ್ತು ಸಾಕ್ಷಾತ್ಪರಮಾತ್ಮನು ದ್ಯಾವಾ ಪೃಥಿವೀ ಶಬ್ದ ವಾಚ್ಯನು. (ಅಂದರೆ—ಶ್ರೀಪರಮಾತ್ಮನ ೨ ಸ್ತ್ರೀ ರೂಪಗಳು ದ್ಯಾವಾ ಪೃಥಿವಿಗಳೆನಿಸುತ್ತವೆ.) ಶ್ರೀಭೂಮಿಯರಿಂದ ಇತರರಾದ ಸ್ವರ್ಗಭೂಮಿಗಳಿಗೆ ಅಭಿಮಾನಿಗಳಾದ ದೇವತೆಗಳೂ ದ್ಯಾವಾ ಪೃಥಿವಿಗಳೆನಿಸುತ್ತಾರೆ. ಇವರೆಲ್ಲರೂ ಯಜ್ಞ ಸಾಧನ ಸಮೂಹಗಳಿಂದಲೂ, ಯಜ್ಞ ಸಮೂಹಗಳಿಂದಲಾಗಲೀ ನಮ್ಮನ್ನ ದುಃಖಗಳಿಂದ ಪಾರಮಾಡಲಿ. (ದುಃಖಗಳಿಂದ ವಿರಹಿತರನ್ನಾಗಿ ಮಾಡಲಿ.) ॥ ೩ ॥

ಋ ॥(೨೨೨) ತಯೋರಿದ್ಘೃತವತ್ಪಯೋ ವಿಪ್ರಾ ರಿಹಂತಿ ಧೀತಿಭಿಃ। ಗಂಧರ್ವಸ್ಯ ಧ್ರುವೇ ಪದೇ ॥ ೧೪ ॥

ತಯೋಃ=ದ್ಯಾವಾಪೃಥಿವಿಗಳ ಸಂಬಂಧಿಯಾದ, (ಯಾವ) ಪಯಃ=(ಪೀಯತೇ ಮುಮುಕ್ಷುಭಿಃ ಸೇವ್ಯತೇ ಎಂಬವ್ಯುತ್ಪತ್ತಿಯಿಂದ) ಜ್ಞಾನವು, ಗಂಧರ್ವಸ್ಯ= ಶ್ರೀವಿಷ್ಣುವಿನ, ಧ್ರುವೇಪದೇ=ನಿತ್ಯ ಸ್ವರೂಪ ವಿಷಯಕವಾದ ಘೃತವತ್ (ಘೃಕ್ಷರಣದೀಪ್ತ್ಯೋಃ)ಅಪರೋಕ್ಷ ಜ್ಞಾನದಿಂದ ಸಹಿತವಾಗಿದೆಯೋ.(ಅಂತಹ ಜ್ಞಾನವನ್ನ ವಿಪ್ರಾಃ= ಮೇಧಾವುಳ್ಳವರು, ಧೀತಿಭಿಃ=ಬುದ್ಧಿಗಳಿಂದ ತ್ರಯೋಃ– ಅವರ ಪ್ರಸಾದದಿಂದ, ರಿಹಂತಿ ಇತ್ = ನಿಶ್ಚಯವಾಗಿಯೂ ಸೇವಿಸುತ್ತಾರೆ. (ಲಿಹ ಆಸ್ವಾದನೇ ರಲಯೋರಭೇದಃ)(ದ್ಯಾವಾ ಪೃಥಿವಿಗಳಿಗೆ ಅಭಿಮಾನಿನಿಯಾದ ಭಾರತೀ ದೇವಿಯಿಂದ ಅಭಿಮನ್ಯಮಾನವಾದುದರಿಂದ ಜ್ಞಾನಕ್ಕೆ ದ್ಯಾವಾ ಭೂಮಿಗಳ ಸಂಬಂಧವು) ॥೧೪॥

ಭಾ ॥ (೧) ತಯೋಃ ಪಯಸ್ತು ವಿಜ್ಞಾನಂ ಘೃತವತ್ಸಪರೋಕ್ಷಕಂ। (೨) ಯಲ್ಲೋಕ ದೇವತ್ವಾಪಿ ಸ್ಯಾದ್ಭಾರತೀ ಜ್ಞಾನದೇವತಾ॥ (೩) ವಿಷ್ಣೋರ್ನಿತ್ಯಪದಸ್ಥಂ ಯಜ್ಜ್ಞಾನಂ ಯದ್ಘೃತವತ್ಪಯಃ । ಲಿಹಂತಿ ವಿಪ್ರಾಸ್ತಜ್ಜ್ಞಾನಂ ಬುದ್ಧಿಭಿಸ್ತತ್ಪ್ರಸಾದತಃ॥ (೪) ಗಾಂ ಧಾರಯನ್ ವರ್ತತೇ ಯದ್ಗಂಧರ್ವಸ್ತೇನ ಕೇಶವಃ ॥ ೧೪ ॥

ಅ ॥ (೧) ದ್ಯಾವಾಪೃಥಿವಿಗಳ ಸಂಬಂಧಿಯಾದುದು (ಪೀಯತೇ ಮುಮುಕ್ಷುಭಿಃ ಸೇವ್ಯತೇ ಎಂಬ ವ್ಯುತ್ಪತ್ತಿಯಿಂದ) ಪಯಃ ಎಂದರೆ ವಿಜ್ಞಾನವು. (ಪರೋಕ್ಷ ವಿಜ್ಞಾನವು.) (ಘೃ ಕ್ಷರಣದೀಪ್ತ್ಯೋಃ ಎಂಬ ಧಾತು ವ್ಯಾಖ್ಯಾನದಿಂದ) ಘೃತಂ=ದೀಪ್ತಿಯುಳ್ಳ ಅಪರೋಕ್ಷ ಜ್ಞಾನವು. ಘೃತವತ್ = ಅಪರೋಕ್ಷ ಜ್ಞಾನದಿಂದ ಸಹಿತವಾದುದು. (೨) (ಪರೋಕ್ಷ ಅಪರೋಕ್ಷ ಜ್ಞಾನಗಳಲ್ಲಿ ದ್ಯಾವಾಪೃಥಿವಿಗಳ ಸಂಬಂಧ ಹೇಗೆ? ಎಂದರೆ) ಯಾವ ಕಾರಣದಿಂದ ಭಾರತಿಯೂ ಕೂಡ ದ್ಯಾವಾ ಪೃಥಿವೀಲೋಕಗಳ ದೇವತೆಯಾಗುತ್ತಾಳೋ, ಅವಳೇ ಜ್ಞಾನಕ್ಕೂ ದೇವತೆಯೋ, (ಆದುದರಿಂದ ದ್ಯಾವಾ ಪೃಥಿವಿಗಳಿಗೆ ಸಂಬಂಧ ಪಟ್ಟದ್ದು) (೩) (ಈಗ ಋಕ್ಕನ್ನು ವ್ಯಾಖ್ಯಾನ ಮಾಡುತ್ತಾರೆ) ಯಾವ ಜ್ಞಾನವು ಶ್ರೀ ವಿಷ್ಣುವಿನ ನಿತ್ಯವಾದ ಸ್ವರೂಪವನ್ನು ವಿಷಯೀಕರಿಸತಕ್ಕುದೋ, ಯಾವ ಜ್ಞಾನವು ಹಿಂದೆ ಹೇಳಿದ ಪ್ರಕಾರ ಅಪರೋಕ್ಷ ಜ್ಞಾನದಿಂದ ಸಹಿತವಾದುದೋ, ಅಂತಹ ಜ್ಞಾನವನ್ನು ಜ್ಞಾನಿಗಳು ಬುದ್ಧಿಗಳಿಂದ (ಬುದ್ಧಿತ್ವರೂಪದಿಂದ ಬುದ್ಧಿಯು ಒಂದೆ ಯಾದಾಗ್ಯೂ ವೃತ್ತಿಜ್ಞಾನಗಳು ಹೆಚ್ಚು ಇದ್ದ ಪ್ರಯುಕ್ತ ಬುದ್ಧಿಭಿಃ ಎಂಬ ಬಹುವಚನವು.) ದ್ಯಾವಾ ಪೃಥಿವಿಗಳ ಪ್ರಸಾದದಿಂದ ಸೇವಿಸುತ್ತಾರೆ. (೪) (ಗಂಧರ್ವ ಶಬ್ದವನ್ನು ವಿಷ್ಣುವಿನಲ್ಲಿ ನಿರ್ವಚನ ಮಾಡುತ್ತಾರೆ) (ಗೋ ಶಬ್ದವು ಉಪಪದವಾಗಿಉಳ್ಳ ಧೃಜ ಅವಸ್ಥಾನೇ, ವೃತು ವರ್ತನೆ ಎಂಬ ಧಾತು ವ್ಯಾಖ್ಯಾನದಿಂದ (ಯಾವ ಕಾರಣದಿಂದ ಗಾಂ=ವೇದ ವಚನವನ್ನು

ಧಾರಯನ್=ಧರಿಸುತ್ತಾ ವರ್ತತೇ=ಇರುತ್ತಾನೋ ಎಂಬ ವ್ಯುತ್ಪತ್ತಿಯಿಂದ ಆಕಾರಣದಿಂದ ಶ್ರೀ ಹರಿಯು ಗಂಧರ್ವಃ ಎನಿಸುತ್ತಾನೆ. (ಪಸಿದ್ಧ ಗಂಧರ್ವರಲ್ಲಿಯೂ ಹೀಗೆಯೇ ವ್ಯುತ್ಪತ್ತಿಯನ್ನು ತಿಳಿಯ ಬೇಕು) ॥ ೧೪ ॥

ಋ ॥ (೨೨೩) ಸ್ಯೋನಾ ಪೃಥಿವಿ ಭವಾನೃಕ್ಷರಾ ನಿವೇಶನೀ।
ಯಚ್ಛಾ ನಃ ಶರ್ಮ ಸಪ್ರಥಃ। ॥ ೧೫ ॥ ೬ ॥

ಅ ॥ ಹೇ ಪೃಥಿವಿ=ಎಲೋ ಪೃಥಿವಿಯೇ, (ಯಾವ ನೀನು)ಅನೃಕ್ಷರಾ=(ನೃವತ್=ಮನುಷ್ಯವತ್ಕ್ಷರತಿ ನಶ್ಯತಿ ನೃಕ್ಷರಾ। ನ ನೃಕ್ಷರಾ ಅನೃಕ್ಷರಾ ಎಂಬ ವ್ಯುತ್ಪತ್ತಿಯಿಂದ) ಮನುಷ್ಯರಂತೆ ನಾಶವಿಲ್ಲದವಳೋ,ನಿವೇಶನೀ=(ನಿವಿಶಂತೇ ಅಸ್ಯಾಂಭೂತಾನಿ ಎಂಬ ವ್ಯುತ್ಪತ್ತಿಯಿಂದ) ಸರ್ವರಿಗೂ ಆಶ್ರಯಭೂತಳೂ ಆಗಿರುತ್ತಿಯೋ, (ಅಂತಹ ನೀನು)ನಃ=ನಮಗೆ,ಸ್ಯೋನಾ=ಸುಖವನ್ನುಂಟು ಮಾಡುವವಳು,ಭವ=ಆಗು. ನಃ=ನಮಗೆ, ಸಪ್ರಥಃ=ವಿಸ್ತಾರದಿಂದ ಕೂಡಿರುವ, ಶರ್ಮ=ಮಹತ್ತರವಾದಸುಖವನ್ನು ಅಥವಾ ಶ್ರೇಷ್ಠವಾದ ಮನೆಯನ್ನು ಯಚ್ಛ=ಕೊಡು. ॥೧೫॥೬॥

ಭಾ ॥ ಸ್ಯೋನಾ ಸುಖಕರೀ ಸ್ಯಾನ್ನೋ ಯತೋ ನಶ್ಯಸಿ ನೋ ನೃವತ್। ನಿವೇಶನೀ ಸಾಧಾ ರತ್ವಾಚ್ಛರ್ಮ ಯಚ್ಛ ಮಹತ್ತರಂ ॥ ೧೫ ॥ ೬ ॥

ಅ ॥ (ಸ್ಯೋನಾ ಶಬ್ದವು ಸುಖನಾಮಗಳಲ್ಲಿ ಪಠಿತವಾದ ಕಾರಣ ಸ್ಯೋನ ಶಬ್ದವು ಸುಖಮಾಸನಂ ಎಂಬಲ್ಲಿ ಸುಖಶಬ್ದಕ್ಕೆ ಸುಖಕಾರಿಯಲ್ಲಿ ಹೇಗೆ ಲಕ್ಷಣಾವಿದೆಯೋ ಹಾಗೆಯೇ ಸ್ಯೋನ ಶಬ್ದವೂ ಸುಖಕಾರಿ ಯಲ್ಲಿಯೇ ಇದೆ. ಆದಕಾರಣ) ನಮಗೆ ಸುಖಕಾರಿಯಾಗುವುದು. (ಅನೃಕ್ಷರಾ ಎಂಬುದಕ್ಕೆ ಅರ್ಥವನ್ನು ಹೇಳು ತ್ತಾರೆ)ಯಾವಕಾರಣದಿಂದ ಮನುಷ್ಯರಂತೆ ನಾಶಹೊಂದುವುದಿಲ್ಲವೋ (ಆದಕಾರಣ ಅನೃಕ್ಷರಾ ಎನಿಸುತ್ತಾಳೆ.) (ನಶ್ಯತಿ ಎಂದು ಪ್ರಥಮ ಪುರುಷವನ್ನುಹೇಳಬೇಕಿತ್ತು, ನಶ್ಯಸಿ ಎಂದು ಮಧ್ಯಮ ಪುರುಷನನ್ನು ಹೇಳಿದು ದರಿಂದ ಯಾ ತ್ವಂ ಅನೃಕ್ಷರಾ ಎಂದು ಯೋಜನಾಮಾಡಬೇಕೆಂದು ಸೂಚಿತವಾಯ್ತು,) (ನಿವಿಶಂತೇ ಅಸ್ಯಾಂ ಭೂತಾನಿ ಎಂಬ ವ್ಯುತ್ಪತ್ತಿಯಿಂದ ಸಮಸ್ತ ವಸ್ತು ಗಳಿಗೂ ಆಶ್ರಯವಾಗಿರುವುದರಿಂದ ಆ ಪೃಥಿವಿಯು ನಿವೇಶನೀ ಎನಿಸುತ್ತದೆ. ಎಲೋ ಪೃಥಿವಿಯೇ ಮಹತ್ತರವಾದ ಸುಖವನ್ನಾಗಲೀ ಮನೆಯನ್ನಾಗಲೀ ಕೊಡು. ॥೧೫॥೬॥

ಋ॥(೨೨೪)ಅತೋ ದೇವಾ ಅವಂತು ನೋ ಯತೋ ವಿಷ್ಣುರ್ವಿಚಕ್ರಮೇ।
ಪೃಥಿವ್ಯಾಃ ಸಪ್ತಧಾಮಭಿಃ ॥ ೧೬ ॥

ಅ ॥ ಯತಃ=ಯಾವ ಕಾರಣದಿಂದ, ವಿಷ್ಣುಃ=ಜಗತ್ಪತಿಯಾದ ಶ್ರೀ ವಿಷ್ಣುವು, ಪೃಥಿವ್ಯಾಃ=ಪೃಥಿವೀ ಲೋಕವನ್ನಾರಂಭಿಸಿ. ಸಪ್ತಧಾಮಭಿಃ—೭ಲೋಕಗಳಿಂದ ಕೂಡಿಕೊಂಡು, (೩ಪಾದ ವಿಕ್ಷೇಪಗಳಿಂದ) (ಈ ಜಗ ತ್ತನ್ನು) ವಿಚಕ್ರಮೇ=ಆಕ್ರಮಿಸಿರುವನೋ (ಅಸುರರಿಂದ ಅಪಹರಿಸಿರುವನೋ) ಅಪಹರಿಸಿಯೂ ದೇವತೆಗಳನ್ನು ಆವಾವ ಪದಗಳಲ್ಲಿರುವವರನ್ನಾಗಿಯೂ ಮಾಡಿರುವನೋ) ಆದಕಾರಣ (ಹೀಗೆ ವಿಷ್ಣು ಪ್ರಸಾದದಿಂದ ಲಬ್ಧ ವಾದ ಪದವುಳ್ಳವರಾದುದರಿಂದ ಸಮರ್ಥರಾದ ಪ್ರಯುಕ್ತ) ದೇವಾಃ=ದೇವತೆಗಳು, ನಃ=ನಮ್ಮನ್ನು ಅವಂತು= ರಕ್ಷಿಸಲಿ ॥ ೧೬ ॥

ಭಾ ॥ (೧) ಅಸುರೇಭ್ಯೋ ಜಗದ್ಧೃತ್ವಾ ಯತೋ ವಿಷ್ಣುಸ್ತ್ರಿವಿಕ್ರಮೈಃ। ಆರಭ್ಯ ಪೃಥಿವೀಂ ಸಪ್ತಲೋಕೈಃ ಸಾಕಂ ಜಗತ್ಪತಿಃ। ಚಕ್ರೇ ಸುರಾನ್ ಪದಸ್ಥಾನಪ್ಯತೋ ದೇವಾ ಅವಂತು ನಃ ॥ (೨) ವಿಶಿಷ್ಟಬಲಚೇಷ್ಟತ್ವಾದ್ವಿಷ್ಣುರಿತ್ಯಭಿಧಾ ಹರೇಃ । ಪ್ರಾಣಂ ಬಲಂ ಷಕಾರಂ ಚ ಣಕಾರಂ ಚಾಹ ಹಿ ಶ್ರುತಿಃ ॥ ೧೬ ॥

ಅ ॥ (೧) ಯಾವ ಕಾರಣದಿಂದ ಜಗತ್ಪತಿಯಾದ ಶ್ರೀವಿಷ್ಣುವು ೩ಪಾದವಿಕ್ಷೇಪಗಳಿಂದ ಪೃಥಿವೀಲೋಕವನ್ನಾರಂಭಿಸಿ ೭ ಲೋಕಗಳಿಂದ ಕೂಡಿಕೊಂಡು ಈ ಜಗತ್ತನ್ನು ಅಸುರರಿಂದ ಅಪಹರಿಸಿ ದೇವತೆಗಳನ್ನು ತಂತಮ್ಮ ಪದಗಳಲ್ಲಿರುವವರನ್ನಾಗಿ ಮಾಡಿರುವವನೋ, ಆದ ಕಾರಣ ಹೀಗೆ ವಿಷ್ಣು ಪ್ರಸಾದದಿಂದ ಹೊಂದಿರುವ ಪದವುಳ್ಳವರಾದುದರಿಂದ ಸಮರ್ಥರಾದ ಪ್ರಯುಕ್ತ ದೇವತೆಗಳು ನಮ್ಮನ್ನು ರಕ್ಷಿಸಲಿ. (೨)(ವಿಷ್ಣು ಶಬ್ದವನ್ನು ಭಗವಂತನಲ್ಲಿ ನಿರ್ವಚನ ಮಾಡುತ್ತಾರೆ) (ವಿಶಿಷ್ಟ ಅತ್ಯುತ್ಕೃಷ್ಟವಾದ ಬಲವೂ ಚೇಷ್ಟೆಯೂ ಇರುವುದರಿಂದ ಶ್ರೀಹರಿಗೆ ವಿಷ್ಣು ಎಂಬ ನಾಮ ಧೇಯವು. (ವಿ ಶಬ್ದವು ವಿಶಿಷ್ಟ ಎಂಬ ಅರ್ಥವನ್ನು ಹೇಳತಕ್ಕುದು ಆಗಲಿ. ಷಕಾರ ಣಕಾರಣಗಳು ಚೇಷ್ಟಾ ಬಲಗಳೆಂಬ ಅರ್ಥವನ್ನು ಹೇಳುವುದುಯಾವುದರಿಂದ,ಎಂದರೆ)ಶ್ರೀಪರಮಾತ್ಮನ ಪ್ರಾಣಂ=ಚೇಷ್ಟೆಯನ್ನು ಷಕಾರಂ=ಷಶಬ್ದದಿಂದ ಹೇಳಲ್ಪಡತಕ್ಕುದನ್ನಾಗಿಯೂ, ಬಲವನ್ನು, ಣಕಾರಂ=ಣ ಶಬ್ದದಿಂದ ಹೇಳಲ್ಪಡತಕ್ಕುದನ್ನಾಗಿಯೂ **ಣಕಾರೋ ಬಲಂ ಷಕಾರಃಪ್ರಾಣ ಆತ್ಮಾ** ಎಂಬ ಐತರೆಯ ಶ್ರುತಿಯು ಹೇಳುತ್ತದೆ. ॥ ೧೬ ॥

ಋ: ॥ (೨೨೫) ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ।
ಸಮೂಳ್ಹಮಸ್ಯ ಪಾಂಸುರೇ॥ ॥ ೧೭ ॥

ಅ ॥ ವಿಷ್ಣುಃ=ಶ್ರೀಪರಮಾತ್ಮನು, ಇದಂ ವಿಶ್ವಂ=ಈ ಜಗತ್ತನ್ನು ವಿಚಕ್ರಮೇ=ಆಕ್ರಮಿಸಿದನು. (ಹೇಗೆಂದರೆ) ತ್ರೇಧಾ=ಮೂರು ವಿಧವಾಗಿ, ಪದಂ=ಪಾದವನ್ನು, ನಿದಧೇ=ಇಟ್ಟನು. (ಆಗ) ಅಸ್ಯ=ಈ ಜಗತ್ಪತಿಯ, ಪಾಂಸುರೇ=(ಪಾಂಸವಃ ರಮಂತೇ=ಶೋಭಂತೇ ಅತ್ರ ಎಂಬವ್ಯುತ್ಪತ್ತಿಯಿಂದ) ಶೋಭಿಸಿಕೊಂಡಿರುವ ಧೂಳಿಗಳುಳ್ಳ ಪಾದದಲ್ಲಿ ಅಥವಾ (ಪಾಂಸ್ವಭಿಮಾನಿದೇವಾಃ ರಮಂತೇ ಅತ್ರ ಎಂಬ ವ್ಯುತ್ಪತ್ತಿಯಿಂದ)ಸುಖದಿಂದ ಕ್ರೀಡಿಸಿಕೊಂಡಿರುವ ಪಾಂಸ್ವಭಿಮಾನಿ ದೇವತೆಗಳುಳ್ಳ, ಪಾದದಲ್ಲಿ (ಈ ಜಗತ್ತು) ಸಮೂಳ್ಹಂ= ಧೂಳಿಗಳಂತೆ ಪ್ರತಿಷ್ಠಿತವಾಗಿದೆ. (ಹೊಂದಿಸಲ್ಪಟ್ಟಿದೆ) ॥ ೧೭ ॥

ಭಾ ॥ ರಮಂತಿ ಪಾಂಸವೋ ಯತ್ರ ಪಾಂಸುರಂ ಪದಮೀರಿತಂ। ಸಮೂಢಂ ತತ್ರ ವಿಶ್ವಂ ಹಿ ಪಾಂಸುವಜ್ಜಗತಃ ಪತೇಃ ॥ ೧೭ ॥

ಅ ॥ ಯಾವ ಪಾದದಲ್ಲಿ ಧೂಳಿಗಳು ಶೋಭಿಸುತ್ತಿರುತ್ತವೋ ಅಂತಹ ಪಾದವು ಪಾಂಸುರವೆನಿಸುತ್ತದೆ. (ಅಥವಾ ಪಾಂಸು ಶಬ್ದದಿಂದ ಪಾಂಸುಗಳನ್ನಾಶ್ರಯಿಸಿರುವ ದೇವತೆಗಳು.) ಯಾವ ಪಾದದಲ್ಲಿ ಪಾಂಸುಗಳನ್ನಾಶ್ರಯಿಸಿರುವ ಪಾಂಸ್ವಭಿಮಾನಿ ದೇವತೆಗಳು ಸುಖವಾಗಿ ಕ್ರೀಡಿಸುತ್ತಿರುತ್ತಾರೋ, ಅಂತಹ ಪಾದವು ಪಾಂಸುರವೆನಿಸುತ್ತದೆ. ಜಗತ್ಪತಿಯಾದ ಶ್ರೀಹರಿಯ ಆ ಪಾದದಲ್ಲಿ ಸಂಪೂರ್ಣ ಜಗತ್ತು ಧೂಳಿಯಂತೆ ಹೊಂದಿಸಲ್ಪಟ್ಟಿದೆ. (ಆಶ್ರಿತವಾಗಿದೆ.) ॥ ೧೭ ॥

ಋ ॥ (೨೨೬) ತ್ರೀಣಿ ಪದಾ ವಿ ಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ ।
ಅತೋ ಧರ್ಮಾಣಿ ಧಾರಯನ್ ॥ ೧೮ ॥

ಅ ॥ ಅದಾಭ್ಯಃ=(ದಭದಾಭ್ಯೇ) ನಿವಾರಿಸಲಿಕ್ಕೆ ಅಶಕ್ಯನಾದ, ವಿಷ್ಣುಃ=ಶ್ರೀ ಪರಮಾತ್ಮನು, ತ್ರೀಣಿ ಪದಾ=ಎಲ್ಲಾ ತ್ರಿವಿಧಗಳಾದ ಸ್ವರೂಪಗಳನ್ನು, ಅಂದರೆ ಋಗ್ಯಜುಸ್ಸಾಮ ವೇದಾಖ್ಯ ಸ್ವರೂಪಗಳನ್ನು, ಅತೀತಾನಾಗತ ವರ್ತಮಾನ ಕಾಲಾಖ್ಯ ಸ್ವರೂಪಗಳನ್ನು, ಸತ್ವರಜಸ್ತಮೋಗುಣಾಖ್ಯ ಸ್ವರೂಪಗಳನ್ನು, ಭೂರ್ಲೋಕ ಭುವರ್ಲೋಕ ಸ್ವರ್ಲೋಕಾಖ್ಯ ಸ್ವರೂಪಗಳನ್ನು, ದೇವಮಾನುಷ ದಾನವರೂಪ ಜೀವಾಖ್ಯ ಸ್ವರೂಪಗಳನ್ನು ಚೇತನ ಅಚೇತನ ಮಿಶ್ರ ರೂಪಗಳಾದ ಶ್ರೀಮುಕ್ತ ಘಟಾದಿ ಸಾತ್ಮಕ ದೇಹಾಖ್ಯ ಸ್ವರೂಪಗಳನ್ನು ಗೋಪಾಃ=ರಕ್ಷಕನಾಗಿಯೂ, ಸೃಷ್ಟಿಸುವವನಾಗಿಯೂ, ಪೋಷಿಸುವವನಾಗಿಯೂ, ಮೋಕ್ಷಪ್ರದನಾಗಿಯೂ, ವಿ ಚಕ್ರಮೇ=ಅತಿಕ್ರಮಿಸಿರುವನು. (ಯಾವ ಕಾರಣದಿಂದ ಶ್ರೀ ವಿಷ್ಣುವು ಇಂತಹ ಮಾಹಾತ್ಮೆವುಳ್ಳವನೋ, ಅತಃ=ಆ ಕಾರಣದಿಂದ ಧರ್ಮಾಣಿ=(**ಧರ್ಮೋಸ್ತ್ರೀಪುಣ್ಯ ಆಚಾರಃ** ಎಂಬ ಕೋಶದಿಂದ ನಪುಂಸಕತ್ವವು) ಜಗತ್ತಿಗೆ ಧಾರಕರಾದ ವಾಯ್ವಾದಿ ದೇವತೆಗಳನ್ನು, ಧಾರಯನ್=ಧರಿಸುವವನಾಗಿ (ಇರುತ್ತಾನೆ.) ॥ ೧೮ ॥

ಭಾ ॥ (೧) ವೇದಾನ್ ಕಾಲಾನ್ ಗುಣಾಁಲ್ಲೋಕಾನ್ ದೇವ ಮಾನುಷದಾನವಾನ್ । ಚೇತನಾಚೇತನಾನ್ ಮಿಶ್ರಾನ್ ತ್ರೀಣಿ ಪದಾ ವಿಚಕ್ರಮೇ ॥ (೨) ರಕ್ಷಕತ್ವೇನ ಸರ್ವಾಣಿ ಸ್ರಷ್ಟೃಭರ್ತೃತ್ವತಸ್ತಥಾ । ಮೋಕ್ಷದತ್ವೇನ ಚ ವಿಭುಃ ಸ್ತಂಭನೀಯೋ ನಕೇನಚಿತ್ ॥ (೩) ಧಾರಕಾಂಶ್ಚೈವ ವಾಯ್ವಾದೀನ್ ಧಾರಯನ್ ವರ್ತತೇ ತತಃ ॥ ೧೮ ॥

ಅ ॥ (೧) ಶ್ರೀ ಪರಮಾತ್ಮನು ಎಲ್ಲಾ ತ್ರಿವಿಧ ಸ್ವರೂಪಗಳನ್ನು ಅತಿಕ್ರಮಿಸಿದನು. (ಆ ೩ ಸ್ವರೂಪಗಳು ಯಾವುವು? ಎಂದರೆ) (1) ಋಗ್ಯಜುಸ್ಸಾಮಾಖ್ಯ ೩ ವೇದಗಳನ್ನು, (2) ಅತೀತಾನಾಗತ ವರ್ತಮಾನಾಖ್ಯ ಕಾಲಗಳನ್ನು, (3) ಸತ್ವರಜಸ್ತಮೋಗುಣಗಳನ್ನು, (4) ಭೂರ್ಭುವಃ ಸ್ವರ್ಲೋಕಗಳನ್ನು ದೇವ ಮಾನುಷ ದಾನವರೆಂಬ ಜೀವರನ್ನು, (5) ಚೇತನ ಅಚೇತನ ಮಿಶ್ರಗಳಾದ ಸಕಲ ಪದಾರ್ಥಗಳನ್ನು ಅಂದರೆ-ಚೇತನಾಃ= ಲಕ್ಷ್ಮೀ ದೇವಿಯೂ ಮುಕ್ತರು,ಅಚೇತನಾಃ ಘಟಪಟಾದಿಗಳು, ಮಿಶ್ರಾಃ=ಸಾತ್ಮಕ ದೇಹಗಳು, ಇವುಗಳನ್ನು ಅತಿಕ್ರಮಿಸಿರುವನು. (೨) ವ್ಯಾಪ್ತನಾದ ಶ್ರೀಹರಿಯು ಈ ಎಲ್ಲಾ ೩ ವಿಧ ಸ್ವರೂಪಗಳನ್ನು, ಆಪತ್ತುಗಳಿಂದ ರಕ್ಷಿಸುವವನಾಗಿಯೂ, ಸೃಷ್ಟಿಸುವವನಾಗಿಯೂ, ಅನ್ನ ವಸ್ತ್ರಾದಿಗಳಿಂದ ಪೋಷಿಸುವವನಾಗಿಯೂ ಮೋಕ್ಷವನ್ನು ಕೊಡುವವನಾಗಿಯೂ, ಅತಿಕ್ರಮಿಸಿದನು. ಶ್ರೀಹರಿಯು ಯಾರಿಂದಲೂ ನಿವಾರಿಸಲು ಶಕ್ಯನಲ್ಲ. (೩) ಶ್ರೀ ವಿಷ್ಣುವಿಗೆ ಇಂತಹ ಮಾಹಾತ್ಮ್ಯಗಳು ಇದ್ದುದರಿಂದ ಜಗತ್ತಿಗೆ ಧಾರಕರಾದ ವಾಯ್ವಾದಿಗಳನ್ನು ಆತನೇ ಧರಿಸಿಕೊಂಡು ಇರುತ್ತಾನೆ. ॥ ೧೮ ॥

ಋ ॥ (೨೨೭) ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿ ಪಸ್ಪಶೇ ।
ಇಂದ್ರಸ್ಯ ಯುಜ್ಯಸ್ಸಖಾ ॥ ೧೯ ॥

ಅ ॥ ಎಲೋ ಜನರೇ, ವ್ರತಾನಿ=ಸಮಸ್ತ ಪ್ರಾಣಿಗಳ ಕರ್ಮಗಳು, ಯತಃ=ಯಾವ ಕರ್ಮಗಳ ದೆಶೆಯಿಂದ, ಅಥವಾ ಯಾವ ವಿಷ್ಣುವಿನಿಂದ, (ಹುಟ್ಟಿದ್ದಾವೋ,) (ಯಾವ ವಿಷ್ಣುವು, ಪಸ್ಪಶೇ=(ಸ್ಪಶ ಅಜ್ಞಾತದಶಾ) ಪ್ರಾಕೃತ ಜನರಿಂದ ಕಾಣಿಲ್ಪಡದಿದ್ದರೂ ಯೋಗಿಗಳಿಂದ ಕಾಣಲ್ಪಡುತ್ತಿರುತ್ತಾನೋ, (ಯಾವ

ಶ್ರೀ ವಿಷ್ಣುವು, ಇಂದ್ರಸ್ಯ=ಪುರಂದರನಿಗೆ, ಅಥವಾ ಮುಖ್ಯ ವಾಯುವಿಗೆ, ಯುಜ್ಯಃ=ಮುಖ್ಯ ಸಂಬಂಧಕ್ಕೆ ಅರ್ಹನಾದ, (ನಿಯಮೇನ ಒಟ್ಟಿಗೇನೇ ಇರುವ,) ಸಖಾ=ಗೆಳೆಯನೋ, ವಿಷ್ಣೋಃ=ಅಂತಹ ಶ್ರೀ ವಿಷ್ಣುವಿನ, ಕರ್ಮಾಣಿ=ಜಗತ್ಸೃಷ್ಟ್ಯಾದಿ ಕರ್ಮಗಳನ್ನು, ಪಶ್ಯತ=ತಿಳಿಯಿರಿ. ॥ ೧೯ ॥

ಭಾ ॥ (೧) ಜಾನೀಥ ವಿಷ್ಣುಕರ್ಮಾಣಿ ಪ್ರಾಣಿಕರ್ಮಾಣ್ಯಶೇಷತಃ । ಯತೋ ಜಾತಾನ್ಯ ವಿಜ್ಞಾತೋ ಭಗವಾನ್ ಸರ್ವದೈವ ಚ। (೨) ಸ್ಪಶಾಜ್ಞಾತದೃಶೌ ಯಸ್ಮಾದಿಂದ್ರಸ್ಯ ಸಹಿತಃ ಸಖಾ । ಪ್ರಾಣಸ್ಯೈವೇಂದ್ರನಾಮ್ನಶ್ಚ (೩) ಕಸ್ಮಿನ್ನಹ ಮಿತಿಶ್ರುತೇಃ ॥ (೪) ತ್ವಯೇದಿಂದ್ರೇತಿ ವಚನಾತ್ಪ್ರಾಣ ಇಂದ್ರಾಭಿಧೋ ಮತಃ ॥ ೧೯ ॥

ಅ ॥ (೧) (ಎಲೋ ಜನರೇ) ಶ್ರೀ ಪರಮಾತ್ಮನ ಜಗತ್ಸೃಷ್ಟ್ಯಾದಿ ಕರ್ಮಗಳನ್ನು ತಿಳಿಯಿರಿ. (ಎಂತಹ ಕರ್ಮಗಳೆಂದರೆ) ಸಮಸ್ತ ಪ್ರಾಣಿಗಳ ಕರ್ಮಗಳೂ ಯಾವ ಭಗವತ್ಕರ್ಮಗಳಿಂದಲೇ ಅಥವಾ ಭಗವಂತನಿಂದಲೇ ಹುಟ್ಟಿದ್ದಾವೋ, (ಶ್ರೀ ಪರಮಾತ್ಮನಾಗಲೀ ಆತನ ಕರ್ಮಗಳಾಗಲೀ ಪ್ರಾಣಿಗಳ ಕರ್ಮಗಳಿಗೆ ಜನಕ (ಪ್ರೇರಕ) ವೆಂಬುವುದು ಎಲ್ಲಿಯೂ ಉಪಲಂಭವಾಗದಿರುವುದರಿಂದ ಇದು ಹೇಗೆ ಕೂಡುತ್ತದೆಂದರೆ)ಭಗವಂತನು ಸರ್ವದಾ ಅವಿಜ್ಞಾತನೇ ಆಗಿರುತ್ತಾನೆ. ಚ=ಜ್ಞಾತನೂ ಆಗಿರುತ್ತಾನೆ.(೨)(ಹೇಗೆಂದರೆ) ಸ್ಪಶಧಾತುವು ಅಜ್ಞಾತದೃಶೌ=ಪ್ರಾಕೃತ ಜನರ ಪ್ರತ್ಯಕ್ಷಕ್ಕೆ ಅಯೋಗ್ಯವಾದ ಅರ್ಥವನ್ನು ಯೋಗಿಗಳಿಗೆ ದರ್ಶನವಾಗುವಿಕೆ ಎಂಬ ಅರ್ಥದಲ್ಲಿದೆ.ಆದಕಾರಣ ಹೇಳಿದ್ದು ಯುಕ್ತವು.(ಅಂತೂ ಪಸ್ಪಶೇ=ಪ್ರಾಕೃತ ಜನರಿಂದ ಅದೃಶ್ಯನಾದವನೇ ಯೋಗಿಗಳಿಂದ ಕಾಣಲ್ಪಟ್ಟನು. ಎಂದರ್ಥವು.) (ಯಾವಾತನು) ಇಂದ್ರನಿಗೆ ಅಥವಾ ಇಂದ್ರನೆಂದು ಹೆಸರುಳ್ಳ ಮುಖ್ಯ ವಾಯುವಿಗೆ ಸರ್ವದಾ ಒಟ್ಟಿಗೆ ಇರುವ ಮಿತ್ರನೋ, (ಅಂತಹ ವಿಷ್ಣುವಿನ ಕರ್ಮಗಳನ್ನು ತಿಳಿಯಿರಿ.) (೩) (ಪ್ರಾಣಸ್ಯೈವ ಎಂಬಲ್ಲಿದ್ದ ಏವ ಶಬ್ದದಿಂದ ಇಂದ್ರ ಶಬ್ದಕ್ಕೆ ಮುಖ್ಯ ಪ್ರಾಣನೆಂಬ ಅರ್ಥವೇ ಮುಖ್ಯವು ಎಂದುಕ್ತವಾಯ್ತು.) (ಅದು ಹೇಗೆಂದರೆ) **ಕಸ್ಮಿನ್ನ್ವಹಮುತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ ಕಸ್ಮಿನ್ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ ಸ ಪ್ರಾಣಮಸೃಜತ** ಎಂಬ ಶ್ರುತಿಯಿಂದ ವಿಷ್ಣು ಪ್ರಾಣರಿಗೇನೇ ಅವಿನಾಭಾವವು (ನಿತ್ಯ ಸಂಬಂಧವು) ಇರುವುದು. (೪) (ಇಲ್ಲಿ ಇಂದ್ರಶಬ್ದಕ್ಕೆ ಪ್ರಾಣನೆಂಬ ಅರ್ಥವು ಹೇಗೆಂದರೆ) **ತ್ವಯೇದಿಂದ್ರ ಯುಜಾ ವಯಂ ಪ್ರತಿ ಬ್ರುವೀಮಹಿ ಸ್ಪೃಧಃ।ತ್ವಮಸ್ಮಾಕಂ ತವ ಸ್ಮಸಿ।**ಎಲೋ ಇಂದ್ರನೇ(ಎಲೋ ಮುಖ್ಯ ಪ್ರಾಣನೇ) ವಿಷ್ಣುವಿನಿಂದ ಕೂಡಿದ ನಿನ್ನಿಂದ ಶ್ರೇಷ್ಠತ್ವ ವಿಷಯದಲ್ಲಿ ನಾವು ಮೊದಲು ವಿವಾದ ಮಾಡಿ ಆ ಮೇಲೆ ಪರಾಜಿತರಾಗಿ ನಿನ್ನೊಡನೆ ಹೇಳುತ್ತೇವೆ. ನೀನು ನಮಗೆ ಸ್ವಾಮಿಯು ಆಗಿರುತ್ತಿ. ನಾವು ನಿನ್ನ ದಾಸರಾಗಿರುತ್ತೇವೆ, ಎಂಬ ಋಕ್ಕಿನಲ್ಲಿ ಇಂದ್ರಶಬ್ದಕ್ಕೆ ಪ್ರಾಣನಲ್ಲಿ ಪ್ರಯೋಗವು ಕಂಡದೆ. ಆದಕಾರಣ **ತ್ವಯೇದಿಂದ್ರ** ಎಂಬ ಶ್ರುತಿಯಿಂದ ಇಂದ್ರ ಶಬ್ದ ವಾಚ್ಯನು ಪ್ರಾಣನೆಂದು ಸಂಮತನು. (ಇಂದ್ರ ಶ್ರುತಿಯು ಪ್ರಾಣ ಪರವಾಗುವುದು ಹೇಗೆಂದರೆ) ಈ ಶ್ರುತಿಯ **ಪ್ರಾಣ ಉಕ್ಥಮಿತ್ಯೇವ ವಿದ್ಯಾತ್ತಂ ದೇವಾ ಅಬ್ರುವನ್ ತ್ವಮುಕ್ಥಮಸಿ ತ್ವಮಿದಂಸರ್ವಮಸಿ ತವ ವಯಂ ಸ್ಮಃ ತ್ವಮಸ್ಮಾಕಮಸೀತಿ ತದಪ್ಯೇತದೃಷಿಣೋಕ್ತಂ ತ್ವಮಸ್ಮಾಕಂ ತವ ಸ್ಮಸಿ** ಎಂದು ಪ್ರತೀಕವನ್ನು ತೆಗೆದು ಕೊಂಡು ತಾನು ಹೇಳಿದ ಅರ್ಥದಲ್ಲಿ ಸಂಮತಿಯಾಗಿ ಉಪನಿಷತ್ತಿನಲ್ಲಿ ಈ ಶ್ರುತಿಯು ಉದಾಹೃತವಾಗಿದೆ. ಆದಕಾರಣ ಇಂದ್ರ ಶಬ್ದ ವಾಚ್ಯನು ಮುಖ್ಯಪ್ರಾಣನೇ ॥ ೧೯ ॥

ಋ ॥ (೨೨೮) ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ ।
ದಿವೀವ ಚಕ್ಷುರಾತತಂ ॥ ೨೦ ॥

ಅ ॥ ಆತತಂ=ವ್ಯಾಪ್ತವಾದ, ಚಕ್ಷುಃ=ಚಕ್ಷುರಿಂದ್ರಿಯವನ್ನು (ರಶ್ಮಿಗಳಿಗೂ ರಶ್ಮಿಮತ್ತಿಗೂ ಅಭೇದವಿದ್ದು ಪ್ರಯುಕ್ತ ಚಕ್ಷುಃ ಎಂದೇ ಹೇಳಿದ್ದು). ದಿವೀವ=ಆಕಾಶದಲ್ಲಿ ಹೇಗೋ ಹಾಗೆ, ತತ್=ಆದಾವ, ವಿಷ್ಣೋಃ= ಶ್ರೀ ವಿಷ್ಣುವಿನ, ಪರಮಂ=ರಮಾ ಬ್ರಹ್ಮಶಿವಾದಿಗಳಿಂದುತ್ತಮವಾದ, ಪದಂ=ಸ್ವರೂಪವನ್ನು, ಸೂರಯಃ= ಸಂಸಾರದಿಂದ ಬಿಡುಗಡೆಹೊಂದಿದ ಜ್ಞಾನಿಗಳು, ಸದಾ=ಸರ್ವದಾ, ಪಶ್ಯಂತಿ=ನೋಡುತ್ತಾರೆ.

ವಿ ॥ ಹೇಗೆ ಚಕ್ಷುಸ್ಸು ಆಕಾಶದಲ್ಲಿ ವ್ಯಾಪ್ತವಾದುದಾಗ್ಯೂ ಕಾಣಿಸಿಕೊಳ್ಳುವುದಿಲ್ಲವೋ ಕೇವಲ ವಿಷಯೋಪಲಬ್ಧಿ ರೂಪ ಫಲದಿಂದ ಅನುಮಿತವಾಗುತ್ತದೋ, ಹಾಗೆಯೇ ಪರಮೇಶ್ವರನ ಸ್ವರೂಪವೂ ಸರ್ವತ್ರ ವ್ಯಾಪ್ತವಾದುದಾಗ್ಯೂ ಕಾಣಿಸಿಕೊಳ್ಳುವುದಿಲ್ಲ. ಮತ್ತೆ ಅಸ್ವತಂತ್ರಗಳಾದ ಪದಾರ್ಥಗಳ ಸತ್ತಾ ಪ್ರತೀತಿಪ್ರವೃತ್ತಿಗಳಂದತಿಳಿಯಲ್ಪಡುತ್ತದೆ. ಹೀಗೆ ದೃಷ್ಟಾಂತವಚನದ ತಾತ್ಪರ್ಯವು. ॥ ೨೦ ॥

ಭಾ ॥ (೧) ರಮಾ ಬ್ರಹ್ಮ ಶಿವಾದಿಭ್ಯೋ ಽಪಿ ವಿಷ್ಣೋಃ ಪರಮಂ ಪದಂ। ರೂಪಂ ಪಶ್ಯಂತಿ ನಿರ್ಮುಕ್ತಾಃ ಸಂಸಾರಾತ್ಸೂರಯಸ್ಸದಾ। (೨) ಚಕ್ಷುರ್ದಿವೀವ ವ್ಯಾಪ್ತಂ ಯದ ದೃಶ್ಯಂ ಫಲದರ್ಶಿತಂ ॥ ೨೦ ॥

ಅ ॥ (೧) ರಮಾ ಬ್ರಹ್ಮ ಶಿವಾದಿಗಳಿಂದುತ್ತಮವಾದ ವಿಷ್ಣುವಿನ ಯಾವ ಸ್ವರೂಪವನ್ನು ಸಂಸಾರದಿಂದ ಬಿಡುಗಡೆ ಹೊಂದಿದ ಜ್ಞಾನಿಗಳು (ಅವರೇ ಮುಖ್ಯ ಸೂರಿಗಳು) ಸದಾ ನೋಡುತ್ತಿರುತ್ತಾರೆ. (ಮುಖ್ಯತಃ ಜ್ಞಾನಿತ್ವವು ಸಂಸಾರದಿಂದ ಮುಕ್ತರಾದವರ ಧರ್ಮವು) (೨) (ದೃಷ್ಟಾಂತದ ತಾತ್ಪರ್ಯ ಹೇಳುತ್ತಾರೆ) ಹೇಗೆ ಚಕ್ಷುಸ್ಸು ಆಕಾಶದಲ್ಲಿ ವ್ಯಾಪ್ತವಾದುದಾಗ್ಯೂ ಕಾಣಿಸಿಕೊಳ್ಳುವುದಿಲ್ಲವೋ, ಫಲದಿಂದ ಅನುಮಿತವಾಗುತ್ತದೋ, ಹಾಗೆಯೇ, ಪರಮಾತ್ಮನ ಸ್ವರೂಪವು. ॥ ೨೦ ॥

ಋ॥ (೨೨೯) ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ।

ವಿಷ್ಣೋರ್ಯತ್ಪರಮಂ ಪದಂ ॥ ೨೧ ॥ ೭ ॥ ೨೨॥

ಅ ॥ ಯತ್ ವಿಷ್ಣೋಃ ಪರಮಂ ಪದಂ=ಯಾವುದು ವಿಷ್ಣುವಿನ ಸರ್ವೋತ್ಕೃಷ್ಟವಾದ ಸ್ವರೂಪವೋ ತತ್=ಆ ಸ್ವರೂಪವನ್ನು, ವಿಪನ್ಯವಃ (ಪನಜ್ಞಾನೇ) ವಿಶೇಷತಃ ಜ್ಞಾನಿಗಳಾದ ಜಾಗ್ರವಾಂಸಃ (ಜಾಗೃನಿದ್ರಾಕ್ಷಯೇ) ಜಾಗರಣವನ್ನೇ ಹೊಂದಿರುವ (ಸಂಸಾರದಿಂದ ಬಿಡುಗಡೆ ಹೊಂದಿರುವ) ವಿಪ್ರಾಸಃ=ಮೇಧಾತಿಥಿ ಮೊದಲಾದ ಬ್ರಾಹ್ಮಣರು, ಸಮಿಂಧತೇ=(ಞ ಇಂಧೀದೀಪ್ತೌ)ತಿಳಿಯುತ್ತಾರೆ. ಅಥವಾ ತಿಳಿಸುತ್ತಾರೆ. ॥ ೨ ॥

ಭಾ ॥ ೧) ಸಂದೀಪಯಂತಿ ವಿಜ್ಞಾನೈಃ ಸಂಸಾರಾತ್ಪ್ರಾಪ್ತಜಾಗರಾಃ । ವಿಪನ್ಯವೋ ಜ್ಞಾನಿತಮಾಃ ವಿಷ್ಣೋರ್ಯತ್ಪರಮಂ ಪದಂ ॥ (೨) ತಾತ್ಪರ್ಯಾಧಿಕ್ಯ ವಿಜ್ಞಪ್ತ್ಯೈ ಅರ್ಥಮೇತಂ ಪುನರ್ಜಗೌ ॥ ೨೧ ॥ ೭ ॥ ೩ ॥

ಅ ॥ ೧) ಜಾಗರಣವನ್ನೇ ಹೊಂದಿರುವ ಸಂಸಾರದಿಂದ ಮುಕ್ತರಾದ ಮುಖ್ಯ ಜ್ಞಾನಿಗಳು ಶ್ರೀವಿಷ್ಣುವಿನ ಉತ್ತಮವಾದ ಸ್ವರೂಪವನ್ನು ಜ್ಞಾನಸಾಧನಗಳಾದ ವೇದಾದಿ ಪ್ರಮಾಣಗಳಿಂದ ತಿಳಿಯುತ್ತಾರೆ. ಇತರರಿಗೆ ತಿಳಿಸುತ್ತಾರೆ. (೨) ಈ ಋಕ್ಕಿನ ಅರ್ಥವನ್ನು ತದ್ವಿಷ್ಣೋಃ ಪರಮಂ ಪದಂ ಎಂಬ ಮೊದಲಿನ ಋಕ್ಕಿನಲ್ಲಿಯೇ ಹೇಳಿಯಾಗಿದೆ ಆದ ಕಾರಣ ಪುನಃ ಏತಕ್ಕೆ ಹೇಳಿದ್ದು ಎಂದರೆ) ಸಮಸ್ತ ವೇದಗಳಿಗೂ ಇಲ್ಲಿ ಹೇಳಿದ ಸರ್ವೋ

ತ್ತನುತ್ವರೂಪ ಅರ್ಥದಲ್ಲಿಯೇ ಪರಮತಾತ್ಪರ್ಯವು ಎಂಬ ಅರ್ಥವನ್ನು ತಿಳಿಸುವುದಕ್ಕಾಗಿ ವಿಷ್ಣು ಸರ್ವೋತ್ತಮ ತ್ವಾದಿರೂಪವಾದ ಅರ್ಥವನ್ನು ತಿರುಗಿ ವೇದವು ಹೇಳಿತು ॥ ೨೧ ॥ ೭ ॥ ೩ ॥

ಅವ ॥ ೨೩ನೇ ಸೂಕ್ತವು. ೨೪ ಋಕ್ಕು ೫ ವರ್ಗ. ನಾನಾ ದೇವತೆಗಳು. ನಾನಾ ಛಂದಸ್ಸುಗಳು. ಆದಿಯ ೧೮ ಋಕ್ಕಿಗಳಿಗೆ ಗಾಯತ್ರೀ ಛಂದಸ್ಸು. ೧ನೇ ಋಕ್ಕು ವಾಯುದೇವತಾಕವು.

ಋ ॥ (೨೩೦) ತೀವ್ರಾಃ ಸೋಮಾಸ ಆ ಗಹ್ಯಾಶೀರ್ವಂತಃ ಸುತಾ ಇಮೇ। ವಾಯೋ ತಾನ್ ಪ್ರಸ್ಥಿತಾನ್ ಪಿಬ ॥ ೧ ॥

ಅ ॥ ವಾಯೋ=ಎಲೋ ವಾಯುವೇ,(ಯಾವ)ಇಮೇ=ಈದಾವ, ತೀವ್ರಾಃ=ತೀಕ್ಷ್ಣಗಳಾದ, ಶೀಘ್ರದಲ್ಲಿ ಕಾರ್ಯಕಾರಿಗಳಾದ, (ಅಂದರೆ ವೀರ್ಯವುಳ್ಳ,) ಆಶೀಃ ಇಚ್ಛಾದಿ ವಿಷಯವಾದ ಅರ್ಥವು. ಅಂತಹ ಅರ್ಥವುಳ್ಳ ವರು. ಆಶೀರ್ವಂತಃ=ಅಂದರೆ ಇಚ್ಛಾವಿಷಯ ಅರ್ಥದಿಂದ ಕೂಡಿ ಸಾಧ್ಯ ಸಾಧನಭಾವ ಸಂಬಂಧವುಳ್ಳವುಗಳು ಮತ್ತು ಸಾಧ್ಯವಾದ ಯಜಮಾನನ ಇಷ್ಟಕ್ಕೆ ಸಾಧಕಗಳೂ ಆದ ಸುತಾಃ=ಹಿಂಡಲ್ಪಟ್ಟ, ಸೋಮಾಸಃ=ಸೋಮಗಳು (ಇರುತ್ತವೋ) ತಾನ್=ಅಂತಹ, ಪ್ರಸ್ಥಿತಾನ್=ಸೋಮಗಳನ್ನು ಉತ್ತರವೇದಿಯನ್ನು ಕುರಿತು ತಂದಿರು ವುದರಿಂದ ಪ್ರಸ್ಥಿತ ಎಂದು ಹೆಸರುಳ್ಳ ಸೋಮಗಳನ್ನು, ಅಥವಾ ನಿನಗೆ ಅಭಿಮುಖಗಳಾದ ಸೋಮಗಳನ್ನು ಕುರಿತು, ಆಗಹಿ=ಬಾ. ಪಿಬಚ=(ಬಂದು) ಕುಡಿ. ॥ ೧ ॥

ಭಾ ॥ ವೀರ್ಯವಂತಶ್ಚ ಯೇ ಸೋಮಾಃ ಯಜಮಾನೇಷ್ಟಸಾಧಕಾಃ। ಪಿಬ ತಾನ್ ॥ ೧ ॥

ಅ॥ (ಯಚ್ಛಬ್ದವನ್ನು ಅಧ್ಯಾಹಾರ ಮಾಡಿಕೊಂಡು ಏಕವಾಕ್ಯವಾಗಿ ವ್ಯಾಖ್ಯಾನ ಮಾಡುತ್ತಾರೆ.)ಯಾವ ಸೋಮಗಳು ವೀರ್ಯವುಳ್ಳವುಗಳೋ ಯಜಮಾನನಿಗೆ ಇಷ್ಟಾರ್ಥವನ್ನು ಸಾಧಿಸಿ ಕೊಡುವವುಗಳೂ ಆಗಿವೆಯೋ ಅಂತಹ ಸೋಮಗಳನ್ನು ಕುಡಿ. ॥ ೧ ॥

ಋ ॥ (೨೩೧) ಉಭಾ ದೇವಾ ದಿವಿಸ್ಪೃಶೇಂದ್ರವಾಯೂ ಹವಾಮಹೇ। ಅಸ್ಯ ಸೋಮಸ್ಯ ಪೀತಯೇ ॥ ೨ ॥

ಅ ॥ (೨, ೩ನೇಯ ಋಕ್ಕುಗಳು ಇಂದ್ರ ವಾಯುದೇವತಾಕಗಳು)ಉಭಾ=ಇಬ್ಬರಾದ, ದೇವಾ=ಕ್ರೀಡಾದಿ ಗುಣ ವಿಶಿಷ್ಟರಾದ, (ದಿವು ಕ್ರೀಡಾವಿಜಿಗೀಷಾ ವ್ಯವಹಾರ ದ್ಯುತಿ ಸ್ತುತಿ ಮೋದಮದ ಸ್ವಪ್ನಕಾಂತಿ ಗತಿಷು) ದಿವಿ ಸ್ಪೃಶಾ=ದಿವಿ=ಜ್ಞಾನ ವಿಷಯದಲ್ಲಿ ಸ್ಪೃಶತಃ=ಸಂಬಂಧಿಗಳು ಅಧಿಕಜ್ಞಾನವುಳ್ಳ ಅಥವಾ ಅಧಿಕ ಪ್ರಕಾಶವುಳ್ಳ) ಇಂದ್ರ ವಾಯೂ=ಎಲೋ ಇಂದ್ರವಾಯುಗಳೇ (ನಾವು) ಅಸ್ಯ ಸೋಮಸ್ಯ ಪೀತಯೇ=ಈ ಸೋಮವನ್ನು ಪಾನ ಮಾಡುವುದಕ್ಕಾಗಿ ಹವಾಮಹೇ (ನಿಮ್ಮನ್ನು) ಹೋಮಿಸುತ್ತೇವೆ. ॥ ೨ ॥

ಭಾ ॥ ಸರ್ವದೇವಾನಾಂ ಜ್ಞಾನಾಧಿಕ್ಯೌ ದಿವಿಸ್ಪೃಶೌ ॥ ೨ ॥

ಅ ॥ (ದಿವಿಸ್ಪೃಶಾ ಎನ್ನುವುದನ್ನು) ವ್ಯಾಖ್ಯಾನ ಮಾಡುತ್ತಾರೆ) (ದ್ಯೌಃ ಎನ್ನುವುದು ದ್ಯುತಿಯೆಂದು ಅರ್ಥವುಳ್ಳ, ಅಥವಾ ಗತಿ ಎಂದು ಅರ್ಥವುಳ್ಳ ದಿವ್ ಧಾತುವಿನ ರೂಪವು. ೨ ಕಲ್ಪಗಳಲ್ಲಿಯೂ ಜ್ಞಾನವೇ ಅದರ

ಅರ್ಥವು. ಜ್ಞಾನವೂ ಪ್ರಕಾಶ ರೂಪವಾಗಿದೆ. ಗತ್ಯರ್ಥಕಗಳು ಜ್ಞಾನಾರ್ಥಕಗಳು. ದಿವಿ ಎನ್ನುವುದು ವಿಷಯ ಸಪ್ತಮೀ. ತಥಾಚ ದಿವಿಸ್ಪೃಶತಃಇತಿದಿವಿಸ್ಪೃಶೌ. ದಿವಿ=ಜ್ಞಾನ ವಿಷಯದಲ್ಲಿ ಸ್ಪೃಶತಃ=ಸಂಬಂಧಿಗಳು. (ಜ್ಞಾನಾಧಿಕ್ಯವುಳ್ಳವರು) ಉಭಾ ದೇವಾ ದಿವಿಸ್ಪೃಶಾ=ದೇವತೆಗಳಾಗಿದ್ದವರು ಜ್ಞಾನಾಧಿಕ್ಯವುಳ್ಳವರು, ಹೀಗೆ ದೇವಶಬ್ದ ಸನ್ನಿಧಾನ ಸಾಮರ್ಥ್ಯದಿಂದ ದೇವಾನಾಂ ಮಧ್ಯೇ ಎಂದೂ ಸಿಗುತ್ತದೆ. ಜ್ಞಾನೇನ ಆಧಿಕ್ಯಂ ಯಯೋಃ=ಯಾವ ಇಂದ್ರ ವಾಯುಗಳಿಗೆ ಜ್ಞಾನದಿಂದ ಆಧಿಕ್ಯವಿದೆಯೋ, ಎಂದು ವ್ಯಧಿಕರಣ ಬಹುವ್ರೀಹಿಯು. ಅಥವಾ ಜ್ಞಾನಸ್ಯ ಆಧಿಕ್ಯಂ ಜ್ಞಾನಾಧಿಕ್ಯಂ. ಅನಯೋರ ಸ್ಥೀತಿ ಜ್ಞಾನಾಧಿಕ್ಯೌ ಎಂದು.ನಿರ್ಧಾರಣ ಸಾಮರ್ಥ್ಯದಿಂದ ಆದಿಕ್ಯವೆನ್ನುವ ಅರ್ಥವು ಸಿಗುತ್ತದೆ. ತಥಾಚ ದಿವಿಸ್ಪೃಶೌ=ಸಮಸ್ತ ದೇವತೆಗಳ ಮಧ್ಯದಲ್ಲಿ (ಇದು ನಿರ್ಧಾರಣೇ ಷಷ್ಠಿಯು) ಅಧಿಕ ಜ್ಞಾನವುಳ್ಳವರು. || ೨ ||

ಋ || (೨೩೨)ಇಂದ್ರವಾಯೂ ಮನೋಜುವಾ ವಿಪ್ರಾ ಹವಂತ ಊತಯೇ।
ಸಹಸ್ರಾಕ್ಷಾ ಧಿಯಸ್ಪತೀ || ೩ ||

ಅ || ಮನೋಜುವಾ=(ಜು ಪ್ರೇರಣೇ ಎಂಬ ಧಾತು ವ್ಯಾಖ್ಯಾನದಿಂದ) ಮನಸ್ಸಿಗೆ ಪ್ರೇರಕರಾದ, ಅಥವಾ (ಧಾತುಗಳಿಗೆ ಅನೇಕಾರ್ಥಗಳಿರುವುದರಿಂದ) ಮನಸ್ಸಿನಂತೆ ವೇಗವುಳ್ಳ, (ಮನೋಯೋಗಿನೌ=ಎಂದು ಕ್ವಚಿತ್ಪಾಠವು. ಆ ಕಲ್ಪದಲ್ಲಿ) ಪ್ರಶಸ್ತ ಮನಸ್ಸುಳ್ಳ ದಿಯಃ ಪತೀ=ಬುದ್ಧಿಗಳಿಗೆ ಸ್ವಾಮಿಗಳಾಗಿರುವುದರಿಂದ, ಸಹಸ್ರಾಕ್ಷಾ=(ಶತಂಸಹಸ್ರಂ ಎಂದು ಬಹು ನಾಮಗಳಲ್ಲಿ ಪಠಿತವಾಗಿರುವುದರಿಂದ) (ಸಹಸ್ರ ಶಬ್ದಕ್ಕೆ ಅಪರಿಮಿತವೆಂದು ಅರ್ಥವು. ಅಕ್ಷ ಶಬ್ದಕ್ಕೆ ಅಕ್ಷಿ(ಕಣ್ಣು)ಯಿಂದ ಹುಟ್ಟಿದ ಸಾಕ್ಷಾತ್ಕಾರವೆಂದು ಅರ್ಥವು. ಏವಂಚ) ಅಪರಿಮಿತ ಜ್ಞಾನವುಳ್ಳ, ಇಂದ್ರವಾಯೂ=ಇಂದ್ರವಾಯುಗಳೆನಿಸಿದ ವಿಷ್ಣುರೂಪ ವಿಶೇಷಗಳೇ ಅಥವಾ ಇಂದ್ರ ವಾಯುಗಳೆಂಬ ದೇವತೆಗಳೇ, ವಿಪ್ರಾಃ=ಮೇಧಾತಿಥಿ ಮೊದಲಾದವರು, ಊತಯೇ=ತಮ್ಮ ರಕ್ಷಣೆಗಾಗಿ, ಹವಂತೇ=(ನಿಮ್ಮನ್ನು) ಕರೆಯುತ್ತಾರೆ. || ೩ ||

ಭಾ || ಮನಸಃ ಪ್ರೇರಕೌ ಚೈವ ಬಹುಜ್ಞಾನೌ ಧಿಯಸ್ಪತೀ || ೩ ||

ಅ || (ಮನೋಜುವೌ ಎಂಬುವುದನ್ನು ವ್ಯಾಖ್ಯಾನ ಮಾಡುತ್ತಾರೆ.) ಮನಸ್ಸಿಗೆ ಪ್ರೇರಕಕರು, ಚ= ಮನಸ್ಸಿನಂತೆ ವೇಗವುಳ್ಳವರು. (ಸಹಸ್ರಾಕ್ಷ ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ.) ಬಹು ಜ್ಞಾನವುಳ್ಳವರು. ಏವ ಶಬ್ದದಿಂದ ಪುರಂದರನೊಬ್ಬನೇ ಸಹಸ್ರಾಕ್ಷನು. ವಾಯುವಿನಲ್ಲಿ ಛತ್ರಿನ್ಯಾಯದಿಂದ ಲಕ್ಷಣಾ ಎಂಬ ವ್ಯಾಖ್ಯಾನವು ಉಭಯ ಸಾಧಾರಣವಾದ ಯೌಗಿಕರೂಪವಾದ ಮುಖ್ಯಾರ್ಥವು ಕೂಡುವಾಗ ಅಯುಕ್ತವುಎಂದು ಉಕ್ತವಾಯ್ತು. ಮತ್ತು ನಾವುಹೇಳಿದ ಪ್ರಕಾರ ಅರ್ಥಹೇಳಿದರೆ ಧಿಯಸ್ಪತೀ ಎನ್ನುವುದೂ ಹೇತುವಾಗಿ ಉಪಪನ್ನವಾಗುತ್ತದೆ. ಅಂದರೆ ಅಮಿತಜ್ಞಾನವಿರಲಿಕ್ಕೆ ಧಿಯಸ್ಪತಿತ್ವವು ಸರ್ವಬುದ್ಧ್ಯಭಿಮಾನಿತ್ವವು ಹೇತುವು. || ೩ ||

ಅವ || ನೂರು ಋಕ್ಕುಗಳು ಮಿತ್ರಾವರುಣ ದೇವತಾಕವು.

ಋ || (೨೩೩) ಮಿತ್ರಂ ವಯಂ ಹವಾಮಹೇ ವರುಣಂ ಸೋಮಪೀತಯೇ।
ಜಜ್ಞಾನಾ ಪೂತದಕ್ಷಸಾ || ೪ ||

ಅ ॥ ವಯಂ=ನಾವು, ಮಿತ್ರಂ=ಸೂರ್ಯನನ್ನು, ವರುಣಂ=ವರುಣನನ್ನು ಕೂಡ, ಸೋಮಪೀತಯೇ=ಸೋಮಪಾನ ಮಾಡುವುದಕ್ಕಾಗಿ, ಹವಾಮಹೇ=ಕರೆಯುತ್ತೇವೆ. (ಯಾವ ಮಿತ್ರಾವರುಣರು ಆಹೂತರಾಗಿ) ಜಜ್ಞಾನಾ=(ಜನೀ ಪ್ರಾದುರ್ಭಾವೇ) ಯಜ್ಞಗಳಲ್ಲಿ ಅಭಿವ್ಯಕ್ತರಾಗುತ್ತಾರೋ, (ಅಭಿವ್ಯಕ್ತರಾಗಿ) ಪೂತದಕ್ಷಸಾ=(ಪೂತಃ ದಕ್ಷಃ ಯಜಮಾನಃ ಯಾಭ್ಯಾಂ ಯಾರಿಂದ ಯಜಮಾನನು ಪವಿತ್ರನಾಗುತ್ತಾನೋ ಎಂಬ ವ್ಯುತ್ಪತ್ತಿಯಿಂದ) ಯಜಮಾನನನ್ನು ಪವಿತ್ರೀಕರಿಸಿರುವರು. ॥ ೪ ॥

ಭಾ ॥ ಜಜ್ಞಾನೌ ವ್ಯಜ್ಯಮಾನೌ ತು ಯಜಮಾನಸ್ಯ ಶೋಧಕೌ ॥ ೪ ॥

ಅ ॥ ಜಜ್ಞಾನೌ=ಯಜ್ಞಗಳಲ್ಲಿ ಅಭಿವ್ಯಕ್ತರಾದವರು. ಪೂತದಕ್ಷಸಾ=ವ್ಯಕ್ತರಾಗಿ ಯಜಮಾನನನ್ನು ಪವಿತ್ರನನ್ನಾಗಿ ಮಾಡುತ್ತಾರೆ. (ಏವಂಚ ಅಭಿವ್ಯಕ್ತಿಯು ಯಜಮಾನನ ಪಾವಿತ್ರ್ಯಕ್ಕೆ ಕಾರಣವು.) ॥ ೪ ॥

ಋ ॥ (೨೩೪) ಋತೇನ ಯಾ ವೃತಾವೃಧಾವೃತಸ್ಯ ಜ್ಯೋತಿಷಸ್ಪತೀ ।
ತಾ ಮಿತ್ರಾವರುಣಾ ಹುವೇ ॥ ೫ ॥ ೮ ॥

ಅ ॥ ಯೌ=ಯಾರು, ಋತೇನ=ಸಮಸ್ತ ವೇದಗಳಿಂದ ತಿಳಿಯಲ್ಪಟ್ಟ, ಅಥವಾ ಜ್ಞಾನರೂಪವಾದ ಪರಬ್ರಹ್ಮನಿಂದ, ಋತಾವೃಧೌ=ಪರಬ್ರಹ್ಮನಲ್ಲಿಯೇ ಚೆನ್ನಾಗಿ ವೃದ್ಧಿವುಳ್ಳವರೋ, ಜ್ಯೋತಿಷಃ=ಪ್ರಕಾಶರೂಪವಾದ, ಪ್ರಮಾಣಸಿದ್ಧವಾದ, ಋತಸ್ಯ=ಸತ್ಯಕ್ಕೆ, ಪತೀ=ಅಧಿಪತಿಗಳೋ, ತಾ=ಅಂತಹ ಮಿತ್ರಾವರುಣರನ್ನು (ನಾನು) ಹುವೇ=ಕರೆಯುತ್ತೇನೆ. (ವಿಷ್ಣು ವಿಷಯದಲ್ಲಿ ಋತೇನ, ಋತವೃಧೌ ಎಂಬುವುಗಳಿಗೆ ಋತೇನ ಮಿತ್ರಾವರುಣಾ ಎನ್ನುವಲ್ಲಿ ಹೇಳಿದಂತೆ ಅರ್ಥವನ್ನು ತಿಳಿಯಬೇಕು.) ॥ ೫ ॥ ೮ ॥

ಭಾ ॥ (೧) ಪರೇಣ ಬ್ರಹ್ಮಣಾ ತಸ್ಮಿನ್ ವೃದ್ಧೌ ಸತ್ಯಪತೀ ಸದಾ । (೨) ಸತ್ಯಂ ಜ್ಯೋತಿಃ ಪ್ರಕಾಶತ್ವಾತ್ತೌ ಮಿತ್ರಾವರುಣಾ ಹುವೇ ॥ ೫ ॥ ೮ ॥

ಅ ॥ (೧) ಪರಬ್ರಹ್ಮನಿಂದಲೇ ಸದಾ ಪರಬ್ರಹ್ಮನಲ್ಲಿಯೇ ವೃದ್ಧಿಯುಳ್ಳವರು. (ಪರಮೇಶ್ವರ)ವಿಷಯದಲ್ಲಿ ವೃದ್ಧಿಯು ಕಾದಾಚಿತ್ಕವಲ್ಲ, ಎಂಬ ಅಭಿಪ್ರಾಯದಿಂದ ಸದಾ ಎಂದುಕ್ತವಾಗಿದೆ. ದೇವತಾಂತರ ವಿಷಯದಲ್ಲಿ ಕಾದಾಚಿತ್ಕವೃದ್ಧಿಯು ಸಂಭವಿಸುತ್ತದೆಂದುಕ್ತವಾಯ್ತು.) ಸತ್ಯಾಧಿಪತಿಗಳು. (೨) (ಸತ್ಯವು ಜ್ಯೋತಿಸ್ಸು ಆಗುವುದು ಹೇಗೆಂದರೆ) ಪ್ರಕಾಶ ಸ್ವರೂಪವಾಗಿರುವುದರಿಂದ ಪ್ರಸಿದ್ಧವಾಗಿದೆ. (ಅಂದರೆ ಪ್ರಮಾಣ ಪ್ರಮಿತವಾಗಿದೆ. ಆದುದರಿಂದ ಸತ್ಯವು ಜ್ಯೋತಿಸ್ಸು ಎನಿಸುತ್ತದೆ. (ಸತ್ಯವಾದುದೇ ಪ್ರಮಾಣ ಪ್ರಸಿದ್ಧವಾಗುವುದಷ್ಟೆ.) ಅಂತಹ ಮಿತ್ರಾವರುಣರನ್ನು ಕರೆಯುತ್ತೇನೆ. ॥ ೫ ॥ ೮ ॥

ಋ ॥ (೨೩೫) ವರುಣಃ ಪ್ರಾವಿತಾ ಭುವನ್ಮಿತ್ರೋ ವಿಶ್ವಾಭಿರೂತಿಭಿಃ ।
ಕರತಾಂ ನಃ ಸುರಾಧಸಃ ॥ ೬ ॥

ಅ ॥ ವರುಣಃ ಮಿತ್ರಃ=ವರುಣನೂ ಮಿತ್ರನೂ ಕೂಡ, ವಿಶ್ವಾಭಿಃ ಊತಿಭಿಃ=ಸಮಸ್ತ ರಕ್ಷಣೆಗಳಿಂದಲೂ ಪ್ರಾವಿತಾ=ಚೆನ್ನಾಗಿ ನಮ್ಮನ್ನು ರಕ್ಷಿಸುವವರು ಭುವತ್=ಆಗಬೇಕು. (ಮತ್ತು ಆ ಮಿತ್ರಾವರುಣರು) ನಃ=ನಮ್ಮನ್ನು, ಸುರಾಧಸಃ=ಶೋಭನ ಸಿದ್ಧಿವುಳ್ಳವರನ್ನಾಗಿ, ಕರತಾಂ=ಮಾಡಲಿ. ॥ ೬ ॥

ಭಾ ॥ ಸಂಸಿದ್ಧಾನ್ ಕುರುತಾಂ ನಸ್ತೌ ॥ ೬ ॥

ಅ ॥ ಆ ಮಿತ್ರಾವರುಣರು ನಮ್ಮನ್ನು ಒಳ್ಳೇ ಸಿದ್ಧಿವುಳ್ಳರನ್ನಾಗಿ ಮಾಡಲಿ. ॥ ೬ ॥

ಅವ ॥ ಇನ್ನು ಮೇಲಿನ ೩ ಋಕ್ಕುಗಳು ಮರುದ್ಗಣಗಳಿಂದ ಕೂಡಿದ ಇಂದ್ರದೇವತಾಕವೂ ಉಭಯ ದೇವತಾಕವೂ ಆಗಿದೆ.

ಋ ॥ (೨೩೬) ಮರುತ್ವಂತಂ ಹವಾಮಹ ಇಂದ್ರಮಾ ಸೋಮಪೀತಯೇ ।

ಸಜೂರ್ಗಣೇನ ತೃಂಪತು ॥ ೭ ॥

ಅ ॥ (ನಾವು) =ಮರುತ್ವಂತಂ ಮರುತ್‌ಗಳಿಂದ ಕೂಡಿರುವ, ಇಂದ್ರಂ=ಶ್ರೀಹರಿಯನ್ನು=ಇಂದ್ರನನ್ನು= ಸೋಮಪೀತಯೇ=ಸೋಮಪಾನ ಮಾಡುವುದಕ್ಕಾಗಿ, ಆ ಹವಾಮಹೇ=ಚೆನ್ನಾಗಿ ಕರೆಯುತ್ತೇವೆ. (ಕರೆಯಲ್ಪಟ್ಟ ಶ್ರೀಹರಿಯು, ಇಂದ್ರನೂ) ಗಣೇನ=ಮರುದ್ಗಣದಿಂದ, ಸಜೂಃ=ಕೂಡಿಕೊಂಡು, ತೃಂಪತು=(ತೃಪತೃಂಪತೃಪ್ತೌ) ತೃಪ್ತಿಯನ್ನು ಹೊಂದಲಿ. ॥ ೭ ॥

ಭಾ ॥ ಸಗಣಸ್ತೃಪ್ಯತಾಂ ಹರಿಃ ॥ ೭ ॥

ಅ ॥ ಮರುದ್ಗಣಗಳಿಂದ ಕೂಡಿರುವ ಶ್ರೀಹರಿಯು ತೃಪ್ತಿಯನ್ನು ಹೊಂದಲಿ. ॥ ೭ ॥

ಋ ॥ (೨೩೭) ಇಂದ್ರಜ್ಯೇಷ್ಠಾ ಮರುದ್ಗಣಾ ದೇವಾಸಃ ಪೂಷರಾತಯಃ ।

ವಿಶ್ವೇ ಮಮ ಶ್ರುತಾ ಹವಂ ॥ ೮ ॥

ಅ ॥ ಇಂದ್ರಜ್ಯೇಷ್ಠಾಃ=**ಕಿಂ ನ ಇಂದ್ರ ಜಿಘಾಂಸಸಿ ಭ್ರಾತರೋ ಮರುತಸ್ತವ** ಎಂಬ ಶ್ರುತಿಯಿಂದ ಇಂದ್ರನೇ ಜ್ಯೇಷ್ಠನಾಗಿ ಉಳ್ಳ, ಪೂಷರಾತಯಃ=ಸರ್ವ ಗುಣ ಪರಿಪೂರ್ಣನಾದುದರಿಂದ ಪೂಷನೆನಿಸಿಕೊಂಡ ಶ್ರೀವಿಷ್ಣುವೇ ಅಭೀಷ್ಟವನ್ನು ಕೊಡುವವನು ಮಿತ್ರನಾಗಿ ಉಳ್ಳ, ಮರುದ್ಗಣಾಃ= (ಸಪ್ತಾನಾಂ ವರ್ಗಃ ಸಪ್ತಕಃ, ೭ ಮರುತಗಳ ಸಮೂಹವು ಸಪ್ತಕವು. ಹೀಗೆಯೇ ೭—೭ ಗುಂಪಾಗಿ ಇದ್ದು ೪೯ ಸಂಖ್ಯೆಯುಳ್ಳ) ಮರುತಗಳ ಸಮೂಹ ಭೂತರಾದ, (ಹಿಂದಿನ ಋಕ್ಕಿನಲ್ಲಿ ಗಣೇನ ಎಂದು ಏಕವಚನವಿದ್ದರೂ (ಮಹಾಗಣವು ಒಂದೆಯಾಗಿದ್ದರೂ) ಅವಾಂತರ ಗಣವನ್ನು ವಿವಕ್ಷಾ ಮಾಡಿಯೇ ಇಲ್ಲಿ ಮರುದ್ಗಣಾಃ ಎಂದು ಬಹು ವಚನವನ್ನು ಹೇಳಿದ್ದು) ಹೇ ದೇವಾಸಃ=ಎಲೋ ದೇವತೆಗಳೇ, ವಿಶ್ವೇ=ನೀವೆಲ್ಲರೂ ಮಮ=ನನ್ನ, ಹವಂ=ಆಹ್ವಾನವನ್ನು ಶ್ರುತ=(ಶ್ರುಶ್ರವಣೇ) ಕೇಳಿರಿ. ॥ ೮ ॥

ಭಾ ॥ ಪೂಷಾ ಪೂರ್ಣತ್ವತೋ ವಿಷ್ಣುಸ್ತನ್ಮಿತ್ರಾಃ ಪೂಷರಾತಯಃ ॥ ೮ ॥

ಅ ॥ ಪುಷ ಪುಷ್ಟೌ ಎಂಬ ಧಾತು ನಿಷ್ಪನ್ನವಾದ ಪೂಷಾ=ಸರ್ವಗುಣ ಪರಿಪೂರ್ಣನಾದ ಶ್ರೀವಿಷ್ಣುವು. ಆ ವಿಷ್ಣುವೇ ಮಿತ್ರನಾಗಿ ಉಳ್ಳವರು, ಪೂಷರಾತಯಃ ಎನಿಸುತ್ತಾರೆ. ॥ ೮ ॥

ಋ ॥ (೨೩೮) ಹತ ವೃತ್ರಂ ಸುದಾನವ ಇಂದ್ರೇಣ ಸಹಸಾ ಯುಜಾ ।

ಮಾ ನೋ ದುಃಶಂಸ ಈಶತ ॥ ೯ ॥

ಅ ॥ ಹೇ ಸುದಾನವಃ=(ದಾಣ್‌ದಾನೇ) ಅತೀವ ದಾನಶೀಲರಾದ ಮರುತ್‌ಗಳೇ, ಸಹಸಾ=ಬಲರೂಪನಾದ, ಬಲವುಳ್ಳ ಅಥವಾ ಬಲಾಭಿಮಾನಿಯಾದ, ಇಂದ್ರೇಣ=ಇಂದ್ರನಿಂದ ಯುಜಾ=ಕೂಡಿರುವುದರಿಂದ, (ಅಂದರೆ ಇಂದ್ರ ದೇವರಿಂದ ಸಹಿತರಾದವರಾಗಿ) ವೃತ್ರಂ= (ಯಥಾರ್ಥಜ್ಞಾನಕ್ಕೆ ಆವರಕವಾಗಿರುವುದರಿಂದ) ಅಜ್ಞಾನವನ್ನು (ಇತರರ ಅಜ್ಞಾನ ನಿವೃತ್ತಿಗಿಂತ ತನ್ನ ಅಜ್ಞಾನ ನಿವೃತ್ತಿಯು ಅತ್ಯಾವಶ್ಯಕವಾಗಿರುವುದರಿಂದ) ನನ್ನ ಅಜ್ಞಾನವನ್ನು ಹತ=ನಾಶಗೊಳಿಸಿರಿ. ಮತ್ತು, ದುಃಶಂಸಃ (ಶಂಸಕಥನೇ) ದುಷ್ಟವಾದ ಶಾಸ್ತ್ರವು, ಅಥವಾ ದುಶ್ಶಾಸ್ತ್ರದಿಂದ ಅತಿರಿಕ್ತವಾದ ದುಷ್ಟವಾದ ಮಾತು, ಅಥವಾ ದುಃಶಂಸಃಯಸ್ಯ ಎಂಬ ವ್ಯುತ್ಪತ್ತಿಯಿಂದ ದುಷ್ಟವಾದ ವಚನವುಳ್ಳ ಪುರುಷನು, ನಃ=ನಮಗೆ, ಮಾಈಶತ=ಶಕ್ತವಾ(ನಾ)ಗಲಾರದು. (ಅಂದರೆ ಅಜ್ಞಾನವನ್ನು ಹುಟ್ಟಿಸಲಿಕ್ಕೆ ಸಮರ್ಥವಾಗಲಾರನು. (ಪೂರ್ವಾರ್ಧದಲ್ಲಿ ಹುಟ್ಟಿದ ಅಜ್ಞಾನವು ನಾಶವಾಗಬೇಕೆಂದೂ ಉತ್ತರಾರ್ಧದಲ್ಲಿ ಹೊಸತಾಗಿ ಅಜ್ಞಾನವು ಹುಟ್ಟಬಾರದೆಂದೂ ಪ್ರಾರ್ಥಿಸಿದ್ದು ಎಂದಭಿಪ್ರಾಯವು ಉಕ್ತವಾಯ್ತು. ॥ ೯ ॥

ಭಾ ॥ ಸಹಸಾ ಬಲರೂಪೇಣ ಶಕ್ರೇಣ ಸಹಿತಾಃ ಸುರಾಃ । ಮದಜ್ಞಾನಂ ಹತಾತೀವ ದಾನಶೀಲಾವಶಕ್ನುಯಾತ್ । ದುರ್ವಾಕ್ತದ್ವಾನ್ ಪುಮಾನ್ಮಾನೋ ॥ ೯ ॥

ಅ ॥ ಅತ್ಯಂತ ದಾನಶೀಲರಾದ, ಮರುತ್ ದೇವತೆಗಳೇ ಬಲಂ ರೂಪಂ=ಧರ್ಮವು, ಅಥವಾ ಪ್ರತಿಮೆಯು ಯಸ್ಯ ಎಂಬ ವ್ಯುತ್ಪತ್ತಿಯಿಂದ ಬಲವುಳ್ಳವನೂ ಬಲಾಭಿಮಾನಿಯೂ ಆದ ಇಂದ್ರನಿಂದ ಕೂಡಿದವರಾಗಿ ನನ್ನ ಅಜ್ಞಾನವನ್ನು ನಾಶಗೊಳಿಸಿರಿ. ದುರ್ವಚನವು ಅಥವಾ ದುರ್ವಚನವುಳ್ಳ ಪುರುಷನು, ನಮಗೆ ಅಜ್ಞಾನವನ್ನು ಹುಟ್ಟಿಸಲಿಕ್ಕೆ ಸಮರ್ಥವಾಗಬಾರದು. (ನಾಗಲಾರನು) ॥ ೯ ॥

ಅವ ॥ ೩ ಋಕ್ಕುಗಳು. ವಿಶ್ವೇದೇವ ದೇವತಾಕವು

ಋ॥ (೨೪೯) ವಿಶ್ವಾನ್ ದೇವಾನ್ ಹವಾಮಹೇ ಮರುತಃ ಸೋಮಪೀತಯೇ। ಉಗ್ರಾಹಿ ಪೃಶ್ನಿಮಾತರಃ ॥ ೧೦ ॥ ೯ ॥

ಅ ॥ ಹಿ=ಯಾವ ಕಾರಣದಿಂದ ಪೃಶ್ನಿಮಾತರಃ=ಪೃಶ್ನಿರ್ಮಾತಾ ಯೇಷಾಂ ಎಂಬ ವ್ಯುತ್ಪತ್ತಿಯಿಂದ ಗೋರೂಪವುಳ್ಳವಳೂ, ವಾಗ್ರೂಪವುಳ್ಳವಳೂ, ದ್ಯುರೂಪವುಳ್ಳವಳೂ ಆದ ಭಾರತೀ ದೇವಿಯು ತಾಯಿಯಾಗಿಉಳ್ಳ, ಸಮಸ್ತ ದೇವತೆಗಳು, ಉಗ್ರಾಃ=ಶತ್ರುಗಳಿಂದ ಸಹಿಸಲಶಕ್ಯವಾಗಿರುತ್ತಾರೋ, (ಆದ ಕಾರಣ) (ನಾವು) ವಿಶ್ವಾನ್ ದೇವಾನ್=ಸಮಸ್ತ ದೇವತೆಗಳನ್ನು, ಮರುತಃ=ಮರುತಗಳನ್ನೂ ಕೂಡ, ಸೋಮಪೀತಯೇ=ಸೋಮಪಾನಮಾಡುವುದಕ್ಕಾಗಿ, ಹವಾಮಹೇ=ಕರೆಯುತ್ತೇವೆ. ॥ ೧೦ ॥

ಭಾ ॥ ಭಾರತೀ ಪೃಶ್ನಿರುಚ್ಯತೇ ।ಗೋರೂಪಾಚ ಕ್ವಚಿತ್ಸಾಭೂತ್ತತ್ಸುತಾಶ್ಚಾಖಿಲಾಃ ಸುರಾಃ। ಅನ್ಯತ್ರಾಪಿ ಸುತಾಸ್ತಸ್ಯಾಃ ॥ ೧೦ ॥ ೯ ॥

ಅ ॥ (೧) ಪೃಶ್ನಿಮಾತರಃ ಎನ್ನುವುದರ ಅರ್ಥ ಹೇಳುತ್ತಾರೆ) ಪೃಶ್ನಿ ಶಬ್ದದಿಂದ ಭಾರತಿಯು ಹೇಳಲ್ಪಡುತ್ತಾಳೆ- (ಹೇಗೆಂದರೆ) **ಪೃಶ್ನಿಃ ನಾಕಃ ಗೌಃ** ಎಂದು ಸಾಧಾರಣ ನಾಮಗಳಲ್ಲಿ ಪೃಶ್ನಿ ಶಬ್ದವು ಗೋಶಬ್ದದಿಂದ ಸಹ ಪಠಿತವಾಗಿದೆ. ಗೋಶಬ್ದಕ್ಕೆ ವಾಕ್ ಎಂದು ಅರ್ಥವಿದೆ. ಆದಕಾರಣ ಅದರೊಂದಿಗೆ ಪಾಠವಿದ್ದ ಪ್ರಯುಕ್ತ ಪೃಶ್ನಿಶಬ್ದಕ್ಕೂವಾಕ್ ಎಂದು ಅರ್ಥವಿದೆ.ನಾಕಶಬ್ದದಿಂದ ಸಹಪಾಠವಿದ್ದ ಪ್ರಯುಕ್ತ ಪೃಶ್ನಿಶಬ್ದಕ್ಕೆ ಸ್ವರ್ಗವೆಂಬ

ಅರ್ಥವೂಇದೆ.ಆದ ಕಾರಣ) ಪ್ರಶ್ನಿ ಶಬ್ದಕ್ಕೆ ಗೋರೂಪವುಳ್ಳ,ವಾಗ್ರೂಪವುಳ್ಳ, ಮತ್ತು ದ್ಯುರೂಪವುಳ್ಳ ಭಾರತಿಯೆಂಬರ್ಥವು.ಕೆಲವು ಕಾಲದಲ್ಲಿ ಅಥವಾ ಕೆಲವು ಕಾರ್ಯ ವಿಶೇಷಕ್ಕಾಗಿ ಆ ಭಾರತಿಯು ಗೋರೂಪವುಳ್ಳವಳಾಗಿದ್ದಳು. ಎಲ್ಲಾ ದೇವತೆಗಳೂ ಆ ಭಾರತಿಯ ಮಕ್ಕಳು, ಆದ ಕಾರಣ ದೇವತೆಗಳು ಪ್ರಶ್ನಿಮಾತರಃ ಎನಿಸುತ್ತಾರೆ. ಭಾರತಿಯು (ಅನ್ಯತ್ರ) ವೇದ ದ್ಯು ಇತ್ಯಾದಿಗಳಿಗೆ ಅಭಿಮಾನಿಯು. ಆದಾಗ್ಯೂ ಪ್ರಶ್ನಿ ಶಬ್ದವು ವಾಗಾದಿನಾಮವುಳ್ಳದ್ದೂ ಆಗುತ್ತದೆ.) ಆದ ಕಾರಣ ಅನ್ಯತ್ರಾಪಿ ದೇವತೆಗಳು ಆ ಭಾರತಿಯ ಮಕ್ಕಳು. (ಭಾರತಿಯು ಗೋರೂಪಳಾದುದರಿಂದಲೂ ವೇದಗಳಿಗೆ ಅಭಿಮಾನಿನಿಯು ಆದುದರಿಂದಲೂ ಗೋವಾಕ್‌ದ್ಯುಪರ್ಯಾಯ ಪ್ರಶ್ನಿ ಶಬ್ದದಿಂದ ಭಾರತಿಯು ಹೇಳಲ್ಪಡುತ್ತಾಳೆ.) ॥ ೧೦ ॥ ೯ ॥

ಋ ॥(೨೪೦) ಜಯ॑ತಾಮಿವ ತನ್ಯತುರ್ಮ॒ರುತಾ॑ಮೇತಿ ಧೃಷ್ಣು॒ಯಾ।

ಯಚ್ಛುಭಂ॑ ಯಾ॒ಥನಾ॑ ನರಃ ॥ ೧೧ ॥

ಅ ॥ ಹೇನರಃ=ಎಲೊ ವಿಶ್ವೇ ದೇವತೆಗಳಿರಾ, ಯತ್=ಯಾವಾಗ,ಶುಭಂ=ಉತ್ತಮನಾದ ಶ್ರೀವಿಷ್ಣುವನ್ನು ಅಥವಾ ವಾಯುವನ್ನು ಕುರಿತು, ಯಾಥತ=ಪ್ರಾರ್ಥಿಸುತ್ತೀರೋ, (ಆಗ) ಮರುತಾಂ=ಮರುತ್‌ಗಳಾದ ನಿಮ್ಮ, ತನ್ಯತುಃ=(ತನುವಿಸ್ತಾರೆ.) ಧ್ವನಿಯು, (ಸಂಗ್ರಾಮದಲ್ಲಿ)ಜಯತಾಮಿವ=ಜಯಶೀಲರಾದ ರಾಜರ ಧ್ವನಿಯೆಂಬಂತೆ, ಧೃಷ್ಣುಯಾ=(ಞಧೃಷಾ ಪ್ರಾಗಲ್ಭ್ಯೇ) ಧೈರ್ಯದಿಂದ, ಏತಿ=ಪ್ರವೃತ್ತವಾಗುತ್ತದೆ. ॥ ೧೧ ॥

ಭಾ ॥ ಜಯತಾಮಿವ ತದ್ಧ್ವನಿಃ । ಧೈರ್ಯಾದ್ಯಾತಿ ಯದಾ ವಿಷ್ಣುಂ ವಾಯುಂ ವಾ ಯಾಥನೋತ್ತಮಂ ॥ ೧೧ ॥

ಅ ॥ ಯಾವಾಗ ಸರ್ವೋತ್ತಮನಾದ ಶ್ರೀ ವಿಷ್ಣುವನ್ನು ಅಥವಾ ವಾಯುದೇವರನ್ನು ಪ್ರಾರ್ಥಿಸುತ್ತೀರೋ, ಆಗ ಆ ಮರುತ್‌ಗಳಾದ ನಿಮ್ಮ ಧ್ವನಿಯು, (ರಣಾಂಗಣದಲ್ಲಿ) ಜಯಶೀಲರಾದ ರಾಜರ ಧ್ವನಿಯಂತೆ ಧೈರ್ಯದಿಂದ ಪ್ರವೃತ್ತವಾಗುತ್ತದೆ. ॥ ೧೧ ॥

ಋ ॥ (೨೪೧) ಹ॒ಸ್ಕಾ॒ರಾದ್ವಿ॒ದ್ಯುತ॒ಸ್ಪರ್ಯತೋ॒ ಜಾತಾ ಅ॑ವಂತು ನಃ ।

ಮ॒ರು॑ತೋ ಮೃಳಯಂತು ನಃ ॥ ೧೨ ॥

ಅ ॥ (ಯಾವ ಸಮಸ್ತ ದೇವತೆಗಳೂ) ಮರುತಃ=ಮರುತ್‌ಗಳೂ ಕೂಡ, ಹಸ್ಕಾರಾತ್=ನಿರ್ದೋಷಗುಣ ವಿಶಿಷ್ಟರಾದ ವಾಯುದೇವರಿಂದ, ವಿದ್ಯುತಃ=(ದ್ಯುತದೀಪ್ತೌ, ವಿಶೇಷೇಣ ದ್ಯೋತತೇ ಜಾನಾತೀತಿ ವಿದ್ಯುತ್) ವಿಶೇಷತಃ ಜ್ಞಾನವುಳ್ಳ ಭಾರತಿಯಿಂದಲೂ, ಪರಿ=ಚೆನ್ನಾಗಿ ಜಾತಾಃ=ಹುಟ್ಟಿರುತ್ತಾರೋ, ಅತಃ=ಚೆನ್ನಾಗಿ ಹುಟ್ಟಿರುವುದರಿಂದಲೇ (ಅವರು) ನಃ=ನಮ್ಮನ್ನು, ಅವಂತು=ರಕ್ಷಿಸಲಿ. ನಃ=ನಮ್ಮನ್ನು, ಮೃಳಯಂತು=ಸುಖಿಗಳನ್ನಾಗಿ ಮಾಡಲಿ. ॥ ೧೨ ॥

ಭಾ ॥ (೧) ದೋಷತ್ಯಾಗಾದ್ಗುಣಪ್ರಾಪ್ತೇರ್ಹಸ್ಕಾರೋ ವಾಯುರುಚ್ಯತೇ ॥ (೨) ವಿದ್ಯುದ್ವಿಶಿಷ್ಟಜ್ಞಾನತ್ವಾದ್ಭಾರತೀ (೩) ತತ್ಸುತಾ ಹಿ ತೇ । ಸರ್ವದೇವಾಶ್ಚ ಮರುತೋ ರಕ್ಷಂತ್ವೇತಾದೃಶೋ ಹರಿಃ ॥ ತತ್ತದಂತರ್ಗತತ್ವೇನ ॥ ೧೨ ॥

ಅ ॥ (೧) (ಹಸ್ಕಾರ ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ) (ಓಹಾಕ್ ತ್ಯಾಗೇ ಎಂಬುವ ಧಾತು ವ್ಯಾಖ್ಯಾನದಿಂದ ತ್ಯಜತಿ ದೋಷಾನ್ ಹಃ=ದೋಷಗಳಿಲ್ಲದವನು, ಸ್ವೇನ ಸಹಕರೋತಿಗುಣಾನ್ಃ ಗುಣಗಳನ್ನು ತನ್ನಿಂದ ಸಂಬದ್ಧಗಳನ್ನಾಗಿ ಮಾಡುತ್ತಾನೆಂಬ ವ್ಯುತ್ಪತ್ತಿಯಿಂದ ಸ್ಕಾರಃ, ಹಶ್ಚಾಸೌ ಕಾರಶ್ಚ ಹಸ್ಕಾರಃ । ಏವಂಚ) ದೋಷಗಳನ್ನು ಪರಿತ್ಯಾಗ ಮಾಡಿದುದರಿಂದಲೂ, ಸಮಸ್ತ ಗುಣಗಳನ್ನು ಹೊಂದಿರುವುದರಿಂದಲೂ ಹಸ್ಕಾರ ಶಬ್ದ ದಿಂದ ವಾಯುವು ಹೇಳಲ್ಪಡುತ್ತಾನೆ. (೨) (ವಿದ್ಯುತ್ ಶಬ್ದಾರ್ಥವನ್ನು ಹೇಳುತ್ತಾರೆ)ದ್ಯುತದೀಪ್ತೌ ಎಂಬ ಧಾತು ವ್ಯಾಖ್ಯಾನದಿಂದ ವಿಶೇಷೇಣ ದ್ಯೋತತೇ ಜಾನಾತಿ ಎಂಬ ವ್ಯುತ್ಪತ್ತಿಯಿಂದ ಸರ್ವೋತ್ಕೃಷ್ಟ ಜ್ಞಾನವಿದ್ದುದ ರಿಂದ ವಿದ್ಯುತ್ ಶಬ್ದದಿಂದ ಭಾರತಿಯು ಹೇಳಲ್ಪಡುತ್ತಾಳೆ. (೩) (ಋಕ್ಕನ್ನು ವ್ಯಾಖ್ಯಾನ ಮಾಡುತ್ತಾರೆ) ಸಮಸ್ತ ದೇವತೆಗಳೂ ಮರುತ್‌ಗಳೂ ಕೂಡ (ಪ್ರಾಣ ಭಾರತಿಯರಿಂದ ಹುಟ್ಟಿರುವುದರಿಂದಲೇ) ಅವರು ಪ್ರಾಣ ಭಾರತಿಯರ ಮಕ್ಕಳು. ಹಿ=ಪ್ರಸಿದ್ಧ. (ವಿಶಿಷ್ಟ ಮಾತಾಪಿತೃಗಳಿಂದ ಹುಟ್ಟಿರುವುದರಿಂದಲೇ) ಅವರು ನಮ್ಮನ್ನು ರಕ್ಷಿಸಲಿ. (ಮತ್ತು ಸುಖಿಗಳನ್ನಾಗಿ ಮಾಡಲಿ.) (ಶ್ರೀ ಹರಿಯಲ್ಲಿ ವಾಯು ಭಾರತಿ ಪುತ್ರತ್ವವನ್ನುಪಪಾದಿಸು ತ್ತಾರೆ) ಶ್ರೀ ಹರಿಯೂ ಕೂಡ ಆಯಾವ ಮರುದಾದಿಗಳಲ್ಲಿ ಅಂತರ್ಗತನಾಗಿರುವ ಕಾರಣ ಭಾರತೀ ವಾಯುಗಳ ಪುತ್ರನೆಂದು ಹೇಳಲ್ಪಡುತ್ತಾನೆ. ॥ ೧೨ ॥

ಅವ ॥ ೩ ಋಕ್ಕುಗಳು ಪೂಷದೇವತಾಕಗಳು.

ಋ ॥ (೨೪೨) ಆ ಪೂಷನ್ ಚಿತ್ರಬರ್ಹಿಷಮಾಘೃಣೇ ಧರುಣಂ ದಿವಃ ।
ಆಜಾ ನಷ್ಟಂ ಯಥಾ ಪಶುಂ ॥ ೧೩ ॥

ಅ ॥ ಹೇ ಆಘೃಣೇ=(ಆ ಘೃಣಯಃ ರಶ್ಮಯಃಯಸ್ಯ) ಚೆನ್ನಾಗಿ ಸರ್ವತ್ರ ರಶ್ಮಿಗಳುಳ್ಳ ಪೂಷನ್=ಸರ್ವ ಗುಣ ಪರಿಪೂರ್ಣನಾದುದರಿಂದ ಪೂಷನ್ ಎನಿಸಿದ ಶ್ರೀಹರಿಯೇ, ಮತ್ತು ಪೂಷದೇವತೆಯೇ, ಚಿತ್ರಬರ್ಹಿಷಂ= ವಿಚಿತ್ರವಾದ ನಾನಾ ವಿಧ ಪೂರ್ಣತ್ವವುಳ್ಳ ಚತುರ್ಮುಖ ಬ್ರಹ್ಮನನ್ನು (ನೀನು ನಮ್ಮನ್ನು ಕುರಿತು) ಆ ಅಜ= (ಅಜಗತೌ) ಗುರವನ್ನಾಗಿ ಹೊಂದಿಸಿಕೊಡು. ದಿವಃ=ಭಾರತೀ ದೇವಿಗೆ, ಧುರುಣಂ=ಧಾರಕನಾದ ಪತಿಯಾದ ವಾಯುವನ್ನು ಕೂಡ, ನಷ್ಟಂ ಪಶುಂ ಯಥಾ= (ನಶ ಅದರ್ಶನೇ ಎಂಬ ಧಾತು ವ್ಯಾಖ್ಯಾನದಿಂದ) ಅತ್ತಿತ್ತಾ ಹೋಗಿರುವುದರಿಂದ ನಷ್ಟವಾದ ಅದೃಷ್ಟವಾದ ಗೋವನ್ನೆಂಬಂತೆ, (ಅಂದರೆ ನಷ್ಟವಾದ (ದೇಶಾಂತರಕ್ಕೆ ಹೋದ) ಗೋವನ್ನು ಹೇಗೆ ಆದರದಿಂದ ಬರುವಂತೆ ಮಾಡುತ್ತಾರೋ, ಹಾಗೆಯೇ) ಆ ಅಜ=ಹೊಂದಿಸಿಕೊಡು. ಅಥವಾ (ನಮಗಾಗಿ ತಾವು) ಆ ಆಜ=(ಆದಿಕಾಲದಲ್ಲಿ (ಸೃಷ್ಟಿಕಾಲದಲ್ಲಿ) ಭಾರತೀ ಪ್ರಾಣರನ್ನು) ಹೊಂದುವವರಾಗಿರು ತ್ತೀರಿ. ॥ ೧೩ ॥

ಭಾ ॥ (೧) ಪೂಷಾ ಪೂರ್ಣತ್ವತಶ್ಚ ಸಃ । ಆ ಘೃಣಿಃ ಪೂರ್ಣರಶ್ಮಿತ್ವಾ (೨) ದಾಜನಶ್ಚಿತ್ರ ಬರ್ಹಿಷಂ । ಬ್ರಹ್ಮಾಣಂ ಚ ದಿವೋ ದೇವ್ಯಾ ಭರ್ತಾರಂ ವಾಯುಮಾಜಗಾಂ । ಯಥಾಗತಂ ॥ ೧೩ ॥

ಅ ॥ (೧) ಸರ್ವಗುಣ ಪರಿಪೂರ್ಣನಾದುದರಿಂದ ಶ್ರೀಹರಿಯು ಪೂಷಾ ಎನಿಸುತ್ತಾನೆ. ಪೂರ್ಣರಶ್ಮಿಗ ಳಿದ್ದುದರಿಂದ ಆಘೃಣಿಃ ಎನಿಸುತ್ತಾನೆ. (೨) (ಋಕ್ಕನ್ನು ವಾಖ್ಯಾನಮಾಡುತ್ತಾರೆ) ಚಿತ್ರ ಬರ್ಹಿಷಂ=ಚಿತ್ರ= ನಾನಾ ವಿಧವಾದ, ಬರ್ಹಿಷಂ=ಪೂರ್ಣತ್ವವುಳ್ಳ, (ಜ್ಞಾನ ಭಕ್ತ್ಯಾದಿಗುಣಗಳು ಬಹು ವಿಧಗಳಾಗಿರುವುದರಿಂದ ಪೂರ್ಣತ್ವವೂ ಕೂಡ ನಾನಾವಿಧವು.) ಬ್ರಹ್ಮನನ್ನು ಕೂಡ ನಮ್ಮನ್ನು ಕುರಿತು ಗುರುವನ್ನಾಗಿ ಹೊಂದಿಸಿ ಕೊಡು. ಮತ್ತು ಭಾರತೀ ದೇವಿಗೆ ಪತಿಯಾದ ಪ್ರಿಯನಾದ ವಾಯುವನ್ನು ಕೂಡ ನಷ್ಟವಾದ ಗೋವನ್ನು ಹೊಂದಿಸಿ ಕೊಡುವಂತೆ ಹೊಂದಿಸಿ ಕೊಡು. ॥ ೩೧ ॥

ಋ ॥ (೨೪೩) ಪೂಷಾ ರಾಜಾನಮಾಘೃಣಿರಪಗೂಳ್ಹಂ ಗುಹಾಹಿತಂ ।
ಅವಿಂದಚ್ಚಿತ್ರಬರ್ಹಿಷಂ ॥ ೧೪ ॥

ಅ ॥ ಆಘೃಣಿಃ=ಪೂರ್ಣರಶ್ಮಿಗಳುಳ್ಳ, ಪೂಷಾ=ಪೂರ್ಣನಾದ, ಶ್ರೀಹರಿಯು, ರಾಜಾನಂ= ಜಗತ್ತಿಗೆ ರಾಜನಾದ, ಜಗತ್ತನ್ನು ರಂಜಿಸುವ, ಗುಹಾಹಿತಂ=ಸರ್ವರಿಗೂ ನಿಯಾಮಕನಾಗಿ ಹೃದಯ ಗುಹೆಯಲ್ಲಿ ಇರುವ, ಅಪಗೂಳ್ಹಂ=ತನ್ನ ಕುಕ್ಷಿಯಲ್ಲಿ ಗೂಢವಾಗಿರುವ, ಚಿತ್ರ ಬರ್ಹಿಷಂ = ನಾನಾ ವಿಧ ಪೂರ್ಣತ್ವವುಳ್ಳ, ಬ್ರಹ್ಮನನ್ನು ಅವಿಂದತ್ =(ವಿದ್ಲೃ ಲಾಭೇ) (ಪುತ್ರನನ್ನಾಗಿ) ಹೊಂದಿದನು. ॥ ೧೪ ॥

ಭಾ ॥ ಜಗದ್ರಾಜಮವಿಂದದ್ಭಗವಾನ್ ಸುತಂ । ಸ್ವಕುಕ್ಷಿಗೂಢಂ ಬ್ರಹ್ಮಾಣಂ ॥ ೧೪ ॥

ಅ ॥ ಶ್ರೀಹರಿಯು ಜಗತ್ತಿಗೆ ರಾಜನಾದ, ತನ್ನ ಹೊಟ್ಟೆಯಲ್ಲಿ ಗೋಪ್ಯನಾಗಿರುವ, ಚತುರ್ಮುಖನನ್ನು ಮಗನನ್ನಾಗಿ ಹೊಂದಿದನು (ಹಿಂದಿನಋಕ್ಕಿನಲ್ಲಿ ಹೇಳಿದ್ದ ಅರ್ಥವನ್ನು ಪುನಃ ಹೇಳಿದ್ದು ಅಭ್ಯಾಸಕ್ಕಾಗಿ) (ಆದರಾತಿಶಯವನ್ನು ತೋರಿಸುವುದಕ್ಕಾಗಿ ಮತ್ತು ವಿಶೇಷಣಾಂತರಗಳನ್ನು ಹೇಳಿದುದರಿಂದ ಅಧಿಕ ವಿಧಾನಕ್ಕಾಗಿಯೂ ಎಂದು ತಿಳಿಯ ಬೇಕು.) ॥ ೧೪ ॥

ಋ ॥ (೨೪೪) ಉತೋ ಸ ಮಹ್ಯಮಿಂದುಭಿಃ ಷಡ್ಯುಕ್ತಾँ
ಅನು ಸೇಷಿಧತ್ ।ಗೋಭಿರ್ಯವಂ ನ ಚರ್ಕೃಷತ್ ॥ ೧೫ ॥ ೧೦ ॥

ಅ ॥ ಉತೋ=ಮತ್ತು, ಸಃ=ಪೂಷನೆನಿಸಿದ ಶ್ರೀಹರಿಯು, ಇಂದುಭಿಃ=ಸೋಮಗಳಿಂದ (ತೃಪ್ತಿಯನ್ನು ಹೊಂದಿದವನಾಗಿ) ಮಹ್ಯಂ=ನನಗಾಗಿ, ಷಟ್=ಷಡಿಂದ್ರಿಯಗಳನ್ನು ಯುಕ್ತಾನ್=ಅರ್ಥಗಳಿಂದ ಸನ್ನಿಕೃಷ್ಟಗಳನ್ನಾಗಿ, ಚರ್ಕೃಷತ್=(ಕೃಷ ವಿಲೇಖನೇ) ಮಾಡಿದನು. ಅನುಸೇಷಿ (ಸಿ) ಧತ್=(ಷಿಧಗತ್ಯಾಂ) ಸಾಧಿಸಿದನು. (ಶಕ್ತಿಯುಕ್ತಗಳನ್ನಾಗಿ ಮಾಡಿದನು.) ಗೋಭಿಃ=ಜಲಗಳಿಂದ, (ನೀರನ್ನು ಸೇಚಿಸಿ) ಯವಂ ನ= ಧಾನ್ಯವಿಶೇಷವನ್ನು ಹೇಗೆ ಮಾಡುತ್ತಾರೋ, ವೀರ್ಯಯುಕ್ತವನ್ನಾಗಿ ಸಾದಿಸುತ್ತಾರೋ ಹಾಗೆಯೇ ॥ ೧೫ ॥

ಭಾ ॥ ಮಹ್ಯಂ ಸೋಮೈಶ್ಚ ತರ್ಪಿತಃ । ಸಾಧಯಾಮಾಸ ಷಡ್ಯುಕ್ತಾನೀಂದ್ರಿಯಾಣಿ ಚಕಾರ ಚ । ಸಾಧನಂ ಶಕ್ತಿದಾನಂ ತು ಗೋಭಿರ್ನಾಭಿರ್ಯಥಾಯವಂ ॥ ೧೫ ॥ ೧೦ ॥

ಅ ॥ ಶ್ರೀಹರಿಯು ಸೋಮಗಳಿಂದ ತೃಪ್ತಿಯನ್ನು ಹೊಂದಿದವನಾಗಿ ನನಗಾಗಿ ಚಕ್ಷುರಾದಿ ೬ ಇಂದ್ರಿಯಗಳನ್ನು ವಸ್ತುಗಳಿಂದ ಸನ್ನಿಕೃಷ್ಟಗಳನ್ನಾಗಿ ಸಾಧಿಸಿದನು. ಮತ್ತು ಸಾಮರ್ಥ್ಯಯುಕ್ತಗಳನ್ನಾಗಿಯೂ ಮಾಡಿದನು. ಜಲಗಳಿಂದ (ನೀರನ್ನು ಸೇಚಿಸಿ) ಧಾನ್ಯ ವಿಶೇಷವನ್ನು ವೀರ್ಯಯುಕ್ತವನ್ನಾಗಿ ಹೇಗೆ ಸಾಧಿಸುತ್ತಾರೋ, ಹಾಗೆಯೇ. (ಕರಣಾತಿರಿಕ್ತವಾದ ಸಾಧನವು ಎಂತಹುದೆಂದರೆ) (ಇಂದ್ರಿಯಗಳಿಗೆ ಕರಣವೆಂದರೆ ಉತ್ಪಾದನವು.) ಸಾಧನವೆಂದರೆ—ವಿಷಯವನ್ನು ಉಪಭೋಗಿಸಲಿಕ್ಕೆ ಸಾಮರ್ಥ್ಯೋತ್ಪಾದನವು. ॥ ೧೫ ॥ ೧೦ ॥

ಅವ ॥ ಈ ೧೫ ಋಕ್ಕುಗಳಿಂದ ಇತರಗಳಾದ ಸಾರ್ಧಸಪ್ತ ಋಕ್ಕು (೭½ ಋಕ್ಕುಗಳು) ಅಪ್‌ದೇವತಾಕಗಳು. **ಪಯಸ್ವಾನ್** ಎಂಬ ಅರ್ಧಋಕ್ಕಿಗೆ ಅಗ್ನಿಯು ದೇವತೆಯು ಮತ್ತು ಅಪ್‌ದೇವತೆಯು. **ಸಂ ಮಾಗ್ನೇ** ಎಂಬ ಋಕ್ಕಿಗೆ ಸರ್ವ ದೇವತೆಗಳೇ ದೇವತೆಗಳು.

ಋ ॥ (೨೪೫) ಅಂಬಯೋ ಯಂತ್ಯಧ್ವಭಿರ್ಜಾಮಯೋ ಅಧ್ವರೀಯತಾಂ।
ಪೃಂಚತೀರ್ಮಧುನಾ ಪಯಃ ॥ ೧೬ ॥

ಅ ॥ ಅಂಬಯಃ=ಜಗತ್ತಿಗೆ ಮಾತೃಭೂತಗಳಾದ ಜಾಮಯಃ=ಜಗತ್ತಿಗೆ ಭಗಿನಿಯರೂ ಆದ, ಅಧ್ವರೀಯತಾಂ=ಅಧ್ವರವನ್ನು ಇಚ್ಛಿಸುವವರಿಗೆ (ಯಜ್ಞ ಮಾಡುವವರಿಗೆ) ಮಧುನಾ=ಸೋಮದಿಂದ ಕೂಡಿ, ಪಯಃ=ಕ್ಷೀರವನ್ನು, ಸೋಮವನ್ನು ಕೂಡ, ಪೃಂಚತೀಃ=(ಪೃಚೀ ಸಂಪರ್ಕೇ) ಪಯಸ್ಸಿನಿಂದ ಸಂಬದ್ಧಗಳಾದ, (ಸೋಮದಲ್ಲಿ ಪಯಸ್ಸಿನಲ್ಲಿ ಉದಕ ಸಂಪರ್ಕವಿದೆ) ನದಿಯಲ್ಲಿರತಕ್ಕ ಜಲಗಳು, ಅಧ್ವಭಿಃ=ಮಾರ್ಗಗಳಿಂದ, ಯಂತಿ=ಹೋಗುತ್ತವೆ. ॥ ೧೬ ॥

ಭಾ ॥ (೧) ಅಂಬಯೋ ಮಾತರೋ ಹ್ಯಾಪಃ ಕಾರಣತ್ವಾತ್ಸಹೋದರಾಃ । ಜಗತೋ ಜಾಮಯೋ ಯಸ್ಮಾತ್ಸಹ ತಾಭಿರ್ವಿವರ್ಧತೇ ॥ (೨) ಅಧ್ವರಂ ಕುರ್ವತಾಂಕ್ಷೀರಂ ಸೋಮಂ ಚಾಪಿ ಪ್ರಪೃಂಚತೀಃ । ಸಂಪೃಕ್ತಾಃ ॥ ೧೬ ॥

ಅ ॥ (೧) ಇಲ್ಲಿ ಅಂಬಾ ಶಬ್ದದ ಪರ್ಯಾಯವು ಅಂಬಿ ಶಬ್ದವು.) ಜಗತ್ತಿಗೆ ಮಾತೃಗಳು ಯಾವವೆಂದರೆ) ಜಲಗಳು. (**ಆಪೋದೇವೀಃ** ಇತ್ಯಾದಿಗಳಲ್ಲಿ ಅಪ್‌ಶಬ್ದವು ಶ್ರುತವಾಗಿದೆ. ಅವುಗಳು ಈ ಪ್ರಕರಣದಲ್ಲಿ ಪ್ರತಿಪಾದ್ಯಗಳಾಗಿವೆ ಮತ್ತು **ಅಂಬಯೋ ಯಂತ್ಯಧ್ವಬಿರಿತ್ಯಾಪೋ ವಾ ಅಂಬಯಃ** ಎನ್ನುವ ಬ್ರಾಹ್ಮಣದಿಂದಲೂ ಜಲಗಳು ಮಾತೃಭೂತಗಳೆಂದು ಹಿ ಶಬ್ದದಿಂದ ಹೇಳಿದರು) ಜಗತ್ತಿಗೆ ಕಾರಣಗಳಾಗಿರುವುದರಿಂದ ಜಲಗಳು ಮಾತೃಗಳೆನಿಸುತ್ತವೆ. ಮತ್ತು ಜಗತ್ತಿಗೆ ಜಾಮಯಃ=ಸಹೋದರಗಳೂ ಆಗಿರುತ್ತವೆ. (ಹೇಗೆಂದರೆ) ಯಾವ ಕಾರಣದಿಂದ ಜಲಗಳಿಂದ ಕೂಡಿಯೇ ಅಭಿವೃದ್ಧಿಯನ್ನು ಹೊಂದುತ್ತದೋ ಪಾರ್ಥಿವಾದಿ ಭಾಗಚತುಷ್ಟಯಾತ್ಮಕವಾದ ಜಗತ್ತು ಅಭಿವೃದ್ಧಿಯನ್ನು ಹೊಂದುವಾಗ ಅಧಿಕವಾದ ಜಲಭಾಗದಿಂದ ಕೂಡಿಕೊಂಡೇ ಅಭಿವೃದ್ಧಿಯನ್ನು ಹೊಂದುತ್ತದೋ,) ಆದಕಾರಣ ಜಲಗಳು ಸಹೋದರಗಳೆನಿಸುತ್ತವೆ. (೨) (ಅಧ್ವರೀಯತಾಂ ಇತ್ಯಾದಿಗಳನ್ನು ವ್ಯಾಖ್ಯಾನ ಮಾಡುತ್ತಾರೆ.) (ಯದ್ಯಪಿ ಅಧ್ವರೀಯತ್ ಶಬ್ದವು ಯಜ್ಞವನ್ನು ಇಚ್ಛಿಸುವವರನ್ನು ಹೇಳುತ್ತದೆ. ಆದಾಗ್ಯೂ ಇಚ್ಛಾಸಮಯದಲ್ಲಿ ಸೋಮಸವನವಿಲ್ಲದಿದ್ದ ಪ್ರಯುಕ್ತ **ಪೃಂಚತೀರ್ಮಧುನಾ** ಎಂದು ಹೇಳಿದ ಸೋಮ ಸಂಬಂಧವು ಕೂಡುವುದಿಲ್ಲ. ಸೋಮಸವನಕಾಲದಲ್ಲಿ ಆದರೂ ಯಜ್ಞವು ಉಂಟಾಗಿರುವುದರಿಂದ ಇಚ್ಛೆಯೇ ಕೂಡುವುದಿಲ್ಲ. ಆದಕಾರಣ ಇಚ್ಛೆಯಿಂದ ಕರಣವನ್ನು ಉಪಲಕ್ಷಣಯಾ ಸ್ವೀಕರಿಸಿ ಅಧ್ವರಂ ಕುರ್ವತಾಂ ಎಂದು ಹೇಳಿರುವರು.) ಯಾಗವನ್ನು ಮಾಡುವವರಿಗೆ ಪಯಃ=ಕ್ಷೀರವನ್ನೂ ಸೋಮವನ್ನೂ, (ಪೃಚೀಸಂಪರ್ಕೇ) ಸಂಪರ್ಕಿಸುವ,(ಪಯಸ್ಸಿನಿಂದ ಸಂಬದ್ಧಗಳಾಗುವ) ನದಿಯಲ್ಲಿರತಕ್ಕ ಜಲಗಳು ಮಾರ್ಗಗಳಿಂದ ಹೋಗುತ್ತವೆ. (ತಟಾಕಾದಿಗಳ ಜಲಕ್ಕೆ ಸ್ವತಃ ಗಮನವಿಲ್ಲ. ಮಾರ್ಗಗಳಿಂದ ಗಮನವನ್ನು ಹೇಳಿದುದರಿಂದ ನದಿಯಲ್ಲಿರತಕ್ಕ ಜಲಗಳೇ ವಿವಕ್ಷಿತಗಳು.) ಇಲ್ಲಿ ಜಡಭೂತಗಳಾದ ಜಲಗಳ ಸ್ತುತಿಯು ಕೂಡದಿರುವುದರಿಂದ ಅಭಿಮಾನಿನಯನ್ಯಾಯದಿಂದಲೂ ದೇವೀಃ ಎಂದು ಶ್ರುತವಾದುದರಿಂದಲೂ ಆಪಃ ಎಂಬ ಪದದಿಂದ ಅಬ್ದೇವತೆಗಳನ್ನೂ ಶ್ರೀ ಹರಿಯ ಸ್ತ್ರೀರೂಪಗಳನ್ನೂ ಇಟ್ಟುಕೊಳ್ಳಬೇಕು.) ॥ ೧೬ ॥

ಋ ॥ (೨೪೬) ಅಮೂರ್ಯಾ ಉಪ ಸೂರ್ಯೇ ಯಾಭಿರ್ವಾ ಸೂರ್ಯಃ ಸಹ।
ತಾ ನೋ ಹಿನ್ವಂತ್ವಧ್ವರಂ ॥ ೧೭ ॥

ಅ ॥ ಯಾಃ ಅಮೂಃ=ಯಾವ ಈ ಜಲಗಳು, ಉಪಸೂರ್ಯೇ=ಸೂರ್ಯನ ಸಮೀಪದಲ್ಲಿ, ಇರುತ್ತವೋ, ವಾ ಸೂರ್ಯಃ=ಸೂರ್ಯನೂ ಕೂಡ, ಯಾಭಿಃ ಸಹ=ಯಾವ ಜಲಗಳಿಂದ ಕೂಡಿರುತ್ತಾನೋ (ಸದಾ ಸೂರ್ಯನಿಂದ ಕೂಡಿಯೇ ಇರುತ್ತವೋ) ತಾಃ=ಅಂತಹ ಜಲಗಳು, ನಃ=ನಮ್ಮ, ಅಧ್ವರಂ=ಯಜ್ಞವನ್ನು ಹಿನ್ವಂತು=(ಹಿಗತೌ ವೃದ್ಧೌಚ ಎಂಬ ಧಾತು ವ್ಯಾಖ್ಯಾನದಿಂದ) ಗಚ್ಛಂತು=ಹೊಂದಲಿ ಮತ್ತೂ ಅಭಿವೃದ್ಧೀ ಕರಿಸಲಿ ॥ ೧೭ ॥

ಭಾ ॥ ಯಾಃ ಸಮೀಪಸ್ಥಾಃ ಸೂರ್ಯಸ್ಯ ಸಹಿತಾ ಅಪಿ ॥ ೧೭ ॥

ಅ ॥ ಯಾವ ಜಲಗಳು ಸೂರ್ಯನ ಸಮೀಪದಲ್ಲಿಯೇ ಇರುತ್ತವೋ, ಮತ್ತೂ ಸೂರ್ಯನು ಯಾವ ಜಲಗಳಿಂದ ಕೂಡಿಯೇ ಇರುತ್ತಾನೋ. ಮತ್ತು ಸೂರ್ಯನಿಂದ ಸಹಿತಗಳಾಗಿಯೇ ಸದಾ ಇರುತ್ತವೋ ಎಂದು ಜಲಗಳಿಗೂ ಸೂರ್ಯನಿಗೂ ಅನ್ಯೋನ್ಯ ಸಾಹಿತ್ಯವನ್ನು (ಪರಸ್ಪರ ಒಟ್ಟಿಗೆ ಇರುತ್ತವೆ ಎಂದು) ಹೇಳಿದುದರಿಂದ ಆದರ ತಾತ್ಪರ್ಯವು ಸಹಿತಾ ಅಪಿ ಎಂದು.ಏವಂಚ (ಅಥವಾ ತಾತ್ಪರ್ಯಾರ್ಥಪರ ವ್ಯಾಖ್ಯಾನಕ್ಕಿಂತ ದ್ವಿತೀಯ ಪಾದಕ್ಕೆ ಸಾಕ್ಷಾದ್ವ್ಯಾಖ್ಯಾನವೇ ಸ್ವರಸವು. ಸಃ ಹಿ ತಾಃ ಎಂದು ಪದಚ್ಛೇದವು.) ಆ ಸೂರ್ಯನೂ ಕೂಡ ಆ ಜಲಗಳನ್ನು ಹೊಂದಿಯೇ ಸದಾ ಇರುತ್ತಾನೆ. ಪ್ರಸಿದ್ಧವು. ॥ ೫೭ ॥

ಋ ॥ (೨೪೭) ಅಪೋ ದೇವೀರುಪಹ್ವಯೇ ಯತ್ರ ಗಾವಃ ಪಿಬಂತಿ ನಃ ।
ಸಿಂಧುಭ್ಯಃ ಕರ್ತ್ವಂ ಹವಿಃ । ॥ ೧೮ ॥

ಅ ॥ ಯತ್ರ=ಯಾವ ಜಲಗಳನ್ನು, ನಃ=ನಮ್ಮದ್ದಾದ, ಗಾವಃ=ಗೋವುಗಳು,ಪಿಬಂತಿ=ಕುಡಿಯುತ್ತವೋ, ಅಪಃ ದೇವೀಃ=ಅಂತಹ ಜಲಾಭಿಮಾನಿ ದೇವಿಯರನ್ನು (ನಾನು) ಉಪಹ್ವಯೇ=ಕರೆಯುತ್ತೇನೆ. (ಏಕೆಂದರೆ) (ಯಾವ ಕಾರಣದಿಂದ) ನಃ=ನಮ್ಮ, ಹವಿಃ=ಸೋಮ ಚರು ಪುರೋಡಾಶ ಮೊದಲಾದ ಹವಿಸ್ಸು, ಸಿಂಧುಭ್ಯಃ= ನದ್ಯಭಿಮಾನಿ ದೇವತೆಗಳ ಉದ್ದಿಶ್ಯ ಅಥವಾ ನದ್ಯಾದಿಗಳ ಉದಕದಿಂದ ಸೋಮಾದಿಗಳನ್ನು ಮಾಡುವುದರಿಂದ ಅವರಿಗಾಗಿ, ಕರ್ತ್ವಂ=ಕಾರ್ಯವು. ಆದಕಾರಣ ನಾನು ಕರೆಯುತ್ತೇನೆ. ॥ ೧೮ ॥

ಭಾ ॥ ಹ್ವಯಾಮಿ ತಾ ಯಾಃ ಪಿಬಂತಿ ಗಾವೋ ನಃ ಸರ್ವಥಾ ಹವಿಃ।ಕಾರ್ಯಂ ನದೀಭ್ಯಃ ॥ ೧೮ ॥

ಅ ॥ ನಮ್ಮ ಗೋವುಗಳು ಯಾವ ಜಲಗಳನ್ನು ಕುಡಿಯುತ್ತವೋ, ಅಂತಹ ಜಲಾಭಿಮಾನಿ ದೇವಿಯರನ್ನು ಕರೆಯುತ್ತೇವೆ. ಏಕೆಂದರೆ ಸೋಮ ಮೊದಲಾದ ಎಲ್ಲಾ ಹವಿಸ್ಸುಗಳನ್ನು ನದ್ಯಭಿಮಾನಿ ದೇವತೆಗಳ ಉದ್ದಿಶ್ಯ ಕರ್ತವ್ಯವು. ॥ ೧೮ ॥

ಅವ ॥ ಈ ಋಕ್ಕು ಪುರ ಉಷ್ಣಿಕ್ ಛಂದಸ್ಕವು. ಉಷ್ಣಿಕ್ ವಿಶೇಶ ಛಂದಸ್ಕವು. ಯಾವ ಋಕ್ಕಿನ ಆದ್ಯ ಪಾದದಲ್ಲಿ ೧೨ ಅಕ್ಷರಗಳೋ, ೨ಪಾದಗಳಲ್ಲಿ ೮ ಅಕ್ಷರಗಳೋ, ಅದು ಪುರಉಷ್ಣಿಕ್ ಛಂದಸ್ಸು. ಉಷ್ಣಿಕ್ ಛಂದಸ್ಸಿಗೆ ಅಭಿಮಾನಿನಿಯು ಗೌರೀದೇವಿಯು॥

ಋ ॥ (೨೪೮) ಅಪ್ಸ್ವಂ೧ತರಮೃತಮಪ್ಸು ಭೇಷಜಮಪಾಮುತ
ಪ್ರಶಸ್ತಯೇ । ದೇವಾ ಭವತ ವಾಜಿನಃ ॥ ॥ ೧೯ ॥

ಅ ॥ ಅಮೃತಂ ಮರಣ ನಿವೃತ್ತಿಗೆ ಕಾರಣವಾದ ಜಲಶಾಯಿ ರೂಪ ದ್ರವ್ಯವು. ಅಪ್ಸು= ಜಲಗಳ ಮಧ್ಯದಲ್ಲಿ ಅಂತಃ=ಅಂತರ್ಹಿತವಾಗಿದೆ. ಭೇಷಜಂ ರೋಗ ನಿವಾರಕ ದ್ರವ್ಯವೂ ಕೂಡ, ಅಪ್ಸು=ಜಲಗಳಲ್ಲಿಯೇ ಇದೆ. ಅಪಾಮುತ=ಆ ಜಲಾಭಿಮಾನಿ ದೇವಿಯರನ್ನೇ ಪ್ರಶಸ್ತಯೇಪ್ರಶಂಸಾ ಮಾಡುವುದಕ್ಕಾಗಿವಾಜಿನಃ=ಅನ್ನವುಳ್ಳದೇವಾಃ=ದೇವತೆಗಳು, ಭವತ=(ನಮಗೆ ಸಹಾಯಕರು) ಆಗಲಿ. (ಅಂದರೆ ಜಲಾಭಿಮಾನಿ ದೇವತೆಗಳನ್ನು ಪ್ರಶಂಸೆ ಮಾಡತಕ್ಕ ನಮ್ಮ ವಾಕ್ ಮನಸ್ಸು ಮೊದಲಾದವುಗಳನ್ನು ಆ ದೇವತೆಗಳು ಪ್ರೇರೇಪಿಸಲಿ) ॥ ೧೯ ॥

ಭಾ ॥ ತಾಸ್ವಂತರದೃಶ್ಯಮಮೃತಂ ಸ್ಥಿತಂ । ಅಪಾಮೇವ ಪ್ರಶಂಸಾರ್ಥಂ ಸಹಾಯಾಃ ಸಂತು ನಃ ಸುರಾಃ ॥ ॥ ೧೯ ॥

ಅ ॥ (ನವಿದ್ಯತೇ ಮೃತಂ ಮೃತಿರ್ಯಸ್ಮಾತ್ತಾತ್ಕಾರಣಾತ್ ತದಮೃತಂ ಎಂಬವ್ಯುತ್ಪತ್ತಿಯಿಂದ)ಮರಣಾಭಾವಕ್ಕೆ ಕಾರಣವಾದ ಯಾವುದು ಜಲಶಾಯಿರೂಪ ದ್ರವ್ಯವೋ ಅಂತಹ ಜಲಶಾಯಿರೂಪವಾದ ದ್ರವ್ಯವು ಜಲಗಳ ಮಧ್ಯದಲ್ಲಿ ಇದೆ. ಅದು ಅದೃಶ್ಯವಾಗಿಯೇ ಇದೆ. (ಇದು ಸಂಪಸೂಚಿತವಾದ ಅರ್ಥವು.) ಅಥವಾ ಅಮೃತವು ಜಲಗಳಲ್ಲಿದೆ. (ಹೇಗೆಂದರೆ) ಅಂತರ್ಹಿತವಾಗಿದೆ. ಅದೃಶ್ಯವಾಗಿದೆ. ಆ ಜಲಾಭಿಮಾನಿ ದೇವತೆಗಳನ್ನೇ ಪ್ರಶಂಸೆಮಾಡುವುಕ್ಕಾಗಿ ದೇವತೆಗಳು ನಮಗೆ ಸಹಾಯಕರಾಗಲಿ. (ಭವಂತು ಎಂದು ಪ್ರಥಮ ಪುರುಷ ಹೇಳದೆ ವ್ಯತ್ಯಾಸವಾಗಿ ಭವತ ಎಂದು ಮಧ್ಯಮ ಪುರುಷ ಪ್ರಯೋಗವು ಕೇವಲ ಅಬಭಿಮಾನಿ ದೇವತೆಗಳೇ ದೇವತೆಗಳೆಂದು ತಿಳಿಸುವುದಕ್ಕಾಗಿ) ೧೯ ॥

ಅವ ॥ ತ್ರಿಶಿರಸರು, ತ್ವಾಷ್ಟ್ರರು, ಸಿಂಧು ದ್ವೀಪರು ಅಥವಾ ಅಂಬರೀಷರು ಇವರಿಂದ ದೃಷ್ಟವಾದ ಈ ನಾಲ್ಕು ಋಕ್ಕುಗಳಿಗೆ ಮೇಧಾತಿಥಿಗಳೂ ಋಷಿಗಳು. ಅದರಲ್ಲಿ **ಆಪಶ್ಚ** ಎಂಬ ಅಂತಿಮ ಪಾದಕ್ಕೆ ಕೇವಲ ಮೇಧಾತಿಥಿಗಳು ಋಷಿಗಳು. ೩೨ ಅಕ್ಷರಗಳಿದ್ದುದರಿಂದ ಅನುಷ್ಛಂದಸ್ಸು

**ಋ ॥ (೨೪೯) ಅಪ್ಸು ಮೇ ಸೋಮೋ ಅಬ್ರವೀದಂತರ್ವಿಶ್ವಾನಿ ಭೇಷಜಾ ।
ಅಗ್ನಿಂ ಚ ವಿಶ್ವಶಂಭುವಮಾಪಶ್ಚ ವಿಶ್ವಭೇಷಜೀಃ ॥ ೨೦ ॥ ೧೧ ॥**

ಅ ॥ ಸೋಮಃ=ಸೋಮರಾಜನು, ಅಪ್ಸು ಅಂತಃ=ನೀರಿನೊಳಗೆ, ವಿಶ್ವಾನಿ **ಭೇಷಜಾ**= ಸಮಸ್ತ ಔಷಧಗಳೂ (ಇರುತ್ತವೆ ಎಂದೂ,) ವಿಶ್ವಶಂಭುವಂ=ಸಂಪೂರ್ಣ ಸುಖಗಳಿಗೆ ಆಶ್ರಯನಾದ, ಅಗ್ನಿಂಚ= ಅಗ್ನಿಯನ್ನೂ ಕೂಡ, (ನೀರಿನೊಳಗೆ ಇರತಕ್ಕವನನ್ನಾಗಿಯೂ) ಅಬ್ರವೀತ್=ಹೇಳಿದನು. ಆಪಶ್ಚ=ಜಲಗಳು ವಿಶ್ವಭೇಷಜೀಃ= (ವಿಶ್ವಾನಿ ಭೇಷಜಾನಿ ಯಾಸು ತಾಃ, ಎಂಬ ವಿಗ್ರಹದಿಂದ)ಸಮಸ್ತ ಔಷಧಗಳುಳ್ಳವುಗಳೆಂದೂ ಅಥವಾ ಜಲಗಳು ಸಮಸ್ತ ಔಷಧ ರೂಪಗಳೆಂದೂ, ಅಬ್ರವೀತ್=ಹೇಳಿದನು. ॥ ೨೦ ॥ ೧೧ ॥

ಭಾ ॥ ತಾತ್ಪರ್ಯಾರ್ಥಂ ಪುನರ್ವಾಕ್ಯಂ ಸುಖಾಧಾರೋ ಹುತಾಶನಃ ॥ ೨೦ ॥ ೧೧ ॥

ಅ ॥ (ಹಿಂದಿನ ಋಕ್ಕಿನಲ್ಲಿ **ಅಪ್ಸು ಭೇಷಜಂ** ಇತ್ಯಾದಿಗಳಲ್ಲಿ ಹೇಳಿದುದನ್ನೇ ಇಲ್ಲಿ **ಆಪಶ್ಚ ವಿಶ್ವಬೇಷಜೀಃ** ಇತ್ಯಾದಿ ಪ್ರಕಾರ ತಿರುಗಿ ಏತಕ್ಕೆ ಹೇಳಿದ್ದು ಎಂದರೆ) ಈ ವಿಷಯದಲ್ಲಿ ಮುಖ್ಯ ತಾತ್ಪರ್ಯವಿವೆ ಎಂದು ತಿಳಿಸುವುದಕ್ಕಾಗಿ ಪುನಃ ಹೇಳಿದ್ದು. (ಮತ್ತು ಪ್ರಮಾಣೋಪನ್ಯಾಸ, ಸಮಸ್ತ ಔಷಧ ರೂಪತ್ವರೂಪವಾದ ಅರ್ಥಾಂತರ, ಇತ್ಯಾದಿ ಉದ್ದೇಶದಿಂದಲೂ ಪುನಃ ಪುನಃ ಹೇಳಿದುದರಿಂದ ಪುನರುಕ್ತಿಯಿಲ್ಲವೆಂದೂ ತಿಳಿಯಬೇಕು) ಸೋಮರಾಜನು ಇದನ್ನು ಹೇಳಿದನು. ಏನು ಹೇಳಿದನೆಂದರೆ ನೀರಿನೊಳಗೆ ಸಮಸ್ತ ಔಷಧಗಳೂ ಇವೆ. ಅಂದರೆ ಸಮಸ್ತ ಔಷಧಗಳಿಗೂ ಉದಕವೇ ಉಪಾದಾನ ಕಾರಣವಾಗಿರುವುದರಿಂದ ಕಾರಣರೂಪ

ದಿಂದಲೂ ಔಷಧಗಳು ಜಲಗಳಲ್ಲಿವೆ ಎಂದು ಹೇಳಿದನು.) (ಅಗ್ನಿಂಚ ವಿಶ್ವಶಂಭುವಂ ಎನ್ನುವುದಕ್ಕೆ ಅರ್ಥ ಹೇಳುತ್ತಾರೆ.) ಅಗ್ನಿಯು ಸುಖಕ್ಕೆ ಆಶ್ರಯನು. ಅಂದರೆ ಅಗ್ನಿಯು ಸಮುದ್ರದಲ್ಲಿದ್ದ ಪ್ರಯುಕ್ತ ಪೂರ್ಣ ಸುಖಾಶ್ರಯನಾದ ಅಗ್ನಿಯನ್ನು ನೀರಿನೊಳಗೆ ಇರುತ್ತಾನೆಂದೂ ಸೋಮನು ಹೇಳಿದನು) ‖ ೨೦ ‖ ೧೧ ‖

ಅವ ‖ ಈ ಋಕ್ಕಿಗೆ ಪ್ರತಿಷ್ಠಾ (ಗಾಯತ್ರೀ ವಿಶೇಷ) ಛಂದಸ್ಸು. ಯಾವ ಋಕ್ಕಿನ ೩ ಪಾದಗಳಲ್ಲಿ ಕ್ರಮವಾಗಿ, ೮ ಅಕ್ಷರ, ೭ ಅಕ್ಷರ, ೬ ಅಕ್ಷರಗಳು ಇರುತ್ತವೆಯೋ ಆ ಛಂದಸ್ಸು ಪ್ರತಿಷ್ಠಾ ಎನಿಸುತ್ತದೆ.

ಋ ‖ (೨೫೦) ಆಪಃ ಪೃಣೀತ ಭೇಷಜಂ ವರೂಥಂ ತನ್ವೇ ಇ ಮಮ ।

ಜ್ಯೋಕ್ಚ ಸೂರ್ಯಂ ದೃಶೇ ‖ ೨೧ ‖

ಅ ‖ ಹೇ ಆಪಃ=ಎಲೋ ಜಲಗಳೇ ಜಲಾಭಿಮಾನಿಗಳೇ, (ನನಗಾಗಿ) ಭೇಷಜಂ=ಔಷಧವನ್ನು, ಪೃಣೀತ=ಪೃಣ ದಾನೇ) ಕೊಡಿರಿ. ಮಮ ತನ್ವೇ=ನನ್ನ ಶರೀರದ, ವರೂಥಂ=ರಕ್ಷಣೆಯನ್ನು ಕೂಡ (ಕೊಡಿರಿ.) ಅಥವಾ ವರೂಥಂ ಎನ್ನುವುದು ಭೇಷಜಂ ಎನ್ನುವುದಕ್ಕೇನೇ ವಿಶೇಷಣವು. ಈ ಕಲ್ಪದಲ್ಲಿ ತನ್ನ ಶರೀರಕ್ಕೆ ರಕ್ಷಕವಾದ ಔಷಧವನ್ನು ಎಂದರ್ಥವು. ಸೂರ್ಯಂ=[ಯಾ ಪ್ರಾಪಣೇ] ಬ್ರಹ್ಮಾದಿಗಳಿಂದ ಪ್ರಾಪ್ಯನಾದ, ಶ್ರೀ ವಿಷ್ಣುವನ್ನು, ದೃಶೇ=ನೋಡುವುದಕ್ಕಾಗಿ ಅಥವಾ ಸೂರ್ಯಂ=ಶ್ರೀ ವಿಷ್ಣುವಿನ, ದೃಶೇ=ಜ್ಞಾನಕ್ಕಾಗಿ, ಜ್ಯೋಕ್ಚ=ಜ್ಞಾನವನ್ನು ಕೂಡ, ಪೃಣೀತ=[ಪೃಣ ಪ್ರೀಣನೇ] ಕೊಡಿರಿ. ‖ ೨೧ ‖

ಭಾ ‖ (೧) ವರೂಥಂ ಗುಪ್ತಿರುದ್ದಿಷ್ಟಾ ಜ್ಯೋತಿರ್ವಿಷ್ಣುದೃಶೇ ತಥಾ ‖ (೨) ಸೂರಿಪ್ರಾಪ್ಯೋ ಯತೋ ವಿಷ್ಣುಃ ಸೂರ್ಯ ಇತ್ಯಭಿಧೀಯತೇ । ಪೃಣ ದಾನೇ ‖ ೨೧ ‖

ಅ ‖ (೧) (ವರೂಥ ಶಬ್ದಾರ್ಥವನ್ನು ಹೇಳುತ್ತಾರೆ.) ವರೂಥ ಶಬ್ದದಿಂದ ರಕ್ಷಣೆಯು ಹೇಳಲ್ಪಡುತ್ತದೆ. (ಮತ್ತು ವರೂಥಂ ಎನ್ನುವುದಕ್ಕೆ ರಕ್ಷಕವೆಂದು ಅರ್ಥವಾಗುವುದು)(ಉತ್ತರಾರ್ಧವನ್ನು ವ್ಯಾಖ್ಯಾನ ಮಾಡುತ್ತಾರೆ) ವಿಷ್ಣುವನ್ನು ನೋಡುವುದಕ್ಕಾಗಿ ಅಥವಾ ವಿಷ್ಣುವಿನ ದರ್ಶನಕ್ಕಾಗಿ ಜ್ಞಾನವನ್ನು (ಕೊಡಿರಿ) (೨) ಸೂರ್ಯ ಶಬ್ದವನ್ನು ಶ್ರೀ ವಿಷ್ಣುವಿನಲ್ಲಿ ನಿರ್ವಚನ ಮಾಡುತ್ತಾರೆ.) ಯಾವ ಕಾರಣದಿಂದ ಶ್ರೀ ವಿಷ್ಣುವು ಜ್ಞಾನಿಗಳಾದ ಬ್ರಹ್ಮಾದಿಗಳಿಂದ ಹೊಂದಲ್ಪಡುವವನೋ, ಆದ ಕಾರಣ ಸೂರ್ಯನೆಂದು ಹೇಳಿಸಲ್ಪಡುತ್ತಾನೆ. (ಸೂರಿ ಶಬ್ದದಿಂದ ಪ್ರಾಪ್ಯ ಎಂಬ ಅರ್ಥದಲ್ಲಿ ತದ್ಧಿತವಾದ ಯ ಪ್ರತ್ಯಯವು.) (ಪೃಣೀತ ಎನ್ನುವುದರ ಧಾತ್ವರ್ಥವನ್ನು ಹೇಳುತ್ತಾರೆ.) ಪೃಣ ಧಾತುವು ದಾನ ಎಂಬ ಅರ್ಥದಲ್ಲಿಯೂ ಇದೆ. ‖ ೨೧ ‖

ಅವ ‖ ೩ ಋಕ್ಕುಗಳು ಅನುಷ್ಟುಪ್ ಛಂದಸ್ಕಗಳು.

ಋ ‖ (೨೫೧) ಇದಮಾಪಃ ಪ್ರವಹತ ಯತ್ಕಿಂಚ ದುರಿತಂ ಮಯಿ ।

ಯದ್ವಾಹಮಭಿ ದುದ್ರೋಹ ಯದ್ವಾ ಶೇಪ ಉತಾನೃತಂ ‖ ೨೨ ‖

ಅ ‖ ಹೇ ಆಪಃ=ಎಲೋ ಜಲಾಭಿಮಾನಗಳೇ, ಯತ್ಕಿಂಚ ಮಯಿ ದುರಿತಂ=ಯಾವುದಾದರೂ ನನ್ನಲ್ಲಿ ದುರಿತವಿದೆಯೋ, ಇದಂ=ಈ ಎಲ್ಲಾ ನಮ್ಮ ಪಾಪವನ್ನು ಪ್ರವಹತ=(ವಹ ಪ್ರಾಪಣೇ)(ನದೀ ಪ್ರವಹತಿ ಎನ್ನುವಲ್ಲಿ ನೀರು ತನ್ನ ಸ್ಥಾನದಿಂದ ಬೇರೆ ಕಡೆಗೆ ಹೋಗುತ್ತದೆ ಎಂದು ಪ್ರತೀತವಾಗುವುದರಿಂದ ಪ್ರವಹತ ಎನ್ನುವಲ್ಲಿಯೂ

ಆ ಅರ್ಥವನ್ನೇ ಇಟ್ಟುಕೊಳ್ಳಬೇಕು. ತಥಾ ಚ) ಬೇರೆ ಕಡೆಗೆ ಹೋಗುವ ಹಾಗೆ ಮಾಡಿರಿ. ತೆಗೆಯಿರಿ. (ಯಾವ ಪಾಪವನ್ನು ಎಂದರೆ) ಅಹಂ=ನಾನು, ಯದ್ವಾ ಅಭಿದುದ್ರೋಹ=ಯಾವುದಾದರೂ ಪ್ರಾಣಿಗಳ ಹಿಂಸೆಯನ್ನು ಮಾಡಿರುವೆನೋ, (ದ್ರುಹ ಜಿಘಾಂಸಾಯಾಂ ಎಂಬ ಧಾತು ವ್ಯಾಖ್ಯಾನದಿಂದ ಪ್ರಾಣಿಗಳನ್ನು ಕೊಲ್ಲಬೇಕೆಂಬ ಇಚ್ಛೆಯಿಂದುಂಟಾದ ಪಾಪವನ್ನು) (ಅಥವಾ ಪ್ರಾಣಿಗಳ ಹಿಂಸೆಯಿಂದುಂಟಾದ ಪಾಪವನ್ನು) (ಇದು ತಾತ್ಪರ್ಯಾರ್ಥವು) ಯದ್ವಾ=ಅಥವಾ, ಶೇಪೇ (**ಶೇಪಶ್ಶೇಪೌ ಚ ಶೇಫಶ್ಚ ಶೇಫಂ ಪ್ರೋಕ್ತಂ ಚ ಶೇಫಸಿ** ಎಂದು ದ್ವಿರೂಪ ಕೋಶದಲ್ಲಿ ಹೇಳಿದುದರಿಂದ ಶೇಪ ಶೇಫ ಶಬ್ದಗಳು ಪರ್ಯಾಯಗಳು. **ಭಗೋ ಯೋನಿರ್ದ್ವಯೋಃ ಶಿಶ್ನೋ ಮೇಢ್ರೋ ಮೇಹನಶೇಫಸೀ** ಎಂದು ಅಮರ ಕೋಶದಿಂದ ಇವು ಪರ್ಯಾಯ ಶಬ್ದಗಳು. ಏವಂಚ) ಶೇಪನಿಮಿತ್ತವಾದ ಪಾಪವನ್ನು, ಏವಂಚ ಶಿಶ್ನದಿಂದುಂಟಾದ (ಗುಹ್ಯೇಂದ್ರಿಯದಿಂದುಂಟಾದ) ಪಾಪವನ್ನು, ಉತ=ಮತ್ತು, ಅನೃತಂ=ಅನೃತ ವಚನದಿಂದುಂಟಾದ ಪಾಪವನ್ನು ಅವೆಲ್ಲವನ್ನು ಪ್ರವಹತ=ತೆಗೆಯಿರಿ. ನಾಶಗೊಳಿಸಿರಿ. ॥ ೨೨ ॥

ಭಾ ॥ ಅಖಿಲಂ ಪಾಪಮಾಪಃ ಪ್ರವಹತಾಪಿ ನಃ । ಹಿಂಸಾಜಂ ಶೇಫಜಂ ಚೈವ ತಥೈವಾನೃತಸಂಭವಂ ॥ ೨೨ ॥

ಅ ॥ ಎಲೋ ಜಲಾಭಿಮಾನಿಗಳೇ, ಪ್ರಾಣಿಗಳ ಹಿಂಸೆಯಿಂದುಂಟಾದ, ಪಾಪವನ್ನು, ಗುಹ್ಯೇಂದ್ರಿಯದಿಂದುಂಟಾದ ಪಾಪವನ್ನು, ಹಾಗೆಯೇ ಅನೃತ ವಚನದಿಂದುಂಟಾದ ಪಾಪವನ್ನು ಈ ಎಲ್ಲಾ ನಮ್ಮ ಪಾಪವನ್ನು ತೆಗೆಯಿರಿ. ನಾಶಗೊಳಿಸಿರಿ. ॥ ೨೨ ॥

ಋ ॥ (೨೫೨) ಆಪೋ ಅದ್ಯಾನ್ವಚಾರಿಷಂ ರಸೇನ ಸಮಗಸ್ಮಹಿ ।
ಪಯಸ್ವಾನಗ್ನ ಆಗಹಿ ತಂ ಮಾ ಸಂಸೃಜ ವರ್ಚಸಾ ॥ ೨೩ ॥

ಅ ॥ ಹೇ ಆಪಃ=ಎಲೋ ಅಬ್ದೇವತೆಗಳೇ, ಅದ್ಯ=ಈಗ (ನಾವು ಯಾವ ಕಾರಣದಿಂದ ನಿಮ್ಮನ್ನು) ಅನು ಅಚಾರಿಷಂ=ಅನುಸರಿಸಿ ಸಂಚರಿಸಿರುವೆನೋ, (ಅಂದರೆ ನಿಮ್ಮ ಭೃತ್ಯರಾಗಿರುತ್ತೇವೋ,) ಹಿ=ಯಾವ ಕಾರಣದಿಂದ ರಸೇನ=(**ರಸಃ ಸಾರೋ ವರಶ್ಚೇತಿ ಶಬ್ದಾಃ ಪರ್ಯಾಯವಾಚಕಾಃ** ಎನ್ನುವ ಪ್ರಮಾಣದಿಂದ) ಶ್ರೇಷ್ಠವಾದ ಸುಖದಿಂದ, ಸಮಗಸ್ಮಹಿ=ಸಂಗತರಾಗಿರುತ್ತೇವೋ, (ಆ ಕಾರಣದಿಂದ) ಅಗ್ನೇ=ಎಲೋ ಅಗ್ನಿಯೇ, (ನೀನು) ಪಯಸ್ವಾನ್= ಜಲಾಭಿಮಾನಿಗಳಿಂದ ಸಹಿತನಾಗಿ, (ಅಗ್ನಿಯು ಸಮುದ್ರದಲ್ಲಿದ್ದ ಪ್ರಯುಕ್ತ ಅಪ್‌ಸಾಹಿತ್ಯವು ಯುಕ್ತವು.) ಆ ಗಹಿ=ನಮ್ಮ ಸಮೀಪಕ್ಕೆ ಬಾ. (ಬಂದು) ತಂ=ಹೀಗೆ ಸ್ತೋತ್ರ ಮಾಡತಕ್ಕ, ಮಾ=ನನ್ನನ್ನು, ವರ್ಚಸಾ=ತೇಜಸ್ಸಿನಿಂದ, (ಬ್ರಹ್ಮ ವರ್ಚಸ್ಸಿನಿಂದ) ಸಮುಸೃಜ=ಕೂಡಿಸು. (ಬ್ರಹ್ಮ ವರ್ಚಸ್ಸಿನಿಂದ ಯುಕ್ತನನ್ನಾಗಿ ಮಾಡು.) ॥ ೨೩ ॥

ಭಾ ॥ ರಸೇನ ಸಂಗತಾಶ್ಚ ಸ್ಮೋ ಯಸ್ಮಾದನುಚರಾ ಹಿ ವಃ ॥ ೨೩ ॥

ಅ॥ ಯಾವ ಕಾರಣದಿಂದ ನಾವು ನಿಮ್ಮ ಭೃತ್ಯರಾಗಿರುತ್ತೇವೋ, ಆದ ಕಾರಣ ಸುಖದಿಂದ ಕೂಡಿದವರಾಗಿರುತ್ತೇವೆ. (ಸಮಗಸ್ಮಹಿ ಎಂಬ ಬಹುವಚನವನ್ನನುಸರಿಸಿ ಅನ್ವಚಾರಿಷಂ ಎಂಬ ಏಕವಚನಾಂತವನ್ನು ಅನುಚರಾ ಎಂದು ಬಹುವಚನಾಂತವಾಗಿ ಭಾಷ್ಯದಲ್ಲಿ ವ್ಯಾಖ್ಯಾತವಾಗಿದೆ.) ॥ ೨೩ ॥

ಋ॥ (೨೫೩) ಸಂ ಮಾಽಗ್ನೇ ವರ್ಚಸಾ ಸೃಜ ಸಂಪ್ರಜಯಾ ಸಮಾಯುಷಾ।

ವಿದ್ಯುರ್ಮೇ ಅಸ್ಯ ದೇವಾ ಇಂದ್ರೋ ವಿದ್ಯಾತ್ಸಹ ಋಷಿಭಿಃ ॥

॥ ೨೪ ॥ ೧೨ ॥ ೨೩ ॥

ಅ॥ ಅಗ್ನೇ=ಎಲೋ ಅಗ್ನಿಯೇ, ಮಾ=ನನ್ನನ್ನು ವರ್ಚಸಾ=ಬ್ರಹ್ಮವರ್ಚಸ್ಸಿನಿಂದಲೂ ಸಂಸೃಜ=ಕೂಡಿಸು ಪ್ರಜಯಾ= ಸತ್ಸಂತಾನದಿಂದಲೂ, ಸಂಸೃಜ=ಕೂಡಿಸು. ಆಯುಷಾ=ಆಯುಷ್ಯದಿಂದಲೂ, ಸಂಸೃಜ= ಕೂಡಿಸು. ದೇವಾಃ=ಅಗ್ನ್ಯಾದಿ ದೇವತೆಗಳು,ಅಸ್ಯ ಮೇ= (ದ್ವಿತೀಯಾ ವಿಭಕ್ತ್ಯರ್ಥದಲ್ಲಿ ಷಷ್ಠೀ ವಿಭಕ್ತಿಯು.) ಈ ನನ್ನನ್ನು ವಿದ್ಯುಃ=(ಅಂತರ್ಣೀತಣಿಚ್) ತಿಳಿಸಿಯಾರು. (ವಿದ್ವಾಂಸರನ್ನಾಗಿಯೂ ಮಾಡಿಯಾರು.) ಋಷಿಭಿಸ್ಸಹ=ಋಷಿಗಳಿಂದೊಡಗೂಡಿ, ಇಂದ್ರಃ=ಇಂದ್ರನೂ ಕೂಡ,ಅಸ್ಯ ಮೇ=ಈ ನನ್ನನ್ನು ವಿದ್ಯಾತ್=ವಿದ್ವಾಂಸನನ್ನಾಗಿ ಮಾಡಿಯಾನು. ಅಥವಾ ದೇವಾಃ=ಯಾವ ದೇವತೆಗಳು, ವಿದ್ಯುಃ= (ಸಮಸ್ತವನ್ನು) ತಿಳಿದಿರುವರೋ, ಇಂದ್ರಃ=ಯಾವ ಇಂದ್ರನು, ವಿದ್ಯಾತ್= ಸಮಸ್ತವನ್ನು) ತಿಳಿದಿರುವನೋ (ಅವರೆಲ್ಲರೂ ಇಂದ್ರನೂ ಕೂಡ) ಋಷಿಭಿಸ್ಸಹ=ಋಷಿಗಳಿಂದೊಡಗೂಡಿ, ಅಸ್ಯ ಮೇ=ಈ ನನಗೆ, ಸಂತು=ಸರ್ವದಾ ನನಗಾಗಿ ಇರಲಿ. (ಅಂದರೆ ಸರ್ವದಾ ನನಗೆ ಉಪಕಾರಕರಾಗಿರಲಿ.) ಅಥವಾ, ದೇವಾ:=ಅಗ್ನ್ಯಾದಿ ದೇವತೆಗಳು, ಅಸ್ಯ ಮೇ=ಈ ನನ್ನನ್ನು ವಿದ್ಯು:=(ಕೃಪಾಪಾತ್ರನನ್ನಾಗಿ) ತಿಳಿಯುವರು. (ಅಂದರೆ ತಿಳಿದು ನನ್ನಲ್ಲಿ ಕೃಪೆಯನ್ನು ಮಾಡಿಯಾರು.) ಇಂದ್ರಃ=ಇಂದ್ರನೂ ಕೂಡ, ಸಹಋಷಿಭಿಃ=ಋಷಿಗಳಿಂದೊಡಗೂಡಿ, ವಿದ್ಯಾತ್=ಕೃಪಾಪಾತ್ರನನ್ನಾಗಿ ತಿಳಿದಾನು. (ತಿಳಿದು ನನ್ನಲ್ಲಿ ಕೃಪೆಯನ್ನು ಮಾಡಿಯಾನು.) ಅಥವಾ ದೇವಾಃ=ದೇವತೆಗಳು, ಅಸ್ಯ ಮೇ= ಈ ನನ್ನಿಂದ ಹೇಳಲ್ಪಟ್ಟದ್ದನ್ನು ವಿದ್ಯುಃ—ಅನುಮೋದಿಸಲಿ. ಇಂದ್ರಃ=ಇಂದ್ರನೂ ಕೂಡ, ಸಹ ಋಷಿಭಿಃ=ಋಷಿಗಳಿಂದೊಡಗೂಡಿ, ವಿದ್ಯಾತ್=ಅನುಮೋದಿಸಲಿ. ॥ ೨೪ ॥ ೧೨ ॥ ೨೩ ॥ ೫ ॥

ಭಾ ॥ ಕುರ್ಯುರ್ಮಾಮಪಿ ವಿದ್ವಾಂಸಂ ಮದರ್ಥಂ ಸರ್ವದಾ ಸುರಾಃ । ಏನಂ ಮಾಮಿತಿ

ವಾರ್ಥಃ ಸ್ಯಾದನುಜಾನಂತು ಚೋದಿತಂ ॥ ೨೭ ॥ ೧೨ ॥ ೪ ॥ ೫ ॥

ಅ ॥ ಅಗ್ನ್ಯಾದಿ ದೇವತೆಗಳು, ನನ್ನನ್ನು ವಿದ್ವಾಂಸನನ್ನಾಗಿಯೂ ಮಾಡಿಯಾರು. (ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಅಗ್ನ್ಯಾದಿ ದೇವತೆಗಳೂ ಇಂದ್ರನೂ ಕೂಡ ಎಲ್ಲರೂ ಸರ್ವದಾ ನನಗಾಗಿ ಆಗಲಿ. ನನಗೆ ಉಪಕಾರಕರಾಗಲಿ) (ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ) ಅಗ್ನ್ಯಾದಿ ದೇವತೆಗಳು ಈ ನನ್ನನ್ನು (ಕೃಪಾಪಾತ್ರನನ್ನಾಗಿ ತಿಳಿದು ಕೃಪೆ ಮಾಡಲಿ.) ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಈ ನಾನು ಹೇಳಿದುದನ್ನು ಅನುಮೋದಿಸಲಿ. ॥ ೨೪ ॥ ೧೨ ॥ ೪ ॥ ೫ ॥

ಅವ ॥ **ಕಸ್ಯ ನೂನಂ** ಎಂದಾರಂಭಿಸಿ **ತ್ವಮಗ್ನೇ ಪ್ರಥಮಃ** ಎನ್ನುವುದಕ್ಕಿಂತ ಮೊದಲಿನ ೩ ಋಕ್ಕುಗಳಿಂದ ನ್ಯೂನವಾದ ೧೦೦ ಋಕ್ಕುಗಳಿಗೆ (ಅಂದರೆ ೯೭ ಋಕ್ಕುಗಳಿಗೆ ಶುನಶ್ಶೇಪರು ಋಷಿಗಳು. ಹಾಗಾದರೆ ಶುನಶ್ಶೇಪರಿಗೆ ಶತರ್ಚಿಗಳೆಂದು ಪ್ರಸಿದ್ಧಿ ಹೇಗೆ ಎಂದರೆ ಚತುರ್ಥ ಪಂಚಮ ಮಂಡಲಗಳಲ್ಲಿ ೩ ಋಕ್ಕುಗಳು ಇದ್ದ ಪ್ರಯುಕ್ತ ಶತರ್ಚಿ ಎನ್ನುವುದಕ್ಕೆ ವಿರೋಧವಿಲ್ಲ. ಶುನಶ್ಶೇಪರ ಕಥೆಯು ಬ್ರಾಹ್ಮಣದಲ್ಲಿ ಸ್ವಲ್ಪವಾಗಿದೆ. ಅದರಲ್ಲಿ ಕಸ್ಯ ಇತ್ಯಾದಿ ೧೫ ಋಕ್ಕುಗಳು. ೩ ವರ್ಗ. ೨೪ನೇ ಸೂಕ್ತವು. ಪ್ರಾಯಶಃ ತ್ರಿಷ್ಟುಪ್ ಛಂದಸ್ಕವು. ತ್ರಿಷ್ಟುಪ್ ಛಂದಸ್ಸಿಗೆ ಇಂದ್ರಾಣಿಯು ದೇವತೆಯು. ಆದರಲ್ಲಿ ಈ ಋಕ್ಕು ಪ್ರಜಾಪತಿ ದೇವತಾಕವು.

೫೮ ॥ (೨೫೪) ಕಸ್ಯ ನೂನಂ ಕತಮಸ್ಯಾಮೃತಾನಾಂ ಮನಾಮಹೇ ಚಾರು
ದೇವಸ್ಯ ನಾಮ । ಕೋ ನೋ ಮಹ್ಯಾ ಅದಿತಯೇ ಪುನರ್ದಾತ್ಪಿತರಂ
ಚ ದೃಶೇಯಂ ಮಾತರಂ ಚ ॥ ೧ ॥

ಅ ॥ (ನಾವು)ಕಸ್ಯ=(ಕರೋತೀತಿ ಕಃ ಎಂಬವ್ಯುತ್ಪತ್ತಿಯಿಂದ) ಸರ್ವಕರ್ತನೂ, ಅಮೃತಾನಾಂ=ಮರಣ ರಹಿತರಾದುದರಿಂದ ಅಮರರೆನಿಸಿದ, ದೇವತೆಗಳ ಮಧ್ಯದಲ್ಲಿ, ಕತಮಸ್ಯ=ಅತಿಶಯ ಸುಖಸ್ವರೂಪನೂ, ಅಥವಾ ಅಮೃತಾನಾಂ=ಮುಕ್ತರಾದ ಬ್ರಹ್ಮಾದಿಗಳ ಸಕಾಶದಿಂದ, ಕತಮಸ್ಯ=ಅತಿಶಯ ಸುಖರೂಪನೂ ಆದ, ದೇವಸ್ಯ= ಶ್ರೀ ವಿಷ್ಣುವಿನ, ಚಾರು=ಮಂಗಲಕರವಾದ, (ಅಂದರೆ ಅರ್ಥಾನುಸಂಧಾನಪೂರ್ವಕವಾಗಿ ಆವೃತ್ತಿ ಮಾಡಿದರೆ ಮೋಕ್ಷಪ್ರದವಾದ) ನಾಮ=ನಾಮವನ್ನು, ನೂನಂ=ಈಗ, ಮನಾಮಹೇ=(ಮ್ನಾ ಅಭ್ಯಾಸೇ ಎಂಬ ಧಾತು ವ್ಯಾಖ್ಯಾನದಿಂದ) ಪುನಃ ಪುನಃ ಉಚ್ಚರಿಸುತ್ತೇವೆ. (ಸಃ=) ಕಃ=(ಆ) ಸರ್ವಕರ್ತನಾದ ಶ್ರೀವಿಷ್ಣುವು, ನಃ= ನಮ್ಮನ್ನು, ಮಹ್ಯೈ=ದೇಶತಃ ಮಹತ್ತಾದ, (ಸರ್ವ ದೇಶಗಳಲ್ಲಿ ವ್ಯಾಪ್ತಳಾದ,)ಅದಿತಯೇ=(ಅದ ಭಕ್ಷಣೇ ಎಂಬ ಧಾತು ವ್ಯಾಖ್ಯಾನದಿಂದ)(ಅತ್ತಾ ಚರಾಚರಗ್ರಹಣಾತ್ ಎನ್ನುವಲ್ಲಿ ಹೇಳಿದ ಪ್ರಕಾರ **ಸರ್ವಂ ವಾ ಅತ್ತೀತಿ ಅದಿತಿಃ** ಎಂಬ ಶ್ರುತಿಸಿದ್ಧವಾದ ಸರ್ವಾತ್ತೃತ್ವದಿಂದಲೂ, (ದೋ ಅವಖಂಡನೇ)ಕಾಲತಃ ಗುಣತಶ್ಚ ವ್ಯಾಪ್ತತ್ವ ಹೇತುವಿನಿಂದಲೂ,) ಅದಿತಿ ಎನಿಸಿಕೊಂಡ ವಿಷ್ಣುವಿನ ಸ್ತ್ರೀರೂಪಕ್ಕೋಸ್ಕರ, ಅಥವಾ ಶ್ರೀ ದೇವೀಗೋಸ್ಕರ, ಪುನಃ=ಮತ್ತು, ದಾತ್=(ಡಾಞ್ ದಾನೇ)ಕೊಡಬೇಕು(ಅಂದರೆ ಸರ್ವದಾ ಸರ್ವಗತನಾದ ಶ್ರೀಹರಿಯಲ್ಲಿ ಅಥವಾ ಲಕ್ಷ್ಮೀದೇವಿಯಲ್ಲಿ ಇರತಕ್ಕ ನಮ್ಮನ್ನು ವೈಕುಂಠಾದಿಗಳಲ್ಲಿರತಕ್ಕ ಭಗವದ್ರೂಪವಿಶೇಷವನ್ನು ಹೊಂದಿಸಬೇಕು ಎಂದುಪುನಶ್ಶಬ್ದವು.)(ದಾತ್ ಎನ್ನುವುದು ಲಿಙರ್ಥದಲ್ಲಿ ಲುಙ.ಅಡಭಾವವು)(ಆ ಶ್ರೀಹರಿಯೇ ಸರ್ವಲೋಕಕ್ಕೂ ಮುಖ್ಯವಾಗಿ ಪಿತನೂ ಮಾತೆಯೂ ಆಗಿರುತ್ತಾನೆ. ಆದ ಕಾರಣ) ಪಿತರಂ ಚ=ತಂದೆಯಾದ ಶ್ರೀ ವಿಷ್ಣುವನ್ನು, ಮಾತರಂ ಚ=ತಾಯಿಯಾದ ಶ್ರೀ ವಿಷ್ಣುವಿನ ಸ್ತ್ರೀರೂಪವನ್ನು, ಅಥವಾ ಶ್ರೀ ದೇವಿಯನ್ನೂ ದೃಶೇಯಂ= ನೋಡುವೆನು. ॥ ೧ ॥

ಭಾ ॥ (೧) ಶುನಶ್ಶೇಫೋ ದದರ್ಶಾತ ಉತ್ತರಂ ಪರಮೃಕ್ಶತಂ । ಯೂಪಾದಾತ್ಮವಿಮೋಕ್ಷಾಯ ಸ್ತುವನ್ ದೇವಾನ್ ಪೃಥಕ್ಪೃಥಕ್॥ ತ್ರ್ಯೃನಂ ಶತಮಿಹೈವಾನ್ಯಚ್ಚತುರ್ಥೇ ಪಂಚಮೇಽಪಿ ಚ ।ಮಂಡಲೇ (೨) ಬ್ರಹ್ಮಣೋಕ್ತಸ್ತು ಕ್ರಮೋಽತ್ರಾಪಿ ಹ್ಯೃಚಾಂ ಭವೇತ್॥ (೩) ಕರ್ತುಃ ಪರಾನಂದತನೋರಿದಾನೀಂ ಮನಾಮಹೇ ಚಾರು ವಿಷ್ಣೋಸ್ಸುರಾಣಾಂ । ನಾಮೇಶಶ್ಚೇದಿಂದಿರಾಯೈ ಪುನರ್ದಾದ್ದೃಶೇಯಂ ತಾಂ ಮಾತರಂ ತಂ ಚ ದೇವಂ ॥(೪) ಸ ಮುಕ್ತಾನಾಮಮೃತಾನಾನುಜೇಶಮುಖ್ಯಾನಾಂ ಚಾಭ್ಯಧಿಕೋ ಯತ್ಸುಖಾದೌ । ತೇನೋಕ್ತೋಽಸೌ ಕತಮೋಽ (೫) ಖಂಡಿತತ್ವಾತ್ಸ ಚಾದಿತಿರ್ಮಹತೀ ತನ್ಮಹೀ ಚ ॥ (೬) ದೇಶಾನಂತ್ಯಾತ್ತನ್ಮಹತ್ತ್ವಂ ಗುಣೈಸ್ತು ಕಾಲಾಚ್ಚೋಕ್ತಂ ತಸ್ಯ ಚಾಖಂಡಿತತ್ವಂ ॥ (೭) ಸಏವ ಮಾತಾ ಸ ಪಿತಾ ಚ ದೇವಸ್ತಸ್ಮಿನ್ ಸದಾ ಸಂಸ್ಥಿತಾಸ್ತತ್ಪುನರ್ದಾತ್ ॥ (೮) ಅತ್ತಿ ವಿಶ್ವಂ ತೇನ ಚೈವಾದಿತಿರ್ವಾ ಶ್ರೀರ್ವಾ (೯) ಬ್ರಹ್ಮಾ ಪ್ರೋಕ್ತ ಏವಂ ಕ ಏವ ॥ (೧೦)ಗುಣಾಶ್ಚ ತಸ್ಯಾಭ್ಯಧಿಕಾಃ ಸದೈವ ಜೀವೇಭ್ಯಸ್ತತೋಽಪಿ ತದ್ವಾಕ್ಯಯೋಗ್ಯಃ ॥ (೧೧) ದದಾತ್ವಸೌ ವಿಷ್ಣವೇ ಚೇಂದಿರಾಯೈ

ಪ್ರಾಪ್ತಾನಸ್ಮಾನಪಿ ತೌ ಸರ್ವಗತತ್ವಾತ್ ॥ (೧೨) ವಿಶೇಷದೇಶಪ್ರಾಪ್ತಿತಸ್ತಸ್ಯ ಚಾಪ್ತಿರ್ನೈಕುಂಠಾದಿಲೋಕ ಉಕ್ತೋ ಹರೇಶ್ಚ ॥೧॥

ಅ ॥(ಮೇಧಾತಿಥಿ ಋಷಿಗಳು ಕಂಡಿರುವ ಋಕ್ಕುಗಳನ್ನು ವ್ಯಾಖ್ಯಾನ ಮಾಡಿಯಾಯ್ತು. ಈಗ ವ್ಯಾಖ್ಯಾನ ಮಾಡಲಿಕ್ಕೆ ಇಷ್ಟಗಳಾದ ಋಕ್ಕುಗಳಿಗೆ ಋಷಿಯನ್ನು ಹೇಳುತ್ತಾರೆ.) ಶುನಶ್ಶೇಪರು ಯೂಪ (ಯಜ್ಞದಲ್ಲಿ ಪಶುವನ್ನು ಕಟ್ಟತಕ್ಕಸ್ತಂಭ)ದೇಶೆಯಿಂದ ತನ್ನನ್ನು ಬಿಡಿಸಿಕೊಳ್ಳುವುದಕ್ಕಾಗಿ ದೇವತೆಗಳನ್ನು ಪ್ರ ಪ್ರತ್ಯೇಕ ಸ್ತೋತ್ರ ಮಾಡುತ್ತಾ ಇದಕ್ಕಿಂತ ಮೇಲಿನದ್ದಾದ (ಅವ್ಯವ ಹಿತೋತ್ತರವಾದ) ಉತ್ತಮವಾದ ೧೦೦ಋಕ್ಕುಗಳನ್ನು ಅಥವಾ ಇದಕ್ಕಿಂತ ಮೇಲಿನದ್ದಾದ ೩ ಋಕ್ಕುಗಳಿಂದ ಕಡಿಮೆಯಾದ ೧೦೦ಋಕ್ಕುಗಳನ್ನು, ವ್ಯವಹಿತೋತ್ತರವಾದ ೩ ಋಕ್ಕುಗಳನ್ನು ಹೀಗೆ ೧೦೦ಋಕ್ಕುಗಳನ್ನು ಕಂಡರು.(ಹರಿಶ್ಚಂದ್ರನು ವರುಣನಿಗಾಗಿ ಶುನಶ್ಶೇಪರನ್ನು ಪುತ್ರ ಪ್ರತಿನಿಧಿಯನ್ನಾಗಿ ಸಂಕಲ್ಪಿಸಿ ಯಜ್ಞದಲ್ಲಿ ಪಶುವನ್ನಾಗಿ ಮಾಡಿ ಯೂಪಸ್ತಂಭದಲ್ಲಿ ಪಾಶಗಳಿಂದ ೩ಸ್ಥಾನಗಳಲ್ಲಿ ಬಂಧಿಸಿದನು. ಬದ್ಧರಾದ ಶುನಶ್ಶೇಪರು ತನ್ನನ್ನು ಬಿಡಿಸಿ ಕೊಳ್ಳುವುದಕ್ಕಾಗಿ ದೇವತೆಗಳನ್ನು ಸ್ತುತಿಸಿದರು, ಇತ್ಯಾದ ರೂಪವಾದ ಬ್ರಾಹ್ಮಣೋಕ್ತವಾದ ಕಥೆಯನ್ನು **ಯೂಪಾತ್** ಇತ್ಯಾದಿಗಳಿಂದ ಸ್ಮರಣೆ ಬರುವಂತೆ ಮಾಡಿದರು- ಕಥಾಜ್ಞಾನವು ಇದ್ದರೇನೇ ಉತ್ತಮ ಪಾಶಾದಿ ಬದ್ಧತ್ವರೂಪವಾದ **ಉದುತ್ತಮಂ ವರುಣ ಪಾಶಂ** ಇತ್ಯಾದಿ ಋಕ್ಕುಗಳಲ್ಲಿ ಉಕ್ತವಾದದ್ದೂ ಸುಖದಿಂದ ತಿಳಿಯಲು ಶಕ್ಯವಾಗುತ್ತದೆ. ಹೀಗಾದರೆ ಶುನಶ್ಶೇಪರು ೧೦೦ಋಕ್ಕುಗಳನು ಕಂಡಿದ್ದಾರೆಂದಾದರೆ ಹಿರಣ್ಯಸ್ತೂಪರು ಕಂಡಿರತಕ್ಕ **ತ್ವಮಗ್ನೇ ಪ್ರಥಮಃ** ಇತ್ಯಾದಿ ೩ಋಕ್ಕುಗಳನ್ನೂ ಶುನಶ್ಶೇಪರು ಕಂಡದ್ದು ಎಂದಾಗ ಬೇಕಾಗುವುದು ಎಂದರೆ) ಅತಉತ್ತರಂಪರಂ (ಎಂದು ಹೇಳಿರುವರು. ಅದನ್ನು ತ್ರ್ಯೂನಂ ಇತ್ಯಾದಿಗಳಿಂದ ವಿವರಿಸುತ್ತಾರೆ) **ಕಸ್ಯ ನೂನಂ** ಇದು ಮೊದಲಾದ ಆನುಪೂರ್ವಿಯಲ್ಲಿ ೩ಋಕ್ಕುಗಳಿಂದ ಕಡಿಮೆಯೇ ಆದ ೧೦೦ ಋಕ್ಕುಗಳು ಇವೆ. ಬೇರೆ ೩ಋಕ್ಕುಗಳು (1) **ತ್ವನ್ನೋ ಅಗ್ನೇ ವರುಣಸ್ಯ ವಿದ್ವಾನ್** (2)**ಸತ್ವ ನ್ನೋಅಗ್ನೇಽವಮೋ ಭವೋತಿ** ಎಂಬ ೨ಋಕ್ಕುಗಳು ೪ನೇ ಮಂಡಲದ ೩ನೇ ಅಷ್ಟಕದಲ್ಲಿ ೪ನೇ ಆಧ್ಯಾಯದಲ್ಲಿದೆ. (3) **ಶುನಶ್ಚಿಚ್ಛೇಪಂ ನಿದಿತಂ ಸಹಸ್ರಾತ್** ಎಂಬ ೧ಋಕ್ಕು ೫ನೇ ಮಂಡಲದಲ್ಲಿ ೩ನೇ ಅಷ್ಟಕದ ೮ನೇ ಅಧ್ಯಾಯದಲ್ಲಿದೆ. (ಆದಕಾರಣ **ತ್ವಮಗ್ನೇ ಪ್ರಥಮಃ** ಇತ್ಯಾದಿಗಳನ್ನು ಶುನಶ್ಶೇಪರು ಕಂಡದ್ದಲ್ಲ. ಶುನಶ್ಶೇಪರು ಬೇರೆ ೩ಋಕ್ಕುಗಳನ್ನು ಕಂಡಿರುವುದರಿಂದ ಶತರ್ಚಿಗಳು ಎನ್ನುವುದಕ್ಕೆ ಹಾನಿಯೂ ಇಲ್ಲ.) (೨) (ಹಾಗಾದರೆ ಈ ರೀತಿಯಾಗಿ ಏತಕ್ಕೆ ಕಲ್ಪಿಸುವುದು. ಶುನಶ್ಶೇಪರೇ ಈಗ ೯೭ ಋಕ್ಕುಗಳನ್ನೇ ಕಂಡದ್ದು, ಎಂದಾಗಲಿ. ಅಲ್ಪವಾದ ಪ್ರಯುಕ್ತ ವಿವಕ್ಷಾ ಮಾಡಲಿಲ್ಲ, ಆದ ಕಾರಣ ೩ ಋಕ್ಕುಗಳು ಕಡಿಮೆ ಇದ್ದರೂ ಶತರ್ಚಿ ಎಂಬ ನಾಮವೂ ಸಂಗತವೇ ಆಗುವುದು ಎಂದು ಅನುಕ್ರಮಣಿಕಾನುಸಾರಿಯು ಶಂಕಿಸಿದರೆ) ಬ್ರಾಹ್ಮಣದಲ್ಲಿ ಆದರೂ ಒಂದೇ ಕಾಲದಲ್ಲಿ ಒಂದೇ ದೇಶದಲ್ಲಿ ಒಂದೇ ಅವಸ್ಥೆಯಲ್ಲಿ ಶುನಶ್ಶೇಪರು ಕಡಿಮೆ ಇಲ್ಲದೆ ೧೦೦ ಋಕ್ಕುಗಳನ್ನೇ ಕಂಡಿರುವರು ಎಂದು **ಸ ಪ್ರಜಾಪತಿಮೇವ ಪ್ರಥಮಂ** ದೇವತಾನಾಮುಪಸಸಾರ **ಕಸ್ಯ ನೂನಂ ಕತಮಸ್ಯಾಮೃತಾನಾಂ** ಎಂಬ ಋಕ್ಕನ್ನು ಆರಂಭಿಸಿ **ಅಥೈನಮುವಭೃಥಮಭ್ಯವನಿನಾಯ, ತ್ವಂ ನೋ ಅಗ್ನೇ ವರುಣಸ್ಯ ವಿದ್ವಾನಿತ್ಯೇತಾಭ್ಯಾಮಥೈನಮತ ಊರ್ಧ್ವಮಗ್ನಿಮಾಹವನೀಯಮುಪಸ್ಥಾಪಯಾಂಚಕಾರ ಶುನಶ್ಚಿಚ್ಛೇಪಂ** ನಿದಿತಂ **ಸಹಸ್ರಾತ್** ಎಂಬ ಪರ್ಯಂತ ಕ್ರಮವಾಗಿ ೧೦೦ ಋಕ್ಕುಗಳನ್ನು ಕಂಡಿದ್ದಾರೆಂದು ಹೇಳಿ ತದೇತತ್ಪರ **ಮೃಕ್ಕೃತ ಗಾಥಂ ಶೌನಶ್ಶೇಪಮಾಖ್ಯಾನಂ** ಎನ್ನುವುದರಿಂದ **ಕಡಿಮೆಯಿಲ್ಲದೆ** ೧೦೦ ಋಕ್ಕುಗಳನ್ನೇ ಕಂಡಿದ್ದಾರೆಂದು ಹೇಳಿದೆ ಬ್ರಾಹ್ಮಣದಲ್ಲಿ ಸ್ಪಷ್ಟವಾಗಿ ಹೇಳಿದ ಋಕ್ಕುಗಳ ಅಕ್ರಮವನ್ನೂ ಇಲ್ಲಿಯೂ ಅನುಸರಿಸಲೇಬೇಕು. ಇಲ್ಲವಾದರೆ ಬ್ರಾಹ್ಮಣ ಭಾಗದಿಂದ ವಿರೋಧವು ಬರುವುದು.

(ಬ್ರಾಹ್ಮಣೋಕ್ತಿಯನ್ನನುಸರಿಸ ಬೇಕೆಂದು ಹೇಳದೆ ಬ್ರಾಹ್ಮಣೋಕ್ತಕ್ರಮವನ್ನು ಅನುಸರಿಸಬೇಕು ಎಂದು ಹೇಳಿದೆ.ಇಲ್ಲಿ ಕ್ರಮಶಬ್ದ ಹೇಳಿದುದಕ್ಕೆಸ್ವಾರಸ್ಯವು ಕಾಣದಿರುವುದರಿಂದ ಅಥವಾ ಎಂದು ಪಕ್ಷಾಂತರ ಹೇಳಿದರು.

(ಅತ್ರಾಪಿ=)೯ರಿಂದ ಕಡಿಮೆಯಾದ ೧೦೦ಋಕ್ಕುಗಳು ಎಂಬಪಕ್ಷದಲ್ಲಿಯೂ ಬ್ರಾಹ್ಮಣದಲ್ಲಿಹೇಳಿದ ಕ್ರಮವೇ ಆಗುವುದು. ಯಥಾ ಶ್ರುತವಾದ ಕ್ರಮವಲ್ಲ. ಹೇಗೆಂದರೆ- **ನಮೋ ಮಹದ್ಭ್ಯ** ಎಂಬಶ್ರುತಿಯ ಆನಂತರದಲ್ಲಿ **ಯಚ್ಚಿದ್ಧಿ ಸತ್ಯ ಸೋಮ ಪಾಃ** ಇದು ಮೊದಲಾದ ಋಕ್ಕುಗಳಿಂದ ಇಂದ್ರನನ್ನೂ ಅಶ್ವಿನೀ ದೇವತೆಗಳನ್ನು ಉಷೋ ದೇವತೆಯನ್ನು ಸ್ತುತಿಸುತ್ತಿರಲು ಶುನಶ್ಶೇಪನನ್ನು ಕಟ್ಟಿದ ಹಗ್ಗವು ಬಿಟ್ಟು ಹೋಯಿತು. ಆ ಶುನಶ್ಶೇಪನನ್ನು ಅಧಿಕರಿಸಿ ಪ್ರವೃತ್ತವಾದ ಬ್ರಾಹ್ಮಣವು. ಆ ಬ್ರಾಹ್ಮಣದಲ್ಲಿ ಆದರೂ ಆಧುನಿಕರು **ಯಚ್ಚಿದ್ಧಿ ಸತ್ಯಸೋಮಪಾಃ** ಎನ್ನುವುದಕ್ಕಿಂತ ಮೊದಲು ಪಠಿತವಾದುದಾಗ್ಯೂ **ಯತ್ರ ಗ್ರಾವಾ** ಎಂಬ ೯ ಋಕ್ಕುಗಳುಳ್ಳ ಸೂಕ್ತದಲ್ಲಿರುವ **ಯಚ್ಚಿದ್ಧಿ ತ್ವಂ ಗೃಹೇ ಗೃಹೇ** ಇದು ಮೊದಲಾದ ೫ ಋಕ್ಕುಗಳ ಕಾರ್ಯವನ್ನು ಹೇಳಿ ಅವಕ್ಕಿಂತ ಮೊದಲಿರುವ **ಯತ್ರ ಗ್ರಾವಾ** ಎಂಬ ೪ ಋಕ್ಕುಗಳಿಂದ ಹೋಮವು ಪ್ರತಿಪಾದಿಸಲ್ಪಟ್ಟಿದೆ. ಆ ಶುನಶ್ಶೇಪರನ್ನು ಕುರಿತು ಋತ್ವಿಜರು ಹೇಳಿದರು. ನೀವೇ ನಮ್ಮ ಈ ಹಗಲಿನ ಸಂಸ್ಥೆಯನ್ನು ಹೊಂದಬೇಕು. ಇತ್ಯಾದಿ ಪ್ರಕಾರ ಹೇಳಿದರು. (ಪ್ರಕೃತವೇನಾಯಿತೆಂದರೆ) ಅಲ್ಲಿ **ಯತ್ರ ಗ್ರಾವಾ** ಇದು ಮೊದಲಾದ ೯ ಋಕ್ಕುಗಳಿಗೆ **ತ್ವಮಗ್ನೇ ಪ್ರಥಮಃ** ಎನ್ನುವುದಕ್ಕಿಂತ ಪೂರ್ವದಲ್ಲಿ ೩ ಋಕ್ಕುಗಳಿಂದ ಸ್ಪಷ್ಟವಾಗಿ ಪಠತ್ವವು ತಿಳಿಯುತ್ತದೆ. ಯದ್ಯಪಿ ಇಲ್ಲಿ **ಸ ಇಂದ್ರಂ ತುಷ್ಟಾವ, ಯಚ್ಚಿದ್ಧಿ ಸತ್ಯ ಸೋಮಪಾಃ** ಎಂಬೀ ಸೂಕ್ತದಿಂದ ಎಂದೇ ಹೇಳಿದೆ. ಇವಕ್ಕಿಂತ ಮೇಲಿನ ಸೂಕ್ತದಿಂದ ಎಂದು ಹೇಳಲಿಲ್ಲ. ಅದಾಗ್ಯೂ **ಅಗ್ನೇರ್ವಯಂ ಪ್ರಥಮಸ್ಯಾಮೃತಾನಾಂ** ಎಂಬೀ ಋಕ್ಕು, ಹಾಗೆಯೇ **ಅಭಿ ತ್ವಾ ದೇವ ಸವಿತಃ** ಎಂಬೀ ಋಕ್ತ್ರಯ ಇವುಗಳಿಂದ ಎಂದು ಪಾಠ ಕ್ರಮವಿದೆ. (೩) **(ಕಸ್ಯ ಪಂಚೋನಾಽಜೀಗರ್ತಿಃ ಶುನಶ್ಶೇಪಃ ಸ ಕೃತ್ರಿಮೋ ವೈಶ್ವಾಮಿತ್ರೋ ದೇವರಾತೋ'ವಾರುಣಂತು ತ್ರೈಷ್ಟುಭಮಾದಾ ಕಾಂತ್ಯಾಗ್ನೇಯ್ಯೌ ಸಾವಿತ್ರಸ್ತ್ರಚೋ ಗಾಯತ್ರೋಽಸ್ತ್ಯಾಂತ್ಯಾಭಾಗೀ** ಎಂದು ಅನುಕ್ರಮಣಿಕೆಯು. ಕಸ್ಯ ಎನ್ನುವ ಸೂಕ್ತಕ್ಕೆ ೧೫ ಋಕ್ಕು. ಅಜೀಗರ್ತರ ಮಗನಾದ ಆಜೀಗರ್ತಿಯು ಶುನಶ್ಶೇಪರು ಋಷಿಗಳು. ಇವರೇ ವಿಶ್ವಾಮಿತ್ರರ ಕೃತ್ರಿಮ ಪುತ್ರರು. ದೇವರಾತರೆಂದು ನಾಮವು. ಈ ಸೂಕ್ತಕ್ಕೂ ಮೇಲಿನ ಸೂಕ್ತಕ್ಕೂ ವರುಣನು ದೇವತೆಯು. ಈ ಋಕ್ಕುಗಳಲ್ಲಿ ೪೪ ಅಕ್ಷರಗಳಿದ್ದುದರಿಂದ ತ್ರಿಷ್ಟುಪ್ ಛಂದಸ್ಸು. ೧ನೇ ಋಕ್ಕು ಪ್ರಜಾಪತಿ ದೇವತಾಕವು. ೨ನೇ ಋಕ್ಕು ಅಗ್ನಿ ದೇವತಾಕವು. ಮೇಲಿನ ೩ ಋಕ್ಕುಗಳು ಸವಿತೃದೇವತಾಕಗಳು. ಗಾಯತ್ರಿ ಛಂದಸ್ಕವು. ಸಾವಿತ್ರದ ಅಂತ್ಯವಾದ **ಭಗಭಕ್ತಸ್ಯ** ಎಂಬ ಋಕ್ಕು ಭಗದೇವತಾಕವು. (**ಕತರ್ನೂಃ** ಇತ್ಯಾದಿಗಳಿಂದ ಶ್ರೀವಿಷ್ಣುವಿನಲ್ಲಿ ಈ ಋಕ್ಕನ್ನು ಯೋಜನಾಮಾಡುತ್ತಾರೆ. ಸರ್ವೇಶ್ವರನಾದ ಶ್ರೀ ಹರಿಯು ವಿವಕ್ಷಿತನಾದರೆ(ಆಗ ಹೀಗೆ ಯೋಜನಾ ಮಾಡಬೇಕು.) ಸರ್ವಕರ್ತನೂ ದೇವತೆಗಳ ಮಧ್ಯದಲ್ಲಿ ಅತ್ಯುತ್ಕೃಷ್ಟವಾದ ಆನಂದಾತ್ಮಕ ಶರೀರವುಳ್ಳವನೂ, ಆದ ಶ್ರೀ ವಿಷ್ಣುವಿನ ಮಂಗಲಕರವಾದ ನಾಮವನ್ನು ಈಗ (ಮನಾಮಹೇ= ಈ ಧಾತುವು ನಾಮ ಎಂಬ ಶಬ್ದವನ್ನು ಗ್ರಹಣಮಾಡಿದಸಾಮರ್ಥ್ಯದಿಂದ ಉಚ್ಚಾರಣಾದಿರೂಪವಾದ ಅರ್ಥದಲ್ಲಿ ಉಚ್ಚರಿಸುತ್ತೇವೆ. ಸ್ಮರಿಸುತ್ತೇವೆ. ಆವೃತ್ತ್ಯಾದಿಗಳನ್ನು ಮಾಡುತ್ತೇವೆ. (ಅಂತಹ ಪ್ರಸಿದ್ಧನಾದ ಸರ್ವಕರ್ತನಾದ ಶ್ರೀವಿಷ್ಣುವು ನಮ್ಮನ್ನು) ಲಕ್ಷ್ಮೀದೇವಿಗಾಗಿ ಪುನಃ ಕೊಡಬೇಕು. ಆ ಮೇಲೆ ತಂದೆಯಾದ ಆ ದೇವನನ್ನು, ತಾಯಿಯಾದ ಶ್ರೀ ದೇವಿಯನ್ನು ನೋಡುವೆನು. (೪) (ಕತಮಸ್ಯಾಮೃತಾನಾ. ಎಂಬುವುದನ್ನು ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಆ ಶ್ರೀ ಹರಿಯು ಬ್ರಹ್ಮರುದ್ರರೇ ಪ್ರಧಾನರಾಗಿ ಉಳ್ಳ ಮರಣವಿಲ್ಲದಿರುವುದರಿಂದ ಅಮೃತರೆನಿಸಿದ ಮುಕ್ತರ ಸಕಾಶದಿಂದ ಯಾವ ಕಾರಣದಿಂದ ಆನಂದ ಮೊದಲಾದ ಸರ್ವಗುಣಗಳಲ್ಲಿ ಆತ್ಯಧಿಕನೋ. ಆದುದರಿಂದ ಈ ಶ್ರೀಹರಿಯು (ಕತಮಃ=) ಅತಿಶಯಿತ ಸುಖಸ್ವರೂಪನೆನಿಸುತ್ತಾನೆ. (೫) (**ಮಹ್ಯೈ ಅದಿತಯೇ** ಎಂಬುವುದನ್ನು ಮೊದಲು ಲಕ್ಷ್ಮೀವಿಷಯಕವಾಗಿ ವ್ಯಾಖ್ಯಾನ ಮಾಡಿರುತ್ತಾರೆ. ಈಗ ಭಗವದ್ವಿಷಯಕವೂ ಆಗುತ್ತದೆಂದು ವ್ಯಾಖ್ಯಾನ ಮಾಡುತ್ತಾರೆ.) ಆ ಶ್ರೀಹರಿಯು ಅಖಂಡಿತ (ವ್ಯಾಪ್ತ)ನಾದ ಪ್ರಯುಕ್ತ (ದೋ ಅವಖಂಡನೇ ಎಂಬ ಧಾತು ವ್ಯಾಖ್ಯಾನದಿಂದ ದೀಯತೇ=ಖಂಡ್ಯತೇ ಇತ್ಯದಿತಿಃ, ನ ದಿತಿಃ ಅದಿತಿಃ ಎಂಬ ವ್ಯುತ್ಪತ್ತಿಯಿಂದ) ಅದಿತಿಯೆನಿಸುತ್ತಾನೆ. ಯಾವ ಕಾರಣದಿಂದ ಸ್ತ್ರೀರೂಪನಾದ ಶ್ರೀಹರಿಯು ಸರ್ವತ್ರ (ಮಹತಿ=) ವ್ಯಾಪ್ತನೋ ಆದಕಾರಣ ಮಹೀ=ಸಮಸ್ತ

ದೇಶಗಳಲ್ಲಿ **ವ್ಯಾಪ್ತನು. ಸ್ತ್ರೀರೂಪನು.** (೬) (ಮಹತ್ ಶಬ್ದ ಅಖಂಡ ಶಬ್ದಗಳಿಗೆ ವ್ಯಾಪ್ತ ಎಂಬ ಅರ್ಥವಿರುವುದರಿಂದ ಮಹತ್ತ್ವವೂ ಅಖಂಡಿತತ್ವವೂ ಒಂದೇ. ಆದಕಾರಣ ಪುನರುಕ್ತಿಯನ್ನು ಪರಿಹರಿಸುತ್ತಾರೆ.) ಆ ವಿಷ್ಣುವಿನ ಮಹತ್ತ್ವವು ಸಮಸ್ತದೇಶಗಳಲ್ಲಿ ವ್ಯಾಪಿಸಿಕೊಂಡಿರುವುದರಿಂದ ಹೇಳಲ್ಪಟ್ಟಿದೆ. ಆ ವಿಷ್ಣುವಿನದ್ದೇ ಅಖಂಡಿತತ್ವವಾದರೂ ಅನಂತ ಗುಣಗಳಿದ್ದುದರಿಂದಲೂ ಸಮಸ್ತ ಕಾಲಗಳಲ್ಲಿ ವ್ಯಾಪಿಸಿಕೊಂಡಿರುವುದರಿಂದಲೂ ಹೇಳಲ್ಪಟ್ಟಿದೆ (೭) (ಪಿತರಂ ಮಾತರಂ ಚ ಎನ್ನುವುದನ್ನು ಮೊದಲು ವಿಷ್ಣು ಲಕ್ಷ್ಮೀ ವಿಷಯಕವಾಗಿ ವ್ಯಾಖ್ಯಾನ ಮಾಡಿರುವರು. ಈಗ ಆ ಎರಡನ್ನು ಪರಮಾತ್ಮ ವಿಷಯಕವನ್ನಾಗಿಯೂ ಮಾತರಂ ಎನ್ನುವುದನ್ನು ಲಕ್ಷ್ಮೀ ವಿಷಯಕವನ್ನಾಗಿಯೂ ವ್ಯಾಖ್ಯಾನ ಮಾಡುತ್ತಾರೆ) ಆ ಶ್ರೀಹರಿಯೇ (ಸರ್ವಲೋಕಕ್ಕೂ) ಮುಖ್ಯವಾಗಿ ಮಾತೆಯು. ಚ=ಶ್ರೀದೇವಿಯು ಮಾತೆಯು. ಆ ಶ್ರೀದೇವನೇ ಮುಖ್ಯತಃ ತಂದೆಯು. ಆ ಶ್ರೀಹರಿಯಲ್ಲಿಯೇ ಯಾವ ಕಾರಣದಿಂದ ಸದಾ (ನಾವು) ಆಶ್ರಿತರಾಗಿರುತ್ತೇವೋ, ಆದುದರಿಂದ ಪುನಃ ಶ್ರೀಹರಿಯು (ನಮ್ಮನ್ನು ಶ್ರೀಹರಿಯ ಸ್ತ್ರೀರೂಪಕ್ಕೋಸ್ಕರ, ಅಥವಾ ಶ್ರೀದೇವಿಗೋಸ್ಕರ) ಕೊಡಬೇಕು. (ಅಂದರೆ ವೈಕುಂಠಾದಿಗಳಲ್ಲಿರ ತಕ್ಕ ರೂಪವಿಶೇಷವನ್ನು ವಿಶೇಷತಃ ಹೊಂದಿಸಿಕೊಡಬೇಕು. (೮) (ಅದಿತಿ ಶಬ್ದವನ್ನು ಶ್ರೀವಿಷ್ಣುವಿನಲ್ಲಿ ಪ್ರಕಾರಾಂತರದಿಂದ ನಿರ್ವಚನ ಮಾಡುತ್ತಾರೆ) ಶ್ರೀಹರಿಯು ಸಮಸ್ತ ಜಗತ್ತನ್ನು ಸಂಹರಿಸುತ್ತಾನೆ. ಆದುದರಿಂದಲೇ ಅದಿತಿಯೆನಿಸುತ್ತಾನೆ(ಎಂದು **ಸರ್ವಂ ವಾ ಅತ್ತೀತಿ ತದದಿತೇರದಿತಿತ್ವಂ** ಎಂದು ಅದಿತಿ ಶಬ್ದ ನಿರ್ವಚನಪರವಾದ ಶ್ರುತಿಬಲದಿಂದ ಅಂಗೀಕರಿಸಬೇಕು.) ಎಂದು ಏವ ಶಬ್ದದಿಂದ ಹೇಳಿದರು. (**ಮಹ್ಯೈ ಅದಿತಯೇ** ಎನ್ನುವುದು ಇಂದಿರಾ ವಿಷಯಕವೂ ಆಗುತ್ತದೆಂದು ಹೇಳಿದೆ. ಅದು ಯಾವ ನಿರ್ವಚನದಿಂದ ಎಂದರೆ) (ಲಕ್ಷ್ಮೀದೇವಿಗೂ ಕೂಡ ಸ್ವಯೋಗ್ಯಮಹತ್ತ್ವ ಅಖಂಡಿತತ್ವ ಅತ್ತೃತ್ವಗಳು ಇದ್ದುದರಿಂದ) ಲಕ್ಷ್ಮೀದೇವಿಯೂ ಕೂಡ ಇದೇ ನಿರ್ವಚನದಿಂದ ಮಹೀ ಎಂದೂ ಅದಿತಿಯೆಂದೂ ಹೇಳಲ್ಪಡುತ್ತಾಳೆ. (೯) (ಶ್ರೀ ವಿಷ್ಣುವಿನಲ್ಲಿ ಈ ಋಕ್ಕನ್ನು ವ್ಯಾಖ್ಯಾನಮಾಡಿ ಚತುರ್ಮುಖನಲ್ಲಿಯೂ ವ್ಯಾಖ್ಯಾನ ಮಾಡುತ್ತಾರೆ.) ಚತುರ್ಮುಖ ಬ್ರಹ್ಮನೂ ಕೂಡ ಹೀಗೆಯೇ ಜಗತ್ಕರ್ತೃತ್ವಾದಿಗಳಿಂದ ಕಃ ಇತ್ಯಾದಿ ಶಬ್ದಗಳಿಂದ ಹೇಳಲ್ಪಡುತ್ತಾನೆ. **ಕಃ ಪ್ರಜಾಪತಿರುದ್ದಿಷ್ಟಃ ಕೋ ವಾಯುರಿತಿ ಶಬ್ದಿತಃ** । ಎಂದು ವರರುಚಿಯ ಉಕ್ತಿಪ್ರಕಾರ ಕ ಶಬ್ದವು ಚತುರ್ಮುಖನಲ್ಲಿ ರೂಢವೂ ಆಗಿದೆ ಎಂದು ಈ ಏವ ಎಂಬಲ್ಲಿದ್ದ ಏವ ಶಬ್ದದ ಅಭಿಪ್ರಾಯವು. (೧೦) ಹಾಗಾದರೆ **ಅಮೃತಾನಾಂ ಕತಮಸ್ಯ** ಎಂಬುವುದು ಚತುರ್ಮುಖನಲ್ಲಿ ಕೂಡುವುದಿಲ್ಲ. ಶ್ರೀ ವಿಷ್ಣು ರಮಾ ತನಗೆ ಸಮಾನಿಕರಾದ ಋಜುಗಣಸ್ಥರು. ಇವರಿಗಿಂತ ಆಧಿಕ್ಯವಿಲ್ಲ ಎಂದರೆ) ಯಾವಕಾರಣದಿಂದ ಆ ಚತುರ್ಮುಖನಿಗೆ ಯಾವಾಗಲೂ ತನಗೆ ಸಮಾನಿಕರಾದ ಋಜುಗಣಸ್ಥರಿಗಿಂತ ಇತರರಾದ ಸಮಸ್ತ ಜೀವರಿಗಿಂತಲೂ ಅತ್ಯಧಿಕಗಳೇ ಆದ ಗುಣಗಳೂ ಇರುತ್ತವೋ, ಆದಕಾರಣ ಆ ಚತುರ್ಮುಖನೂ ಕೂಡ ಆ ವಾಕ್ಯಗಳಿಗೆ ಯೋಗ್ಯನೇ (ವಾಚ್ಯನೇ) ಆಗಿರುತ್ತಾನೆ. (೧೧) ಉತ್ತರಾರ್ಧವನ್ನು ಚತುರ್ಮುಖನಲ್ಲಿ ಯೋಜನಾ ಮಾಡುತ್ತಾರೆ) ಈ ಚತುರ್ಮುಖನು ನಮ್ಮನ್ನು ಶ್ರೀ ವಿಷ್ಣುವಿಗೂ ಲಕ್ಷ್ಮೀದೇವಿಗೂ ಕೂಡ ಕೊಡಲಿ. ಆ ಲಕ್ಷ್ಮೀನಾರಾಯಣರು ಸರ್ವತ್ರ ವ್ಯಾಪ್ತರಾಗಿರುವುದರಿಂದ ಪ್ರಾಪ್ತರಾದಾಗ್ಯೂ ನಮ್ಮನ್ನು ಪುನಃ ವೈಕುಂಠಾದಿಗಳಲ್ಲಿರತಕ್ಕರೂಪ ವಿಶೇಷವನ್ನು ಹೊಂದಿಸಲಿ. (೧೨) (ಹಾಗಾದರೆ ಪ್ರಾರ್ಥನೆಯು ಹೇಗೆಂದರೆ) ವಿಶೇಷದೇಶಗಳ ಪ್ರಾಪ್ತಿಗಾಗಿ ಶ್ರೀ ವಿಷ್ಣುವು ಸರ್ವಗತನಾದಾಗ್ಯೂ ಆತನ ಪ್ರಾಪ್ತಿಯು (ಪ್ರಾರ್ಥಿಸಲ್ಪಡುತ್ತದೆ.) (ವಿಶೇಷ ದೇಶವು ಯಾವುದೆಂದರೆ) ವೈಕುಂಠ ಮೊದಲಾದಭಗವಲ್ಲೋಕವು (ವಿಶೇಷ ದೇಶವೆಂದು) ಹೇಳಲ್ಪಟ್ಟಿದೆ. (ವೈಕುಂಠಾದಿಗಳು ವಿಶೇಷದೇಶವು ಹೇಗೆ ಆಗುವುದೆಂದರೆ)ಶ್ರೀ ಹರಿಯು ಸರ್ವಗತನಾದಾಗ್ಯೂವೈಕುಂಠಾದಿಗಳು ಶ್ರೀಹರಿಗೆ ಸರ್ವದಾ ಅಭಿವ್ಯಕ್ತಿ ಸ್ಥಾನವಾಗಿರುವುದರಿಂದ ವೈಕುಂಠಾದಿಗಳು ವಿಶೇಷ ದೇಶಗಳೆನಿಸುತ್ತವೆ. ॥ ೧ ॥

ಅವ ॥ ಈ ಋಕ್ಕು ಅಗ್ನಿದೇವತಾಕವು. ಅಗ್ನೇಃ ಎನ್ನುವುದರಿಂದ ಪ್ರಸಿದ್ಧವಾದ ಅಗ್ನಿಯು,ಅಗ್ನ್ಯಂತರ್ಗತನು, ಶ್ರೀಹರಿಯು ಅಥವಾ ಅತಿರಿಕ್ತವಾದ ಪರಶುರಾಮಾಖ್ಯ ವಿಷ್ಣು ವಿಶೇಷವೂ ಗ್ರಾಹ್ಯವು.

ಋ ॥ (೨೫೫) ಅಗ್ನೇರ್ವಯಂ ಪ್ರಥಮಸ್ಯಾಮೃತಾನಾಂ ಮನಾಮಹೇ ಚಾರು ದೇವಸ್ಯ ನಾಮ । ಸನೋ ಮಹ್ಯಾ ಅದಿತಯೇ ಪುನರ್ದಾತ್ಪಿತರಂ ಚ ದೃಶೇಯಂ ಮಾತರಂ ಚ ॥ ೨ ॥

ಅ ॥ (ಹಿಂದಿನ ಋಕ್ಕಿನಂತೆಯೇ ಅರ್ಥವು.) ವಯಂ=ನಾವು, ದೇವತೆಗಳ ಮಧ್ಯದಲ್ಲಿ ಪ್ರಥಮಸ್ಯ= ಮೊದಲಿನವನಾದ ಆಗ್ನೇಃ=ಅಗ್ನ್ಯಂತರ್ಗತ ಶ್ರೀಹರಿಯ, ಚಾರುವಾದ ನಾಮವನ್ನು ಪುನಃ ಪುನಃ ಉಚ್ಚರಿಸುತ್ತೇವೆ. ಸಃ=ಆ ಶ್ರೀಹರಿಯು. (ಬಾಕಿ ಸಂಪೂರ್ಣ ಹಿಂದಿನಂತೆ) ॥ ೨ ॥

ಭಾ ॥ ತಸ್ಯೈವ ವಾಕ್ಯದ್ರೂಪಮಗ್ನ್ಯಾಖ್ಯಮುಕ್ತಂ ಯೊ ಯಜ್ಞೇಶೋ ಹೂಯತೇ ಜಾಮದಗ್ನ್ಯಃ । ಸ ದೇವಾನಾಂ ಪ್ರಥಮೋ ನಾಮ ತಸ್ಯ ಸ್ಮೃತಂ ಸಾರ್ಥಂ ಸರ್ವಕಾಮಪ್ರದಂ ಸ್ಯಾತ್ ॥ ೨ ॥

ಅ ॥ (ಋಗರ್ಥವು ಸ್ಪಷ್ಟವಾಗಿರುವುದರಿಂದ ಮುಖ್ಯಾರ್ಥವನ್ನು ಮಾತ್ರ ಹೇಳುತ್ತಾರೆ.) ಶ್ರೀಪರಮಾತ್ಮನದ್ದೇ ಅಗ್ನಿಯೆಂದು ಹೆಸರುಳ್ಳ ಇನ್ನೊಂದು ರೂಪವು (ಈ ಋಕ್ಕಿನಲ್ಲಿ ಹೇಳಲ್ಪಟ್ಟಿದೆ. ಹಾಗಾದರೆ— **ಪ್ರಜಾಪತಿರುವಾಚ ಅಗ್ನಿರ್ವೈ ದೇವಾನಾಂ ನೇದಿಷ್ಠಸ್ತಮೇವೋಪಧಾವೇತಿ. ಸೋಽಗ್ನಿಮುಪಸಸಾರಾಗ್ನೇರ್ವಯಂ ಪ್ರಥಮಸ್ಯಾಮೃತಾನಾಂ ಇತ್ಯೇತಯರ್ಚಾ** ಎಂದು ಬ್ರಾಹ್ಮಣವು,ಎಂದರೆ ಆ ಶ್ರೀಹರಿಯೇ ಅಗ್ನಿಯೆಂದು ಹೆಸರುಳ್ಳವನು ಉಕ್ತನಾಗಿದ್ದಾನೆಂದು ಹೇಳದೆ ಆ ಶ್ರೀಪರಮಾತ್ಮನದ್ದೇಇನ್ನೊಂದು ರೂಪವು ಎಂದು ಹೇಳಿದೆ.ಸ **ಏವ** ಎಂದು ಹೇಳಿದರೆ ಈ ಋಕ್ಕಿನಲ್ಲಿಯೂ ಪ್ರಜಾಪತಿ ನಾಮಕನಾದ ಪರಮಾತ್ಮನೇ ವಾಚ್ಯನೆಂದು ಪ್ರಾಪ್ತವಾಗುವುದರಿಂದ **ತಂ ಪ್ರಜಾಪ್ರತಿಃ** ಎಂದು ಭಿನ್ನವಿಷಯವನ್ನು ಪ್ರತಿಪಾದಿಸುವ ಬ್ರಾಹ್ಮಣದಿಂದ ವಿರೋಧವು ಬರುವುದು, ಎಂಬ ಆ ಶಂಕೆಯ ಪರಿಹಾರವು **ಅಗ್ನ್ಯಾಖ್ಯಃ** ಎಂಬ **ಉಕ್ತಿಯಿಂದಲೇ** ಆಗುತ್ತದೆ. ಅದನ್ನು ಬಿಟ್ಟು ಪ್ರಜಾಪತಿಯಲ್ಲಿ ಅಂತರ್ಗತವಾದ ರೂಪದ್ವಿಶೆಯಿಂದ ಭಿನ್ನವಾದ ಅಗ್ನಿನಾಮಕ ರೂಪವನ್ನು ಇಲ್ಲಿ ಹೇಳಿದೆ. ಅಂತಹ ರೂಪವು ಯಾವುದು? ಎಂದರೆ) ಸಮಸ್ತ ಯಜ್ಞಗಳಿಗೂ ಅಧಿಪತಿಯಾದ ಯಾವ ಪರಶುರಾಮನು ಹೋಮಿಸಲ್ಪಡುತ್ತಾನೋ, (ಯಜ್ಞ ಭೋಕ್ತೃಗಳಾದ ದೇವತೆಗಳಿಗೆ ನಿಯಾಮಕನು ಎಂದು ಹೇಳಿದುದರಿಂದ **ತದಧೀನತ್ವಾತ್** ಎಂಬ ನ್ಯಾಯದಿಂದ ಅಗ್ನ್ಯಾದಿಗಳಲ್ಲಿರತಕ್ಕ ಅಗ್ನಿತ್ವಾದಿಗಳು ಭಗವದಧೀನಗಳಾಗಿರುವುದರಿಂದ ಅಗ್ನ್ಯಾದಿ ಶಬ್ದಗಳ ಪ್ರವೃತ್ತಿಯು. ಅಥವಾ ಇದಿ ಪರಮೈಶ್ವರ್ಯೇ ಎಂಬ ಧಾತು ವ್ಯಾಖ್ಯಾನದಿಂದ ಯಜ್ಞೇಶಃ ಎನ್ನುವುದು ಇಂದ್ರ ಶಬ್ದದ ನಿರ್ವಚನವು. ಹಾಗೆಯೇ **ಹೂಯತೇ** ಎನ್ನುವುದರಿಂದಲೂ ಅಗ್ನ್ಯಾದಿಗಳಲ್ಲಿ ಅಂತರ್ಗತನಾದ ಶ್ರೀ ವಿಷ್ಣುವು ಹೋಮ ವಿಷಯನೆಂದು ಹೇಳಿದುದರಿಂದ ಅತ್ತೀತಿ ಅಗ್ನಿಃ ಎಂದು ನಿರ್ವಚನವು ಉಕ್ತವಾಯ್ತು.) (ಪ್ರಥಮಸ್ಯಾಮೃತಾನಾಂ ಎಂಬುವುದನ್ನು ವ್ಯಾಖ್ಯಾನ ಮಾಡುತ್ತಾರೆ.) ಆ ಪರಶುರಾಮನು ದೇವತೆಗಳಲ್ಲಿ ಆದಿ ಭೂತನು. (ಹಾಗಾದರೆ—**ಈ** ಋಕ್ಕಿನಲ್ಲಿಯೂ ಪೂರ್ವ ಋಕ್ಕಿನಲ್ಲಿಯೂ ನಾಮಸ್ಮರಣಾದಿಗಳು ಭಗವತ್ಪ್ರಾಪ್ತಿಗೆ ಹೇತುವು ಎಂದು ಹೇಳಲ್ಪಡುತ್ತದೆ. **ಕೋ ನಃ ಸ ನಃ** ಎಂದು ಫಲವೂ ಪ್ರಾರ್ಥಿಸಲ್ಪಡುತ್ತದೆ. ಅದಯುಕ್ತವು. ನಾಮಸ್ಮರಣಾದಿ ಮಾತ್ರವು ವೈಕುಂಠಾದಿಗಳ ಪ್ರಾಪ್ತಿಗೆ ಸಾಧನವೆನ್ನುವುದು, **ನಾನ್ಯಃ ಪಂಥಾ** ಎಂಬ ಉಕ್ತಿಯಿಂದ ಭಗವಂತನ ಜ್ಞಾನದಿಂದ ಅತಿರಿಕ್ತವಾದುದು ಮೋಕ್ಷ ಸಾಧನವಲ್ಲ ಎಂದು ಹೇಳಿದುದರಿಂದ ಪ್ರಮಾಣವಿರುದ್ಧವು ಎಂದರೆ-)ಶ್ರೀ ಪರಮಾತ್ಮನ ಅರ್ಥಜ್ಞಾನ ಸಹಿತವಾದ ನಾಮಸ್ಮರಣೆಯು ಸರ್ವಾಭೀಷ್ಟಗಳನ್ನು ಕೊಡತಕ್ಕದು ಆಗುವುದು, ಅಥವಾ ಅರ್ಥಜ್ಞಾನ ಸಹಿತವಾದ ನಾಮಸ್ಮರಣೆಯಿಂದ ಸರ್ವಾಭೀಷ್ಟಗಳೂ ಸಿಗುವುದರಿಂದ ಭಗವನ್ನಾಮವು ಚಾರು (ಮಂಗಲಕರವು) ಆಗುವುದು. ॥ ೨ ॥

ಅವ ॥ ೩ ಋಕ್ಕುಗಳು ಸವಿತೃದೇವತಾಕವು. ಗಾಯತ್ರೀ ಛಂದಸ್ಕವು.

ಋ ॥ (೨೫೬) ಅಭಿತ್ವಾ ದೇವಸವಿತರೀಶಾನಂ ವಾರ್ಯಾಣಾಂ।
ಸದಾಽವನ್ಭಾಗಮೀಮಹೇ ॥ ೩ ॥

ಅ ॥ ಸವಿತಃ ದೇವ=ಸವಿತೃ ಶಬ್ದವಾಚ್ಯನಾದ ಶ್ರೀ ವಿಷ್ಣುವೇ, ಪ್ರಸಿದ್ಧ ಸವಿತೃ ದೇವನೇ, ಸದಾ= ನಿತ್ಯದಲ್ಲಿಯೂ, ಅವನ್ =(ತನ್ನನ್ನು) ರಕ್ಷಿಸುವುದಕ್ಕಾಗಿ (ನಾನು) ವಾರ್ಯಾಣಾಂ=ವರಣೀಯಗಳಾದ(ಅಂಗೀಕಾರಾರ್ಹಗಳಾದ) ವಿತ್ತಗಳಿಗೆ, ಈಶಾನಂ=ಸ್ವಾಮಿಯಾದ, ಭಾಗಂ=(**ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ** ಇತ್ಯಾದಿ ಪ್ರಮಾಣಗಳಿಂದ) ಐಶ್ವರ್ಯಾದಿ ಗುಣಗಳು ಭಗವು. ಅದರ ಸಮೂಹರೂಪನಾದ, (ದೇವತಾ ಪಕ್ಷದಲ್ಲಿ) ಭಗ(ಷಡ್ಗುಣ)ರೂಪನಾದ ಶ್ರೀಹರಿಯ ಸಂಬಂಧಿಯಾದ, ತ್ವಾ=ನಿನ್ನನ್ನು, ಅಭಿ ಈಮಹೇ=ತನ್ನ ರಕ್ಷಣೆಯನ್ನು ಇಚ್ಛಿಸುತ್ತಾ ನಿನ್ನನ್ನು ಶರಣು ಹೊಂದುತ್ತೇನೆ. ಅವನ್ ಎನ್ನುವುದು ಏಕವಚನವಾದ ಪ್ರಯುಕ್ತ ಅಭಿ ಏಮಿ-ಎಂದು ಏಕವಚನಾರ್ಥದಲ್ಲಿ ಬಹುವಚನವು.) ॥ ೩ ॥

ಭಾ ॥ (೧) ಸವಿತೇತ್ಯಪರಂ ರೂಪಂ ಜಗತ್ಕಾರಣಮೀಶಿತುಃ । (೨) ವಿತ್ತಾನಾಮೀಶ್ವರಂ ತಂ ತು ವಾರ್ಯಂ ಹಿ ವರಣೀಯಕಃ । ವಿತ್ತಂ (೩) ರಕ್ಷನ್ನವನ್ನಿತ್ಯಮಾತ್ಮಾನಂ ಭಾಗಮೇಮ್ಯಹಂ ॥ ತ್ವಾಮೈಶ್ವರ್ಯಾದಿಸಮಿತಿಂ ॥ ೩ ॥

ಅ ॥ (೧) (ಈ ಋಕ್ಕಿನಲ್ಲಿ ಮುಖ್ಯವಾಗಿ ಶ್ರೀವಿಷ್ಣುವೇ ಸವಿತೃ ಶಬ್ದವಾಚ್ಯನು.) (ಮುಖ್ಯವಾಗಿ ಸವಿತೃ ಶಬ್ದವಾಚ್ಯನು ಶ್ರೀ ವಿಷ್ಣುವೇ ಎಂದಾದರೆ **ತಮಗ್ನಿರುವಾಚ ಸವಿತಾ ವೈ ಪ್ರಸವಾನಾಮೀಶೇ ತಮೇವೋಪಧಾವೇತಿ ಸ ಸವಿತಾರಮುಪಸಸಾರಾಭಿತ್ವಾ ದೇವಸವಿತರಿತ್ಯನೇನ ತೃಚೇನ** ಎಂಬ ಬ್ರಾಹ್ಮಣದಲ್ಲಿ **ಪ್ರಸವಾನಾಮೀಶೇ** ಎಂದು ಸೂರ್ಯಲಿಂಗವು ಹೇಗೆ ಕೂಡುತ್ತದೆ? ಎಂದರೆ) ಸರ್ವೇಶ್ವರನಾದ ಶ್ರೀಹರಿಯ ಸವಿತಾ ಎಂಬ ಸವಿತೃ ಶಬ್ದ ಪ್ರವೃತ್ತಿ ನಿಮಿತ್ತವಾದ ಜಗತ್ಕಾರಣವಾದುದು ಇನ್ನೊಂದು ರೂಪವು. (ಇದರಿಂದ ಪ್ರಸವಾನಾಮೀಶೇ ಎನ್ನುವುದೂ ಸವಿತ್ರಂತರ್ಗತ ಶ್ರೀಹರಿಗೇನೇ ಮುಖ್ಯ ಲಿಂಗವು.)(೨)(ವಾರ್ಯಾಣಾಮೀಶಾನಂ ಎನ್ನುವುದಕ್ಕೆ ಅರ್ಥ ಹೇಳುತ್ತಾರೆ) ದ್ರವ್ಯಗಳಿಗೆ ಅಧಿಪತಿಯು. (ದ್ರವ್ಯವು ವಾರ್ಯ ಶಬ್ದವಾಚ್ಯವಾಗುವುದು ಹೇಗೆಂದರೆ) ದ್ರವ್ಯವು ಸರ್ವರಿಂದಲೂ ಅಂಗೀಕಾರಾರ್ಹವಾಗಿರುವುದರಿಂದ ವಾರ್ಯವೆನಿಸುತ್ತದೆ. **ಅವದ್ಯ ಪಣ್ಯವರ್ಯಾ ಗರ್ಹ್ಯಪಣಿತವ್ಯಾನಿರೋಧೇಷು** ಎಂಬ ಸೂತ್ರೋಕ್ತವಾದ ಅನಿರೋಧರೂಪವಾದ ಉಪಾಧಿಯನ್ನೂ **ವಾರ್ಯಾಣಾಂ** ಎಂಬಲ್ಲಿ ವಿವಕ್ಷಾ ಮಾಡದೆ ವರಣೀಯತ್ವರೂಪವಾದ ಯೌಗಿಕಾರ್ಥವನ್ನು ವಿವಕ್ಷಾ ಮಾಡಿರುವುದರಿಂದ **ಋಹಲೋರ್ಣ್ಯತ್** ಎಂಬ ಸೂತ್ರದಿಂದ ವೃಞ ಧಾತುವಿಗೆ ಣ್ಯತ್ ಪ್ರತ್ಯಯವು ಬಂದು ವಾರ್ಯವೆಂದಾಗುವುದು ಎಂದು ಹಿ ಶಬ್ದಾರ್ಥವು. (೩) (**ಆತ್ಮಾನಂ ಸತತಂ ರಕ್ಷೇದ್ದಾರೈರಪಿ ಧನೈರಪಿ** ಎಂಬ ಪ್ರಮಾಣದಿಂದ ತನ್ನ ರಕ್ಷಣೆಯು ಅಂತರಂಗವಾಗಿರುವುದರಿಂದ) ತನ್ನನ್ನು ನಿತ್ಯದಲ್ಲಿಯೂ ಅವನ್=ರಕ್ಷಿಸುವುದಕ್ಕಾಗಿ ನಾನು ದ್ರವ್ಯಗಳಿಗೆ ಅಧಿಪತಿಯಾದ ಭಾಗಂ=ಐಶ್ವರ್ಯಾದಿ ಗುಣಗಳ ಸಮೂಹರೂಪನಾದ ಆ ಪ್ರಸಿದ್ಧನಾದ ನಿನ್ನನ್ನು ತನ್ನನ್ನು ರಕ್ಷಿಸುವುದಕ್ಕಾಗಿ ಶರಣು ಹೊಂದುತ್ತೇನೆ.

ವಿ ॥ ಯದ್ಯಪಿ ಅವನ್ ಎನ್ನುವುದು ಸಂಬುದ್ಧ್ಯಂತವಾಗಿ ವ್ಯಾಖ್ಯಾನ ಮಾಡಲಿಕ್ಕೆ ಶಕ್ಯವಾಗುತ್ತದೆ. ಅವನ್ ಎನ್ನುವುದು ಸವಿತೃವಿಗೆ ವಿಶೇಷಣವು ಎಂದು ಹೇಳಿದರೂ ರಕ್ಷಣ ಪ್ರಯೋಜನವು ಲಭಿಸುವುದರಿಂದ ಕರ್ತೃ ವಿಶೇಷಣವು ಎಂದು ಏತಕ್ಕೆ ಹೇಳಬೇಕು ಎಂದರೆ–ಸಾಕ್ಷಾತ್ಪ್ರಯೋಜನಲಾಭವಾಗುವುದಕ್ಕಾಗಿ. ಅದರಿಂದ

ಭಾ ॥ ವಿಷ್ಣು ಭಕ್ತಸ್ಯ ತೇ ರಾಯೋ ಮೂರ್ಧಾನಂ ರಾಯ ಉತ್ತಮಂ। ತವಾವಸಾಽಽರಭೇ ವಿದ್ಯಾಮುಚ್ಚೈರಶ್ನಾಮಿ ತತ್ಫಲಂ॥ (೨)ಐಶ್ವರ್ಯಾದಿ ಗುಣಾ ಯಸ್ಯ ಭಗೋ ಭಕ್ತಂ ಪರಾತ್ಮನಃ । ತಸ್ಯ ತೇ ವಿತ್ತಮಶ್ನಾಮಿ ತವ ರಕ್ಷಾಬಲಾದ್ಧರೇ ॥ ೫ ॥ ೧೩ ॥

ಅ ॥ (೧) (ಎಲೋ ಸೂರ್ಯನೇ) ನಿನ್ನ ರಕ್ಷಣೆಯ ಬಲದಿಂದ ನಿನ್ನದ್ದಾದ ವಿದ್ಯೆಯನ್ನು ಆರಂಭಿಸುತ್ತೇವೆ. ಆ ವಿದ್ಯೆಗೆ ಫಲಭೂತವಾದ, ಐಶ್ವರ್ಯಾದಿ ಸ್ವರೂಪನಾದ ಶ್ರೀ ವಿಷ್ಣುವಿನ ಸೇವಕನಾದ ನಿನ್ನ ಸಂಬಂಧಿಯಾದ, (ನಿನ್ನಿಂದ ಕೊಡಲ್ಪಡತಕ್ಕ) ರಾಯೋ ಮೂರ್ಧಾನಂ=ಪ್ರಸಿದ್ಧವಿತ್ತಕ್ಕಿಂತಲೂ ಉತ್ತಮವಾದ, ಸುಖವನ್ನೂ, (ಅಶೂ ಭೋಜನೇ)ಚೆನ್ನಾಗಿ ಉಣ್ಣುತ್ತೇವೆ. (೨) ಹೀಗೆ ದೇವತಾಂತರದಲ್ಲಿ ವ್ಯಾಖ್ಯಾನ ಮಾಡಿ ಶ್ರೀ ವಿಷ್ಣುವಿನಲ್ಲಿ ವ್ಯಾಖ್ಯಾನ ಮಾಡುತ್ತಾರೆ.) ಎಲೋ ಶ್ರೀಹರಿಯೇ ನಿನ್ನ ರಕ್ಷಣೆಯ ಬಲದಿಂದ, (ನಿನ್ನ ವಿದ್ಯೆಯನ್ನು ಆರಂಭಿಸುತ್ತೇವೆ.) ಆ ಮೇಲೆ, ಯಾವ ಶ್ರೀ ಪರಮಾತ್ಮನಿಗೆ ಭಗಃ=ಐಶ್ವರ್ಯಾದಿ ಗುಣಗಳು. ಭೋಗ್ಯವಾಗಿ ಇವೆಯೋ, ಅಂತಹ ನಿನ್ನ ವಿತ್ತವನ್ನು (ನಿನ್ನಿಂದ ಕೊಡಲ್ಪಡತಕ್ಕ ಮೋಕ್ಷಾಖ್ಯ ವಿತ್ತವನ್ನು) (ಅಶೂಭೋಜನೇ) ಉಣ್ಣುತ್ತೇವೆ. ॥ ೫ ॥ ೧೩ ॥

ಅವ ॥ ಇನ್ನು ೩೧ ಮಂತ್ರಗಳು ವರುಣದೇವತಾಕಗಳು.

ಋ॥ (೨೫೯)ನಹಿ ತೇ ಕ್ಷತ್ರಂ ನ ಸಹೋ ನ ಮನ್ಯುಂ ವಯಶ್ಚನಾಮೀ ಪತಯಂತ ಆಪುಃ । ನೇಮಾ ಆಪೋಅನಿಮಿಷಂ ಚರಂತೀರ್ನಯೇ ವಾತಸ್ಯ ಪ್ರಮಿನನ್ತ್ಯಭ್ವಂ ॥ ೬ ॥

ಅ ॥ (ಮುಂದಿನ ವರುಣ ಪದವನ್ನು ಇಲ್ಲಿಯೂ ಅನ್ವಯಿಸಿಕೊಳ್ಳಬೇಕು.) ವರುಣನೆನಿಸಿದ ಎಲೋ ಶ್ರೀವಿಷ್ಣುವೇ) ತೇ=ನಿನ್ನ, ಕ್ಷತ್ರಂ=(ತ್ರೈ ಜ ಪಾಲನೇ) (ಕ್ಷತಾತ್ ತ್ರಾಯತೇ ಎಂಬವ್ಯುತ್ಪತ್ತಿಯಿಂದ) (ಪ್ರಜೆಗಳನ್ನು) ಕೆಡಕಿನಿಂದ ರಕ್ಷಿಸುವಿಕೆಯನ್ನು (ಅಂದರೆ ಅನಿಷ್ಟ ಪರಿಹಾರದ ಮುಖ್ಯ ಕಾರಣವನ್ನು) ವಯಶ್ಚನ= **ವಿರ್ನಯೋಶ್ಚ ವಿಶೇಷೇಚ** ಎಂಬ ಕೋಶದಿಂದ ವಿಶಬ್ದವು ವಿಶೇಷವಾಚಕವು. **ಸೋಽಸ್ಯಾಸ್ತಿ** ಎಂಬ ಅರ್ಥದಲ್ಲಿ ಪ್ರಾಪ್ತವಾದ ಮತುಪಿಗೆ **ಗುಣವಚನೇಭ್ಯೋ ಮತುಪೋ ಲುಕ್** ಎಂಬ ಸೂತ್ರದಿಂದ ಲೋಪವು. ತಥಾಚ) ವಿಶಿಷ್ಟ (ಉತ್ತಮರಾದ)ಅಮೀ=ಪರೋಕ್ಷ ಜ್ಞಾನಿಗಳೂ (ಅಂದರೆ ಯಾರು ಮುಕ್ತಿಯಲ್ಲಿರತಕ್ಕವರೋ ಅವರೂ ಕೂಡ) (**ವಿಃ ಪಕ್ಷಿ ಪರಮಾತ್ಮನೋಃ** ಎಂಬ ಪ್ರಮಾಣದಿಂದ) ಗರುಡರೂ ಕೂಡ, ನಹಿ ಆಪುಃ= ಹೊಂದುವುದೇ ಇಲ್ಲ. ತೇ=ನಿನ್ನ, ಸಹಃ=(**ಶೂಷಃಸಹಃ**) ಎಂದು ಬಲನಾಮಗಳಲ್ಲಿ. ಪಠಿತವಾದ, ಪ್ರಯುಕ್ತ ಬಲವನ್ನು ಕೂಡ, ನ=ಹೊಂದಲಿಲ್ಲ. ಮನ್ಯುಂ=(ಮನು ಅವಬೋಧನೇ ಎಂಬ ಧಾತು ವ್ಯಾಖ್ಯಾನದಿಂದ) ಜ್ಞಾನವನ್ನು ಕೂಡ. ನ=ಹೊಂದಲಿಲ್ಲ. (ಮನ್ಯು ಶಬ್ದವು ಕ್ರೋಧನಾಮಗಳಲ್ಲಿ ಪಠಿತವಾದ ಪ್ರಯುಕ್ತ ಕ್ರೋಧ ಎನ್ನುವುದು ರೂಢಾರ್ಥವಾಗಿದ್ದರೂ ಅದು ಗುಣವಾಗದಿರುವುದರಿಂದ ಶ್ರೀವಿಷ್ಣುವಿನಲ್ಲಿ ಸರ್ವಥಾ ಕೂಡದಿರುವ ಪ್ರಯುಕ್ತ ಅದನ್ನು ತೆಗೆದುಕೊಳ್ಳಲಿಲ್ಲ.) ಮತ್ತು ಪತಯಂತಃ=ಸಂಸಾರದಿಂದ ಮೇಲಕ್ಕೆ ಬಂದಿರುವ ಜೀವನ್ಮುಕ್ತರೂ, ಅಥವಾ ಸಂಸಾರದಿಂದ ಭಕ್ತರನ್ನು ಮೇಲಕ್ಕೆ ಬರುವ ಹಾಗೆ ಮಾಡುವ, (ಬಿಡುಗಡೆ ಮಾಡಿಸುವ) ಆಚಾರ್ಯರೂ ಕೂಡಾ, ನಾಪುಃ=ಹೊಂದುವುದಿಲ್ಲ. ಅನಿಮಿಷಂ=(ನಿಮಿಷಃ= ನಿಮೇಷವು, ಕಾಲ ವಿಶೇಷವು. ಅದಕ್ಕಿಂತ ಭಿನ್ನವಾದ ಕಾಲವು ಅನಿಮಿಷವು. ರೆಪ್ಪೆಗಳ ನಿಮೀಲನಾಭಾವವು (ಕಣ್ಣಿನ ಮುಚ್ಚಳಾಭಾವವು) (ಹೇಗೆ ಆದೀತೋ ಹಾಗೆ) ಸರ್ವಥಾ ಚರಂತೀಃ=ಶುಭಗಳನ್ನೇ ಆಚರಿಸುತ್ತಿರುವ ಇಮಾಃ= ಪ್ರಸಿದ್ಧ

ರಾದ, ಆಪಃ=(ಆಪೋವೈ ಸರ್ವಾ ದೇವತಾಃ ಸಮಸ್ತ ದೇವತೆಗಳೂ ಅಪ್ ಶಬ್ದವಾಚ್ಯರಷ್ಟೆ, ಎಂಬ ಶ್ರುತಿಯಿಂದ) ಸಮಸ್ತ ದೇವತೆಗಳೂ, ಅಥವಾ ಜಲಾಭಿಮಾನಿಗಳಾದ ರಮಾದಿ ದೇವಿಯರು, ಅಥವಾ ತಂತಮ್ಮ ಕರ್ಮ ನಿರ್ಮಿತಗಳಾದ ಜಲಾತ್ಮಕ ದೇಹಗಳುಳ್ಳ ಗಂಗಾದಿ ನದ್ಯಭಿಮಾನಿದೇವತೆಗಳೂ ನೀನು ಮಾಡತಕ್ಕ ಅನಿಷ್ಟ ಪರಿಹಾರ ಕರಣಾದಿಗಳನ್ನು, ನಾಪುಃ=ಹೊಂದುವುದಿಲ್ಲ. ಮತ್ತು, ಯೇ=ಯಾವ ದೇವತೆಗಳ ಸಮೂಹಗಳು, ವಾತಸ್ಯ=ಮುಖ್ಯ ವಾಯುವಿಗೆ, ಅಭ್ವಂ=ವಿಷ್ಣುವಿನ ಸಕಾಶದ್ದೆಶೆಯಿಂದ ಉತ್ಪತ್ತಿಯನ್ನು ಅಥವಾ ವಾತಸ್ಯ=ಶ್ರೀವಿಷ್ಣುವಿನ, ಅಭ್ವಂ=ಪ್ರಾದುರ್ಭಾವವನ್ನು ಪ್ರವಿನಂತಿ=ತಿಳಿಯುತ್ತಾರೋ, ತೇಽಪಿ=ಅಂತಹ ಮಹಾಜ್ಞಾನಿಗಳೂ ಕೂಡ, ನಾಪುಃ=ಹೊಂದುವುದಿಲ್ಲ ॥ ೬ ॥

ಭಾ ॥ (೧) ಕ್ಷತಾತ್ತ್ರಾಣಂ ತೇ ಬಲಸಂವಿದಂ ಚ ಪೂರ್ಣಂ ನಾಪುರ್ಮುಕ್ತಿಗಾ ಯೇ ವಿಶಿಷ್ಟಾಃ। ಅಪಿ ಸ್ವಯಂ ಸಂಸೃತೇರುತ್ಪತಂತಃ ಪತಯಂತೋಽನ್ಯಾನ್ ಶಿಷ್ಯಭಕ್ತಾನುದಾರಾಃ। ಸದಾ ಶುಭಾನ್ಯಾಚರಂತೋಽಪಿ ದೇವಾಃ ಅಬ್ದೇವತಾ ಆಪ ಇತಿ ಶ್ರುತಿರ್ಯತಃ। ಗಂಗಾದ್ಯಾ ವಾ ವಾಯುದೇವಸ್ಯ ವಿಷ್ಣೋರುತ್ಪತ್ತಿಂ ಯೇ ಜಾನತೇ ದೇವಸಂಘಾಃ। ವಯುಸ್ಸುಪರ್ಣಾ ಇತಿ ವಾಪಿ ॥ ೬ ॥

ಅ ॥ (೧) (ಎಲೋ ವರುಣನೆನಿಸಿದ ಶ್ರೀ ಹರಿಯೇ) ಪರೋಕ್ಷಜ್ಞಾನಿಗಳಾದ ಉತ್ತಮರಾದವರೂ, ಯಾರು ಮುಕ್ತಿಯಲ್ಲಿದ್ದಾರೋ, ಅಂತಹವರೂ ನಿನ್ನ ಪ್ರಜೆಗಳಿಗೆ ಬರತಕ್ಕ ಅನಿಷ್ಟಗಳ ಪರಿಹಾರಕ್ಕೆ ಮುಖ್ಯ ಕಾರಣವು ಯಾವುದಿದೆಯೋ ಅಂತಹದನ್ನು ನಿನ್ನ ಬಲವನ್ನೂ, ಜ್ಞಾನವನ್ನೂ, ಕೂಡ ಪೂರ್ಣವಾಗಿ ಹೊಂದುವುದೇ ಇಲ್ಲ. (ಅಂದರೆ **ತದ್ಗುಣಸಾರತ್ವಾತ್ತದ್ವ್ಯಪದೇಶಃ ಪ್ರಾಜ್ಞವತ್** ಎಂಬ ಸೂತ್ರದಿಂದ ವಿಷ್ಣುವಿನ ಗುಣಗಳಿಗೆ ಸದೃಶಗಳಾದ ಗುಣಗಳು ಮುಕ್ತರಿಗೆ ಇದ್ದುದರಿಂದ ನಿಷೇಧವು ಹೇಗೆಂದರೆ–ಪೂರ್ಣವಾಗಿ ಹೊಂದುವುದಿಲ್ಲ. ಅಂದರೆ ವಿಷ್ಣುವಿನ ಗುಣಗಳಿಗೆ ಸದೃಶಗಳಾದ ಪೂರ್ಣ ಗುಣಗಳು ಮುಕ್ತರಿಗೆ ಇಲ್ಲ ಎಂದೇ ಹೇಳಿದ್ದಲ್ಲದೆ ಯಥಾ ಕಥಂಚಿತ್ ಶ್ರೀ ಹರಿಯ ಗುಣಗಳಿಗೆ ಸದೃಶಗಳಾದ ಗುಣಗಳು ಇಲ್ಲವೆಂದು ಹೇಳಿದ್ದಲ್ಲ.) ಯಾರು ತಾವಾಗಿಯೇ ಸಂಸಾರದಿಂದ ಮೇಲಕ್ಕೆ ಬಂದಿರುವರೋ (ಬಿಡುಗಡೆ ಹೊಂದಿರುವರೋ) ಅಂತಹ ಜೀವನ್ಮುಕ್ತರೂ (ಅಪರೋಕ್ಷ ಜ್ಞಾನಿಗಳೂ) ಕೂಡ ಹೊಂದುವುದಿಲ್ಲ. ಅಥವಾ ಇತರರಾದ ಶಿಷ್ಯರನ್ನೂ, ಭಕ್ತರನ್ನೂ ಸಂಸಾರದಿಂದ ಮೇಲಕ್ಕೆ ಬರುವಂತೆ ಮಾಡುವ (ಅಂದರೆ ಬಿಡುಗಡೆಯಾಗುವಂತೆ ಮಾಡುವ) ಯಾವ ಉತ್ತಮರಾದ ಆಚಾರ್ಯರು ಇದ್ದಾರೋ, ಅಂತಹವರೂ ಹೊಂದುವುದಿಲ್ಲ. ಸದಾ ಶುಭಗಳನ್ನೇ ಆಚರಿಸುತ್ತಿರುವ ಅಬಭಿಮಾನಿಗಳಾದ ಸಮಸ್ತ ದೇವತೆಗಳೂ ಹೊಂದುವುದೇ ಇಲ್ಲ. **ಆಪೋವೈ ಸರ್ವಾ ದೇವತಾಃ** ಎಂದು ಶ್ರುತಿಯು. ಅಥವಾ ಅಬಭಿಮಾನಿಗಳಾದ ರಮಾದಿ ದೇವಿಯರೂ ಅಥವಾ ತಂತಮ್ಮ ಕರ್ಮಗಳಿಂದ ನಿರ್ಮಿತ ಜಲದೇಹಗಳುಳ್ಳ ಗಂಗಾದಿ ನದ್ಯಭಿಮಾನಿಗಳೂ ಹೊಂದುವುದಿಲ್ಲ. ಅಥವಾ ಯಾವ ದೇವತೆಗಳ ಸಮೂಹಗಳು ವಾಯುದೇವರಿಗೆ ಶ್ರೀ ವಿಷ್ಣುವಿನಿಂದ ಉತ್ಪತ್ತಿಯನ್ನು ತಿಳಿಯುತ್ತಾರೋ ಅಂತಹ ಮಹಾಜ್ಞಾನಿಗಳೂ ಹೊಂದುವುದಿಲ್ಲ. ಅಥವಾ ವಾತಸ್ಯ=ವಾಯುದೇವನೆನಿಸಿದ ಶ್ರೀ ವಿಷ್ಣುವಿಗೆ ಪ್ರಾದುರ್ಭಾವವನ್ನು ಯಾವ ದೇವ ಸಂಘಗಳು ತಿಳಿಯುತ್ತಾವೋ ಅಂತಹ ಮಹಾ ಜ್ಞಾನಿಗಳೂ ಕೂಡ ಹೊಂದುವುದೇ ಇಲ್ಲ. ಅಥವಾ (**ವಿಹಗೇ ಗಗನೇ ಚ ವಿಃ**= ಎಂಬ ಏಕಾಕ್ಷರರತ್ನ ಮಾಲಾದಲ್ಲಿ ಹೇಳಿದ ಪ್ರಕಾರ) ವಯಃ=ಗರುಡರೂ ಕೂಡ ಪೂರ್ಣವಾಗಿ ತಿಳಿಯುವುದಿಲ್ಲ. ॥ ೬ ॥

ಋ ॥ (೨೬೦) ಅಬುಧ್ನೇ ರಾಜಾ ವರುಣೋ ವನಸ್ಯೋರ್ಧ್ವಂ ಸ್ತೂಪಂ ದದತೇ ಪೂತದಕ್ಷಃ । ನೀಚೀನಾಃ ಸ್ಥುರುಪರಿ ಬುಧ್ನ ಏಷಾಮಸ್ಮೇ ಅಂತರ್ನಿಹಿತಾಃ ಕೇತವಃ ಸ್ಯುಃ ॥ ೭ ॥

ಅ ॥ ಪೂತದಕ್ಷಃ=ಪವಿತ್ರನಾಗಿ ಮಾಡಲ್ಪಟ್ಟ ಯಜಮಾನನುಳ್ಳ, ವರುಣಃ ರಾಜಾ=ಶ್ರೀಹರಿಯು, ಅಬುಧ್ನೇ=(ಬುಧ ಅವಗಮನೇ ಎಂಬ ಧಾತು ವ್ಯಾಖ್ಯಾನದಿಂದ) ಬುಧ್=ಜ್ಞಾನವು. ಬುಧಃ=ಜ್ಞಾನದ ಅಭಾವವು, ಬುಧ್ನಂ (ನಞಗೆ ಪರನಿಪಾತಾದಿಗಳು ಛಾಂದಸವು.) ಅಜ್ಞಾನವು ಅದರ ಅಭಾವವು, ಅಬುಧ್ನವು ಅತಿಶಯಿತಜ್ಞಾನವು. (ತೃತೀಯಾ ವಿಭಕ್ತ್ಯರ್ಥದಲ್ಲಿ ಸಪ್ತಮಿಯು.) ಜ್ಞಾನದಿಂದ (ಜ್ಞಾನಪೂರ್ವಕವಾಗಿ) ವನಸ್ಯ=(ವನಸಂಭಕ್ತೌ ಪಚಾದ್ಯಚ್) ತನ್ನನ್ನು ಸೇವಿಸುವವನಿಗೋಸ್ಕರ, ಊರ್ಧ್ವಂಸ್ತೂಪಂ=ಉತ್ತಮ ಸ್ಥಾನವನ್ನು, ದದತೇ=(ದದ ದಾನೇ) ಕೊಡುತ್ತಾನೆ. ಮತ್ತು ನೀಚೀನಾಃ=ಯಾರು ನೀಚ ಸ್ಥಾನದಲ್ಲಿ (ಮನುಷ್ಯ ಲೋಕಾದಿಗಳಲ್ಲಿ) ಇರುವವರೋ, ಅಂತಹವರೂ ಕೂಡ, (ವರುಣನೆನಿಸಿದ ಶ್ರೀಪರಮಾತ್ಮನನ್ನು ಸೇವಿಸಿರುವ ನಿಮಿತ್ತದಿಂದ) ಉಪರಿ=ಊರ್ಧ್ವಲೋಕದಲ್ಲಿದ್ದವರು (ಸ್ವರ್ಗದಲ್ಲಿರತಕ್ಕವರು) ಸ್ಥುಃ=(ಷ್ಠಾಗತಿ ನಿವೃತ್ತೌ) ಆಗುವರು ಅಥವಾ ನೀಚೀನಾಃ=ನೀಚರಾದ ಮನುಷ್ಯಾದಿಗಳೋ, ಅವರೂ ಕೂಡ, ಉಪರಿ=ಮುಕ್ತಿಯಲ್ಲಿರುವವರು ಆಗುವರು. (ಈ ೨ ಅರ್ಥಗಳಲ್ಲಿಯೂ ಅವರು ನೀಚೀನರು ಹೇಗೆ? ಅಂದರೆ) ಅದರಲ್ಲಿ ೧ನೇ ಅರ್ಥದಲ್ಲಿ ಬುಧ್ನ ಏಷಾಂ ಎಂದು. ಏಷಾಂ=ಸ್ವರ್ಗವನ್ನು ಹೊಂದಬೇಕೆಂದು ಇಚ್ಛಿಸುವವರಿಗೆ (ಬುಧ್ನಃ ಅಧೋಭಾಗಃ) ಸುರರ ಲೋಕವಾದ ಸ್ವರ್ಗದ್ದೆಶೆಯಿಂದ ನೀಚಲೋಕವಾದ ಭೂಲೋಕವು ಯಾವ ಕಾರಣದಿಂದ ನಿವಾಸ ಸ್ಥಾನವೋ ಆದಕಾರಣದಿಂದ ಸ್ವರ್ಗಸ್ಥರಿಗಿಂತ ಭೂಮಿಯಲ್ಲಿರತಕ್ಕವರು ನೀಚೀನರು. ೨ನೇ ಅರ್ಥದಲ್ಲಿ ಆದರೂ ಬುಧ್ನ ಶಬ್ದಕ್ಕೆ ಅಧಸ್ತನವೆಂದರ್ಥವು. ಏಷಾಂ=ಮನುಷ್ಯಾದಿಗಳಿಗೆ ಬುಧ್ನಃ=ದೇವತೆಗಳದ್ದೆಶೆಯಿಂದ ಕೆಳಗಿನದ್ದೂ ಅಂದರೆ ಮನುಷ್ಯಾದಿಗಳಿಗೆ ಸ್ವರೂಪ ಭೂತಗಳಾದ ಯಾವವು ಆನಂದಾದಿ ಗುಣಗಳು ಇವೆಯೋ ಅವುಗಳು ದೇವತೆಗಳದ್ದೆಶೆಯಿಂದ ಸ್ವಲ್ಪಗಳು ಅಥವಾ ಮನುಷ್ಯಾದಿಗಳಿಗೆ, ಬುಧ್ನಃ=(ಬುಧಃ ಜ್ಞಾನಸ್ಯಪ್ರತಿಷೇಧಃ, ಬುಧ್ನಂ, ಎಂದು ಹೇಳಿದ ಪ್ರಕಾರ) ಅಪ್ರಕಾಶವು, (ಅಜ್ಞಾನವು) ಇದೆ. ದೇವತೆಗಳಿಗೆ ಅಜ್ಞಾನವಿಲ್ಲ.) ಆದಕಾರಣ ಮನುಷ್ಯರು ನೀಚರು. (ಈ ವರುಣನ ಆಜ್ಞೆಯಿಂದ ಯಾವ ಜೀವರು ನೀಚೀನಾಃ=ಯತ್ಕಿಂಚಿತ್ ವಸ್ತುವಿಗಿಂತ ನೀಚರೋ, (ಅವರೇ ಉಪರಿ=ಕಿಂಚಿತ್ ವಸ್ತುವಿಗಿಂತ ಮೇಲಿನವರೂ ಆಗುತ್ತಾರೆ. (ಅಂದರೆ ನೀಚೋಚ್ಚ ಭಾವದಿಂದಲೇ ಇರುತ್ತಾರೆ.) (ಆದಕ್ಕೆ ಅವಧಿಯಿಲ್ಲವೋ ಎಂದರೆ) **ಬುಧ್ನ ಏಷಾಂ** ಎಂದು. ಏಷಾಂ=ನೀಚೋಚ್ಚ ಭಾವದಿಂದ ಇರುವ ಜೀವರಿಗೆ, ಬುಧ್ನಃ=ಮೂಲ ಭೂತನಾದವನು ಒಬ್ಬನು ಚತುರ್ಮುಖನು ಇದ್ದಾನೆ. (ಅಂತಹ ವರುಣನೆನಿಸಿದ ಶ್ರೀಹರಿಯ ಅನುಗ್ರಹದಿಂದ) ಅಸ್ಮೇ=ನಮ್ಮ ಅಂತಃ=ಹೃದಯದಲ್ಲಿ, ಕೇತವಃ=ಜ್ಞಾನಗಳು, ನಿಹಿತಾಃ=ನಿತ್ಯದಲ್ಲಿ ಇಡಲ್ಪಟ್ಟವುಗಳು, ಸ್ಯುಃ=ಆಗುವವು. ಅಂದರೆ ನಾವು ಜ್ಞಾನಿಗಳು. ಆಗುವೆವು.) ॥ ೭ ॥

ವಿ ॥ ಈ ಋಕ್ಕಿನಲ್ಲಿ ಸ್ಯುಃ ಎನ್ನುವುದಕ್ಕೆ ಪದಕಾಲದಲ್ಲಿ ಸ್ಯುರಿತಿಸ್ಯುಃ ಎಂದು ೨ ಸಲ ಉಚ್ಚಾರಣವು ಸ್ವಯೋಗ್ಯವಾದುದು ಎಷ್ಟು ಜ್ಞಾನವಿದೆಯೋ ಅಷ್ಟು ಜ್ಞಾನವೂ ಅಭಿವ್ಯಕ್ತಿಯಾಗ ಬೇಕೆಂಬ ಪ್ರಾರ್ಥನೆಯನ್ನು ತೋರಿಸುವುದು ॥ ೭ ॥

ಭಾ॥ (೧) ಅಬುಧ್ನೇ ಪ್ರಕಾಶತಃ ಸಂಭಜತಃ ಸ್ವಮುಚ್ಚೈಃ। ಸ್ತೂಪಂ ಸ್ಥಾನಂ ದದತೇ (೨) ಪೂತದಕ್ಷೋ ನೀಚಸ್ಥಾ ಅಪ್ಯೂರ್ಧ್ವಗಾಸ್ತೇನ ತಸ್ಥುಃ । ನೀಚಾ ಶ್ಚ ಯೇ ಮುಕ್ತಿಗಾ

ಮನುಷ್ಯಾದ್ಯಾ (೩) ಸ್ತೇಷಾಂ ಬುಧ್ನೋ ನೀಚಲೋಕಸ್ಸುರೇಭ್ಯಃ॥ ನೀಚಾ ಗುಣಾ ಅಪ್ರಕಾಶೋಽಥ ವೈಷಾಂ (೪) ನೀಚೋಚ್ಚತ್ವಂ ಕ್ರಮಶಶ್ಚಾವಿರಿಂಚಾತ್॥ ಅಸ್ಮಾಕ ಮಂತರ್ನಿಹಿತಾನಿ ನಿತ್ಯಂ ಜ್ಞಾನಾನಿ ಭೂಯಾಸುರತೋಧಿಕಾನಿ॥ (೫) ಭವಂತ್ಯಹಾರ್ ಭವಿತುಂ ನಾ ಭವಿಷ್ಯಾಃ ಸ್ಯುರ್ದ್ವಿರ್ಗ್ರಹೇ ಪ್ರಾರ್ಥನೈವಾಧಿಕಾರ್ಥೇ ॥ ೭ ॥

ಅ ॥ ಯಜಮಾನನನ್ನು ಪವಿತ್ರೀಕರಿಸಿದ ಶ್ರೀ ಹರಿಯು, ಅಬುಧ್ನೇ = ಪ್ರಕಾಶದಿಂದ.(ಜ್ಞಾನ ಪೂರ್ವಕ ವಾಗಿ) ತನ್ನನ್ನು ಚೆನ್ನಾಗಿ ಸೇವಿಸುವವನಿಗೋಸ್ಕರ, ಉತ್ತಮವಾದ ಸ್ತೂಪಂ = ಸ್ಥಾನವನ್ನು, ಕೊಡುತ್ತಾನೆ. (೨) ನೀಚಸ್ಥಾನವಾದ ಮರ್ತ್ಯಲೋಕಾದಿಗಳಲ್ಲಿರುವವರೂ ವರುಣನೆನಿಸಿದ ಭಗವಂತನ ಸೇವಾನಿಮಿತ್ತದಿಂದ ಉತ್ತಮವಾದ ಸ್ವರ್ಗಲೋಕಾದಿಗಳಲ್ಲಿರುವವರು ಆಗುವರು. ನೀಚರಾದ ಮನುಷ್ಯಾದಿಗಳು ಯಾರು ಇರುವರೋ ಅವರೂ ಮುಕ್ತಿಯಲ್ಲಿರುವವರು ಆಗುತ್ತಾರೆ. (೩) (೧ನೇ ಅರ್ಥದಲ್ಲಿ) ಅಂತಹ ಸ್ವರ್ಗವನ್ನು ಹೊಂದಬೇಕೆಂದು ಇಚ್ಛಿಸುವವರಿಗೆ ಬುಧ್ನಃ=ಅಧೋ ಭಾಗವು. (ಅಂದರೆ ಸ್ವರ್ಗಲೋಕಕ್ಕಿಂತ ನೀಚಲೋಕ ವಾದ ಭೂಲೋಕವು ಯಾವ ಕಾರಣದಿಂದ ಆವಾಸಸ್ಥಾನವೋ ಆದ ಕಾರಣ ಸ್ವರ್ಗಸ್ಥರಿಗಿಂತ ಭೂಮಿಯಲ್ಲಿ ರುವವರು ನೀಚರು) (೨ನೇ ಅರ್ಥದಲ್ಲಿ) ಮನುಷ್ಯಾದಿಗಳಿಗೆ ಸ್ವರೂಪಭೂತಗಳಾದ ಆನಂದಾದಿಗುಣಗಳು ದೇವತೆಗಳದ್ದೆಶೆಯಿಂದ ಸ್ವಲ್ಪಗಳು. ಅಥವಾ ಈ ಮನುಷ್ಯಾದಿಗಳಿಗೆ ಅಪ್ರಕಾಶಃ=ಅಜ್ಞಾನವಿದೆ. (ದೇವತೆ ಗಳಿಗೆ ಇಲ್ಲ ಆದಕಾರಣ ಮನುಷ್ಯಾದಿಗಳು ದೇವತೆಗಳಿಗಿಂತ ನೀಚರು.) (೪) ತೃತೀಯ ಪಾದವನ್ನು ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ವಿರಿಂಚಪರ್ಯಂತವಾಗಿ ಕ್ರಮವಾಗಿ ಜೀವರಿಗೆ ಯಾವುದು ನೀಚೋಚ್ಚತ್ವವು(ತಾರತಮ್ಯವು)ಇದೆಯೋ(ಅದು ವರುಣನೆನಿಸಿದ) ಶ್ರೀ ಹರಿಯ ಪ್ರಸಾದದಿಂದ ನಮಗೆ ಹೃದಯ ದಲ್ಲಿ ಜ್ಞಾನಗಳು ನಿತ್ಯದಲ್ಲಿಯೂ ನಿಹಿತಗಳು ಆಗಲಿ.(ಅಂದರೆ ನಾವು ಜ್ಞಾನಿಗಳು ಆಗುವೆವು.)(ಹಾಗಾದರೆ ಜ್ಞಾನ ಗಳು ಇವೆ ಎನ್ನುವುದು ನಿಶ್ಚಿತವೇ. ಅವುಗಳು ಸಿಗಬೇಕೆಂದು ಪ್ರಾರ್ಥನೆಯು ಹೇಗೆ ಕೂಡುತ್ತದೆ ಎಂದರೆ) ಇದ್ದ ಜ್ಞಾನಗಳಿಗಿಂತಲೂ ಅಧಿಕ ಜ್ಞಾನವು ಬರಬೇಕೆಂದು ಪ್ರಾರ್ಥನೆಯು.) (೫) (ಹಾಗಾದರೆ – ಅಯೋಗ್ಯ ಪ್ರಾರ್ಥನೆಯಿಂದ ಪ್ರತ್ಯವಾಯವುಂಟಾಗುವುದು ಎಂದರೆ) ಯಾವಜ್ಞಾನಗಳು ಮುಂದೆ ಬರತಕ್ಕವುಗಳು ನಮಗೆ ಆಗಲಿಕ್ಕೆ ಅರ್ಹಗಳು ಆಗುತ್ತವೋ ಅವುಗಳು ಆಗಿಯೇ ಆಗುತ್ತವೆ. ಅವುಗಳು ಆಗುವವು. ಎನ್ನುವುದರಿಂದ ಯಾವ ಜ್ಞಾನಗಳು ನಮಗೆ ಹೃದಯದಲ್ಲಿ ಗೂಢಗಳಾಗಿರುತ್ತವೋ, ಅವುಗಳು ವ್ಯಕ್ತಗಳಾಗುವವು, ಎಂದು ಯೋಜನಾಂತರವು ಸೂಚಿತವಾಗುತ್ತದೆ. (ಆದಕಾರಣ ಅಧಿಕಾನಿ ಎಂಬ ವ್ಯಾಖ್ಯಾನವು ಹೇಗೆ ಸಿಗುತ್ತದೆ, ಎಂದರೆ ಪದಕಾರರು ಪದಕಾಲದಲ್ಲಿ ಸ್ಯುಃ ಎನ್ನುವುದಕ್ಕೆ ಸ್ಯುರಿತಿಸ್ಯುಃ ಎಂದು ಯಾವುದು ದ್ವಿರುಚ್ಚಾರಣವು ಮಾಡಲ್ಪಡುತ್ತದೋ, ಆದ್ವಿರುಚ್ಚಾರಣದಿಂದ ಆಧಿಕ್ಯರೂಪವಾದ ಅರ್ಥವನ್ನು ತೋರಿಸುವುದಕ್ಕಾಗಿ ಪ್ರಾರ್ಥನೆಯೇ ಆಗುತ್ತದೆ ಅಂದರೆ ಯಾವುದು ನಮಗೆ ಯೋಗ್ಯವಾದ ಜ್ಞಾನವಿದೆಯೋ ಅದು ಜೀವ ಸ್ವರೂಪವೇ ಆಗಿರುವುದ ರಿಂದ ಸದಾ ಉಂಟೇ ಉಂಟು. ಅತಂಹಜ್ಞಾನವು ಅಭಿವ್ಯಕ್ತವಾಗಲಿ, ಎಂಬ **ಆದಿಕ್ಯೇ ಅಧಿಕಂ** ಎಂಬ ಸೂತ್ರ ದಿಂದ) ಆಧಿಕ್ಯರೂಪ ಅರ್ಥವನ್ನು ತೋರಿಸುವುದಕ್ಕಾಗಿ ದ್ವಿರುಚ್ಚಾರಣದಿಂದ ಪ್ರಾರ್ಥನೆಯೇ ಮಾಡಲ್ಪಡುತ್ತದೆ ॥ ೭ ॥

ಮು ॥ (೨೬೧) ಉರುಂ ಹಿ ರಾಜಾ ವರುಣಶ್ಚಕಾರ ಸೂರ್ಯಾಯ ಪಂಥಾ ಮನ್ವೇತವಾ ಉ । ಅಪದೇ ಪಾದಾ ಪ್ರತಿಧಾತವೇಽಕರುತಾಪವಕ್ತಾ ಹೃದಯಾವಿಧಶ್ಚಿತ್ ॥ ೮ ॥

ಅ ॥ ರಾಜಾ=ಪ್ರಕಾಶಿಸಿಕೊಂಡಿರುವ, ವರುಣಃ=ಶ್ರೀಹರಿಯು, ಅನ್ವೇತವೈ ಉ=ತನ್ನ ಆಜ್ಞಾನುಸಾರ ಹೋಗುವುದಕ್ಕಾಗಿ, ಅಂದರೆ ಸರ್ವದಾ ಹೋಗುವುದಕ್ಕಾಗಿಯೇ, ಸೂರ್ಯಾಯ=ಸೂರ್ಯನ, ಉರುಂ= ವಿಸ್ತೀರ್ಣವಾದ, ಪಂಥಾಂ=ಮಾರ್ಗವನ್ನು ಚಕಾರ=ಮಾಡಿದನು. (ಅಂದರೆ ಸೂರ್ಯನ ಸಂಚಾರಕ್ಕಾಗಿ ಇತರ ಮೂರ್ತ ಪದಾರ್ಥಗಳ ಪ್ರತಿಘಾತವಿಲ್ಲದ ಹಾಗೆ ಅಂತರಿಕ್ಷವನ್ನು ಮಾಡಿದನು.) ಹಿ=ನಿಶ್ಚಯವು. ಮತ್ತೂ, ಅಪದೇ=ಪಾದವಿಲ್ಲದ ಪುರುಷನಿಗೋಸ್ಕರ, ಪ್ರತಿ ಧಾತವೇ=(ಧಾವು ಗತಿ ಶುದ್ಧ್ಯೋಃ ಎಂಬ ಧಾತು ವ್ಯಾಖ್ಯಾ ದಿಂದ) ಹೋಗುವುದಕ್ಕಾಗಿ, ಪಾದಾ=ಪಾದಗಳನ್ನು ಅಕಃ=(ಕೃಞ್ ಕರಣೇ) ಮಾಡಿದನು ಅಥವಾ ಅಪದೇ= ಅಜ್ಞನಿಗೋಸ್ಕರ, ಪಾದಾ=ಪಾದಗಳನ್ನು ಅಂದರೆ ಜ್ಞಾನ ವಿಜ್ಞಾನಗಳನ್ನು ಪ್ರತಿಧಾತವೇ=ಪರಮಾತ್ಮನನ್ನು ಹೊಂದುವುದಕ್ಕಾಗಿ ಅಕಃ=ಮಾಡಿದನು. ಉತ=ಮತ್ತು, ಹೃದಯ ವಿಧಃ=(ಹೃದಯಂ ವಿಶೇಷೇಣ ಧತ್ತೇ ಎಂಬ ವ್ಯುತ್ಪತ್ತಿಯಿಂದ) ಬುದ್ಧಿಯನ್ನು ವಿಶೇಷವಾಗಿ ಧರಿಸುತ್ತಿರುವ, ಚಿದಪಿ=ಬುದ್ಧಿಧಾರಕನಾದ ಶಂಕರನದೂ ಕೂಡ ಅಪವಕ್ತಾ=ದೋಷಗಳನ್ನು ಹೇಳುತ್ತಾನೆ. (ಅಂದರೆ ಆತನ ದೋಷಗಳನ್ನು ತಿಳಿದು ಶಿಕ್ಷಿಸುತ್ತಾನೆ.) ॥ ೮ ॥

ಭಾ ॥ (೧) ಉರುಂ ರಾಜಾ ರಂಜನಾದ್ರಾಜನಾದ್ವಾ ಸೂರ್ಯಾಯ ಪಂಥಾನಮುಸೌ ಚಕಾರ। ಸ್ವಾಜ್ಞಾನುಸಾರೇಣ ಸದೈವ ಗತ್ಯೈ (೨) ಪಾದಾವಪಾದಾಯ ಚ ಗಂತವೇಽ ಕರೋತ್ । ಅಜ್ಞಾಯ ವಿಜ್ಞಾನಮುಕಃ ಸ ಗಂತುಮಾತ್ಮಾನಮಿತ್ಯರ್ಥ ಇಹಾಂಜಸೋಕ್ತಃ ॥ (೩) ಬುದ್ಧೇರ್ಧರ್ತುಃ ಶಂಕರಸ್ಯಾಪಿ ದೋಷಾನ್ವಕ್ತಾ ಜ್ಞಾನಾಚ್ಛಿಕ್ಷಕತ್ವಾಚ್ಚ ವಿಷ್ಣುಃ ॥ ೮ ॥

ಅ ॥ (೧) (ರಂಜರಾಗೇ ಎಂಬ ಧಾತು ವ್ಯಾಖ್ಯಾನದಿಂದ) ಭಕ್ತರಿಗೆ ತನ್ನಲ್ಲಿ ಸ್ನೇಹವನ್ನು ಹುಟ್ಟಿಸುವುದರಿಂದಲೂ, (ರಾಜೃ ದೀಪ್ತೌ ಎಂಬ ಧಾತು ವ್ಯಾಖ್ಯಾನದಿಂದ) ಪ್ರಕಾಶಿಸುವುದರಿಂದ, ಪ್ರಕಾಶಗೊಳಿಸುವುದರಿಂದಲೂ ರಾಜಾ ಎನಿಸಿಕೊಂಡ, ವರುಣನೆನಿಸಿದ ಶ್ರೀಹರಿಯು, ತನ್ನ ಆಜ್ಞಾನುಸಾರವಾಗಿ ಸದಾ ಹೋಗುವುದಕ್ಕಾಗಿಯೇ, ಸೂರ್ಯನಿಗೆ ವಿಸ್ತೀರ್ಣವಾದ, ಮಾರ್ಗವನ್ನು ಮಾಡಿದನು. (ಅಂದರೆ ಸೂರ್ಯನ ಸಂಚಾರಕ್ಕಾಗಿ ಮೂರ್ತಾಂತರಗಳ ತಡೆಯಿಲ್ಲದ ಹಾಗೆ ಅಂತರಿಕ್ಷವನ್ನು ಮಾಡಿದನು) (೨) ಪಾದಗಳಿಲ್ಲದ ಪುರುಷನಿಗೋಸ್ಕರ, ಹೋಗುವುದಕ್ಕಾಗಿ ಪಾದಗಳನ್ನು ಮಾಡಿದನು. (**ಸೂತ್ರಾರ್ಥೋ ವರ್ಣ್ಯತೇ ಯತ್ರ ಪದೈಃ ಸೂತ್ರಾನುಕಾರಿಭಿಃ । ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ ।** ಎಂಬ ಪ್ರಮಾಣದಿಂದ ಸೂತ್ರಭಾಷ್ಯದಲ್ಲಿ ಸೂತ್ರಾನುಕಾರಿ ಪದಗಳನ್ನು ಹೇಗೆ ಪ್ರಯೋಗ ಮಾಡಬೇಕೋ ಹಾಗೆಯೇ ವೇದ ಭಾಷ್ಯದಲ್ಲಿ ವೇದಾನುಕಾರಿಪದಗಳನ್ನು ಪ್ರಯೋಗಮಾಡಬೇಕೆಂಬ ಅಭಿಪ್ರಾಯದಿಂದ **ಗಂತವೇ** ಎಂದು ಗಮ್ ಧಾತುವಿಗೆ ತವೇ ಎಂಬ ಪ್ರತ್ಯಯ ಪ್ರಯೋಗವನ್ನು ಭಾಷ್ಯದಲ್ಲಿ ಮಾಡಿರುವರು.) ಅಥವಾ ಅಪದೇ=(ಪದ ಗತೌ. ಯೇಯೇ ಗತ್ಯರ್ಥಾಃ ತೇತೇ ಜ್ಞಾನಾರ್ಥಕಾಃ ನ ವಿದ್ಯತೇ ಪದ್ ಯಸ್ಯ ಎಂಬ ವ್ಯುತ್ಪತ್ತಿಯಿಂದ) ಅಜ್ಞ ಪುರುಷನಿಗೋಸ್ಕರ, ವಿಜ್ಞಾನವನ್ನೂ ಜ್ಞಾನವನ್ನೂ, ತನ್ನನ್ನು ಹೊಂದುವುದಕ್ಕಾಗಿ ಮಾಡಿದನು, ಎಂಬೀ ಅರ್ಥವು ಈ ಪಾದದಲ್ಲಿ ಮುಖ್ಯ ವೃತ್ತಿಯಿಂದ ಹೇಳಲ್ಪಟ್ಟಿತು. (ಚರಣದಾನರೂಪವಾದ ಅರ್ಥಕ್ಕಿಂತ ಜ್ಞಾನಾದಿ ದಾನರೂಪವಾದ ಅರ್ಥವು ಮುಖ್ಯಾರ್ಥವು ಹೇಗೆ ಆಗುವುದು? ಪಾದ ಶಬ್ದವು ಚರಣದಲ್ಲಿ ರೂಢವಾಗಿದೆ. ಜ್ಞಾನದಲ್ಲಿ ಯೌಗಿಕವಾಗಿದೆ ಎಂದರೆ-ಅತ್ತಿತ್ತ ಹೋಗುವುದಕ್ಕಾಗಿ ಪಾದದಾನಕ್ಕಿಂತ ಭಗವಂತನನ್ನು ಹೊಂದುವುದಕ್ಕಾಗಿ ಜ್ಞಾನವಿಜ್ಞಾನಗಳ ದಾನವು ಮಾಹಾತ್ಮ್ಯಾತಿಶಯ ಸೂಚಕವಾಗಿರುವುದರಿಂದ ಅಧಿಕವಾಗಿದೆ.) (೩) ಶ್ರೀವಿಷ್ಣುವು ಜ್ಞಾನವನ್ನು ಧರಿಸುವ ಅಥವಾ ಪರೋಪದೇಶಕನಾದ ಶಂಕರನದ್ದೂ ಕೂಡ ದೋಷಗಳನ್ನು ಹೇಳುತ್ತಾನೆ. (ಶ್ರೀ ವಿಷ್ಣುವಿಗೆ ತನ್ನ ಭಕ್ತರಲ್ಲಿ ಸ್ನೇಹವಿದ್ದುದರಿಂದ ದ್ವೇಷಿಗಳಂತೆ ದೋಷಗಳನ್ನು ಹೇಳುತ್ತಾನೆನ್ನುವುದು ಹೇಗೆ ಕೂಡುತ್ತದೆ ಎಂದರೆ) ಸೂಕ್ಷ್ಮ ವಿಜ್ಞಾನವಿದ್ದುದರಿಂದಲೂ, ಶಿಕ್ಷಕನಾದುದರಿಂದಲೂ ಉಪ

ಪನ್ನವಾಗುತ್ತದೆ. (ಶಿಕ್ಷಕನು ನೀನು ಇಂತಹ ಅನ್ಯಾಯವನ್ನು ಮಾಡಿರುತ್ತಿ ಎಂದು ದೋಷಗಳನ್ನು ಹೇಳುತ್ತಾನಷ್ಟೆ. ಇದರಿಂದ ಶ್ರೀವಿಷ್ಣುವು ವಿಜ್ಞಾನವುಳ್ಳವನೆಂದೂ ಶಿಕ್ಷಕನೆಂದೂ ಅಭಿಪ್ರೇತವಾಯ್ತು. ದೌರ್ಜನ್ಯವು ಬರುವುದಿಲ್ಲ.) ॥ ೮ ॥

ಋ ॥ (೨೬೨) ಶತಂ ತೇ ರಾಜನ್ಭಿಷಜಃ ಸಹಸ್ರಮುರ್ವೀ ಗಭೀರಾ ಸುಮತಿಷ್ಟೇ ಅಸ್ತು। ಬಾಧಸ್ವ ದೂರೇ ನಿರ್ಋತಿಂ ಪರಾಚೈಃ ಕೃತಂಚಿದೇನಃ ಪ್ರಮುಮುಗ್ಧ್ಯಸ್ಮತ್ ॥ ೯ ॥

ಅ ॥ ಹೇ ರಾಜನ್=ಶ್ರೀಹರಿಯೇ; ತೇ=ನಿನಗೆ, ಶತಂ=ಅನಂತಗಳಾದ, (ಶತ ಸಹಸ್ರ ಶಬ್ದಗಳು ಬಹು ನಾಮಗಳಲ್ಲಿ ಪಠಿತಗಳಾಗಿರುವುದರಿಂದ ಸಂಖ್ಯಾ ವಿಶೇಷಾರ್ಥವಿದೆ ಎನ್ನುವಲ್ಲಿ ಜ್ಞಾಪಕವಿಲ್ಲದಿರುವ ಪ್ರಯುಕ್ತ ಅನಂತವೆಂದರ್ಥವುಳ್ಳವುಗಳು.) ಸಹಸ್ರಂ= ಪುನಃ ಪ್ರತ್ಯೇಕವಾಗಿ ಅನಂತ ಪ್ರಕಾರಗಳಾಗಿರುವ, ಭಿಷಜಃ= ರಕ್ಷಕತ್ವಗುಣ ಸಂಬಂಧದಿಂದ ಜಗದ್ರಕ್ಷಾ ಸಾಧನಗಳಾದ ಬಲಗಳು (ಅಂದರೆ ವೈದ್ಯನು ರೋಗದಿಂದ ರಕ್ಷಿಸುವವನು, ಬಲಗಳು ಸರ್ವ ಪ್ರಕಾರದಿಂದಲೂ ಜಗತ್ತನ್ನು ರಕ್ಷಿಸುವವುಗಳು. ಆದ ಕಾರಣ ಬಲಗಳಲ್ಲಿ ಭಿಷಕ್ ಶಬ್ದಕ್ಕೆ ಅಮುಖ್ಯ ವ್ಯವಹಾರವು.) (ಸಂತಿ=ಇರುತ್ತವೆ.) (ಆದ ಕಾರಣ ನನಗೆ) ಉರ್ವೀ=ಮಹತ್ತಾದ, ಗಭೀರಾ=ಅಗಾಧ ರೂಪವಾದ, ಸುಮತಿಃ=ಶೋಭನವಾದ ಬುದ್ಧಿಯು, ತೇ=ನಿನಗೆ, (ನಿನ್ನ ವಿಷಯದಲ್ಲಿ) ಅಸ್ತು=ಸದಾ ಇರಲಿ. (ಅಂದರೆ (1) ಇಷ್ಟ, ಇಷ್ಟ ಸಾಧನ ಇವುಗಳನ್ನು ಕೊಡುವುದು. (2) ಅನಿಷ್ಟಪರಿಹಾರ ಹೀಗೆ ರಕ್ಷಣೆಯು ವಿಧವಾದಪ್ರಯುಕ್ತ ಜ್ಞಾನಾದಿಗಳು ಲಭಿಸಬೇಕೆಂದು ಪ್ರಾರ್ಥನೆಯು ಯುಕ್ತವು.) ಮತ್ತು ನಿರ್ಋತಿಂ= (**ನಿಃ ನೈಶ್ಚೈಷನಿಷೇಧಯೋಃ** ಎಂಬ ವಿಶ್ವಕೋಶದಿಂದ ನಿಃ=ನಿಷೇಧವು. ಋ ಗತೌ, ಎಂದು ಧಾತು ವ್ಯಾಖ್ಯಾನದಿಂದ ನಿರ್ಗತಾ ಋತಿಃ= ಜ್ಞಾನಂ ಯಸ್ಮಾತ್ ಎಂಬ ವ್ಯುತ್ಪತ್ತಿಯಿಂದ ದುರ್ಮತಿಯು ಯಥಾರ್ಥ ಜ್ಞಾನಕ್ಕೆ ವಿರೋಧಿಯಾಗಿರುವುದರಿಂದ ನಿರ್ಋತಿಯೆಂದು ಹೆಸರುಳ್ಳ ದುರ್ಮತಿಯನ್ನು, ದೂರೇ=ದೂರದಲ್ಲಿಯೇ, ಪರಾಚೈಃ— ನಿರಾಕರಿಸಿ,(ದುಜ್ಞಾನಿ ಜನರನ್ನು ನರಕದಲ್ಲಿ ಹಾಕಿ)ಬಾಧಸ್ವ=(ಭಾಧೃ ವಿಲೋಡನೇ ಎಂಬ ಧಾತು ವ್ಯಾಖ್ಯಾನದಿಂದ) ನಾಶಗೊಳಿಸು. ಕೃತಂ=(ನನ್ನಿಂದ) ಮಾಡಲ್ಪಟ್ಟ, ಏನಶ್ಚಿತ್=ಪಾಪವನ್ನೂ ಕೂಡ, ಅಸ್ಮತ್=ನನ್ನಿಂದ, ಪ್ರಮುಮುಗ್ಧಿ=ಬಿಡಿಸು. ಹೋಗಲಾಡಿಸು. ॥ ೯ ॥

ಭಾ ॥ (೧) ಜಗದ್ರಕ್ಷಾಸಾಧನಾನ್ಯಪ್ಯನಂತಾನ್ಯನಂತಧಾ ಸಂತಿ ಪುನಸ್ತವೇಶ ॥ (೨) ಅಗಾಧರೂಪಾ ಮಹತೀ ಶುಭಾ ಚ ಮತಿರ್ಮಮ ತ್ವದ್ವಿಷಯೇ ಸದಾಽಸ್ತು ॥ (೩) ಋತಜ್ಞಾನಪ್ರತಿರೂಪತ್ವಹೇತೋರ್ನಿರ್ಋತ್ಯಾಖ್ಯಾಂ ದುರ್ಮತಿಂ ದೂರ ಏವ। ಬಾಧಸ್ವ ದುಜ್ಞಾನಿಜನಂ ನಿರಸ್ಯ ಸ್ವಗಾತ್ಪರಾಕೃತ್ಯ ಚ ಶಶ್ವದೇವ ॥ (೪) ಕೃತಂ ಚ ಪಾಪಂ ಪ್ರಮುಮುಗ್ಧಿ ಮತ್ತಃ॥ ॥ ೯ ॥

ಅ (೧) ಎಲೋ ಶ್ರೀ ಹರಿಯೇ ನಿನಗೆ ಅನಂತಗಳಾದ ಪುನರಪಿ ಪ್ರತ್ಯೇಕವಾಗಿ ಅನಂತಗಳಾಗಿರುವ, ಜಗದ್ರಕ್ಷಾಸಾಧನಗಳಾದ ಬಲಗಳಿವೆ. (೨) ಆದಕಾರಣ ನನಗೆ ಮಹತ್ತಾದ, ಅಗಾಧ ರೂಪವೂ ಆದ, ಶುಭವಾದ ಬುದ್ಧಿಯು ನಿನ್ನ ವಿಷಯದಲ್ಲಿ ಸದಾ ಇರಲಿ. (೩) ಋತವೆಂದರೆ ಜ್ಞಾನವು. ಅಂತಹ ಯಥಾರ್ಥ ಜ್ಞಾನಕ್ಕೆ ವಿರೋಧಿಯಾಗಿರುವುದರಿಂದ ನಿರ್ಋತಿಯೆಂದು ಹೆಸರುಳ್ಳ ದುರ್ಮತಿಯನ್ನು ದೂರದಲ್ಲಿಯೇ ಬಾಧಿಸು. (ದುರ್ಮತಿಯನ್ನು ಬೋಧಿಸುವ ದುಜ್ಞಾನಿಗಳು ಬಹಳ ಇದ್ದ ಪ್ರಯುಕ್ತ ದುರ್ಮತಿಯನ್ನು

ನಾಶಗೊಳಿಸುವುದು ಹೇಗೆಂದರೆ) ದುರ್ಮತಿಯನ್ನು ತಿರಸ್ಕರಿಸಿ ದುರ್ಜ್ಞಾನಿ ಜನರನ್ನು ಸ್ವರ್ಗಾದಿ ಸ್ಥಾನಗಳಿಂದ ಸರ್ವದಾ ನಿರಾಕರಿಸಿ (ನರಕದಲ್ಲಿಯೇ ಹಾಕಿ) ನಾಶಗೊಳಿಸು. (೪) ನಾನು ಮಾಡಿದ್ದ ಪಾಪವನ್ನೆಲ್ಲಾ ನನ್ನಿಂದ ಬಿಡಿಸು. ಹೋಗಲಾಡಿಸು. (ಮುಚ ಪ್ರಮೋಚನೇ ಮೋದನೇಚ ಎಂದು ಧಾತುವ್ಯಾಖ್ಯಾನವು) ॥ ೯ ॥

ಋ ॥ (೨೬೩) ಅಮೀ ಯ ಋಕ್ಷಾ ನಿಹಿತಾಸ ಉಚ್ಚಾ ನಕ್ತಂ ದದೃಶ್ರೇ ಕುಹಚಿದ್ದಿವೇಯುಃ। ಅದಬ್ಧಾನಿ ವರುಣಸ್ಯ ವ್ರತಾನಿ ವಿಚಾಕಶಚ್ಚಂದ್ರಮಾ ನಕ್ತಮೇತಿ ॥ ೧೦ ॥ ೧೪ ॥

ಅ ॥ (ಎಲೋ ವರುಣನೇ) ಯೇ ಅಮೀ ಋಕ್ಷಾಃ=ಯಾವ ಈ ನಕ್ಷತ್ರಗಳು ಇರುತ್ತವೋ, (ಅವುಗಳು ಉಚ್ಚಾ=ಉನ್ನತವಾದ ಅಂತರಿಕ್ಷದಲ್ಲಿ, ನಿಹಿತಾಸಃ=(ನಿನ್ನಿಂದಲೇ,) ಇಡಲ್ಪಟ್ಟಿವೆ. (ಯಾವುದು ಅವುಗಳು) ನಕ್ತಂ=ರಾತ್ರಿಯಲ್ಲಿ, ದದೃಶ್ರೇ=ದೃಶ್ಯಗಳಾಗಿವೆಯೋ, ದಿವಾ=ಹಗಲಿನಲ್ಲಿ, ಕುಹಚಿತ್=ಕೆಲವು ವೇಳೆಯೇ, ಈಯುಃ=(ಇಣ್‌ಗತೌ)ತೋರುತ್ತವೋ, (ಅಂದರೆ ರಾತ್ರಿಯಲ್ಲಿ ಸದಾ ತೋರುತ್ತವೋ. ಹಗಲು ಕೆಲವು ವೇಳೆಯೆ ತೋರುತ್ತವೋ ಇದು ಕೂಡ ನಿನ್ನಿಂದಲೇ.) ವರುಣಸ್ಯ=ಉತ್ಕೃಷ್ಟವಾದ ಆನಂದರೂಪ ಶರೀರವುಳ್ಳ ಶ್ರೀವಿಷ್ಣು ವೆನಿಸಿದ ನಿನ್ನದ್ದೇ,ವ್ರತಾನಿ=ಆಕಾಶದಲ್ಲಿ ನಕ್ಷತ್ರ ಸ್ಥಾಪನ ಮೊದಲಾದ ಹೇಳಲ್ಪಟ್ಟ ಕರ್ಮಗಳು, ಅದೃಬ್ಧಾನಿ= ಅಪ್ರತಿಹತಗಳಾಗಿವೆ. (ತಡೆಯಿಲ್ಲದವುಗಳಾಗಿವೆ.) ಮತ್ತು, ಚಂದ್ರಮಾಃ=ಚಂದ್ರನು, ವಿಚಾಕಶತ್=(ಕಾಶೃ ದೀಪ್ತೌ, ದೀಪ್ತಿಯೆಂದರೆ ದರ್ಶನವು.) (ಸಮಸ್ತವನ್ನು)ನೋಡುತ್ತಾ, ಅಥವಾ ವರುಣನ ಅಪ್ರತಿಹತಗಳಾದ ವ್ರತ ಗಳನ್ನು ನೋಡುತ್ತಾ, ಅಥವಾ ಪ್ರಕಾಶವನ್ನು ಹೊಂದಿರವನಾಗಿ, ನಕ್ತಂ=ರಾತ್ರಿಯಲ್ಲಿ, ಏತಿ=ಹೋಗು ತ್ತಾನೆ. (ಅದೂ ಕೂಡ ನಿನ್ನಿಂದಲೇ.) ಮತ್ತು ಚಂದ್ರಾದಿಗಳೆಲ್ಲರೂ ನಿನ್ನ ಆಜ್ಞೆಯಿಂದಲೇ ನಿನ್ನಿಂದ ಪ್ರೇರಿತ ರಾಗಿಯೇ ತಂತಮ್ಮ ವ್ಯಾಪಾರಗಳನ್ನು ಮಾಡುತ್ತಾರೆ ॥ ೧೦ ॥

ಭಾ ॥ (೧) ಋಕ್ಷಾಣ್ಯಮೀ ನಿಹಿತಾನಿ ತ್ವಯೋಚ್ಚೈಃ ॥ ದೃಶ್ಯಾನಿ ರಾತ್ರೌ ನ ದಿವಾ ತ್ವಯೆ ವೇತ್ಯಾದೀನಿ ಕರ್ಮಾಣ್ಯನಿರೋಧಿತಾನಿ । ಪಶ್ಯನ್ಪರಾನಂದತನೋಸ್ತವೈವ ಚಂದ್ರೋ ನಿತ್ಯಂ ದೃಶ್ಯ ಮಾನಸ್ತ್ವಯೈವ ॥ (೩) ಸಂಪ್ರೇರಿತೋ ಯಾತಿ ಪರೇ ಚ ದೇವಾ ಏವಂ ತ್ವದಾಜ್ಞಾಕರಣಾಃ ಸದೈವ ॥ ೧೧ ॥ ೧೪ ॥

ಅ ॥ ಈ ನಕ್ಷತ್ರಗಳು ಅಂತರಿಕ್ಷ ಲೋಕದಲ್ಲಿ ನಿನ್ನಿಂದಲೇ ಇಡಲ್ಪಟ್ಟಿವೆ. ನಕ್ಷತ್ರಗಳು ರಾತ್ರಿಯಲ್ಲಿ ದೃಶ್ಯಗಳಾಗುತ್ತವೆ. ಹಗಲಿನಲ್ಲಿ ಕೆಲವು ವೇಳೆಯೇ ತೋರುತ್ತವೋ, ಯಾವುದು ನಕ್ಷತ್ರಗಳು ಹಗಲು ಸರ್ವದಾ ಪ್ರತೀತಗಳಾಗುವುದೆ ಇಲ್ಲವೋ, ಕೆಲವು ವೇಳೆ ಖಗ್ರಾಸ (ಸಂಪೂರ್ಣಗ್ರಾಸ)ಸೂರ್ಯ ಗ್ರಹಣಾದಿ ಕಾಲದಲ್ಲಿಯೆ ತೋರುತ್ತವೋ, ಅದೂ ಕೂಡ (ಅಂದರೆ—ಕೆಲವು ವೇಳೆ ಕೆಲವುನಕ್ಷತ್ರಗಳು ಹಗಲು ತೋರುವುದೂ ನಿನ್ನಿಂ ದಲೇ ಮಾಡಲ್ಪಟ್ಟದ್ದು.(೨)(ವರ=ಅತ್ಯುತ್ತಮವಾದ, ಣ=ಆನಂದವಿರುವುದರಿಂದ ವರುಣನೆನಿಸಿದ) ಉತ್ಕೃಷ್ಟ ವಾದ ಆನಂದ ರೂಪ ಶರೀರವುಳ್ಳ, ಶ್ರೀಹರಿಯಾದ ನಿನ್ನದ್ದೇ ಅಂತರಿಕ್ಷದಲ್ಲಿ ನಕ್ಷತ್ರ ಸ್ಥಾಪನ ಮೊದಲಾದ ಹೇಳಿದ ಕರ್ಮಗಳು ತಡೆಯಿಲ್ಲದವುಗಳು ಚಂದ್ರನು ಸಮಸ್ತವನ್ನು ನೋಡುತ್ತಾ, ನಿತ್ಯದಲ್ಲಿಯೂ, ಅತ್ತಿತ್ತ ಸಂಚರಿಸುವುದೂ ನಿನ್ನಿಂದಲೇ. ಶ್ರೀಹರಿಯ ತಡೆಯಿಲ್ಲದ ಕರ್ಮಗಳನ್ನು ನೋಡುತ್ತಾ ಹೋಗುವುದೂ ನಿನ್ನಿಂ ದಲೇ. ಚಂದ್ರನು ರಾತ್ರಿಯಲ್ಲಿ ನಿತ್ಯದಲ್ಲಿಯೂ ಕಾಣಲ್ಪಡುತ್ತಾ ಹೋಗುವುದೂ ಕೂಡ ನಿನ್ನಿಂದಲೇ, (೩)

ಯಾವ ಪ್ರಕಾಶ ವಿಶಿಷ್ಟನಾಗಿ ಕಾಣಲ್ಪಡತಕ್ಕ ಚಂದ್ರನೋ, ಆತನು ನಿನ್ನಿಂದಲೇ ಚೆನ್ನಾಗಿ ಪ್ರೇರಿತನಾಗಿಯೇ ರಾತ್ರಿಯಲ್ಲಿ ಹೋಗುತ್ತಾನೆ. ಹೀಗೆಯೇ ಇತರರಾದ ದೇವತೆಗಳೂ ಕೂಡ ಸದಾ ನಿನ್ನ ಆಜ್ಞೆಯನ್ನೇ ಮಾಡಿಕೊಂಡಿರುವವರು. ಅಥವಾ ತ್ವದಾಜ್ಞಾಯಾಃ ಕರಣಂ ಕೃತಿರ್ಯೇಷು ಎಂದು ವಿಗ್ರಹವು. ॥ ೧೦ ॥ ೧೪ ॥

ಋ ॥ (೨೬೪) ತತ್ತ್ವಾ ಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ । ಅಹೇಳಮಾನೋ ವರುಣೇಹ ಬೋಧ್ಯುರುಶಂಸ ಮಾ ನ ಆಯುಃ ಪ್ರಮೋಷೀಃ ॥ ೧೧ ॥

ಅ ॥ ಹೇ ವರುಣ=ಎಲೋ ಶ್ರೀಹರಿಯೇ, (ಯಾವ ಕಾರಣದಿಂದ ನೀನು ಇಂತಹ ಗುಣಗಳುಳ್ಳವನೋ) ತತ್=ಆಕಾರಣದಿಂದ, ತ್ವಾ=ನಿನ್ನನ್ನು. ಬ್ರಹ್ಮಣಾ= (**ಬ್ರಹ್ಮ ಪ್ರೋಕ್ತಂ ತಪೋಽಧ್ಯಾತ್ಮ ವೇದಜ್ಞಾನೇಷು ಸೂರಿಭಿಃ** ಎಂದು ವಿಶ್ವಕೋಶವು.) ವೇದವಚನದಿಂದ, ವಂದಮಾನಃ= (ವದಿ ಅಭಿವಾದನಸ್ತುತ್ಯೋಃ) ನಮಸ್ಕರಿಸುತ್ತಾ ಸ್ತುತಿಸುತ್ತಾ, ಸಾಷ್ಟಾಂಗವೆರಗುತ್ತಾ, ಯಾಮಿ=ಶರಣು ಹೊಂದುತ್ತೇನೆ. ಮತ್ತು ಯಜಮಾನಃ=ಯಜಮಾನನು, ಮತ್ತು ನನ್ನಿಂದ ಭಿನ್ನನಾದ ವಿದ್ವಾಂಸನು, ಹವಿರ್ಭಿಃ=ಹವಿಃ ಪ್ರದಾನಾದಿಗಳಿಂದ, ತದೇವ ಆಶಾಸ್ತೇ=ನಿನ್ನನ್ನು ಶರಣು ಹೊಂದುವುದನ್ನೇ ಇಚ್ಛಿಸುತ್ತಾನೆ. (ಅಂದರೆ ಯಾವ ಕಾರಣದಿಂದ ಇನ್ನೊಬ್ಬ ಜ್ಞಾನಿಯೂ ನಿನ್ನನ್ನು ಶರಣು ಹೊಂದಬೇಕೆಂದು ಇಚ್ಛಿಸುತ್ತಾನೋ, ಆ ಕಾರಣದಿಂದ ನಾನೂ ಕೂಡ ನಿನ್ನನ್ನು ಶರಣು ಹೊಂದುತ್ತೇನೆ) (ಎಲೋ ವರುಣನೇ) ಇಹ=ನಮ್ಮಲ್ಲಿ, ಅಹೇಳಮಾನಃ=ಅವಮಾನವನ್ನು ಮಾಡದಿರುವ ನೀನು (ಅಂದರೆ ಮನುಷ್ಯ ಮಾತ್ರನೆಂಬ ಬುದ್ಧಿಯಿಂದ ನಮ್ಮನ್ನು ಶರಣು ಹೊಂದಿದವರನ್ನು ನಿಂದಿಸದಿರುವವನಾಗಿ) ಬೋಧಿ=ಸಂಬೋಧಿಸು. (ಅಂದರೆ—ಎಲೋ ಶುನಶ್ಶೇಪನೇ ಶ್ರಾಂತನಾಗಿರುತ್ತಿ ಇದು ಮೊದಲಾದ ವಚನವನ್ನು ಮಾಡು.) ಉರುಶಂಸ=ಉತ್ತಮರಾದ ಬ್ರಹ್ಮಾದಿಗಳಿಂದ ಚೆನ್ನಾಗಿ ಸ್ತುತಿಸಲ್ಪಡತಕ್ಕವನೇ, ನಃ=ನಮ್ಮ, ಆಯುಃ=ಆಯುಷ್ಯವನ್ನು ಮಾ ಪ್ರಮೋಷೀಃ (ಮುಷ ಸ್ತೇಯೇ ಎಂಬ ಧಾತು ವ್ಯಾಖ್ಯಾನದಿಂದ) ಛೇದಿಸಬೇಡ. (ಕ್ಷೀಣೀಕರಿಸಬೇಡ) ವೃದ್ಧಿಗೊಳಿಸು. ॥ ೧೧ ॥

ಭಾ ॥ (೧) ಏವಂಗುಣೋ ಯತ್ತ್ವಮತೋ ವ್ರಜಾಮಿ ಸದಾ ಶರಣ್ಯಂ ಶರಣಂ ವೇದವಾಚಾ। ನಮನ್ನನ್ಯೋ ಯಜಮಾನೋ ಹವಿರ್ಭಿಸ್ತದಾಶಾಸ್ತೇ ತ್ವದ್ಗತಿಂ ದೇವ ದೇವ ॥ ಅನಿಂದನ್ನಸ್ಮಾನ್ನರಮಾತ್ರಬುದ್ಧ್ಯಾ ಸಂಬೋಧಯೋಚ್ಚೈಃ ಸ್ತುತಮಸ್ಮದಾಯುಃ ಛೈತ್ಸೀಃ ॥ ೧೧ ॥

ಅ ॥ (೧) (ತತ್ ಎನ್ನುವ ಪರಾಮರ್ಶಕ್ಕೆ ವಿಷಯವನ್ನು ತೋರಿಸುತ್ತಾ ವ್ಯಾಖ್ಯಾನ ಮಾಡುತ್ತಾರೆ. ಯಾವ ಕಾರಣದಿಂದ ಇಂತಹ ಗುಣಗಳುಳ್ಳವನೋ ಆ ಕಾರಣದಿಂದ ಮರೆಯಾಗಲು ಯೋಗ್ಯನಾದ ನಿನ್ನನ್ನು ವೇದವಚನದಿಂದ ನಮಸ್ಕರಿಸುತ್ತಾ ಸ್ತುತಿಸುತ್ತಾ ಸಾಷ್ಟಾಂಗವೆರಗುತ್ತಾ ಸದಾ ಶರಣು ಹೊಂದುತ್ತೇನೆ. ಯಜಮಾನನು ನನ್ನಿಂದ ಇತರನಾದ ವಿದ್ವಾಂಸನೂ ಕೂಡ, ಹವಿಃ ಪ್ರದಾನಾದಿಗಳಿಂದ ಅದನ್ನೇ ಇಚ್ಛಿಸುತ್ತಾನೆ. ಅಂದರೆ ನಿನ್ನ ಶರಣಪ್ರಾಪ್ತಿಯನ್ನೇ ಇಚ್ಛಿಸುತ್ತಾನೆ. ಏವಂಚ (ಯಾವ ಕಾರಣದಿಂದ ಇನ್ನೊಬ್ಬ ವಿದ್ವಾಂಸನೂ ನಿನ್ನನ್ನು ಶರಣು ಹೊಂದ ಬೇಕೆಂದು ಇಚ್ಛಿಸುತ್ತಾನೋ, ಆ ಕಾರಣದಿಂದ ನಾನೂ ಕೂಡಾ ಶರಣು ಹೊಂದುತ್ತೇನೆ.) ಎಲೋ ದೇವಾಧಿಪತಿಯೇ ನೀನು ಮನುಷ್ಯ ಮಾತ್ರನೆಂಬ ಬುದ್ಧಿಯಿಂದ ನಮ್ಮನ್ನು ಶರಣು ಹೊಂದಿ

ದವರನ್ನು ನಿಂದಿಸದಿರುವವನಾಗಿ (ಎಲೋ ಶುನಶ್ಶೇಪನೇ ಶ್ರಾಂತನಾಗಿರುತ್ತಿ ಎಂದು) ಸಂಭೋದಿಸು. ಚೆನ್ನಾಗಿ ಸ್ತುತಿಸಲ್ಪಟ್ಟವನೇ ನಮ್ಮ ಆಯುಷ್ಯವನ್ನು ಛೇದಿಸಬೇಡ ವೃದ್ಧಿಗೊಳಿಸು ॥೧೧॥

ಋ ॥ (೨೬೫) ತದಿನ್ನಕ್ತಂ ತದ್ದಿವಾ ಮಹ್ಯಮಾಹುಸ್ತದಯಂ ಕೇತೋಹೃದ ಆವಿಚಷ್ಟೇ । ಶುನಃಶೇಪೋ ಯಮಹ್ವದ್ಗೃಭೀತಃ ಸೋ ಅಸ್ಮಾನ್ರಾಜಾ ವರುಣೋ ಮುಮೋಕ್ತು ॥ ೧೨ ॥

ಅ ॥ (ಎಲೋ ವರುಣನೇ) ನಕ್ತಂ=ರಾತ್ರಿಯಲ್ಲಿ, ಮಹ್ಯಂ=ನನಗಾಗಿ, ತದಿತ್=(ಬ್ರಹ್ಮಣಾ ವಂದಮಾನಂ ಎಂದು ಪ್ರಕೃತನಾದ) ನಿನ್ನ ಸ್ತೋತ್ರವನ್ನೇ, (ಅವಶ್ಯವಾಗಿ ಮಾಡಬೇಕೆಂದು ಆಚಾರ್ಯರು) ಆಹುಃ= ಹೇಳುತ್ತಾರೆ. ದಿವಾ=ಹಗಲಿನಲ್ಲಿಯೂ, ತತ್=ಆ ಸ್ತೋತ್ರವನ್ನೇ (ಮಾಡಬೇಕೆಂದು ಹೇಳುತ್ತಾರೆ) ಮತ್ತು, ಹೃದಃ=ಹೃದಯದಲ್ಲಿರತಕ್ಕ, ಅಥವಾ ಹೃದಯವನ್ನಧಿಷ್ಠಾನೀಕರಿಸಿರುವ, ಅಂದರೆ ಹೃದಯದಲ್ಲಿರುವ, ಕೇತಃ= ಜ್ಞಾನರೂಪನಾದ, ಅಯಂ=ಈ ನಿನ್ನ ರೂಪಾಂತರನಾದ, (ಅಂದರೆ ಸ್ತುತ್ಯವಾದ ವರುಣಾದಿ ರೂಪದಿಂದ ಇತರ ವಾದವ್ಯಾಸಾದಿ ಸ್ವರೂಪನಾದ) ಶ್ರೀ ನಾರಾಯಣನು, ತತ್=ಆ ನಿನ್ನ ಸ್ತೋತ್ರವನ್ನೇ, (ಮಾಡಬೇಕೆಂದು, ಆ ವಿಚಷ್ಟೇ=ಚೆನ್ನಾಗಿ ಹೇಳುತ್ತಾನೆ. ಮತ್ತು ಚೆನ್ನಾಗಿ ನೋಡುತ್ತಾನೆ. (ಚಕ್ಷಿಙ್ ವ್ಯಕ್ತಾಯಾಂ ವಾಚಿ) ಎಂದು ಧಾತು ಪಾಠದಲ್ಲಿ ವಚನದಲ್ಲಿ ಪ್ರಯೋಗವಿದೆ. ಚಷ್ಟೇ, ವಿಚಷ್ಟೇ, ಎಂದು ದರ್ಶನ ಕರ್ಮದಲ್ಲಿ ಪ್ರಯೋಗವಿದೆ. ಹೀಗೆ ಉಭಯತ್ರಾಪಿ ಪ್ರಯೋಗವಿದೆ.) (ಹೀಗೆ ಸ್ತುತಿಸತಕ್ಕ) ಗೃಭೀತಃ=(ಹೃಗ್ರಹೋರ್ಭಃ ಛಂದಸಿ ಎಂಬ ಸೂತ್ರದಿಂದ ಹಕಾರಕ್ಕೆ ಭಕಾರವು.) ಗೃಹೀತನಾದ (ಯೂಪದಲ್ಲಿ ಬದ್ಧನಾದ) ಶುನಶ್ಶೇಪಃ= ಶುನಶ್ಶೇಪನು, ಯಂ=ಯಾರನ್ನು, ಅಹ್ವತ್=(ಹ್ವೇಞ್ ಸ್ಪರ್ಧಾಯಾಂ ಶಬ್ದೇಚ) ಕರೆದನೋ, ಕರೆಯುತ್ತಾನೋ, ಸಃ=ಆದಾವ, ರಾಜಾ=ಸರ್ವೇಶ್ವರನಾದ, ವರುಣಃ=ವರುಣ ದೇವನು, ಅಸ್ಮಾನ್=ನಮ್ಮನ್ನು, ಮುಮೋಕ್ತು=(ಈಗ ಯೂಪ ಬಂಧನದಿಂದುಂಟಾದ ಸಂಸಾರ ದುಃಖ ದೆಶೆಯಿಂದ), ಅಥವಾ ಮೃತ್ಯುರೂಪವಾದ ಶ್ರೇಷ್ಠ ದುಃಖ ದೆಶೆಯಿಂದ) (ಮುಚ್ಲ್ ಮೋಕ್ಷಣೇ) ಬಿಡಿಸಲಿ. (ದುಃಖವನ್ನು ಪರಿಹರಿಸಲಿ) ॥ ೧೨ ॥

ಭಾ ॥ ನಕ್ತಂ ದಿವಸೇ ಚೈತದೇವ ಸ್ತೋತ್ರಂ ತ್ವದೀಯಂ ಪ್ರಾಹುರಾರ್ಯಾಃ ಸುಕಾರ್ಯಂ। ಮಹ್ಯಂ ಕೇತೋ ಜ್ಞಾನರೂಪೋ ಹೃದಿಸ್ಥೋ ನಾರಾಯಣೋ ವಕ್ತ್ಯಯಂ ತೇಽನ್ಯರೂಪಂ।ಪಶ್ಯತ್ಯಪೀಶೋ ಯಂ ಸಮಹ್ವದ್ಗೃಹೀ(ಭೀ)ತಃಸ ನೋ ದೇವೋ ಮೋಚಯತ್ವಗ್ರ್ಯದುಃಖಾತ್ ॥ ೧೨ ॥

ಅ ॥ ರಾತ್ರಿಯಲ್ಲಿಯೂ, ಹಗಲಿನಲ್ಲಿಯೂ, ನಿನ್ನ ಸಂಬಂಧಿಯಾದ ನಿನ್ನ ಈ ಸ್ತೋತ್ರವನ್ನೇ ಚೆನ್ನಾಗಿ ಮಾಡಬೇಕೆಂದು ನನಗಾಗಿ ಆರ್ಯರು ಹೇಳಿರುವರು. ಮತ್ತು ಹೃದಯದಲ್ಲಿರತಕ್ಕ ಕೇತಃ= ಜ್ಞಾನರೂಪನಾದ, ನಿನ್ನದ್ದಾದ ಸ್ತುತ್ಯವಾದ ವರುಣಾದಿ ರೂಪದಿಂದ ಇತರವಾದ ವ್ಯಾಸಾದಿ ಸ್ವರೂಪನಾದ ಶ್ರೀನಾರಾಯಣನೂ (ಆ ನಿನ್ನ ಸ್ತೋತ್ರವನ್ನೇ ಮಾಡಬೇಕೆಂದು) ಹೇಳುತ್ತಾನೆ. ಮತ್ತು ನೋಡುತ್ತಾನೆ. ಹೀಗೆ ಸ್ತುತಿಸ ತಕ್ಕ ಯೂಪದಲ್ಲಿ ಬದ್ಧನಾದ ಶುನಶ್ಶೇಪನು ಯಾರನ್ನು ಕರೆದನೋ, ಅಂತಹ ವರುಣ ದೇವನು ನಮ್ಮನ್ನು ಈಗ ಉಂಟಾದ ದುಃಖದಿಂದಲೂ ಮರಣ ದುಃಖದಿಂದಲೂ, ಬಿಡಿಸಲಿ ॥ ೧೨ ॥

ಋ ॥ (೨೬೬) ಶುನಃಶೇಪೋ ಹ್ಯಹ್ವದ್ಗೃಭೀತ ಸ್ತ್ರಿಷ್ವಾದಿತ್ಯಂ ದ್ರುಪದೇಷು ಬದ್ಧಃ। ಅವೈನಂ ರಾಜಾ ವರುಣಃ ಸಸೃಜ್ಯಾದ್ವಿದ್ವಾ೦ ಅದಬ್ಧೋ ವಿಮುಮೋಕ್ತು ಪಾಶಾನ್ ॥ ೧೨ ॥

ಅ ॥ ಗೃಭೀತಃ=ಗೃಹೀತನಾದ,ಸ್ವೀಕರಿಸಲ್ಪಟ್ಟ ಅಂದರೆ=ತ್ರಿಷು,ದ್ರುಪದೇಷು=ವೃಕ್ಷರೂಪವಾದ ಯಜ್ಞಸ್ತಂಭದ ಉರ್ಧ್ವಭಾಗ, ಅಧೋಭಾಗ, ಮಧ್ಯಭಾಗಗಳೆಂಬ ಮೂರು ಸ್ಥಾನಗಳಲ್ಲಿ, ಬದ್ಧಃ=ಚೆನ್ನಾಗಿ ಕಟ್ಟಲ್ಪಟ್ಟ, (ಅಥವಾ ದ್ರುತಂ ಪದ್ಯಂತೇ=ಶೀಘ್ರಂ ಹೊಂದಿದವುಗಳು ಎಂಬ ವ್ಯುತ್ಪತ್ತಿಯಿಂದ) ವಿಕ್ರಯ, ಯೂಪಬಂಧನ, ಆಲಂಭನ (ಹಿಂಸನೋದ್ಯೋಗ) ಇವುಗಳಿಂದ ಸಂಬದ್ಧನಾದ, ಅಥವಾ ಜೀವರ ದ್ರವಣಕ್ಕೆ (ಸಂಸಾರಕ್ಕೆ) ನಿಮಿತ್ತ ಭೂತಗಳಾದ ಸತ್ವರಜಸ್ತಮೋಗುಣಗಳಿಂದ, ಬದ್ಧಃ=ಚೆನ್ನಾಗಿ ಬದ್ಧನಾದ, ಶುನಶ್ಶೇಪಃ=ಶುನಶ್ಶೇಪನು, ಆದಿತ್ಯಂ=ಸರ್ವರಿಗಿಂತ ಆದಿಯಲ್ಲಿದ್ದುದರಿಂದ ಆದಿತ್ಯನೆನಿಸಿದ ಯಾವ ವರುಣನನ್ನು, ಅಹ್ವತ್‌ಹಿ=ಕರೆಯುತ್ತಾನೋ, (ಸಃ) ವರುಣಃ ರಾಜಾ=ಆ ವರುಣ ರಾಜನು, ಏನಂ=ಈ ಶುನಶ್ಶೇಪನನ್ನು, ವಿದ್ವಾನ್=ನಮ್ಮ ಆಹ್ವಾನವನ್ನು ತಿಳಿದವನಾಗಿ, ಅವ ಸಸೃಜ್ಯಾತ್=(ಸೃಜವಿಸರ್ಗೇ) ಪೂರ್ವದಲ್ಲಿ ಹೇಳಿದ ಬಂಧದಿಂದ ವಿಯುಕ್ತನನ್ನಾಗಿ ಮಾಡಲಿ. (ಅಂತೂ ಪ್ರಸನ್ನನಾಗಿ) ಅದಬ್ಧಃ=ಅಪ್ರತಿಬದ್ಧನಾಗಿ, ಪಾಶಾನ್=ಕರ್ಮ ಪಾಶಗಳನ್ನು, ವಿಮುಮೋಕ್ತು = ಬಿಡಿಸಲಿ (ಕರ್ಮಪಾಶಗಳಿಂದ ಬಿಡುಗಡೆಮಾಡಲಿ-) (ಈ ಸೂಕ್ತದಲ್ಲಿ ಯಾವ ಋಕ್ಕುಗಳಲ್ಲಿ ಇತರತ್ರ ಅವಕಾಶವಿಲ್ಲದಿರುವ ವಿಷ್ಣುಲಿಂಗಾದಿಗಳು ಇವೆಯೋ ಆ ಋಕ್ಕುಗಳನ್ನು ವರುಣಾಂತರ್ಯಾಮಿ ಪರಗಳನ್ನಾಗಿಯೇ ಕೂಡಿಸಬೇಕು) ॥ ೧೩ ॥

ಭಾ ॥ (೧) ಶುನಃಶೇಪೋ ಹ್ಯಹ್ವದ್ಗೃಹಿ(ಭೀ)ತಃ ಸ್ಥಾನತ್ರಯೇ ವಿಕ್ರಯಾದ್ಯೈಸ್ಸುಬದ್ಧಃ।(೨) ದ್ರುತಂ ಪ್ರಾಪ್ತಾನಿ ದ್ರುಪದಾನಿ ವಿಕ್ರಯೋ ಯೂಪೇ ಬಂಧಃ ಸಂಜ್ಞಪನೋದ್ಯಮಶ್ಚ।(೩) ಆದಿತ್ಯೋಽಸಾವಾದಿಸಂಸ್ಥಃಪರೇಶೋ ವಾರೀಶಾಂತಃ ಸಂಸ್ಥಿತಃ ಸ್ತೂಯತೇಽತ್ರ। (೪) ಶುನಶ್ಶೇಪೋಽಯಮಿತ್ಯಾದಿಕೇನ ವಾರೀಶೋಽಪಿ ಹ್ಯೃಷಿಣಾ ಸ್ತೂಯಮಾನಃ। (೫) ಗುಣಾಸ್ತ್ರಯೋ ದ್ರುಪದಾನೀತಿ ಚೋಕ್ತಾ ದ್ರವತ್ಯಯಂ ಜೀವಸಂಘೋ ಽಹಿ ಯತ್ರ॥ (೬) ಕರೋತ್ವೇನಮವ ಸೃಷ್ಟಂ ಸ್ವತೇಃ ಸಃ ಪ್ರಸನ್ನೋಽಸ್ಮಾನ್ ಕರ್ಮಪಾಶಾನ್ ಮುಮೋಕ್ತು ॥ ೧೩ ॥

ಅ ॥ (೧) (ಇಲ್ಲಿ ಪ್ರಥಮ ಪಾದವು ನಿಗದ (ಪಾಠ) ದಿಂದಲೇ ವ್ಯಾಖ್ಯಾತವಾಗಿದೆ ಎಂದು ತೋರಿಸುತ್ತಾ ಗೃಭೀತ ಪದವನ್ನು ವ್ಯಾಖ್ಯಾನ ಮಾಡುತ್ತಾರೆ.) ಗೃಹೀತನಾದ ಶುನಶ್ಶೇಪನು ಕರೆಯುತ್ತಾನೆ. (ತ್ರಿಷು ದ್ರುಪದೇಷು ಬದ್ಧಃ ಎನ್ನುವುದನ್ನು (1) ಸ್ಥಾನತ್ರಯದಲ್ಲಿ ಬದ್ಧನೂ, (2) ವಿಕ್ರಯಾದಿಗಳಿಂದ ಬದ್ಧನು, (ಎಂದು ೨ ಪ್ರಕಾರ ವ್ಯಾಖ್ಯಾನ ಮಾಡಿದರು.) (ಊರ್ಧ್ವ ಭಾಗ ಅಧೋ ಭಾಗ ಮಧ್ಯ ಭಾಗ ಎಂದು ಯೂಪದ್ದು ೩ ಸ್ಥಾನಗಳು. (೨) (ಯೂಪದ ೩ ಸ್ಥಾನಗಳಲ್ಲಿ ಎಂದು ೧ನೇ ಅರ್ಥವು. ೨ನೇ ಅರ್ಥದಲ್ಲಿ ವಿಕ್ರಯಾದಿಗಳು ಮೂರು ಯಾವುವು? ಅವುಗಳು ದ್ರುಪದಗಳೆಂದು ಅನ್ನಿಸುವುದು ಹೇಗೆ? ಎಂದರೆ) ಶೀಘ್ರದಲ್ಲಿ ಪ್ರಾಪ್ತಗಳಾದವುಗಳು,ಧ್ರುಪದಗಳೆನಿಸುತ್ತದೆ.ವಿಕ್ರಯಣ,ಯೂಪದಲ್ಲಿ ಬಂಧ, ಹಿಂಸೋದ್ಯೋಗ ಎಂದು ವಿಕ್ರಯಾದಿಗಳು ಮೂರು. (೩) (ಆದಿತ್ಯ ಶಬ್ದವನ್ನು ಶ್ರೀ ವಿಷ್ಣುವಿನಲ್ಲಿ ಯೋಜನಾ ಮಾಡುತ್ತಾರೆ.) ಸರ್ವರಿಗಿಂತ ಆದಿಯಲ್ಲಿರತಕ್ಕ ಈ ಶ್ರೀಹರಿಯು ಆದಿತ್ಯನೆನಿಸುತ್ತಾನೆ. (ಅಗ್ನಿಮೀಳೇ ಇತ್ಯಾದಿಗಳಲ್ಲಿ ಅಧ್ಯಾತ್ಮಾದಿ ಭೇದದಿಂದ ೩ಅರ್ಥಗಳಿವೆ ಎಂದು ಹೇಗೆ ಪ್ರತಿಪಾದಿತವಾಗಿದೆಯೋ, ಅದೇ ರೀತಿಯಾಗಿ ಈ ಸೂಕ್ತದಲ್ಲಿ ಸರ್ವತ್ರ ವರುಣನೂ

ಹೇಳಲ್ಪಡುತ್ತಾನೋ ಎಂದರೆ)ವರುಣನೊಳಗೆ ನಿಯಾಮಕನಾಗಿರುವಬ್ರಹ್ಮಾದಿಗಳಿಗೆನಿಯಾಮಕನಾದ ವರುಣನೆನಿಸಿದ ಶ್ರೀಹರಿಯೇ ಈ ಸೂಕ್ತದಲ್ಲಿಹೇಳಲ್ಪಡುತ್ತಾನೆ.(ವರುಣನು ಹೇಳಲ್ಪಡುವುದಿಲ್ಲ.)(೪) ಹಾಗಾದರೆ ಈ ಸೂಕ್ತದಲ್ಲಿದ್ದ ಸಮಸ್ತಋಕ್ಕುಗಳಲ್ಲಿಯೂ ವರುಣನು ಸರ್ವಥಾ ಪ್ರತಿಪಾದಿಸಲ್ಪಡುವುದಿಲ್ಲವೋ,ಎಂದರೆ)ಶುನಶ್ಶೇಪಃಯಂ ಇದು ಮೊದಲಾದ ಕೆಲವು ವಾಕ್ಯಗಳಿಂದ ವರುಣನೂ ಕೂಡ ಋಷಿಯಿಂದ ಸ್ತುತಿಸಲ್ಪಡುತ್ತಾನೆ, ಪ್ರಸಿದ್ಧವು. (ಯಾವ ವಾಕ್ಯದಲ್ಲಿ ವರುಣನು ಸ್ತುತಿಸಲಿಕ್ಕೆ ಅರ್ಹನಾಗುತ್ತಾನೋ,ಅಲ್ಲಿ ವರುಣನನ್ನು ಕೂಡ ಇಟ್ಟುಕೊಳ್ಳಬೇಕು.)ನಹಿ ತೇ ಕ್ಷತ್ರಂ ಇತ್ಯಾದಿಗಳಲ್ಲಿ ವಿಷ್ಣುವೇಪ್ರತಿಪಾದ್ಯನು. ವರುಣನು ಪ್ರತಿಪಾದ್ಯನಾಗುವುದೇ ಇಲ್ಲ (೫) ಯಾವ ಸತ್ವಾದಿ ಗುಣಗಳಲ್ಲಿ ಈ ಜೀವ ಸಮುದಾಯವು ಓಡುತ್ತಿರುತ್ತದೋ, ಅಂತಹ ಸತ್ವಾದಿ ಮೂರು ಗುಣಗಳು ದ್ರುಪದಾನಿ ಎಂದು ಹೇಳಲ್ಪಡುತ್ತವೆ. (೬) (೩ನೇ ಪಾದದ ತಾತ್ಪರ್ಯ ಹೇಳುತ್ತಾರೆ.) ಆ ವರುಣನು ಈ ಶುನಶ್ಶೇಪನನ್ನು ಸಂಸಾರದಿಂದ ವಿಯುಕ್ತನನ್ನಾಗಿ ಮಾಡಲಿ. (ಸಂಸಾರದಿಂದ ಬಿಡುಗಡೆ ಮಾಡಲಿ) (೪ನೇ ಪಾದದ ಅರ್ಥ ಹೇಳುತ್ತಾರೆ.) ಆ ವರುಣನೆನಿಸಿದ ಶ್ರೀ ಹರಿಯು ಪ್ರಸನ್ನನಾಗಿ, ನಮ್ಮನ್ನು ಕರ್ಮಪಾಶಗಳ ದೆಶೆಯಿಂದ ಬಿಡುಗಡೆ ಮಾಡಲಿ. ॥ ೧೩ ॥

ಋ ॥ (೨೬೭) ಅವ॑ ತೇ॒ ಹೇಳೋ॑ ವರುಣ॒ ನಮೋ॑ಭಿ॒ರವ॑ ಯ॒ಜ್ಞೇಭಿ॑ರೀಮಹೇ ಹ॒ವಿರ್ಭಿಃ॑ । ಕ್ಷಯ॑ನ್ನ॒ಸ್ಮಭ್ಯ॑ಮಸುರ ಪ್ರ॒ಚೇ॒ತಾ॒ ರಾಜ॒ನ್ನೇನಾಂ॑ಸಿ ಶಿಶ್ರಥಃ ಕೃ॒ತಾನಿ॑ ॥ ೧೪ ॥

ಅ ॥ ವರುಣ=ವರುಣನೇ, (ನಾವು) ತೇ ನಮೋಭಿಃ=ನಿನ್ನ ವಿಷಯಕ ನಮಸ್ಕಾರಗಳಿಂದಲೂ, ಹವಿರ್ಭಿಃ ಯಜ್ಞೇಭಿಃ=ಹವಿಸ್ಸಿನಿಂದ ಕೂಡಿರುವ ನಿನ್ನ ವಿಷಯಕ ಯಜ್ಞಗಳಿಂದಲೂ, (ನಿನ್ನ ನಮಸ್ಕಾರ ನಿನ್ನ ಉದ್ದೇಶದಿಂದ ಮಾಡಿದ ಯಜ್ಞ, ಇವುಗಳಿಂದುಂಟಾದ ನಿನ್ನ ಅನುಗ್ರಹದಿಂದ) ತೇ=ನಿನ್ನ, ಹೇಳಃ= ತಿರಸ್ಕಾರವನ್ನು ನಿಂದೆಯನ್ನು, ಅವ=ಅಧಮವನ್ನಾಗಿ, ಅಂದರೆ ಅಧೋಗತಿಗೆ ಕಾರಣವನ್ನಾಗಿ, ಅವ ಈಮಹೇ= ತಿಳಿಯುತ್ತೇವೆ. ರಾಜನ್=ಪ್ರಕಾಶಾಶ್ರಯನಾದ, ಅಸುರ=ಪ್ರಾಣಗಳಲ್ಲಿ ಅಥವಾ ಪ್ರಾಣಗಳಿಂದ ಕ್ರೀಡಿಸುತ್ತಿರುವ, ಪ್ರಚೇತಃ=ಪ್ರಕೃಷ್ಟ ಜ್ಞಾನವುಳ್ಳ ಶ್ರೀಹರಿಯೇ, (ಹೀಗೆ ನಮ್ಮಿಂದ ತಿಳಿಯಲ್ಪಟ್ಟ ನೀನು) ಅಸ್ಮಭ್ಯಂ= ನಮಗಾಗಿ, ಕ್ಷಯನ್=(ಕ್ಷಿನಿವಾಸಗತ್ಯೋಃ) ಆಶ್ರಯನಾಗಿ, ಕೃತಾನಿ=ನಮ್ಮಿಂದ ಮಾಡಲ್ಪಟ್ಟ, ಏನಾಂಸಿ= ಪಾಪಗಳನ್ನು, ಶಿಶ್ರಥಃ=(ಶ್ರಥುವಿಯೋಗೇ, ಅಥವಾ ಶ್ರಥ ವಿಮೋಚನ ಪ್ರತಿಹರ್ಷಯೋಃ) ಶೀಘ್ರದಲ್ಲಿ ಬಿಡಿಸು. ॥ ೧೪ ॥

ಭಾ ॥ ನಿಂದಾಂ ಚ ತೇಽವಾಗ್ಗತೇರ್ಹೇತುಭೂತಾಮವಗಚ್ಛಾಮಃ ಸೇಯಮಿತ್ಯಪ್ಯಯೋಗ್ಯಾಂ । ನಮಸ್ಕಾರೈಸ್ತ್ವದ್ಗತೈಸ್ತ್ವನ್ಮಖೈಶ್ಚ ಹವಿರ್ಯುಕ್ತೈಸ್ತ್ವತ್ಪ್ರಸಾದಾತ್ಸ ಚ ತ್ವಂ ॥ ಕ್ಷಿತಿರಸ್ಮಭ್ಯಂ ಪ್ರಾಣರಂತಾಽಖಿಲಜ್ಞೋ ವಿಯೋಜಯಾಸ್ಮತ್ಕೃತಾನ್ಯಾಶ್ವಘಾನಿ ॥ ೧೪ ॥

ಅ ॥ (ಇಲ್ಲಿ ಈಮಹೇ ಎಂದು ಕ್ರಿಯಾಪದವು ಒಂದೆಯಾದುದರಿಂದ ೨ ಅವ ಶಬ್ದಗಳೂ ಉಪಸರ್ಗಗಳಲ್ಲ ಎಂಬ ಅಭಿಪ್ರಾಯದಿಂದ ಒಂದನೇ ಅವ ಶಬ್ದಕ್ಕೆ ಅವಮವೆಂದು ಅರ್ಥವು ಎಂಬ ವಿವಕ್ಷೆಯಿಂದ ವ್ಯಾಖ್ಯಾನ ಮಾಡುತ್ತಾರೆ.) (ಎಲೋ ವರುಣನೇ) ನಿನ್ನ ವಿಷಯಕ ನಮಸ್ಕಾರಗಳಿಂದಲೂ, ಹವಿಸ್ಸಿನಿಂದ ಕೂಡಿರುವ ನಿನ್ನ ಯಜ್ಞಗಳಿಂದಲೂ ಉಂಟಾದ ನಿನ್ನ ಅನುಗ್ರಹದಿಂದ ನಿನ್ನ ನಿಂದೆಯನ್ನು ಅಧೋಗತಿಗೆ ಕಾರಣಭೂತವಾದುದುದ

ನ್ನಾಗಿ ತಿಳಿಯುತ್ತೇವೆ. (ಹಾಗಾದರೆ ನಿಂದಾಂ ಭಗವತಃ ಶೃಣ್ವನ್ ತತ್ಪರಸ್ಯ ಜನಸ್ಯವಾ । ತತೋ ನಾ ಪೈತಿ ಯಸ್ಸೋಽಪಿ ಯಾತ್ಯಧಃ ಸುಕೃತಾಚ್ಚ್ಯುತಃ । ಎಂಬ ಭಾಗವತೋಕ್ತಿಯಿಂದ ಮುಮುಕ್ಷುವಿಗೆ ಭಗವನ್ನಿಂದೆಯು ತಿಳಿಯಲಯೋಗ್ಯವು, ಎಂದರೆ–) ಉಪಾದೇಯವಾಗಿ ಅಯೋಗ್ಯವಾದುದಾಗ್ಯೂ (ಅಂದರೆ ಭಗವನ್ನಿಂದೆಯನ್ನು ನಾವು ಮಾಡಬಾರದು, ಮತ್ತು ಕೇಳಬಾರದು. ಹೀಗಿದ್ದರೂ) ಆ ಭಗವನ್ನಿಂದೆಯು ಈ ಅಧೋಗತಿಗೆ ಕಾರಣಭೂತವಾಗಿದೆ ಎಂದು ತಿಳಿಯುತ್ತೇವೆ. ಹೀಗೆ ನಮ್ಮಿಂದ ತಿಳಿಯಲ್ಪಟ್ಟ ಇಂದ್ರಿಯಗಳಲ್ಲಿ ಅಥವಾ ಇಂದ್ರಿಯಗಳಿಂದ ರಮಿಸುವ, ಸರ್ವಜ್ಞನಾದ ನೀನು ನಮಗೆ ಆಶ್ರಯನಾಗಿ ನಾವು ಮಾಡಿದ ಪಾಪ ಗಳನ್ನು ಶೀಘ್ರದಲ್ಲಿ ಬಿಡಿಸು. ॥ ೧೪ ॥

ಋ ॥ (೨೬೮) ಉದುತ್ತಮಂ ವರುಣಪಾಶಮಸ್ಮದವಾಧಮಂ ವಿ ಮಧ್ಯಮಂ ಶ್ರಥಾಯ । ಅಥಾ ವಯಮಾದಿತ್ಯ ವ್ರತೇ ತವಾನಾಗಸೋ ಅದಿತಯೇ ಸ್ಯಾಮ ॥ ೧೫ ॥ ೧೫ ॥ ೨೪॥

ಅ ॥ ವರುಣ=ವರುಣನೇ, ಉತ್ತಮಂ ಪಾಶಂ=ಉತ್ಕೃಷ್ಟವಾದ ಪುಣ್ಯ ರೂಪವಾದ ಪಾಶವನ್ನೂ ಅಸ್ಮತ್ ಉತ್ ಶ್ರಥಯ=ಮಿತ್ರರಿಗೆ ಕೊಟ್ಟು ನಮ್ಮಿಂದ ಬಿಡಿಸು. ಅಧಮಂ ಪಾಶಂ=ಪಾಪ ರೂಪ ಪಾಶವನ್ನು, ಅವ ಶ್ರಥಯ=ದ್ವೇಷಿಗಳಿಗೆ ಕೊಟ್ಟು ನಮ್ಮಿಂದ ಬಿಡಿಸು. ಮಧ್ಯಮಂ ಪಾಶಂ=ಪಾಪದಿಂದ ಮಿಶ್ರವಾದ ಪುಣ್ಯವನ್ನೂ, (ತನ್ನ ಫಲವನ್ನು ಭೋಗಿಸುವ ಕಾಲದಲ್ಲಿ ಪುಣ್ಯಫಲದ ಭೋಗಕ್ಕೆ ಅವಕಾಶವನ್ನು ಕೊಡತಕ್ಕ ಪಾಪವು ಮಿಶ್ರವೆನ್ನಿಸುತ್ತದೆ) ಪುಣ್ಯದಿಂದ ಮಿಶ್ರವಾದಪಾಪವನ್ನೂ, ವಿಶ್ರಥಯ=ಉದಾಸೀನರಿಗೆ ಕೊಟ್ಟು ನಮ್ಮಿಂದ ಬಿಡಿಸು. ಅಥ=ಹೀಗೆ ವಿಯೋಜನದಿಂದ, ಆದಿತ್ಯ=ಎಲ್ಲರಿಗಿಂತ ಆದಿಯಲ್ಲಿರತಕ್ಕ ಶ್ರೀಹರಿಯೇ, ತವ ವ್ರತೇ=ನಿನ್ನ ಕರ್ಮದಲ್ಲಿ,(ನಿನ್ನಲ್ಲಿಯೇ ಆಸಕ್ತಿಯಿಂದ) ಅನಾಗಸಃ=(ನ ವಿದ್ಯತೇ ಆಗಃ ಅಪರಾಧಃ ಸರ್ವದೋಷಃ ಯೇಷಾಂ ತೇ) ದೋಷ ಲೇಶ ರಹಿತರಾಗಿ ಸಂಸಾರದಿಂದ ಮುಕ್ತರಾದ, ವಯಂ=ನಾವು, ತವ ಅದಿತಯೇ=ನಿನ್ನ ಪತ್ನಿಯಾದ ಲಕ್ಷ್ಮೀ ದೇವಿಗೆ, ಸ್ಯಾಮ=ಪುತ್ರರಾಗುವೆವು- ॥೧೫ ॥ ೧೫ ॥ ೨೪ ॥

ಭಾ ॥ (೧) ಪುಣ್ಯಂ ಪಾಪಂ ಮಿಶ್ರಮಿತ್ಯೇವ ಪಾಶಾನ್ಯಥಾಯೋಗ್ಯಂ ಶ್ರಥಯ್ಯಾನ್ಯೇಷು ದತ್ವಾ।ತ್ವನ್ನಿಷ್ಠಯಾ ತೇನ ವಯಂ ತ್ವದೀಯಲಕ್ಷ್ಮ್ಯಾಃ ಪುತ್ರಾಃ ಸ್ಯಾಮ ಮುಕ್ತಾಃ ಸ್ವತೇಶ್ಚ ॥ (೨) ಏಷಾ (ಏಷಗ್ವಿರ್) ವಿಷ್ಣೋಃ ಕೇವಲ್ಯಾಪ್ಯೇವಮುಷ್ಯಾ ಅಯೋ ಗ್ಯಾಯಾ ಅನ್ಯದೇವೇಷು ಸಮ್ಯಕ್ ॥ (೩) ವಾಕ್ಯೈರ್ವಿಶಿಷ್ಟೈರಪವಾದಹೀನೈ ರ್ಜ್ಞೇಯಾ ಗುಣಾ ಅನ್ಯದೇವೇಷು ಚೈವ ॥ (೪) ಪತಿಃ ಸೋಮೋ ವರುಣಸ್ಯಾಪ್ಯ ಥಾಗ್ನೇಃ ಪತಿಃ ಸೂರ್ಯಸ್ತಾವುಭೌ ತುಲ್ಯವೀರ್ಯೌ। ಸೂರ್ಯಾಚಂದ್ರಮಸೋಃ ಪತಿರಿಂದ್ರೋಽಸ್ಯ ರುದ್ರಃ ಪತಿರ್ಬ್ರಹ್ಮಾ ಪತಿರಸ್ಯಾಪಿ ವಿಷ್ಣುಃ। ಪತಿರ್ಮುಕ್ತೇ ರ್ವಾಸುದೇವೋಽಥ ದೃಷ್ಟೇರ್ಬ್ರಹ್ಮಾ ವಿದ್ಯಾಯಾಃ ಶರ್ವ ಇಂದ್ರಃ ಕ್ರಿಯಾಯಾಃ । ಕ್ರಿಯಾಂಶಾನಾಮಧಿಪಾ ಅನ್ಯದೇವಾಸ್ತಥಾ ಫಲಾನಾಮಪಿ ಮುಕ್ತಿಮಾರ್ಗೇ।ಯಥಾ ಯೋಗ್ಯಂ ಸ್ವೇಂದ್ರಿಯಪ್ರೇರಕಾಶ್ಚ ತತಃ ಪೂಜ್ಯಾ ದೇವತಾ ಮುಕ್ತಿಕಾಮೈಃ। ಇತಿ ಶ್ರುತೇಸ್ತಾರತಮ್ಯಂ ಗುಣಾನಾಂ ಜ್ಞಾತ್ವಾ ಯೋಜ್ಯಾಃ ಶ್ರುತಯಸ್ತತ್ರತತ್ರ॥೧೫॥೧೫॥

ಅ ॥ (ಉತ್ತಮ ಅಧಮ ಮಧ್ಯಮ ಪಾಶಗಳನ್ನು ವ್ಯಾಖ್ಯಾನ ಮಾಡುತ್ತಾರೆ.) ಪುಣ್ಯ ರೂಪಪಾಶ,ಪಾಪ ರೂಪಪಾಶ ಮಿಶ್ರರೂಪಪಾಶಗಳನ್ನು (ಋಕ್ಕಿನ ಪ್ರಥಮಾರ್ಧದಲ್ಲಿ ಹೇಳಿದ ಉತ,ಅವ,ವಿ, ಎಂಬ ೩ ಉಪಸರ್ಗಗಳ ಅರ್ಥಗಳನ್ನು ಹೇಳುತ್ತಾರೆ.) ಯಥಾಯೋಗ್ಯವಾಗಿ ಇತರರಿಗೆ ಕೊಟ್ಟು,(ಅಂದರೆ **ತಸ್ಯ ಪುತ್ರಾ ದಾಯಮುಪ ಯಂತಿ ಸುಹೃದಃ ಸಾಧುಕೃತ್ಯಾಂ ದ್ವಿಷಂತಃ ಪಾಪಕೃತ್ಯಾಂ** ಎಂಬ ಶ್ರುತ್ಯನುಸಾರವಾಗಿ **ಅನ್ಯೇಷು ದತ್ವಾ** ಎಂಬ ಭಾಷ್ಯವನ್ನು ಮೂರು ಪ್ರಕಾರ ವ್ಯಾಖ್ಯಾನ ಮಾಡುತ್ತಾರೆ.) (ಉತ್ತಮವಾದ ಪುಣ್ಯ ರೂಪಪಾಶವನ್ನು ಸುಹೃತ್‌ಗಳಿಗೂ,ಅಧಮವಾದ ಪಾಪ ರೂಪಪಾಶವನ್ನು ದ್ವೇಷಿಗಳಿಗೂ,ಮಧ್ಯಮವಾದ ಮಿಶ್ರ ರೂಪಪಾಶವನ್ನು ಉದಾಸೀನರಿಗೂ ಕೊಟ್ಟು) ನಮ್ಮಿಂದ ಬಿಡಿಸು. ಏವ ಶಬ್ದದಿಂದ ಸಾಮಾನ್ಯತಃ ಪ್ರಸಿದ್ಧ ಪಾಶವಿಯೋಜನರೂಪವಾದ ಅರ್ಥವು ಕೂಡುವುದಾದರೂ ಪುಣ್ಯಾದಿವಿಯೋಜನರೂಪವಾದ ಅರ್ಥವೇ ಪರಮಮುಖ್ಯಾರ್ಥವೆಂದುಕ್ತವಾಯ್ತು. ಆ ವಿಯೋಜನದಿಂದ, ನಿನ್ನಲ್ಲಿಯೇ ಆಸಕ್ತಿಯಿಂದ, ಸಂಸಾರದಿಂದ ಮುಕ್ತರಾದ ನಾವು ನಿನ್ನವಳಾದ ಲಕ್ಷ್ಮೀದೇವಿಗೆ ಪುತ್ರರಾಗುವೆವು. (೨) **ವಿಷರ್ಗ್ವಿಷ್ಣೋಃ** ಎಂಬ ಈ ಭಾಷ್ಯದಿಂದ ಈ ಋಕ್ಕು ವಿಷ್ಣು ಪ್ರತಿಪಾದಕವೆಂದು ಹೇಳಲ್ಪಡುತ್ತದೆ. **ಪರೇಶೋ ವಾರೀಶಾಂತಃ** ಎಂಬ ೧೩ ನೇ ಭಾಷ್ಯದಲ್ಲಿ ಈ ಸೂಕ್ತವೇ ವಿಷ್ಣು ಪ್ರತಿಪಾದಕವೆಂದು ಹೇಳಿದೆ. ಆದ ಕಾರಣ ಇದು ಪುನರುಕ್ತವಾಯಿತೆಂದರೆ **ಪರೇಶಃ** ಇತ್ಯಾದಿಗಳಿಂದ ಹೇಳಿದುದನ್ನೇ ವಿವರಿಸುತ್ತಾರೆ.) ಈ ಋಕ್ಕು ಕೇವಲ ವಿಷ್ಣು ಪ್ರತಿಪಾದಕವೇ. ಬೇರೆ ಪ್ರತಿಪಾದ್ಯವು ಈ ಋಕ್ಕಿನಲ್ಲಿ ಇಲ್ಲ. ಹೀಗೆಯೇ ಇತರ ಋಕ್ಕುಗಳೂ ಇತರ ದೇವತೆಗಳಲ್ಲಿ ಅಯೋಗ್ಯಗಳು ಯಾವುವು ಇವೆಯೋ, ಅವುಗಳೆಲ್ಲವೂ ಚೆನ್ನಾಗಿ ವಿಷ್ಣುಪರಗಳೇ ಆಗುವವು. (ಪಾಶಾದಿ ಶಬ್ದಗಳಿಗೆ ಪುಣ್ಯಪಾಪಾದಿ ರೂಪ ಅರ್ಥವಿವಕ್ಷಾಮಾಡಿದರೇನೇ ಕೇವಲ ವಿಷ್ಣುಪರತ್ವವನ್ನು ತಿಳಿಯಬೇಕು.) (ಪ್ರಸಿದ್ಧಪಾಶಮೋಚನ ಪ್ರಾರ್ಥನಾದಿರೂಪವಾದ ಅರ್ಥಾಂತರವನ್ನು ವಿವಕ್ಷಾಮಾಡಿದರೆ ವರುಣಾದಿರೂಪವಾದ ಅರ್ಥಾಂತರವೂ ಕೂಡುವುದು.) (೩) (ಇತರ ದೇವತೆಗಳಲ್ಲಿ ಈ ಋಕ್ಕುಗಳು ಅಯೋಗ್ಯಗಳೆಂದೂ,ಶ್ರೀ ವಿಷ್ಣುವಿನಲ್ಲಿ ಯೋಗ್ಯಗಳೆಂದೂ ಹೇಗೆ ತಿಳಿದುಕೊಳ್ಳಬೇಕು. ಮತ್ತೂ ಆವಾವ ಋಕ್ಕುಗಳಲ್ಲಿ ಹೇಳಿದ ಗುಣಗಳು ಯೋಗ್ಯಗಳಾದರೆ (ಉಪಪನ್ನಗಳಾದರೆ) ಋಕ್ಕೂ ಯೋಗ್ಯವಾಗುವುದು. ಅನುಪಪನ್ನಗಳಾದರೆ ಋಕ್ಕು ಆಯೋಗ್ಯವಾಗುವುದು. ಅದನ್ನು ಹೇಗೆ ತಿಳಿಯಬೇಕು, ಎಂದರೆ,) ಇತರ ದೇವತೆಗಳಲ್ಲಿ ಅಯೋಗ್ಯಗಳಾದ ಗುಣಗಳನ್ನು **ನ ಹಿ ತೇ ಕ್ಷತ್ರಂ** ಇತ್ಯಾದಿ ಹೇಳಲ್ಪಟ್ಟವುಗಳನ್ನು ಶ್ರೀ ವಿಷ್ಣುವಿನಲ್ಲಿಯೇ ಯೋಗ್ಯಗಳಾದ ಗುಣಗಳನ್ನು ವಿಶಿಷ್ಟಗಳಾದ ಉತ್ತಮಗಳಾದ ಅಪವಾದವಿಲ್ಲದಿರುವ ವಾಕ್ಯಗಳಿಂದ ತಿಳಿಯಬೇಕು. (ಎಂದು ಹೇಳಿದುದರಿಂದ ಆ ಋಕ್ಕುಗಳು ಇತರ ದೇವತೆಗಳಲ್ಲಿ ಅಯೋಗ್ಯಗಳೆಂದೂ, ಶ್ರೀ ವಿಷ್ಣುವಿನಲ್ಲಿ ಯೋಗ್ಯಗಳೆಂದೂ ಸಿದ್ಧವಾಗುತ್ತವೆ) (ಅಥವಾ ಶ್ರೀ ವಿಷ್ಣುವಿನಲ್ಲಿ ಯೋಗ್ಯಗಳಾದ ಗುಣಗಳನ್ನೂ ಇತರ ದೇವತೆಗಳಲ್ಲಿ ಯೋಗ್ಯಗಳಾದ ಗುಣಗಳನ್ನು ವಿಶಿಷ್ಟಗಳಾಗಿರುವುದರಿಂದಲೇ ಅಪವಾದವಿಲ್ಲದಿರುವ ವಾಕ್ಯಗಳಿಂದ ತಿಳಿಯಬೇಕು. (೪) (ಆ ವಾಕ್ಯಗಳನ್ನೇ ಉದಾಹರಿಸುತ್ತಾರೆ.) ಚಂದ್ರನು ವರುಣನಿಗೆ ಅಧಿಪತಿಯು. ಸೂರ್ಯನು ಅಗ್ನಿಗೆ ಅಧಿಪತಿಯು. ಆ ಸೂರ್ಯ ಚಂದ್ರರು ಸಮಾನವಾದ ವೀರ್ಯವುಳ್ಳವರು.ಸೂರ್ಯಚಂದ್ರರಿಗೆ ಇಂದ್ರನು ಅಧಿಪತಿಯು.ಇಂದ್ರನಿಗೆ ರುದ್ರನು ಅಧಿಪತಿಯು. ರುದ್ರನಿಗೆ ಚತುರ್ಮುಖ ಬ್ರಹ್ಮನು ಅಧಿಪತಿಯು. ಬ್ರಹ್ಮನಿಗೆ ಶ್ರೀ ವಿಷ್ಣುವು, ಅಧಿಪತಿಯು.ವಾಸುದೇವನೇ ಮುಕ್ತಿಗೆ ಅಧಿಪತಿಯು, ಭಗವದ್ದರ್ಶನಕ್ಕೆ ಚತುರ್ಮುಖನೂ, ವಿದ್ಯೆಗೆ ರುದ್ರನೂ,ಕ್ರಿಯೆಗಳಿಗೆ ಇಂದ್ರನೂ ಅಧಿಪತಿಯು. ಕ್ರಿಯಾಂಶಗಳಿಗೆ ಇತರ ದೇವತೆಗಳೂ, ಅಧಿಪತಿಗಳು. ಹಾಗೆಯೇ ಫಲಗಳಿಗೂ ಅಧಿಪತಿಗಳನ್ನು ತಿಳಿಯಬೇಕು. ಮುಕ್ತಿ ಸಾಧನವನ್ನು ಸಂಪಾದಿಸುವ ವಿಷಯದಲ್ಲಿ ಯಥಾಯೋಗ್ಯವಾಗಿ ತಂತಮ್ಮಿಂದ ಅಭಿಮನ್ಯಮಾನಗಳಾದ ಇಂದ್ರಿಯಗಳಿಗೆ ಪ್ರೇರಕರು. ಆದ ಕಾರಣ ಮುಕ್ತಿಯನ್ನು ಪಡಿಯಲಿಚ್ಛಿಸುವವರು ಎಲ್ಲಾ ದೇವತೆಗಳನ್ನೂ ಯಥಾಯೋಗ್ಯವಾಗಿ ಪೂಜಿಸಬೇಕು, ಎಂಬ ಶ್ರುತಿಯಿಂದ ದೇವತಾ ಸಂಬಂಧಿಗಳಾದ ಗುಣಗಳಿಗೆ (ವಿಷ್ಣುಗುಣಗಳಿಗೆ ತಾರತಮ್ಯವಿಲ್ಲವೆಂದೂ ತಿಳಿದು.)ತಾರತಮ್ಯವನ್ನು ತಿಳಿದು ಆವಾವ ದೇವತೆಗಳಲ್ಲಿ ಶ್ರುತಿಗಳನ್ನು ಯಥಾಯೋಗ್ಯವಾಗಿ ಯೋಜಿಸಬೇಕು. ॥ ೧೫ ॥

ವಿ ॥ (1) **ಪತಿಃ ಸೋಮೋ ವರುಣಸ್ಯ** ಇತ್ಯಾದಿಗಳಿಂದ ಎಲ್ಲಿಯೂ ವರುಣನಿಗೆ ಅಯೋಗ್ಯಗಳಾದ ಗುಣಗಳ ಕಥನವು ಹೇಗೆ ಹೇಳಲ್ಪಡುತ್ತದೆ ಎಂದರೆ **ಸೋಮೋ ವರುಣಸ್ಯ ಪತಿಃ** ಎಂಬ ಉಕ್ತಿಯಿಂದ **ವಿಚಾಕಶತ್ ಚಂದ್ರಮಾ ನಕ್ಷತ್ರಮೇತಿ** ಎಂಬುವುದು ವಿಚಾಕಶತ್ ಎಂಬುವಲ್ಲಿ ವರುಣನಿಗೆ ಇಂದ್ರ ಪ್ರೇರಕತ್ವವು ಹೇಳಲ್ಪಡುವುದರಿಂದ ಅದು ವರುಣನಲ್ಲಿ ಅಯೋಗ್ಯವೆಂದು ಲಬ್ಧವಾಗುತ್ತದೆ. (2) ತುಲ್ಯವೀರ್ಯೌ ಎನ್ನುವುದರಿಂದ **ಉರುಂ ಹಿ ರಾಜಾ** ಎನ್ನುವಲ್ಲಿ ಸೂರ್ಯ ಸಂಚಾರಕ್ಕಾಗಿ ಮಾರ್ಗ ಕರ್ತೃತ್ವವು ವರುಣನಲ್ಲ ಅಯೋಗ್ಯವೆಂದು ತಿಳಿಯುತ್ತದೆ. (3) **ಅಸ್ಯೇಂದ್ರಸ್ಯ ರುದ್ರಃ ಪತಿಃ** ಎನ್ನುವುದರಿಂದ **ಉತಾಪವಕ್ತಾ** ಎನ್ನುವಲ್ಲಿ ರುದ್ರಶಿಕ್ಷಕತ್ವವು ವರುಣನಲ್ಲಿ ಅಯೋಗ್ಯವೆಂದು ತೋರುತ್ತದೆ. (4) ಅಸ್ಯಾಪಿ **ವಿಷ್ಣುಃ** ಎಂದು ವಿಷ್ಣುವಿಗೆ ಸರ್ವೋತ್ತಮತ್ವವನ್ನು ಹೇಳಿದುದರಿಂದ **ನ ಹೀತೇಕ್ಷತ್ರಂ** ಎನ್ನುವಲ್ಲಿ ಅನ್ಯರಿಂದ ಅಪ್ರಾಪ್ಯವಾದ ಬಲಾದಿ ಯುಕ್ತತ್ವವು ವರಣನಲ್ಲಿ ಆಯೋಗ್ಯವೆಂದು ನಿಶ್ಚಿತವಾಗುತ್ತದೆ. (5) **ಪತಿರ್ಮುಕ್ತೇರ್ವಾಸುದೇವಃ** ಎನ್ನುವುದರಿಂದ **ಊರ್ಧ್ವಂ ಸ್ತೂಪಂ** ಎನ್ನುವಲ್ಲಿ ಉತ್ತಮ ಸ್ಥಾನದಾತೃತ್ವವು ಅನ್ಯತ್ರ ಅಯೋಗ್ಯವೆಂದು ನಿಶ್ಚಿತವಾಗುತ್ತ ದೆ. (6) ದೃಷ್ಟೇರ್ಬ್ರಹ್ಮ ಎನ್ನುವುದರಿಂದ ಅಸ್ಮೇ ಅಂತರ್ನಿಹಿತಾಃ ಎನ್ನುವಲ್ಲಿ ಸ್ವರೂಪಜ್ಞಾನ ವ್ಯಂಜಕತ್ವವು. **ವರುಣನಲ್ಲಿ** ಅಸಂಭಾವಿತವು. (7)ಅಗ್ನೇಃ ಪತಿಃ ಸೂರ್ಯಃ ಎನ್ನುವುದರಿಂದ ಆನೋಬರ್ಹೀರಿಶಾದಸಃ ಎಂಬ **ಆಗ್ನೇಯ ಋಕ್ಕಿನಲ್ಲಿ ಮಿತ್ರ ಅರ್ಯಮಾ** ಎನ್ನುವ **ಸೂರ್ಯಸ್ಥಾಪಕತ್ವವು ಅಗ್ನೀಗ ಆಯೋಗ್ಯವಾದುದು** ಹೇಳಲ್ಪಡುತ್ತದೆ. (8) ವಿದ್ಯಾಯಾಃ ಶರ್ವೋ ಅಧಿಪಃ ಎನ್ನುವುದರಿಂದ **ಅತೋವಿಶ್ವಾನ್ಯದ್ಭುತಃ** ಇತ್ಯಾದಿಗಳಲ್ಲಿ ವರುಣನಿಗೆ ಅಯೋಗ್ಯವಾದ ಸರ್ವಾಶ್ಚರ್ಯ ದರ್ಶನವು ಹೇಳಲ್ಪಡುತ್ತದೆ. (9) ಇಂದ್ರಃ **ಕ್ರಿಯಾಯಾಃ** ಎನ್ನುವುದರಿಂದ **ವೇದಮಾಸೋಧೃತ ಪ್ರತಃ** ಇತ್ಯಾದಿಗಳಲ್ಲಿ ವರುಣನಿಗೆ ಅಯೋಗ್ಯವಾದ **ಸರ್ವಕರ್ಮಧಾರಣವು** ಹೇಳಲ್ಪಡುತ್ತದೆ. ಹೀಗೆಯೇ ಇತರ ದೇವತೆಗಳಲ್ಲಿಯೂ ತಿಳಿಯಬೇಕು. ॥ ೧೫ ॥ ೧೫ ॥ ೨೪ ॥

ಅವ ॥ ೨೧ ಋಕ್ಕು ೪ ವರ್ಗ. ಗಾಯತ್ರೀ ಛಂದಸ್ಸು. ೨೫ನೇ ಸೂಕ್ತ. ವರುಣನು ದೇವತೆಯು.

ಋ ॥ (೨೬೯) ಯಚ್ಚಿದ್ಧಿ ತೇ ವಿಶೋ ಯಥಾ ಪ್ರದೇವ ವರುಣ ವ್ರತಂ ।

ಮಿನೀಮಸಿ ದ್ಯವಿದ್ಯವಿ ॥ ೧ ॥

ಅ ॥ ವರುಣ ದೇವ=ವರುಣನೇ, ವಿಶಃ=ಪ್ರಜೆಗಳು, ಸಜ್ಜನರು ಯಥಾ ಹಿ=ಹೇಗೋ (ಹಾಗೆಯೇ ನಾವು,) ಯಚ್ಚಿತ್=ಯಾವುದು, ತೇ ವ್ರತಂ ನಿನ್ನ ಸೇವಾತ್ಮಕವಾದ ಕರ್ಮವಿದೆಯೋ, (ಅವೆಲ್ಲವನ್ನು) ದ್ಯವಿದ್ಯವಿ=(ದ್ಯುರಹ್ನಿ ವಹ್ನೌ ತ್ರಿದಿವೇ ಎಂಬ ವಿಶ್ವಕೋಶದಿಂದಲೂ, ಅಹರ್ನಾಮಗಳಲ್ಲಿ ಪಠಿತವಾದುದರಿಂದಲೂ) ಪ್ರತಿ ದಿವಸದಲ್ಲಿಯೂ ಪ್ರಮಿನೀಮಸಿ=ಮಾಡುತ್ತೇವೆ ॥ ೧ ॥

ಭಾ ॥ ದಿವಸೇ ದಿವಸೇ ದೇವ ಕುರ್ಮೋ ಯದಪಿ ತೇ ವ್ರತಂ। ಯಥೈವ ಸುಜನಾಃ ॥ ೧ ॥

ಅ ॥ ಎಲೋ ವರುಣ ದೇವನೇ ಸಜ್ಜನರು ಹೇಗೋ (ಹಾಗೆ ನಾವು) ಯಾವುದು ನಿನ್ನದ್ದು ಸೇವಾತ್ಮಕವಾದುದು ಕರ್ಮವು ಇದೆಯೋ, ಆದನ್ನು ಪ್ರತಿ ದಿವಸದಲ್ಲಿಯೂ ಮಾಡುತ್ತೇವೆ. (ಯದ್ಯಪಿ ಧಾತು ಪಾಠದಲ್ಲಿ ಮೀಞ ಹಿಂಸಾಯಾಂ ಎಂದು ಇದೆ. ಇದು ಅದಲ್ಲ. ವೈದಿಕವು, ಹ್ರಸ್ವವು. ಮಿ ಧಾತುವಿಗೆ ಗ್ನಾ ಪ್ರತ್ಯಯ. ಇತ್ವಂ. ಮಸಿ ಪ್ರತ್ಯಯವು. ಮಿನೀಮಸಿ. ॥ ೧ ॥

ಋ ॥ (೨೭೦) ಮಾ ನೋ ವಧಾಯ ಹತ್ನವೇ ಜಿಹೀಳಾನಸ್ಯ ರೀರಧಃ ।

ಮಾ ಹೃಣಾನಸ್ಯ ಮನ್ಯವೇ ॥ ೨ ॥

ಅ || (ಎಲೋ ವರುಣನೇ) ನಃ = ನಮ್ಮನ್ನು, ವಧಾಯ = ಸಂಹರಿಸುವುದಕ್ಕಾಗಿ, ಹತ್ನವೇ =(ಹಂತೀತಿಹತ್ನುಃ) ಸಂಹರಿಸುವ, ಜಿಹೀಳಾನಸ್ಯ = ಹಿಳಭಾವಕರಣೇ, ಅಥವಾ (ಓಹಾಕ್ ತ್ಯಾಗೇ) ಧರ್ಮವನ್ನು ಬಿಡುವ ಪುರುಷನಿಗೆ, ಮಾರೀರಧಃ =(ರಾಧ ಸಾಧ ಸಂಸಿದ್ಧೌ) ಸಾಧಿಸಬೇಡ. (ಅವನ ಅಧೀನರನ್ನಾಗಿ ನಮ್ಮನ್ನು ಮಾಡಬೇಡ. ಅಂದರೆ ಘಾತಕನೂ ಧರ್ಮಹೀನನೂ ಆದ ಪುರುಷನನ್ನು ವಶೀಕರಿಸಿದರೆ ನಮಗೆ ಹನನವು ಆಗುವುದು.) ಮತ್ತು ಹೃಣಾನಸ್ಯ =(ಹೃಞ್ ಹರಣೇ) ಅಪಹರಿಸತಕ್ಕ ಪುರುಷನ, ಮನ್ಯವೇ=ಕೋಪಕ್ಕಾಗಿ, ಮಾರೀರಧಃ=ಸಾಧಿಸಬೇಡ. (ಅಂದರೆ ಅಪಹರಿಸತಕ್ಕ ಪುರುಷನ ಕೋಪವು ನಮ್ಮಲ್ಲಿ ಆಗಬಾರದು) || ೨ ||

ಭಾ || ಮಾ ನೋ ಹಂತುಂ ಸಾಧಯ ನಿಷ್ಟುತೇ | ಜಹೀಳಾನಸ್ಯಜನ್ ಧರ್ಮಂ ಹರತೋ ಮಾ ಚ ಮನ್ಯವೇ || ೨ ||

ಅ || (ಎಲೋ ವರುಣನೇ)ನಮ್ಮನ್ನು ಸಂಹರಿಸುವುದಕ್ಕಾಗಿ(ಸಂಹರಿಸುವ, ಮತ್ತು ಧರ್ಮವನ್ನು ಬಿಡುವ ಪುರುಷನಿಗೆ) ಸಾಧಿಸಬೇಡ. (ಅವನ ಅಧೀನರನ್ನಾಗಿ ಮಾಡಬೇಡ.) ಧರ್ಮವನ್ನು ಬಿಡುವವನು ಜಹೀಳಾನಃ ಎನಿಸುತ್ತಾನೆ.(ಸಂಹಾರಕನೂ ಧರ್ಮಭ್ರಷ್ಟನೂ ಆದ ಪುರುಷನನ್ನು ವಶೀಕರಿಸಲಿಕ್ಕೆ ಪ್ರಯತ್ನಿಸಿದರೆ ನಮ್ಮನ್ನೇ ಕೊಂದು ಬಿಡುವನು.) ಮತ್ತು ಅಪಹರಿಸುವ ಪುರುಷನ ಕೋಪಕ್ಕಾಗಿ ಸಾಧಿಸಬೇಡ (ಅಂದರೆ ಆತನ ಕೋಪವು ನಮ್ಮಲ್ಲಿ ಆಗಬಾರದು.) || ೨ ||

ಋ|| (೨೭೧) ವಿ ಮೃಳೀಕಾಯ ತೇ ಮನೋ ರಥೀರಶ್ವಂ ನ ಸಂದಿತಂ|
ಗೀರ್ಭಿರ್ವರುಣ ಸೀಮಹಿ || ೩ ||

ಅ || ವರುಣ=ಏಲೋ ವರುಣನೇ (ನಾವು) ಮನಃ=ನಮ್ಮ ಮನಸ್ಸನ್ನು ಗೀರ್ಭಿಃ=ವೇದ ವಚನಗಳಿಂದ, (ಅವುಗಳ ಶ್ರವಣಾದಿಗಳಿಂದ) ಮೃಳೀಕಾಯ (ಮೃಳಸುಖನೇ) ತೇ=ರಕ್ಷಕನಾದ ನಿನ್ನಲ್ಲಿ ವಿಸೀಮಹಿ=(ಷಿಞ್ ಬಂಧನೇ) ಕಟ್ಟುತ್ತೇವೆ. (ನಿನ್ನ ವಿಷಯಕವನ್ನಾಗಿ ಮಾಡುತ್ತೇವೆ.) (ಅದರಲ್ಲಿ ದೃಷ್ಟಾಂತವು.) ರಥೀಃ=(ರಥಃನಿಯೋಜ್ಯತ್ವೇನಾಸ್ಯಾಸ್ತೀತಿ ಎಂಬ ಅರ್ಥದಲ್ಲಿ ಇನಿಪ್ರತ್ಯಯವಾಗುತ್ತಿರಲು ರಥಿನ **ಈಕಾರೋವಾಚ್ಯಃ** ಎನ್ನುವುದರಿಂದ ನಕಾರಕ್ಕೆ ಈ ಕಾರಾದೇಶವು.) ಸಾರಥಿಯು, ಸಂದಿತಂ = ಸಂಪೂರ್ವಾತ್‌ದೋಽವ ಖಂಡನೇ, ಚೆನ್ನಾಗಿ ಖಂಡಿತವಾದ, (ರಥದಿಂದ ವಿಯುಕ್ತವಾದ) ಅಶ್ವಂನ=ಅಶ್ವವನ್ನು ಹೇಗೆ ರಜ್ಜುಗಳಿಂದ ರಥದಲ್ಲಿ ಕಟ್ಟುತ್ತಾನೋ ಹಾಗೆ ನಿನ್ನಲ್ಲಿ ಮನಸ್ಸನ್ನು ಸಂಪೂರ್ಣ ಇಡುತ್ತೇವೆ. ಅಥವಾ ಎಲೋ ವರುಣನೇ, ತೇ ಮನಃ=ನಿನ್ನದ್ದಾದ ಮನಸ್ಸನ್ನು (ಕೃಪಾರೂಪವಾದ ನಿನ್ನ ಮನೋವೃತ್ತಿಯನ್ನು) ಗೀರ್ಭಿಃ=ಸ್ತುತಿರೂಪಗಳಾದ ವಚನಗಳಿಂದ, ಮೃಳೀಕಾಯ=ರಕ್ಷಣೆಗೋಸ್ಕರ,(ಮೃಳ ಸುಖನೇ ಎಂದು ಸುಖಾರ್ಥವಾದುದಾಗ್ಯೂ **ಅನೇಕಾರ್ಥಾಹಿ** ಧಾತವಃ ಎನ್ನುವುದರಿಂದ ಇಲ್ಲಿ ರಕ್ಷಣಾರ್ಥಕವೂ ಆಗಿದೆ.) ವಿಸೀಮಹಿಃ (ನಮ್ಮಲ್ಲಿ) ದೃಢವಾಗಿ ಸ್ಥಾಪಿಸಿಕೊಳ್ಳುತ್ತೇವೆ (ದೃಷ್ಟಾಂತವು ಮುಂಚಿನಂತೆ) || ೩ ||

ಭಾ || ಮನಸ್ತ್ವಯಿ ನಿಬಧ್ನೀಮೋ ಗೀರ್ಭಿರಶ್ವಂ ವಿಯೋಜಿತಂ| ಬಧ್ನಾತಿ ಸಾರಥಿರ್ಯದ್ವತ್ ಮೃಳೀಕೋ ರಕ್ಷಕೋಽಧಿಕಂ|| (೨) ತ್ವನ್ಮನೋಽಸ್ಮಾಸು ವಾ ಗೀರ್ಭೀರಕ್ಷಣಾಯ ವಿಸೀಮಹಿ || ೩ ||

ಅ || ಸಾರಥಿಯು ರಥದಿಂದ ವಿಯುಕ್ತವಾದ ಅಶ್ವವನ್ನು ರಥದಲ್ಲಿ ಹೇಗೆ ಕಟ್ಟುತ್ತಾನೋ, ಹಾಗೆ ನಮ್ಮ ಮನಸ್ಸನ್ನು ವೇದವಚನ ಶ್ರವಣಾದಿಗಳಿಂದ ರಕ್ಷಕನಾದ ನಿನ್ನ ವಿಷಯಕವನ್ನಾಗಿ ಮಾಡುತ್ತೇವೆ (ಈ ವ್ಯಾಖ್ಯಾನ

ದಲ್ಲಿ ಮೃಳೀಕ ಎನ್ನುವುದು ವರುಣನಿಗೆ ವಿಶೇಷಣವು.) (ಮೃಳ ಸುಖನೇ **ಅನೇಕಾರ್ಥಾಹಿಧಾತವಃ** ಇಲ್ಲಿ ರಕ್ಷಣವೆಂದರ್ಥವು. ವಿ ಎನ್ನುವುದಕ್ಕೆ ಅಧಿಕವೆಂದರ್ಥವು ತಥಾಚ) ಮೃಳೀಕಃ=ಅಧಿಕವಾಗಿ ರಕ್ಷಿಸುವವನು. (೨) (ದೃಷ್ಟಾಂತಾಂಶವನ್ನು ಬಿಟ್ಟು ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ) ಎಲೋ ವರುಣನೇ ನಿನ್ನ ಕೃಪಾರೂಪವಾದ ಮನೋವೃತ್ತಿಯನ್ನು ಸ್ತುತಿರೂಪಗಳಾದ ವಚನಗಳಿಂದ ರಕ್ಷಣೆಗೋಸ್ಕರ ನಮ್ಮಲ್ಲಿಟ್ಟು ಕೊಳ್ಳುತ್ತೇವೆ. || ೩ ||

ಋ || (೨೭೨) ಪರಾ ಹಿ ಮೇ ವಿಮನ್ಯವಃ ಪತಂತಿ ವಸ್ಯಇಷ್ಟಯೇ।
ವಯೋ ನ ವಸತೀರುಪ || ೪ ||

ಅ|| (ಎಲೋ ವರುಣನೇ) ಮೇ=ನನ್ನ, ವಿಮನ್ಯವಃ=(ಮನು ಅವಬೋಧನೇ) ಅನೇಕ ವಿಷಯಕಗಳಾ ದುದರಿಂದ ಅನೇಕ ವಿಧಗಳಾದ ಬುದ್ಧಿ ವೃತ್ತಿಗಳು, ವಸ್ಯ ಇಷ್ಟಯೇ=(ವಸ ಆಚ್ಛಾದನೇ ವಸ್ಯತೇ ಆಚ್ಛಾದ್ಯ ತೇ ಇತಿವಸ್ಯಃ ಗೋಪ್ಯವಾಗಿರುವುದರಿಂದ ಶುಭವು. ಇಷ ಗತೌ) ಶುಭದ ಪ್ರಾಪ್ತಿಗಾಗಿ, ಪರಾ= ನಿನಗೆ ವಿಮುಖಗಳಾಗಿ, ಪತಂತಿ=ಹೋಗುತ್ತವೆ. ಹಿ= ಹಾ. ಕಷ್ಟವು. ವಯಃ=ಪಕ್ಷಿಗಳು, ವಸತೀರುಪನ=ನೀಡ ಗಳನ್ನೂ ಹೇಗೋ ಹಾಗೆ (ಅಂದರೆ ಹೇಗೆ ದೂರದಲ್ಲಿ ಹಾರುತ್ತಿರುವ ಹಕ್ಕಿಗಳು ರೆಕ್ಕೆಗಳನ್ನು ಸಂಕೋಚ ಮಾಡಿ ಕೊಂಡು ತಂತಮ್ಮ ಗೂಡುಗಳನ್ನು ಕುರಿತು ಓಡಿ ಹೋಗುತ್ತವೋ, ಹಾಗೆಯೇ, ವೈಷಯಿಕ ಸುಖ ಲಾಭಕ್ಕಾಗಿ ನಮ್ಮ ಬುದ್ಧಿಗಳುವಿಷಯಗಳಕಡೆಗೇನೇ ಓಡಿ ಹೋಗುತ್ತವೆ.ಆದಕಾರಣ.ನನ್ನನ್ನುಧಿಕ್ಕಾರಮಾಡಬೇಕು.)ಅಥವಾ ಸರ್ವಥಾ ಆತ್ಯಂತಿಕ ಸುಖಸಾಧನಗಳಾಗದಿರುವ ವಿಷಯಗಳಲ್ಲಿ ಆತ್ಯಂತಿಕ ಸುಖಲಾಭಕ್ಕಾಗಿ ಬುದ್ಧಿ ವೃತ್ತಿಗಳು ಬೀಳುತ್ತವೆ. ಆದ ಕಾರಣ ಅತ್ಯಂತ ಸುಖಕ್ಕೆ ಸಾಧನವಾಗಿದೆ ಎಂಬ ಜ್ಞಾನದಿಂದ ಭ್ರಮೆಗೊಂಡಿದ್ದೇನೆ. ಅಥವಾ ವಸತೀರುಪ=ಗೂಡುಗಳನ್ನು ವಯೋನ=ಹಕ್ಕಿಗಳು ಹೇಗೆ ಹೊಂದುತ್ತವೋ, (ವ್ಯತಿರೇಕದೃಷ್ಟಾಂತವು) ಹಾಗೆ, ಮೇ=ನನ್ನ, ವಿಮನ್ಯವಃ=ಅನೇಕ ವಿಧಗಳಾದ ಪ್ರಜ್ಞೆಗಳು, ವಸ್ಯ ಇಷ್ಟಯೇ=ಮೋಕ್ಷಾದಿ ರೂಪವಾದ ಶುಭದ ಪ್ರಾಪ್ತಿಗಾಗಿ, ಪರಾ=ದೂರದಲ್ಲಿರತಕ್ಕ (ಅಂದರೆ ಅವ್ಯಕ್ತ ಸ್ವಭಾವವುಳ್ಳ) ನಿನ್ನನ್ನು, ನ ವಿಪತಂತಿ= ಹೊಂದುವುದಿಲ್ಲ. ವಿಷಯೀಕರಿಸುವುದಿಲ್ಲ. ಹಿ=ಕಷ್ಟವು. || ೪ ||

ಭಾ || ಪರಾಕ್ ಪತಂತಿ ಪ್ರಜ್ಞಾ ಮೇ ವಿವಿಧಾಃ ಶುಭಲಬ್ಧಯೇ । ಪಕ್ಷಿಣೋ ವಸತೀರ್ಯ ದ್ವದ್ಧಾ ನ ತ್ವಾಂ ಪ್ರಾಪ್ನುವಂತಿ ಚ || ೪ ||

ಅ || ನನ್ನ ಅನೇಕ ವಿಷಯಕಗಳಾದ ಬುದ್ಧಿ ವೃತ್ತಿಗಳು ಶುಭದ ಪ್ರಾಪ್ತಿಗಾಗಿ ನಿನಗೆ ಪರಾಙ್ಮುಖ ಗಳಾಗಿಯೇ ಹೋಗುತ್ತವೆ. ಹಕ್ಕಿಗಳು ನೀಡಗಳನ್ನು ಕುರಿತು ಹೇಗೋ ಹಾಗೆಯೇ. (ಅಂದರೆ ವೈಷಯಿಕ ಸುಖ ಲಾಭಕ್ಕಾಗಿ ವಿಷಯಗಳ ಕಡೆಗೇನೇ ಓಡುತ್ತವೆ.) ಹಾ=ಕಷ್ಟವು. ಅಥವಾ ಅವ್ಯಕ್ತ ಸ್ವಭಾವನಾದ ನಿನ್ನನ್ನು ವಿಷಯೀಕರಿಸುವುದಿಲ್ಲ. ಕಷ್ಟ. || ೪ ||

ಋ || (೨೭೩) ಕದಾ ಕ್ಷತ್ರಶ್ರಿಯಂ ನರಮಾ ವರುಣಂ ಕರಾಮಹೇ ।
ಮೃಳೀಕಾಯೋರುಚಕ್ಷಸಂ || ೫ || ೧೬ ||

ಅ ॥ (ಯಾವ ಕಾರಣದಿಂದ ನಮ್ಮ ಬುದ್ಧಿಗಳು ವಿಷಯಗಳ ಕಡೆಗೇನೇ ಓಡಿ ಹೋಗುತ್ತವೋ, ವರುಣನನ್ನು ಹೊಂದುವುದಿಲ್ಲವೋ ಆದಕಾರಣ ಬುದ್ಧಿಗಳಿಗೆ ವರುಣ ವಿಷಯಕತ್ವರೂಪವಾದ ಪ್ರಯೋಜನವು ಅವಶ್ಯಕವಾದ ಪ್ರಯುಕ್ತ ಆ ವರುಣನನ್ನು ಹೊಂದುವುದಕ್ಕಾಗಿ ನಾವು) ಕದಾ=ಯಾವಾಗ, ಮೃಳೀಕಾಯ=(ನಮ್ಮ ಮನಸ್ಸಿನ) ರಕ್ಷಣೆಗಾಗಿ (ಮನಸ್ಸನ್ನು ರಕ್ಷಿಸುವುದೆಂದರೆ ವಿಷಯಗಳ ಕಡೆಗೆ ಹೋಗದಿದ್ದಂತೆ ಮಾಡಿ ಶ್ರೀಹರಿಯಲ್ಲಿಯೇ ಇರಿಸುವುದು.) ಕ್ಷತ್ರಶ್ರಿಯಂ=(ಕ್ಷತ್ರಿಯರ ಸಮುದಾಯವು, ಧನವು, ಬಲವು, ಇವುಗಳು (ಕ್ಷತ್ರ ಶಬ್ದವು ಕ್ಷತ್ರಿಯ ವಾಚಕವು. ಧನಬಲನಾಮಗಳಲ್ಲಿ ಪಠಿತವೂ ಆಗಿದೆ) ಯಾವ ವರುಣನನ್ನು ಆಶ್ರಯಿಸುತ್ತಾರೋ, (ವೋ) ಅಂತಹ ವರುಣನು ಕ್ಷತ್ರಶ್ರೀಃ ಎನಿಸುತ್ತಾನೆ. ಅಂತಹ) ಅಖಿಲ ಕ್ಷತ್ರಿಯರಿಗೆ ಅಧಿಪತಿಯಾದ, ನರಂ=(ನಿಷೇಧಾರ್ಥಕ ನ ಶಬ್ದವು. ರಿಷಹಿಂಸಾಯಾಂ ಚ) (ನರಿಷ್ಯತೀತಿ ನರಃ) ವಿನಾಶವಿಲ್ಲದಿರುವ, ಉರುಚಕ್ಷಸಂ=(ಉರು ಚಕ್ಷಃ ದರ್ಶನಂ ಯಸ್ಯ) ಮಹಾದರ್ಶನವುಳ್ಳ, ವರುಣಂ= ವರುಣನನ್ನು ಆಕರಾಮಹೇ=(ಕೃಞಕರಣೇ. ವಾ. ಕೃಞಕೃತೌ ಡುಕೃಞಕರಣೇ) ಚೆನ್ನಾಗಿ ಕರೆಯುತ್ತೇವೆ. ॥ ೫ ॥ ೧೬ ॥

ಭಾ ॥ ಅತೋಽಖಿಲಕ್ಷತ್ರಪತಿಮಾಹ್ವಯಾಮಃ ಕದಾ ವಯಂ । ಅವಿನಾಶಿನಂ ರಕ್ಷಣಾಯ
ಮಹಾದರ್ಶನಮಂಜಸಾ ॥ ೫ ॥ ೧೬ ॥

ಅ ॥ ಯಾವ ಕಾರಣದಿಂದ ನಮ್ಮ ಬುದ್ಧಿಗಳು ವಿಷಯಗಳ ಸಮೀಪಕ್ಕೇನೆ ಓಡಿ ಹೋಗುತ್ತವೆ. ವರುಣನನ್ನು ಹೊಂದುವುದಿಲ್ಲ. ಆದ ಕಾರಣ ವರುಣನನ್ನು ಹೊಂದುವುದಕ್ಕಾಗಿ, ನಾವು ಸಮಸ್ತ ಕ್ಷತ್ರಿಯರಿಗೆ ಅಧಿಪತಿಯೂ ವಿನಾಶವಿಲ್ಲದಿರುವವನೂ, ಮಹಾ ದರ್ಶನವುಳ್ಳವನೂ ಆದ ವರುಣನನ್ನು ಯಾವಾಗ ನಮ್ಮ ಮನಸ್ಸನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಚೆನ್ನಾಗಿ ಕರೆಯುತ್ತೇವೆ. ॥ ೫ ॥ ೧೬. ॥

ಋ ॥ (೨೭೪) ತದ್ವಿತ್ಸಮಾನಮಾಶಾತೇ ವೇನಂತಾ ನ ಪ್ರ ಯುಚ್ಛತಃ । ಧೃತ
ವ್ರತಾಯ ದಾಶುಷೇ ॥ ೬ ॥

ಅ ॥ ತತ್=ಆ ವರುಣನ ಪ್ರಸಾದದಿಂದ, ವೇನಂತಾ= (ವೇನತಿ ಮೇನತಿ ಎಂದು ಗತಿ ಕರ್ಮಗಳಲ್ಲಿ ಪಠಿತವು.) ತಿಳಿದಿರುವ (ಸರ್ವಜ್ಞರಾದ) ಬ್ರಹ್ಮವಾಯುಗಳು, ವರುಣಂ=ವರುಣನನ್ನು ಸಮಾನಮಿತ್=ಸಮವಾಗಿಯೇ=(ಅಶೂ ವ್ಯಾಪ್ತೌ, ವ್ಯಾಪ್ತಿ:=ಸರ್ವದೇಶ ಗತಿಯು. ಗತಿ ಪರ್ಯಾಯವಾದುದರಿಂದ ಜ್ಞಾನಾರ್ಥಕವು.) ತಿಳಿಯುತ್ತಾರೋ. (ಅಂತೂ ವರುಣನ ಪ್ರಸಾದದಿಂದ ಸಮ ಜ್ಞಾನವುಳ್ಳವರು.) (ಯಾವ ಸರ್ವಜ್ಞರಾದ) ಬ್ರಹ್ಮವಾಯುಗಳು ಧೃತವ್ರತಾಯ= (ಧೃತಂ ವ್ರತಂ ಯೇನ) ವ್ರತವನ್ನು ಧರಿಸಿರುವ, ಧಾತುಷೇ=ಯಜಮಾನನಿಗೋಸ್ಕರ, ನ ಪ್ರ ಯುಚ್ಛತಃ=ಯಥಾರ್ಥ ಜ್ಞಾನವನ್ನೂ, ಕರ್ಮ ಪ್ರಯೋಗವನ್ನೂ ಕೂಡ) ಕೊಡುವುದಿಲ್ಲ. ಯೋಗ್ಯತಾತಿರೇಕದಿಂದ ಮಾಡುವುದಿಲ್ಲ. (ಯೋಗ್ಯತಾನುಸಾರವಾಗಿಯೇ ಮಾಡುತ್ತಾರೆ.) ಅಥವಾ (ಯುಚ್ಛ ಪ್ರಮಾದೇ) ಆ ಬ್ರಹ್ಮವಾಯುಗಳು ಯಜಮಾನನಿಗೆ ಯಥಾರ್ಥ ಜ್ಞಾನವನ್ನೂ ಕರ್ಮ ಪ್ರಯೋಗವನ್ನೂ ವಿನಷ್ಟವನ್ನಾಗಿ ಮಾಡುವುದೇ ಇಲ್ಲ.) (ಪ್ರಸಿದ್ಧ ವರುಣ ಪಕ್ಷದಲ್ಲಿ ವೇನಂತಾ=ಜ್ಞಾನಿಗಳಾದವರು ಅಶ್ವಿನೀ ದೇವತೆಗಳು ಎಂದು ತಿಳಿಯಬೇಕು. ॥ ೬ ॥

ಭಾ ॥ (೧) ತತ್ಪ್ರಸಾದಾದ್ಬ್ರಹ್ಮವಾಯೂ ಸಮಮೇವಾವಗಚ್ಛತಃ॥ (೨) ವೇನಂತೌ ಹಿ ವಿಜಾನಂತೌ ತೌ ಹಿ ಜ್ಞಾನಿವರೌ ಮತೌ॥ (೩) ಯಥಾಜ್ಞಾನಂ ಪ್ರಯೋಗಂ ಚ ದಾಶುಷೇ ಕುರುತೋ ನ ತೌ॥ (೪) ಅಶ್ವಿನೌ ವರುಣಶ್ಚೇತ್ಸ್ಯಾತ್ ॥ ೬ ॥

ಅ || (೧) ಆ ವರುಣನೆನಿಸಿದ ಶ್ರೀ ಹರಿಯ ಪ್ರಸಾದದಿಂದ ಬ್ರಹ್ಮವಾಯುಗಳು ಸಮವಾಗಿಯೇ ತಿಳಿದುಕೊಳ್ಳುತ್ತಾರೆ. (ಅಂದರೆ ಸಮಜ್ಞಾನವುಳ್ಳವರು.) ೨) (ಆಶಾತೇ=ಸಮವಾಗಿಯೇ ತಿಳಿಯುತ್ತಾರೆ ಎನ್ನುವಲ್ಲಿ ಬ್ರಹ್ಮವಾಯುಗಳೇ ಕರ್ತೃಗಳು ಎನ್ನುವುದು ಯಾವುದರಿಂದ ಎಂದರೆ) ವೇನಂತೌ ಎಂಬ ವಿಶೇಷಣ ಸಾಮರ್ಥ್ಯದಿಂದ. ಅಂದರೆ ವೇನಂತೌ=ವಿಶೇಷವಾಗಿ ತಿಳಿಯುವವರೂ ಸರ್ವಜ್ಞರೂ ಆದವರು ಬ್ರಹ್ಮವಾಯು ಗಳೇ (ಇದರಿಂದಲೂ ಬ್ರಹ್ಮವಾಯುಗಳೇ ಎಂದು ಹೇಗೆ ನಿಶ್ಚಯವಾಗುವುದು ಎಂದರೆ) ಆ ಬ್ರಹ್ಮವಾಯುಗಳೇ ಜ್ಞಾನಿಗಳಲ್ಲಿ ಶ್ರೇಷ್ಠರೆಂದು ಸಮ್ಮತರು. (೩) ಆ ಬ್ರಹ್ಮವಾಯುಗಳು ಯಜಮಾನನಿಗೆ ಯಥಾರ್ಥ ಜ್ಞಾನವನ್ನೂ ಕರ್ಮಪ್ರಯೋಗವನ್ನೂ ಕೂಡ(ಯೋಗ್ಯತೆಯನ್ನತಿಕ್ರಮಿಸಿ)ಮಾಡುವುದಿಲ್ಲ. ಅಥವಾ ವಿನಷ್ಟವನ್ನಾಗಿ ಮಾಡುವು ದಿಲ್ಲ.(೪)(ಹೀಗೆ ವಿಷ್ಣುವೆಂಬಪಕ್ಷದಲ್ಲಿ ಆಶಾತೇ ಎಂಬಕ್ರಿಯೆಗೆ ಬ್ರಹ್ಮವಾಯುಗಳುಕರ್ತೃಗಳೆಂದು ಆಯ್ತು.ಪ್ರಸಿದ್ಧ ವರುಣನೆಂಬ ಪಕ್ಷದಲ್ಲಿ ಬ್ರಹ್ಮವಾಯುಗಳು ವರುಣನಿಗಿಂತ ಉತ್ತಮರಾಗಿರುವುದರಿಂದಲೂ ವರುಣನ ಅನುಗ್ರಹ ದಿಂದ ಸಮಜ್ಞಾನವುಳ್ಳವರೆಂಬುದು ಕೂಡದಿರುವುದರಿಂದಲೂ ಕರ್ತೃಗಳು ಯಾರು ಎಂದರೆ) ವರುಣ ಶಬ್ದದಿಂದ ಪ್ರಸಿದ್ಧ ವರುಣನನ್ನೇ ವಿವಕ್ಷಾ ಮಾಡಿದರೆ ಆಗ ಅಶ್ವಿನೀ ದೇವತೆಗಳು ಕರ್ತೃಗಳೆಂದು ತಿಳಿಯಬೇಕು. || ೬ ||

ಋ || (೨೭೫) ವೇದಾ ಯೋ ವೀನಾಂ ಪದಮಂತರಿಕ್ಷೇಣ ಪತತಾಂ |

ವೇದ ನಾವಃ ಸಮುದ್ರಿಯಃ || ೭ ||

ಅ || ಯಃ=ಯಾವ ಈ ಜಲಾಧಿಪತಿಯಾದ ವರುಣನು, ವಿಷ್ಣುವು, (ಈ ವ್ಯಾಖ್ಯಾನವು ಉಭಯ ಸಾಧಾರಣವಾಗಿದೆ.) ಅಂತರಿಕ್ಷೇಣ=ಆಕಾಶದಲ್ಲಿ, (ಅಥವಾ ವಿವಕ್ಷಾತಃ ಕಾರಕಾಣಿಭವಂತಿ ಎಂಬ ಉಕ್ತಿ ಯಿಂದ ಅಧಿಕರಣಕ್ಕೇನೇ ಸಾಧಕತಮ (ಕರಣ) ತ್ವವನ್ನು ವಿವಕ್ಷಾ ಮಾಡಿಕೊಂಡು ತೃತೀಯಾವಿಭಕ್ತಿಯು ಪತತಾಂ=ಹಾರುತ್ತಿರುವ, ಹೋಗುತ್ತಿರುವ, ವೀನಾಂ=ಪಕ್ಷಿಗಳ, ಪದಂ=ಪದವನ್ನು, ವೇದ= (ವಿದಜ್ಞಾನೇ) (ಸೂಕ್ಷ್ಮ ವಿಜ್ಞಾನವಿದ್ದುದರಿಂದ) ತಿಳಿಯುತ್ತಾನೋ, (ಹಾಗೆಯೇ) ಯಃ=ಯಾವ ಸಮುದ್ರಿಯಃ= ಸಮುದ್ರ ದಲ್ಲಿದ್ದವನು, (ನೀರಿನಲ್ಲಿ) ನಾವಃ= ದೋಣಿಯ, ಪದಂ= (ಪದಂ ವ್ಯವಸಿತಿತ್ರಾಣ ಸ್ಥಾನ ಲಕ್ಷ್ಮಾಂಘ್ರಿ ವಸ್ತುಷು | ಎಂಬ ಕೋಶದಿಂದ) ರಕ್ಷಣೆಯನ್ನು, ವಾ ಲಕ್ಷಣವನ್ನು, ಅಥವಾ ಸ್ಥಾನವನ್ನು, ವೇದ= ತಿಳಿಯು ತ್ತಾನೋ, ಅಥವಾ, (ವಿಷ್ಣು ಪಕ್ಷದಲ್ಲಿ ಋಕ್ಕನ್ನು ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ. (ಯಃ= ಯಾವ ಸಮುದ್ರಿಯಃ= (ಸಮುದ್ರೇಭವಃ) ಕ್ಷೀರಸಮುದ್ರದಲ್ಲಿ ಮಲಗಿರುವ, ಉತ್ಕೃಷ್ಟವಾದ ಆನಂದವುಳ್ಳ ಶ್ರೀ ವಿಷ್ಣುವು, ಅಂತರಿಕ್ಷೇಣ= (ಅಂತಃ ಈಕ್ಷ್ಯತೇ ಎಂಬ ವ್ಯುತ್ಪತ್ತಿಯಿಂದ) ಪರಬ್ರಹ್ಮನ ಪ್ರಸಾದದಿಂದ, ಪತತಾಂ= ಸಂಸಾರದಿಂದ ಮೇಲಕ್ಕೆ ಬಂದಿರುವ, ವೀನಾಂ=(ವೀಗತ್ಯಾದೌ) ಜ್ಞಾನಾದಿ ಗುಣಗಳಿಂದ ವಿಶಿಷ್ಟರಾದ ಮುಕ್ತರ. ಪದಂ= ಸ್ಥಿತಿಯನ್ನು, ವೇದ= ತಿಳಿಯುತ್ತಾನೋ, ನಾವಃ= (ನಯತಿ ಉನ್ನಯತೀತಿ ನೌಃ ಎಂಬ ವ್ಯುತ್ಪತ್ತಿ ಯಿಂದ) ಜ್ಞಾನದ, ಪದಂ= ಮುಖ್ಯ ವಿಷಯವಾದ ಸ್ವಸ್ವರೂಪವನ್ನೂ ಕೂಡ, ವೇದ= ತಿಳಿಯುತ್ತಾನೋ, (ಈ ವ್ಯಾಖ್ಯಾನದಲ್ಲಿಯೂ ಹಿಂದಿನ ಋಕ್ಕಿನಲ್ಲಿದ್ದ ತತ್(ತತ್ಪ್ರಸಾದಾತ್) ಎನ್ನುವುದರಿಂದಲೇ ಅನ್ವಯವು.) ||೭||

ಭಾ || (೧) ಆಕಾಶೇ ಪಕ್ಷಿಣಾಂ ಪದಂ | ವೇತ್ತ್ಯಸೌ ಸೂಕ್ಷ್ಮವಿಜ್ಞಾನಾತ್ (೨) ತಥಾ ನಾವೋ ಜಲೇಽಬ್ಧಿಗಃ | (೩) ಮುಕ್ತಾನಾಂ ಚ ಸ್ಥಿತಿಂ ವೇದ ಜ್ಞಾನಸ್ಯ ಚ ಗತಿಂ ಪರಾಂ | ಕ್ಷೀರಾಬ್ಧಿಶಯನೋ ವಿಷ್ಣುಃ || ೭ ||

ಅ || (೧) ಈ ವರುಣನು ಆಕಾಶದಲ್ಲಿ ಹಾರುತ್ತಿರುವ ಹಕ್ಕಿಗಳ ಪಾದವನ್ನು ಸೂಕ್ಷ್ಮ ವಿಜ್ಞಾನವಿದ್ದುದ ರಿಂದ ತಿಳಿಯುತ್ತಾನೆ. (೨) ಹಾಗೆಯೇ ಸಮುದ್ರದಲ್ಲಿದ್ದವನು ನೀರಿನಲ್ಲಿ ದೋಣಿಯ ರಕ್ಷಣೆ ಲಕ್ಷಣ ಸ್ಥಾನ

ಗಳನ್ನು ತಿಳಿಯುತ್ತಾನೆ. (೩) (ವಿಷ್ಣು ಪಕ್ಷದಲ್ಲಿ ಋಕ್ಕನ್ನು ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ). ಕ್ಷಿರಾಬ್ಧಿಶಾಯಿಯಾದ ಶ್ರೀ ವಿಷ್ಣುವು ಮುಕ್ತರ ಸ್ಥಿತಿಯನ್ನು ಜ್ಞಾನಕ್ಕೆ ಮುಖ್ಯ ವಿಷಯವಾದ ಸ್ವಸ್ವರೂಪವನ್ನೂ, ಕೂಡ ತಿಳಿಯುತ್ತಾನೆ. || ೭ ||

ಋ || (೨೭೬) ವೇದ ಮಾಸೋ ಧೃತವ್ರತೋ ದ್ವಾದಶ ಪ್ರಜಾವತಃ ।
ವೇದಾ ಯ ಉಪಜಾಯತೇ || ೮ ||

ಅ || ಧೃತವ್ರತಃ= (ಧೃತಂ ವ್ರತಂ ಯೇನ) ಸಮಸ್ತ ಕರ್ಮಗಳನ್ನು ಧರಿಸಿರುವ, ವರುಣನು, ಪ್ರಜಾವತಃ= (ಪ್ರಕರ್ಷೇಣ ಜಾಯಂತೇ ಇತಿ ಪ್ರಜಾಃ = ಕಾರ್ಯಗಳು) ಕಾರ್ಯಯುಕ್ತಗಳಾದ, ದ್ವಾದಶ= ಹನ್ನೆರಡು, ಮಾಸಃ= (**ಮಾಸ್ತ್ವೃತಶ್ಚಂದ್ರಮಾಸಯೋಃ** ಎಂಬ ಕೋಶದಿಂದ) ಮಾಸಗಳನ್ನು, ವೇದ= (ಆಯಾವ ಕಾಲಗಳಿದುಂಟಾಗತಕ್ಕ ಕಾರ್ಯಗಳಿಂದ ಕೂಡಿಕೊಂಡು ಸಮಸ್ತ ಕಾಲವನ್ನೂ) ತಿಳಿಯುತ್ತಾನೋ, ಯಃ= ಯಾವಾತನು, ಉಪಜಾಯತೇ= ತನ್ನ ಸಮೀಪದಲ್ಲಿಯೇ ವ್ಯವಧಾನವಿಲ್ಲದೆ ಹುಟ್ಟುತ್ತಾನೋ, (ಅಂತಹ ಪದ್ಮದಿಂದ ಹುಟ್ಟಿದ ಚತುರ್ಮುಖನನ್ನು) (ಚತುರ್ಮುಖನು ನಾಭಿಪದ್ಮದಿಂದ ಹುಟ್ಟಿರುವುದರಿಂದ ಅತನಿಗೆ ವ್ಯವಧಾನವಿಲ್ಲದೆ ಜನ್ಮವು. ಲಕ್ಷ್ಮೀದ್ವಾರಾ ಉತ್ಪತ್ತಿಯಲ್ಲ.) ವೇದ= ತಿಳಿಯುತ್ತಾನೋ, ಅಥವಾ ಉಪಜಾಯತೇ= ತನ್ನ ಸಮೀಪದಲ್ಲಿಯೇ ಇರುತ್ತಾನೋ, ಅಂತಹ ಮುಕ್ತನನ್ನು ತಿಳಿಯುತ್ತಾನೆ. (ಅಂದರೆ ಸಾಮೀಪ್ಯ, ಸಾಯುಜ್ಯಾದಿರೂಪವಾದ ಮುಕ್ತ್ಯಾದಿಗಳುಳ್ಳವರಾಗುತ್ತಾರೆ) ಯಃ= ಉಪಜಾಯತೇ ಎನ್ನುವುದು ಜಾತ್ಯೇಕ ವಚನವು. ಅಂದರೆ **ಜಾತಿಃ ಛಂದಸಿ ಸಾಮಾನ್ಯೇ ಮಾಲತ್ಯಾಮೋಷು ಜನ್ಮನೋಃ ।** ಎಂಬ ವಿಶ್ವಕೋಶದಿಂದ ಸಮೂಹವೆಂಬ ಅರ್ಥದಲ್ಲಿ ಏಕ ವಚನವು. ಅತಏವ ಸುಧಾದಲ್ಲಿ **ತತ್ರ ತತ್ರಸಮೂಹೇ ಏಕವಚನಂ** ಎಂದುಕ್ತವಾಗಿದೆ. ತಥಾ ಚ ಸಮಸ್ತ ಮುಕ್ತರನ್ನೂ ತಿಳಿಯುತ್ತಾನೆ, ಎಂದಭಿಪ್ರಾಯವು. || ೮ ||

ಭಾ || (೧) ಕಾಲಂ ಕಾಲೋದ್ಭವೈಸ್ಸಹ । (೨) ಯ ಆತ್ಮನಸ್ಸಮೀಪೇ ಚ ಜಾಯತೇ ತಂ ಚ ಪದ್ಮಜಂ। ಮುಕ್ತಂ ವಾ || ೮ ||

ಅ || (೧) ಆಯಾವ ಕಾಲಗಳಲ್ಲಿ ಹುಟ್ಟತಕ್ಕ ಕಾರ್ಯಗಳಿಂದ ಕೂಡಿರುವ ಸಮಸ್ತ ಕಾಲವನ್ನೂ ತಿಳಿಯುತ್ತಾನೆ. (೨) ಯಾವಾತನು ತನ್ನ ಸಮೀಪದಲ್ಲಿಯೇ ವ್ಯವಧಾನವಿಲ್ಲದೇನೇ ಹುಟ್ಟುತ್ತಾನೋ ಅಂತಹ ತನ್ನ ನಾಭಿಕಮಲದಿಂದ ಹುಟ್ಟಿದ ಚತುರ್ಮುಖನನ್ನು ಸಮಸ್ತ ಮುಕ್ತರನ್ನಾಗಲೀ ತಿಳಿಯುತ್ತಾನೆ. (ವ್ಯವಧಾನವಿಲ್ಲದೆ ಉತ್ಪತ್ತಿಯು ಎಂದು ತೋರಿಸುವುದಕ್ಕಾಗಿಯೇ ಪದ್ಮಜಂ ಎಂದದ್ದು) || ೮ ||

ಋ || (೨೭೭) ವೇದ ವಾತಸ್ಯ ವರ್ತನಿಮುರೋರೃಷ್ವಸ್ಯ ಬೃಹತಃ ।
ವೇದಾ ಯೇ ಅಧ್ಯಾಸತೇ || ೯ ||

ಅ || (ವರುಣನು) ಉರೋಃ= ಪರಿಮಾಣಾದಿ ಗುಣಗಳಿಂದ ಮಹತ್ತಾದ, ಬೃಹತಃ ಋಷ್ವಸ್ಯ= ಮಹಾಪ್ರಕಾಶವುಳ್ಳ, (ಋಷ್ವ ಶಬ್ದಕ್ಕೆ ಬಲವೆಂಬ ಅರ್ಥವಿದ್ದಂತೆ ಪ್ರಕಾಶವೆಂಬ ಅರ್ಥವೂ ಇದೆ.) ಅಥವಾ ಮಹಾಜ್ಞಾನವುಳ್ಳ, ವಾತಸ್ಯ= ವಾಯುವಿನ, ವರ್ತನಿಂ= ಪ್ರವೃತ್ತಿಯನ್ನು, ವೇದ= ತಿಳಿಯುತ್ತಾನೆ. ಯೇ= ಯಾವ ದೇವತೆಗಳು, ಅಧ್ಯಾಸತೇ= ಅಧಿಕಗಳೇ ಆದ ಸಪ್ತ ಲೋಕಾದಿ ಸ್ಥಾನಗಳಲ್ಲಿ ಇರುತ್ತಾರೋ, ಅವರನ್ನೂ ತಿಳಿಯುತ್ತಾನೆ. || ೯ ||

ಭಾ ॥ ವರ್ತನಾಂ ವಾಯೋರ್ಮಹತೋಽ ಅತಿಪ್ರಕಾಶಿನಃ । ಬೃಹತೋಜ್ಞಾನಿನಶ್ಚೈವ ಬೃಹತೋಮಹತೋಽಪಿ ವಾ॥ಅಧಿಕಾನಿ ಪದಾನ್ಯೇವ ದೇವಾ ಅಧ್ಯಾಸತೇ ಪಿ ತಾನ್ ॥೯॥

ಅ ॥ (ಉರು ಬೃಹತ್ ಶಬ್ದಗಳು ಮಹತ್ ಎಂಬ ಅರ್ಥವನ್ನು ಹೇಳತಕ್ಕವುಗಳಾದುದರಿಂದ ಉರೋಃ ಬೃಹತಃ ಎನ್ನುವುದು ಪರ್ಯಾಯ ಶಬ್ದಗಳು.) (ಪೌನರುಕ್ತ್ಯ ಪರಿಹಾರಕ್ಕಾಗಿ ಉರೋಃ ಎನ್ನುವುನನ್ನು ವ್ಯಾಖ್ಯಾನ ಮಾಡುತ್ತಾರೆ. ಉರೋಃ=ಪರಿಮಾಣಾದಿ ಗುಣಗಳಿಂದ ಮಹತ್ತಾದ, (ಬೃಹತಃ ಎನ್ನುವುದನ್ನು ಋಷ್ವಸ್ಯ ಎನ್ನುವುದಕ್ಕೆ ವಿಶೇಷಣವಾಗಿ ವ್ಯಾಖ್ಯಾನ ಮಾಡುತ್ತಾರೆ) ಬೃಹತಃ ಋಷ್ವಸ್ಯ=ಅತ್ಯಂತ ಪ್ರಕಾಶವುಳ್ಳ, ೨ ಶಬ್ದಗಳಿಗೂ ಒಂದೇ ಅರ್ಥವಾದುದಾಗ್ಯೂ ಉರು ಶಬ್ದವು ವಾಯುವಿಗೆ ವಿಶೇಷಣವು. ಬೃಹತಃ ಎನ್ನುವುದು ವಾಯುವಿಗೆ ವಿಶೇಷಣವಾದ ಪ್ರಕಾಶದಲ್ಲಿ ವಿಶೇಷಣವಾದುದರಿಂದ ಪುನರುಕ್ತಿಯಿಲ್ಲ,ಬೃಹತಃ ಋಷ್ವಸ್ಯ= ಎನ್ನುವುವರ ಅರ್ಥವು ಅತಿ ಪ್ರಕಾಶಿನಃ ಎಂದು (ಋಷ್ವ ಶಬ್ದಕ್ಕೆ ಬಲವೆಂಬ ಅರ್ಥವಿದ್ದಂತೆ ಪ್ರಕಾಶ (ಬಾಹ್ಯ ಪ್ರಕಾಶ=(ಶರೀರಕಾಂತಿ) ಎಂಬ ಅರ್ಥವೂ ಇದೆ.) (ಅಂತರವಾದ ಜ್ಞಾನ ರೂಪ ಪ್ರಕಾಶವೆಂಬ ಅರ್ಥವನ್ನು ಇಟ್ಟುಕೊಂಡು ಬೃಹತಃ ಎನ್ನುವುದನ್ನು ಋಷ್ವಸ್ಯ ಎನ್ನುವುದಕ್ಕೆ ವಿಶೇಷಣವೆಂಬ ಅಭಿಪ್ರಾಯದಿಂದ ವ್ಯಾಖ್ಯಾನ ಮಾಡುತ್ತಾರೆ.) ಮಹಾ ಜ್ಞಾನವುಳ್ಳವನೇ, (ಬಾಹ್ಯಕಾಂತಿಗಿಂತ ಜ್ಞಾನವು ಸ್ವರೂಪ ವಿಶೇಷ ನಿರ್ಣಾಯಕವಾಗಿರುವುದರಿಂದ ಈ ಅರ್ಥವೇ ಮುಖ್ಯವೆಂದು ತೋರಿಸುವುದಕ್ಕಾಗಿ ಏವ ಶಬ್ದವು) (ಅಥವಾ ಬೃಹತಃ ಎನ್ನುವುದು. ಉರೋಃ ಎನ್ನುವುದಕ್ಕೇನೇ ವಿಶೇಷಣವೆನ್ನುತ್ತಾರೆ.) ಬೃಹತಃ ಮಹತ್ತಾದ. (ಉರು ಬೃಹತ್ ಶಬ್ದಗಳು ಏಕಾರ್ಥಕಗಳಾದುದರಿಂದ ಅವುಗಳಿಗೆ ವಿಶೇಷಣ ವಿಶೇಷ್ಯ ಭಾವವು ಹೇಗೆ ಕೂಡುತ್ತದೆ. ಎಂದರೆ.) (ಉರೋಃ ಎಂದಿಷ್ಟು ಮಾತ್ರ ಹೇಳಿದರೆ ಔಪಚಾರಿಕವಾಗಿ ಮಹತ್ತ್ವವೆಂದು ಶಂಕಾಬರಬಹುದು. ಅಂತಹ ಶಂಕೆಯು ಬರಬಾರದೆಂದು ಉರುತ್ವಕ್ಕೆ ಬೃಹತಃ ಎನ್ನುವುದನ್ನು ವಿಶೇಷಣೀಕರಿಸಿದ್ದಾರೆ. ತಥಾಚ ಅತಿ ಮಹತ್ತಾದ ಪರಿಮಾಣಾದಿ ಗುಣಗಳುಳ್ಳವನೂ, ಮಹಾ ಪ್ರಕಾಶವುಳ್ಳವನೂ, ಮಹಾಜ್ಞಾನಿಯೂ ಆದ ಮಹಾ ವಾಯುವಿನ ಪ್ರವೃತ್ತಿಯನ್ನು ತಿಳಿಯುತ್ತಾನೋ, ಯಾವ ದೇವತೆಗಳು ಅಧಿಕಗಳೇ ಆದ ಸಪ್ತ ಲೋಕಾದಿ ಸ್ಥಾನಗಳಲ್ಲಿರುತ್ತಾರೋ ಅವರನ್ನೂ ತಿಳಿಯುತ್ತಾನೆ. ॥ ೯ ॥

ಋ ॥ (೨೭೮) ನಿಷಸಾದ ಧೃತವ್ರತೋ ವರುಣಃ ಪಸ್ತ್ಯಾ೩ ಸ್ವಾ।
ಸಾಮ್ರಾಜ್ಯಾಯ ಸುಕ್ರತುಃ ॥ ೧೦ । ೧೭ ॥

ಅ ॥ ಸುಕ್ರತುಃ=ಪ್ರಶಸ್ತ ಜ್ಞಾನವುಳ್ಳ, ಧೃತವ್ರತಃ=ನಿಯಮವನ್ನು ಧರಿಸಿರುವ ವರುಣಃ=ಶ್ರೀ ಹರಿಯು ವರುಣನು, ಸಾಮ್ರಾಜ್ಯಾಯ=(ಸಕಲ ಧರ್ಮಗಳನ್ನು ಪರಿಪಾಲಿಸುವ ಸಮೀಚೀನ ರಾಜನು, ಸಮ್ರಾಟ್ ಎನಿಸುತ್ತಾನೆ. ಸಕಲ ಜಗತ್ತನ್ನು ಪರಿಪಾಲಿಸುವುದಕ್ಕಾಗಿ, ಪಸ್ತ್ಯಾಸು ಚ=ಪ್ರಜೆಗಳಲ್ಲಿ ಗೃಹಗಳಲ್ಲಿಯೂ ಕೂಡ, ಆ ನಿಷಸಾದ=ಕೂತುಕೊಂಡನು, (ಅಂದರೆ ಪ್ರಜೆಗಳನ್ನೂ ಗೃಹಗಳನ್ನೂ ಅಧಿಕರಿಸಿಕೊಂಡಿದ್ದನು.) ॥ ೧೦ ॥ ೧೭ ॥

ಭಾ ॥ ಸಾಮ್ರಾಜ್ಯಾಯ ಸಪಸ್ತ್ಯಾಸು ನಿಷಸಾದ ಪ್ರಜಾಸು ಚ। ಸುಜ್ಞಾನಃ ॥ ೧೦ ॥ ೧೭ ॥

ಅ ॥ ಒಳ್ಳೇ ಜ್ಞಾನವುಳ್ಳ ಶ್ರೀ ಹರಿಯು (ಸಮೀಚೀನನಾದ ರಾಜನು ಸಕಲಧರ್ಮಗಳನ್ನು ಪರಿಪಾಲಿಸುವವನು ಸಮ್ರಾಟ್ ಎನಿಸುತ್ತಾನೆ. ಅವನ ಧರ್ಮವು ಅಥವಾ ಕರ್ಮವು ಸಾಮ್ರಾಜ್ಯವು.) ಹೀಗೆ ಸಮಸ್ತ ಜಗತ್ತನ್ನು ಪರಿಪಾಲಿಸುವುದಕ್ಕಾಗಿ, ಪಸ್ತ್ಯಾಸು=(ಪಸ್ತ್ಯಶಬ್ದವು ಗೃಹನಾಮಗಳಲ್ಲಿ ಪಠಿತವಾಗಿರುವುದರಿಂದ **ಗೃಹಿಣೀ ಗೃಹಮುಚ್ಯತೇ** ಎಂಬ ವಚನದಿಂದ ಪತ್ನೀ ಪರ್ಯಾಯವು. ಅದರಿಂದ ಭವಾರ್ಥ (ಹುಟ್ಟುವಿಕೆ) ದಲ್ಲಿ ಯತ್ ಪ್ರತ್ಯಯವು) ಪ್ರಜೆಗಳಲ್ಲಿ, ಚ=ಗೃಹಗಳಲ್ಲಿಯೂ ಕುಳಿತನು ॥ ೧೦ ॥ ೧೭ ॥

ಋ ॥ (೨೭೯) ಅತೋ ವಿಶ್ವಾನ್ಯದ್ಭುತಾ ಚಿಕಿತ್ವಾ ಅಭಿಪಶ್ಯತಿ
ಕೃತಾನಿ ಯಾ ಚ ಕರ್ತ್ವಾ ॥ ೧೧ ॥

ಅ ॥ ಅತಃ=ಈ ಪ್ರಜೆಗಳಲ್ಲಿ ಗೃಹಗಳಲ್ಲಾಗಲೀ ಇರುವ, ಚಿಕಿತ್ವಾನ್=(ಕೇತನಿವಾಸೀ, ಕೇತಕರಣೆ, ಸರ್ವತ್ರ ನಿವಾಸಿಸುವ, ಸರ್ವಕರ್ತನಾದ, ವರುಣನು, ವಿಶ್ವಾನಿ=ಸಮಸ್ತ ವಸ್ತುಗಳನ್ನೂ, ಅದ್ಭುತಾ=ಅತ್ಯಾಶ್ಚರ್ಯಗಳನ್ನಾಗಿ, ಅಭಿಪಶ್ಯತಿ ನೋಡುತ್ತಾನೆ. ಮತ್ತೂ, ಯಾ=ಯಾವ ವಸ್ತುಗಳು, ಕೃತಾನಿ=ಮಾಡಲ್ಪಟ್ಟವೆಯೋ, ಕರ್ತ್ವಾ=ಕರ್ತವ್ಯಗಳಾಗಿವೆಯೋ, ತಾನಿಚ ಅವುಗಳನ್ನೂ ಕೂಡ, ಅಭಿಪಶ್ಯತಿ ನೋಡುತ್ತಾನೆ. ॥ ೧೧ ॥

ಭಾ ॥ ತತ್ರ ಸನ್ವಿಶ್ವಾನ್ಯದ್ಭುತಾನಿ ಚ ಪಶ್ಯತಿ । ಕರ್ತಾ ಚಿಕಿತ್ವಾನ್ಸ ಕೃತಕರ್ತವ್ಯಾನಿ ಚ ಪಶ್ಯತಿ ॥ ೧೧ ॥

ಅ ॥ ಆ ಪ್ರಜೆಗಳಲ್ಲಿಯೂ ಗೃಹಗಳಲ್ಲಿಯೂ ಇರುವ ಚಿಕಿತ್ವಾನ್=ಸರ್ವಕರ್ತನಾದ ವರುಣನು, ಎಲ್ಲಾ ವಸ್ತುಗಳನ್ನು ಅತ್ಯಾಶ್ಚರ್ಯಗಳನ್ನಾಗಿ ನೋಡುತ್ತಾನೆ. ಆತನು ಮಾಡಿದ್ದ ವಸ್ತುಗಳನ್ನೂ, ಮಾಡಲರ್ಹ ವಸ್ತುಗಳನ್ನೂ ನೋಡುತ್ತಾನೆ. ॥ ೧೧ ॥

ಋ ॥ (೨೮೦) ಸ ನೋ ವಿಶ್ವಾಹಾ ಸುಕ್ರತುರಾದಿತ್ಯಃ ಸುಪಥಾ ಕರತ್ ।
ಪ್ರ ಣ ಆಯೂಂಷಿ ತಾರಿಷತ್ ॥ ೧೨ ॥

ಅ ॥ ಸಃ=ಆ ಈ, ಸುಕ್ರತುಃ=ಒಳ್ಳೇ ಜ್ಞಾನವುಳ್ಳ, ಆದಿತ್ಯಃ=ಶ್ರೀ ಹರಿಯು, ವಿಶ್ವಾಹಾ=ಸಮಸ್ತ ದಿನಗಳನ್ನೂ ನಃ=ನಮಗೆ, ಸುಪಥಾ=ನಿರ್ವಿಘ್ನಗಳನ್ನಾಗಿ, ಕರತ್=ಮಾಡಲಿ. ನಃ=ನಮಗೆ, ಆಯೂಂಷಿ=ಆಯುಸ್ಸುಗಳನ್ನು, ಪ್ರತಾರಿಷತ್=ಕೊಡಲಿ. ॥ ೧೨ ॥

ಭಾ ॥ ವಿಶ್ವಾನ್ಯಹಾನಿ ನೋ ದೇವಃ ಸುಪಥಾನಿ ಕರೋತ್ವಸೌ । ದದಾತ್ವಾಯೂಂಷಿ ನೋ ನಿತ್ಯಂ ಮುಕ್ತೌ ವಾ ॥ ೧೨ ॥

ಅ ॥ ಆದಿತ್ಯ ದೇವನು ಸಮಸ್ತ ದಿನಗಳನ್ನು ನಮಗೆ ನಿರ್ವಿಘ್ನಗಳನ್ನಾಗಿ ಮಾಡಲಿ. ನಮಗೆ ಆಯುಷ್ಯಗಳನ್ನು ಕೊಡಲಿ. (ಈ ಪ್ರಾರ್ಥನೆಯು ಮುಕ್ತಿಯಲ್ಲಿ ಮುಖ್ಯವು. ಅನ್ಯತ್ರ ಉಪಚಾರವು ಎನ್ನುತ್ತಾರೆ.) ನಿತ್ಯದಲ್ಲಿಯೂ ಮುಕ್ತಿಯಲ್ಲಿಯೂ ಪೂರ್ಣಾಯುಷ್ಯವನ್ನು (ಅಂದರೆ ಮೃತಿರಹಿತವಾದ ಆಯುಷ್ಯವನ್ನು) ಕೊಡಲಿ. ॥ ೧೨ ॥

ಋ ॥ (೨೮೧) ಬಿಭ್ರದ್ದ್ರಾಪಿಂ ಹಿರಣ್ಯಯಂ ವರುಣೋ ವಸ್ತ ನಿರ್ಣಿಜಂ
ಪರಿ ಸ್ಪಶೋ ನಿಷೇದಿರೇ । ॥ ೧೩ ॥

ಅ || ವರುಣಃ=ವರುಣನು, ದ್ರಾಪಿಂ=(ದ್ರು ಗತೌ, ಆಪ್ಲ್ ವ್ಯಾಪ್ತೌ,) (ದ್ರುತಂ ಆಪ್ನೋತೀತಿದ್ರಾಪಿಃ) ಶೀಘ್ರವಾಗಿ ದೇಶಾಂತರಗಳನ್ನು ಹೊಂದುವ (ಅಂದರೆ ಅತೀ ವೇಗವಾಗಿ ತಿರುಗಾಡುವ,) ಹಿರಣ್ಯಯಂ= ಹಿತವೂ ರಮಣೀಯವೂ ಆಗಿರುವ, ಅಥವಾ ಹಿರಣ್ಮಯವಾದ, ವರ್ಣತಃ ಸ್ವರ್ಣಕ್ಕೆ ಸದೃಶವಾದ ಸುದರ್ಶನವನ್ನು, ಬಿಭ್ರತ್=ಧರಿಸಿದನು. ನಿರ್ಣಿಜಂ=(ಣಿಜರ್ ಶೌಚೇ) ಪ್ರಕ್ಷಾಳಿತವಾದ ಶುದ್ಧವಾದ ವಸ್ತ್ರವನ್ನು, ವಸ್ತ= (ವಸ ಆಚ್ಛಾದನೇ) ಉಟ್ಟುಕೊಂಡನು. ಅಥವಾ ದ್ರಾಪಿಂ=ಅತಿ ಶೀಘ್ರವಾಗಿ ತಿರುಗುತ್ತಿರುವ, ಹಿರಣ್ಮಯವಾದ ಚಕ್ರವನ್ನು, ಬಿಭ್ರತ್=(ಶತ್ರಂತ) ಧರಿಸಿರುವ ವರುಣನು ಶುದ್ಧ ವಸ್ತ್ರವನ್ನುಟ್ಟುಕೊಂಡನು. ಸ್ಪಶಃ=(ಸ್ಪಶ ಬಾಧನ ಸ್ಪರ್ಶನಯೋಃ) ಅನೇಕಾರ್ಥಾ ಹಿ ಧಾತವಃ, ಆದಕಾರಣ) ಅವಿಜ್ಞಾತಚರರಾದ, ಅಂದರೆ ಪೂರ್ವದಲ್ಲಿ ತಿಳಿಯಲ್ಪಡದಿರುವ, ಅಥವಾ ತಿಳಿಯಲ್ಪಡದಿರುವವರಾಗಿ ಸಂಚರಿಸುತ್ತಿರುವ, ದೇವತೆಗಳು, ಪರಿ=ವರುಣನ ಸುತ್ತಮುತ್ತಲೂ, ನಿಷೇದಿರೇ = ಸೇವೆಗೋಸ್ಕರ ಕುಳಿತರು. (ಪ್ರಸಿದ್ಧ ವರುಣ ಪಕ್ಷದಲ್ಲಿ) ದ್ರಾಪಿಂ = ಶೀಘ್ರವಾಗಿ ಬಂಧನಕ್ಕೆ ಸಾಧನವಾದ, ಪಾಶವನ್ನು ಬಿಭ್ರತ್ = (ವರುಣನು) ಧರಿಸಿದನು. || ೧೩ ||

ಭಾ || (೧) ಅತಿದ್ರುತ ಭ್ರಮಂ । ಹಿತಂ ಚ ರಮಣೀಯಂ ಚ ಚಕ್ರಂ ಸ್ವರ್ಣಂ ಚ ವರ್ಣತಃ || ಅಬಿಭ್ರಚ್ಚ (೨) ಸುಶಿರ್ಣಿಕ್ತಂ ಶುದ್ಧಂ ವಸ್ತ್ರಮುವಸ್ತ ಚ || (೩) ಅವಿಜ್ಞಾತಚರಾ ದೇವಾಃ ಸ್ಪಶಸ್ತಸ್ಯ ನಿಷೇದಿರೇ । ಪರಿತೋ ವರುಣಃ ಪಾಶಮಬಿಭ್ರದ್ದ್ರುತಬಂಧನಂ || ೧೩ ||

ಅ|| (೧) (ವರುಣನು) ಅತಿ ಶೀಘ್ರವಾಗಿ ತಿರುಗುತ್ತಿರುವ, ಹಿತಕರವೂ ರಮಣೀಯವೂ ಆಗಿರುವ ವರ್ಣತಃ ಸುವರ್ಣಕ್ಕೆ ಸದೃಶವಾಗಿರುವ, ಸುದರ್ಶನವನ್ನು ಧರಿಸಿದನು. (೨) ಚೆನ್ನಾಗಿ ಶೋಧಿತವಾದ, ಶುದ್ಧವಾದ ವಸ್ತ್ರವನ್ನುಟ್ಟುಕೊಂಡನು. (೩) ಸ್ಪಶಃ= ಇತರರಿಂದ ತಿಳಿಯಲ್ಪಡದಿರುವವರಾಗಿಯೇ ಸಂಚರಿಸುತ್ತಿರುವ ದೇವತೆಗಳು ಆವರುಣನ ಸುತ್ತ ಮುತ್ತಲೂ ಸೇವೆಗೋಸ್ಕರ ಕುಳಿತರು. ಪ್ರಸಿದ್ಧ ವರುಣನು ಶೀಘ್ರವಾಗಿ ಬಂಧಿಸುವುದಕ್ಕೆ ಸಾಧನವಾದ ಹಗ್ಗವನ್ನು ಧರಿಸಿದನು. || ೧೩ ||

ಋ || (೨೮೨)ನ ಯಂ ದಿಪ್ಸಂತಿ ದಿಪ್ಸವೋ ನ ದ್ರುಹ್ವಾಣೋ ಜನಾನಾಂ ।

ನ ದೇವಮಭಿಮಾತಯಃ || || ೧೪ ||

ಅ || ಯಂ=ಯಾವ ವರುಣನನ್ನು, ದಿಪ್ಸವಃ=(ದಂಭು ದಂಭೇ)ದಂಭಿಸಲಿಕ್ಕೆ ಇಚ್ಛಿಸುವ ಅಂದರೆ ನಿರೋಧಕರಾದ ವೀರರಾದ ರಾಕ್ಷಸರೂ ಕೂಡ, ನದಿಪ್ಸಂತಿ= ನಿರೋಧಿಸುವುದಿಲ್ಲವೋ, ಮತ್ತು, ಜನಾನಾಂ= ಜನರಿಗೆ, ದ್ರುಹ್ವಾಣಃ=(ದ್ರುಹಜಿಘಾಂಸಾಯಾಂ) ದ್ರೋಹಿಗಳಾದ ದೈತ್ಯರು ಯಂ=ಯಾವ ವರುಣನನ್ನು, ನ ದಿಪ್ಸಂತಿ=ಯಾವ ವರುಣನಿಗೆ ದ್ರೋಹಮಾಡುವುದಿಲ್ಲವೋ ಅಭಿಮಾತಯಃ=(ಮಾಜ ಹಿಂಸಾಯಾಂ) ರಾಕ್ಷಸರಿಂದಲೂ ದೈತ್ಯರಿಂದಲೂ ಇತರರಾದ ಶತ್ರುಗಳೂ ಕೂಡ, ಯಂದೇವಂ=ಯಾವ ವರುಣನನ್ನು, ನ ದಿಪ್ಸಂತಿ=ನಿರೋಧಿಸುವುದಿಲ್ಲವೋ ದ್ರೋಹಮಾಡುವುದಿಲ್ಲವೋ,ಸಂಹರಿಸುವುದಿಲ್ಲವೊ (ಅಂತಹ ವರುಣನು ಚಕ್ರವನ್ನು ಧರಿಸಿದನು. ಎಂದು ಪೂರ್ವ ಋಕ್ಕಿನಿಂದ ಅನ್ವಯವು ಅಥವಾ ಸಯಾಮುನಿ ಪ್ರತಿಶ್ರುಧಿ ಎಂಬ ೨ಂನೇ ಉತ್ತರ ಋಕ್ಕಿನಿಂದ ಅನ್ವಯವು.) ಅಥವಾ ಅಂತಹ ವರುಣನನ್ನು ಸುತ್ತಲೂ ಸೇವಿಸುವುದಕ್ಕಾಗಿ ಕೂತುಕೊಂಡರು. ಎಂದು ಪೂರ್ವವಾಕ್ಯದಿಂದ ಅಥವಾ ಸರ್ವಜ್ಞನನ್ನು ಕಂಡನು ಎಂದು ಉತ್ತರ ವಾಕ್ಯದಿಂದ ಸಂಬಂಧವು. || ೧ ||

ಭಾ ॥ ಸ್ತಂಭಯಂತಿ ನ ಯಂ ವೀರಾ ಸ್ತಂಭಕಾ ಅಪಿ ರಾಕ್ಷಸಾಃ । ಜನಾನಾಂ ದ್ರೋಹಿ
ಣೋ ದೈತ್ಯಾಃ ಶತ್ರವಶ್ಚಾಭಿ ಮಾತಯಃ ॥ ೧೪ ॥

ಅ ॥ (ಯಾವ ವರುಣನನ್ನು) ನಿರೋಧಕರಾದ ವೀರರಾದ ರಾಕ್ಷಸರೂ ಕೂಡ ನಿರೋಧಿಸುವುದಿಲ್ಲವೋ, ಜನರಿಗೆ ದ್ರೋಹಿಗಳಾದ ದೈತ್ಯರೂ, ಅಭಿಮಾತಯಃ=ರಾಕ್ಷಸರೂ ದೈತ್ಯರೂ ಇವರಿಂದ ಇತರರಾದ ಶತ್ರುಗಳೂ ಕೂಡ ಯಾವ ವರುಣನಿಗೆ ದ್ರೋಹಮಾಡುವುದಿಲ್ಲವೋ, (ಅಂತಹ ವರುಣನು ಚಕ್ರವನ್ನು ಧರಿಸಿದನು) ॥ ೧೪ ॥

ಋ ॥ (೨೮೩) ಉತ ಯೋ ಮಾನುಷೇಷ್ವಾ ಯಶಶ್ಚಕ್ರೇ ಅಸಾಮ್ಯಾ ।
ಅಸ್ಮಾಕಮುದರೇಷ್ವಾ ॥ ॥ ೧೫ ॥ ೧೮ ॥

ಅ ॥ ಯಃ=ಯಾವ ವರುಣನು, ಅಸಾಮಿ=(ಸಾಮಿ ಶಬ್ದವು ಸಮಶಬ್ದ ಪರ್ಯಾಯವು. ನವಿದ್ಯತೇ ಸಾಮಿ ಯಸ್ಯ. ಅಥವಾ ಸಮಸ್ಯಾತಿ ಸಮಿ. ಸಮ್ಯೇವ ಸಾಮಿ. ಅಥವಾ ಸಮಮಸ್ಯಾಸ್ತೀತಿ ಸಾಮ. ಸಾಮ್ಯೈವ ಸಾಮಿ. ನ ಸಾಮಿ ಅಸಾಮಿ, ಎಂಬ ವ್ಯುತ್ಪತ್ತಿಯಿಂದ) ಸಮವಾಗದಿರುವ, ಯಶಃ=ತನ್ನ ಯಶಸ್ಸನ್ನು, ಅಸ್ಮಾಕಂ=ನಮ್ಮ, ಉದರೇಷು=(ಉದರ ಸಾಮೀಪ್ಯವಿದ್ದುದರಿಂದ ಲಕ್ಷಣಯಾ) ಹೃದಯಗಳಲ್ಲಿ, ಆ=ಸುತ್ತಮುತ್ತಲೂ ಸಮಸ್ತ ಕಾಲದಲ್ಲಿಯೂ, ಚಕ್ರೇ=(ನಮ್ಮನ್ನು ತನ್ನ ಯಶಸ್ಸನ್ನು ತಿಳಿಯುವವರನ್ನಾಗಿ) ಮಾಡಿರುವನೋ, (ನಮ್ಮಲ್ಲಿ ಮಾತ್ರವಲ್ಲ. ಮತ್ತೆ ಇತರರೂ ಆದ) ಆ=ಚೆನ್ನಾಗಿರುವ, ಮಾನುಷೇಷು=ಮನುಷ್ಯರಲ್ಲಿಯೂ, ಆ=ಸರ್ವಕಾಲದಲ್ಲಿಯೂ ಚಕ್ರೇ=(ಅವರನ್ನು ತಿಳಿಯುವವರನ್ನಾಗಿ) ಮಾಡಿರುವನೋ, ಉತ=ಅಜ್ಞರಲ್ಲಿಯೂ ತನ್ನ ಯಶಸ್ಸನ್ನು ಪ್ರಸಿದ್ಧಿಗೊಳಿಸಿದನೆಂದಾಗುವಾಗ ದೇವತೆಗಳಲ್ಲಿ ಪ್ರಸಿದ್ಧಿಗೊಳಿಸಿದನೆಂಬುವುದು ಸುತರಾಂ ಸಿದ್ಧ. (ಅಂತಹ ವರುಣನು ಚಕ್ರವನ್ನು ಧರಿಸಿದನು ಎಂದು ೧೩ನೇ ಋಕ್ಕಿನಿಂದ ಸಂಬಂಧವು.) ॥ ೧ ॥

ಭಾ ॥ ಅಸಮಂ ಚ ಯಶಶ್ಚಕ್ರೇ ಯೋಽಸ್ಮಾಕಂ ಹೃದಯೇಷು ಚ । ಆಮಾನುಷೇಷು
(ಆಮನುಷ್ಯೇಷು) ಚಾನ್ಯೇಷು ಸಮಂತಾದಾತ್ಮನಸ್ಸದಾ ॥ ಅಜ್ಞೇಷ್ವಪಿ ಚ ಮರ್ತ್ಯೇಷು
ವ್ಯತನೋದಾತ್ಮನೋ ಯಶಃ ॥ ೧೫ ॥ ೧೮ ॥

ಅ ॥ ಯಾವ ವರುಣನು ಸಮವಾಗದಿರುವ ತನ್ನ ಯಶಸ್ಸನ್ನು ನಮ್ಮ ಹೃದಯಗಳಲ್ಲಿ ಆ=ಸರ್ವ ಕಾಲದಲ್ಲಿಯೂ ಸದಾ ಮಾಡಿರುವನೋ, (ನಮ್ಮನ್ನು ತನ್ನ ಯಶಸ್ಸನ್ನು ತಿಳಿಯುವವರನ್ನಾಗಿ ಮಾಡಿರುವನೋ.) (ನಮ್ಮಲ್ಲಿ ಮಾತ್ರವಲ್ಲ.) ಇತರರಾದ, ಚೆನ್ನಾಗಿ ಇರುವ ಮನುಷ್ಯರಲ್ಲಿಯೂ ಕೂಡ ಚೆನ್ನಾಗಿ ಮಾಡಿರುವನೋ, (ಕೈಮುತ್ಯಾರ್ಥವುಳ್ಳ ಉತಶಬ್ದದ ತಾತ್ಪರ್ಯವನ್ನು ಹೇಳುತ್ತಾರೆ.) ಅಜ್ಞರಾದ ಮನುಷ್ಯರಲ್ಲಿಯೂ ತನ್ನ ಯಶಸ್ಸನ್ನು ವಿಸ್ತಾರಗೊಳಿಸಿದನೆಂದಾದ ಮೇಲೆ ದೇವಾದಿಗಳಲ್ಲಿ ವಿಸ್ತಾರಗೊಳಿಸಿದನೆಂಬುವುದು ಕಿಮುತ ಸುತರಾಂ ಸಿದ್ಧ. ಅಸಮಂ ಚ ಎಂಬಲ್ಲಿದ್ದ ೧ನೇ ಚ ಶಬ್ದವು **ಬಿಭ್ರದ್ದ್ರಾಪಿಂ ಹಿರಣ್ಯಯಂ** ಎನ್ನುವಲ್ಲಿದ್ದ ಬಿಭ್ರತ್ ಎಂಬ ಕ್ರಿಯೆಯಿಂದ ವರುಣನಿಗೆ ಅನ್ವಯವು ಎಂದು ತೋರಿಸುತ್ತದೆ. ಮೇಲಿನ ೨ ಚ ಶಬ್ದಗಳು ನಮ್ಮ ಹೃದಯಗಳಲ್ಲಿ ಮಾತ್ರವಲ್ಲ, ಮನುಷ್ಯರಲ್ಲಿಯೂ ಕೂಡ ಎಂದು ಅನ್ಯೋನ್ಯ ಸಮುಚ್ಚಾಯಕವು. ॥೨೫॥೧೮॥

ಋ ॥ (೨೮೪) ಪರಾ ಮೇ ಯಂತಿ ಧೀತಯೋ ಗಾವೋ ನ ಗವ್ಯೂತೀರನು ।
ಇಚ್ಛಂತೀರುರುಚಕ್ಷಸಂ ॥ ೧೬ ॥

ಅ ॥ ಮೇ=ನನ್ನ, ಧೀತಯಃ= (ಧ್ಯೈ ಚಿಂತಾಯಾಂ) ಬುದ್ಧಿ ವಿಶೇಷಗಳು, ಇಚ್ಛಂತೀಃ=(ಮೋಕ್ಷವನ್ನು ಇಚ್ಛಿಸುವವುಗಳಾಗಿ, ಉರುಚಕ್ಷಸಂ= (ಚಕ್ಷಿಙ್ ವ್ಯಕ್ತಾಯಾಂ ವಾಚಿ.) ಮಹಾಜ್ಞಾನವುಳ್ಳ ಪರಮಾತ್ಮನನ್ನು ಪರಾ=ಸಮಸ್ತವನ್ನೂ ಬಿಟ್ಟು, (**ಪರಾ ವಿಮೋಕ್ಷ ಪ್ರಾಧಾನ್ಯ ಪ್ರಾತಿಲೋಮ್ಯೇಷು ಧೀಷಣೇ** ಎಂಬವಿಶ್ವ ಕೋಶದಿಂದ ವಿಮೋಕ್ಷವು ಪರಿತ್ಯಾಗ ರೂಪವಾದುದರಿಂದ ಪರಾ ಶಬ್ದವು ಪರಿತ್ಯಾಗಾರ್ಥಕವು.) ಯಂತಿ= ಹೋಗುತ್ತವೆ ಅಥವಾ ಪರಮಾತ್ಮನನ್ನೇ ಇಚ್ಛಿಸುತ್ತಾ ಹೋಗುತ್ತವೆ. (ಈ ವ್ಯಾಖ್ಯಾನವು ಏಕಾಂತ ಭಕ್ತರ ವಿಷಯಕವು. **ಏಕಾಂತಿನಾಂ ನ ಕಸ್ಯಚಿತ್। ಅರ್ಥೇ ನಾರಾಯಣೋ ದೇವಃಸರ್ವಮನ್ಯತ್ತದರ್ಥಕಂ** ಎಂದು) ಹೇಗೆಂದರೆ ಗವ್ಯೂತೀಃ=ಗೋವುಗಳ ಆಹ್ವಾನಗಳನ್ನು, ಶೃಂಗವೇಣ್ವಾದಿ ಧ್ವನಿಗಳನ್ನು, ಅನು=ಅನುಸ ರಿಸಿ, ಗಾವೋನ=ಗೋವುಗಳು ಹೇಗೆ ಹೋಗುತ್ತವೋ, ಹಾಗೆ. ॥ ೧೬ ॥

ಭಾ ॥ ಮಹಾಜ್ಞಾನಂ ಪರೇಶಾನಮಿಚ್ಛಂತ್ಯೋ ಮಮ ಧೀತಯಃ । ಸರ್ವತೋ ಯಾಂತಿ
ಯದ್ವಚ್ಚ ಗಾವಃ ಶೃಂಗಸ್ವರಾನನು ॥ ೧೬ ॥

ಅ ॥ ಹೇಗೆ ಗೋವುಗಳು ಶೃಂಗವೇಣ್ವಾದಿ ಧ್ವನಿಗಳನ್ನು ಅನುಸರಿಸಿ ಹೋಗುತ್ತವೋ, ಹಾಗೆಯೇ ನನ್ನ ಬುದ್ಧಿಗಳು ಮಹಾಜ್ಞಾನವುಳ್ಳ ಪರಮಾತ್ಮನನ್ನೇ ಇಚ್ಛಿಸುವವುಗಳಾಗಿ ಸಮಸ್ತವನ್ನು ಬಿಟ್ಟು ಪರಮಾತ್ಮನನ್ನೇ ಹೊಂದುತ್ತವೆ. ॥ ೧೬ ॥

ಋ ॥ (೨೮೫) ಸಂ ನು ವೋಚಾವಹೈ ಪುನರ್ಯತೋ ಮೇ ಮಧ್ವಾಭೃತಂ ।
ಹೋತೇವ ಕ್ಷದಸೇ ಪ್ರಿಯಂ ॥ ೧೭ ॥

ಅ ॥ (ಎಲೋ ವರುಣನೇ,) ಯತಃ=ಯಾವ ಕಾರಣದಿಂದ, (ನೀನು) ಹೋತೇವ=ಅಗ್ನಿಯಂತೆ (ಅಗ್ನಿಯು ಹೇಗೆ ಓದನಾದಿಗಳನ್ನು ಪಚನೆ ಮಾಡುತ್ತಾನೋ ಹಾಗೆಯೇ)ಮೇ=ನನ್ನದಾದ ಆ ಭೃತಂ=ಚೆನ್ನಾಗಿ ಪೂರ್ಣವಾದ, ಮಧು, ಮೋಕ್ಷದಲ್ಲಿದ್ದ ಸುಖವನ್ನು, ಕ್ಷದಸೇ=(ಕ್ಷದಿ ಪಚನೇ) ಅಭಿವ್ಯಕ್ತವಾಗುವಂತೆ ಮಾಡುತ್ತಿ. (ಯಾವ ಕಾರಣದಿಂದ) ನೀನು, ಪ್ರಿಯಂ=(ನನಗೆ ಸದಾ) ಪ್ರಿಯನೋ, (ಆ ಕಾರಣದಿಂದ) ನು=ಈಗ, ಪುನಃ= ಮತ್ತೂ ಮತ್ತೂ, (ನಮ್ಮಿಬ್ಬರ) ಸಂ ವೋಚಾವಹೈ =(ವಚ ಪರಿ ಭಾಷಣೆ)ಸಂಭಾಷಣವನ್ನು ಮಾಡುವ ॥೧೭॥

ಭಾ ॥ ಆ ಪೂರ್ಣಂ ಮಧು ಮೋಕ್ಷಸ್ಥಂ ಸುಖಂ ಪಚಸಿ ಮೇಽಗ್ನಿವತ್ । ತತ್ಸಂವೋಚಾ
ವಹೈ ಭೂಯಃ ಪ್ರಿಯಸ್ತ್ವಂ ಮಮ ಯತ್ಸದಾ ॥ ೧೭ ॥

ಅ ॥ ಅಗ್ನಿಯು ಹೇಗೆ ಓದನಾದಿಗಳನ್ನು ಪಚನೆ ಮಾಡುತ್ತಾನೋ, ಹಾಗೆಯೇ ನೀನು ನನಗೆ ಸಂಪೂರ್ಣವಾದ ಮೋಕ್ಷದಲ್ಲಿದ್ದ ಸುಖ ರೂಪವಾದ ಮಧುವನ್ನು ವ್ಯಕ್ತೀಕರಿಸುತ್ತಿ. ಯಾವ ಕಾರಣದಿಂದ ನೀನು ನನಗೆ ಸದಾ ಪ್ರಿಯನೋ, ಆ ಕಾರಣದಿಂದ ಮತ್ತೂ ಮತ್ತೂ ಸಂಭಾಷಣ ಮಾಡುವ ॥ ೧೭ ॥

ಋ ॥ (೨೮೬) ದರ್ಶಂ ನು ವಿಶ್ವದರ್ಶತಂ ದರ್ಶಂ ರಥಮಧಿಕ್ಷಮಿ ।
ಏತಾ ಜುಷತ ಮೇ ಗಿರಃ ॥ ೧೮ ॥

ಅ ॥ (ನಾನು)ನು=ಈಗ, ವಿಶ್ವ ದರ್ಶತಂ=ಸಮಸ್ತ ಜ್ಞಾನದಿಂದ ವ್ಯಾಪ್ತನಾದ, ಸರ್ವಜ್ಞನಾದ, ಆ ವರುಣನನ್ನು, ದರ್ಶಂ=ನೋಡಿದೆನು. ಅಧಿಕ್ಷಮಿ=(ಧರಾ ವಸುಮತೀ ಧಾತ್ರೀ ಕ್ಷಮಾ ವಿಶ್ವಂಭರಾ, ವನಿಃ ಎಂಬ ಧನಂಜಯೋಕ್ತಿಯಿಂದ ಕ್ಷಮಾಂ ಅಧಿಕೃತ್ಯ ವಿದ್ಯಮಾನಂ)ಭೂಮಿಯನ್ನಧಿಕರಿಸಿ ಇರತಕ್ಕ,(ಅಥವಾ ಕ್ಷಮಾಯಾಮಿತಿ ಅಧಿಕ್ಷಮಿ) ಭೂಮಿಯಲ್ಲಿರತಕ್ಕ, ರಥಂ=ಆ ವರುಣ ರಥವನ್ನು ಕೂಡ, ದರ್ಶಂ=ನೋಡಿದೆನು. (ಹೀಗೆ ದೃಷ್ಟನಾದ ವರುಣನು) ಏತಾಃ= ವೇದ ರೂಪಗಳಾದ, ಮೇ= ನನ್ನ ಗಿರಃ=ಮಾತುಗಳನ್ನು ಜುಷತ— (ಜುಷೀ ಪ್ರೀತಿ ಸೇವನಯೋಃ) ಸೇವಿಸಲಿ. ಕೇಳಲಿ ॥ ೧೮ ॥

ಭಾ ॥ ಅದರ್ಶಂ ತಂಚ ಸರ್ವಜ್ಞಂ ತದ್ರಥಂ ಚ ಭುವಿಸ್ಥಿತಂ। ಸುಗಿರೋ ಮೇಜುಷತ ಚ ॥ ೧೮ ॥

ಅ ॥ ಸರ್ವಜ್ಞನಾದ ವರುಣನನ್ನು, ಭೂಮಿಯಲ್ಲಿರತಕ್ಕ ಆ ವರುಣನ ರಥವನ್ನು,ನೋಡಿದೆನು. ನನ್ನ ವೇದ ರೂಪಗಳಾದ ಸ್ತುತಿಗಳನ್ನು ಕೇಳಲಿ ॥೧೮॥

ಋ ॥ (೨೮೭) ಇಮಂ ಮೇ ವರುಣ ಶ್ರುಧೀಹವಮದ್ಯಾ ಚ ಮೃಳಯ।
ತ್ವಾಮವಸ್ಯುರಾಚಕೇ ॥ ೧೯ ॥

ಅ ॥ ವರುಣ=ವರುಣನೇ, ಮೇ=ನನ್ನ, ಇಮಂ ಹವಂ=(ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ) ಈ ಆಹ್ವಾನವನ್ನು, ಶ್ರುಧಿ=ಕೇಳು. ಅದ್ಯ ಚ=ಈಗಲೇ, ಮೃಳಯ=(ನನ್ನನ್ನು) ಸುಖಗೊಳಿಸು. ರಕ್ಷಿಸು. (ಏಕೆಂದರೆ) ಅವಸ್ಯುಃ=ರಕ್ಷಣೆಯನ್ನು ಇಚ್ಛಿಸುವ ನಾನು, ತ್ವಾಂ=ನಿನ್ನನ್ನು ಆಚಕೇ=(ಚಕ ತೃಪ್ತೌ ಎನುವುದಕ್ಕೆ ಅನೇಕಾರ್ಥವಿರುವುದರಿಂದ ಪ್ರಕೃತ ದರ್ಶನಾರ್ಥತ್ವವು.) ಚೆನ್ನಾಗಿ ಭಕ್ತಿಪೂರ್ವಕವಾಗಿ ನೋಡುವೆನು. ॥ ೧೯ ॥

ಭಾ ॥ ತ್ವಾಂ ವನೇಪ್ಸುರಹಂ ಚಕೇ। ಪಶ್ಯೇಯಂ ॥ ೧೯ ॥

ಅ ॥ ರಕ್ಷಣೆಯನ್ನಿಚ್ಛಿಸುವ ನಾನು ನಿನ್ನನ್ನು ಚಕೇ=ನೋಡುವೆನು ॥ ೧೯ ॥

ಋ ॥(೨೮೮)ತ್ವಂ ವಿಶ್ವಸ್ಯ ಮೇಧಿರ ದಿವಶ್ಚ ಗ್ಮಶ್ಚ ರಾಜಸಿ।
ಸಯಾಮನಿ ಪ್ರತಿ ಶ್ರುಧಿ ॥ ೨೦ ॥

ಅ ॥ ಮೇಧಿರ=ವಿಶೇಷ ಪ್ರತಿಭೆಯುಳ್ಳವನೇ, (ಯಃ) ತ್ವಂ=(ಏವ)=ಯಾವ ನೀನೇ, ವಿಶ್ವಸ್ಯ=ಸಮಸ್ತ ಜಗತ್ತಿಗೆ (ಅದರದ್ದೇ ವಿವರಣವು.) ದಿವಶ್ಚ=ಸ್ವರ್ಗಲೋಕಕ್ಕೂ, ಗ್ಮಶ್ಚ=ಭೂಲೋಕಕ್ಕೂ ಕೂಡ, ರಾಜಸಿ= (ರಾಜೃ ದೀಪ್ತೌ),ರಾಜನಾಗಿರುತ್ತಿಯೋ,ಸತ್ವಂ=ಅಂತಹ ನೀನು,ಯಾಮನಿ=(ಯಾ ಪ್ರಾಪಣೇ. ಯಾಧಾತೋಃ ಮನಿನ್ ಪ್ರತ್ಯಯವು) ನಮ್ಮ ಆಪತ್ಕಾಲದಲ್ಲಿಯೇ,ಪ್ರತಿ ಶ್ರುಧಿ=(ವಿಜ್ಞಾಪನೆಯನ್ನು)ಕೇಳು. ಅಥವಾ ನಿನ್ನನ್ನು ಸಂಸಾರದಿಂದ ಬಿಡುಗಡೆ ಮಾಡುತ್ತೇನೆಂದು ಪ್ರತಿಜ್ಞಾ ಮಾಡು. ॥ ೨೦ ॥

ಭಾ ॥ ತ್ವಂ ಚ ವಿಶ್ವಸ್ಯ ರಾಜಾ ಭವಸಿ ಮೇಧಿರಃ। ಮೇಧಾವಾನ್ ಗ್ಮಃ ಪೃಥಿವ್ಯಾಶ್ಚ ಸಕಾಲೇ ಚ ಪ್ರತಿಶ್ರುಧಿ ॥ ೨೦ ॥

ಅ ॥ ಮೇಧಿರಃ=ಪ್ರತಿಭೆಯುಳ್ಳ ವರುಣನೇ ನೀನೇ ಸಮಸ್ತ ಜಗತ್ತಿಗೂ. ಅಂದರೆ ಗ್ಮಃ=ಭೂಲೋಕಕ್ಕೂ ಕೂಡ, ರಾಜನಾಗಿರುತ್ತಿ. ನಮ್ಮ ಆಪತ್ಕಾಲದಲ್ಲಿಯೇ ವಿಜ್ಞಾಪನೆಯನ್ನು ಕೇಳು ॥ ೨೦

ಋ ॥ (೨೪೯) ಉದುತ್ತಮಂ ಮುಮುಗ್ಧಿ ನೋ ವಿಪಾಶಂ ಮಧ್ಯಮಂ ಚೃತ।

ಅವಾಧಮಾನಿ ಜೀವಸೇ ॥ ೨೧ ॥ ೧೯ ॥ ೨೫ ॥

ಅ ॥ (ಎಲೋ ವರುಣನೇ.) (ಹೀಗೆ ವಿಜ್ಞಾಪಿಸಿಕೊಳ್ಳಲ್ಪಟ್ಟ ನೀನು) ನಃ=ನಮ್ಮ ಉತ್ತಮಂ ಪಾಶಂ=ಸತ್ವ ಗುಣಾಖ್ಯ ಪಾಶವನ್ನು, ಉತ್=ಚೆನ್ನಾಗಿ, ಮುಮುಗ್ಧಿ=(ಮುಚ್ಛ ಮೋಚನೇ) ಮಿತ್ರರಿಗೆ ಕೊಟ್ಟು ಬಿಡಿಸು. ಮಧ್ಯಮಂಚ=ರಜೋ ಗುಣಾತ್ಮಕ ಪಾಶವನ್ನು ವಿಚೃತ=(ಚೃತೀ ಹಿಂಸಾ ಗ್ರಥನಯೋಃ) ಚೆನ್ನಾಗಿ ಛೇದಿಸು. (ಉದಾಸೀನರಿಗೆ ಕೊಟ್ಟು ನಮ್ಮಿಂದ ಬಿಡಿಸು. ಅಧಮಾನಿಚ=ತಮೋ ವೃತ್ತಿರೂಪಗಳಾದ ಅಧಮ ಬಂಧನಗಳನ್ನು, ಜೀವಸೇ=(ಜೀವ ಪ್ರಾಣಧಾರಣೇ) ಜೀವಸುವುದಕ್ಕಾಗಿ, ಮುಕ್ತಿಯಾಗುವುದಕ್ಕಾಗಿ, ಅವಚೃತ=ದ್ವೇಷಿಗಳಿಗೆ ಕೊಟ್ಟು ಬಿಡಿಸು. ಪ್ರಸಿದ್ಧ 3 ಪಾಶಗಳನ್ನು ಬಿಡಿಸಬೇಕೆಂಬ ಪ್ರಾರ್ಥನೆಯಾದರೂ ಸ್ಪಷ್ಟವೇ.) ॥ ೨೧ ॥

ಭಾ ॥ ಸ ತ್ವಂ ತ್ರಿಗುಣಪಾಶಾನ್ನೋ ಮುಮುಗ್ಧಿ ಛಿಂಧಿ ಚಾಂಜಸಾ ॥ ೨೧ ॥ ೧೯ ॥ ೫ ॥

ಅ ॥ ಹೀಗೆ ವಿಜ್ಞಾಪಿಸಿಕೊಳ್ಳಲ್ಪಟ್ಟ ನೀನು ನಮ್ಮ ಸತ್ವ ರಜಸ್ತಮ ಆತ್ಮಕ ಪಾಶಗಳನ್ನು ಬಿಡಿಸು. ಮತ್ತು ಚೆನ್ನಾಗಿ ಛೇದಿಸು. ॥ ೨೧ ॥ ೧೯ ॥ ೨೫ ॥

ಅವ ॥ ೨೬ನೇ ಸೂಕ್ತವು. ೧೦ ಋಕ್ಕು. ೨ ವರ್ಗ. ಅಗ್ನಿದೇವತಾಕವು. ಗಾಯತ್ರ ಸೂಕ್ತವು.

ಋ ॥ (೨೫೦) ವಸಿಷ್ವಾಹಿ ಮಿಯೇಧ್ಯ ವಸ್ತ್ರಾಣ್ಯೂರ್ಜಾಂ ಪತೇ ।

ಸೇಮಂ ನೋ ಅಧ್ವರಂ ಯಜ ॥ ೧ ॥

ಅ ॥ ಮಿಯೇಧ್ಯ=ಸದಾ ಪವಿತ್ರನಾದ, ಊರ್ಜಾಂ= (ಊರ್ಜಬಲ ಪ್ರಾಣನಯೋಃ) ಬಲಾದಿಗಳಿಗೆ ಮುಖ್ಯ ಕಾರಣಗಳಾದ ಭೋಗ್ಯ ಅನ್ನಗಳಿಗೆ, ಅಥವಾ ಬಲಾದಿಗಳುಳ್ಳ ಜನರಿಗೆ, ಪತೇ=ಸರ್ವದಾ ಸ್ವಾಮಿಯಾದ ಶ್ರೀಹರಿಯೇ, (ಅಗ್ನಿಯಲ್ಲಿರತಕ್ಕ ರೂಪದಿಂದ ಸಮಸ್ತ ದೇವತೆಗಳ ಪೂಜೆಗೋಸ್ಕರ ಸನ್ನದ್ಧನಾದ ನೀನು) ವಸ್ತ್ರಾಣಿ=ಉತ್ತಮಗಳಾದ ವಸ್ತ್ರಗಳನ್ನು, ವಸಿಷ್ವ=(ವಸ ಆಚ್ಛಾದನೇ.) ಉಟ್ಟುಕೊಳ್ಳು. (ನಿನ್ನನ್ನು) (ಆಭರಣಗಳಿಂದಲೂ ಅಲಂಕರಿಸಿಕೊಳ್ಳು.) ಹಿ=ಪ್ರಸಿದ್ಧ. ಸಃ=ಹೀಗೆ ಅತಿಶಯವಾಗಿ ಸಂತೋಷವನ್ನು ಮಾಡ ಶಕ್ಯ ನೀನು, ನಃ=ನಮ್ಮ, ಇಮಂ ಅಧ್ವರಂ=ಸ್ವರ್ಗಮಾರ್ಗದಲ್ಲಿ, ಅಥವಾ ಜ್ಞಾನ ಮಾರ್ಗದಲ್ಲಿ ಆಸಕ್ತವಾದ, ಯಜ್ಞವನ್ನು, ಯಜ= ಕೊಡು. (ನಿನ್ನ ಉದ್ದಿಶ್ಯ ಮಾಡಿಕೊಳ್ಳು.) ॥ ೧ ॥

ಭಾ ॥ (೧)ಅಥ ಸ್ತೌತ್ಯಗ್ನಿಗಂ ವಿಷ್ಣುಮಗ್ನಿಮುಖ್ಯಗ್ನಿಗೋಚರೈಃ। ವಚಸ್ಯೈಃ(೨)ಸರ್ವದೇವಾನಾಂ ಪೂಜಾಯೈ ಪ್ರೋದ್ಯತೋ ಭವಾನ್ । ವಸಿಷ್ವೋತ್ತಮ ವಸ್ತ್ರಾಣಿ (೩) ಭೂಷಣೈರಪ್ಯಲಂಕುರು ॥ ಊರ್ಜಾನ್ನತ್ಸಮಸ್ತ್ಯಸ್ಮದೀಯಂ ಮಖಂ ಯಜ । ನಿತ್ಯ

ಮೇಧ್ಯ ಹರೇ ದೇವ ಭೋಗ್ಯಾನ್ನಾನಾಂ ಸದಾ ಪತೇ। ಊರ್ಜಿತಾನಾಂ ಜನಾನಾಂ ವಾ (೪) ಸ್ವಸ್ಮಿನ್ನೋ ಅಧ್ವರಂ ಯಜ॥ (೫) ರಮಯತ್ಯಧ್ವನಿ ಶುಭೇ ಯೇನ ತೇನಾಧ್ವರೋ ಮಖಃ ॥ ೧ ॥

ಅ ॥ (ವಸಿಷ್ಠ ಎನ್ನುವುದು ೧೦ ಋಕ್ಕುಗಳುಳ್ಳ ಸೂಕ್ತವು. ಅಶ್ವಂನ ಎನ್ನುವುದು ೧೩ ಋಕ್ಕುಗಳುಳ್ಳದ್ದು. ಅದರಲ್ಲಿ ಅಂತಿಮವಾದುದು ದೈವೀ ದೇವತಾಕವು. ಅದನ್ನು ಬಿಟ್ಟು ೨೨ನೆದ್ದಕ್ಕೆ ದೇವತೆಯನ್ನು ಹೇಳುತ್ತಾರೆ.) ಆ ಮೇಲೆ ಅಗ್ನಿಯಲ್ಲಿರತಕ್ಕ ಶ್ರೀ ವಿಷ್ಣುವನ್ನೂ ಅಗ್ನಿಯನ್ನೂ ಕೂಡ,ಅಗ್ನಿಗೆ ಯೋಗ್ಯಗಳಾದ ವಚನಗಳಿಂದ ಸ್ತುತಿಸುತ್ತಾರೆ. (೨) ಅಗ್ನಿಯಲ್ಲಿರತಕ್ಕ ರೂಪದಿಂದ ಸಮಸ್ತ ದೇವತೆಗಳ ಪೂಜೆಗೋಸ್ಕರ ಸನ್ನದ್ಧನಾದ ನೀನು ಉತ್ತಮ ವಸ್ತ್ರಗಳನ್ನು ಉಟ್ಟುಕೊಳ್ಳು. ಅಥವಾ ಸಮಸ್ತ ದೇವತೆಗಳ ಪೂಜೆಗೋಸ್ಕರ ಸನ್ನದ್ಧನಾದ ಶುನಶ್ಶೇಪನು ಅಗ್ನಿನಾಮಕ ಶ್ರೀ ಹರಿಯನ್ನು ಸ್ತುತಿಸುತ್ತಾನೆ. (೩) ಸದಾ ಪವಿತ್ರನಾದ, ಅಥವಾ ಯಜ್ಞದಲ್ಲಿ ಅಭಿವ್ಯಕ್ತನಾದ, ಬಲಾದಿಗಳಿಗೆ ಮುಖ್ಯಕಾರಣಗಳಾದ ಭೋಗ್ಯಗಳಾದ ವಿಶಿಷ್ಟ ಅನ್ನಗಳಿಗೆ, ಅಥವಾ ಬಲಾದಿಗಳುಳ್ಳ ಜನರಿಗೆ ಸದಾ ಸ್ವಾಮಿಯಾಗಿಯೇ ಇರುವ, ಕ್ರೀಡಾದಿ ಗುಣ ವಿಶಿಷ್ಟನಾದ ಶ್ರೀ ಹರಿಯೇ, ಅಗ್ನಿಯಲ್ಲಿರತಕ್ಕ ರೂಪದಿಂದ ಸಮಸ್ತ ದೇವತೆಗಳ ಪೂಜೆಗೆ ಸನ್ನದ್ಧನಾದ ನೀನು ವಸ್ತ್ರಗಳನ್ನು ಉಟ್ಟುಕೊಳ್ಳು, (ಪ್ರಾರ್ಥನೆಯಿಲ್ಲದೇನೇ ವಸ್ತ್ರಗಳನ್ನುಟ್ಟು ಕೊಳ್ಳುವುದು ಸಿದ್ಧವೆಂದರೆ) ಉತ್ತಮ ವಸ್ತ್ರಗಳನ್ನುಟ್ಟುಕೊಂಡ ತನ್ನನ್ನು ಆಭರಣಗಳಿಂದಲೂ ಅಲಂಕರಿಸಿಕೊಳ್ಳು. ಹೀಗೆ ಅತ್ಯಂತ ಸಂತೋಷವನ್ನು ಮಾಡತಕ್ಕ ನೀನು ನಮ್ಮ ಈ ಯಜ್ಞವನ್ನು ಕೊಡು. (ಯಜ್ಞಾಂಗ ಭೂತಚರುಪುರೋಡಾಶಾದಿಗಳನ್ನೂ ಕೊಡು.) (೪) (ಚತುರ್ಥಿ ವಿಭಕ್ತಿಯನ್ನೂ ಹೇಳದಿದ್ದುದರಿಂದ ತನ್ನ ವಾಕ್ಯವನ್ನೇ ವಿವರಿಸುತ್ತಾರೆ.) (ಚತುರ್ಥಿಗೆ ಅಧಿಕರಣತ್ವವನ್ನು ವಿವಕ್ಷಾ ಮಾಡಿಕೊಂಡು) ತನ್ನಲ್ಲಿಯೇ ನಾವು ಮಾಡತಕ್ಕ ಯಜ್ಞವನ್ನು ಸಮರ್ಪಿಸಿಕೊಂಡು (ಅಂದರೆ ಯಜ್ಞಕ್ಕೆ ಅಂಗಭೂತಗಳಾದ ಚರುಪುರೋಡಾಶಾದಿಗಳನ್ನು ಕೊಡು.) (೫) ಯಜ್ಞದಲ್ಲಿ ಅಧ್ವರ ಶಬ್ದವನ್ನು ನಿರ್ವಚನ ಮಾಡುತ್ತಾರೆ.) ಯಾವ ಯಾಗದಿಂದ ಶುಭನಾದ ಸ್ವರ್ಗಾದಿ ಮಾರ್ಗದಲ್ಲಿ ಅಥವಾ ಜ್ಞಾನ ಮಾರ್ಗದಲ್ಲಿ ರಮಿಸುತ್ತಾರೋ, ಆದ ಕಾರಣ ಯಾಗವು ಅಧ್ವರವೆನಿಸುತ್ತದೆ. ॥ ೧ ॥

ಋ ॥ (೨೯೧) ನಿ ನೋ ಹೋತಾ ವರೇಣ್ಯಃ ಸದಾ ಯವಿಷ್ಠ ಮನ್ಮಭಿಃ।
ಅಗ್ನೇ ದಿವಿತ್ಮತಾ ವಚಃ ॥ ೨ ॥

ಅ ॥ ಯವಿಷ್ಠ=ಚಿಕ್ಕವನಾದ, ಅಗ್ನೇ=ಎಲೋ ಅಗ್ನಿಯೇ, ಹೋತಾ=ಹೋತೃವಿನಲ್ಲಿರತಕ್ಕ, ಹೋತೃನಾಮಕನಾದ, ವರೇಣ್ಯಃ=ಭಜಿಸಲರ್ಹನಾದ ನೀನು, ನಃ=ನಮ್ಮದ್ದಾದ,ವಚಃ=ಮಾತನ್ನು, ಮನ್ಮಭಿಃ=(ಮನ ಜ್ಞಾನೇ) ಬುದ್ಧಿ ವೃತ್ತಿಗಳಿಂದ ಕೂಡಿಕೊಂಡು, ದಿವಿತ್ಮತಾ=ಸ್ವರ್ಗದಲ್ಲಿರತಕ್ಕ ಸಮಸ್ತ ದೇವತೆಗಳಲ್ಲಿ ವ್ಯಾಪ್ತನಾಗಿದ್ದುದರಿಂದ, (ಸಮಸ್ತ ದೇವತಾ ವಿಷಯಕವಾಗಿ) ನಿ=ಅತ್ಯಂತವಾಗಿ, ಸದಾ ಯಾವಾಗಲೂ, (ಪ್ರವರ್ತಿಸು) ॥ ೨ ॥

ಭಾ ॥ (೧) ವಚೋ ನೊ ನಿನಯಾತ್ಯಂತಂ ದಿವಿ ವ್ಯಾಪ್ತತಯಾ ಸದಾ। ಅಶೇಷದೇವಗತ್ಸೇನ ಮನ್ಮಭಿರ್ಮತಿಭಿಸ್ಸಹ ॥ (೩) ಅವನೋ ದಶದೇವೇಷು ವಹ್ನಿರ್ವಿಷ್ಣುಸ್ತು ತತ್ಸ್ಥಿತಃ ॥ ೨ ॥

ಅ ॥ (೧) ಎಲೋ ಅಗ್ನಿಯೇ, ನೀನು ನಮ್ಮ ಮಾತನ್ನು ಬುದ್ಧಿ ವೃತ್ತಿಗಳಿಂದೊಡಗೂಡಿ (ಮನ್ಯತೇ ಜ್ಞಾಯತೇ ಅಪರೋಕ್ಷೀ ಕ್ರಿಯತೇ ಯಾಭಿಃ ಬುದ್ಧಿವೃತ್ತಿಭಿಃ ಎಂಬ ವ್ಯುತ್ಪತ್ತಿಯಿಂದ) ಯಾವಾಗಲೂ ಸ್ವರ್ಗದಲ್ಲಿರತಕ್ಕ ದೇವತೆಗಳಲ್ಲಿ ವ್ಯಾಪಿಸಿಕೊಂಡಿರುವುದರಿಂದ ಅಂದರೆ ಸಮಸ್ತ ದೇವತಾ ವಿಷಯಪಕವಾಗಿ ಅತ್ಯಂತವಾಗಿ ಪ್ರವೃತ್ತಿಮಾಡು. (೨) (ಅಗ್ನಿಯು ಯವಿಷ್ಠನು ಹೇಗೆ ಎಂದರೆ) **ಉಷಾಃ ಸ್ವಾಹಾ ಚ ಪರ್ಜನ್ಯೋ ಮಿತ್ರೋಽಗ್ನಿರ್ವರು ಣೋ ವಿಧುಃ । ಪ್ರವಹೋಽನಿರುದ್ಧ ಇಂದ್ರೋವೋ ರುದ್ರೋ ವಾಣೀ ಚ ಮಾರುತಃ ।** ಎಂದು ಹೇಳಿದ ವಾಯು ಭಾರತೀ ಮೊದಲಾದ ೧೦ ದೇವತೆಗಳಲ್ಲಿ ಅಗ್ನಿಯು ಅಧಮನು. (ಅದ ಕಾರಣ ಯವಿಷ್ಠನು.) (ಶ್ರೀ ವಿಷ್ಣುವು ಹೇಗೆ ಯವಿಷ್ಠನೆನ್ನಿಸುವನು ಎಂದರೆ) ಶ್ರೀವಿಷ್ಣುವು ಯವಿಷ್ಠನಾದ ಅಗ್ನಿಯಲ್ಲಿ ನಿಯಾಮಕನಾಗಿದ್ದುದರಿಂದಲೂ ಅಗ್ನಿಯಲ್ಲಿರತಕ್ಕ ಯವಿಷ್ಠತ್ವವು ಶ್ರೀವಿಷ್ಣುವಿನ ಅಧೀನವಾಗಿರುವುದರಿಂದಲೂ ಶ್ರೀ ವಿಷ್ಣುವು ಯವಿಷ್ಠನೆನಿಸುತ್ತಾನೆ ॥ ೨ ॥

ಋ ॥ (೨೯೨) ಆ ಹಿ ಷ್ಮಾ ಸೂನವೇ ಪಿತಾಽಽಪಿರ್ಯಜತ್ಯಾಪಯೇ। ಸಖಾ ಸಖ್ಯೇ ವರೇಣ್ಯಃ ॥ ॥ ೨ ॥

ಅ ॥ ವರೇಣ್ಯಃ= ಶ್ರೇಷ್ಠನಾದ, ಪಿತಾ= (ನನ್ನ) ತಂದೆಯಾದ (ಈ ಅಗ್ನಿಯು) ಸೂನವೇ ಪುತ್ರನಾದ (ನನಗಾಗಿ) ಅಥವಾ. ಸಖಾ (ನನ್ನ) ಸಖಿಯಾದ (ಈ ಅಗ್ನಿಯು ಸಖ್ಯೇ=ಸಖಿಯಾದ ನನಗೋಸ್ಕರ ಆ ಯಜತಿ ಹಿಸ್ಮ=ಅಗ್ನಿಯು ನನಗೆ ಅಭೀಷ್ಟಗಳನ್ನು ಹೊಂದಿಸಿ ಕೊಡುವುದಕ್ಕಾಗಿ ನನ್ನಿಂದ ದೇವತೆಗಳನ್ನು ಕೂಡಿಸಿದನು. (ನನ್ನೊಡನೆ ಇರುವಂತೆ ದೇವತೆಗಳನ್ನು ಮಾಡಿದನು) ಅಥವಾ ಆಪಿಃ-(ಆ ಪ್ಲೃ ವ್ಯಾಪೌ) ಪ್ರಾಪ್ಯನಾದ, (ನನಗೆ ಸ್ವಾಮಿಯಾದ) (ಈ ಅಗ್ನಿಯು ಆಪಯೇ=(ಭೃತ್ಯನಾಗಿರುವುದರಿಂದ) ಹೊಂದತಕ್ಕ (ನನಗೋಸ್ಕರ) ಆ ಯಜತಿ ಹಿಸ್ಮ=ಅಗ್ನಿಯು ನನಗೆ ಅಭೀಷ್ಟನನ್ನು ಹೊಂದಿಸಿಕೊಡುವುದಕ್ಕಾಗಿ ನನ್ನೊಡನೆ ದೇವತೆಗಳನ್ನು ಇರುವಂತೆ ಮಾಡಿದನು. (ಇದರಿಂದ ಜೀವೇಶ್ವರರಿಗೆ ನಾನಾ ವಿಧವಾದ ಸಂಬಂಧವು ಉಕ್ತವಾಯ್ತು.) ॥ ೩ ॥

ಭಾ ॥ ಸಖ್ಯೇ ಚ ಸೂನವೇ ಮಹ್ಯಮಾಯಜತ್ಯೇಷ ದೇವತಾಃ । ಆಪಿಃ ಪ್ರಾಪ್ಯೋ ಮಮ ಸ್ವಾಮೀ ಭೃತ್ಯತ್ವಾನ್ಮಹ್ಯಮಾಪಯೇ ॥ ೩ ॥

ಅ ॥ ಈ ಅಗ್ನಿಯು ಪುತ್ರನಾದ ನನಗಾಗಿ, ಅಥವಾ ಸಖಿಯಾದ ನನಗಾಗಿ, ಅಥವಾ ಆಪಿಃ= ಪ್ರಾಪ್ಯನಾದ, ಅಂದರೆ ನನಗೆ ಸ್ವಾಮಿಯಾದ, ಈ ಅಗ್ನಿಯು, ಭೃತ್ಯನಾಗಿರುವುದರಿಂದ ಹೊಂದತಕ್ಕ ನನಗೋಸ್ಕರ (ನನ್ನ ಅಭೀಷ್ಟ ಸಿದ್ಧಿಗಾಗಿ) ದೇವತೆಗಳನ್ನು ಹೊಂದಿಸಿಕೊಡುತ್ತಾನೆ. ॥ ೩ ॥

ಋ ॥ (೨೯೩) ಆ ನೋ ಬರ್ಹೀ ರಿಶಾದಸೋ ವರುಣೋ ಮಿತ್ರೋ ಅರ್ಯಮಾ । ಸೀದಂತು ಮನುಷೋ ಯಥಾ ॥ ೪ ॥

ಅ ॥ (ಎಲೋ ಅಗ್ನಿಯೇ) ವರುಣಃ=ವರುಣನೂ, ಮಿತ್ರಃ= ಮಿತ್ರನು, ಅರ್ಯಮಾ= ಸೂರ್ಯನು ಇವರೇ ಮೊದಲಾದ ರಿಶಾದಸಃ =ಹೆಚ್ಚು ಸುಖವುಳ್ಳ ದೇವತೆಗಳು, ನಃ=ನಮ್ಮ ಬರ್ಹಿಃ=ಯಜ್ಞವನ್ನು ಕುರಿತು, ಆ= ಬಂದು, ಮನುಷೋ ಯಥಾ =ಮನುಷ್ಯರು ಹೇಗೆ ಪ್ರತ್ಯಕ್ಷರಾಗುತ್ತಾರೋ ಹಾಗೆಯೇ ಪ್ರತ್ಯಕ್ಷೀ ಭೂತರಾಗಿ, ಸೀದಂತು (ಷದ್ಲೃ ವಿಶರಣ ಗತ್ಯವಸಾದನೇಷು) ಕೂತು ಕೊಳ್ಳಲಿ ॥ ೪ ॥

ಋ ॥ (೨೯೪)ಪೂರ್ವ್ಯ ಹೋತರಸ್ಯ ನೋ ಮಂದಸ್ವ ಸಖ್ಯಸ್ಯ ಚ ।
ಇಮಾ ಉಷುಶ್ರುಧೀ ಗಿರಃ ॥ ॥ ೫ ॥ ೧೦ ॥

ಅ ॥ ಪೂರ್ವ್ಯ=ಪೂರ್ವ ಕಾಲದಲ್ಲಿಯೂ ಇರುವ, ಹೋತಃ=ಹೋತನೆನಿಸಿದ ಎಲೋ ಅಗ್ನಿಯೇ, ಅಸ್ಯ ಹೀಗೆ ಸ್ತುತಿಸುವ, ಸಖ್ಯಸ್ಯ ಚ=ಸುಖಿಯೂ ಆದ, ನಃ=ನನಗಾಗಿ, ಮಂದಸ್ವ=(ಮದೀಹರ್ಷೇ) ಸುಖವನ್ನು ಮಾಡು. ಅಥವಾ ಈ ಸಖಿಯಾದ ನನ್ನನ್ನು,ಮಂದಸ್ವ=ಸಂತೋಷಗೊಳಿಸು. ಅಥವಾ ನನಗೆ ಪೂಜ್ಯರಾದ ಇಂದ್ರಿಯಾಭಿಮಾನಿಗಳಾಗಿ ಉಪಕಾರಿಗಳಾದ ದೇವತೆಗಳನ್ನು,) ಮಂದಸ್ವ=ಸಂತೋಷಗೊಳಿಸು. ಇಮಾಃ=ಈ ನನ್ನದ್ದಾದ, ಗಿರಶ್ಚ=ಪ್ರಾರ್ಥನಾರೂಪಗಳಾದ ಮಾತುಗಳನ್ನು ಕೂಡ, ಸುಶ್ರುಧಿ ಉ =ಚೆನ್ನಾಗಿ, ನಿಶ್ಚಯವಾಗಿ ಕೇಳು. ॥ ೫ ॥

ಭಾ ॥ ಅಸ್ಯ ಮೇಽರ್ಥೇ ಕುರು ಮದಂ ಸ್ವಾತಂತ್ರ್ಯನ್ಮಾದಯಸ್ವ ವಾ ॥ ೫ ॥ ೧೦ ॥

ಅ ॥ ಹೀಗೆ ಸ್ತುತಿಸುವ ಮತ್ತು ಸಖಿಯೂ ಆದ ನನಗೋಸ್ಕರ, ಸಂತೋಷವನ್ನುಂಟು ಮಾಡು. (ಮಂದಸ್ವ ಎನ್ನುವುದನ್ನು ರೀತ್ಯಂತರದಿಂದಲೂ ವ್ಯಾಖ್ಯಾನ ಮಾಡುತ್ತಾರೆ-) ಸ್ವಾತಂತ್ರ್ಯರೂಪ ಕಾರಣದಿಂದ ಲುಪ್ತವಾದ ಣಿಚ್ ಉಳ್ಳ ಶಬ್ದವು ಪ್ರಯುಕ್ತವಾಗುತ್ತದೆ. ಅಂದರೆ ಣಿಚ್ ಅಂತರ್ಣೀತವಾಗಿ ಮಂದಸ್ವ ಎನ್ನುವುದಕ್ಕೆ ಮಾದಯಸ್ವ ಎಂದರ್ಥವಾಗುತ್ತದೆ. ಏವಂ ಚ ಈ ಸಖಿಯಾದ ನನ್ನನ್ನು ಅಥವಾ ಇಂದ್ರಿಯಾಭಿಮಾನಿಗಳಾಗಿ ಉಪಕಾರಿಗಳಾದ ದೇವತೆಗಳನ್ನು ಸಂತೋಷಗೊಳಿಸು ॥ ೫ ॥ ೧೦ ॥

ಋ ॥ (೨೯೫) ಯಚ್ಚಿದ್ಧಿ ಶಶ್ವತಾ ತನಾ ದೇವಂ ದೇವಂ ಯಜಾಮಹೇ ।
ತ್ವೇ ಇದ್ಧೂಯತೇ ಹವಿಃ ॥ ೬ ॥

ಅ ॥ ಶಶ್ವತಾ= ಸಮಸ್ತ ಕಾಲಗಳಲ್ಲಿಯೂ, ತನಾಚಿತ್= ವಿಸ್ತರವಾಗಿ (ಸಮಸ್ತ ದೇಶಗಳಲ್ಲಿಯೂ) ಕೂಡ, (ಇರತಕ್ಕ ಯಜಮಾನರಾದ ನಾವೆಲ್ಲರೂ) ಯತ್= ಯಾವಾಗ, ದೇವಂ ದೇವಂ= ಸಮಸ್ತ ದೇವತೆಗಳನ್ನೂ, ಯಜಾಮಹೇ= ಪೂಜಿಸುತ್ತೇವೋ, (ಆಗ) ತ್ವೇ ಇತ್= ನಿನ್ನಲ್ಲಿಯೇ, ಹವಿಃ= ಹವಿಸ್ಸು, ಹೂಯತೇಹಿ= ಹೋಮಿಸಲ್ಪಡುತ್ತದಷ್ಟೆ. ಪ್ರಸಿದ್ಧವು ॥ ೬ ॥

ಭಾ ॥ ಶಶ್ವದ್ವಿಸ್ತರತಃ ಸರ್ವಾನ್ ಯದಾ ದೇವಾನ್ ಯಜಾಮಹೇ । ತದಾ ತ್ವಯ್ಯೇವ ಹಿ ಹವಿರ್ಹೂಯತೇ ॥ ೬ ॥

ಅ ॥ ಸಮಸ್ತ ದೇಶ ಕಾಲಗಳಲ್ಲಿಯೂ ಇರುವ ಯಜಮಾನರಾದ ನಾವೆಲ್ಲರೂ ಯಾವಾಗ ಸಮಸ್ತ ದೇವತೆಗಳನ್ನು ಪೂಜಿಸುತ್ತೇವೋ, ಆಗ ನಿನ್ನಲ್ಲಿಯೇ ಹವಿಸ್ಸು ಹೋಮಿಸಲ್ಪಡುತ್ತದೆ. ಪ್ರಸಿದ್ಧ ॥ ೬ ॥

ಋ ॥ (೨೯೬)ಪ್ರಿಯೋ ನೋ ಅಸ್ತು ವಿಶ್ಪತಿರ್ಹೋತಾ ಮಂದ್ರೋ ವರೇಣ್ಯಃ ।
ಪ್ರಿಯಾಃ ಸ್ವಗ್ನಯೋ ವಯಂ ॥ ೭ ॥

ಅ॥ ವಿಶ್ಪತಿಃ=ಸಮಸ್ತ ಪ್ರಜೆಗಳಿಗೆ ಅಧಿಪತಿಯು ಮಂದ್ರಃ=ಸುಖವನ್ನುಂಟು ಮಾಡುವವನು, ವರೇಣ್ಯಃ = ಭಜನೀಯನು, ಹೋತಾ = ಹೋತೃ ಎನಿಸಿಕೊಂಡವನು, ಇಂತಹ ಅಗ್ನಿಯು, ನಃ = ನಮಗೆ, ಪ್ರಿಯಃ = ಪ್ರಿಯನು, ಅಸ್ತು = ಆಗಲಿ. (ಇಂತಹ ಗುಣ ವಿಶಿಷ್ಟನಾದ ನೀನು ನಮಗೆ ಪ್ರಿಯನಾಗು.) ಸ್ವಗ್ನಯಃ = ಶೋಭನವಾದ ಅಗ್ನಿಯುಳ್ಳ (ಅಂದರೆ ಅಗ್ನಿಯನ್ನು ಪಾಸನೆ ಮಾಡುವ) ನಾವು ಕೂಡ, ಪ್ರಿಯಾಃ = (ಆತನಿಗೆ) ಪ್ರಿಯರು ಆಗುವೆವು. ॥ ೭ ॥

ಭಾ ॥ ಸ ಪ್ರಿಯೋ ಭವ । ಮಂದ್ರೋ ಮದಕರಃ ॥ ೭ ॥

ಅ ॥ ಇಂತಹ ಗುಣ ವಿಶಿಷ್ಟನಾದ ನೀನು ಪ್ರಿಯನಾಗು. ಮಂದ್ರಃ = ಸಂತೋಷವನ್ನುಂಟುಮಾಡುವವನು. ॥ ೭ ॥

ಋ ॥ (೨೯೭) ಸ್ವಗ್ನಯೋ ಹಿ ವಾರ್ಯಂ ದೇವಾಸೋ ದಧಿರೇ ಚ ನಃ ।
ಸ್ವಗ್ನಯೋ ಮನಾಮಹೇ ॥ ೮ ॥

ಅ ॥ ಸ್ವಗ್ನಯಃ= ಪ್ರಶಸ್ತ ಅಗ್ನಿಯುಳ್ಳ, ದೇವಾಸಃ=ದೇವತೆಗಳು, ನಃ=ನಮಗಾಗಿ, ವಾರ್ಯಂ= ಅಂಗೀಕಾರಾರ್ಹವಾದ, ದ್ರವ್ಯವನ್ನು, ದಧಿರೇ=ಕೊಟ್ಟರು. ಹಿ=ಪ್ರಸಿದ್ಧವು. ಚ=ರಕ್ಷಣೆಯನ್ನೂ ಮಾಡಿದರು ಸ್ವಗ್ನಯಃ=ಪ್ರಶಸ್ತ ಅಗ್ನಿಯುಳ್ಳ ನಾವೂ ಕೂಡ, (ಆ ದೇವತೆಗಳನ್ನು) ಮನಾಮಹೇ= ತಿಳಿಯುತ್ತೇವೆ. ಪೂಜಿಸುತ್ತೇವೆ.

ವಿ ॥ ನಾವು ದೇವತೆಗಳನ್ನು ಪೂಜಿಸುವುದು, ದೇವತೆಗಳು ನಮಗೆ ವಿತ್ತ ದಾನ ಮೊದಲಾದುದು ಎಲ್ಲವನ್ನು ಮಾಡುವುದು ಇದೆಲ್ಲವೂ ಅಗ್ನಿ ಪ್ರಸಾದದಿಂದಲೇ ಆಗತಕ್ಕದು. ಅಂದರೆ ನಾವು ಅಗ್ನಿ ರೂಪವಾದ ಅಧಿಷ್ಠಾನದಲ್ಲಿ ದೇವತೆಗಳಿಗೆ ಹವಿಸ್ಸನ್ನು ಕೊಡುವುದು, ಪೂಜಿಸುವುದು ಇತ್ಯಾದಿಗಳಿಂದ ಸಂತುಷ್ಟರಾದ ದೇವತೆಗಳು ನಮಗೆ ದ್ರವ್ಯಾದಿಗಳನ್ನು ದಾನ ಮಾಡುವರು. ॥ ೮ ॥

ಋ ॥ (೨೯೮) ಅಥಾ ನ ಉಭಯೇಷಾಮಮೃತ ಮರ್ತ್ಯಾನಾಂ ।
ಮಿಥಃ ಸಂತು ಪ್ರಶಸ್ತಯಃ ॥ ೯ ॥

ಅ ॥ ಅಮೃತ=ಮೃತಿರಹಿತನೇ, ಅಥ=ಮತ್ತು, ಉಭಯೇಷಾಂ=ಸ್ತ್ರೀಯರು ಪುರುಷರು ಎಂದು ಎರಡು ವರ್ಗದವರಾದ, ನಃ= ನಮ್ಮ, ಮರ್ತ್ಯಾನಾಂ= ಮನುಷ್ಯರಿಗೆ, ಮಿಥಃ=ಪರಸ್ಪರವಾಗಿ, ಪ್ರಶಸ್ತಯಃ=(ಪ್ರಪೂರ್ವಾತ್ ಶಂಸು ಕಥನೇ) ಸ್ತುತಿಗಳು, ಸಂತು=ಆಗಲಿ. (ಪರಸ್ಪರ ಸಂಪ್ರೀತಿಯುಂಟಾಗಲಿ) ॥ ೩ ॥

ಭಾ ॥ ಸ್ತ್ರೀಣಾಂ ಪುಂಸಾಂ ಚೋಭಯವರ್ಗಿಣಾಂ ॥ ೯ ॥

ಅ ॥ ಸ್ತ್ರೀಯರು ಪುರುಷರು ಎಂದು ಎರಡು ವರ್ಗದ ಮನುಷ್ಯರು ॥ ೯ ॥

ಋ ॥ (೨೯೯) ವಿಶ್ವೇಭಿರಗ್ನೇ ಅಗ್ನಿಭಿರಿಮಂ ಯಜ್ಞಮಿದಂ ವಚಃ ।
ಚನೋ ಧಾಃ ಸಹಸೋ ಯಹೋ ॥ ೧೦ ॥ ೨೧ ॥ ೨೬ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ವಿಶ್ವೇಭಿಃ=ಎಲ್ಲಾ, ಅಗ್ನಿಭಿಃ=ಅಗ್ನಿಗಳಿಂದ ಕೂಡಿಕೊಂಡು, ಇಮಂ=ಈ ನಮ್ಮದಾದ, ಯಜ್ಞಂ=ಯಾಗವನ್ನು, ಇದಂ ವಚಃ=ಈ ಮಾತನ್ನೂ ಕೂಡ, (ಸ್ವೀಕರಿಸು.) ಸಹಸಃ=ಬಲದೇವತೆಯಾದ ವಾಯು ದೇವರ, ಯಹೋ=ಪುತ್ರನಾದ ಅಗ್ನಿಯೇ (ನೀನು) ಚನಃ=ಸುಖವನ್ನು, ಧಾಃ= (ಡುಧಾಞಧಾರಣ ಪೋಷಣಯೋಃ) ನಮ್ಮಲ್ಲಿ ಕೊಡು ॥ ೧೦ ॥ ೨೧ ॥ ೨೬ ॥

ಭಾ॥ (೧) ಚನಃ ಸುಖಂ ಧಾ ಅಸ್ಮಾಸು (೨) ವಾಯೋಃ ಪುತ್ರೋಽಗ್ನಿರೇವ ಚೇತ್। ಭಗವಾನ್ ವಾಯುನಾ ವ್ಯಂಗ್ಯೋ ॥ ೧೦ ॥ ೨೧ ॥ ೭ ॥

ಅ ॥ (೧) ನಮ್ಮಲ್ಲಿ ಚನಃ=ಸುಖವನ್ನೂ, ಕೊಡು. (೨) (ಸಹಸೋ ಯಹೋ ಎನ್ನುವುದನ್ನು ಅಗ್ನಿಯಲ್ಲಿಯೂ ಶ್ರೀ ವಿಷ್ಣುವಿನಲ್ಲಿಯೂ ಕ್ರಮದಿಂದ ವ್ಯಾಖ್ಯಾನ ಮಾಡುತ್ತಾರೆ.) ಅಗ್ನಿಯೇ ವಾಯುವಿನ ಪುತ್ರನೆಂದು ವಿವಕ್ಷಿತನಾದರೆ ಆಗ ಸಹಸಃ=ವಾಯುದೇವರ, ಯಹೋ=ಪುತ್ರನೇ ಎಂದು ವ್ಯಾಖ್ಯಾನ ಮಾಡಬೇಕು. ಪರಮಾತ್ಮನು ವಿವಕ್ಷಿತನಾದರೆ, ಆಗ ವಾಯು ದೇವರಿಂದ ಅಭಿವ್ಯಂಗ್ಯನು ಎಂದರ್ಥವನ್ನು ವಿವಕ್ಷಾ ಮಾಡಿಕೊಂಡು, ಸಹಸಃಯಹೋ ವಾಯುವಿನಿಂದ ಅಭಿವ್ಯಂಗ್ಯನೇ ಎಂದು ವಾಖ್ಯಾನ ಮಾಡಬೇಕು.

ವಿ ॥ (೧) ವಾಯು ದೇವರು ಭಗವದ್ಗುಣಗಳನ್ನು ರುದ್ರೇಂದ್ರಾದಿಗಳಿಗೆ ಉಪದೇಶಿಸಿ ಪ್ರಕಟೀಕರಿಸುತ್ತಾ ವಾಯುವಿನಿಂದ ವ್ಯಂಗನಾಗುವುದರಿಂದ ಶ್ರೀ ಪರಮಾತ್ಮನೂ ಕೂಡ ವಾಯುಪುತ್ರನೆನಿಸುತ್ತಾನೆ. **ಪ್ರಾಣೋ ವಾವ ಮಹಾನ್ ಸಹ ಓಜೋ ಬಲಮಿತ್ಯಾ ಚಕ್ಷತೇ** ಎಂಬ ಶ್ರುತಿಯು ಸಹ ಶಬ್ದವು ವಾಯುವಾಚಕವು ಎನ್ನುವಲ್ಲಿ ಪ್ರಮಾಣವು (೨) **ಅಪತ್ಯಂ ಯಹುಃ ಸೂನುಃ** ಎನ್ನುವಲ್ಲಿ ಯಹು ಶಬ್ದವು ಅಪತ್ಯ ನಾಮಗಳಲ್ಲಿ ಪಠಿತವಾದ ಪ್ರಯುಕ್ತ **ಯಹು** ಶಬ್ದವು ಅಪತ್ಯ ವಾಚಕವು ॥ ೧೦ ॥ ೨೧ ॥ ೭ ॥

ಅ ವ ॥ **ಅಶ್ವಂನ** ಎನ್ನುವುದು ೨೭ನೇ ಸೂಕ್ತವು. ೧೩ ಋಕ್ಕುಗಳು. ೩ ವರ್ಗಗಳು. ಅವುಗಳಲ್ಲಿ ಅಂತಿಮವಾದುದು ದೈವೀದೇವತಾಕವು, ತ್ರಿಷ್ಟುಪ್ ಛಂದಸ್ಕವು. ಇತರಗಳು ಅಗ್ನಿದೇವತಾಕಗಳೂ ಗಾಯತ್ರೀ ಛಂದಸ್ಕಗಳು

ಋ ॥ (೩೦೦) ಅಶ್ವಂ ನ ತ್ವಾ ವಾರವಂತಂ ವಂದಧ್ಯಾ ಅಗ್ನಿಂ ನಮೋಭಿಃ ।
ಸಮ್ರಾಜಂತಮಧ್ವರಾಣಾಂ ॥ ೧ ॥

ಅ ॥ (ನಾನು) ಅಧ್ವರಾಣಾಂ=ಯಜ್ಞಗಳಿಗೆ ಸಮ್ರಾಜಂತಂ=ಸ್ವಾಮಿಯಾದ, ವಾರವಂತಂ ವಡವಾಮುಖನೆನಿಸಿದ, ಅಗ್ನಿಂ ತ್ವಾ=ಅಗ್ನಿಯಾದ ನಿನ್ನನ್ನು ಅಶ್ವಂನ=ಅಶ್ವರೂಪನಾದ ನಿನ್ನನೆಂಬಂತೆ, ನಮೋಭಿಃ=ನಮಸ್ಕಾರ ರೂಪಗಳಾದ ವಾಕ್ಯಗಳಿಂದ, ವಂದಧ್ಯೈ = (ವದಿ ಅಭಿವಾದನಸ್ತುತ್ಯೋಃ) ನಮಸ್ಕರಿಸುತ್ತೇನೆ. ಅಥವಾ ಸ್ತುತಿಸುವುದಕ್ಕಾಗಿ, ನಮಸ್ಕರಿಸುವುದಕ್ಕಾಗಿ (ಪ್ರಾರಂಭಿಸುತ್ತೇನೆ.) ಶ್ರೀ ವಿಷ್ಣು ವ್ಯತಿರಿಕ್ತವಾದ

ಅಶ್ವವನ್ನೆಂಬಂತೆ ನಿನ್ನನ್ನು ಸ್ತುತಿಸುವುದು ಉಚಿತವಲ್ಲ. ಏಕೆಂದರೆ ವಿಷ್ಣು ವ್ಯತಿರಿಕ್ತವಾದ ಅಶ್ವಕ್ಕೆ ಇಲ್ಲಿ ಹೇಳಿದ ಯಾಗ ನಿಯಾಮಕತ್ವವೂ ವಂದ್ಯತ್ವವೂ ಕೂಡಲಾರದು.

ಭಾ ॥ (೧) ವಾರವಾನ್ ವಡವಾಮುಖಃ ॥ (೨) ಸ್ವದೃಷ್ಟಾಂತೋಃ ಹರೇರ್ಯಸ್ಮಾತ್ ವಿಷ್ಣುಸ್ಸ ವಡವಾಮುಖಃ ॥ ೧ ॥

ಅ ॥ (೧) (ವಾರವತ್ ಶಬ್ದಕ್ಕೆ ವಿಶೇಷ್ಯವನ್ನು ಹೇಳುತ್ತಾರೆ) ದಕಾರ ಲಕಾರಗಳಿಗೆ ಅಭೇದವಿದ್ದ ಪ್ರಯುಕ್ತ ವಾರಂ=ವಾಲಂ ಡಕಾರ ಲಕಾರಗಳಿಗೆ ಅಭೇದವಿದ್ದ ಪ್ರಯುಕ್ತ ವಾಲಂ=ವಾಡಃ ವಾಡಮೇವ ವಾಡವಂ. ವಡವಾಯಾಃ ಇದಂ ಮುಖಂ ವಾಡವಂ ತತ್ ಅಸ್ಯಾಸ್ತೀತಿ ವಾರವಾನ್.ಅಂದರೆ ವಡವಾ ಮುಖವು. (ವಡವಾಗ್ನಿಯು). ಅಥವಾ ವಾರಾಂ ಸಮೂಹಃ=ಜಲಗಳ ಸಮುದಾಯವು ವಾರಂ=ಸಮುದ್ರೋದಕವು. ತತ್ ಅಸ್ಯ ಅಸ್ತಿ ಸಮುದ್ರ ಜಲವು ಇದಕ್ಕೆ ಸ್ಥಾನವಾಗಿದೆ.ಅಥವಾ ಭಕ್ಷ್ಯವಾಗಿದೆ,ಆದ ಕಾರಣ ವಾರವಾನ್. ಅಥವಾ ಗುಣಸಮುದಾಯವುಳ್ಳವನು. ಅಥವಾ ಭಕ್ತರ ಸಮುದಾಯವುಳ್ಳವನು ಎಂದರ್ಥವು. (2) (**ಅಶ್ವಂನೆ** ಎನ್ನುವುದರ ತಾತ್ಪರ್ಯಹೇಳುತ್ತಾರೆ.) ಯಾವ ಕಾರಣದಿಂದ ಆ ಅಶ್ವವು (ಅಂದರೆ **ಅಶ್ವಸ್ವರೂಪೋ ಬ್ರಹ್ಮಾಽಭೂದಶ್ವರೂಪಾಜ್ಜನಾರ್ದನಾತ್ । ತತ್ರ ಸನ್ನಿಹಿತೋ ವಿಷ್ಣುಃ ಅಶ್ವರೂಪಃ ಸ್ವಯಂ ಪ್ರಭುಃ॥** ಎಂದು ಬೃಹದಾರಣ್ಯಕಭಾಷ್ಯೋಕ್ತ ಪ್ರಮಾಣದಿಂದ ಅಶ್ವಾಂತರ್ಗತವಾದ ಅಶ್ವಾಕಾರ ಮೂರ್ತಿಯೂ) ಹಾಗೆಯೇ **ವಡವಾಮುಖನೂ,** ಕೂಡ ಶ್ರೀ ವಿಷ್ಣುವೇ ಆಗಿರುತ್ತಾನೋ, ಆದಕಾರಣ ಶ್ರೀ ಹರಿಗೆ ತಾನೇ ದೃಷ್ಟಾಂತನು.

ವಿ ॥ (1) ಸ್ತ್ರೀರೂಪವಾದ ಕುದುರೆಯು ವಡವಾ ಎನ್ನಿಸುತ್ತದೆ. ವಡವಾಯಾಃ ಮುಖಮಿವ ಮುಖಂ ಯಸ್ಯ=ಹೆಣ್ಣು ಕುದುರೆಯ ಮುಖದಂತೆ ಮುಖವುಳ್ಳವನು. ಇದು ಸಮುದ್ರದೊಳಗಿರುವ ವಡವಾಗ್ನಿ ರೂಪವು (2)**ಭೂತಾದಿಭೂತೋಽಂಬುನಿಧಾನ ಮಧ್ಯೇ ಭೂತ್ವಾ ಹರಿಃ ಸರ್ವಹರೋಽತಿಧಾಮ್ನಾ । ಅಗಾಧ ಮಂಭೋ ವಿದಧಾತಿ ಭಸ್ಮಯೋ ವಾಡವಾಗ್ನಿರ್ನೃಹರಿರ್ವಿಚಿಂತ್ಯಃ॥** ಎಂದು ನೃಸಿಂಹ ಧ್ಯಾನ ಚಕ್ರದಲ್ಲಿ ಸಮುದ್ರ ಮಧ್ಯದಲ್ಲಿ ವಾಡವಾಗ್ನಿ ಸ್ವರೂಪನಾದ ನರಸಿಂಹನನ್ನು ಧ್ಯಾನಿಸಬೇಕೆಂದು ಹೇಳಿದೆ. (3) ಹಯಗ್ರೀವರೂಪಿ ಶ್ರೀ ಪರಮಾತ್ಮನು ಗಂಡು ಕುದುರೆಯ ಮುಖಕ್ಕೆ ಸದೃಶವಾದ ಮುಖವುಳ್ಳವನು. **ಸ್ತ್ರೀರೂಪೋ ಹಯಶೀರ್ಷವಾನ್, ತಥೈವ** ವಡವಾವಕ್ತ್ರಃ ಎಂದು ಮಹಾಭಾರತ ತಾತ್ಪರ್ಯದಲ್ಲಿ ಸ್ವಲ್ಪ ವ್ಯತ್ಯಾಸ ಹೇಳಿದೆ. ॥ ೧ ॥

ಋ ॥ (೩೦೧) ಸ ಘಾ ನಃ ಸೂನುಃ ಶವಸಾ ಪೃಥುಪ್ರಗಾಮಾ ಸುಶೇವಃ। ಮೀಢ್ವಾꣳ ಅಸ್ಮಾಕಂ ಬಭೂಯಾತ್ ॥ ೨ ॥

ಅ ॥ ಶವಸಾ=ಬಲರೂಪನಾದ ವಾಯುವಿನ ಸೂನುಃ=ಪುತ್ರನಾದ,ಅಥವಾ ಶವಸಾ=ವಾಯುದೇವರಿಂದ ಕೂಡಿ, ನಃ=ಶುನಃಶ್ಶೇಪ ಮೊದಲಾದ ಋಷಿಗಳಾದ ನಮ್ಮ ಸೂನುಃ=ಪುತ್ರನಾದ, ಪೃಥುಪ್ರಗಾಮಾ=ಬಹು ವಿಸ್ತೃತವಾದ ಪ್ರಕೃಷ್ಟಜ್ಞಾನವುಳ್ಳ, ಸಃ=ಆ ಅಗ್ನಿಯು, ನಃ=ನಮಗೆ, ಸುಶೇವಃ=ಸುಖವನ್ನುಂಟು ಮಾಡುವವನು, ಬಭೂಯಾತ್ ಆಗಲಿ. ಸಃ ಘ= ಆ ಅಗ್ನಿಯೇ, ಅಸ್ಮಾಕಂ= ನಮಗೆ, ಮೀಢ್ವಾನ್=ಸಮಸ್ತ ಅಭೀಷ್ಟವನ್ನು ಕೊಡುವವನೂ, ಸ್ವಾಮಿಯೂ ಕೂಡ, ಬಭೂಯಾತ್=ಆಗಬೇಕು ॥ ೨ ॥

ಭಾ ॥ (೧) ಸೂನುಃ ಸ ಶವಸೋ ವಾಯೋಃ ಪೃಥುಜ್ಞಾನಃ ಸುಶೇವಕೃತ್ । ಸುಖಕೃನ್ನೋ ಭವೇನ್ಮೀಢ್ವಾನ್ ಸ್ವಾಮೀ ನಃ ಸೂನುರೇವವಾ । ವ್ಯಂಗ್ಯತ್ವಾದ್ವಾಯುನಾ ಸಾರ್ಧಂ ಸುಶೇವಃ ಸುಸುಖಾತ್ಮಕಃ ॥ ೨ ॥

ಅ ॥ (1) ಬಲರೂಪನಾದ ವಾಯುವಿನ ಪುತ್ರನಾದ, ವಿಸ್ತೃತವಾದ ಪ್ರಕೃಷ್ಟ ಜ್ಞಾನವುಳ್ಳ ಆ ಅಗ್ನಿಯು ನಮಗೆ ಸುಶೇವಕೃತ್ ಅಂದರೆ ಚೆನ್ನಾಗಿ ಸುಖಕಾರಿಯು ಆಗಬೇಕು. ಮತ್ತು ನಮಗೆ ಅಭೀಷ್ಟದಾಯಕನೂ ಸ್ವಾಮಿಯೂ ಆಗಬೇಕು. (ಮೀಢ್ವಾನ್=ಮಿಹಸೇಚನೇ) (2) (ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ) ವಾಯುವಿನ ಮತ್ತು ಶುನಃಶೇಪಾದಿ ಋಷಿಗಳಾದ ನಮ್ಮ ಪುತ್ರನಾದ ಅಗ್ನಿಯು ಸುಖಕಾರಿಯಾಗಬೇಕು. (ಶ್ರೀ ವಿಷ್ಣುವು ವಾಯುವಿನ ಮತ್ತು ಋಷಿಗಳ ಪುತ್ರನಾಗುವುದು ಹೇಗೆಂದರೆ) ಶ್ರೀ ವಾಯುದೇವರು ಹಾಗೆಯೇ ಋಷಿಗಳು, ಭಗವದ್ಗುಣಗಳನ್ನು ಪ್ರಕಟೀಕರಿಸುವುದರಿಂದ ಅಂತೂ ಶ್ರೀಹರಿಯು ಅವರಿಂದ ವ್ಯಂಗ್ಯನಾಗುವ ಪ್ರಯುಕ್ತ ವಾಯುವಿನ ಹಾಗೂ ಋಷಿಗಳ ಪುತ್ರನೆನಿಸುತ್ತಾನೆ. ವಾಯುವಿನಿಂದ ಕೂಡಿಕೊಂಡು ಶ್ರೀ ವಿಷ್ಣುವು (ಶ್ರೀ ವಿಷ್ಣು ವಾಯುಗಳು) ಅಭೀಷ್ಟದಾಯಕನಾ (ರಾ) ಗಲಿ. (ಸುಶೇವಃ ಎನ್ನುವುದಕ್ಕೆ ಅರ್ಥಾಂತರವನ್ನು ಹೇಳುತ್ತಾರೆ) ಸುಶೇವಃ=ಪೂರ್ಣ ಸುಖಸ್ವರೂಪನು. ॥ ೨ ॥

ಋ ॥ (೩೦೨) ಸ ನೋ ದೂರಾಚ್ಚಾಸಾಚ್ಚ ನಿ ಮರ್ತ್ಯಾದಘಾಯೋಃ ॥ ಪಾಹಿ ಸದಮಿದ್ವಿಶ್ವಾಯುಃ ॥ ೩ ॥

ಅ ॥ ವಿಶ್ವಾಯುಃ=ಪೂರ್ಣವಾದ ಆಯುಷ್ಯವುಳ್ಳ, (ನಿತ್ಯನಾದ) ಸಃ=ಆ ಅಗ್ನಿಯಾದ ನೀನು, ನಃ= ನಮ್ಮ, ಸದಂ ಇತ್=(ಸೀದಂತ್ಯಸ್ಮಿನ್ ಜನಾಃ ಎಂಬ ವ್ಯುತ್ಪತ್ತಿಯಿಂದ) ಎಲ್ಲಾ ಸ್ಥಾನಗಳಲ್ಲಿಯೂ ದೂರಾಚ್ಚ= ದೂರದಲ್ಲಿರತಕ್ಕ, ಆಸಾಚ್ಚ=ಸಮೀಪದಲ್ಲಿಯೂ ಇರತಕ್ಕ, ಅಘಾಯೋಃ=ಪಾಪಕ್ಕಾಗಿ ಆಯುಷ್ಯವುಳ್ಳ, ಅಥವಾ ಪಾಪನಿಮಿತ್ತವಾಗಿ ಗತಿಯುಳ್ಳ, ಮರ್ತ್ಯಾತ್=ಮನುಷ್ಯನದ್ದೆಶೆಯಿಂದ, ನಿ=ನಿಶ್ಚಿತ ಹೇಗೆ ಆದೀತೋ ಹಾಗೆ, ಪಾಹಿ=ರಕ್ಷಿಸು. ॥ ೩ ॥

ಭಾ ॥ ಆಸಾತ್ಸಮೀಪೇತಶ್ಚಾಸ್ಮಾನಘಾರ್ಥಾಯೋರ್ನಿಪಾಹಿ ಚ । ಪ್ರತಿ ಪ್ರತಿ ಸದೋ ನಿತ್ಯೋ ವಿಶ್ವಾಯುಃ ॥ ೩ ॥

ಅ ॥ ಪೂರ್ಣ ಆಯುಷ್ಯವುಳ್ಳ ಅಂದರೆ ನಿತ್ಯನಾದ ಅಗ್ನಿಯಾದ ನೀನು ನಮ್ಮನ್ನು ಎಲ್ಲಾ ಸ್ಥಾನಗಳಲ್ಲಿಯೂ, ದೂರದಲ್ಲಿಯೂ ಸಮೀಪದಲ್ಲಿಯೂ ಇರತಕ್ಕ ಪಾಪಕ್ಕಾಗಿ ಆಯುಷ್ಯವುಳ್ಳ, ಮತ್ತು ಪಾಪಕ್ಕಾಗಿ ಸಂಚರಿಸುವ ಮನುಷ್ಯನ ದೆಶೆಯಿಂದ ನಿಶ್ಚಯವಾಗಿಯೂ ರಕ್ಷಿಸು. ॥ ೩ ॥

ಋ ॥ (೩೦೩) ಇಮಮೂ ಷು ತ್ವಮಸ್ಮಾಕಂ ಸನಿಂ ಗಾಯತ್ರಂ ನವ್ಯಾಂಸಂ । ಅಗ್ನೇ ದೇವೇಷು ಪ್ರವೋಚಃ ॥ ೪ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ತ್ವಂ=ನೀನು ಅಸ್ಮಾಕಂ=ನಮ್ಮ, ಇಮಂ=ಈ ಸ್ತೋತ್ರವನ್ನು, ಸನಿಂ= (ಷಣುದಾನೇ) ದಾನ ಸ್ವರೂಪವನ್ನಾಗಿ, (ಅಂದರೆ ನನಗೆ ಅಭೀಷ್ಟವನ್ನು ಕೊಡು ಎಂಬ ವಚನದಿಂದೊಡಗೂಡಿ

ದ್ದನ್ನಾಗಿ) ಗಾಯತ್ರಂ=(ಈ ಸ್ತೋತ್ರದಲ್ಲಿ ಗಾಯತ್ರಿಯು ಇದ್ದ ಪ್ರಯುಕ್ತ) ಗಾಯತ್ರೀ ಛಂದಸ್ಸೇ ಸ್ವರೂಪವಾಗಿ ಇರತಕ್ಕುದನ್ನಾಗಿ ನವ್ಯಾಂಸಂ=ಅತಿ ನೂತನವನ್ನಾಗಿ, ಅತ್ಯಂತ ಅಪೂರ್ವವಾದುದನ್ನಾಗಿ, ಸ್ತೋತ್ರಗಳಲ್ಲಿ ಶ್ರೇಷ್ಠವಾದುದನ್ನಾಗಿ, ದೇವೇಷು=ದೇವತೆಗಳಲ್ಲಿ, ಸುಪ್ರವೋಚಃ=ಚೆನ್ನಾಗಿ ಹೇಳಿರುತ್ತ. ಮತ್ತು ಉ=ಆದರ ಪೂರ್ವಕವಾಗಿ ಹೇಳು. (ದೇವತೆಗಳನ್ನು ಹೊಂದಿಸಿಕೊಡು) ॥ ೪ ॥

ಭಾ ॥ ತ್ವಮಿಮಾಂ ಸ್ತುತಿಂ । ಸನಿಂ ದಾನಸ್ವರೂಪಾಂ ಚ ಗಾಯತ್ರೀಛಂದಆತ್ಮಿಕಾಂ ।
ನವ್ಯಾಂಸಂ ಸ್ತುತಿಷು ಶ್ರೇಷ್ಠಾಂ ವದ ದೇವೇಷು ಸಾದರಂ ॥ ೪ ॥

ಅ ॥ ಅಗ್ನಿಯೇ ನೀನು ಈ ಸ್ತೋತ್ರವನ್ನು ದಾನ ಸ್ವರೂಪವನ್ನಾಗಿಯೂ, ಗಾಯತ್ರೀ ಛಂದಸ್ಸೇ ಸ್ವರೂಪವಾಗಿ ಉಳ್ಳದ್ದನ್ನಾಗಿಯೂ, ಅತಿ ಅಪೂರ್ವವಾದುದನ್ನಾಗಿಯೂ, ಸ್ತುತಿಗಳಲ್ಲಿ ಶ್ರೇಷ್ಠವಾದುದನ್ನಾಗಿಯೂ ಆದರ ಪೂರ್ವಕವಾಗಿ ದೇವತೆಗಳಲ್ಲಿ ಹೇಳು (ದೇವತೆಗಳನ್ನು ಹೊಂದಿಸಿಕೊಡು) ॥ ೪ ॥

ಋ ॥ (೩೦೪) ಆ ನೋ ಭಜ ಪರಮೇಷ್ವಾ ವಾಜೇಷು ಮಧ್ಯಮೇಷು ।
ಶಿಕ್ಷಾ ವಸ್ವೋ ಅಂತಮಸ್ಯ ॥ ೫ ॥ ೨೨ ॥

ಅ ॥ (ಎಲೋ ಅಗ್ನಿಯೇ ನೀನು) ಪರಮೇಷು=ಉತ್ತಮಗಳಾದ, ವಾಜೇಷು=ಅನ್ನಗಳಲ್ಲಿ, ನಃ=ನಮ್ಮನ್ನು ಆ ಭಜ=ಹೊಂದಿಸಿಕೊಡು, ಮಧ್ಯಮೇಷು= ಮಧ್ಯಮ ಅನ್ನಗಳಲ್ಲಿ ಆ ಭಜ= ಹೊಂದಿಸಿ ಕೊಡು. ಅಂತಮಸ್ಯ (ಮಾಜಃಮಾನೇ) = ಜ್ಞಾನ ರೂಪವಾದ ವಸ್ವಃ= ದ್ರವ್ಯಕ್ಕಾಗಿ, ಶಿಕ್ಷ= (ನಮ್ಮನ್ನು) ಶಿಕ್ಷಿಸು.

ವಿ ॥ (೧) ಇಲ್ಲಿ ಪರಮ ಮಧ್ಯಮರನ್ನು ಗ್ರಹಣ ಮಾಡಿದುದರಿಂದ ಅಧಮರನ್ನೂ ಇಟ್ಟುಕೊಳ್ಳಬೇಕು ವಾಜ ಶಬ್ದದಿಂದ ಸಮಸ್ತ ಭೋಗಗಳನ್ನು ಇಟ್ಟುಕೊಳ್ಳಬೇಕು. (೨) ತಥಾಚ, ಉತ್ತಮ ಮಧ್ಯಮ ಅಧಮ ಭೋಗಗಳನ್ನು ನಾವು ಭೋಗಿಸುವಾಗ ನೀನು ನಮ್ಮನ್ನು ರಕ್ಷಕನಾಗಿ ಹೊಂದು. ನಿನ್ನಿಂದ ರಕ್ಷಿತರಾದ ನಾವು ಸಮಸ್ತ ಭೋಗಗಳನ್ನು ಭೋಗಿಸುವವರು ಆಗುವೆವು. ॥ ೫ ॥ ೨೨ ॥

ಭಾ ॥ (೧) ಉತ್ತಮಾಧಮಮಧ್ಯೇಷು ಭೋಗೇಷ್ವಸ್ಮಾನವಾಪ್ನುಹಿ । ರಕ್ಷಕತ್ವೇನ (೨)
ಶಿಕ್ಷಾಸ್ಮಾನ್ ಜ್ಞಾನವಸ್ವರ್ಥಮೇವ ಚ । (೩) ಅಂತೇ ಮೋಕ್ಷೇಽಮಿತತ್ವೇನ ಜ್ಞಾನ
ಮಂತಮಮುಚ್ಯತೇ ॥ ೫ ॥ ೨೨ ॥

ಅ ॥ (೧) ಎಲೋ ಅಗ್ನಿಯೇ ಉತ್ತಮ ಮಧ್ಯಮ ಅಧಮ ಭೋಗಗಳನ್ನು ನಾವು ಭೋಗಿಸುವಾಗ ರಕ್ಷಕನಾಗಿ ನಮ್ಮನ್ನು ಹೊಂದು. (ನಮ್ಮನ್ನು ನೀನು ರಕ್ಷಿಸಿದರೆ ನಾವು ಸಮಸ್ತ ಭೋಗಗಳನ್ನು ಭೋಗಿಸುವೆವು. (೩) ಜ್ಞಾನರೂಪವಾದ ದ್ರವ್ಯಕ್ಕಾಗಿಯೇ ನಮ್ಮನ್ನು ಶಿಕ್ಷಿಸು. (ಭಗವದ್ಜ್ಞಾನವನ್ನೇ ಮುಖ್ಯತಃ ಪ್ರಾರ್ಥಿಸಬೇಕಲ್ಲದೆ ಭೋಗಗಳನ್ನು ಪ್ರಾರ್ಥಿಸುವುದಲ್ಲ, ಎನ್ನುವ ಅಭಿಪ್ರಾಯದಿಂದ ಏವ ಶಬ್ದವು (೩) ಅಂತಮ ಶಬ್ದಕ್ಕೆ ಜ್ಞಾನವೆಂಬ ಅರ್ಥವು ಹೇಗೆ ಆಗುವುದೆಂದರೆ) ಸಂಸಾರದ ಅಂತ್ಯದಲ್ಲಿ ಅಂದರೆ ಮೋಕ್ಷದಲ್ಲಿ ಅಂದರೆ ಮೋಕ್ಷಕ್ಕೆ ಸಾಧನವಾಗಿ ಪ್ರಮಿತವಾಗಿರುವುದರಿಂದ ಜ್ಞಾನವು ಅಂತಮವು ಎನಿಸುತ್ತದೆ. ಅಂತೂ ಮೋಕ್ಷಕ್ಕೆ ಕಾರಣವಾಗಿ ಪ್ರಮಿತವಾದ ಜ್ಞಾನವು ಅಂತಿಮವೆನಿಸುತ್ತದೆ. ॥ ೫ ॥ ೨೨ ॥

ಋ॥ (೩೦೫) ವಿಭಕ್ತಾಸಿ ಚಿತ್ರಭಾನೋ ಸಿಂಧೋರೂರ್ಮಾ ಉಪಾಕ

ಆ । ಸದ್ಯೋ ದಾಶುಷೇ ಕ್ಷರಸಿ । ೬ ॥

ಅ ॥ ಚಿತ್ರಭಾನೋ=ನಿತ್ಯದಲ್ಲಿಯೂ ಉತ್ತಮ ತೇಜಸ್ಸುಳ್ಳ ಶ್ರೀಹರಿಯೇ, (ನೀನು) ಸಿಂಧೋಃ=ಕ್ಷೀರ ಸಮುದ್ರದ, ಊರ್ಮೌ=ಅಲೆಗಳ ಉಪಾಕೇ=ಸಮೀಪದಲ್ಲಿ, (ಇದ್ದವನಾಗಿ) (ಕ್ಷೀರ ಸಮುದ್ರದ ಅಲೆಗಳ ಸಮೀಪದಲ್ಲಿದ್ದವನಾಗಿ) ಆ ವಿಭಕ್ತಾ=ಚೆನ್ನಾಗಿ ಮುಕ್ತರಿಗೆ ಭೋಗವನ್ನು ವಿಭಾಗಮಾಡಿ ಕೊಡುವವನಾಗಿ, ಅಸಿ = ಆಗಿರುತ್ತಿ. ದಾಶುಷೇ= ಯಜಮಾನನಿಗೋಸ್ಕರ, ಸದ್ಯಃ=ತತ್ಕ್ಷಣದಲ್ಲಿಯೇ, ಸಾವಕಾಶವಿಲ್ಲದೆ, ಕ್ಷರಸಿ = (ಕ್ಷರದಾನೇ) ನಿತ್ಯದಲ್ಲಿಯೂ (ನಿಖಿಲ ಇಷ್ಟವನ್ನು) ಕೊಡುತ್ತಿ. ॥ ೬ ॥

ಭಾ ॥ (೧) ಕ್ಷೀರಾಬ್ಧ್ಯೂರ್ಮಿಸಮೀಪಸ್ಥೋ ಮುಕ್ತಭೋಗವಿಭಾಗದಃ ॥ ಯಜಮಾನಾಯ ಸದ್ಯಶ್ಚ ಕ್ಷರಸ್ಯಖಿಲಮೀಪ್ಸಿತಂ ॥ (೨) ನಿತ್ಯಮುತ್ತಮತೇಜಸ್ತ್ವಾಚ್ಚಿತ್ರಭಾನುರ್ಹರಿಃಸ್ಮೃತಃ ॥ ೬ ॥

ಅ ॥ (೧) ನೀನು ಕ್ಷೀರ ಸಮುದ್ರದ ಅಲೆಗಳ ಸಮೀಪದಲ್ಲಿದ್ದವನಾಗಿ, ಮುಕ್ತರಿಗೆ ಭೋಗ ವಿಶೇಷವನ್ನು ತರತಮ ಭಾವದಿಂದ ಕೊಡುವವನಾಗುತ್ತಿ. ಯಜಮಾನನಿಗೆ ತತ್ಕ್ಷಣದಲ್ಲಿ ಸಾವಕಾಶವಿಲ್ಲದೆ ನಿಖಿಲ ಇಷ್ಟವನ್ನು ಕೊಡುತ್ತಿ. (೨) ನಿತ್ಯದಲ್ಲಿಯೂ ಶ್ರೀಹರಿಯು ಉತ್ತಮ ತೇಜಸ್ಸುಳ್ಳವನಾದುದರಿಂದ ಚಿತ್ರಭಾನುಃ ಎನಿಸುತ್ತಾನೆ ॥ ೬ ॥

ಋ ॥ (೩೦೬) ಯಮಗ್ನೇ ಪೃತ್ಸು ಮರ್ತ್ಯಮವಾ ವಾಜೇಷು ಯಂ ಜುನಾಃ।

ಸ ಯಂತಾ ಶಶ್ವತೀರಿಷಃ ॥ ೭ ॥

ಅ ॥ ಅಗ್ನೇ=ಎಲೋ ವಿಷ್ಣುವೇ, (ನೀನು) ಯಂ ಮರ್ತ್ಯಂ=ಯಾವ ಮನುಷ್ಯನನ್ನು, ಪೃತ್ಸು=ಸೈನ್ಯಗಳು ಮಾಡತಕ್ಕ ಯುದ್ಧಗಳಲ್ಲಿ (ಅಧ್ಯಾತ್ಮದಲ್ಲಿ) ಜ್ಞಾನಾಜ್ಞಾನಾತ್ಮಕಗಳಾದ ಯುದ್ಧಗಳಲ್ಲಿ (ಅವಾಃ=ರಕ್ಷಿಸಿರುತ್ತಿಯೋ, ಯಂ=ಯಾರನ್ನು ವಾಜೇಷು=ಅನ್ನಗಳಲ್ಲಿ, ಜುನಾಃ=(ಜುನಗತೌ) ಹೊಂದಿಸಿ ಕೊಡುತ್ತಿಯೋ, ಪ್ರೇರೇಪಿಸುತ್ತೀಯೋ, ಸಃ=ಆ ಮನುಷ್ಯನೇ, ಶಶ್ವತೀಃ=ಶಾಶ್ವತಗಳಾದ, (ನಿತ್ಯಗಳಾದ) ಇಷಃ=ಅನ್ನಗಳನ್ನು ನಿತ್ಯ ಸಮೀಚೀನ ಪೂರ್ಣ ಸುಖವನ್ನು, ನಿತ್ಯ ಭೋಗಗಳನ್ನಾಗಲಿ, ಯಂತಾ=(ಯಮ್ ಗತೌ) ಹೊಂದುವನು. (ಮುಕ್ತಿ ಫಲವನ್ನು, ಹೊಂದುತ್ತಾನೆ.) (ಪ್ರಸಿದ್ಧ ಅಗ್ನಿ ಪಕ್ಷದಲ್ಲಿ ಬಹು ಕಾಲೀನವಾದ ಐಹಿಕ ಭೋಗಗಳು ಅಗ್ನಿಯಿಂದ ಲಭಿಸುವವು.) ॥ ೬ ॥

ಭಾ ॥ (1) ಯಂ ಮರ್ತ್ಯಂ ರಕ್ಷಸಿ ವಿಭೋ ಯಂ ಯುತ್ಸು ಪ್ರೇರಯಸ್ಯಪಿ । ಜ್ಞಾನಾಜ್ಞಾನಾತ್ಮಕೇಷ್ವೇವ ಸಂಗತಾ ನಿತ್ಯಸತ್ಸುಖಂ ॥ ಭೋಗಾನ್ವಾ ಮುಕ್ತಿಗಾನ್ನಿತ್ಯಾನಿಹ ಚೇದುಪಚಾರತಃ ॥ ೭ ॥

ಅ ॥ (1) ಎಲೋ ಶ್ರೀಹರಿಯೇ ಯಾವ ಮನುಷ್ಯನನ್ನು ಯುದ್ಧಗಳಲ್ಲಿ (ಅಧ್ಯಾತ್ಮದಲ್ಲಿ) ಜ್ಞಾನ ಅಜ್ಞಾನ ಸ್ವರೂಪಗಳಾದ, ಜ್ಞಾನ ಅಜ್ಞಾನ ಕರ್ತೃಕಗಳಾದ ಯುದ್ಧಗಳಲ್ಲಿಯೇ ರಕ್ಷಿಸುತ್ತಿಯೋ, ಯಾವ ಮನುಷ್ಯನನ್ನು ಅನ್ನಗಳಲ್ಲಿಯೇ ಪ್ರೇರೇಪಿಸುತ್ತಿಯೋ, ಅಂತಹ ಮನುಷ್ಯನೇ, ನಿತ್ಯಗಳಾದ ಅನ್ನಗಳನ್ನು ಮುಕ್ತಿ

ಯಲ್ಲಿರುವ ನಿತ್ಯವಾದ ನಿರ್ದುಷ್ಟವಾದ ಸುಖವನ್ನು, ಅಥವಾ ನಿತ್ಯಗಳಾದ ಮುಕ್ತಿಯಲ್ಲಿರತಕ್ಕ ಭೋಗಗಳನ್ನು ಚೆನ್ನಾಗಿ ಅವರವರ ಯೋಗ್ಯತಾನುಸಾರ ಹೊಂದುವನು. (ಅಗ್ನಿ ವಿಷಯದಲ್ಲಿ ಹೇಗೆಂದರೆ) ಔಪಚಾರಿಕವಾಗಿ ಐಹಿಕ ಭೋಗ ವಿಷಯಕವು. (ಅಂದರೆ ಬಹುಕಾಲದಲ್ಲಿ ಅಗ್ನಿಯು ಐಹಿಕ ಭೋಗಗಳನ್ನು ಕೊಡುತ್ತಾನೆಂಬ ಭಾವವು) ॥ ೭ ॥

ಋ ॥ (೩೦೭) ನಕಿರಸ್ಯ ಸಹಂತ್ಯ ಪರ್ಯೇತಾ ಕಯಸ್ಯ ಚಿತ್ ।
ವಾಜೋ ಅಸ್ತಿ ಶ್ರವಾಯ್ಯಃ ॥ ೮ ॥

ಅ ॥ ಸಹಂತ್ಯ=ಬಲದಿಂದ ವ್ಯಾಪ್ತನಾದ ಅಗ್ನಿಯೇ, ಅಥವಾ ವಾಯುವಿನ ಪುತ್ರನಾದ ಅಗ್ನಿಯೆನಿಸಿಬ ಶ್ರೀಹರಿಯೇ, ಅಸ್ಯ=ಯಂ ಮರ್ತ್ಯಂ ಎಂದು ಪ್ರಕೃತನಾದ, ನಿನ್ನವನಾದ, ಕಯಸ್ಯಚಿತ್=ಯಾರೋ ಒಬ್ಬನಿಗೆ, ಶ್ರವಾಯ್ಯಃ=ಕೇಳಲರ್ಹವಾದ, (ಅಂದರೆ ಕಿವಿಗಳಿಗೆ ಸುಖವನ್ನುಂಟು ಮಾಡುವ.) ಅಥವಾ ಅತ್ಯಂತ ಪ್ರಸಿದ್ಧವಾದುದು, (ಅತಿಬಹುಲವಾ[?]ದಾಗ್ಯೂ) ವಾಜಃ=ಭೋಗವು, ಪರ್ಯೇತಾ=ಪರಿಪೂರ್ಣವಾದುದು, ನಕಿಃ ಅಸ್ತಿ=ಇಲ್ಲವೇ ಇಲ್ಲ. ॥ ೮ ॥

ವಿ ॥ ಮಹತ್ತಾದ ಭೋಗವೂ ನಿನ್ನ ಭಕ್ತರಿಗೆ ಪರಿಪೂರ್ಣವಾಗುವುದಿಲ್ಲ. ಏಕೆಂದರೆ—ಮೇಲೆ ಮೇಲೆ ಯಥೇಷ್ಟವಾಗಿ ಭೋಗ ವಿಶೇಷವನ್ನು ಕೊಡುತ್ತಿ, ಅಥವಾ ಮಹಾಫಲ ಮೋಕ್ಷ ರೂಪವಾದ ಪುರುಷಾರ್ಥವನ್ನು ಕೊಡುತ್ತಿ ಎಂದು ಮಾಡಿಕೊಂಡು ಐಹಿಕ ಭೋಗವು ಬಹಳವಿದ್ದಾಗ್ಯೂ ಅದು ಪರಿಪೂರ್ಣವಲ್ಲ. ನಿನ್ನ ಭಕ್ತರಿಗೆ ಅದು ತುಚ್ಛವೇ ಆಗಿದೆ. ॥ ೮ ॥

ಭಾ ॥ (೧) ಪರಿಪೂರ್ಣೋऽಸ್ಯ ನೈವಾಸ್ತಿ ತ್ವದೀಯಸ್ಯ ತು ಕಸ್ಯಚಿತ್ । ಭೋಗೋऽಪಿ ಬಹುಲೋ ಯಸ್ಮಾದ್ದಿತ್ಸಸ್ಯೇವ ಪುನಃ ಪುನಃ ॥ ಸಹಂತ್ಯಃ ಸಂತತಬಲಃ ಸಹಸಃ ಪುತ್ರ ಏವ ವಾ ॥ ಶ್ರವಾಯ್ಯಃ ಶ್ರವಣೀಯಶ್ಚ ಸುಪ್ರಸಿದ್ಧತಮೋऽಪಿ ವಾ ॥ ೮ ॥

ಅ ॥ ಚೆನ್ನಾಗಿ ವ್ಯಾಪ್ತವಾದ ಬಲವುಳ್ಳವನು ಸಹಂತ್ಯಃ ಎನಿಸುತ್ತಾನೆ. ಅಥವಾ ವಾಯೋರಗ್ನಿಃ ಎಂಬ ಶ್ರುತಿಯಿಂದ ವಾಯುವಿನ ಪುತ್ರನಾದ ಅಗ್ನಿಯೇ ಸಹಂತ್ಯಃ=ಎನಿಸುತ್ತಾನೆ- ಎಲೋ ಶ್ರೀಹರಿಯೇ ನಿನ್ನವನಾದ,ಯಾವನೊಬ್ಬನಿಗಾದರೂ ಶ್ರವಾಯ್ಯಃ=ಕೇಳಲರ್ಹವಾದ,ಅತ್ಯಂತ ಪ್ರಸಿದ್ಧವಾದುದಾಗ್ಯೂ ಅಂದರೆ ಅತಿ ಬಹುಲವಾದುದಾಗ್ಯೂ ಭೋಗವು ಪರಿಪೂರ್ಣವಾದುದು ಆಗುವುದೇ ಇಲ್ಲ. (ಮಹಾಭೋಗವೂ ಕೂಡ ನಿನ್ನ ಭಕ್ತರಿಗೆ ಪರಿಪೂರ್ಣವಾಗುವುದಿಲ್ಲ.) ಏಕೆಂದರೆ ಮಹಾ ಭೋಗಗಳನ್ನು ಪುನಃ ಪುನಃ ಅವರಿಗೆ ಯಾವ ಕಾರಣದಿಂದ ಕೊಡುತ್ತಿಯೋ ಆದಕಾರಣ ಅವರಿಗೆ ಯಾವುದೊಂದು ಭೋಗವೂ ಕೂಡ ಅಂತಿಮವಾಗುವುದೇ ಇಲ್ಲ.) ಅಥವಾ ಯಾವ ಕಾರಣದಿಂದ ಪುನಃ ಪುನಃ ಅತ್ಯುಚ್ಚವಾದ ಮೋಕ್ಷ ಭೋಗವನ್ನು ಕೊಡುತ್ತೀಯೋ ಆದಕಾರಣ ಸಾಂಸಾರಿಕ ಭೋಗವು ಬಹಳವಿದ್ದರೂ ನಿನ್ನ ಭಕ್ತರಿಗೆ ಪರಿಪೂರ್ಣವಾಗುವುದಿಲ್ಲ. ತುಚ್ಛವೇ ಆಗುತ್ತದೆ. ಅಂತೂ ಲೋಕದಲ್ಲಿ ತನ್ನನ್ನು ಆಶ್ರಯಿಸಿದವರಿಗೆ ಪ್ರಭುವು ನಿತ್ಯವೂ ಕೊಡತಕ್ಕ ಹಣವು ಅಲ್ಪವಾದ ಪ್ರಯುಕ್ತ ಆದರಿಂದ ಅಲಂಬುದ್ಧಿಯು ಹುಟ್ಟುವುದಿಲ್ಲ. ಮತ್ತೆ ಕೇಳಿದಷ್ಟು ಹಣವನ್ನು ಕೊಟ್ಟರೆ ಆದರಿಂದ ಅಲಂಬುದ್ಧಿಯು ಹುಟ್ಟುತ್ತದೆ. ಆ ಹಣ ಸಿಕ್ಕಿದ ಮೇಲೆ ಸಂತುಷ್ಟರಾಗಿ ಪ್ರಭುವನ್ನು ಬಿಟ್ಟು ತಮ್ಮ ದೇಶಕ್ಕೆ ಹೋಗುತ್ತಾರಷ್ಟೆ. ಪ್ರಕೃತದಲ್ಲಿ ಆದರೂ ನೀನು ನಿನ್ನ ಭಕ್ತರಿಗೆ ಬೇಕಾದಷ್ಟು ಹಣ ಕೊಟ್ಟರೂ ಅದು ಅವರಿಗೆ ಅಂತಿಮವಾಗುವುದಿಲ್ಲ. ತೃಪ್ತಿಯುಂಟಾಗುವುದಿಲ್ಲ. ಸಾಂಸಾರಿಕ ಭೋಗವು ದುಃಖ ಮಿಶ್ರ

ವಾದ ಕಾರಣ ಅದರಿಂದ ಮಾಹಾತ್ಮ್ಯಾತಿಶಯವು ಹುಟ್ಟುವುದಿಲ್ಲ ಮತ್ತೆ ಅತ್ಯುಚ್ಚವಾದ ಮೋಕ್ಷಭೋಗವೇ ಪರಿಪೂರ್ಣವಾದುದು || ೮ ||

ಋ॥ (೩೦೮) ಸ ವಾಜಂ ವಿಶ್ವಚರ್ಷಣಿರರ್ವದ್ಭಿರಸ್ತು ತರುತಾ ।
ವಿಪ್ರೇಭಿರಸ್ತು ಸನಿತಾ ॥ ೯ ॥

ಅ ॥ (ಎಲೋ ಅಗ್ನಿಯೇ) ಸಃ=ಪ್ರಕೃತನಾದ ನಿನ್ನವನೇ ಆದವನು (ಭಕ್ತನು) ವಿಶ್ವ ಚರ್ಷಣಿಃ=ಸಮಸ್ತ ಪ್ರಜೆಗಳು ಅಧೀನದಲ್ಲಿ ಉಳ್ಳವನಾಗಿ (ಸಮಸ್ತರಿಗೂ ಅಧಿಪತಿಯಾಗಿ (ಗೋಮಿಥುನಗಳನ್ನು ದಾನ ಮಾಡಿದುದರಿಂದ ಗೋವುಗಳೂ ಎತ್ತುಗಳೂ ಸಮಾಪ್ತಗಳಾಗಿರುವುದರಿಂದ) ಅರ್ವದ್ಭಿಃ=ಕುದುರೆಗಳಿಂದ, ವಾಜಂ=ಧಾನ್ಯರೂಪವಾದ ಆಮಾನ್ನವನ್ನು,ತರುತಾ=ತರತಕ್ಕವನು, ಅಸ್ತು=ಆಗಬೇಕು. (ಎಂದರೆ ನಿನ್ನಭಕ್ತನು ಚಕ್ರವರ್ತಿಯಾಗಲಿ. ಅರ್ಥಿಗಳಿಗೆ ಗೋವುಗಳನ್ನು ದಾನ ಮಾಡಲಿ. ಹೇಗೆ ಗೋವುಗಳನ್ನು ದಾನಮಾಡಿದರೆ ಅಶ್ವಗಳಿಂದಲೇ ಧಾನ್ಯಗಳ ಆನಯನಾದಿಗಳನ್ನು ಮಾಡುತ್ತಾರೋ ಹಾಗೆಯೇ) ಮತ್ತು, ವಿಪ್ರೇಭಿಃ=ಬ್ರಾಹ್ಮಣರಿಂದ ಸನಿತಾ=(ಶಣುದಾನೇ) ದಾನ ಮಾಡುವವನು, ಆಗಲಿ. (ಅಂದರೆ–ಒಬ್ಬನಿಗೆ ದಾನ ಮಾಡಲಿಕ್ಕೆ ಶಕ್ತಿಯಿಲ್ಲದಿರುವುದರಿಂದ ಬ್ರಾಹ್ಮಣರನ್ನು ಸಹಾಯಕರನ್ನಾಗಿ ಮಾಡಬೇಕೋ ಅಷ್ಟು ಯಥೇಷ್ಟ ದಾನ ಮಾಡುವವನು ಆಗಲಿ) ಅಥವಾ ಎಲೋ ಅಗ್ನಿಯೇ, ನಿನ್ನವನಾದ ಭಕ್ತನು ಚಕ್ರವರ್ತಿಯಾಗಿ ಅಶ್ವಗಳಿಂದ ವಾಜಂ ತರುತಾ=ಯುದ್ಧ ಪಾರಂಗತನಾಗಲಿ. ಹಾಗೆಯೇ ಬ್ರಾಹ್ಮಣ (ಶಿಷ್ಯನಿ)ಗೋಸ್ಕರ, ವಾಜಂ ಸನಿತಾ=ಅನ್ನವನ್ನು ಅಥವಾ ಯಥೇಷ್ಟ ಭೋಗವನ್ನು ಕೊಡುವವನು ಆಗಬೇಕು. ಅಥವಾ ನಿನ್ನ ಭಕ್ತನು ಬಹು ಶಿಷ್ಯ ಸಂಪತ್ತುಳ್ಳವನಾಗಿ ಅರ್ವದ್ಭಿಃ=ನಿನ್ನ ವಿಷಯಕಗಳಾದ ಇಂದ್ರಿಯಗಳಿಂದ, ವಾಜಃ=ತಪೋಗುಣದಿಂದ ಕೂಡಿ ಯುದ್ಧವನ್ನು,ತರುತಾ ಅಸ್ತು=ದಾಟುವವನಾಗಬೇಕು, ಹಾಗೆಯೇ ವಿಪ್ರೇಭಿಃ=ಬ್ರಾಹ್ಮಣರಿಗಾಗಿ, ಸವಿತಾ ಜ್ಞಾನದಾಯಕನಾಗಲಿ. || ೯ ||

ಭಾ ॥ (೧) ವಾಜಂ ತಾರಯಿತಾಽನೇತಾ ಸೋಽರ್ವದ್ಭಿರ್ಗೋಸಮಾಪ್ತಿತಃ । ತ್ವದೀಯಸ್ತು ಭವೇದ್ವಿ (೨) ಪ್ರೈಃ ದಾತಾ ವಿಪುಲದಾನತಃ॥ (೩) ಯುದ್ಧಸ್ಯ ತಾರಕೋಽನ್ನಸ್ಯ ದಾತಾ ಭೋಗಸ್ಯ ವಾ ಭವೇತ್ ॥ (೪) ಇಂದ್ರಿಯೈಸ್ತಮಸಾ ಯುದ್ಧಂ ತರುತಾ ಜ್ಞಾನದೋಽಥವಾ ॥ ೯ ॥

ಅ ॥ ಎಲೋ ಅಗ್ನಿಯೇ, ನಿನ್ನ ಭಕ್ತನೇ ಆದವನು, ಗೋಮಿಥುನಗಳನ್ನು ದಾನಮಾಡಿ ಗೋವುಗಳು ಸಮಾಪ್ತಗಳಾಗಿರುವುದರಿಂದ ಕುದುರೆಗಳಿಂದ ಅನ್ನವನ್ನು (ಧಾನ್ಯರೂಪ ಆಮಾನ್ನವನ್ನು)ತರತಕ್ಕವನಾಗಬೇಕು, (2) ಬ್ರಾಹ್ಮಣರಿಂದ ದಾನಮಾಡುವವನಾಗಲಿ. (ಅಂದರೆ ಒಬ್ಬನಿಗೆ ದಾನಮಾಡಲಿಕ್ಕೆ ಶಕ್ತಿಯಿಲ್ಲದಿರುವುದರಿಂದ ಬ್ರಾಹ್ಮಣರನ್ನು ಸಹಾಯಕರನ್ನಾಗಿ ಹೇಗೆಮಾಡಿಯಾನೋ) ಅಷ್ಟು (ಬೇಕಾದಷ್ಟು ದಾನಮಾಡುವವನಾಗಲಿ. ಯಥೇಷ್ಟ ದಾನ ಮಾಡಬೇಕು.) (3) (ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ) ನಿನ್ನ ಭಕ್ತನು. ಚಕ್ರವರ್ತಿಯಾಗಿ ಅಶ್ವಗಳಿಂದ ಯುದ್ಧ ಪಾರಂಗತನು ಆಗಲಿ. ಹಾಗೆಯೇ ಬ್ರಾಹ್ಮಣರಿಗೋಸ್ಕರ, ಯಥೇಷ್ಟ ಅನ್ನದಾನ ಮಾಡುವವನು, ಭೋಗದಾಯಕನೂ ಆಗಬೇಕು. (4) ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ) ನಿನ್ನ ಭಕ್ತನು ಬಹು ಶಿಷ್ಯ ಸಂಪತ್ತುಳ್ಳವನಾಗಿ, (**ಇಂದ್ರಿಯಾಣಿ ಹಯಾನಾಹುಃ** ಎಂಬ ಪ್ರಮಾಣದಿಂದ) ನಿನ್ನ ವಿಷಯಕ ಇಂದ್ರಿಯಗಳಿಂದ. ತಪೋಗುಣದಿಂದೊಡಗೂಡಿ ಯಾವುದು ವಿರುದ್ಧವಿದೆಯೋ ಅದಕ್ಕೆ ತಾರಕನು ಆಗಬೇಕು. ಹಾಗೆಯೇ ಶಿಷ್ಯರಿಗೆ ಜ್ಞಾನದಾಯಕನು ಆಗಬೇಕು. || ೯ ||

ಮು ॥ (೩೮೯) ಜರಾಬೋಧ ತದ್ವಿವಿಡ್ಢಿ ವಿಶೇ ವಿಶೇ ಯಜ್ಞಿಯಾಯ।

ಸ್ತೋಮಂ ರುದ್ರಾಯ ದೃಶೀಕಂ ॥ ೧೦ ॥ ೨೩ ॥

ಅ ॥ ಜರಾಬೋಧ=(ಜರಸ್ತುತೌ) ಸ್ತುತಿಯನ್ನು ತಿಳಿಯುವವನಾದುದರಿಂದ ಜರಾಬೋಧನೆನಿಸಿದ ಶ್ರೀ ಹರಿಯೇ ತತ್=ಸ್ತುತಿಯನ್ನು ತಿಳಿಯುವವನಾದುದರಿಂದ ರುದ್ರಾಯ=ರೋಗ ಪರಿಹಾರಕನಾದ ವಿಷ್ಣುವೆನಿಸಿದ ನಿನಗಾಗಿ, (ಪ್ರಸಿದ್ಧ ಅಗ್ನಿ ಪಕ್ಷದಲ್ಲಿ) ಪ್ರಸಿದ್ಧ ಅಗ್ನಿಯಾದ ನಿನಗಾಗಿ, ದೃಶೀಕಂ=ಪ್ರತ್ಯಕ್ಷವಾಗಿ, ಉಚ್ಚಸ್ವರದಿಂದ ಮಾಡಲ್ಪಡತಕ್ಕ, ಸ್ತೋಮಂ=ಸ್ತುತಿಯನ್ನು, ಯಜ್ಞಿಯಾಯ=ಯಜ್ಞದಲ್ಲಿ ಯೋಗ್ಯರಾದ, ವಿಶೇ ವಿಶೇ=ಸಮಸ್ತ ಜನರಿಗೆ ಪ್ರಯೋಜನ ಸಿದ್ಧಿಯಾಗುವುದಕ್ಕಾಗಿ (ಅಂದರೆ ಯಜಮಾನನಿಗೆ ಪ್ರಯೋಜನ ಸಿದ್ಧಿಯಾಗುವುದಕ್ಕಾಗಿ) ವಿವಿಡ್ಢಿ=(ವಿದ ಜ್ಞಾನೇ) ವಿಶೇಷವಾಗಿ ತಿಳಿ. (ನಿನ್ನ ವಿಷಯಕವಾದ ಸ್ತೋತ್ರವನ್ನು ನೀನು ಸರ್ವದಾ ನಿಶ್ಚಯಿಸಿಕೊಳ್ಳು) (ಇಲ್ಲಿ ಪೌರಾಣಿಕ ಇತಿಹಾಸವಿದೆ. ಶುನಶ್ಶೇಪರಿಂದ ಸ್ತುತಿಸಲ್ಪಡತಕ್ಕ ಅಗ್ನಿಯು, ರುದ್ರನನ್ನು ಸ್ತುತಿಸು, ಪಶುಗಳು ರುದ್ರ ದೇವತಾಕಗಳು, ಎಂದು ಶುನಶ್ಶೇಪರನ್ನು ಕುರಿತು ಹೇಳಿದನು. ಆಗ ಆ ಶುನಶ್ಶೇಪರು ಅಗ್ನಿಯನ್ನು ಕುರಿತು ಹೇಳಿದರು. ನಾನು ರುದ್ರನನ್ನು ಸ್ತುತಿಸಲಿಕ್ಕೆ ತಿಳಿಯಲಾರೆನು. ನೀನೇ ಸ್ತುತಿಸು, ಎಂದು. ಈ ಅಭಿಪ್ರಾಯದಿಂದಲೇ ಜರಾಬೋಧ ಎಂದದ್ದು) ಹೇ ಜರಾಬೋಧ=ರುದ್ರನ ಸ್ತುತಿಯನ್ನು ತಿಳಿದಿರುವ ಎಲೋ ಅಗ್ನಿಯೇ, ಯಜ್ಞಿಯಾಯ=ಯಜ್ಞದಲ್ಲಿ ಯೋಗ್ಯನಾದ, ವಿಶೇ ವಿಶೇ= ನನಗಾಗಿ ರೋಗ ಪರಿಹಾರಕನಾದ ರುದ್ರನ ಸ್ತುತಿಯನ್ನು ನೀನೇ ಮಾಡು. ॥ ೧೦ ॥ ೨೩ ॥

ಭಾ ॥ ಸ್ತುತಿಬೋದ್ಧಾಯತಸ್ತ್ವಂ ತ್ವಮವಧಾರಯ ಸರ್ವದಾ। ನಿತ್ಯಜ್ಞಾನೋಽಪಿ ದತ್ವಾ ತತ್ಫಲಂ ವೇತ್ತೀತಿ ಕಥ್ಯತೇ ॥ ರುಜಾಂ ವಿದ್ರಾವಕೇಶಾಯ ಪ್ರತ್ಯಕ್ಷಾಂ ತವ ವಾ ಸುತ್ತಿಂ ॥ ೧೦ ॥ ೨೩ ॥

ಅ ॥ ಎಲೋ ಜರಾಬೋಧನೇ ಯಾವ ಕಾರಣದಿಂದ ನೀನು ಸ್ತೋತ್ರವನ್ನು ತಿಳಿಯುವವನೋ, ಆದ ಕಾರಣ ರೋಗ ಪರಿಹಾರಕರಿಗೆ ನಿಯಾಮಕನಾದ ಶ್ರೀ ವಿಷ್ಣುವಾದ ನಿನಗೋಸ್ಕರ ಪ್ರತ್ಯಕ್ಷವಾಗಿ ಉಚ್ಚ ಸ್ವರದಿಂದ ಮಾಡಲ್ಪಡತಕ್ಕ ಸ್ತೋತ್ರವನ್ನು ವಿಶೇಷವಾಗಿ ತಿಳಿ. ನಿನ್ನ ವಿಷಯಕವಾದ ಈ ಸ್ತೋತ್ರವನ್ನು ಸರ್ವದಾ ನೀನೇ ನಿಶ್ಚಯಿಸಿಕೊಳ್ಳು. (ಹಾಗಾದರೆ ಪರಮಾತ್ಮನು ಸರ್ವಜ್ಞನು,ಆದ ಕಾರಣ ವಿಶಿಷ್ಯ ಸ್ತುತಿ ಬೋದ್ಧನೆಂದು ಹೇಗೆ ಹೇಳಿಸಿಕೊಳ್ಳಲ್ಪಡುತ್ತಾನೆ. ಮತ್ತು ಆತನು ನಿತ್ಯ ಜ್ಞಾನವುಳ್ಳವನೆಂದಾದ ಮೇಲೆ ವಿಶೇಷವಾಗಿ ತಿಳಿ ಎಂದು ಹೇಗೆ ಪ್ರಾರ್ಥಿಸಿಕೊಳ್ಳಲ್ಪಡುತ್ತಾನೆ....? ಎಂದರೆ) ಯಜ್ಞದಲ್ಲಿ ಫಲ ಹೊಂದಲು ಯೋಗ್ಯರಾದ ಸಮಸ್ತ ಜನರಿಗೂ ಪ್ರಯೋಜನ ಸಿದ್ಧಿಯಾಗುವುದಕ್ಕಾಗಿ (ಅಂದರೆಯಜಮಾನನಿಗೆ ಪ್ರಯೋಜನ ಸಿದ್ಧಿಯಾಗುವುದಕ್ಕಾಗಿ ಸರ್ವಜ್ಞನಾದಾಗ್ಯೂ ಸ್ತುತಿಸುದುದಕ್ಕೆ ಫಲವನ್ನು ಕೊಡುವುದರಿಂದ ಜರಾಬೋಧನೆಂದು ಹೇಳಿಸಿ ಕೊಳ್ಳಲ್ಪಡುತ್ತಾನೆ. ಹಾಗೆಯೇ ನಿತ್ಯಜ್ಞಾನವುಳ್ಳವನಾದಾಗ್ಯೂ ಸ್ತೋತ್ರ ಮಾಡಿದುದಕ್ಕೆ ಫಲವನ್ನು ಕೊಡುವುದಕ್ಕಾಗಿ ಸ್ತುತಿಯನ್ನು ವಿಶೇಷತಃ ತಿಳಿ ಎಂದು ಪ್ರಾರ್ಥಿಸಿಕೊಳ್ಳಲ್ಪಡುತ್ತಾನೆ. (ಪ್ರಸಿದ್ಧ ಅಗ್ನಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ) ಜರಾಬೋಧ=ಎಲೋ ಅಗ್ನಿಯೇ ರೋಗ ಪರಿಹಾರಕನಾದ ನಿನಗಾಗಿ ನಿನ್ನದ್ದಾದ ಸ್ತೋತ್ರವನ್ನು ವಿಶೇಷತಃ ತಿಳಿ. ಈಶಾಯ ಎಂದು ಹೇಳುವಾಗ ಶಿವನೂ ಕೂಡ ರುದ್ರನೆನಿಸುತ್ತಾನೆಂದು ಸೂಚಿತವಾಯ್ತು ॥ ೧೦ ॥ ೨೩ ॥

ಋ॥ (೩೧೦) ಸ ನೋ ಮಹಾಂ ಅನಿಮಾನೋ ಧೂಮಕೇತುಃ ಪುರುಶ್ಚಂದ್ರಃ।
ಧಿಯೇ ವಾಜಾಯ ಹಿನ್ವತು ॥ ೧೧ ॥

ಅ॥ ಅನಿಮಾನಃ=(ನಿತರಾಂ ನ ವಿದ್ಯತೇ ಮಾನಂ ಮಿತಿಃ ಯಸ್ಯ ಎಂಬ ವ್ಯುತ್ಪತ್ತಿಯಿಂದ) ಅತ್ಯಂತವಾಗಿ ಮಿತಿಯಿಲ್ಲದಿರುವನಾದುದರಿಂದ, ಮಹಾನ್ ದೊಡ್ಡ ಪರಿಮಾಣವುಳ್ಳವನು, ಪುರುಶ್ಚಂದ್ರಃ=(ಚದಿ ಆಹ್ಲಾದನೇ. ದೀಪ್ತೌ ಚ)ಅತಿಶಯವಾಗಿ ಆಹ್ಲಾದವನ್ನುಂಟುಮಾಡುವವನಾದುದರಿಂದ ಪೂರ್ಣ ಸುಖವುಳ್ಳವನು, ಸಃ= ಸರ್ವತ್ರ ಪ್ರಸಿದ್ಧನು, ಧೂಮಕೇತುಃ=ಧೂಮವು ಅಗ್ನಿಯ ಊರ್ಧ್ವ ಭಾಗದಲ್ಲಿದ್ದ ಪ್ರಯುಕ್ತ ಪತಾಕಾಸ್ಥಾನೀಯವಾಗಿದೆ. ಆದಕಾರಣ ಪ್ರಸಿದ್ಧಾಗ್ನಿಯು ಧೂಮಕೇತುವೆನಿಸುತ್ತಾನೆ. (ವಿಷ್ಣು ಪಕ್ಷದಲ್ಲಾದರೂ ಧೂಮಕೇತುಃ=(ಧೂಞ ಕಂಪನೇ) ಧೂತ್ಕರೋತೀತಿ ಧೂಮಃ=ರೆಕ್ಕೆಗಳ ಗಾಳಿ ಮೊದಲಾದುವುಗಳಿಂದ ಸ್ವಾಭಾವಿಕವಾಗಿಯೇ ಶತ್ರುಗಳನ್ನು ನಡುಗಿಸುವುದರಿಂದ ಧೂಮಃ=ಗರುಡನು, ಕೇತುರ್ಯಸ್ಯ ಎಂಬ ವ್ಯುತ್ಪತ್ತಿಯಿಂದ ಗರುಡನು ಪತಾಕಾ ಸ್ಥಾನೀಯನಾಗಿ ಉಳ್ಳವನು ಇಂತಹ ಅಗ್ನಿಯು ಶ್ರೀ ವಿಷ್ಣುವು, ನಃ=ನಮ್ಮನ್ನು ಧಿಯೇ= ಜ್ಞಾನಕ್ಕಾಗಿಯೂ ವಾಜಾಯ=ಅನ್ನಾದಿಗಳಿಗಾಗಿಯೂ,ಹಿನ್ವತು=(ಹಿ ಗತೌ, ವೃದ್ಧೌ ಚ)ಯಾವ ಕರ್ಮಗಳಿಂದ ಒಳ್ಳೇ ಜ್ಞಾನವುಳ್ಳವರೂ ಅನ್ನವುಳ್ಳವರೂ ಆಗುವೆವೋ ಅಂತಹ ಸತ್ಕರ್ಮಗಳನ್ನು ಮಾಡುವ ವಿಷಯದಲ್ಲಿ ಪ್ರೇರೇಪಿಸಲಿ. ॥ ೧೧ ॥

ಭಾ (೧) ನಿತರಾಮಮಿತತ್ವೇನ ಮಹಾನ್ ಪುರುಸುಖಶ್ಚ ಸಃ। ಧೂತ್ಕರೋತಿ ಗರುತ್ಮಾನ್ ಯದ್ಧರೇಶ್ಚೇದ್ಧೂಮಕೇತುತಾ ॥ ತಚ್ಛೀಲ್ಯೇ ಮ ಇತಿ ಹ್ಯಸ್ಮಾತ್ ಸೂತ್ರಾದ್ಧೂಮ ಇತೀರಿತಃ।ಜ್ಞಾನಾಯಾನ್ನಾಯ ಚಸ ನಃ ಪ್ರಹಿಣೋತು ಶುಭಕರ್ಮಣಾಂ॥೧೧॥

ಅ॥ ಚೆನ್ನಾಗಿ ಮಿತಿಯಿಲ್ಲದಿರುವವನಾದುದರಿಂದ ಅತಿ ದೊಡ್ಡ ಪರಿಮಾಣವುಳ್ಳವನೂ ಪೂರ್ಣ ಸುಖವುಳ್ಳವನು, (ಶ್ರೀಹರಿಗೆ ಧೂಮಕೇತುತ್ವವು ಹೇಗೆಂದರೆ) ಶ್ರೀಹರಿಗೆ ಧೂಮಕೇತುತ್ವವು ವಿವಕ್ಷಿತವಾಗುವುದಾದರೆ ಆಗ ಧೂಞ ಕಂಪನೇ ಎನ್ನುವುದರಿಂದ, ತಾಚ್ಛೀಲ್ಯ ಎಂಬ ಅರ್ಥದಲ್ಲಿ ಮಃ ಪ್ರತ್ಯಯವು ಎಂಬ ಮಹಾವ್ಯಾಕರಣ ಸೂತ್ರದಿಂದ ಮ ಪ್ರತ್ಯಯವನ್ನು ಮಾಡೋಣ, ಯಾವ ಕಾರಣದಿಂದ ಗರುಡನು ಸ್ವಭಾವತ ಏವ ಶತ್ರುಗಳನ್ನು ನಡುಗಿಸುತ್ತಾನೋ, ಆದ ಕಾರಣ ಗರುಡನು ಧೂಮಃ ಎನಿಸುತ್ತಾನೆ. ಅಂತಹ ಗರುಡನು ಪತಾಕೆಯಾಗಿ ಉಳ್ಳವನು. ಅಂತಹ ಶ್ರೀಹರಿಯು ನಮ್ಮನ್ನು ಜ್ಞಾನಕ್ಕಾಗಿಯೂ ಅನ್ನಕ್ಕಾಗಿಯೂ ಸತ್ಕರ್ಮಗಳನ್ನು ಮಾಡುವ ವಿಷಯದಲ್ಲಿ ಪ್ರೇರೇಪಿಸಲಿ. ॥ ೧೧ ॥

ಋ ॥ (೩೧೧) ಸ ರೇವಾँ ಇವ ವಿಶ್ಪತಿರ್ದೈವ್ಯಃ ಕೇತುಃ ಶೃಣೋತು ನಃ।
ಉಕ್ಥೈರಗ್ನಿರ್ಬೃಹದ್ಭಾನುಃ ॥ ೧೨ ॥

ಅ ॥ ವಿಶ್ಪತಿರಿವ=ರಾಜನಂತೆ, ರೇವಾನ್=ದ್ರವ್ಯವುಳ್ಳ, ದೈವ್ಯಃ=ದೇವತೆಗಳದ್ದಾದ, ಕೇತುಃ=(ಮುಂದೆ ಹೋಗುವುದರಿಂದ) (ದೇವತೆಗಳಿಗೆ) ಪತಾಕೆಯಂತಿರುವ, ಬೃಹದ್ಭಾನುಃ=ಪೂರ್ಣ ತೇಜಸ್ಸುಳ್ಳ, ಸಃ ಅಗ್ನಿಃ=ಈ ಅಗ್ನಿನಾಮಕ ಶ್ರೀಹರಿಯು ನಃ=ನಮ್ಮ, ಉಕ್ಥೈಃ=ಸ್ತೋತ್ರಗಳನ್ನು ಶೃಣೋತು=(ಶ್ರು ಶ್ರವಣೇ) ಕೇಳಲಿ. ॥೧೨॥

ಭಾ ॥ ದೇವಾನಾಂ ಕೇತುಭೂತೋಽಸೌ ವಿತ್ತವಾನ್ ವಿಶ್ಪತಿರ್ಯಥಾ । ಅಸ್ಮದೀಯಾನಿ ಚೋಕ್ಥಾನಿ ಬೃಹತ್ತೇಜಾಃ ಶೃಣೋತು ॥ ೧೨ ॥

ಅ ॥ ರಾಜನು ಹೇಗೋ ಹಾಗೆ ದ್ರವ್ಯವುಳ್ಳವನು, ಮುಂದೆ ಹೋಗುವುದರಿಂದ ದೇವತೆಗಳಿಗೆ ಕೇತುವಿನಂತೆ ಇರುವವನು, ಪೂರ್ಣ ತೇಜಸ್ಸುಳ್ಳವನು, ಇಂತಹ ಅಗ್ನಿಯು ನಮ್ಮ ಸ್ತೋತ್ರಗಳನ್ನು ಕೇಳಲಿ ॥ ೧೨ ॥

ಋ ॥ (೩೧೨) ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯೋ ನಮೋ ಯುವಭ್ಯೋ ನಮ ಆಶಿನೇಭ್ಯಃ। ಯಜಾಮ ದೇವಾನ್ಯದಿ ಶಕ್ನವಾಮ ಮಾ ಜ್ಯಾಯಸಃ ಶಂಸಮಾ ವೃಕ್ಷಿ ದೇವಾಃ ॥ ೧೩ ॥ ೨೪ ॥ ೨೭ ॥

ಅ ॥ ಮಹದ್ಭ್ಯಃ=ದೇಶ ಕಾಲ ಗುಣಗಳಿಂದ ಅಪರಿಚ್ಛಿನ್ನಗಳಾದ ಭಗವಂತನ ರೂಪ ವಿಶೇಷಗಳಿಗೋಸ್ಕರ, ನಮಃ=ನಮಸ್ಕಾರವು ಅರ್ಭಕೇಭ್ಯಃ=ಲೋಕದೃಷ್ಟಿಯಿಂದ ಅರ್ಭಕ ಪರಿಮಾಣವುಳ್ಳ ಭಗವಂತನ ರೂಪ ವಿಶೇಷಗಳಿಗೋಸ್ಕರ, ನಮಃ= ಯುವಭ್ಯಃ= ತರುಣ ಪರಿಮಾಣವುಳ್ಳ ರೂಪ ವಿಶೇಷಗಳಿಗೋಸ್ಕರ, ನಮಃ, ಆಶಿನೇಭ್ಯಃ=ಭಗವಂತನ ಬಹುರೂಪ ವಿಶೇಷಗಳಿಗೋಸ್ಕರ, ನಮಃ=ನಮಸ್ಕಾರವು. ದೇವಾಃ=ಕ್ರೀಡಾದಿ ಗುಣ ಸಂಪನ್ನಗಳಾದ ಭಗವದ್ರೂಪಗಳೇ, (ಯಜ್ಞಸ್ತಂಭದಿಂದ ಮೋಚಿತರಾದ ನಾವು) ಯದಿ ಶಕ್ನವಾಮ= (ಶಕ್ಲೃ ಶಕ್ತೌ) ಯಾಗ ಮಾಡುವುದರಲ್ಲಿ ಶಕ್ತಿಯುಳ್ಳವರು ಆದರೆ, ದೇವಾನ್= ನಾರಾಯಣಾದಿ ಸಮಸ್ತ ದೇವತೆಗಳನ್ನು ಯಜಾಮ=ಪೂಜಿಸುವೆವು. (ಶಕ್ತಿಯಿಲ್ಲವಾದರೆ) ಜ್ಯಾಯಸಃ=ಶ್ರೇಷ್ಠಗಳಾದ ಭಗವದ್ರೂಪ ವಿಶೇಷಗಳ, ಶಂಸಂ=ಕೇವಲ ಸ್ತುತಿಯನ್ನು ಮಾ ಆವೃಕ್ಷಿ=(ಓವ್ರಶ್ಚೂ ಚ್ಛೇದನೇ) ಲುಪ್ತವನ್ನಾಗಿ ಮಾಡುವುದಿಲ್ಲ. (ಸ್ತುತಿ ಮಾಡದಿರುವುದಿಲ್ಲ.) (ಸ್ತುತಿ ಮಾಡುತ್ತಾ ಇರುತ್ತೇವೆ) ಅಥವಾ ಮಹದ್ಭ್ಯಃ= ನಾರಾಣಾದಿ ಇಂದ್ರ ಪರ್ಯಂತ ದೇವತೆಗಳಿಗೋಸ್ಕರ, ನಮಃ, ಅರ್ಭಕೇಭ್ಯಃ= ರುದ್ರಾದಿ ಪಿತೃ ಸಂಬಂಧ ಪ್ರಸಿದ್ಧಿಯುಳ್ಳ ಸ್ಕಂದ ಇಂದ್ರಾದಿ ದೇವತೆಗಳಿಗೋಸ್ಕರ, ನಮಃ, ಯುವಭ್ಯಃ= ಸ್ಕಂದ ಇಂದ್ರಾದಿ ದೇವತೆಗಳದ್ದೇ ತರುಣರೂಪ ವಿಶೇಷಗಳಿಗೋಸ್ಕರ, ನಮಃ, ಆಶಿನೇಭ್ಯಃ= ಸ್ಕಂದಾದಿಗಳದ್ದೇ ಬಹುರೂಪಗಳಿಗೋಸ್ಕರ ನಮಃ ನಮಸ್ಕಾರವು. (ದೇವಪದದಿಂದ ನಾರಾಯಣಾದಿ ಸಮಸ್ತ ದೇವತೆಗಳನ್ನು ಇಟ್ಟುಕೊಳ್ಳಬೇಕು.) ॥ ೧೩ ॥

ಭಾ ॥ (೧) ಅಥ। ನಾರಾಯಣ ಬ್ರಹ್ಮಪುರಸ್ಸರಾಸ್ತು ದೇವಾ ಮಹಾಂತಃ ಶಿಶವಃ ಸ್ಕಂದಪೂರ್ವಾಃ। ವಟುಸ್ವರೂಪಾಶ್ಚ ತ ಏವ ಕ್ಷತ್ರಜಿತ್ ಯುವಾನ ಇಂದ್ರಾದಯ ಏತ ಏವ ॥ (೨) ಮಹತ್ತ್ವಮೇಷಾಂ ಗುಣತೋಽಪಿ ಯೂನಾಮಿಂದ್ರಾದಯೋ ಮಧ್ಯಗುಣಾ ಯುವಾನಃ ॥ (೩) ಆಪೇಕ್ಷಿಕಾಲ್ಪೈಶ್ಚ ಗುಣೈಸ್ತದೀಯೈಃ ಸಮೀರಿತಾ ಆಶಿನಾ ಅರ್ಭಕಾಶ್ಚ। (೪) ಕೃತಂ ನಮಃ (೫) ಶಕ್ತಿಮಂತೋ ಯಜಾಮ ನ ಜ್ಯಾಯಸಾಂ ಸ್ತುತಿಮಾತ್ರಂ ಲುಪಾಮಃ (೬) ಏಕಸ್ಯ ವಿಷ್ಣೋರಪಿ ರೂಪಭೇದಾ ಅಣೀಯಾಂಸಃ ಸಂತ್ಯಥವಾ ಮಹಾಂತಃ ॥ (೭) ಯುವತ್ವಸಾಮ್ಯೇಽಪಿ ಮಹತ್ತ್ವಭೇದಾದ್ಯುವಾ ಮಹಾನಿತ್ಯಪಿ ಭೇದ ಉಕ್ತಃ ॥ ೧೩ ॥ ೨೪ ॥ ೮ ॥

ಅ ॥ (೧) ಇನ್ನು ಮುಂದೆ ದೇವತೆಗಳು ಸ್ತುತಿಸಲ್ಪಡುತ್ತಾರೆ. (ಮಹದಾದಿ ಶಬ್ದ ನಿರ್ದಿಷ್ಟರಾದ ದೇವತೆಗಳನ್ನು ಹೇಳುತ್ತಾರೆ.) ಶ್ರೀನಾರಾಯಣನು ಬ್ರಹ್ಮನು ಇವರೇ ಮೊದಲಾದ ದೇವತೆಗಳಾದರೂ ಮಹಾಂತಃ ಎನಿಸುತ್ತಾರೆ. ಸ್ಕಂದನೇ ಮೊದಲಾದ ದೇವತೆಗಳು ಶಿಶುಗಳು ಅರ್ಭಕರನಿಸುತ್ತಾರೆ ವಟುಸ್ವರೂಪರಾದ ಸ್ಕಂದ ಇಂದ್ರಾದಿಗಳೇ ಆಶೀನರು ಎನಿಸುತ್ತಾರೆ. (ಅಶ್ನುವಂತಿ ವ್ಯಾಪ್ನುವಂತಿ ಶ್ರೌತಂ ಸ್ಮಾರ್ತಂಚ

ಕರ್ಮ ತೀ=ಶ್ರುತ್ಯುಕ್ತ ಕರ್ಮಗಳನ್ನು ಸ್ಮೃತ್ಯುಕ್ತ ಕರ್ಮಗಳನ್ನೂ ಚೆನ್ನಾಗಿ ಮಾಡಿಕೊಂಡಿರುವವರು ಆಶೀನರು ಎನಿಸುತ್ತಾರೆ.) **ನಮೋ ಮಹದ್ಭ್ಯೋ ನಮಃ ಶಿಶುಭ್ಯೋ ನಮೋ ಯುವಭ್ಯೋ ನಮ ಅವಟುಭ್ಯಃ** ಎಂದು ನಮ ಅವಟುಭ್ಯಃ ಎಂದು ಭಾಗವತ ಪುರಾಣ ಸಮಾಖ್ಯೆಯಿಂದ ಆಶಿನ ಶಬ್ದವು ವಟು ವಾಚಕವು.) ಅರ್ಭಕರು ಇತ್ಯಾದಿಗಳಿಂದ ಹೇಳಲ್ಪಟ್ಟ ಆ ಸ್ಕಂದ ಇಂದ್ರಾದಿ ದೇವತೆಗಳೇ ಕುತ್ರ ಚಿತ್ ಕೆಲವು ರೂಪ ವಿಶೇಷಗಳಲ್ಲಿ ಯುವಾನಃ ಎನಿಸುತ್ತಾರೆ- (೩) (ಪ್ರಕಾರಾಂತರದಿಂದ ಸರ್ವದಾತರುಣರೇ ಆದ ನಾರಾಯಣಾದಿ ರೂಪ ವಿಶೇಷಗಳಿಗೆ ಮಹತ್ತ್ವವನ್ನು ವ್ಯಾಖ್ಯಾನ ಮಾಡುತ್ತಾರೆ.) ಯಾವ ಕಾರಣದಿಂದ ನಾರಾಯಣಾದಿ ರೂಪಗಳಿಗೆ ಜ್ಞಾನ ಆನಂದ ಮೊದಲಾದ ಗುಣಗಳಿಂದ ಮಹತ್ತ್ವವು ಹೇಳಲ್ಪಡುತ್ತದೋ, ವಾರ್ಧಿಕ್ಯದಿಂದ ಅಲ್ಲವೋ ಆದಕಾರಣ ತರುಣಗಳೇ ಆದ ಈ ನಾರಾಯಣಾದಿರೂಪಗಳಿಗೆ ಮಹತ್ತ್ವವು ಕೂಡುತ್ತದೆ. ತರುಣರೇ ಆದ ಇಂದ್ರಾದಿಗಳು ಮಧ್ಯಮ ಗುಣವುಳ್ಳವರು. (3) ಆ ಇಂದ್ರಾದಿದೇವತೆಗಳೇ, ಅವರವರದ್ವಾರ ತಮ್ಮ ತಮ್ಮ ಆಪೇಕ್ಷಿತಗಳಾದ ಅಲ್ಪಗುಣಗಳಿಂದ ಆಶಿನಾಃ=ವಟುಗಳು. ಅರ್ಭಕರೂ ಎಂದೂ ಹೇಳಲ್ಪಡುತ್ತಾರೆ. (4) ಹೀಗೆ ಮಹದಾದಿ ಪದಾರ್ಥಗಳನ್ನು ಹೇಳಿ ಪೂರ್ವಾರ್ಧ ವಾಕ್ಯಾರ್ಥವನ್ನು ಹೇಳುತ್ತಾರೆ.) ಮಹದಾದಿ ದೇವತೆಗಳಿಗೋಸ್ಕರ ನಮ್ಮಿಂದ ನಮಸ್ಕಾರವು ಮಾಡಲ್ಪಟ್ಟಿತು- (5) (ಈಗ ಉತ್ತರಾರ್ಧವನ್ನು ವ್ಯಾಖ್ಯಾನ ಮಾಡುತ್ತಾರೆ.) (ದೇವತೆಗಳಿಂದ ಯಜ್ಞಸ್ತಂಭದಿಂದ ಬಿಡಿಸಿಕೊಡಲ್ಪಟ್ಟ ನಾವು ಯಾಗಮಾಡುವುದರಲ್ಲಿ) ಶಕ್ತಿಯುಳ್ಳವರಾಗಿ ಆದರೆ ದೇವತೆಗಳನ್ನು ಪೂಜಿಸುವೆವು. (ಶಕ್ತಿಯಿಲ್ಲವಾದರೂ) ಶ್ರೇಷ್ಠರಾದ ದೇವತೆಗಳ ಸ್ತುತಿ ಮಾತ್ರವನ್ನು ಲೋಪಿಸುವುದಿಲ್ಲ. (ಸ್ತುತಿಮಾಡುತ್ತಾ ಇರುತ್ತೇವೆ) (ಎಲೋ ದೇವತೆಗಳಿರಾ ಎಷ್ಟು ಮಾತ್ರಕ್ಕೂ ಸ್ತುತಿಮಾಡದೆ ಇರುವುದಿಲ್ಲ.) (6) (ಮಹದ್ಭ್ಯಃ ಇತ್ಯಾದಿ ಶಬ್ದಗಳಿಂದ ಸಮಸ್ತ ದೇವತೆಗಳೂ ವಿವಕ್ಷಿತರಾದರೆ ಹೀಗೆ ವ್ಯಾಖ್ಯಾನವಿರಲಿ. ಮಹದ್ಭ್ಯಃ ಇತ್ಯಾದಿ ಶಬ್ದಗಳಿಂದ ವಿಷ್ಣುವೊಬ್ಬನನ್ನೇ ಇಟ್ಟುಕೊಂಡರೆ ಆಗ ಏನು ಅರ್ಥವು ಎಂದರೆ) ಒಬ್ಬ ವಿಷ್ಣುವಿಗೂ ಕೂಡ ರೂಪ ವಿಶೇಷಗಳು ಇವೆ ಅಣುರೂಪಗಳು ಅಥವಾ ಮಧ್ಯಮ ರೂಪಗಳು (ಅಣುತ್ವ ಮಹತ್ತ್ವಗಳೆಂಬ ಎರಡು ಪ್ರಕಾರಗಳಿರುವವುಗಳು) ಮಹದ್ರೂಪಗಳು. (7) (ಪ್ರಕೃತ ವೇನಾಯಿತೆಂದರೇ ಅರ್ಭಕ ಆಶಿನಗಳಿಗೆ ತಾರುಣ್ಯವು ಸಮವಾದುದಾಗ್ಯೂ ಪರಿಮಾಣಭೇದದಿಂದ ಯುವಾ ಮಹಾನ್ ಎಂದೂ ಭೇದವು ಉಕ್ತವಾಗಿದೆ.

ವಿ || ಇಂದ್ರಾದಿಗಳು ತರುಣರು ಎಂದಾದರೆ ಪುನಃ ಅವರೇವೇ ಆಶಿನರು (ವಟುಗಳು) ಹೇಗೆ ಆಗುವರು ಎಂದರೆ ಶ್ರೀ ವಿಷ್ಣುವಿಗಿಂತ ಬ್ರಹ್ಮಾದಿಗಳು ಮಧ್ಯಮ ಗುಣಗಳುಳ್ಳವರಾದುದರಿಂದ ಯುವಾನಃ= ತರುಣರು ಎನಿಸುತ್ತಾರೆ. ಆ ಬ್ರಹ್ಮಾದಿಗಳಿಗಿಂತ ಅಲ್ಪ ಗುಣಗಳುಳ್ಳವರು, ನಮಗಿಂತ ಬಹ್ವಧಿಕ ಗುಣಗಳುಳ್ಳವರು ಹೀಗೆ ಇಟ್ಟುಕೊಂಡು ಇಂದ್ರಾದಿಗಳೇ ಆಶಿನರು ವಟುಗಳೆನಿಸುತ್ತಾರೆ. ಒಂದೇ ಕಡೆಯಲ್ಲಿ ಮೂರು ಪ್ರಕಾರಗಳು ಹೇಗೆಂದರೆ—ಕೆಲವು ರೂಪ ವಿಶೇಷಗಳಲ್ಲಿ, ಕೆಲವು ಅವಸ್ಥಾ ವಿಶೇಷಗಳಲ್ಲಿ, ಕೆಲವು ಪರಿಮಾಣ ವಿಶೇಷದಲ್ಲಿ. ಹೀಗೆ ನಾರಾಯಣಾದಿ ರೂಪಗಳಲ್ಲಿ ಮಹತ್ತ್ವಾದಿಗಳನ್ನು ವಿವಕ್ಷಾಮಾಡಿಕೊಳ್ಳಬೇಕು. ಅಂದರೆ—ನಾರಾಯಣನನ್ನಾರಂಭಿಸಿ ಇಂದ್ರ ಪರ್ಯಂತರಾದವರು ಅವಾಂತರ ಪಿತ್ರಾದಿ ಸಂಬಂಧ ಪ್ರಸಿದ್ಧಿಯಿಲ್ಲದವರು, ಮಹಾಂತಃ,ಎನಿಸುತ್ತಾರೆ. ಶಿವ ಮೊದಲಾದ ಪಿತ್ರಾದಿಗಳ ಸಂಬಂಧವುಳ್ಳ ಪ್ರಸಿದ್ಧರಾದ ಸ್ಕಂದ ಇಂದ್ರಾದಿ ದೇವತೆಗಳು ಅರ್ಭಕರೆನಿಸುತ್ತಾರೆ. ಅವರೇವೇ ರೂಪ ವಿಶೇಷಗಳಲ್ಲಿ ಯುವಾನಃ= ತರುಣರೂ, ಆಶಿನಾಃ= ವಟುಗಳು ಎಂದೂ ಅನಿಸುತ್ತಾರೆ. ಎಂದುಕ್ತವಾಯ್ತು. ಇದರಿಂದ ನಾರಾಯಣಾದಿ ಎಲ್ಲಾ ದೇವತೆಗಳೂ ನಿರ್ಜರರು (ಮುದಿತನವಿಲ್ಲದವರು) ಆದುದರಿಂದ ಇವರಿಗೆ ಮಹತ್ತ್ವವು ಹೇಗೆಂದರೆ ಇವರು ಸರ್ವದಾ ತರುಣರೇ ಆದಾಗ್ಯೂ ಇವರಿಗೆ ಪ್ರಕಾರ ಭೇದದಿಂದ ಮಹತ್ತ್ವಾದಿಗಳೂ ಕೂಡುತ್ತವೆ. (೨) ಶ್ರೀ ನಾರಾಯಣಾದಿ ಭಗವದ್ರೂಪಗಳಂತೆ ಅನಂತ ಗುಣಗಳೂ ಇಲ್ಲ. ಅಸ್ಮದಾದಿಗಳಂತೆ ಅತ್ಯಲ್ಪ ಗುಣಗಳೂ ಇಲ್ಲ. ಆದ ಕಾರಣ ಮಧ್ಯಮ ಗುಣಗಳುಳ್ಳವರಾದುದರಿಂದ ಯುವಾನ ಏವ ತರುಣರೇ ಆದ ಇಂದ್ರಾದಿ ದೇವತೆಗಳು ಬ್ರಹ್ಮನೇ ಮೊದಲಾದ ಮಧ್ಯಮ ಗುಣಗಳುಳ್ಳ ತರುಣರನ್ನಪೇಕ್ಷಿಸಿ ಅಲ್ಪ ಗುಣಗಳುಳ್ಳವರಾದುದರಿಂದಲೂ, ಅಲ್ಪ ಗುಣಗಳುಳ್ಳ ಅಸ್ಮದಾದಿಗಳಿಗಿಂತ ಅಧಿಕ

ಗುಣಗಳುಳ್ಳವರಾದುದರಿಂದಲೂ, ಅಶಿನರು ಎನಿಸುತ್ತಾರೆ. ನಾರಾಯಣಾದಿ ಭಗವದ್ರೂಪಗಳಿಗಿಂತ ಅಲ್ಪ ಗುಣಗಳುಳ್ಳವರಾದುದರಿಂದ ಅರ್ಭಕರೆಂದೂ ಅನಿಸುತ್ತಾರೆ. (೩) ಮಹದ್ಭ್ಯಃ ಇತ್ಯಾದಿಗಳಿಂದ ಭಗವದ್ರೂಪ ಗಳನ್ನೇ ವಿವಕ್ಷಾಮಾಡಿಕೊಳ್ಳುವುದಾದರೆ—ಅವ್ಯಾಕೃತಾಕಾಶಾದಿಗಳಲ್ಲಿರತಕ್ಕ ವ್ಯಾಪ್ತಗಳಾದ ಭಗವದ್ರೂಪ ವಿಶೇಷಗಳು ಮಹಾಂತಃ ಎನಿಸುತ್ತವೆ. ಮನಸ್ಸು ಮೊದಲಾದವುಗಳಲ್ಲಿರತಕ್ಕ ಅಣುರೂಪಗಳಾದ ವಾಮನ ಮೊದಲಾದ ಭಗವದ್ರೂಪಗಳು ವಟು ರೂಪಗಳು. ರಾಮ ಮೊದಲಾದ ಭಗವದ್ರೂಪಗಳು ಯುವಾನಃ= ತರುಣ ರೂಪಗಳು ॥ ೧೩ ॥ ೨೪ ॥ ೮ ॥

ಅವ ॥ ೯ ಋಕ್ಕುಗಳು. ೨ ವರ್ಗಗಳು. ೨೮ನೇ ಸೂಕ್ತವು. ಅದರಲ್ಲಿ ಮೊದಲಿನ ೪ ಋಕ್ಕುಗಳು ಇಂದ್ರ ದೇವತಾಕಗಳು. ಅನುಷ್ಟುಬ್ ಛಂದಸ್ಕಗಳು.

ಋ ॥ (೩೧೩) ಯತ್ರ ಗ್ರಾವಾ ಪೃಥು ಬುಧ್ನ ಊರ್ಧ್ವೋ ಭವತಿ ಸೋತವೇ।
ಉಲೂಖಲಸುತಾನಾಮವೇದ್ವಿಂದ್ರ ಜಲ್ಗುಲಃ ॥ ೧ ॥

ಅ ॥ (ಪಾಶದಿಂದ ಬಿಡುಗಡೆ ಹೊಂದಿದ ಶುನಃಶೇಪನು ಈ ಋಕ್ಕುಗಳಿಂದ ಹೋಮಿಸಿದನು.) ಹೇ ಜಲ್ಗುಲಃ=(ಜರಸ್ತುತೌ, ಗುರುಸ್ವೀಕಾರೇ, ಜರಂಗುರತಿ= ಸ್ತೋತ್ರವನ್ನು ಸ್ವೀಕರಿಸುತ್ತಾನೆ. ರೋಲಃ= ರೇ ಫಕ್ಕೆ ಲಕಾರವು. ಜಲ್ಗುಲಾಃ) ನಾವು ಮಾಡುವ ಸ್ತೋತ್ರವನ್ನು ಸ್ವೀಕರಿಸುವ, ಇಂದ್ರ= ಶ್ರೀಹರಿಯೇ, ಯತ್ರ ಯಾವ ಯಜ್ಞದಲ್ಲಿ, ಪೃಥು ಬುಧ್ನಃ= ವಿಸ್ತೀರ್ಣಗಳಾದ ಕೆಳಭಾಗಗಳುಳ್ಳ, ಊರ್ಧ್ವಃ= ಊರ್ಧ್ವ ದೇಶ ಸಂ ಬಂಧಿಗಳಾದ, (ಸೋಮ ರಸವನ್ನು ಹಿಂಡಲಿಕ್ಕೆ ಋತ್ವಿಜರಿಂದ ಮೇಲಕ್ಕೆ ಎತ್ತಲ್ಪಟ್ಟ) ಗ್ರಾವಾ= ಕಲ್ಲುಗಳು. ಸೋತವೇ=(ಷೂಞ್ ಅಭಿಷವೇ) ಸೋಮ ರಸವನ್ನು ಹಿಂಡುವುದಕ್ಕಾಗಿ ಭವಂತಿ=ಆಗುತ್ತವೋ, (ಅಂತಹ ಯಜ್ಞದಲ್ಲಿ) ಉಲೂಖಲಸುತಾನಾಂ=ಉಲೂಖಲದಲ್ಲಿ(ಸೋಮ ರಸವನ್ನು ಹಿಂಡಿ ಇಟ್ಟುಕೊಳ್ಳುವ ಪಾತ್ರದಲ್ಲಿ) ಹಿಂಡಲ್ಪಟ್ಟ ನಮ್ಮದ್ದಾದ ಸೋಮ ರಸಗಳನ್ನು ಅವ ಇತ್ ಉ=ಸರ್ವಥಾ ಹೊಂದಲೇಬೇಕು. ಹೊಂದುತ್ತಿ. ಅಧ್ಯಾತ್ಮ ರೂಪಕಾರ್ಥದಲ್ಲಿ ಯಾವ ಜ್ಞಾನ ಯಜ್ಞದಲ್ಲಿ, ಪೃಥುಬುಧ್ನಃ= ವಿಸ್ತಾರವಾದ ಮೂಲಪ್ರದೇಶವುಳ್ಳದ್ದು ಊರ್ಧ್ವಃ= ಮಾತಾಡಲು ಉದ್ಯುಕ್ತವಾದ, ಗ್ರಾವಾ= ವಾಗಿಂದ್ರಿಯವು, ಸೋಮಂ= ಮನಸ್ಸನ್ನು, ಸೋತವೇ ವೇದ ವಾಕ್ಯವನ್ನು ಪರ್ಯಾಲೋಚಿಸುತ್ತಾ ವಿಚಾರ ಮಾಡಲಿಕ್ಕೆ ಆಗುತ್ತದೋ, ಅಂತಹ ಯಜ್ಞದಲ್ಲಿ ಉಲೂ ಖಲಸುತಾನಾಂ= ಭೂಮಿಗಿಂತ ಎತ್ತರದಲ್ಲಿರುವ,ಧಾನ್ಯಗಳನ್ನು ಪುಡಿಮಾಡುವ ಉಜಿಡೆಯಲ್ಲಿ ಅಂದರೆ ಉಜಿ ಡೆಗೆ ಸದೃಶವಾದ ಶರೀರದಲ್ಲಿರುವ ಮನೋವೃತ್ತಿ ವಿಶೇಷಗಳನ್ನು ಅವ ಇತ್ ಉ =ಸರ್ವಥಾ ಹೊಂದಲೇ ಹೊಂದುತ್ತಿ. ॥ ೧ ॥

ಭಾ ॥ (೧) ವಿಸ್ತೀರ್ಣಾಧಸ್ತನಾ ಯತ್ರ ಗ್ರಾವಾಣೋಽಭಿಷವೋದ್ಧೃತಾಃ। ಧಿಷಣಾಭಿಷುತಾನ್ ಸೋಮಾನವ ನಃ ಸ್ವೀಕೃತಸ್ತುತೇ॥(೩)ಗುರು ಸ್ವೀಕಾಗಇತ್ಯಸ್ಮಾದ್ಧಾತೋಃ ಸ್ತುತ್ಯೋಹಿ ಜಲ್ಗುಲಃ ॥ ೧ ॥

ಅ ॥ ನಾವು ಮಾಡುವ ಸ್ತೋತ್ರವನ್ನು ಸ್ವೀಕರಿಸುವ ಇಂದ್ರನೇ ಯಾವ ಯಜ್ಞದಲ್ಲಿ ವಿಸ್ತಾರವಾದ ಅಧಸ್ತನ ಭಾಗಗಳುಳ್ಳವುಗಳು, ಧಿಷಣ= (ಧೃಷು ಸಂಹತೌ ಹಿಂಸಾಯಾಂಚ,ಹಿಂಸಾರ್ಥಕವಾದ ಧೃಷ್ ಧಾತು ವಿಗೆ ಧಿಷ ಆದೇಶವು. ಅನಾದೇಶ.) ಉಜಿಡೆಯಲ್ಲಿ ಹಿಂಡಲ್ಪಟ್ಟ ಸೋಮವನ್ನು (ಷೂ ಞ್ ಅಭಿಷವೇ) ಹಿಂಡ ಲಿಕ್ಕೆಋತ್ವಿಜರಿಂದ ಮೇಲಕ್ಕೆ ಎತ್ತಲ್ಪಟ್ಟ ಪಾಷಾಣಗಳು ಇವೆಯೋ, ಅಲ್ಲಿ ಸೋಮ ಪಾತ್ರದಲ್ಲಿ ಹಿಂಡಲ್ಪಟ್ಟ

ನಮ್ಮದ್ದಾದ ಸೋಮಗಳನ್ನು ಹೊಂದು. ಅವಧಾತುವು, ಅವ ರಕ್ಷಣ ಗತಿ ಇತ್ಯಾದ್ಯರ್ಥಗಳಲ್ಲಿ. ಪ್ರಕೃತ ಅವಾಪ್ತ್ಯರ್ಥಕವು) (ಜಲ್ಗುಲಃಎನ್ನುವದಕ್ಕೆ ಸ್ವೀಕೃತ ಸ್ತುತಿಎನ್ನುವ ಅರ್ಥವುಹೇಗೆ ಆಗುವುದೆಂದರೆ ಗುರುಸ್ವೀಕಾರೇ ಎಂಬ ಧಾತು ವ್ಯಾಖ್ಯಾನದಿಂದ ಸ್ತುತಿಯನ್ನು ಸ್ವೀಕರಿಸುವವನು ಜಲ್ಗುಲಃಎನಿಸುತ್ತಾನೆ. (ಜರ, ಗುರ, ಎಂಬುವ ಎರಡು ಕಡೆಯಲ್ಲಿಯೂ ರೋಲಃ ಎನ್ನುವುದರಿಂದ ರೇಫಕ್ಕೆ ಅಕಾರವು. ಜರಂ ಗುರತೀಶಿ ಜಲ್ಗುಲಾಃ ಸಂಬುದ್ಧಿಯು. ಜಲ್ಗುಲಃ ಎಂದು. ||೨||

ಋ (೩೧೪) ಯತ್ರ ದ್ವಾವಿವ ಜಘನಾ ಧಿಷವಣ್ಯಾ ಕೃತಾ। ಉಲೂಖಲ ಸುತಾನಾ ಮವೇದ್ವಿಂದ್ರ ಜಲ್ಗುಲಃ ||೨||

ಅ || (ಇಲ್ಲಿ ಸೋಮವನ್ನು ಹಿಂಡಲಿಕ್ಕೆ ಹೇತು ಭೂತಗಳಾದ ಎರಡು ಹಲಿಗೆಗಳು ಸ್ತ್ರೀಯರ ಜಘನ ಸಮಗಳಾಗಿ ಸ್ತುತಿಸಲ್ಪಡುತ್ತವೆ.) ಯತ್ರ = ಯಾವ ಯಜ್ಞದಲ್ಲಿ, ದ್ವಾವಿವ ಜಘನಾ=ಸ್ತ್ರೀಯರ ಎರಡು ಜಘನಗಳಂತೆ, ಅಧಿಷವಣ್ಯಾ= (ಅಧಿ ಷೂಯತೇ ಸೋಮಃ ಏತಯೋಃ ಸೋಮಃ=ಇವುಗಳಲ್ಲಿ ಸೋಮವು ಹಿಂಡಲ್ಪಡುತ್ತದೆ, ಎಂಬುವುದರಿಂದ) ಎರಡು ಹಲಿಗೆಗಳಾಗಿ,=ಕೃತಾ ಮಾಡಲ್ಪಟ್ಟವೆಯೊ (ಅಂತಹ ಯಜ್ಞದಲ್ಲಿ ಉಲೂಖಲದಲ್ಲಿ ಹಿಂಡಲ್ಪಟ್ಟ ಸೋಮಗಳನ್ನು ಸರ್ವಥಾ ಹೊಂದಲೇ ಹೊಂದುತ್ತಿ. (ಅಧ್ಯಾತ್ಮ ರೂಪ ಅರ್ಥದಲ್ಲಿ) ಅಧಿಷವಣ್ಯಾ=ಓಷ್ಠಗಳು, ಎಂದು ಇಟ್ಟುಕೊಳ್ಳಬೇಕು.) ||೨||

ಭಾ || ಫಲಕೇsಭಿಷವಸ್ಯೈವ ಸ್ತ್ರೀಯೋ ಜಘನಸಾಮ್ಯತಃ। ಪ್ರೋಕ್ತೇ ||೨||

ಅ || ಇಲ್ಲಿ ಸೋಮರಸವನ್ನು ಹಿಂಡಲಿಕ್ಕೆ ಹೇತುಭೂತಗಳಾದ ಎರಡು ಹಲಗೆಗಳು ಸ್ತ್ರೀಯರ ಜಘನಗಳಿಗೆ ಸಮಗಳಾಗಿ ಹೇಳಲ್ಪಟ್ಟವೆ.

ವಿ || (1) ಇಲ್ಲಿ ಯಾಜ್ಞಕರದ್ದು ಈ ಆಚಾರವು. ಭೂಮಿಯಲ್ಲಿ ಉಪರಾ ಎಂದು ಹೆಸರುಳ್ಳ (೪) ನಾಲ್ಕು ಗರ್ತಗಳನ್ನು ಮಾಡಿ ಅದರ ಮೇಲೆ ಪಲಾಶದ ಅಧಿಷವಣಿ ಫಲಕ ಎಂದು ಹೆಸರುಳ್ಳ ೨ ಪೀಠ (ಹಲಿಗೆ) ಗಳನ್ನೂ ಸ್ಥಾಪಿಸಿ ಆ ಎರಡು ಪೀಠಗಳ ಮೇಲೆ ಆನುಡುಹ (ಎತ್ತಿನ) ಚರ್ಮವನ್ನು ಹಬ್ಬಿಸಿ ಅದರ ಮೇಲೆ ಉಪಲ ಎಂದು ಹೆಸರುಳ್ಳ ವಿಸ್ತ್ರತವಾದ ಪಾಷಾಣವನ್ನು ಸ್ಥಾಪಿಸಿ ಅಲ್ಲಿ ಅಧ್ವರ್ಯುಗಣಕ್ಕೆ ಸೇರಿದ ನಾಲ್ವರು ಋತ್ವಿಜರು ನಾಲ್ಕು ಕಲ್ಲುಗಳಿಂದ ಜಜ್ಜಿ ಸೋಮರಸವನ್ನು ಹಿಂಡುತ್ತಾರೆ. ಆದ ಕಾರಣ ೨ ಹಲಿಗೆಗಳೂ ಪರಂಪರಯಾ ಸೋಮರಸವನ್ನೂ ಹಿಂಡಲಿಕ್ಕೆ ಕಾರಣಗಳೆಂದು ತಿಳಿಯ ಬೇಕು. (೩) ಯಾವ ಯಜ್ಞದಲ್ಲಿ ೨ ಜಘನಗಳಂತೆಯೇ ಅಧಿಷವಣಿಗಳೆರಡು. ಅಧಿಷೂಯತೇ ಸೋಮಃ ಏತಯೋಃ ಎಂಬ ವ್ಯುತ್ಪತ್ತಿಯಿಂದ, ಅಧಿಷವಣೀ=ಎರಡು ಹಲಿಗೆಗಳು (ಅಂದರೆ ಹೇಗೆ ಗಮನ ಮೊದಲಾದ ವ್ಯಾಪಾರ ಕಾಲದಲ್ಲಿ! ಜಘನದ ಏಕದೇಶಗಳು ಚಲನದಿಂದ ಕೂಡಿರುತ್ತವೋ ಹಾಗೆಯೇ ಸೋಮವನ್ನು ಹಿಂಡುವ ಕಾಲದಲ್ಲಿ ಹಲಿಗೆಗಳೂ ಚಲನದಿಂದ ಕೂಡಿದವುಗಳಾಗಿ ಮಾಡಲ್ಪಡುತ್ತವೆ.) (3) ಹಾಗಾದರೆ ಸೋಮವನ್ನು ಹಿಂಡುವ ಕಾಲವಲ್ಲಿ ಉಲೂಖಲವೇ ಇಲ್ಲದಿರುವ ಪ್ರಯುಕ್ತ ಉಪಲದಿಂದ ಹಿಂಡಲ್ಪಡ ತಕ್ಕ ಸೋಮವು ಉಲೂಖಲದ(ಉಜಿಡೆಯ) ಸುತವು ಹೇಗೆ ಆಗುವುದು? ಎಂದರೆ ಉಪಲವು ಸೋಮವನ್ನೂ ಭೇದಿಸಲಿಕ್ಕೆ ಸಾಧನವಾದ ಕಾರಣ ಉಲೂಖಲದ ಸಾಮ್ಯವಿದ್ದ ಪ್ರಯುಕ್ತ ಉಲೂಖಲ ಸುತಾನಾಂ ಎನ್ನುವುದಕ್ಕೆ ಉಪಲಸುತಾನಾಂ ಎಂದೇ ಅರ್ಥವು ಎಂದು **ಯತ್ರ ಗ್ರಾವಾ** ಇದು ಮೊದಲಾದ ೬ ಋಕ್ಕುಗಳಲ್ಲಿಯೂ ಔಪಚಾರಿಕ ಪ್ರಯೋಗವು (೫) ಹಾಗಾದರೆ ಅಧಿಷವಣೀ ಶಬ್ದದಿಂದ ಸವನಕ್ಕೆ ಸಾಧನವಾದ ಉಪಲವನ್ನೂ ಹೇಳಿದ ಕಾರಣ ಉಲೂಖಲವೆಂದು ತೆಗೆದು

ಕೊಂಡದ್ದೂ ವ್ಯರ್ಥ್ಯವೆಂದರೆ ಫಲಕಗಳೇ (ಹಲಿಗೆಗಳೇ) ಅಧಿಷವಣೀ ಶಬ್ದದಿಂದ ವಾಚ್ಯಗಳೆಂದು ಯಾಜ್ಞಿಕರಲ್ಲಿ ಪ್ರಸಿದ್ಧಿಯಿರುವದು. ॥ ೨॥

ಋ ॥ ೩೧೫ ಯತ್ರ ನಾರ್ಯಪಚ್ಯವ ಮುಪಚ್ಯವಂ ಚ ಶಿಕ್ಷತೇ ।

ಉಲೂಖಲಸುತಾನಾಮವೇದ್ವಿಂದ್ರ ಜಲ್ಗುಲಃ ॥ ೩ ॥

ಅ ॥ ಯತ್ರ= ಯಾವ ಯಜ್ಞದಲ್ಲಿರತಕ್ಕ ಹಲಿಗೆಗಳ, ಅಪಚ್ಯವಂ= (ಚ್ಯುಜಗತೌ) ಅಧೋಗಮನವನ್ನು ಉಪಚ್ಯವಂ ಚ= ಮೇಲೆ ಗಮನವನ್ನು ಕೂಡ, ನಾರೀ= ಸ್ತ್ರೀಯ ಎರಡು ಜಘನಗಳು, ಶಿಕ್ಷತೇ= ಸ್ವೀಕರಿಸುತ್ತದೋ ಅನುಕರಿಸುತ್ತದೋ, (ನಾರೀಜಘನಯುಗಲಕ್ಕೂ ಗಮನ ಕಾಲದಲ್ಲಿ ಊರ್ಧ್ವಗಮನ ಅಧೋಗಮನಗಳು ಇವೆ. ಅಂತೂ ಹಲಿಗೆಗಳ ಅಧೋಗಮನ, ಊರ್ಧ್ವಗಮನಗಳನ್ನು ಸುಂದರಿಯ ಎರಡು ಜಘನಗಳು ತೆಗೆದುಕೊಳ್ಳುತ್ತವೆ. ಅನುಕರಿಸುತ್ತವೆ.) ಅಂತಹ ಸೋಮಗಳನ್ನು ಸರ್ವಥಾ ಹೊಂದಲೇಬೇಕು. ॥ ೩ ॥

ಭಾ ॥ (1) ಉಪಚ್ಯವಶ್ಚಾಪಚ್ಯವಃ ಸಂಗತಿಭೇದತಃ ॥ (2) ಜಿಹ್ವಾಗ್ರಾವಾ್ಽಥನಾಗ್ಯುಕ್ತಿರುಚ್ಯತೇಽಭಿಷವಸ್ತಥಾ ॥ ಖಲಶ್ಚೋರುಸ್ತಥಾ ದೇಹಃ ಸೋಮೋ ಮನ ಇತೀರಿತಃ ಜ್ಞಾನೋತ್ಪತ್ತೌ ಚ ಫಲಕಸ್ಥಾನೇ ಓಷ್ಠೇ ಉದೀರಿತೇ ॥ ೩ ॥

ಅ ॥ (1) (ಹಲಿಗೆಗಳ ಅಧೋಗಮನ ಊರ್ಧ್ವಗಮನಗಳಿಗೆ ಏನು ಕಾರಣವು ಎಂದರೆ) (ಹಲಿಗೆಗಳು ಗರ್ತ (ಹೊಂಡ)ದ ಮೇಲೆ ಇದ್ದ ಪ್ರಯುಕ್ತ ಎರಡು ಹಲಿಗೆಗಳ ಸಂಯೋಗವು ಶಿಥಿಲವಾಗುತ್ತದೆ. ಆದ ಕಾರಣ ಅಧೋಗಮನ ಊರ್ಧ್ವಗಮನಗಳು, ಕೂಡುತ್ತವೆ. (ಹೇಗೆಂದರೆ ಸೋಮಲತೆಯನ್ನು ಕಂಡಿಸುವ ಕಾಲದಲ್ಲಿ ಕಲ್ಲುಗಳಿಂದ ಜಜ್ಜುವಾಗ ಕೆಳಗೆ ಹೋಗುತ್ತದೆ. ಇತರ ಸಮಯದಲ್ಲಿ ಮೇಲಕ್ಕೆ ಇರುತ್ತದೆ.) (2) (ಮೂರು ಋಕ್ಕುಗಳಲ್ಲಿರತಕ್ಕ ಗ್ರಾವಾದಿ ಶಬ್ದಗಳಿಗೆ ಅಧ್ಯಾತ್ಮ ಪರವಾಗಿ ಅರ್ಥ ಹೇಳುತ್ತಾರೆ.) (ಮೂಕ ಸಾಧಾರಣವಾದ ನಾಲಿಗೆಯು ಜ್ಞಾನಕ್ಕೆ ಕಾರಣವಾಗದೆ ಇರುವುದರಿಂದ) ಜಿಹ್ವಾಪದದಿಂದ ವಾಗಿಂದ್ರಿಯವನ್ನು ಇಟ್ಟುಕೊಳ್ಳಬೇಕು. ಪಾಷಾಣವು, ನಾಲಿಗೆಯು ಅಂದರೆ ವಾಗಿಂದ್ರಿಯವು. ಹಾಗೆಯೇ ಅಭಿಷವವು ವಾಗಿಂದ್ರಿಯಕ್ಕೆ ಮನಸ್ಸಿನಿಂದ ವೇದೋಚ್ಚಾರಣ ರೂಪವಾದ ಸಂಬಂಧವು. ಭೂಮಿಗಿಂತ ಉಚ್ಚವಾದ ಉಜಿಡೆಯು ದೇಹವು. ಮನಸ್ಸು ಸೋಮಲತಾ ಸ್ಥಾನೀಯವು, ಎಂದು ಹೇಳಲ್ಪಟ್ಟಿದೆ. ಫಲಕ (ಹಲಿಗೆ) ಸ್ಥಾನಗಳು ಓಷ್ಠಗಳು. (ಜಿಹ್ವಾಗ್ರಾವಾ ಇತ್ಯಾದಿಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ) ಜ್ಞಾನವು ಉಂಟಾಗುವ ವಿಷಯದಲ್ಲಿ ಹೀಗೆ ಹೇಳಲ್ಪಟ್ಟಿವೆ.

ವಿ ॥ (1) ಉಲೂಖಲಃ ಎಂದು ಹೇಳದೆ ಉರುಃ ಖಲಃ ಎಂದದ್ದು ಊರ್ಧ್ವಂ ಖಂ (ಅವಕಾಶವು) ಅಸ್ಯ ಎಂದು ವ್ಯಾಖ್ಯಾನ ಮಾಡಬಾರದು ಎಂಬ ಅಭಿಪ್ರಾಯದಿಂದ (2) ದೇಹರೂಪವಾದ ಪಾಷಾಣ ಸಂಬಂಧದಿಂದ ವಾಗಿಂದ್ರಿಯಕ್ಕೆ ಗ್ರಾವ (ಪಾಷಾಣ) ಸಾದೃಶ್ಯವು. (3) ವೇದೋಚ್ಚಾರಣ ರೂಪವಾದ ವಚನ ಸಂಬಂಧವು ಜ್ಞಾನ ರೂಪವಾದ ಸೋಮರಸವನ್ನು ಹುಟ್ಟಿಸುವ ಪ್ರಯುಕ್ತ ಅಭಿಷವ (ಸೋಮರಸವನ್ನು ಹಿಂಡುವಿಕೆ) ಸಾಮ್ಯವು. (4) ದೇಹವು ಮನೋರೂಪವಾದ ಸೋಮಕ್ಕೆ ಆಧಾರವಾಗಿರುವುದರಿಂದ ಉಲೂಖಲ (ಉಜಿಡೆ) ಸಾಮ್ಯವು. (5) ಮನಸ್ಸು ಜ್ಞಾನವೆಂಬ ರಸಕ್ಕೆ ಉಪಾದಾನ ಕಾರಣವಾಗಿರುವುದರಿಂದ ಸೋಮಲತಾ ಸಾಮ್ಯವು. (6) ಓಷ್ಠಗಳು ವೇದಗಳನ್ನು ಉಚ್ಚರಿಸುವುದರಿಂದ ಜ್ಞಾನವುಂಟಾಗಲಿಕ್ಕೆ ಉಪಯುಕ್ತಗಳಾಗುವ ಪ್ರಯುಕ್ತ ಫಲಕ (ಹಲಿಗೆ) ಸಾಮ್ಯವು. (7) ಯಾವ ಭೂಮಿಯಲ್ಲಿ ಧಾನ್ಯವು ವೃಷಭ ಸಂಚಾರಾದಿಗಳಿಂದ ಹುಲ್ಲಿನಿಂದ ಪ್ರತ್ಯೇಕಿಸಲ್ಪಡುತ್ತದೋ ಅಂತಹ ಸ್ಥಳವು (ಅಂದರೆ ಹುಲ್ಲು ಜಪ್ಪುವ ಸ್ಥಳವು) ಖಲವೆನಿಸುತ್ತದೆ. ಅದರ ಸಾದೃಶ್ಯದಿಂದ ಪಾಷಾಣ ದಾರ್ವಾದಿಮಯವಾದುದು ಶಾಲ್ಯಾದಿಗಳನ್ನು ತುಷಾ (ಉಮಿ) ವಿಲ್ಲದ ಹಾಗೆ ಮಾಡಲು ಯಾವುದು ಸಾಧನವೋ ಅದೂ ಕೂಡ ಖಲವೆನಿಸುತ್ತದೆ. ॥ ೩ ॥

ಋ (೩೧೬) ॥ಯತ್ರ ಮಂಥಾಂ ವಿಬಧ್ನತೇ ರಶ್ಮೀನ್ಯಮಿತವಾ ಇವ ।
ಉಲೂಖಲ ಸುತಾನಾಮವೇದ್ವಿಂದ್ರ ಜಲ್ಗುಲಃ ॥ ೪ ॥

ಅ ॥ ಹೇಗೆ, ಮಂಥಾಂ= ಮೊಸರನ್ನು ಕಡಿಯಲಿಕ್ಕೆ ಸಾಧನವಾದ ಕಾಷ್ಠಮಯವಾದ ಕಡಗೋಲನ್ನು ಯಮಿತವಾ ಇವ= (ಯಮುಉಪಯಮೇ) ನಿಯಮಿಸಲಿಕ್ಕೆ (ತನ್ನ ಸ್ವಾಧೀನದಲ್ಲಿರಿಸಿಕೊಳ್ಳಲಿಕ್ಕೆ) ರಶ್ಮೀನ್ ಕಡಗೋಲಿನ ಹಗ್ಗಗಳನ್ನೂ, ವಿಬಧ್ನತೇ= ಕಟ್ಟುತ್ತಾರೋ ಹೇಗೆ, ಕುದುರೆಯನ್ನು ತನ್ನ ಸ್ವಾಧೀನದಲ್ಲಿ ಇಟ್ಟು ಕೊಳಲಿಕ್ಕೆ ಕುದುರೆಯ ಹಗ್ಗ (ಕಡಿವಾಣ)ವನ್ನೂ (ಸ್ತಂಭಾದಿಗಳಲ್ಲಿ) ವಿಬಧ್ನತೇ= ಕಟ್ಟುತ್ತಾರೋ, (ಹಾಗೆಯೇ, ಯತ್ರ= ಯಾವ ಯಜ್ಞದಲ್ಲಿ (ಉಲೂಖಲಸ್ಯ=) (ಉಪಲದ; ರಶ್ಮೀನ್= ಹಗ್ಗಗಳನ್ನೂ (ದೃಢವಾಗಿ ನಿಲ್ಲುವುದಕ್ಕಾಗಿ) ಹಲಿಗೆ ಮೊದಲಾದ ದ್ರವ್ಯಾಂತರಗಳಿಂದ,) ವಿಬಧ್ನತೇ= ಕಟ್ಟುತ್ತಾರೋ ಅಂತಹ ಯಜ್ಞದಲ್ಲಿ ಸೋಮಗಳನ್ನು ಹೊಂಪು (ಅಧ್ಯಾತ್ಮದಲ್ಲಿ) ಉಲೂಖಲಸ್ಯ= ದೇಹದ, ರಶ್ಮೀನ್ ನಾಡಿಗಳನ್ನು ವಿಬಧ್ನತೇ= ಬಾಕಿಹಿಂದಿನಂತೆ. ॥ ೪ ॥

ಭಾ ॥ (೧) ಮಂದರಶ್ಮೀನಶ್ವರಶ್ಮೀನ್ಯಥಾ ಯತ್ರ ನಿಬಧ್ಯತೇ ।(೨) ರಶ್ಮಯೋ ಯತ್ರ ನಾಡ್ಯಶ್ಚ ॥ ೪ ॥

ಅ ॥ (೧) ಹೇಗೆ ಕಡಗೋಲು ಹಗ್ಗಗಳನ್ನು ದೃಢವಾಗಿ ಕಟ್ಟುತ್ತಾರೋ ಹೇಗೆ ಕುದುರೆಯ ಹಗ್ಗಗಳನ್ನು (ಕುದುರೆಯನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುವುದಕ್ಕಾಗಿ ಸ್ತಂಭಾದಿಗಳಲ್ಲಿ ಕಟ್ಟುತ್ತಾರೋ,) (ಹಾಗೆಯೇ ಯಾವ ಯಜ್ಞದಲ್ಲಿ ಉಲೂಖಲದ (ಉಪಲದ) ರಶ್ಮಿಗಳನ್ನು ದೃಢವಾಗಿ ನಿಲ್ಲುವುದಕ್ಕಾಗಿ ಹಲಿಗೆ ಮೊದಲಾದ ದ್ರವ್ಯಾಂತರಗಳಿಂದ ಕಟ್ಟುತ್ತಾರೆ) (೨) (ಅಧ್ಯಾತ್ಮದಲ್ಲಿ ರಶ್ಮಿಗಳು ಯಾವವೆಂದರೆ—) ದೇಹದಲ್ಲಿರುವ ನಾಡಿಗಳೇ, ರಶ್ಮಿಗಳೆಂದು ತಿಳಿಯಬೇಕು). ॥ ೪ ॥

ಆವ ॥ ಈ ಋಕ್ಕೂ ಮೇಲಿನ ಋಕ್ಕೂ ಕೂಡ ಉಲೂಖಲ ದೇವತಾಕಗಳು. ಅನುಷ್ಟುಪ್ ಛಂದಸ್ಕಗಳು.

ಋ ॥ (೩೧೭) ಯಚ್ಚಿದ್ಧಿ ತ್ವಂ ಗೃಹೇ ಗೃಹ ಉಲೂಖಲಕ ಯುಜ್ಯಸೇ
ಇಹ ದ್ಯುಮತ್ತಮಂ ವದ ಜಯತಾಮಿವ ದುಂದುಭಿಃ ॥ ೫ ॥ ೨೪ ॥

ಅ। ಹೇಉಲೂಖಲಕ=ಎಲೋ ಉಜಿಡೆಯೇ ಯತ್=ಯಾವ ಕಾರಣ ದೆಶೆಯಿಂದ, ತ್ವಂ=ನೀನು, ಗೃಹೇ ಗೃಹೇ ಚಿತ್=ಈ ಯಜಮಾನನಿಂದ ಮಾಡಲ್ಪಟ್ಟ ಎಲ್ಲಾ ಯಜ್ಞ ಗೃಹಗಳಲ್ಲಿಯೂ (ಅಧ್ಯಾತ್ಮದಲ್ಲಿ) ಪ್ರತಿ ಶರೀರಗಳಲ್ಲಿ ಯುಜ್ಯಸೇ= ಪೂಜ್ಯನಾಗಿ ಕೂಡಿಕೊಂಡೇ ಇರುತ್ತಿಯೋ ಹಿ= ಆ ಕಾರಣದಿಂದ, ಇಹ= ಈ ಯಜ್ಞದಲ್ಲಿ ಜಯತಾಮಿವ ದುಂದುಭಿಃ= ಯುದ್ಧದಲ್ಲಿ ಜಯಾರ್ಥಿಗಳಾದ ಜನರಿಗೆ ಭೇರಿ(ನಗಾರಿ) ಯಂತೆ, ದ್ಯುಮತ್ತಮಂ-ಅತಿಶಯವಾಗಿ ಪ್ರಕಾಶವುಳ್ಳ, ಧ್ವನಿಯನ್ನು (ಉಚ್ಚಸ್ವರದಿಂದ) ವದ= ಮಾಡು. ॥ ೫ ॥ ೨೪ ॥

ಭಾ ॥ (1) ಯಸ್ಮಾದ್ಯುಕ್ತೋ ಗೃಹೇ ಗೃಹೇ ॥ ದೇಹೇ ದೇಹೇsಥವಾ ತೇನ ದ್ಯುಮದ್ಧುಂದುಭಿವದ್ವದ ॥ (2) ಪೃಥಿವೀ ದೇವತಾ ತಸ್ಯ ತದ್ಗತೋ ವಾ ಸ್ವಯಂ ಹರಿಃ। ಸೋಮೋಮಾತ್ಯೋsಪರೋ ದೇವೋ ವನಸ್ಪತಿರಿತೀರಿತಃ (3) ಸೋಮೋ ವಾ ತದ್ಗವಿಷ್ಣುರ್ವಾ ಶ್ರುತಃ ಫಲಕದೇವತಾ ॥ (4) ವೃಕ್ಷಾಣಾಮಪಿ ಸರ್ವೇಷಾಮತಃ ॥ ॥ ೫ ॥ ೨೫ ॥

ಅ ॥ (1) (ಎಲೋ ಉಲೂಖಲವೇ ನೀನು) ಯಾವ ಕಾರಣದಿಂದ ಯಜಮಾನನಿಂದ ಮಾಡಲ್ಪಟ್ಟ ಎಲ್ಲಾ ಯಜ್ಞ ಗೃಹಗಳಲ್ಲಿಯೂ, (ಅಧ್ಯಾತ್ಮದಲ್ಲಿ) ಪ್ರತಿ ಶರೀರಗಳಲ್ಲಿಯೂ ಪೂಜ್ಯನಾಗಿ ಕೂಡಿಯೇ ಇರುತ್ತಿಯೋ, ಆ ಕಾರಣದಿಂದ ಭೇರಿಯಂತೆ ಅತ್ಯುಚ್ಚವಾಗಿ ಧ್ವನಿ ಮಾಡು. (2) ಜಡವಾದ ಉಲೂಖಲವನ್ನು ಹೀಗೆ ಪ್ರಾರ್ಥಿಸುವುದು ಹೇಗೆ ಎಂದರೆ) ಆ ಉಲೂಖಲಕ್ಕೆ ಪೃಥಿವಿಯು ದೇವತೆಯು. ಆ ಪೃಥಿವಿಯಲ್ಲಿರತಕ್ಕ ಸಾಕ್ಷಾತ್ ಶ್ರೀಹರಿಯು ದೇವತೆಯು. ಮತ್ತು ವನಸ್ಪತಿ ಎಂಬ ಶಬ್ದದಿಂದ ಹೇಳಲ್ಪಟ್ಟ ಸೋಮನ ಅಮಾತ್ಯನೂ ಕೂಡ ಇನ್ನೊಬ್ಬನು ಉಲೂಖಲಕ್ಕೆ ದೇವತೆಯು.) ವನಸ್ಪತಿರಿತೀರಿತಃ ಎನ್ನುವುದರಿಂದ ೬ನೇ ಋಕ್ಕಿನಲ್ಲಿ ವನಸ್ಪತೇ ಎನ್ನುವುದಕ್ಕೂ ಅರ್ಥವು ಉಕ್ತವಾಯ್ತು.)(ಅಯಜೀ ಎನ್ನುವ ಮೇಲಿನ ಎರಡು ಋಕ್ಕುಗಳು ಮುಸಲದೇವತಾಕವು.ಮತ್ತುಉಲೂಖಲ ದೇವತಾಕವೂ ಆಗಿದೆಎಂದು ಕೆಲವರು ಹೇಳುತ್ತಾರೆ.ಅದು ಅಯುಕ್ತವು. ಏಕೆಂದರೆ ಅಧಿ ಷವಣ್ಯಾ ಕೃತಾ ಎನ್ನುವಲ್ಲಿ ಹಲಗೆಗಳೇ ಪ್ರಕೃತಗಳಾದ ಪ್ರಯುಕ್ತ ಅವುಗಳನ್ನೇ ಇಟ್ಟುಕೊಳ್ಳಬೇಕು. ಮುಸಲವನ್ನು ಅಥವಾ ಉಲೂಖಲವನ್ನೂ ತೆಗೆದುಕೊಳ್ಳುವುದು ಉಚಿತವಲ್ಲ.) (ಅಚೇತನಗಳಾದ ಹಲಗೆಗಳಿಗೂಕೂಡ ಇಂದ್ರಾಯ ಮಧು ಮತ್ಸುತಂ ಇತ್ಯಾದಿ ರೂಪ ಪ್ರಾರ್ಥನಾದಿಗಳು ಕೂಡುವುದಕ್ಕಾಗಿ ಪ್ರಸಂಗ ಸಂಗತಿಯಿಂದ ಅವುಗಳಿಗೂ ದೇವತೆಯನ್ನು ಹೇಳುತ್ತಾರೆ.) ವನಸ್ಪತಿ ಎಂಬ ಶಬ್ದದಿಂದ ಹೇಳಲ್ಪಟ್ಟ ಸೋಮನೂ ಸೋಮನ ಅಮಾತ್ಯನೂ, ಅವರಲ್ಲಿರತಕ್ಕ ಶ್ರೀ ವಿಷ್ಣುವೂ ಕೂಡ ಹಲಗೆಗಳಿಗೆ ದೇವತೆಯೆಂದು ಶ್ರುತರಾಗಿರುತ್ತಾರೆ. (೫) ಸೋಮನಿಗೂ ಸೋಮನಲ್ಲಿರತಕ್ಕ ಶ್ರೀ ವಿಷ್ಣುವಿಗೂ ವನಸ್ಪತಿ ಶಬ್ದ ವಾಚ್ಯತ್ವವು ಹೇಗೆಂದರೆ) ಎಲ್ಲಾ ವೃಕ್ಷಗಳಿಗೂ ಕೂಡ ಸೋಮನೂ ಸೋಮಾಂತರ್ಗತ ಶ್ರೀ ವಿಷ್ಣುವೂ ಕೂಡ ದೇವತೆಯು. (ಹೀಗೆಯೇ ಸಮಸ್ತವೃಕ್ಷಗಳಿಗೂ ಉತ್ಪಾದಕವೂ, ಮತ್ತು ಆಧಾರವೂಆದ ಕಾರಣ ಪೃಥಿವಿಗೂ, ಪೃಥಿವಿಯಲ್ಲಿರತಕ್ಕ ಶ್ರೀ ವಿಷ್ಣುವಿಗೂ ವನಸ್ಪತಿ ಶಬ್ದ ವಾಚ್ಯತ್ವವಿದೆ ಎಂದು ತಿಳಿಯಬೇಕು. ಆದ ಕಾರಣ ಯಚ್ಚಿದ್ಧಿ ಇದು ಮೊದಲಾದ ನಾಲ್ಕು ಋಕ್ಕುಗಳಲ್ಲಿ ಹೇಳಿದ್ದೂ ಯುಕ್ತವು.

ವಿ ॥ (1) ಹಿಂದಿನ ೪ ಋಕ್ಕುಗಳಲ್ಲಿ ಉಲೂಖಲ ಶಬ್ದದಿಂದ ಅಚೇತನವನ್ನು ಹೇಳಿದ ಕಾರಣ ಸೋಮಾಖ್ಯ ಮನಸ್ಸಿಗೆ ಅಧಿಕರಣವಾಗಿ ದೇಹವನ್ನು ಹೇಳಿದೆ. ಈ ಋಕ್ಕಿನಲ್ಲಿ ಉಲೂಖಲ ಶಬ್ದದಿಂದ ಉಲೂಖಲಾಧಾರವಾದ ದೇವತೆಯನ್ನು ಹೇಳಿದೆ. ಆದ ಕಾರಣ ವಿರೋಧವಿಲ್ಲ. (2) ಏವಂಚ ಜಡವಾದ ಉಲೂಖಲವನ್ನು ಕುರಿತು ಪ್ರಾರ್ಥನೆಯು ಕೂಡದಿರುವ ಕಾರಣ ಅಭಿಮಾನ್ಯಧಿಕರಣ ನ್ಯಾಯದಿಂದ ಅಭಿಮಾನಿ ದೇವತೆಗಳನ್ನು ಇಟ್ಟುಕೊಳ್ಳಬೇಕು, ಧರಾದೇವಿ, ಧರಾದೇವಿಯಲ್ಲಿರತಕ್ಕ ಶ್ರೀಹರಿಯೂ ಸೋಮನ ಮಂತ್ರಿಯಾದ ವನಸ್ಪತಿಯೆಂಬ ದೇವತೆಯೂ, ಅವನಲ್ಲಿ ಅಂತರ್ಗತನಾದ ಶ್ರೀಹರಿಯೂ ಉಲೂಖಲ ದೇವತೆಗಳೆಂದು ತಿಳಿದುಕೊಳ್ಳಬೇಕು. ॥ ೫ ॥ ೨೫ ॥

ಋ ॥ (೩೧೮) ಉತ ಸ್ಮ ತೇ ವನಸ್ಪತೇ ವಾತೋ ವಿವಾತ್ಯಗ್ರಮಿತ್ ।

ಅಥೋ ಇಂದ್ರಾಯ ಪಾತವೇ ಸುನು ಸೋಮಮುಲೂಖಲ ॥೬॥

ಅ || ವನಸ್ಪತೇ=ವೃಕ್ಷಗಳಿಗೆ ಸ್ವಾಮಿಯಾದ, ಉಲೂಖಲ=ಉಜಿಡೆಯೇ, ವಾತಃ ಉತ=ವಾಯುವೂ ಕೂಡ, ತೇ ಅಗ್ರಮಿತ್=ನಿನ್ನಿಂದ ಅಭಿಮನ್ಯಮಾನವಾದ ವೃಕ್ಷಾಗ್ರದಲ್ಲಿಯೇ ವಿ ವಾತಿ ಸ್ಮ=ಅನೇಕ ಪ್ರಕಾರ ವೀಜಿಸಿರುವನೋ, (ಅಂದರೆ ಯಾವ ಕಾರಣದಿಂದ ಇಂದ್ರನು ತನ್ನ ಗಾಳಿಯಿಂದ ನಿನ್ನದಾದ ವೃಕ್ಷದ ಅಗ್ರಭಾಗ ವನ್ನೇ ಹಂದಾಡಿಸುತ್ತಿರುವನೋ, ಅಥೋ=ಆ ಕಾರಣದಿಂದ (ಇಂದ್ರನಿಂದ ಉಪಕೃತನಾದ ಪ್ರಯುಕ್ತ) ಇಂದ್ರಾಯ=ಪ್ರಸಿದ್ಧ ಇಂದ್ರನಿಗೆ ಪಾತವೇ=ಪಾನಕ್ಕಾಗಿ ಸೋಮಂ=ಸೋಮವನ್ನು ಸುನು=ಮರ್ದಿಸಿ ರಸವನ್ನು ತೆಗೆದು ಇಟ್ಟುಕೊಳ್ಳು. ಅಥವಾ ವನಸ್ಪತೇ ಭಜಿಸಲು ಯೋಗ್ಯರಾದ ದೇವತೆಗಳಿಗೆ ಅಧಿಪತಿಯಾದ, ಉಲೂಖಲ=ಉಲೂಖಲ ದೇವತೆಯಲ್ಲಿ ಅಂತರ್ಗತನಾದ ಶ್ರೀಹರಿಯೇ, ವಾತಃ ಉತ=ವಾಯುವೂ ಕೂಡ, ತೇ ಅಗ್ರಂ ಇತ್=ನಿನ್ನ ಮುಂಭಾಗದಲ್ಲಿಯೇ, ವಿವಾತಿ=ಅನೇಕ ಪ್ರಕಾರ ಓಡುತ್ತಿರುತ್ತಾನೋ, (ನಿನ್ನ ಸೇವಕನಾಗಿಯೇ ಹೋಗಿರುವನೋ) ಅಥೋ=ಯಾವ ಕಾರಣದಿಂದ ಹೀಗೆ ನೀನು ಅತಿ ಸಮರ್ಥನೋ, ಆ ಕಾರಣದಿಂದ, ಇಂದ್ರಾಯ=ಇಂದ್ರನೆನಿಸಿದ ಶ್ರೀವಿಷ್ಣುವನ್ನ ಉದ್ದೇಶಿಸಿ, ಪಾತವೇ=ಇಂದ್ರನಾದ ತನಗೆ ಪಾನಕ್ಕಾಗಿ ಸೋಮಂ=ಸೋಮವನ್ನು (ಅಧ್ಯಾತ್ಮದಲ್ಲಿ) ಮನಸ್ಸನ್ನು ಸುನು=ರಸ ತೆಗೆದು ಇಟ್ಟುಕೊಳ್ಳು. ದೃಢೀಕರಿಸಿಕೊಳ್ಳು || ೬ ||

ಭಾ || (1) ವೃಕ್ಷಾಗ್ರ ಏವ ತು | ವಾಯುರ್ವಾತಿ (2) ವನಾನಾಂ ವಾ ಭಜನೀಯದಿವೌಕಸಾಂ || ಪತಿರ್ವಿಷ್ಣುಸ್ತು ತಸ್ಯಾಗ್ರೇ ವಾಯುರ್ದೇವೋ ಹಿ ಗಚ್ಛತಿ|| (3) ಪಾತವೇ ಸ್ವಸ್ಯ ಸೋಮಂ ವಾ ಮನೋ ವಾ ಸುನು ವಿಷ್ಣವೇ || ೬ ||

ಅ || ಎಲೋ ಉಲೂಖಲವೇ, ವಾಯುವೂ ಕೂಡ ನಿನ್ನಿಂದ ಅಭಿಮನ್ಯ ಮಾನವಾದ ವೃಕ್ಷಾಗ್ರದಲ್ಲಿಯೇ ವೀಜಿಸುತ್ತದೆ- (ಅಂದರೆ-ಸೋಮನೂ ಸೋಮಾಂತರ್ಗತ ಶ್ರೀವಿಷ್ಣುವೂ ಕೂಡ ವೃಕ್ಷಗಳ ದೇವತೆಯಾದುದರಿಂದ ಆ ವೃಕ್ಷಾಂತರ್ಗತ ಸೋಮ ವಿಷ್ಣುಗಳ ಪ್ರೀತಿಗಾಗಿ ವೃಕ್ಷಾಗ್ರದಲ್ಲಿ ವಾಯುವು ಶೀತಲ ಸುಗಂಧ ಮಂದ ರೂಪವಾಗಿ ಅನೇಕ ಪ್ರಕಾರ ವೀಜಿಸುತ್ತಾನೆ. ಎಂದು ಪೂರ್ವಾರ್ಧದ ತಾತ್ಪರ್ಯವು.) (2) (ಪೂರ್ವಾರ್ಧದ ತಾತ್ಪರ್ಯವನ್ನು ಶ್ರೀವಿಷ್ಣುವಿನಲ್ಲಿ ಕೂಡಿಸುತ್ತಾರೆ.) ಶ್ರೀವಿಷ್ಣುವಾದರೂ ಪ್ರಸಿದ್ಧಗಳಾದ ವೃಕ್ಷ ಸಮೂಹ ರೂಪಗಳಾದ ವನಗಳಿಗೆ, ಅಥವಾ **ವನ ಷಣ ಸಂಭಕ್ತೌ** ಎನ್ನುವುದರಿಂದ ಭಜಿಸಿಕೊಳ್ಳಲು ಯೋಗ್ಯರಾಗಿರುವುದರಿಂದ ವನ ಶಬ್ದ ವಾಚ್ಯರಾದ ದೇವತೆಗಳಿಗೆ ಅಧಿಪತಿಯು, ಆದ ಕಾರಣ ವನಸ್ಪತಿಃ (ವನ್ಯಂತೇ ಇತಿ ವನಾಃ ದೇವತೆಗಳು ತೇಷಾಂ ಪತಿಃ, ವನಸ್ಪತಿಃ) ಎನಿಸುತ್ತಾನೆ. ಆ ವಿಷ್ಣುವಿನ ಇದಿರು (ಜಡವಾಯುವಲ್ಲದ) ಪ್ರಸಿದ್ಧ ವಾಯುದೇವರು ಸೇವಕರಾಗಿ ಹೋಗುತ್ತಾರೆ. (3) (ಪ್ರಸಿದ್ಧ ಇಂದ್ರ ಪಕ್ಷದಲ್ಲಿ) ಯಾವ ಕಾರಣದಿಂದ ಇಂದ್ರನು ತನ್ನ ಗಾಳಿಯಿಂದ ನಿನ್ನದ್ದಾದ ವೃಕ್ಷದ ಅಗ್ರಭಾಗವನ್ನೇ ಹಂಪಾಡಿಸುತ್ತಾನೊ ವೃಕ್ಷವನ್ನು ಕಿತ್ತು ಹಾಕುವುದಿಲ್ಲವೋ, ಆದ ಕಾರಣ ಇಂದ್ರನಿಂದ ಉಪಕಾರವನ್ನು ಹೊಂದಿರುವ ಕಾರಣ, ಎಂದು ದೇವತಾಂತರದಲ್ಲಿ)(ಇಂದ್ರ ಶಬ್ದದಿಂದ ಶ್ರೀವಿಷ್ಣುವು ಗೃಹೀತನಾದರೆ,) ನೀನು ಅತಿ ಸಮರ್ಥನಾದ ಕಾರಣ ಶ್ರೀವಿಷ್ಣುವನ್ನುದ್ದೇಶಿಸಿ ತನಗೆ ಪಾನ ಮಾಡುವುದಕ್ಕಾಗಿ ಪ್ರಸಿದ್ಧವಾದ ಸೋಮವನ್ನು (ಬಾಹ್ಯದಲ್ಲಿ) (ಅಧ್ಯಾತ್ಮದಲ್ಲಿ) ಮನಸ್ಸನ್ನು ಹಿಂಡಿ ರಸವನ್ನು ತೆಗೆದು ಇಟ್ಟುಕೊಳ್ಳು. ಶ್ರೀವಿಷ್ಣುವಿನಲ್ಲಿಯೇ ಸ್ಥಿರೀಕರಿಸು || ೬ ||

ಅಪ || ಈ ಋಕ್ಕು ಮೇಲಿನ ಋಕ್ಕು ಕೂಡ ಫಲಕ ದೇವತಾಕಗಳು. ಗಾಯತ್ರೀ ಛಂದಸ್ಕಗಳು.

ಋ || (೩೧೯) ಆಯಜೀ ವಾಜಸಾತಮಾ ತಾ ಹ್ಯುಚ್ಚಾ ವಿಜರ್ಭೃತಃ|
ಹರೀ ಇವಾಂಧಾಂಸಿ ವಪ್ಸತಾ || ೭ ||

ಅ ॥ ಆಯಜೀ=(ಯಜದೇವ ಪೂಜಾ ಸಂಗತಿಕರಣದಾನೇಷು) ಚೆನ್ನಾಗಿ ಯಾಗ ಮಾಡಲ್ಪಡತಕ್ಕ, (ವಾಜ ಸಾತಮಾ=(ವಾಜಶಬ್ದೋಪಪದಾತ್ ಷಣುಲಾಭೇ) ವಾಜಂ ಅನ್ನಂ ಸನುತೆ ಇತಿ ವಾಜಸೌ. ಅತಿಶಯೇನ ವಾಜಸೌ ವಾಜಸಾತಮೌ=)ಅನ್ನವನ್ನು ಹೊಂದುವವರಲ್ಲಿ ಉತ್ತಮರಾದ ಉಚ್ಚಾ=ಉತ್ಕೃಷ್ಟರಾದ, ತಾ=ಆ ಫಲಕಗಳು, ಆ ಹಲಗೆಗಳಿಗೆ ಅಭಿಮಾನಿಗಳಾದ ಸೋಮ ವನಸ್ಪತಿ ದೇವತೆಗಳು, ಹರೀ ಇವ=ಇಂದ್ರದೇವರ ಕುದುರೆಗಳು ಹೇಗೆ, ಅಂಧಾಂಸಿ=ಅನ್ನಾದಿಗಳನ್ನು, ವಪ್ಸತಾ=(ವಪ್ಸ ಅದನೇ ಅಥವಾ ಪ್ಸಾ ಅದನೇ) ಭಕ್ಷಿಸುತ್ತವೋ, ಹಾಗೆ, ವಿಜರ್ಭೃತಃ=(ಜಹಭಕ್ಷಣೇ) ವಿಶೇಷವಾಗಿ ಭಕ್ಷಿಸುತ್ತಾರಷ್ಟೆ. (ಅಂದರೆ ಸೋಮವನ್ನು ಹಿಂಡುವ ಕಾಲದಲ್ಲಿ ಅತಿ ಭಕ್ಷಕರಾಗಿರುತ್ತಾರೆ.) ॥ ೭ ॥

ಭಾ ॥ (1) ಆಯಜ್ಯಾವನ್ನಲಬ್ಧೃಣಾಮುತ್ತಮಾವತಿಭಕ್ಷಕೌ।(2) ಜಹಭಕ್ಷಣ ಇತ್ಯಸ್ಮಾ (3) ದ್ಧ್ಯಥಾಶ್ವಾವನ್ನಭಕ್ಷಕೌ ॥ (4) ಸೋಮಸ್ಯ ಭಕ್ಷಕಾವತ್ರ ॥ ೭ ॥

ಅ ॥ (1) ಚೆನ್ನಾಗಿ ಯಾಗ ಮಾಡಲ್ಪಡತಕ್ಕ ಅನ್ನವನ್ನು ಹೊಂದುವವರಲ್ಲಿ ಉತ್ತಮರಾದ, ಆ ಸೋಮ ವನಸ್ಪತಿ ದೇವತೆಗಳು, ಅತಿ ಭಕ್ಷಕರಾಗಿರುತ್ತಾರೆ (2) (ಈ ಅರ್ಥವು ಹೇಗೆ ಸಿಗುವುದೆಂದರೆ) ಜಹಭಕ್ಷಣೇ ಎಂಬ ಧಾತು ವ್ಯಾಖ್ಯಾನದಿಂದ (ಪ್ರಥಮ ಪುರುಷದ್ವಿ ವಚನ, ಹಕಾರಕ್ಕೆ ಭಕಾರ, ರಮ ಆಗಮ.ಬಂದರೆ ವಿಜರ್ಭೃತಃ ಎಂಬ ರೂಪವು ಸಿದ್ಧಿಸುವುದು.)(3) ಹೇಗೆ ಇಂದ್ರನ ಕುದುರೆಗಳು ಅನ್ನಭಕ್ಷಕಗಳೆಂದು ಪ್ರಸಿದ್ಧಗಳೋ ಹಾಗೆಯೇ. (4) (ಹಾಗಾದರೆ—ಇಂದ್ರನ ಕುದುರೆಗಳು, ಕಡಲೆ ಮೊದಲಾದ ಧಾನ್ಯ (ಸೋಮರಸವನ್ನು ತೆಗೆದ ಮೇಲೆ ರಸವನ್ನು ಬೇರೆ ಕಡೆ ಇಟ್ಟು ಅಲ್ಲಿ ಅವಶಿಷ್ಟವಾದ ನೀರಸ ಪದಾರ್ಥವು ಋಜೀಷ ಎನಿಸುತ್ತದೆ.) ಋಜೀಷ ಮೊದಲಾದ ಅನ್ನ ಇವುಗಳನ್ನು ಭಕ್ಷಿಸುವವುಗಳೆಂದು ಪ್ರಸಿದ್ಧಗಳಾಗಿವೆ. ಹಲಗೆಗಳಲ್ಲಿ ಇದು ಹೇಗೆ ಕೂಡುತ್ತದೆ;ಎಂದರೆ) ಹಲಗೆಯ ವಿಷಯದಲ್ಲಿ, ಸೋಮರಸವನ್ನು ಹಿಂಡುವ ಕಾಲದಲ್ಲಿ ಹಲಗೆಗಳು ಸೋಮರಸವನ್ನು ಭಕ್ಷಿಸುವವುಗಳು. (ಅಂದರೆ-–ಹಲಗೆಯ ಮೇಲೆ ಇರತಕ್ಕ ಕಲ್ಲಿನಲ್ಲಿ ಸೋಮ ಸಂಬಂದವಿದ್ದ ಪ್ರಯುಕ್ತ ಹಲಗೆ ಗಳಲ್ಲಿ ಸೋಮ ಭಕ್ಷಕತ್ವವಿದೆ. ಎಂದು ಅಮುಖ್ಯ ಪ್ರಯೋಗವು (ಫಲಕಾಭಿಮಾನಿ ದೇವತೆಗಳಾದರೂ ಸವನ ಕಾಲದಲ್ಲಿ ಸೋಮ ಭಕ್ಷಕರಾಗಿರುತ್ತಾರೆ.) ॥ ೭ ॥

ಋ ॥ (೩೨೦) ತಾನೋ ಅದ್ಯ ವನಸ್ಪತೀ ಋಷ್ವಾವೃಷ್ವೇಭಿಃ ಸೋತೃಭಿಃ ।
ಇಂದ್ರಾಯ ಮಧುಮತ್ಸುತಂ ॥ ೮ ॥

ಅ ॥ ಋಷ್ವೌ=ಅತಿ ಶ್ರೇಷ್ಠರಾದ, ವನಸ್ಪತೀ=ಸೋಮ, ಸೋಮನ ಅಮಾತ್ಯನಾದ ವನಸ್ಪತಿ ಎಂದು ಪ್ರಸಿದ್ಧರಾದ ನೀವಿಬ್ಬರು, ಋಷ್ವೇಭಿಃ=ಮಹಾನುಭಾವರಾದ, ಸೋತೃಭಿಃ=ಸೋಮವನ್ನು ಭೇದಿಸುವ ಋತ್ವಿಜರಿಂದ ಕೂಡಿಕೊಂಡು, ಇಂದ್ರಾಯ=ಇಂದ್ರನಿಗೋಸ್ಕರ, ನಃ=ನಮ್ಮದ್ದಾದ, ಮಧುಮತ್=ಸ್ವಾದುರಸ ಯುಕ್ತವಾದ, ಸೋಮವನ್ನು, ಸುತಂ=ಮರ್ದಿಸಿ ರಸವನ್ನು ತೆಗೆದು ಇಡಿರಿ. ॥ ೮ ॥

ಭಾ ॥ ಋಷ್ವಾವತಿಮಹತ್ತರೌ । ಮಹದ್ಭಿಃ ಸೋತೃಭಿಃ ಸೋಮಮಿಂದ್ರಾಯ ಮಧುಮತ್ಸುತಂ ॥ ೮ ॥

ಅ ॥ ಋಷ್ವೌ=ಅತ್ಯಂತ ಶ್ರೇಷ್ಠರಾದ, ಸೋಮ ಮತ್ತು ಸೋಮನ ಅಮಾತ್ಯನಾದ ವನಸ್ಪತಿ ಎಂಬ ದೇವತೆಗಳೇ, ಶ್ರೇಷ್ಠರಾದ, ಸೋಮವನ್ನು ಭೇದಿಸುವ ಋತ್ವಿಜರಿಂದ ಕೂಡಿಕೊಂಡು, ನೀವಿಬ್ಬರು ಇಂದ್ರನ ಉದ್ದಿಶ್ಯ ಸ್ವಾದುರಸ ಯುಕ್ತವಾದ ಸೋಮವನ್ನು ಚೆನ್ನಾಗಿ ರಸತೆಗೆದಿಡಿರಿ.

ವಿ ॥ ಯದ್ಯಪಿ ಋಷ್ವ ಶಬ್ದಕ್ಕೆ ಮಹತ್ ಎಂದೇ ಅರ್ಥವು. ಆದಕಾರಣ ಋಷ್ವೌ=ಮಹಾಂತೌ ಎಂದು ಹೇಳಬೇಕಿತ್ತು. ಅತಿಮಹತ್ತರೌ ಎಂದು ಹೇಳಿದ್ದು ಹೇಗೆ ಎಂದರೆ– ಸೋತೃಗಳಲ್ಲಿ (ಸೋಮವನ್ನು ಕಂಡಿಸುವವರಲ್ಲಿ) ಮುಖ್ಯಾಮುಖ್ಯನ್ಯಾಯವು ಬಾಧಿತವಾಗಿದೆ. ದೇವತೆಯಲ್ಲಿ ಬಾಧಿತವಲ್ಲ. ಆದಕಾರಣ ಅತಿ ಮಹತ್ತರೌ ಎಂದು ಹೇಳಿದ್ದು. ॥ ೮ ॥

ಅವ ॥ ಈ ಋಕ್ಕು ಸೋಮದೇವತಾಕವು. ಗಾಯತ್ರೀ ಛಂದಸ್ಕವು.

ಋ ॥ (೩೨೧) ಉಚ್ಛಿಷ್ಟಂ ಚಮ್ವೋರ್ಭರ ಸೋಮಂ ಪವಿತ್ರ ಆಸೃಜ ।
ನಿಧೇಹಿ ಗೋರಧಿ ತ್ವಚಿ ॥ ೯ ॥ ೨೬ ॥ ೨೮ ॥

ಅ ॥ ಸೋಮಂ=ಈ ಸೋಮವನ್ನು ಉತ್=ಉತ್ಪವನಕ್ಕಾಗಿ, ಶುದ್ಧೀಕರಿಸುವುದಕ್ಕಾಗಿ, ಪವಿತ್ರೇ= ಸೋಮ ರಸವನ್ನು ತುಂಬಿಸುವುದಕ್ಕಾಗಿ ಯಾವುದು ಸ್ಥೂಲವಾದ ಕುಂಡವು ಸ್ಥಾಪಿಸಲ್ಪಡುತ್ತದೋ, ಅದು ದ್ರೋಣ ಕಲಶವೆನಿಸುತ್ತದೆ. ಅಂತಹ ದ್ರೋಣ ಕಲಶದ ಮೇಲೆ ಇರತಕ್ಕ ಪವಿತ್ರ ಪಾತ್ರದಲ್ಲಿ ಆಸೃಜ=ಇಡು. (ಉಳಿದ ಸೋಮವನ್ನು) ಚಮ್ವೋಃ=ಚಮಸನಾಮಕ ಪಾತ್ರಗಳಲ್ಲಿ ಭರ= (ಭೃಞ್ ಭರಣೇ) ತುಂಬಿಸಿಡು. ಗೋರಧಿತ್ವಚಿ=ಚರ್ಮದ ಮೇಲೆ, (ಋಜೀಷಂ=ಸವನಾಂತರದಲ್ಲಿ ರಸವನ್ನು ಬೇರೆ ತೆಗೆದ ಮೇಲ ಅವಶಿಷ್ಟವಾದ ನೀರಸ ಪದಾರ್ಥವನ್ನು) ನಿಧೇಹಿ=ಸ್ಥಾಪಿಸು. (ಹೀಗೆ ಋಷಿಯು ತನ್ನನ್ನು ಕುರಿತು ಅಥವಾ ತನ್ನ ಅಂತರ್ಯಾಮಿಯನ್ನು ಕುರಿತು ಹೇಳಿದ್ದೆಂದು ತಿಳಿದುಕೊಳ್ಳಬೇಕು.) (ಆಧ್ಯಾತ್ಮಪರವಾದುದು) ಸೋಮಂ=ಈ ಮನಸ್ಸನ್ನು, ಉತ್ ಶುದ್ಧೀಕರಿಸಿಕೊಳ್ಳುವುದಕ್ಕಾಗಿ, ಪವಿತ್ರೇ=ಬುದ್ಧಿಯಲ್ಲಿ, ಆಸೃಜ=ಇಡು. ಉಳಿದ ಮನೋವೃತ್ತಿ ವಿಶೇಷವನ್ನು ಚಮ್ವೋಃ=ಚಮಸಗಳೆನಿಸಿಕೊಂಡ ಶಿರೋಭಾಗಗಳಲ್ಲಿ, ಭರ=ಇಡು. ಗೋರಧಿತ್ವಚಿ= ಮುಖಚರ್ಮದಲ್ಲಿ,(ಋಜೀಷಂ=ಋಜೀಷಸ್ಥಾನೀಯವಾದ ಮನೋವೃತ್ತಿ ವಿಶೇಷವನ್ನು ನಿಧೇಹಿ=ಇಡು.(ಅಂದರೆ ಬುದ್ಧ್ಯಾದಿ ಸ್ಥಾನಗಳಲ್ಲಿರತಕ್ಕ ಶ್ರೀಹರಿಯಲ್ಲಿ ಮನಸ್ಸನ್ನು ಸ್ಥಿರವಾಗಿ ಇಡು. ॥ ೯ ॥

ಭಾ ॥ 1) ಸೋಮಮುತ್ಪವನಾಯೈತಂ ದ್ರೋಣೋಪರಿ ಪವಿತ್ರಕೇ ॥ ಭರ (2) ಶಿಷ್ಟಂ ಚಮಸಯೋಃ (3) ಋಜೀಷಂ ಗೋರಧಿ ತ್ವಚಿ ॥ (೪) ಭರೇತ್ಯಾತ್ಮಾನಮೇವಾಹ ಸ್ವಾಂತರ್ಯಾಮಿಣಮೇವವಾ॥ ಶಿರೋಭೇದೌತು ಚಮಸೌ ದ್ರೋಣಂ ಚೋದರಮೀರಿತಂ ॥ (5) ಪವಿತ್ರಂ ಬುದ್ಧಿರೇವಾತ್ರ ಮನಶ್ಶುದ್ಧಿಸ್ತಯಾ ಯತ ॥ (6) ಮುಖಚರ್ಮೈವ ಗೋಚರ್ಮ ಮನ ವಿಶೇಷು ವಿಷ್ಣವಿ ॥ ಧಾರ್ಯಂ ॥ ೯ ॥

ಅ ॥ (1) (ಈ ಅಂತಿಮವಾದ ಋಕ್ಕು ಪ್ರಜಾಪತಿಯಾದ ಹರಿಶ್ಚಂದ್ರನ ಪ್ರಶಂಸೆಯು. ಅಥವಾ ಗೋಚರ್ಮದ ಪ್ರಶಂಸೆಯಿಂದ, ಎಂದು ಅನುಕ್ರಮಣಿಕಾಕಾರರು ಹೇಳಿದು ಅಯುಕ್ತವು. ಏಕೆಂದರೆ ಹರಿಶ್ಚಂದ್ರನ ಸ್ತುತಿಯೇ ಇಲ್ಲಿ ತೋರುವುದಿಲ್ಲ. ಗೋ ಚರ್ಮವು ಪ್ರತಿಭಾಸವಾದರೂ ಗೋಚರ್ಮದ ಸ್ತುತಿಯು ಇಲ್ಲಿ ಇರುವುದಿಲ್ಲ. ಮತ್ತೆ ಚಮಸಭರಣಾದಿಗಳಿಂದ ಸೋಮವೇ ಸಂಸ್ಕಾರ್ಯವಾಗಿರುವುದರಿಂದ ಸೋಮವೇ ಪ್ರಧಾನವು. ಆದಕಾರಣ ಸೋಮವೇ ಇಲ್ಲಿ ದೇವತೆಯೆಂದು ತಿಳಿಯುತ್ತದೆ.) ಈ ಸೋಮವನ್ನು ಶುದ್ಧೀಕರಿಸುವುದಕ್ಕಾಗಿಯೇ, ದ್ರೋಣ ಕಲಶದ ಮೇಲೆ ಇರತಕ್ಕ ಪವಿತ್ರ ಪಾತ್ರದಲ್ಲಿ, ಇಡು(೨)ಅವಶಿಷ್ಟವಾದ ಸೋಮವನ್ನು ಚಮಸನಾಮಕ ಪಾತ್ರಗಳಲ್ಲಿ ತುಂಬಿಸು. (3) ನೀರಸವಸ್ತುವನ್ನು ಚರ್ಮದ ಮೇಲೆ ಸ್ಥಾಪಿಸು. (ಸೋಮ ರಸವನ್ನು ಚರ್ಮದಲ್ಲಿ ಇಡುವುದು ಯಾಜ್ಞಿಕರಲ್ಲಿ ಪ್ರಸಿದ್ಧಿಯಿಲ್ಲದಿರುವ ಪ್ರಯುಕ್ತ ಋಜೀಷಂ ಎಂದು ಅಧ್ಯಾಹಾರ

ಮಾಡಿದ್ದು.) (ಯದ್ಯಪಿ ಈ ಋಕ್ಕಿನಲ್ಲಿ ಏತಂ ಎಂದೂ **ದ್ರೋಣೋಪರಿ** ಎಂದೂ ಇಲ್ಲ. ಆದಾಗ್ಯೂ ಏನಂ **ದ್ರೋಣಕಲಶಂ ಅಭ್ಯವನಿನಾಯೋಚ್ಛಿಷ್ಟಂ ಚಮ್ವೋರ್ಭರ** ಈ ಋಕ್ಕಿನಿಂದ ದ್ರೋಣಕಲಶವನ್ನು ಕುರಿತು ಶುನಃಶ್ಶೇಪನು ಒಯ್ದನು ಎಂದು ಹೇಳಿದುದರಿಂದಲೂ ಈ ಋಕ್ಕಿನಲ್ಲಿ ಸೋಮನೇ ದೇವತೆ ಎಂದು ಸಿದ್ಧಿಸುತ್ತದೆ.) (ಆದುದರಿಂದಲೇ ಬೃಹದ್ದೇವತಾಕಾರನು '**ಸೋಮಂ ಮಂತ್ಯಾ ಪ್ರಶಂಸತಿ** ಎಂದು ಬೃಹದ್ದೇವತಾಕಾರರು ಹೇಳಿರುವರು.) (4) (ಹಾಗಾದರೆ ಭರ, ಸೃಜ, ನಿಧೇಹಿ, ಎಂದು ಯಾರನ್ನು ಕುರಿತು ಹೇಳುವುದೆಂದರೆ) ಭರ, ಎಂದೂ, ಸೃಜ ಎಂದೂ, ನಿಧೇಹಿ ಎಂದೂ ತನ್ನನ್ನು ಕುರಿತೇ ಹೇಳಿದ್ದು ಅಥವಾ ತನ್ನ ಅಂತರ್ಯಾಮಿಯನ್ನು ಕುರಿತೇ ಹೇಳಿದ್ದು. (ಈ ಕ್ರಿಯಾಕರ್ತನು ಇನ್ನೊಬ್ಬನು ಇಲ್ಲ. (ಅಧ್ಯಾತ್ಮ ಪರವಾದುದು. ಚಮಸ ಮೊದಲಾದ ಶಬ್ದಗಳ ಅರ್ಥವನ್ನು ಹೇಳುತ್ತಾರೆ.) **ಇದಂ ತಚ್ಛಿರಃ ಏಷ ಹ್ಯರ್ವಾಗ್ಬಿಲಃ ಚಮಸ ಊರ್ಧ್ವಬುಧ್ನಃ** ಎಂಬ ಶ್ರುತಿಯಿಂದ ಚಮಸಗಳೆಂದರೆ ಶಿರೋಭಾಗಗಳು. ದ್ರೋಣವೆಂದರೆ ಉದರವು, ಉಪಲಕ್ಷಣಯಾ ಹೃದಯವು. (ಏಕೆಂದರೆ ಹೃದಯದಲ್ಲಿ ಸೋಮ ಶಬ್ದವಾಚ್ಯವಾದ ಮನೋವೃತ್ತಿಯು ಪ್ರಚುರವಾಗಿದೆ.) (5) ಪವಿತ್ರವೆಂದರೆ ಬುದ್ಧಿಯೇ. ಆ ಬುದ್ಧಿಯಿಂದಲೇ ಯಾವ ಕಾರಣದಿಂದ ಮನಸ್ಸಿನ ಶುದ್ಧಿಯಾಗುತ್ತದೋ, (ಮನಶ್ಶುದ್ಧಿಸ್ತಯಾ ಯತಃ ಎನ್ನುವುದರಿಂದ ಸೋಮದ ಶುದ್ಧಿಗೆ ಕಾರಣವಾದ ಪವಿತ್ರಕ್ಕೂ ಬುದ್ಧಿಗೂ ಸಾಮ್ಯವನ್ನು ಪಪಾದಿಸಿದ ಹಾಗಾಯ್ತು.) (6) (ಗೋ ಶಬ್ದದಿಂದ ವಾಗಿಂದ್ರಿಯಕ್ಕೆ ಆಧಾರ ಭೂತವಾದ ಮುಖವು ಲಕ್ಷಿತವಾಗುತ್ತದೆ.) ತಥಾಚ ಗೋ ಶಬ್ದವಾಚ್ಯವಾದ ವಾಕ್ ಮುಖದಲ್ಲಿದೆ. ಆದ ಕಾರಣ ಮುಖಚರ್ಮವೇ ಗೋಚರ್ಮವು. (ಇವುಗಳಲ್ಲಿ ಸೋಮವನ್ನು ಇಡುವುದು ಮೊದಲಾದುದು ಹೇಗೆಂದರೆ) ಈ ಆಧಾರಗಳಾದ ಶಿರಸ್ಸು ಹೃದಯಮುಖಗಳಲ್ಲಿರತಕ್ಕ ವಿಷ್ಣುವಿನಲ್ಲಿ ಸೋಮರೂಪವಾದ ಮನಸ್ಸನ್ನು ಇಡಬೇಕು. (ಈ ಪಕ್ಷದಲ್ಲಿ ನಿಧೇಹಿ ಎನ್ನುವಲ್ಲಿಯೂ ಸೋಮವೇ ಕರ್ಮವು.) (ವಿಷ್ಣು ಎಂದು ಪ್ರಯೋಗ ಮಾಡಿದುದರಿಂದ ತನ್ನ ಭಾಷ್ಯವು ವೇದ ತುಲ್ಯವೆಂದು ಸೂಚಿತವಾಯ್ತು) ॥ ೯ ॥ ೨೬ ॥

ಅವ ॥ ಯಚ್ಚಿದ್ಧಿ ಎನ್ನುವುದಕ್ಕೆ ೭ ಋಕ್ಕುಗಳು. ೨೯ನೇ ಸೂಕ್ತವು. ೧ ವರ್ಗವು, ಇಂದ್ರ ದೇವತಾಕವು. ಅಥವಾ ಶಚೀದೇವತಾಕವು. ಪಙ್ಕ್ತಿ ಛಂದಸ್ಕವು,

ಋ ॥ (೩೨೨) ಯಚ್ಚಿದ್ಧಿ ಸತ್ಯ ಸೋಮಪಾ ಅನಾಶಸ್ತಾ ಇವ ಸ್ಮಸಿ। ಆ ತೂನ ಇಂದ್ರ ಶಂಸಯ ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥ ೧ ॥

ಅ ॥ ಸತ್ಯ=(**ಸಚ್ಛಬ್ದ ಉತ್ತಮಂ ಬ್ರೂಯಾದಾನಂದಂ ತೀತಿ ವೈ ವದೇತ್। ಯೇತಿ ಜ್ಞಾನಂ ಸಮುದ್ದಿಷ್ಟಂ** ಎಂಬ ಪ್ರಮಾಣದಿಂದ) ಷಡ್ಗುಣ ಪರಿಪೂರ್ಣನಾದ, ಸೋಮಪಾಃ=ಸೋಮಪಾನ ಮಾಡಿರುವ, ತುವಿಮಘ=ಮಹಾಯಾಗಗಳುಳ್ಳ (ಅಂದರೆ ಸಮಸ್ತ ಯಜ್ಞಗಳಲ್ಲಿಯೂ ಪೂಜಿಸಲ್ಪಡುವ) ಇಂದ್ರ=ಶ್ರೀ ಪರಮಾತ್ಮನೇ ಯಚ್ಚಿತ್=ಯಾವ ಕಾರಣದಿಂದಲೇ, (ನಾವು ಈಗ) ಅನಾಶಸ್ತಾ ಇವ=(ಶಂಸಸ್ತುತೌ) ಸ್ತುತಿಸಲ್ಪಡದಿರುವವರಂತೆ, ಸ್ಮಸಿ=ಆಗಿರುತ್ತೇವೋ, ಹಿ=ನಿಶ್ಚಯವು. (ಸರ್ವಥಾ ಸ್ತುತ್ಯರಲ್ಲವೆಂದಾಗಿದ್ದರೆ ಲೌಕಿಕರು ಪ್ರಶಂಸಿಸು ಎಂದು ಪ್ರಾರ್ಥಿಸುವುದು ಕೂಡದೆ ಹೋಗುವುದು. ಏಕೆಂದರೆ ಮಹಾ ಸಮರ್ಥನಾದ ಈಶ್ವರನೂ ಕೂಡ ಅತ್ಯಂತ ಅಪ್ರಶಸ್ತ ಇಂದ್ರಿಯಾದಿಗಳುಳ್ಳ ತಮೋ ಯೋಗ್ಯರಾದವರನ್ನು ಯಾವಾಗಲೂ, ಪ್ರಶಸ್ತ ಇಂದ್ರಿಯಾದಿಗಳುಳ್ಳ ಮುಕ್ತಿಯೋಗ್ಯರನ್ನಾಗಿ ಮಾಡುವುದಿಲ್ಲವಷ್ಟೆ. ಆದಕಾರಣ ಸರ್ವಥಾ ಸ್ತುತ್ಯರಲ್ಲ, ಎಂಬುವುದು ನಮಗೆ ಸಮ್ಮತವಲ್ಲ, ಅಥವಾ ತಾನು ತಮಸ್ಸಿಗೆ ಯೋಗ್ಯನಲ್ಲ ಎಂದು ತೋರಿಸುವುದಕ್ಕಾಗಿ) ಇವ ಎಂದು ಹೇಳಿದ್ದು. (ಆದಕಾರಣ) ತ್ವಂ ತು=ನೀನೇ, ನಃ= ನಮ್ಮನ್ನು ಶುಭ್ರಿಷು=ಶುಭ್ರಗಳಾದ, ಸಹಸ್ರೇಷು=ಸಹಸ್ರ ಸಂಖ್ಯಾಕ

ಗಳಾದ, ಗೋಷು ಅಶ್ವೇಷುಚ=ಗೋವು ಅಶ್ವಗಳು ಇವುಗಳ ವಿಷಯದಲ್ಲಿ, ಆಶಂಸಯ=ಪ್ರಶಂಸಿಸು. (ಅಂದರೆ —ಜನರು, ಗೋವು ಅಶ್ವ ಮೊದಲಾದ ಸಂಪತ್ತುಗಳಿದ್ದರೆ ನಮ್ಮನ್ನು ಹೇಗೆ ಸ್ತುತಿಸುವರೋ, ಹಾಗೆಯೇ ನಮಗೆ ಗವಾದಿ ಸಂಪತ್ತುಗಳನ್ನು ಕೊಟ್ಟು ಜನರು ಸ್ತುತಿಸುವಂತೆ ನಮ್ಮನ್ನು ಮಾಡು.) (ಅಧ್ಯಾತ್ಮಪರವಾದುದು.) ಗೌಃ=ವಾಗಿಂದ್ರಿಯವು. ಅಶ್ವಾಃ=ಮನಸ್ಸು ಮೊದಲಾದ ಜ್ಞಾನೇಂದ್ರಿಯಗಳು. ಅಂತೂ ಶುದ್ಧಗಳಾದ ವಾಕ್‌ಮನಸ್ಸು ಮೊದಲಾದವುಗಳ ವಿಷಯದಲ್ಲಿ ನಮ್ಮನ್ನು ಪ್ರಶಂಸಿಸು. ಭಗವಂತನ ಗುಣಾದಿರೂಪಗಳಾದ ವಿಷಯಗಳು ಬಹಳವಿದ್ದ ಪ್ರಯುಕ್ತ ಸಹಸ್ರೇಷು ಎಂದದ್ದು.

ವಿ ॥ ಶ್ರೀ ಪರಮಾತ್ಮನ ಗುಣ ಕರ್ಮರೂಪ ಮೊದಲಾದ ಬಹು ವಿಷಯಗಳು ನಮಗೆ ಹೇಳಲು ಯೋಗ್ಯಗಳೂ ತಿಳಿಯಲು ಯೋಗ್ಯಗಳೂ ಆಗಿವೆ. ಆದಕಾರಣ ನಮ್ಮನ್ನು ಅಂತಹ ಭಗವದ್ಗುಣಾದಿಗಳನ್ನು ತಿಳಿಯುವವರನ್ನಾಗಿಯೂ ಇತರರಿಗೆ ಹೇಳುವವರನ್ನಾಗಿಯೂ ಮಾಡಿ ಜನರು ವಾಗಾದಿಗಳ ವಿಷಯದಲ್ಲಿ ಸ್ತುತಿಸುವಂತೆ ನಮ್ಮನ್ನು ಸ್ತುತಿಸು. ॥ ೧ ॥

ಭಾ ॥ ಯತ್ಸದ್ಗುಣಾ ಶಸ್ತಾ ಇವ ಸ್ಮಸಿ ವಯಂ ತತಃ । ಶುಭ್ರವಾಙ್ಮನ ಆದೀನಾಂ ವಿಷಯೇಽಸ್ಮಾನ್ ಪ್ರಶಂಸಯ ॥ ಬಹು ವಾಚ್ಯಜ್ಞೇಯಯುಕ್ತಾನ್ ಕೃತ್ವಾಽಸ್ಮಾಂಸ್ತ್ವಂ ಮಹಾಮುಖ ॥ ೧ ॥

ಅ ॥ (ಸ ಇಂದ್ರಂ ತುಷ್ಟಾವ ಯಚ್ಚಿದ್ಧಿ ಸತ್ಯಸೋಮಪಾಃ ಇತಿ ಚೈತೇನ ಸೂಕ್ತೇನೋತ್ತರಸ್ಯ ಚ ಪಂಚದಶಭಿಃ ಎಂಬ ಬ್ರಾಹ್ಮಣ ವಾಕ್ಯದಿಂದ ಇಂದ್ರ ದೇವತಾಕವು ಈ ಸೂಕ್ತವು ಎಂದು ಸಿದ್ಧಿಸುತ್ತದೆ.) ಎಲೋ ಸದ್ಗುಣ ಪರಿಪೂರ್ಣನಾದ ಸಮಸ್ತ ಯಜ್ಞಗಳಲ್ಲಿಯೂ ಪೂಜಿಸಲ್ಪಡುವ ಶ್ರೀ ಹರಿಯೇ, ಯಾವ ಕಾರಣದಿಂದ ನಾವು ಸ್ತುತ್ಯರಾಗದಿದ್ದವರಂತೆ ಆಗಿರುತ್ತೇವೋ, ಆ ಕಾರಣ ನೀನು ನಮ್ಮನ್ನು ಬಹಳ ಭಗವದ್ಗುಣಾದಿಗಳನ್ನು ಹೇಳುವವರನ್ನಾಗಿಯೂ ತಿಳಿಯುವವರನ್ನಾಗಿಯೂ ಮಾಡಿ ಶುದ್ಧಗಳಾದ ವಾಕ್ ಮನಸ್ಸು ಮೊದಲಾದ ಜ್ಞಾನೇಂದ್ರಿಯಗಳ ವಿಷಯದಲ್ಲಿ ನಮ್ಮನ್ನು ಪ್ರಶಂಸಿಸು. ॥ ೧ ॥

ಋ ॥ (೩೨೩) ಶಿಪ್ರಿನ್ವಾಜಾನಾಂ ಪತೇ ಶಚೀವಸ್ತವ ದಂಸನಾ। ಆತೂನ ಇಂದ್ರ ಶಂಸಯ ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥ ೨ ॥

ಅ ॥ ಶಿಪ್ರಿನ್=ಸುಖವುಳ್ಳ, ವಾಜಾನಾಂ ಪತೇ=ಅನ್ನಗಳಿಗೆ ಅಧಿಪತಿಯಾದ, ಶಚೀವಃ=ವಚನಗಳ ಪ್ರಯೋಗಾದಿಗಳನ್ನು ತಿಳಿದವನಾದುದರಿಂದ ವಾಗಭಿಜ್ಞನಾದ, ಇಂದ್ರನೇ, ದಂಸನಾ=ಸಮಸ್ತ ಜನರು ಮಾಡತಕ್ಕ ಕರ್ಮಗಳು, ತವ=ನಿನ್ನಿಂದ ಪ್ರೇರಿತಗಳೂ ನಿನ್ನ ವಿಷಯಗಳೂ ಆಗಿವೆ. (ಆತೂನಃ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥವು.) ಇಂತಹ ಸುಖಿಯೂ ಅನ್ನಪತಿಯೂ ಕರ್ಮಪ್ರೇರಕನೂ ಆದ ನೀನು ನಮ್ಮನ್ನು ಗವಾದಿ ವಿಷಯಗಳಲ್ಲಿ ಪ್ರಶಂಸಿಸು. ॥ ೨ ॥

ಭಾ ॥ ಸುಖಿನ್ನನ್ನಪತೇ ವಾಗ್ಜ್ಞ ತವ ಕರ್ಮಾಣಿ ಸರ್ವತಃ ॥ ೨ ॥

ಅ ॥ ಸುಖಿಯೂ ಅನ್ನಾಧಿಪತಿಯೂ ವಾಗಭಿಜ್ಞನೂ ಆದ ಶ್ರೀ ಹರಿಯೇ ಜನರು ಮಾಡತಕ್ಕ ಕರ್ಮಗಳೆಲ್ಲವೂ ನಿನ್ನಿಂದಲೇ ಪ್ರೇರಿತಗಳೂ ನಿನ್ನ ವಿಷಯಕಗಳೂ ಆಗಿವೆ. ॥ ೨ ॥

ಋ ॥ (೩೨೪) ನಿ ಷ್ವಾಪಯಾ ಮಿಥೂದೃಶಾ ಸಸ್ತಾಮಬುಧ್ಯಮಾನೇ।
ಆತೂನ ಇಂದ್ರ ಶಂಸಯ ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು
ತುವೀಮಘ ॥ ೩ ॥

ಅ ॥ ಇಂದ್ರ=ಎಲೋ ಪರಮೇಶ್ವರನೇ, ಮಿಥುದೃಶಾ=(ದೈತ್ಯರಾಕ್ಷಸರೇ ಮುಖ್ಯತಃ ಮಿಥ್ಯಾಜ್ಞಾನಿಗಳಾದುದರಿಂದ) ದೈತ್ಯರಾಕ್ಷಸರೆಂಬ ಪ್ರಜೆಗಳಿರಾ, ಸಸ್ತಾಂ=(ಷಸಸ್ವಪ್ನೇ ಸ್ವಾಪವು ಸಮಸ್ತ ಇಂದ್ರಿಯಗಳ ಉಪರತಿಸ್ವರೂಪವಾಗಿರುವುದರಿಂದ ಆಗ ಜ್ಞಾನವೇ ಇಲ್ಲದಿರುವ ಪ್ರಯುಕ್ತ ಸಸ್ತಾಂ ಎನ್ನುವುದರಿಂದ ಅಜ್ಞಾನವನ್ನು ಲಕ್ಷಣಯಾ ಇಟ್ಟುಕೊಳ್ಳಬೇಕು.) ಅಜ್ಞಾನಿಗಳಾಗಿರುವಿರಿ. ಯಾವ ಪ್ರಕಾರದಿಂದ ಬಹ್ವಜ್ಞಾನಿಗಳು ಎಂದರೆ) ಅಬುಧ್ಯಮಾನೇ=ಯಾವ ರೀತಿಯಾಗಿ ಸದಾ ತತ್ವಜ್ಞಾನ ಶೂನ್ಯರಾಗುತ್ತಾರೋ, (ಹಾಗೆ ನೀನು ಆ ಪ್ರಜೆಯನ್ನು) ನಿಷ್ವಾಪಯ=ಪರತತ್ವ ವಿಷಯದಲ್ಲಿ ಚೆನ್ನಾಗಿ ಮೋಹಿಸು. ಆತೂನಃ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥವು. ॥ ೩ ॥

ಭಾ ॥ ದೈತ್ಯರಕ್ಷಃ ಪ್ರಜೇ ಮಿಥ್ಯಾದೃಶೌ ಸಸ್ತಾಂ ಪುನರ್ಬಹು। ಅಬುಧ್ಯಮಾನೇ ನಿತ್ಯಂಚ
ಯಥಾ ನಿಷ್ವಾಪಯೇಶ್ವರ ॥ ೩ ॥

ಅ ॥ ಮಿಥ್ಯಾಜ್ಞಾನಿಗಳಾದ ದೈತ್ಯರಾಕ್ಷಸರೆಂಬ ಪ್ರಜೆಗಳಿರಾ, ಪುನಃ=ಬಹಳವಾಗಿ ಅಜ್ಞಾನಿಗಳಾಗಿರುವಿರಿ. ಹೇಗೆಂದರೆ—ಯಾವ ಪ್ರಕಾರದಿಂದ ಸರ್ವದಾ ತತ್ವಜ್ಞಾನ ಶೂನ್ಯರಾಗುತ್ತಾರೋ, ಹಾಗೆಯೇ ಎಲೋ ಶ್ರೀ ಹರಿಯೇ ನೀನುಅಂತಹ ಪ್ರಜೆಗಳನ್ನು ಪರತತ್ವ ವಿಷಯದಲ್ಲಿ ಚೆನ್ನಾಗಿ ಮೋಹಗೊಳಿಸು. ॥ ೩ ॥

ಋ ॥ (೩೨೫) ಸಸಂತು ತ್ಯಾ ಅರಾತಯೋ ಬೋಧಂತು ಶೂರ ರಾತಯಃ।
ಆತೂನ ಇಂದ್ರ ಶಂಸಯ ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು
ತುವೀಮಘ ॥ ೪ ॥

ಅ ॥ ಶೂರ=ಎಲೋ ಶ್ರೀಹರಿಯೇ (ಚೆನ್ನಾಗಿ ನಿರ್ಭಯವಾಗಿ) ತ್ಯಾಃ=ಆಪ್ರಸಿದ್ಧರಾದ, (ಪುಲ್ಲಿಂಗಕ್ಕೆ ವ್ಯತ್ಯಾಸವಾಗಿ ಸ್ತ್ರೀಲಿಂಗವು) ಅರಾತಯಃ=ನಿನ್ನ ಶತ್ರುಗಳು, ಸಸಂತು=(ಷಸಸ್ವಪ್ನೇ) ಸ್ವಾಪಮಾಡಲಿ. (ಅಂದರೆ ಸರ್ವದಾ ಅಜ್ಞಾನದಿಂದ ಮೋಹಯುಕ್ತರಾಗಲಿ) ಮತ್ತು ರಾತಯಃ=ನಿನ್ನ ಮಿತ್ರರು, ಬೋಧಂತು=ನಿನ್ನ ರೂಪವನ್ನು ತಿಳಿಯುತ್ತಲೇ ಇರಲಿ. ಆತೂನಃ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥವು. (ಅಥವಾ ಈ ಋಕ್ಕಿನಲ್ಲಿ ತ್ಯಾಃ ಎಂಬ ಪದವು ಪ್ರಜಾಃ ಎಂಬ ಸ್ತ್ರೀವಾಚಕವೇ. ಹೀಗೆ ತಿಳಿಸುವುದಕ್ಕಾಗಿಯೇ ಪೂರ್ವಋಕ್ಕಿನ ಭಾಷ್ಯದಲ್ಲಿ **ದೈತ್ಯರಕ್ಷಃ ಪ್ರಜೇ** ಎಂದು ಪ್ರಜಾ ಎಂಬ ಪದವನ್ನೂ ಸ್ವೀಕರಿಸಿರುವರು. ತಥಾಚ ಶತ್ರುರೂಪರಾದ=ತ್ಯಾಃ=ಪ್ರಸಿದ್ಧರಾದ, ಪ್ರಜಾಃ=ಪ್ರಜೆಗಳು ಸ್ವಾಪಮಾಡಲಿ. ಎಂದರ್ಥವು.) ॥ ೪ ॥

ಭಾ ॥ ಸ್ವಪಂತು ತೇ ಶತ್ರವಸ್ತೇ ಸರ್ವದಾಽಜ್ಞಾನಮೋಹಿತಾಃ। ಬೋಧಂತು ಚೈವ
ಮಿತ್ರಾಣಿ ತವ ರೂಪಂ ಸುನಿರ್ಭಯಂ ॥ ೪ ॥

ಅ ॥ ಆ ಪ್ರಸಿದ್ಧರಾದ ಆ ನಿನ್ನ ಶತ್ರುಗಳು ಸರ್ವದಾ ಅಜ್ಞಾನದಿಂದ ಮೋಹಯುಕ್ತರಾಗಿರಲಿ. ನಿನ್ನ ಮಿತ್ರರು ಏನೂ ಭಯವಿಲ್ಲದೇನೆ ನಿನ್ನ ರೂಪವನ್ನು ತಿಳಿಯುತ್ತಲೇ ಇರಲಿ. ॥ ೪ ॥

ಋ ॥ (೩೨೭) ಸಮಿಂದ್ರ ಗರ್ದಭಂ ಮೃಣ ನುವಂತಂ ಪಾಪಯಾಽಮುಯಾ ॥ ಆ ತೂನ ಇಂದ್ರ ಶಂಸಯ ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥ ೫ ॥

ಅ ॥ ಇಂದ್ರ=ಶ್ರೀಹರಿಯೇ, ಗರ್ದಭಂ=ದುರ್ವಾಕ್ಯತ್ವಾದಿಗಳು, ಉಭಯತ್ರ ಸಮಗಳೇ ಆಗಿರುವುದರಿಂದ ಮಾಯಾವಾದಿಯೆಂಬ ಕತ್ತೆಯನ್ನು ಪಾಪಯಾ=ಪಾಪಿಷ್ಠವಾದ,ಅಮುಯಾ=ಈ ಮಾಯೆಯಿಂದ, (ಶಾಠ್ಯದಿಂದ, ಗೂಢ ದ್ವೇಷದಿಂದ) ನುವಂತಂ=ಸ್ತುತಿಸುವವನನ್ನೂ ಕೂಡ, ಅಥವಾ ಮಾಯಾಮಯಾಸ್ತವಗುಣಾಃ ಇತ್ಯಾದಿ ರೂಪವಾಗಿ ಕೂಗುವವನನ್ನೂ ಕೂಡ,ಸಮ್ ಮೃಣ=(ಮೃಣ ಹಿಂಸಾಯಾಂ)ತಮಸ್ಸಿನಲ್ಲಿಯೇ ಬಿಸುಟು ಚೆನ್ನಾಗಿ ತಪ್ತಗಳಾದ ಪಾಷಾಣಗಳಿಂದ ಸರ್ವದಾ ಪುಡಿ ಪುಡಿ ಮಾಡು. ಆತೂನಃ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥವು.

ಭಾ ॥ ಪಾಪಯಾ ಮಾಯಯಾ ಮಿಥ್ಯಾಸ್ತುವಂತಂ ತ್ವಾಮಪಿ ಪ್ರಭೋ । ಮಾಯಾಮಯಾಸ್ತವ ಗುಣಾಃ ನ ಸಂತಿ ಪರಮಾರ್ಥತಃ । ಇತಿ ನಿತ್ಯಂ ರುವಂತಂ ಚ ಮಾಯಾವಾದ್ಯಾಖ್ಯಗರ್ದಭಂ । ಸಂಚೂರ್ಣಯ। ತಮಸ್ಯೇವ ಕ್ಷಿಪ್ತ್ವಾ ತಪ್ತಾಶ್ಮಭಿಃ ಸದಾ ॥ ೫ ॥

ಅ ॥ ಎಲೋ ಪ್ರಭುವೇ ನಿನ್ನನ್ನಾದರೂ ಪಾಪಿಷ್ಠವಾದ ಮಾಯೆಯಿಂದ ಶಾಠ್ಯದಿಂದ ಸ್ತುತಿಸುತ್ತಿರುವ ಅಥವಾ ನಿನ್ನ ಗುಣಗಳು ಮಾಯಾಮಯಗಳು, (ಮಾಯೆಯನ್ನಾಶ್ರಯಿಸಿರುವವುಗಳು.) (ಮಾಯಾ ರೂಪ ಹೇತುವಿನಿಂದ ಗುಣಗಳಿವೆಯೆಂದು ಹೇಳುವವನು) ಪಾರಮಾರ್ಥಿಕವಾಗಿ ಇಲ್ಲ. ಹೀಗೆ ನಿತ್ಯದಲ್ಲಿಯೂ ಕೂಗುತ್ತಿರುವ ಮಾಯವಾದಿಯೆಂಬ ಕತ್ತೆಯನ್ನು ತಮಸ್ಸಿನಲ್ಲಿಯೇ ಹಾಕಿ ಸರ್ವದಾ ಚೆನ್ನಾಗಿ ಕಾಯಿಸಲ್ಪಟ್ಟ ಕಲ್ಲುಗಳಿಂದ ಚೆನ್ನಾಗಿ ಪುಡಿ ಪುಡಿಮಾಡು.

ವಿ ॥ (1) **ದಯಾಶೀಲ ದೇವ ಪ್ರಸೀದ** (ಶಿವ ಭುಜಂಗ ಪ್ರಯಾತ ಸ್ತೋತ್ರ) **ಮಹಿಮ್ನಃ ಪಾರಂತೇ** ಇದು ಮೊದಲಾದ, ಮಾಯಾವಾದಿಗಳ ಸ್ತೋತ್ರಗಳುಶಾಠ್ಯ ಮೂಲಕಗಳೂ (2) **ನಿರಾಕಾರಮೋಂಕಾರಗಮ್ಯಂ**(ವೇದಸಾರ ಶಿವಸ್ತವಃ)**ಅನೃತ ಜಡ ವಿರೋಧಿ ರೂಪಂ**ಇತ್ಯಾದಿಗಳುಸರ್ವಥಾ ಆಕಾರವೇ ಇಲ್ಲದವನಿಗೆ ಪಾರಮಾರ್ಥಿಕವಾಗಿ ಗುಣಾಶ್ರಯುತ್ವವೇ ಕೂಡದಿರುವುದರಿಂದ ಸ್ತುತಿಯಲ್ಲವೆಂದು ಹೇಳಿವೆ. (3) ಏಕೆಂದರೆ ಅನಾದಿಯಾದಅನಿರ್ವಾಚ್ಯವಾದ ಪಾಪ ಭೂತವಾದ ಅಪ್ರಾಮಾಣಿಕವಾ ದಮಾಯೆಯನ್ನಾಶ್ರಯಿಸಿಅನೇಕಾನೇಕ ಪ್ರಮಾಣ ಸಿದ್ಧಗಳಾದುವುಗಳು ಭಗವಂತನಿಗೆ ಅನಂತ ಗುಣಗಳಿವೆ, ಜಗತ್ಸತ್ಯವು ಭಗವಂತನು, ಜಗತ್ಕಾರಣನು ಜ್ಞಾನಾನಂದಾದಿ ಸ್ವರೂಪನು,ದಿವ್ಯ ಮಹಾಮಹಿಮೆಗಳುಳ್ಳವನು, ಇತ್ಯಾದಿ ಅಪಲಾಪ ಮಾಡುವುದು ಸರ್ವಥಾ ಅಯುಕ್ತವು ॥ ೫ ॥

ಋ ॥ (೩೨೮) ಪತಾತಿ ಕುಂಡೃಣಾಚ್ಯಾ ದೂರಂ ವಾತೋವನಾದಧಿ । ಆ ತೂನ ಇಂದ್ರ ಶಂಸಯ ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥ ೬ ॥

ಅ ॥ ವಾತಃ=ವಾಯು ದೇವರು, (ಹಿಂದೆ ಪ್ರಸ್ತುತರಾದ ನಿನ್ನನ್ನು ನಿಂದಿಸುವವರನ್ನು) ವನಾತ್=ತ ಶನ್ನಲ್ಲಿ ಬಿದ್ದವರನ್ನು ಬೇರೆ ಕಡೆಗೆ ಹೋಗಲು ಸರ್ವಥಾ ಬಿಡದಿರುವುದರಿಂದ ವನವೆಂದು ಹೆಸರುಳ್ಳ ಕುಂಡ್ರೃ ಣಾಚ್ಯಾ=ಕುಂಭೀ ಪಾಕಕ್ಕಿಂತಲೂ ನೀಚವೆಂದು ಪ್ರಸಿದ್ಧವಾದ ಅಂಧಂತಮಸ್ಸಿನಲ್ಲಿ, ದೂರಂ ಅಧಿ=ಅತಿ ದೂರ ದಲ್ಲಿ, ಪತಾತಿ,=ಬೀಳಿಸಲಿ. ಆತೂನಃ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥವು. ॥ ೬ ॥

ಭಾ ॥ (೧) ದೂರಂ ಚ ಪಾತಯತ್ಯೇನಾನ್ ವಾಯುಸ್ತಸ್ಮಿನ್ ತಮಸ್ಯಧಃ ॥ (೨) ವನಂ ದೃಢಗ್ರಹೇಣೈವ ತತ್ತಮೋ ವೇದನೋಲ್ಬಣಾ । ಕುಂಡ್ರೃಣಾಚೀತಿ ಸಂಪ್ರೋಕ್ತಾ (೩) ಕುಂಡಾನ್ನೀಚತ್ವತೋಽಧಿಕಂ ॥ (೪) ಕುಂಭಃಕುಂಡಾಭಿಧಃ ಕುಂಭೀಪಾಕಾನ್ನೀಚಾ ಹಿ ತದ್ಗತಿಃ ॥ (೫) ರೇಫಃ ಸ್ವರವ್ಯತ್ಯಯಶ್ಚ ಕದಾಧಿಕ್ಯಾರ್ಥವಿಚಾರಿತೌ ॥ ೬ ॥

ಅ ॥ (1) ವಾಯುದೇವರು, (ಎಲೋ ಶ್ರೀಹರಿಯೇ) ನಿನ್ನನ್ನು ಯಾರು ನಿಂದಿಸುವರೋ, ಅಂತಹವ ರನ್ನು ಕುಂಡ್ರೃಣಾಚ್ಯಾ ಎಂದು ಪ್ರಸಿದ್ಧವಾದ ಅಂಧಂತಮಸ್ಸಿನಲ್ಲಿ ಅತಿ ದೂರದಲ್ಲಿ ಬೀಳಿಸಲಿ. (2) ತಮಸ್ಸು ವನವೆಂದು ಹೇಗೆ ಹೇಳಿಸಿಕೊಳ್ಳುವುದು ಎಂದರೆ) (ವನಧಾತುವಿಗೆ ಸಂಭಜನವೆಂದರ್ಥವು. ಸಂಭಂಜನವೆಂದರೆ ದೃಢವಾಗಿ ಗ್ರಹಣವು. ಅಂದರೆ ವಿಯೋಗವಿಲ್ಲದಿರುವಿಕೆ. ಅದ ಕಾರಣ)(ಅಂಧಂತಮಸ್ಸು ನಿತ್ಯವಾದ ಪ್ರಯುಕ್ತ) ಆ ಅಂಧಂತಮಸ್ಸು ವಿಯೋಗವಿಲ್ಲದಿರುವುದರಿಂಗಲೇ, (ಅಲ್ಲಿ ಹೋದವರಿಗೆ ಪುನರಾವೃತ್ತಿಯಿಲ್ಲದಿರುವುದರಿಂದಲೇ ವನವೆನಿಸುತ್ತದೆ.ಅಂತಹ ತಮಸ್ಸೇ ಅತಿ ದುಃಖಾತ್ಮಕವಾದರೆ ಕುಂಡ್ರೃಣಾಚೀಎನಿಸುತ್ತದೆ.(ಕುಂಡ್ರೃಣಾಚೀ ಶಬ್ದಕ್ಕೆ ಸ್ತ್ರೀಲಿಂಗವನ್ನು ಸಂಪಾದಿಸುವುದಕ್ಕಾಗಿ ಉಲ್ಬಣ್ಹಾವೇದನಾ ಎಂದದ್ದು) (3) ಕುಂಡ ದೆಶೆಯಿಂದ ಅತಿ ನೀಚವಾದ ಪ್ರಯುಕ್ತ ಅಂಧಂತಮಸ್ಸುಅತಿದುಃಖಾತ್ಮಕವು.)(4)(ಕುಂಡವೆಂದರೆ ಯಾವುದು?ಅದಕ್ಕಿಂತಲೂ ತಮಸ್ಸುನೀಚವು ಹೇಗೆಂದರೆ)ಕುಂಭೀಪಾಕ ಎಂಬ ನರಕವೇ ಕುಂಡ ಎನಿಸುತ್ತದೆ. ಭಗವಂತನನ್ನು ನಿಂದಿಸುವವರ ಗತಿಯಾದ ಅಂಧಂ ತಮಸ್ಸು ಕುಂಭೀಪಾಕಕ್ಕಿಂತಲೂ ಅತಿ ನೀಚವು. ಹಿ=**ರೌರವೋಥ ಮಹಾಂಶ್ಚೈವ ವಹ್ನಿರ್ವೈ ತರಣೀ ತಥಾ। ಕುಂಭೀಪಾಕ ಇತಿ ಪ್ರೋಕ್ತಾನ್ಯನಿತ್ಯ ನರಕಾಣಿತು । ತಾಮಿಸ್ರಶ್ಚಾಂಧತಾಮಿಸ್ರೌ ದ್ವೌ ನಿತ್ಯೌ ಸಂಪ್ರಕೀರ್ತಿತೌ । ಇತಿ ಸಪ್ತಪ್ರಧಾನಾನಿ ಬಲೀಯಸ್ತ್ಯುತ್ತರೋತ್ತರಂ ॥** ಎಂದು ಭಾರತ ವಾಕ್ಯ ಪ್ರಸಿದ್ಧವು. (5) (ಹೀಗಾದರೆ ಕುಂಡನೀಚಾ ಎಂದಾಗಬೇಕಿತ್ತು. ಕುಂಡ್ರೃಣಾಚೀ) ಎಂದು ಹೇಗೆಂದರೆ ಕುಂಡನೀಚ್ಯೈವ ಕುಂಡ್ರೃಣಾಚೀ. ಇಲ್ಲಿ ರೇಫ ಶಬ್ದದಿಂದ ಶ್ರುತಿ ಸಾಮ್ಯದಿಂದ ಋಕಾರವು ಹೇಳಲ್ಪಡುತ್ತದೆ.ಕುಂಡ ಶಬ್ದದಲ್ಲಿ ಅಕಾರಕ್ಕೆ ವರ್ಣವಿಕಾರ ರೂಪವಾದ ಋ ಕಾರವು. ನೀಚಾ ಎನ್ನುವಲ್ಲಿ ಈ ಕಾರ ಆಕಾರ ಸ್ವರಗಳಿಗೆ ವ್ಯತ್ಯಯವು ಅಂದರೆ ಅಂತಿಮವಾದ ಚಕಾರದಲ್ಲಿರತಕ್ಕ ಆ ಕಾರವು ನ ಕಾರದ ಮೇಲೆಯೂ ನಕಾರದಲ್ಲಿರತಕ್ಕ ಈ ಕಾರವು ಚಕಾರದ ಮೇಲೆಯೂ ಹೀಗೆ ವರ್ಣ ವಿಪರ್ಯಯವು.ತಮಸ್ಸಿಗೆ ಕುಂಭೀಪಾಕದ್ದೆಶೆಯಿಂದಲೂ ಅತ್ಯಧಿಕ ದುಃಖವಿದೆಯೆಂದು ತೋರಿಸುವುದಕ್ಕಾಗಿ ಪ್ರಯುಕ್ತಗಳಾಗಿವೆ. ಆ ಅಭಿಪ್ರಾಯದಿಂದಲೇ ಮೊದಲು ಅಧಿಕಂ ಎಂದು ಹೇಳಿದೆ. ॥ ೬ ॥

ಋ ॥ (೩೨೮) ಸರ್ವಂ ಪರಿಕ್ರೋಶಂ ಜಹಿ ಜಂಭಯಾ ಕೃಕದಾಶ್ವಂ ।
ಆತೂನ ಇಂದ್ರ ಶಂಸಯ ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥ ೭ ॥ ೨೭ ॥ ೨೯ ॥

ಅ ॥ ಇಂದ್ರ=ಶ್ರೀಹರಿಯೇ, ಪರಿಕ್ರೋಶಂ=(ಪರಿತಃ ಕ್ರೋಶಃ=ದುಷ್ಟ ವ್ಯವಹಾರಃ ಯಸ್ಮಾತ್ ಎಂಬ ವ್ಯುತ್ಪತ್ತಿಯಿಂದ) ಸರ್ವತ್ರ ದುಷ್ಟ ವ್ಯವಹಾರವನ್ನೇ ಮಾಡುತ್ತಿರುವ (ಅಂದರೆ ನಿಂದಿಸುತ್ತಿರುವ) ಸರ್ವಂ=ಎಲ್ಲಾ

ಪಾಪಿಷ್ಠ ಜನರನ್ನು, ಜಹಿ=ಸಂಹರಿಸು. ಜಂಭಯ=(ಜಭಿನಾಶನೇ) ಶುನಕಾದಿಗಳಿಂದ ನಿತ್ಯದಲ್ಲಿಯೂ ಕಚ್ಚಿಸು. (ಹೇಗೆಂದರೆ) ಕೃಕದಾಶ್ವಂ=(ದಂಶ ದಂಶನೇ) ಗರಗಸಗಳಿಂದ ಕಠಿಣವಾಗಿ ಶೀಳಿಸುವಿಕೆಯು ಹೇಗೋ, ಹಾಗೆ (ಕಚ್ಚಿಸು.) ॥ ೭ ॥ ೨೭ ॥ ೨೯ ॥

ಭಾ ॥ ಸರ್ವಂ ಪರಿಕ್ರೋಶಕರಂ ಪಾಪಿನಂ ಜಹಿ ಜಂಭಯ । ದಂಶಯ ಶ್ವಾದಿಭಿರ್ನಿತ್ಯಂ ಕ್ರಕಚೈರ್ದಂಶನಂ ಯಥಾ ॥ ೭ ॥ ೨೭ ॥ ೧೦ ॥

ಅ ॥ ನಿಂದಿಸುವ ಎಲ್ಲಾ ಪಾಪಿಷ್ಠರನ್ನು ಸಂಹರಿಸು. ಜಂಭಯ ಅಂದರೆ ಗರಗಸಗಳಿಂದ ಹೇಗೆ ವೃಕ್ಷಾದಿಗಳನ್ನು ಛೇದಿಸುತ್ತಾರೋ, ಹಾಗೆಯೇ ನಿತ್ಯದಲ್ಲಿಯೂ ನಾಯಿ ಮೊದಲಾದವುಗಳಿಂದ ಕಚ್ಚಿಸು.(ಕಟ್ಟಿಗೆಯನ್ನು ಛೇದಿಸುವ, ಹಲ್ಲುಗಳು ಇದ್ದ ಆಯುಧ ವಿಶೇಷವು ಕ್ರಕಚವು. ಗರಗಸವು.) ॥ ೭ ॥ ೨೭ ॥ ೧೦ ॥

ಅವ ॥ ೩ಂನೇ ಸೂಕ್ತವು. ೨೨ ಋಕ್ಕುಗಳು. ೪ ವರ್ಗಗಳು ಆದಿಮ ೧೬ ಋಕ್ಕುಗಳು ಇಂದ್ರದೇವತಾಕಗಳು. ಆ ಮೇಲೆ ೩ ಋಕ್ಕುಗಳು ಅಶ್ವಿನೀ ದೇವತಾಕಗಳು. ಅಂತಿಮ ೩ ಋಕ್ಕುಗಳು ಉಷೋ ದೇವತಾಕಗಳು. ೧೧ನೇದ್ದು ಪಾದನಿಚೃತ್ ಗಾಯತ್ರೀ ವಿಶೇಷವು. ೧೬ನೇದ್ದು ತ್ರಿಷ್ಟುಪ್ ಛಂದಸ್ಕವು. ಅವಶಿಷ್ಟಗಳು ಗಾಯತ್ರೀ ಛಂದಸ್ಕಗಳು

ಋ ॥ (೩೨೯) ಆವ ಇಂದ್ರಂ ಕ್ರಿವಿಂ ಯಥಾ ವಾಜಯಂತಃ ಶತಕ್ರತುಂ । ಮಂಹಿಷ್ಠಂ ಸಿಂಚ ಇಂದುಭಿಃ ॥ ೧ ॥

ಅ ॥ ವಾಜಯಂತಃ=(ತತ್ಕರೋತಿ ತದಾಚಷ್ಟೇ ಇತಿ ಣಿಚ್) ಯುದ್ಧವನ್ನು ಮಾಡುವ, ಅಥವಾ ವಾಜಯಂತಃ=(ಪ್ರಾತಿಪದಿಕಾತ್ ಧಾತ್ವರ್ಥೇ ಣಿಚ್ ವಾಜಾನ್ ಭುಂಜತೇ ಎಂಬ ವ್ಯುತ್ಪತ್ತಿಯಿಂದ) ಸಮಸ್ತ ಭೋಗಗಳನ್ನು ಭುಂಜಿಸುವ ದೇವತೆಗಳಿರಾ, ವಃ=ನಿಮಗೆ ಸ್ವಾಮಿಯಾದ, ಶತಕ್ರತುಂ=೧೦೦ ಯಜ್ಞ ಮಾಡಿರುವ, ಮಂಹಿಷ್ಠಂ=(ಮಹಿವೃದ್ಧೌ) ಮುಖ್ಯ ಪೂಜ್ಯನಾದ, ಇಂದ್ರಂ=ಇಂದ್ರನನ್ನು ಇಂದುಭಿಃ=ಸೋಮಗಳಿಂದ,(ನಾನು) ಕ್ರಿವಿಂ ಯಥಾ=ಜಗದ್ರಕ್ಷಣಾದಿಗಳನ್ನು ಮಾಡುವುದರಿಂದ ಕ್ರಿವಿ ಶಬ್ದವಾಚ್ಯನಾದ ರಾಜನನ್ನು ಹೇಗೋ ಹಾಗೆ, ಅಥವಾ ಶ್ರೀವಿಷ್ಣುವನ್ನು ಹೇಗೋ ಹಾಗೆಯೇ ಆ ಸಿಂಚೇ=ಅಭಿಷೇಕ ಮಾಡುತ್ತೇನೆ. (ಇಂದ್ರ ಸಂಬಂಧಿಯಾದ ಮಹಾಭಿಷೇಕದಲ್ಲಿ ಸರ್ವಾಧಿಪತ್ಯವನ್ನು ಹೇಗೆ ಅಭಿಷೇಕ ಮಾಡುತ್ತಾರೋ ಹಾಗೆಯೇ) ॥ ೧ ॥

ಭಾ ॥ (1) ಹೇ ವಾಜಯಂತೋ ಯುಧ್ಯಂತೋ ದೇವಾ ಭೋಗಿನ ಏವ ವಾ।ಸೋಮೈರ್ವಾ ಇಂದ್ರಮಾಸಿಂಚೇ ಕ್ರಿವಿಂ ಯದ್ವನ್ನೃಪಂ ಕೃತೇಃ । ಕರ್ತಾರಮಥವಾ ವಿಷ್ಣುಮಿವ ವಾ (2) ಸ್ವದೃಷ್ಟಾಂತೋ ಹರೇರ್ಭವೇತ್ ॥ ೧ ॥

ಅ ॥ (1) ಹೇವಾಜಯಂತಃ=ಯುದ್ಧಮಾಡುವ ಅಥವಾ ಸಮಸ್ತ ಭೋಗಗಳನ್ನು ಭೋಗಿಸುವ ದೇವತೆಗಳಿರಾ ನಿಮ್ಮ ಸಂಬಂಧಿಯಾದ ದೇವೇಂದ್ರನನ್ನು ಸೋಮಗಳಿಂದ ಕ್ರಿವಿಂ=ರಾಜನನ್ನು ಹೇಗೋ ಅಥವಾ ಜಗತ್ಪಾಲನಾದಿಗಳನ್ನು ಮಾಡುವ ಶ್ರೀವಿಷ್ಣುವನ್ನೆಂಬಂತೆ ಅಭಿಷೇಕ ಮಾಡುತ್ತೇನೆ. (2) (ಇಂದ್ರ ಶಬ್ದ ವಾಚ್ಯನು ವಿಷ್ಣುವೆಂದಾದರೆ ಆಗ ಇದು ಹೇಗೆ ಕೂಡುತ್ತದೆಂದರೆ) ಶ್ರೀಹರಿಯನ್ನು ವಿವಕ್ಷಾಮಾಡಿಕೊಳ್ಳುವುದಾದರೆ ಇದು ತನಗೇನೇ ದೃಷ್ಟಾಂತವಾಗುವುದು. ॥ ೧ ॥

ಋ ॥ (೩೩೦) ಶತಂ ವಾ ಯಃ ಶುಚೀನಾಂ ಸಹಸ್ರಂ ವಾ ಸಮಾಶಿರಾಂ ।
ಏದು ನಿಮ್ನಂ ನ ರೀಯತೇ ॥ ೨ ॥

ಅ ॥ ಯಃ=ಯಾವ ಈ ಇಂದ್ರನು, ಶುಚೀನಾಂ=ಶುದ್ಧಗಳಾದ, ಸಮಾಶಿರಾಂ=(ಸಂಗತಂ ಆಶಿರಂ ಪ್ರಧಾನಂ ಆಜ್ಯ ಪುರೋಡಾಶಾದಿ, ಮಂತ್ರಾದಿಕಂ ವಾ ಯೇಷಾಂ ಎಂಬ ವ್ಯುತ್ಪತ್ತಿಯಿಂದ) ಸಂಬದ್ಧವಾದ ಪ್ರಧಾನವುಳ್ಳ.ಅಥವಾ ಆಜ್ಯ ಪುರೋಡಾಶಾದಿ ಮಂತ್ರಾದಿಗಳುಳ್ಳ ದಧ್ಯಾಖ್ಯ ಆಶಿರವುಳ್ಳ, (ಆಶಿರವತಾಂ ಎಂದು ಹೇಳದೆ ಆಶಿರಾವತಾಂ ಎಂಬ ದೀರ್ಘವು ಛಾಂದಸವು. ಅಥವಾ ಶಿರಾಶಬ್ದವು ಸ್ತ್ರೀಲಿಂಗವು.) ಸೋಮಗಳ, ಶತಂ ವಾ=ನೂರರಿಂದ. ಸಹಸ್ರಂ ವಾ=ಸಾವಿರದಿಂದಲಾಗಲಿ,ನಿಮ್ನಂ ನ= ಪಾತಾಲದಂತೇ ಪಾತಾಲದಲ್ಲಿ ಹೇಗೆ ಪೂರ್ತಿಯಾಗುವುದಿಲ್ಲವೋ, ಹಾಗೆಯೇ ಇತ್ ನಖ ಆರೀಯತೇ=ಎಲ್ಲಿಯೂ ಸರ್ವಥಾ) ನೀಲಿನವಾಗುವುದೇ ಇಲ್ಲ.(ಏಕ ಕಾಲಗಲ್ಲಿಯೇ ಅನೇಕ ಜನರು ಸೋಮಗಳನ್ನು ಕೊಟ್ಟರೂ ಅವುಗಳಿಂದ ಇಂದ್ರನಿಗೆ ಅಲಂಬುದ್ಧಿಯು ಇಲ್ಲ. ಬಹು ಭೋಗ ಶಕ್ತಿಯುಳ್ಳವನಷ್ಟೆ.) (ರೀಯತೇ ಎನ್ನುವಲ್ಲಿಯೂ ನಿಮ್ನಂ ಎನ್ನುವಲ್ಲಿಯೂಎರಡು ಕಡೆಗಳಲ್ಲಿಯೂ ನ ಎನ್ನುವುದಕ್ಕೆ ಸಂಬಂಧವು. ರೀಯತೇ ಎನ್ನುವಲ್ಲಿ ನಿಷೇಧಾರ್ಥಕವು. ನಿಮ್ನಂ ಎನ್ನುವಲ್ಲಿ ಇವಾರ್ಥವು- ಹೀಗೆ ನ ಶಬ್ದಕ್ಕೆ ಆವೃತ್ತಿಯು.) (ಶತ ಸಹಸ್ರ ಶಬ್ದಗಳಿಗೆ ವಿಭಕ್ತಿ ವ್ಯತ್ಯಯವನ್ನು ಆಶ್ರಯಿಸಿಕೊಳ್ಳಬೇಕಾಗುತ್ತದೆ, ಎಂಬ ಅರುಚಿಯಿಂದ ರೀತ್ಯಂತರವಾಗಿ ವ್ಯಾಖ್ಯಾನಮಾಡುತ್ತಾರೆ.) ಯಾವ ಇಂದ್ರನು ಶುದ್ಧಗಳಾದ ಸೋಮಗಳ ನೂರನ್ನು ಸಹಸ್ರವನ್ನಾಗಲೀ ನಿಮ್ನಂ ನ=ಬಹು ಜಲವನ್ನು ಪಾತಾಲವೇ ಹೇಗೋ ತುಂಬಿಸಿಕೊಳ್ಳುತ್ತದೋ ಹಾಗೆಯೇ, ಆರೀಯತೇ ಇತ್ ಉ=ತನ್ನಲ್ಲಿಯೇ ಸೇರಿಸಿಕೊಳ್ಳುತ್ತಾನೆಯೇ ಸರಿ. ಅಂತಹ ಇಂದ್ರನನ್ನು ಆಸಿಂಚೇ=ಅಭಿಷೇಕಮಾಡುತ್ತೇನೆ- ॥ ೨ ॥

ಭಾ॥ (1) ಶತೇನ ವಾ ಸಹಸ್ರೇಣ ಸೋಮಾನಾಮಾಶಿರಾವತಾಂ। ಪಾತಾಲ ಇವ ನೈವಾಯಂ ನಿಲೀನೋ ಭವತಿ ಕ್ವಚಿತ್॥ (2) ವಿಲಾಪಯತಿ ತಾನೇವ ॥ ೨ ॥

ಅ ॥ (1) ಈ ಇಂದ್ರನು ಪ್ರಧಾನಗಳಾದ ಸೋಮಗಳ ನೂರರಿಂದ ಅಥವಾ ಸಹಸ್ರದಿಂದ ಪಾತಾಲದಲ್ಲಿ ಹೇಗೆ ಪೂರ್ತಿಯಾಗುವುದಿಲ್ಲವೋ ಹಾಗೆಯೇ ಎಲ್ಲಿಯೂ ನಿಲೀನನಾಗುವುದಿಲ್ಲ. (ಏಕ ಕಾಲದಲ್ಲಿ ಅನೇಕ ಜನರು ಕೊಟ್ಟರೂ ಸೋಮಗಳಿಂದ ಇಂದ್ರನಿಗೆ ಅಲಂಬುದ್ಧಿಯುಂಟಾಗುವುದಿಲ್ಲ. ಬಹು ಭೋಗ ಶಕ್ತಿಯಿದೆ.) (2) ಆ ಸೋಮಗಳನ್ನೇ ತನ್ನಲ್ಲಿಯೇ ಸೇರಿಸಿಕೊಳ್ಳುತ್ತಾನೆಯೇ ಸರಿ. ॥ ೨ ॥

ಋ ॥ (೩೩೧) ಸಂ ಯನ್ಮದಾಯ ಶುಷ್ಮಿಣ ಏನಾ ಹ್ಯಸ್ಯೋದರೇ ।
ಸಮುದ್ರೋ ನ ವ್ಯಚೋ ದಧೇ ॥ ೩ ॥

ಅ ॥ ಯತ್=ಯಾವ ಕಾರಣದಿಂದ, ಏನಾ=ಈ ಎಲ್ಲಾ ಜಗತ್ತುಗಳೂ, ಅಸ್ಯ=ಈ ಇಂದ್ರನ, ಉದರೇ=ಹೊಟ್ಟೆಯಲ್ಲಿ,ಪ್ರವಿಷ್ಟಗಳಾದವುಗಳು ಶುಷ್ಮಿಣೇ=ಬಲಿಷ್ಠನಾದಈಇಂದ್ರನ,ಮದಾಯ=ತೃಪ್ತಿಗೋಸ್ಕರ,(ವ್ಯಚಃ=ವ್ಯಚವ್ಯಾಜೀಕರಣೇ) ವ್ಯಕ್ತಿಗಳನ್ನು ಪ್ರಭಾವಗಳನ್ನು ಎಲ್ಲಿಯೂ, ನಹಿ ಸಂದಧೇ=ಧರಿಸಲೇ ಇಲ್ಲವೋ, ಹಿ=ನಿಶ್ಚಯವೋ, ಸಮುದ್ರಃ=ಚೆನ್ನಾಗಿ ಶ್ರೇಷ್ಠವಾಗಿರುವುದರಿಂದ ಸಮುದ್ರವೆನ್ನುವ ಪ್ರಕೃತಿಯೂ ಕೂಡ, ವ್ಯಚಃ=ಪ್ರಭಾವವನ್ನು, ನಹಿ ಸಂದಧೇ=(ಇದು ಶ್ರೇಷ್ಠವಾಗಿರುವುದರಿಂದ) ಧರಿಸಲಿಲ್ಲವೋ,(ಆ ಕಾರಣದಿಂದ ಆ ಇಂದ್ರನಿಗೆ ಅಲಂಬುದ್ಧಿಯು ಇಲ್ಲವೇ ಇಲ್ಲ.) (ಅಂದರೆ ಪ್ರಕೃತ್ಯಾದಿಗಳಿಂದೊಡಗೂಡಿದ ಸಮಸ್ತ ಜಗತ್ತು ಉದರವನ್ನು

ಪ್ರವೇಶಿಸಿದರೂ ತೃಪ್ತಿಯನ್ನು ಹುಟ್ಟಿಸಲಿಕ್ಕೆ ಸಮರ್ಥವಾಗದಿದ್ದ ಮೇಲೆ ಸೋಮಗಳು ಹೇಗೆ ತಾನೆ (ತೃಪ್ತಿಯನ್ನು ಹೊಂದಿಸಿಯಾವು.) ॥ ೩ ॥

ಭಾ ॥ (1) ಬಲಿನೇsಸ್ಮೈ ಮದಾಯ ಚ । ಸಂದಧುರ್ನೈವ ವಿಶ್ವಾನಿ ವ್ಯಕ್ತೀರಸ್ಯೋದರೇ ಕ್ವಚಿತ್ (2) ಸಮುದ್ರೇಕಾತ್ಸಮುದ್ರಾಖ್ಯಾ ಪ್ರಕೃತಿಶ್ಚ ಮಹತ್ತ್ವತಃ ॥ ೩ ॥

ಅ ॥ (1) ಶ್ರೀಹರಿಯ ಉದರದಲ್ಲಿ ಪ್ರಕೃತಿ ಸಹಿತಗಳಾದ ಸಮಸ್ತ ಜಗತ್ತು ಪ್ರವಿಷ್ಟಗಳಾದವುಗಳು ಬಲಿಷ್ಠನಾದ ಇಂದ್ರನೆನಿಸಿದ ಶ್ರೀಹರಿಯ ತೃಪ್ತಿಗಾಗಿ ಪ್ರಭಾವಗಳನ್ನು ಎಲ್ಲಿಯೂ ಹೊಂದಲೇ ಇಲ್ಲ. (2) ಚೆನ್ನಾಗಿ ಆಧಿಕ್ಯವಿದ್ದ ಪ್ರಯುಕ್ತ ಸಮುದ್ರವೆನಿಸಿದ ಪ್ರಕೃತಿಯೂ ಕೂಡ ಪ್ರಭಾವವನ್ನು ಹೊಂದಲೇ ಇಲ್ಲ (ಏಕೆಂದರೆ ಪ್ರಕೃತಿಯು ಅತಿ ಮಹತ್ತಾಗಿದೆಯಷ್ಟೆ. (ಅಂತೂ ಪ್ರಕೃತಿ ಸಹಿತ ಸಮಸ್ತ ಜಗತ್ತು ಉದರವನ್ನು ಪ್ರವೇಶಿಸಿ ತೃಪ್ತಿಯನ್ನು ಹುಟ್ಟಿಸಲಿಕ್ಕೆ ಸಮರ್ಥವಾಗಲಿಲ್ಲ) ॥ ೩ ॥

ಋ ॥ (೩೩೨) ಅಯಮು ತೇ ಸಮತಸಿ ಕಪೋತ ಇವ ಗರ್ಭಧಿಂ ।
ವಚಸ್ತಚ್ಚಿನ್ನ ಓಹಸೇ ॥ ೪ ॥

ಅ ॥ (ಎಲೋ ಶ್ರೀಹರಿಯೇ) ಅಯಂ=ಈ ಪ್ರಪಂಚವು ಪ್ರಕೃತಿಯೂ ಕೂಡ, ತೇಉ=ನಿನ್ನ ಅಧೀನವೇ ಸರಿ. ಗರ್ಭಧಿಂ= (ಗರ್ಭಃಧೀಯತೇ ಅತ್ರ ಎಂಬ ವ್ಯುತ್ಪತ್ತಿಯಿಂದ) ಗರ್ಭಾಶಯವನ್ನು (ಅಂಡವನ್ನು) ಕಪೋತ ಇವ=ಪಾರಿವಾಳವು ಹೇಗೆ ವ್ಯಾಪಿಸುತ್ತದೋ ಹಾಗೆಯೇ, ಸಮತಸಿ=(ಅತಸಾತತ್ಯಗಮನೇ) (ಸಮಸ್ತ ಜಗತ್ತನ್ನು) ಚೆನ್ನಾಗಿ ವ್ಯಾಪಿಸಿಕೊಂಡಿರುತ್ತಿ. ತತ್‌ಚಿತ್=ಆ ಕಾರಣದಿಂದಲೇ, ನಃ=ಋಷಿಗಳಾದ ನಮ್ಮ ವೇದವಚನವನ್ನು, ಓಹಸೇ = (ವಹ ಪ್ರಾಪಣೇ) ಹೊಂದಿರುತ್ತಿ. (ವೇದಪ್ರತಿಪಾದ್ಯನಾಗಿರುತ್ತಿ.) (ಅಲ್ಪ ಪ್ರಭಾವವುಳ್ಳವನು ವೇದಪ್ರತಿಪಾದ್ಯನು ಆಗಲಾರನಷ್ಟೆ.) ॥ ೪ ॥

ಭಾ ॥ ತವೈವಾಯಂ ಪ್ರಪಂಚಶ್ಚ ಕಪೋತೋ ಗರ್ಭಧಿಂ ಯಥಾ । ಸಮ್ಯಕ್ ವ್ಯಾಪ್ನೋಷಿ ವಿಶ್ವಂ ಚ ತಸ್ಮಾನ್ನೋ ವಚ ಓಹಸೇ ॥ ೪ ॥

ಅ ॥ ಈ ಪ್ರಪಂಚವೂ ಪ್ರಕೃತಿಯೂ ಕೂಡ ನಿನ್ನ ಅಧೀನವೇ ಆಗಿದೆ. ಕಪೋತವು ಅಂಡವನ್ನು ಹೇಗೆ ವ್ಯಾಪಿಸುತ್ತದೋ ಹಾಗೆಯೇ ನೀನು ಸರ್ವ ಜಗತ್ತನ್ನು ವ್ಯಾಪಿಸಿಕೊಂಡಿದ್ದಿ. ಅದುದರಿಂದಲೇ ನಮ್ಮ (ಋಷಿಗಳ) ವೇದವಚನವನ್ನು ಹೊಂದಿರುತ್ತಿ. (ವೇದಪ್ರತಿಪಾದ್ಯನಾಗಿರುತ್ತಿ.) ॥ ೪ ॥

ಋ ॥ (೩೩೩) ಸ್ತೋತ್ರಂ ರಾಧಾನಾಂ ಪತೇ ಗಿರ್ವಾಹೋ ವೀರ ಯಸ್ಯ ತೇ।
ವಿಭೂತಿರಸ್ತು ಸೂನೃತಾ ॥ ೫॥೨೮ ॥

ಅ ॥ ರಾಧಾನಾಂ= (ರಾಧಸಾಧಸಂಸಿದ್ಧೌ) ಸಿದ್ಧಿಗಳಿಗೆ, ಪತೇ=ಅಧಿಪತಿಯಾದ, ಗಿರ್ವಾಹಃ=(ಗೃನಿಗರಣೇ); ಸಮಸ್ತ ವೇದಗಳಿಗೆ ಪ್ರವರ್ತಕನಾದ, ವೀರ=ಪರಾಕ್ರಮಶಾಲಿಯಾದ ಶ್ರೀ ಹರಿಯೇ (ಸಮಸ್ತ ವೈದಿಕ ಪದವನ್ನು) ಯಸ್ಯತೇ ಸ್ತೋತ್ರಂ=ಯಾವ ನಿನ್ನ ಸ್ತೋತ್ರವನ್ನಾಗಿ (ನಾನು ತಿಳಿದಿರುವೆನೋ) ಸೂನೃತಾ=ನಿನಗೆ

ಪ್ರೀತಿಯನ್ನುಂಟು ಮಾಡತಕ್ಕ ನನ್ನ ಈ ಒಳ್ಳೇ ಮಾತು, (ಅಂತಹ ನಿನಗೆ ವಿಭೂತಿರಸ್ತು=ಐಶ್ವರ್ಯ ಪ್ರತಿಪಾದಕವಾಗಲಿ (ವಿಭೂತಿ ಪ್ರತಿಪಾದಕವೆಂದು ನಿನ್ನಿಂದ ತಿಳಿಯಲ್ಪಡಲಿ. . ॥ ೫ ॥ ೨೮ ॥

ಭಾ ॥ (1) ಗಿರಾಂ ವಾಹಕ ತೇ ಸ್ತೋತ್ರಮಖಿಲಂ ವೇದ ವೈದಿಕಂ । ಸೂನೃತಾ ವಾಗಿಯಂ ಮೇ ಚ ವಿಭೂತಿರಿತಿ ಕಲ್ಪ್ಯತಾಂ । (2) ಅಸ್ತ್ವಿತ್ಯೇತತ್ಪ್ರಸಾದೇನ ಫಲದಾನಾದುದೀರ್ಯತೇ ॥ ೫ ॥ ೨೮ ॥

ಅ ॥ (1) ವೇದಗಳಿಗೆ ಪ್ರವರ್ತಕನಾದ ಶ್ರೀಹರಿಯೇ, ಸಮಸ್ತ ವೈದಿಕ ಪದವನ್ನು ನಿನ್ನ ಸ್ತೋತ್ರವನ್ನಾಗಿಯೇ ನಾನು ತಿಳಿಯುತ್ತೇನೆ. ನಿನಗೆ ಪ್ರೀತಿಯನ್ನುಂಟು ಮಾಡತಕ್ಕ ನನ್ನ ಈ ಒಳ್ಳೇ ಮಾತು ಐಶ್ವರ್ಯಪ್ರತಿಪಾದಕವೆಂದು ನಿನ್ನಿಂದ ತಿಳಿಯಲ್ಪಡಲಿ. (2) (ಹಾಗಾದರೆ ವೇದಗಳಿಗೆ ಅರ್ಥ ಸಂಬಂಧವು ಸ್ವಾಭಾವಿಕವೇ ಆಗಿರುವುದರಿಂದ ಅಸ್ತು=ಆಗಲಿ ಎಂದು ಪ್ರಾರ್ಥನೆಯು ಹೇಗೆ ಕೂಡುತ್ತದೆಂದರೆ ಅಂದರೆ ಶ್ರೀ ವಿಷ್ಣುವಿಗೆ ಐಶ್ವರ್ಯ ಪ್ರತಿಪಾದಕತ್ವವು ಸ್ವತಏವ ಸಿದ್ಧವಾದ ಪ್ರಯುಕ್ತ ಪ್ರಾರ್ಥನೆಯು ಕೂಡುವುದಿಲ್ಲ. ಎಂದರೆ ಅನುಗ್ರಹದಿಂದ ಫಲದಾನವನ್ನಪೇಕ್ಷಿಸಿ ಅಸ್ತು ಎಂದು ಹೇಳಲ್ಪಡುತ್ತದೆ. (ಅಂದರೆ=ಐಶ್ವರ್ಯ ಪ್ರತಿಪಾದಕವಾದ ನನ್ನ ಈ ಒಳ್ಳೇ ಮಾತಿನಿಂದ ಪ್ರಸನ್ನನಾಗಿ ಫಲವನು ಕೊಡು ಎಂಬ ಅಭಿಪ್ರಾಯದಿಂದ ಅನುಗ್ರಹ ಮಾಡಿ ಫಲವನು ಕೊಡಿಸುವುದಕ್ಕಾಗಿ ಸೂನೃತಾ ವಿಭೂತಿರಸ್ತು ಎಂದು ಲಕ್ಷಣಾ ವೃತ್ತಿಯಿಂದ ಹೇಳಲ್ಪಡುತ್ತದೆ. ॥ ೬ ॥ ೨೮ ॥

ಋ ॥(೩೩೪) ಊರ್ಧ್ವಸ್ತಿಷ್ಠಾ ನ ಊತಯೇಽಸ್ಮಿನ್ ವಾಜೇ ಶತಕ್ರತೋ ।
ಸಮನ್ಯೇಷು ಬ್ರವಾವಹೈ ॥ ೬ ॥

ಅ ॥ ಶತಕ್ರತೋ=ಎಲೋ ಅನಂತಜ್ಞಾನವುಳ್ಳ ಶ್ರೀಹರಿಯೇ, ನಃ= ನಮಗೆ, ಊತಯೇ=ಇಷ್ಟವಾದ ಜ್ಞಾನಾದಿರೂಪವಾದ ಅರ್ಥವು ಸಿದ್ಧಿಯಾಗುವುದಕ್ಕಾಗಿ, ಅಸ್ಮಿನ್ ವಾಜೇ=ಈ ಅನುಭವ ಸಿದ್ಧವಾದ ಜ್ಞಾನಾಜ್ಞಾನಮಯವಾದ ಯುದ್ಧದಲ್ಲಿ ಜ್ಞಾನ ಅಜ್ಞಾನಗಳಿಗೆ ಕಾರಣಗಳಾದ ಪ್ರಮಾಣ, ಪ್ರಮಾಣಾಭಾಸಗಳ ಸಂಘರ್ಷವಾಗಲು, ಊರ್ಧ್ವಃ=ಉತ್ತಮನಾಗಿ, (ನಮ್ಮ ಪ್ರತಿ ಪಕ್ಷವನು ಗೆಲ್ಲುವವನಾಗಿ) ತಿಷ್ಠ=ಸದಾ ಇರು. (ಆದುದರಿಂದಲೇ ನನ್ನಲ್ಲಿರತಕ್ಕ ನೀನು, ನಾನೂ ಕೂಡ ನಿನನು) ಅನ್ಯೇಷು=ಇತರ ಶಿಷ್ಯರಲ್ಲಿ, ಸಂಬ್ರವಾವಹೈ=ಚೆನ್ನಾಗಿ ಉಪದೇಶಿಸುವ ॥ ೬ ॥

ಭಾ ॥ (೧) ಉತ್ತಮಃ ಸನ್ನತ್ರ ಯುದ್ಧೇ ಜ್ಞಾನಾಜ್ಞಾನಮಯೇ ವಿಭೋ । ಅಭಿಪ್ರೇತಾರ್ಥಸಿದ್ಧ್ಯರ್ಥಮಸ್ಮಾಕಂ ತಿಷ್ಠ ಸರ್ವದಾ ॥ (೨) ಮತ್ಸ್ಥಿತಸ್ತ್ವಮಹಂ ಚೈವ ತ್ವಾಮನ್ಯೇಷು ಬ್ರವಾವಹೈ ॥ ೬ ॥

ಅ ॥ (೧) ಎಲೋ ಅನಂತಜ್ಞಾನವುಳ್ಳ ಸರ್ವಸಮರ್ಥನಾದ ಶ್ರೀಹರಿಯೇ, ನಮಗೆ ಇಷ್ಟಸಿದ್ಧಿಗಾಗಿ ಈ ಅನುಭವಸಿದ್ಧವಾದ ಜ್ಞಾನಾಜ್ಞಾನಮಯವಾದ ಯುದ್ಧದಲ್ಲಿ (ಅಂದರೆ=ಜ್ಞಾನ ಅಜ್ಞಾನಗಳಿಗೆ ಕಾರಣಗಳಾದ ಪ್ರಮಾಣಪ್ರಮಾಣಾಭಾಸಾದಿಗಳ ಸಂಘರ್ಷದಲ್ಲಿ.) ಉತ್ತಮನಾಗಿ, (ನಮ್ಮ ವಿರೋಧಿಯನು ಗೆಲ್ಲುವವನಾಗಿ) ಸರ್ವದಾ ಇರು. (೨) (ನಮ್ಮ ವಿರೋಧಿಯನು ಗೆಲ್ಲುವುದರಿಂದಲೇ) ನನಲ್ಲಿರತಕ್ಕ ನೀನು, ನಾನೂ ಕೂಡ ನಿಮ್ಮನ್ನು ಇತರ ಶಿಷ್ಯರಲ್ಲಿ ಚೆನಾಗಿ ಉಪದೇಶ ಮಾಡುವ

ಋ ॥ (೩೩೫) ಯೋಗೇಯೋಗೇ ತವಸ್ತರಂ ವಾಜೇವಾಜೇ ಹವಾಮಹೇ ।
ಸಖಾಯ ಇಂದ್ರಮೂತಯೇ ॥ ॥ ೭ ॥

ಅ ॥ ಸಖಾಯಃ= ಎಲೋ ಸಖಿಗಳಿರಾ, (ನಾವು) ತವಸ್ತರಂ=ಅತಿಶಯವಾಗಿ ತೇಜಸ್ಸುಳ್ಳ, ಇಂದ್ರಂ= ಶ್ರೀ ಹರಿಯನ್ನು ಊತಯೇ= ರಕ್ಷಣೆಗಾಗಿ, ಯೋಗೇಯೋಗೇ= ಸಮಸ್ತ ಧ್ಯಾನಯೋಗಗಳಲ್ಲಿ, ವಾಜೇವಾಜೇ=ಸಮಸ್ತ ಬಾಹ್ಯ ಯುದ್ಧಗಳಲ್ಲಿಯೂ, ಪ್ರಮಾಣ ಪ್ರಮಾಣಾಭಾಸ ಸಂಘರ್ಷ ರೂಪ ಮನನಗಳಲ್ಲಿಯೂ ಹವಾಮಹೇ= ಕರೆಯುತ್ತೇವೆ. ॥ ೭ ॥

ಭಾ ॥ ತೇಜಸ್ವಿತಮಮಿಂದ್ರಂ ತಂ ಯೋಗೇ ಯೋಗೇ ಹವಾಮಹೇ ॥ ೭ ॥

ಅ ॥ ಅತಿಶಯ ತೇಜಸ್ಸುಳ್ಳ, ಆ ಇಂದ್ರನನ್ನು, ಸಮಸ್ತ ಧ್ಯಾನ ಯೋಗಗಳಲ್ಲಿಯೂ ಕರೆಯುತ್ತೇವೆ ॥ ೭ ॥

ಋ ॥ (೩೩೬) ಆ ಘಾ ಗಮದ್ಯದಿ ಶ್ರವತ್ಸಹಸ್ರಿಣೀಭಿರೂತಿಭಿಃ । ವಾಜೇಭಿರುಪ ನೋ ಹವಂ ॥ ೮ ॥

ಅ ॥ (ಇಂದ್ರನು) ಯದಿಶ್ರವತ್=ಭಕ್ತಿಯಿಂದ ಹೇಳಿದುದನ್ನು ಕೇಳಿದರೆ ಸಹಸ್ರಿಣೀಭಿಃ ಊತಿಭಿಃ= ಬಹ್ವರ್ಥ ಯುಕ್ತಗಳಾದ ಅಭಿಪ್ರಾಯಗಳಿಂದ ಕೂಡಿ (ಬಹು ಪುರುಷಾರ್ಥಗಳನ್ನು ಕೊಡುವುದಕ್ಕಾಗಿ) ವಾಜೇಭಿಃ=ಅನ್ನಗಳಿಂದಲೂ (ಅನ್ನಗಳನ್ನು ಕೊಡುವುದಕ್ಕಾಗಿ) ನಃ ಹವಂ= ನಮ್ಮ ಆಹ್ವಾನವನ್ನು, ಉಪ ಆಗಮತ್ ಘ=ಬಂದೇ ಬರುವನು ॥ ೮ ॥

ಭಾ ॥ ಉಕ್ತಂ ಚೇತ್ಸ ಶೃಣೋತ್ಯೇವ ಶ್ರುತಂ ಚೇದಾಗಮಿಷ್ಯತಿ । ಬಹ್ವರ್ಥಯುಕ್ತಾಭಿಪ್ರಾಯೈರನ್ನೈರಪ್ಯುಪ ನೋ ಹವಂ ॥ ೮ ॥

ಅ ॥ (ಇಲ್ಲಿ ಯದಿಶ್ರವತ್ ಎಂದು ಪರಮೇಶ್ವರನು ಕೇಳಿದರೆ ಎಂದು ಶ್ರೀ ಹರಿಗೆ ಪಕ್ಷೇ ಶ್ರವಣವು ಎಂದು ತೋರುತ್ತದೆ. ಅದನ್ನು ಪರಿಹರಿಸುವುದಕ್ಕಾಗಿ ಸರಿಯಾಗಿ ವ್ಯಾಖ್ಯಾನ ಮಾಡುತ್ತಾರೆ) ಎಲೋ ಶ್ರೀ ಹರಿಯೇ ಇಲ್ಲಿಗೆ ಬಾ ಎಂದು ನಾವು ಹೇಳಿದರೆ ಆಗ ಶ್ರೀ ಹರಿಯು ನಿಶ್ಚಯವಾಗಿಯೂ ಕೇಳಿಯೇ ಕೇಳುವನು. ನಾವು ಭಕ್ತಿಯಿಂದ ಹೇಳಿದುದನ್ನು ಕೇಳಿದರೆ ಬಹ್ವರ್ಥಯುಕ್ತಗಳಾದ ಅಭಿಪ್ರಾಯಗಳಿಂದ ಕೂಡಿಕೊಂಡು (ಬಹಳ ಪುರುಷಾರ್ಥಗಳನ್ನು ಕೊಡುವುದಕ್ಕಾಗಿ) ಯಥೇಷ್ಟ ಅನ್ನಗಳನ್ನು ಕೊಡುವುದಕ್ಕಾಗಿ ನಮ್ಮ ಆಹ್ವಾನವನ್ನುದ್ದೇಶಿಸಿ ಬಂದೇ ಬರುವನು. ॥ ೮ ॥

ಋ ॥ (೩೩೭) ಅನು ಪ್ರತ್ನಸ್ಯೌಕಸೋ ಹುವೇ ತುವಿಪ್ರತಿಂ ನರಂ । ಯಂ ತೇ ಪೂರ್ವಂ ಪಿತಾ ಹುವೇ ॥ ೯ ॥

ಅ ॥ ಯಂ ತೇ=ಯಾವ ನಿನ್ನನ್ನು, ಪೂರ್ವಂ=ಪೂರ್ವ ಕಾಲದಲ್ಲಿ, ತೇ ಪಿತಾ=(ಪಿ ಗತೌ) ನಿನ್ನನ್ನು ತಿಳಿದಿರುವುದರಿಂದ ಪಿತನೆನಿಸಿದ ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನು, ಹುವೇ=ಕರೆದಿರುವನೋ, ಅಥವಾ

ತೇ=ನಿನ್ನವನಾದ, ನಿನ್ನ (ಭಕ್ತನಾದ) ಪಿತಾ=ಬ್ರಹ್ಮನು, ಯಂತೇ=ಯಾವ ನಿನ್ನನ್ನು, ಹುವೇ=ಕರೆದಿರುವನೋ (ನಾನು) ಪ್ರತ್ನಸ್ಯ=ಪುರಾತನನಾದ, ಅನಾದಿಯಾದ ಶ್ರೀ ವಿಷ್ಣುವಿನ ಓಕಸಃ ಆನು=ವೈಕುಂಠ ವೊದಲಾದ ಪ್ರಸಿದ್ಧ ಸ್ಥಾನಗಳ ಪ್ರಾಪ್ತಿಗಾಗಿ, ತುವಿಪ್ರತಿಂ= ಸಮಸ್ತ ವೈರಿಗಳಿಗೆ ಪ್ರತಿಯಾಗಿ ಇರುವ, ನರಂ= ಅಂತಹ ನಾಶರಹಿತನಾದ ಇಂದ್ರನಾದ ನಿನನ್ನು ಹುವೇ=ಕರೆಯುತ್ತೇನೆ. ॥ ೯ ॥

ಭಾ ॥ (೧) ಪುರಾತನಸ್ಯ ವಿಷ್ಣೋಸ್ತದೋಕಸೋಽರ್ಥೇ ಹ್ವಯೇ ಹರಿಂ॥ (೨) ಮಹಾನ್ ಪ್ರತಿ ಪ್ರತಿಷ್ಠಶ್ಚ ತುವಿಪ್ರತಿರಿತೀರಿತಃ ॥ (೩) ಯಂ ತ್ವಾಂ ಪೂರ್ವಂ ಪಿತಾ ಜ್ಞಾತ್ವೈ ನಾಹ್ವಯಾಮಾಸ ವಿಶ್ವಕೃತ್ । (೪) ತ್ವದ್ಭಕ್ತ ಇತಿ ವಾ ಬ್ರಹ್ಮಾ ॥ ೯ ॥

ಅ ॥ (1) ಅನಾದಿಯಾದ ಶ್ರೀ ವಿಷ್ಣುವಿನ ಪ್ರಸಿದ್ಧವಾದ ವೈಕುಂಠಾದಿ ಸ್ಥಾನಗಳ ಪ್ರಾಪ್ತಿಗಾಗಿ ಶ್ರೀಹರಿಯಾದ ನಿನ್ನನ್ನು ಕರೆಯುತ್ತೇನೆ. (2) ಶ್ರೀಹರಿಯು ಯಾವುದರಿಂದ ತುವಿ ಪ್ರತಿ ಎಂಬ ಶಬ್ದದಿಂದ ವಾಚ್ಯನಾಗುತ್ತಾನೆಂದರೆ) ತುವಿ ಎನ್ನುವುದಕ್ಕೆ ಬಹು ಎಂದರ್ಥವು. ಆದ ಕಾರಣ ಬಹುತ್ವ ವಿಶಿಷ್ಟ ಗುಣ ರೂಪಾದಿಗಳುಳ್ಳವನಿಗೆ ಮಹತ್ವವಿದ್ದ ಪ್ರಯುಕ್ತ.) ಮಹಾನ್=ಶ್ರೇಷ್ಠನೂ ಪ್ರತಿ=ಇದಿರಾಗಿ ಇರುವವನು, ಸಮಸ್ತ ವೈರಿಗಳಿಗೆ ಇದಿರಾಗಿ ಇರುವವನು. (ಈ ಪ್ರತಿ ಎನ್ನುವುದು ಉಪಸರ್ಗವು. ಉಪಸರ್ಗಗಳು ಕ್ರಿಯಾವಾಚಕಶಬ್ದವಿದ್ದರೆ ಕ್ರಿಯಾ ವಿಶೇಷಗಳಿಗೆ ದ್ಯೋತಕಗಳಾಗುತ್ತವೆ. ಕ್ರಿಯಾ ವಾಚಕ ಶಬ್ದವಿಲ್ಲವಾದರೆ ಕರ್ತೃ ಕರ್ಮಾದಿಗಳಿಂದ ಸಹಿತವಾದ ಕ್ರಿಯೆಯನ್ನು ಹೇಳುತ್ತದೆ. ಆದ ಕಾರಣ ಪ್ರತಿ ಎಂಬ ಉಪಸರ್ಗವೂ ಕೂಡ ಕ್ರಿಯಾ ವಚನಾದಿಗಳು ಇಲ್ಲದಿರುವುದರಿಂದ ಸಮಸ್ತ ವೈರಿಗಳ ಇದಿರು ಇರುವವನು ಎಂದು ಕರ್ತೃ ಕರ್ಮಾದಿಗಳಿಂದ ಸಹಿತವಾದ ಕ್ರಿಯೆಯನ್ನು ಹೇಳುತ್ತದೆ.) ಹಾಗಾದರೆ—ಭಾಷ್ಯದಲ್ಲಿ ಪ್ರತಿ ಪ್ರತಿಷ್ಠಃ ಎಂದು ವೀಪ್ಸಾದಲ್ಲಿ ಕರ್ಮಪ್ರವಚನೀಯ ಸಂಜ್ಞೆಯಿದ್ದುದರಿಂದ ನಿತ್ಯವೀಪ್ಸಯೋಃ ಎಂದು ದ್ವಿತ್ವ ಪ್ರಯೋಗವಿದ್ದ ಕಾರಣ ಶ್ರುತ್ಯುಕ್ತವಾದ ಪ್ರತಿಶಬ್ದಕ್ಕೆ ಕರ್ಮ ಪ್ರವಚನೀಯ ಸಂಜ್ಞೆಯನ್ನಂಗೀಕರಿಸಿರುವ ಪ್ರಯುಕ್ತ ಅಂತಹ ಕರ್ಮ ಪ್ರವಚನೀಯ ಸಂಜ್ಞೆಯು ಆಕಡಾರಾದೇಕಾ ಸಂಜ್ಞಾ ಎನುವ ಸೂತ್ರದಿಂದ ಉಪಸರ್ಗ ಸಂಜ್ಞೆಯಿಂದ ಬಾಧಿತವಾಗುವುದರಿಂದ ಪ್ರತಿ ಎನ್ನುವುದಕ್ಕೆ ಉಪಸರ್ಗತ್ವವೇ ಇಲ್ಲದಿರುವ ಕಾರಣ ಉಪ ಸರ್ಗತ್ವವನ್ನಂಗೀಕರಿಸಿಕೊಂಡು ಕರ್ತೃ ಕರ್ಮಾದಿ ಸಹಿತವಾದ ಕ್ರಿಯಾವಾಚಿತ್ವವನು ಹೇಳಿದ್ದು ಹೇಗೆಂದರೆ) ಭಾಷ್ಯಕಾರರು ಮಾಡಿದ ಪ್ರತಿ ಪ್ರತಿಷ್ಠಃ ಎಂಬ ದ್ವಿರ್ವಚನವು ಶ್ರುತಿಯಲ್ಲಿ ಪ್ರತಿ ಶಬ್ದವಿದೆ ಎಂಬ ಅಭಿಪ್ರಾಯ ಮಾತ್ರದಿಂದ ಅಲ್ಲದೆ ಪ್ರತಿ ಎನ್ನುವುದಕ್ಕೆ ವೀಪ್ಸಾರ್ಥಕತ್ವವಿದೆ ಎಂಬ ಅಭಿಪ್ರಾಯದಿಂದ ಅಲ್ಲ. ಆದ ಕಾರಣ ಕರ್ಮಪ್ರವಚನೀಯ ಸಂಜ್ಞೆಯು ಇಲ್ಲದಿರುವುದರಿಂದ ಪ್ರತಿ ಎನ್ನುವುದಕ್ಕೆ ಉಪಸರ್ಗತ್ವವನ್ನಂಗೀಕರಿಸಿದರೆ ಬಾಧಕವಿಲ್ಲದಿರುವ ಪ್ರಯುಕ್ತ ಕರ್ತೃ ಕರ್ಮಾದಿ ಸಹಿತವಾದ ಕ್ರಿಯೆಯನು ಹೇಳುತ್ತದೆ, ಎಂಬುವುದು ಯುಕ್ತವೇ ಸರಿ) ಆದ ಕಾರಣ ತುವಿಪ್ರತಿ ಎನಿಸುತ್ತಾನೆ. (3) ಯಾವ ನಿನನು ಪೂರ್ವ ಕಾಲದಲ್ಲಿ ಜಗತ್ಸೃಷ್ಟಿ ಕರ್ತನಾದ ಬ್ರಹ್ಮನು ನಿನಗೆ. ಪಿತಾ=ಸಮಸ್ತವನ್ನು ತಿಳಿದವನಾದುದರಿಂದಲೇ ಪಿತನೆನಿಸುವನು ಜನಕನಾದುದರಿಂದ ಪಿತನೆನಿಸುವುದು ಅಲ್ಲ. ಈ ರೀತಿಯಾಗಿ ಕರೆದಿರುವನೋ ಅಥವಾ ನಿನ ಭಕ್ತನಾದ ಜಗಜ್ಜನಕನಾದ ಬ್ರಹ್ಮನು ಕರೆದಿರುವನೋ ॥ ೯ ॥

ಋ ॥ (೩೩೮) ತಂ ತ್ವಾ ವಯಂ ವಿಶ್ವವಾರಾ ಶಾಸ್ಮಹೇ ಪುರುಹೂತ ।

ಸಖೇ ವಸೋ ಜರಿತೃಭ್ಯಃ ॥ ೧೦ ॥ ೨೯ ॥

ಅ ॥ ವಿಶ್ವವಾರ=(ವೃಞ ವರಣೇ,ಕರ್ಮಣಿಘಞ) ಎಲ್ಲರಿಂದಲೂ ಅಂಗೀಕಾರಾರ್ಹನು, ಪುರುಹೂತ=ದೇವಾದಿಗಳಿಂದೆಲ್ಲರಿಂದಲೂ ಕರೆಯುಲ್ಪಟ್ಟವನು, ಸಖೇ=ಸಖಿಯಾದವನು, ವಸೋ= ಸರ್ವತ್ರ ಆವಾಸ

ಮಾಡಿಕೊಂಡಿರುವವನು (ಸರ್ವತ್ರ ವ್ಯಾಪ್ತನು) ಇಂತಹ ಶ್ರೀಹರಿಯೇ, ವಯಂ=ನಾವು, ತಂ=ಅಂತಹ ತ್ವಾ=ನಿನ್ನನ್ನು ಆ ಶಾಸ್ಮಹೇ=ಇಚ್ಛಿಸುತ್ತೇವೆ.(ನಮಗೆ ಮಾತ್ರವಲ್ಲ.ಮತ್ತೆ) ಜರಿತೃಭ್ಯೋಽಪಿ=ಇತರ ಸ್ತೋತೃಗಳಿಗೋಸ್ಕರವೂ ಕೂಡ ॥ ೧೦ ॥ ೨೯ ॥

ಭಾ ॥ ತಂ ತ್ವಾಮಾಶಾಸ್ಮಹೇ ವಯಂ ॥ ೧೦ ॥ ೨೯ ॥

ಅ ॥ ಅಂತಹ ಮಾಹಾತ್ಮ್ಯಯುಳ್ಳ ನಿನ್ನನ್ನೂ ನಾವು ಇಚ್ಛಿಸುತ್ತೇವೆ, ॥ ೧೦ ॥ ೨೯ ॥

ಋ ॥ (೩೩೯) ಅಸ್ಮಾಕಂ ಶಿಪ್ರಿಣೀನಾಂ ಸೋಮಪಾಃ ಸೋಮಪಾವ್ನಾಂ।
ಸಖೇ ವಜ್ರಿನ್ ಸಖೀನಾಂ ॥ ೧೧ ॥

ಅ ॥ ಸೋಮಪಾಃ ಸಖೇ ವಜ್ರಿನ್=ಎಲೋ ಶ್ರೀಹರಿಯೇ ಶಿಪ್ರಿಣೀನಾಂ=(ಶಿಪ್ರಮೇಷಾಮಸ್ತಿ ಎಂಬ, ವ್ಯುತ್ಪತ್ತಿಯಿಂದ) ಸುಖಿಗಳಾದ, ಸೋಮ ಪಾವ್ನಾಂ=ಸೋಮವನ್ನು ಪಾನ ಮಾಡುವ, ಸಖೀನಾಂ ಅಸ್ಮಾಕಂ=ನಿನ್ನ ಸಖಿಗಳಾದ ಪುರುಷರಾದ ನಮಗೆ, (ಮಂಗಲ ವಾಗಲಿ) ॥ ೧೧ ॥

ಭಾ ॥ ಅಸ್ಮಾಕಂ ಸುಖಿನಾಂ ಸೋಮಪಾತೄಣಾಂ ॥ ೧೧ ॥

ಅ ॥ ಸೋಮವನ್ನು ಪಾನ ಮಾಡುವ ಸುಖಿಗಳಾದ ನಮಗೆ ॥ ೧೧ ॥

ಋ ॥ (೩೪೦) ತಥಾ ತದಸ್ತು ಸೋಮಪಾಃ ಸಖೇ ವಜ್ರಿನ್ ತಥಾ ಕೃಣು ॥
ಯಥಾ ತ ಉಶ್ಮಸೀಷ್ಟಯೇ ॥ ೧೨ ॥

ಅ ॥ ಸೋಮಪಾಃಸಖೇವಜ್ರಿನ್=(ವಜಗತೌ)ಎಲೋ ಶ್ರೀ ಹರಿಯೇ(ನಾವು)ತೇ=ನಿನ್ನಸಕಾಶದಿಂದ ಯಥಾ=ಹೇಗೆ (ಯಾವ ವಸ್ತುವನ್ನು) ಇಷ್ಟಯೇ=(ಇಷಗತೌ) ಹೊಂದುವುದಕ್ಕಾಗಿ, ಉಶ್ಮಸಿ (ವಶಕಾಂತೌ) ಇಚ್ಛಿಸುತ್ತೇವೊ ತತ್‌ತಥಾಅಸ್ತು=ಅಂತಹ ವಸ್ತು ಹಾಗೆಯೇ ಪ್ರಾಪ್ತವಾಗಲಿ (ನನ್ನ ಸಕಾಶದಿಂದ ಇಷ್ಟವಾದ ವಸ್ತುವಿನ ಪ್ರಾಪ್ತಿಯು ಹೇಗಾಗುವುದೆಂದರೆ) ತಥಾಕೃಣು= ನೀನು ಹಾಗೆಯೇ ಮಾಡು ॥ ೧೨ ॥

ಭಾ ॥ (೧) ಅಸ್ತು ತತ್ತಥಾ। ತೇ ಸಕಾಶಾದ್ಯಥೇಚ್ಛಾಮಃ ಪ್ರಾಪ್ತುಂ ದೇವ ತಥಾ ಕೃಣು ॥(೨ ವಜ್ರೋ ಜ್ಞಾನಂ ವಜಗತಾವಿತ್ಯಸ್ಮಾತ್ ॥ ೧೨ ॥

ಅ ॥ (೧)ಎಲೋ ಶ್ರೀಹರಿಯೇ ನಿನ್ನ ಸಕಾಶದೆಸೆಯಿಂದ ಯಾವ ವಸ್ತುವನ್ನು ಹೊಂದಲಿಕ್ಕೆಹೇಗೆ ಇಚ್ಛಿಸುತ್ತೇವೋ ಅದು ಹಾಗೆಯೇ ಪ್ರಾಪ್ತವಾಗಲಿ.ಎಲೋ ಶ್ರೀಹರಿಯೇ ಹಾಗೆಯೇ ಹೊಂದುವಂತೆ ನೀನು ಮಾಡು (೨)(ಶ್ರೀಹರಿಯಲ್ಲಿ ವಜ್ರಿನ್‌ಶಬ್ದವು ಹೇಗೆಂದರೆ)ವಜಗತೌ ಇತ್ಯಸ್ಮಾತ್ ಬಾವಾರ್ಥದಲ್ಲಿ ರ ಪ್ರತ್ಯಯವು. ಯೇ ಯೇ ಗತ್ಯರ್ಥಕಾಃತೇತೇ ಜ್ಞಾನಾರ್ಥಕಾಃ, ಆದಕಾರಣ ವಜ್ರಃ=ಜ್ಞಾನವು. (ವಜ್ರಃ ಅಸ್ಯಾಸ್ತೀತಿ ವಜ್ರೀ=ಪೂರ್ಣ ಜ್ಞಾನವುಳ್ಳವನು) ॥ ೧೨ ॥

ಋ ॥ (೩೪೧) ರೇವತೀರ್ನಃ ಸಧಮಾದ ಇಂದ್ರೇಸಂತು ತುವಿವಾಜಾಃ ।

ಕ್ಷುಮಂತೋ ಯಾಭಿರ್ಮದೇಮ ॥ ೧೩ ॥

ಅ ॥ ಸಧಮಾದೇ=(ಮದೀ ಹರ್ಷೇ ಭಾವೇಘಞ.) (ಸೀದಂತ್ಯಸ್ಮಿನ್ನಿತಿ ಸಧಃ, ಸದೇಃ ಅಕಾರಃ, ದಕಾರಕ್ಕೆ ಧಕಾರವು.) ಮಾದಸಧೇ=ಪೂರ್ಣ ಸುಖಕ್ಕೆ ಆಶ್ರಯನಾದ, ಇಂದ್ರೇ=ನಮಗೆ ನಿಯಾಮಕನಾದ ಶ್ರೀಹರಿಯು, (ಸರ್ವರಿಗೆ ಸ್ವಾಮಿಯಾಗಿ ಇರುತ್ತಿರಲು) ಯಾಭಿಃ=ಯಾವ ಪಶ್ವಾದಿಗಳಿಂದ,ಕ್ಷುಮಂತಃ=(ಕ್ಷಿ ನಿವಾಸಗತ್ಯೋಃ) ಸ್ಥಿತಿಯುಳ್ಳವರಾಗಿ. ಮದೇಮ=ಸುಖಿಗಳಾಗಿರುವೆವೋ ಅಂತಹ ರೇವತೀಃ= ದ್ರವ್ಯವುಳ್ಳ, ತುವಿವಾಜಾಃ=ಬಹ್ವನ್ನಗಳು, ಅಥವಾ ರೇವತೀಃ=ಪಶುಗಳೂ, ತುವಿವಾಜಾಶ್ಚ=ಬಹ್ವನ್ನಗಳೂ ಕೂಡ ಸಂತು=ಆಗಲಿ ॥ ೧೩ ॥

ಭಾ ॥ (೧) ವಿತ್ತಸಂಯುತಾಃ । ರೇವತೀಃ ಪಶವಃ ಪ್ರೋಕ್ತಾಃ (೨) ಸಧಮಾದೇ ಸುಖಸ್ಥಿತೌ। (೩) ತುವಿವಾಜಾ ಮಹಾನ್ನಾನಿ (೪) ಕ್ಷುಮಂತಃ ಸ್ಥಿತಿಸಂಯುತಾಃ। (೫) ಜ್ಞಾನಯುಕ್ತಂ ಸುಖಂ ವಾ (೬) ಸ್ಯಾತ್ ಸತೀಶ್ವೇಸ್ಯಾತ್ಮಕಮೂರ್ಜಿತಂ ॥ ೧೩ ॥

ಅ ॥ (೧) (ವಿತ್ತ ಸಂಯುತಾಃ ಇತ್ಯಾದಿಗಳಿಂದ ರೇವತೀ ಮೊದಲಾದ ಪದಾರ್ಥಗಳನ್ನು ಹೇಳುತ್ತಾರೆ) (ರೈ ಪರ್ಯಾಯವು. ರೇ ಶಬ್ದವು. ತಥಾ ಚ ರೇವತೀಃ=ರೇವತ್ಯಃ,) ದ್ರವ್ಯದಿಂದ ಕೂಡಿದವುಗಳು. ಅಥವಾ (ಪಶವೋ ವೈ ರೇವತ್ಯಃ ಇತ್ಯಾದಿ ಪ್ರಮಾಣಗಳಿಂದ। ಪಶುಗಳು ರೇವತೀ ಎನಿಸಿಕೊಳ್ಳುತ್ತವೆ. (೩) ಸಧಮಾದೇ=(ಸದಿ ಧಾತುವಿಗೆ ಅಕಾರ ಪ್ರತ್ಯಯವು. ದಕಾರಕ್ಕೆ ಧಕಾರವು. ಸೀದಂತ್ಯ ಸ್ಮಿನ್ನಿತಿ ಸಧಃ=ಆಶ್ರಯವು. ಮದೀಹರ್ಷೇ ಭಾವಾರ್ಥದಲ್ಲಿ ಘಞ. ಮಾದಃ=ಸುಖವು ಮಾದಸ್ಯ ಸಧಃ= ಸುಖಕ್ಕೆ ಆಶ್ರಯನು. ಪೂರ್ವನಿಪಾತವು ಛಾಂದಸವು. ತಥಾಚ) ಪೂರ್ಣ ಸುಖಿಯಾಗಿ ಇರುತ್ತಿರಲು (೩) (ತುವಿ ಎನ್ನುವುದಕ್ಕೆ ಬಹು ಎಂದರ್ಥವು. ವಾಜ ಶಬ್ದಕ್ಕೆ ಅನ್ನವೆಂದರ್ಥವು. ತಥಾಚ) ತುವಿ ವಾಜಾಃ= ಮಹತ್ತಾದ ಅನ್ನಗಳು (ವಾಜಮನ್ನಂ ಎಂದು ವಾಜಶಬ್ದವು ಅನ್ನನಾಮಗಳಲ್ಲಿ ಪಠಿತವಾದ ಪ್ರಯುಕ್ತ ವಾಜಾಃ ಎಂದು ಸ್ತ್ರೀತ್ವವು ಹೇಗೆಂದರೆ ರೇವತೀ ಶಬ್ದ ಸಾಮಾನಾಧಿಕರಣ್ಯವಿದ್ದುದರಿಂದಲೂ, ಮೇಲೆ ಯಾಭಿಃ ಎಂದು ಸ್ತ್ರೀಲಿಂಗ ಶಬ್ದವಿದ್ದ ಪ್ರಯುಕ್ತವೂ ತುವಿವಾಜಾ ಎಂದು ಸ್ತ್ರಿಲಿಂಗ ಶಬ್ದ ಪ್ರಯೋಗವು. ವೈದಿಕವು.) (೫) ಕ್ಷುಮಂತಃ= (ಕ್ಷಿನಿವಾಸಗತ್ಯೋಃ ಎನ್ನುವುದರಿಂದ ಡು ಪ್ರತ್ಯಯವು. ಕ್ಷುಃ= ನಿವಾಸವು. ತಥಾಚ) ಆವಾಸವುಳ್ಳವರು. ಸ್ಥಿತಿಯಿಂದ ಕೂಡಿದವರು. (ಕೆಲವರು ಕ್ಷು ಶಬ್ದೇ ಎನ್ನುವ ಧಾತುವಿನ ರೂಪವೆಂದು ತಿಳಿದು ಕ್ಷುಮಂತಃ ಶಬ್ದವುಳ್ಳವರು, ಕೀರ್ತಿಯುಳ್ಳವರು ಎಂದು ವ್ಯಾಖ್ಯಾನಮಾಡುವರು. ಅದು ಅಯುಕ್ತವು.ಏಕೆಂದರೆ ಕ್ಷು ಧಾತುವಿಗೆ ಕ್ಷುದ್ರೂಪ ನಾಸಿಕಾಜನ್ಯ ಶಬ್ದಾರ್ಥಕತ್ವವಿದ್ದುದರಿಂದ ಶಬ್ದ ಸಾಮಾನ್ಯ ರೂಪ ಅರ್ಥವುಕೂಡದಿರುವುದರಿಂದ ಶಬ್ದ ವಿಶೇಷವೆಂದರ್ಥವಾದ ಕಾರಣ ಕೀರ್ತಿಯೆಂಬ ಅರ್ಥವು ಸಿಗುವುದಿಲ್ಲವಷ್ಟೇ) (೫) ಅಥವಾ ರೇವತೀಸ್ತುವಿವಾಜಾಃ ಎನ್ನುವುದಕ್ಕೆ ಜ್ಞಾನಯುಕ್ತವಾದ ಸುಖವು ಎಂದಾಗಲೀ ಅರ್ಥವು.(ಜ್ಞಾನವೇ ಎಲ್ಲಾ ವಿತ್ತಗಳಿಗಿಂತ ಮುಖ್ಯವಿತ್ತವು. ಸುಖವೇ ಮುಖ್ಯಾನ್ನವು.) (೬) (ಈಗ ಋಗರ್ಥವನ್ನು ಯೋಜನಾ ಮಾಡುತ್ತಾರೆ.) ಉತ್ಕೃಷ್ಟವಾದ ಈ ಅನ್ನಾದಿಗಳು ಸುಖಾಶ್ರಯನಾದ ಶ್ರೀಹರಿಯು ನಮಗೆ ಸ್ವಾಮಿಯಾಗುತ್ತಿರಲು ದ್ರವ್ಯ ಯುಕ್ತಗಳಾದ ಬಹ್ವನ್ನಗಳೂ ಅಥವಾ ಪಶುಗಳೂ ಬಹ್ವನ್ನಗಳೂ ಕೂಡ ಆಗಲಿ. (ಎಂತಹುಗಳೆಂದರೆ) ಯಾವ ವಸ್ತುಗಳಿಂದ ಒಳ್ಳೇ ಸ್ಥಿತಿಯುಳ್ಳವರಾಗಿ ಸರ್ವದಾ ಸುಖಿಗಳಾಗಿಯೇ ಇರುತ್ತೇವೋ. ॥ ೧೩ ॥

ಋ ॥ (೩೪೨) ಆ ಘಾ ತ್ವಾವಾನ್ ತ್ಮನಾಽಽಪ್ತಃ ಸ್ತೋತೃಭ್ಯೋ

ಧೃಷ್ಣವಿಯಾನಃ । ಋಣೋರಕ್ಷಂ ನ ಚಕ್ರ್ಯೋಃ ॥ ೧೪ ॥

ಅ ॥ ಧೃಷ್ಣೋ=(ಞಿ ಧೃಷಾಪ್ರಾಗಲ್ಭ್ಯೇ) ಧೈರ್ಯ ಯುಕ್ತನಾದ ಶ್ರೀಹರಿಯೇ, ತ್ವಾವಾನ್=ನೀನೇ ಸ್ವಾಮಿಯಾಗಿ ಉಳ್ಳ ಪುರುಷನು, ತ್ಮನಾಘ =(ಮಂತ್ರೇಷ್ವಾಙ್ಯಾದೇರಾತ್ಮನಃ, ಎನ್ನುವ ಸೂತ್ರದಿಂದ ಆಕಾರ ಲೋಪವು) (ಅನ್ನಾದಿಗಳುಳ್ಳವನು ಮಾತ್ರವಲ್ಲ ಮತ್ತೆ) ನಿನ್ನಿಂದಲೇ ಆಪ್ತಃ=ಹೊಂದಲ್ಪಡುವವನು, (ಆಗುವನು) (ಅಂದರೆ—ನಿನ್ನ ಅನುಗ್ರಹದಿಂದಲೇ ಅಭೀಷ್ಟ ಪ್ರಾಪ್ತಿಯುಳ್ಳವನು ಆಗುವನು.) ಸ್ತೋತೃಭ್ಯಃ= ಸ್ತುತಿಸುವವರಿಗೆ ಅಥವಾ ಸ್ತುತಿಸುವ ಶಿಷ್ಯರಿಂದ, ಆ=ಸುತ್ತಮುತ್ತಲೂ, ಇಯಾನಃ=ಶಿಷ್ಯರಿಗೆ ಆಶ್ರಯನೂ, ಅಥವಾ (ಶಿಷ್ಯರಿಂದ) ತಿಳಿಯಲ್ಪಡುವವನೂ,(ಆಗುವನು,)ಇಣ್ ಗತೌ, ಎನ್ನುವುದಕ್ಕೆ, ಆನಶ್, ಇಯಙಾದೇಶವು) (ಹೇಗೆಂದರೆ) ಋಣೋಃ=ಶಬ್ದವನ್ನು ಮಾಡುವ, ಚಕ್ರ್ಯೋಃ=ಚಕ್ರಗಳಿಗೆ, ಅಕ್ಷಂನ=ಚಕ್ರದ ನಾಭಿಯಲ್ಲಿರುವ ಕಾಷ್ಠವು (ಹೇಗೆ ಆಶ್ರಯಭಾವದಿಂದ ಇರುತ್ತದೋ ಹಾಗೆಯೇ.) (ದಾರ್ಷ್ಟಾರ್ಂತಿಕದಲ್ಲಿ ಸ್ತೋತೃಭ್ಯಃ ಎಂದು ಹೇಳಿಮದರಿಂದ ದೃಷ್ಟಾಂತದಲ್ಲಿಯೂ ಋಣೋಃ ಎಂದದ್ದು, ಅಂದರೆ ಶಬ್ದವಿದ್ದುದರಿಂದ ದೃಷ್ಟಾಂತದಾರ್ಷ್ಟಾರ್ಂತಿಕಗಳಿಗೆ ಸಾಮ್ಯವನ್ನು ಪ್ರತಿಪಾದಿಸುವುದಕ್ಕಾಗಿ ಋಣೋಃಎಂದು ಹೇಳಿದ್ದು. ಅದು ಚಕ್ರಯೋಃ ಎನ್ನುವುದಕ್ಕೆ ವಿಶೇಷಣವು.) ॥ ೧೪ ॥

ಭಾ ॥ (1) ತ್ವದ್ವಾನ್ ತ್ವಯ್ಯೈವ ಚಾಪ್ತಃ ಸ್ಯಾತ್ (2) ಸ್ತೋತೄಣಾಮಾ ಸಮಂತತಃ । ಇಯಾನೋ ಗಮ್ಯಮಾನಸ್ತೈ (3) ರಣತೋಽಕ್ಷಶ್ಚಕ್ರಯೋರ್ಯಥಾ । ಅಕ್ಷಮಾಶ್ರಯ ಭಾವೇನ ॥ ೧೪ ॥

ಅ ॥ (1) ನಿನ್ನನ್ನೇ ಸ್ವಾಮಿಯೆಂದು ತಿಳಿದಿರುವ ಪುರುಷನು ನಿನ್ನ ಅನುಗ್ರಹದಿಂದಲೇ ಅಭೀಷ್ಟವನ್ನು ಹೊಂದುವವನಾಗುವನು. (2) ನಿನ್ನನ್ನು ಸ್ತೋತ್ರ ಮಾಡುವವರಿಗೆ ಸರ್ವತ್ರ ಆಶ್ರಯನೂ ಆಗುವನು. ಅಥವಾ ಸ್ತೋತೃಗಳಾದ ಶಿಷ್ಯರಿಂದ ತಿಳಿಯಲ್ಪಡುವವನಾಗುವನು. (3) ಧ್ವನಿ ಗೈಯುವ ಚಕ್ರಗಳ ನಾಭಿಕಾಷ್ಠವು ಹೇಗೆ ಆಶ್ರಯಿಸಿಕೊಂಡು ಇರುತ್ತದೋ, ಹಾಗೆಯೇ ॥ ೧೪ ॥

ಋ ॥ (೩೪೩) ಆ ಯದ್ದುವಃ ಶತಕ್ರತ ವಾ ಕಾಮಂ ಜರಿತೄಣಾಂ ।

ಋಣೋ ರಕ್ಷಂ ನ ಶಚೀಭಿಃ ॥ ೧೫ ॥ ೩೦ ॥

ಅ ॥ ಶತಕ್ರತೋ=ಪೂರ್ಣ ಜ್ಞಾನವುಳ್ಳ ಶ್ರೀಹರಿಯೇ, ಯತ್=ಯಾವ ಕಾರಣದಿಂದ, (ನೀನು) ಶಚೀಭಿಃ=(ಶಚೀವಾಕ್ ಎಂದು ವಾಕ್‌ನಾಮಗಳಲ್ಲಿ ಪಾಠವಿದೆ.) ವೇದ ವಚನಗಳಿಂದ, ಜರಿತೄಣಾಂ=ಸ್ತೋತ್ರ ಮಾಡುವವರಿಗೆ, ಆ ಕಾಮಂ—ಸಮಸ್ತ ಕಾಮ್ಯಗಳನ್ನು, ಆದುವಃ= ಪೂರ್ಣೀಕರಿಸುವವನಾಗಿರುತ್ತಿಯೋ, ಋಣೋರಕ್ಷಂ ನ=ಶಬ್ದ ಮಾಡುವ ಚಕ್ರಗಳ ನಾಭಿಕಾಷ್ಠವು ಆಶ್ರಯ ಭಾವದಿಂದ ಹೇಗೆ ಇರುತ್ತದೋ, ಹಾಗೆಯೇ, (ಆದ ಕಾರಣ ನನಗೂ ಕೂಡ ಅಭೀಷ್ಟವನ್ನು ಕೊಡು.) ॥ ೧೫ ॥

ಭಾ ॥ (1) ಸ್ತೋತೄಣಾಂ ಕಾಮಮಾದುಹಃ । (2) ಆ ಸಮಂತಾತ್ ಸ್ಥಿತಂ ಕಾಮ (3) ಮತ್ಯಾಧಿಕ್ಯೇ ಪೃಥಕ್ಪದಂ ॥ ೧೫ ॥ ೩೦ ॥

ಅ || ಸ್ತೋತ್ರ ಮಾಡುವವರಿಗೆ ಅಭೀಷ್ಟವನ್ನು ಚೆನ್ನಾಗಿ ಪೂರ್ಣೀಕರಿಸುತ್ತಿ. (ಅಕ್ಷವು ಅಭೀಷ್ಟವನ್ನು ಕೊಡದಿರುವುದರಿಂದ ಅಕ್ಷವು ಹೇಗೆ ದೃಷ್ಟಾಂತವು ಎಂದರೆ ಚಕ್ರಗಳಿಗೆ ಅಕ್ಷವು ಆಶ್ರಯವಾಗಿದೆ ಎನ್ನುವುದರಿಂದ ಮಾತ್ರ ದೃಷ್ಟಾಂತವು.)(ಶ್ರೀ ವಿಷ್ಣುವೂ ಕೂಡ ಸ್ತೋತೃಗಳಿಗೆ ಅಭೀಷ್ಟವನ್ನು ಕೊಡುವುದರಿಂದ ಆಶ್ರಯನಾಗಿದ್ದಾನೆಂದೇ ವಿವಕ್ಷಿತವು.) (ಆದ ಕಾರಣ ನನಗೂ ಅಭೀಷ್ಟವನ್ನು ಕೊಡು.) (2) (೨ನೇ ಆ ಶಬ್ದಕ್ಕೆ ವೈಯರ್ಥ್ಯವೆಂದರೆ) ಸಮಂತಾತ್ =ಐಹಿಕ ಪಾರತ್ರಿಕ ನಿಖಿಲ ಇಷ್ಟಗಳನ್ನು. (3) ಪಕ್ಷಾಂತರವನ್ನು ಹೇಳುತ್ತಾರೆ.)ಮೊದಲು ಒಂದು ಆ ಶಬ್ದವು ದುವಃ ಎಂಬ ಕ್ರಿಯಾ ಸಂಬಂಧಿಯು. ೨ನೇ ಆ ಶಬ್ದವು ಸಾಧನ ಸಹಿತ ಕ್ರಿಯಾ ವಾಚಕವಾಗಿ ಕಾಮಂ ಎನ್ನುವುದಕ್ಕೆ ವಿಶೇಷಣವು ಎಂದು ಹೇಳಿದೆ. ಈಗಲಾದರೂ ೨ ಆಕಾರಗಳೂ ದುವಃ ಎನ್ನುವ ಕ್ರಿಯೆಗೆ ಸಂಬಂಧ ಪಟ್ಟವುಗಳು) ಅತ್ಯಾಧಿಕ್ಯವೆಂದರ್ಥವು (ಆದ ಕಾರಣ ಎರಡು ಆಕಾರಗಳೂ ವ್ಯರ್ಥಗಳಲ್ಲ.) ಪುನಃ ಆ ಶಬ್ದವು ಪ್ರತ್ಯೇಕ ಪದವು || ೧೫ || ೩೦ ||

ಋ || (೩೪೪) ಶಶ್ವದಿಂದ್ರಃ ಪೋಪ್ರುಥದ್ಭಿರ್ಜಿಗಾಯ ನಾನದದ್ಭಿಃ ಶಾಶ್ವಸದ್ಭಿರ್ಧನಾನಿ । ಸ ನೋ ಹಿರಣ್ಯರಥಂ ದಂಸನಾವಾನ್ ಸ ನಃ ಸನಿತಾ ಸನಯೇ ಸ ನೋಽದಾತ್ || ೧೬ ||

ಅ || (ಶುನಃಶೇಪರಿಂದ ಹಿಂದೆ ಹೇಳಿದ ಪ್ರಕಾರ ಋಕ್ಕುಗಳಿಂದ ಸ್ತುತಿಸಿಕೊಂಡ ಇಂದ್ರ ದೇವರು ಈ ಶುನಶ್ಶೇಪರಿಗೆ ಹಿರಣ್ಯ ರಥವನ್ನು ಕೊಡುವುದೆಂದು ಮನಸ್ಸಿನಿಂದ ತನ್ನ ಇಚ್ಛೆಯಿಂದಲೇ ಪರಪ್ರೇರಣೆಯಿಲ್ಲದೇನೇ ಸಂಕಲ್ಪಿಸಿದರು, ಆ ಮೇಲೆ ಶುನಃಶೇಪರು **ಶಶ್ವದಿಂದ್ರಃ** ಎಂಬ ಋಕ್ಕಿನಿಂದ ಆ ಇಂದ್ರದೇವರನ್ನು ಸ್ತೋತ್ರ ಮಾಡಿದರು. ಅಂತೂ ಶುನಶ್ಶೇಪರಿಗೆ ಇಂದ್ರನ ಅನುಗ್ರಹವುಂಟಾಯ್ತು.) ಇಂದ್ರಃ= ಇಂದ್ರನು, ಪೋಪ್ರುಥದ್ಭಿಃ= (ಪ್ರಥ ಪ್ರಖ್ಯಾನೇ) (ತನ್ನ ವೀರ್ಯವನ್ನು) ಪ್ರಸಿದ್ಧಿಗೊಳಿಸುವ, ನಾನದದ್ಭಿಃ=(ಣದ ಅವ್ಯಕ್ತೇ ಶಬ್ದೇ) ಅತಿಶಯವಾಗಿ ಮತ್ತೂ ಮತ್ತೂ ಧ್ವನಿ ಮಾಡುವ, ಶಾಶ್ವಸದ್ಭಿಃ=(ಶ್ವಸ ಪ್ರಾಣನೇ) ಸಿಟ್ಟಿನಿಂದ ಚೆನ್ನಾಗಿ ಮತ್ತೂ ಮತ್ತೂ ಶ್ವಾಸ ಬಿಡುತ್ತಿರುವ ದೇವತೆಗಳಿಂದೊಡಗೂಡಿ, ಶಶ್ವತ್=ಯಾವಾಗಲೂ ಧನಾನಿ=ದೈತ್ಯ ಸಂಬಂಧಿ ದ್ರವ್ಯಗಳನ್ನು, ಜಿಗಾಯ=(ಜಿಜಯೇ) ಗೆದ್ದನು. ದಂಸನಾವಾನ್=ಕರ್ಮವುಳ್ಳ, ಸಃ=ಆ ಇಂದ್ರನು, ನಃ= ನಮಗೆ, ಹಿರಣ್ಯರಥಂ=ಸ್ವರ್ಣಮಯವಾದ ರಥವನ್ನು, ಅದಾತ್=ಈಗ ಕೊಟ್ಟನು. ಸಃ=ಆ ಇಂದ್ರನೇ ನಃ= ನಮಗೆ, ಸನಿತಾ =(ಷಣುದಾನೇ) ನಿಖಿಲ ಐಹಿಕ ಪುರುಷಾರ್ಥವನ್ನು ಕೊಡುವನು. ಅಥವಾ ಸಃ=ಆ ಇಂದ್ರನು, ನಃ = ನಮ್ಮದಾದ, ನಿಖಿಲ ಹವಿಸ್ಸು ಮೊದಲಾದುದನ್ನು, ಸನಿತಾ =(ವನಷಣ ಸಂಭಕ್ತೌ) ಹೊಂದುವನು. ಸಃ=ಆತನು, ನಃ=ನಮಗೆ, ಸನಯೇ=ಪಾರತ್ರಿಕಲಾಭ ನಿಮಿತ್ತವಾಗಿಯೂ, (ಆಗುತ್ತಾನೆ.) || ೧೬ ||

ಭಾ || ಕೆಂಪ್ರೋಥಾಚ್ಛ್ವಸದ್ಭಿಃ ಪ್ರಥಯದ್ಭಿರಾತ್ಮವೀರ್ಯಂ ಸುರೈಃ ಶಶ್ವದಿಂದ್ರೋ ಜಿಗಾಯ । ಧನಾನಿ ನಃ ಸ್ವರ್ಣರಥಂ ಚ ದಾತಾ ಲಬ್ಧಾ ಪ್ರಾದಾಲ್ಲಾಭಕೃತೇಚ ನೋಽಖಿಲಂ || ೧೬ ||

ಅ || ಇಂದ್ರ ದೇವರು, ತಮ್ಮ ಪರಾಕ್ರಮವನ್ನು ಪ್ರಸಿದ್ಧಿಗೊಳಿಸುವ (ಅತಿಶಯವಾಗಿ ಪುನಃ ಪುನಃ ಧ್ವನಿ ಗೈಯುವ,) ಸಿಟ್ಟಿನಿಂದ ಚೆನ್ನಾಗಿ ಮತ್ತೂ ಮತ್ತೂ ಶ್ವಾಸ ಬಿಡುವ, ದೇವತೆಗಳಿಂದ ಕೂಡಿ ಸರ್ವದಾ ದೈತ್ಯ ಸಂಬಂಧಿ ದ್ರವ್ಯಗಳನ್ನು ಗೆಲ್ಲುತ್ತಿದ್ದನು. ಆ ಇಂದ್ರನು ನಮಗೆ ಸ್ವರ್ಣಮಯ ರಥವನ್ನು ಕೊಟ್ಟನು.

ಐಹಿಕ ನಿಖಿಲಾಭೀಷ್ಟಗಳನ್ನೂ ಕೊಟ್ಟನು. ಅಥವಾ ನಾವು ಕೊಟ್ಟ ಹವಿರಾದಿಗಳನ್ನು ಹೊಂದುವನು. ನಮಗೆ ಪಾರತ್ರಿಕ ಲಾಭಕ್ಕಾಗಿಯೂ ಆಗುವನು. (ಪಾರತ್ರಿಕ ಲಾಭವನ್ನು ಹೊಂದಿಸಿ ಕೊಡುವನು.) ||೧೬||

ಋ|| (೩೪೫) ಆಶ್ವಿನಾ ವಶ್ವಾವತ್ಯೇಷಾ ಯಾತಂ ಶವೀರಯಾ।
ಗೋಮದ್ದಸ್ರಾ ಹಿರಣ್ಯವತ್ || ೧೭ ||

ಅ || (೩ ಋಕ್ಕುಗಳು ಅಶ್ವಿನೀ ದೇವತಾಕಗಳು.) ದಸ್ರಾ=(ದಸು ಉಪಕ್ಷಯೇ.) ಶತ್ರುಗಳನ್ನು ನಾಶಗೊಳಿಸುವ, ಅಶ್ವಿನೌ=ನಾಸತ್ಯ ದಸ್ರ ಎನ್ನುವ ಅಶ್ವಿನೀ ದೇವತೆಗಳಿರಾ, ಅಶ್ವವತ್ಯಾ=ಅಶ್ವಗಳಿಂದ ಕೂಡಿರುವ ಶವೀರಯಾ=ಸುಖ ಪುತ್ರರಿಂದ ಕೂಡಿರುವ, ಇಷಾ=ಅನ್ನದಿಂದ ಕೂಡಿಕೊಂಡು ಗೋಮತ್ ಹಿರಣ್ಯವತ್= (ನಿಮ್ಮಬ್ಬರ ಆಗಮನವು ಹೇಗೆ) ಗೋವುಗಳುಳ್ಳದ್ದೂ ಹಿರಣ್ಯವುಳ್ಳದ್ದೂ ಆಗುವುದೋ. ಹಾಗೆಯೇ, ಆ ಯಾತಂ= (ನಮ್ಮ ಸಮೀಪಕ್ಕೆ ಅಶ್ವಾದಿಗಳನ್ನು ಕೊಡುವುದಕ್ಕಾಗಿ) ಬನ್ನಿರಿ. (ಅಧ್ಯಾತ್ಮಪರವಾದ ಅರ್ಥವು) ದಸ್ರಾ ಅಶ್ವಿನೌ=ಎಲೋ ಅಶ್ವಿನೀ ದೇವತೆಗಳಿರಾ, ಅಶ್ವವತ್ಯಾ=ಇಂದ್ರಿಯಗಳಿಂದ ಕೂಡಿದ, ಶವೀರಯಾ=ಸುಖದಿಂದ ಅವಿದ್ಯಾದಿಗಳನ್ನು ಜಯಿಸುವ ವಿಷಯದಲ್ಲಿ ಪರಾಕ್ರಮ ಯುಕ್ತವಾದ ಇಷಾ=(ಈಶ ಐಶ್ವರ್ಯೇ ಮನೋಜಯ ರೂಪವಾದ ಐಶ್ವರ್ಯದಿಂದ ಕೂಡಿಕೊಂಡು, ಗೋಮತ್=ವೇದ ವಾಕ್ಯ ಯುಕ್ತವಾಗಿ, ಹಿರಣ್ಯವತ್=ಹಿತ ರೂಪನೂ ರಮಣ ರೂಪನೂ ಆದ ಪರಬ್ರಹ್ಮನಿಂದ ಕೂಡಿ ಹೇಗೆ ಆದೀತೋ ಹಾಗೆ, ಆ ಯಾತಂ=ಬನ್ನಿರಿ. || ೧೬ ||

ಭಾ || (1) ಗೋಮದ್ಧಿರಣ್ಯವಚ್ಚ ಸ್ಯಾದ್ಯಥಾಽಽಯಾತಂ ತಥೈವ ನಃ। ಸುಖ ಪುತ್ರ ಯುಜಾ ಚಾಶ್ವವತ್ಯೇಷಾ (2) ಶಂ ಸುಖಂ ಯತಃ। (3) ಇಡೈಶ್ವರ್ಯಂ ತಥಾ ವೀರಂ ವೀರ್ಯಂ ಖಾನ್ಯಶ್ವನಾಮತಃ। ಗೌರ್ವಾಗ್ಘಿತಂ ಚ ರಮಣಂ ಪರಂಬ್ರಹ್ಮ ಗುಣೋಚ್ಛ್ರಿತಂ || ೧೭ ||

ಅ || (1) ಸುಖ ಪುತ್ರರಿಂದಲೂ, ಅಶ್ವಗಳಿಂದಲೂ, ಅನ್ನದಿಂದಲೂ ಕೂಡಿಕೊಂಡು, ನಿಮ್ಮಬ್ಬರ ಆಗಮನವು ಗೋವುಗಳಿಂದ ಕೂಡಿದ್ದು ಹಿರಣ್ಯದಿಂದ ಕೂಡಿದ್ದು ಹೇಗೆ ಆಗುವುದೋ ಹಾಗೆ ಬನ್ನಿರಿ. (ಅಂದರೆ ಅಶ್ವಾದಿಗಳನ್ನು ಕೊಡುವುದಕ್ಕಾಗಿ ಬನ್ನಿರಿ.) (೩)(ಶವೀರಯಾ ಎನ್ನುವುದನ್ನು ವಿವರಿಸುತ್ತಾರೆ.)ಯಾವ ಕಾರಣದಿಂದ, ಶಂ=ಸುಖವೋ, (ವೀರಸ್ತು ಸುಭಟೇ ಶ್ರೇಷ್ಠೇ ಎಂಬ ವಿಶ್ವಕೋಶದಿಂದ ಶ್ರೇಷ್ಠಾರ್ಥಕವಾದ ವೀರ ಶಬ್ದಕ್ಕೆ ಪುತ್ರ ಎಂದು ಅರ್ಥವು. ಅಥವಾ ಅವೀರಾ ನಿಷ್ಪತಿಸುತಾ ಎನ್ನುವ ಅಮರ ಕೋಶದಿಂದ ವೀರ ಶಬ್ದಕ್ಕೆ ಪುತ್ರನೆಂದರ್ಥವು. ತಥಾಚ ವೀರಃ=ಪುತ್ರನು, ತಥಾಚ ಸುಖ ಪುತ್ರರುಳ್ಳದ್ದು ಶವೀರಾ ತಯಾ. ಆದ ಕಾರಣ ಹೇಳಿದ್ದು ಯುಕ್ತವು. (3) (ಇಡಾದಿ ಶಬ್ದಗಳಿಗೆ ಅಧ್ಯಾತ್ಮ ಪರವಾಗಿ ಅರ್ಥಗಳನ್ನು ಹೇಳುತ್ತಾರೆ.) ಇಟ್ ಶಬ್ದದಿಂದ ಐಶ್ವರ್ಯವು. ಮನಸ್ಸಿನ ಜಯವು; ಹೇಳಲ್ಪಡುಡುತ್ತದೆ (ಇಷಾ ಎನ್ನುವುದು ಈಶ ಐಶ್ವರ್ಯೇ ಎನ್ನುವುದರ ರೂಪವು.) ಮತ್ತು ವೀರಂ=ವೀರ್ಯವು, ಅವಿದ್ಯೆಯನ್ನು ಜಯಿಸುವ ವಿಷಯದಲ್ಲಿ ಪರಾಕ್ರಮವು. ಅಶ್ವ ನಾಮದಿಂದ ಇಂದ್ರಿಯಗಳು ಹೇಳಲ್ಪಡುತ್ತವೆ. ಗೌಃ=ವಚನವು. ಹಿತಕರನೂ ರಮಣೀಯನೂ ಆದ ಪರಬ್ರಹ್ಮನು ಹಿರಣ್ಯನೆನಿಸುತ್ತಾನೆ. (ಹಿರಣ್ಯ ಶಬ್ದಕ್ಕೆ ಅರ್ಥಾಂತರವನ್ನೂ ಹೇಳುತ್ತಾರೆ.) ಹೇಗೆ ಲೋಕಗಳಲ್ಲಿ ಹಿರಣ್ಯವು ಶ್ರೇಷ್ಠವೋ, ಹಾಗೆಯೇ ಪರಬ್ರಹ್ಮನು ಬ್ರಹ್ಮ ರುದ್ರಾದಿ ಎಲ್ಲಾ ದೇವತೆಗಳಿಗಿಂತಲೂ ಗುಣಗಳಿಂದ ಶ್ರೇಷ್ಠನು ಎಂದರ್ಥವು. || ೧೭ ||

ಖು ॥ (೩೪೬) ಸಮಾನ ಯೋಜನೋ ಹಿ ವಾಂ ರಥೋ ದಸ್ರಾವಮರ್ತ್ಯಃ।
ಸಮುದ್ರೇ ಅಶ್ವಿನೇಯತೇ ॥ ೧೮ ॥

ಅ ॥ ದಸ್ರೌ ಅಶ್ವಿನಾ=ಎಲೋ ಭಗವದ್ರೂಪ ವಿಶೇಷಗಳೇ, ವಾಂ=ನಿಮ್ಮ ಭಕ್ತರಾದ ನಿನ್ನಲ್ಲಿಯೇ ಮನಸ್ಸನ್ನು ಇಟ್ಟವರಿಗೆ, ಸಮಾನ ಯೋಜನಃ=(ಮರಣವಿಲ್ಲದಿರುವ ದೇಹವು ಪ್ರಾಪ್ತಿಯಾಗಲಿಕ್ಕೆ ಯೋಗವು ಸಾಧನವಾದ ಪ್ರಯುಕ್ತ ಎಂತಹ ಧ್ಯಾನಾದಿ ರೂಪವಾದ ಯೋಗದಿಂದ ಮೋಕ್ಷವು ಪ್ರಾಪ್ತವಾಗುತ್ತದೋ,ಅಂತಹ ಯೋಗದಿಂದ ಸಂಬಂಧವುಳ್ಳ (ಅಂದರೆ ಸಮಾನವಾದ ಯೋಗದಿಂದ ಕೂಡಿರುವ) ಅಮರ್ತ್ಯಃ=ಜ್ಞಾನ ಆನಂದ ಸ್ವರೂಪವಾಗಿರುವುದರಿಂದ ಮರಣವೇ ಇಲ್ಲದಿರುವ, ರಥಃ=ಈ ಪ್ರಸಿದ್ಧವಾದ ದೇಹವೂ, ಸಮುದ್ರೇ=ಕ್ಷೀರ ಸಮುದ್ರದಲ್ಲಿ ಈಯತೇ=ತಿಳಿಯಲ್ಪಡುತ್ತದೆ. ಹಿ=ಪ್ರಸಿದ್ಧವು. (ಪ್ರಸಿದ್ಧ ಅಶ್ವಿನೀ ದೇವತೆಗಳಲ್ಲಿ ಆದರೂ, ಎಲೋ ಅಶ್ವಿನೀ ದೇವತೆಗಳಿರಾ, ವಾಂ=ನಿಮ್ಮ ಸಂಬಂಧಿಯಾದ, ಸಮಾನ ಯೋಜನಃ=ಯೋಗ್ಯವಾದ ಚಕ್ರವುಳ್ಳ, ಅಮರ್ತ್ಯಃ=ಅಲೌಕಿಕವಾದ, ರಥಃ=ರಥವು, ಸಮುದ್ರೇ=ಸಮುದ್ರ ಪರ್ಯಂತ, ಈಯತೇ=ಹೋಗುವಂತಾದ್ದು. ಹಿ=ಪ್ರಸಿದ್ಧವು- ॥ ೧೮ ॥

ಭಾ ॥ (1) ಸಮಾನಯೋಗಯುಕ್ತೋಽಯಂ ರಥೋ ದೇಹಸ್ತ್ವದಾತ್ಮನಾಂ । ಚಿತ್ಸುಖತ್ವಾದಮರ್ತ್ಯಶ್ಚ ಜ್ಞಾಯತೇ ಕ್ಷೀರ ಸಾಗರೇ (2) ಮೋಕ್ಷಸ್ಯ ಯಾವತಾ ಪ್ರಾಪ್ತಿಃ ಸಮಾನೋ ಯೋಗ ಉಚ್ಯತೇ ॥ ೧೮ ॥

ಅ ॥ (1) (ಎಲೋ ಭಗವದ್ರೂಪ ವಿಶೇಷಗಳೇ) ನಿನ್ನಲ್ಲಿಯೇ ಮನಸ್ಸನ್ನು ಇಟ್ಟಿರುವ ಭಕ್ತರಿಗೆ (ಅಶ್ವಿನಾ ಎಂದು ಭಗವದ್ರೂಪಗಳಿಗೆ ದ್ವಿತ್ವವಿದ್ದ ಪ್ರಯುಕ್ತ ಭಾಷ್ಯದಲ್ಲಿ ಯುಷ್ಮದಾತ್ಮನಾಂ ಎಂದು ಹೇಳಬೇಕಿತ್ತು ತ್ವದಾತ್ಮನಾಂ ಎಂದು ಏಕವಚನ ಹೇಳಿದ್ದು ಹೇಗೆಂದರೆ ಭಗವದ್ರೂಪಗಳಿಗೆ ಭೇದವನ್ನು ವಿವಕ್ಷಾ ಮಾಡದೆ ಇದು ಸರ್ವೋತ್ತಮನಾದ ಶ್ರೀಹರಿಯು ಒಬ್ಬನೇ ಎನ್ನುವ ಅಭಿಪ್ರಾಯದಿಂದ ತ್ವದಾತ್ಮನಾಂ ಎಂದು ಹೇಳಿದ್ದು,) (ಇಲ್ಲಿ ಯೋಜನ ಶಬ್ದದಿಂದ ಧ್ಯಾನಾದಿ ರೂಪವಾದ ಯೋಗವನ್ನು ತೆಗೆದುಕೊಂಡದ್ದರಿಂದ ಮುಕ್ತನಿಗೆ ಧ್ಯಾನಾದಿಗಳಿಂದ ಪ್ರಯೋಜನವಿಲ್ಲದಿರುವುದರಿಂದ ಮುಕ್ತರು ಸಮಾನ ಯೋಗ ಯುಕ್ತರು ಎಂದದ್ದು ಹೇಗೆಂದರೆ) ಅಮರ್ತ್ಯವಾದ (ಮರಣವಿಲ್ಲದಿರುವ) ದೇಹದ ಪ್ರಾಪ್ತಿಗೆ ಯೋಗವು ಸಾಧನವಾಗಿರುವುದರಿಂದ ಸಮಾನ ಯೋಗ ಯುಕ್ತಃ ಎಂದದ್ದು (ಯದ್ಯಪಿ ಮೋಕ್ಷದಲ್ಲಿ ಮುಕ್ತರು ಧ್ಯಾನಾದಿಗಳನ್ನು ಮಾಡುತ್ತಿರುತ್ತಾರೆ- ಆದರೂ ಆ ಧ್ಯಾನಾದಿಗಳು ಫಲ ರೂಪವಾಗಿರುವುದರಿಂದ ಸ್ವರೂಪವಾಗಿರುವ ಪ್ರಯುಕ್ತ ಅಮರ್ತ್ಯ ದೇಹವೆಂದು ಗ್ರಹಣ ಮಾಡಿದುದರಿಂದಲೇ ಧ್ಯಾನಾದಿಗಳನ್ನು ತೆಗೆದುಕೊಂಡದ್ದರಿಂದ ಮುಖ್ಯವಾಗಿ ಯೋಗಯುಕ್ತತ್ವವು ಕೂಡದಿರುವ ಕಾರಣ ಬಾಹ್ಯ (ಧ್ಯಾನಾದಿಗಳನ್ನೇ ತೆಗೆದುಕೊಳ್ಳಬೇಕು.) (ದೇಹವು ಅಮರ್ತ್ಯವು ಹೇಗೆ ಆಗುವುದೆಂದರೆ) (ಸ್ವರೂಪ ದೇಹವನ್ನು ವಿವಕ್ಷಾ ಮಾಡಿಕೊಂಡು) ಜ್ಞಾನಾನಂದಾತ್ಮಕವಾಗಿರುವುದರಿಂದ (ಸ ಏಷ ದೇವರಥಃ ತದ್ರಥೋ ದೇಹ ಉಚ್ಯತೇ ಇತ್ಯಾದಿ ಪ್ರಮಾಣಗಳಿಂದ ದೇಹವೇ ರಥವೆಂದು ಹೇಳಿದ ಕಾರಣ ರಥಃ=ದೇಹವು) ಅಮರ್ತ್ಯವೆಂದು (ಮರಣವಿಲ್ಲದಿರುವುದೆಂದು) ಕ್ಷೀರ ಸಮುದ್ರದಲ್ಲಿ ಇದೆ ಎಂದು ತಿಳಿಯಲ್ಪಡುತ್ತದೆ. (೨) ಸಮಾನವಾದ ಯೋಗವು ಯಾವುದೆಂದರೆ) ಎಂತಹ ಧ್ಯಾನಾದಿಗಳಿಂದ ಮೋಕ್ಷವು ಪ್ರಾಪ್ತವಾಗುತ್ತದೋ, ಅದೇ ಸಮಾನ ಯೋಗವೆನಿಸುತ್ತದೆ. (ಪ್ರಸಿದ್ಧ ಅಶ್ವಿನೀ ದೇವತೆಗಳನ್ನು ಇಟ್ಟುಕೊಂಡರೆ ಸಮಾನ ಯೋಜನಃ=ಯೋಗ್ಯ ಚಕ್ರವುಳ್ಳ ರಥವು ಸಮುದ್ರ ಪರ್ಯಂತಹೋಗತಕ್ಕದು.) (ಹೀಗೆಯೇ ಪ್ರತ್ಯೇಕವಾಗಿ ವಿಷ್ಣು ಪಕ್ಷದಲ್ಲಿಯೂ ಸಮಾನ ಯೋಜನಃ=ಸ್ವಯೋಗ್ಯ ಸಂಬಂಧವುಳ್ಳ, ರಥಃ=ಗರುಡನು ಇತ್ಯಾದಿ ಪ್ರಕಾರ ತಿಳಿದುಕೊಳ್ಳಬೇಕು) ॥ ೧೮ ॥

ಋ ॥ (೩೪೭) ನ್ಯ೧ಘ್ನ್ಯ೧ಸ್ಯ ಮೂರ್ಧನಿ ಚಕ್ರಂ ರಥಸ್ಯ ಯೇಮಥುಃ । ಪರಿ ದ್ಯಾಮನ್ಯ ದೀಯತೇ ॥ ೧೯ ॥

ಅ ॥ (ಎಲೋ ಅಶ್ವಿನೀ ಎನಿಸಿಕೊಂಡ ಭಗವದ್ರೂಪಗಳಿರಾ) ರಥಸ್ಯ ಸೂರ್ಯರಥದ, ಚಕ್ರಂ=ಒಂದು ಚಕ್ರವನ್ನು, ಅಘ್ನ್ಯಸ್ಯ=ನಹಂತಿ ನಗಚ್ಛತೀತಿ ಅಘ್ನ್ಯಃ=ಹನ ಹಿಂಸಾ ಗತ್ಯೋಃ= ಎಂಬ ಧಾತುವಿನಿಂದ ನಿಷ್ಪನ್ನವು.) ಮಾನಸೋತ್ತರ ಪರ್ವತದ, ಮೂರ್ಧನಿ, ಶಿರಸ್ಸಿನಲ್ಲಿ, (ನೀವಿಬ್ಬರು) ನಿ ಯೇ ಮಥುಃ=(ಯಮುಉ ಪರಮೇ)ನಿಯಮಿಸುವವರಾಗಿದ್ದೀರಿ. (ನಿಮ್ಮಿಬ್ಬರಿಂದ ಚಕ್ರವು ನಿಯಮಿಸಲ್ಪಟ್ಟದ್ದಾಗಿರುತ್ತದೆ.)ಅನ್ಯತ್=ಇನ್ನೊಂದು ಚಕ್ರವು, (ಚಕ್ರ ಸ್ಥಾನೀಯವಾದ ಅಕ್ಷ ಪ್ರದೇಶವು) ದ್ಯಾಂ ಪರಿ=ಮೇರು ಪರ್ವತದಲ್ಲಿ, ಈಯತೇ (ನಿಮ್ಮಿಂದ ನಿಯಮಿತವಾಗಿ) ತಿಳಿಯಲ್ಪಡುತ್ತದೆ. ಅಥವಾ ಅಶ್ವಿನೀ ದೇವತೆಗಳಿರಾ, ರಥಸ್ಯ,=ಜಗದಾಖ್ಯ ರಥದ ಚಕ್ರಂ=(ಪ್ರವೃತ್ತಿ ಹೇತುತ್ವವು ಸಮವಾದ ಪ್ರಯುಕ್ತ) ಪಾಪಾಖ್ಯ ಚಕ್ರವನ್ನು ಅಘ್ನ ಸ್ಯ=(ವಿಷ್ಣು ವಾಚಕವಾದ ಅಕಾರದಿಂದ ಹನ ಧಾತುವಿಗೆ ಕರ್ಮಾರ್ಥದಲ್ಲಿ ಯಕ್ ಅಃ=ವಿಷ್ಣುವು ತೇನ ಹನ್ಯತೇ ಎಂಬ ವ್ಯುತ್ಪತ್ತಿಯಿಂದ) ಶ್ರೀಹರಿಯಿಂದ ಸಂಹರಿಸಲ್ಪಡುವ ದೈತ್ಯ ಜನರ, ಮೂರ್ಧನಿ=ಶಿರಸ್ಸಿನಲ್ಲಿ, ನಿಯೇ ಮಥುಃ=(ನೀವಿಬ್ಬರು) ಸ್ಥಾಪಿಸುವವರಾಗಿದ್ದೀರಿ. ಅನ್ಯತ್ ಚಕ್ರಂ=ಇತರವಾದ ಪುಣ್ಯವು ದ್ಯಾಂ ಪರಿ=(**ಪೃಥಿವ್ಯಾಂದ್ಯೌರ್ನ ಹಾಮೇರುಃ** ಎಂಬ ಪ್ರಮಾಣದಿಂದ ದ್ಯೋ ಶಬ್ದಕ್ಕೆ ಲಕ್ಷಣಯಾ) ಸ್ವರ್ಗವಲ್ಲಿದ್ದ ಜನರ ಮೇಲೆ, ಈಯತೇ (ನಿಮ್ಮಿಬ್ಬರಿಂದಲೇ) ತಿಳಿಯಲ್ಪಡುತ್ತದೆ, (ನಿಯಮಿಸಲ್ಪಡುತ್ತದೆ.) ॥ ೧೯ ॥

ಭಾ ॥ ಏಕಂ ಚಕ್ರಂ ಗಿರೇರ್ಮೂರ್ಧ್ನಿ ನಿಯತಂ ದಿವಿ ಚಾಪರಂ। ಪಾಪಂ ಚಕ್ರಂ ಹರಿಘ್ನ್ಯಸ್ಯ ಪುಣ್ಯಂ ದಿವ್ಯಸ್ಯ ಚೋಪರಿ ॥ ೧೯ ॥

ಅ ॥ ಸೂರ್ಯ ರಥದ ಒಂದು ಚಕ್ರವು ಮಾನಸೋತ್ತರ ಪರ್ವತದ ಶಿರಸ್ಸಿನಲ್ಲಿಯೂ ಇನ್ನೊಂದು ಚಕ್ರವು (ಸೂರ್ಯರಥಕ್ಕೆ ಒಂದೇ ಚಕ್ರ ವಿದ್ದುದರಿಂದ, ಅನ್ಯತ್ ಚಕ್ರಂ= ಇನ್ನೊಂದು ಚಕ್ರವು ದ್ಯಾಂ ಪರಿ ಎಂದದ್ದು ಹೇಗೆಂದರೆ) ಚಕ್ರವಲ್ಲ ಮತ್ತೆ ಚಕ್ರಂ=ಚಕ್ರಸ್ಥಾನೀಯವಾದ ಅಕ್ಷ ಪ್ರದೇಶವು ಮೇರು ಪರ್ವತದಲ್ಲಿ (ನಿಮ್ಮಿಬ್ಬರಿಂದ) ನಿಯತವಾಗಿದೆ. (ರೀತ್ಯಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಜಗದಾಖ್ಯರಥದ ಪಾಪಾಖ್ಯ ಒಂದು ಚಕ್ರವು ದೈತ್ಯ ಜನರ ಶಿರಸ್ಸಿನಲ್ಲಿಯೂ ಪುಣ್ಯಾಖ್ಯ ಚಕ್ರವು ಸ್ವರ್ಗದಲ್ಲಿರತಕ್ಕ ಜನರ ಮೇಲೆಯೂ(ಜನರಲ್ಲಿಯೂ) ನಿಮ್ಮಿಬ್ಬರಿಂದಲೇ ಸ್ಥಾಪಿಸಲ್ಪಡುತ್ತದೆ. ॥ ೧೯ ॥

ಋ ॥ (೩೪೮) ಕಸ್ತ ಉಷಃ ಕಧಪ್ರಿಯೇ ಭುಜೇ ಮರ್ತೋ ಅಮರ್ತ್ಯೇ । ಕಂ ನಕ್ಷಸೇ ವಿಭಾವರಿ ॥ ೨೦ ॥

ಅ ॥ ಕಧಪ್ರಿಯೇ=ಯಾವನಾರಾಯಣೀರೂಪಕ್ಕೆ ಪೂರ್ಣಾನಂದವಿರುವುದರಿಂದ ಸರ್ವವೂ ಪ್ರಿಯವೇ ಆಗಿಯದೋ, ಅಪ್ರಿಯವು ಯಾವುದೂ ಇಲ್ಲವೋ, ಅಥವಾ ದುಃಖಕಾರಣವು ಯಾವುದೂ ಇಲ್ಲವೋ ಅಂತಹ ಸ್ತ್ರೀ ರೂಪವು ಕಧಪ್ರಿಯವು, ಅಮರ್ತ್ಯೇ=ಮೃಜ್ ಪ್ರಾಣತ್ಯಾಗೇ) ಮರಣವಿಲ್ಲದಿರುವುದು, ವಿಭಾವರಿ=ವಿಶಿಷ್ಟವಾದ ಪ್ರಭೆಯಿಂದ ಜಗತ್ತನ್ನು ಆವರಿಸಿಕೊಂಡಿರುವುದು. ಉಷಃ=ಉಷಃ ಎನಿಸಿಕೊಂಡ ಭಗವಂತನ ಸ್ತ್ರೀ ರೂಪವೇ, ಕಃ ಮರ್ತಃ=ಯಾವ ಮನುಷ್ಯನು, ತೇಃ=ನಿನ್ನ ಭುಜೇ=ಭೋಗಕ್ಕೋಸ್ಕರ, (ಆಗುತ್ತಾನೆ.) (ಯಾರೊಬ್ಬನೂ ಆಗುವುದಿಲ್ಲ. ಯಾವಕಾರಣದಿಂದ ನೀನು ಇತರರಿಗೆ ಪೂರ್ಣಾನಂದವನ್ನೇ ಕೊಡುವವನೂ, ಮರಣರಹಿತನೂ

ಆಗಿರುತ್ತಿಯೋ ಆದಕಾರಣ ನಿನ್ನ ಭೋಗವು ಮನುಷ್ಯನ ಅಧೀನವು ಹೇಗೆ ಆಗುವುದು,) ಕಂ ನಕ್ಷಸೇ=(ಣಕ್ಷ ಗತೌ.) ಆಪ್ತಕಾಮನಾದುದರಿಂದ ತನಗಾಗಿ ಯಾವನನ್ನು ಕುರಿತು ಹೋಗುತ್ತಿ, (ಯಾವನೊಬ್ಬನನ್ನು ಆಶ್ರಯಿಸುವುದೇ ಇಲ್ಲ.) ॥ ೨೦ ॥

ಭಾ ॥ (1) ಕೋ ಮರ್ತ್ಯಸ್ತವ ಭೋಗಾಯ ಯತಃಸರ್ವಪ್ರಿಯೋ ಭವಾನ್ । (2) ಕಿಮಪಿ ಪ್ರಿಯಮಸ್ಯೇತಿ ಪೂರ್ಣಾನಂದಾತ್ಕಥಪ್ರಿಯಃ । (3) ಆಪ್ತ ಕಾಮತ್ವತಃ ಕಂ ವಾ ಗಚ್ಛಸಿ ಸ್ವಾರ್ಥಹೇತುತಃ । (4) ವಿಶೇಷಾದ್ಭಾವೃತೇರ್ವಿಷ್ಣುಃ ಕಥಿತಶ್ಚ ವಿಭಾವರೀ ॥ ೨೦ ॥

ಅ ॥ (1) (ಎಲೋ ಉಷಾದೇವಿಯೇ) ಯಾವ ಕಾರಣದಿಂದ ನೀನು ಸರ್ವರಿಗೂ ಪ್ರಿಯನೇ ಆಗಿರುತ್ತಿಯೋ ಆದಕಾರಣ ಯಾವ ಮನುಷ್ಯನು ನಿನ್ನ ಭೋಗಕ್ಕೋಸ್ಕರ ಆಗುತ್ತಾನೆ. (2) ಪರಿಪೂರ್ಣ ಆನಂದವುಳ್ಳವನಾದುದರಿಂದ ಸಮಸ್ತ ವಸ್ತುವೂ ಪ್ರಿಯವೇ ಆಗಿರುವುದರಿಂದ ಕಥಪ್ರಿಯ: ಎನಿಸುತ್ತಾನೆ. (3) ಆಪ್ತಕಾಮನಾದುದರಿಂದ ತನ್ನ ಪ್ರಯೋಜನಕ್ಕಾಗಿ ಯಾರನ್ನು ಕುರಿತು ಹೋಗುತ್ತಿ? (4) ವಿಶೇಷಾಕಾರವಾಗಿ ಪ್ರಕಾಶದಿಂದ ಇಡೀ ಜಗತ್ತನ್ನು ಆವರಿಸಿಕೊಂಡಿರುವುದರಿಂದ ಶ್ರೀ ವಿಷ್ಣುವು ವಿಭಾವರೀ ಎನಿಸುತ್ತಾನೆ. ॥ ೨೦ ॥

ಋಮ ॥ (೩೪೯) ವಯಂ ಹಿ ತೇ ಅಮನ್ಮಹ್ಯಾಂತಾದಾ ಪರಾಕಾತ್ ।
ಅಶ್ವೇ ನ ಚಿತ್ರೇ ಅರುಷಿ ॥ ೨೧ ॥

ಅ ॥ ಅಶ್ವೇನ=ಜಾತ್ಯಶ್ವದಂತೆ, ಚಿತ್ರೇ=ಸದಾ ಮಂಗಳ ಕರಗಳಾದ,ಅರುಷಿ=ಸದಾಽರುಣಳಾದ ಎಲೋ ಉಷಾದೇವಿಯೇ, ವಯಂ= ನಾವು ಆ ಅಂತಾತ್= ಸರ್ವ ಜೀವರಲ್ಲಿ ಅಂತಿಮನಾದ ಅತ್ಯಧಮನಾದ ಕಲಿ ಪರ್ಯಂತವಾದ,ಆ ಪರಾಕಾತ್=ಚೆನ್ನಾಗಿ ಉತ್ತಮವಾದ ಸುಖವುಳ್ಳ ಶ್ರೀತತ್ವ ಪರ್ಯಂತವಾದ ಅಂದರೆ ಅತ್ಯಧಮನಾದ ಕಲಿ, ಅತ್ಯುತ್ತಮಳಾದಲಕ್ಷ್ಮೀಸಹಿತವಾದ(ಲಕ್ಷ್ಮಿಯನ್ನು ಆರಂಭಿಸಿ ಕಲಿಪರ್ಯಂತ)ಸಮಸ್ತ ಜಗತ್ತು, ತೇ ಅಮನ್ಮಹಿ=(ಮನು ಅವ ಭೋಧನೇ) ಸರ್ವದಾ ಕೇವಲ ನಿನ್ನೊಬ್ಬನ ಅಧೀನವನ್ನಾಗಿಯೇ ಧ್ಯಾನಿಸುತ್ತಿರುತ್ತೇವೆ. ಹಿ=ಪ್ರಸಿದ್ಧ. (ಪ್ರಸಿದ್ಧ ಉಷಾದೇವಿ ಎಂದು ಇಟ್ಟುಕೊಳ್ಳುವುದಾದರೆ ಅಂತ ಶಬ್ದದಿಂದ ನರಕವನ್ನೂ ಪರಾಕ ಶಬ್ದದಿಂದ ಸ್ವರ್ಗರೂಪಅರ್ಥವನ್ನೂ ಇಟ್ಟುಕೊಳ್ಳಬೇಕು ಅಂತೂ ನರಕ ಸ್ವರ್ಗಗಳಿಂದ ಕೂಡಿದ ಜಗತ್ತಿಗೆ ಸ್ವಾಮಿಯು ಎಂದು ಇಟ್ಟುಕೊಳ್ಳಬೇಕು) ॥ ೨೧ ॥

ಭಾ ॥ (1) ಚಿಂತಯಾಮಸ್ತ್ವೈಕಸ್ಯ ವಿಶ್ವಮಾಂತಪರಾಕಯೋಃ । (2) ಪರಾಕಃ ಸುಸುಖೈವ ಶ್ರೀರಂತಃ ಕಲಿರುದಾಹೃತಃ । (3) ನರಕಸ್ವರ್ಗಯೋರೇವದೇವ್ಯುಷಾ ಉದಿತಾ ಯದಾ । ಜಾತ್ಯಶ್ವತ್ಸದಾ ಭದ್ರೇ ಚಾರುಣೇ ॥ ೨೧ ॥

ಅ ॥ ಜಾತಿ ಕುದುರೆಯಂತೆ ಸದಾ ಮಂಗಲಕರಳಾದ (ಶ್ರೀಹರಿಯನ್ನು ಇಟ್ಟುಕೊಂಡು ಜಾತ್ಯಶ್ವವತ್ ಎಂದದ್ದು, ಇಲ್ಲವಾದರೆ ಅಶ್ವಾವತ್ ಎಂದು ಹೇಳಬೇಕಿತ್ತು.) ಅರುಣ ಬಣ್ಣವುಳ್ಳ ಜ್ಞಾನ ಆನಂದಾದಿ ಗುಣಗಳ ಸಮುದಾಯವುಳ್ಳ,ಎಲೋ ಉಷಾ ದೇವಿಯೇ,ಶ್ರೀಹರಿಯ ಸ್ತ್ರೀರೂಪವೇ ಕಲಿಯನ್ನಾರಂಭಿಸಿ ಲಕ್ಷ್ಮೀ ಪರ್ಯಂತವಾದ ಸಮಸ್ತ ಜಗತ್ತನ್ನು ಕೇವಲ ನಿನ್ನ ಅಧೀನವನ್ನಾಗಿಯೇ ತಿಳಿಯುತ್ತೇವೆ. (2) (ಪರಾಕ ಅಂತ ಶಬ್ದಗಳಿಗೆ ಅರ್ಥಹೇಳುತ್ತಾರೆ.)ಪೂರ್ಣ ಸುಖದ ಅಂತ್ಯವು ಪರಾಕವು ಲಕ್ಷ್ಮೀದೇವಿಯು ಪೂರ್ಣ ಸುಖವುಳ್ಳವಳೇ. ದುರ್ಜನ

ರಲ್ಲಿ ಅಂತಿಮನು ಕಲಿಯು ಎಂದು ಹೇಳಲ್ಪಡುತ್ತಾನೆ. (3) (ಪ್ರಸಿದ್ಧ ಉಷಾ ದೇವಿಯಲ್ಲಿ ಈ ಅರ್ಥವು ಕೂಡದಿರುವುದರಿಂದ ಬೇರೆ ರೀತಿಯಾಗಿ ಅರ್ಥ ಹೇಳುತ್ತಾರೆ.) ಯಾವಾಗ ಪ್ರಸಿದ್ಧ ಉಷಾ ದೇವಿಯು ಇಲ್ಲಿ ಹೇಳಲ್ಪಡುತ್ತಾಳೋ, ಆಗ ನರಕ ಸ್ವರ್ಗಗಳಿಗೆ ಸ್ವಾಮಿಯು ಎಂದು ಇಟ್ಟುಕೊಳ್ಳಬೇಕು. ಅಂತಃ= ವಿನಾಶವು. ದುಃಖವು. ನರಕವು. ಪರಮಸುಖ ರೂಪವಾಗಿರುವುದರಿಂದ ಪರಾಕಃ=ಸ್ವರ್ಗವು. ತಥಾ ಚ ಉಷಾದೇವಿಯು ನರಕ ಸ್ವರ್ಗಗಳಿಗೆ ಸ್ವಾಮಿಯು ಎಂದರ್ಥವು. ॥ ೨೧ ॥

ಋ ॥ (೩೫೦) ತ್ವಂ ತ್ಯೇಭಿರಾಗಹಿ ವಾಜೇಭಿರ್ದುಹಿತರ್ದಿವಃ । ಅಸ್ಮೇ ರಯಿಂ ನಿ ಧಾರಯ ॥ ೨೨ ॥ ೩೧ ॥ ೩೦ ॥ ೬ ॥

ಅ ॥ ಹೇ ದಿವಃ ದುಹಿತಃ=(ಶ್ರೀ ವಿಷ್ಣುವು ಸರಸ್ವತೀ ಭಾರತಿಯರ ಸ್ತುತಿಯಿಂದ ಅಭಿವ್ಯಂಗ್ಯನಾಗುವುದರಿಂದ) ವಾಣಿಯರ ಪುತ್ರಿಯೆನಿಸಿಕೊಂಡ ಶ್ರೀ ವಿಷ್ಣುವೇ, ಅಥವಾ ಪ್ರಾಣ ಭಾರತಿಯರ ಪುತ್ರಿಯಾದ ಉಷಾ ದೇವಿಯೇ, ತ್ವಂ=ನೀನು ತ್ಯೇಭಿಃ=ಪ್ರಸಿದ್ಧಗಳಾದ, ವಾಜೇಭಿಃ=(ನಮಗೆ) ಅನ್ನಗಳನ್ನು ಕೊಡುವುದಕ್ಕಾಗಿ ಆ ಗಹಿ=(ನಮ್ಮ ಸಮೀಪಕ್ಕೆ) ಬಾ. ಅಸ್ಮೇ=ನಮ್ಮಲ್ಲಿ, ರಯಿಂ=ದ್ರವ್ಯವನ್ನು ಕೂಡ, ನಿಧಾರಯ=ನಿಶ್ಚಿತ ಹೇಗೆ ಆದೀತೋ ಹಾಗೆ ಸ್ಥಾಪಿಸು. ॥ ೨೨ ॥ ೩೧ ॥ ೩೦ ॥ ೬ ॥

ಭಾ ॥ (1) ಪ್ರಾಣ ವಾಕ್ಸುತೇ । (2) ತದ್ವ್ಯಂಗ್ಯತ್ವಾದ್ಧರಿಶ್ಚೈವ ದಿವಸ್ಪುತ್ರ ಉದಾಹೃತಃ ॥ ೨೨ ॥

ಅ ॥ (ಇಲ್ಲಿ ದಿವೋದುಹಿತಃ=ಎನ್ನುವುದನ್ನು ಪ್ರಸಿದ್ಧಳಾದ ಉಷಾ ದೇವಿಯಲ್ಲಿ ವ್ಯಾಖ್ಯಾನಮಾಡುತ್ತಾರೆ) ಮುಖ್ಯಪ್ರಾಣ ಭಾರತಿಯರ ಪುತ್ರಿಯಾದ ಉಷಾ ದೇವಿಯೇ, (ಯದ್ಯಪಿ ವಾಗಭಿಮಾನಿನಿಯರಾದ ಸರಸ್ವತೀ ಭಾರತಿಯರೇ ದ್ಯೌಃ ಎನಿಸುತ್ತಾರೆ. ಆದರೂ ಕೇವಲ ಸ್ತ್ರೀಯರಿಗೆ ಮಕ್ಕಳೇ ಆಗದಿರುವುದರಿಂದ ಪ್ರಾಣ ವಾಕ್ಸುತೇ ಎಂದು ಹೇಳಿದ್ದಾರೆ.) (2) (ಪರಮಾತ್ಮನು ಸರಸ್ವತೀ ಭಾರತಿಯರ ಮಗಳು ಎಂದಾಗುವುದು ಹೇಗೆಂದರೆ) ಶ್ರೀಹರಿಯು ಸರಸ್ವತೀ ಭಾರತಿಯರಿಂದಲೇ ಪ್ರಕಟನಾಗುವುದರಿಂದ ದಿವಸ್ಪುತ್ರಃ ಎನಿಸುತ್ತಾನೆ, ॥ ೨೨ ॥ ೩೧ ॥ ೧೧ ॥ ೬ ॥

ಅವ ॥ ಶುನಶ್ಶೇಪರು ಕಂಡಿರುವ ಋಕ್ಕುಗಳನ್ನು ವ್ಯಾಖ್ಯಾನ ಮಾಡಿ ಈಗ ಮೇಲಿನ ಋಕ್ಕುಗಳಿಗೆ ಋಷಿಯನ್ನೂ ದೇವತೆಗಳನ್ನೂ ಹೇಳುತ್ತಾರೆ.

ಭಾ ॥ ಅಗ್ನೀಂದ್ರಾದಿಗತಂ ಪೃಥಕ್ ಸ್ಥಿತಮಪಿ ಸ್ತೌತ್ಯಚ್ಯುತಂ ಭಕ್ತಿತಃ ಸ್ವರ್ಣಸ್ತೂಪ ಇತಿ ಪ್ರಸಿದ್ಧಿಮಗಮದ್ಯಃ ಸಂಸ್ತುವನ್ ಸೂರ್ಯಗಂ । ವಿಷ್ಣುಂ ಸ್ವರ್ಣ ಸಮಾನಚಾರು ವಪುಷಂ ಸ್ವರ್ಣಾಭಿಧಂ ಶಾಶ್ವತಂ ತಂ ದೃಷ್ಟ್ವಾ ಪರತೋಽಭವಚ್ಚ ಮಹಿತಃ ಸುಜ್ಞಾನಮಪ್ಯಾಪ್ತವಾನ್ ॥

ಅ ॥ ಯಾವಾತನು ಸೂರ್ಯಾಂತರ್ಗತನಾದ, ಸ್ವರ್ಣಃ ಹಿರಣ್ಯ ಎಂದು ಹೆಸರುಳ್ಳ ಶ್ರೀವಿಷ್ಣುವನ್ನು ಚೆನ್ನಾಗಿ ಸ್ತುತಿಸುವವನಾಗಿ ಹಿರಣ್ಯಸ್ತೂಪನೆಂದು ಪ್ರಸಿದ್ಧಿಯನ್ನು ಹೊಂದಿರುವನೋ, (ಷ್ಟುಞ ಸ್ತುತೌ ಎನ್ನುವುದರಿಂದ ಡೂಪ ಪ್ರತ್ಯಯವು. ಹಿರಣ್ಯಸ್ಯ ಸ್ತೂಪಃ (ಹಿರಣ್ಯದ ಸ್ತೋತ್ರವು) ಎಂದು ಶ್ರೀ ವಿಷ್ಣುವಿಗೆ

ಹಿರಣ್ಯವೆಂಬ ಹೆಸರು ಹೇಗೆಂದರೆ) ಯಾವಾತನು (ಹಿರಣ್ಮಯವಪುಃ ಧೃತ ಶಂಖಚಕ್ರಃ ಎಂಬ ಪ್ರಮಾಣದಿಂದ ಸುವರ್ಣಕ್ಕೆ ಸಮಾನವಾದ ಮನೋಹರವಾದ ಶರೀರವುಳ್ಳವನೂ (ರೂಪವಿದ್ಧ ಪ್ರಯುಕ್ತ ಅನಿತ್ಯನೋ ಎಂದರೆ) ಶಶ್ವದೇಕ ಪ್ರಕಾರನೂ, ಆದ ಆ ಶ್ರೀ ವಿಷ್ಣುವನ್ನು ನೋಡಿ ಇತರರಿಂದ ಪೂಜಿಸಲ್ಪಟ್ಟವನೂ ಆಗಿರುವನೋ.ಒಳ್ಳೇ ಜ್ಞಾನವನ್ನು ಹೊಂದಿರುವನೋ. |(ಅಂತಹ ಹಿರಣ್ಯಸ್ತೂಪನೆನಿಸಿದ ಆಂಗೀರಸ, ಗೋತ್ರದವನ ಮೇಲಿನ ಋಕ್ಕುಗಳಿಂದ) ಅಗ್ನಿ ಇಂದ್ರ ಮೊದಲಾದ ದೇವತೆಗಳಲ್ಲಿ ಅಂತರ್ಗತನೂ, ಮತ್ತು ಅಗ್ನ್ಯಾದಿಗಳಲ್ಲಿ ಅಂತರ್ಗತನಾಗದೆಯೂ ಪೃಥಕ್ಇರುವವನೂ, (ಅಗ್ನ್ಯಾದಿಗಳಲ್ಲಿ ಅಂತರ್ಗತನಾದ ಶ್ರೀ ವಿಷ್ಣುವಿಗೆ ಹೇಗೆ ಅಗ್ನಿ ಇಂದ್ರ ಮೊದಲಾದನಾಮಗಳು ಇವೆಯೋ, ಹಾಗೆಯೇ ವೈಕುಂಠಾದಿಗಳಲ್ಲಿರತಕ್ಕಭಗವದ್ರೂಪಗಳಿಗೂ ಅಗ್ನ್ಯಾದಿ ನಾಮಗಳಿವೆ.) ಇಂತಹ ಅಗ್ನಿ ಇಂದ್ರ ಮೊದಲಾದ ನಾಮಗಳುಳ್ಳ ಶ್ರೀಹರಿಯನ್ನು ಭಕ್ತಿಯಿಂದ ಸ್ತುತಿಸುತ್ತಾರೆ. ಅಗ್ನಿ ಇಂದ್ರ ಮೊದಲಾದ ದೇವತೆಗಳನ್ನು ಅಲ್ಲಿ ಅಲ್ಲಿ ಹೇಳುವೆವು.

ಅವ || ಈ 2ನೇ ಅನುವಾಕಕ್ಕೆ ಸೂರ್ಯಾಂತರ್ಗತನಾದ ಹಿರಣ್ಯದಂತೆ ವರ್ಣವುಳ್ಳ, ಹಿರಣ್ಯ ಎಂದು ಹೆಸರುಳ್ಳ ಶ್ರೀಹರಿಯನ್ನು ಸ್ತುತಿಸುವ ಆಂಗೀರಸ ಗೋತ್ರದವನಾದ ಹಿರಣ್ಯಸ್ತೂಪನೆಂದು ಪ್ರಖ್ಯಾತನಾದ ಋಷಿಯು (ಋಷಗತೌ ಋಷತಿಜಾನಾತೀತಿ ಋಷಿಃ) ಋಷಿಯೆಂದು ತಿಳಿಯಬೇಕು. ಈ ತ್ವಮಗ್ನೇ ಎನ್ನುವುದಕ್ಕೆ ೧೮ ಋಕ್ಕುಗಳು. ೪ ವರ್ಗಗಳು ಅಗ್ನಿ ದೇವತಾಳಕರಗು. ಆಗ್ನೇಯ ಸೂಕ್ತವು. ೩೧ನೇ ಸೂಕ್ತವು. ಅದರಲ್ಲಿ. ೮. ೧೬. ೧೮ ಋಕ್ಕುಗಳು ತ್ರಿಷ್ಟುಪ್ ಛಂದಸ್ಕಗಳು. ಬಾಕಿಇದ್ದವುಗಳು ಜಗತೀ ಛಂದಸ್ಕಗಳು. ಜಗತೀ ಛಂದಸ್ಸಿಗೆ ವಾರುಣೀ ಸಮಸ್ತ ದೇವ ಸ್ತ್ರೀಯರೂ ದೇವತೆಗಳು.

ಋ ||(೩೫೧) ತ್ವಮ॑ಗ್ನೇ ಪ್ರ॒ಥ॒ಮೋ ಅಂಗಿ॑ರಾ॒ ಋಷಿ॒ರ್ದೇವೋ ದೇ॒ವಾನಾ॑
ಮಭವಃ ಶಿ॒ವಃ ಸಖಾ॑। ತವ॑ ವ್ರ॒ತೇ ಕ॒ವಯೋ॑ ವಿದ್ಮ॒ನಾಪ॒ಸೋಽ
ಜಾ॑ಯಂತ ಮ॒ರುತೋ॒ ಭ್ರಾ॒ಜದೃಷ್ಟಯಃ ॥ ॥ ೧ ॥

ಅ || ಅಗ್ನೇ=ಎಲೋ ಶ್ರೀಹರಿಯೇ, ತ್ವಂ=ನೀನು, ಪ್ರಥಮಃ=ಸರ್ವ ದೇವೋತ್ತಮನು,(ಆಗಿರುತ್ತಿ) ಅಂಗಿರಾಃ=(ಅಂಗಾನಿ ಅವಯವಾಃ ಅಸ್ಯ ಸಂತಿಎಂಬ ವ್ಯುತ್ಪತ್ತಿಯಿಂದ ಅಂಗಿ=ಶರೀರವು. ಅಲ್ಲಿ ರಸನು ಶ್ರೇಷ್ಠನು ಅಂದರೆ) ಶರೀರದಲ್ಲಿದ್ದು ಪ್ರವರ್ತಕನಾದ ಸರ್ವದೇವೋತ್ತನು. ಋಷಿಃ= (ಋಷ ಗತೌ, ಋಷತಿ ಜಾನಾತೀತಿ ಋಷಿಃ) ಸರ್ವಜ್ಞನೂ ದೇವಃ=ಕ್ರೀಡಾದಿಗುಣವಿಶಿಷ್ಟನು, ಶಿವಃ=ಸುಖಾತ್ಮಕನು, ದೇವಾನಾಂ ಸಖಾ=ದೇವತೆಗಳಿಗೆ ಸಖಿಯೂ, ಅಭವಃ=ಆಗಿರುತ್ತಿ. ಭ್ರಾಜ ದೃಷ್ಟಯಃ=(ಭ್ರಾಜಂತ್ಯಃ=ಪ್ರಕಾಶ ಮಾನಗಳಾದ, ಋಷ್ಟಯಃ= ಆಯುಧವಿಶೇಷಗಳು ಯೇಷಾಂ ಎಂಬವ್ಯುತ್ಪತ್ತಿಯಿಂದ)ಪ್ರಕಾಶ ಮಾನಗಳಾದಆಯುಧವಿಶೇಷಗಳನ್ನು ಧರಿಸಿರುವ ಮರುತಃ=ಹಿಂದಿನ ಮತ್ತು ಈಗ ಇರುವ ವಾಯುಗಳು, ತವ= ನಿನ್ನ,ವ್ರತೇ=ಸಂಬಂಧಿ ವ್ರತಾಚರಣದಿಂದಲೇ ವಿದ್ಮನಾಪಸಃ=(ವಿದ್ಮನಾ= ವಿದ್ಯೆಯಿಂದ ಸಹಿತವಾದ ಅಪಃ=ಕರ್ಮವು ಯೇಷಾಂ ಎಂಬ ವ್ಯುತ್ಪತ್ತಿಯಿಂದ, ವಿದ್ಯೆಗಳಿಂದೊಡಗೂಡಿದ ಕರ್ಮಗಳುಳ್ಳವರಾಗಿ)ಕವಯಃ=ಮಹಾ ವಿಜ್ಞಾನವುಳ್ಳವರಾಗಿತ(ವವ್ರತೇ ವಿದ್ಮನಾಪಸಃ ಎನ್ನುವುದರಿಂದ ಹೇಳಲ್ಪಟ್ಟ ಭಗದ್ವಿಷಯಕವಾದ ಜ್ಞಾನಕರ್ಮಗಳು ಇದ್ದ ಕಾರಣ ಪುನಃ ಜ್ಞಾನಪ್ರಾಪ್ತಿಯು ಹೇಗೆಂದರೆ ಭಗವದ್ವಿಷಯಕವಾಗಿರುವುದರಿಂದ ಅತಿ ಶ್ರೇಷ್ಠವಾಗಿಯೂ ವಿಶೇಷವಾಗಿಯೂ ಇರುವ ಜ್ಞಾನವುಳ್ಳವರು ಎಂದರ್ಥವು.) ಅಜಾಯಂತ=ಆದರು. ॥ ೧ ॥

ಭಾ ॥ ಅಂಗೇ ರಸೋ ಜ್ಞಾನತ ಏವ ಚರ್ಷಿಃ ಸಖಾ ಪ್ರಿಯತ್ವೇನ ದಿವೌಕಸಾಂ ಹರಿಃ । ತವ ವ್ರತೇನೈವ ಸವಿದ್ಯಕರ್ಮಿಣೋ ಮಹಾವಿಜ್ಞಾನಾ ಮರುತೋ ಬಭೂವಿರೇ ॥ ೧ ॥

ಅ ॥ ಶ್ರೀ ಹರಿಯು ಶರೀರದಲ್ಲಿ ಶ್ರೇಷ್ಠನಾಗಿರುವುದರಿಂದ ಅಂಗಿರಾಃ ಎನಿಸುತ್ತಾನೆ. ವಿಶೇಷ ಜ್ಞಾನವಿದ್ದುದರಿಂದಲೇ ಋಷಿಯೆನಿಸುತ್ತಾನೆ. (ಅಂಗಿರಸ ಋಷಿಯಿಂದ ಐಕ್ಯವಿದ್ದ ಪ್ರಯುಕ್ತ ಶ್ರೀಹರಿಯು ಋಷಿಯೆನಿಸಿಕೊಳ್ಳುವುದಲ್ಲ ಎಂಬ ಅಭಿಪ್ರಾಯದಿಂದ ಏವ ಶಬ್ದವು.) ದೇವತೆಗಳಿಗೆ ಪ್ರಿಯನಾಗಿರುವುದರಿಂದ ದೇವತೆಗಳಿಗೆ ಸಖನೆಂದೂ ಹೇಳಿಸಲ್ಪಡುತ್ತಾನೆ. ಅತೀತ ವರ್ತಮಾನ ಕಾಲಿಕ ವಾಯುಗಳು ನಿನ್ನ ನಿಯಮಾನುಸಾರವಾಗಿಯೇ ಸದ್ವಿದ್ಯೆ ಕರ್ಮಗಳುಳ್ಳವರೂ ಮಹಾ ವಿಜ್ಞಾನವುಳ್ಳವರೂ ಆಗಿರುತ್ತಾರೆ ॥ ೧ ॥

ಋ ॥ (೩೫೨) ತ್ವಮ॑ಗ್ನೇ ಪ್ರಥ॒ಮೋ ಅಂಗಿ॑ರಸ್ತಮಃ ಕ॒ವಿರ್ದೇ॒ವಾನಾ॒ಂ ಪರಿ॑ ಭೂಷಸಿ ವ್ರ॒ತಂ । ವಿ॒ಭುರ್ವಿಶ್ವ॑ಸ್ಮೈ॒ ಭುವ॑ನಾಯ॒ ಮೇಧಿ॑ರೋ ದ್ವಿ॒ಮಾ॒ತಾ ಶ॒ಯುಃ ಕ॑ತಿ॒ಧಾ ಚಿ॑ದಾ॒ಯವೇ॥ ॥ ೨ ॥

ಅ ॥ ಅಗ್ನೇ=ಎಲೋ ಶ್ರೀಹರಿಯೇ: ತ್ವಂ=ನೀನು ಪ್ರಥಮಃ = ಸರ್ವೋತ್ತಮನು. ಅಂಗಿರಸ್ತಮಃ=ಅತಿಶಯವಾಗಿ ಅಂಗಗಳಲ್ಲಿ ಶ್ರೇಷ್ಠನು, ಕವಿಃ=ಸರ್ವಜ್ಞನು, ಇಂತಹ ನೀನು, ದೇವಾನಾಂ ವ್ರತಂ=ದೇವತೆಗಳು ಮಾಡತಕ್ಕ ವ್ರತ(ಕರ್ಮ)ವನ್ನು, ಪರಿಭೂಷಸಿ = ಸಫಲವನ್ನಾಗಿ ಮಾಡುತ್ತಿ. ಮತ್ತು ವಿಶ್ವಸ್ಮೈ ಭುವನಾಯ= ಸಮಸ್ತ ಜಗತ್ತಿಗೂ, ವಿಭುಃ=ಸ್ವಾಮಿಯು. ಜಗದ್ವ್ಯಾಪಿಯು. ಮೇಧಿರಃ= (ಭೂಮನಿಂದಾಪ್ರಶಂಸಾಸು ನಿತ್ಯಯೋಗೇಽತಿಶಾಯನೇ! ಸಂಸರ್ಗೇಽಸ್ತಿ ವಿವಕ್ಷಾಯಾಂ ಭವಂತಿ ಮತುಬಾದಯಃ । ಎಂಬ ಪ್ರಮಾಣದಿಂದ ಭೂಮಾದ್ಯರ್ಥಗಳಲ್ಲಿ ಮತುಪ್ ಮೊದಲಾದ ಪ್ರತ್ಯಯ್ಯಗಳು ಬರುತ್ತವೆ, ಎನ್ನುವುದರಿಂದ ಮತುಬರ್ಥದಲ್ಲಿ ಇರನ್ ಪ್ರತ್ಯಯವು) ಅತಿಶಯವಾದ ಪ್ರಜ್ಞೆಯುಳ್ಳವನೆ, ದ್ವಿಮಾತಾ=(ಮಾಇಮಾನೇ)ಜಡಾಜಡ ವಸ್ತುಗಳನ್ನು ತಿಳಿದವನು, ಶಯುಃ=ಕ್ಷೀರಾಬ್ಧಿ ಶಾಯಿಯು. (ಅಗ್ನಿಯಲ್ಲಿ ಆದರೆ) ವಾಡವಾಗ್ನಿಗೆ ಸಮುದ್ರವು ಸ್ಥಾನವಾಗಿರುವುದರಿಂದ) ಸಮುದ್ರದಲ್ಲಿರುವವನು, ಇಂತಹ ನೀನು, ಆಯವೇ=ಪ್ರಜೆಗಳಿಗೆ, ಕತಿಧಾ ಚಿತ್=ಸ್ವಾಮಿಯು ಗುರುವು, ನಿತ್ಯ ಸಖನು, ಪಿತನು, ಇದು ಮೊದಲಾದ ಬಹುಪ್ರಕಾರಗಳಿಂದೊಡಗೂಡಿದವನು (ಆಗಿರುತ್ತಿ) ॥ ೨ ॥

ಭಾ ॥ ವ್ಯಾಪೀಚ ವಿಶ್ವಸ್ಯ ಸುಮೇಧಯಾ ಯುತೋ ಜಡಾಜಡೇ ವೇತ್ತಿ ತಥಾಽಬ್ಧಿಶಾಯಿ । ಕತಿ ಪ್ರಕಾರೋಽಪಿ ಸಹಿ ಪ್ರಜಾಯೈ ಸ್ವಾಮೀ ಗುರುರ್ನಿತ್ಯಸಖಾ ಪಿತಾ ಚ ॥ ೨ ॥

ಅ ॥ ಶ್ರೀಹರಿಯೇ ನೀನು ಸರ್ವ ಜಗತ್ತಿನಲ್ಲಿ ವ್ಯಾಪಿಸಿಕೊಂಡಿರುವವನು. ಒಳ್ಳೇ ಪ್ರಜ್ಞೆಯಿಂದ ಕೂಡಿದವನು, ಜಡ ಅಜಡ ವಸ್ತುಗಳನ್ನು ತಿಳಿದವನು, ಹಾಗೆಯೇ ಕ್ಷೀರಾಬ್ಧಿ ಶಾಯಿಯು, ಅಂತಹ ನೀನು ಪ್ರಜೆಗಳಿಗೆ ಸ್ವಾಮಿಯು. ಗುರುವೂ ನಿತ್ಯ ಸಖನು, ಪಿತನು, ಇದು ಮೊದಲಾದ ಬಹುಪ್ರಕಾರಗಳುಳ್ಳವನೂ ಆಗಿರುತ್ತಿ. ॥ ೨ ॥

ಋ ॥ (೩೫೩) ತ್ವಮಗ್ನೇ ಪ್ರಥಮೋ ಮಾತರಿಶ್ವನ ಆವಿರ್ಭವ ಸುಕ್ರತೂಯಾ ವಿವಸ್ವತೇ । ಅರೇಜೇತಾಂ ರೋದಸೀ ಹೋತೃವೂರ್ಯೇಽಸಘ್ನೋ ಭಾರಮಯಜೋ ಮಹೋ ವಸೋ ॥ ೩ ॥

ಅ ॥ ಅಗ್ನೇ=ಎಲೋ ವಿಷ್ಣುವೇ, ತ್ವಂ=ನೀನು, ವಿವಸ್ವತೇ=ವಿವಿಧ ವಸ್ತುಗಳಲ್ಲಿ ಆವಾಸ ಮಾಡುವ, ಮಾತರಿಶ್ವನೇ=ವಾಯುವಿನ ದೆಶೆಯಿಂದ, ಪ್ರಥಮಃ=ಪ್ರಥಮತಃ ಅತಿಶಯವಾಗಿ ಪ್ರಾದುರ್ಭಾವವನ್ನು ಹೊಂದಿರುವಿ. ಹೇಗೆಂದರೆ ಸುಕ್ರತೂಯಾ=(ಶೋಭನಂ ಕ್ರತುಜ್ಞಾನಂ ಅಸ್ಯ) ಶ್ರೀಹರಿಗೆ ವಾಯುದೇವರಿಗಿಂತ ಒಳ್ಳೇ ಜ್ಞಾನವಿದ್ದ ಪ್ರಯುಕ್ತ. ಹೋತೃವೂರ್ಯೇ=ಪರಮೇಶ್ವರನ ನಿಮಿತ್ತವಾಗಿ ಇತರರಿಗಿಂತ ಶ್ರೇಷ್ಠರಾದ, ಅಥವಾ ಹೋತೈವವೂರ್ಯುಃ ಯಾಭ್ಯಾಂ ಎಂಬುವುದರಿಂದ ಪರಮಾತ್ಮನೇ ಶ್ರೇಷ್ಠನಾಗಿ ಉಳ್ಳ, ಅಥವಾ ಶ್ರೀಹರಿಯು ಪತಿಯಾಗಿರುವುದರಿಂದ ಶ್ರೇಷ್ಠರಾಗಿರುವ, ರೋದಸೀ=ಸ್ವರ್ಗಭೂಮಿಗಳೂ, ಲಕ್ಷ್ಮೀ ಭೂದೇವಿಯರೂ, ಅರೇಜೇತಾಂ (ರಾಜ್ ದೀಪ್ತೌ) ಶೋಭಿಸಿರುವರೋ ಮತ್ತು, ವಸೋ=ಶ್ರೀಹರಿಯೇ, ಹಿ=ಯಾನ ಕಾರಣದಿಂದ ಅಸಘ್ನೋಃ=ಶ್ರೀಹರಿಯನ್ನು ಯಾವ ಪ್ರತಿಭಟರೂ ಸಹಿಸುವುದೇ ಇಲ್ಲವೋ ಆದಕಾರಣ ವಾಯುದೇವರೂ ಬ್ರಹ್ಮದೇವರೂ ಕೂಡ ಅಸಘ್ನಃ=ಎನಿಸುತ್ತಾರೆ. (ಷಹಮರ್ಷಣೇ ಸಘ್ನಃ, ಆ ಮೇಲೆ ನ ಞ ಸಮಾಸವು.) ಅಂತಹ, ಮಹಃ=ಮಹತ್ತತ್ವಾಭಿಮಾನಿಗಳಾದ ವಾಯು ಬ್ರಹ್ಮರಿಗಾಗಿ, ತ್ವಂ=ನೀನು, ಭಾರಂ=ಜಗತ್ಸೃಷ್ಟಿ ರಕ್ಷಣ ಪೋಷಣ ಮೊದಲಾದ ಕಾರ್ಯಗಳನ್ನು, ಅಯಜಃ=ಪ್ರಪ್ರತ್ಯೇಕವಾಗಿ ಕೊಟ್ಟಿರುತ್ತಿ. ॥ ೩ ॥

ಭಾ ॥ (1) ತ್ವಂ ವಿಷ್ಣೋ ಪ್ರಥಮೋ ಮಾತರಿಶ್ವನ ಆವಿರ್ಬಭೂವಾಸ್ಯ ಸುಬೋಧವತ್ತ್ವತ್ । (2) ವಾಯುರ್ವಿವಸ್ವಾನ್ ವಿವಿಧೇಷು ವಾಸಾತ್ (3) ಅಶೋಭೇತಾಂ ಶ್ರೀಶ್ಚ ಭೂಃ ಸರ್ವಹೋತುಃ (4) ವರತ್ವತಃ ತೇ ರದನಾದ್ರೋದಸೀ ತೇ ಸ್ವೈಕಾಹಿದೀಣಾ ದ್ವಿವಿಧಾ ಬಭೂವ । (5)ಸಹಂತೇಽಮುಂ ನೈವ ಕೇಬಿದ್ಯ್ಯಸಘ್ನರ್ವಾಯು ವಿರಿಂಚೋಽಪಿ ಮಹಾಂಶ್ಚ ತಸ್ಮೈ । ವಿಶ್ವಸ್ಯ ಭಾರಂ ಪ್ರತಿದಿಷ್ಟವಾಂಸ್ತ್ವಂ (6) ವಾಸಾಚ್ಚ ಸರ್ವತ್ರ ವಸುರ್ಭವಾನಸಿ ॥ ೩ ॥

ಅ ॥ (1) ಎಲೋ ವಿಷ್ಣುವೇ ನೀನು ವಾಯುವಿಗಿಂತ ಮೊದಲೇ ಅತಿಶಯವಾಗಿ ಪ್ರಾದುರ್ಭಾವವನ್ನು ಹೊಂದಿರುವಿ. (**ತ್ವಂದೇವ ಶಕ್ತ್ಯಾಂ ಗುಣಕರ್ಮಯೋಸ್ತೌ ರೇತ ಸ್ತ್ವಜಾಯಾಂ ಕವಿರಾದಧೇಽಜಃ** ಇತ್ಯಾದಿ ಶಿಷ್ಟ ಪ್ರಯೋಗದಂತೆಯೇ ಇಲ್ಲಿಯೂ ಯುಷ್ಮತ್ ಶಬ್ದವಿದ್ದರೂ ಪ್ರಥಮ ಪುರುಷವು ಕಂಡದೆ. ಆದಕಾರಣ ತ್ವಂ ಎಂಬ ಪ್ರಯೋಗದಿಂದ ಆ ವಿರ್ಬಭೂವಿಥ ಎಂದು ಮಧ್ಯಮ ಪುರುಷವನ್ನು ಪ್ರಯೋಗಿಸುವಲ್ಲಿ ಆವಿರ್ಬಭೂವವೆಂದು ಪ್ರಥಮ ಪುರುಷ ಪ್ರಯೋಗವು ಯುಕ್ತವು. ಅಂತೂ ಛಾಂದಸವು.) (ಏಕೇದರೆ) ಈ ಶ್ರೀ ಹರಿಗೆ ವಾಯುವಿಗಿಂತ ಒಳ್ಳೆ ಜ್ಞಾನವಿದ್ದ ಪ್ರಯುಕ್ತ. ಅಥವಾ ಶ್ರೀ ಹರಿಗೆ ವಾಯುವಿಗಿಂತ ಪೂರ್ಣ ಜ್ಞಾನವು ಪ್ರಾಪ್ತವಾಗಿರುವುದರಿಂದ. (2) (ವಾಯುವಿಗೆ ವಿವಸ್ವಾನ್ ಎಂಬ ಹೆಸರು ಹೇಗೆಂದರೆ.) ವಾಯುವು ವಿವಿಧ ಪದಾರ್ಥಗಳಲ್ಲಿ ಆವಾಸ ಮಾಡಿಕೊಂಡಿರುವುದರಿಂದ ವಿವಸ್ವಾನ್ ಎನಿಸುತ್ತಾನೆ. (3) ಶ್ರೀದೇವಿ ಭೂದೇವಿಯರು ನಿನ್ನಿಂದಲೇ ಶೋಭೆಯನ್ನು ಹೊಂದಿರುವರು (ಏಜೃ ರೇಜೃ ಭ್ರೇಜೃ ಭ್ರಾಜೃ ದೀಪ್ತೌ ಎಂಬ ಧಾತು ವ್ಯಾಖ್ಯಾನದಿಂದ ರೇಜೃ ಧಾತುವು ಇಲ್ಲಿ ಶೋಭಾರ್ಥಕವು. ಅಥವಾ ರಾಜೃ ದೀಪ್ತೌ ಎಂಬ ಧಾತು ವ್ಯಾಖ್ಯಾನದಿಂದ ಇದು ರಾಜೃ ಧಾತುವಿನ ರೂಪವು.) (ಶ್ರೀ ಭೂಮಿಯರು ಯಾವ ನಿಮಿತ್ತದಿಂದ

ಸೋತೃಪೂರ್ಯ ಶಬ್ದವಾಚ್ಯರು ಎಂದರೆ) ಸರ್ವ ಹೋತನಾದ ಶ್ರೀ ಪರಮಾತ್ಮನ ನಿಮಿತ್ತ ಇವರಿಗೆ ಸರ್ವೋ ತ್ಕೃಷ್ಟತ್ವವಿದ್ದ ಪ್ರಯುಕ್ತ ಆ ಶ್ರೀ ಭೂಮಿಯರು ಹೋತೃಪೂರ್ಯೇ ಎನಿಸುತ್ತಾರೆ.) (ಇದರಿಂದ ಹೋತ್ರಾ= ಶ್ರೀ ವಿಷ್ಣುವಿನ ಪ್ರಸಾದದಿಂದ, ಪೂರ್ಯೇ=(ವೃಜ ಸಂಭಕ್ತೌ) ಶ್ರೇಷ್ಠರು, ಎಂದುಕ್ತವಾಯ್ತು.) ಅಥವಾ ಸರ್ವ ಹೋತನಾದ ಶ್ರೀ ಹರಿಯೊಬ್ಬನಿಗೇನೇ ಶ್ರೀ ಭೂಮಿಯರಿಗಿಂತ ಶ್ರೇಷ್ಠತ್ವವಿದ್ದ ಪ್ರಯುಕ್ತ (ಆ ಶ್ರೀ ಭೂಮಿಯರು ಹೋತೃಪೂರ್ಯೇ ಎನಿಸುತ್ತಾರೆ. ಹೋತ್ರೈವ ಪೂರ್ಯಃ ಶ್ರೇಷ್ಠಃ ಯಾಭ್ಯಾಂ ಎಂದು ವಿಗ್ರಹವು.) (ಅಥವಾ ನಿಮಿತ್ತ ಸಪ್ತಮಿಯು ಇದು.) ಹೋತುಃ ಊರ್ಯಂ ವರತ್ವಂ ಪತಿತ್ವಂ. ತಸ್ಮಾತ್ ತಥಾ ಆ ಶ್ರೀ ಭೂಮಿಯರು ಪರಮೇಶ್ವರನೆಂಬ ಪತಿಯಿಂದ ಕೂಡಿರುವ ಪ್ರಯುಕ್ತವೇ ಶೋಭಿಸಿದರು.) ಅಪ್ರಯೋಜಕ ಪತಿಯಾಗಿದ್ದರೆ ಸರ್ವಥಾ ಶೋಭೆಯು ಬರುತ್ತಿರಲಿಲ್ಲ) (4) (ಆ ಶ್ರೀ ಭೂಮಿಯರು ರೋದಸೀ ಎಂದು ಹೇಗೆ ಅನ್ನಿಸಿಕೊಳ್ಳುತ್ತಾರೆ ಎಂದರೆ) ಆ ಶ್ರೀ ಭೂಮಿಯರು (ರದನಾತ್ ರದ ವಿಲೇಖನೇ) ಶೀಳಿಸುವುದರಿಂದ ರೋದಸೀ ಎನಿಸುತ್ತಾರೆ. (ಅದನ್ನೇ ವಿವರಿಸುತ್ತಾರೆ,) ಆ ಒಂದು ಮೂಲ ಪ್ರಕೃತಿಯು ಶ್ರೀಃ ಭೂಃ ಎಂದು ವಿಭಕ್ತವಾಗಿ ಎರಡು ಪ್ರಕಾರವಾಯ್ತು. (5) ಯಾವ ಕಾರಣದಿಂದ ಈ ಶ್ರೀ ಹರಿಯನ್ನು ಯಾವ ಪ್ರತಿಭಟರೂ ಸಹಿಸುವುದೇ ಇಲ್ಲವೋ ಆದ ಕಾರಣ ವಾಯು ದೇವರೂ ಬ್ರಹ್ಮದೇವರೂ ಕೂಡ ಅಸಘ್ನಃ ಎನಿಸುತ್ತಾರೆ. (ಸಹ್ಯತೇ ಇತಿ ಸಘ್ನಃ, ನ ಸಘ್ನಃ ಅಸಘ್ನಃ, (ಷಹ ಮರ್ಷಣೇ. ನಞ ಸಮಾಸವು.) ಈ ವಾಯು ಬ್ರಹ್ಮರು ಶ್ರೇಷ್ಠರು. ಅಂತಹ ವಾಯು ಬ್ರಹ್ಮರಿಗೆ ಸಮಸ್ತ ಜಗದ್ರೂಪ ಭಾರವನ್ನು ಪ್ರಪ್ರತ್ಯೇಕವಾಗಿ ನೀನು ಕೊಟ್ಟಿರುತ್ತಿ. (ಅಂದರೆ ಸಮಸ್ತ ಜಗತ್ತಿನ ಸೃಷ್ಟಿ ರಕ್ಷಣ ಪೋಷಣ ಮೊದಲಾದ ಕಾರ್ಯಗಳನ್ನು ಕೊಟ್ಟಿರುತ್ತಿ.) (6) (ವಸುಃ ಎಂದು ಹೇಗೆ ಅನ್ನಿಸಿಕೊಳ್ಳುವುದೆಂದರೆ) (ಸರ್ವತ್ರ ವಸತಿ) ನೀನು ಸಮಸ್ತ ಜಗತ್ತಿನಲ್ಲಿ ಆವಾಸ ಮಾಡುವುದರಿಂದಲೂ (ವ್ಯಾಪ್ತನಾಗಿದ್ದುದರಿಂದಲೂ) ಅಥವಾ ಸರ್ವಸ್ಮಿನ್ ವಸತಿ=ಸಮಸ್ತ ಜಗತ್ತು ಶ್ರೀ ಹರಿಯ ಅಧೀನವಾಗಿಯೇ ಆವಾಸ ಮಾಡುವುದರಿಂದ ವಸುಃ ಎನಿಸುತ್ತಿ. ಭವಾನ್ ಎನ್ನುವುದು ವಸೋ ಎನ್ನುವ ಸಂಬುದ್ಧಿ ವ್ಯಾಖ್ಯಾನವು ॥ ೩ ॥

೨೮ (೩೫೪) ತ್ವಮ॑ಗ್ನೇ ಮ॒ನವೇ॒ ದ್ಯಾಮ॑ವಾಶಯಃ ಪುರೂ॒ರವ॑ಸೇ ಸು॒ಕೃತೇ॑

ಸು॒ಕೃತ್ತ॑ರಃ। ಶ್ವಾ॒ತ್ರೇಣ॒ ಯತ್ಪಿ॒ತ್ರೋರ್ಮುಚ್ಯ॑ಸೇ॒ ಪರ್ಯಾ॒ತ್ವಾ

ಪೂರ್ವ॑ಮನಯ॒ನ್ನಾಪ॑ರಂ॒ ಪುನ॑ಃ ॥ ೪ ॥

ಅ ॥ ಅಗ್ನೇ=ಎಲೋ ಶ್ರೀಹರಿಯೇ ಸುಕೃತ್ತರಃ=(ಶೋಭನಾನಿ ಕರೋತೀತಿ ಸುಕೃತ್. ಅತಿಶಯೇನ ಸುಕೃತ್ ಸುಕೃತ್ತರಃ=)ಅತಿಶಯವಾಗಿ ಸತ್ಕರ್ಮಗಳನ್ನೆ ಮಾಡಿಕೊಂಡಿರುವ, ತ್ವಂ=ನೀನು, ಸುಕೃತೇ ಸತ್ಕರ್ಮಗಳನ್ನೇ ಮಾಡುವ ಪುರೂರವಸೇ= (ರು ಶಬ್ದೇ) ಪುರುಃ ರವಃ ಅಸ್ಯ ಎಂಬ ವ್ಯುತ್ಪತ್ತಿಯಿಂದ) ಒಳ್ಳೇ ಶಬ್ದವುಳ್ಳ, (ವೇದ ಪ್ರತಿಪಾದ್ಯನಾದ ಮನವೇ=ಮನು ಅವಭೋಧನೇ) ವಿಶೇಷ ಜ್ಞಾನವುಳ್ಳ ವಾಯುವಿಗೋಸ್ಕರ, ಧ್ಯಾಂ=ಸ್ವರ್ಗಾದಿಗಳಸ್ವಾಮಿತ್ವವನ್ನು ಅವಾಶಯಃ=ಕೊಟ್ಟಿರುತ್ತಿ.ಅಥವಾ ದ್ಯಾಂ=ಜ್ಞಾನರೂಪವಾದ ಸ್ವರ್ಗವನ್ನು ಕೊಟ್ಟಿರುತ್ತಿ. ಅಥವಾ ದ್ಯುದೇವತೆಯಾದ ಭಾರತಿಯನ್ನು ಪ್ರಿಯೆಳಾದ ಭಾರ್ಯೆಯನ್ನಾಗಿ ಕೊಟ್ಟಿರುತ್ತಿ. (ಯದ್ಯಪಿ ವಾಶೃ ಶಬ್ದೇ. ಆದರ ನಿಜಂತ ರೂಪವು) ಅವಾಶಯಃ ಜನರಿಂದ ಶಬ್ದ ಮಾಡಿಸಿದಿ. ಎಂಬರ್ಥವಾಗುತ್ತದೆ.ಆದಾಗ್ಯೂ ದ್ಯೌಃಮನು ಶಬ್ದಿತವಾಯು ಸಂಬಂಧಿನೀ.ದ್ಯೌಃಅಂದರೆ ಮನು ಎನಿಸಿದವಾಯುವಿನ ಹೆಂಡತಿಯು.ಎಂದು ಸಮಸ್ತ ಜನರೂ ಹೇಗೆ ಹೇಳಿಯಾರೋ,ಹಾಗೆ ಮಾಡಿರುತ್ತಿ ಎಂದರ್ಥವು. ಕೊಡುವುದರಿಂದ ಪ್ರಾದಾಃ=ಕೊಟ್ಟಿರುತ್ತಿ ಎಂದು ಫಲಿತಾರ್ಥವು.) ಅಥವಾ ಇತರ ಪ್ರಸಿದ್ಧವಾದ ಸ್ವಾಯಂ ಭುವಾದಿ ಮನುವಿಗೋಸ್ಕರ ಸ್ವರ್ಗವನ್ನು ಹೇಗೆ ಕೊಟ್ಟಿರುತ್ತಿಯೋ ಹಾಗೆಯೇಪ್ರಸಿದ್ಧನಾದಬುಧ ಪುತ್ರನಾದ ಪುರೂರವ

ರಾಜನಿಗೆ ಸ್ವರ್ಗವನ್ನು ಕೊಟ್ಟಿರುತ್ತಿ. ಯತ್=ಯಾವ ಕಾರಣದಿಂದ ಶ್ವಾತ್ರೇಣ= (ಶ್ವಸ ಪ್ರಾಣನೇ. ಶ್ವಸನಾತ್ ಚೇಷ್ಟಕತ್ವಾತ್ ಶ್ವಾ=ವಾಯುಃ) (ಶ್ವಾನಂ ತ್ರಾಯತೇ ಇತಿ ಶ್ವಾತ್ರಃ) ವಾಯುವನ್ನು ರಕ್ಷಿಸುವ ಪ್ರಯುಕ್ತ ಪಿತ್ರೋಃ=ಜಗತ್ತಿಗೆ ಮಾತಾ ಪಿತೃಗಳಾದ, ಪ್ರಕೃತಿಯಿಂದಲೂ ಚತುರ್ಮುಖನಿಂದಲೂ, ಪರಿ ಮುಚ್ಯಸೇ=ನಿತ್ಯ ಮುಕ್ತನಾಗಿರುತ್ತಿ. (ಮುಖ್ಯಪ್ರಾಣನನ್ನು ರಕ್ಷಿಸುವವನಿಗೆ ಪ್ರಕೃತ್ಯಾದಿ ಬಂಧವು ಕೂಡಲಾರದಷ್ಟೆ.) ಆ=ಆ ಕಾರಣದಿಂದಲೇ, ತ್ವಾ=ನಿನ್ನನ್ನು, ಪೂರ್ವಂ= ಪೂರ್ವಿಕರಾದ ಸಜ್ಜನರು, ಆ =ಚೆನ್ನಾಗಿ, ಮಾಹಾತ್ಮ್ಯ ಜ್ಞಾನ ಪೂರ್ವಕ ಸುದೃಢ ಸ್ನೇಹದಿಂದ, ಅನಯನ್= ಉಪದೇಶ ಮಾಡಿ ಶಿಷ್ಯರ ಸಮೀಪಕ್ಕೆ ಒಯ್ದರು. ಮತ್ತು ಅಪರಂ ಚ= ಇತರರೂ ಕೂಡ, (ಪೂರ್ವಿಕರು ಉಪದೇಶಿಸುದುದನ್ನೇ.) ಆ ಅನಯನ್=ನಿನ್ನ ಕುರಿತು ಚೆನ್ನಾಗಿ ಉಪದೇಶಿಸಿದರು ॥ ೪ ॥

ಭಾ ॥ (1) ವಿಶಿಷ್ಟಬೋಧಾನ್ಮನವೇ ವಾಯುವೇ ತ್ವಂ ಪ್ರಾದಾದ್ದಿವಂ (2) ಜ್ಞಾನರೂಪಾಂ (3) ಪ್ರಿಯಾಂಚ ॥ (4) ಯಥಾ ತದೀಯೇತಿ ತು ವಾಶನಂ ಸ್ಯಾಲ್ಲೋಕಸ್ಯ ಸರ್ವಸ್ಯ ತಥೈವ ದೇವ ॥ (5) ಪುರೂರವಾ ವಾಯುರೇವೋರುಶಬ್ದಾದ (6) ನ್ಯಸ್ಮೈ ವಾ ಸುಕೃತೇ ಸುಕೃತ್ತರಃ । (7) ಶ್ವಾವೈ ವಾಯುಃ ಶ್ವಸನಾತ್ತ್ರಾಣತೋಽಸ್ಯ ನಿತ್ಯಂ ಮುಕ್ತಃ ಪ್ರಕೃತೇಃ ಪೂರುಷಾಚ್ಚ । (8) ತೇನೈವ ತ್ವಾಮಾನಯನ್ ಪೂರ್ವ ಸಂತೋ ನೀತಂ ಪುನಶ್ಚಾಪ್ಯಪರೇ ಸುಭಕ್ತ್ಯಾ ॥ ೪ ॥

ಅ ॥ (1) (ವಾಯುದೇವರಿಗೆ ಮನು ಎಂಬ ಹೆಸರು ಹೇಗೆಂದರೆ.) ವಾಯುದೇವರಿಗೆ ವಿಶೇಷ ಜ್ಞಾನ ವಿದ್ದ ಪ್ರಯುಕ್ತ ಅವರು ಮನು ಎನಿಸುತ್ತಾರೆ. (ಮನು ಎನ್ನುವುದು ಮನು ಅವಬೋಧನೇ ಎನ್ನುವುದರ ರೂಪವು. ಜ್ಞಾನವು ಸಮಸ್ತ ಪ್ರಾಣಿಗಳಿಗೂ ಇದ್ದುದೇ. ಆದಾಗ್ಯೂ "ಮುಖ್ಯಾಮುಖ್ಯಯೋಃ ಮುಖ್ಯೇ ಕಾರ್ಯಸಂಪ್ರತ್ಯಯಃ" ಎನ್ನುವುದರಿಂದ ವಿಶೇಷ ಜ್ಞಾನವನ್ನು ಇಟ್ಟುಕೊಳ್ಳಬೇಕು.) ಅಂತಹ ವಾಯುವಿ ಗೋಸ್ಕರ ನೀನು ಸ್ವರ್ಗಾಧಿಪತ್ಯವನ್ನು ಕೊಟ್ಟಿರುತ್ತಿ. (2) (ಸ್ವರ್ಗಾದ್ಯಾಧಿಪತ್ಯವು ಅನಿತ್ಯವಾದ ಕಾರಣ ಅರ್ಥಾಂತರವನ್ನು ಹೇಳುತ್ತಾರೆ.) ಅಥವಾ ಜ್ಞಾನರೂಪವಾದ ಪ್ರಕಾರವನ್ನು ಕೊಟ್ಟಿರುತ್ತಿ (3) (ವಾಯು ದೇವರಿಗೆ ಸಂಸಾರದಲ್ಲಿಯೂ ಮೋಕ್ಷದಲ್ಲಿಯೂ ಪತ್ನಿಯು ನಿಯತಳೇ ಎಂಬ ಅಭಿಪ್ರಾಯದಿಂದ ವ್ಯಾಖ್ಯಾನ ಮಾಡುತ್ತಾರೆ.) ಸ್ವರ್ಗಲೋಕಕ್ಕೆ ಅಭಿಮಾನಿನಿಯಾದ ಭಾರತೀ ದೇವಿಯನ್ನು ಭಾರ್ಯಳನ್ನಾಗಿ ಕೊಟ್ಟಿರುತ್ತಿ (4) (ಅವಾಶಯಃ ಎನ್ನುವುದಕ್ಕೆ ಪ್ರಾದಾಃ= ಕೊಟ್ಟಿರುತ್ತಿ ಎಂಬ ಅರ್ಥವು ಹೇಗೆ ಆಗುವುದೆಂದರೆ) (ಮನು ಸಂಬಂಧಿಯಾದ ಸ್ವರ್ಗವನ್ನು ಜನರಿಂದ ಶಬ್ದ ಮಾಡಿಸಿದಿ. ಅಂದರೆ) ಎಲೋ ಶ್ರೀ ಹರಿಯೇ ಸ್ವರ್ಗವು ಮನು ಎನಿಸಿದ ವಾಯುವಿನ ಸಂಬಂಧಿಯು ಎಂದು ಸಮಸ್ತ ಜನರಿಗೆ ಶಬ್ದೋಚ್ಚಾರಣಾದಿಗಳು ಹೇಗೆ ಆಗುವವೋ, ಹಾಗೆಯೇ ಮಾಡಿರುತ್ತಿ.) (ಸಮಸ್ತವೂ ಭಗವತ್ಸಂಬಂಧಿಯೇ ಆಗಿರುವುದರಿಂದ ವಾಯುವಿಗೆ ಸ್ವರ್ಗಾಧಿಪತ್ಯ ವನ್ನು ಕೊಡದಿದ್ದರೆ ವಾಯು ಸಂಬಂಧಿತ್ವವೇ ಕೂಡದಿರುವ ಪ್ರಯುಕ್ತ ಸ್ವರ್ಗವು ವಾಯು ಸಂಬಂಧಿಯು ಎಂಬ ವ್ಯವಹಾರವೇ ಕೂಡದೇ ಹೋಗುವುದು.) (5) (ಪುರೂರವಸೇ ಎನ್ನುವುದನ್ನು ಮನು ಎನಿಸಿದ ವಾಯು ವಿಗೆ ವಿಶೇಷಣವಾಗಿ ವ್ಯಾಖ್ಯಾನ ಮಾಡುತ್ತಾರೆ.) ಉತ್ಕೃಷ್ಟವಾದ ವೇದಾದಿ ಶಬ್ದಗಳಿಂದ ವಾಚ್ಯನಾದುದರಿಂದ ವಾಯುವೇ ಪುರೂರವಾಃ=(ಪುರುಃ ರವಃಯಸ್ಯ ಎಂಬ ವ್ಯುತ್ಪತ್ತಿಯಿಂದ) ಎನಿಸುತ್ತಾನೆ (6) (ಮನವೇ ಪುರೂರ ವಸೇ ಎಂಬುದನ್ನು ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಇತರರಾದ ಪ್ರಸಿದ್ಧರಾದ ಸ್ವಾಯಂ ಭುವ ಮೊದಲಾದ ಮನುವಿಗೋಸ್ಕರ ಸ್ವರ್ಗಾಧಿಪತ್ಯವನ್ನು ಹೇಗೆ? ಕೊಟ್ಟಿರುತ್ತಿಯೋ, ಹಾಗೆಯೇ ಪ್ರಸಿದ್ಧ ನಾದ ಬುಧ ಪುತ್ರನಾದ ಪುರೂರವ ರಾಜನಿಗೂ ಒಳ್ಳೇ ಸತ್ಕರ್ಮಗಳನ್ನು ಮಾಡತಕ್ಕ ನೀನು ಕೊಟ್ಟಿರುತ್ತಿ. (7) ಶ್ವಾ=ವಾಯುವು ಅಥಾತಃ ಶೌವ ಉದ್ಗೀಥಃ ಎಂಬ ಬಾಷ್ಯದಲ್ಲಿ ವಾಯುವಿಗೆ ಶ್ವರೂಪವು ಪ್ರಸಿದ್ಧ

ವಾಗಿದೆ) (ಶ್ವಸ ಪ್ರಾಣನೇ.) ಶ್ವಸನಾತ್=ಚೇಷ್ಟಕನಾಗಿರುವುದರಿಂದಲೂ ಶ್ವಾ=ವಾಯುವು. (ಎಂದು ಆಯೌಗಿಕಾರ್ಥವು) ಶ್ವ ಶಬ್ದಾರ್ಥಭೂತನಾದ ವಾಯುವನ್ನು ರಕ್ಷಿಸುವುದರಿಂದ (ಶ್ವಾನಂ ತ್ರಾಯತೇ ಇತಿ ಶ್ವಾತ್ರಃ, ಎಂಬ ವ್ಯುತ್ಪತ್ತಿಯಿಂದ) ಪ್ರಕೃತಿಯಿಂದಲೂ ಚತುರ್ಮುಖನಿಂದಲೂ, ನಿತ್ಯದಲ್ಲಿಯೂ ಮುಕ್ತನಾಗಿರುತ್ತಿ. (ವಾಯುವನ್ನೂ, ರಕ್ಷಿಸುವವನಿಗೆ ಪ್ರಕೃತ್ಯಾದಿ ಬಂಧವು ಕೂಡಲಾರದಷ್ಟೆ) (8) ಆ ಕಾರಣದಿಂದಲೇ ಪ್ರಾಚೀನ ಸಜ್ಜನರು ನಿನ್ನನ್ನು ಒಳ್ಳೇ ಭಕ್ತಿಯಿಂದ ಶಿಷ್ಯಾದಿಗಳಲ್ಲಿ ಉಪದೇಶಿಸಿದರು. ಮುಂಚಿನವರು ಉಪದೇಶಿಸಿರುವುದನ್ನೇ ಈಗಿನವರೂ ಕೂಡ ತಮ್ಮ ಶಿಷ್ಯಾದಿಗಳಿಗೆ ಉಪದೇಶಿಸುತ್ತಿರುವರು. ॥ ೬ ॥

ಋ ॥ (೩೫೫) ತ್ವಮ॒ಗ್ನೆ ವೃ॒ಷ॒ಭಃ ಪು॑ಷ್ಟಿ॒ವರ್ಧ॑ನ॒ ಉದ್ಯ॑ತಸ್ರುಚೇ ಭವಸಿ ಶ್ರ॒ವಾಯ್ಯಃ॑। ಯ ಆಹು॑ತಿಂ॒ ಪರಿ॒ವೇದಾ॒ ವಷ॑ಟ್ಕೃತಿ॒ಮೇಕಾ॑ಯು॒ರಗ್ರೇ॒ ವಿಶ॑ ಆ॒ವಿವಾ॑ಸಸಿ ॥ ೫ ॥ ೩೨ ॥

ಅ ॥ ಅಗ್ನೇ=ಎಲೋ ಶ್ರೀಹರಿಯೇ, ಯಃ=ಯಾವ ಯಜಮಾನನು, ಆಹುತಿಂ=(ಆಹೂಯತೇ ಇತಿ ಆಹುತಿಃ ತಂ) ಕರೆಯಲ್ಪಡುವ, ವಷಟ್ಕೃತಿಂ=(ವರ್ತಂತೇ ಷಟ್ ಸಮಗ್ರೈಶ್ವರ್ಯಾದಯಃ ಗುಣಾಃಯಸ್ಮಿನ್ ಯಾರಲ್ಲಿ ಪೂರ್ಣ ಐಶ್ವರ್ಯಾದಿ ಗುಣಗಳು ಇವೆಯೋ ಆತನು ವಷಟ್ ಎನಿಸುತ್ತಾನೆ) (ವಷಡಿತಿಕ್ರಿಯತೇ ಆಕ್ರಿಯತೇ.) ವಷಟ್ ಎಂದು ಕರೆಯಲ್ಪಡುವ, ನಿನ್ನನ್ನು, ಪರಿ ವೇದ=ಚೆನ್ನಾಗಿ ತಿಳಿದಿರುವನೋ, ಮತ್ತು ನೀನು, ಅಗ್ರೇ=ಅನಾದಿ ಕಾಲವನ್ನಾರಂಭಿಸಿಯೇ ವಿಶಃ=ಪ್ರಜೆಗಳನ್ನು, ಆ. ವಾಸಸಿ (ವಸ ಅರ್ಚಾಯಾಂ. ತಥಾಪಿ ಇಲ್ಲಿ ವಸ ಪ್ರವೇಶೇ) ಸುತ್ತಲೂ ವಿಶೇಷವಾಗಿ ಆವಾಸ ಮಾಡುತ್ತಿಯೋ, (ಅಂದರೆ ಜನರ ಸಮುದಾಯದಲ್ಲಿ ಪ್ರವೇಶಿಸಿಕೊಂಡಿರುತ್ತಿಯೋ,) ತ್ವಂ=ಅಂತಹ ನೀನು, ವೃಷಭಃ=ಭಕ್ತರಿಗೆ ಅಭೀಷ್ಟವನ್ನು ಸೇಚಿಸುವವನು, ಪುಷ್ಟಿವರ್ಧನಃ=ಭಕ್ತರಿಗೆ ಪುಷ್ಟಿಯನ್ನು ಅಭಿವೃದ್ಧೀಕರಿಸುವವನು, ಏಕಾಯುಃ=ಮುಖ್ಯವಾದ ನಿತ್ಯವಾದ ಆಯುಷ್ಯವುಳ್ಳವನು, ಉದ್ಯತ ಸ್ರುಚೇ=ಹೋಮಕ್ಕೋಸ್ಕರ ಸನ್ನದ್ಧವಾದ ಸ್ರುಕ್ ಉಳ್ಳ ಯಜಮಾನನಿಂದ ಶ್ರವಾಯ್ಯಃ ನಿತ್ಯದಲ್ಲಿಯೂ ಶ್ರೋತವ್ಯನೂ ಆಗಿರುತ್ತಿ ॥ ೫ ॥

ಭಾ ॥ (1) ಶ್ರೋತವ್ಯಸ್ತ್ವಂ ಯಜಮಾನೇನ ನಿತ್ಯಂ ನಿತ್ಯಾಯುರಗ್ರೇ ಜಪತಾ ಪ್ರವಿಷ್ಟಃ । (2) ಐಶ್ವರ್ಯಾದ್ಯಾಃ ಷಡ್ ಗುಣಾ ನಿತ್ಯವೃತ್ತಾ ವಷಟ್‌ಕಾರ ಸ್ಯಾರ್ಥಃ ಇತ್ಯಾಹ ವೇದಃ । ॥ ೫ ॥ ೩೨ ॥

ಅ ॥ ಎಲೋ ಶ್ರೀಹರಿಯೇ ನೀನು ನಿತ್ಯದಲ್ಲಿಯೂ ಯಜಮಾನನಿಂದ ಶ್ರವಣಾರ್ಹನು ನಿತ್ಯವಾದ ಆಯುಷ್ಯವುಳ್ಳವನು. ಅನಾದಿಯಿಂದಲೇ ಜನರ ಗುಂಪಿನಲ್ಲಿ ಪ್ರವೇಶಿಸಿಕೊಂಡಿರುತ್ತಿ. (ಯದ್ಯಪಿ ವಸ ಅಚಾಯಾಂ ಎಂದು ಧಾತು ಪಾಠವು. ಆದಾಗ್ಯೂ ಶ್ರೀ ವಿಷ್ಣುವು ಪ್ರಜೆಗಳನ್ನು ಪೂಜಿಸುತ್ತಾನೆನ್ನುವುದು ಕೂಡದಿರ ವುದರಿಂದ ಇಲ್ಲಿ ಪ್ರವೇಶಾರ್ಥಕವೆಂದು ತಿಳಿಯಬೇಕು.)(2)(ಶ್ರೀ ಹರಿಯು ವಷಟ್ ಕೃತಿಯೆಂದು ಹೇಗೆ ಅನ್ನಿಸುವನೆಂದರೆ "ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ। ಜ್ಞಾನ ವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ"॥ಎಂದು ಹೇಳಿದ ಐಶ್ವರ್ಯ ಮೊದಲಾದ ಆರು ಗುಣಗಳು ಯಾರಲ್ಲಿ ನಿತ್ಯದಲ್ಲಿಯೂ ಪೂರ್ಣಗಳಾಗಿ ಇರುತ್ತವೋ, (ವರ್ತಂತೇ ಷಟ್ ಯಸ್ಮಿನ್ ವಷಟ್ ಎಂದು ವಿಗ್ರಹವು) ವಷಡಿತಿ ಆಕ್ರಿಯತೇ ಇತಿ ವಷಟ್ ಕೃತಿಃ। ವಷಟ್ಕೃತಿರೇವ ವಷಟ್ಕಾರಃ, ವಷಟ್ ಎಂದು ಕರೆಯಲ್ಪಡುವವನು ಶ್ರೀ ವಿಷ್ಣುವು ವಷಟ್‌ಕಾರ ಶಬ್ದಕ್ಕೆ

ಷಡ್ಗುಣ ಪರಿಪೂರ್ಣನಾದ ಶ್ರೀ ವಿಷ್ಣುವು ಎಂದರ್ಥವು ಎಂದು ವೇದವು ಹೇಳುತ್ತದೆ; ಎಂದು ಹೇಳಿದ ಅರ್ಥದಲ್ಲಿ ವೇದ ವಾಕ್ಯಾಂತರದ ಸಮ್ಮತಿಯನ್ನು ಹೇಳಿದಂತೆ ಆಯ್ತು. ॥ ೫ ॥ ೭ ॥

ಋ ॥ (೩೫೬) ತ್ವಮಗ್ನೇ ವೃಜಿನ ವರ್ತನಿಂ ನರಂ ಸಕ್ಮನ್ಪಿಪರ್ಷಿ ವಿದಥೇ
ವಿಚರ್ಷಣೇ । ಯಃ ಶೂರಸಾತಾ ಪರಿತಕ್ಮ್ಯೇ ಧನೇ ದಭ್ರೇಭಿಶ್ಚಿತ್ಸ
ಮೃತಾ ಹಂಸಿ ಭೂಯಸಃ ॥ ೬ ॥

ಅ ॥ ವಿಚರ್ಷಣೇ=ನಾನಾ ವಿಧರಾದ ದೇವತೆಗಳೇ ಮೊದಲಾದ ಪ್ರಜೆಗಳಿಗೆ ಅಧಿಪತಿಯಾದ, ಅಗ್ನೇ = ಎಲೋ ಶ್ರೀಹರಿಯೇ, ಯಃತ್ವಂ=ಯಾವ ನೀನು, ಶೂರಸಾತಾ=(ಷೈಕ್ಷಯೇ, ಧಾತೂನಾಂ ಅನೇಕಾರ್ಥತ್ವಾತ್ ಪ್ರಕೃತದಲ್ಲಿ ಲಾಭಾರ್ಥಕವು.) ಶೂರರಿಗೆ ಲಾಭರೂಪವಾದ ಯುದ್ಧವು, ಪರಿತಕ್ಮ್ಯೇ=(ಪರಿಪೂರ್ವಾತ್ ತಕ ಗತೌ ಮ್ಯ ಪ್ರತ್ಯಯವು.) ಹೊಂದಲ್ಪಡುತ್ತಿರಲು, ಧನೇ=ದ್ರವ್ಯ ನಿಮಿತ್ತವಾಗಿ, (ಅಂದರೆ--ಹೊಂದಲ್ಪಡತಕ್ಕ ದ್ರವ್ಯ ನಿಮಿತ್ತವಾದ ಯುದ್ಧದಲ್ಲಿ) (ಯದಿ=ಯಾವ ಪಕ್ಷದಲ್ಲಿ,) (ಅತ್ಯಲ್ಪ ಯೋಧ್ಧ್ಯಗಳೂ ಕೂಡ ನಿನ್ನನ್ನು) ಸಮೃತಾಃ=ಚೆನ್ನಾಗಿ ಶರಣು ಹೊಂದುತ್ತಾರೋ (ಹಾಗಾದರೆ) ದಭ್ರೇಭಿಶ್ಚಿತ್=(ಶಕ್ತಿಯಿಂದಲೂ ಸಂಖ್ಯೆಯಿಂದಲೂ) ಅಲ್ಪರಾದವರಿಂದಲೂ ಕೂಡ ಭೂಯಸಃ=ಶಕ್ತಿಯಿಂದಲೂ ಸಂಖ್ಯೆಯಿಂದಲೂ ಹೆಚ್ಚಾದ ಪ್ರತಿಭಟರನ್ನು ಕೂಡ, ಹಂಸಿ=ಪ್ರಯತ್ನವಿಲ್ಲದೇನೇ ಅನಾಯಾಸದಿಂದಲೇ, ಹಂಸಿ ಸಂಹರಿಸುತ್ತೀಯೋ, ಅಂತಹ ನೀನು ವೃಜಿನ ವರ್ತನಿಂ=(ವೃಜಿನಂ=ಪಾಪವು ವರ್ತನಿಃ=ಪ್ರವೃತ್ತಿಯು ಪ್ರಯತ್ನವು ಯಸ್ಯ) ಪಾಪರೂಪ ಪ್ರಯತ್ನವುಳ್ಳ, ಅಥವಾ ವೃಜಿನಂ=ಪಾಪವು, ವರ್ತನಿಃ=ಮಾರ್ಗವು ನರಕಾದಿಗಳಿಗೆ ಸಾಧನವು,ಯಸ್ಯ ಎಂಬ ವ್ಯುತ್ಪತ್ತಿಯಿಂದ ನರಕಾದಿಗಳಿಗೆ ಸಾಧನವಾದ ಪಾಪಾಚಾರವುಳ್ಳವನಾದಾಗ್ಯೂ, ನರಂ=ಪುರುಷನನ್ನು, ಸಕ್ಮನ್=(ದ ಕಾರಕ್ಕೆ ಕ ಕಾರವು) ತಮ್ಮ ಮಂದಿರದಲ್ಲಿ ಅಂದರೆ ಅವನ ಮಂದಿರದಲ್ಲಿ ಅಥವಾ ನಿನ್ನದ್ದಾದ ಸ್ವರ್ಗದಲ್ಲಿ ವೈಕುಂಠಾದಿಗಳಲ್ಲಿ, ವಿದಥೇ=(ವಿದಥ ಇತಿ ಯಜ್ಞನಾಮ) ಸದ್ವಿದ್ಯೆಯೆಂಬ ಯಜ್ಞವು (ಪಾಪಾಚಾರವುಳ್ಳವನಿಂದಲೂ ವಿಷ್ಣುವಿನ ಪ್ರೀತಿಗಾಗಿ ಮಾಡಲ್ಪಡುತ್ತಿರಲು,) (ಅಥವಾ ವಿದಧಾತುವಿಗೆ ಭಾವಾರ್ಥದಲ್ಲಿ ಅಥಕ್ ಪ್ರತ್ಯಯವು) ಸದ್ವಿದ್ಯೆಯೇ ಪಾಪಿಷ್ಠನಿಂದಲೂ ಅಭ್ಯಾಸ ಮಾಡಲ್ಪಡುತ್ತಿರಲು, ಪಿಪರ್ಷಿ=(ಪೃಪಾಲನ ಪೂರಣಯೋಃ) ರಕ್ಷಿಸುತ್ತಿ. ಮತ್ತು ಪೂರ್ಣೀಕರಿಸುತ್ತಿ. ॥ ೬ ॥

ಭಾ ॥ (1) ಸದ್ವಿದ್ಯಾಖ್ಯೇ ವಿದಥೇ ಸಂಪ್ರಜಾತೇ ಪಾಪಾಚಾರಂ ಪುರುಷಂ ವಾ ಪಿಪರ್ಷಿ ।
ಸಕ್ಮನ್ ಗೃಹೇಸ್ವೇ ವಿವಿಧ ಪ್ರಜೇಶೋ ವಿಚರ್ಷಣಿಃ(2)ಶೂರಸಾತೌ ಚ ಯುದ್ಧೇ ।
ಸಾತಿರ್ಲಾಭೇ ಯತ್ಪರಿತಕ್ಮ್ಯೇಽಧಿಗಮ್ಯೇ ದಭ್ರಾ ಅಪಿ ತ್ವಾಂ ಶರಣಂ ಯದಿ ಸ್ಮ।ಋತಾ
ಗತಾಸ್ತತ್ರ ಹಿ ಭೂಯಸೋಽಪಿ ತೈರ್ಹಂಸಿ ಶಕ್ತ್ಯಾ ಸಂಖ್ಯಯಾ ವಾ ಪ್ರಯತ್ನಾತ್
॥ ೬ ॥

ಅ ॥ (1) ಎಲೋ, ಶ್ರೀಹರಿಯೇ ವಿಚರ್ಷಣಿಃ=ನಾನಾ ವಿಧರಾದ ದೇವಾದಿ ಪ್ರಜೆಗಳಿಗೆ ಸ್ವಾಮಿಯಾದ ನೀನು ಪಾಪಿಷ್ಠನಾದ ಪುರುಷನನ್ನು ಕೂಡ ಸದ್ವಿದ್ಯೆಯೆಂಬ ಯಜ್ಞವು ಪಾಪಿಷ್ಠ ಪುರುಷನಿಂದಲೂ ಶ್ರೀ ವಿಷ್ಣುವಿನ ಪ್ರೀತಿಗಾಗಿ ಮಾಡಲ್ಪಡುತ್ತಿರಲು ಆತನ ಮನೆಯಲ್ಲಿ ಅಥವಾ ನಿನ್ನದ್ದಾದ ವೈಕುಂಠಾದಿಗಳಲ್ಲಿ ರಕ್ಷಿಸುತ್ತಿ. ಪೂರ್ಣೀಕರಿಸುತ್ತಿ. (2) ಯಾವ ಕಾರಣದಿಂದ ಸಾತಿಶಬ್ದವು ಲಾಭಾರ್ಥದಲ್ಲಿದೆಯೋ, ಆದಕಾರಣ ಶೂರರ ಸಾತಿಯು ಯುದ್ಧವು. (ಯುದ್ಧವೇ ಶೂರರಿಗೆ ಪರಮ ಲಾಭವು.) ಧನವು ಪರಿತಕ್ಮ್ಯೇ = ಹೊಂದಲ್ಪಡುತ್ತಿರಲು,

ಅಂದರೆ ಹೊಂದಲ್ಪಡತಕ್ಕ ಧನನಿಮಿತ್ತವಾದ ಸಂಗ್ರಾಮದಲ್ಲಿ (ದ್ರವ್ಯವನ್ನು ಹೊಂದಬೇಕೆಂಬ ಉದ್ದೇಶದಿಂದ ಮಾಡತಕ್ಕ ಯುದ್ಧದಲ್ಲಿ) ಮತ್ತು ಶ್ರೀ ವಿಷ್ಣುವಿನ ಪ್ರೀತಿಗಾಗಿ ಶ್ರೀ ವಿಷ್ಣುವಿನ ದ್ವೇಷಿಗಳು, ಅವರ ಅನುಬಂಧಿಗಳು ಇವರ ನಿಗ್ರಹ ರೂಪವಾದ ಯುದ್ಧದಲ್ಲಿ) ಅತ್ಯಲ್ಪ ಯೋದ್ಧೃಗಳೂ ಕೂಡ ನಿನ್ನನ್ನು ಶರಣು ಹೊಂದಿದರೆ ಶಕ್ತಿಯಿಂದಲೂ ಸಂಖ್ಯೆಯಿಂದಲೂ ಅಲ್ಪರಾದ ಜನರಿಂದಲೂ ಶಕ್ತಿಯಿಂದಲೂ ಸಂಖ್ಯೆಯಿಂದಲೂ ಬಹಳ ಪ್ರತಿಭಟರನ್ನು ಅನಾಯಾಸದಿಂದಲೇ ಸಂಹರಿಸುತ್ತಿ. ಇದು ಸುಪ್ರಸಿದ್ಧವು. ॥ ೬ ॥

ಋ ॥ (೩೫೭) ತ್ವಂ ತಮ॑ಗ್ನೇ ಅಮೃತ॒ತ್ವ ಉ॑ತ್ತ॒ಮೇ ಮರ್ತ॑ಂ ದಧಾಸಿ॒
ಶ್ರವ॑ಸೇ ದಿ॒ವೇದಿ॑ವೇ । ಯಸ್ತಾ॑ತೃಷಾ॒ಣ ಉ॒ಭಯಾ॑ಯ॒ ಜನ್ಮ॑ನೇ॒
ಮಯ॑ಃ ಕೃ॒ಣೋಷಿ॒ ಪ್ರಯ॒ ಆ ಚ॑ ಸೂ॒ರಯೇ॑ ॥ ೭ ॥

ಅ ॥ ಅಗ್ನೇ=ಎಲೋ ಶ್ರೀ ಹರಿಯೇ, ಯಸ್ತ್ವಂ=ಯಾವ ನೀನು, ತಾತೃಷಾಣಃ=(ಞಿತೃಷಾ ಪಿಪಾಸಾಯಾಂ) ಪ್ರೀತ್ಯಾಧಿಕ್ಯದಿಂದ ತೃಷ್ಣಾತಿಶಯವುಳ್ಳವನಾಗಿ, ಉಭಯಾಯ ಜನ್ಮನೇ=ಎರಡು ಜನ್ಮಗಳುಳ್ಳ, ಮನುಷ್ಯರಿಗೂ ದೇವತೆಗಳಿಗೂ (ದೈತ್ಯರಿಗೆ ಅಲ್ಲ) ಮಯಃ=ಸ್ವರ್ಗರೂಪ ಸುಖವನ್ನು ಕೃಣೋಷಿ=ಮಾಡುತ್ತಿಯೋ, ಯಸ್ತ್ವಂ=ಯಾವ ನೀನು, ತೃಷ್ಣಾತಿಶಯವುಳ್ಳವನಾಗಿ, ಆ=ಚೆನ್ನಾಗಿ, ಸೂರಯೇ=ಜ್ಞಾನಿಗೋಸ್ಕರ, ಪ್ರಯಃ=ಮೋಕ್ಷಾಖ್ಯ ಪ್ರಿಯವನ್ನು, ಕೃಣೋಷಿ= ಮಾಡುತ್ತಿಯೋ ಸಃ=ಅಂತಹ ನೀನು, ತಂ=ಆಸ್ತೋತ್ರಮಾಡತಕ್ಕ, ಮರ್ತಂ=ಮನುಷ್ಯನನ್ನು ಉತ್ತಮೇ=ಮುಖ್ಯವಾದ, ಅಮೃತತ್ವೇ=ಮೋಕ್ಷದಲ್ಲಿ, ದಿವೇದಿವೇ=ಪ್ರತಿನಿತ್ಯವೂ, ಶ್ರವಸೇ=ಭಕ್ತನು ಮಾಡತಕ್ಕ ಸ್ತುತಿಯನ್ನು ಕೇಳುವುದಕ್ಕಾಗಿ (ಅಂದರೆ ಭಕ್ತನು ಮಾಡತಕ್ಕ ಸ್ತುತಿಯನ್ನು ಕೇಳಲಿಚ್ಛಿಸಿದವನಾಗಿ) ದಧಾಸಿ=ಮುಕ್ತನನ್ನಾಗಿ ಮಾಡುತ್ತಿ (ಅಂದರೆ ಮುಕ್ತನು ಸದಾ ನಿನ್ನ ಸಮೀಪದಲ್ಲಿಯೇ ಇದ್ದವನಾಗಿ ಸ್ತುತಿಸುತ್ತಿರುತ್ತಾನೆ.) ॥ ೭ ॥

ಭಾ ॥ (1) ದಿನೇ ದಿನೇ ತತ್ಸ್ತುತಿಂ ಶ್ರೋತುಕಾಮಸ್ತ್ವ ಸ್ತೋತಾರಮಮೃತತ್ವೇ ದಧಾಸಿ ॥ (2) ಪ್ರೀತ್ಯಾಧಿಕ್ಯಾತ್ತೃಷಾಣೋ ಮನುಷ್ಯದೇವೋಭಯೇಷಾಂ ಸುಖಮಾತನೋಷಿ ॥ (3)ಆಸಮಂತಾಜ್ಜ್ಞಾನಿನೇ ತತ್ರ: ನಿತ್ಯಂ ಪ್ರಿಯಂ ಮೋಕ್ಷಾಖ್ಯಂ(4)ತತೃಷಾಣೋ ವಿಶೇಷಾತ್ ॥ ೭ ॥

ಅ ॥ (1) ಎಲೋ ಶ್ರೀಹರಿಯೇ ಪ್ರತಿನಿತ್ಯವೂ ಭಕ್ತನು ಮಾಡತಕ್ಕ ಸ್ತೋತ್ರವನ್ನು ಕೇಳಲಿಚ್ಛಿಸಿದವನಾಗಿ ನಿನ್ನನ್ನು ಸ್ತುತಿಸುವವನನ್ನು ಮೋಕ್ಷದಲ್ಲಿ ಮಾಡುತ್ತಿ. (ಮೋಕ್ಷದಲ್ಲಿ ಸದಾ ಸಮೀಪದಲ್ಲಿದ್ದವನಾಗಿಯೇ ಸ್ತುತಿಸುತ್ತಿರುತ್ತಿ.) (2) ಪ್ರೀತ್ಯತಿಶಯದಿಂದ ತೃಷ್ಣಾಧಿಕ್ಯವುಳ್ಳವನಾಗಿ ಮನುಷ್ಯರಿಗೆ ದೇವತೆಗಳಿಗೆ ಮಾತ್ರ (ದೈತ್ಯರಿಗೆ ಅಲ್ಲ) ಸ್ವರ್ಗಸುಖವನ್ನು ಮಾಡುತ್ತಿ. (3) ಆ ಮಾನುಷಾದಿಗಳಲ್ಲಿಯೂ ಜ್ಞಾನಿಗಾದರೂ, ಚೆನ್ನಾಗಿ ನಿತ್ಯದಲ್ಲಿಯೂ ಪ್ರಿಯವಾದ ಮೋಕ್ಷಾಖ್ಯ ಸುಖವನ್ನು ಮಾಡುತ್ತಿ. (4) (ಆ ಎನ್ನುವುದನ್ನು ಪ್ರಯಃ ಎನ್ನುವುದರಿಂದ ಸಂಬಂಧಿಸಿಕೊಳ್ಳಬೇಕು ಎಂದುಕ್ತವಾಯ್ತು, ಅಥವಾ ತತೃಷಾಣಃ ಎನ್ನುವುದನ್ನು ಅನುವೃತ್ತಿಮಾಡಿ ಕೊಂಡು ಅದರಿಂದ ಆ ಎನ್ನುವುದಕ್ಕೆ ಸಂಬಂಧವೆಂದು ಮಾಡಿಕೊಳ್ಳಬೇಕೆನ್ನುತ್ತಾರೆ.) (ಜ್ಞಾನೀ ತ್ವಾತ್ಮೈವ ಮೇ ಮತಂ ಎಂದು ಹೇಳಿದುದರಿಂದ ಜ್ಞಾನಿಗೆ ಫಲವನ್ನು ಕೊಡುವುದಕ್ಕಾಗಿ ಅತ್ಯಂತ ಅತುರವಿದ್ದ ಪ್ರಯುಕ್ತ ಸಂಸಾರಾವಸ್ಥೆಯಲ್ಲಿ ಮಯಃ=ಸ್ವರ್ಗ ಸುಖವನ್ನು, ಆ ಮೇಲೆ ಪ್ರಯಃ=ಮೋಕ್ಷ ಸುಖವನ್ನು ಕೂಡ ಕೊಡುತ್ತಿ. ॥ ೭ ॥

**ಋ ॥ (೩೫೮) ತ್ವಂ ನೋ ಅಗ್ನೇ ಸನಯೇ ಧನಾನಾಂ ಯಶಸಂ ಕಾರುಂ
ಕೃಣುಹಿ ಸ್ತವಾನಃ । ಋಧ್ಯಾಮ ಕರ್ಮಾಪಸಾ ನವೇನ ದೇವೈರ್ದ್ಯಾ
ವಾ ಪೃಥಿವೀ ಪ್ರಾವತಂ ನಃ ॥ ೮ ॥**

ಅ ॥ ಅಗ್ನೇ=ಶ್ರೀಹರಿಯೇ, ಸ್ತವಾನಃ=ನಮ್ಮಿಂದ ಸ್ತುತಿಲ್ಪಡತಕ್ಕ ನೀನು,ನಃ= ನಮ್ಮನ್ನು ಧನಾನಾಂ= ಪ್ರಜ್ಞಾಖ್ಯ ಧನಗಳನ್ನ, ಅಥವಾ ಪ್ರಸಿದ್ಧ ಧನಗಳನ್ನು. ಸನಯೇ= ಹೊಂದುವುದಕ್ಕಾಗಿ, (ಸಮರ್ಥರನ್ನಾಗಿ) ಕೃಣುಹಿ=ಮಾಡು. ಮತ್ತು ನಃ=ನಮ್ಮನ್ನು ಯಶಸಂ=ಯಶಸ್ಸುಳ್ಳವರನ್ನಾಗಿಯೂ, ಕಾರುಂ=ಉಪಾಸನಾದಿಗಳನ್ನು ಮಾಡುವವನನ್ನಾಗಿಯೂ ಜ್ಞಾನದಾನ ಮಾಡುವವರನ್ನಾಗಿಯೂ, ಕೃಣುಹಿ=ಮಾಡು.(ಬ್ರಹ್ಮಾಪರೋಕ್ಷ ಪರ್ಯಂತ ಉಪಾಸನಾದಿಗಳನ್ನು ಮಾಡಬೇಕಾಗಿರುವುದರಿಂದ ಕಾರು ಪದದಿಂದ ಲಕ್ಷಣಯಾ ಜ್ಞಾನದಾತನನ್ನು (ಜ್ಞಾನೋಪದೇಶಕನನ್ನು ಇಟ್ಟುಕೊಳ್ಳಬೇಕು.) (ನಾವು) ನವೇನ=ನೂತನವಾದ, ಅಪಸಾ=ನಿನ್ನ ಸೇವಾರೂಪವಾದ ಕರ್ಮದಿಂದ, ಕರ್ಮ=ಪ್ರಾಚೀನ ಕರ್ಮವನ್ನು ಋಧ್ಯಾಮ=ಸಮೃದ್ಧವನ್ನಾಗಿ ಸಫಲವನ್ನಾಗಿ ಮಾಡುವೆವು. (ಹಿಂದಿನ ಕರ್ಮಗಳಿಗೆ ಸಮೃದ್ಧಿಯನ್ನು ಸಾಫಲ್ಯವನ್ನು ಹೊಂದುವೆವು. ಪ್ರಾಕ್ತನ ಪುಣ್ಯಗಳಿಗೆ ನಿನ್ನ ಸೇವೆಯೇ ಫಲವಾಗಲಿ.) ಧ್ಯಾವಾಪೃಥಿವೀ=ಶ್ರೀ ಭೂದೇವಿಯರೇ ದೇವೈಃ=ದೇವತೆಗಳಿಂದ ಕೂಡಿದ ನೀವು, ನಃ=ನಮ್ಮನ್ನು, ಪ್ರಾವತಂ=(ಅವ ರಕ್ಷಣೇ) ಹೇಗೆ ನಾವು ಅಗ್ನಿಯೆನಿಸಿದ ಶ್ರೀಹರಿಯ ಸೇವಕರು ಆಗುವೆವೋ ಹಾಗೆ ಚೆನ್ನಾಗಿ ರಕ್ಷಿಸಿರಿ ॥ ೮॥

**ಭಾ ॥ (1) ಪ್ರಜ್ಞಾಧನಾನಾಂ ಲಬ್ಧಯೇ ನಃ ಕೃಧಿ ತ್ವಂ ಯಶಸ್ವಿನಂ ಕಾರಿಣಂ ಜ್ಞಾನದಂ ಚ
(2) ಕರ್ತಾಪರೋಕ್ಷ್ಯಂ ಯಾವದುಪಾಸನಾದೀನ್ ಕಾರುಸ್ತೇನ ಪ್ರೋಚ್ಯತೇ
ತತ್ವದರ್ಶೀ । (3) ಸಂಸ್ತೂಯಮಾನಃ ಕರ್ಮಣಾ ನೂತನೇವ ಸಮೃದ್ಧಿಂ ಚ
ಪ್ರಾಪ್ನುಮಃ ಪ್ರಾಕ್ತನಸ್ಯ ॥ ॥ ೮ ॥**

ಅ ॥ (1) ಶ್ರೀಹರಿಯೇ ನೀನು ನಮ್ಮನ್ನು ಪ್ರಜ್ಞಾರೂಪ ಧನಗಳನ್ನು ಹೊಂದುವುದಕ್ಕಾಗಿ ಸಮರ್ಥರನ್ನಾಗಿ ಮಾಡು. ನಮ್ಮನ್ನು ಕೀರ್ತಿಯುಳ್ಳವರನ್ನಾಗಿಯೂ ಸತ್ಕರ್ಮ ಕಾರಿಗಳನ್ನಾಗಿಯೂ ಜ್ಞಾನದಾನಮಾಡುವವರನ್ನಾಗಿಯೂ ಮಾಡು. (2) (ಹಾಗಾದರೆ ಕೃಞ ಧಾತುವಿಗೆ ಉಣ ಪ್ರತ್ಯಯ ಮಾಡಿದರೆ ಕಾರುಃ ಎಂದಾಗುತ್ತದೆ. ಕಾರುಂ=ಕಾರಿಣಂ ಎಂದಾಗುವುದು. ಜ್ಞಾನದಂ ಎಂದು ಹೇಗೆ ಲಭಿಸುವುದು ಎಂದರೆ) ಪರಬ್ರಹ್ಮನ ಅಪರೋಕ್ಷ ಜ್ಞಾನವಾಗುವ ಪರ್ಯಂತ ಉಪಾಸನಾದಿಗಳನ್ನು ಯಾವ ಕಾರಣದಿಂದ ಮಾಡುತ್ತಾನೋ. ಆ ಕಾರಣದಿಂದ ತತ್ವದರ್ಶಿಯೂ ಕಾರುಃ ಎಂದು ಹೇಳಿಸಲ್ಪಡುತ್ತಾನೆ (ಹಾಗಾದರೆ ಬ್ರಹ್ಮಾಪರೋಕ್ಷಪರ್ಯಂತ ಉಪಾಸನಾದಿಗಳನ್ನು ಮಾಡುವವನೇ ಕಾರುಃ ಎನಿಸುತ್ತಾನೆ. ತತ್ವದರ್ಶಿಯಲ್ಲ ಎಂದರೆ ಉಣಾದಿಗಳು ಸಂಜ್ಞೆಯಲ್ಲಿ ವಿಹಿತಗಳಾಗುತ್ತವೆ. ಆದ ಕಾರಣ ತತ್ವಜ್ಞಾನಿಯಲ್ಲಿಯೂ ವಿದ್ವಾಂಸರು ಕಾರು ಶಬ್ದವನ್ನು ಪ್ರಯೋಗ. ಮಾಡುವುದರಿಂದ ವಿದ್ವದ್ರೂಢಿಯಿದೆ. ಮತ್ತು ಸರ್ವ ಸಾಧಾರಣವಾದ ಕರ್ತೃತ್ವರೂಪವಾದ ಅರ್ಥವನ್ನು ಬಿಟ್ಟು ಕಾರು ಶಬ್ದಕ್ಕೆ, ಜ್ಞಾನವುಂಟಾಗುವುದಕ್ಕಾಗಿ ಉಪಾಸನಾದಿಕರಣ ರೂಪವಾದ ಉತ್ಕರ್ಷಾರ್ಥದಲ್ಲಿ ಪ್ರವೃತ್ತಿಯು ತಿಳಿದು ಬರುವುದರಿಂದ ತತ್ವದರ್ಶೀ ಎಂದು ತಾತ್ಪರ್ಯಾರ್ಥವು. ಜ್ಞಾನಿಯಲ್ಲಿ ವಿದ್ವದ್ರೂಢಿಯಿದ್ದ ಪ್ರಯುಕ್ತವೇ ವೃತ್ತಿಕಾರರು. ಕರೋತೀತಿ ಕಾರುಃ= ವಿಶ್ವಕರ್ಮನು. ಅಥವಾ ಇಂದ್ರನು. ಎಂದು ಹೇಳಿರುವರು. ತಥಾಚ ಪುನರುಕ್ತಿಯು ಬರುವುದರಿಂದ ಲಕ್ಷಣಯಾ ಜ್ಞಾನಿ ಕಾರ್ಯವಾದ ಜ್ಞಾನದಾನವನ್ನು ಇಟ್ಟುಕೊಳ್ಳಬೇಕು.) (ಧನಾನಾಂ ಎನ್ನುವುದಕ್ಕೆ ಹಿರಣ್ಯಾದಿ ರೂಪಧನ ಎಂದು ಅರ್ಥ ಇಟ್ಟುಕೊಂಡರೆ-ಆಗ ಕಾರುಂ

ಎನ್ನುವುದಕ್ಕೆ ತತ್ಪದರ್ಶಿಯನ್ನು ಎಂದು ಅರ್ಥ ಮಾಡಿದರೂ ಪುನರುಕ್ತಿ ದೋಷವಿಲ್ಲ-) (3) ನಾವು ನೂತನವಾದ ಕರ್ಮದಿಂದ ಪ್ರಾಚೀನ ಕರ್ಮವನ್ನು ಸಫಲವನ್ನಾಗಿ ಮಾಡುತ್ತೇವೆ. ಹಿಂದಿನ ಕರ್ಮಕ್ಕೆ ಸಾಫಲ್ಯವನ್ನು ಹೊಂದುವೆವು. ಹೀಗೆ ನಮ್ಮಿಂದ ಸ್ತುತಿಸಲ್ಪಡತಕ್ಕ ನೀನು ನಮ್ಮನ್ನು ರಕ್ಷಿಸು ॥ ೮ ॥

ಋ ॥ (೩೫೯) ತ್ವಂ ನೋ॑ ಅಗ್ನೇ ಪಿ॒ತ್ರೋರು॒ಪಸ್ಥ॒ ಆ ದೇ॒ವೋ ದೇ॒ವೇಷ್ವ॑ನವದ್ಯ॒ ಜಾಗೃ॑ವಿಃ । ತ॒ನೂ॒ಕೃದ್ಬೋ॑ಧಿ॒ ಪ್ರಮ॑ತಿಶ್ಚ ಕಾ॒ರವೇ॒ ತ್ವಂ ಕ॑ಲ್ಯಾಣ॒ ವಸು॒ ವಿಶ್ವ॑ಮೋಪಿಷೇ ॥ ೯ ॥

ಅ ॥ ಅಗ್ನೇ=ಶ್ರೀ ಹರಿಯೇ, ತ್ವಂ=ನೀನು, ನಃ=ಸಮಸ್ತ ಪ್ರಾಣಿಗಳಾದ, ನಮಗೆ, ಪಿತ್ರೋಃ=ಮಾತಾಪಿತೃಗಳಾದ ಪ್ರಕೃತಿಯ ಮತ್ತು ವಿರಿಂಚನೆಂಬ ಪುರುಷನ, ಉಪಸ್ಥೇ=(ಉಪತಿಷ್ಠಂತೇ ಸ್ತುವಂತಿ ಅತ್ರ) ಸಮೀಪದಲ್ಲಿರುತ್ತಿ. (ಅಂದರೆ—ಸದಾ ಇವರಿಬ್ಬರಿಗೂ ನಿಯಾಮಕನಾಗಿರುತ್ತಿ) ಅನವದ್ಯ=ನಿರ್ದೋಷನೇ, ದೇವಃ=ಕ್ರೀಡಾದಿ ಗುಣ ವಿಶಿಷ್ಟನಾದ, ತ್ವಂ=ನೀನು, ದೇವೇಷು ಆಜಾಗೃವಿಃ=ನಿತ್ಯದಲ್ಲಿಯೂ ನೇತೃತ್ವ ರೂಪ ಗುಣವಿದ್ದುದರಿಂದ ದೇವತೆಗಳನ್ನು ನಿತ್ಯದಲ್ಲಿಯೂ ಚೆನ್ನಾಗಿ ತಿಳಿದವನಾಗಿರುತ್ತಿ. ತನೂಕೃತ್=ಸಮಸ್ತ ಶರೀರಗಳನ್ನು ಮಾಡುವವನು, ಪ್ರಮತಿಶ್ಚ=ಪ್ರಕೃಷ್ಟವಾದ ಮತಿಯಿದ್ದುದರಿಂದ ಪ್ರಾಜ್ಞವರ್ಯನೂ, ಆಗಿರುತ್ತಿ. (ಯಾವ ಕಾರಣದಿಂದ) ಕಲ್ಯಾಣ=ಮಂಗಲಕರನೇ, ತ್ವಂ=ನೀನು, ಕಾರವೇ=ಜ್ಞಾನಿಯಾದವನಿಗೋಸ್ಕರ, ವಿಶ್ವಂ=ಸಮಸ್ತವಾದ ವಸು=ಮೋಕ್ಷಾದಿಗಳನ್ನು ಆ ಊಪಿಷೇ=ಹೊಂದಿಸಿ ಕೊಡುತ್ತಿಯೋ, (ಆದಕಾರಣ ಇಂತಹ ನೀನು,) ನಃ=ನಮ್ಮನ್ನು, ಬೋಧಿ=ತಿಳಿಸಿಕೊಡು. (ಜ್ಞಾನಿಗಳನ್ನಾಗಿ ಮಾಡು.) ॥ ೯ ॥

ಭಾ ॥ (1) ತ್ವಂ ನಃ ಪಿತ್ರೋಃ ಪ್ರಕೃತೇಃ ಪೂರುಷಸ್ಯ ಸಮೀಪಸ್ಥಃ ತನ್ನಿಯಂತಾ ಸದೈವ । (2) ದೇವೇಷು ತ್ವಂ ಜಾಗೃವಿರ್ನಿತ್ಯವೇತ್ತಾ ತನೂಕೃನ್ನೋ ಬೋಧಯ ಪ್ರಾಜ್ಞವರ್ಯಃ । (3) ವಿಶ್ವಂ ವಸು ಪ್ರಾಪಯಸೇ ಚ ಕಾರವೇ ॥ ೯ ॥

ಅ ॥ ಶ್ರೀ ಹರಿಯೇ ನೀನು ನಮಗೆಲ್ಲರಿಗೂ ಮಾತಾಪಿತೃಗಳಾದ ಪ್ರಕೃತಿಯ ಮತ್ತು ಚತುರ್ಮುಖನ, ಸಮೀಪದಲ್ಲಿದ್ದವನಾಗಿ ಯಾವಾಗಲೂ ಅವರಿಬ್ಬರಿಗೂ ನಿಯಾಮಕನಾಗಿರುತ್ತಿ. (2) ದೇವತೆಗಳಿಗೆ ನಿತ್ಯದಲ್ಲಿಯೂ ಪ್ರೇರಕನಾಗಿರುವುದರಿಂದ ನಿತ್ಯದಲ್ಲಿಯೂ ತಿಳಿದವನಾಗಿರುತ್ತಿ. ಸಮಸ್ತ ಶರೀರಗಳನ್ನು ಮಾಡುವವನು. ಪ್ರಾಜ್ಞವರ್ಯನೂ ಆಗಿರುತ್ತಿ. ಇಂತಹ ನೀನು ನಮ್ಮನ್ನು ಜ್ಞಾನಿಗಳನ್ನಾಗಿ ಮಾಡು. (3) ಜ್ಞಾನಿಗಳಿಗೆ ಸಮಸ್ತ ಮೋಕ್ಷಾದಿಗಳನ್ನು ಹೊಂದಿಸಿ ಕೊಡುತ್ತಿಯೋ, ಆದಕಾರಣ ಜ್ಞಾನಿಗಳನ್ನಾಗಿ ಮಾಡು. ॥ ೯ ॥

ಋ ॥ (೩೬೦) ತ್ವಮ॑ಗ್ನೇ॒ ಪ್ರಮ॑ತಿ॒ಸ್ತ್ವಂ ಪಿ॒ತಾಸಿ॑ ನ॒ಸ್ತ್ವಂ ವ॑ಯ॒ಸ್ಕೃತ್ತವ॑ ಜಾ॒ಮಯೋ॑ ವ॒ಯಂ । ಸಂ ತ್ವಾ॒ ರಾಯ॑ಃ ಶ॒ತಿನ॒ಃ ಸಂ ಸ॑ಹ॒ಸ್ರಿಣ॑ಃ ಸು॒ವೀರ॑ಂ ಯಂತಿ॒ ವ್ರ॒ತಪಾಮ॑ದಾಭ್ಯ ॥ ೧೦ ॥ ೩೩ ॥

ಅ ॥ ಅಗ್ನೇ=ಶ್ರೀಹರಿಯೇ, ತ್ವಂ=ನೀನು, ಪ್ರಮತಿಃ=ಪ್ರಕೃಷ್ಟ ಜ್ಞಾನವುಳ್ಳವನು (ಆಗಿರುತ್ತಿ) ತ್ವಂ=ನೀನು, ನಃ=ನಮಗೆ, ಪಿತಾ ಅಸಿ=ಶರೀರವನ್ನು ಮಾಡತಕ್ಕವನಾದುದರಿಂದ ತಂದೆಯು ಆಗಿರುತ್ತಿ. ನೀನು,

ವಯಸ್ಕೃತ್=(ಕಾಲಕೃತ ಶರೀರಾವಸ್ಥೆಯು ವಯಃ ಎನಿಸುತ್ತದೆ. ಅದರಿಂದ ಆಯುಸ್ಸನ್ನು ಇಟ್ಟುಕೊಳ್ಳಬೇಕು) ಆಯುಷ್ಯವನ್ನು ಮಾಡುವವನು. (ನೀನು ನಮ್ಮ ತಂದೆಯು ಎಂದು ಮಾತ್ರವಲ್ಲ. ಮತ್ತೆ,) ವಯಂ=ನಾವು, ತವ=ನಿನಗೆ, ಜಾಮಯಃ=ಭ್ರಾತೃಗಳೂ ಕೂಡ ಆಗಿರುತ್ತೇವೆ. (ಅಗ್ನಿಯು ಅಂಗಿರಸ ಋಷಿಯ ಜ್ಯೇಷ್ಠ ಪುತ್ರನು. ಆದಕಾರಣ ಹಿರಣ್ಯಸ್ತೂಪರಿಗೆ ಭ್ರಾತನು. ಪಿತೃಸಮೋ ಜ್ಯೇಷ್ಠಃ ಎಂಬ ಪ್ರಮಾಣದಿಂದ ಜ್ಯೇಷ್ಠನಾದ ಕಾರಣ ಪಿತನೆನ್ನುವುದೂ ಕೂಡುತ್ತದೆ. ಶ್ರೀ ಹರಿಯಾದರೂ ಒಂದೇ ಗರ್ಭದಲ್ಲಿ ಹಿರಣ್ಯಸ್ತೂಪರೊಂದಿಗೆ ಆವಾಸ ಮಾಡುವುದರಿಂದ ಭ್ರಾತನೆನ್ನುವನು.) ಅದಾಭ್ಯ=ಅಹಿಂಸ್ಯನೇ, ಸುವೀರಂ=ಅತ್ಯಂತ ಪರಾಕ್ರಮವುಳ್ಳ, ವ್ರತಪಾಂ=ಕರ್ಮಗಳನ್ನು ರಕ್ಷಿಸುವ, ತ್ವಾ=ನಿನ್ನನ್ನು, (ಹೊಂದಿ) ಶತಿನಃ=ಶತ ಸಂಖ್ಯೆಯುಳ್ಳ ಜನರೂ ರಾಯಃ=ದ್ರವ್ಯಗಳನ್ನು ಸಂ ಯಂತಿ = ಹೊಂದುತ್ತಾರೆ. ಸಹಸ್ರಿಣಃ =(೧೦೦ ಮಂದಿ ಮಾತ್ರ ಹೊಂದುವುದಲ್ಲ. ಮತ್ತೆ) ಸಹಸ್ರ ಸಂಖ್ಯೆಯುಳ್ಳ ಪ್ರಜೆಗಳೂ ದ್ರವ್ಯಗಳನ್ನು ಹೊಂದುತ್ತಾರೆ. (ನಾವು ನಿನ್ನ ಸಂಬಂಧಿಕರು. ನೀನು ಧನಿಕನು. ಆದಕಾರಣ ನಮ್ಮನ್ನು ಧನಿಕರನ್ನಾಗಿ ಮಾಡು) ॥ ೧೦ ॥

ಭಾ ॥ (1) ಆಯುಷ್ಕರೋ ಭ್ರಾತರಸ್ತೇ ವಯಂ ಚ । (2) ದೇಹೇತ್ವೇಕಸ್ಮಿನ್ ಗರ್ಭವದ್ವಾಸತಶ್ಚ ಭ್ರಾತಾಽಸ್ಯ ಜೀವಃ ಪರಮಸ್ಯ ನಿತ್ಯಂ ॥೧೦॥

ಅ ॥ (1) ನೀನು ಆಯುಷ್ಯವನ್ನು ಮಾಡುವವನು ನಾವು ನಿನ್ನ ಭ್ರಾತೃಗಳು. (2) ಪರಮೇಶ್ವರನಿಗೆ (ಜೀವನು ಭ್ರಾತನು ಹೇಗೆ ಆಗುವುದೆಂದರೆ) ಒಂದು ಗರ್ಭದಲ್ಲಿರತಕ್ಕ ಎರಡು ಪ್ರಾಣಿಗಳಂತೆ. ಒಂದೇ ದೇಹದಲ್ಲಿ ಪರಮಾತ್ಮ ಹಿರಣ್ಯ ಸ್ತೂಪರು ಇಬ್ಬರೂ ಆವಾಸ ಮಾಡುವುದರಿಂದ ಜೀವನು ಸರ್ವೋತ್ತಮನಾದ ಶ್ರೀ ವಿಷ್ಣುವಿಗಾದರೂ ನಿತ್ಯದಲ್ಲಿಯೂ ಭ್ರಾತನೆನಿಸುತ್ತಾನೆ. ಒಂದು ದೇಹದಲ್ಲಿ ಆವಾಸ ಮಾಡುವುದರಿಂದಲೇ. (ಒಬ್ಬ ಪಿತನಿಂದಲೇ ಹುಟ್ಟಿದ ಪ್ರಯುಕ್ತ ಎಂದಲ್ಲ.) (೧೦೦-ಅಥವಾ ಸಾವಿರ ಮಂದಿ ನಾವೇ ಮೊದಲಾದ ಪ್ರಜೆಗಳು ಸಾಧನಗಳನ್ನು ಹೊಂದುವುದಕ್ಕಾಗಿ ನಿನ್ನನ್ನು ಹೊಂದುತ್ತಾರೆ. ಆದ ಕಾರಣ ನಾವು ನಿನ್ನವರು. ನೀನು ಧನಿಕನು. ನಮಗೆ ಧನಗಳನ್ನು ಕೊಡು. ॥ ೧೦ ॥

ಋ ॥ (೩೬೧) ತ್ವಾಮಗ್ನೇ ಪ್ರಥಮಮಾಯುಮಾಯವೇ ದೇವಾ ಅಕೃಣ್ವನ್ನಹುಷಸ್ಯ ವಿಶ್ಪತಿಂ । ಇಳಾಮಕೃಣ್ವನ್ಮನುಷಸ್ಯ ಶಾಸನೀಂ ಪಿತುರ್ಯತ್ಪುತ್ರೋ ಮಮಕಸ್ಯ ಜಾಯತೇ ॥ ೧೦॥

ಅ ॥ ಅಗ್ನೇ=ಎಲೋ ಶ್ರೀಹರಿಯೇ, ದೇವಾಃ=ಭೂತಇಂದ್ರಿಯಾದಿಗಳಿಗೆ ಅಭಿಮಾನಿಗಳಾದ ದೇವತೆಗಳೂ ಪ್ರಥಮಂ ಆಯುಂ=(ಇಣ್ ಗತೌ ಸರ್ವಜ್ಞನಾದುದರಿಂದ) ಮುಖ್ಯ ವೃತ್ತಿಯಿಂದ ಮುಖ್ಯವಾಗಿ ಆಯು ಶಬ್ದ ವಾಚ್ಯನಾದ, ತ್ವಾಂ ನಿನ್ನನ್ನು, ಆಯವೇ ಪುರೂರವ ರಾಜನಿಂದ ಊರ್ವಶಿಯಲ್ಲಿ ಹುಟ್ಟಿದ ಆಯು ನಾಮಕ ರಾಜನಿಗೆ ವಿಶ್ಪತಿಂ=ಪ್ರೇರಕನನ್ನಾಗಿ ಅಕೃಣ್ವನ್=ಆಯುರಾಜನ ದೇಹ ಸೃಷ್ಟಿಯಿಂದ ಮಾಡಿದವರಂತೆ ಆದರು. ಮತ್ತು ನಹುಷಸ್ಯ= ನಹುಷ ರಾಜನಿಗೆ, ತ್ವಾಂ=ನಿನ್ನನ್ನು ವಿಶ್ಪತಿಂ=ಪ್ರೇರಕನನ್ನಾಗಿ, ಅಕೃಣ್ವನ್=ನಹುಷನ ದೇಹದ ನಿರ್ಮಾಣದಿಂದ, ಮಾಡಿದವರಂತೆ ಆದರು. ಮತ್ತು ಯತ್=ಯಾವ ಇಳಾದೇವಿಯು (ವಾಸುದೇವನು ಮಮಕಸ್ಯ=ನನ್ನ ಅಪತ್ಯವು ಎಂದು ಅಭಿಮಾನ ಮಾಡತಕ್ಕ ಪಿತುಃ=ಮನುವಿನ ಪುತ್ರ, ಜಾಯತೇ= ಪುತ್ರನಾಗಿ ಹುಟ್ಟುತ್ತಾನೋ(ನನ್ನ ಮಗನೆಂದು ಅಭಿಮಾನ ಮಾತ್ರ. ವಸ್ತುತಃ ಪುತ್ರನಲ್ಲ.) ಮನುಷಸ್ಯ ಶಾಸನೀ=ಮನುವಿನಿಂದ ಯಾರು ಶಿಕ್ಷಾರ್ಹಳೋ, ಯಾವ ಇಳಾದೇವಿಯು ಮನುವಿನ ಮಗಳೋ ನಿನ್ನನ್ನು (ವಾಸುದೇವನನ್ನು) ಅಂತೆ

ಇಳಾ ದೇವಿಯ ಅಂತರ್ಯಾಮಿಯಾಗಿಯೂ ಮನುವಿಗೆ ಶಿಕ್ಷಕನಾಗಿಯೂ ಸರ್ವರಿಂದ ಸ್ತುತ್ಯನಾದುದರಿಂದ ಇಳಾ ಎನಿಸಿದವನನ್ನಾಗಿ ಮಾಡಿದರು. ಅಂತೂ ನಿನ್ನ ಪ್ರೇರಣೆಯಿಂದಲೇ ಈ ರಾಜರ ಪ್ರಭಾವವು.) ॥ ೧೧ ॥

ಭಾ ॥ (1) ಆಯೋ ರಾಜ್ಞೋ ಹೃದಯೇ ಪ್ರೇರಕತ್ವಾದಾಯೋರಾಯುರ್ನಹುಷಸ್ಯಾಧಿಪಶ್ಚ । (2) ಚಕ್ರುರ್ದೇವಾ ದೇಹಸೃಷ್ಟ್ಯೈವ ತಸ್ಯಾಯುಷ್ಟ್ವಮಾಂತರ್ಯಾಮಿಣೋ ಜೀವಗಂ ಚ(ಜ) ನಾಮಾರ್ಥಭಾಗ್ವಾಸುದೇವೋ ಹಿ ಶಕ್ತ್ಯಾ ತೇನ ಹ್ಯಾಯುಃ ಪ್ರಥಮೋಽಸಾವಿಹೋಕ್ತಃ ॥ (5) ಮನುರ್ನಾಮ್ನಾ ಮನುಷಸ್ತಸ್ಯ ಚೇಲಾ ಪುತ್ರೀನಾಮಾಸ್ಯಾ ಅಪಿ ವಿಷ್ಣೋಃಸದೈವ ॥ (6) ಇಳೇಡ್ಯತ್ವಾದುಪಜೀವ್ಯತ್ವತಶ್ಚ (7) ಸ ವಿವಾಯುರಯನಾ ಜ್ಞಾನತಶ್ಚ ॥ (8) ತಚ್ಛಾಸ್ಯತ್ವಾಚ್ಛಾಶನೀ ಮಾನವೀಳಾ ತಚ್ಛಾಸಕತ್ವಾಚ್ಛಾಸನೀ ವಾಸುದೇವಃ । (9) ಮಮತ್ವಕರ್ತುರ್ಹಿ ಪಿತುಃ ಸ ಪುತ್ರಃ ಸ್ವಾತಂತ್ರ್ಯಂ ಚ ಮಮತಾ ನಾನ್ಯದಸ್ತಿ ॥ ೧೧ ॥

ಅ ॥ (1) ಪುರೂರವ ರಾಜನ ಪುತ್ರನಾದ ಆಯುನಾಮಕನಾದ ರಾಜನ ಹೃದಯದಲ್ಲಿದ್ದು ಪ್ರೇರಕನಾಗಿರುವುದರಿಂದ ಅಂತೂ ಆಯುರಾಜನಿಗೆ ಪ್ರೇರಕನಾದ ಸರ್ವಜ್ಞನಾದ ಶ್ರೀಹರಿಗೂ ಆಯು ಶಬ್ದವಾಚ್ಯತ್ವವು, ಮತ್ತು ನಹುಷ ರಾಜನಿಗೆ ಹೃದಯದಲ್ಲಿದ್ದು ಪ್ರೇರಕನಾಗಿ ಸ್ವಾಮಿಯಾಗಿರುತ್ತಾನೆ. (2) (ಆದಾಗ್ಯೂ ದೇವತೆಗಳು ಮಾಡಿದರು ಎಂದದ್ದು ಹೇಗೆ) (ದೇವತೆಗಳು ಶ್ರೀಹರಿಯನ್ನಾಗಲೀ ಶ್ರೀಹರಿಯು ಪ್ರೇರಕನು ಎನ್ನುವುದನ್ನಾಗಲೀ ಮಾಡಲಿಲ್ಲವಷ್ಟೆ ಎಂದರೆ) ಆಯುಃರಾಜ ಮೊದಲಾದವರ ದೇಹಗಳನ್ನು ಸೃಷ್ಟಿಸಿದುದರಿಂದಲೇ ದೇವತೆಗಳು ಚಕ್ರುಃ ಎಂದು ಹೇಳಲ್ಪಡುತ್ತಾರೆ. (ಅಲ್ಲದೆ ಶ್ರೀಹರಿಯನ್ನಾಗಲೀ ಶ್ರೀಹರಿಗೆ ಪ್ರೇರೇಪಿಸುವ ಶಕ್ತಿಯನ್ನಾಗಲೀ ಸೃಷ್ಟಿಸುವುದರಿಂದ ಚಕ್ರುಃ ಎಂದು ಹೇಳಿದ್ದಲ್ಲ.) (ಅಂದರೆ – ಆಯೋಃ ಎಂಬ ಷಷ್ಠೀ ವಿಭಕ್ತಿಯಿಂದ ಆಯು ಮೊದಲಾದ ರಾಜರ ಶರೀರಗಳ ಪ್ರೇರಕತ್ವವು ಉಕ್ತವಾಗಿದೆ. ಆದುದರಿಂದಲೇ ಹೃದಯೇ ಪ್ರೇರಕತ್ವಾತ್ ಎಂದು ಹೇಳಲ್ಪಟ್ಟಿದೆ. ಶರೀರವೇ ಇಲ್ಲವಾದರೆ ಶರೀರದ ಪ್ರೇರಣೆಯೂ ಕೂಡಲಾರದು. ಆದಕಾರಣ ಶರೀರವನ್ನು ಸೃಷ್ಟಿಸಿರುವ ದೇವತೆಗಳು ಪ್ರೇರಕನನ್ನು ಸೃಷ್ಟಿಸಿದರು, ಎಂದು ಅಮುಖ್ಯವಾಗಿ ಹೇಳಲ್ಪಡುತ್ತದೆ.) (3) (ಆದಾಗ್ಯೂ ಶ್ರೀವಿಷ್ಣುವಿಗೆ ಆಯು ಶಬ್ದ ವಾಚ್ಯತ್ವವು ಹೇಗೆಂದರೆ) ಯಾವ ಆಯು ಮೊದಲಾದ ನಾಮವು ಜೀವರಲ್ಲಿ ಪ್ರಸಿದ್ಧವೋ, ಆ ನಾಮವು ಜೀವರಲ್ಲಿ ಅಂತರ್ಯಾಮಿಯಾಗಿರುವುದರಿಂದ ಶ್ರೀಹರಿಗೂ ಆಗುತ್ತದೆ. ಆದಕಾರಣ ಆಯು ರಾಜನಿಗೆ ಪ್ರೇರಕನಾದ ಶ್ರೀಹರಿಯೂ ಕೂಡ ಆಯುಃ ಎನಿಸುತ್ತಾನೆ. (4) (ಮುಖ್ಯಾರ್ಥಕವಾದ ಪ್ರಥಮಂ ಎನ್ನುವುದು ದ್ವಿತೀಯಾಂತವಾಗಿರುವುದರಿಂದ ಆಯುಂ ಎನ್ನುವುದಕ್ಕೆ ವಿಶೇಷಣವೋ, ವಿಶ್ವತಿಂ ಎನ್ನುವುದಕ್ಕೆ ವಿಶೇಷಣವೋ ಮತ್ತು ಶ್ರೀ ವಿಷ್ಣುವಿನಲ್ಲಿ ಪ್ರವೃತ್ತಿ ನಿಮಿತ್ತವಾದುದಕ್ಕೆ ಮುಖ್ಯತ್ವವು ಎಂತಹುದು? ಎಂದರೆ) ಹಿ= ಯಾವ ಕಾರಣದಿಂದ ಶ್ರೀ ವಾಸುದೇವನು ಸ್ವತಂತ್ರವಾಗಿಯೇ ನಾಮಾರ್ಥಗಳನ್ನು ಹೊಂದುವವನೋ, ಆಯು ಶಬ್ದ ಪ್ರವೃತ್ತಿ ನಿಮಿತ್ತವುಳ್ಳವನೋ, ಆದಕಾರಣ ಈ ಶ್ರೀಹರಿಯು ಇಲ್ಲಿ ಮುಖ್ಯವಾಗಿ ಆಯು ಶಬ್ದವಾಚ್ಯನೆಂದುಕ್ತನಾಗಿದ್ದಾನೆ, ಶ್ರುತ್ಯಾದಿ ಪ್ರಸಿದ್ಧನು. (5) (ಆಯುಂ ಎಂಬ ದ್ವಿತೀಯಾಂತವಾದ ಆಯು ಶಬ್ದವು ಆಯಯತಿ ಗಮಯತಿ ಪ್ರವರ್ತಯತೀತಿ ಆಯುಃ ಪ್ರವರ್ತಕನು ಎಂದು ಕ್ರಿಯಾವಚನವಾಗಿ ವ್ಯಾಖ್ಯಾನ ಮಾಡಿದರೆ ಸರ್ವವೂ ಸಮಂಜಸವಾಗುತ್ತದೆ. ಈ ಅಧ್ಯಾಹಾರಾದಿಗಳು ಏತಕ್ಕೆ? ಎಂದರೆ—ಹೀಗೆ ವ್ಯಾಖ್ಯಾನ ಮಾಡಿದರೆ ಮುಖ್ಯವಾಗಿ ಆಯು ಮೊದಲಾದ ಸಮಸ್ತ ಶಬ್ದಗಳ ಪ್ರವೃತ್ತಿ ನಿಮಿತ್ತವಿದ್ದುದರಿಂದ ಅವರವರಲ್ಲಿರ ಶಕ್ಯ ಪ್ರವೃತ್ತಿ ನಿಮಿತ್ತ ಸ್ವಾತಂತ್ರ್ಯವು ಶ್ರೀಹರಿಯಲ್ಲಿಯೇ ಇದ್ದ ಕಾರಣ ಸಮಸ್ತನಾಮಗಳೂ ಭಗವಂತನನ್ನೇ ಪ್ರತಿಪಾದಿಸುತ್ತವೆ, ಎನ್ನುವ ಮಹಿಮಾತಿಶಯವು ಲಭಿಸುತ್ತದೆ.) (ಮನುಷಸ್ಯ ಇಳಾಂ ಎಂದು ಹೇಳಿಯದೆ. ಆದರಲ್ಲಿ ಮನುಷ ಶಬ್ದಕ್ಕೆ ಜ್ಞಾನೀ ಎಂದರ್ಥವಿದ್ದುದರಿಂದ ಯಾವ ಜ್ಞಾನಿಯನ್ನು ಇಟ್ಟುಕೊಳ್ಳಬೇಕು. ಮತ್ತು

ಇಳಾ ಶಬ್ದಕ್ಕೆ ಅನೇಕಾರ್ಥಗಳನ್ನು ಹೇಳಿದುದರಿಂದ ಇಲ್ಲಿ ವಿವಕ್ಷಿತವಾದ ಅರ್ಥವು ಯಾವುದು? ಎಂದರೆ—) ಮನುಷ ಶಬ್ದದಿಂದ ಮನುವನ್ನು ಇಟ್ಟುಕೊಳ್ಳಬೇಕು. ಆ ಮನುವಿನ ಪುತ್ರಿಯು ಇಳಾ ಎನಿಸುತ್ತಾಳೆ. (ಹಾಗಾದರೆ ಇಲ್ಲಿ ತ್ವಾಂ ಎನ್ನುವುದನ್ನು (1) ಇಟ್ಟುಕೊಳ್ಳಬೇಕೋ ಬೇಡವೋ. (2) ದ್ವಿತೀಯಾರ್ಥದಲ್ಲಿ ತ್ವಾಂ ಎನ್ನುವುದನ್ನು ಇಟ್ಟುಕೊಳ್ಳದಿದ್ದರೆ ಅಗ್ನಿಯು ವಿಶೇಷ್ಯವಾಗದೆ ಇದ್ದುದರಿಂದ ಅಗ್ನಿ ಪ್ರತಿಪಾದಕತ್ವವು ಇಲ್ಲದೆ ಹೋಗು ವುದು. ಅಂತೂ ಈ ಅರ್ಥ ಋಕ್ಕು ಅಗ್ನಿ ಸೂಕ್ತದಲ್ಲಿ ಸೇರದೆ ಹೋಗಬೇಕಾಗುವುದು. (1) ತ್ವಾಂ ಎನ್ನುವುದನ್ನು ಇಲ್ಲಿ ಇಟ್ಟುಕೊಳ್ಳಬೇಕೆಂದಾದರೆ ಇಳಾ ಶಬ್ದಕ್ಕೆ ಶ್ರೀ ವಿಷ್ಣುವಿನಲ್ಲಿ ರೂಢಿಯು ಇಲ್ಲ. ಯೋಗಾರ್ಥವೂ ತೋರು ವುದಿಲ್ಲ, ಇಳಾ ಶಬ್ದವು ಸ್ತ್ರೀ ಲಿಂಗವೂ ಆಗಿದೆ. ಆದಕಾರಣ ಪುಲ್ಲಿಂಗ ವಿಷ್ಣು ವಾಚಕತ್ವವು ಹೇಗೆ ಕೂಡುತ್ತದೆ? ಎಂದರೆ) ಈ ಮನು ಪುತ್ರಿಗೆ ಯಾವುದು ಇಳಾ ಎಂಬ ನಾಮವು ಇದೆಯೋ, ಆ ಇಳಾ ಎಂಬ ನಾಮವು ವಿದ್ವದ್ರೂಢಿಯಿದ್ದುದರಿಂದ ಸದಾ ಶ್ರೀ ವಿಷ್ಣುವಿಗೇನೇ ಮುಖ್ಯತಃ ನಾಮವು. (ಆದಕಾರಣ ತ್ವಾಂ ಇಳಾಂ ಎಂದು ಹೇಳುವುದು ಯುಕ್ತವು.) (6) (ಇಳಾ ಶಬ್ದವು ಶ್ರೀವಿಷ್ಣುವಿಗೆ ನಾಮವು ಹೇಗೆ ಆಗುವುದೆಂದರೆ) (ಈಡ ಸ್ತುತೌ) ಸರ್ವರಿಂದ ಸ್ತುತ್ಯನಾದುದರಿಂದ ಶ್ರೀ ವಿಷ್ಣುವು ಇಳಾ ಎನಿಸುತ್ತಾನೆ. ಸ್ತ್ರೀ ರೂಪವಿರುವುದರಿಂದ, ಸ್ತ್ರಿಯಃ ಸತೀಃ ತಾಂ ಉ ಮೇ ಪುಂಸ ಆಹುಃ ಇತ್ಯಾದಿಗಳಲ್ಲಿ ಶ್ರೀಹರಿಗೆಸ್ತ್ರೀ ಲಿಂಗವೂ ಇದೆ ಎಂದು ಪ್ರಸಿದ್ಧವೇ ಆಗಿದೆ. ಮತ್ತು ಇಳಾ=ಭೂಮಿಯು. ಪೃಥಿವಿಯು ಹೇಗೆ ಸರ್ವರಿಗೂ ಉಪಜೀವ್ಯವಾಗಿದೆಯೋ, ಹಾಗೆಯೇ ಶ್ರೀವಿಷ್ಣುವೂ ಉಪಜೀವ್ಯನಾಗಿರುವುದರಿಂದ ಇಳಾ ಎನಿಸುತ್ತಾನೆ. (7) ಮೊದಲು ಆಯು ಶಬ್ದವು ಶ್ರೀ ವಿಷ್ಣುವಿನ ನಾಮವೆಂದು ಹೇಳಿದೆ. ಇಳಾ ಶಬ್ದಕ್ಕೆ ನಿರ್ವಚನವನ್ನು ಹೇಳುವ ಪ್ರಸಂಗದಲ್ಲಿ ಆಯು ಶಬ್ದವನ್ನು ನಿರ್ವಚನ ಮಾಡುತ್ತಾರೆ.) ಆ ಶ್ರೀಹರಿಯೇ (ಇಣ್ ಗತೌ. ಏತಿ ಜಾನಾತೀತ್ಯಾಯುಃ) ಗತ್ಯರ್ಥಗಳಿಗೆ ಜ್ಞಾನಾರ್ಥಕತ್ವವು. ಅಯನಾತ್=ಜ್ಞಾನವಿದ್ದುದರಿಂದ, ಅಂದರೆ ಸರ್ವಜ್ಞನಾದುದರಿಂದ ಆಯುಃ ಎನಿಸುತ್ತಾನೆ. (8) (ಮನುಷಸ್ಯ ಶಾಸನೀ ಎನ್ನುವುದನ್ನು ವ್ಯಾಖ್ಯಾನ ಮಾಡುತ್ತಾರೆ. ಯಾವಾಗ ಇಳಾದೇವಿಯು ಮನುವಿನ ಪುತ್ರಿಯು ಎಂದು ವಿವಕ್ಷಿತಳೋ ಆಗ ಮನುವು ಪಿತನಾದುದರಿಂದ ಪುತ್ರಿಯಾದ ಇಳಾದೇವಿಯು ಮನುವಿನಿಂದ ಶಾಸನಾರ್ಹಳಾದುದರಿಂದ ಮನುಷಸ್ಯ ಶಾಸನೀ ಎನಿಸುತ್ತಾಳೆ. ಇಳಾ ಶಬ್ದದಿಂದ ವಾಸುದೇವನು ವಿವಕ್ಷಿತನಾದರೆ ಆಗ ವಾಸುದೇವನು ಮನುವಿಗೆ ಶಾಸಕನಾದುದರಿಂದ ಮನುಷಸ್ಯ ಶಾಸನೀ ಎನಿಸುತ್ತಾನೆ. (9) (4ನೇ ಪಾದದ ತಾತ್ಪರ್ಯವನ್ನು ಹೇಳುತ್ತಾರೆ.) ಮಮತಾವನ್ನು ಮಾಡ ತಕ್ಕ ತಂದೆಯಾದ ಸ್ವಾಯಂಭುವ ಮನುವಿಗೆ ಆ ವಾಸುದೇವನು ಮಗನು. ಪ್ರಸಿದ್ಧವು ಇದು. ಹೇಗೆಂದರೆ ಭಾಗವತಾದಿ ಪುರಾಣಗಳಲ್ಲಿ ಕಪಿಲಾದಿ ಭಗವದ್ರೂಪಗಳು ಸ್ವಾಯಂಭುವಾದಿ ಮನುಗಳ ಪರಂಪರೆಯಾಗಿ ಪುತ್ರರೆಂದು ಹೇಳಿದೆ. (ಶ್ರೀವಿಷ್ಣುವಿಗೆ ಉತ್ಪತ್ತಿಯಿಲ್ಲ. ಆತನು ಮನುವಿನಿಂದ ಹುಟ್ಟಿದವನಲ್ಲ. ಆದ ಕಾರಣ ಶ್ರೀಹರಿಗೆ ಮನುವು ಪಿತನು ಹೇಗೆ ಆಗುವುದು ಎಂದರೆ) (ಲೋಕದಲ್ಲಿ ಮಕ್ಕಳನ್ನು ಕುರಿತು ತಂದೆಗೆ ಸ್ವಾತಂತ್ರ್ಯವು ಕಂಡದ್ರಿಂದ ಪ್ರಕೃತದಲ್ಲಿ) ಸ್ವಾತಂತ್ರ್ಯವೆಂದರೆ ಪಿತೃತ್ವವು. ಅಂದರೆ ಮಮತಾ= ನನ್ನ ಮಗನೆಂದು ಅಭಿಮಾನ ಮಾತ್ರವು. ಜನಕತ್ವವು ಅಲ್ಲ. (ಮತ್ತ ಗೌಣೀ ವೃತ್ತಿಯಿಂದಲೇ ಅಂದರೆ ಮನುವು ಜನಕನಾಗದಿರುವುದರಿಂದ ಮಮತಾ ರೂಪವಾದ ಗುಣ ಸಂಬಂಧದಿಂದ ಪಿತನ ಸಾದೃಶ್ಯವಿದ್ದುದರಿಂದ ಪಿತಾ ಎನಿಸುತ್ತಾನೆ.) (ಏವಂಚ ಈ ರಾಜರ ಎಲ್ಲಾ ಪ್ರಭಾವವು ನಿನ್ನ ಪ್ರೇರಣೆಯಿಂದಲೇ ಉಂಟಾದುದು.) ॥ ೧೧ ॥

೨೩ ॥ (೩೬೨) ತ್ವಂ ನೋ ಅಗ್ನೇ ತವ ದೇವ ಪಾಯುಭಿರ್ಮಘೋನೋ ರಕ್ಷ
ತನ್ವಶ್ಚ ವಂದ್ಯ । ತ್ರಾತಾ ತೋಕಸ್ಯ ತನಯೇ ಗವಾಮಸ್ಯನಿಮೇಷಂ
ರಕ್ಷಮಾಣಸ್ತವ ವ್ರತೇ ॥ ೧೨ ॥

ಅ ॥ ವಂದ್ಯ=ಬ್ರಹ್ಮಾದಿಗಳಿಂದ ನಮಸ್ಕರಿಸಲ್ಪಡತಕ್ಕ, ದೇವ=ಕ್ರೀಡಾದಿ ಗುಣವಿಶಿಷ್ಟನಾದ, ಅಗ್ನೇ= ಎಲೋ ಶ್ರೀಹರಿಯೇ, ತ್ವಂ=ನೀನು, ನಃ=ನಮ್ಮವನಾದ, ಮಘೋನಃ=ಧನವುಳ್ಳ ಯಜಮಾನನ, ತನ್ವಃ= ಶರೀರವನ್ನು,ಅಥವಾ ಶರೀರದ ಅವಯುವಗಳನ್ನು ಚ=ಯಜಮಾನನ ಜ್ಞಾನ ಭಕ್ತ್ಯಾದಿಗಳನ್ನು ತವ ಪಾಯುಭಿಃ= (ಪಾ ರಕ್ಷಣೇ) ನಿನ್ನದ್ದೇ ಆದ ರಕ್ಷಣೆಗೆ ಮುಖ್ಯ ಕಾರಣಗಳಾದ ಶಕ್ತಿಗಳಿಂದ, ರಕ್ಷ=ಅಪಮೃತ್ಯುವನ್ನು ನಿರಾಕರಿಸಿ ರಕ್ಷಿಸು. ಅಥವಾ ನಃ=ನಮ್ಮ ಮಘೋನಶ್ಚ=ಮತ್ತು ಯಜಮಾನನ, ತನ್ವಃ=ಶರೀರಗಳನ್ನು ರಕ್ಷಿಸು. ಮತ್ತು ನೀನು, ತೋಕಸ್ಯ=ನಮ್ಮ ಮಗನಿಗೂ, ತ್ರಾತಾ=ರಕ್ಷಕನು, ಅಸಿ=ಆಗು. (ನಮ್ಮ ಪುತ್ರನಿಗೆ ಮಾತ್ರವಲ್ಲ. ತ್ವಂ=ಮತ್ತೆ) ತನಯೇ=(ತನು ವಿಸ್ತಾರೆ.) ಮಗನ ಮಗನಿಗೂ ಅಂದರೆ ಪೌತ್ರನಿಗೂ, ತ್ರಾತಾ=ರಕ್ಷಕನಾಗು. ಮತ್ತು, ಗವಾಂ=ನಮ್ಮ ಗೋವುಗಳಿಗೂ, ತ್ರಾತಾ=ರಕ್ಷಕನಾಗು. ಯಸ್ತ್ವಂ=ಯಾವ ನೀನು, ತವ ವ್ರತೇ=ನಿನ್ನ ವಿಷಯಕವಾದ ಯಜ್ಞ ತಪಸ್ಸು ಮೊದಲಾದ ಕರ್ಮವು (ದೇವತೆಗಳಿಂದ ಮಾಡಲ್ಪಡುತ್ತಿರಲು) ಅನಿಮೇಷಂ= ನಿಮೇಷವಿಲ್ಲದಿರುವ ದೇವತೆಗಳನ್ನು, ರಕ್ಷಮಾಣಃ=ರಕ್ಷಿಸುವವನಾಗಿ, ಅಸಿ=ಆಗಿರುತ್ತಿ. (ಅಧ್ಯಾತ್ಮರೂಪವಾದ ಅರ್ಥವು.) ತೋಕಸ್ಯ=ಜ್ಞಾನವನ್ನು, ತನಯೇ=ಸೌಖ್ಯವನ್ನು, ಗವಾಂ=ವಚನವನ್ನು, ತ್ರಾತಾ=ರಕ್ಷಿಸುವವ ನಾಗು. (ಬಾಕಿ ಎಲ್ಲವೂ ಸಮಾನವು. ॥ ೧೨ ॥

ಭಾ ॥ (1) ತ್ವಂ ನೋ ಮಘೋನೋ ಯಜಮಾನಸ್ಯ ತನ್ವಸ್ತ್ವೈವ ರಕ್ಷಾಶಕ್ತಿಭೀ ರಕ್ಷ ದೇವ । (2) ಚ ಶಬ್ದೇನ ಜ್ಞಾನಭಕ್ತ್ಯಾದಿಕಂ ಚ ಸದಾಽಸ್ಮಾಕಂ ಯಜಮಾನಸ್ಯ ಚಾಽದ್ಧಾ ॥ (3) ತ್ರಾತಾ ತೋಕಸ್ಯ ಪುತ್ರಸ್ಯ ಚ ತ್ವಂ ಸಂತತಿತ್ವಾತ್ತನಯಸ್ಯಾಸ್ಯ ಸೂನೋಃ ।(4) ಗವಾಂ ಚ ತ್ವಂ ರಕ್ಷಿತಾ (5) ಜ್ಞಾನಸೌಖ್ಯ ವಾಚಾಂ ವಾಽಧ್ಯಾತ್ಮಿಕಾ (6) ನಿಮೇಷಾನ್ ಸುರಾಂಶ್ಚ ॥ ಸಂರಕ್ಷಮಾಣಸ್ತ್ವದ್ವ್ರತೇ ತೈಃ ಪ್ರವೃತ್ತೇ॥೧೨ ॥

ಅ ॥ (1) ಎಲೋ ಶ್ರೀಹರಿಯೇ, ನೀನು, ನಮ್ಮ ಧನವುಳ್ಳ ಯಜಮಾನನ, ಶರೀರವನ್ನು, ಅಥವಾ ಶರೀರದ ಅವಯುವಗಳನ್ನು ನಿನ್ನದ್ದೇ ಆದ ರಕ್ಷಣೆಗೆ ಮುಖ್ಯಕಾರಣಗಳಾದ ಶಕ್ತಿಗಳಿಂದ ರಕ್ಷಿಸು. (2) ತನ್ವಶ್ಚ ಎಂಬಲ್ಲಿದ್ದ ಚ ಶಬ್ದದಿಂದ ಯಜಮಾನನ ಜ್ಞಾನಭಕ್ತ್ಯಾದಿಗಳನ್ನು ರಕ್ಷಿಸು. ಅಥವಾ ನಮ್ಮ ಶರೀರಗಳನ್ನೂ ಯಜಮಾನನ ಶರೀರಗಳನ್ನು ರಕ್ಷಿಸು. (ಆಯುಷ್ಯವಿರುವ ಪರ್ಯಂತ ಇರೋಣವು ಸ್ವತಏವ ಸಿದ್ಧವಾಗಿದೆ. ಪ್ರಾರ್ಥನೆಯು ಏತಕ್ಕೆ ಎಂದರೆ) ಸದಾ=ಅಪಮೃತ್ಯುವನ್ನು ಪರಿಹರಿಸುತ್ತಾ, ಅದ್ಧಾ=ಆಮಯ (ರೋಗ) ಮೊದಲಾದವುಗಳನ್ನು ಪರಿಹರಿಸುತ್ತಾ.ರಕ್ಷಿಸಬೇಕು. (3) ನೀನು ತೋಕಸ್ಯ=ನಮ್ಮ ಮಗನಿಗೆ ರಕ್ಷಕನಾಗು. (ಮಗನಿಗೆ ಮಾತ್ರವಲ್ಲ. ಮತ್ತೆ) ಈ ಮಗನ ಮಗನಿಗೂ (ಪೌತ್ರನಿಗೂ) ರಕ್ಷಕನಾಗು. (ಹಾಗಾದರೆ=ತನಯ ಶಬ್ದವು ಪುತ್ರ ವಾಚಕವು. ಪೌತ್ರನೆಂದು ಅರ್ಥ ಹೇಳಿದ್ದು ಹೇಗೆ? ಎಂದರೆ) (ತನಯ ಶಬ್ದವು ಕೇವಲ ಪುತ್ರನಿಗೇನೇ ವಾಚಕವಲ್ಲ. ಮತ್ತೆ ತನು.ವಿಸ್ತಾರೇ ಎಂಬುವುದರ ರೂಪವಾಗಿರುವುದರಿಂದಲೂ ಅಪತ್ಯ ಸಾಮಾನ್ಯ ನಾಮಗಳಲ್ಲಿ ಪಠಿತವಾಗಿರುವುದರಿಂದಲೂ ಸಂತತಿ ವಾಚಕವಾಗಿದೆ.) ಪೌತ್ರನೂ ಸಂತತಿಯಾದುದರಿಂದ (ಹಾಗೆ ಅರ್ಥ ಹೇಳಿದ್ದೂ ಯುಕ್ತವು.) (ಹಾಗಾದರೆ-ಯೋಗವೃತ್ತಿಯಿಂದ ಸಂತತಿ ವಾಚಕವಾದ ತನಯ ಶಬ್ದದಿಂದ ಪುತ್ರನೂ ವಾಚ್ಯನಾಗುತ್ತಾನೆ. ಆದಕಾರಣ ಪೌತ್ರನನ್ನೇ ಏತಕ್ಕೆ ಇಟ್ಟುಕೊಳ್ಳಬೇಕು ಎಂದರೆ) (ತೋಕ ಶಬ್ದದಿಂದ ಪುತ್ರನನ್ನು ಹೇಳಿದ ಕಾರಣ ತನಯ ಶಬ್ದದಿಂದ ಪುತ್ರನನ್ನು ಹೇಳಲಿಲ್ಲ.) (ಹಾಗಾದರೆ-ತೋಕ ಶಬ್ದವೂ ಸಾಮಾನ್ಯತಃ ಅಪತ್ಯ ನಾಮವು. ಆದರೂ ಪುನರುಕ್ತಿ ದೋಷವನ್ನು ಪರಿಹರಿಸುವುದಕ್ಕಾಗಿ ಪ್ರಥಮ ಪ್ರಾಪ್ತವಾದ ತೋಕ ಶಬ್ದದಿಂದ ಪುತ್ರನೆಂದೂ, ದ್ವಿತೀಯ ಪ್ರಾಪ್ತವಾದ ತನಯ ಶಬ್ದದಿಂದ ಪೌತ್ರನೆಂದೂ ಇಟ್ಟುಕೊಳ್ಳಬೇಕು.) (4) ನಮ್ಮ ಗೋವುಗಳಿಗೂ ರಕ್ಷಕನಾಗು (5)(ಹೀಗೆ ತೋಕಸ್ಯ ತನಯಸ್ಯ ಗವಾಂ ಎನ್ನುವ ಮೂರು ಪದಗಳನ್ನು ಬಾಹ್ಯಾರ್ಥದಲ್ಲಿ ವ್ಯಾಖ್ಯಾನ ಮಾಡಿ ಅಧ್ಯಾತ್ಮ ಪರವಾಗಿ ವ್ಯಾಖ್ಯಾನ ಮಾಡುತ್ತಾರೆ.) ತೋಕಸ್ಯ ತನಯಸ್ಯ

ಗವಾಂ ಎನ್ನುವ ೩ ಪದಗಳಿಗೆ ಜ್ಞಾನ ಸೌಖ್ಯ ವಾಕ್ ಎಂದರ್ಥವು. ಅಧ್ಯೈವ=ಇದೇ ಮುಖ್ಯಾರ್ಥವು. (ಹೇಗೆಂದರೆ) (**ತೋಕ** ಶಬ್ದವಾಚ್ಯನು ಪುತ್ರನು. ಜ್ಞಾನವೂ ಆತ್ಮನಿಂದ ಹುಟ್ಟುವ ಪ್ರಯುಕ್ತ ಪುತ್ರ ಎನಿಸುತ್ತದೆ.) (ಜ್ಞಾನವೂ ಪುತ್ರ ಶಬ್ದವಾಚ್ಯ ಎನ್ನುವಲ್ಲಿ ಶ್ರುತಿಯನ್ನು ಹೇಳುತ್ತಾರೆ.) **ಜ್ಯೋತಿರ್ಹಿ ಪುತ್ರಃ ಪರಮೋ ವ್ಯೋಮನ್,** ಎಂದು ಆಕಾಶದಂತೆ ವ್ಯಾಪ್ತವಾದ ಶ್ರೀ ವಿಷ್ಣು ವಿಷಯಕವಾದ ಜ್ಯೋತಿಸ್ಸು ಪ್ರಕಾಶಕವಾದ ಜ್ಞಾನವೇ ಪುತ್ರನೆಂದು ಪ್ರಸಿದ್ಧವು ಎಂದು ಶ್ರುತಿಯು.) (1)ಜ್ಞಾನವೇ, **ಪುನ್ನಾಮ್ನೋ ನರಕಾತ್ತ್ರಾತಾ ಪುತ್ರ ಇತ್ಯಭಿಧೀಯತೇ** ಎಂದು ಹೇಳಿದ ಮುಖ್ಯ ಪುತ್ರವು. ಹೇಗೆಂದರೆ ಅಪರೋಕ್ಷ ಜ್ಞಾನವಾದರೆ ನರಕವುಂಟಾಗುವುದಿಲ್ಲ. (೨) ತನಯ ಶಬ್ದವಾಚ್ಯವಾದ ಸಂತತಿಗೆ ವಿಚ್ಛೇದವಿಲ್ಲದಿರುವುದರಿಂದ **ಮೋಕ್ಷ ಸುಖವೇ** ಮುಖ್ಯ ತನಯ ಶಬ್ದವಾಚ್ಯವು. (೩) ಹಾಗೆಯೇ ವೇದ ವಚನಗಳು ಮುಖ್ಯವಾಗಿ ಜ್ಞಾನ ಸಾಧನಗಳಾಗಿರುವುದರಿಂದ ಮುಖ್ಯವಾಗಿ **ಗೋ** ಶಬ್ದವಾಚ್ಯಗಳು, **ಗೋ** ಶಬ್ದಕ್ಕೆ ವಾಕ್ ನಾಮಗಳಲ್ಲಿ ಪಾಠವಿದೆ. (6) ಎಲೋ ಶ್ರೀ ಹರಿಯೇ ನಿನ್ನ ಸಂಬಂಧಿ ಯಜ್ಞ ತಪಸ್ಸು ಮೊದಲಾದ ಕರ್ಮವು ಆ ದೇವತೆಗಳಿಂದ ಮಾಡಲ್ಪಡುತ್ತಿರಲು ನೀನು ದೇವತೆಗಳನ್ನು ಚೆನ್ನಾಗಿ ರಕ್ಷಿಸುವವನಾಗಿರುತ್ತಿ. ॥ ೧೨ ॥

ಋ ॥ (೩೬೩) ತ್ವಮ॑ಗ್ನೇ ಯ॑ಜ್ಯವೇ ಪಾ॒ಯುರಂ॑ತರೋಽನಿಂ॑ಷ॒ಗಾಯ॑
ಚತು॒ರಕ್ಷ॑ ಇ॑ಧ್ಯಸೇ।ಯೋ॒ರಾತಹ॑ವ್ಯೋಽ ವೃ॒ಕಾಯ॒ ಧಾಯ॑ಸೇ ಕೀ॒ರೇ
ಶ್ಚಿನ್ಮಂ॑ತ್ರಂ॒ ಮನ॑ಸಾ ವ॒ನೋಷಿ॒ತಂ ॥ ೧೩ ॥

ಅ ॥ ಅಗ್ನೇ= ಎಲೋ ಶ್ರೀಹರಿಯೇ, ತ್ವಂ= ನೀನು, ಯಜ್ಯವೇ= ವಿದಿಪ್ರಕಾರ ಯಾಗ ಮಾಡುವವನಿಗೆ, ಪಾಯುಃ (ಪಾರಕ್ಷಣೇ) ಪಾಲಕನೂ, ಅಂತರಃ= ಅಂತರ್ಯಾಮಿಯೂ ಕೂಡ, (ಆಗಿರುತ್ತಿ.) (ಅಂದರೆ— ಒಳಗೆ ಕ್ರಿಯೆಗಳನ್ನು ಪ್ರವರ್ತಿಸುತ್ತಿ. ಹೊರಗೆ ಫಲವನ್ನು ಕೊಡುತ್ತಿ) ಯಃ= ಯಾವ ಯಜಮಾನನು, ಅನಿಷಂಗಾಯ= ಚೆನ್ನಾಗಿ ಸಂಗವಿಲ್ಲದಿರುವ. (ಸ್ವರ್ಗಾದಿ ಫಲದಲ್ಲಿ ಅತ್ಯಂತ ಸ್ನೇಹವಿಲ್ಲದಿರುವ) (ಅಂದರೆ—ಯಜ್ಞ ಫಲವಾಗಿ ಸ್ವರ್ಗಾದಿಗಳನ್ನು ಇಚ್ಛಿಸದಿರುವವನಿಗಾಗಿ,) ಚತುರಕ್ಷಃ=ನಾಲ್ಕು ಅಕ್ಷಿಗಳುಳ್ಳ, ನೀನು (ಭಕ್ತಿಯಿಂದ ಆರಾಧಿಸಲ್ಪಟ್ಟವನಾಗಿ ಜ್ಞಾನದೃಷ್ಟಿಯನ್ನು ಕೊಟ್ಟು) ಇಧ್ಯಸೇ= (ಞಿ ಇಂಧೀ ದೀಪ್ತೌ) ಪ್ರಕಾಶಿಸುತ್ತಿಯೋ (ತೋರುತ್ತಿಯೋ,) ಮತ್ತು ಯಃ= ಯಾವ ಯಜಮಾನನು, ಅವೃಕಾಯ= (ಕ್ರೂರವಾದ ಪ್ರಾಣಿ ವಿಶೇಷಕ್ಕೆ (ತೋಳ.) ವೃಕ ಎಂದು ಹೆಸರು, ಕ್ರೂರ ಪುರುಷನಲ್ಲಿ ಅಮುಖ್ಯ ಪ್ರಯೋಗವು.) ಅತಿ ಸೌಮ್ಯನಾದ, ನಿನಗಾಗಿ, ಧಾಯಸೇ= (ಧೇಟ್ ಪಾನೇ, ಭಾವೇಽಸುನ್) ಪಾನ ಮಾಡುವುದಕ್ಕಾಗಿ, ರಾತಹವ್ಯಃ= (ರಾದಾನೇ) ಸೋಮ ಹವ್ಯ ಕ್ಷೀರ ದಧಿ ಮಧು ಮೊದಲಾದ ಹವ್ಯಗಳನ್ನು ಕೊಟ್ಟಿರುವನೋ, (ಅಂತಹ ಯಜಮಾನನಿಗಾಗಿ ಇಧ್ಯಸೇ= ಪ್ರೀತನಾಗುತ್ತಿ.) (ಕೇವಲ ಯಜಮಾನನ ಹವಿಸ್ಸಿನಿಂದ ಪ್ರೀತನಾಗುವುದಿಲ್ಲ. ಮತ್ತೆ,) ಕೀರೇಃ= (ಡು ಕೃ ಞ್ ಕರಣೇ) ನಿನ್ನ ಸೇವೆಯನ್ನು ಮಾಡತಕ್ಕ ಯಜ್ಞ ಫಲವಾಗಿ ಸ್ವರ್ಗಾದಿಗಳನ್ನು ಇಚ್ಛಿಸದಿರುವವನ, ತಂ= ಭಕ್ತಿಯಿಂದುಚ್ಚರಿತವಾದ, ಮಂತ್ರಂ ಚಿತ್= ಮಂತ್ರವನ್ನು ಕೂಡ, ಮನಸಾ= ಸಂತೋಷದಿಂದ, ವನೋಷಿ= ಸ್ವೀಕರಿಸುತ್ತಿ. (ಮಂತ್ರವನ್ನು ಕೇಳಿ ಸಂತುಷ್ಟನಾಗುತ್ತಿ.) ॥ ೧೩ ॥

ಭಾ ॥ (1) ಯಜ್ಞೋಃಶ್ಚ ತ್ವಂ ಪಾಲಕೋ ಹ್ಯಂತರಶ್ಚ।(2) ಖಿತರಾಂ ಯಸ್ಸಂಗ ಹೀನೋಽ
ನಿಷಂಗಸ್ತಸ್ಮೈ ಭಕ್ತ್ಯಾದೀಪ್ಯಸೇ ಜ್ಞಾನ ದೃಷ್ಟ್ಯಾ॥ (3) ದ್ವಿಶೀರ್ಷತ್ವಾಚ್ಚತುರ
ಕ್ಷೋಽಧಿಯಜ್ಞೇ (4) ದ್ವೇ ಶೀರ್ಷೇ ಇತಿವಾಗುತ್ತರತ್ರ॥ (5) ಯೋ ದತ್ತಹ
ವ್ಯಸ್ತೇತಿಸೌಮ್ಯಾಯ ಪೀತ್ಯೈ ಕರ್ತುಂ ಮಂತ್ರಂ ಸಂಭಜಸೇ ಹಿ ತಸ್ಯ ॥ ೧೩ ॥

ಅ || (1) ಎಲೋ ಶ್ರೀಹರಿಯೇ ನೀನು ಯಾಗ ಮಾಡುವವನಿಗೆ ಪಾಲಕನೂ ಅಂತರ್ಯಾಮಿಯೂ ಆಗಿರುತ್ತಿ. (2) ಸರ್ವಥಾ ಯಜ್ಞಫಲವಾಗಿ ಸ್ವರ್ಗಾದಿಗಳನ್ನು ಇಚ್ಛಿಸದಿರುವವನಾಗಿ ನಾಲ್ಕು ಅಕ್ಷಿಗಳುಳ್ಳ ನಾನು ಭಕ್ತಿಯಿಂದ ಆರಾಧಿತನಾಗಿ ಜ್ಞಾನ ದೃಷ್ಟಿಯನ್ನು ಕೊಟ್ಟು ಪ್ರಕಾಶಿಸುತ್ತಿ. (3) (ಅಗ್ನಿಗೆ ನಾಲ್ಕು ಅಕ್ಷಿಗಳಿವೆ ಎಂಬುವುದು ಹೇಗೆಂದರೆ) ೨ ಶಿರಸ್ಸು ಇದ್ದ ಪ್ರಯುಕ್ತವೂ (ಪ್ರತಿ ಶಿರಸ್ಸಿನಲ್ಲಿ ೨ಕಣ್ಣುಗಳಿದ್ದ ಪ್ರಯುಕ್ತವೂ ಅಗ್ನಿಯು ನಾಲ್ಕು ಕಣ್ಣುಗಳುಳ್ಳವನು ಎಂದೆನಿಸುತ್ತಾನೆ. (ಅಗ್ನಿಯೇ ಯಜ್ಞವನ್ನು ಅಧಿಕವಾಗಿ ಮಾಡುತ್ತಾನೆ. ಅಥವಾ ಆಶ್ರಯಿಸುತ್ತಾನೆ. (4) (ಎರಡು ಶಿರಸ್ಸುಗಳಿವೆ ಎಂಬುವುದು ಹೇಗೆಂದರೆ) **ಚತ್ವಾರಿ ಶೃಂಗಾ ತ್ರಯೋ ಅಸ್ಯ ಪಾದಾ ದ್ವೇ ಶೀರ್ಷೇ ಸಪ್ತ ಹಸ್ತಾಸೋ ಅಸ್ಯ** || ಈ ವೃಷಭ ರೂಪನಾದ ವೃಷಭಾಂತರ್ಯಾಮಿಯಾದ ಶ್ರೀ ವಿಷ್ಣುವಿಗೆ ನಾಲ್ಕು ವೇದಗಳು ಜ್ಞಾಪಕಗಳಾಗಿರುವುದರಿಂದ ಶೃಂಗ ತುಲ್ಯಗಳಾಗಿವೆ. ಪ್ರಾತಃಸವನ ಮೊದಲಾದ ೩ ಸವನಗಳು ಗತಿ ಸಾಧನಗಳಾಗಿರುವುದರಿಂದ ಪಾದ ತುಲ್ಯಗಳಾಗಿವೆ. ಪ್ರಾಯಣೀಯ ಉದಯನೀಯ ಇಷ್ಟಿಗಳು ಶಿರಃಸ್ಥಾನೀಯಗಳು. ಗಾಯತ್ರೀ ಮೊದಲಾದ ಏಳು ಛಂದಸ್ಸುಗಳು ಕರಸ್ಥಾನೀಯಗಳು. ಇಂತಹ ಅಗ್ನಿರೂಪನಾದ ವೃಷಭನು ಮಂತ್ರಬ್ರಾಹ್ಮಣ ಕಲ್ಪಸೂತ್ರಗಳಿಂದ ಸಂಬಂಧವಾಗಿ ಪ್ರಾತಸವನಾದಿ ಕ್ರಮದಿಂದ ಶಬ್ದವನ್ನು ಮಾಡುತ್ತಾನೆ. ಇಂತಹ ಶ್ರೀ ಹರಿಯು ಮನುಷ್ಯರನ್ನು ಯಜಮಾನನಿಗಾಗಿ ಪ್ರವೇಶಿಸಿದನು, ಎಂಬ ವಚನವು ಉತ್ತರತ್ರ ಇದೆ. 5) ಯಜಮಾನನು ಎಂತಹನು ಎಂದರೆ) ಯಾವ ಯಜಮಾನನು ಅತಿ ಸೌಮ್ಯನಾದ ನಿನಗೆ ಪಾನ ಮಾಡುವುದಕ್ಕಾಗಿ ಸೋಮ ಆಜ್ಯ ಮೊದಲಾದ ಹವ್ಯಗಳನ್ನು ಕೊಟ್ಟವನಾಗಿ, ನಿನ್ನ ಸೇವೆಯನ್ನು ಮಾಡುವ ಪುರುಷನ ಭಕ್ತಿಯಿಂದ ಉಚ್ಚರಿತವಾದ ಮಂತ್ರವನ್ನೂ ಕೂಡ ಕೇಳಿ ಸಂತುಷ್ಟವಾಗುತ್ತಿ. || ೩೩ ||

ಋ || (೩೬೪) ತ್ವಮ॑ಗ್ನ ಉರು॒ಶಂಸಾ॑ಯ ವಾ॒ಘತೇ॑ ಸ್ಪಾ॒ರ್ಹಂ

ಯದ್ರೇಕ್ಣಃ॑ ಪರ॒ಮಂ ವ॒ನೋಷಿ॒ ತತ್ । ಆ॒ಧ್ರಸ್ಯ॑ ಚಿ॒ತ್ಪ್ರಮ॑ತಿರುಚ್ಯಸೇ

ಪಿ॒ತಾ ಪ್ರ ಪಾ॒ಕಂ ಶಾಸ್ಸಿ॒ ಪ್ರದಿ॑ಶೋ ವಿ॒ದುಷ್ಟ॑ರಃ || ೧೪ ||

ಅ || ಅಗ್ನೇ= ಶ್ರೀಹರಿಯೇ, ತ್ವಂ=ನೀನು, ಉರುಶಂಸಾಯ=ಶಿಷ್ಯರು ಮಾಡಶಕ್ಯ ಮಹಾ ಸ್ತೋತ್ರಗಳಿಗೆ ವಿಷಯನಾದ (ಮಹಾಸ್ತುತ್ಯನಾದ) ವಾಘತೇ=ಶ್ರೀ ವಿಷ್ಣುವನ್ನು ಸ್ತೋತ್ರಮಾಡುವವನಿಗೋಸ್ಕರ, ಯತ್=ಯಾವುದು. ಸ್ಪಾರ್ಹಂ=)ಇಚ್ಛಿಸಲು ಯೋಗ್ಯವಾದ) (ಇಷ್ಟವಾದ) ಪರಮಂ= ಉತ್ತಮವಾದ, ರೇಕ್ಣಃ=ಧನವಿದೆಯೋ (ಸುಖಮೇವ ಚ ಪರಮಂ ಧನಂ=ಸುಖವೇ ಮುಖ್ಯಧನವು.) ತತ್=ಅಂತಹ ಸುಖವನ್ನೇ. ವನೋಷಿ=(ವನ ದಾನೇ) ಕೊಡುತ್ತಿ.ತ್ವಂ=ಯಾವನೀನು,ಆಧ್ರಸ್ಯಚಿತ್=(ಆಙ್ ಪೂರ್ವಕಾತ್ಧೃಧಾರಣೇ)ಚೆನ್ನಾಗಿ ಧಾರಕನಾದ ವಾಯುವಿಗೂ ಕೂಡ, (**ಸಪ್ತಸ್ಕಂಧಗತೋ ಲೋಕಾನ್ ಯೋ ಬಿಭರ್ತಿ ಮಹಾಬಲಃ** । ಜಗದ್ವೃಕ್ಷದ ೭ಲೋಕಗಳೆಂಬ ೭ಸ್ಕಂಧಗಳಲ್ಲಿರತಕ್ಕ ವಾಯುದೇವರು ಮಹಾಬಲಿಷ್ಠರಾದ ಪ್ರಯುಕ್ತ ಜನರನ್ನು ಧರಿಸುತ್ತಿರುತ್ತಾರೆ.) ಎಂಬ ಪ್ರಮಾಣದಿಂದ ವಾಯುವೇ ಧಾರಕನೆಂದು ಪ್ರಸಿದ್ಧನು.) ಪ್ರಮತಿಃ=ಪ್ರಕೃಷ್ಟಾಮತಿಃ ಯಸ್ಮಾತ್ ಎಂಬ ವ್ಯುತ್ಪತ್ತಿಯಿಂದ) ಪ್ರಕೃಷ್ಟಜ್ಞಾನವನ್ನು ಕೊಡುವವನು,ಪಿತಾ ಚ=ತಂದೆಯು ಎಂದೂ (ಸಜ್ಜನರಿಂದ ಉಚ್ಯಸೇ=ಹೇಳಲ್ಪಡುತ್ತಿಯೋ, ಯಾವ ನೀನು ಪ್ರಪಾಕಂ=ಪರಿಪಕ್ವವಾದ ಅಧಿಕಾರವುಳ್ಳ (ಅಪರೋಕ್ಷ ಜ್ಞಾನ ಯೋಗ್ಯರಾದ) ದೇವಾದಿಗಳನ್ನು ಪ್ರದಿಶಃ= ಉಪದೇಶಕನಾಗಿರುವುದರಿಂದ, ಪ್ರಶಾಸ್ಸಿ=ಚೆನ್ನಾಗಿ ಶಿಕ್ಷಿಸುತ್ತಿಯೋ, (ಯಾವ ನೀನು) ವಿದುಷ್ಟರಃ=ಸರ್ವಜ್ಞನೋ, (ಅಂತಹ ನೀನು ಮಂತ್ರವನ್ನು ಕೇಳಿ ಸಂತುಷ್ಟನಾಗುತ್ತಿ.) || ೧೪ ||

ಭಾ ॥ (1) ಮಹಾಸ್ತೋತ್ರಾಯ ವದತೇ ಸ್ಪಾರ್ಹಮಿಷ್ಟಂ ರೇಕ್ಣಃ ಸುಖಂ ಪರಮಂ ತದ್ದದಾಸಿ।(2)ಆ ಸಮಂತಾದ್ಧಾರಕಸ್ಯಾಪಿ ವಾಯೋಃ ಪ್ರಜ್ಞಾನದಃ ಪ್ರೋಚ್ಯಸೇ ತ್ವಂ ಪಿತಾ ಚ ॥ ಪ್ರಶಾಸ್ಸಿ ತ್ವಂ ಪರಿಷತ್ಸ್ವಾಧಿಕಾರಂ ಪ್ರದೇಶಕತ್ವಾದಖಿಲಂ ತ್ವಂ ಸುವೇತ್ತಾ ॥ ೧೪ ॥

ಅ ॥ (1) ಎಲೋ ಶ್ರೀ ಹರಿಯೇ ನೀನು ಮಹಾಸ್ತುತ್ಯನಾದ, ಮತ್ತು ಶ್ರೀ ವಿಷ್ಣುವನ್ನು ಸ್ತುತಿಸುವವನಿಗೋಸ್ಕರ, ಇಷ್ಟವಾದ ಪರಮಧನವು ಯಾವುದು ಇದೆಯೋ ಅಂತಹ ಸುಖವನ್ನೇ ಕೊಡುತ್ತಿ. (2) ಚೆನ್ನಾಗಿ ಧಾರಕನಾದ ವಾಯುವಿಗೂ ಕೂಡ ನೀನು ಪ್ರಕೃಷ್ಟ ಜ್ಞಾನವನ್ನು ಕೊಡುವವನೆಂದೂ ಪಿತನೆಂದೂ ಹೇಳಲ್ಪಡುತ್ತಿ. (3) ಯಾವ ನೀನು ಎಲ್ಲವನ್ನು ಚೆನ್ನಾಗಿ ತಿಳಿದವನಾಗಿರುತ್ತಿಯೋ ಅದ ಕಾರಣ ನೀನು ಉಪದೇಶಕನಾದುದರಿಂದ ಅಪರೋಕ್ಷ ಜ್ಞಾನದಲ್ಲಿ ಯೋಗ್ಯರಾದ ದೇವಾದಿಗಳನ್ನು ಚೆನ್ನಾಗಿ ಶಿಕ್ಷಿಸುತ್ತಿ (ಪ್ರದಿಶಃ ಎನ್ನುವುದರಿಂದಲೂ ಉಪದೇಶಕತ್ವವು ಉಕ್ತವಾಯ್ತು. ಪ್ರಪಾಕಂಶಾಸ್ಸಿ ಎನ್ನುವಲ್ಲಿಯೂ ಉಪದೇಶಕತ್ವವೇ ವಿವಕ್ಷಿತವಾದ ಪ್ರಯುಕ್ತ ಪುನರುಕ್ತವಾಯ್ತು ಎಂದರೆ, **ಸಾಮಾನ್ಯಂವಿಶೇಷೇ ಹೇತುಃ** ಸರ್ವೋಪದೇಶಕತ್ವ ರೂಪವಾದ ಸಾಮಾನ್ಯವು ಆವಿರ್ಭೂತ ಅಪರೋಕ್ಷ ಜ್ಞಾನ ಶಿಕ್ಷಕತ್ವ ವಿಶೇಷದಲ್ಲಿ ಹೇತುವು.) ॥ ೧೪ ॥

ಋ ॥ (೩೬೫) ತ್ವಮಗ್ನೇ ಪ್ರಯತದಕ್ಷಿಣಂ ನರಂ ವರ್ಮೇವ ಸ್ಯೂತಂ ಪರಿ
ಪಾಸಿ ವಿಶ್ವತಃ । ಸ್ವಾದುಕ್ಷದ್ಮಾ ಯೋ ವಸತೌ ಸ್ಯೋನಕೃಜ್ಜೀವ
ಯಾಜಂ ಯಜತೇ ಸೋಪಮಾ ದಿವಃ ॥ ೧೫ ॥ ೩೪ ॥

ಅ ॥ ಅಗ್ನೇ=ಎಲೋ ಶ್ರೀಹರಿಯೇ,ತ್ವಂ=ನೀನು,ಯಃ=ಯಾವ ಮನುಷ್ಯನು, ಸ್ವಾದುಕ್ಷದ್ಮಾ=ಸುಖ ಸಾಧನಗಳಾದ ಮನೆಗಳು ಯಾರಿಂದ ಇತರರಿಗೆ ಆಗುತ್ತವೋ ಅಂತಹವನೋ, ಅಂದರೆ ತನ್ನ ಮನೆಗಳನ್ನು ಇತರಿಗೆ ದಾನಮಾಡುವವನೋ, ಯಶ್ಚ= ಯಾವನು, ವಸತೌ= ತನ್ನ ಮನೆಯಲ್ಲಿ, ಸ್ಯೋನಕೃತ್= ಇತರರಾದ ಅತಿಥಿಗಳಿಗೆ ಅನ್ನ ದಾನಾದಿಗಳಿಂದ ಸುಖವನ್ನು,ಮಾಡುತ್ತಾನೊ,ಯಶ್ಚ=ಯಾವನು ಜೀವಯಾ ಜಂಯಜತೇ= ಜೀವಿಸಿಕೊಂಡಿರುವವನ ಯಾಗವು ಅಂದರೆ ಜೀವನದಿಂದ ವ್ಯಾಪ್ತವಾದ ಯಜ್ಞವನ್ನು ಮಾಡುತ್ತಾನೋ(ಅಂದರೆ ಮರಣ ಪರ್ಯಂತ ಸರ್ವದಾ ಯಾವನು ಯಜ್ಞವನ್ನುಮಾಡುತ್ತಾನೋ,ತಂ= ಅಂತಹ,ಪ್ರಯತದಕ್ಷಿಣಂ= (ಪ್ರಪೂರ್ವಾರ್ಥವ್ಯತೀ ಪ್ರಯತ್ನೇ ಪ್ರಯತೋ ದಕ್ಷಿಣಾಯಾಂ, ದಕ್ಷಿಣಾ ಶಬ್ದಕ್ಕೆ ಪರನಿಪಾತವು) ಯಾವನು ಯಾಗಗಳಲ್ಲಿ ಪ್ರಯತ್ನ ಪೂರ್ವಕವಾಗಿ ದಕ್ಷಿಣೆಯನ್ನು ಕೊಡುವವನೋ, ಅಂತಹ ನರಂ= ಮನುಷ್ಯನನ್ನು ವಿಶ್ವತಃ=ಸಮಸ್ತ ಕಾಲದಲ್ಲಿ, (ನಿತ್ಯದಲ್ಲಿಯೂ) ಸ್ಯೂತಂ= [ಷಿವು ಬಂಧನೇ.]ಅನುಸ್ಯೂತವಾದ [ಧರಿಸಲ್ಪಟ್ಟ] ವರ್ಮೇವ ಕವಚವನ್ನೆಂಬಂತೆ ಪರಿಪಾಸಿ=ಸುತ್ತಲೂ ರಕ್ಷಿಸುತ್ತಿ. (ಇಂತಹವನಿಗೆ ಕೇವಲ ಐಹಿಕ ರಕ್ಷಣೆಯೇ ಪ್ರಯೋಜನವೋ ಎಂದರೆ ಅಲ್ಲ. ಸ್ವರ್ಗಾದಿ ರೂಪವಾದ ಪಾರತ್ರಿಕ ಫಲವೂ ಪ್ರಯೋಜನವೂ ಆಗುತ್ತದೆ. ಹೇಗೆಂದರೆ)ದಿವಃ=ಸ್ವರ್ಗಾದಿಗಳುಪ್ರಾಪ್ತಿಯಾಗಲಿಕ್ಕೆ,ಸಃ=ಭಗವಜ್ಞಾನ ಮಾರ್ಗದಲ್ಲಿ ಅಭಿನಿವೇಶವೇ,ಉಪಮಾ= ದೃಷ್ಟಾಂತವು. (ಶಾಸ್ತ್ರದಲ್ಲಿ ಹೇಳಿದ ಸಾಧನಗಳನ್ನು ಮಾಡಿದುದರಿಂದ ಇಷ್ಟವಾದ ಫಲವು ಈಗ ತೋರುತ್ತದೆ. ಅದರಿಂದ ಪಾರತ್ರಿಕ ಸುಖವಿದೆ, ಎಂಬುದನ್ನು ಊಹಿಸಲಾಗುತ್ತದೆ.) ॥ ೧೫ ॥ ೩೪ ॥

ಭಾ ॥ (1)ಧೃತಂ ವರ್ಮೇವ ಪರಿಪಾಸಿ ನಿತ್ಯಂ ಪ್ರಯತ್ನಾದ್ಯೋ ದಕ್ಷಿಣಾದೋ ಮಖೇಷು । (2) ಸ್ವಾದುಕ್ಷದ್ಮಾ ಸುಖಗೇಹೋ ಗೃಹೇ ಚ ಸ್ಯೋನಂ ಸುಖಂ ಯಃ ಪರೇಷಾಂ

ಕರೋತಿ (3) ಯಾವಜ್ಜೀವಂ ಯಜತೇ ಸುಪ್ರೀತಿಜ್ಞೋ ಭೂತ್ವಾ ಚ ಯೋ ಯಜತೇ ತಸ್ಯ ಸೈವ। ದ್ಯುಪ್ರಾಪ್ತಿಭಾವೇ ಹ್ಯುಪಮಾ ದೇಹ ಏವ ಕ್ಷಮೇತಿ ವಾ ವಸತಿಜ್ಞಾನಮಾರ್ಗೇ ॥ ೧೫ ॥ ೩೪ ॥

ಅ ॥ (1) ಯಾವನು ಯಾಗಗಳಲ್ಲಿ ಪ್ರಯತ್ನ ಪೂರ್ವಕವಾಗಿ ದಕ್ಷಿಣೆಯನ್ನು ಕೊಡುತ್ತಾನೋ ಅಂತಹವನನ್ನು ನಿತ್ಯದಲ್ಲಿಯೂ ಧರಿಸಲ್ಪಟ್ಟ ಕವಚವನ್ನೆಂಬಂತೆ ಸುತ್ತಲೂ ರಕ್ಷಿಸುತ್ತಿ. (2) ಯಾವನು ಸುಖವಾದ ಮನೆಯುಳ್ಳವನೋ, (ಅಂದರೆ ಸುಖ ಸಾಧನಗಳಾದ ಮನೆಗಳು ಯಾರಿಂದ ಇತರರಿಗೆ ಆಗುತ್ತವೋ ಅಂತಹವನು. ಅಂದರೆ ಪ್ರಶಸ್ತ ಮನೆಗಳನ್ನು ಇತರರಿಗೆ ದಾನ ಮಾಡುವವನೋ,) ಯಾವನು ಮನೆಯಲ್ಲಿ ಇತರರಾದ ಅತಿಥಿಗಳಿಗೆ ಸುಖವನ್ನು ಮಾಡುತ್ತಾನೋ, (3) (ಮರಣ ಪರ್ಯಂತ ಯಾವನು ಯಜ್ಞ ಮಾಡುತ್ತಾನೋ, ಅಂತಹವನನ್ನು ಶ್ರೀಹರಿಯು ಯಾವಾಗ ರಕ್ಷಿಸುತ್ತಾನೆ ಎಂದರೆ.) ಯಾವನು ಯಾವಾಗ ಬದುಕಿಕೊಂಡು ಇರುವ ಪರ್ಯಂತ ಯಾಗ ಮಾಡುತ್ತಾನೋ, ಆಗ ರಕ್ಷಿಸುತ್ತಾನೆ. ದೃಢವಾದ ದೀಕ್ಷೆಯುಳ್ಳವನಾಗಿ ಯಾರು ಯಾಗ ಮಾಡುತ್ತಾನೋ,(ಅಂದರೆ **ಪ್ರಾರಂಭ ಮಾತ್ರಮಿಚ್ಛಾವಾ ವಿಷ್ಣುಧರ್ಮೋ ನ ನಿಷ್ಫಲಃ॥**ಎಂಬ ಪ್ರಮಾಣದಿಂದ ಭಕ್ತಿಪೂರ್ವಕ ದೀಕ್ಷೆಯನ್ನಾರಂಭಿಸಿ ರಕ್ಷಿಸುತ್ತಾನೆ.) (ಹಿಂದೆ ಹೇಳಿದ ಸಮಸ್ತ ವಿಶೇಷಣಗಳುಳ್ಳ ಮನುಷ್ಯನಿಗೆ ಕೇವಲ ಐಹಿಕ ರಕ್ಷೆಯೇ ಪ್ರಯೋಜನವೋ ಅಲ್ಲವೆನ್ನುತ್ತಾರೆ. ಮತ್ತೆ ಸ್ವರ್ಗಾದಿ ರೂಪವಾದ ಪಾರತ್ರಿಕ ಫಲವೂ ಆಗುತ್ತದೆ, ಹೇಗೆಂದರೆ ಆಗಮದಿಂದ, ಆಗಮದಲ್ಲಿಯೇ ಹೇಗೆ ವಿಶ್ವಾಸವು ಎಂದರೆ) ಅಂತಹ ಮನುಷ್ಯನಿಗೆ ಸ್ವರ್ಗ ಪ್ರಾಪ್ತಿಯಾಗಲಿಕ್ಕೆ ಅದೇ ದೃಷ್ಟಾಂತವು. ಅಥವಾ ದೇಹವು ಇರುವಾಗಲೇ ಯಾವುದು ಕ್ಷಮೆಯೋ, ಅದೇ ದೃಷ್ಟಾಂತವು. ಅಥವಾ ಜ್ಞಾನಮಾರ್ಗದಲ್ಲಿ ಯಾವುದು ವಸತಿಯು ಆಸಕ್ತಿಯು ಇದೆಯೋ, ಅದೇವೇ ನಿಶ್ಚಯಕ್ಕಾಗಿ ದೃಷ್ಟಾಂತವು ಆಗುತ್ತದೆ. (ಅಂದರೆ ಈ ದೇಹದಲ್ಲಿಯೇ ಕ್ಷಮೆಯು ಸಿಗುವುದಕ್ಕಾಗಿ ಜ್ಞಾನಮಾರ್ಗದಲ್ಲಿ ಆವಾಸಮಾಡುವುದಕ್ಕಾಗಿ ವೇದೋಕ್ತ ಕರ್ಮವನ್ನು ಮಾಡುತ್ತಿರಲು ಈ ದೇಹದಲ್ಲಿಯೇ ಯಾವುದು ಕ್ಷಮೆಯೋ ಯಾವುದು ಜ್ಞಾನಮಾರ್ಗದಲ್ಲಿ ಆವಾಸವು ಲಬ್ಧವಾಗುತ್ತದೋ ಅವೆರಡೂ ವೇದೋಕ್ತ ಕರ್ಮದಿಂದ ಸ್ವರ್ಗಪ್ರಾಪ್ತಿಯೂ ಆಗುತ್ತದೆ. ॥ ೧೫ ॥

ವಿ ॥ ಶ್ರುತ್ಯುಕ್ತವಾದ ಉಪಮಾ ಶಬ್ದವು ಸ್ತ್ರೀಲಿಂಗವಾದ ಪ್ರಯುಕ್ತ ಯಾವುದು ಆಕಾಂಕ್ಷೆಯು ಇದೆಯೋ ಅದು ಸ್ತ್ರೀಲಿಂಗದಿಂದಲೇ ಪೂರ್ಣೀಕರಿಸಬೇಕೆಂಬ ಅಭಿಪ್ರಾಯದಿಂದ ಕ್ಷಮಾ ವಸತಿಃ ಎಂದು ಸ್ತ್ರೀಲಿಂಗ ಪ್ರಯೋಗವು. (2) ಆಗಮೋಕ್ತವಾದುದು ಯಜ್ಞಾದಿಗಳ ಫಲವು ಸ್ವರ್ಗಾದಿಗಳು, ಎನ್ನುವಲ್ಲಿ ವಿಶ್ವಾಸವನ್ನು ಯಾವ ಪ್ರಮಾಣದಿಂದ ಮಾಡಬೇಕು ಎಂಬ ಶಂಕೆಗೆ **ಸೋಪಮಾ ದಿವಃ** ಎನ್ನುವುದರಿಂದ ಉತ್ತರವು ಹೇಗೆ ಉಂಟಾಯ್ತು ಎಂದರೆ ಸಹಸ್ರನಾಮ ಪಠನ ರೂಪವಾದ **ಇಮಂಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ । ಯುಜ್ಯೇತಾತ್ಮಾ ಸುಖ ಕ್ಷಾಂತಿಶ್ರೀಧೃತಿಸ್ಮೃತಿಕೀರ್ತಿಭಿಃ ॥** ಇತ್ಯಾದಿ ಆಗಮೋಕ್ತವಾದ ಸಾಧನದಿಂದ ಇಲ್ಲಿಯೇ ಕ್ಷಮಾದಿ ರೂಪವಾದ ಫಲವು ತೋರುತ್ತದೆ. ಆ ದೃಷ್ಟಾಂತದಿಂದ, ವಿಮತಂ ಯಜ್ಞಾದಿ ಫಲಂ ಸ್ವರ್ಗಾದ್ಯವಶ್ಯಂ ಭವಿಷ್ಯತಿ ಆಗಮೋಕ್ತತ್ವಾತ್ ಕ್ಷಮಾವತ್, ಎಂದು ಪಾರತ್ರಿಕ ಫಲವೂ ಅನುಮಿತವಾಗುತ್ತದೆ. ॥ ೧೫ ॥

ಋ ॥ (೩೬೬) ಇಮಾಮಗ್ನೇ ಶರಣಿಂ ಮೀಮೃಷೋ ನ ಇಮಮಧ್ವಾನಂ
ಯಮಗಾಮ ದೂರಾತ್ । ಆಪಿಃ ಪಿತಾ ಪ್ರಮತಿಃ ಸೋಮ್ಯಾನಾಂ
ಭೃಮಿರಸ್ಯೃಷಿಕೃನ್ಮರ್ತ್ಯಾನಾಂ ॥ ೧೬ ॥

ಅ ॥ ಅಗ್ನೇ=ಎಲೋ ಶ್ರೀಹರಿಯೇ, ಯಸ್ತ್ವಂ=ಯಾವ ನೀನು, ಸೋಮ್ಯಾನಾಂ=ಸೋಮಪಾನಾರ್ಹರಾದ, ದೇವತೆಗಳಿಗೆ, ಆಪಿಃ=ಪ್ರಾಪ್ಯನೂ, ಪಿತಾ=ಜನಕನೂ, ಪ್ರಮತಿಃ=(ಪ್ರಕೃಷ್ಟಾ ಮತಿರ್ಯಸ್ಮಾತ್)ಪ್ರಕೃಷ್ಟವಾದ ಬುದ್ಧಿಯು ಯಾರಿಂದ ಆಗುತ್ತದೋ, ಅಂದರೆ ಭಕ್ತರಿಗೆ ಜ್ಞಾನದಾಯಕನೂ, ಅಸಿ=ಆಗಿರುತ್ತಿಯೋ, ಮರ್ತ್ಯಾನಾಂ=ಮನುಷ್ಯರಿಗೆ, (ಮನುಷ್ಯರನ್ನು) ಭೃಮಿಃ=(ಭ್ರಮುಚಲನೇ) ಸ್ವರ್ಗಭೂಮಿ ನರಕ ರೂಪವಾದ ಸಂಸಾರದಲ್ಲಿ ತಿರುಗಿಸುವವನೂ, ಅಸಿ=ಆಗಿರುತ್ತಿಯೋ, ಹಾಗೆಯೇ, ಋಷಿಕೃತ್=ಜ್ಞಾನದಾನ ಮಾಡಿ ಭಕ್ತರನ್ನು ಋಷಿಗಳನ್ನಾಗಿ ಮಾಡುತ್ತಿಯೋ, ಅಗ್ನೇ=ಎಲೋ ಶ್ರೀಹರಿಯೇ, ಇಮಾಂ=ತ್ವಮಗ್ನೇ ಇತ್ಯಾದಿಗಳಿಂದ ನಾನು ನಿನ್ನನ್ನು ಶರಣು ಹೊಂದುತ್ತೇನೆ ಎಂದು ಹೇಳಲ್ಪಟ್ಟ ಈ, ನಃ=ನನ್ನ, ಶರಣಿಂ=ಶರಣ ಪ್ರಾಪ್ತಿಯನ್ನು, (ನಾನು ಶರಣು ಹೊಂದುತ್ತೇನೆ ಎಂಬುವುದನ್ನು) ಮಿಮೃಷಃ=(ಮೃಷಸಹನೇ) (ಮೃಷತಿತಿಕ್ಷಾಯಾಂ) ಸಹಿಸುಕೊ. (ಅಂದರೆ-ಅಲ್ಪನಾದ ಇವನು ಶ್ರೇಷ್ಠನಾದ ನನ್ನನ್ನು ಹೇಗೆ ಶರಣು ಹೊಂದುತ್ತಾನೆ, ಎನ್ನುವ ಬುದ್ಧಿಯಿಂದ ಸಿಟ್ಟುಮಾಡಬೇಡ.) (ಏಕೆಂದರೆ) ಯಂ ಇಮಂ ಅಧ್ವಾನಂ=ಯಾವ ಈ ಮಾರ್ಗವನ್ನು ನಿಶ್ಚಯಿಸಿಕೊಂಡು, (ಯಾವ ಕಾರಣದಿಂದ ನಿನ್ನ ಪ್ರಾಪ್ತಿಗಾಗಿ) ದೂರಾತ್=ದೂರಕ್ಕೇನೇ ಅಗಾಮ=ಬಂದಿರುವೆನೋ, (ಆದಕಾರಣ ಅನಾದಿಯಾದ ಸಂಸಾರ ಮಾರ್ಗದಲ್ಲಿ ಖಿನ್ನರಾದ ನಾವು ಕಥಂಚಿತ್ ಈಗ ನಿನ್ನನ್ನು ಯಾವ ಕಾರಣದಿಂದ ಹೊಂದಿರುತ್ತೇವೋ. ಆದ ಕಾರಣ, ಸಹಿಸಿಕೊ. ॥ ೧೬ ॥

ಭಾ ॥ (1) ಯೋ ಮೇ ಭವಚ್ಛರಣಪ್ರಾಪ್ತಿರೇಷಾ ಮರ್ಷಸ್ವ ತಾಮಲ್ಪ ಇತಿ ಕ್ರುಧೋ ಮಾ॥
(2) ತ್ವತ್ಪ್ರಾಪ್ತ್ಯರ್ಥಂ ದೂರಮಾಗಾಂ ಚ ಯತ್ತತ್ಪ್ರಾಪ್ಯಃ ಪಿತಾ ಜ್ಞಾನದೋ ದೇವತಾನಾಂ॥ತ್ವಂ ಭ್ರಾಮಕೋ ಮಾನುಷಾಣಾಮೃಷೀಣಾಂ ಕರ್ತಾ ತಥಾ ಜ್ಞಾನದಾನೇನ ದೇವ ॥ ೧೬ ॥

ಅ ॥ (1) ಎಲೋ ಶ್ರೀಹರಿಯೇ, ತ್ವಮಗ್ನೇ ಇತ್ಯಾದಿಗಳಿಂದ ಹೇಳಲ್ಪಟ್ಟದ್ದು ನಿನ್ನನ್ನು ನಾನು ಶರಣು ಹೊಂದಿದ್ದೇನೇ ಎನ್ನುವುದು ಯಾವುದು ಇದೆಯೋ, ಅದನ್ನು ಸಹಿಸಿಕೊಳ್ಳು. (ಶರಣು ಹೊಂದುವುದು ಅಪರಾಧವೇ ಆಗದಿರುವುದರಿಂದ ಪ್ರಾರ್ಥನೆಯೇ ಕೂಡಲಾರದು ಎಂದು ಶಂಕಾ ಬಂದರೆ ಪ್ರಾರ್ಥನೆಯ ಅಭಿಪ್ರಾಯ ಹೇಳುತ್ತಾರೆ.) ಅಲ್ಪನಾದ ಇವನು ಅತಿ ಶ್ರೇಷ್ಠನಾದ ನನ್ನನ್ನು ಹೇಗೆ ಶರಣು ಹೊಂದುತ್ತಾನೆ, ಎಂಬ ಬುದ್ಧಿಯಿಂದ ಸಿಟ್ಟು ಮಾಡಬೇಡ. (2) (ಅಲ್ಪನಾದ ನಿನ್ನ ಅಪರಾಧವನ್ನು ಶ್ರೇಷ್ಠನಾದ ನಾನು ಏಕೆ ಸಹಿಸಿಕೊಳ್ಳಬೇಕು ಎಂದರೆ) (ಈ ಮಾರ್ಗವನ್ನು ನಿಶ್ಚಯಿಸಿಕೊಳ್ಳು) (ದೂರಾತ್ ಯಂ ಅಗಾಮ ಎನ್ನುವುದರ ತಾತ್ಪರ್ಯ ಹೇಳುತ್ತಾರೆ.) ಯಾವ ಕಾರಣದಿಂದ ನಿನ್ನ ಪ್ರಾಪ್ತಿಗಾಗಿ ದೂರಕ್ಕೇನೇ ಬಂದಿರುವೆನೋ, (ಆದ ಕಾರಣ ಸಹಿಸಿಕೊ.) (ಶ್ರೀವಿಷ್ಣುವು ಸದಾ ತನ್ನ ಹೃದಯದಲ್ಲಿದ್ದ ಪ್ರಯುಕ್ತ ತಾನು ಏತಕ್ಕಾಗಿ ದೂರಕ್ಕೆ ಹೋಗುವುದು? ಎಂದರೆ ಅನಾದಿಯಾದ ಸಂಸಾರ ಮಾರ್ಗದಲ್ಲಿ ದುಃಖಿತನಾದವನು ಕಥಂಚಿತ್ ಈಗ ನಿನ್ನನ್ನು ಜ್ಞಾನ ಸಂಪಾದನೆಯಿಂದ ಯಾವ ಕಾರಣದಿಂದ ಹೊಂದಿರುವೆನೋ, ಆದಕಾರಣ ಸಹಿಸಿಕೊ. ಅಂದರೆ ಶ್ರೀವಿಷ್ಣುವು ಹೃದಯದಲ್ಲಿದ್ದಾನೆ. ವ್ಯಾಪ್ತನೂ ಆಗಿರುತ್ತಾನೆ. ಆದಕಾರಣ ಸದಾ ಸಾಮೀಪ್ಯವು ಇದ್ದರೂ ಅನಾದಿಕಾಲದಿಂದ ಸಂಸಾರ ಕ್ಲೇಶದಲ್ಲಿಯೇ ಮಗ್ನನಾದವನಿಗೆ ಶ್ರೀ ವಿಷ್ಣುವಿನ ಅಜ್ಞಾನವೇ ದೂರ ಗಮನವು. ಶ್ರೀ ವಿಷ್ಣುವಿನ ಜ್ಞಾನವೇ ಸಮೀಪ ಪ್ರಾಪ್ತಿಯು, ಆದಕಾರಣ ಹೇಗೆ ದೂರದಿಂದ ಬಂದಿರುವ ಪ್ರಯುಕ್ತ ಅತ್ಯಲ್ಪನಾದವನದ್ದು ಅಪರಾಧವನ್ನು ದಯಾಳುಗಳು ಸಹಿಸಿಕೊಳ್ಳುತ್ತಾರೋ, ಹಾಗೆಯೇ ನೀನು ಕೂಡ ನನ್ನ ಅಪರಾಧವನ್ನು ಸಹಿಸಿಕೊಳ್ಳು) ನೀನು ಸೋಮಪಾನ ಮಾಡತಕ್ಕ, ದೇವತೆಗಳಿಂದ ಪ್ರಾಪ್ಯನು. ಜನಕನು. ದೇವತೆಗಳಿಗೆ ಜ್ಞಾನದಾನ ಮಾಡುವವನು. ಸ್ವರ್ಗಭೂಮಿ ನರಕಾತ್ಮಕವಾದ ಸಂಸಾರದಲ್ಲಿ ಮನುಷ್ಯರನ್ನು ತಿರುಗಾಡಿಸುವವನು. ಭಕ್ತರಿಗೆ ಜ್ಞಾನದಾನ ಮಾಡಿ ಭಕ್ತರನ್ನು ಋಷಿಗಳನ್ನಾಗಿ ಮಾಡುವವನು. ॥ ೧೬ ॥

ಋ ॥ (೩೬೭) ಮನುಷ್ವದಗ್ನೇ ಅಂಗಿರಸ್ವದಂಗಿರೋ ಯಯಾತಿವತ್ಸದನೇ ಪೂರ್ವವಚ್ಛುಚೇ । ಅಚ್ಛ ಯಾಹ್ಯಾವಹಾ ದೈವ್ಯಂ ಜನಮಾಸಾದಯ ಬರ್ಹಿಷಿ ಯಕ್ಷಿ ಚ ಪ್ರಿಯಂ ॥ ೧೭ ॥

ಅ ॥ ಶುಚೇ=ಶುದ್ಧನಾದ, ಅಂಗಿರಃ=ಶರೀರಗಳಿಗೆ ಪ್ರೇರಕನಾಗಿ ಶ್ರೇಷ್ಠನಾದ, ಅಗ್ನೇ=ಎಲೋ ಶ್ರೀ ಹರಿಯೇ, (ನೀನು) ಮನುಷ್ವತ್, ಅಂಗಿರಸ್ವತ್ ಯಯಾತಿವತ್, ಪೂರ್ವವತ್=ಮನುವಿನ, ಅಂಗಿರಸ ಋಷಿಯ, ಯಯಾತಿ ರಾಜನ, ಹಾಗೆಯೇ ಇತರರಾದ ಪೂರ್ವ ಪುರುಷರ, ಮಂದಿರಗಳನ್ನು ಹೇಗೆ ತಾನೇ ಹೊಂದಿರುತ್ತಿಯೋ, ಹಾಗೆಯೇ ಸದನೇ=ನನ್ನ ಮಂದಿರವನ್ನು ಕುರಿತು ಅಚ್ಛ=(ಆಭಿಮುಖ್ಯೇ ಅಚ್ಛಮವ್ಯಯಂ ಎಂದು ಆಭಿಮುಖ್ಯಾರ್ಥದಲ್ಲಿ ನಿಪಾತವು. ಅಚ್ಛಗತ್ಯರ್ಥವದೇಷು ಎಂದು ಗತಿ ಸಂಜ್ಞಕವು.) ಅಚ್ಛಯಾಹಿ, ಅಭಿಯಾಹಿ=(ನನಗೆ ನಿನ್ನ ಪ್ರಾಪ್ತಿಗಾಗಿ) ಇದಿರಾಗಿ ಬಾ. (ಬಂದು) ದೈವ್ಯಂ ಜನಂ=ದೇವ ಸಮೂಹವನ್ನು, ಆವಹ=ಕರಿಸು. (ಬಂದವರನ್ನು) ಬರ್ಹಿಷಿ=ಬರ್ಹಿಸ್ಸಿನಲ್ಲಿ ಆ ಸಾದಯ=ಕೂಡ್ರಿಸು. ಪ್ರಿಯಂ=ಕೂತುಕೊಂಡ, ನಿನಗೆ ಪ್ರಿಯವಾದ ದೇವ ಸಮೂಹವನ್ನು, ಯಕ್ಷಿ ಚ=ಯಾಗ ಮಾಡು. (ಅಂದರೆ—ನೀನೇ ಸಮಸ್ತ ಜೀವರಿಗೂ ಪ್ರೇರ೯ನಾದುದರಿಂದ ಋತ್ವಿಜರಲ್ಲಿದ್ದು ಅವರನ್ನು ಪ್ರೇರೇಪಿಸಿ ನೀನೇ ಯಜಿಸು.) ॥ ೧೭ ॥

ಭಾ ॥ ಯಥಾ ಮನುಶ್ಚಾಂಗಿರಾ ವಾ ಯಯಾತಿರ್ಗೃಹೇ ಪ್ರಾಪ್ತಸ್ತ್ವಂ ತಥಾ ಮದ್ಗೃಹಂ ಚ। ಅಭ್ಯಾಯಾಹ್ಯಾವಹ ದೇವಸಂಘಮಾಸಾದಯ ಬರ್ಹಿಷಿ ಯಕ್ಷಿ ಚ ಪ್ರಿಯಂ । ಯಃಪ್ರಾಕ್ತ್ವಮೇವಾಖಿಲೇಜೀವಗೋ ಯತ್ ॥ ೧೭ ॥

ಅ ॥ ಮನುವು, ಅಂಗಿರಋಷಿಯು ಯಯಾತಿ ರಾಜನೂ ಹೇಗೆ ತಂತಮ್ಮ ಮನೆಯಲ್ಲಿ ನಿನ್ನನ್ನು ಹೊಂದಿರುತ್ತಾರೋ ಹಾಗೆಯೇ (ನನಗೆ ನಿನ್ನ ಪ್ರಾಪ್ತಿಗಾಗಿ) ನನ್ನ ಮನೆಯನ್ನು ಕುರಿತು ಬಾ. ಬಂದು ದೇವ ಸಮೂಹವನ್ನು ಕರಿಸು. ಬಂದ ದೇವತೆಗಳನ್ನು ಬರ್ಹಿಸ್ಸಿನಲ್ಲಿ ಕೂಡ್ರಿಸು. ಕೂತುಕೊಂಡ ಪ್ರಿಯರಾದ ದೇವ ಸಮೂಹವನ್ನು ಯಜಿಸು. (ದೇವತೆಗಳ ಆಹ್ವಾನಾದಿಗಳು ಋತ್ವಿಜರ ಕಾರ್ಯವು. ಇದನ್ನು ನಾನು ಹೇಗೆ ಮಾಡಲಿ. ಎಂದರೆ) ಯಾವ ಕಾರಣದಿಂದ ನೀನೇ ಸಮಸ್ತ ಜೀವರಲ್ಲಿದ್ದು ಸರ್ವರಿಗೂ ಪ್ರೇರಕನಾಗಿರುತ್ತಿಯೋ, ಆದ ಕಾರಣ ಋತ್ವಿಜರಲ್ಲಿದ್ದು ಯಜಿಸ಼ುವವನು ನೀನೇ. ॥ ೧೭ ॥

ಋ ॥ (೩೬೮) ಏತೇನಾಗ್ನೇ ಬ್ರಹ್ಮಣಾ ವಾವೃಧಸ್ವ ಶಕ್ತೀ ವಾ ಯತ್ತೇ ಚಕೃಮಾ ವಿದಾ ವಾ । ಉತ ಪ್ರಣೇಷ್ಯಭಿ ವಸ್ಯೋ ಅಸ್ಮಾನ್ ಸಂ ನಃ ಸೃಜ ಸುಮತ್ಯಾ ವಾಜವತ್ಯಾ ॥ ೧೮ ॥ ೩೫ ॥ ೩೧ ॥

ಅ ॥ ಅಗ್ನೇ=ಶ್ರೀ ಹರಿಯೇ, ಶಕ್ತೀ=ಶಕ್ತ್ಯನುಸಾರ, ವಿದಾ ವಾ=ಜ್ಞಾನಾನುಸಾರ, ಯತ್=ಯಾವ ಬ್ರಹ್ಮ ಸ್ತೋತ್ರಾದಿಗಳನ್ನು ತೇ=ನಿನ್ನ ವಿಷಯದಲ್ಲಿ, ಚಕೃಮ=ಮಾಡಿರುತ್ತೇವೋ, ಏತೇನ ಬ್ರಹ್ಮಣಾ=ಈ ವೇದ ವಚನದಿಂದ, ವಾವೃಧಸ್ವ=ಅತಿಶಯವಾಗಿ ಅಭಿವೃದ್ಧನಾಗು. (ಅಂದರೆ ನಿನ್ನ ವೃದ್ಧಿಯನ್ನು ವ್ಯಕ್ತೀಕರಿಸು) (ಅಂದರೆ ಶಕ್ತ್ಯನುಸಾರ ಜ್ಞಾನಾನುಸಾರ ಮಾಡಿದ ವೇದೋಕ್ತವಾದ ಸ್ತುತಿಯಿಂದ ನಮಗೆ ಪ್ರತ್ಯಕ್ಷನಾಗು,

ಉತ=ಮತ್ತು,ಅಸ್ಮಾನ್=ನಮ್ಮನ್ನು (ನಮಗೆ) ವಸ್ಯಃ=(ವಸ ಆಚ್ಛಾದನೇ)ಮಂಗಲವನ್ನು,ಅಭಿಪ್ರಣೇಷಿ=ಹೊಂದಿಸಿ ಕೊಡುತ್ತಿ. (ಅಂದರೆ) ನಃ=ನಮ್ಮನ್ನು, ವಾಜವತ್ಯಾ=ಅನ್ನವುಳ್ಳ,(ಸಮಸ್ತ ಭೋಗಗಳಿಂದ ಕೂಡಿದ) ಸುಮತ್ಯಾ= ಒಳ್ಳೇ ಬುದ್ಧಿಯಿಂದ, ಸಂಸೃಜ=ನಿತ್ಯದಲ್ಲಿಯೂ ಕೂಡಿಸು. ಅಥವಾ ಯತ್=ಯಾವ ಕಾರಣದಿಂದ, ಶಕ್ತ್ಯೀ ವಾ ವಿದಾ ವಾ=ಶಕ್ತಿಯಿಂದಲಾಗಲೀ, ಜ್ಞಾನದಿಂದಲಾಗಲೀ ತೇ=ನಿನ್ನದ್ದಾದ, ಕರ್ಮವನ್ನು, ಚಕೃಮ=ಮಾಡಿ ರುತ್ತೇವೋ, ತತ್=ಆದಕಾರಣ, ಉತ=ಒಳ್ಳೇ ಕರ್ಮಗಳನ್ನು ಮಾಡುವುದರಿಂದ, ಮಂಗಲವನ್ನು ಅಭಿಪ್ರಣೇಷಿ= (ಪ್ರಪೂರ್ವಕಾತ್ ಣೀಞ ಪ್ರಾಪಣೇ) ಹೊಂದಿಸಿ ಕೊಡು. ॥ ೧೮ ॥ ೩೫ ॥ ೩೧ ॥

ಭಾ ॥ (1) ಸ್ಪಷ್ಟತ್ವಂ ಚ ಪ್ರಾಪ್ನುಹಿ ವೇದವಾಚಾ । (2) ಶಕ್ತ್ಯಾ ಯತ್ತೇ ಚಕೃಮ ಜ್ಞಾನತೋ ವಾ (3) ವಸ್ಯೋ ಭದ್ರಂ ಪ್ರಣಯಾಸ್ಮಾನ್ ಸುಮತ್ಯಾ ॥ ಭೋಗೇ ಕಯಾ ಸಂಸೃಜ ನಿತ್ಯಮೇವ (4) ಯಸ್ಮಾಚ್ಛಕ್ತ್ಯಾ ಚಕೃಮ ತ್ವತ್ಸುಕರ್ಮ ॥ ೧೮ ॥ ೩೫ ॥ ೧೨ ॥

ಅ ॥ (1) ವೇದ ವಚನದಿಂದ ವ್ಯಕ್ತತ್ವವನ್ನೇ ಹೊಂದು. (ಸ್ಪಷ್ಟತ್ವವೆಂದರೆ ವ್ಯಕ್ತತ್ವವೇ. ವೃದಿ ಯನ್ನು ಹೊಂದು ಎಂದರ್ಥವಲ್ಲ.) (2) ಶಕ್ತ್ಯನುಸಾರ ಮತ್ತು ಜ್ಞಾನಾನುಸಾರ ನಿನ್ನ ವಿಷಯದಲ್ಲಿ ಯಾವ ಬ್ರಹ್ಮಸ್ತುತಿಯನ್ನು ಮಾಡಿರುತ್ತೇವೋ, (ಅಂದರೆ — ಶಕ್ತ್ಯನುಸಾರವಾಗಿಯೂ ಜ್ಞಾನಾನುಸಾರವಾಗಿಯೂ ಮಾಡಿದ ವೇದೋಕ್ತವಾದ ಸ್ತುತಿಯಿಂದ ನಮಗೆ ಪ್ರತ್ಯಕ್ಷನಾಗು.) (ಅಥವಾ ಯಾವ ಕಾರಣದಿಂದ ಶಕ್ತ್ಯಾದಿ ಗಳನ್ನು ಅತಿಕ್ರಮಿಸದೆ ಮಾಡಿರುತ್ತೇವೋ ಆದಕಾರಣ ಪ್ರತ್ಯಕ್ಷನಾಗು.) (3) ಮತ್ತು ನಮ್ಮನ್ನು ಮಂಗಲ ವನ್ನು ಹೊಂದಿಸಿಕೊಡು. ಅಂದರೆ ನಮ್ಮನ್ನು ಸಮಸ್ತ ಭೋಗಗಳಿಂದ ಕೂಡಿದ ಒಳ್ಳೇ ಬುದ್ಧಿಯಿಂದ ಕೂಡಿಸು (4) (ಮೊದಲು ಶಕ್ತ್ಯೇತ್ಯಾದಿಗಳನ್ನು ಬ್ರಹ್ಮ ವಿಷಯಕವಾಗಿ ವ್ಯಾಖ್ಯಾನ ಮಾಡಿಯದೆ. ಈಗ ಪ್ರಕಾರಾಂತರ ದಿಂದ ವ್ಯಾಖ್ಯಾನ ಮಾಡುತ್ತಾರೆ.) ಯಾವ ಕಾರಣದಿಂದ ಶಕ್ತಿಯಿಂದಲೂ ಜ್ಞಾನದಿಂದಲೂ ನಿನ್ನ ವಿಷಯಕ ವಾದ ಒಳ್ಳೇ ಕರ್ಮವನ್ನು ಮಾಡಿರುತ್ತೇವೋ ಆದಕಾರಣ ಹೊಂದಿಸಿ ಕೊಡು. ॥ ೧೮ ॥ ೩೫ ॥ ೧೨ ॥

ಅವ ॥ ೧೮ ಋಕ್ಕುಗಳು. ೩ ವರ್ಗಗಳು. ಇಂದ್ರ ದೇವತಾಕವು. ತ್ರಿಷ್ಟುಪ್ ಛಂದಸ್ಕವು. ೩೨ನೇ ಸೂಕ್ತವು.

ಋ ॥ (೩೭೯) ಇಂದ್ರಸ್ಯ ನು ವೀರ್ಯಾಣಿ ಪ್ರವೋಚಂ ಯಾನಿ ಚಕಾರ ಪ್ರಥಮಾನಿ ವಜ್ರೀ । ಅಹನ್ನಹಿಮನ್ವಪಸ್ತತರ್ದ ಪ್ರವಕ್ಷಣಾ ಅಭಿನತ್ಪರ್ವತಾನಾಂ ॥ ೧ ॥

ಅ ॥ ನು=ಈಗಲೇ (ನಾನು) ಇಂದ್ರಸ್ಯ= ದೇವೇಂದ್ರನ, ಅಥವಾ ವಾಸುದೇವನ, ವೀ ರ್ಯಾಣಿ=ಕರ್ಮಗಳನ್ನೂ ಚರಿತ್ರೆಗಳನ್ನು ವಜ್ರೀ=ಈ ಇಂದ್ರನು, ಯಾನಿ ಪ್ರಥಮಾನಿ=ಯಾವ ಕರ್ಮಗಳನ್ನು ಮುಖ್ಯಗಳನ್ನಾಗಿ, ಚಕಾರ=ಮಾಡಿರುವನೋ, ಅಂತಹ ಕರ್ಮಗಳನ್ನು ಪ್ರವೋಚಂ=ಹೇಳಿರುವೆನು. (ನಿನ್ನ ಚರಿತ್ರೆಗಳು ಅನಂತಗಳಾದುದಾಗ್ಯೂ ಅವುಗಳಲ್ಲಿ ಪ್ರಧಾನ ಚರಿತ್ರೆಗಳನ್ನು ಮಾತ್ರ ಹೇಳುತ್ತೇನೆ. ಆ ಚರಿತ್ರೆ ಗಳನ್ನು ವಿವರಿಸಿ ಹೇಳುತ್ತೆನೆ.) (ಇಂದ್ರೋವಜ್ರೀ ಎಂದು ಹೇಳಿದುದರಿಂದ ವಜ್ರಾಯುಧದಿಂದ) ಅಹಿಂ= ಅಹಿನಾಮಕ ದೈತ್ಯ ವಿಶೇಷನನ್ನು ಅಹನ್=ಸಂಹರಿಸಿದನು. (ವಾಸುದೇವ ಪರವಾಗಿ ಆದರೆ) ಶ್ರೀ ಹರಿಯು

ಇಂದ್ರನಲ್ಲಿ ಅಂತರ್ಯಾಮಿಯಾಗಿ ಅಹಿ ದೈತ್ಯನನ್ನು ಸಂಹರಿಸಿದನು. ಅಥವಾ ಅಹಿಂ=(ಹಿಃ ಕೃತೌ ನಿಶ್ಚಯೇ ಖ್ಯಾತೌ, ಹೀತಿ ನಿಶ್ಚಯ ವಾಚೀ ಸ್ಯಾತ್ ಎಂಬ ಪ್ರಮಾಣದಿಂದ) ನಿಶ್ಚಯ ವಿರೋಧಿಯಾದ ಭಕ್ತರ ಸಂಶಯವನ್ನೂ, ಅಹನ್=(ಜ್ಞಾನೋಪದೇಶದಿಂದ) ವಿನಾಶಗೊಳಿಸಿದನು. ಮತ್ತೂ ಅನು ಅಪಃ=ಜಲಾನುಸಾರವಾಗಿ ತತರ್ದ=(ತರ್ದಹಿಂಸಾಯಾಂ) (ಮಾರ್ಗವನ್ನೂ) ಹಿಂಸಿಸಿದನು. (ಮಾರ್ಗಕ್ಕೆ ಹಿಂಸೆಯೆಂದರೆ ಖನನವೇ.) (ಅಂದರೆ ಎಲ್ಲಿ ಜಲವಿದೆಯೋ ಅಲ್ಲಿ ಮಾರ್ಗವನ್ನು ಅಗೆದನು.) (ನಿರಪರಾಧಿಯಾದ ಅಹಿಯನ್ನು ಸಂಹರಿಸಿದುದು ಹೇಗೆ ಕೊಡುತ್ತದೆ ? ಅದಕ್ಕೂ ಜಲಮಾರ್ಗ ಖನನಕ್ಕೂ ಏನು ಸಂಬಂಧವು ?ಎಂದರೆ ಅದಕ್ಕೆ ಉಪಯುಕ್ತವಾದ ಪೌರಾಣಿಕ ಕಥೆಗಳನ್ನು ಹೇಳುತ್ತಾ 2ನೇ ಪಾದದ ತಾತ್ಪರ್ಯ ಹೇಳುತ್ತಾರೆ.) (ಅಹಿ ನಾಮಕ ದೈತ್ಯನು ಲೋಕೋಪದ್ರವಕ್ಕಾಗಿ ಪರ್ವತಗಳಲ್ಲಿ ನದೀದ್ವಾರಗಳನ್ನು ತಡೆದು ಮೇಘಗಳ ಮೂಲಕ ಬಂದ ಮಳೆಯ ನೀರನ್ನು ಅಂತರಿಕ್ಷದಲ್ಲಿಯೇ ತಡೆದು ನಿಂತು ಬಿಟ್ಟನು. ಇಂದ್ರನು ಆ ದೈತ್ಯನನ್ನು ಸಂಹರಿಸಿ ನದೀದ್ವಾರಗಳನ್ನೂ ವಿವರಿಸಿ ಪ್ರವಾಹಕ್ಕಾಗಿ ಜಲಮಾರ್ಗವನ್ನುಅಗೆದನು.) (ವಾಸುದೇವ ಪರವಾಗಿ ಆದರೆ) ವಾಸುದೇವನಾದರೂ, ಅನು ಅಪಃ=ಭಕ್ತರು ಮಾಡಿದ ಕರ್ಮಗಳನ್ನು ನಿಮಿತ್ತೀಕರಿಸಿ, ತತರ್ದ=(ಭಕ್ತರ ಬ್ಬಾದ ಜ್ಞಾನದ ವಿಘ್ನಗಳನ್ನು) ಹಿಂಸಿಸಿದನು. ಮತ್ತೂ, ಇಂದ್ರನು, ಪರ್ವತಾನಾಂ=ಪರ್ವತಗಳ ವಕ್ಷಣಾಃ=(ವಹ ಪ್ರಾಪಣೇ) ರೆಕ್ಕೆಗಳನ್ನು ಪ್ರ ಅಭಿನತ್=ಚೆನ್ನಾಗಿ ಛೇದಿಸಿದನು. ವಾಸುದೇವನಾದರೂ, ಪರ್ವತಾನಾಂ=ಜನ್ಮಾಖ್ಯ ಪರ್ವವುಳ್ಳ, ಜೀವರ, ವಕ್ಷಣಾಃ=(ವಚಪರಿಭಾಷಣೇ) ದುರ್ವಚನಗಳನ್ನೂ,ಪ್ರ ಅಭಿನತ್-ಭಕ್ತರಿಗೆ ಸುಯುಕ್ತಿಗಳನ್ನು ಕೊಟ್ಟು ಆ ಸುಯುಕ್ತಿಗಳಿಂದ ನಿರಾಕರಿಸಿದನು. ॥ ೧ ॥

ಭಾ ॥ (1) ಇಂದ್ರಸ್ಯ ವಾ ವಾಸುದೇವಸ್ಯ ವೀರ್ಯಾಣ್ಯು ಚಕ್ಷ್ಯೇಹಂ ಯಾನಿ ಮುಖ್ಯಾನಿ ಚಕ್ರೇ । (2) ಅಹಿಂ ದೈತ್ಯಂ ಸಂಶಯಂ ವಾ ಜಘಾನ ಜಲಾನುಸಾರೇಣ ಚಖಾನ ಮಾರ್ಗಂ ॥ (3) ತತರ್ದ ವಿಘ್ನಾನ್ ಕರ್ಮಣಾಂ ಹ್ಯಾನುಸಾರಾದ್ವಹನಾತ್ಪಕ್ಷಾ ವಕ್ಷಣಾ ದುರ್ವಚಾಂಸಿ । ಜೀವಾನಾಂ ಚೇದ್ವಕ್ಷಣಾ ಜನ್ಮಪರ್ವವತಾಂ ಬಿಭೇದ್ಯೈವ ಸುಯುಕ್ತಿಭಿಸ್ತಾಃ ॥ ೧ ॥

ಅ ॥ (1) ಇಂದ್ರನು ಯಾವ ಚರಿತ್ರೆಗಳನ್ನು ಪ್ರಧಾನಗಳನ್ನಾಗಿ ಮಾಡಿರುವನೋ, ಅಂತಹ, ಇಂದ್ರನು ಅಥವಾ ವಾಸುದೇವನ ಚರಿತ್ರೆಗಳನ್ನು ನಾನು ಹೇಳುತ್ತೇನೆ.(2) (ಆಚರಿತ್ರೆಗಳನ್ನು ವಿವರಿಸುತ್ತಾರೆ.) ಇಂದ್ರನು ಅಹಿನಾಮಕ ದೈತ್ಯನನ್ನು ಸಂಹರಿಸಿದನು. ವಾಸುದೇವನಾದರೂ ಭಕ್ತರ ಸಂಶಯವನ್ನು ಜ್ಞಾನದಿಂದ ವಿನಾಶಗೊಳಿಸಿದನು. ಜಲವನ್ನನುಸರಿಸಿ ಮಾರ್ಗವನ್ನು ಅಗೆದನು. (ಅಂದರೆ ಜಲವಿದ್ದಲ್ಲಿ ಮಾರ್ಗವನ್ನು ಅಗೆದನು.) (3) ಭಕ್ತರು,ಮಾಡಿದ ಕರ್ಮಗಳನ್ನು ಅನುಸರಿಸಿ ಭಕ್ತರ ಜ್ಞಾನದ ವಿಘ್ನಗಳನ್ನು ಪರಿಹರಿಸಿದನು. ಇಂದ್ರನು ಪರ್ವತಗಳ ರೆಕ್ಕೆಗಳನ್ನು ಛೇದಿಸಿದನು.(ವಕ್ಷಣಾ ಶಬ್ದಾರ್ಥವನ್ನು ಹೇಳುತ್ತಾರೆ.) (ವಹಪ್ರಾಪಣೇ ಎನ್ನುವುದರಿಂದ ಕರಣಾರ್ಥದಲ್ಲಿ ಸನ್‌ಪ್ರತ್ಯಯವು.ಸ್ತ್ರೀಲಿಂಗವು ಶಬ್ದಸ್ವಭಾವವು.) ಹೊಂದಿಸಿ ಕೊಡುವುದರಿಂದ ರೆಕ್ಕೆಗಳು ವಕ್ಷಣಾಃ ಎನಿಸಿಕೊಳ್ಳುತ್ತವೆ. (ವಾಸುದೇವ ಪಕ್ಷದಲ್ಲಿ ವ್ಯಾಖ್ಯಾನ ಮಾಡುತ್ತಾರೆ.) ಜನ್ಮಾಖ್ಯ ಪರ್ವ(ಗ್ರಂಥಿ ವುಳ್ಳ ಜೀವರನ್ನು ವಿವಕ್ಷಾ ಮಾಡಿದರೆ ಆಗ ಆ ಜೀವರ ದುರ್ವಚನಗಳು ವಕ್ಷಣಾಃ ಎನಿಸುತ್ತವೆ. ಅಂತಹ ದುರ್ವಚನಗಳನ್ನು ಸುಯುಕ್ತಿಗಳಿಂದಲೇ ಶ್ರೀಹರಿಯು ನಿರಾಕರಿಸಿದನು.

ವಿ ॥ ಮೋಕ್ಷಕ್ಕೆ ಪ್ರತಿಬಂಧಕಗಳಾದ ಜನ್ಮಗಳೆಂಬ ಪರ್ವ (ಗ್ರಂಥಿ)ಗಳಿದ್ದುದರಿಂದ ಜೀವರು ಪರ್ವತಗಳೆನಿಸುತ್ತಾರೆ.ಅಂತಹ ಕುವಾದಿಗಳಾದ ಜೀವರ ದುಷ್ಟವಚನಗಳನ್ನು ಭಕ್ತರಿಗೆ ಸುಯುಕ್ತಿಗಳನ್ನು ಹೇಳಿ ಆ ಸುಯುಕ್ತಿಗಳಿಂದ ನಿರಾಕರಿಸಿದನು. ॥ ೧ ॥

ಋ ॥ (೩೭೦) ಅಹನ್ನಹಿಂ ಪರ್ವತೇ ಶಿಶ್ರಿಯಾಣಂ ತ್ವಷ್ಟಾಸ್ಮೈ ವಜ್ರಂ ಸ್ವರ್ಯಂ ತತಕ್ಷ । ವಾಶ್ರಾ ಇವ ಧೇನವಃ ಸ್ಯಂದಮಾನಾ ಅಂಜಃ ಸಮುದ್ರಮವಜಗ್ಮುರಾಪಃ ॥ ೨ ॥

ಅ ॥ (ಇಂದ್ರಃ=ಇಂದ್ರನು) ಪರ್ವತೇ=ಪರ್ವತಗಳಲ್ಲಿ, ಶಿಶ್ರಿಯಾಣಂ=ಆಶ್ರಯಿಸಿರುವ, ಅಹಿಂ=ಅಹಿನಾಮಕ ದೈತ್ಯನನ್ನು, ಅಹನ್=ಸಂಹರಿಸಿದನು. (ಈಶ್ವರನಾದರೂ) ಪರ್ವತೇ=ಜನ್ಮವೆಂಬ ಪರ್ವದಿಂದ ಕೂಡಿರುವ ಭಕ್ತರಾದ ಜೀವರ ಸಮೂಹದಲ್ಲಿ, ಶಿಶ್ರಿಯಾಣಂ=ಆಶ್ರಯಿಸಿರುವ, ಅಹಿಂ=ಸಂಶಯವನ್ನು, ಅಹನ್=ಪರಿಹರಿಸಿದನು. ತ್ವಷ್ಟಾ=ದೇವವರ್ಧಕಿಯು, ಅಸ್ಮೈ=ಇಂದ್ರನಿಗಾಗಿ, ಸ್ವರ್ಯಂ=(ಸ್ವೃ ಶಬ್ದೋಪತಾಪಯೋಃ) ಚೆನ್ನಾಗಿ ತೀಕ್ಷ್ಣವಾದ ವಜ್ರಂ=ವಜ್ರಾಯುಧವನ್ನು, ತತಕ್ಷ=ನಿರ್ಮಿಸಿದನು. (ಈಶ್ವರ ಪಕ್ಷದಲ್ಲಿ ಆದರೂ) ತ್ವಷ್ಟಾ=(ತ್ವಿಷ ದೀಪ್ತೌ,) ಪ್ರಕಾಶ ಸ್ವರೂಪಿಯಾದ ವಿರಿಂಚನು. ಅಸ್ಮೈ=ಭಗವದ್ವಿಷಯದಲ್ಲಿ. ಸ್ವರ್ಯಂ=ಶಬ್ದ ಸಂಬಂಧಿಯಾದ ಅಂದರೆ ವೇದಜನ್ಯವಾದ, ವಜ್ರಂ=ಜ್ಞಾನಾಖ್ಯ ವಜ್ರವನ್ನು ತತಕ್ಷ=(ಭಕ್ತರಿಗಾಗಿ) ನಿರ್ಮಿಸಿದನು. (ಅಹಿ ನಾಮಕ ದೈತ್ಯನು ಸಂಹೃತನಾಗೋಣ ಏನಾಯಿತೆಂದರೆ) ಆಪಃ=ನದಿಗಳು (ಇಂದ್ರನಿಂದ ಪ್ರೇರಿತಗಳಾಗಿ) ಸ್ಯಂದಮಾನಾಃ=ಹರಿಯುತ್ತಾ, ವಾಸ್ರಾ ಇವ ಧೇನವಃ=ಅತಿ ಚಿಕ್ಕಕರು ಉಳ್ಳ ಸುರಿಸುತ್ತಿರುವ ಮೊಲೆ ಹಾಲುಳ್ಳ ಗೋವುಗಳು ಶಿಶುಗಳನ್ನು ಹೇಗೋ ಹಾಗೆ ಅಂಜಃ=ವೇಗದಿಂದ, ಸಮುದ್ರಂ=ಸಮುದ್ರವನ್ನು, ಅವಜಗ್ಮುಃ=ಹೊಂದಿದವು. ಅಥವಾ (ಅಧ್ಯಾತ್ಮಪರವಾದ ಅರ್ಥವು) ಶ್ರೀ ಹರಿಯಿಂದ ಪ್ರೇರಿತಗಳಾದ) ಆಪಃ=ಕ್ರಿಯೆಗಳು, ಸ್ಯಂದಮಾನಾಃ=ತಡೆಯಿಲ್ಲದೆ ಇದ್ದವುಗಳಾಗಿ,ವಾಸ್ರಾ ಇವಧೇನವಃ=ಹಿಂದಿನಂತೆ ಅರ್ಥ.) ಸಮುದ್ರಂ=ಸರ್ವೋತ್ಕೃಷ್ಟನಾದ ಶ್ರೀಹರಿಯನ್ನು ಕುರಿತು, ಅವಜಗ್ಮುಃ=ಹೊಂದುತ್ತೇವೆ. (ಅಂದರೆ ಸಂಶಯವು ಪರಿಹಾರವಾದ ಮೇಲೆ ಭಕ್ತರು ಭಗವಂತನನ್ನೇ ಪೂಜಿಸುತ್ತಾರೆ.) ॥ ೨ ॥

ಭಾ ॥ ತ್ವಷ್ಟಾ ತ್ವೀಶಜ್ಞಾನವಜ್ರಂ ವಿರಿಂಚಿಸ್ತತಕ್ಷೈ ತದ್ವಿಷಯಂ ತ್ವಿಡಾತ್ಮಾ । ಸ್ವರ್ಯಂ ವಜ್ರಂ ನಿಶಿತಂ ಶಬ್ದಜಂ ವಾ ಶಿಶುವತ್ಸಾ ಗಾವ ಇವೈತದೀರಿತಾಃ ! ಅಂಜಸ್ಸಮುದ್ರಂ ಜಗ್ಮುರಾಪಃ ಕ್ರಿಯಾ ವಾ ಸಮುದ್ರಿಕ್ತಂ ದೇವಮೇನಂ ವ್ರಜಂತಿ ॥ ೨ ॥

ಅ ॥ (ಪ್ರಥಮ ಪಾದಾರ್ಥವು ಸ್ಪಷ್ಟವೇ ಆಗಿರುವುದರಿಂದ ೨ನೇ ಪಾದವನ್ನು ಶ್ರೀ ವಿಷ್ಣು ವಿಷಯಕವಾಗಿ ವ್ಯಾಖ್ಯಾನ ಮಾಡುತ್ತಾರೆ.) ಯಾವ ಕಾರಣದಿಂದ ಚತುರ್ಮುಖನು ಪ್ರಕಾಶ ಸ್ವರೂಪನೋ, ಆದ ಕಾರಣ ಚತುರ್ಮುಖನು ಭಗವದ್ವಿಷಯಕವಾದ, ಜ್ಞಾನಾಖ್ಯ ವಜ್ರವನ್ನು ಭಕ್ತರಿಗಾಗಿ ನಿರ್ಮಿಸಿದನು. ಏತತ್ತು ಯಾವ ವಜ್ರಾಯುಧದಿಂದ ಅಹಿ ದೈತ್ಯನನ್ನು ಸಂಹರಿಸಿರುವನೋ ಅಂತಹುದು ವಜ್ರಾಯುಧವು. (ಏತತ್ ಎಂಬ ಪದವನ್ನು ಗ್ರಹಣಮಾಡಿದುದರಿಂದ ಪ್ರಸಿದ್ಧನಾದ ಇಂದ್ರನಲ್ಲಿ (ಇಂದ್ರ ಪರವಾಗಿ) ಅರ್ಥವನ್ನು ಇಟ್ಟುಕೊಳ್ಳಬೇಕೆಂದು ಸೂಚಿತವಾಯ್ತು. (ಹೇಗೆಂದರೆ ದೇವವರ್ಧಕಿಯು ಇಂದ್ರನಿಗಾಗಿ ವಜ್ರಾಯುಧವನ್ನು ನಿರ್ಮಿಸಿದನು. ಎಂದು) (೩) (ಸ್ವರ್ಯಂ ಎನ್ನುವುದು ವಜ್ರಕ್ಕೆ ವಿಶೇಷಣವು. ಅದನ್ನು ಪ್ರಸಿದ್ಧವಾದ ಇಂದ್ರಾಯುಧದಲ್ಲಿಯೂ ಜ್ಞಾನದಲ್ಲಿಯೂ ವ್ಯಾಖ್ಯಾನ ಮಾಡುತ್ತಾರೆ) ಸ್ವರ್ಯಂ ಕಾಯಿಸಲ್ಪಟ್ಟ ಅಂದರೆ ಹರಿತವಾದ ವಜ್ರವನ್ನು ನಿರ್ಮಿಸಿದನು.((ಶಸ್ತ್ರಗಳು ಕಾಯಿಸಿದರೆ ಹರಿತಗಳಾಗುತ್ತವೆ.) ಚತುರ್ಮುಖನು ಭಗವದ್ವಿಷಯಲ್ಲಿ) ವೇದ ಜನ್ಯವಾದ ಜ್ಞಾನಾಖ್ಯ ವಜ್ರವನ್ನು (ಭಕ್ತರಿಗಾಗಿ ನಿರ್ಮಿಸಿದನು.) (ಉತ್ತರಾರ್ಧವನ್ನು ಇಂದ್ರನಲ್ಲಿಯೂ,ಶ್ರೀವಿಷ್ಣುವಿನಲ್ಲಿಯೂ ವ್ಯಾಖ್ಯಾನ ಮಾಡುತ್ತಾರೆ.) (ಅಹಿ ದೈತ್ಯನು ಸಂಹೃತನಾಗೋಣ ಈ ಇಂದ್ರನಿಂದ ಪ್ರೇರಿತಗಳಾದ ನದಿಗಳು ಹರಿಯುವುಗಳಾಗಿ ಚಿಕ್ಕ ಕರು ಉಳ್ಳ. ಸುರಿಸುತ್ತಿರುವ ಮೊಲೆ ಹಾಲು ಉಳ್ಳ ಗೋವುಗಳು ಶಿಶುಗಳನ್ನು

ಹೇಗೋ ಹಾಗೆ ಪ್ರತಿಬಂಧಕವಿಲ್ಲದೇನೇ ಸಮುದ್ರವನ್ನು ಸೇರಿದುವು. ಅಥವಾ ಶ್ರೀಹರಿಯಿಂದ ಪ್ರೇರಿತಗಳಾದ ಕ್ರಿಯೆಗಳು ಪ್ರತಿಬಂಧಕವಿಲ್ಲದ ವ್ಯಾಪಾರವುಳ್ಳವುಗಳಾಗಿ ಸರ್ವೋತ್ತಮನಾದ ಶ್ರೀಹರಿಯನ್ನು ಕುರಿತು ಹೊಂದುತ್ತಾರೆ- ಅಂದರೆ ಸಂಶಯವು ಪರಿಹಾರವಾಗೋಣ. ಭಗವದ್ಭಕ್ತರು ಭಗವಂತನನ್ನೇ ಹೊಂದುತ್ತಾರೆ) ॥ ೨ ॥

ಋ ॥ (೩೭೧) ವೃಷಾಯಮಾಣೋಽವೃಣೀತ ಸೋಮಂ ತ್ರಿಕದ್ರುಕೇಷ್ವಪಿಬತ್ಸುತಸ್ಯ । ಆ ಸಾಯಕಂ ಮಘವಾಽದತ್ತ ವಜ್ರಮಹನ್ನೇನಂ ಪ್ರಥಮಜಾಮಹೀನಾಂ ॥ ೩ ॥

ಅ ॥ (ಇಂದ್ರನು) ವೃಷಾಯಮಾಣಃ=ವೃಷಭದಂತೆ ಆಚರಿಸುವವನಾಗಿ, (ಅಂದರೆ ತೃಷೆಯಿರುವ ಎತ್ತು ಹೇಗೆ ನೀರನ್ನು ಸ್ವೀಕರಿಸುತ್ತದೋ ಹಾಗೆಯೇ) ಸೋಮಂ=ಸೋಮವನ್ನು, ಅವೃಣೀತ=ಸ್ವೀಕರಿಸಿದನು. (ಸ್ವೀಕಾರ ಮಾಡಿ) ತ್ರಿಕದ್ರುಕೇಷು=(ತ್ರಿ=ಮೂರು ಸವನಗಳಲ್ಲಿ ಕ=ಸುಖವು. ದ್ರುತಂ=ಪ್ರಾಪ್ತವಾಯ್ತು ಎಂಬ ವ್ಯುತ್ಪತ್ತಿಯಿಂದ ತ್ರಿಕದ್ರುಕ ಎಂದು ಹೆಸರುಳ್ಳ)ಪ್ರಾತಃ ಸವನ,ಮಾಧ್ಯಂಸವನ, ಸಾಯಂ ಸವನ ಎಂಬ ಮೂರು ಸವನಗಳಲ್ಲಿ,ಸುತಸ್ಯ=ಸೋಮವನ್ನುಅಪಿಬತ್‌ಕುಡಿದನು. (ಅಧ್ಯಾತ್ಮಪರವಾದುದು) ತ್ರಿಕದ್ರುಕೇಷು=ಬುದ್ಧ್ಯಾದಿಸ್ಥಾನಗಳಲ್ಲಿರತಕ್ಕ,ಸುತಸ್ಯ=ಮನಸ್ಸನ್ನು,ಅಪಿಬತ್=ಕುಡಿದನು. (ಅಂದರೆ ಬುದ್ಧಿ ಮೊದಲಾದ ಮೂರು ಸ್ಥಾನಗಳಲ್ಲಿರತಕ್ಕ ಭಗವದ್ವಿಷಯಕವಾದ ಮನಸ್ಸನ್ನು ಕುಡಿದನು. (ಅಂದರೆ ಭಗವದ್ವಿಷಯಕಧ್ಯಾನದಿಂದ ಸಂತುಷ್ಟನಾದನು.) ಮಘವಾ=ಧನಾದಿಗಳುಳ್ಳ ಇಂದ್ರನು, ಸಾಯಕಂ=(ಷೋ ಅಂತಕರ್ಮಣಿ, ಯತ್. ಕೃಞ ಧಾತುವಿಗೆ ಡಪ್ರತ್ಯಯವು-)ದೈತ್ಯರ ನಾಶವನ್ನು ಮಾಡತಕ್ಕ,ವಜ್ರಂ=ವಜ್ರಾಯುಧವನ್ನು,ಅಥವಾ ಸಾಯಕಂ=ಅವಿದ್ಯಾದಿಗಳಿಗೆ ನಾಶವನ್ನು ಮಾಡತಕ್ಕ, ವಜ್ರಂ=ಜ್ಞಾನಾಖ್ಯ ವಜ್ರವನ್ನು, ಆ ಅದತ್ತ=ಚೆನ್ನಾಗಿ ಸ್ವೀಕರಿಸಿದನು. (ಅದರಿಂದ)ಅಹೀನಾಂ=ಅಹಿನಾಮಕರಾದ ದೈತ್ಯರ ಮಧ್ಯದಲ್ಲಿ,ಪ್ರಥಮಜಾಂ=ಮುಖ್ಯನಾದ, ಏನಂ=ಈ ಅಹಿನಾಮಕ ದೈತ್ಯನನ್ನು ಅಹನ್=ಸಂಹರಿಸಿದನು.(ಹಾಗೆಯೇ ಶ್ರೀಹರಿಯು)ಸಾಯಕಂ=ಅಜ್ಞಾನಾದಿಗಳನ್ನು ನಾಶಗೊಳಿಸುವ, ವಜ್ರಂ=ಜ್ಞಾನವನ್ನು ಆ ಅದತ್ತ=(ಭಕ್ತರ ಮನಸ್ಸಿನಲ್ಲಿ) ಹುಟ್ಟಿಸಿದನು.(ಅದರಿಂದ) ಅಹೀನಾಂ=(ಹಿಗತೌ ತತಃ ನಞ ಸಮಾಸವು) ಜ್ಞಾನಕ್ಕೆ ವಿರೋಧಿಗಳಾದ ಪಾಪಾದಿಗಳ ಮಧ್ಯದಲ್ಲಿ ಪ್ರಥಮಜಾಂ=ಮುಖ್ಯವಾದ, ಏನಂ=ಈ ಸಂಶಯವನ್ನು ಅಹನ್=ಪರಿಹರಿಸಿದನು. ॥ ೩ ॥

ಭಾ ॥ (೧) ವವ್ರೇ ಸೋಮಂ ತೃಷಿತೋ ಯದ್ವದೇವ ವೃಷಾಽಪಿಬತ್ಸವನೇಷು ತ್ರಿಷು ಸ್ಮ ॥ (೨) ಸವನಾನಾಂ ಕದ್ರುಕತ್ವಂ ದ್ರುತಂ ಯತ್ಕಮತ್ರ ಸೋಮೋ ಧ್ಯಾನಯೋಗೇ ಮನೋ ವಾ ॥ (೩) ಸಾಯಂಕರಂ ಲಯಕೃಜ್ಜ್ಞಾನಮೇವ ಸಮಾದದೇ ಸಂಶಯನಾಶವದ್ವಾ ॥ ೩ ॥

ಅ ॥ (೧) ತೃಷೆಯಿರುವ ಎತ್ತು ನೀರನ್ನು ಹೇಗೆ ಸ್ವೀಕರಿಸುತ್ತದೋ, ಹಾಗೆಯೇ ಇಂದ್ರನು ೩ ಸವನಗಳಲ್ಲಿ ಸೋಮವನ್ನು ಸ್ವೀಕರಿಸಿದನು. (೨) (ಸವನಗಳಲ್ಲಿ ಕದ್ರುಕ ಶಬ್ದವನ್ನು ನಿರ್ವಚನ ಮಾಡುತ್ತಾರೆ.) ಯಾವ ಕಾರಣದಿಂದ ಈ ಸವನಗಳಲ್ಲಿ ಸುಖವು ಪ್ರಾಪ್ತವಾಗಿದೆಯೋ, ಅದಕಾರಣ ಸವನಗಳಿಗೆ ಕದ್ರುಕ ಶಬ್ದವಾಚ್ಯತ್ವವು. (ಕಂ=ಸುಖವು, ದ್ರುಕಂ=ದ್ರುತಂ=ಪ್ರಾಪ್ತವಾಯ್ತು, ಅತ್ರ=ಇಲ್ಲಿ. ಎಂಬ ವ್ಯುತ್ಪತ್ತಿಯಿಂದ) (ಅಧ್ಯಾತ್ಮ ಪರವಾಗಿ ವ್ಯಾಖ್ಯಾನ ಮಾಡುತ್ತಾರೆ.) ಧ್ಯಾನ ಯೋಗದಲ್ಲಿ ಮನಸ್ಸು ಸೋಮವೆನಿಸುತ್ತದೆ. (ಅಧ್ಯಾತ್ಮದಲ್ಲಿ ೩ ಆಧಾರಗಳು ತ್ರಿಕದ್ರುಕವೆನಿಸುತ್ತವೆ. ಹೇಗೆಂದರೆ ಶರೀರದಲ್ಲಿ ಮನಸ್ಸು ಇರುತ್ತದೆ. ಹಾಗೆಯೇ

ಇಂದ್ರಿಯಗಳಲ್ಲಿ ಜ್ಞಾನ ಹುಟ್ಟುವ ಕಾಲದಲ್ಲಿ ಮನಸ್ಸು ಇರುತ್ತದೆ. ಗೋಲಕರೂಪ ಹೃದಯದಲ್ಲಿಯೂ ಮನಸ್ಸು ಇರುತ್ತದೆ. ಆದಕಾರಣ ಸೋಮನಾಮಕ ಮನಸ್ಸಿಗೆ ಶರೀರ ಇಂದ್ರಿಯ ಹೃದಯ ಇವು ಮೂರು ಆಧಾರಗಳು.) (೩) (ಸಾಯಕ ಎನ್ನುವುದು ವಜ್ರದ ಹೆಸರು. ಆದಕಾರಣ ಪುನರುಕ್ತಿ ಪರಿಹಾರಕ್ಕಾಗಿ ನಿರ್ವಚನ ಮಾಡುತ್ತಾರೆ.) ದೈತ್ಯರನ್ನು ನಾಶಗೊಳಿಸುವ ವಜ್ರಾಯುಧವನ್ನೂ, ಸ್ವೀಕರಿಸಿದನು. ಹಾಗೆಯೇ ಅಜ್ಞಾನಾದಿಗಳನ್ನು ನಾಶಗೊಳಿಸುವ ಜ್ಞಾನವನ್ನು ಭಕ್ತರ ಮನಸ್ಸಿನಲ್ಲಿ ಹುಟ್ಟಿಸಿದನು. (ಏವಂಚ ಪ್ರಸಿದ್ಧ ವಜ್ರಾಯುಧವು ದೈತ್ಯರನ್ನು ನಾಶಗೊಳಿಸುವುದು. ಜ್ಞಾನವಾದರೂ ಅವಿದ್ಯಾದಿಗಳನ್ನು ನಾಶಗೊಳಿಸುವುದು.) (ಎಷ್ಟು ಪಕ್ಷದಲ್ಲಿ) ಏನಂ ಎನ್ನುವುದಕ್ಕೆ ಸಂಶಯವನ್ನು (ಎಂದರ್ಥವು.) (ವೃಷಾಯಮಾಣಃ ಎನ್ನುವುದಕ್ಕೆ ಅರ್ಥಾಂತರವನ್ನು ಹೇಳುತ್ತಾರೆ.) ಭಕ್ತರಿಗೆ ಅಭೀಷ್ಟವನ್ನು ಕೊಡತಕ್ಕ ಸರ್ವೇಶ್ವರನಾದ ಶ್ರೀಹರಿಯಂತೆ ಆಚರಿಸುವವನಾಗಿ (ಇಂದ್ರನು ಸೋಮವನ್ನು ಸ್ವೀಕರಿಸಿದನು.) ॥ ೩ ॥

ಋ ॥ (೩೭೨) ಯದಿಂದ್ರಾಹನ್ ಪ್ರಥಮಜಾಮಹೀನಾಮಾನ್ಮಾಯಿನಾಮ

ಮಿನಾಃ ಪ್ರೋತಮಾಯಾಃ । ಆತ್ಸೂರ್ಯಂ ಜನಯನ್ ದ್ಯಾಮು

ಷಾಸಂ ತಾದೀತ್ನಾ ಶತ್ರುಂ ನ ಕಿಲಾ ವಿವಿತ್ಸೇ ॥ ೪ ॥

ಅ ॥ ಇಂದ್ರ=ಎಲೋ ಇಂದ್ರನೇ, (ನೀನು) ಯತ್=ಯಾವ ಕಾರಣ ದೆಸೆಯಿಂದ, ಅಹೀನಾಂ=ಅಹಿನಾಮಕ ದೈತ್ಯರಲ್ಲಿ, ಪ್ರಥಮಜಾಂ=ಮುಖ್ಯನಾದ, ಏನಂ=ಈ ಅಹಿನಾಮಕ ದೈತ್ಯನನ್ನು ಅಹನ್=ಸಂಹರಿಸಿದ್ದುತ್ತಿಯೋ, ಅತ್=ಆ ಕಾರಣ ದೆಶೆಯಿಂದ, ಮಾಯಿನಾಂ=ಕಪಟವುಳ್ಳ ಇತರ ದೈತ್ಯರ, ಮಾಯಾ ಉತ ವ್ಯಾಜರೂಪಗಳಾದ ಮತ್ತು ಕಪಟ ರೂಪಗಳಾದ ಮಾಯೆಗಳನ್ನು, ಪ್ರ ಅಮಿನಾಃ= (ಮೀಞ್ ಹಿಂಸಾಯಾಂ) ನಾಶಗೊಳಿಸಿದಿ. ಮತ್ತು ಆತ್=ಅದರಿಂದಲೇ (ನೀನು) ಸೂರ್ಯಂ ಧ್ಯಾಂ ಉಷಸಂ ಚ=ಸೂರ್ಯಾದಿಗಳನ್ನು ಜನಯನ್=ಹುಟ್ಟಿಸುವವನಾಗಿರುತ್ತಿ. (ಅಂದರೆ ಸೂರ್ಯ ಸ್ವರ್ಗ ದಿನಾದಿಗಳನ್ನು ಮಾಡುವವನಾಗುತ್ತಿ. ಏವಂಚ ಪೂರ್ವದಲ್ಲಿ ಅಹಿನಾಮಕ ದೈತ್ಯನು ಸೂರ್ಯಾದಿಗಳ ವ್ಯಾಪಾರಗಳನ್ನು ತಡೆದಿರುವನು. ಆ ದೈತ್ಯನನ್ನು ಕೊಂದ ತಿರುಗಿ ಸೂರ್ಯಾದಿಗಳ ವ್ಯಾಪಾರಗಳನ್ನು ಮಾಡಿಸಿರುವನು,) (ಆದಾಗ್ಯೂ ಅಹಿ ದೈತ್ಯನನ್ನು ಸಂಹರಿಸಿದುದರಿಂದಲೇ ಮಾಯಾ ವಿನಾಶವು ಹೇಗೆಂದರೆ ಇತರ ದೈತ್ಯರು ಈತನನ್ನೇ ಆಶ್ರಯಿಸಿಕೊಂಡಿರುವುದರಿಂದ ಆತನಿಗೇನೇ ಮುಖ್ಯತ್ವವು. ಮುಖ್ಯತ್ವವು ಹೇಗೆಂದರೆ) ತಾದೀತ್ನಾ=ಅಷ್ಟು ಬಲವುಳ್ಳ ಅಹಿನಾಮಕ ದೈತ್ಯನಿಗೆ ಸಮಾನ ಬಲವುಳ್ಳ ಇನ್ನೊಬ್ಬ ಶತ್ರುಂ=ಶತ್ರುವನ್ನು, ನ ವಿವಿತ್ಸೇ ಕಿಲ=(ವಿದ್ಲೃ ಲಾಭೇ) ಹೊಂದಿರುವುದಿಲ್ಲವಷ್ಟೆ. (ಈಶ್ವರ ಪಕ್ಷದಲ್ಲಿ ಆದರೂ) ಇಂದ್ರ=ಎಲೋ ಪರಮೇಶ್ವರನೇ, ಯತ್ ಯಾವ ಕಾರಣದಿಂದ, ಅಹೀನಾಂ ಜ್ಞಾನ ವಿರೋಧಿಗಳಾದ ಪಾಪಗಳಲ್ಲಿ, ಪ್ರಥಮಜಾಂ=ಮುಖ್ಯವಾದ, ಭಕ್ತರ ಸಂಶಯವನ್ನು (ನೀನು) ಅಹನ್=ನಾಶಗೊಳಿಸಿರುತ್ತಿ. ಆತ್=ಆ ಕಾರಣ, ಮಾಯಿನಾಂ=ಮಾಯಾವಾದಿಗಳ, ಮಾಯಾ ಉತ=ಕುಟಿಲೋಕ್ತಿಗಳನ್ನು, (ಸಂಶಯವನ್ನು ಪರಿಹರಿಸಿಕೊಂಡಿರುವ ತಮ್ಮ ಜನರಿಂದ ಮಾಯಾವಾದಿಗಳನ್ನು ಜಯಿಸಿ) (ಪ್ರ ಅಮಿನಾಃ=ನಾಶಗೊಳಿಸಿರುತ್ತಿ. ಆತ್=ಆದ ಕಾರಣ, ಸೂರ್ಯಂ=ಜ್ಞಾನಕ್ಕೆ ಕಾರಣರಾದ ಆಚಾರ್ಯರನ್ನು ತತ್ಸಂಬದ್ಧವಾದ, ದ್ಯಾಂ=ಮೋಕ್ಷವನ್ನು ಉಷಸಂ ಚ=ಜ್ಞಾನವನ್ನೂ ಕೂಡ, ಜನಯನ್=ಭಕ್ತರಿಗೆ ಮಾಡಿರುತ್ತಿ. (ಅಂದರೆ ಆಚಾರ್ಯರ ಉಪದೇಶದಿಂದಲೇ ಜ್ಞಾನ ಮೋಕ್ಷಗಳು ಲಭಿಸುವವು.) ॥ ೪ ॥

ಭಾ ॥ (೧) ಅಹನ್ನೇನಂ ಪ್ರಥಮಂ ಮಾಯಿನಾಂ ಚ ವ್ಯನಾಶಯೋ ವ್ಯಾಜರೂಪಾಶ್ಚ ಮಾಯಾಃ । (೨) ತತಃ ಸೂರ್ಯದ್ಯುದಿನಾದೇಶ್ಚ ಕರ್ತಾ ತ್ವಮೇವ ತಾವದ್ಬಲ

ತೋ ನ ಶತ್ರುಂ ॥ ಲಭಸೇ (೩) ಮಾಯಾವಾದಿನಾಂ ವ್ಯಥ ಮಾಯಾ ವ್ಯಸಾಳಯಃ ಸ್ವಜನ್ಯೈಸ್ತುಜ್ಞಯೇನ ॥ ೪ ॥

ಅ ॥ (೧) (ಇಂದ್ರನೇ ಯಾವ ಕಾರಣದಿಂದ ಅಹಿನಾಮಕ ದೈತ್ಯರಲ್ಲಿ) ಮುಖ್ಯನಾದ ಈ ಅಹಿನಾಮಕ ದೈತ್ಯನನ್ನು ಸಂಹರಿಸಿರುತ್ತಿಯೋ ಆ ಕಾರಣ ಕಪಟವುಳ್ಳ ಇತರ ದೈತ್ಯರ ವ್ಯಾಜರೂಪಗಳಾದ ಮತ್ತು ಕಪಟ ರೂಪಗಳಾದ ಮಾಯೆಗಳನ್ನು ನಾಶಗೊಳಿಸಿರುತ್ತಿ. (೨) ಆ ಕಾರಣದಿಂದಲೇ ಸೂರ್ಯ ಸ್ವರ್ಗ ದಿನಾದಿಗಳಿಗೂ ಉತ್ಪಾದಕನಾಗಿರುತ್ತಿ. (ಪೂರ್ವದಲ್ಲಿ ಸೂರ್ಯಾದಿಗಳ ವ್ಯಾಪಾರಗಳು ಅಹಿನಾಮಕ ದೈತ್ಯನಿಂದ ತಡೆಯಲ್ಪಟ್ಟಿದ್ದವು. ಆತನನ್ನು ಸಂಹರಿಸಿ ಪುನಃ ಆ ವ್ಯಾಪಾರಗಳನ್ನು ಮಾಡಿಸುವವನಾಗಿರುತ್ತಿ.) ಅಷ್ಟು ಬಲವುಳ್ಳ ಅಂದರೆ ಅಹಿನಾಮಕ ದೈತ್ಯನ ಸಮಾನ ಬಲವುಳ್ಳ ಇನ್ನೊಬ್ಬ ಶತ್ರುವನ್ನು ಎಲ್ಲಿಯೂ ಹೊಂದಲೇ ಇಲ್ಲ. (೩) (ಪರಮೇಶ್ವರನಲ್ಲಿ ಲೇಶತಃ ವ್ಯಾಖ್ಯಾನ ಮಾಡುತ್ತಾರೆ.) ಅಥವಾ (ಯಾವಕಾರಣದಿಂದ ಜ್ಞಾನ ವಿರೋಧಿಗಳಲ್ಲಿ ಮುಖ್ಯವಾದ ಭಕ್ತರ ಸಂಶಯವನ್ನು ನೀನು ವಿನಾಶ ಗೊಳ್ಳಿಸಿರುತ್ತಿಯೋ. (ಸಂಶಯಕ್ಕೆ ಸದೃಶವಾದ ಶತ್ರು ಹೊಂದಲಿಲ್ಲ) ಆದಕಾರಣ ವಿರುದ್ಧವಾದಿಗಳ ಕುಟಿಲೋಕ್ತಿಗಳನ್ನು ಸಂಶಯವನ್ನು ಪರಿಹರಿಸಿ ಕೊಂಡಿರುವ ಸ್ವಜನರಿಂದ ಮಾಯಾವಾದಿಗಳನ್ನು ಜಯಿಸಿ ವಿನಾಶಗೊಳಿಸಿರುತ್ತಿ. ॥ ೪ ॥

ಋ ॥ (೩೭೩) ಅಹನ್ವೃತ್ರಂ ವೃತ್ರತರಂ ವ್ಯಂಸಮಿಂದ್ರೋ ವಜ್ರೇಣ ಮಹತಾ ವಧೇನ । ಸ್ಕಂಧಾಂಸೀವ ಕುಲಿಶೇನಾ ವಿವೃಕ್ಣಾಹಿಃ ಶಯತ ಉಪಪೃಕ್ಪೃಥಿವ್ಯಾಃ ॥ ೫ ॥ ೩೬ ॥

ಅ ॥ ಇಂದ್ರಃ=ಇಂದ್ರನು, ಶ್ರೀಹರಿಯು, ಮಹತಾ=ಶ್ರೇಷ್ಠವಾದ, ವಧೇನ=ಸಂಹಾರ ಸಾಧನವಾದ, ವಜ್ರೇಣ= ವಜ್ರಾಯುಧದಿಂದ, ವೃತ್ರಂ=ವೃತ್ರನೆಂಬ ದೈತ್ಯನನ್ನು ಅಥವಾ ಅಜ್ಞಾನವನ್ನು, ವೃತ್ರತರಂ= ವೃತ್ರದೈತ್ಯನಿಗಿಂತಲೂ ಅಧಿಕನಾದ ವೃತ್ರತರನಾಮಕ ದೈತ್ಯನನ್ನು ಅಥವಾ ಮಿಥ್ಯಾಜ್ಞಾನವನ್ನು, ವ್ಯಂಸಂ= (ವಿಪೂರ್ವಾತ್ ಅಮುಗತ್ಯಾದೌ, ಸಪ್ರತ್ಯಯಃ ವಿರುದ್ಧ ಜ್ಞಾನಾರ್ಥಕಃ) ನಷ್ಟವಾದ ಭುಜಶಿರಸ್ಸಿನ ಸಂಧಿಯುಳ್ಳವನನ್ನಾಗಿ (ಅಂದರೆ ಶಿರಸ್ಸನ್ನು ಛೇದಿಸಿ) ಅಹನ್=ಸಂಹರಿಸಿದನು. ವೃತ್ರಾದಿ ಶಬ್ದವಾಚ್ಯವಾದ ಅಜ್ಞಾನಾದಿಗಳನ್ನು ಶ್ರೀಹರಿಯು ಜ್ಞಾನದಿಂದ ಪರಿಹರಿಸಿದನು. ಹೀಗೆಯೇ ವೃತ್ರ ದೈತ್ಯನನ್ನೂ, ವೃತ್ರತರ ನಾಮಕ ದೈತ್ಯನನ್ನು ಅಹಿನಾಮಕ ದೈತ್ಯನನ್ನು, ಹೀಗೆ ಈ ಮೂವರನ್ನು ಇಂದ್ರನು ಸಂಹರಿಸಿದನು. ಆದಕಾರಣ, ವಿವೃಕ್ಣಾ= (ವಿಪೂರ್ವಾತ್ ಓವ್ರಶ್ಚೂ ಛೇದನೇ ಇತ್ಯಸ್ಮಾತ್ ಕ್ತಪ್ರತ್ಯಯಃ) ವಿಶೇಷತಃ ಛಿನ್ನಗಳಾದ, ಸ್ಕಂಧಾಂಸೀವ= (ಸ್ಕಂದಿರ್ ಗತಿ ಶೋಷಣಯೋಃ, ಅಸ್ ಪ್ರತ್ಯಯ. ದಕಾರಕ್ಕೆ ಧಕಾರ.) ಮರದ ಗೆಲ್ಲುಗಳು ಹೇಗೋ ಹಾಗೆಯೇ ಕುಲಿಶೇನ=ವಜ್ರಾಯುಧದಿಂದ, (ಭಿನ್ನ ಭಿನ್ನರಾದ) ಅಹಿ ವೃತ್ರ ವೃತ್ರತರರು, ಪೃಥಿವ್ಯಾಃ ಉಪಸ್ಪೃಕ್= (ಪೃಚೀ ಸಂಪರ್ಕೇ) ಪೃಥಿವೀ ಸಂಪರ್ಕವುಳ್ಳವರಾಗಿ, ಶಯತೇ=(ಶೀಙ್ ಸ್ವಪ್ನೇ) ಮಲಗಿದರು. (ಅಂದರೆ ಭೂಮಿಯಲ್ಲಿ ಬಿದ್ದರು.) (ಆಧ್ಯಾತ್ಮಪರವಾದ ಅರ್ಥವು.) ಕುಲಿಶೇನ=(ಕುಲಂ ಅಸ್ಯಾಸ್ತೀತಿ ಕುಲೀ) ಬ್ರಹ್ಮಜ್ಞಾನಿಯು. (ತನ್ನ ಕುಲಕ್ಕೆ ಸುಖಕ್ಕೆ ಕಾರಣನಾದುದರಿಂದ ಬ್ರಹ್ಮಜ್ಞಾನಿಯು ಕುಲೀ ಎನಿಸುತ್ತಾನೆ.) (ಕುಲಿನಃ ಶಂ= ಸುಖವು ಯಸ್ಮಾದ್ಭವತಿ) ಕುಲಿಶೇನ=ಜ್ಞಾನದಿಂದ, ಅಹಿಃ=ಜ್ಞಾನ ವಿರೋಧಿಗಳಾದ ಪಾಪ ಅಜ್ಞಾನ ಸಂಶಯಃ ಮಿಥ್ಯಾಜ್ಞಾನಗಳು, ಪೃಥಿವ್ಯಾಃ ಉಪಸ್ಪೃಕ್ = ಬುದ್ಧಿಸಂಬದ್ಧಗಳು. ಬುದ್ಧಿಯಲ್ಲಿರುವವುಗಳು, ವಿವೃಕ್ಣಾಃ=ಚೆನ್ನಾಗಿ ಭಿನ್ನಗಳಾದ ಸ್ಕಂಧಾಂಸೀವ=ಮರದ ಗೆಲ್ಲುಗಳಂತೆ ಶಯತೇ=ಮಲಗುತ್ತವೆ.(ಅಂದರೆ ನಷ್ಟಗಳಾದುವು.) ॥ ೫ ॥

ಭಾ ॥ (೧) ಅಹನ್ ವೃತ್ರಂ ವ್ಯಂಸಮುತೋಧಿಕಂ ಚ (೨) ತಮೋಮಿಥ್ಯಾಪ್ರತ್ಯಯೌ ವ್ಯಂಸನಾದ್ವಾ । (೩) ಸ್ಕಂಧಾಸ್ತರೋರ್ಯದ್ವದಥೋ ವಿವೃಕ್ಣಾ ಅಹಿಃಶ್ಶ ವಜ್ರೇಣ (೪) ಕುಲಸ್ಯ ಶಂಕೃತೇಃ ॥ ವಿದ್ಯಾಖ್ಯಾಮ್ನಾ ಕುಲಿಶೋ (೫) ಬುದ್ಧಿರೇವ ಪೃಥಿವ್ಯಾಖ್ಯಾ ಸಂಶಯ ಸ್ತದ್ಗತೋ ಯತ್ ॥ ಅತಃ ಪೃಥಿವ್ಯಾ ಉಪಸ್ಪೃಕ್ ॥ ೫ ॥

ಅ ॥ (೧) (ಇಂದ್ರನು ವಜ್ರಾಯುಧದಿಂದ) ವೃತ್ರನಾಮಕ ದೈತ್ಯನನ್ನೂ, ಈ ವೃತ್ರನಿಗಿಂತಲೂ ಅಧಿಕನಾದ ವೃತ್ರತರ ನಾಮಕ ದೈತ್ಯನನ್ನೂ, ನಷ್ಟವಾದ ಭುಜ ಶಿರಸ್ಸಿನ ಸಂಧಿಯುಳ್ಳವನನ್ನಾಗಿ (ಅಂದರೆ ಅವರ ಶಿರಸ್ಸುಗಳನ್ನು ಛೇದಿಸಿ) ಸಂಹರಿಸಿದನು. (೨) (ಅಧ್ಯಾತ್ಮ ರೂಪವಾದ ಅರ್ಥವನ್ನು ಹೇಳುತ್ತಾರೆ) ವಿರುದ್ಧ ಜ್ಞಾನಾರ್ಥಕವಾದುದರಿಂದ ವ್ಯಂಸ ಶಬ್ದ ವಾಚ್ಯಗಳಾದ ಅಜ್ಞಾನ ಮಿಥ್ಯಾ ಜ್ಞಾನಗಳನ್ನು (ತಮಃ=ಅಜ್ಞಾನವು ವೃತ್ರಶಬ್ದ ವಾಚ್ಯವು (ಮಿಥ್ಯಾಜ್ಞಾನವು ವೃತ್ರತರಶಬ್ದ ವಾಚ್ಯವು (ಶ್ರೀಹರಿಯು ಜ್ಞಾನದಿಂದ ನಾಶಗೊಳಿಸಿದನು.) (ಹೀಗೆ ವೃತ್ರನನ್ನೂ ವೃತ್ರತರನನ್ನೂ ಅಹಿಯನ್ನೂ ಈ ಮೂವರು ದೈತ್ಯರನ್ನೂ ಇಂದ್ರನು ಸಂಹರಿಸಿದನು.)(೩) ವಿಶೇಷತಃಭಿನ್ನ ಭಿನ್ನಗಳಾದ ಮರದ ಗೆಲ್ಲುಗಳು ಹೇಗೋ ಹಾಗೆ ವಜ್ರಾಯುಧದಿಂದ ಭಿನ್ನ ಭಿನ್ನರಾದ ಅಹಿ ವೃತ್ರ ವೃತ್ರತರರೆಂಬದೈತ್ಯರು(ಭೂಮಿಯಲ್ಲಿ ಬಿದ್ದರು. (೪)(ಅಧ್ಯಾತ್ಮ ರೂಪವಾದ ಅರ್ಥದಲ್ಲಿ ಕುಲಿಶವೆಂದರೆ ಯಾವುದು ಎಂದರೆ)ಯಾವ ಪುರುಷನಲ್ಲಿ ವಿದ್ಯೆಯುಂಟಾಗಿದೆಯೋ,ವಿದ್ಯೆಯುಳ್ಳ ಆ ಕುಲಕ್ಕೇನೇ ಸುಖವನ್ನುಂಟುಮಾಡುವುದ ರಿಂದ ವಿದ್ಯೆಯು ಕುಲಿಶ ಶಬ್ದದಿಂದ ಹೇಳಲ್ಪಡುತ್ತದೆ.(ಕುಲಂ ಅಸ್ಯಾಸ್ತೀತಿ ಕುಲೀ, ವಿದ್ಯೆಯುಳ್ಳವನು. ವಿದ್ಯೆಯುಳ್ಳ ವಂಶಕ್ಕೇನೇ ಶಂ=ಸುಖವು,ಯಸ್ಮಾತ್=ಯಾವುದರಿಂದ ಆಗುತ್ತದೋ,ಆ ವಿದ್ಯೆಯು ಕುಲಿಶವೆನಿಸುತ್ತದೆ.) (೫) (ಅಧ್ಯಾತ್ಮ ರೂಪವಾದ ಅರ್ಥದಲ್ಲಿ ಪೃಥಿವೀ ಶಬ್ದ ವಾಚ್ಯವಾದುದನ್ನು ಹೇಳುತ್ತಾರೆ.)(ಬುದ್ಧಿಯು ಸಂಶಯ ವಿಪರ್ಯಯ ಮೊದಲಾದ ಸಾಮಾನ್ಯ ರೂಪದಿಂದ ಶ್ರೇಷ್ಠವಾಗಿರುವುದರಿಂದ ಬುದ್ಧಿಯೇ ಪೃಥಿವೀ ಎನಿಸುತ್ತದೆ ಯಾವ ಕಾರಣದಿಂದ ಸಂಶಯವು ಬುದ್ಧಿಯಲ್ಲಿರತಕ್ಕುದೋ ಆದ ಕಾರಣ ಸಂಶಯಾದಿಗಳು ಬುದ್ಧಿಸಂಬದ್ಧಗಳು.

ವಿ ॥ (1) ಯದ್ಯಪಿ ಸಂಶಯವೂ ಬುದ್ಧಿಯಾದುದರಿಂದ ಬುದ್ಧಿಯಲ್ಲಿದೆ ಎಂಬುವುದು ಕೂಡಲಾರದು. ಆದಾಗ್ಯೂ ಸಂಶಯಶಬ್ದದಿಂದ ಬುದ್ಧಿಯಲ್ಲಿರತಕ್ಕ ಡೋಲಾಯಮಾನವಾದುದನ್ನು ಇಟ್ಟುಕೊಂಡು ಬುದ್ಧಿಯಲ್ಲಿದೆ ಎಂದದ್ದು (2) ಹೀಗೆಯೇ ಅಜ್ಞಾನ ಶಬ್ದದಿಂದ ಬುದ್ದಿಯಲ್ಲಿರತಕ್ಕ ಯಥಾರ್ಥ ವಿಷಯ ತತ್ತ್ವಾಭಾವವೂ (ಯಥಾರ್ಥವನ್ನು ವಿಷಯೀಕರಿಸದಿರುವುದು) ಮಿಥ್ಯಾ ಜ್ಞಾನಶಬ್ದದಿಂದ ಬುದ್ಧಿಯಲ್ಲಿರತಕ್ಕ ವಿಪರೀತಾರ್ಥ ವಿಷಯಕತ್ವವೂ ಗೃಹೀತವಾಗುತ್ತದೆ.(ವಿಪರೀತವಾದ ಅರ್ಥವನ್ನು ವಿಷಯೀಕರಿಸುವುದು.)(3) ಅಧ್ಯಾತ್ಮ ಪಕ್ಷದಲ್ಲಿ ಸಂಶಯಾದಿಗಳು ಬುದ್ಧಿಯಲ್ಲಿರುತ್ತವೆಂದು ಸಿದ್ಧಗಳಾಗಿರುವುದರಿಂದ ಯಾವ ಸಂಶಯಾದಿಗಳು ಬುದ್ಧಿಯಲ್ಲಿರುತ್ತವೋ ಅವುಗಳು ನಷ್ಟಗಳಾದವು. ॥ ೫ ॥

ಋ ॥ (೩೭೪) ಅಯೋದ್ಧೇವ ದುರ್ಮದ ಆಹಿಜುಹ್ವೇ ಮಹಾವೀರಂ ತುವಿಬಾಧಮೃಜೀಷಂ । ನಾತಾರೀದಸ್ಯ ಸಮೃತಿಂ ವಧಾನಾಂ ಸಂರುಜಾನಾಃ ಪಿಪಿಷ ಇಂದ್ರಶತ್ರುಃ ॥ ೬ ॥

ಅ ॥ ಇಂದ್ರಶತ್ರುಃ=ಇಂದ್ರನೇ ಶತ್ರುವಾಗಿ ಉಳ್ಳ ವೃತ್ರಾಸುರನು, ಅಯೋದ್ಧೇವ=ಪ್ರತಿಭಟನು ಇಲ್ಲದಿರುವವನಂತೆ, ದುರ್ಮದಃ=ದರ್ಪದಿಂದ ಉದ್ರಿಕ್ತನಾಗಿ, ಮಹಾವೀರಂ= ವೀರರಲ್ಲಿ ಪ್ರಧಾನನಾದ, ತುವಿಬಾಧಂ= ಬಹಳ, ಮಹಾ ಶ್ರೇಷ್ಠರಾದ ಶತ್ರುಗಳಿಗೆ ಬಾಧಕನಾದ, ಋಜೀಷಂ= (ಸೋಮಲತೆಯನ್ನು ಛೇದಿಸಿ

ರಸವನ್ನು ತೆಗೆದ ಮೇಲೆ ನೀರಸವಾದುದು ತ್ವಕಟಿಯ ಒಳಗಿರುವುದು ಗರ್ಭಕಾಷ್ಠ ರೂಪವಾದುದು ಅಂಶವು ಯಾವುದು ಅವಶಿಷ್ಟವಾಗುವುದೋ ಅದು ಋಜೀಷವೆಂದೂ ಪಲ್ಕವೆಂದೂ ಹೇಳಲ್ಪಡುತ್ತದೆ. (ಋಜೀಷದಲ್ಲಿ ರಸ ವಿಲ್ಲದಿರುವಿದರಿಂದ ಕಾಷ್ಠರೂಪವಾಗಿ ದೃಢವಾಗಿದೆ. ಇಂದ್ರನಲ್ಲಿ ಋಜೀಷ ಶಬ್ದಕ್ಕೆ ಅಮುಖ್ಯವೃತ್ತಿಯು. ಅದು ಹೇಗೆ ದೃಢವಾಗುತ್ತದೋ, ಹಾಗೆಯೇ ದಾರ್ಢ್ಯ ನಿಮಿತ್ತದಿಂದ)ಋಜೀಷಎಂದು ಹೆಸರುಳ್ಳದೇವೇಂದ್ರನನ್ನು (ಯುದ್ಧಕ್ಕಾಗಿ) ಆಜುಹ್ವೇ ಹಿ (ಹ್ವೇ ಞ ಸ್ಪರ್ಧಾಯಾಂ ಶಬ್ದೇಚ) ಕರೆದನಂತೆ. ಅಥವಾ ವಿಷ್ಣುವೇ ಶತ್ರುವಾಗಿ ಉಳ್ಳ, ಪ್ರತಿಭಟನಿಲ್ಲದಿರುವವನಂತೆ ಮದ ಭರಿತನಾದ ಪ್ರಬಲನಾದ ಅಜ್ಞಾನ ರೂಪನಾದ ವೃತ್ರಾ ಸುರನು ಮಹಾವೀರತನ ಮೊದಲಾದ ಲಕ್ಷಣಗಳುಳ್ಳ ಶ್ರೀವಿಷ್ಣುವನ್ನು ಕರೆದನು (ಆಹ್ವಾನ ಮಾಡಿದ ವೃತ್ರಾ ಸುರನು) ಅಸ್ಯ ಈ ದೇವೇಂದ್ರನ ವಧಾನಾಂ=ಪ್ರಹಾರಗಳ ಸಮೃಜಂ=(ಋ ಗತೌ) ಸಂಪ್ರಾಪ್ತಿಯನ್ನು ನ ಅತಾ ರೀತ್=ದಾಟಲಿಲ್ಲ. (ಅಂದರೆ ದೇವೇಂದ್ರನು ಮಾಡಿದ ಪ್ರಹಾರಗಳನ್ನು ವಂಚಿಸುವುದಲ್ಲಿ (ಸಹಿಸುವುದರಲ್ಲಿ)ಶಕ್ತ ನಾಗಲಿಲ್ಲ.) (ಪ್ರಹಾರದಿಂದ ಪೀಡಿತನಾಗಿ ಬಿದ್ದಿರುವ) ಇಂದ್ರ ಶತ್ರುಃ= ಇಂದ್ರನೇ ಘಾತಕನಾಗಿರುವ (ಅಂದರೆ ಇಂದ್ರನಿಂದ ವಧ್ಯನಾದ) ವೃತ್ರಾಸುರನು, ರುಜಾನಾಃ= ರುಜೋಭಂಗೇ (ರೋಗಯುಕ್ತರಾದ ದುರ್ಬಲ ರಾದ ಮನುಷ್ಯ ಪ್ರಜೆಗಳನ್ನು, ಸಂಪಿಪಿಷೇ= (ಪಿಷ ಸಂಚೂರ್ಣನೇ) ಚೂರ್ಣೀಕರಿಸಿದನು. ಅಥವಾ ಶ್ರೀಹರಿ ಯಿಂದ ಭಕ್ತರ ದ್ವೇಶಯಿಂದ ನಿರಾಕೃತವಾದ ಅಜ್ಞಾನವು. (ಅಂದರೆ ಶ್ರೀಹರಿಯು ಭಕ್ತರಲ್ಲಿ ಅಜ್ಞಾನವನ್ನು ಇಲ್ಲದ ಹಾಗೆ ಮಾಡಿರುವನು. ಹೀಗೆ ಭಕ್ತರಿಂದ ನಿರಾಕೃತವಾದ ಅಜ್ಞಾನವು) ರುಜಾನಾಃ= ಸಂಸಾರ ರೋಗದಿಂದ ಕೂಡಿರುವ ಸಂಸಾರದಲ್ಲಿರುವ ಪ್ರಜೆಗಳನ್ನು, ಸಂ ಪಿಪಿಷೇ=ಚೆನ್ನಾಗಿ ಬಾಧಿಸಿತು. ॥ ೬ ॥

ಭಾ ॥ (1) ಯಸ್ಯ ಯೋದ್ಧಾ ನಾಯೋದ್ಧಾಽಸೌ ತದ್ವದೇವೇಂದ್ರ ಶತ್ರುಃ । ದರ್ಪೋ
ದ್ರಿಕ್ತೋ ಹ್ಯಾಹ್ವಯಾಮಾಸ ಶಕ್ರಂ ವಿಷ್ಣುಂ ವಾಽಜ್ಞಾನಂ ವೀರತಮಂ ರಿಪೂಣಾಂ॥
ಮಹೋಚ್ಚಾನಾಂ ಬಾಧಕಂ ದಾರ್ಢ್ಯಹೇತೋರ್ಋಜೀಷಾಖ್ಯಂ (೨ ನಾಸ್ಯ
ವಿಷ್ಣೋರ್ವಧಾನಾಂ । ಸಂಪ್ರಾಪ್ತಿಮಜ್ಞಾನಮಥಾಪಿ ವೃತ್ರಃ ಶಕ್ರಸ್ಯ ತಾರೀತ್ಸಂ
ಪಿಪಿಷೇ ಪ್ರಜಾಶ್ಚ । ರುಜಾಯುಕ್ತಾಃ ಮಾನುಷೀರ್ವಾ ಸ್ಮೃತಿಸ್ಥಾಃ (೩) ಇಂದ್ರಃ
ಶತ್ರುರ್ಯಸ್ಯ ಸ ಹೀಂದ್ರಶತ್ರುಃ । ಪುಂಸೋಃ ಪೂರ್ವಸ್ಮಿನ್ ಸ್ವರಿತಾಂತೇ
ಸಮಾಸೋ ಬಹುವ್ರೀಹಿರ್ಹೀತಿ ಸೂತ್ರಂ ಪುರಾಣಾಂ ॥ ೬ ॥

ಅ ॥ (೧) ಯಾರಿಗೆ ಪ್ರತಿಭಟನು ಇಲ್ಲವೋ ಅವನಂತೆ ಇಂದ್ರನೇ ಶತ್ರುವಾಗಿ ಉಳ್ಳ ವೃತ್ರಾಸುರನು ದರ್ಪದಿಂದ ಉದ್ರಿಕ್ತನಾಗಿ, ಪ್ರಧಾನ ವೀರನೂ, ಮಹಾಬಲಿಷ್ಠರಾದ ರಿಪುಗಳಿಗೆ ಬಾಧಕನೂ, ದಾರ್ಢ್ಯ ನಿಮಿತ್ತ ವಾಗಿ ಋಜೀಷ ಎಂದು ಹೆಸರುಳ್ಳವನೂ ಆದ ದೇವೇಂದ್ರನನ್ನು (ಯುದ್ಧಕ್ಕಾಗಿ) ಕರೆದನು. ಅಥವಾ ಅಜ್ಞಾನವು ಶ್ರೀ ವಿಷ್ಣುವನ್ನು ಕರೆಯಿತು. (೨) (ಯುದ್ಧಕ್ಕಾಗಿ ಕರೆದ ವೃತ್ರಾಸುರನು) ಈ ದೇವೇಂದ್ರನ ಪ್ರಹಾರಗಳ ಸಂಪ್ರಾಪ್ತಿಯನ್ನು ದಾಟಲಿಲ್ಲ. (ದೇವೇಂದ್ರನು ಮಾಡಿದ ಪ್ರಹಾರಗಳನ್ನು ಸಹಿಸಲಿಕ್ಕೆ ಶಕ್ತನಾಗಲಿಲ್ಲ.) ಅಥವಾ ಅಜ್ಞಾನವು ಶ್ರೀ ವಿಷ್ಣುವಿನ ಪ್ರಹಾರಗಳ ಸಂಪ್ರಾಪ್ತಿಯನ್ನು ದಾಟಲಿಲ್ಲ. ಮತ್ತೆ ಪ್ರಹಾರದಿಂದ ಪೀಡಿತನಾಗಿ ಬಿದ್ದಿರುವ ವೃತ್ರನು ರೋಗ ಯುಕ್ತರಾದ ದುರ್ಬಲರಾದ ಮನುಷ್ಯ ಪ್ರಜೆಗಳನ್ನು ಚೂರ್ಣೀಕರಿಸಿದನು. ಅಥವಾ ಅಜ್ಞಾನವು ಸಂಸಾರದಲ್ಲಿ ಬಿದ್ದಿರುವ ಪ್ರಜೆಗಳನ್ನು ಬಾಧಿಸಿತು. (೩) (ಇಂದ್ರ ಶತ್ರು ಎನ್ನುವಲ್ಲಿ ಬಹುವ್ರೀಹಿ ಸಮಾಸವೋ ತತ್ಪುರುಷ ಸಮಾಸವೋ ಎನ್ನುವ ಸಂಶಯವನ್ನು, ವಿಗ್ರಹವನ್ನು ತೋರಿಸಿ ನಿರಾಕರಿಸುತ್ತಾರೆ) ಇಂದ್ರ ಏವ ಶತ್ರುಃ ಯಸ್ಯ ಇಂದ್ರನೇ ಯಾವ ವೃತ್ರಾಸುರನಿಗೆ ಶತ್ರುವು ನಾಶಕನಾಗಿರುತ್ತಾನೋ ಆತನೇ ಇಂದ್ರ ಶತ್ರು ಎನಿಸುತ್ತಾನೆ. (ಎಂದು ಬಹುವ್ರೀಹಿ ಸಮಾಸವೇ. ಇಂದ್ರಸ್ಯ ಶತ್ರುಃ ಇಂದ್ರಶತ್ರುಃ ಎಂದು ತತ್ಪುರುಷ ಸಮಾಸವಲ್ಲ. ಏಕೆಂದರೆ ವೃತ್ರಾಸುರನು ಇಂದ್ರನಿಗೆ ಶತ್ರುವು(ಘಾತಕನು)ಅಲ್ಲವಷ್ಟೇ. ಮತ್ತೆ ಇಂದ್ರನೇ

ವೃತ್ರಾಸುರನಿಗೆ ಘಾತಕನು ಎಂದು ಬಹುವ್ರೀಹಿಯನ್ನು ಪರಿಗ್ರಹಿಸುವ ವಿಷಯದಲ್ಲಿ ಯುಕ್ತಿಯನ್ನು ಹಿ ಶಬ್ದದಿಂದ ಸೂಚಿಸಿದರು.) (ಪುಲ್ಲಿಂಗಗಳಾದ ಎರಡು ಶಬ್ದಗಳಿಗೆ ಸಮಾಸ ಮಾಡುವಾಗ) ಸಮುಸ್ಯಮಾನಗಳಾದ ಪುಲ್ಲಿಂಗಗಳಾದ ಎರಡು ಶಬ್ದಗಳ ಮಧ್ಯದಲ್ಲಿ ಪೂರ್ವಪದವು ಸ್ವರಿತಾಂತವಾಗುವಾಗ ಆ ಸಮಾಸವು ಬಹುವ್ರೀಹಿಯೆಂದು ತಿಳಿಯಬೇಕು, ಎಂಬುವ ಅರ್ಥವನ್ನು ಪ್ರತಿಪಾದಿಸುವುದು ಪ್ರಾಚೀನವಾದ ವ್ಯಾಕರಣದಲ್ಲಿರತಕ್ಕ ಸೂತ್ರವಿದೆ. ಇದು ಪ್ರಸಿದ್ಧ.

ವಿ ॥ ಹಾಗಾದರೆ ಪ್ರಕೃತದಲ್ಲಿ ಸ್ವರ ವ್ಯತ್ಯಾಸವೂ ಕೂಡಬಹುದಾದುದರಿಂದ ಪೂರ್ವಪದವು ಸ್ವರಿತಾಂತವಾಗಿದ್ದರೆ ಬಹುವ್ರೀಹಿ ಸಮಾಸವೆಂದು ನಿಶ್ಚಯವು ಹೇಗೆ ಆಗುವುದೆಂದರೆ **ಮಂತ್ರೋ ಹೀನಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋ ನ ತದರ್ಥಮಾಹ । ಸ ವಾಗ್ವಜ್ರೋ ಯಜಮಾನಂ ಹಿನಸ್ತಿ ಯಥೇಂದ್ರಶತ್ರುಃ ಸ್ವರತೋಽಪರಾಧಾತ್** ॥ ಎಂಬ ಶಿಕ್ಷಾ ವಾಕ್ಯದಲ್ಲಿ ಮಂತ್ರದಲ್ಲಿದ್ದ ಪದಗಳು ಸ್ವರ ವರ್ಣಗಳನ್ನು ಅನುಸರಿಸಿಯೇ ಅರ್ಥವನ್ನು ಪ್ರತಿಪಾದಿಸುತ್ತವೆ, ಎಂಬುವಲ್ಲಿ ದೃಷ್ಟಾಂತವಾಗಿ ಹೇಳಿದ **ಸ್ವಾಹೇಂದ್ರಶತ್ರುರ್ವರ್ಧಸ್ವ** ಎಂಬಲ್ಲಿದ್ದ ಇಂದ್ರ ಶಬ್ದವು ಹೇಗೆ ಸ್ವರಸಂಬಂಧಿ ಅಪರಾಧಪ್ರಶಿಯಿಂದ ತ್ವಷ್ಟೃವಿಗೆ ವಿವಕ್ಷಿತವಾದ ತತ್ಪುರುಷ ಸಮಾಸವನ್ನು ಸಾಧಿಸುವ ಅಂತೋದಾತ್ತತ್ವವನ್ನು ಬಿಟ್ಟು ಪೂರ್ವಪದಾಂತದಲ್ಲಿ ಸ್ವರಿತೋಚ್ಚಾರಣ ರೂಪವಾದ ದೋಷಪ್ರಶಿಯಿಂದ ಬಹುವ್ರೀಹಿ ಅರ್ಥವು ಪ್ರಾಪ್ತವಾಗುವುದರಿಂದ ಇಂದ್ರನೇ ವೃತ್ರನಿಗೆ ಶತ್ರುವು ಎಂಬ ಅರ್ಥವುಂಟಾಗುತ್ತದೆ ಎಂದು ಹೇಳಿದೆ. (೩) ಮತ್ತು ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ ಎಂದು ಪಾಣಿನಿ ಸೂತ್ರದಲ್ಲಿ ಹೇಳಿದಂತೆ ಪೂರ್ವಪದದಲ್ಲಿ ಪ್ರಕೃತಿ ಸ್ವರವನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕೆಂದೂ ಉಕ್ತವಾಯಿತು. ಏವಂಚ ಎಲ್ಲಿ ಪೂರ್ವಪದದಲ್ಲಿ ಪ್ರಕೃತಿ ಸ್ವರವಿದೆಯೋ ಅಲ್ಲಿ ಬಹುವ್ರೀಹಿ ಸಮಾಸವೆಂದು ತಿಳಿಯಬೇಕು, ಎಂದು ಪ್ರಾಚೀನ ಸೂತ್ರಾರ್ಥವು. ॥ ೬ ॥

ಋ ॥ (೩೭೫) ಅಪಾದಹಸ್ತೋ ಅಪೃತನ್ಯದಿಂದ್ರಮಾಸ್ಯ ವಜ್ರಮಧಿ ಸಾನೌ ಜಘಾನ । ವೃಷ್ಣೋ ವಧ್ರಿಃ ಪ್ರತಿಮಾನಂ ಬುಭೂಷನ್ ಪುರುತ್ರಾ ವೃತ್ರೋ ಅಶಯದ್ವ್ಯಸ್ತಃ ॥ ೭ ॥

ಅ ॥ ಅಪಾತ್=ಪಾದವಿಲ್ಲದಿರುವ, ಅಹಸ್ತಃ=ಹಸ್ತವಿಲ್ಲದಿರುವ, (ಕತ್ತರಿಸಲ್ಪಟ್ಟ ಪಾದ ಬಾಹುಗಳುಳ್ಳವನಾದಾಗ್ಯೂ) ವೃತ್ರಾಸುರನು (ಕೇವಲ ದೇಹದಿಂದ) ಇಂದ್ರಂ=ಇಂದ್ರನನ್ನು, ಅಪತನ್ಯತ್=ಯುದ್ಧ ಮಾಡಿಯೇ ಮಾಡಿರುವನು. (ಈಗ ಆ ಇಂದ್ರನು) ಅಸ್ಯ=ಆ ವೃತ್ರಾಸುರನ, ಸಾನೌ=(ಅಮುಖ್ಯ ವೃತ್ತಿಯಿಂದ ಪರ್ವತದ ಶೃಂಗದಂತೆ ಇರುವ) ಅತ್ಯಂತ ಸ್ಥೂಲವಾದ ಕಂಠ ದೇಶದಲ್ಲಿ,ವಜ್ರಂ=ವಜ್ರಾಯುಧವನ್ನು ಅಧಿ ಆ ಜಘಾನ=ಬಿಟ್ಟು ಬಿಟ್ಟನು. (ಆಧ್ಯಾತ್ಮ ರೂಪವಾದ ಅರ್ಥವು ಆಪಾತ್ ಅಹಸ್ತಃ=ಪ್ರವೃತ್ತಿ ಸಾಧನವಾಗಿರುವುದರಿಂದ ಪಾದ ಹಸ್ತ ಶಬ್ದಗಳಿಂದ ವಾಚ್ಯಗಳಾದ ತರ್ಕಾಗಮಗಳಿಂದ ರಹಿತವಾದ, ವೃತ್ರಃ=ಅಜ್ಞಾನವು ಇಂದ್ರಂ=ಶ್ರೀಹರಿಯನ್ನು ಅಪೃತನ್ಯತ್=ಯುದ್ಧ ಮಾಡಿತು. ಶ್ರೀಹರಿಯು, ಅಸ್ಯ=ಅಜ್ಞಾನದ, ಸಾನೌ=ಶೃಂಗದಂತೆ ಅತಿ ಗುರುವಾದ ಸ್ವರೂಪದಲ್ಲಿ, ವಜ್ರಂ=ಜ್ಞಾನವನ್ನು,ಅಧ್ಯಾಜಗಾಮ=ಸೃಷ್ಟಿಸಿದನು,(ಅಂದರೆ—ಶ್ರೀವಿಷ್ಣುವು ಜೆನ್ನಾಗಿ ಯುದ್ಧ ಮಾಡುವ ಅಜ್ಞಾನವನ್ನು ಜ್ಞಾನಾಖ್ಯ ವಜ್ರದಿಂದ ಹೊಡೆದನು. (ಪರಿಹರಿಸಿದನು.) (ಇಂತಹ ವೃತ್ರನು) ವೃಷ್ಣಃ=ಅಭೀಷ್ಟವನ್ನು ಸುರಿಸುವ ಇಂದ್ರನಿಗೆ, ಅಥವಾ ಶ್ರೀವಿಷ್ಣುವಿಗೆ, ಪ್ರತಿಮಾನಂ=ಪ್ರತಿರೂಪನು, ಶತ್ರುವು, ಬುಭೂಷನ್=ಆಗಲಿಚ್ಛಿಸುವವನಾಗಿ, ವಧ್ರಿಃ=ವಧಕ್ಕೇ (ಸಂಹಾರಕ್ಕೆ) ಯೋಗ್ಯನು ಆದನು.

ಅಥವಾ ರೂಢಿಯಿಂದ ನೀಚನಾದ ವೃತ್ರಾಸುರನು ಅಜ್ಞಾನವೆಂದು ಹೆಸರುಳ್ಳವನು. ಆ ಶ್ರೀಹರಿಯಿಂದ ಪುರುತ್ರಾ= ಬಹು ಸ್ಥಾನಗಳಲ್ಲಿ, ವ್ಯಸ್ತಃ=ನಿರಸ್ತನಾಗಿ, ಅಶಯತ್ = ಬಿದ್ದಿರುವನು. ॥ ೭ ॥

ಭಾ ॥ (1) ಸಂಛಿನ್ನಪಾದ್ಬಾಹುರಪೀಂದ್ರಮೇವ ಯುಯೋಧ ವೃತ್ರಂ ವ್ಯಸೃಜತ್ಸ ತಸ್ಯ । ಗಿರೇಃ ಸಾನುಪ್ರತಿಮೇ ಕಂಠದೇಶೇ: (2) ತರ್ಕಾಗಮಾಭ್ಯಾಂ ರಹಿತಂ ತಮೋ ವಾ॥ (3) ಸಂಯುಧ್ಯಮಾನಂ ಮಾನವಜ್ರೇಣ ವಿಷ್ಣುರ್ಜಘಾನ (4) ವಧ್ರಿರ್ವಧಯೋಗ್ಯೋऽಥ ನೀಚಃ । ಈಶಸ್ಯ ಶತ್ರುರ್ಭವಿತುಂ ಸ ಇಚ್ಛನ್ ವ್ಯಸ್ತೋऽಶಯದ್ಬಹುಧೇಶೇನ ತೇನ ॥ ೭ ॥

ಅ ॥ (1) ವೃತ್ರಾಸುರನು ಚೆನ್ನಾಗಿ ಛೇದಿಸಲ್ಪಟ್ಟ ಪಾದ ಬಾಹುಗಳುಳ್ಳವನಾದಾಗ್ಯೂ ಇಂದ್ರನೊಡನೆ ಯುದ್ಧಮಾಡಿಯೇ ಮಾಡಿರುವನು. ಆಗ ಆ ಇಂದ್ರನು ಆ ವೃತ್ರಾಸುರನ ಪರ್ವತದ ಶೃಂಗದಂತಿರುವ ಅತ್ಯಂತ ಸ್ಥೂಲವಾದ ಕಂಠಪ್ರದೇಶದಲ್ಲಿವಜ್ರಾಯುಧವನ್ನು(ದಿಂದ)ಹೊಡೆದನು.(2)ಅಧ್ಯಾತ್ಮ ರೂಪವಾದಅರ್ಥವು) ತರ್ಕ ಆಗಮುಗಳಿಂದ ವಿರಹಿತವಾದ ಅಜ್ಞಾನವು ಶ್ರೀಹರಿಯನ್ನು ಕುರಿತು ಯುದ್ಧ ಮಾಡಿತು. (ತರ್ಕ ಆಗಮುಗಳು ಜ್ಞಾನ ಮಾರ್ಗದ ಪ್ರವೃತ್ತಿಗೆ ಸಾಧನವಾಗಿರುವುದರಿಂದ ಪಾದಹಸ್ತಗಳ ಸಾಮ್ಯವು.) (3)(ಶ್ರೀಹರಿಯು)ಚೆನ್ನಾಗಿ ಯುದ್ಧ ಮಾಡತಕ್ಕ(ಸಂಬದ್ಧವಾದ) ಅಜ್ಞಾನವನ್ನು ಜ್ಞಾನಾಖ್ಯ ವಜ್ರದಿಂದ ಸಂಹರಿಸಿದನು. (ಪರಿಹರಿಸಿದನು.) (4) ಅಂತಹ ವೃತ್ರಾಸುರನು ಸರ್ವಾಭೀಷ್ಟದಾಯಕನಾದ ಶ್ರೀಹರಿಗೆ ಶತ್ರುವಾಗಿ ಆಗಲಿಚ್ಛಿಸುವವನಾಗಿ ವಧ್ರಿಃ= ಸಂಹಾರ ಯೋಗ್ಯನಾದನು. ಅಥವಾ ನೀಚನಾದ ವೃತ್ರಾಸುರನು ಅಜ್ಞಾನವೆಂದು ಹೆಸರುಳ್ಳವನು. ಸರ್ವ ಸ್ವಾಮಿಯಾದ ಆ ಶ್ರೀಹರಿಯಿಂದ ಬಹು ಸ್ಥಾನಗಳಲ್ಲಿ ನಿರಸ್ತನಾಗಿ ಬಿದ್ದು ಬಿಟ್ಟನು. ॥ ೭ ॥

ಋ ॥ (೩೭೬) ನದಂ ನ ಭಿನ್ನಮಮುಯಾ ಶಯಾನಂ ಮನೋರುಹಾಣಾ ಅತಿಯಂತ್ಯಾಪಃ । ಯಾಶ್ಚಿದ್ವೃತ್ರೋ ಮಹಿನಾ ಪರ್ಯತಿಷ್ಠತ್ತಾಸಾಮಹಿಃ ಪತ್ಸುತಃ ಶೀರ್ಬಭೂವ ॥ ೮ ॥

ಅ ॥ (ನದಿಗಳಲ್ಲಿರತಕ್ಕ ಜಲಗಳನ್ನು ತಡೆಯುವುದಾಗಿ ಇರತಕ್ಕ.) ಅಮುಯಾ=ಮೇಲಿನ ಋಕ್ಕಿನಲ್ಲಿ ಹೇಳಲ್ಪಡತಕ್ಕ ತನ್ನ ತಾಯಿಯಿಂದ ಕೂಡಿಕೊಂಡೇ ದೇವೇಂದ್ರನಿಂದ ಸಂಹೃತನಾದ, ಶಯಾನಂ=ಬಿದ್ದಿರುವ ವೃತ್ರಾಸುರನನ್ನು ಭಿನ್ನಂ ನದಂ=ಭಿನ್ನವಾದ ನದದ ತೀರವನ್ನೆಂಬಂತೆ, ಅತಿ=ಅತಿಕ್ರಮಿಸಿಯೇ, ಆಪಃ= ಜಲಗಳು, ಮನೋರುಹಾಣಾಃ=ಮನಸ್ಸಿಗಿಂತಲೂ ಮೊದಲು (ವೇಗದಿಂದ) ಸ್ಥಲಗಳನ್ನು ಏರುವವುಗಳಾಗಿ, ಯಂತಿ=ಹೋಗುತ್ತವೆ. (ಆ ಜಲಗಳು ಯಾವವೆಂದರೆ)ವೃತ್ರಃ=ವೃತ್ರಾಸುರನು (ಪೂರ್ವಕಾಲದಲ್ಲಿ) ಯಾಶ್ಚಿತ್= ಯಾವ ಜಲಗಳನ್ನು ಮಹಿನಾ=ತನ್ನ ಮಹಿಮೆಯಿಂದ (ಪೂರ್ವದಲ್ಲಿ ಅಂದರೆ ಪುತ್ರನಿಗಿಂತ ಪೂರ್ವಸ್ಥಾನದಲ್ಲಿ) ಪರ್ಯತಿಷ್ಠತ್=ಸುತ್ತಲೂ ತಡೆದು ನಿಂತಿರುವನು. ಮತ್ತೂ (ತತ್ಸುತಃ=ವೃತ್ರಾಸುರನ ಮಗನಾದ) ಅಹಿಶ್ಚ=ಅಹಿಯೂ ಕೂಡ, ತಾಸಾಂ=ಯಾವ ಆ ಈ ಜಲಗಳ (ಗಮನವನ್ನು ವೃತ್ರಾಸುರನಂತೆ ತಡೆಯುತ್ತಾ) ಪತ್ಸುತಃ ಶೀಃಬಭೂವ=ತಂದೆಯ ಪಾದದೆಶೆಯಿಂದ ಅನಂತರದಲ್ಲಿಯೇ ಮಲಗುವವನು ಆದನು. (ಪಾದ ಶಬ್ದದೆಶೆಯಿಂದ ಪಂಚಮೀ ವಿಭಕ್ತಿಯ ಅರ್ಥದಲ್ಲಿ ಸಪ್ತಮೀ ಬಹುವಚನವು. ಪಾದಶಬ್ದಕ್ಕೆ ಪದ್ದನ್ ಇತ್ಯಾದಿಗಳಿಂದ ಪತ್ ಆದೇಶವು. ಅದರಿಂದ ತಸಿಪ್ರತ್ಯಯವು. ಸಪ್ತಮೀ ವಿಭಕ್ತಿಗೆ ಲೋಪವಿಲ್ಲ.

ಮತ್ತೂ ಬಹುವಚನವು. ಛಾಂದಸವು. ಅದುವೇ ಉಪಪದವಾಗಿ ಉಳ್ಳ ಶೀಙಧಾತುವಿಗೆ ಕ್ವಿಪ್ ಪ್ರತ್ಯಯವು.) (ಅಂದರೆ ವೃತ್ರಾಸುರನು ನದಿಗಳ ದ್ವಾರಗಳಲ್ಲಿ ತಲೆ ಇಟ್ಟು ನೀರು ಹೋಗುವ ಮಾರ್ಗದಲ್ಲಿ ಬಿದ್ದವನಾಗಿ ಗಮನವನ್ನು ತಡೆದನು. ಅಹಿ ಎಂಬ ದೈತ್ಯನಾದರೂ ಆ ವೃತ್ರಾಸುರನನ್ನು ಅತಿಕ್ರಮಿಸಿ ದಾಟಿಕೊಂಡು' ಜಲಗಳು ಹೋಗುತ್ತವೆಂದು ತಿಳಿದು ವೃತ್ರಾಸುರನ ಪಾದದ ಕೆಳಗೆ ಮಲಗಿಕೊಂಡು ತಡೆದನು.) (ಅಧ್ಯಾತ್ಮ ರೂಪವಾದ ಅರ್ಥವಾದರೂ) ಶುಭಗಳಾದ ಜ್ಞಾನಾದಿಗುಣಗಳನ್ನು ತಡೆಯುವುದು ಮೂಲ ಪ್ರಕೃತಿಯಿಂದ ಕೂಡಿಕೊಂಡು ಶ್ರೀಹರಿಯಿಂದ ನಾಶಮಾಡಲ್ಪಟ್ಟ (ಶಯಾನಂ) ಕಾರ್ಯವನ್ನು ಹುಟ್ಟಿಸದಿರುವ ಅಜ್ಞಾನವನ್ನು ಅತಿಕ್ರಮಿಸಿ, ಅಪಃ=ಜ್ಞಾನ ಮೊದಲಾದ ಶುಭಗಳು ವೇಗದಿಂದ ಮನಸ್ಸನ್ನು ಏರುತ್ತಾ ಪ್ರವರ್ತಿಸುತ್ತವೆ. ಯಾವ ಶುಭಗಳಾದ ಜ್ಞಾನಾದಿಗಳನ್ನು ಅಜ್ಞಾನವಿರು ಕಾಲದಲ್ಲಿನ ಅಜ್ಞಾನವು ತಡೆದಿರುವುದೋ ಹಾಗೆಯೇ ಸಂಶಯವು ಜ್ಞಾನಾದಿಗಳನ್ನು ತಡೆಯುವುದಕ್ಕಾಗಿ ಅನಂತರದಲ್ಲಿಯೇ ಆಯ್ತೋ ಏವಂ ಚ ವೃತ್ರಃ=ಅಜ್ಞಾನವು ತತ್ಪುತ್ರಃ=ಸಂಶಯವು. ಸಂಶಯವು ಅಜ್ಞಾನ ಬಂದ ಮೇಲೆಯೇ ಹುಟ್ಟತಕ್ಕುದಾದುದರಿಂದ ಪತ್ಸುತಃ ಶೀಃ=ಎನ್ನುವುದು ಆನಂತರ್ಯ ಮಾತ್ರಾರ್ಥಕವು. ॥ ೮ ॥

ಭಾ ॥ (೧) ಅಪಾಂ ರೋಧ್ಧಾರಮಮುಯಾ ಸ್ವಮಾತ್ರಾ ಸಹೈವ ಶಕ್ರೇಣ ಹತಂ ಶಯಾನಂ । ಭಿನ್ನಂ ನದಂ ಯದ್ವದತೀತ್ಯ ಚಾಪೋ ಮನಃಪೂರ್ವಂ ಚಾರುಹಾಣಾಃ ಪ್ರಯಾಂತಿ ॥ (೨) ವೃತ್ರೋ ಯಾಃ ಪೂರ್ವಂ ಸ್ವಮಹಿಮ್ನಾ ಪರೀತ್ಯ ಪುರಾತಿ (೩) ಷ್ಠತ್ತತ್ಸುತೋಽಹಿಶ್ಚ ತಾಸಾಂ । ಪತ್ಸುತಃ ಶೀಃ ಪಾದತೋಽನಂತರಂ ತು ಶೇತಾಽಭವತ್ತದ್ವದೇವಾಭಿರುಂಧನ್ ॥ (೪) ತಮಃ ಪುತ್ರಃ ಸಂಶಯೋ ನಾಽಭಿರುಂಧನ್ ಶುಭಾನ್ಯಾಸ್ತೇ ನಿಹತಃ ಸೋಽಪಿ ತೇನ ॥ ೮ ॥

ಅ ॥ (೧) (ಅನ್ವಯವು ಕೂಡುವುದಕ್ಕಾಗಿ ಅಪಾಂ ರೋಧ್ಧಾರಂ ಇತ್ಯಾದಿಗಳನ್ನು ಹೇಳಿದ್ದು' ನದೀ ಜಲಗಳು ಇತರತ್ರ ಹೋಗದಂತೆ ಅವುಗಳನ್ನು ತಡೆಯುತ್ತಿರುವ ಮೇಲಿನ ಋಕ್ಕಿನಲ್ಲಿ ಹೇಳಲ್ಪಡತಕ್ಕ ತನ್ನ ತಾಯಿಯಿಂದ ಕೂಡಿಯೇ ದೇವೇಂದ್ರನಿಂದ ಸಂಹರಿಸಿ ಕೊಳ್ಳಲ್ಪಟ್ಟು ಬಿದ್ದಿರುವ ವೃತ್ರಾಸುರನನ್ನು ಭಿನ್ನವಾದ ನದದ ತೀರವನ್ನೆಂಬಂತೆ ಅತಿಕ್ರಮಿಸಿಯೇ (ದಾಟಿಯೇ) ಜಲಗಳು ಮನಸ್ಸಿಗಿಂತಲೂ ವೇಗದಿಂದ ಸ್ಥಲಗಳನ್ನು ಏರುವವುಗಳಾಗಿ ಹೋಗುತ್ತವೆ. (೨) (ಆ ಜಲಗಳು ಎಂತಹುಗಳೆಂದರೆ) ವೃತ್ರಾಸುರನು ಪೂರ್ವ ಕಾಲದಲ್ಲಿ ಯಾವ ಜಲಗಳನ್ನು ತನ್ನ ಮಹಿಮೆಯಿಂದ ಪುತ್ರನಿಗಿಂತ ಪೂರ್ವಸ್ಥಾನದಲ್ಲಿ ಸುತ್ತಲೂ ತಡೆದು ನಿಂತಿರುವನು. (೩) ಮತ್ತು ವೃತ್ರಾಸುರನ ಮಗನಾದ ಅಹಿನಾಮಕ ದೈತ್ಯನೂ ಯಾವ ಜಲಗಳ ಗಮನವನ್ನು ವೃತ್ರಾಸುರನಂತೆ ತಡೆಯುತ್ತಾ ತಂದೆಯ ಪಾದದ ಅಡಿಯಲ್ಲಿಯೇ ಮಲಗಿದ್ದನು. (೪) ವೃತ್ರಃ = ತಮಃ=ಅಜ್ಞಾನವು. ಪುತ್ರಃ=ವೃತ್ರನ ಮಗನಾದ ಅಹಿಯು ಸಂಶಯವು. ಅದು ಶುಭಗಳನ್ನು ತಡೆಯುತ್ತಾ ಇದೆ. ಅದೂ ಕೂಡ ಭಕ್ತರ ಶರೀರದಲ್ಲಿರತಕ್ಕ ಶ್ರೀಹರಿಯಿಂದ ಪರಿಹೃತವಾಯ್ತು. ॥ ೮ ॥

ಋ ॥ (೩೭೭) ನೀಚಾವಯಾ ಅಭವದ್ವೃತ್ರಪುತ್ರೇಂದ್ರೋ ಅಸ್ಯಾ ಅವ
ವಧರ್ಜಭಾರ ॥ ಉತ್ತರಾ ಸೂರಧರಃಪುತ್ರ ಆಸೀದ್ದಾನುಃ ಶಯೇ
ಸಹವತ್ಸಾನ ಧೇನುಃ ॥ ೯ ॥

ಅ ॥ (ಯಾವ) ವೃತ್ರಪುತ್ರಾ=ವೃತ್ರನು ಮಗನಾಗಿಉಳ್ಳ (ವೃತ್ರನ ತಾಯಿಯಾದ)ದಾನುಃ=ದನು ದೇವಿಯು, ನೀಚಾವಯಾಃ ಅಭವತ್=(ವಯ ಬಂಧನೇ) ನೀಚ ಸ್ಥಾನದಲ್ಲಿ (ವಯತಿ ಬಧ್ನಾತೀತಿ) ಬಂಧಿಸುವವಳು ಆದಳೋ, (ಅಂದರೆ ನೀಚ ಸ್ಥಾನದಲ್ಲಿ ಅಹಿಗಿಂತಲೂ ಅನಂತರದಲ್ಲಿ ಈ ದನುವು ಜಲಗಳ ಬಂಧನವನ್ನು ಮಾಡಿದಳೋ)(ನೀರುಹೋಗದಿದ್ದಂತೆ ಮಾಡಿರುವಳೋ)ಅಸ್ಯಾಃ=ಈ ದನುವಿನ,ವಧಃ=ಸಂಹಾರವನ್ನು ಇಂದ್ರಃ=ಇಂದ್ರನು=ಅವಃ= ಕೆಳಕಾಲದಲ್ಲಿ (ಅಂದರೆ ವೃತ್ರನನ್ನು ಸಂಹರಿಸುವುದಕ್ಕಿಂತ ಮೊದಲೇ ಜಭಾರ=(ಹೃಞ ಹರಣೇ) ಮಾಡಿದನು. (ಪ್ರಥಮತಃ ದನುವನ್ನು ಸಂಹರಿಸಲಿಕ್ಕೆ ಕಾರಣವೇನು? ಎಂದರೆ) ಸೂಃ=(ಸೂತ ಇತಿ ಸೂಃ (ಷೂಙ ಪ್ರಾಣಿ ಪ್ರಸವೇ) ತಾಯಿಯಾದ ದನುವು. (ಮಗನನ್ನು ರಕ್ಷಿಸುವುದಕ್ಕಾಗಿ) ಉತ್ತರಾ ಆಸೀತ್= ಮಗನ ಮೇಲೆ ಇರುತ್ತಿದ್ದಳು. ಪುತ್ರಃ=ಮಗನಾದರೂ, ಅಧರಃ ಆಸೀತ್. ಕೆಳಗೆ ಇದ್ದನು. (ಆದ ಕಾರಣ ಇಂದ್ರನು ಮೇಲೆ ಇರತಕ್ಕ ಆ ದನುವನ್ನು ಸಂಹರಿಸಿಯೇ ಕೆಳಗೆ ಇರತಕ್ಕ ಈ ವೃತ್ರನನ್ನು ಸಂಹರಿಸಿದನು. ಆ ಮೇಲೆ) ದಾನುಃ=ದನುವು ಸಹವತ್ಸಾ ಧೇನು ರ್ನ=ಧೇನುವಿನಂತೆ ಸಪುತ್ರಳಾಗಿ ಶಯೇ=ಬಿದ್ದಳು. (ಅಧ್ಯಾತ್ಮ ರೂಪವಾದ ಅರ್ಥವು) ವೃತ್ರ ಪುತ್ರಾ=ಯಾವ ಅಜ್ಞಾನಾದಿ ದೋಷಗಳನ್ನು ಹುಟ್ಟಿಸುವ, ದಾನುಃ=(ದೋ ಅವ ಖಂಡನೇ ಖಂಡ್ಯತ್ವ ನಿಮಿತ್ತದಿಂದ ಭೇದಿಸಲ್ಪಡುವುದರಿಂದ (ದನು ಎಂದು ಹೆಸರುಳ್ಳ) ಪ್ರಾತಿಸ್ವಿಕವಾದ ಪ್ರಕೃತಿಯು, ನೀಚಾವಯಾಃ=ಅಜ್ಞಜನರನ್ನು ಬಂಧಿಸುವುದಾಗಿ, ಅಭವತ್= ಆಯಿತೋ, ಪ್ರಕೃತಿ ವಧವನ್ನು ಮೊದಲು ಮಾಡಿ ಆ ಮೇಲೆ ಅಜ್ಞಾನ ಮೊದಲಾದ ಪ್ರಕೃತಿ ಕಾರ್ಯವನ್ನು ಶ್ರೀಹರಿಯು ನಾಶಗೊಳಿಸಿದನು. ಕಾರಣವಾದ ಪ್ರಕೃತಿಗೆ ಸಾಮರ್ಥ್ಯಾತಿಶಯದಿಂದ ಉತ್ತರತ್ವವಿದೆ. ಅಜ್ಞಾನಾದಿಗಳಿಗೆ ಅಂತಹ ಶಕ್ತಿಯಿಲ್ಲದಿರುವುದರಿಂದ ಉತ್ತರಾಧರತ್ವವಿದೆ. ಆದ ಕಾರಣ ಪೂರ್ವದಲ್ಲಿ ಅದನ್ನು ನಾಶಗೊಳಿಸಿದ್ದು ಎಂದು ತಿಳಿಯಬೇಕು. ॥ ೯ ॥

ಭಾ ॥ (೧) ನೀಚಸ್ಥಾನೇ ಬಂಧನಂ ಯಾಽಪಿ ಚಾಪಾಂ ಕರೋತಿ ದಾನುರ್ವೃತ್ರಮಾತಾ ದನುಸ್ಸಾ ॥ (೨) ವೃತ್ರೋ ಹ್ಯಭೂದ್ದನುಜಃ ಕಶ್ಯಪಾಚ್ಚ ಪಾಪಾತ್ಮಾಽಸೌ ವೈಷ್ಣವಸ್ತ್ವಷ್ಟೃಜಾತಃ ॥ (೩) ವೃತ್ರಃ ಪುತ್ರೋಽಸ್ಯಾ ಇತಿ ಸಾ ವೃತ್ರಪುತ್ರಾ ವಧಂ ತಸ್ಯಾ ಆಹರತ್ಪೂರ್ವಮಿಂದ್ರಃ ॥ (೪) ಪ್ರಕೃತಿರ್ವಾ ವೃತ್ರಮಾತಾ ತಮೋ ಹಿ ತಸ್ಯಾ ಅಭೂತ್ಪುತ್ರಂ ಜಘಾನೇಶಿತಾ ವಾ । (೫) ಪ್ರಾತಿಸ್ವಿಕೀ ಪ್ರಕೃತಿರ್ಯತ್ತಮುಷ್ಟ ದೋಷಾಶ್ಚಾನ್ಯೇ ಪುಂಸ್ತ್ವತೋ ಯುಕ್ತಮೇತತ್ ॥ (೬) ಸುತಾವನಾರ್ಥಮುಪರಿಷ್ಠಾ ಬಭೂವ ಸುತಸ್ಯ ಮಾತಾ ತಾಂ ನಿಹತ್ಯಾಮುಮೇವ । ಜಘಾನೇಂದ್ರಃ (೭) ಕಾರಣಸ್ಯಾಪಿ (ಸ್ಯೈವ) ನಾಶಾತ್ಕಾರ್ಯೋತ್ಥಾನಂ ವಾರಯಾಮಾಸ ವಿಷ್ಣುಃ ॥ (೮) ಸ್ಯಾದೇವ ಪೂರ್ವಂ ಕಾರ್ಯನಾಶೋ ಹ್ಯಥಾಪಿ ನಿಃಶೇಷನಾಶಃ ಕಾರಣಸ್ಯೈವ ನಾಶಾತ್ ॥ (೯) ಏವಂ ಭಕ್ತಾನನುಜಗ್ರಾಹ ದೇವೋ ನಾರಾಯಣಃ ಪಾರಯನ್ ಸಂಸೃತೇಶ್ಚ ॥ (೧೦) ಉತ್ತರತ್ವಂ ಪ್ರಕೃತೇಃ ಶಕ್ತಿತಃ ಸ್ಯಾತ್ ॥ ೯ ॥

ಅ ॥ (೧) ಯಾವ ಆ ವೃತ್ರನ ತಾಯಿಯಾದ ದನು ದೇವಿಯು ನೀಚ ಸ್ಥಾನದಲ್ಲಿ ಅಹಿಗಿಂತಲೂ ಅನಂತರದಲ್ಲಿ ಜಲಗಳ ಬಂಧನವನ್ನು ಮಾಡಿರುವಳೋ, (೨) (ಹಾಗಾದರೆ ದನುವು ಕಶ್ಯಪನ ಹೆಂಡತಿಯು. ವೃತ್ರನು ಕಶ್ಯಪನ ಪುತ್ರನಲ್ಲ. ಮತ್ತೆ ತ್ವಷ್ಟೃವಿನ ಪುತ್ರನು. ಆದಕಾರಣ ದನುವು ವೃತ್ರನ ತಾಯಿಯು ಹೇಗೆ ಎಂದರೆ) ವೃತ್ರ ಎಂದು ಹೆಸರುಳ್ಳವರು ಇಬ್ಬರು. ಅವರಲ್ಲಿ ಒಬ್ಬನು ಕಶ್ಯಪ ಋಷಿಯಿಂದ ದನುವಿನಲ್ಲಿ ಹುಟ್ಟಿದವನು. (ವೃತ್ರನು ದನುವಿನಲ್ಲಿ ಹುಟ್ಟಿದವನೆಂದಾದರೆ ದಾನವನಾಗ ಬೇಕಾಗುವನು. ದಿತಿಯಲ್ಲಿ ಹುಟ್ಟಿದವನಾಗದಿರುವು

ದರಿಂದ ಸೈತ್ಯನಾಗದೆ ಹೋಗಬೇಕಾಗುವನು ಎಂದರೆ ದೈತ್ಯದಾನವರಿಬ್ಬರಲ್ಲಿಯೂ **ತಮಃ ಪ್ರಕೃತಿಕತ್ವವು** ಸಮಾನವು. ಆದ ಕಾರಣ ದೈತ್ಯರಲ್ಲಿ ದಾನವರೆಂದೂ ದಾನವರಲ್ಲಿ ದೈತ್ಯರೆಂದೂ ಪುರಾಣಗಳಲ್ಲಿ ವ್ಯವಹಾರವು.) ಇನ್ನೊಬ್ಬನು ತ್ವಷ್ಟೃವಿನಿಂದ ಹುಟ್ಟಿದವನು (ಆದಕಾರಣ ವಿರೋಧವಿಲ್ಲ.) (ಇಬ್ಬರನ್ನು ಏಕೆ ಕಲ್ಪಿಸುವುದು ಎಂದರೆ) ಈ ದನು ಪುತ್ರನು ಪಾಪಿಷ್ಠನಾಗಿ ಶ್ರುತನಾಗಿದ್ದಾನೆ. **ದೀರ್ಘಂ ತಮಃ ಆಶಯುದಿಂದ್ರಶತ್ರುಃ** ಎಂದು. ತ್ವಷ್ಟೃಪುತ್ರನು, ವೈಷ್ಣವನು. ಪುಣ್ಯಾತ್ಮನೆಂದು ಭಾಗವತದಲ್ಲಿ ಪ್ರಸಿದ್ಧನಾಗಿದ್ದಾನೆ. (೩) ಆದಾಗ್ಯೂ ವೃತ್ರಪುತ್ರಾ ಎನ್ನುವುದಕ್ಕೆ ವೃತ್ರ ಮಾತಾ ಎಂಬ ವ್ಯಾಖ್ಯಾನವು ಹೇಗೆ? ಪುತ್ರ ಶಬ್ದಕ್ಕೆ ಸುತ ಎಂದು ಅರ್ಥ ವಿರುವುದರಿಂದ ಮಾತಾ ಎಂಬ ಅರ್ಥ ಹೇಗೆಂದರೆ) ಈ ದನುವಿಗೆ ವೃತ್ರನು ಮಗನು. ಆದಕಾರಣ ಆ ದನುವು ವೃತ್ರಪುತ್ರಾ ಎನಿಸುತ್ತಾಳೆ. ಆ ದನುವಿನ ಸಂಹಾರವನ್ನು ಇಂದ್ರನು ವೃತ್ರನನ್ನು ಸಂಹರಿಸುವುದಕ್ಕಿಂತ ಮೊದಲೇ ಮಾಡಿದ್ದನು. (೪) (ಅಧ್ಯಾತ್ಮದಲ್ಲಿ ವೃತ್ರನ ಮಾತೆಯನ್ನೂ ಹೇಳುತ್ತಾರೆ.) ಮೂಲ ಪ್ರಕೃತಿಯೇ ವೃತ್ರನ ತಾಯಿಯು.(ಮೂಲಪ್ರಕೃತಿಯು ವೃತ್ರನ ತಾಯಿಯು.ಎಂಬ ವ್ಯಾಖ್ಯಾನವು ಹೇಗೆಂದರೆ) ಅವಳಿಂದ ಅಜ್ಞಾನವು ಹುಟ್ಟಿತು. ಆ ಪ್ರಕೃತಿಯನ್ನು ಸರ್ವೇಶ್ವರನಾದ ಶ್ರೀಹರಿಯು ಸಂಹರಿಸಿದನು, (ಬಿಡಿಸಿದನು.) (ಪ್ರಕೃತಿರ್ವಾ ಈಶಿತಾ ವಾ ಎಂದು ವಾ ಶಬ್ದಗಳು ಎರಡು ಏತಕ್ಕೆಂದರೆ) **ನೀಚಾವಯಾ ಅಭವದ್ವೃತ್ರಪುತ್ರಾ** ಎಂಬುವುದು ಬೇರೆ ವಾಕ್ಯವಾಗಿರುವುದರಿಂದ ಅದು ಅಧ್ಯಾತ್ಮಪರವೆಂದು ತೋರಿಸುವುದಕ್ಕಾಗಿ ೧ನೇ ವಾ ಶಬ್ದವು. (ಇಂದ್ರೋ ಅಸ್ಯಾ ಎಂಬುವ ೨ನೇ ವಾಕ್ಯಕ್ಕೆ ಅರ್ಥಾಂತರವನ್ನು ಸೂಚಿಸುವುದಕ್ಕಾಗಿ ೨ನೇ ವಾ ಶಬ್ದವು.) (೫) (ಹಾಗಾದರೆ — ಪ್ರಕೃತಿಯೂ ಅಜ್ಞಾನವೂ ಸಂಶಯ ಮೊದಲಾದ ಇತರದೋಷಗಳೂ ಶ್ರೀಹರಿಯಿಂದ ನಾಶ ಮಾಡಲ್ಪಡುತ್ತವೆ, ಎಂದಾದರೆ ಈಗ ಸಂಸಾರ ದರ್ಶನವೇ ಅಯುಕ್ತವಾಗಬೇಕಾಗುವುದು. ಆದ ಕಾರಣ ಈ ವೇದವಾಕ್ಯವು ಯುಕ್ತವಲ್ಲ ಎಂದರೆ)ಯಾವ ಕಾರಣದಿಂದ ಇದು ಸಂಬದ್ಧವಾದುದು ಮಾತ್ರವಲ್ಲ,ಇದು ಪ್ರಪ್ರತ್ಯೇಕವಾಗಿ ಪ್ರತಿ ಒಬ್ಬರಲ್ಲಿಯೂ ಇರತಕ್ಕದ್ದು. ಪ್ರಕೃತಿಯೂ ಅಜ್ಞಾನವೂ ಇತರ ದೋಷಗಳೂ ಪುರುಷರಲ್ಲಿವೆ. ಆದ ಕಾರಣ ಇದು ಯುಕ್ತವೇ. (ಅಂದರೆ **ಅಥಾನ್ಯೇ ಪ್ರಕೃತೀ ದುಷ್ಟೇ ನೃಷು ಪ್ರಾತಿಸ್ವಿಕಂ ಸ್ಥಿತೇ। ಸ್ವಗುಣಾಚ್ಛಾದಿಕಾ ಶ್ವೇತಾ ಪರಮಾಚ್ಛಾದಿಕಾ ಪರಾ,। ಸ್ವಗುಣಾಚ್ಛಾದಿಕಾಂ ಹತ್ವಾ ಪರಮಾಚ್ಛಾದಿಕಾಂ ಪರಃ। ವ್ಯಾಘುಟ್ಯ ಮೋಕ್ಷಪದವೀಂ ದದಾತಿ ಪುರುಷೋತ್ತಮಃ ॥** ಇತಿ)(೬)(ಪ್ರಥಮತಃ ದನುವನ್ನು ಸಂಹರಿಸಲಿಕ್ಕೆ ಏನು ಕಾರಣವು?)ಸೂಃ=(ಸೂತ ಇತಿಸೂಃ)ತಾಯಿಯಾದ ದನುದೇವಿಯು, ಮಗನನ್ನು ರಕ್ಷಿಸುವುದಕ್ಕಾಗಿ ಮಗನ ಮೇಲೆ ಇರತಕ್ಕವಳಾದಳು. (ಮಗನಾದರೂ ಕೆಳಗೆ ಇದ್ದನು.) ಆದಕಾರಣ ಇಂದ್ರನು ಮೇಲೆ ಇರತಕ್ಕ ಆ ದನು ದೇವಿಯನ್ನು ಸಂಹರಿಸಿಯೇ ಕೆಳಗೆ ಇರತಕ್ಕ ಈ ವೃತ್ರನನ್ನು ಸಂಹರಿಸಿದನು.(ಆ ಮೇಲೆ ದನು ದೇವಿಯು ಧೇನುವಿನಂತೆ ಮಗನಿಂದಕೂಡಿಯೇ ಬಿದ್ದುಬಿಟ್ಟಳು.) (೭) (ಅಧ್ಯಾತ್ಮರೂಪವಾದ ಅರ್ಥದಲ್ಲಿ ಪ್ರಥಮತಃ ಪ್ರಕೃತಿಯನ್ನು ಸಂಹರಿಸಿದನು ಎನ್ನುವುದಕ್ಕೆ ಏನು ನಿಮಿತ್ತವು ಎಂದರೆ) ಕಾರಣವೇ ನಾಶವಾಗುವುದರಿಂದ ಕಾರ್ಯೋತ್ಪತ್ತಿಯನ್ನೇ ಶ್ರೀ ವಿಷ್ಣುವು ತಡೆದನು. (ಕಾರ್ಯೋತ್ಪತ್ತಿಯಾಗದಂತೆ ಮಾಡಿದನು.) (೮) (ಹಾಗಾದರೆ ಪ್ರಥಮತಃ ಕಾರ್ಯನಾಶವು ಆಗುವುದೇ ಇಲ್ಲವೋ, ಎಂದರೆ ಆಗಿಯೇ ಆಗುತ್ತದೆ. ಎನ್ನುತ್ತಾರೆ.) ಮೊದಲು ಕಾರ್ಯನಾಶವು ಆಗಿಯೇ ಆಗುತ್ತದೆ.(ಹಾಗಾದರೆ ಪ್ರಕೃತಿಗೆ ಪೂರ್ವನಾಶವು ಏತಕ್ಕೆ ಆಯಿತು ಎಂದರೆ) ಆದಾಗ್ಯೂ ಕಾರಣನಾಶವಾದ ಮೇಲೆಯೇ ಸಂಪೂರ್ಣಕಾರ್ಯನಾಶವಾಗುವುದು. (೯) (ಶ್ರೀಹರಿಗೆ ಅಜ್ಞಾನಾದಿಗಳಿಂದ ಯುದ್ಧವನ್ನು ಪ್ರತಿಪಾದಿಸುವದರಿಂದ ಅಜ್ಞಾನಾದಿಗಳು ವಿಷ್ಣುವಿನ ಸಂಬಂಧಿಗಳು. ಅವುಗಳು ಶ್ರೀವಿಷ್ಣುವಿನಿಂದ ನಾಶಮಾಡಲ್ಪಟ್ಟವು ಎಂಬ ಪ್ರತೀತಿಯು ಆಗುವುದು. ಅದನ್ನು ನಿವಾರಣ ಮಾಡುವುದಕ್ಕಾಗಿ ಹಿಂದು ಮುಂದಿನ ತಾತ್ಪರ್ಯ ಹೇಳುತ್ತಾರೆ.) ಹೀಗೆ ನಾರಾಯಣದೇವರು ಭಕ್ತರನ್ನು ಸಂಸಾರದಿಂದ ಬಿಡುಗಡೆ ಮಾಡುವವರಾಗಿ ಅನುಗ್ರಹಿಸಿದರು. (೧೦) (ಪ್ರಕೃತಿಗೆ ಅಜ್ಞಾನಕ್ಕಿಂತ ಉತ್ತರತ್ವ ಹೇಗೆಂದರೆ) ಪ್ರಕೃತಿಗೆ ಸಾಮರ್ಥ್ಯದಿಂದ ಆಧಿಕ್ಯವು. (ಕಾಲಾಪೇಕ್ಷಯಾ ಆನಂತರ್ಯವಲ್ಲ. ಏಕೆಂದರೆ ಅಜ್ಞಾನಕ್ಕಿಂತ ಪ್ರಕೃತಿಯು ಪೂರ್ವದಲ್ಲಿಯೇ ನಾಶವಾಗುವುದರಿಂದ ಪ್ರಕೃತಿಯು ಉತ್ತರ ಕಾಲದಲ್ಲಿರತಕ್ಕದ್ದು ಅಲ್ಲ.) ದಾನುಃ= (ದೋ ಅವಖಂಡನೇ) ಪ್ರಕೃತಿಯು. ॥ ೯ ॥

ಮೂ ॥ (೩೭೮) ಅತಿಷ್ಠಂತೀನಾಮನಿವೇಶನಾನಾಂ ಕಾಷ್ಠಾನಾಂ
ಮಧ್ಯೇ ನಿಹಿತಂ ಶರೀರಂ। ವೃತ್ರಸ್ಯ ನಿಣ್ಯಂ ವಿಚರಂತ್ಯಾಪೋ
ದೀರ್ಘಂ ತಮ ಆಶಯದಿಂದ್ರಶತ್ರುಃ ॥ ೧೦ ॥ ೩೭ ॥

ಅ ॥ ವೃತ್ರಸ್ಯ=ಮೃತನಾದ ವೃತ್ರನ, ಶರೀರಂ = ಶರೀರವು, ಅತಿಷ್ಠಂತೀನಾಂ=ಪರ್ಯವಸಾನವನ್ನು ಹೊಂದದಿರುವ, ಅನಿವೇಶನಾನಾಂ = ಅನಂತಗಳಾಗಿರುವುದರಿಂದ ಅಂತರ್ಭಾವವನ್ನುಂಟು ಮಾಡತಕ್ಕದಿಲ್ಲದಿರುವ, ಕಾಷ್ಠಾನಾಂ=ದಿಕ್ಕುಗಳ, ಮಧ್ಯೇ =ಮಧ್ಯದಲ್ಲಿ ನಿಹಿತಂ=ಇಡಲ್ಪಟ್ಟಿತು. (ತಥಾ ಚ ಪ್ರತಿಬಂಧಕವು ನಿವೃತ್ತವಾದಾಗ) ಆಪಃ = ಜಲಗಳು, ನಿಣ್ಯಂ= ಅತಿಶಯ ಸುಖದಿಂದಲೇ, (ಅನಾಯಾಸದಿಂದಲೇ) ವಿಚರಂತಿ= ಸಂಚರಿಸಿದವು. ದೀರ್ಘಂತಮಃ=ಮಹಾತಾಮಸನಾದ, ಇಂದ್ರಶತ್ರುಃ=ವೃತ್ರನು, ಆ ಅಶಯತ್= ಬಿದ್ದನು. ಇಂದ್ರ ಶತ್ರುವಾದ, ದೀರ್ಘಂ ಮಹತ್ತಾದ, ತಮಃ=ಅಜ್ಞಾನವು ಹೀಗೆಯೇ, ಆ ಅಶಯತ್=ಬಿದ್ದಿತು. ಅಥವಾ, ಮೃತನಾದ ಇಂದ್ರನ ಶತ್ರುವಾದ ವೃತ್ರನು, ದೀರ್ಘಂ = ಪುನರಾವೃತ್ತಿಯಿಲ್ಲದಿರುವ, ತಮಃ=ಅಂಧಂತಮಸ್ಸನ್ನು ಆ ಅಶಯತ್=(ಅಶೂ ವ್ಯಾಪ್ತೌ) ಹೊಂದಿದನು. ॥ ೧೦ ॥ ೩೭ ॥

ಭಾ ॥ (೧) ಅನಂತತ್ವಾನ್ನೈವ ತಿಷ್ಠಂತಿ ಕಾಷ್ಠಾಃ। (೨) ಅತಸ್ತಾಸಾಂ ನ ಗೃಹಂ ಕಿಂಚಿದಸ್ತಿ
(೩) ನಿಣ್ಯಂ ಸುಖೇನೈವ ಚರಂತಿ ಚಾಪಃ॥ (೪) ದೀರ್ಘಂ ತಮೋ ವೃತ್ರಸಂಜ್ಞಂ
ತಮೋ ವಾ ದೀರ್ಘಮಂಧಂ ಪ್ರಾಪ ವೃತ್ರಃ ಸ ಏವ ॥ ೧೦ ॥ ೩೭ ॥

ಆ ॥ (೧) ದಿಕ್ಕುಗಳು ಅನಂತಗಳಾಗಿರುವುದರಿಂದ ದೇವದತ್ತನಿಗೆ ದಿಗಭಾವ ಪ್ರಯುಕ್ತವಾದ ಗತಿನಿವೃತ್ತಿಯು ಆಗುವುದಿಲ್ಲ. ದಿಕ್ಕುಗಳು ಸರ್ವತ್ರ ವ್ಯಾಪ್ತಗಳೇ ಆಗಿವೆ. ಪರ್ಯವಸಾನವೇ ಇಲ್ಲ. ತಥಾ ಚ ದಿಕ್ಕು ವ್ಯಾಪ್ತವಾಗಿರುವ ಪ್ರಯುಕ್ತ ದಿಕ್ಕಿನಲ್ಲಿರುವ ದೇವದತ್ತನಿಗೆ ದಿಕ್ಕು ಇಲ್ಲದಿರುವ ಪ್ರಯುಕ್ತ ಯಾವುದು ಅವಸ್ಥಿತಿಯೋ, ಅದರ ಅಭಾವವು ದಿಕ್ಕುಗಳಲ್ಲಿ ಲಾಕ್ಷಣಿಕಪ್ರಯೋಗವು. ದಿಕ್ಕುಗಳಿಗೆ ಪರ್ಯವಸಾನವೇ ಇಲ್ಲದಿರುವ ಕಾರಣ ತಾಃ ನೈವ ತಿಷ್ಠಂತಿ=ಆ ದಿಕ್ಕುಗಳು ಇರುವುದೇ ಇಲ್ಲವೆಂದದ್ದು. (೨) ದಿಕ್ಕುಗಳು ಅನಂತಗಳಾಗಿರುವುದರಿಂದಲೇ ಅವುಗಳಿಗೆ ಯಾವುದೊಂದು ಮನೆಯೂ ಇಲ್ಲ. (ಅಂದರೆ ನಿವಿಶಂತೇ ಅಸ್ಮಿನ್ನಿತಿ ನಿವೇಶನಂ= ಮನೆಯು ಅಂತರ್ಭಾವಕವು ಯಾವುದೂ ಇಲ್ಲ. ಮನೆಯೊಳಗೆ ಬೇರೆ ವಸ್ತುಗಳು ಸೇರಿ ಇರುತ್ತವೆ. ಮನೆಯು ಅಂತರ್ಭಾವಕವು. ದಿಕ್ಕುಗಳು ಒಂದು ವಸ್ತುವಿನ ಒಳಗೆ ಇರತಕ್ಕವುಗಳಲ್ಲ. ದಿಕ್ಕು ಒಂದರ ಒಳಗೆ ಇರುವುದಿಲ್ಲ. ಆದ ಕಾರಣ ಅನಿವೇಶನಗಳೆಂದೂ ಹೇಳಲ್ಪಡುತ್ತವೆ. (ಏವಂಚ ಮೃತನಾದ ವೃತ್ರನ ಶರೀರವು ಪರ್ಯವಸಾನವನ್ನು ಹೊಂದದಿರುವ ಮತ್ತೂ ಅನಂತಗಳಾಗಿರುವುದರಿಂದ ಅಂತರ್ಭಾವಕ (ದಿಕ್ಕನ್ನು ಒಳಗೆ ಇರಿಸಿಕೊಳ್ಳುವುದು) ವಿಲ್ಲದಿರುವ ದಿಕ್ಕುಗಳ ಮಧ್ಯದಲ್ಲಿ ಇಡಲ್ಪಟ್ಟಿತು (ಸ್ಥಾಪಿಸಲ್ಪಟ್ಟಿತು), ಏವಂಚ ಅತಿಸ್ಥೂಲವಾದ ವೃತ್ರನ ಶರೀರವು ಸರ್ವತ್ರ ವ್ಯಾಪಿಸಿಕೊಂಡಿರುವ ಅನಂತಗಳಾದ ದಿಕ್ಕುಗಳನ್ನು ವ್ಯಾಪಿಸಿ ಕೊಂಡಿದೆ. ಅದ್ಭುತವಾಗಿದೆ. ಅಂತೂ ವೃತ್ರನ ಶರೀರವು ಅತಿಸ್ಥೂಲವೆಂದು ಹೇಳುವ ಪ್ರಯೋಜನ ವಿದ್ದುದರಿಂದ ೨ ವಿಶೇಷಗಳೂ ಸಾರ್ಥಕಗಳು) (೩) (ಏವಂಚ ವೃತ್ರನು ಸಂಹೃತನಾದ ಪ್ರಯುಕ್ತ ಪ್ರತಿಬಂಧಕವು ನಿವೃತ್ತಿಯಾದ ಮೇಲೆ) ಜಲಗಳು (ನಿಣ್ಯಂ=ನಿ=ಅತಿಶಯಾರ್ಥಕವು. ಣ್ಯಂ= ಣಶ್ಚ ನಿರ್ವೃತಿವಾಚಕಃ ಸ್ವಾರ್ಥೇ(ಷ್ಯಙ್) ಸುಖವು.) ಸುಖದಿಂದಲೇ (ಅನಾಯಾಸದಿಂದಲೇ) ಹರಿದು ಹೋದವು. (೪) (ದೀರ್ಘಂತಮ ಆಶಯದಿಂದ್ರಶತ್ರು ಎಂಬುವ ವಾಕ್ಯವನ್ನು ೩ ಪ್ರಕಾರ ವ್ಯಾಖ್ಯಾನ ಮಾಡುತ್ತಾರೆ.) (1) ಸ ವೃತ್ರ ಏವ ದೀರ್ಘಂ ತಮಃ ಎನ್ನುವುದರಿಂದ ಮಹಾತಾಮಸ

ನಾದ ಇಂದ್ರಶತ್ರುವಾದ ವೃತ್ರಾಸುರನು ಬಿದ್ದನು- (2) ವೃತ್ರಸಂಜ್ಞಂತಮೋವಾ ಎನ್ನುವುದರಿಂದ(ಅಧ್ಯಾತ್ಮಾರ್ಥವು) ಶ್ರೀಹರಿಯು ಶತ್ರುಭೂತವಾದ ಮಹತ್ತಾದ ವೃತ್ರ ಎಂದು ಹೆಸರುಳ್ಳ ಅಜ್ಞಾನವೇ ಬಿದ್ದಿತು.(ನಷ್ಟವಾಯ್ತು) (3) ದೀರ್ಘಮಂಧಂ ಇತ್ಯಾದಿಗಳಿಂದ ಮೃತನಾದ ಈ ಇಂದ್ರಶತ್ರುವಾದ ವೃತ್ರಾಸುರನು ಪುನರಾವೃತ್ತಿಯಿಲ್ಲದಿರುವ ಅಂಧಂತಮಸ್ಸನ್ನು ಹೊಂದಿದನು || ೧೦ || ೩೭ ||

ಋ || (೩೭೯) ದಾಸಪತ್ನೀರಹಿಗೋಪಾ ಅತಿಷ್ಠನ್ನಿರುದ್ಧಾ ಆಪಃ

ಪಣಿನೇವ ಗಾವಃ| ಅಪಾಂ ಬಿಲಮಪಿಹಿತಂ ಯದಾಸೀ

ದ್ವೃತ್ರಂ ಜಘನ್ವಾ ಅಪ ತದ್ವವಾರ || ೧೧ ||

ಅ || ಗಾವಃ=ಇಂದ್ರನ ಯಜ್ಞದಲ್ಲಿ ಕ್ಲೃಪ್ತಗಳಾದ ಗೋವುಗಳು, ಪಣಿನೇವ=(ಪಣೀ ಎನ್ನುವುದು ದೈತ್ಯರ ಗಣದ ನಾಮಧೇಯವು. ಕ್ರೋಧವಶಾದಿ ಶಬ್ದಗಳಂತೆ. ಆದ ಕಾರಣ) ಪಣಿಗಳ ಗಣದಲ್ಲಿ ಸೇರಿರುವ ಬಲ ನಾಮಕ ದೈತ್ಯನಿಂದ, ಹೇಗೋ ಹಾಗೆಯೇ, ದಾಸ ಪತ್ನೀಃ=ಶ್ರೀವಿಷ್ಣುವಿನ ದಾಸನಾದ ವರುಣನ ಪತ್ನಿಯರಾದ, ಆಪಃ=ನದಿಗಳು, ಅಹಿಗೋಪಾಃ=ಅಹಿನಾಮಕ ದೈತ್ಯನೇ ರಕ್ಷಕನಾಗಿ ಉಳ್ಳವುಗಳು. (ಅಂದರೆ ಅಹಿಯಿಂದ ರಕ್ಷಿಸಲ್ಪಟ್ಟವೆ.)(ಕೇವಲ ಅಹಿಯಿಂದ ರಕ್ಷಿಸಲ್ಪಟ್ಟವುಗಳು ಮಾತ್ರವಲ್ಲ, ಮತ್ತೆ) ನಿರುದ್ಧಾಃ= ವೃತ್ರನಿಂದ ತಡೆಯಲ್ಪಟ್ಟವುಗಳಾಗಿಯೂ, ಅತಿಷ್ಠನ್=ಇದ್ದವು. (ಆಗ) ಶಕ್ರಃ= ದೇವೇಂದ್ರನು, ವೃತ್ರಂ=ವೃತ್ರಾಸುರನನ್ನೂ ಅಹಿಯನ್ನೂ ಕೂಡ, ಜಘನ್ವಾನ್=ಸಂಹರಿಸಿ, ಯತ್=ಯಾವ, ಅಪಾಂಬಿಲಂ= ಜಲಗಳ ಬಿಲವು, ಅಪಿಹಿತಂ = (ವೃತ್ರ ಅಹಿಗಳಿಂದ,) = ಆಚ್ಛಾದಿತವಾಗಿ, ಆಸೀತ್=ಆಯ್ತೋ. ತತ್=ಜಲಗಳ ಬಿಲವನ್ನು ಅಪವವಾರ=ತೆರೆದನು (ಅಧ್ಯಾತ್ಮದಲ್ಲಿ) ದಾಸಪತ್ನೀಃ=ಯಾವನೋ ಒಬ್ಬ ಭಗವದ್ಭಕ್ತನ ಪತ್ನಿಯರಂತೆ ಇರುವ (ಅಧೀನಗಳಾದ) ಆಪಃ=ಕ್ರಿಯೆಗಳು, ಅಹಿಗೋಪಾಃ=ಸಂಶಯದಿಂದ ರಕ್ಷಿಸಲ್ಪಟ್ಟವುಗಳಾಗಿ,ನಿರುದ್ಧಾಃ=ಅಜ್ಞಾನದಿಂದ ತಡೆಯಲ್ಪಟ್ಟವುಗಳಾಗಿಯೂ, ಅತಿಷ್ಠನ್=ಆದವು. ಆಗ ಶಕ್ರಃ=ಶ್ರೀಹರಿಯು, ವೃತ್ರಂ=ಅಜ್ಞಾನವನ್ನು, ಅಹಿಂ ಚ=ಸಂಶಯವನ್ನು ಕೂಡ, ಜಘನ್ವಾನ್=ಸಂಹರಿಸಿ, ಯಾವುದು. ಅಪಾಂ=ಶುಭ ಕರ್ಮಗಳ, ಬಿಲಂ=ದ್ವಾರವು, ಆಸ್ತಿಕ್ಯಾದಿಗಳು, ತಾಭ್ಯಾಂ=ಅಜ್ಞಾನ ಸಂಶಯಗಳಿಂದ: ಅಪಿಹಿತಂ=ಆಚ್ಛಾದಿತವಾಗಿತ್ತೋ, ತತ್=ಆ ಆಸ್ತಿಕ್ಯಾದಿಗಳನ್ನು, ಅಪವವಾರ=ತೆರೆದನು. || ೧೧ ||

ಚಾ || (೧) ದಾಸಸ್ಯ ವಿಷ್ಣೋರ್ವರುಣಸ್ಯ ಪತ್ನ್ಯೋನಿರುದ್ಧಾ ಆಸನ್ನಹಿನಾ ಯದ್ವದೇವ |
ಗಾವೋ ಬಲೇನೇಂದ್ರಯಜ್ಞೇ ಸುಕ್ಲೃಪ್ತಾ (೨) ವೃತ್ರಂ ಹತ್ವಾ ತಮಹಿಂ ಚಾಪಿ
ಶಕ್ರಃ|| ಉದ್ಘಾಟಯಾಮಾಸ ಬಿಲಂ ತದಾಪಾಂ ಶುಭದ್ವಾರಂ ಭಗವಾನ್ವಾ ತಮೋ
ಘ್ನನ್ || ೧೧ ||

ಅ || (೧) ಇಂದ್ರನ ಯಜ್ಞದಲ್ಲಿ ಚೆನ್ನಾಗಿ ಕ್ಲೃಪ್ತಗಳಾದ ಗೋವುಗಳು ಪಣಿಗಣಗಳಲ್ಲಿ ಅಂತರ್ಭೂತನಾದ ಬಲನಾಮಕ ದೈತ್ಯನಿಂದ ಹೇಗೆ ರಕ್ಷಿಸಲ್ಪಟ್ಟು ತಡೆಯಲ್ಪಟ್ಟವೆಯೋ), ಹಾಗೆಯೇ ಶ್ರೀವಿಷ್ಣುವಿನ ಭೃತ್ಯನಾದ ವರುಣನ ಪತ್ನಿಯರಾದ ನದಿಗಳು ಅಹಿನಾಮಕ ದೈತ್ಯನಿಂದ (ರಕ್ಷಿಸಲ್ಪಟ್ಟವುಗಳೂ) ವೃತ್ರನಿಂದ ತಡೆಯಲ್ಪಟ್ಟವುಗಳೂ ಆದವು. (ವೃತ್ರೇಣಾಪಿ ನಿರುದ್ಧಾಃ) ಎಂಬ ಅಧ್ಯಾಹಾರ ಮಾಡದೆ ಇದ್ದರೆ ಅಹಿನೈವ ನಿರುದ್ಧಾಃ ಎಂದಂಗೀಕರಿಸಿದರೆ ಪೂರ್ವಾರ್ಧದಲ್ಲಿ ಜಲಗಳು ಅಹಿನಾಮಕ ದೈತ್ಯನಿಂದ ನಿರುದ್ಧಗಳಾಗಿವೆ, ಎಂಬ

ಹೇಳಿದ ಕಾರಣ ಉತ್ತರಾರ್ಧದಲ್ಲಿ ಅಹಿನಾಮಕ ದೈತ್ಯನ ಸಂಹಾರವನ್ನೇ ಹೇಳಬೇಕಿತ್ತು. ಅದು ಬಿಟ್ಟು ವೃತ್ರನನ್ನು ಸಂಹರಿಸಿದನು, ಎಂದು ಹೇಳಿದರೆ ಅಸಂಗತಿಯು ಆಗಬೇಕಾಗುವುದು. ಆದುದರಿಂದಲೇ ವೃತ್ರನನ್ನೂ ಅಹಿಯನ್ನೂ, ಸಂಹರಿಸಿದನು- ಎಂದು ಹೇಳುವರು.) (೨) ಆಗ ದೇವೇಂದ್ರನು ವೃತ್ರಾಸುರನನ್ನು, ಸಂಹರಿಸಿ ಅಹಿಯನ್ನು ಶೀಘ್ರದಲ್ಲಿ ಅನಾಯಾಸದಿಂದ ಸಂಹರಿಸಿ ಯಾವುದು ಜಲಗಳ ಬಿಲವು ವೃತ್ರ ಅಹಿ ದೈತ್ಯರಿಂದ ಆಚ್ಛಾದಿತವಾಗಿತ್ತೋ. ಅದನ್ನು ತೆರೆದನು. (ವೃತ್ರವಧಕ್ಕೀತಲೂ ಅಹಿಯನ್ನು ಸಂಹರಿಸಲಿಕ್ಕೆ ಅತ್ಯಲ್ಪ ಪ್ರಯತ್ನವು ಎಂಬ ಅಭಿಪ್ರಾಯದಿಂದ ಕಂಠತಃ ಅಹಿಂ ಜಘನ್ವಾನ್ ಎಂದು ಹೇಳಲಿಲ್ಲ (2) (ಅಧ್ಯಾತ್ಮ ರೂಪವಾದ ಅರ್ಥವನ್ನು ಹೇಳುತ್ತಾರೆ.) ಶ್ರೀಹರಿಯು ಅಜ್ಞಾನವನ್ನೂ ಸಂಶಯವನ್ನೂ ಪರಿಹರಿಸುವವನಾಗಿ ಶುಭ ಕರ್ಮಗಳ ದ್ವಾರವಾದ ಆಸ್ತಿಕ್ಯಾದಿಗಳು ಆಚ್ಛಾದಿತಗಳಾಗಿದ್ದವು. ಅವುಗಳನ್ನು ತೆರೆದನು. (ಅಧ್ಯಾತ್ಮಾರ್ಥದಲ್ಲಿ ದಾಸನು ಯಾರು? ಯಾವನಾದರೂ ವಿಷ್ಣುಭಕ್ತನು ದಾಸನು,ಪತ್ನೀ ಶಬ್ದವು ಸ್ತ್ರೀಯರಲ್ಲಿ ಹೇಗೋ ಹಾಗೆಯೇ ಅಮುಖ್ಯವಾಗಿ ಉಪಕಾರಕಗಳಾದ ಕರ್ಮಗಳಲ್ಲಿ ಇದೆ.) || ೧೧ ||

ಋ || (೩೮೦) ಅಶ್ವ್ಯೋ ವಾರೋ ಅಭವಸ್ತದಿಂದ್ರ ಸೃಕೇ ಯತ್ತ್ವಾ
ಪ್ರತ್ಯಹನ್ದೇವ ಏಕಃ । ಅಜಯೋ ಗಾ ಅಜಯಃ ಶೂರ ಸೋಮ
ಮವಾಸೃಜಃ ಸರ್ತವೇ ಸಪ್ತ ಸಿಂಧೂನ್ || ೧೨ ||

ಅ || ಇಂದ್ರ=ಇಂದ್ರನೇ, ಯತ್=ಯಾವ ಪಕ್ಷದಲ್ಲಿ ಸೃಕೇ=(ಆಯುಧದ ನಾಮವು. ಅದರ ಸಂಬಂಧದಿಂದ ಯುದ್ಧವನ್ನು ಲಕ್ಷಣಯಾ ಇಟ್ಟುಕೊಳ್ಳಬೇಕು. ಅಥವಾ ಯುದ್ಧದ ನಾಮವೇ.) ಯುದ್ಧದಲ್ಲಿ, ಏಕಃ=ಪ್ರಧಾನನಾದಾಗ್ಯೂ, ದೇವಃ=ದೇವತೆಯು, ತ್ವಾ=ನಿನ್ನನ್ನು,ಪ್ರತ್ಯಹನ್=ಹೊಡೆಯಲು ಇಚ್ಛಿಸುವನೋ,ತತ್=ಆಗ (ನೀನು) ಅಶ್ವ್ಯಃ=ಅಶ್ವ ಸಂಬಂಧಿಯಾದ, ವಾರಃ=(ವೃಞ ವರಣೇ) ನಿವಾರಕನೂ, (ಅಂದರೆ ಪ್ರತಿಭಟನ ಕುದುರೆಗಳನ್ನು ತಡೆಯುವವನು) ಅಭವಃ=ಆಗಿರುತ್ತಿ. ಮತ್ತು, ಶೂರ=ಎಲೋ ಪರಾಕ್ರಮಶಾಲಿಯೇ, (ನೀನು) ಗಾಃ=(ಶತ್ರುಗಳ) ಗೋವುಗಳನ್ನು, ಅಜಯಃ= ಗೆದ್ದಿರುತ್ತಿ. ಅಜಯಃ=(ಶತ್ರುಗಳ ಹಿರಣ್ಯಾದಿಗಳನ್ನು) ಗೆದ್ದಿರುತ್ತಿ. (ನೀನು) ಸಪ್ತ ಸಿಂಧೂನ್=ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ । ನರ್ಮದೇ ಸಿಂಧು ಕಾವೇರಿ ಜಲೇಽಸ್ಮಿನ್ ಸಂನಿಧಿಂ ಕುರು, ಎನ್ನುವಲ್ಲಿ ಹೇಳಲ್ಪಟ್ಟ) (೭) ಏಳು ಪ್ರಧಾನ ನದಿಗಳನ್ನು ಅಥವಾ (೯೯ ಪ್ರಧಾನ ನದಿಗಳಲ್ಲಿ ಅಂತರ್ಗತಗಳಾದ ಕಾವೇರೀ ಕೃಷ್ಣವೇಣೀ ಚ ತುಂಗಭದ್ರಾ ಸರಸ್ವತೀ ಗೋದಾ ಚ ಯಮುನಾ ಗಂಗಾ ಮಹಾನದ್ಯಃ ಪ್ರಕೀರ್ತಿತಾಃ॥ಎಂದು ಹೇಳಲ್ಪಟ್ಟ) (೭) ಏಳು ಮುಖ್ಯ ನದಿಗಳನ್ನು, ಸೋಮಂ=ಸೋಮವನ್ನು ಸರ್ತವೇ=ಹೊಂದುವುದಕ್ಕಾಗಿ. ಅವಾಸೃಜಃ=(ವೃತ್ರಾದಿಗಳ ಪ್ರತಿಬಂಧದಿಂದ) ಬಿಡಿಸಿರುತ್ತಿ. (ಅಂದರೆ=ಸೋಮ ರಸವನ್ನು ಹಿಂಡುವ ಕಾಲದಲ್ಲಿ ಸೋಮರಸದ ಅಭಿವೃದ್ಧಿಗಾಗಿ ನದೀ ಜಲಗಳಿಂದ ಸೋಮವನ್ನು ಕೂಡಿಸುವುದಕ್ಕಾಗಿ ನದಿಗಳನ್ನು ಪ್ರವರ್ತಿಸಿದವನಾಗಿರುತ್ತಿ.) ಅಧ್ಯಾತ್ಮರೂಪ ಅರ್ಥದಲ್ಲಿ) ಎಲೋ ಶ್ರೀಹರಿಯೇ, ಗಾಃ=(ಭಕ್ತರ) ಜ್ಞಾನಗಳನ್ನು, ಅಜಯಃ=(ಮಿಥ್ಯಾಜ್ಞಾನದಿಂದ) ಗೆದ್ದಿರುತ್ತಿ. (ಅಂದರೆ—ಮಿಥ್ಯಾಜ್ಞಾನದಿಂದ ಅಭಿಭೂತಗಳಾದ ಜ್ಞಾನಗಳನ್ನು ತಿರಸ್ಕರಿಸಿ ಸ್ಥಿರಗಳನ್ನಾಗಿ ಮಾಡಿರುತ್ತಿ.) ಸೋಮಂ=ಭಕ್ತರಾದ ನಮ್ಮ ಮನಸ್ಸನ್ನು, ಅಜಯಃ=(ಶಬ್ದಾದಿ ವಿಷಯ ಸಮುದಾಯದಿಂದ,) ಗೆದ್ದಿರುತ್ತಿ. (ವಿಷಯಗಳಿಂದ ಅಪಹೃತವಾದ ಮನಸ್ಸನ್ನು ವಿರಕ್ತವನ್ನಾಗಿ ಮಾಡಿರುತ್ತಿ.) ಸಪ್ತಸಿಂಧೂನ್=೭ಸಮುದ್ರಗಳನ್ನೆಂಬಂತೆ ದುಸ್ತರಗಳಾದ ಮಹತ್ತತ್ವಾದಿಗಳನ್ನು, (ಅಂದರೆ–ಮಹತ್ತತ್ವದ ಅಂಶ ಭೂತವಾದ ಚಿತ್ತವನ್ನೂ ಅಹಂಕಾರ ತತ್ವದ ಅಂಶಭೂತವಾದ ಅಹಂಕಾರವನ್ನೂ ದೇಹದಲ್ಲಿರುವ ಪಂಚಭೂತಾಂಶಗಳನ್ನು,) ಸರ್ತವೇ=ನ್ಯಾಯ ಮಾರ್ಗದಲ್ಲಿ ಹೋಗುವುದಕ್ಕಾಗಿ ಅವಾಸೃಜಃ= ಪ್ರೇರೇಪಿಸಿದವನಾಗಿರುತ್ತಿ. (ಇತರವಾದುದು ಸ್ಪಷ್ಟವೇ) ||೧೨||

ಭಾ ॥(೧) ಸೃಕೇ ಯುದ್ಧೇ ಪ್ರತ್ಯಹಂಸ್ತ್ವಾಂ ಯದಿ ಸ್ಮದೇವಃ ಪ್ರಧಾನೋಽಪಿ ತದಶ್ವವಾರಃ॥
(೨) ವಾಲೀವ ತ್ವಂ ಪನು ದೇವಸ್ತದಾನೀಂ ಪ್ರತಿಹಂತಾ ತೇನೈವ ಕಶ್ಚಿದ್ಧಿ ತಸ್ಮಾತ್॥
(೩) ಅಜಯೋ ಬಲಾದ್ಗಾಃ ಅಜಯೋ ಹಿರಣ್ಯಂ ಸೋಮಂ ಗಂತುಮಮುಚಃ ಸಪ್ತಸಿಂಧೂನ್ ॥ ೧೨ ॥

ಅ ॥ (೧) ಸೃಕೇ=ಯುದ್ಧದಲ್ಲಿ ಒಬ್ಬ ಪ್ರಧಾನ ದೇವನೂ ನಿನ್ನನ್ನು ಕೊಲ್ಲಲಿಕ್ಕೆ ಇಚ್ಛಿಸಿದರೆ—ಆಗ ಅಶ್ವಸಂಬಂಧಿವಾರಕನು ಆಗು. (ವಾರಃ=ವಾರಣಂ ಅಸ್ಯಾಸ್ತೀತಿ ವಾರಃ=ವಾರಕನು) (ಅಂದರೆ-ಆ ಪ್ರತಿಭಟನ ಅಶ್ವಗಳನ್ನು ತಡೆಯುವವನಾಗು. (೨) (ಬುದ್ಧಿಯಲ್ಲಿ ಆರೂಢವಾಗುವುದಕ್ಕಾಗಿ ಭಾಷ್ಯಕಾರರು ದೃಷ್ಟಾಂತವನ್ನು ಹೇಳುತ್ತಾರೆ.) ಹೇಗೆ ವಾಲಿಯು (ತನ್ನ ದೃಷ್ಟಿಪಾತ ಮಾತ್ರದಿಂದ ಪರರ ಸೈನ್ಯವನ್ನು ಅಪಹಾರ ಮಾಡುತ್ತಾನೋ, ಹಾಗೆಯೇ ನೀನು ನೋಡೋಣ ಮಾತ್ರದಿಂದ ಶತ್ರುವಿನ ರಥದಲ್ಲಿ ಯೋಜಕಗಳಾದ ಕುದುರೆಗಳ ಬಲವನ್ನು ಅಪಹರಿಸಿ ಆ ಕುದುರೆಗಳನ್ನು ಹಿಂದು ಮುಖವಾಗಿ ಹೊರುವ ಹಾಗೆ ಮಾಡುತ್ತಿ. ಅಥವಾ ಅಶ್ವವಾರಃ ಎಂದರೆ-ಅಶ್ವನಿಷ್ಠಃ ವಾರಃ=ಸಂಭಜನಂ, ಸ್ವಸ್ವಾಮಿವಾಹಕತ್ವಂ ಅಸ್ಯಾಸ್ತೀತಿ ವಾರಃ=ವಾಹಕನು, ಪ್ರಸಿದ್ಧನು. ಆಗ ಅಂದರೆ ರಥವನ್ನು ಹೊರುತ್ತಿರುವ ಪರರ ಕುದುರೆಗಳು ಹಿಂದು ಮುಖವಾಗಿ ಹೇಗೆ ಓಡಿ ಹೋಗುತ್ತವೋ ಹಾಗೆ ಮಾಡು.) ದೇವನೂ ಆಗ ನಿನ್ನನ್ನು (ತಿರುಗಿ ಹೊಡೆಯಲು ಇಚ್ಛಿಸಿದರೆ—ಆಗ ಆ ಪ್ರತಿಭಟನ ಕುದುರೆಗಳನ್ನು ನೀನು ತಡೆಯುವವನು ಆಗುತ್ತಿ, ಎಂದು ಹೇಳಿದುದರಿಂದ ಪ್ರಥಮತಃ ಪ್ರಹಾರ (ಹೊಡೆಯುವಿಕೆ) ವಿಷಯನು ಆಗುತ್ತಾನೆಂದು ಪ್ರಾಪ್ತವಾಗುತ್ತದೆ. ಆದಕಾರಣ ಅಭಿಪ್ರಾಯ ಹೇಳುತ್ತಾರೆ.) ನೋಡೋಣ ಮಾತ್ರದಿಂದ ನೀನು ಪರರ ಸೈನ್ಯವನ್ನು ಅಪಹರಿಸುವುದರಿಂದ ನಿನ್ನನ್ನು ತಿರುಗಿ ಹೊಡೆಯುವವನು ಯಾವನೊಬ್ಬ ದೇವತೆಯೂ ಸರ್ವಥಾ ಇಲ್ಲವೇ ಇಲ್ಲ. (ಪ್ರತಿ ಹೊಡೆಯುವವನು ಇಲ್ಲದಿರುವುದರಿಂದಲೇ ಪ್ರತ್ಯಹನ್ ಎನ್ನುವುದಕ್ಕೆ ತಿರುಗಿ ಹೊಡೆಯಲು ಇಚ್ಛಿಸಿದರೆ ಎಂದರ್ಥವು.) ಪ್ರಸಿದ್ಧ (೩)(ಶೌರ್ಯವಿದ್ಧವನಿಗೇನೇ ಬಲಾತ್ಕಾರ ಕರಣವು ಕೂಡುವ ಪ್ರಯುಕ್ತ) ಬಲಾತ್ಕಾರದಿಂದ (ಶತ್ರುಗಳ) ಗೋವುಗಳನ್ನು ಗೆದ್ದಿರುತ್ತಿ. ಪುನಃ ಹಿರಣ್ಯವನ್ನು ಗೆದ್ದಿರುತ್ತಿ. (ಶ್ರುತಿಯಲ್ಲಿ ಹೇಳಿದ ಸೋಮವನ್ನು ಬಿಟ್ಟು ಶ್ರುತಿಯಲ್ಲಿ ಹೇಳದ ಹಿರಣ್ಯಂ ಎಂದು ಅಧ್ಯಾಹಾರ ಮಾಡಲಿಕ್ಕೆ ಏನು ಕಾರಣವು ಎಂದರೆ-ಸೋಮವು ಹವಿಸ್ಸಾದ ಕಾರಣ ಅದಕ್ಕೆ ಇಂದ್ರನೇ ಸ್ವಾಮಿಯೆಂದು ಸಿದ್ಧವಾದ ಪ್ರಯುಕ್ತ ಪರಕೀಯ ವಸ್ತುಗಳ ಜಯವನ್ನೇ ಹೇಳಬೇಕಾದ ಕಾರಣ ಶ್ರುತಿಯಲ್ಲಿ ಹೇಳದ ಹಿರಣ್ಯಂ ಎನ್ನುವುದನ್ನೇ ಅಧ್ಯಾಹಾರ ಮಾಡಿದ್ದು.) (೪) ನೀನು ೭ ಪ್ರಧಾನ ನದಿಗಳನ್ನು ಸೋಮವನ್ನು ಹೊಂದುವುದಕ್ಕಾಗಿ (ವೃತ್ರಾದಿಗಳ ಪ್ರತಿಬಂಧದಿಂದ) ಬಿಡಿಸಿರುತ್ತಿ. (ಅಂದರೆ-ಸೋಮವನ್ನು ಹಿಂಡುವ ಕಾಲದಲ್ಲಿ ಸೋಮರಸದ ಅಭಿವೃದ್ಧಿಗಾಗಿ ನದೀಜಲಗಳಿಂದ ಸೋಮವನ್ನು ಕೂಡಿಸುವುದಕ್ಕಾಗಿ ನದಿಗಳಿಗೆ ಪ್ರವರ್ತಕನಾಗಿರುತ್ತಿ.) ॥ ೧೨ ॥

ಋ ॥ (೩೪೧) ನಾಸ್ಮೈ ವಿದ್ಯುನ್ನ ತನ್ಯತುಃ ಸಿಷೇಧ ನ ಯಾಂ ಮಿಹಮಕಿರದ್ಧ್ರಾದುನಿಂ ಚ। ಇಂದ್ರಶ್ಚ ಯದ್ಯುಯುಧಾತೇ ಅಹಿಶ್ಚೋತಾಪರೀಭ್ಯೋ ಮಘವಾ ವಿಜಿಗ್ಯೇ ॥ ೧೩ ॥

ಅ ॥ ಯತ್=ಯಾವಾಗ, ಇಂದ್ರಶ್ಚ ಅಹಿಶ್ಚ=ಇಂದ್ರನೂ ಅಹಿಯೂ ಕೂಡ, ಯುಯುಧಾತೇ=ಯುದ್ಧ ಮಾಡಿರುವರೋ, (ಎಲೋ ಇಂದ್ರನೇ ಯಾವಾಗ ನಿನಗೆ ಅಹಿದೈತ್ಯನಿಂದ ಯುದ್ಧವು ಪ್ರವೃತ್ತವಾಗಿಯದೋ,) (ಆಗ) ವಿದ್ಯುತ್=ವಿದ್ಯುನ್ನಾಮಕ ಆಯುಧವು, ಅಸ್ಮೈ=ಅಹಿಗಾಗಿ, ನ ಸಿಷೇಧ=ಈ ಅಹಿಗೆ

ಇಂದ್ರವಧರೂಪವಾದ ಪ್ರಯೋಜನದ ಸಿದ್ಧಿಯನ್ನು ಮಾಡಲಿಲ್ಲ. (ಇಂದ್ರನನ್ನು ಸಂಹರಿಸಲಿಕ್ಕೆ ಶಕ್ತನಾಗಲಿಲ್ಲ) ತನ್ಯತುಶ್ಚ=ತನ್ಯತು ಎಂಬ ಶಬ್ದದಿಂದ ಹೇಳಲ್ಪಟ್ಟ ವಜ್ರಾಯುಧವೂ, ನ ಸಿಷೇಧ=ಈ ಅಹಿಗೆ ಇಂದ್ರವಧರೂಪವಾದ ಪ್ರಯೋಜನದ ಸಿದ್ಧಿಯನ್ನು ಮಾಡಲಿಲ್ಲ. ಯಾಂ=ಯಾವ, ಮಿಹಂ=ಅತಿತೀಕ್ಷ್ಣವಾದ ಆಯುಧವನ್ನು ಹ್ರಾದುನಿಂ ಚ=ವಜ್ರ ಪ್ರಭೇದವನ್ನು (ಯುದ್ಧದಲ್ಲಿ ಅಹಿದೈತ್ಯನು ನಿನ್ನನ್ನು ಕುರಿತು) ಅಕಿರತ್=(ಕ್ಷೈವಿಕ್ಷೇಪೇ) ಬಿಸಾಡಿರುವನೋ, (ಅವುಗಳೂ ಕೂಡ) ನ=ಸಿದ್ಧಿಯನ್ನು ಮಾಡಲಿಲ್ಲ. ಮತ್ತೆ ಅಪರೀಭ್ಯಃ=ಬೇರೆ ಕಾಲದಲ್ಲಿ ಮುಂದಿನ ಕಾಲದಲ್ಲಿ ಮಘವಾ ಉತ=ದೇವೇಂದ್ರನಾದ ನೀನೇ, (ಆ ಅಹಿಯನ್ನು) ವಿಜಿಗ್ಯೇ=(ಜಿಜಯೇ) ಗೆದ್ದಿರುತ್ತಿ. (ಆಧ್ಯಾತ್ಮರೂಪವಾದ ಅರ್ಥವು.) ವಿದ್ಯುತ್=(ದ್ಯುತದೀಪ್ತೌ) ವಿಪರೀತವಾದ ದೀಪ್ತಿಯು, ವಿಪರೀತವಾದ ಮತಿಯು, ತನ್ಯತುಃ=(ಸ್ತನಶಬ್ದೇ) (ಪ್ರತಿವಾದಿಗಳ ಪ್ರಮಾಣ ದೂಷಣಾಭಾಸ ಪ್ರಯೋಗರೂಪ ಶಬ್ದಗಳು) ಅಥವಾ ತನ್ಯತುಃ=(ಇಷ್ಟಂ ತನ್ಯತೇ ಅನಯಾ ವಕ್ತೃಶಕ್ತ್ಯಾ ಎಂಬ ವ್ಯುತ್ಪತ್ತಿಯಿಂದ) ವಕ್ತೃಶಕ್ತಿಯು ಯಾವ ಮಿಹಂ=ವಕ್ತೃಶಕ್ತಿಯನ್ನು ಅಥವಾ ಜನ್ಮಾಂತರ ವಾಸನಾರೂಪ ಶಕ್ತಿಯನ್ನು ಹ್ರಾದುನಿಂ ಚ=(ಹ್ರಾದ ಅವ್ಯಕ್ತೇ ಶಬ್ದೇ) ಹುಂಕಾರವನ್ನು, ಅಹಿಃ=ಅಜ್ಞಾನವು ಅಕಿರತ್=ಎಬ್ಬಿಸಿಯದೋ, ಅನಾದಿರೂಪವಾದ ವಾಸನಾಶಕ್ತಿಯಿಂದಲೂ ಅಜ್ಞಾನದಿಂದಲೂ ಪ್ರವರ್ತಿತವಾದ ಹುಂಕಾರಾದಿಗಳು ಯಾವುದು ಪ್ರತಿವಾದಿಗೆ ಇವೆಯೋ, ಅವೆಲ್ಲವೂ ಪರಮಾತ್ಮನ ಅನುಗ್ರಹವಿದ್ದರೆ, ಅಸ್ಮೈ=ಭಕ್ತನಿಗಾಗಿ, ನ ಸಿಷೇಧ=ಸಿದ್ಧಿಯನ್ನುಂಟು ಮಾಡುವುದಿಲ್ಲ.) (ಕಾರ್ಯಕಾರಿಯು ಆಗುವುದಿಲ್ಲ. ವ್ಯರ್ಥವೇ ಆಗುತ್ತದೆ) (ಅಂದರೆ ಭಗವದ್ಭಕ್ತರಿಗೆ ಪರಾಜಯವು ಉಂಟಾಗುವುದಿಲ್ಲ) ಇಂದ್ರಶ್ಚ=ಶ್ರೀಹರಿಯೂ, ಅಹಿಶ್ಚ=ಸಂಶಯವೂ ಕೂಡ, ಯತ್=ಯಾವಾಗ ಯುಯುಧಾತೇ=ಯುದ್ಧ ಮಾಡಿದವೋ, ಆಗ ಮಘವಾ ಉತ=ಶ್ರೀಹರಿಯೂ ಕೂಡ, ಅಪರೀಭ್ಯಃ=ಮೇಲಿನ ಕಾಲದಲ್ಲಿ ಭಕ್ತರ ಹೃದಯದಲ್ಲಿದ್ದವನಾಗಿ ಭಕ್ತರ ಅಜ್ಞಾನವನ್ನೂ ಸಂಶಯವನ್ನೂ ವಿಜಿಗ್ಯೇ=ಗೆದ್ದನು. (ಭಕ್ತರ ಅಜ್ಞಾನ ಸಂಶಯಗಳನ್ನು ಪರಿಹರಿಸಿದನು) ॥ ೧೩ ॥

ಭಾ ॥ (೧) ಅಶನಿಂ ಯಾಂ ವಿದ್ಯುತಂ ಯಾಂ ಮಿಹಂ ಚ ನಾಮ್ನಾ ಹೇತಿಂ ವೇದ್ಯುಪಮಾಂ ಸುತೀಕ್ಷ್ಣಾಂ । ಅಶನಿಭೇದಂ ಹ್ರಾದುನಿನಾಮಧೇಯಂ ತ್ವಾಮುದ್ದಿಶ್ಯ ಪ್ರಾಕಿರತ್ಸೋಽಹಿರುಗ್ರಃ ॥ ತ್ವಾಂ ಪ್ರತ್ಯೇತನ್ನೈವ ಸಿದ್ಧಿಂ ಚಕಾರ ಪಶ್ಚಾತ್ಕಾಲೇ ತ್ವಜಯಸ್ತ್ವಂ ತಮೇವ ॥ ೧೩ ॥

ಅ ॥ (೧) (ಇಡೀ ಋಕ್ಕಿನ ತಾತ್ಪರ್ಯವನ್ನು ಭಾಷ್ಯಕಾರರು ಹೇಳುತ್ತಾರೆ)ಯಾವ ತನ್ಯತು ಶಬ್ದದಿಂದ ಹೇಳಲ್ಪಟ್ಟ ವಜ್ರಾಯುಧವನ್ನು ಯಾವ ವಿದ್ಯುನ್ನಾಮಕ ಆಯುಧವನ್ನು, ಯಾವ ನಾಮದಿಂದ, ಮಿಹಂ=ಯಜ್ಞವೇದಿಗೆ ಸದೃಶವಾದ ಅತಿ ತೀಕ್ಷ್ಣವಾದ ಆಯುಧ ವಿಶೇಷವನ್ನು ಯಾವ ಹ್ರಾದುನಿ ಎಂದು ಹೆಸರುಳ್ಳ ವಜ್ರ ಪ್ರಭೇದವನ್ನು, ಆ ಕ್ರೂರನಾದ ಅಹಿ ದೈತ್ಯನು ನಿನ್ನನ್ನುದ್ದೇಶಿಸಿಯೇ ಬಿಸುಟನು. ಈ ಎಲ್ಲಾ ಆಯುಧ ಸಮುದಾಯವು ನಿನ್ನನ್ನು ಕುರಿತು ಅಂದರೆ ನಿನ್ನ ಸಂಬಂಧಿಯಾದ ನಿನಗೆ ಉಪಹತಿ ರೂಪವಾದ ಸಿದ್ಧಿಯನ್ನು ಮಾಡಲೇ ಇಲ್ಲ. (ನಿನಗೆ ಕೆಡುಕು ಮಾಡಲಿಲ್ಲ) ಮತ್ತೆ ಮೇಲಿನ ಕಾಲದಲ್ಲಿ ಆದರೂ ಇಂದ್ರನಾದ ನೀನೇ ಆ ಅಹಿಯನ್ನು ಗೆದ್ದಿರುತ್ತಿ. ॥ ೧೩ ॥

ಋ ॥(೩೮೨)ಅಹೇರ್ಯಾತಾರಂ ಕಮಪಶ್ಯ ಇಂದ್ರ ಹೃದಿ ಯತ್ತೇ ಜಘ್ನುಷೋ ಭೀರಗಚ್ಛತ್। ನವ ಚ ಯನ್ನವತಿಂ ಚ ಸ್ರವಂತೀಃ ಶ್ಯೇನೋ ನ ಭೀತೋ ಅತರೋ ರಜಾಂಸಿ ॥ ೧೪ ॥

ಅ || ಇಂದ್ರ=ಇಂದ್ರನೇ,ಅಹೇಃ=ಅಹಿನಾಮಕ ಅಸುರನನ್ನು ಕುರಿತು, ಯಾತಾರಂ=ಇದಿರು ಹೋಗುವ (ಅಂದರೆ ಅಹಿಯೊಡನೆ ಯುದ್ಧ ಮಾಡುವ) ನಿನ್ನನ್ನು(ಹೊರತು)ಕಂ=ಯಾರನ್ನು ಅಪಶ್ಯಃ ನೋಡಿರುತ್ತಿ (ಯಾರನ್ನು ನೋಡಲಿಲ್ಲ. (ಅಂದರೆ —ನೀನು ಸಕಲ ಲೋಕ ವೃತ್ತಾಂತವನ್ನು ತಿಳಿದವನಾದರೂ ಅಹಿನಾಮಕ ಅಸುರನಿಗೆ ಪ್ರತಿಭಟನನ್ನು ಕಾಣಲಿಲ್ಲವಷ್ಟೆ.)(ಏಕೆಂದರೆ)ಯತ್=ಯಾವ ಕಾರಣದಿಂದ,ಜಘ್ನುಷಃ ತೇ=ಆ ಅಹಿಯನ್ನು ಸಂಹರಿಸುವವನಾದಾಗ್ಯೂ ನಿನ್ನ ಹೃದಿ=ಹೃದಯದಲ್ಲಿ, ಭೀಃ=ಭಯವು,ಅಗಚ್ಛತ್=ಹೊಂದಿತು (ಭಯವು ಉಂಟಾಯಿತು.)(ಅಂದರೆ ನಿನ್ನ ಮನಸ್ಸಿನಲ್ಲಿಯೂ ಸಂಹರಿಸಲು ಸಾಧ್ಯವೋ ಅಸಾಧ್ಯವೋ ಎಂದು ಮೊದಲು ಭಯವು ಉಂಟಾಗಿತ್ತು ಈ ರೀತಿಯಾಗಿ ಇರುವ ಅಹಿಯನ್ನು ನೀನು ಸಂಹರಿಸಿರುತ್ತಿ.) ಯತ್=ಯಾವ ಕಾರಣದಿಂದ, (ನೀನು) ರಜಾಂಸಿ=(ರಜಃ ಎನ್ನುವುದು ಅಂತರಿಕ್ಷ ನಾಮಧೇಯವು-)ಆಕಾಶ ಪ್ರದೇಶಗಳನ್ನು, ಭೀತಃ ಶ್ಯೇನಃನ=ಭಯಗ್ರಸ್ತನಾದ ಗಿಡುಗ ಹೇಗೆ ಅತಿಕ್ರಮಿಸಿ ಹೋಗವುದೋ (ಗಿಡುಗ ಹಕ್ಕಿಯೋ ಸ್ವಭಾವತಃಅತಿವೇಗವುಳ್ಳದ್ದು. ಭಯಗ್ರಸ್ತವಾದುದು ಸುತರಾಂ ಅತಿ ವೇಗವುಳ್ಳದ್ದು.) ಹಾಗೆಯೇ ನವ ಚ ನವತಿಂ ಚ ಸ್ರವಂತೀಃ=೯೯ ಹರಿಯುತ್ತಿರುವ ನದಿಗಳನ್ನು, ಅತರಃ=ದಾಟಿದವನಾಗಿರುತ್ತಿ. (ಆದ ಕಾರಣ ನೀನು ಹೊರತು ಇನ್ನೊಬ್ಬನು ಅಹಿಯ ಇದಿರು ಹೋಗುವವನು ಇಲ್ಲ. (ಅಂದರೆ ಅಹಿಯು ನಾನಾ ನದಿಗಳನ್ನು ತಡೆಯುವವನಾದುದರಿಂದ ಆ ಅಹಿಯನ್ನು ಸಂಹರಿಸುವುದಕ್ಕಾಗಿ ಶೀಘ್ರದಲ್ಲಿ ಆ ನದಿಗಳನ್ನೆಲ್ಲಾ ದಾಟಿ ಆ ಅಹಿಯನ್ನು ಸಂಹರಿಸಿರುತ್ತಿ)(ಅಧ್ಯಾತ್ಮಪರವಾದ ಅರ್ಥವು)ಅಹೇಃ=ಸಂಶಯವನ್ನು, ಯಾತಾರಂ=ಇದಿರು ಹೋಗುವ (ಪರಿಹರಿಸುವ)ನಿನ್ನನ್ನು ಕುರಿತು ಕಂ=ಯಾರನ್ನು, ಅಪಶ್ಯಃ=ನೋಡಿರುತ್ತಿ....ಇಂದ್ರ=ಶ್ರೀಹರಿಯೇ, (ನೀನು ಹೊರತು ಯಾರೊಬ್ಬನೂ ಇದಿರು ಹೋಗುವವನು(ಪರಿಹರಿಸುವವನು)ಇಲ್ಲವೇ ಇಲ್ಲ.)(ಏಕೆಂದರೆ) ಯತ್=ಯಾವ ಕಾರಣ ದೆಶೆಯಿಂದ,ತೇ ಜಘ್ನುಷಃ=ನೀನೇ ಸಂಶಯವನ್ನು ಪರಿಹರಿಸುವಾಗ (ನಿನ್ನವರ) ಹೃದಿ ಭೀಃ ಅಗಚ್ಛತ್=ಹೃದಯದಲ್ಲಿ ಭಯವು ಹೋಯಿತು. (ಅಂದರೆ ಹೃದಯದಲ್ಲಿರತಕ್ಕ ಭಯವು ಚೆನ್ನಾಗಿ ನಾಶಗೊಂಡಿತು. ಇತರರು ಸಂಶಯ ಪರಿಹಾರಕ್ಕಾಗಿ ಪ್ರಯತ್ನ ಪಟ್ಟರಾದರೆ ಭಯವು ಹೋಗಲಾರದು.) ಮತ್ತು ಯತ್=ಯಾವ ಕಾರಣದಿಂದ (ನೀನು) ನವ ಚ ನವತಿಂ ಚ=೯೯ ದೇವತೆಗಳನ್ನು, ಭೀತಃ ಶ್ಯೇನೋ ನ=ಭಯಗ್ರಸ್ತವಾದ ಗಿಡುಗ, ರಜಾಂಸಿ=ಆಕಾಶ ಪ್ರದೇಶಗಳನ್ನು ಹೇಗೆ ದಾಟುತ್ತದೋ, ಹಾಗೆಯೇ, (ಸಂಸಾರಗಳನ್ನು ದಾಟುವ ಆ ದೇವತೆಗಳನ್ನು) ನವ ಚ ನವತಿಂಚ ಸ್ರವಂತೀಃ=೯೯ ನದಿಗಳನ್ನು ಅತರಃ=ದಾಟಿಸಿರುತ್ತಿ (ಆದ ಕಾರಣ ನೀನೇ ಸಂಶಯವನ್ನು ಪರಿಹರಿಸುವವನು) || ೧೪ ||

ಭಾ || (೧)ಅಹೇರ್ಯೋದ್ಧಾರಂ ಕಮಪಶ್ಯ ಇಂದ್ರ ಯಜ್ಜಘ್ನುಷಸ್ತೇಽಪಿ ಭಯಂ ಜಗಾಮ|| (೨)ಜ್ಞಾನಾನಿ ಮಿಥ್ಯಾ ಬೋಧತೋಽ(೩) ಕೃತ್ಸ್ನಸ್ಯ ಶಬ್ದಾದಿಕಾದಮುಚ(೪)ಸ್ಸಂತೀತಿ ಸಿಂಧೂನಿಚ್ | ಮತ್ತಥ ತ್ವಾದೀನ್ (೫)ವಿಪರೀತಾ ಮತಿಸ್ತು ವಿದ್ಯುಚ್ಚ (೬)ಬ್ರಾಹ್ಮಿಸ್ತು ನ್ಯತುರ್ವಕ್ತ್ರಶಕ್ತಿಃ | ಮಿಹೇತ್ಯುಕ್ತಾ (೮) ಹ್ರಾದುನಿರ್ಹ್ಯಂಕೃತಿಶ್ಚ ಪ್ರತಿಪತ್ತ್ಯಾಖ್ಯಾ (೯) ಮನುಕೂಲೇ ರಮೇಶೇ || (ಪರೇಶೇ) ನ ಸಾಧಯಂತಿ ಸ್ಮ ತಮುಸ್ಸಮುತ್ಥಾ (೧೦) ಜಯತ್ಯೇನಂ ಸಂಶಯಂ ವಾಸುದೇವಃ|| (೧೧) ಸ್ವಭಕ್ತಾರ್ಥೇ ತದ್ಧೃದಿಸ್ಥಃ ಸ ಏವ ತ್ವದನ್ಯೋಽಹೇರಭಿಗಂತಾ ಭವೇತ| (೧೨) ತವೈವ ಯಸ್ಮಾತ್ಸಂಶಯಂ ಜಘ್ನುಷಸ್ತು ತ್ವದೀಯಾನಾಂ ಭಯಮಂಜೋ ವ್ಯಪೈತಿ (೧೩) ಶತಮೇಕೋನಮತರಸ್ತ್ವಂ ನದೀನಾಮಹಿಂ ದೈತ್ಯಂ ಘ್ನನ್ ಯಥಾಽಽಕಾಶದೇಶಾತ್ | ಭೀತಃ ಶ್ಯೇನೋ ಹ್ಯತಿ (ಧಿ) ಗಚ್ಛೇತ್ತಥೈವ ನಾನಾನದೀವಾರಕತ್ವಾತ್ತು ತಸ್ಯ|| (೧೪) ಈಶೋ ದೇವಾನಾಂ ತಾವತಾಂ ತಾವತೀಶ್ಚ ಸೃತ್ವ್ಯಾಪಗಾಸ್ತಾರಯಾಮಾಸ (೧೫) ಯದ್ವತ್ | ಭೀತಃ ಶ್ಯೇನಸ್ತರತೀತ್ಥಂ ತಥೈಷಾಂ ಕೃತ್ವೋಜೀವಾನಾಂ ತಾರಯಾಮಾಸ

ದೇವಃ (೧೬) ಸ್ವಾತಂತ್ರ್ಯೇ ಭೇದಕರಣೇ ಚೋಕ್ತ ಏವ ವ್ಯತ್ಯಾಸ ಇತ್ಯನವದ್ಯಂ ತದೇತತ್ (೧೭) ಜಸ್ಮಾದಿತ್ಯಾಪಃ ರುತಶ್ಚಾಪ್ಯಸೌಚ ಬೃಹಸ್ಪತಿಃ ಶೇಷವಿಪಾವಿರುದ್ಧಃ। ಬ್ರಹ್ಮಾ ಬ್ರಹ್ಮಾಣಃ ಋಭವಶ್ಚೈವ ರುದ್ರಾಃ ಊನಂ ಶತಂ ದೇವತಾಸಂಹಿತೋಕ್ತಂ ॥ ೧೪ ॥

ಅ ॥ (೧) ಅಹಿನಾಮಕ ಅಸುರನೊಡನೆ ಯುದ್ಧಮಾಡುವವನನ್ನು ನಿನ್ನನ್ನು ಹೊರತು ಯಾರನ್ನು ನೋಡಿರುತ್ತೀ? (ಯಾರನ್ನೂ ನೋಡಲಿಲ್ಲ. ಅಂದರೆ ಸರ್ವಜ್ಞನಾದ ನೀನೂ ಸಹ ಅವನ ಪ್ರತಿಭಟನನ್ನು ನೋಡಲಿಲ್ಲ.)(ಮಹಾ ಪರಾಕ್ರಮಶಾಲಿಯು)(ಏಕೆಂದರೆ) ಯಾವ ಕಾರಣದಿಂದ ಆತನನ್ನು ನೀನು ಸಂಹರಿಸುವವನಾದಾಗ್ಯೂ ನಿನಗೆ ಸಹ ಹೃದಯದಲ್ಲಿ ಭಯವು ಉಂಟಾಗಿದೆ. (ಅಂದರೆ ನಿನ್ನ ಮನಸ್ಸಿನಲ್ಲಿಯೂ ಮೊದಲು ಭಯವು ಹುಟ್ಟಿಯದೆ. ಇಂತಹ ಪರಾಕ್ರಮ ಶಾಲಿಯನ್ನೂ ನೀನು ಸಂಹರಿಸುವವನಾಗಿರುತ್ತೀ.) (೨) (ಸಿಂಹಾವಲೋಕನ ನ್ಯಾಯದಿಂದ (೧೨ನೇ ಋಕ್ಕಿನ ಉತ್ತರಾರ್ಧ). ಮೊದಲಾದ ೪ ಅರ್ಧ ಋಕ್ಕುಗಳನ್ನು ಆಧ್ಯಾತ್ಮಪರವಾಗಿ ವ್ಯಾಖ್ಯಾನ ಮಾಡುತ್ತಾರೆ.) (ಗೋ ಶಬ್ದವು ಗಮ್ ಧಾತುವಿನ ರೂಪವು, ಗತ್ಯರ್ಥಗಳಾದವುಗಳು ಜ್ಞಾನಾರ್ಥಗಳಾಗುತ್ತವೆ. ಆದ ಕಾರಣ, ಗಾಃ= ಭಕ್ತರ ಜ್ಞಾನಗಳನ್ನು ಮಿಥ್ಯಾಜ್ಞಾನದಿಂದ ಗೆದ್ದಿರುತ್ತೀ. (ಅಂದರೆ ಭಕ್ತರ ಜ್ಞಾನಗಳು ಮಿಥ್ಯಾಜ್ಞಾನದಿಂದ ತಿರಸ್ಕೃತಗಳಾಗಿವೆ. ಅವುಗಳನ್ನು ನಿರಾಕರಿಸಿ ಸ್ಥಿರಗಳನ್ನಾಗಿ ಮಾಡಿರುತ್ತೀ.) (೩) ಭಕ್ತರಾದ ನಮ್ಮ ಮನಸ್ಸನ್ನು ಶಬ್ದ ಮೊದಲಾದ ವಿಷಯಗಳ ಸಮುದಾಯದಿಂದ ಗೆದ್ದಿರುತ್ತೀ. (ಅಂದರೆ ವಿಷಯಗಳಿಂದ ಅಪಹೃತವಾದ ಮನಸ್ಸನ್ನೂ ವಿಷಯಗಳ ಕಡೆಗೆ ಹೋಗದಿದ್ದಂತೆ ವಿರಕ್ತವನ್ನಾಗಿ ಮಾಡಿರುತ್ತೀ). (೪) ೭ ಸಮುದ್ರಗಳನ್ನೆಂಬಂತೆ ದಾಟಲಶಕ್ಯಗಳಾದ ಮಹತ್ತತ್ತ್ವಾದಿಗಳನ್ನು (ಅಂದರೆ ಮಹತ್ತತ್ತ್ವದ ಅಂಶಭೂತವಾದ ಚಿತ್ತವನ್ನೂ, ಮಹತ್ತತ್ತ್ವದ ಅಥವಾ ಅಹಂಕಾರತತ್ತ್ವದ ಅಂಶಭೂತವಾದ ಅಹಂಕಾರವನ್ನೂ, ದೇಹದಲ್ಲಿರುವ ಪಂಚಮಹಾಭೂತಗಳ ಅಂಶಗಳನ್ನೂ) ನ್ಯಾಯಮಾರ್ಗದಲ್ಲಿ ಹೋಗುವಂತೆ) ಪ್ರೇರೇಪಿಸುವವನಾಗಿರುತ್ತೀ. (೫) ನಾಸ್ಮೈ ವಿದ್ಯುತ್ ಎಂಬ ೧೩ನೇ ಋಕ್ಕಿನಲ್ಲಿರುವ ವಿದ್ಯುತ್ ಮೊದಲಾದ ಶಬ್ದಾರ್ಥಗಳನ್ನು ಹೇಳುತ್ತಾರೆ.) ಪ್ರತಿ ವಕ್ತೃಗಳ ಅಂದರೆ ಪ್ರತಿವಾದಿಗಳ ವಿಪರೀತವಾದ ಬುದ್ಧಿಯಾದರೂ ವಿದ್ಯುತ್ ಎನಿಸುತ್ತದೆ. (ದ್ಯುತದೀಪ್ತೌ. ಸಮೀಚೀನವಾದ ಬುದ್ಧಿಯು ದ್ಯುತ್ ಎನಿಸುತ್ತದೆ. ಅದಕ್ಕೆ ವಿರುದ್ಧವಾಗಿರುವುದರಿಂದ ವಿಪರೀತವಾದ ಬುದ್ಧಿಯು ವಿದ್ಯುತ್‌ಎನ್ನಿಸುತ್ತದೆ.)(೬) (ಸ್ತನಶಬ್ದೇ ಸ್ತನ ಧಾತುವಿಗ್ಯೆಯತುಚ್ ಪ್ರತ್ಯಯವು. ಆದಿ ಸಕಾರಲೋಪವು.)ಪ್ರತಿವಾದಿಗಳ ಪ್ರಮಾಣದೋಷಣಾಭಾಸ ಪ್ರಯೋಗ ರೂಪಗಳಾದ ಶಬ್ದಗಳು ತನ್ಯತುಃ ಎನಿಸುತ್ತವೆ. (೭) ವಕ್ತೃ ಶಕ್ತಿಯು ಮಿಹ ಎಂದು ಹೇಳಲ್ಪಡುತ್ತದೆ. (ಅಂದರೆ ವಕ್ತೃತ್ವ ಶಕ್ತಿಯು ಮಿಹ ಎಂದು ಹೇಳಲ್ಪಡುತ್ತದೆ. ಮಿಹಸೇಚನೇ. ಮಿಹ್ಯತೇ ಸಿಚ್ಯತೇ ವಾಕ್ ಅನಯಾ ವಕ್ತೃಶಕ್ತ್ಯಾ ಮಿಟ್ ವಕ್ತೃಶಕ್ತಿಯು. ಶಕ್ತಿಯಿಂದ ಸಿಕ್ತವಾದ (ಉಪೋದ್ಬಲಿತವಾದ) ವಚನವೇ ಪ್ರವೃತ್ತವಾಗುತ್ತದೆ. ಅಭ್ಯಾಸ ಮಾತ್ರದಿಂದ ಅಲ್ಲ. ಅಂದರೆ ಜನ್ಮಾಂತರೀಯ ವಾಸನಾರೂಪವಾದ ಶಕ್ತಿಯು.) (ಅಂದರೆ ಅನಾದಿಯಾದ ಯೋಗ್ಯತೆಯನ್ನನುಸರಿಸಿರುವ ಜನ್ಮಾಂತರಗಳಲ್ಲಿ ಅನುಸರಿಸಿರುವ ಸಂಸ್ಕಾರರೂಪವಾದ ಶಕ್ತಿಯು. ಅದರಿಂದ ಉಪೋದ್ಬಲಿತವಾಗಿಯೇ ವಚನವು ಪ್ರವೃತ್ತವಾಗುತ್ತದೆ.)(೮)ಹ್ರಾದುನಿಯು ಹುಂಕೃತಿ ಎನಿಸುತ್ತದೆ. (ಹ್ರಾದ ಅವ್ಯಕ್ತೇ ಶಬ್ದೇ ಭಕ್ತರಿಗೆ ಭಯವನ್ನುಂಟು ಮಾಡುವ ಹುಂಕಾರವು.)(೯) (ಈಗ ೧೩ನೇ ಋಕ್ಕಿನಲ್ಲಿರುವ ನಾಸ್ಮೈ ಎನ್ನುವುದರ ತಾತ್ಪರ್ಯವನ್ನೂ ಹೇಳುತ್ತಾರೆ.) ಬ್ರಹ್ಮಾದಿಗಳಿಗೆ ಸ್ವಾಮಿಯಾದ ಶ್ರೀಹರಿಯು ಅನುಗ್ರಾಹಕನಾಗಿ ಇದ್ದರೇನೇ ಅಜ್ಞಾನದಿಂದ ಹುಟ್ಟಿರುವ ಈ ವಿದ್ಯುದಾದಿಗಳು ತಮ್ಮ ಕಾರ್ಯವಾದ ಭಗವದ್ಭಕ್ತರ ಪರಾಜಯವನ್ನು ಸಾಧಿಸುವುದಿಲ್ಲ. (ಅಂದರೆ ಉಂಟು ಮಾಡುವುದಿಲ್ಲ.) (ತಮುಸ್ಸಮುತ್ಥಾಃ ಎನ್ನುವುದು ಅಹಿರ ಕಿರತ್ ಎನ್ನುವುದರ ಅರ್ಥವು.) (೧೦) ವಾಸುದೇವನು ಈ ಸಂಶಯವನ್ನು ಗೆಲ್ಲುತ್ತಾನೆ. ನಾಶಗೊಳಿಸುತ್ತಾನೆ. (ಇದು ಉತಾಪರೀಭ್ಯಃ ಎನ್ನುವುದರ ಅರ್ಥವು. (೧೧) (ಅಹೇರ್ಯಾತಾರಂ ಎಂಬುವ ೧೪ನೇ ಋಕ್ಕಿನ ಅರ್ಥವು

ಶ್ರೀವಾಸುದೇವನಿಗೆ ಸಂಶಯಕೃತವಾದ ಉಪದ್ರವ ವಿಲ್ಲದಿರುವುದರಿಂದ ಸಂಶಯವನ್ನು ಗೆದ್ದನು ಎಂಬ ಮಾತು ಹೇಗೆ ಕೂಡುತ್ತದೆ.? ಅಂದರೆ ಶ್ರೀ ವಿಷ್ಣುವಿಗೆ ಸಂಶಯ ಸಂಬಂಧವೇ ಇಲ್ಲದಿರುವುದರಿಂದ ಸಂಶಯ ಪ್ರಯುಕ್ತವಾದ ದುಃಖಾದಿಗಳು ಇಲ್ಲವಷ್ಟೆ. ಯುದ್ಧಕ್ಕೆ ಬಾರದೇನೇ ಇದ್ದ ವೈರಿಗಳನ್ನು ಗೆದ್ದನು,ಎಂಬ ಮಾತು ಕೂಡಲಾರದಷ್ಟೆ, ಎಂದರೆ ಅಭಿಪ್ರಾಯ ಹೇಳುತ್ತಾರೆ.) ತನ್ನ ಭಕ್ತರ ಹೃದಯದಲ್ಲಿರತಕ್ಕ ಶ್ರೀ ವಿಷ್ಣುವು ತನ್ನ ಭಕ್ತರಿಗೆ ಮೋಕ್ಷರೂಪವಾದ ಪ್ರಯೋಜನಕ್ಕಾಗಿ ಸಂಶಯವನ್ನು ಗೆಲ್ಲುತ್ತಾನೆ.(ನಾಶಗೊಳಿಸುತ್ತಾನೆ-) ನಿನ್ನಿಂದ ಭಿನ್ನನಾದವನು ಯಾರು ತಾನೇ ಅಹಿ ಶಬ್ದವಾಚ್ಯವಾದ ಸಂಶಯವನ್ನು ನಾಶಗೊಳಿಸುವುದಕ್ಕಾಗಿ ಪ್ರವರ್ತಿಸುವವನಾಗುವನು. (೧೨) ಯಾವ ಕಾರಣದಿಂದ ನೀನೇ ಸಂಶಯವನ್ನು ವಿನಾಶಗೊಳಿಸುತ್ತಿರುವಾಗಲಾದರೂ ನಿನ್ನ ಭಕ್ತರ ಹೃದಯದಲ್ಲಿರತಕ್ಕ ಭಯವು ಚೆನ್ನಾಗಿ ನಾಶಗೊಳ್ಳುತ್ತದೆ. (ಇತರರು ಸಂಶಯವನ್ನು ವಿನಾಶಗೊಳಿಸುವುದಕ್ಕಾಗಿ ಪ್ರವೃತ್ತರಾಗುತ್ತಿರಲು ಭಯ ಪರಿಹಾರವು ಆಗಲಾರದು.) (೧೩) (ನವಚ ಎಂಬ ೧೪ನೇ ಅರ್ಥಋಕ್ಕನ್ನು ಪ್ರಸಿದ್ಧ ಇಂದ್ರನಲ್ಲಿ ವ್ಯಾಖ್ಯಾನ ಮಾಡುತ್ತಾರೆ.) ಹೇಗೆ ಆಕಾಶ ಪ್ರದೇಶಗಳನ್ನು ಬೆದರಿದ ಗಿಡುಗ. ದಾಟುತ್ತಾ ಹೋಗುವುದೋ, (ಶ್ಯೇನ ಹಕ್ಕಿಯೇ ವೇಗವುಳ್ಳದ್ದು, ಭಯಹೊಂದಿದ ಶ್ಯೇನವಾದರೂ ಸುತರಾಂ ಅತಿ ವೇಗವುಳ್ಳದ್ದು) ಹಾಗೆಯೇ ಎಲೋ ಇಂದ್ರನೇ, ನೀನು ಅಹಿದೈತ್ಯನು ನಾನಾ ವಿಧಗಳಾದ ಬಹು ನದಿಗಳನ್ನು ತಡೆಯುವವನಾದ ಕಾರಣ ಆ ಅಹಿ ದೈತ್ಯನನ್ನು ಸಂಹರಿಸಿದ ಪ್ರಯುಕ್ತ" ನದಿಗಳನ್ನು ದಾಟುವವನಾಗಿರುತ್ತಿ. (ಯಾವ ಕಾರಣದಿಂದ ಅತಿವೇಗದಿಂದ" ಪ್ರಧಾನ ನದಿಗಳನ್ನು ದಾಟಿದವನಾಗಿರುತ್ತಿಯೋ, ಆದ ಕಾರಣ ಬಹು ಪರಾಕ್ರಮಿಯಾದುದರಿಂದ ನೀನು ಹೊರತು ಇನ್ನೊಬ್ಬನು ಅಹಿದೈತ್ಯನ ಇದಿರು ಹೋಗುವವನು ಇಲ್ಲವೇ ಇಲ್ಲ) (ಆ ಅಹಿ ದೈತ್ಯನು ನಾನಾನದಿಗಳ ಪ್ರವೃತ್ತಿಯನ್ನು ತಡೆಯುವವನಾಗಿ ಅನೇಕಾನೇಕ ನದಿಗಳಲ್ಲಿ ಇದ್ದ ಕಾರಣ ಸಮಸ್ತ ನದಿಗಳನ್ನು ದಾಟದೆ ಇದ್ದರೆ ಆಯಾವ ನದಿಗಳಲ್ಲಿರತಕ್ಕ ಅಹಿದೈತ್ಯನ ಸಂಹಾರವು ಕೂಡಲಾರದು. ಅಹಿದೈತ್ಯನನ್ನು ಸಂಹರಿಸುವುದಕ್ಕಾಗಿ ಅತನ ಇದಿರು ಹೋಗದಿರುವವನಿಗೆ ನಾನಾ ನದೀ ತರಣ ರೂಪವಾದ ಕರ್ಮವು ಕೂಡಲಾರದು. ಅಹಿವಧಕ್ಕಾಗಿ ನಾನಾ ನದಿಗಳನ್ನು) ದಾಟಿದುದರಿಂದ ನೀನು ಹೊರತು ಇನ್ನೊಬ್ಬನು ಅಹಿ ದೈತ್ಯನ ಇದಿರು ಹೋಗುವವನು ಇಲ್ಲವೇ ಇಲ್ಲ ಎಂದು ತಿಳಿಯುತ್ತದೆ.) (೧೪) ಈಶ್ವರಪರವಾಗಿ (ಅಧ್ಯಾತ್ಮ ಪರವಾಗಿ) ವ್ಯಾಖ್ಯಾನ ಮಾಡುತ್ತಾರೆ) ಸರ್ವೇಶ್ವರನಾದ ಶ್ರೀಹರಿಯು" ದೇವತೆಗಳಿಗೆ" ಸಂಸಾರ ನದಿಗಳನ್ನು (ಸಂಸಾರ ಸಮುದ್ರವನ್ನು) ದಾಟುವ ಅಷ್ಟೇ ದೇವತೆಗಳನ್ನು ದಾಟಿಸಿದನು. ಎಂದು ತಾತ್ಪರ್ಯವು. ಶ್ರೀ ವಿಷ್ಣುವಿಗೆ ಸಂಸಾರವಿಲ್ಲದಿರುವುದರಿಂದ ಸಂಸಾರ ತರಣವು ಬಾಧಿತವಾದ ಪ್ರಯುಕ್ತ ಅತರಃ ಎನ್ನುವುದಕ್ಕೆ ದಾಟಿಸಿರುತ್ತಿ ಎಂದು ನಿಜರ್ಥದಲ್ಲಿ ತಾತ್ಪರ್ಯವು.) (ಈಶ್ವರ ಪಕ್ಷದಲ್ಲಿ ಸಂಸಾರ ನದಿಗಳು" ಹೇಗೆ ಆಗುವವು. ಸಂಸಾರವು ಒಂದೇ ಆಗಿಯದೆ. ಸಂಸಾರಿಗಳನ್ನು ವಿವಕ್ಷಾ ಮಾಡಿದರೆ ಸಂಸಾರಿಗಳು ಅನಂತರಾಗಿರುತ್ತಾರೆ. ಎಂದರೆ—ಪ್ರಧಾನ ಸಂಸಾರಿಗಳನ್ನು ವಿವಕ್ಷಾ ಮಾಡಿಕೊಂಡು" ಮಂದಿ ಎಂದದ್ದು.)(ಏವಂಚ ಎಲೋ ಶ್ರೀಹರಿಯೇ ಯಾವ ಕಾರಣದಿಂದ ನೀನು" ಸಂಸಾರ ನದಿಗಳನ್ನು ಅ" ದೇವತೆಗಳನ್ನೇ ದಾಟಿಸಿರುತ್ತಿಯೋ, ಆದ ಕಾರಣ ನೀನೇ ಸಂಶಯವನ್ನು ನಾಶಗೊಳಿಸುವವನು) (೧೫) (ದೃಷ್ಟಾಂತವನ್ನು ವ್ಯಾಖ್ಯಾನ ಮಾಡುತ್ತಾರೆ.) ಹೇಗೆ ಭೀತವಾದ ಗಿಡುಗ ಹಕ್ಕಿಯು ಆಕಾಶ ಪ್ರದೇಶಗಳನ್ನು ದಾಟುತ್ತದೋ, ಹಾಗೆಯೇ ಶ್ರೀ ಹರಿಯು ಈ ದೇವತೆಗಳಿಗೆ ಸ್ವತಂತ್ರಕರ್ತೃರೂಪವಾದ ಉಪಮಾನವನ್ನು ಮಾಡಿಕೊಂಡು ದೇವತೆಗಳನ್ನು ದಾಟಿಸಿದನು. (ಹಾಗಾದರೆ—ಸ್ವತಂತ್ರಕರ್ತೃಪ್ರೇರಕನು ಪ್ರಯೋಜಕ ಕರ್ತನಾದುದರಿಂದ ಅಂತಹ ಪ್ರಯೋಜಕ ಕರ್ತನಾದ ಈಶ್ವರನನ್ನು ದಾರ್ಷ್ಟಾಂತಿಕನನ್ನಾಗಿ ಹೇಳಿ ಸ್ವತಂತ್ರ ಕರ್ತೃ ಆದ ಶ್ಯೇನವು ಹೇಗೆ ದೃಷ್ಟಾಂತೀಕರಿಸಲ್ಪಡುತ್ತದೆ? ಎಂದರೆ ದೇವತೆಗಳು ಸಂಸಾರ ಸಮುದ್ರವನ್ನು ದಾಟುತ್ತಾರೆ. ಆದ ಕಾರಣ ಹೇಗೆ ದೇವತೆಗಳಿಗೆ ತರಣಕ್ರಿಯಾ ಕರ್ತೃತ್ವದಲ್ಲಿ ಉಪಮೇಯತ್ವವು ಉಂಟಾಗುವುದೋ, ಹಾಗೆಯೇ ಸ್ವತಂತ್ರಕರ್ತೃರೂಪವಾದ ಶ್ಯೇನವನ್ನು ದೃಷ್ಟಾಂತವನ್ನಾಗಿ ಮಾಡಿ ಶ್ರೀವಿಷ್ಣುವು ದೇವತೆಗಳನ್ನು ಸಂಸಾರದಿಂದ ದಾಟಿಸಿದನು, ಎಂದು ಹೇಳಿದ್ದು. ಶ್ರೀವಿಷ್ಣುವಿಗೆ ಶ್ಯೇನವು

ದೃಷ್ಟಾಂತವೆಂದು ಹೇಳಿದ್ದಲ್ಲ. ಇದನ್ನೇ ತೋರಿಸುತ್ತಾರೆ. ಹೇಗೆ ಭಯಗ್ರಸ್ತವಾದ ಶ್ಯೇನವು ಆಕಾಶ ಪ್ರದೇಶಗಳನ್ನು ದಾಟುತ್ತದೋ, ಹಾಗೆಯೇ ಸಂಸಾರವನ್ನು ದಾಟತಕ್ಕ ದೇವತೆಗಳನ್ನು ದಾಟಸಿದನು. ಹೀಗೆ ವ್ಯಾಖ್ಯಾನ ಮಾಡಿದುದರಿಂದ ದೋಷವಿಲ್ಲ.) (೧೬) (ಹಾಗಾದರೆ ಶ್ರುತಿಯಲ್ಲಿ ಅತರಃ=ದಾಟಿದಿ, ಎಂದೇ ಇದೆ. ಅತಾರಯಃ=ದಾಟಸಿದಿ ಎಂದಿಲ್ಲ. ಆದ ಕಾರಣ ದಾಟಸಿದಿ ಎಂಬ ವ್ಯಾಖ್ಯಾನವು ಹೇಗೆ ಕೂಡುತ್ತದೆ? ಎಂದರೆ) ಸ್ವಾತಂತ್ರ್ಯ, ಭೇದಕರಣ ಎಂಬೀ ೨ ಅರ್ಥಗಳಲ್ಲಿ ವ್ಯತ್ಯಾಸವು (ಣಿಜಭಾವವು) ಉಕ್ತವಾಗಿದೆ. ಆದ ಕಾರಣ ಆ ಈ ವ್ಯಾಖ್ಯಾನವು ನಿರ್ದುಷ್ಟವಾದುದು. (ಅಂದರೆ ಶ್ರೀವಿಷ್ಣುವಿಗೆ ಪ್ರಯೋಜಕ ಕರ್ತೃತ್ವವಿದ್ದರೂ ಅದನ್ನು ತೋರಿಸುವ ಣಿಜ್ ವ್ಯತ್ಯಾಸವು (ಣಿಜಭಾವವು) ಶ್ರೀವಿಷ್ಣುವಿಗೆ ಸರ್ವ ಸ್ವಾತಂತ್ರ್ಯವನ್ನು ತೋರಿಸುವುದಕ್ಕಾಗಿ ಮಾಡಿದ್ದಾಗಿರುತ್ತದೆ.) (೧೭) (ಆ ೯೯ದೇವತೆಗಳು ಯಾರು ಎಂದರೆ) (೮) ಅಷ್ಟವಸುಗಳು. (೧೧) ವಿಷ್ಣು ವ್ಯತಿರಿಕ್ತರಾದ ಏಕಾದಶ ಆದಿತ್ಯರು (೫೦) ಪ್ರಧಾನ ವಾಯುವಿನಿಂದ ಕೂಡಿ ಪಂಚಾಶತ್ ಮರುತಗಳು. (೨) ಅಶ್ವಿನೀ ದೇವತೆಗಳು (೧) ಬೃಹಸ್ಪತಿಯು (೧) ಶೇಷನು (೧) ಗರುಡನು. (೧) ಅನಿರುದ್ಧನು. (೧) ಚತುರ್ಮುಖ ಬ್ರಹ್ಮನು (೯) ನವ ಪ್ರಜಾಪತಿಗಳು (೩) ಋಭುಗಳು. (೧೧) ಏಕಾದಶ ರುದ್ರರು ಹೀಗೆ ಒಂದು ಕಡಿಮೆ ನೂರು ಅಂದರೆ ೯೯ ದೇವತೆಗಳು ದೇವತಾ ಸಂಹಿತಾ ಎಂಬ ಗ್ರಂಥ ವಿಶೇಷದಲ್ಲಿ ಹೇಳಲ್ಪಟ್ಟಿರುತ್ತಾರೆ. ॥ ೧೪ ॥

ಋ ॥ (೩೮೩)ಇಂದ್ರೋ ಯಾತೋಽವಸಿತಸ್ಯ ರಾಜಾ ಶಮಸ್ಯ ಚ ಶೃಂಗಿಣೋ ವಜ್ರಬಾಹುಃ। ಸೇದುರಾಜಾ ಕ್ಷಯತಿ ಚರ್ಷಣೀನಾಮರಾನ್ನನೇಮಿಃ ಪರಿ ತಾ ಬಭೂವ ॥ ೧೫ ॥ ೩೮ ॥ ೨ ॥ ೩೨ ॥

ಅ ॥ ಸಃ=ಗುಣಪೂರ್ಣನೆಂದು ಪ್ರಸಿದ್ಧನಾದ, ಇಂದ್ರಃ=ಪರಮೈಶ್ವರ್ಯಸಂಪನ್ನನಾದ ಶ್ರೀಹರಿಯು, ಯಾತಃ=ಭಕ್ತರಿಂದ ಭಗವಂತನ ಅನುಗ್ರಹದಿಂದ ತಿಳಿಯಲ್ಪಡುತ್ತಾನೆ- ಅವಸಿತಸ್ಯ=ಪರ್ಯವಸಾನವನ್ನು ಹೊಂದಿರುವ ಅಂದರೆ ಸಂಸಾರಪಾರವನ್ನು ಹೊಂದಿರುವ ಮುಕ್ತನಿಗೆ, ರಾಜಾ=ಸ್ವಾಮಿಯು. (ಮುಕ್ತಿಯನ್ನು ಹೊಂದಿದವರಿಗೆ ಮಾತ್ರ ಸ್ವಾಮಿಯು ಎಂದಲ್ಲ. ಮತ್ತೆ) ಶಮಸ್ಯ ಚ=ಮುಕ್ತಿಗೂ (ಸ್ವಾಮಿಯು) ವಜ್ರಬಾಹುಃ=ಜ್ಞಾನಾತ್ಮಕವಾದ ಬಾಹ್ವಾದಿಗಳುಳ್ಳವನು. ಸ ಇತ್=ಆ ಶ್ರೀಹರಿಯೇ, ನಿತ್ಯಂ ಉ=ನಿತ್ಯದಲ್ಲಿಯೂ ಶೃಂಗಿಣಃ=ಜ್ಞಾನಿಗಳ ಸಮುದಾಯಕ್ಕೂ, ರಾಜಾ=ಸ್ವಾಮಿಯು. ಚರ್ಷಣೀನಾಂ=ಮುಕ್ತರಲ್ಲದ ಪ್ರಜೆಗಳಿಗೂ, ಕ್ಷಯತಿ=ಸ್ವಾಮಿಯಾಗಿರುತ್ತಾನೆ. (ದೃಷ್ಟಾಂತ ಹೇಳುತ್ತಾರೆ) ನೇಮಿಃ=ಚಕ್ರವು, ಅರಾನ್=ಅಚ್ಚಿಮರಗಳನ್ನೆಂಬಂತೆ, ಸ ಚ=ಆ ಶ್ರೀಹರಿಯೇ ತಾ=ಸಮಸ್ತ ಪ್ರಾಣಿಗಳನ್ನು, ಪರಿ ಬಭೂವ=ವಶೀಕರಿಸಿದನು. (ಪ್ರಸಿದ್ಧ ಇಂದ್ರನಲ್ಲಿ ಆದರೂ) ಯಾತಃ=(ಯಾಪ್ರಾಪಣೇ) ಜಂಗಮ ವಸ್ತುಗಳಿಗೂ ಅವಸಿತಸ್ಯ (ಅವಸ್ಥಿತಸ್ಯ)=ಸ್ಥಾವರ ವಸ್ತುಗಳಿಗೂ, ಶಮಸ್ಯ=ಶಾಂತಿಗೂ, ಶೃಂಗಿಣಃ=ಪ್ರಕಾಶವುಳ್ಳ ನಕ್ಷತ್ರಾದಿಗಳಿಗೂ, ಇಂದ್ರಃ=ಇಂದ್ರನು, ರಾಜಾ=ಸ್ವಾಮಿಯು. ವಜ್ರಬಾಹುಃ=ವಜ್ರದಂತೆ ದೃಢಗಳಾದ ಬಾಹುಗಳುಳ್ಳವನು. ಅಥವಾ (ವಜ್ರಂ ಬಾಹೌ ಹಸ್ತೇ ಯಸ್ಯ ಸಃ ಎಂಬವ್ಯುತ್ಪತ್ತಿಯಿಂದ) ವಜ್ರವು ಕೈಯಲ್ಲಿ ಉಳ್ಳವನು. (ಇತರವೆಲ್ಲವೂ ಸ್ಪಷ್ಟವು) ॥ ೧೫ ॥

ಭಾ ॥ (೧)ಸ ಏವೇಂದ್ರೋ ಭಗವಾಂಸ್ತತ್ರ ಸಾದಾತ್ಪ್ರಾಪ್ತೋ ಭಕ್ತೈಃ ಪರ್ಯವಸಾನಗಂತುಃ ಮುಕ್ತಸ್ಯ ರಾಜಾಽಪಿ ಶಮಸ್ಯ ಮುಕ್ತೇರ್ಜ್ಞಾನಂ ಶೃಂಗಂ ತದ್ವತಶ್ಚೈ(ವಶ್ಚಾಪಿ) ನಿತ್ಯಂ।

(೨) ಸ ಏವ ರಾಜಾ ಕ್ಷಯತಿ ಪ್ರಜಾನಾಂ ಭೂತಾಸ್ಯರಾಣೀವ ಚ ಪರ್ಯ ಭೂತ್ಸಃ ॥ ೧೫ ॥ ೩೮ ॥ ೧೩ ॥

ಅ ॥ ೧) (ಸ ಏವ ಎಂಬಲ್ಲಿದ್ದ ಏವ ಶಬ್ದದಿಂದ ಈ ಋಕ್ಕಿಗೆ ಈಶ್ವರ ವಿಷಯಕತ್ವವನ್ನು ಇತರರಿಗೆ ತಿಳಿಯಲು ಅಶಕ್ಯವಾದುದರಿಂದ ಭಾಷ್ಯಕಾರರು ಅಷ್ಟು ಮಾತ್ರ ಹೇಳುತ್ತಾರೆ. ಇಂದ್ರಪರತ್ವವು ಸ್ಪಷ್ಟವಾಗಿರುವುದರಿಂದ ಇತರರಿಗೇನೇ ತಿಳಿಯಲು ಶಕ್ಯವಾಗಿದೆ. ಆದ ಕಾರಣ ಅದನ್ನು ಹೇಳಲಿಲ್ಲ) ಹಿಂದೆ ಹೇಳಿದ ಗುಣಗಳುಳ್ಳವನೆಂದು ಪ್ರಸಿದ್ಧನಾದ ಇಂದ್ರ ಶಬ್ದವಾಚ್ಯನಾದ ಭಗವಂತನು.ಆತನ ಅನುಗ್ರಹದಿಂವ ಭಕ್ತರಿಂದ ಹೊಂದಲ್ಪಡುತ್ತಾನೆ. ಅಭಕ್ತರಿಂದಸರ್ವಥಾ ತಿಳಿಯಲ್ಪಡುವುದಿಲ್ಲ. (ಭಕ್ತರಿಂದಲಾದರೂ ಭಗವಂತನ ಪ್ರಸಾದವಿಲ್ಲದೆ ತಿಳಿಯಲ್ಪಡುವುದಿಲ್ಲ.)(ಪರರು ಹೇಳುವ ಪ್ರಕಾರ ಸರ್ವಥಾ ತಿಳಿಯಲ್ಪಡದಿರುವವನಲ್ಲ.) (ಅವಸಿತಸ್ಯ = ಅವ ಪೂರ್ವಕಾತ್ ಷೋ ಅಂತಕರ್ಮಣಿ) ಪರ್ಯವಸಾನವನ್ನು ಹೊಂದಿರುವ ಅಂದರೆ ಸಂಸಾರವನ್ನು ದಾಟಿರುವ ಮುಕ್ತನಿಗೆ ಸ್ವಾಮಿಯು. ಶಮಸ್ಯ= ಶಂ ಸುಖವು, ಮುಖ್ಯವಾದ ಸ್ವರೂಪ ಸುಖವನ್ನು, ಮನುತೇ (ಮನು ಅವಬೋಧನೇ, ಯತ್ರ ಸಃ ಶಮಃ॥ ಮೋಕ್ಷವು.) (ಮುಕ್ತರಿಗೆ ಮಾತ್ರ ಅಧಿಪತಿಯಲ್ಲ.) ಮುಕ್ತಿಗೂ ಸ್ವಾಮಿಯು.॥ (೨) (ಶೃಂಗಂ= ಜ್ಞಾನವು.) ಜ್ಞಾನಿಗಳ ಸಮುದಾಯಕ್ಕೆ, ನಿತ್ಯದಲ್ಲಿಯೂ. ಆ ಶ್ರೀಹರಿಯೇ ಸ್ವಾಮಿಯು ಮುಕ್ತರಲ್ಲದ ಪ್ರಜೆಗಳಿಗೂ ಸ್ವಾಮಿಯಾಗಿರುತ್ತಾನೆ. ಚಕ್ರವು ಅಚ್ಚು ಮರಗಳನ್ನೆಂಬಂತೆ ಆ ಶ್ರೀಹರಿಯೇಸಮಸ್ತ ಪ್ರಾಣಿಗಳನ್ನು ವಶೀಕರಿಸಿದನು. ॥ ೧೫ ॥ ೩೮ ॥ ೧೩ ॥

ಇತಿ ಶ್ರೀ ಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದೃಗ್ಭಾಷ್ಯೇ ದ್ವಿತೀಯೋಽಧ್ಯಾಯಃ॥

ಶ್ರೀಮತ್ ಆನಂದತೀರ್ಥ ಭಗವತ್ಪಾದಾಚಾರ್ಯರು ವಿರಚಿಸಿರುವ ಋಗ್ಭಾಷ್ಯದಲ್ಲಿ
೨ನೇ ಅಧ್ಯಾಯವು ಸಮಾಪ್ತವಾಯಿತು.

ಭಾರತ್ಯಾಸ್ತತ್ಪದೇವಾನಾಂ ಕೃಪಯಾ ನ ಸ್ವಶಕ್ತಿತಃ ।
ಗುಣಾಃ ಯೇಽತ್ರ ದೃಶ್ಯಂತೇ ತೇ ಸರ್ವೇ ತತ್ಪ್ರಸಾದಜಾಃ ॥

ಯದಿ ಸಂತಿ ಕ್ವಚಿದ್ದೋಷಾಃ ತೇ ನೋ ಮಂದಮತಿತ್ವತಃ।
ತದವದ್ಯಂ ದಯಾಶೀಲೈಃ ಕ್ಷಂತವ್ಯಂ ಸ್ವಜನಪ್ರಿಯೈಃ॥

ನಮೋಽಸ್ತು ವಾಸುದೇವಾಯ ವ್ಯಾಸದೇವಾಯ ಧೀಮತೇ ।
ಆಸುದೇವಾಯ ದೇವೇಭ್ಯೋ ಗುರುಭ್ಯಶ್ಚ ನಮೋ ನಮಃ ॥

ತಂತ್ರಿನಾರಾಯಣೇನಾಸ್ಯ ವ್ಯಾಖ್ಯಾ ಕಾರ್ನಾಟಕೇ ಕೃತಾ ।
ಭೂಯಾತ್ ಕುಸುಮಮಾಲೇವ ಪ್ರೀತ್ಯೈ ಮಾಧವಮಧ್ವಯೋಃ ॥

॥ ಶ್ರೀ ॥

॥ ಶ್ರೀಃ ॥

ಮೂರನೇ ಅಧ್ಯಾಯವು

ಶ್ರೀಬ್ರಹ್ಮವಾಯುರುದ್ರೇಂದ್ರಾಃ ಪ್ರಾಪ್ನುವಂತಿ ಯದಾಶ್ರಯಾತ್ ।
ಮಹಾಫಲಮಹಂ ವಂದೇ ತದ್ವಿಷ್ಣೋಃ ಪರಮಂ ಪದಂ ॥
ನಮೋಽಸ್ತು ಹರಯೇ ಯುಕ್ತಿಗಿರಯೇ ನಿರ್ಜಿತಾರಯೇ ।
ನಮಸ್ತೇ ಗುರುವೇ ಕಲ್ಪತರವೇ ಪರವೇದಿನಾಂ ॥
ನಮಾಮಿ ಜ್ಞಾನಸಿದ್ಧ್ಯರ್ಥಂ ಪೂರ್ಣಪ್ರಜ್ಞಂ ಜಗದ್ಗುರುಂ ।
ಜಯತೀರ್ಥಮುನಿಂ ಸರ್ವಶಾಸ್ತ್ರಜ್ಞಂ ವರದಂ ಗುರುಂ ॥
ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣ
ವೇದವ್ಯಾಸಾತ್ಮಕ ಲಕ್ಷ್ಮೀಹಯಗ್ರೀವಾಯ ನಮಃ ॥

ಅ ವ ॥ ಏತಾಯಾಮ ಎನ್ನುವ ಸೂಕ್ತಕ್ಕೆ ೧೫ ಋಕ್ಕುಗಳು. ೩ ವರ್ಗಗಳು. ಇಂದ್ರನು ದೇವತೆಯು. ತ್ರಿಷ್ಟುಪ್ ಛಂದಸ್ಸು. ೩೩ನೇ ಸೂಕ್ತವು.

ಋ ॥ (೩೮೪) ಏತಾಯಾಮೋಪ ಗವ್ಯಂತ ಇಂದ್ರಮಸ್ಮಾಕಂ ಸುಪ್ರ
ಮತಿಂ ವಾವೃಧಾತಿ । ಅನಾಮೃಣಃ ಕುವಿದಾದಸ್ಯ ರಾಯೋ ಗವಾಂ
ಕೇತಂ ಪರಮಾವರ್ಜತೇ ನಃ ॥ ೧ ॥

ಅ ॥ (ಸಖಾಯಃ ದೇವಾಶ್ಚ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು.) (ಯೇ=ಯಾರು, ಅಸ್ಮಾಕಂ= ನಮಗೆ, ಸಖಾಯಃ=ಸಖಿಗಳಾದ, ದೇವಾಃ=ದೇವತೆಗಳೇ ಮೊದಲಾದ ಸಮಸ್ತ ಸಜ್ಜನರು, ಅಥವಾ ಸಖಿಗಳೂ, ದೇವತೆಗಳೂ ಕೂಡ ಇರುತ್ತಾರೋ. ಅಂತಹ ನೀವು) ಆ ಇತ=ಅತಿ ಶೀಘ್ರವಾಗಿ ಬನ್ನಿರಿ. (ಅಂದರೆ—ಎಲೋ ದೇವತೆಗಳಿರಾ ಬಂದು ನಮ್ಮ ಇಂದ್ರಿಯಾದಿಗಳನ್ನು ಪ್ರೇರೇಪಿಸಿರಿ. ಇತರರಾದ ಸಖಿಗಳಿರಾ ನೀವು ನಮಗೆ ಸಹಾಯಕರಾಗಿರಿ.) (ಏಕೆಂದರೆ.) (ನಾವು) ಗವ್ಯಂತಃ=ಗೋವುಗಳಂತೆ ಆಚರಿಸುವವರಾಗಿ (ಅಂದರೆ ಗೋವುಗಳೇ ಮೊದಲಾದ ಪಶುಗಳು ಪ್ರಭುವಿನ ಅಧೀನರಾಗಿಯೇ ಹೇಗೆ ಇರುತ್ತವೋ ಹಾಗೆಯೇ ಇಂದ್ರನ ಅಧೀನದಲ್ಲಿಯೇ ಇರುವ ನಾವು) (ಅಥವಾ ನಾವು) ಗವ್ಯಂತಃ=ಗೋವುಗಳನ್ನು ಇಚ್ಛಿಸುವವರಾಗಿ, ಇಂದ್ರಂ=ಶ್ರೀಹರಿಯನ್ನು ಇಂದ್ರನನ್ನು ಉಪಾಯಾಮ=ಶರಣು ಹೊಂದುವೆವು. (ಯಾ ಪ್ರಾಪಣೇ ಭವಿಷ್ಯದರ್ಥದಲ್ಲಿ ಲಙ್.) (ಅಥವಾ ಅಯ ಗತೌ.) ಅಥವಾ ಇಣ್ ಗತೌ. ಲೋಟ್ ಉತ್ತಮ ಪುರುಷ.) (ಶರಣು ಹೊಂದಲು ಪ್ರಯೋಜನವೇನು? ಎಂದರೆ.) (ಆ ಶ್ರೀಹರಿಯು ನಮಗೆ,) ಪ್ರಮತಿಂ = ಬಹ್ವರ್ಥವಿಷಯಕವಾದ ಪ್ರಕೃಷ್ಟ ಜ್ಞಾನವನ್ನು, ಸು=ಚೆನ್ನಾಗಿ ಅಥವಾ ಯಥಾರ್ಥವಾಗಿ, ವಾವೃಧಾತಿ = (ವೃಧುವರ್ಧನೇ. ಯಙ್ಲುಗಂತ.) ಅಭಿವೃದ್ಧೀಕರಿಸುತ್ತಾನೆ. (ಯಾವುದರಿಂದ ಜ್ಞಾನವನ್ನು ಅಭಿವೃದ್ಧೀಕರಿಸುತ್ತಾನೆ ಎಂದರೆ)

(ಯಾವ ಕಾರಣದಿಂದ ಆ ಶ್ರೀಹರಿಯು) ಕುವಿತ್=ಎಲ್ಲಿಯೂ, ಅನಾಮೃಣಃ = (ಆಙ್ ಪೂರ್ವಕಾತ್ ಋಣ ಹಿಂಸಾಯಾಂ) ಅಭೇದ್ಯನೋ (ಅಂದರೆ ಎಲ್ಲಿಯೂ ಸರ್ವಥಾ ಭೇದ್ಯನಾಗುವುದೇ ಇಲ್ಲವೋ) (ಯಾವ ಕಾರಣದಿಂದ) ಗವಾಂ = ವೇದ ವಾಕ್ಯಗಳ ಸಂಬಂಧಿಯಾದ (ಅಂದರೆ ವೇದವಾಕ್ಯಗಳಿಂದ ಹುಟ್ಟಿದ ಪರಂ=ಯಥಾರ್ಥವಾದಿಯು ಹೇಳಿದ ಪ್ರಕಾರ ಅತ್ಯುತ್ತಮವಾದ, ಕೇತಂ= (ಕೇತುಃ ಕೇತಃ ಚಿತಿಶ್ಚಿತ್ತಂ ಮತಿಃ ಕ್ರತುಃ ಎಂಬ ಕೋಶದಿಂದ) ಭಕ್ತರಲ್ಲಿರತಕ್ಕ ಜ್ಞಾನವು, (ಅಂದರೆ ಇಂದ್ರನದ್ದೇ ವೇದಗಳಿಂದುಂಟಾಗ ತಕ್ಕ ಉತ್ತಮ ಜ್ಞಾನಗಳು) ಆಗುತ್ತವೋ, ಅಸ್ಯ = ಈ ಇಂದ್ರನದ್ದೇ, ರಾಯಃ = ದ್ರವ್ಯಗಳು (ಆಗ ತ್ತವೋ,) ಆತ್ = ಆ ಕಾರಣದಿಂದ, (ಈ ಇಂದ್ರನು) ನಃ = ನಮಗೋಸ್ಕರ, ಆ ವರ್ಜತೇ = (ವೃಜೀ ವರ್ಜನೇ.) ಕೊಡುತ್ತಾನೆ. (ಅಂದರೆ-ಶ್ರೀಹರಿಯು ಇಂದ್ರನೂ ಕೂಡ ಜ್ಞಾನಗಳಿಗೂ ದ್ರವ್ಯಗಳಿಗೂ ಅಧಿಪತಿ ಯಾಗಿರುತ್ತಾನೆ. ಪ್ರತಿಬಂಧಕವೇನೂ ಇಲ್ಲ. ಸ್ವೀಕರಿಸುವವರು ಅಧಿಕಾರಿಗಳಾಗಿರುತ್ತಾರೆ. ಇಂದ್ರನೇ ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸುವವರೂ ಆಗಿರುತ್ತಾರೆ. ಆದಕಾರಣ ದಾನವು ಅತ್ಯಾವಶ್ಯಕವಾದ ಪ್ರಯುಕ್ತ ಪ್ರಾರ್ಥಿ ಸಿದುದನ್ನು ನಿಶ್ಚಯವಾಗಿಯೂ ಕೊಡುವನು. ॥ ೧ ॥

ಭಾ ॥ (1) ಯೇ ಸಖಾಯಸ್ತ್ವರಿತಾ ಏತದೇವಾ (2) ಉಪಾಯಾಮ ಪಶುವತ್ತದ್ವಶಸ್ಥಾಃ । ಗವ್ಯಂತ ಉಕ್ತಾ (3) ಅತಿನಿಶ್ಚಿತೇಽರ್ಥೇ ಭೂತಶಬ್ದಶ್ಚೇತ್ಯಾಹ ಸೂತ್ರಂ ಪರೇಶಃ। (4) ಪ್ರಕೃಷ್ಟಜ್ಞಾನಂ ವರ್ಧಯತ್ಯೇವ ಸುಷ್ಠು (5) ಸ ನೋಽಭೇದ್ಯೋಽ ನಾಮೃಣಃ ಕ್ವಾಪಿ (6) ತಸ್ಯ ॥ ವಿತ್ತಾನಿ ತಸ್ಮಾದ್ವೇದ ವಾಕ್ಯೋತ್ಥಮೇವ ಕೇತಂ ಜ್ಞಾನಂ ಪರಮಾವರ್ಜತೇ ನಃ । ದದಾತಿ ॥ ೧ ॥

ಅ ॥ (1) ಯಾರು ಸಖಿಗಳಾದ ದೇವಾದಿಗಳು ಇರುತ್ತಾರೋ, ಅಂತಹ ನೀವು ಶೀಘ್ರವಾಗಿ ಬನ್ನಿರಿ. (2) ಗವಾದಿ ಪಶುಗಳು ಸ್ವಾಮಿಯ ಅಧೀನದಲ್ಲಿರುವಂತೆ ನಾವು ಇಂದ್ರನ ಅಧೀನದಲ್ಲಿರುವವರಾಗಿ ಗೋವುಗಳನ್ನು ಇಚ್ಛಿಸುತ್ತಾ (ಇಂದ್ರನನ್ನು ಶರಣು) ಹೊಂದುತ್ತೇವೆ. (ಗವ್ಯಂತಃ ಎನ್ನುವುದಕ್ಕೆ ಸುಪಃ ಆತ್ಮನಃ ಕ್ಯಚ್ ಎನ್ನುವ ಸೂತ್ರದಿಂದ ಇಚ್ಛಾ ಎಂಬ ಅರ್ಥದಲ್ಲಿ ಕ್ಯಚ್ ಪ್ರತ್ಯಯ ಮಾಡಿದರೆ ಗೋವುಗಳನ್ನು ಇಚ್ಛಿಸುವವರು ಎಂಬ ಅರ್ಥವಾಗುವುದು ಎಂದರೆ—ಅಹುದು. ಆದರೆ ಗೋವುಗಳನ್ನು ಇಚ್ಛಿಸುವವರು ಎಂಬ ಅರ್ಥವನ್ನು ಬಿಡದೇನೇ ಇಂದ್ರನ ಅಧೀನದಲ್ಲಿಯೇ ಇರುವವರು ಎಂಬ ಅಧಿಕವಾದ ಅತಿಶಯಿತವಾದ ಅರ್ಥವನ್ನು ತೋರಿಸುವುದಕ್ಕಾಗಿ ಪಶುವತ್ ತದ್ವಶಸ್ಥಾಃ ಇತ್ಯಾದಿ ಭಾಷ್ಯವು ಪ್ರವೃತ್ತವಾಗಿದೆ.) (3) (ಹಾಗಾದರೆ-ಅಯಾಮ ಎಂಬ ಶಬ್ದವು ಎಂತಹುದು. ಪ್ರಕೃತಿಯು ಯಾವುದು? ಪ್ರತ್ಯಯವು ಯಾವುದು? ಎಂದರೆ ಯಾ ಪ್ರಾಪಣೇ ಎನ್ನುವ ಧಾತುವಿನ ಲಙ್‌ನಲ್ಲಿ ರೂಪವು. ಲಙ್ ಭೂತಾರ್ಥದಲ್ಲಿ ಇರುವುದು. ಆದರೆ ಈ ಋಕ್ಕಿನಲ್ಲಿ ವಾವೃಧಾತಿ=ಅಭಿವೃದ್ಧಿ ಕರಿಸುತ್ತಾನೆ. ಎಂದು ಭವಿಷ್ಯದರ್ಥವು ಆವಶ್ಯಕವಾದ ಪ್ರಯುಕ್ತ ಅತೀತ (ದಾಟಿದ್ದು) ಎನ್ನುವ ಅರ್ಥವು ಕೂಡಲಾರದು. ಎಂದರೆ) ಅತಿನಿಶ್ಚಿತವಾದ, ಅತೀತಕಾಲವಲ್ಲದಿದ್ದ, ವರ್ತಮಾನಕಾಲಿಕ, ಭವಿಷ್ಯತ್ಕಾಲಿಕ, ಧಾತ್ವರ್ಥದಲ್ಲಿ ಅತೀತ ಎನ್ನುವ ಅರ್ಥವನ್ನು ಹೇಳುವ ಶಬ್ದವನ್ನು ಪ್ರಯೋಗಿಸಬೇಕು- ಎಂಬ ಅರ್ಥವನ್ನು ಪ್ರತಿಪಾದಿಸುವ ಸೂತ್ರವನ್ನು ಶ್ರೀಹರಿಯು ಹೇಳಿರುತ್ತಾನೆ.(ಹಾಗೆಯೇ (1) ಪಾಣಿನಿಯೂ ಆಶಂಸಾಯಾಂ ಭೂತವಚ್ಚ ಎಂಬ ಸೂತ್ರದಲ್ಲಿ ಭವಿಷ್ಯದರ್ಥಕವಾದ ಧಾತುವಿನ ದೆಸೆಯಿಂದ ಭೂತ, ವರ್ತಮಾನ, ಕಾಲಗಳಂತೆ ಪ್ರತ್ಯಯಗಳಾಗುತ್ತವೆ. ಎಂದು ಪ್ರತಿಪಾದಿಸಿರುವನು. (2) ಮತ್ತು ಭವಿಷ್ಯತ್ತು ನಿಶ್ಚಿತಂ ಚೇತ್ತದತೀತತ್ವೇನ ಭಣ್ಯತೇ. ಎಂಬ ಪ್ರಮಾ ಣದಲ್ಲಿ ಭವಿಷ್ಯತ್ಕಾಲಿಕವೆಂದು ನಿಶ್ಚಿತವಾದುದು ಯಾವುದಿದೆಯೋ ಅದು ಅತೀತಕಾಲಿಕವೆಂದು ಹೇಳಲ್ಪಡು ತ್ತದೆ. ಆದ ಕಾರಣ ಭವಿಷ್ಯತ್ಕಾಲಿಕ ಅರ್ಥವನ್ನು ಇಟ್ಟುಕೊಳ್ಳಬೇಕು. (3) ಅಥವಾ ಅಯ ಪಯ ಗತೌ ಎಂಬ ಧಾತುವಿನಿಂದ ಲೋಟಿಗೆ ಮಸ್ ಆದೇಶವು. ಸಕಾರಕ್ಕೆ ಲೋಪವು. ಅಯಾಮ ಎಂಬ ರೂಪವು ಸಿದ್ಧಿ ಯಾಗುತ್ತದೆ. ಲೋಟ್ ಕಾಲ ಸಾಮಾನ್ಯದಲ್ಲಿ ವಿಹಿತವಾದ ಪ್ರಯುಕ್ತ ಭವಿಷ್ಯತ್ಕಾಲಿಕ ಅರ್ಥವು ಕೂಡು

ತ್ತದೆ. (4) ಅಥವಾ ಯಾ ಪ್ರಾಪಣೇ ಎಂಬ ಧಾತುವಿನಿಂದ ಛಂದಸಿ ಲುಙ್ ಲಙ್ ಲಿಟಃ ಎಂಬ ಸೂತ್ರದಿಂದ ಕಾಲಸಾಮಾನ್ಯದಲ್ಲಿ ವಿಹಿತವಾದ ಲಙ್ ಎಂದಂಗೀಕರಿಸಿದರೂ ಯಾವ ದೋಷವೂ ಇಲ್ಲ. (5) (ಶರಣು ಹೊಂದಿದರೆ ಏನು ಪ್ರಯೋಜನವೆಂದರೆ) ಆ ಶ್ರೀಹರಿಯು ಬಹ್ವರ್ಥ ವಿಷಯಕವಾದ ಉತ್ಕೃಷ್ಟ ಜ್ಞಾನವನ್ನು ಚೆನ್ನಾಗಿ ನಿಶ್ಚಯವಾಗಿಯೂ ಅಭಿವೃದ್ಧೀಕರಿಸುತ್ತಾನೆ. (ವಾವೃಧಾತಿ ಎನ್ನುವುದು ಯಙ್‌ಲುಗಂತಪ್ರಯೋಗವು ಕ್ರಿಯಾಸಮಭಿಹಾರದಲ್ಲಿ ಯಙ್ ವಿಹಿತವಾಗಿದೆ. ಪೌನಃ ಪುನ್ಯಭೃಶ ಅರ್ಥರೂಪವಾದ ಕ್ರಿಯಾಸಮಭಿಹಾರ ಎಂಬ ಅರ್ಥವನ್ನು ತೆಗದು ಕೊಳ್ಳಬೇಕೆಂಬ ಅಭಿಪ್ರಾಯದಿಂದ ಏವ ಎಂದದ್ದು. ಏವ ಶಬ್ದದ ಅರ್ಥಭೂತವಾದ ಅವಧಾರಣವೇ ಭೃಶಾರ್ಥಕವು.) (5) ಆ ಶ್ರೀಹರಿಯು ಎಲ್ಲಿಯೂ ಅನಾಮೃಣಃ=ಅಭೇದ್ಯನು ಆಗುವುದೇ ಇಲ್ಲ. (6) ಯಾವ ಕಾರಣದಿಂದ ಆ ಇಂದ್ರನದ್ದೇ ದ್ರವ್ಯಗಳೋ, ವೇದವಾಕ್ಯಗಳಿಂದ ಹುಟ್ಟಿದ ಉತ್ತಮವಾದ ಕೇತಂ=ಭಕ್ತರಲ್ಲಿರತಕ್ಕ ಜ್ಞಾನವು. (ಸಮುದಾಯವನ್ನು ವಿವಕ್ಷಾಮಾಡಿಕೊಂಡು ಏಕವಚನವು. ಬಹುವಚನಾರ್ಥಕವು. ಏವಂಚ) ವೇದದಿಂದ ಉಂಟಾಗತಕ್ಕ ಉತ್ತಮ ಜ್ಞಾನಗಳೋ,) ಆ ಕಾರಣದಿಂದ ಆ ಶ್ರೀಹರಿಯು ನಮಗೆ ಆ ವಿತ್ತಾದಿಗಳನ್ನು ಆ ವರ್ಜತೇ=ಕೊಡುತ್ತಾನೆ. (ಯದ್ಯಪಿ ಶ್ರೀವಿಷ್ಣುವು ಸರ್ವಕ್ಕು ಸ್ವಾಮಿಯಾಗಿರುವುದರಿಂದ ಎಲ್ಲಿಯೂ ಆತನಿಗೆ ಸ್ವತ್ವ ತ್ಯಾಗವು ಇಲ್ಲ. ಆದಾಗ್ಯೂ ಪರಸ್ವತ್ವವನ್ನಾಗಿ ಮಾಡಿ ರಾಜಾದಿಗಳು ದಾನ ಕೊಡುವಂತೆ ಇಲ್ಲಿಯೂ ಸ್ವಸ್ವತ್ಯಾಗವು ತೋರುವುದರಿಂದ ಆ ವ್ಯವಹಾರವು ಅಮುಖ್ಯವೆಂದಂಗೀಕರಿಸಬೇಕು.) (ಈ ಋಕ್ಕಿನಲ್ಲಿ ಹೇಳಿದ ಮಾಹಾತ್ಮ್ಯೆಯು ದಾನಕ್ಕೆ ಉಪಯುಕ್ತವಾಗಿದೆ. ಹೇಗೆಂದರೆ ಶ್ರೀಹರಿಯು ಜ್ಞಾನ ದ್ರವ್ಯಗಳಿಗೆ ಪ್ರಭುವಾಗಿರುತ್ತಾನೆ. ಪ್ರತಿಬಂಧಕ ಇಲ್ಲ. ಸ್ವೀಕರಿಸುವವರು ಅಧಿಕಾರಿಗಳೂ ಆಗಿರುತ್ತಾರೆ. ಆದ ಕಾರಣವು ದಾನವು ಆವಶ್ಯಕವಾಗಿದೆ)॥ ೧ ॥

ಋ ॥ (೩೮೫) ಉಪೇದಹಂ ಧನದಾಮಪ್ರತೀತಂ ಜುಷ್ಟಾಂ ನ ಶ್ಯೇನೋ
ವಸತಿಂ ಪತಾಮಿ। ಇಂದ್ರಂ ನಮಸ್ಯನ್ನುಪಮೇಭಿರರ್ಕೈರ್ಯಃ
ಸ್ತೋತೃಭ್ಯೋ ಹವ್ಯೋ ಅಸ್ತಿ ಯಾಮನ್ ॥ ೨ ॥

ಅ ॥ ಯಃ=ಯಾವ ಇಂದ್ರನು, ಯಾಮನ್= (ಯಾಮಸ್ತು ಪ್ರಹರೇ ವ್ರತೇ ಎಂದು ವಿಶ್ವಕೋಶದಿಂದ ಪ್ರಹರ (ಒಂದು ಜಾಮ) ಎಂದರ್ಥವುಳ್ಳದ್ದು ಪ್ರಕೃತ ವೀಪ್ಸಾಭಿಪ್ರಾಯವುಳ್ಳದ್ದು. ಅಂತೂ ಪ್ರತಿಯಾಮದಲ್ಲಿ ಎಂದರ್ಥವಾಗಿರುವುದರಿಂದ) ಸಮಸ್ತ ಕಾಲಗಳಲ್ಲಿ. ಅಥವಾ ಯಾಮನ್ ಶಬ್ದವು ಕಾಲವಾಚಕವೇ. (ಕಾಲವಿಶೇಷವನ್ನು ಹೇಳತಕ್ಕ ಯಾಮನ್ ಶಬ್ದವು ಕಾಲ ಸಾಮಾನ್ಯವನ್ನು ಪ್ರತಿಪಾದಿಸುತ್ತದೆ.) ಸರ್ವ ಕಾಲದಲ್ಲಿ, ಸ್ತೋತೃಭ್ಯಃ=ಸ್ತುತಿಸುವರಿಗೆ, ಹವ್ಯಃ=(ಹುದಾನಾದನಯೋಃ) ಎಂದು ಆದನಾರ್ಥಕವಾದ ಜುಹುದಾತುವಿಗೆ ಉಪಜೀವನವೆಂದರ್ಥವು. ತಥಾಚ) ಉಪಜೀವ್ಯನೇ, ಅಸ್ತಿ=ಆಗಿರುತ್ತಾನೆ, (ಅಂತೂ ಶ್ರೀಹರಿಯು ಹೇಳಿದ ಪ್ರಾತಃಕಾಲ ಮೊದಲಾದ ಸ್ತೋತ್ರ ಕಾಲಗಳಲ್ಲಿ ಸ್ತುತಿಸುವವರಿಗೆ ಸದಾ ಸೇವ್ಯನೇ ಆಗಿರುತ್ತಾನೆ.) ಅಂತಹ, ಧನದಾಂ=(ಕರ್ಮಾರ್ಥಕವಾದ ಧನ ಶಬ್ದದಿಂದ ದಾಣ್ ದಾನೇ, ಆಕಾರಾಂತ.) ದ್ರವ್ಯದಾನ ಮಾಡುವ, ಅಪ್ರತೀತಂ=(ಪ್ರತಿಪೂರ್ವಕವಾದ ಇಣ್ ಧಾತು. ಗತ್ಯರ್ಥಕವು.) ವೈರಿಗಳಿಂದ ಹೊಂದಲ್ಪಡದೇನೇ ಇರುವ, (ಅಂದರೆ ಯಾವ ವೈರಿಗಳಿಗೂ ಈ ಇಂದ್ರನ ಇದಿರು ಬರಲು ಸಾಧ್ಯವೇ ಇಲ್ಲ.) ಇಂದ್ರಮಿತ್=ಶ್ರೀಹರಿಯನ್ನೇ ಉಪಮೇಭಿಃ ಅರ್ಕೈಃ=ಸದೃಶಾರ್ಥವುಳ್ಳ (ಅಂದರೆ ಇಂದ್ರನನ್ನು ಪ್ರತಿಪಾದಿಸುವ ಅನುಕೂಲಗಳಾದ ಋಕ್ಕುಗಳಿಂದ ನಮಸ್ಯನ್=ನಮಸ್ಕರಿಸುತ್ತಾ ಸ್ತುತಿಸುತ್ತಾ, ಜುಷ್ಟಾಂ = (ಜುಷೀ ಪ್ರೀತಿ ಸೇವನಯೋಃ) ಸೇವಿಸಲ್ಪಟ್ಟ, (ಪೂರ್ವದಲ್ಲಿ ಅನುಭವಿಸಲ್ಪಟ್ಟ.) ವಸತಿಂ=ನೀಡವನ್ನು (ಹಕ್ಕಿಗಳ ಗೂಡನ್ನು ಶ್ಯೇನಃನ=ಗಿಡುಗು ಹೇಗೆ ಹೊಂದುತ್ತದೋ, ಹಾಗೆಯೇ, ಅಹಂ=ನಾನು, ಉಪಪತಾಮಿ=(ಪತ್ಲೃ ಪತನೆ) ಹೊಂದುತ್ತೇನೆ. ॥ ೨ ॥

ಭಾ ॥ (೧) ಉಪೈವೇಶಮಹಂ ಪತಾಮಿ ಯಥಾ ಶ್ಯೇನೋ ವಸತಿಂ ಪೂರ್ವ ಭಕ್ತಾಂ।
ಇಂದ್ರಂ ನಮಸ್ಯನ್ನನುಕೂಲಗೀರ್ಭಿರೇವ ಯಃಸ್ತೋತೃಭ್ಯೋಹವ್ಯ ಏವಾಸ್ತಿಕಾಲೇ॥೨॥

ಅ ॥ ಯಾವ ಶ್ರೀಹರಿಯು ಸಮಸ್ತ ಕಾಲಗಳಲ್ಲಿ (ಅಂದರೆ ಶ್ರೀಹರಿಯು ಹೇಳಿದ ಪ್ರಾತರಾದಿ ಸ್ತೋತ್ರ ಕಾಲಗಳಲ್ಲಿ) ಸ್ತುತಿಸುವವರಿಗೆ ಸದಾ ಸೇವ್ಯನೇ ಆಗಿರುತ್ತಾನೋ ಅಂತಹ ಸರ್ವೇಶ್ವರನಾದ ಶ್ರೀಹರಿಯನ್ನೇ ಇಂದ್ರ ಪ್ರತಿಪಾದಕಗಳಾದ ಅನುಕೂಲಗಳಾದ ಋಕ್ಕುಗಳಿಂದಲೇ ಸ್ತುತಿಸುತ್ತಾ ಗಿಡುಗು ಹೇಗೆ ಮೊದಲು ಅನುಭೂತವಾದ ಗೂಡನ್ನು ಹೊಂದುತ್ತದೋ, ಹಾಗೆಯೇ ನಾನು ಹೊಂದುತ್ತೇನೆ. ॥ ೨ ॥

ಋ ॥ (೩೮೩) ನಿ ಸರ್ವಸೇನ ಇಷುಧೀಁರಸಕ್ತ ಸಮಯೋರ್ಗಾ ಅಜತಿ ಯಸ್ಯ ವಷ್ಟಿ। ಚೋಷ್ಕೂಯಮಾಣ ಇಂದ್ರ ಭೂರಿ ವಾಮಂ ಮಾ ಪಣಿರ್ಭೂರಸ್ಮದಧಿ ಪ್ರವೃದ್ಧ ॥ ೩ ॥

ಅ ॥ ಸರ್ವಸೇನ=(ಸರ್ವಾ ಸೇನಾ ಯಸ್ಯ) ಸಮಸ್ತ ಸೈನ್ಯಗಳಿಗೆ ಅಧಿಪತಿಯಾದ, (ಈ ಶ್ರೀಹರಿಯು) (ಸಮಸ್ತ ಶತ್ರುಗಳನ್ನು ಸಂಹರಿಸುವುದಕ್ಕಾಗಿ) ಇಷುಧೀನ್ =(ತೂಣೋಪಾಸಂಗತೂಣೀರ ನಿಷಂಗಾ ಇಷುಧಿರ್ದ್ವಯೋಃ ಎಂಬ ಕೋಶದಿಂದ) ಬಾಣಾಧಾರಗಳಾದ ಕೋಶಗಳನ್ನು, ನಿ ಅಸಕ್ತ=(ಷಂಜಸಂಗೇ) ಹಿಂದುಗಡೆ ಕಟ್ಟುತ್ತಾನೆ. ಅಥವಾ (ಶ್ರೀ ಪರಮೇಶ್ವರನು ಭಕ್ತರ ಅಜ್ಞಾನಾದಿಗಳನ್ನು ಪರಿಹರಿಸುವುದಕ್ಕಾಗಿ) ಇಷುಧೀನಿವ ಇಷುಧೀನ್=ಪ್ರಮಾಣಗಳೆಂಬ ಬಾಣಗಳಿಗೆ ಆಶ್ರಯರಾದ ಸಜ್ಜನರನ್ನು ನಿ ಅಸಕ್ತ= ತನ್ನಲ್ಲಿಯೇ ಕೂಡಿಸಿಕೊಳ್ಳುತ್ತಾನೆ. (ಅಂದರೆ ತನ್ನಲ್ಲಿಯೇ ಮನಸ್ಸು ಮೊದಲಾದ ವ್ಯಾಪಾರವುಳ್ಳವರನ್ನಾಗಿ ಮಾಡುತ್ತಾನೆ.) (ಈ ಶ್ರೀಹರಿಯು ಶತ್ರುಸಂಹಾರಕನಾದುದರಿಂದ, ಅರ್ಯಃ=(ಋಗತೌ) ಗಮ್ಯನು. (ಶರಣು ಹೊಂದಲು ಯೋಗ್ಯನು. ಸ್ವಾಮಿಯು. ಇಂತಹ ಶ್ರೀಹರಿಯು ಗಾಃ=ಶತ್ರುಗಳಿಂದ ಬಲಾತ್ ಅಪಹೃತಗಳಾದ ಗೋವುಗಳನ್ನು (ಅಥವಾ ಅಧ್ಯಾತ್ಮಾರ್ಥದಲ್ಲಿ) ಬುದ್ಧಿಗಳನ್ನು, ಯಸ್ಯ=ಯಾವ ಭಕ್ತನಿಗೆ, ವಷ್ಟಿ=ಕೊಡಲು ಇಚ್ಛಿಸುತ್ತಾನೋ, (ಅಂತಹ ಭಕ್ತನಿಗಾಗಿ) ಸಮ್ ಅಜತಿ=(ಅಜಗತಿಕ್ಷೇಪಣಯೋಃ) ಚೆನ್ನಾಗಿ ಕೊಟ್ಟೇ ಕೊಡುವನು. (ಪರೋಕ್ಷತಃ ಸ್ತುತಿಸಲ್ಪಟ್ಟ ಶ್ರೀಹರಿಯನ್ನು ಅಭಿಮುಖೀಕರಿಸಿಕೊಂಡು ಹೇಳುತ್ತಾನೆ.) ಪ್ರವೃದ್ಧ= ನಿತ್ಯ ಪ್ರವೃದ್ಧನಾದ ಇಂದ್ರನೇ, ಭೂರಿ= ಬಹಳವಾದ, ವಾಮಂ=ಚೆನ್ನಾಗಿ ಹೊಗಳರ್ಹವಾದ, ಮಂಗಲಕರವಾದ) (ಬಾಹ್ಯಾರ್ಥದಲ್ಲಿ) ಗವಾದಿಗಳನ್ನು (ಅಧ್ಯಾತ್ಮಾರ್ಥದಲ್ಲಿ) ತತ್ವಜ್ಞಾನವನ್ನು, ಚೋಷ್ಕೂಯಮಾಣಃ= (ಷ್ಕುದಾನೇ) ಭಕ್ತರಿಗೆ ಅತಿಶಯವಾಗಿ ಕೊಡುತ್ತಿರುವ, ನೀನು ಅಸ್ಮದಧಿ=ನಮ್ಮನ್ನು ಕುರಿತು, (ನಮಗಾಗಿ) (ಯಾವಾಗಲೂ) ಪಣಿಃ= (ಹಿಂಸಕತ್ವಸಾದೃಶ್ಯದಿಂದ) ಪಣಿನಾಮಕ ಅಸುರ ವಿಶೇಷನು, ಮಾ ಭೂಃ=ಆಗಬೇಡ. (ಅಂದರೆ ಮಹಾ ಪ್ರಯತ್ನದಿಂದ ಇಷುಧಿಗಳನ್ನು ಧರಿಸುವುದು ಪ್ರಮಾಣಗಳೆಂಬ ಬಾಣಗಳಿಗೆ ಆಶ್ರಯರಾದ ಸಜ್ಜನರ ಮನಸ್ಸು ತನ್ನಲ್ಲಿ ಇರುವಂತೆ ಮಾಡುತ್ತಾ ಭಕ್ತರಿಗೆ ಗೋದಾನ ಜ್ಞಾನದಾನ ಮೊದಲಾದ ಸಾಧ್ಯಾಚಾರಗಳನ್ನು ಹೊಂದಿಸಿ ಕೊಡುತ್ತಾ ಇದ್ದು ನಮ್ಮನ್ನು ಕುರಿತು ನಿಷ್ಠುರನು ಆಗಬಾರದು.) ॥ ೩ ॥

ಭಾ ॥ (1) ಅಶೇಷಸೇನಾಪತಿರೇಷ ಶತ್ರೂನಶೇಷತೋಽಹಂತುಮಥೋತನೂಂಸಿ ।
ಬಧ್ನಾನಿ ತೂಣಾನ್ನಿಜ ಸಜ್ಜನಾನ್ವಾ ಸಂಯೋಜಯತ್ಯಾತ್ಮಮಾನಬಾಣಾನ್ ॥ (2)

(2) ಅರ್ಯೋ ಗಮ್ಯೋಽಧೀಶ್ವರೋ (3) ಗಾಮುತೀವರ್ಗ ಸಂಕಾಲಯತ್ಯೇವ ಚ ಯಸ್ಯ ವಷ್ಟಿ।ಭಕ್ತಸ್ಯ(4)ತತ್ತ್ವಂ ದದಮಾನಸ್ಯ ಭೂರಿ ಭದ್ರಂ ಮಾಭೂರಸುರಸ್ತ್ವಂ ಕದಾಚಿತ್ । ಅಸ್ಮದರ್ಥೇ ಹಿಂಸಕತ್ವೇನ ನಿತ್ಯಪ್ರವೃದ್ಧ ॥ ೩ ॥

ಅ ॥ (1) ಸಮಸ್ತ ಸೈನ್ಯಗಳಿಗೆ ಅಧಿಪತಿಯಾದ ಶ್ರೀ ಇಂದ್ರನು ಸಮಸ್ತ ಶತ್ರುಗಳನ್ನು ಸಂಹರಿಸುವುದಕ್ಕಾಗಿ ಬಾಣಗಳಿಗೆ ಆಶ್ರಯಗಳಾದ ಕೋಶಗಳನ್ನು ಹಿಂದುಗಡೆ ಬಂಧಿಸುತ್ತಾನೆ. (ಹಾಗಾದರೆ ಅಸಕ್ತ ಎನ್ನುವುದು ಲುಙಂತವಾದ ಪ್ರಯುಕ್ತ ಅದಕ್ಕೆ ಸಮವಾದ ಲುಙಂತವಾದ ಪ್ರತಿಪದವನ್ನು ಬಿಟ್ಟು ಭಾಷ್ಯದಲ್ಲಿ ಬಧ್ನಾತಿ ಎಂದು ಲಡಂತವಾದ ಪ್ರತಿಪದವನ್ನು ಹೇಳಿದ್ದು ಹೇಗೆ? ಎಂದರೆ ವಷ್ಟಿ ಅಜತಿ ಎಂದು ಲಡಂತವಾದ ಪದಗಳನ್ನು ಶ್ರುತಿಯಲ್ಲಿ ಪ್ರಯೋಗ ಮಾಡಿದುದರಿಂದ ಭಾಷ್ಯದಲ್ಲಿಯೂ ಲಕಾರವನ್ನು ವ್ಯತ್ಯಾಸವಾಗಿ ಪ್ರಯೋಗಿಸಿದ್ದಾರೆ.) (ನಿ ಎನ್ನುವುದಕ್ಕೆ ಅಸಕ್ತ ಎಂಬ ಕ್ರಿಯೆಯಲ್ಲಿ ಅನ್ವಯವು ಎಂದಾಶ್ರಯಿಸಿ ಸಮಸ್ತ ಶತ್ರುಗಳನ್ನು ಸಂಹರಿಸುವುದಕ್ಕಾಗಿ ಎಂದು ವ್ಯಾಖ್ಯಾನ ಮಾಡಿ ರೀತ್ಯಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಅಥವಾ ಋಕ್ಕಿನಲ್ಲಿ ನಿ ಎಂಬ ಉಪಸರ್ಗವು ಶ್ರುತವಾದ ಪ್ರಯುಕ್ತ ಸಸಾಧನ ಕ್ರಿಯೆಯು ಲಭಿಸುತ್ತದೆ. ಅಂದರೆ ತಿಙ್‌ಪ್ರತ್ಯಯದಿಂದ ವಾಚ್ಯವಾದ ಕರ್ತೃಕರ್ಮ ಭಾವಾಖ್ಯವಾದ ಸಾಧನದಿಂದ ಕೂಡಿದ ಕ್ರಿಯೆಯು ಸಸಾಧನ ಕ್ರಿಯೆಯು. ಅಂದರೆ ಉಪಸರ್ಗಕ್ಕೆ ಕ್ರಿಯೆಯ ಸಾಮೀಪ್ಯವಿಲ್ಲವಾದರೆ ಉಪಸರ್ಗವು ಸಸಾಧನ ಕ್ರಿಯೆಯನ್ನು ಹೇಳುವುದರಿಂದ ನಿಹಂತುಂ ಎಂದು ಸಿದ್ಧವಾಗುವಾಗ ಯೋಗ್ಯತಯಾ ಸಮಸ್ತ ಶತ್ರುಗಳನ್ನು ಎಂದು ಅಧ್ಯಾಹಾರ ಮಾಡಬೇಕು, ತಥಾಚ ಸಮಸ್ತ ಶತ್ರುಗಳನ್ನು ನಿ=ಅತ್ಯಂತವಾಗಿ, ಹಂತುಂ=ಸಂಹರಿಸುವುದಕ್ಕಾಗಿ ಎಂದರ್ಥವು. (ಅಧ್ಯಾತ್ಮ ಪರವಾದ ಅರ್ಥ) ಅಥೋವಾ=ಅಥವಾ ಶ್ರೀ ಹರಿಯು ಭಕ್ತರ ಅಜ್ಞಾನಾದಿಗಳನ್ನು ಪರಿಹರಿಸುವುದಕ್ಕಾಗಿ (ಇಷವ ಇವ=ಬಾಣಗಳಂತೆಯೇ ವಿರೋಧಿಗಳನ್ನು ನಾಶಮಾಡುವ ವಿಷಯದಲ್ಲಿ ತೀಕ್ಷ್ಣಗಳಾದ, ಧಿಯಃ=ಬುದ್ಧಿಗಳು ಯೇಷಾಂ=ಯಾವ ಸಜ್ಜನರಿಗೋ ಅಂತಹ ಸಜ್ಜನರು, ಇಷುಧಿಗಳು, ಈ ಅಭಿಪ್ರಾಯದಿಂದ ಮಾನಬಾಣಾನ್ ಎಂದದ್ದು.) (ಮಾನಾನಿ=ಪ್ರಮಾಣಗಳು, ಬಾಣಾ ಇವ=ಬಾಣಗಳಂತೆ ಯೇಷು=ಯಾವಸಜ್ಜನರಲ್ಲಿ ಎಂಬ ವ್ಯುತ್ಪತ್ತಿಯಿಂದ) ಪ್ರಮಾಣಗಳೆಂಬ ಬಾಣಗಳಿಗೆ ಆಶ್ರಯರಾದ ಸ್ವಕೀಯರಾದ ಸಜ್ಜನರನ್ನು ತನ್ನಲ್ಲಿಯೇ ಇರಿಸಿಕೊಳ್ಳುತ್ತಾನೆ. (ಅಂದರೆ— ತನ್ನಲ್ಲಿಯೇ ಮನಸ್ಸು ಮೊದಲಾದವುಗಳ ವ್ಯಾಪಾರವುಳ್ಳವರನ್ನಾಗಿ ಮಾಡುತ್ತಾನೆ. (2) ಈ ಶ್ರೀ ಹರಿಯು ಶತ್ರುಗಳನ್ನು ಸಂಹಾರ ಮಾಡಿ, ಅರ್ಯಃ=(ಋಗತೌ) (ಗಮ್ಯನು, ಶರಣು ಹೊಂದಲು ಯೋಗ್ಯನು.) ಸರ್ವರಿಗೂ ನಿಯಾಮಕನು. (ಹಾಗಾದರೆ ಋಹಲೋರ್ಣ್ಯತ್ ಎನ್ನುವುದರಿಂದ ಣ್ಯತ್ ಪ್ರತ್ಯಯ ಮಾಡಿ ವೃದ್ಧಿಯೂ ಮಾಡಿದರೆ ಆರ್ಯಃ ಎಂದಾಗ ಬೇಕಿತ್ತು. ಅರ್ಯಃ ಎಂದು ಹೇಗೆ? ಎಂದರೆ ಅರ್ಯಃಸ್ವಾಮಿ ವೈಶ್ಯಯೋಃ ಎನ್ನುವ ಸೂತ್ರದಲ್ಲಿ ಸ್ವಾಮಿಯು (ಸರ್ವೇಶ್ವರನು) ವಾಚ್ಯನಾಗುವಾಗ ಸಾಮಾನ್ಯವಾಗಿ ವಿಹಿತವಾದ ಯತ್ ಪ್ರತ್ಯಯಾಂತವಾದ ಅರ್ಯ ಶಬ್ದವನ್ನು ನಿಪಾತನ ಮಾಡಿದ ಕಾರಣ ಅರ್ಯಃ ಎಂಬುದು ಸಮಂಜಸವೇ. ಈ ಅಭಿಪ್ರಾಯದಿಂದಲೇ ಅರ್ಯಃ=ಅಧೀಶ್ವರನು. ಸರ್ವ ನಿಯಾಮಕನು (3) (ಬಾಹ್ಯಾರ್ಥದಲ್ಲಿ) ಗಾಃ=ಶತ್ರುಗಳಿಂದ ಅಪಹೃತಗಳಾದ ಗೋವುಗಳನ್ನು, (ಅಧ್ಯಾತ್ಮಾರ್ಥದಲ್ಲಿ) ಗಾಃ=ಬುದ್ಧಿಗಳನ್ನು, ಯಾವ ಭಕ್ತನಿಗೆ ಕೊಡಲು ಇಚ್ಛಿಸುತ್ತಾನೋ, ಅತನಿಗಾಗಿ, (ಸಂಕಾಲಯತ್ಯೇವ=ಕಲಕಾಮಧೇನೌ.) ಚೆನ್ನಾಗಿ ನಿಶ್ಚಯವಾಗಿಯೂ ಕೊಡುವನು. (೪) ಪರೋಕ್ಷವಾಗಿ ಸ್ತುತಿಸಲ್ಪಟ್ಟ ಶ್ರೀ ಹರಿಯನ್ನು ಅಭಿಮುಖೀಕರಿಸಿ ಹೇಳುತ್ತಾರೆ.) ನಿತ್ಯದಲ್ಲಿಯೂ ಅಭಿವೃದ್ಧನಾದ ಶ್ರೀ ಹರಿಯೇ, ಬಹಳವಾಗಿ ಮಂಗಳಕರವಾದ (ಬಾಹ್ಯಾರ್ಥದಲ್ಲಿ) ಗವಾದಿಗಳನ್ನೂ (ಅಧ್ಯಾತ್ಮಾರ್ಥದಲ್ಲಿ) ತತ್ವ ಜ್ಞಾನವನ್ನೂ ನೀನು ಭಕ್ತರಿಗೆ ಕೊಡುವವನಾಗಿ ನಮಗಾಗಿ ಹಿಂಸಕತ್ವ ಸಾದೃಶ್ಯದಿಂದ (ಹಿಂಸಕನಾಗಿ) ಪಣಿನಾಮಕ ಅಸುರವಿಶೇಷನು ಆಗಬೇಡ.

ವಿ ॥ ಮಹಾಪ್ರಯತ್ನದಿಂದ ಪ್ರಮಾಣಗಳೆಂಬ ಆಶ್ರಯರಾದ ಸಜ್ಜನರನ್ನು ತನ್ನಲ್ಲಿಯೇ

ಆಸಕ್ತರನ್ನಾಗಿ ಮಾಡಿ ಅವರಿಗೆ ಗೋದಾನ ಜ್ಞಾನದಾನಾದಿಗಳನ್ನು ಮಾಡುತ್ತಾ ನಮಗೆ ಅನುಗ್ರಹಿಸು. ಕೆಡುಕು ಮಾಡಬೇಡ.

ಋ ॥ (೩೮೭) ವಧೀರ್ಹಿ ದಸ್ಯುಂ ಧನಿನಂ ಘನೇನ ಏಕಶ್ಚರನ್ನುಪಶಾಕೇಭಿರಿಂದ್ರ । ಧನೋರಧಿ ವಿಷುಣಕ್ತೇ ವ್ಯಾಯನ್ನಯಜ್ವಾನಃ ಸನಕಾಃ ಪ್ರೇತಿಮೀಯುಃ ॥ ೪ ॥

ಅ ॥ ಇಂದ್ರ = ಶ್ರೀ ಹರಿಯೇ, ಏಕಃ ಹಿ = ಒಬ್ಬನೇ, ಇತರರ ಅಪೇಕ್ಷೆಯಿಲ್ಲದಿರುವವನು, ಉಪಶಾಕೇಭಿಃ=(ಶಕ್ಲೃ ಶಕ್ತೌ) ಸಮೀಪದಲ್ಲಿ ಸಮಸ್ತ ವಸ್ತುಗಳ ಒಳಗೂ ಹೊರಗೂ ಶಕ್ತಿಗಳಿಂದ, ಚರನ್=ಸಂಚರಿಸುವ (ಅಂದರೆ—ಸಮಸ್ತ ದೇವತೆಗಳು, ಮನುಷ್ಯರು ಮೊದಲಾದ ಲೋಕವನ್ನು (ಜನರನ್ನು) ನಿಯಮಿಸುವ ನೀನು, ದಸ್ಯುಂ = ಕಳ್ಳನನ್ನು, ಧನಿನಂ=ಧನಾಢ್ಯನಾದವನನ್ನು, ಅಂದರೆ ಯಾರು ಕಳ್ಳನು? ಧನಭರಿತನಾದವನಿಗೆ ಧನಾಢ್ಯತ್ವ ಮಾತ್ರದಿಂದ ದಸ್ಯುತ್ವವು (ಕಳ್ಳನು ಎಂಬುದು) ಹೇಗೆ ಎಂದರೆ. ಅಯಜ್ವಾನಃ ಎಂಬುದನ್ನು ಇಲ್ಲಿ ಅಯಜ್ವಾನಂ ಎಂದು ದ್ವಿತೀಯಾ ವಿಭಕ್ತಿಯಾಗಿ ಅನ್ವಯಿಸಿಕೊಳ್ಳಬೇಕು, ತದಾಚ ಧನವು ಸಮೃದ್ಧಿಯಾಗಿದ್ದರೂ ನಿನ್ನನ್ನು)ಅಯಜ್ವಾನಂ=ಯಾಗಮಾಡದಿರುವವನನ್ನು ಘನೇನ=(ಮೂರ್ತೌ ಘನಃ)ಎಂಬ ಸೂತ್ರದಿಂದ ಹನ್ ಧಾತುವಿಗೆ ಅಪ್ಪ್ರತ್ಯಯವು. ಘನಾದೇಶವು. ಕಾಠಿನ್ಯ ಎಂಬ ಅರ್ಥದಲ್ಲಿ ನಿಪಾತವು. ಪ್ರಕ್ರಿಯೆಯನ್ನು ಸಿದ್ಧೀಕರಿಸಿಕೊಂಡು ನಿರ್ದೇಶ ಮಾಡುವುದು) ಧರ್ಮಧರ್ಮಿಗಳಿಗೆ ಅಭೇದವಿದ್ದ ಪ್ರಯುಕ್ತ ಕಾಠಿನ್ಯವುಳ್ಳದ್ದೆಂದು ಅರ್ಥವು (ಮತ್ತು ಘನಃ ಸಾಂದ್ರೇ ದೃಢೇ ದಾರ್ಢ್ಯೇ ಎಂದು ವಿಶ್ವಕೋಶವು.) ಮೂರ್ತವಾದ, ಅತ್ಯಂತ ಕಾಠಿನ್ಯವುಳ್ಳ, ಅತಿದೃಢವಾದ ವಜ್ರಾಯುಧದಿಂದ, ವಧೀಃ=(ಹನ ಹಿಂಸಾಗತ್ಯೋಃ) ಸಂಹರಿಸಿರುತ್ತಿ. ಅಥವಾ ಘನೇನ=ಜ್ಞಾನದಿಂದ ಧನಿನಂ= ಧನಾಕಾಂಕ್ಷೆಯನ್ನು ಹುಟ್ಟಿಸುವ, ದಸ್ಯುಂ=ಅಜ್ಞಾನಗಳ ಸಮುದಾಯವನ್ನು, ವಧೀಃ=ಸಂಹರಿಸಿರುತ್ತಿ.(ಪೂರ್ವಾರ್ಧದಲ್ಲಿ ಹೇಳಿದುದನ್ನೇ ಧನೋಃ ಇತ್ಯಾದಿ ದ್ವಿತೀಯಾರ್ಧದಲ್ಲಿ ವಿವರಿಸುತ್ತಾರೆ.) ಧನೋಃ=(ಧಿನು ಪುಷ್ಟೌ, ಉಪ್ರತ್ಯಯವು. ಧಾತುವಿನ ಇಕಾರಕ್ಕೆ ಅಕಾರಾದೇಶವು. ಅಥವಾ ಧನ ಪುಷ್ಟೌ.) ಅತ್ಯಂತ ಪುಷ್ಟಿಯುಳ್ಳ ನಿನ್ನನ್ನು, ಅಧಿ=ಅಧಿಕರಿಸಿ, ಅಯಜ್ವಾನಃ=ಯಾವಾಗಲೂ ಯಾಗ ಮಾಡದೇನೇ ಇದ್ದವರಾಗಿ, ವಿಷುಣಕ್=ವಿಷು ಉಪಪದಾತ್ ಅಂಚ ಗತಿಪೂಜನಯೋಃ) ಸರ್ವತ್ರ, ವಿ ಆಯನ್=(ಅಯ ಪಯ ಗತೌ) ಹೋದರು. (ಅಂದರೆ ಇತರ ದೇವತೆಗಳನ್ನು ಪೂಜಿಸುತ್ತಿದ್ದರು.) (ಆದುದರಿಂದ) ತೇ= ಅವರು ಸನಕಾಃ=(ಷಣಭೂಭೇ.) ಮೋಕ್ಷಾದಿಗಳನ್ನು ಹೊಂದುವ ವಿಷಯದಲ್ಲಿ ಯೋಗ್ಯ ಸ್ವರೂಪರಾದಾಗ್ಯೂ, ಪ್ರೇತಿಂ=ದುಃಖ ಬಾಹುಲ್ಯರೂಪವಾದ ಮರಣವನ್ನು, ಈಯುಃ=(ಇಣ ಗತೌ) ಹೊಂದಿದರು. (ಅಂದರೆ ಮುಕ್ತಿಯೋಗ್ಯರಾದಾಗ್ಯೂ ಪರಮಾತ್ಮನನ್ನು ಬಿಟ್ಟು ಇತರ ದೇವತೆಗಳನ್ನೂ ಪೂಜಿಸುವವರು ನರಕಾದ್ಯನರ್ಥವನ್ನು ಹೊಂದುತ್ತಾರೆ. ಅಯೋಗ್ಯರು ಅನರ್ಥವನ್ನು ಹೊಂದುತ್ತಾರೆಂದು ಸುತರಾಂ ಸಿದ್ಧ. ॥ ೪ ॥

ಭಾ ॥ (೧) ವಜ್ರೇಣ ಘನೇನ ದಸ್ಯುಂ । ಜ್ಞಾನೇನ ವಾ ಜ್ಞಾನಗಣಂ ಧನಾಢ್ಯಮಯಜ್ವಾಂ ಚಾಪ್ಯೇಕ ಏವಾಂತರೇಚ । ಚರಂಚಾಪ್ಯೈಃ ಶಕ್ತಿಭಿಃ ಸರ್ವದೇವ ನರಾದಿಲೋಕಂ ಯಮಯನ್ ಜಘಂಥ॥(೨)ಅಧಿಕೃತ್ಯ ತ್ವಾಂ ಧನುಮತ್ಯಂತಪುಷ್ಟಂ ವಿಷ್ವಗ್ಗಚ್ಛರಯುಜಂತಃ ಸದೈವ । ಮೃತಿಂ ಪ್ರಾಪುರ್ದುಃಖಬಾಹುಲ್ಯರೂಪಾಂ ಸಕಾಲಾಭೇ ಯೋಗ್ಯರೂಪಾ ಅಪಿ ಸ್ಮ ॥ ೪ ॥

ಅ || (೧) (ಶ್ರೀ ಹರಿಯೇ)ಇತರಾಪೇಕ್ಷೆಯಿಲ್ಲದಿರುವ, ಮತ್ತು ಸಮಸ್ತವಸ್ತುಗಳ ಒಳಗೂ (ಈ) ಹೊರಗೂ (ಶಾಕೈಃ=) ಶಕ್ತಿಗಳಿಂದ, ಸಂಚರಿಸುವ, ಅಂದರೆ ಸಮಸ್ತದೇವತೆಗಳು ಮನುಷ್ಯರು ಮೊದಲಾದ ಸಮಸ್ತ ಜನರನ್ನು ನಿಯಮಿಸುವ ನೀನು (ದಸ್ಯುಂ=) ಕಳ್ಳನನ್ನು (ಯಾರನ್ನು) ಧನಿಕನಾದವನನ್ನು (ಅಂದರೆ ಧನವು ಇದ್ದರೂ ನಿನ್ನನ್ನು ಉದ್ದೇಶಿಸಿ) ಯಾಗಮಾಡದಿದ್ದವನನ್ನು ಅತಿ ದೃಢವಾದ ವಜ್ರಾಯುಧದಿಂದ ಸಂಹರಿಸಿರುತ್ತಿ. ಅಥವಾ ಜ್ಞಾನದಿಂದ ಅಜ್ಞಾನ ಸಮುದಾಯವನ್ನು ಪರಿಹರಿಸಿರುತ್ತಿ. (೨) (ಯಾವ ಕಾರಣದಿಂದ ಆ ಪುರುಷರು) (ಧನುಂ=) ಅತ್ಯಂತ ಪುಷ್ಟನಾದ ನಿನ್ನನ್ನು ಅಧಿಕರಿಸಿಕೊಂಡು ಯಾವಾಗಲೂ ಯಾಗ ಮಾಡದೇನೇ ಇದ್ದವರಾಗಿ ಸುತ್ತ ಮುತ್ತಲೂ ಹೋದರು. (ಅಂದರೆ ಶ್ರೀ ಹರಿಯನ್ನು ಬಿಟ್ಟು ಇತರ ದೇವತೆಗಳನ್ನು ಪೂಜಿಸುತ್ತಿದ್ದರು) ಆದ ಕಾರಣ ಅವರು ಮರಣವನ್ನು ಹೊಂದಿದರು. (ಸರ್ವಸಾಧಾರಣವಾದ ಮರಣವು ದೇವತಾಂತರವನ್ನು ಪೂಜಿಸಿದ್ದಕ್ಕೆ ಫಲವು ಹೇಗೆ ಆಗುವುದೆಂದರೆ) ಅತಿದುಃಖಸ್ವರೂಪ ಭೂತವಾದ ಮರಣವನ್ನು ಹೊಂದಿರುವರು. (ದುಃಖಸ್ವರೂಪವಾದ ಮರಣವು ಎಂತಹವರಿಗೆ ಎಂದರೆ) (ಸನಕಾಃ=) ಮೋಕ್ಷಾದಿ ಪುರುಷಾರ್ಥಗಳನ್ನು ಹೊಂದಲಿಕ್ಕೆ ಯೋಗ್ಯ ಸ್ವರೂಪರಾದಾಗ್ಯೂ ಅಂದರೆ ಮುಕ್ತಿಯೋಗ್ಯರಾದಾಗ್ಯೂ(ಶ್ರೀಪರಮೇಶ್ವರನನ್ನು ಬಿಟ್ಟುಇತರ ದೇವತೆಗಳನ್ನು ಪೂಜಿಸುವವರು ನರಕಾದ್ಯನರ್ಥನವನ್ನು ಹೊಂದುವರು. ಅಯೋಗ್ಯರು ಹೊಂದುತ್ತಾರೆಂಬುದುಸುತರಾಂ ಸಿದ್ಧ.) || ೪ ||

ಋ || (೩೮೮) ಪರಾ ಚಿಚ್ಛೀರ್ಷಾ ವವೃಜುಸ್ತ ಇಂದ್ರಾಯಜ್ವಾನೋ
ಯಜ್ವಭಿಃ ಸ್ಪರ್ಧಮಾನಾಃ। ಪ್ರಯದ್ದಿವೋ ಹರಿವಃ ಸ್ಥಾತರುಗ್ರ
ನಿರವ್ರತಾಁ ಅಧಮೋ ರೋದಸ್ಯೋಃ || ೫ || || ೧ ||

ಅ || ಇಂದ್ರ=ಎಲೋ ಶ್ರೀಹರಿಯೇ! ತೇ=ಹಿಂದೆ ಹೇಳಿದವರಕ್ಕಿಂತ ಇತರರಾದ ಯಾವ ಅಸುರರು, ಅಯಜ್ವಾನಃ=ಯಾಗ ಮಾಡದಿದ್ದವರು (ಇರುತ್ತಾರೋ) ತೇ=ಅವರು, ಯಜ್ವಭಿಃ=ಯಾಗ ಮಾಡುವವರಿಂದ ಸ್ಪರ್ಧಮಾನಾಃ=ಸ್ಪರ್ಧೆ ಮಾಡುವವರಾಗಿ, ಶೀರ್ಷಾಚಿತ್=ತನ್ನ ಶಿರಸ್ಸುಗಳನ್ನು ಕೂಡ ಪರಾವವೃಜುಃ= (ವ್ರಜ ಗತೌ ವ್ರಜ ಸಂತ್ಯಾಗೇ) ಬಿಟ್ಟು ಬಿಡುವರು. (ಅಂದರೆ-ಸ್ಪರ್ಧಾನಿಮಿತ್ತವಾಗಿ ತಮ್ಮ ಶಿರಸ್ಸುಗಳ ತ್ಯಾಗವನ್ನು ಎಣಿಸುತ್ತಿದಿಲ್ಲ.ಎಂತಹ ಕೇಡುಕು ಬಂದರೂ ಚಿಂತೆಯಿಲ್ಲ ಎನ್ನುವರು) (ಸಜ್ಜನರಿಂದೊಡಗೂಡಿ ಸ್ಪರ್ಧೆಮಾತ್ರದಿಂದ ಪ್ರಯೋಜನವನ್ನು ಹೊಂದಿರುತ್ತಾರೆ) ಹರಿವಃ= (ಹರಯಃ=ಕುದುರೆಗಳು ಅಥವಾ ಇಂದ್ರಿಯಗಳು ಅಸ್ಯ ಸಂತಿ ಎಂಬ ವ್ಯುತ್ಪತ್ತಿಯಿಂದ) ಕುದುರೆಗಳು ಅಥವಾ ಇಂದ್ರಿಯಗಳುಳ್ಳವನೇ, ಸ್ಥಾತಃ=(ಷ್ಠಾಗತಿನಿವೃತ್ತೌ) ಸ್ಥಿರನಾದವನೇ, ಉಗ್ರ=ಕ್ರೂರನಾದವನೇ ಅಂದರೆ ಇಂದ್ರಿಯಗಳಿಗೆ ಅಧಿಪತಿಯೂ ಅತಿಸ್ಥೈರ್ಯವುಳ್ಳವನೂ ದೈತ್ಯರಿಗೆ ಕ್ರೂರನಾದವನೂ ಆದ ನೀನು ಯತ್=ಯಾವ ಕಾರಣ ದೆಶೆಯಿಂದ ಆ ಅಸುರರು ಯಾಗ ಮಾಡದಿರುವಿಕೆ ಮೊದಲಾದ ಧರ್ಮಗಳಿಂದ ಯುಕ್ತರಾಗಿರುತ್ತಾರೋ (ಯಾಗಾದಿಗಳನ್ನು ಮಾಡಲೇ ಇಲ್ಲವೋ) ಆದ ಕಾರಣ ಅವರು ಅವ್ರತಾನ್=ನಿನ್ನ ಪೂಜೆಯಿಂದ ವಿರಹಿತರಾದ ಅಂದರೆ ನಿನ್ನ ಪೂಜಾದಿಗಳನ್ನು ಮಾಡದಿರುವ ಆ ಅಸುರರನ್ನು ದಿವಃ= ಸ್ವರ್ಗದಿಂದಲೂ ರೋದಸ್ಯೋಃ=ಅಂತರಿಕ್ಷ ಲೋಕದಿಂದಲೂ ಪ್ರಥಿವೀ ಲೋಕದಿಂದಲೂ, ಪ್ರ. ನಿ. ಅಧಮಃ=ಧಮಧ್ಮಾನೇ ನಿರಾಕರಿಸುವವನಾಗಿರುತ್ತಿ. || ೫ ||

ಭಾ || (೧) ಅಯಜ್ವಾನೋಽನ್ಯೇ ವಕ್ಷ್ಯಮಾಣಾಸ್ತು ಯೇ ತೇ ಸಂತ್ಯಾಸುರಾ ಯಜ್ವಭಿಃ
ಸ್ಪರ್ಧಮಾನಾಃ। ಶಿರಾಂಸ್ಯಪಿ ಸ್ವಾನಿ ಸಂತತ್ಯಜುಸ್ತೇ ಸದ್ಭಿಃ ಸ್ಪರ್ಧಾಮಾತ್ರ ಸಂಪೂರಿ

ತಾತ್ಪರ್ಯ ॥ (೨) ತಾನವ್ರತಾನ್ ಸ್ವರ್ಗತಃ ಖಾತ್ಪೃಥಿವ್ಯಾ ಶಿರಧಮಸ್ತ್ವಂ ಸ್ಥೈರ್ಯ ವಾಹಿಂದ್ರಿಯೋಶಃ ॥ ೫ ॥

ಅ ॥ (೧) (ಈ ಋಕ್ಕಿನಲ್ಲಿಯೂ ಅಯಜ್ವಾನಃ ಎಂದು ಶ್ರುತವಾದ ಪ್ರಯುಕ್ತ ಪೂರ್ವಋಕ್ಕಿನಲ್ಲಿ ಹೇಳಲ್ಪಟ್ಟವರೇ ಇಲ್ಲಿಯೂ ಹೇಳಲ್ಪಡುತ್ತಾರೆ. ಎಂಬ ಪ್ರತೀತಿಯನ್ನೂ ನಿರಾಕರಿಸುತ್ತಾರೆ.) ಯಾರು ಮುಂದೆ ಹೇಳಲ್ಪಡುವ ವಿಧಿಪ್ರಕಾರ ಯಾಗ ಮಾಡದಿದ್ದವರು ಇರುತ್ತಾರೋ ಅವರಾದರೂ ಹಿಂದೆ ಹೇಳಿದವರಿಗಿಂತ ಇತರರೇ (ಏಕೆಂದರೆ ಅವರು ಮೋಕ್ಷವನ್ನು ಹೊಂದಲಿಕ್ಕೆ ಯೋಗ್ಯರು ಎಂದು ಹಿಂದೆ ಹೇಳಿದೆ. ಇವರಿಗಾದರೂ ತಮ್ಮ ಶಿರಸ್ಸು ಹೋದೀತು ಎಂಬ ಭಯವನ್ನು ಸಹ ಬಿಟ್ಟು ಸದಾ ಸಜ್ಜನರಲ್ಲಿ ದ್ವೇಷ ಮಾಡುತ್ತಿರುತ್ತಾರೆ. ಎಂದು ಮಹಾ ದೋಷವನ್ನು ಹೇಳಿದೆ.) (ಹಾಗಾದರೆ ಇವರು ಯಾರು ಎಂದರೆ) ಯಾರು ಅಸುರಸ್ವಭಾವವುಳ್ಳವರು ಇರುತ್ತಾರೋ ಅವರು (ಹೀಗೆ ತಾತ್ಪರ್ಯವನ್ನು ಹೇಳಿ ಯಜ್ವಭಿಃ ಇತ್ಯಾದಿಗಳಿಂದ ವ್ಯಾಖ್ಯಾನ ಮಾಡುತ್ತಾರೆ.) ಅಥವಾ ಹಿಂದೆ ಹೇಳಿದ ಯಜ್ಞ ಮಾಡದಿರುವವರಿಗಿಂತ. ಇವರಿಗೆ ಭೇದವನ್ನು ತೋರಿಸುವುದಕ್ಕಾಗಿ ಅಯಜ್ವಾನಃ ಅನ್ಯೇ ಇತ್ಯಾದಿಗಳಿಂದಲೇ ವ್ಯಾಖ್ಯಾನ ಮಾಡುತ್ತಾರೆ.) ಎಲೋ ಶ್ರೀ ಹರಿಯೇ ಹಿಂದೆ ಹೇಳಿದ ಅಯಜ್ವರಿಗಿಂತ ಇತರರಾದ ಮುಂದೆ ಹೇಳುವ ಯಾವಪ್ರಸಿದ್ಧರಾದ ಅಸುರರು ಯಾಗಮಾಡದಿದ್ದವರು ಇರುತ್ತಾರೋ, (ಅವರು ಶಾಸ್ತ್ರೋಕ್ತಪ್ರಕಾರ ಯಾಗ ಮಾಡುವವರಿಂದ ಸ್ಪರ್ಧೆಯನ್ನು ಹೊಂದುವವರಾಗಿ ತಮ್ಮ ಶಿರಸ್ಸುಗಳನ್ನೂ ಕೂಡ ಬಿಟ್ಟು ಬಿಡುವರು (ಅಂದರೆ—ಸ್ಪರ್ಧಾನಿಮಿತ್ತವಾಗಿ ತಮ್ಮ ಶಿರಸ್ಸು ಹೋದರೂ ಗಣನೆ ಮಾಡುವುದಿಲ್ಲ.) ಅವರು ಸಜ್ಜನರಿಂದೊಡಗೂಡಿ ಕೇವಲ ಸ್ಪರ್ಧೆಯಿಂದಲೇ ಪ್ರಯೋಜನವನ್ನು ಹೊಂದಿರುವರು. (೨) ಸ್ಥೈರ್ಯವುಳ್ಳ ಲಕ್ಷ್ಮೀಪತಿಯಾದ ನೀನು ನಿನ್ನ ಪೂಜಾದಿಗಳನ್ನು ಮಾಡದಿರುವ ಆ ಅಸುರರನ್ನು ಸ್ವರ್ಗದಿಂದಲೂ ಅಂತರಿಕ್ಷಲೋಕದೆಶೆಯಿಂದಲೂ ಪೃಥಿವೀ ಲೋಕದಿಂದಲೂ ನಿರಾಕರಿಸುವವನಾಗಿರುತ್ತಿ. ಅಂದರೆ ಆ ಲೋಕಗಳಿಗಿಂತಲೂ ಕೆಳಲೋಕವನ್ನೇ ಹೊಂದಿಸಿ ಕೊಡುತ್ತಿ) ॥ ೫ ॥ ೧ ॥

ಋ ॥ (೩೮೯) ಅಯುಯುತ್ಸನ್ನನವದ್ಯಸ್ಯ ಸೇನಾಮಯಾತಯಂತ ಕ್ಷಿತಯೋ ನವಗ್ವಾಃ। ವೃಷಾಯುಧೋ ನ ವಧ್ರಯೋ ನಿರಷ್ಟಾಃ ಪ್ರವದ್ಭಿರಿಂದ್ರಾಚ್ಚಿತಯಂತ ಆಯನ್ ॥ ೬ ॥

ಅ ॥ ನವಗ್ವಾಃ= ನವಗ್ವರೆಂದು ಪ್ರಸಿದ್ಧರಾದ ಋಷಿಗಳು, ಕ್ಷಿತಯಃ= ಪ್ರಜೆಗಳು (ಬಾಹ್ಯರಾದ ಅಸುರಶ್ರೇಷ್ಠರಿಂದ ಉಪದ್ರವವನ್ನು ಹೊಂದಿದವರಾಗಿ ಯಾವಾಗ ಇಂದ್ರನನ್ನು ಶರಣು ಹೊಂದಿರುವರೋ)(ಆಧ್ಯಾತ್ಮಾರ್ಥವನ್ನು ಹೇಳುತ್ತಾರೆ. ಅಥವಾ ನವಗ್ವಋಷಿಗಳಿಂದುಪಲಕ್ಷಿತರಾದ ಸಜ್ಜನರು ತಮಸ್ಸಂಬದ್ಧವಾಚ್ಯಗಳಾದ ಅಜ್ಞಾನಸಂಶಯವಿಪರ್ಯಗಳಿಂದ ಅಥವಾ ತಮೋಗುಣಕಾರ್ಯಗಳಾದ ಪಾಪಗಳ ಸಮೂಹಗಳಿಂದ ಚೆನ್ನಾಗಿ ಪೀಡಿತರಾಗಿ ಯಾವಾಗ ಶ್ರೀ ವಾಸುದೇವನನ್ನು ಶರಣು ಹೊಂದಿದರೋ, ಆಗ ಆ ವಾಸುದೇವನನ್ನು ಶರಣು ಹೊಂದಿರುವುದರಿಂದ ಪುಷ್ಟರಾದ ಸಮರ್ಥರಾದ ಆ ಅಸುರ ಶ್ರೇಷ್ಠರಿಂದ ಅಥವಾ ಅಜ್ಞಾನ ಮೊದಲಾದವುಗಳಿಂದ ಗೂಡಿ ಅಯುಯುತ್ಸನ್= (ಯುಧಸಂಪ್ರಹಾರೇ) ಯುದ್ಧ ಮಾಡಲಿಕ್ಕೆ ಇಚ್ಛಿಸಿದರು) ಅಥವಾ (ಇಂದ್ರಾಂತರ್ಗತನಾದ ವಾಸುದೇವನನ್ನು ಅಧ್ಯಾತ್ಮನಲ್ಲಿರುವ ವಾಸುದೇವನನ್ನು ಎಂದು ವಾಸುದೇವಂ ಎನ್ನುವುದಕ್ಕೆ ಬಾಹ್ಯ ಅಧ್ಯಾತ್ಮರೂಪ ಉಭಯಾರ್ಥದಲ್ಲಿಯೂ ಯೋಜನಾ ಮಾಡಬೇಕು. ಹೇಗೆಂದರೆ (ಯುದ್ಧ ಮಾಡಲಿಚ್ಛಿಸುವ ಆ ಮುನಿಗಳು ಆ ಅಸುರರನ್ನು ಅಥವಾ ಅಜ್ಞಾನಾದಿಗಳನ್ನು ಸಂಹರಿಸುವುದಕ್ಕಾಗಿ) ಅನವ

ದೃಶ್ಯ=ನಿರ್ದೋಷನಾದ ಇಂದ್ರಾಂತರ್ಯಾಮಿಯಾದ ಶ್ರೀ ವಿಷ್ಣುವಿನ, ಸೇನಾಂ=ಚತುರಂಗ ಸೈನ್ಯವನ್ನು ಅಥವಾ ಅಧ್ಯಾತ್ಮದಲ್ಲಿರುವ ಶ್ರೀವಿಷ್ಣುವಿನ, ಸೇನಾಂ=ಹರಿಭಕ್ತ್ಯಾದಿಗುಣಗಳನ್ನು ಅಯಾತಯಂತ= (ಯತೀಪ್ರಯತ್ನೇ) ಪ್ರೇರೇಪಿಸಿದರೋ ಆಗ ವೃಷಾಯುಧಃ ನ=(ಶುಕ್ರೇ ಮೂಷಕೇ ಶ್ರೇಷ್ಠೇ ಸುಕೃತೇ ವೃಷಭೇ ವೃಷಃ ಎಂಬ ಕೋಶದಿಂದ ವೃಷಶಬ್ದವು ಶ್ರೇಷ್ಠವಾಚಕವು. ಯುಧ್ಯಂತೇ ಇತಿ ಯುಧಃ) ಶ್ರೇಷ್ಠರಾದ ಸಮರ್ಥರಾದ ಯೋಧರಂತೆ, ವಧ್ರಯಃ=ತಮ್ಮ ಶತ್ರುಗಳನ್ನು ಸಂಹರಿಸುವುದೇ ಮುಖ್ಯ ಸ್ವಭಾವವುಳ್ಳವರಾದಾಗ್ಯೂ ಆ ಅಸುರಾದಿಗಳು, ಪ್ರವದ್ಭಿಃ=(ಪ್ರುಙ್‌ಪ್ಲುಙ್ ಗತೌ) ಆಶುಗತಿಯುಳ್ಳ ಶ್ರೀವಿಷ್ಣುವಿನ ಪರಿವಾರದಿಂದ ಅಥವಾ ತಮ್ಮ ಭಕ್ತ್ಯಾದಿಗುಣನಿಮಿತ್ತವಾಗಿ, ನಿರಷ್ಟಾಃ= (ಅಶೂ ವ್ಯಾಪ್ತೌ) ಅತಿಶಯವಾಗಿ ವ್ಯಾಪಿಸಿದರು. (ಅಂದರೆ ಓಡುವವರಾಗಿ ದಿಗ್ದೇಶಗಳನ್ನು ಹೊಂದಿದರು. ಓಡಿದವರು ಅದರ್ಶನವನ್ನೇ ಹೊಂದಿದರು. (ಅವರು ಓಡುತ್ತಿರಲು ಇಂದ್ರನ ಪರಿವಾರರು) ಇಂದ್ರಾತ್=ಇಂದ್ರನ ಮತ್ತು ಶ್ರೀಹರಿಯ ಪ್ರಸಾದದಿಂದ, ಚಿತಯಂತ!=(ಆ ಅಸುರರನ್ನು) ಪುನಃ ಪುನಃ ಓಡಿಸುವವರಾಗಿ, ಅಯನ್= (ಅಯ ಪಯಗತೌ) ಹೋದರು ಪ್ರಸಿದ್ಧ. || ೬ ||

ಭಾ|| ೧ || ಯದಾ ನವಗ್ವಾ ಋಷಯೋಽಸುರೇಂದ್ರೈರುಪದ್ರುತಾಃ ಶರಣಂ ವಾಸುದೇವಂ।
ಪ್ರಾಪ್ತುಸ್ತಮೋಭಿಸ್ತಾಮಸೈರ್ವಾಘಸಂಘೈಃ ಸಂಪೀಡಿತಾ ಅಯುಯುತ್ಸಂಸ್ತದಾ
ತೈಃ॥ಸೇನಾಂಚ ವಿಷ್ಣೋರ್ನಿರಯಾತಯಂಸ್ತೇ ವಧಾಯ ತೇಷಾಂ ಹರಿಭಕ್ತ್ಯಾದಿಕಾ
ವ್ಯಾ। ಗುಣಾನ್ (2) ಸಮರ್ಥಾ ಇವ ಯೋಧಾಃ ಸ್ವಶತ್ರುವಧೈಕಶೀಲಾ ಅಪಿ
ನಷ್ಟಾಃ ಪ್ಲವದ್ಭಿಃ।ಗುಣೈರ್ವಿಷ್ಣೋಃ ಸ್ವೈಗುಣೈರ್ವಾ ಪ್ರಸಾದಾದೀಶಸ್ಯ ಸಂಕಾಲ
ಯಂತೋ ಹ್ಯಗಚ್ಛನ್ || ೬ ||

ಅ || (1) (ಇತಿಹಾಸ ಗರ್ಭಿತವಾದ ಪ್ರಯುಕ್ತ ಇತಿಹಾಸವನ್ನು ಸೂಚಿಸುತ್ತಾ ವ್ಯಾಖ್ಯಾನ ಮಾಡುತ್ತಾರೆ.) ನವಗ್ವ ರೆಂದು ಪ್ರಸಿದ್ಧರಾದ ಋಷಿಗಳು ಬಾಹ್ಯಅಸುರೇಂದ್ರರಿಂದ ಉಪದ್ರವವನ್ನು ಹೊಂದಿದವರಾಗಿ ಇಂದ್ರನನ್ನು ಶರಣು ಹೊಂದಿದರೋ, ಅಥವಾ ನವಗ್ವಾದಿಸಜ್ಜನರು ತಮೋರೂಪಗಳಾದ ಅಜ್ಞಾನ ಸಂಶಯ ವಿಪರ್ಯಯಗಳಿಂದಲಾಗಲೀ, ತಮೋಗುಣ ಕಾರ್ಯಗಳಾದ ಪಾಪಸಮೂಹಗಳಿಂದಲಾಗಲೀ, ಚೆನ್ನಾಗಿ ಪೀಡಿತರಾಗಿ ಯಾವಾಗ ವಾಸುದೇವನನ್ನು ಶರಣು ಹೊಂದಿದರೋ, ಆಗ ಆ ಶರಣು ಹೊಂದಿದ್ದರಿಂದ ಪುಷ್ಟರಾಗಿ ಆ ಅಸುರ ಶ್ರೇಷ್ಠರಿಂದಲಾಗಲೀ ಅಜ್ಞಾನಾದಿಗಳಿಂದಲಾಗಲೀ ಕೂಡಿ ಯುದ್ಧ ಮಾಡಲು ಇಚ್ಛಿಸಿದರು. (೨) ಯುದ್ಧ ಮಾಡಲು ಇಚ್ಛಿಸಿದ ಆ ಮುನಿಗಳು ಅಥವಾ ಸಜ್ಜನರು ಆ ಅಸುರರ ಅಥವಾ ಅಜ್ಞಾನಾದಿಗಳ ಸಂಹಾರಕ್ಕಾಗಿ ಇಂದ್ರಾಂತರ್ಯಾಮಿಯಾದ ಶ್ರೀ ವಿಷ್ಣುವಿನ ಚತುರಂಗಸೈನ್ಯವನ್ನು ಅಧ್ಯಾತ್ಮದಲ್ಲಿರುವ ಶ್ರೀ ಹರಿಯ ಹರಿಭಕ್ತ್ಯಾದಿಗುಣಗಳನ್ನಾಗಲೀ ಪ್ರೇರೇಪಿಸಿದರು. (೩) ಸಮರ್ಥರಾದ ಯೋಧರಂತೆ ತಮ್ಮ ಶತ್ರುಗಳನ್ನು ಸಂಹರಿಸುವುದೇ ಮುಖ್ಯ ಸ್ವಭಾವವುಳ್ಳವರಾದಾಗ್ಯೂ ಆ ಅಸುರಾದಿಗಳು ಶೀಘ್ರಗಮನವುಳ್ಳ ಶ್ರೀ ವಿಷ್ಣುವಿನ ಪರಿವಾರದಿಂದ ಅಥವಾ ತಮ್ಮದಾದ ಭಕ್ತ್ಯಾದಿಗುಣಗಳಿಂದಲಾಗಲೀ (ನಷ್ಟಾಃ=ನಶ ಅದರ್ಶನೇ) ಓಡುತ್ತಾ ಅದರ್ಶನವನ್ನು ಹೊಂದಿದರು. (ಹಾಗೆ ಓಡುತ್ತಿರಲು ಇಂದ್ರನ ಪರಿವಾರರು ಇಂದ್ರನ ಅಥವಾ ಶ್ರೀಹರಿಯ ಪ್ರಸಾದದಿಂದ ಆ ಅಸುರರನ್ನು ಓಡಿಸುತ್ತಾ ಹೋದರು. ಪ್ರಸಿದ್ಧ || ೬ ||

ಋ || (೩೯೦) ತ್ವಮೇತಾನ್ರುದತೋ ಜಕ್ಷತಶ್ಚಾಯೋಧಯೋ ರಜಸ ಇಂದ್ರ
ಪಾರೇ। ಅವಾದಹೋ ದಿವ ಆ ದಸ್ಯುಮುಚ್ಚಾ ಪ್ರಸುನ್ವತಃ ಸ್ತುವ
ತಃ ಶಂಸಮಾವಃ || ೭ ||

ಅ || ಇಂದ್ರ=ಇಂದ್ರನೇ, ಶ್ರೀಹರಿಯೇ, ತ್ವಂ=ನೀನು (ನಿನ್ನಿಂದಲೇ ಪೀಡಿಸಿಕೊಳ್ಳಲ್ಪಟ್ಟ ಪ್ರಯುಕ್ತ) ರುದತಃ=(ರುದಿರ್ ಅಶ್ರುವಿಮೋಚನೇ) ಮರುಗುತ್ತಿರುವ ಜಕ್ಷತಶ್ಚ=(ಜಕ್ಷ ಭಕ್ಷಹಸನಯೋಃ) ಮುನಿಗಳನ್ನು ಭಕ್ಷಿಸುವ, ಏತಾನ್=ನರಭಕ್ಷಕರೆಂದು ಪ್ರಸಿದ್ಧರಾದ ರಾಕ್ಷಸರ ಸಮೂಹಗಳನ್ನು, ರಜಸಃ=ರಜೋಗುಣದ, ಪಾರೇ=ಅಂತ್ಯದಲ್ಲಿ, (ಜಗತ್ತಿಗೆ ಯಾವಾಗ ಚೆನ್ನಾಗಿ ಸತ್ವವೃದ್ಧಿಯಾಗುತ್ತದೋ, ಆವಾಗಲೇ) ಅಯೋಧಯಃ=(ಯುಧ ಸಂಪ್ರಹಾರೇ.) ಯುದ್ಧಮಾಡಿರುತ್ತಿ (ಅಧ್ಯಾತ್ಮಾರ್ಥವು) ಅಥವಾ ರುದತಃ=ಶೋಚ್ಯಗಳಾದ, ಜಕ್ಷತಶ್ಚ=ಗುಣಭಕ್ಷಕಗಳಾದ (ಅಂದರೆ ಆನಂದಾದಿಗುಣಗಳನ್ನಾಚ್ಛಾದಿಸುವ) ಏತಾನ್= ಈ ಅನುಭವ ಸಿದ್ಧಗಳಾದ ಪುರುಷದೋಷಗಳಾದ ಅಜ್ಞಾನಾದಿಗಳನ್ನು, ರಜಸಃ ಪಾರೇ=ರಜೋಗುಣದ ಅಂತ್ಯದಲ್ಲಿ. (ಆಧ್ಯಾತ್ಮಿಕಸತ್ವಗುಣವು ವೃದ್ಧಿಯಾದಾಗ) ಅಯೋಧಯಃ=ಯುದ್ಧಮಾಡಿರುತ್ತಿ) ದಸ್ಯುಂ=ಕಳ್ಳರಾದ ಆ ರಾಕ್ಷಸರನ್ನು ದಿವಃ=ಸ್ವರ್ಗದೆಶೆಯಿಂದ, ಅ=ಚೆನ್ನಾಗಿ, ಅವಅದಹಃ=(ದಹಭಸ್ಮೀಕರಣೇ ದಹಕ್ಷೇಪೇ.) ತಿರಸ್ಕರಿಸುವವನಾಗಿರುತ್ತಿ. (ಅಂದರೆ ಯುದ್ಧದಲ್ಲಿ ಸಂಹರಿಸಿ ಸ್ವರ್ಗಕ್ಕಿಂತಲೂ ನಿರಾಕರಿಸುವವನಾಗಿರುತ್ತಿ (ಕೆಳಲೋಕಕ್ಕೆ ಹಾಕಿರುತ್ತಿ. (ಅಥವಾ ಸ್ವರ್ಗಕ್ಕಿಂತ ನಿರಾಕರಿಸಿ ನರಕದಲ್ಲಿ ಹಾಕಿರುತ್ತಿ (ಅಧ್ಯಾತ್ಮಾರ್ಥ) ದಸ್ಯುಂ= ಗುಣಗಳಿಗೆ ಆಚ್ಛಾದಕಗಳಾದ ಅಜ್ಞಾನ ಮೊದಲಾದ ದೋಷಾಖ್ಯ ಕಳ್ಳರನ್ನು ದಿವಃ=ಜ್ಞಾನ ಕೊಟ್ಟು ಅ=ಚೆನ್ನಾಗಿ, ಅವ ಅದಹಃ=ಸುಡುವವನಾಗಿರುತ್ತಿ. (ರಾಕ್ಷಸರನ್ನೂ ಅಜ್ಞಾನಾದಿಗಳನ್ನೂ ವಿನಾಶಗೊಳಿಸುವುದರಿಂದ) ಸುನ್ವತಃ=ಯಜ್ಞವನ್ನು ಮಾಡುತ್ತಿರುವ, ಸ್ತುವತಃ= ಸ್ತೋತ್ರವನ್ನು ಮಾಡುತ್ತಿರುವ ಯಾಜ್ಞಿಕನ, ಉಚ್ಛಾ=ಚೆನ್ನಾಗಿ, ಶಂಸಂ=ಸ್ತುತಿಯನ್ನು ಪ್ರ ಅವಃ=(ಅವರಕ್ಷಣೇ ಚೆನ್ನಾಗಿ ರಕ್ಷಿಸುವವನಾಗಿರುತ್ತಿ. (ಅಂದರೆ ವಿಘ್ನಗಳನ್ನು ನಿವಾರಣೆಮಾಡಿದರೆ ಯಜ್ಞವೂ ಸ್ತುತಿಯೂ ರಕ್ಷಿತವಾಗುತ್ತದೆ.) || ೭ ||

ಭಾ|| (೧) ರಕ್ಷೋಗಣಾನ್ ಭಕ್ಷಯತೋ ಮುನೀಂಶ್ಚ ಸಂಪೀಡಿತಾನ್ರುದತಶ್ಚ ತ್ವಯೈವ |
ಅಯೋಧಯೋ ರಜಸೋಽಂತೇ ಸುಸತ್ವವೃದ್ಧಿರ್ಯದಾ ಜಗತಃ ಸ್ಯಾತ್ತದೈವ (೨)
ಪುಂದೋಷಾನ್ವಾ ಗುಣಭಕ್ಷಾನ್ನೃಸತ್ವವೃದ್ಧೌ (೩) ದಿವೋ ಜ್ಞಾನತೋವಾಽದಹಶ್ಚ |
ಅಜ್ಞಾನದಸ್ಯುಂ ಸ್ತುವತಃ ಸಂಸ್ತುತಿಂ ಚ ಪ್ರಾವೋ ರಕ್ಷೋ || ೭ ||

ಅ || (೧) (ಎಲೋ ಶ್ರೀ ಹರಿಯೇ) ನಿನ್ನಿಂದಲೇ ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ (ಹೇತುಗರ್ಭವಿಶೇಷಣ) ಪೀಡಿಸಿಕೊಳ್ಳಲ್ಪಟ್ಟಿರುವುದರಿಂದ) ಮರುಗುತ್ತಿರುವ, ಮುನಿಗಳನ್ನು ಭಕ್ಷಿಸುತ್ತಿರುವ, ನರ ಭಕ್ಷಕರೆಂದು ಪ್ರಸಿದ್ಧರಾದ ರಾಕ್ಷಸರ ಸಮುದಾಯಗಳನ್ನು ರಜೋಗುಣದ ಅಂತ್ಯದಲ್ಲಿ ಜಗತ್ತಿಗೆ ಚೆನ್ನಾಗಿ ಸತ್ವವೃದ್ಧಿಯು ಯಾವಾಗ ಆಗುವುದೋ, ಆವಾಗಲೇ ಯುದ್ಧಮಾಡಿರುತ್ತಿ. (ಜಗತಃ ಎಂದು ಹೇಳಿದುದರಿಂದ ಬಾಹ್ಯಸತ್ವವೆಂದು ಸೂಚಿತವಾಯ್ತು. ಆಧ್ಯಾತ್ಮಿಕಭಿನ್ನವಾಗಿ ಆಧಿಭೌತಿಕ ಆಧಿದೈವಿಕರೂಪವಾದ ಜಗತ್ತಿಗೆ ಯಾವುದು ಸತ್ವವಿದೆಯೋ ಅದು ಬಾಹ್ಯ ಸತ್ವವು) ದೇವತೆಗಳೇ ಮೊದಲಾದ ದಿವ್ಯ ಜಗತ್ತಿನಲ್ಲಿಯೂ ಭೌತಿಕಜಗತ್ತಿನಲ್ಲಿಯೂ ತಮೋಗುಣವು ವೃದ್ಧಿಯಾದಾಗ ದೈತ್ಯರಿಂದ ಜಗತ್ತಿಗೆ ಪೀಡೆಯುಂಟಾಗುತ್ತದೆ. ಸತ್ವ ಗುಣವು ವೃದ್ಧಿಯಾದಾಗ ಇಂದ್ರನು ಆ ರಾಕ್ಷಸರೊಡನೆ ಯುದ್ಧಮಾಡಿ ಅವರನ್ನು ಸಂಹರಿಸಿ ಯಜ್ಞವನ್ನೂ ರಕ್ಷಿಸುತ್ತಾನೆ.) (೨)(ಅಧ್ಯಾತ್ಮಾರ್ಥವು) ಅಥವಾ ಆನಂದಾದಿಗುಣಗಳಿಗೆ ಆಚ್ಛಾದಕಗಳಾದ ಅಜ್ಞಾನಮೊದಲಾದ ಪುರುಷದೋಷಗಳನ್ನು ಆಧ್ಯಾತ್ಮಿಕ ಸತ್ವಗುಣ ವೃದ್ಧಿಯಾಗುತ್ತಿರಲು ಯುದ್ಧ ಮಾಡಿರುತ್ತಿ. (೩) (ಬಾಹ್ಯಾರ್ಥ) ದಸ್ಯುಗಳಾದ ರಾಕ್ಷಸರನ್ನೂ ಸ್ವರ್ಗದೆಶೆಯಿಂದ ಚೆನ್ನಾಗಿ ಕೆಳಗೆ ಹಾಕುವವನಾಗಿರುತ್ತಿ. (ಅಂದರೆ ಯುದ್ಧದಲ್ಲಿ ಸಂಹರಿಸಿ ಸ್ವರ್ಗಕ್ಕಿಂತಲೂ ನಿರಾಕರಿಸುವವನಾಗಿರುತ್ತಿ.) ಅಥವಾ ಸ್ವರ್ಗಕ್ಕಿಂತ ನಿರಾಕರಿಸಿ ನರಕದಲ್ಲಿ ಹಾಕಿರುತ್ತಿ. (ಅಧ್ಯಾತ್ಮಾರ್ಥ) ಅಜ್ಞಾನಾದಿದೋಷಾಖ್ಯದಸ್ಯುಗಳನ್ನು ಜ್ಞಾನವನ್ನು ಕೊಟ್ಟು ಚೆನ್ನಾಗಿ ಸುಡುವವನಾಗಿರುತ್ತಿ. (ರಾಕ್ಷಸರನ್ನೂ ಅಜ್ಞಾನಾದಿಗಳನ್ನೂ ವಿನಾಶಗೊಳಿಸುದುದರಿಂದ ಸ್ತುತಿಸುವವರ ಚೆನ್ನಾಗಿ ಸ್ತೋತ್ರವನ್ನು (ಪ್ರ ಅವಃ) ಚೆನ್ನಾಗಿ ರಕ್ಷಿಸಿರುತ್ತಿ. (ರಾಕ್ಷಸರ ಅಜ್ಞಾನಾದಿಗಳನ್ನು ನಾಶಗೊಳಿಸಿದರೆ ಯಾಗ ಸ್ತೋತ್ರಗಳ ರಕ್ಷಣೆಯು ಹೇಗೆ ಆಗುವುದೆಂದರೆ ವಿಘ್ನಗಳನ್ನು ನಿವಾರಣೆ ಮಾಡಿದರೆ ಅವು ರಕ್ಷಿತವಾಗುವುವು) || ೭ ||

ಋ । (೪೯೧) ಚಕ್ರಾಣಾಸಃ ಪರೀಣಹಂ ಪೃಥಿವ್ಯಾ ಹಿರಣ್ಯೇನ ಮಣಿನಾ ಶುಂಭಮಾನಾಃ। ನ ಹಿನ್ವಾನಾಸಸ್ತಿತಿರುಸ್ತ ಇಂದ್ರಂ ಪರಿಸ್ಪಶೋ ಅದಧಾತ್ಸೂರ್ಯೇಣ ॥ ೮ ॥

ಅ ॥ (ಯಾವ ದೈತ್ಯಾದಿಗಳು) ಪೃಥಿವ್ಯಾಃ=ಪ್ರಥಿವಿಯಲ್ಲಿರತಕ್ಕ ಜನರ, ಪರೀಣಹಂ=(ಣಹ ಬಂಧನೇ ಸುತ್ತಮುತ್ತಲೂ ಬಂಧನವನ್ನು, ಚಕ್ರಾಣಾಸಃ=(ಡುಕೃಞ್ ಕರಣೇ) ಚೆನ್ನಾಗಿ ಮಾಡುವವರಾಗಿ (ನಿರಪರಾಧ) ರಾದಪ್ರಾಣಿಗಳನ್ನೂ, ಕಾರಾಗ್ರಹದಲ್ಲಿ (ಜೈಲಿನಲ್ಲಿ) ಹಾಕಿ ಅವರಿಂದ ಬಲಾತ್ಕಾರದಿಂದ ಅಪಹೃತವಾದ) ಹಿರಣ್ಯೇನ=ಸುವರ್ಣದಿಂದಲೂ ಮಣಿನಾ=ಮಣಿಗಳಿಂದಲೂ, ಶುಂಭಮಾನಾಃ=ಶುಭ ಶುಂಭಶೋಭಾರ್ಥೇ)ಶೋಭಿಸುವವರಾಗಿ, (ಇರುತ್ತಾರೆ) (ಅಧ್ಯಾತ್ಮಾರ್ಥ) (ಯಾವ ದೃಢ) (ಅತಿಪ್ರಬಲಗಳಾದ) (ದೋಷಗಳುಳ್ಳವರು.) ಹಿರಣ್ಯದಿಂದಲೂ ಮಣಿಗಳಿಂದಲೂ ಶೋಭಿಸುವವರಾಗಿ ಅನಾವ ಧನಗಳಿಂದ ಪ್ರಲೋಭಿಸಿ ತಮಗೆ ಆಶ್ರಯಭೂತರಾದವರನ್ನು) ವಂಚಿಸುವವರಾಗಿ ಪ್ರಥಿವಿಯಲ್ಲಿರತಕ್ಕ ಜನರಿಗೆ ಸಂಸಾರದಲ್ಲಿ ಪರಿತಃ ಬಂಧನವನ್ನೂ ಮಾಡುತ್ತಾರೆ. ಸಾಂಸಾರಿಕ ಸುಖಾದಿಗಳಲ್ಲಿಯೇ ಅತ್ಯಾಸಕ್ತರಾಗಿರುವಂತೆ ಮಾಡುತ್ತಾರೆ. ಹೀಗೆ (ಜನರನ್ನು ಸಂಸಾರದಲ್ಲಿ ಬಂಧಿಸುತ್ತಾರೆ.) ಹಾಗಾದರೆ ಅವರಿಗೆ ಈಶ್ವರನ ಭಯವು ಇದ್ದರೆ ಬಂಧನವನ್ನು ಹೇಗೆ ಮಾಡಿದ್ದೆಂದರೆ) (ಅಂತಹವರು ತಮಗೆ ಯಾರಿಂದಲೂ ಭಯವು ಇಲ್ಲವೇ ಇಲ್ಲವೆಂದು ತಿಳಿಯುವವರಾಗಿ) ಹಿನ್ವಾನಾಸಃ=ಹಿಗತೌ ವೃದ್ಧೌ ಚ) ಪರಸ್ಪರವಾಗಿ ಗಮನವನ್ನು ಮಾಡಿಸುವವರಾಗಿ, ಅಭಿವೃದ್ಧಿಗೊಳಿಸುವವರಾಗಿ ಪರಸ್ಪರ ಸಹಾಯವುಳ್ಳವರಾಗ್ಯೂ, ಪರಸ್ಪರ ಪ್ರೇರೇಪಿಸುವವರಾದಾಗ್ಯೂ, ಇಂದ್ರಂ ವಾಸುದೇವನನ್ನೂ ಕಥಂಚಿತ್(ಯಾವ ಪ್ರಕಾರದಿಂದಲೂ)ನ ತಿತಿರುಃ=ದಾಟಲೇ ಇಲ್ಲ ತೄ ಪ್ಲವನತರಣಯೋಃ) ಈಶ್ವರನನ್ನು ಮೀರಿ ಇರಲು ಅಶಕ್ತರೇ ಆಗಿರುತ್ತಾರೆ) (ತೃತೀಯ ಪಾದದ ಅಭಿಪ್ರಾಯವನ್ನೂ ಹೇಳುತ್ತಾರೆ) (ಯದ್ಯಪಿ ಅವರು ಇಲ್ಲಿ ನಿಗ್ರಹಿಸಲು ಅಶಕ್ಯರೇ ಆಗಿರುತ್ತಾರೆ. ಆದಾಗ್ಯೂ ಅವರು ಪರಲೋಕದಲ್ಲಿ ಶ್ರೀಹರಿಯಿಂದ ನಿಶ್ಚಯವಾಗಿಯೂ ದಂಡಿಸಲ್ಪಡುತ್ತಾರೆಯೇ ಸರಿ.) (ಹಾಗಾದರೆ ಅವರ ವೃತ್ತಾಂತವನ್ನೂ ಪುಣ್ಯಪಾಪಾದಿ ಕರ್ಮಗಳನ್ನೂ) ತಿಳಿದವರೇನೇ ಶಿಕ್ಷಿಸಬಹುದು ಅದೇವೇ ಶ್ರೀಹರಿಗೆ ಹೇಗೆ ತಿಳಿಯುವುದೂ ಎಂದರೆ ಶ್ರೀಹರಿಯು ಸರ್ವಜ್ಞನಾದುದರಿಂದ ತಿಳಿಯುತ್ತಾನೆ ಎಂದು ಪರಿಹಾರವಿದ್ದಾಗೂ ಸಮಾಧಾನಾಂತರವನ್ನು ಹೇಳುತ್ತಾರೆ. ಇಂದ್ರಃ=ಶ್ರೀವಾಸುದೇವನು (ಬಾಹ್ಯಾರ್ಥದಲ್ಲಿ ದೈತ್ಯರ (ಅಧ್ಯಾತ್ಮಾರ್ಥದಲ್ಲಿ) (ಅಜ್ಞಾನಾದಿಗಳ ವೃತ್ತಾಂತವನ್ನು ತಿಳಿಯುವುದಕ್ಕಾಗಿ ಪುಣ್ಯಪಾಪರೂಪಕರ್ಮಗಳನ್ನು ನೋಡುವುದಕ್ಕಾಗಿ) ಸೂರ್ಯೇಣ=ಸೂರ್ಯನಿಂದ ಕೂಡಿ. ಸೂರ್ಯನಿಂದ (ಸಹಿತರಾದ) ಸ್ಪಶಃ= (ಸ್ಪಶಬಾಧನಸ್ಪರ್ಶನಯೋಃ=) ಜನರಿಂದ ತಿಳಿಯಲ್ಪಡದಿರುವ ಚಾರರನ್ನು (ಅಂದರೆ ಯಾರಿಗೂ ತಿಳಿಯದಂತೆ ಸಂಚರಿಸುವ ದೇವತೆಗಳ ಸಮೂಹಗಳನ್ನು ಪರಿ ಅದಧಾತ್=ಪರಿತಃ ಸರ್ವತ್ರಸ್ಥಾಪಿಸಿರುವನು. ॥ ೮ ॥

ಭಾ ॥ (೧) ಬಂಧನಂ ಯೇ ಜನಾನಾಂ । ಕುರ್ವಂತಿ ಹೇಮ್ನಾ ಮಣಿಭಿಶ್ಶೋಭಮಾನಾ ದೈತ್ಯಾದಯೋ (೨) ದೃಢದೋಷಾ ಧನೈರ್ವಾ ॥ (೩) ತೇ ಪ್ರೇರಯಂತೋಽಪಿ ಪರಸ್ಪರೇಣ ನೈವಾತರನ್ವಾಸುದೇವಂ ಕಥಂಚಿತ್ ॥ (೪) ಸಹೈವ ಸೂರ್ಯೇಣ ಚರದೇವಸಂಘಾಂಶ್ಚರಾನಜ್ಞಾತಾನದಧಾದ್ವಾಸುದೇವಃ । ದೈತ್ಯಾನಾಂ ವಾ ತಮಸಾಂ ವೃತ್ತದೃಷ್ಟ್ಯೈ ॥ ೮ ॥

ಅ ॥ (೧) ಯಾವ ದೈತ್ಯರೇ ಮೊದಲಾದದರು ಪೃಥಿವಿಯಲ್ಲಿರತಕ್ಕ ಜನರ ಸುತ್ತಲೂ ಬಂಧನವನ್ನು

ಚೆನ್ನಾಗಿ ಮಾಡುತ್ತಾರೋ (ನಿರಪರಾಧಿಗಳಾದ ಜನರನ್ನು ಜೈಲಿನಲ್ಲಿಟ್ಟು ಅವರಿಂದ ಅಪಹೃತವಾದ) ಹಿರಣ್ಯದಿಂದಲೂ ಮಣಿಗಳಿಂದಲೂ, ಶೋಭಿಸುವವರಾಗಿರುತ್ತಾರೆ. (೨) (ಅಧ್ಯಾತ್ಮಾರ್ಥ.) ದೃಢ (ಪ್ರಬಲ)ವಾದ ದೋಷವುಳ್ಳವರು ಹಿರಣ್ಯ ಮೊದಲಾದ ಆಪಾತಧನಗಳಿಂದ ತಮಗೆ ಆಶ್ರಯ ಭೂತರಾದ ಜನರನ್ನೂ ಪ್ರಲೋಭಿಸುವವರಾಗಿ ಜನರನ್ನು ಸಂಸಾರದಲ್ಲಿಯೇ ಬಂಧಿಸುತ್ತಾರೆ. (೩) ಅಂತಹವರು ತಮಗೆ ಯಾರಿಂದಲೂ ಭಯವಿಲ್ಲವೆಂದು ತಿಳಿಯುವವರಾಗಿ ಪರಸ್ಪರ ಪ್ರೇರೇಪಿಸುವವರಾದಾಗ್ಯೂ ಪರಸ್ಪರ ಸಾಹಯ್ಯ ಉಳ್ಳವರಾಗಿ ಶ್ರೀ ವಾಸುದೇವನನ್ನೂ ಯಾವರೀತಿಯಿಂದಲೂ ದಾಟಲೇ ಇಲ್ಲ(ಅವನನ್ನು ತಿರಸ್ಕರಿಸಿಕೊಂಡಿರಲು ಯಾವರೀತಿಯಿಂದಲೂ ಸಾಧ್ಯವೇ ಇಲ್ಲ.) ೪|| ಶ್ರೀವಾಸುದೇವನು (ಬಾಹ್ಯಾರ್ಥದಲ್ಲಿ) ದೈತ್ಯರ (ಅಧ್ಯಾತ್ಮಾರ್ಥದಲ್ಲಿ)ಅಜ್ಞಾನಾದಿಗಳ ವೃತ್ತಾಂತವನ್ನು ತಿಳಿಯುವುದಕ್ಕಾಗಿ (ಪುಣ್ಯಪಾಪ ರೂಪ ಕರ್ಮಗಳನ್ನು ನೋಡುವುದಕ್ಕಾಗಿ) ಸೂರ್ಯನಿಂದ ಕೂಡಿರುವ, ಯಾರಿಂದಲೂ ತಿಳಿಯಲ್ಪಡದಿರುವ ಪರಿವಾರರಾದ ದೇವತೆಗಳ ಸಮೂಹಗಳನ್ನೂ ಸ್ಥಾಪಿಸಿರುವರು.

ವಿ|| (1) ಆದಿತ್ಯಚಂದ್ರಾವನಿಲೋಽನಲಶ್ಚ ದ್ಯೌರ್ಭೂಮಿರಾಪೋಹೃದಯಂ ಮನಶ್ಚ। ಅಹಶ್ಚ ರಾತ್ರಿಶ್ಚ ಉಭೇಚ ಸಂಧ್ಯೇ ಧರ್ಮಶ್ಚ ಜಾನಾತಿ ನರಸ್ಯ ವೃತ್ತಂ|| (2) ಸೂರ್ಯೋಽಗ್ನಿಃ ಖಂ ಮರುದ್ಭಾವಃ ಸೋಮಃ ಸಂಧ್ಯಾಹನೀ ದಿಶಃ। ಕಾಲಃ ಸ್ವಯಂ ಧರ್ಮ ಇತಿ ಹ್ಯೇತೇ ಧರ್ಮಸ್ಯ ಸಾಕ್ಷಿಣಃ || ಇಲ್ಲಿ ಸೂರ್ಯ ಚಂದ್ರ ಧರ್ಮ (ಯಮ)ರು ಸ್ವತಃ ದೇವತೆಗಳು. ಅನಿಲ ಮೊದಲಾದುವುಗಳಲ್ಲಿ ಆ ವಾಪ ಅಗ್ನ್ಯಾದ್ಯಭಿಮಾನಿದೇವತೆಗಳನ್ನು ಇಟ್ಟು ಕೊಳ್ಳಬೇಕು. ಹೃದಯಂ = ಬುದ್ಧಿಯು. ಮನಃ ಅಹಂಕಾರಾದಿ ವೃತ್ತಿಗಳು ನಾಲ್ಕು. || ೮ ||

ಋ|| (೩೯೨) ಪರಿ ಯದಿಂದ್ರ ರೋದಸೀ ಉಭೇ ಅಬುಭೋಜೀರ್ಮಹಿನಾ ವಿಶ್ವತಃ ಸೀಂ। ಅಮನ್ಯಮಾನಾँ ಅಭಿಮನ್ಯಮಾನೈರ್ನಿರ್ಬ್ರಹ್ಮಭಿರಧಮೋ ದಸ್ಯುಮಿಂದ್ರ || ೯ ||

ಅ|| ಇಂದ್ರ = ಇಂದ್ರನೇ, (ನೀನು) ಯತ್ = ಯಾವ ಕಾರಣದಿಂದ, ಮಹಿನಾ = ತನ್ನ ಮಹಿಮೆಯಿಂದ, ವಿಶ್ವತಃ = ಸರ್ವಕಾಲದಲ್ಲಿಯೂ, ಸೀಂ = (ಶ್ರೇಷ್ಠಾವಿಕಲ್ಪಯೋಃ ಸಂ ಸ್ಯಾತ್ಸಾಧ್ವರ್ಥ ಉಪಸರ್ಜನೇ, ಎಂಬ ಕೋಶದಿಂದ ಸಂ ಶಬ್ದವು ಸಾಧ್ವರ್ಥಕವು.) ಚೆನ್ನಾಗಿಯೇ (ಮುಖ್ಯವಾಗಿಯೇ) ರೋದಸೀ = ದ್ಯಾವಾಪೃಥಿವಿಗಳನ್ನು ಉಭೇ = ಮಿಲಿತ ಗಳಾದವುಗಳನ್ನೇ (ಏಕ ಕಾಲದಲ್ಲಿಯೇ ಪರಿ ಅಬುಭೋಜೀಃ = ಸಂಪೂರ್ಣ ಭೋಗಿಸುವವನಾಗಿರುತ್ತಿಯೋ (ಭುಜಪಾಲನಾಭ್ಯವಹಾರಯೋಃ. ಅಥವಾ ಭುಜೋಽವನೇ.) ಇಂದ್ರ = ಪರಮೈಶ್ವರ್ಯ ಸಂಪನ್ನನೇ, (ಅಕಾರಣ ದೆಶೆಯಿಂದ) (ನೀನು) ಅಮನ್ಯಮಾನಾನ್ = (ಮನ ಜ್ಞಾನೇ.) ನಿಮ್ಮನ್ನು ತಿಳಿಯದಿರುವ ದಸ್ಯೂನ್ = ದಸ್ಯುಗಳಾದ ಅಭಕ್ತರನ್ನು ಅಭಿಮನ್ಯಮಾನೈಃ ನಿನ್ನನ್ನು ತಿಳಿದಿರುವ, ಬ್ರಹ್ಮಭಿಃ = (ಬ್ರಹ್ಮಾ ವಿರಿಂಚ ದ್ವಿಜಯೋಃ ಇತಿ ವಿಶ್ವಃ। ಬ್ರಾಹ್ಮಣರಿಂದ, (ಭಕ್ತರ, ಸಮೂಹ ಗಳಿಂದ, ನಿಃ ಅಧಮಃ = ನಿರಾಕರಿಸುವವನಾಗಿರುತ್ತಿ. (ಯಾವ ಕಾರಣದಿಂದ ನೀನು ಮಹಾ ಸಮರ್ಥನಾಗಿರುತ್ತಿಯೋ, ಅದ ಕಾರಣ ನಿನ್ನ ಭಕ್ತರು ಕೂಡಾ ನಿನ್ನನ್ನು ಆಶ್ರಯಸಿಕೊಂಡು ವಿರೋಧಿಗಳನ್ನು ನಿರಾಕರಿಸುವ ವಿಷಯದಲ್ಲಿ ಸಮರ್ಥರೇ ಆಗಿರುತ್ತಾರೆ. || ೬ ||

ಭಾ|| ಪರ್ಯಭುಂಕ್ಥಾಃ ಸಹ ಯದ್ರೋದಸೀ ಚ। ಸ್ವಮಹಿಮ್ನಾ ವಿಶ್ವತಃ ಸಮ್ಯಗೇವ ತ್ವದಭಕ್ತಾನ್ನಿರಧಮೋ ಭಕ್ತಸಂಘೈಃ || ೯ ||

ಅ|| ಯಾವ ಕಾರಣದಿಂದ ತನ್ನ ಮಹಿಮೆಯಿಂದಲೇ ಸರ್ವಕಾಲದಲ್ಲಿಯೂ. ಚೆನ್ನಾಗಿಯೇ, ಸ್ವರ್ಗಭೂಮಿಗಳನ್ನು ಏಕಕಾಲದಲ್ಲಿಯೇ, ಜಚ್ಛಾಗಿ ಭೋಗಿಸುವವನಾಗಿರುತ್ತಿಯೋ, ಅದಕಾರಣ ನಿನ್ನ ಅಭಕ್ತರನ್ನು

ನಿನ್ನ ಭಕ್ತರ ಸಮೂಹಗಳಿಂದ ನಿರಾಕರಿಸುವವನಾಗಿರುತ್ತಿ.)ಇಲ್ಲಿ ಒಂದು ಇಂದ್ರ ಶಬ್ದವು ಸಾಂಕೇತಿಕವು.ಇನ್ನೊಂದು ಶಬ್ದವು ಪರಮೈಶ್ವರ್ಯ ವಾಚಕವು.ಅಥವಾ ಇಂದ್ರ ಇಂದ್ರ ಎಂದು ಆದರಾತ್ ದ್ವಿರ್ವಚನವು) ॥೯॥

ಮಂ॥ (೩೯೩) ನಯೇ ದಿವಃ ಪೃಥಿವ್ಯಾ ಅಂತಮಾಪುರ್ನ ಮಾಯಾಭಿ
ರ್ಧನದಾಂ ಪರ್ಯಭೂವನ್। ಯುಜಂ ವಜ್ರಂ ವೃಷಭಶ್ಚಕ್ರ
ಇಂದ್ರೋ ನಿರ್ಜ್ಯೋತಿಷಾ ತಮಸೋ ಗಾ ಅದುಕ್ಷತ್ ॥೧೦॥೨॥

ಅ॥ಯೇ=ಯಾವ ದಸ್ಯುಗಳಾದ ದೈತ್ಯರು (ತಮ್ಮ ಕಪಟಗಳಿಂದಲೇ ಸ್ವರ್ಗ ಭೂಸಂಬಂಧಿಗಳಾದ ಸಮಸ್ತ ಭೋಗಗಳನ್ನು ಇಚ್ಛಿಸುತ್ತಾ ಇಂದ್ರನನ್ನು ಗೆಲ್ಲಲಿಚ್ಛಿಸುತ್ತಾರೋ, ಅಂತಹ ದೈತ್ಯರು) ದಿವಃ=ಸ್ವರ್ಗದ ಪೃಥಿವ್ಯಾಃ=ಮತ್ತು ಭೂಲೋಕದ, ಅಂತಂ=ಏಕದೇಶವನ್ನೂ ಕೂಡ, ನ ಆಪುಃ=ಹೊಂದಲಿಲ್ಲ. ಮಾಯಾಭಿಃ=ಛದ್ಮ (ಕಪಟ) ಗಳಿಂದಲೂ ಕೂಡ ಧನದಾಂ=ಧನವನ್ನು ಕೊಡತಕ್ಕ ಇಂದ್ರನನ್ನು ನಪರ್ಯಭೂವನ್=ಗೆಲ್ಲಲಿಲ್ಲ. (ಹಾಗಾದರೆ ಇತರರ ಸಹಾಯವುಳ್ಳವನಾಗಿ ಒಬ್ಬನಿಂದಲೂ ಪರಾಜಿತನಾಗಲಿಲ್ಲವೋ ಏನು? ಅನ್ನಲನ್ನುತ್ತಾರೆ.) ವೃಷಭಃ=ಭಕ್ತರಿಗೆ ಅಭೀಷ್ಟದಾಯಕನು, ಶ್ರೇಷ್ಠನೂ ಆದ ಇಂದ್ರನು (ದಸ್ಯುಗಳಾದ ದೈತ್ಯರನ್ನು ಸಂಹರಿಸುವುದಕ್ಕಾಗಿ) ವಜ್ರಂ=ತನ್ನ ವಜ್ರಾಯುಧವನ್ನೇ (ವಿಷ್ಣು ಪಕ್ಷದಲ್ಲಿ) ವಜ್ರಂ ವಿಷ್ಣುಜ್ಞಾನವನ್ನೇ, ಯುಜಂ=ಯುಕ್ತವನ್ನಾಗಿ, ಚಕ್ರೇ=ಮಾಡಿದನು ಮತ್ತು ಇಂದ್ರಃ=ಶ್ರೀಹರಿಯು ಜ್ಯೋತಿಷಾ=ತನ್ನ ಪ್ರಭಾವದಿಂದ ಗಾಃ=ಗೋವುಗಳನ್ನು ತಮಸಃ=ಪರ್ವತದಗುಹೆಯ ಅಂಧಕಾರ ದೇಶದಿಂದ ನಿಃಅದುಕ್ಷತ್=(ದುಹ ಪ್ರಪೂರಣೇ)ಹೊರಪಡಿಸಿ ಪೂರ್ಣೀಕರಿಸಿದನು. (ಶ್ರೀ ವಿಷ್ಣುಪಕ್ಷದಲ್ಲಿ)ನಿಃ ನಿಶ್ಚಯ ರೂಪವಾದ ಜ್ಯೋತಿಷಾ=ಯಥಾರ್ಥ ಜ್ಞಾನದಿಂದ, (ಅಂದರೆ-ಸ್ವಾಭಾವಿಕವಾದ ನಿಶ್ಚಯಾತ್ಮಕವಾದ ಜ್ಞಾನವನ್ನು ಹುಟ್ಟಿಸಿ) ಗಾಃ=ಜ್ಞಾನಗಳನ್ನು (ತಮಸಃ ಎಂಬ ವಚನ ಸಾಮರ್ಥ್ಯದಿಂದ ಭಕ್ತರಹೃದಯದಲ್ಲಿರುವ ತಮಸ್ಸಿನಿಂದ (ಅಜ್ಞಾನದಿಂದ ಗುಪ್ತಗಳಾದವುಗಳನ್ನು) ಅದುಕ್ಷತ್=ಪೂರ್ಣೀಕರಿಸಿದನು. (ಅಂದರೆ ಆವರಣವನ್ನು ನಿರಾಕರಿಸಿ ವ್ಯಕ್ತಗಳನ್ನಾಗಿ ಮಾಡಿದನು.)

ಭಾ (೧) ಯೇ ದಸ್ಯವೋ ದ್ಯುಪೃಥಿವ್ಯೋರಶೇಷ ಭೋಗೇಚ್ಛವೋ ಧನದಂ ಚೇಶ್ವರಂ ತಂ॥
ಜಿಗೀಷವಃ ಸ್ವೀಯಮಾಯಾಭಿರೇವ ನೈವೋದಾಪುರ್ದ್ವಯಮೇತಕ್ಕದಾಚಿತ್
(೨) ಯುಕ್ತಂ ಜ್ಞಾನಂ ವಜ್ರಮೇವಾಯುಧಂ ವಾ ದಸ್ಯೂನ್ ಹಂತುಂ ಕೃತವಾನ್
ದೇವದೇವಃ। (೩) ನಿಜೇನೈವ ಜ್ಯೋತಿಷಾ ಭಕ್ತಹೃದ್ಗತಮೋಗೂಢಾನ್ಯದುಕ್ಷನ್ನಿ
ಶ್ಚಯೇನ। ಜ್ಞಾನಾನಿ ವಿಷ್ಣುರ್ಯದಜ್ಞಾನಮುಗ್ರಂ ॥ ೧೦ ॥ ॥೧೦॥೨॥

ಅ॥ (೧) (ಯೇ ಎನ್ನುವುದಕ್ಕಿಂತ ಮೇಲೆ ಅಧ್ಯಾಹಾರಮಾಡಲುಯೋಗ್ಯವಾದ ಪದಗಳನ್ನು ಸೇರಿಸಿ ಶ್ರುತಿಸಿದ್ಧವಾದ ತೇ ಎನ್ನುವುದರಿಂದ ಅನ್ವಿತವಾಗಿ ವ್ಯಾಖ್ಯಾನ ಮಾಡುತ್ತಾರೆ.) ಯಾವ ದಸ್ಯುಗಳಾದ ದೈತ್ಯರು ತಮ್ಮ ಕಪಟಗಳಿಂದಲೇ ಸ್ವರ್ಗಭೂಸಂಬಂಧಿಗಳಾದ ಸಮಸ್ತಭೋಗಗಳನ್ನು ಇಚ್ಛಿಸುವವರಾಗಿ ಧನವನ್ನು ಕೊಡುವ ಸರ್ವೇಶ್ವರನಾದ ಶ್ರೀಹರಿಯನ್ನು ಗೆಲ್ಲಲಿಚ್ಛಿಸುತ್ತಾರೋ ಅಂತಹವರು ಯಾವಾಗಲೂ ಈ ಎರಡನ್ನು (ಅಂದರೆ ಸ್ವರ್ಗಭೂಮಿಗಳ ಏಕದೇಶವನ್ನು) ಹೊಂದಲೇ ಇಲ್ಲ. (೨) ದೇವತೆಗಳಿಗೆ ಸ್ವಾಮಿಯಾದಶ್ರೀಹರಿಯು ದಸ್ಯುಗಳಾದ ದೈತ್ಯರನ್ನು ಕೊಲ್ಲುವುದಕ್ಕಾಗಿ ವಿಷ್ಣುಜ್ಞಾನವನ್ನೇ ವಜ್ರಾಯುಧವನ್ನೇ ಯುಕ್ತವನ್ನಾಗಿ ಮಾಡಿದನು. (೩) ಮತ್ತು ಶ್ರೀಹರಿಯು ತನ್ನ ಪ್ರಭಾವದಿಂದಲೇ ಅಂದರೆ ಸ್ವವಿಷಯ

ಕವಾದ ನಿಶ್ಚಯಾತ್ಮಕವಾದ ಜ್ಞಾನವನ್ನುಂಟುಮಾಡಿ ಜ್ಞಾನಗಳು ಭಕ್ತರ ಹೃದಯದಲ್ಲಿರತಕ್ಕ ತಮಸ್ಸಿನಿಂದ ಆಚ್ಛಾದಿತಗಳಾಗಿವೆ. ಆದ ಕಾರಣ ಆವರಣವನ್ನು ನಿರಾಕರಿಸಿ ವ್ಯಕ್ತಗಳನ್ನಾಗಿ ಮಾಡಿದನು.

(ಹಾಗಾದರೆ ತಮಸ್ಸೆಂದರೆ ಜ್ಞಾನಾಭಾವವು. ಅದು ಜ್ಞಾನಗಳನ್ನು ಹೇಗೆ ಆಚ್ಛಾದಿಸೀತು. ಜ್ಞಾನಾಭಾವವು ಜ್ಞಾನಕ್ಕೆ ಆಚ್ಛಾದಕವಾಗುವುದಾದರೆ ಜ್ಞಾನನಿವರ್ತ್ಯತ್ವವು ಬಾರದೆಹೋಗುವುದು. ಆಚ್ಛಾದ್ಯವು ಆಚ್ಛಾದಕವನ್ನು ನಿವರ್ತಿಸುತ್ತದೆ ಎನ್ನುವುದು ದೃಷ್ಟವಾಗಲಿಲ್ಲ. ಆದ ಕಾರಣ ಜ್ಞಾನದಿಂದ ಹೇಗೆ ನಿವೃತ್ತವಾಗುವುದು ಎಂದರೆ) ಯಾವುದು ಕ್ರೂರವಾದ ಮೂಲ ಅವಿದ್ಯೆಯೆಂದು ಹೆಸರುಳ್ಳ ಭಾವರೂಪವಾದ ಅಜ್ಞಾನವಿದೆಯೋ, (ಅದೇ ಇಲ್ಲಿ ತಮಶ್ಶಬ್ದದಿಂದ ವಿವಕ್ಷಿತವು. ಅದು ಅಜೇ ದ್ವೇ ಪ್ರಕೃತಿ ದುಷ್ಟೇ ನೃಣಾಂ ಪ್ರಾತಿಸ್ವಿಕಂ ಸ್ಥಿತೇ|ಸ್ವಗುಣಾಚ್ಛಾದಿಕಾ ತ್ವೇಕಾ ಇತ್ಯಾದಿ ಪ್ರಮಾಣಗಳಿಂದ ಸ್ವರೂಪ ಜ್ಞಾನವನ್ನು ಆವರಿಸುತ್ತದೆ. ಭಿದ್ಯತೇ ಹೃದಯಗ್ರಂಥಿಃ ಇತ್ಯಾದಿ ಪ್ರಮಾಣಗಳಿಂದ ಪ್ರಮಾಣ ಜ್ಞಾನದಿಂದ ನಿವರ್ತ್ಯವೂ ಆಗಿದೆ. ॥೧೦॥

ಋ ॥ (೩೯೪) ಅನು ಸ್ವಧಾಮಕ್ಷರನ್ನಾಪೋ ಅಸ್ಯಾವರ್ಧತ ಮಧ್ಯ ಆ ನಾ

ವ್ಯಾನಾಂ । ಸಧ್ರೀಚೀನೇನ ಮನಸಾ ತಮಿಂದ್ರ ಓಜಿಷ್ಠೇನ ಹನ್ಮನಾಹ

ನ್ನಭಿದ್ಯೂನ್ ॥ ॥೧೧॥

ಅ ॥ ಯಸ್ಯ ಅಸ್ಯ=ಯಾವ ಈ ಇಂದ್ರನ, ಆಪಃ=ಕರ್ಮಗಳು, ಸ್ವಧಾಂ=(ಸ್ವತಃ=ಸ್ವಭಾವದಿಂದಲೇ, ಧೀಯತೇ=ಧರಿಸಲ್ಪಡುತ್ತದೆ. ಸ್ರಕ್ ಚಂದನಾದಿಗಳಂತೆ ಸುಖೋದ್ರೇಕದಿಂದ ಅಲ್ಲ. ಸ್ವತ ಉಪಪದಾತ್ ಡುಧಾಞ ಧಾರಣೇ ಸೌಖ್ಯವನ್ನೇ, ಅನು ಅಕ್ಷರನ್=(ಕ್ಷರ ಸಂಚಲನೇ) ನಿರಂತರದಲ್ಲಿಯೂ, ದಾನಮಾಡಿದವೋ, (ಯಾರ ವ್ಯಾಪಾರ ಜ್ಞಾನಾದಿಗಳಿಂದ ಪರಮಾನಂದವು ಪ್ರಾಪ್ತವಾಗುತ್ತದೋ, ಅಂತಹ ಪರಮೈಶ್ವರ್ಯ ಸಂಪನ್ನನಾದ ಶ್ರೀಹರಿಯೋ (ತನ್ನ ಚರಿತ್ರೆಯನ್ನು ತಿಳಿದವನಿಗೆ ಮೋಕ್ಷವನ್ನು ಕೊಡುವವನು (ಯಾವುದು ಅಯಥಾರ್ಥಜ್ಞಾನರೂಪವಾದುದು ಮೋಕ್ಷಕ್ಕೆ ವಿರೋಧಿಯಾದುದು) ನಾವ್ಯಾನಾಂ=ಸಂಸಾರಕ್ಕೆ ದೋಣಿಯಂತಿರುವ, ಅಂದರೆ ಸಂಸಾರ ಸಾಗರವನ್ನು ದಾಟಲಿಕ್ಕೆ ಉಪಾಯ ಭೂತಗಳಾದ ವೇದ ವಚನಗಳ ಮಧ್ಯೇ=ಮಧ್ಯದಲ್ಲಿ, ಅವರ್ಧತ=ಬೆಳೆಯಿತೋ (ಅಂದರೆ ಮಿಥ್ಯಾಜ್ಞಾನವೂ ಅನ್ಯಥಾ ಜ್ಞಾತವಾದ ವೇದದಿಂದುಂಟಾಗುತ್ತದೋ,) ತಂ=ಅಂತಹದನ್ನು ಇಂದ್ರಃ=ಪರಮೈಶ್ವರ್ಯ ಸಂಪನ್ನನಾದ ಶ್ರೀಹರಿಯು, ಓಜಿಷ್ಠೇನ=ವೀರ್ಯವತ್ತಾದ, ಹನ್ಮನಾ=ಹತಿರೂಪವಾದ (ಹತಿಂ=ಹನನವನ್ನು ರೂಪಯತಿ=ಮಾಡುತ್ತಿದೆ. ಅನರ್ಥವಾದ ದುಃಖಾದಿಗಳಿಗೆ ನಾಶಕವಾದ, ಸಧ್ರೀಚೀನೇನ ಮನಸಾ=ಸಮೀಚೀನವಾದ ಜ್ಞಾನದಿಂದ, ಅಭಿದ್ಯೂನ್ (ಅಭಿತಃ ದ್ಯೋಃ ಯೇಷಾಂ) ಸರ್ವತ್ರ ಪ್ರಕಾಶವು (ಪ್ರಸಿದ್ಧಿಯು) ಯಾವ ಪುರುಷಾರ್ಥಗಳಿಗೆ ಇದೆಯೋ ಅಂತಹ ಆನಂದಾದಿ ಪುರುಷಾರ್ಥಗಳನ್ನುದ್ದೇಶಿಸಿ,(ಮೋಕ್ಷ ಪ್ರಕಾಶಕ್ಕಾಗಿ) (ಮೋಕ್ಷ ಪ್ರಾಪ್ತಿಗಾಗಿ ಆ=ಚೆನ್ನಾಗಿ, ಅಹನ್=ಸಂಹರಿಸಿದನು. (ಆನಂದಾದಿ ಪುರುಷಾರ್ಥಗಳಿಗೆ ಪ್ರಸಿದ್ಧಿಯೆಂದರೆ ಚೆನ್ನಾಗಿ ಅನುಭವವು. (ರೂಢವಾದ ಮೋಕ್ಷ ಎಂಬ ಪದವನ್ನು ಬಿಟ್ಟು ಅಭಿದ್ಯೂನ್ ಎಂದು ಯೌಗಿಕ ಪದವನ್ನು ತೆಗೆದುಕೊಳ್ಳಲಿಕ್ಕೆ ಪ್ರಯೋಜನ ಹೇಳುತ್ತಾರೆ. ಜ್ಞಾನ ಆನಂದಾದಿ ರೂಪವಾದ ಮೋಕ್ಷವು (ಅವಿದ್ಯಾ ನಿವೃತ್ತಿ ರೂಪವಾದುದು ಅಲ್ಲ.)(ನಿತ್ಯ ಸಿದ್ಧವಾದ ಪ್ರಯುಕ್ತ ಪ್ರಕಾಶವೇ ಮೋಕ್ಷ ಪ್ರಾಪ್ತಿಯು ಎಂದುಕ್ತವಾಯ್ತು.) (ಇಂದ್ರ ಪಕ್ಷದಲ್ಲಿ) ನಾವ್ಯಾನಾಂ= ದೋಣಿಯಿಂದ ದಾಟಲರ್ಹಗಳಾದ ಆಗಾಧಗಳಾದ ಜಲಗಳ ಮಧ್ಯದಲ್ಲಿ ಯಾವನು ಬೆಳೆದಿರುವನೋ ಅಂತಹ ಜಲಗಳ ಮಧ್ಯದಲ್ಲಿ ಅಭಿವೃದ್ಧನಾದ ಅಹಿದೈತ್ಯನನ್ನು ಸಂಹರಿಸಿದನು. ಹಾಗೆಯೇ ಸಧ್ರೀಚೀನೇನ ಮನಸಾ= ನಿರ್ಭಯವಾದ ಹೃದಯದಿಂದ, ಹನ್ಮನಾ= ಆಯುಧ ವಿಶೇಷದಿಂದ, ಯುದ್ಧದಿಂದಲೂ, ಅಭಿದ್ಯೂನ್= ಸರ್ವತ್ರ ಪ್ರಕಾಶವುಳ್ಳ ದೇವತೆಗಳನ್ನು.(ಬೇರೆಯೆಲ್ಲವೂ ಹಿಂದಿನಂತೆ.) ॥೧೧॥

ಭಾ॥ (1) ಯಸ್ಯ ಕರ್ಮಾಣ್ಯಕ್ಷರನ್ ಸೌಖ್ಯಮೇವ, (2)ಯೋ ವೇದವಾಚಾಂ ಸೃತಿನಾವಾತ್ಮಕಾನಾಂ ಮಧ್ಯೇಽವರ್ಧದಯಥಾಜ್ಞಾನರೂಪಃ। ಸಮೀಚೀನಜ್ಞಾನತೋ ಹಂಸ್ತಮಿಶ ಓಜಿಷ್ಠೇನ ಹತಿ ರೂಪೇಣ ಸಮ್ಯಕ್‌ಮೋಕ್ಷ ಪ್ರಕಾಶಾರ್ಥ (3) ಮಥಾಪಿ ನಾವಾತರಣೀಯಾನಾಂ ಮಧ್ಯತೋಽಪಾಂ ವೃಧಂ ತಂ॥ ಅಹಿಂವಾ ॥ ೧೧ ॥

ಅ॥ (1) (ಯಸ್ಯ ಎಂದು ಅಧ್ಯಾಹಾರ ಮಾಡದಿದ್ದರೆ ಅಸ್ಯ ಕರ್ಮಾಣಿ ಸೌಖ್ಯಮೇವಾಕ್ಷರನ್=ಇವನ ಕರ್ಮಗಳು ಸೌಖ್ಯವನ್ನೇ ಕೊಟ್ಟವು, ಎಂದು ಒಂದು ವಾಕ್ಯವು. ಯೋಽವರ್ಧತ ತಮಿಂದ್ರ ಅಹನ್= ಯಾವನು ಬೆಳೆದಿರುತ್ತಾನೋ ಅತನನ್ನು ಇಂದ್ರನು ಸಂಹರಿಸಿದನು, ಎಂದು ಇನ್ನೊಂದು ವಾಕ್ಯವು. ಹೀಗೆ ವಾಕ್ಯಭೇದವು ಬರುವುದು. ಯಸ್ಯ ಎಂದು ಅಧ್ಯಾಹಾರ ಮಾಡಿದರೆ ಯಾವ ಇಂದ್ರನ ಕರ್ಮಗಳು ಸುಖವನ್ನು ಕೊಟ್ಟಿರುತ್ತಾವೋ ಅಂತಹ ಇಂದ್ರನು ಎಂದು ಒಂದುವಾಕ್ಯವಾಗುವುದು, ಹೀಗೆ ಏಕವಾಕ್ಯತ್ವವು ಸಿದ್ಧಿಸುವುದಕ್ಕಾಗಿ ಯತ್‌ಶಬ್ದವನ್ನು ಅಧ್ಯಾಹಾರಮಾಡಿಕೊಂಡು ವ್ಯಾಖ್ಯಾನ ಮಾಡುತ್ತಾರೆ.) ಯಾವ ಇಂದ್ರನ ಕರ್ಮಗಳು ಸೌಖ್ಯವನ್ನೇ ನಿರಂತರದಲ್ಲಿಯೂ ಕೊಟ್ಟಿರುತ್ತಾವೋ. (ಅಂದರೆ ಯಾವ ಶ್ರೀಹರಿಯ ಚರಿತ್ರೆಗಳ ಜ್ಞಾನಾದಿಗಳಿಂದ ಪರಮಾನಂದ ಪ್ರಾಪ್ತಿ ರೂಪವಾದ ಮೋಕ್ಷವಾಗುತ್ತದೋ ಅಂತಹ ಶ್ರೀಹರಿಯು ತನ್ನ ಚರಿತ್ರೆಗಳನ್ನು ತಿಳಿದವನಿಗೆ ಮೋಕ್ಷವನ್ನು ಕೊಡುತ್ತಾನೆ)(2)ಯಾವುದು ಅನ್ಯಥಾಜ್ಞಾನರೂಪವಾದುದು ಮೋಕ್ಷಕ್ಕೆ ವಿರೋಧಿಯಾದುದು ಸಂಸಾರಸಾಗರವನ್ನು ದಾಟಲಿಕ್ಕೆ ಉಪಾಯ ಭೂತಗಳಾದ ವೇದವಚನಗಳ ಮಧ್ಯದಲ್ಲಿ ಬೆಳೆಯಿತೋ,(ಮಿಥ್ಯಾಜ್ಞಾನವೂ ಕೂಡ ಅನ್ಯಥಾ ತಿಳಿದವೇದದಿಂದಲೇ ಉಂಟಾಗುತ್ತದೋ,)ಅಂತಹಮೋಕ್ಷಕ್ಕೆ ವಿರೋಧಿಯಾದುದನ್ನು ವೀರ್ಯವತ್ತಾದ ಅನರ್ಥವಾದ ದುಃಖಾದಿಗಳಿಗೆ ನಾಶಕವಾದ ಯಥಾರ್ಥವಾದ ಜ್ಞಾನದಿಂದ ಮೋಕ್ಷಪ್ರಾಪ್ತಿಗಾಗಿ ಚೆನ್ನಾಗಿ ಸಂಹರಿಸಿದನು (3)ಅದಾಗ್ಯೂ (ಪ್ರಸಿದ್ಧ ಇಂದ್ರ ಪಕ್ಷದಲ್ಲಿ) ದೋಣಿಯಿಂದ ದಾಟಲರ್ಹಗಳಾದ ಅಗಾಧಗಳಾದ ಜಲಗಳ ಮಧ್ಯದಲ್ಲಿ ಅಭಿವೃದ್ಧನಾದ ಆ ಅಹಿನಾಮಕ ದೈತ್ಯನನ್ನು ಸಂಹರಿಸಿದನು॥ ೧೧ ॥

ಋ॥ (೩೯ಜ.) ನ್ಯಾವಿಧ್ಯದಿಲೀಬಿಶಸ್ಯ ದೃಹ್ಲಾ ವಿಶೃಂಗಿಣಮಭಿನಚ್ಛುಷ್ಣಮಿಂದ್ರಃ। ಯಾವತ್ತರೋ ಮಘವನ್ಯಾವದೋಜೋ ವಜ್ರೇಣ ಶತ್ರುಮವಧೀಃ ಪೃತನ್ಯುಂ ॥ ೧೨ ॥

ಅ॥ ಇಂದ್ರಃ=ಪ್ರಸಿದ್ಧ ಇಂದ್ರನು, ಇಲೀಬಿಶಸ್ಯ= (ಇಲಾ =ಭೂಮಿಯು, ಏಷಾಮಸ್ತ್ಯಾಶ್ರಯತ್ವೇನ=ಇವರಿಗೆ ಆಶ್ರಯವಾಗಿದೆ, ಏವಂಭೂತಾಃ, ಇಳಿನಃ=ಭೂಮಿಯಲ್ಲಿರತಕ್ಕ ಮನುಷ್ಯರು, ಇಳಿನಃ ವಿಶತೀತಿ=ಆ ಮನುಷ್ಯರನ್ನು ಪ್ರವೇಶಿಸುತ್ತಾನೆ) ಇಳೀ ವಿಶ ಎಂಬ ಅಸುರನಿಗೆ, ದೃಹ್ಲಾ=ದೃಢಗಳಾದ ಯಾವ ಬಲಾದಿಗಳು ಇವೆಯೋ, (ಅವುಗಳನ್ನು) ನಿಅವಿಧ್ಯತ್=ವಿನಾಶಗೊಳಿಸಿದನು. (ಶ್ರೀ ವಿಷ್ಣುವಾದರೆ) ಇಳೀವಿಶಸ್ಯ=ಮನುಷ್ಯರಲ್ಲಿರತಕ್ಕ ಅಜ್ಞಾನಾದಿಗಳ (ಬಲಾದಿಗಳನ್ನು) ನಿ ಅವಿಧ್ಯತ್=ನಾಶಗೊಳಿಸಿದನು. (ವೃಥತಾಪರ್ವೇ) (ಮತ್ತೂ) ಇಂದ್ರಃ=ಪ್ರಸಿದ್ಧನಾದ ಇಂದ್ರನು, ಶುಷ್ಣಂ=ಶೋಷಕನಾದ, (ಜನರಿಗೆ ದುಃಖಕ್ಕೆಕಾರಣನಾದ,) ಶೃಂಗಿಣಂ=ವೃಷರೂಪನಾದ ದೈತ್ಯನನ್ನು ವಿ ಅಭಿನತ್=ಸಂಹರಿಸಿದನು.(ವಿಷ್ಣುವಾದರೆ) ಶೃಂಗಿಣಂ=ಕಾಮನನ್ನು, ವಿ ಅಭಿನತ್=ಸಂಹರಿಸಿದನು.(ಕಾಮಾತುರರಾದವರು ಕೂಡ ಒಣಗುತ್ತಾರೆ. ಆದಕಾರಣ ಆ ದೈತ್ಯನೂ ಕೂಡ ಶೋಷಕನು,ದೊಡ್ಡ ಎತ್ತಿನಂತೆ ನಿಗ್ರಹಿಸಲಶಕ್ಯನು. ಮತ್ತು ಶೃಂಗವುಳ್ಳವನು.(ಪರೋಕ್ಷವಾಗಿಯೂ ಸ್ತುತಿಸಿ ಅಪರೋಕ್ಷವಾಗಿಯೂ,ಸುತ್ತಿಸುತ್ತಾರೆ.) ಮಘವನ್=ಇಂದ್ರನೇ, ಯಾವತ್ತರಃ=ನಿನಗೆ ಎಷ್ಟು ವೇಗವಿದೆಯೋ, ಅಷ್ಟುವೇಗದಿಂದ, ಯಾವತ್ ಓಜಃ=ಎಷ್ಟು ಶಕ್ತಿಯಿದೆಯೋ, ಎಷ್ಟುಪರಾಕ್ರಮವಿದೆಯೊ

ಅಷ್ಟರಿಂದ,ಪೃತನ್ಯುಂ=ಇನ್ನೊಬ್ಬ ಯುದ್ಧ ಮಾಡತಕ್ಕ ಶತ್ರುವನ್ನು, ವಜ್ರೇಣ=ವಜ್ರಾಯುಧದಿಂದ, ಅವಧೀಃ= ಸಂಹರಿಸಿರುತ್ತಿ. ವಜ್ರೇಣ ಸುಜ್ಞಾನದಿಂದ, ಸಂಹರಿಸಿರುತ್ತಿ. ॥ ೧೨ ॥

ಭಾ ॥(1) ಇಳಿನೋ ಭೂಸ್ಥಿತಾಃ ಸ್ಯುಸ್ತತ್ರಪ್ರವಿಶನ್ನ ಸುರೋ ನಾಮ ತಸ್ಯ। ಇಳೀವಿಶಸ್ತಸ್ಯ (2) ದೃಢಾನಿ ಯಾನಿ ಬಲಾದೀನಿ ವ್ಯಹನಸ್ತಾನಿ ದೇವ॥ ತಮಸೋ ವಾ (3) ಶೃಂಗಿಣಂ ಶೋಷಕಂ ಚ ವೃಷರೂಪಂ ದೈತ್ಯಮಾಹನ್ನಥೋ ವಾ। ಕಾಮಂ (4) ಯಾವಚ್ಛಕ್ತಿತೋ ವಿಕ್ರಮಾದ್ವಾ ವೇಗೇನ ವಾ ಶತ್ರುಮಥೋ ಪೃತನ್ಯುಂ। ಜಘಂಥ ವಜ್ರೇಣ ಸುಬೋಧತೋ ವಾ ನ (5) ಶಕ್ತಿ ಸಾಮಸ್ತ್ಯಮಿಹೋದಿತಂ ಹರೇಃ (6) ಅನಂತಶಕ್ತಿರ್ಹಿ ಹರಿಃ ಸದೈವ ಕುತ ಏವ ಶತ್ರುಸ್ತದಮುಷ್ಯ ಕೋಽಪಿ॥ (7) ಅತೋ ಯಥಾ ಶಕ್ತ್ಯಭಿಯುಧ್ಯಮಾನಂ ಶತ್ರುಂ ಜಘಂಥೇತಿ ಮಹಾನಿಹಾರ್ಥಃ ॥ ೧೨ ॥

ಅ ॥ (1) ಭೂಮಿಯಲ್ಲಿರತಕ್ಕ ಮನುಷ್ಯರು ಇಲಿನಃ ಎನಿಸುತ್ತಾರೆ.(ಇಲಾ=ಭೂಮಿಯು ಅಸ್ತಿ ಏಷಾ ಮಾಶ್ರಯಃ ಮನುಷ್ಯರಿಗೆ ಭೂಮಿಯು ಆಶ್ರಯವಾಗಿದೆ.) ಆ ಮನುಷ್ಯರಲ್ಲಿ ಪ್ರವೇಶ ಮಾಡಿಕೊಂಡಿರುವವನು ಯಾವ ಅಸುರನೋ, ಆ ಅಸುರನಿಗೆ, ಇಳೀಬಿಶಃ=ಇಲಿಬಿಶಃ ಎಂದು ಹೆಸರು. (ಇಲಿನಃವಿಶತೀತಿ ಇಲಿಬಿಶಃ) (೨)ಇಂದ್ರನು ಇಲಿಬಿಶ ಅಸುರನ ಅತಿ ದೃಢಗಳಾದ ಯಾವ ಬಲಾದಿಗಳಿವೆಯೋ ಅವುಗಳನ್ನುನಾಶಗೊಳಿಸಿದನು. ಸಾಕ್ಷಾದ್ವಿಷ್ಣುವು (ಇಲಿನಃ=ಭೂಮಿಯಲ್ಲಿರುವ ಮನುಷ್ಯರನ್ನು ವಿಶತಿ=ಅಜ್ಞಾನವೂ ಪ್ರವೇಶಿಸುತ್ತದೆ, ಇತಿ) ಅಜ್ಞಾನದ ದೃಢಗಳಾದ ಬಲಾದಿಗಳನ್ನು ನಾಶಗೊಳಿಸಿದನು. (೩) ಇಂದ್ರನು ಜನರಿಗ ದುಃಖಕ್ಕೆ ಕಾರಣ ನಾದ ಶೃಂಗಿಣಂ=ವೃಷ ರೂಪನಾದ ದೈತ್ಯನನ್ನು ಸಂಹರಿಸಿದನು. (ಅಧ್ಯಾತ್ಮದಲ್ಲಿ) ಶ್ರೀ ವಿಷ್ಣುವು ಕಾಮವನ್ನು ಸಂಹರಿಸಿದನು. (ಕಾಮಾತುರರಾದವರೂ ಕೂಡ ಒಣಗುತ್ತಾರೆ. ಆ ಕಾರಣ ಕಾಮವೂ ಕೂಡ ಶೋಷಕ ವಾದುದರಿಂದ ಶುಷ್ಣ ಶಬ್ದ ವಾಚ್ಯವು. ಕಾಮವೂ ಕೂಡ ವೃಷಭದಂತೆ ನಿಗ್ರಹಿಸಲಶಕ್ಯವು.ಶೃಂಗೀ ಎನಿಸುತ್ತದೆ) ಅಮುಖ್ಯ ವೃತ್ತಿಯಿಂದ ಶೃಂಗಿ ಶಬ್ದವು ಕಾಮ ಪ್ರತಿಪಾದಕವು.) (4) ಇಂದ್ರಃನ್ಯವಿಧ್ಯತ್ ಎಂದು ಪರೋಕ್ಷ ವಾಗಿ ಸ್ತುತಿಸಿ ಅವಧೀಃ ಎಂದು ಅಪರೋಕ್ಷವಾಗಿ ಸ್ತುತಿಸುತ್ತಾರೆ.ಎಲೋ ಇಂದ್ರನೇ ನಿನಗೆ ಎಷ್ಟು ವೇಗವಿದೆಯೋ ಅಷ್ಟು ವೇಗದಿಂದ, ಎಷ್ಟು ಶಕ್ತಿಯಿದೆಯೋ ಅಷ್ಟು ಸಮಸ್ತ ಶಕ್ತಿಯಿಂದ(ಶಕ್ತಿ=ಶಾರೀರ ಬಲವು) ತನಗೆ ಇರತಕ್ಕ ಪರಾಕ್ರಮದಿಂದಲಾಗಲೀ, (ವಿಕ್ರಮ=ಜಗತ್ತನ್ನು ವಶೀಕರಿಸುವ ಸಾಮರ್ಥ್ಯದಿಂದ) ಯುದ್ಧ ಮಾಡತಕ್ಕ ಇತರ ಶತ್ರುವನ್ನೂ ಕೂಡ ವಜ್ರಾಯುಧದಿಂದ ಸಂಹರಿಸಿರುತ್ತಿ.(ವಿಷ್ಣು ಪಕ್ಷದಲ್ಲಿ) ಎಲೋ ಶ್ರೀ ವಿಷ್ಣುವೇ ನಿನಗೆ ಎಲ್ಲಿ ವಿಷ್ಣುವೇಗವಾವಶ್ಯಕವೋ ಅಂತಹ ವೇಗದಿಂದ, ಎಷ್ಟು ಶಕ್ತಿ ಅವಶ್ಯಕವೋ ಅಂತಹ ಶಕ್ತಿಯಿಂದ ಎಲ್ಲಿ ಎಷ್ಟು ವೀರ್ಯವಾವಶ್ಯಕವೋ. ಅಂತಹ ವೀರ್ಯದಿಂದ ಕ್ರೋಧ ಮೊದಲಾದ ಶತ್ರುಗಳನ್ನು (ವಜ್ರೇಣ) ಒಳ್ಳೇ ಜ್ಞಾನದಿಂದ ಸಂಹರಿಸಿರುತ್ತೀ(5) (ಅವಧೀಃ=ಎಂದು ಶತ್ರುವನ್ನು ಸಂಹರಿಸಲಿಕ್ಕೆ ಶ್ರೀಹರಿಯು ಶಕ್ತ್ಯಾದಿಗ ಳೆಲ್ಲವನ್ನೂ ಪ್ರಯೋಗಿಸಿರುತ್ತಾನೆಂದು ಅರ್ಥವು ಪ್ರತೀತವಾಗುತ್ತದೆ. ಯಾವದವಧಾರಣೇ ಯಾವತ್ ಶಬ್ದಕ್ಕೆ ಸಾಮಸ್ತ್ಯರೂಪವಾದ ಅವಧಾರಣೆ) (ನಿಶ್ಚಯ) ಎಂಬ ಅರ್ಥದಲ್ಲಿ ಅವ್ಯಯೀಭಾವ ಸಮಾಸವನ್ನು ವಿಧಿಸಿರುತ್ತಾರೆ. ಆದ ಪ್ರಯುಕ್ತ ಯಾವತ್ ಎಂಬ ಭಿನ್ನ ಪದಕ್ಕೂ ಸಮಸ್ತ ಎಂಬ ಅರ್ಥವು ಹೇಳಲು ಶಕ್ಯ ವಾಗುವುದು. ಅಂತಹ ಪ್ರತೀತಿಯನ್ನು ನಿರಾಕರಿಸುತ್ತಾರ.) ಇಲ್ಲಿ ಶ್ರೀ ಹರಿಗೆ ಪೂರ್ಣಶಕ್ತಿ ಸಮಸ್ತವೇಗ, ಇತ್ಯಾದಿಗಳು ಹೇಳಲ್ಪಡುವುದಿಲ್ಲ. (ಏಕೆ ಹೇಳಲ್ಪಡುವುದಿಲ್ಲ ಎಂದರೆ) (6) ಯಾವಕಾರಣದಿಂದ ಶ್ರೀ ಹರಿಯು ಯಾವಾಗಲೂ ಅನಂತಾನಂತ ಶಕ್ತಿಗಳುಳ್ಳವನೊ, ಆದಕಾರಣ (ಯಾವ ಶತ್ರುವಿನಲ್ಲಿ ಸಂಪೂರ್ಣ ಶಕ್ತ್ಯಾದಿ ಗಳನ್ನು ಪ್ರಯೋಗಿಸುವನೋ, ಅಂತಹನು ಶ್ರೀ ವಿಷ್ಣುವಿನ ಶತ್ರುವು ಯಾವನು ಇದ್ದಾನೆ. ಯಾವ ಕಾರಣದಿಂದ ಶತ್ರುವಾಗುವನು. (ಅಂತಹನು ಯಾವನೊಬ್ಬನೂ ಇಲ್ಲವೇ ಇಲ್ಲ. ಯಾವ ಕಾರಣದಿಂದಲೂ ಆಗಲಾರನು.) (7

(ಆದಕಾರಣ ಯಥಾಯೋಗ್ಯವಾದುದು ಎಂದು ಹಿಂದೆ ಹೇಳಿದ್ದೇ ಅರ್ಥವು ಎಂದು ಪರಿಹಾರವ್ಯಾಜದಿಂದ ಹಿಂದೆ ಹೇಳಿರುವುದನ್ನು ವಿವರಿಸುತ್ತಾರೆ.) ಆದ ಕಾರಣ ತನ್ನ ಶಕ್ತ್ಯನುಸಾರ ಯುದ್ಧ ಮಾಡುವ ಮತ್ತು ಪ್ರಮಾಣಗಳನ್ನ ಅನುಸರಿಸಿಕೊಂಡಿರುವುದು ಅರ್ಥವು (ಇಂದ್ರನಲ್ಲಿಯೂ ಹೀಗೆಯೇ ಯಥಾಯೋಗ್ಯವಾಗಿ ಯೋಜನಾ ಮಾಡಬೇಕು. ॥ ೧೨ ॥

ಋ ॥ (೩೯೩) ಅಭಿಸಿಧ್ಮೋ ಅಜಿಗಾದಸ್ಯ ಶತ್ರೂನ್ವಿತಿಗ್ಮೇನ ವೃಷಭೇಣಾ
ಪುರೋಽಭೇತ್ । ಸಂ ವಜ್ರೇಣಾಸೃಜದ್ವೃತ್ರಮಿಂದ್ರಃ ಪ್ರ ಸ್ವಾಂ
ಮತಿಮತಿರಚ್ಛಾಶದಾನಃ ॥ ೧೩ ॥ ॥ ೩ ॥

ಅ ॥ ಅಭಿ ಸಿಧ್ಮಃ=(ಷಿಧಗತ್ಯಾಂ) ಸರ್ವತ್ರ ಸರ್ವ ದೇಶಗಳಲ್ಲಿಯೂ ಸರ್ವಕಾಲಗಳಲ್ಲಿಯೂ ಸಿದ್ಧಿಯಿಂದ ಕೂಡಿರುವ, ಶ್ರೀಪರಮೇಶ್ವರನು ಅಸ್ಯ=ಈ ಜೀವರ ಸಮುದಾಯದ, ಶತ್ರೂನ್=ಕಾಮಾದಿ ಶತ್ರುಗಳನ್ನು, ಅಜಿಗಾತ್=(ಜಿ ಜಯೇ)(ಅಜಯತ್, ಯಕಾರಕ್ಕೆ ಗಾಭಾವವು. ಜಕಾರಕ್ಕೆ ಜಕಾರವು) ಗೆದ್ದನು. (ಮತ್ತು ವಿರೋಧಿಗಳನ್ನು ಕುರಿತು) ತಿಗ್ಮೇನ=ತೀಕ್ಷ್ಣರಾದ, ಕ್ರೂರರಾದ, ವೃಷಭೇಣ=ಜೀವಶ್ರೇಷ್ಠರಾದ. ಮುಖ್ಯಪ್ರಾಣ ದೇವರಿಂದ, ಪುರಃ=ಪ್ರಾಣಿಗಳ ಸಂಸಾರ ರೂಪಗಳಾದ ಪಟ್ಟಣಗಳನ್ನು ವ್ಯಭೇತ್=(ಭಿದಿರ್ ವಿದಾರಣೇ) ವಿಶೇಷವಾಗಿ ಭೇದಿಸಿದನು. (ಮುಖ್ಯಪ್ರಾಣನು ಸಂಸಾರವನ್ನು ಭೇದಿಸಲಿಕ್ಕೆ ಕಾರಣನು ಹೇಗೆ ಆಗುವನು ಎಂದರೆ ಲಿಂಗಶರೀರವೇ ಸಂಸಾರಕ್ಕೆ ಮೂಲಕಾರಣವಾಗಿರುವುದರಿಂದ ಸಂಸಾರ ರೂಪವಾದ ಲಿಂಗವು ಪ್ರಾಣಿಗಳಿಗೆ ಪಟ್ಟಣದಂತಿರುವುದು. ಮುಖ್ಯಪ್ರಾಣನ ಉಪದೇಶವಿಲ್ಲದೆ ಮೋಕ್ಷವಾಗದಿರುವುದರಿಂದ ಮುಖ್ಯಪ್ರಾಣನಿಂದ ಉಪದೇಶಾದಿಗಳನ್ನು ಮಾಡಿಸುತ್ತಾ ಶ್ರೀಹರಿಯು ಸಂಸಾರವನ್ನು ಭೇದಿಸುತ್ತಾನೆ. ಮುಕ್ತಿಯನ್ನು ಕೊಡುತ್ತಾನೆ.) ಇಂದ್ರನಾದರೂ ಅಸ್ಯ=ಈ ಲೋಕಕ್ಕೆ ಶತ್ರೂನ್=ಶತ್ರುಗಳಾದ ದೈತ್ಯರನ್ನು ಅಜಿಗಾತ್=ಗೆದ್ದನು. ವೃಷಭೇಣ= (ಭಕ್ತರ ಅಭೀಷ್ಟಕ್ಕೆ ಪ್ರತಿಬಂಧಕೀಭೂತರಾದ ದೈತ್ಯರನ್ನು ನಾಶಗೊಳಿಸುವುದರಿಂದ) ವರ್ಷಣಕ್ಕೆ ಅಂಗವಾದ, ತಿಗ್ಮೇನ=ತೀಕ್ಷ್ಣವಾದ, ವಜ್ರೇಣ=ವಜ್ರಾಯುಧದಿಂದ, ಪುರಃ= ಶಂಬರಾಸುರನ ಪಟ್ಟಣಗಳನ್ನು ವಿಅಭೇತ್=ಭೇದಿಸಿದನು. ಇಂದ್ರಃ=ಇಂದ್ರನು ವೃತ್ರಂ=ವೃತ್ರಾಸುರನನ್ನು ವಜ್ರೇಣ=ವಜ್ರಾಯುಧದಿಂದ. (ಈ ವೃತ್ರಾಸುರನನ್ನು ಸಂಹರಿಸುವುದಕ್ಕಾಗಿ) ಸಮ್‌ಅಸೃಜತ್=ಕೂಡಿಸಿದನು. (ಕೊಡಲಿಗೆ ದಾರು ಸಂಯೋಗವಾಗದೆ ಮರವನ್ನು ಭೇದಿಸಲು ಸಾಧ್ಯವಿಲ್ಲವಷ್ಟೆ.) ಹಾಗೆಯೇ ವಜ್ರಕ್ಕೆ ವೃತ್ರಾಸುರನ ಸಂಬಂಧವಾಗಿಯೇ ವಜ್ರಾಯುಧದಿಂದ ವೃತ್ರಾಸುರನನ್ನು ಸಂಹರಿಸಿದನು.) ಶ್ರೀಹರಿಯು ವೃತ್ರಂ=ಅಜ್ಞಾನವನ್ನು ವಜ್ರೇಣ=ಜ್ಞಾನದಿಂದ (ಅಜ್ಞಾನವನ್ನು ನಾಶಗೊಳಿಸುವುದಕ್ಕಾಗಿ) ಸಮಸೃಜತ್=ಕೂಡಿಸಿದನು. (ಸಮಾನ ವಿಷಯವನ್ನಾಗಿ ಮಾಡಿದನು.) ಶಾಶದಾನಃ=(ಅತಿಶಯಿತವಾದ; ಶಂ=ಸುಖವು ಶಶಂ, ಶಶಸ್ಯ ಅದನಃ ಅತಿಶಯಿತವಾದ ಸುಖವನ್ನು ಅನುಭವಿಸುವವನು.) ಯಾವಾಗಲೂ ಶೋಭನವಾದ ಸುಖವುಳ್ಳ ಆ ಇಂದ್ರನು ಸ್ವಾಂ=ಸ್ವವಿಷಯಕವಾದ ಮತಿಂ=ಬುದ್ಧಿಯನ್ನು ಪ್ರಅತಿರತ್= (ತೄಪ್ಲವನತರಣಯೋಃ) (ತನ್ನ ಪ್ರಜೆಗಳಿಗೋಸ್ಕರ ಕೊಟ್ಟನು ॥ ೧೩ ॥

ಭಾ॥ (1) ಸ ಸರ್ವತಃ ಸಿದ್ಧಿಯುತಃ ಸದೈವ ಜಿಗಾಯ ಜೀವಾರಿಗಣಾನ್ (2) ಪುರಶ್ಚ
ಸಂಸಾರರೂಪಾಃ ಅಭಿನದ್ವೃಷೇಣ ಪ್ರಾಣೇನ ತಿಗ್ಮೇನ ವಿರೋಧಿನಃ ಪ್ರತಿ॥ (3)
ಸಂಯೋಜಯಾಮಾಸ ವಜ್ರೇಣ ವೃತ್ರಂ ಜ್ಞಾನೇನ ವಾ ಜ್ಞಾನಮಮುಷ್ಯ ಹತ್ಯೈ।
(4) ಮತಿಂ ಚ ಸ್ವಾಮದಿಶತ್ಸ್ವಪ್ರಜಾಭ್ಯಃ ಸ ಶಾಶದಾನಃ ಸುಸುಖೀ ಸದೈವ ॥ ೧೩ ॥

ಅ ॥ (1) ಸಮಸ್ತ ದೇಶಗಳಲ್ಲಿಯೂ ಸಮಸ್ತ ಕಾಲಗಳಲ್ಲಿಯೂ ಯಾವಾಗಲೂ ಸರ್ವ ಸಿದ್ಧಿಯಿಂದ ಕೂಡಿರುವ ಶ್ರೀ ಹರಿಯು ಜೀವರಿಗೆ ಶತ್ರುಗಳಾದ ಕಾಮ ಕ್ರೋಧಾದಿಗಳನ್ನು ಗೆದ್ದನು (2) ವಿರೋಧಿಗಳನ್ನು ಕುರಿತು (ವಿರೋಧಿಗಳಿಗೆ) ಕ್ರೂರರಾದ ಜೀವ ಶ್ರೇಷ್ಠರಾದ ಮುಖ್ಯ ಪ್ರಾಣ ದೇವರಿಂದ ಪ್ರಾಣಿಗಳ ಸಂಸಾರ ರೂಪಗಳಾದ ಪಟ್ಟಣಗಳನ್ನು ಭೇದಿಸಿದನು. (ಅಂದರೆ ಮುಖ್ಯಪ್ರಾಣದೇವರಿಂದ ತತ್ವಜ್ಞಾನವನ್ನುಪದೇಶ ಕೊಡಿಸಿ ಲಿಂಗ ಶರೀರವನ್ನು ಭೇದಿಸಿ ಮೋಕ್ಷವನ್ನು ಕೊಡುವನು.) (3) ಇಂದ್ರನು ವೃತ್ರಾಸುರನನ್ನು ವಜ್ರದಿಂದ (ವೃತ್ರಾಸುರನನ್ನು ಸಂಹರಿಸುವುದಕ್ಕಾಗಿ) ಕೂಡಿಸಿದನು (ಅಂದರೆ ವಜ್ರದಿಂದ ಸಂಹರಿಸಿದನು.) ಶ್ರೀ ಹರಿಯು ಅಜ್ಞಾನವನ್ನು ಜ್ಞಾನದಿಂದ (ಅಜ್ಞಾನವನ್ನು ನಾಶಗೊಳಿಸುವುದಕ್ಕಾಗಿ) ಸಮಾನ ವಿಷಯವನ್ನಾಗಿ ಮಾಡಿದನು. (4) ಶಶದಾನಃ = ಯಾವಾಗಲೂ ಚೆನ್ನಾಗಿ ಸುಖವುಳ್ಳ ಶ್ರೀ ಹರಿಯು ಸ್ವವಿಷಯಕವಾದ ಬುದ್ಧಿಯನ್ನು ತನ್ನ ಪ್ರಜೆಗಳಿಗೋಸ್ಕರ ಕೊಟ್ಟನು (ಶ್ರೀ ಹರಿ ಸರ್ವೋತ್ತಮತ್ವ ಜ್ಞಾನವನ್ನು ಹುಟ್ಟಿಸಿದನು.) ॥ ೧೩ ॥

ಋ ॥ (೪೯೭) ಆವಃ ಕುತ್ಸ ಮಿಂದ್ರ ಯಸ್ಮಿನ್ ಚಾಕನ್ಪ್ರಾವೋ ಯು

ಧ್ಯಂತಂ ವೃಷಭಂ ದಶದ್ಯುಂ। ಶಫಚ್ಯುತೋ ರೇಣುರ್ನಕ್ಷತ ದ್ಯಾ

ಮುಚ್ಛ್ವೈತ್ರೇಯೋ ನೃಷಾಹ್ಯಾಯ ತಸ್ಥೌ ॥ ೧೪ ॥

ಅ॥ ಇಂದ್ರ = ಶ್ರೀ ಹರಿಯೇ, ಚಾಕನ್=(ಕೃಣಾಕರಣೇ) ಸರ್ವಕ್ರಿಯಾಶ್ರಯನಾದ, ಸರ್ವ ಸ್ವತಂತ್ರನಾದ, ನೀನು, ಯಸ್ಮಿನ್=ಯಾವ ಕುತ್ಸ ಋಷಿಯಲ್ಲಿ ದರ್ಶನ ವಿಷಯನಾಗಿರುತ್ತೀಯೋ, (ಅಂದರೆ ಯಾವ ಕುತ್ಸ ಋಷಿಯ ಸುಭಕ್ತಿಯಿಂದ ಸಂತೋಷಗೊಂಡ ನೀನು ನಿನ್ನ ರೂಪವನ್ನು ತೋರಿಸುತ್ತೀಯೋ, (ತಂ ಕುತ್ಸಂ=ಆ ಕುತ್ಸನಾಮಕಋಷಿಯನ್ನು ಆವಃ=ರಕ್ಷಿಸುತ್ತಿರುತ್ತಿ. ಯುಧ್ಯಂತಂ=ಯುದ್ಧ ಮಾಡುವ, ವೃಷಭಂ=ವೃಷ (ಎತ್ತು) ರೂಪನಾದ, ದಶದ್ಯುಂ=ದಶದ್ಯು ನಾಮಕ ರಾಜನನ್ನೂ, ಪ್ರ ಆವಃ=ಚೆನ್ನಾಗಿ ರಕ್ಷಿಸಿರುತ್ತಿ (ಆ ದಶದ್ಯುವಿನ =ಯುದ್ಧವನ್ನೇ ಉತ್ತರಾರ್ಧದಲ್ಲಿ ವಿವರಿಸುತ್ತಾರೆ. ಆ ಯುದ್ಧವೂ ಕೂಡಾ ಶ್ರೀಹರಿಯ ಅಧೀನವೇ, ಎಂದು ಸೂಚಿಸುವುದಕ್ಕಾಗಿ) ಯದಾ=ಯಾವಾಗ, ಶ್ವೈತ್ರೇಯಃ=(ಪ್ರಸಾದಾರ್ಥಂ ಬಳಸ್ಯಾಪಿ, ವಾಯು ನೋಕ್ತಾಃ ಶ್ವರೂಪಿಣಾ ಎಂಬ ಪ್ರಮಾಣದಿಂದ ಶ್ವಾ=ವಾಯುದೇವರು, ಶುನಾ ವಾಯು ದೇವರಿಂದ, ಇತಾ= ಭಾರ್ಯೆಯಾಗಿ ಹೊಂದಲ್ಪಟ್ಟವಳು, ಶ್ವೇತಾ=ವಾಣಿಯು, ವಾಯುವಿನ ಹೆಂಡತಿಯು, ರಮತೇ ಇತಿ, ರಾ, ಶ್ವೇತಾ ಚ ಸಾ ರಾ ಚ ಶ್ವೈತ್ರಾ. ಶ್ವೈತ್ರಾಯಾಃ ಸುತಃ ಶ್ವೈತ್ರೇಯಃ) ವಾಣೀ ಪುತ್ರನಾದ ದಶದ್ಯುರಾಜನು, ನೃಷಾಹ್ಯಾಯ=ಪ್ರತಿಭಟರಾದ ಪುರುಷರನ್ನು ಸಹಿಸುವುದಕ್ಕಾಗಿ ತಿರಸ್ಕರಿಸುವುದಕ್ಕಾಗಿ (ಅಂದರೆ ಯುದ್ಧ ಮಾಡಶಕ್ಯ ಪ್ರತಿಭಟರನ್ನು ತಿರಸ್ಕರಿಸುವುದಕ್ಕಾಗಿ) ಉತ್ ತಸ್ಥೌ=ಎದ್ದು ನಿಂತನೋ, ಆಗ ಶಫಚ್ಯುತಃ= (ಶತದ್ಯು ರಾಜನ ಕುದುರೆಗಳ) ಗೊರಸುಗಳಿಂದ ಮೇಲಕ್ಕೆ ಬಂದ, ರೇಣುಃ=ಧೂಳಿಯು, ದ್ಯಾಂ=ಅಂತರಿಕ್ಷ ಲೋಕವನ್ನು, ಉತ್ ನಕ್ಷತ=(ಣಹ ಬಂಧನೇ,) ಅಥವಾ ತೃಕ್ಷ ಸ್ತೃಕ್ಷ ನಕ್ಷ ಗತೌ) ಮೇಲಕ್ಕೆ ಹೋಯಿತು. (ಅಧ್ಯಾತ್ಮರೂಪವಾದ ಅರ್ಥವು) ಇಂದ್ರ=ಶ್ರೀಪರಮಾತ್ಮನೇ, ಕುತ್ಸಂ=(ಕುತ್=ಕುತ್ಸಿತಾರ್ಥವಾದ ನಿಪಾತವು. ಸೃ ಗತೌ. ಕುಃ=ಕುತ್ಸಿತವಾದ ಪಾಪವನ್ನು ಸಾರಯತಿ=ನಾಶಗೊಳಿಸುತ್ತದೆ. ಆದ ಕಾರಣ) ಕ್ರಿಯಾ ರೂಪವಾದ ಭಕ್ತರ ಧರ್ಮವನ್ನು (ನೀನು) ಆವಃ =ರಕ್ಷಿಸಿರುತ್ತಿ. (ನಿನ್ನ ವಿಷಯಕವಾದ ಜ್ಞಾನವು) ಯಸ್ಮಿನ್ =ಯಾವ ಧರ್ಮದ ಅಧೀನವೋ, (ಜ್ಞಾನವು ಕರ್ಮದಿಂದ ಹುಟ್ಟತಕ್ಕದಾದುದರಿಂದ ಕರ್ಮದ (ಧರ್ಮದ) ಅಧೀನವೇ.) (ಅಂತಹ ಪಾಪದಿಂದ ಕೂಡಿಕೊಂಡು ಯುದ್ಧ ಮಾಡುವ) ದಶದ್ಯುಂ=(ದಶಸು ದಿಕ್ಷು ದ್ಯೌಃ ಪ್ರಕಾಶೋಯಸ್ಯ ಸರ್ವತ್ರ ಪ್ರಕಾಶವುಳ್ಳ, ವೃಷಭಂ=(ವೃಷಭಃ ಪುಂಗವೇ ವೃಷೇ ಎಂಬ ವಿಶ್ವಕೋಶದಿಂದ ವೃಷಭ ಶಬ್ದವು ಶ್ರೇಷ್ಠಾರ್ಥಕವಾಗಿದೆ ೪ ವಿಧ ಪುರುಷಾರ್ಥಗಳಲ್ಲಿ ಧರ್ಮವು ಪ್ರಾಥಮಿಕವಾಗಿ ಶ್ರೇಷ್ಠವಾಗಿದೆ. ಮತ್ತು ವೃಷಃಸ್ಯಾದ್ವಾ

ಸವೇ ಧರ್ಮೋ ಎಂಬ ವಿಶ್ವಕೋಶದಿಂದ ಧರ್ಮ ನಾಮವು.) ಅದೃಷ್ಟ ರೂಪವಾದ ಧರ್ಮವನ್ನು, ಪ್ರ ಆವಃ = ಚೆನ್ನಾಗಿ ರಕ್ಷಿಸಿದಿ. (ಪ್ರವೃತ್ತ ನಿವೃತ್ತ ಭೇದದಿಂದ ಧರ್ಮವು ೨ ವಿಧವು. ಪ್ರವೃತ್ತ ಧರ್ಮದಿಂದ ಸ್ವರ್ಗವು. ನಿವೃತ್ತ ಧರ್ಮದಿಂದ ಮೋಕ್ಷವು ಏವಂಚ ಪ್ರವೃತ್ತಿ ರೂಪವಾದ ಅಲ್ಪ ಧರ್ಮವು. ಸ್ವರ್ಗ ಮಾತ್ರ. ಸಾಧನವು. ನಿವೃತ್ತಿ ರೂಪ ಸಾಕ್ಷಾದ್ಧರ್ಮವು ಪರಂಪರಯಾಮೋಕ್ಷ ಸಾಧನವು.)ಎಂಬ ಅಭಿಪ್ರಾಯದಿಂದ ಧರ್ಮ ಸ್ವರೂಪ ವನ್ನು ವಿವರಿಸುತ್ತಾರೆ (ಹೇಗೆ ಧೂಲಿಯು ಗೊರಸಿನಿಂದ ಮೇಲಕ್ಕೆ ಹೋಗುತ್ತದೋ ಹಾಗೆಯೇ ಮಹಾ ಫಲ ವುಳ್ಳ ನಿವೃತ್ತ ಧರ್ಮದಿಂದ ಚ್ಯುತವಾದ ಅಲ್ಪ ಫಲವುಳ್ಳ ಪ್ರವೃತ್ತ ಧರ್ಮವು ನಿವೃತ್ತ ಧರ್ಮ ಜಾತೀಯವಾ ದುದು ರೇಣುಃಎನಿಸುತ್ತದೆ =ಶಫಚ್ಯುತ ಇವ ರೇಣುಃ=ಅಲ್ಪ ಅಸ್ಥಿರ ಫಲವುಳ್ಳದ್ದಾದುದರಿಂದ ಗೊರಸಿನಿಂದ ಮೇಲೆ ಹೋದ ಧೂಲಿಯಂತೆ ಇರುವಪ್ರವೃತ್ತ ಧರ್ಮವು, ದ್ಯಾಂ=ಸ್ವರ್ಗವನ್ನು, ಉತ್‌ನಕ್ಷತ್=ಮೇಲಕ್ಕೆ ಹೋಯಿತು. ಶ್ವೈತ್ರೇಯಃ=ವೇದಪ್ರತಿಪಾದ್ಯವಾದ ನಿವೃತ್ತರೂಪವಾದ ಮುಖ್ಯ ಧರ್ಮವಾದರೂ, ನೃಷಾ ಹ್ಯಾಯ=ಜ್ಞಾನಿಗಳಿಗೆ ಸಾಹಾಯ್ಯಕ್ಕಾಗಿ, ಉತ್ತಸ್ಥೌ=ಆಗುವುದು. ॥ ೧೪ ॥

ಭಾ ॥ (1)ಕುತ್ಸಂ ದಶದ್ಯುಂಚ ಮುನಿಂ ನೃಪಂ ಚ ಯಸ್ಮಿಂಸ್ಥಿತಃಪ್ರಾತ್ಮರೂಪಂ ಸುಭಕ್ತ್ಯಾ।
ಅದರ್ಶಯಸ್ತೋಷಿತೋ (2)ಯಃಸ್ವತಂತ್ರಶ್ಚಾಕನ್ನುಕ್ತಃ ಕರ್ಮ ಯತಃ ಸ್ವತಂತ್ರೇ।
(3) ವೃಷರೂಪಸ್ಯಾಸ್ಯ ನೃಪಸ್ಯ ಯುದ್ಧ್ಯತಃ ಶಫಚ್ಯುತೋ ರೇಣುರುನ್ನಕ್ಷತ
ದ್ಯಾಂ ॥ (4)ಶ್ವೈತಾ ವಾಣೀ ವಾಯುಭಾರ್ಯಾ ಸುತೋಽಸ್ಯಾಃಶ್ವೈತ್ರೇಯೋಽಯಂ
ಯುದ್ಧ್ಯತೋ ಹ್ಯುದಸ್ಥಾತ್ ॥ (5) ವೃಷಃ ಶ್ವೈತ್ರೇಯೋ ಧರ್ಮ ಏವಾಥ ಕುತ್ಸ
ನಾವಮಾಽಧ್ಯಾತ್ಮೇ ಕುತ್ಸಿತೋತ್ಸಾರಣಾತ್ಸ್ಯಾತ್ ॥ (9) ಧರ್ಮರೇಣುಃ ಸ್ವರ್ಗ ಮಾತ್ರಾ
ಭಿಗಾಮೀ ಸಾಕ್ಷಾದ್ಧರ್ಮೋ ಮೋಕ್ಷಫಲೋಪಗಃ ಸ್ಯಾತ್ ॥ ೧೫॥

ಅ ॥ ಕುತ್ಸನನ್ನು ಋಷಿಯನ್ನಾಗಿಯೂ ದಶದ್ಯು ಎಂಬುವನನ್ನು ರಾಜನನ್ನಾಗಿಯೂ ಹೀಗೆ ಕ್ರಮದಿಂದ ಹೇಳುತ್ತಾರೆ. ನೀನು ಯಾವ ಕುತ್ಸನಲ್ಲಿ ದರ್ಶನ ವಿಷಯವಾಗಿರುತ್ತೀಯೋ ಇಂದ್ರನೆನಿಸಿದ ಶ್ರೀ ಹರಿಯು ಸರ್ವತ್ರ ಇದ್ದ ಪ್ರಯುಕ್ತ ಯಸ್ಮಿನ್ ಎನ್ನುವುದು ವ್ಯರ್ಥವೆಂದರೆ ಯಾವ ಕುತ್ಸ ಋಷಿಯು ಪರಮಭಕ್ತಿಯಿಂದ ಸಂತೋಷಗೊಂಡನೀನು ನಿನ್ನ ರೂಪವನ್ನೇ ತೋರಿಸಿರುತ್ತೀಯೋ. (2) ಚಾಕನ್ ಎಂಬುವುದನ್ನು, ವ್ಯಾಖ್ಯಾನ ಮಾಡುತ್ತಾರೆ) ಯಾರು ಸರ್ವಸ್ವತಂತ್ರನೋ ಅತನು ಚಾಕನ್ ಎಂದುಹೇಳಲ್ಪಡುತ್ತಾನೆ. (ಹೇಗೆಂದರೆ) ಯಾವ ಕಾರಣದಿಂದ ಸ್ವತಂತ್ರನಾದವನಲ್ಲಿ ಕ್ರಿಯೆಯು ಇರುವುದು ಅಂದರೆ ಶತ್ರಂತವಾದ ಕೃಜ್ಞಧಾತುವಿಗೆ ಚಾಕನ್ ಎಂಬು ಛಂದಸ್ಸಿನಲ್ಲಿ ರೂಪವು. ಕುರ್ವನ್ ಎನ್ನುವುದರಿಂದ ಕ್ರಿಯಾಶ್ರಯನಾದವನು ಹೇಳಲ್ಪಡುತ್ತಾನೆ. ಕರ್ಮಪದ ಪರ್ಯಾಯವಾದ ಕ್ರಿಯೆಯು ಕರ್ತೃವಿನಲ್ಲಿ ಇರುವುದು. ಸ್ವತಂತ್ರಃ ಕರ್ತಾ ಎಂಬ ಸೂತ್ರ ದಿಂದ ಸ್ವತಂತ್ರನಾದವನು ಕರ್ತಾ ಎನಿಸುತ್ತಾನೆ. ಆದಕಾರಣ ಚಾಕನ್ ಎನ್ನುವುದಕ್ಕೆ, ಸ್ವತಂತ್ರಃ ಎಂಬ ವ್ಯಾಖ್ಯಾನವು ಯುಕ್ತವೇ. (ಏವಂಚ ಎಲೋ ಶ್ರೀ ಹರಿಯೇ ಸ್ವತಂತ್ರನಾದ ನೀನು ಯಾವ ಕುತ್ಸ ಋಷಿಯಲ್ಲಿ ಇದ್ದಿಯೋ, ಅಂತಹ ಕುತ್ಸನೆಂಬ ಮುನಿಯನ್ನು ರಕ್ಷಿಸಿರುತ್ತಿ) (3) ಯುದ್ಧಮಾಡತಕ್ಕ ವೃಷರೂಪ ನಾದ ದಶದ್ಯು ಎಂಬ ರಾಜನನ್ನು ಚೆನ್ನಾಗಿ ರಕ್ಷಿಸಿರುತ್ತಿ. ಆತನ ಯುದ್ಧವನ್ನೇ ವಿವರಿಸುತ್ತಾರೆ) ವೃಷ ರೂಪನಾದ ಈ ದಶದ್ಯುರಾಜನು ಯುದ್ಧ ಮಾಡುತ್ತಿರುವಾಗ (ರಾಜನ ಕುದುರೆಗಳ) ಗೊರಸುಗಳಿಂದ ಎದ್ದು ಮೇಲಕ್ಕೆ ಹೋದ ಧೂಲಿಯು ಅಂತರಿಕ್ಷ ಲೋಕವನ್ನು ಹೊಂದಿತು. (4) (ಯಾವಾಗ ಎಂದರೆ.) ವಾಯುವಿನ ಹೆಂಡತಿಯಾದ ವಾಣಿಯು ಶ್ವರೂಪನಾದ ವಾಯುವಿನಿಂದ ಪತ್ನಿಯಾಗಿ ಹೊಂದಲ್ಪಟ್ಟವಳು. ಇವಳ ಮಗನಾದ ಶ್ವೈತ್ರೇಯನಾದ ಈ ದಶದ್ಯುರಾಜನು ಯುದ್ಧ ಮಾಡುತ್ತಿರುವ ಶತ್ರುಗಳನ್ನು (ತಿರಸ್ಕರಿಸುವು ದಕ್ಕಾಗಿ)ಎದ್ದು ನಿಂತನೋ (ಆಗ ಧೂಲಿಯು ಅಂತರಿಕ್ಷಲೋಕವಲ್ಲಿ ವ್ಯಾಪಿಸಿತು (5) (ಅಧ್ಯಾತ್ಮರೂಪ ಅರ್ಥದಲ್ಲಿ) ಧರ್ಮವೇ ವೃಷಃ, ಎಂದೂ ಶ್ವೈತ್ರೇಯಃ ಎಂದೂ ಹೇಳಲ್ಪಡುತ್ತದೆ, (ಹಿಂದಿನಂತೆ ಅರ್ಥವು) ಕುತ್ಸಿತಗಳಾದ

ಪಾಪಾದಿಗಳನ್ನು ನಾಶಗೊಳಿಸುದುದರಿಂದ ಕುತ್ಸ ಎಂದು ಹೆಸರುಳ್ಳದ್ದೂ ಆಗುವುದು, (ಧರ್ಮ ಏವ ಎಂಬಲ್ಲಿದ್ದ ಏವ ಶಬ್ದವು ದಶದ್ಯು ಕುತ್ಸ ಶಬ್ದಗಳಿಗೆ ವಾಚ್ಯಾರ್ಥಗಳು ಬೇರೆ ಅಲ್ಲ, ಎರಡೂ ಧರ್ಮಕ್ಕೆ ವಿಶೇಷಣವು ಎಂಬುವುದನ್ನು ತೋರಿಸುವುದಕ್ಕಾಗಿ.) (6) ಶಫಚ್ಯುತಃ ಇತ್ಯಾದಿಗಳ ತಾತ್ಪರ್ಯವನ್ನು ಹೇಳುತ್ತಾರೆ.) ಪ್ರವೃತ್ತಿರೂಪವಾದ ಅಲ್ಪ ಧರ್ಮವು ಸ್ವರ್ಗಮಾತ್ರಕ್ಕೆ ಸಾಧನವು. ನಿವೃತ್ತಿ ರೂಪವಾದ ಸಾಕ್ಷಾದ್ಧರ್ಮವು ಜ್ಞಾನದಿಂದ ಪೂರ್ವದಲ್ಲಿ ಮಾಡಲ್ಪಟ್ಟದ್ದೂ ತಮೇವಂ ವಿದ್ವಾನಮೃತ ಇಹ ಭವತಿ (?) ಜ್ಞಾನೇನಾಮೃತೀಭವತಿ (ಎಂಬಶ್ರುತಿಯಿಂದ) ಜ್ಞಾನದ್ವಾರಾ ಮೋಕ್ಷಕ್ಕೆ ಸಾಧನವೂ. (ಮೋಕ್ಷವು ಅನಿಷ್ಟ ನಿವೃತ್ತಿ ಇಷ್ಟಪ್ರಾಪ್ತಿ ಹೀಗೆ ಉಭಯ ಸ್ವರೂಪವಾಗಿರುವುದರಿಂದ ಅಪರೋಕ್ಷ ಜ್ಞಾನ ಬಂದ ಮೇಲೆ ಮಾಡಿದ ಧರ್ಮವಾದರೂ ಮೋಕ್ಷದಲ್ಲಿಯೇ ಅಂಶಭೂತಗಳಾದ ಆನಂದಾದಿಗಳ ವೃದ್ಧಿಗೆ ಸಾಧನವು. (ಶಥಾಚಯೋಜನಾವನ್ನು ಹಿಂದಿ ನಂತೆ ಇಟ್ಟುಕೊಳ್ಳಬೇಕು.) ॥ ೧೪ ॥

ಋ ॥ (೩೯೮) ಆವಃ ಶಮಂ ವೃಷಭಂ ತುಗ್ರ್ಯಾಸು ಕ್ಷೇತ್ರಜೇಷೇ ಮಘವ

ಞ್ಛ್ವಿತ್ರ್ಯಂ ಗಾಂ। ಜ್ಯೋಕ್ಚಿದತ್ರ ತಸ್ಥಿವಾಂಸೋ ಅಕ್ರಞ್ಛತ್ರೂಯತಾ

ಮಧರಾ ವೇದನಾಕಃ ॥ ೧೫ ॥ ೩ ॥ ೩೩ ॥

ಅ ॥ ಮಘವನ್= ಎಲೋ ಸರ್ವೇಶ್ವರನೇ, ಶಮಂ= (ಕ್ರಿಯಾ ಅದೃಷ್ಟಾತ್ಮಕವಾದುದು ಮಾತ್ರವಲ್ಲ. ಮತ್ತೆ ಭಕ್ತರ ಶಮಾತ್ಮಕವಾದುದೂ ಆದ, ವೃಷಭಂ= ಧರ್ಮವನ್ನೇ, ತ್ವಂ= ನೀನು, ಆವಃ= ರಕ್ಷಿಸಿರುತ್ತಿ. (ಭಕ್ತರದ್ದು ಮಾತ್ರವಲ್ಲ- ಮತ್ತೆ) ತುಗ್ರ್ಯಾಸು= ಭಕ್ತರ ಸಂತತಿಗಳಲ್ಲಿಯೂ, ಕೂಡ ವೃಷಭಂ= ಧರ್ಮವನ್ನು ಅವಃ= ರಕ್ಷಿಸುತ್ತಿರುತ್ತಿ. ತ್ವಂ= ನೀನು, (ಅದಾವ) ಶ್ವಿತ್ರ್ಯಂ= ಶ್ವಿತ್ರ್ಯ ಎಂದು ಹೆಸರುಳ್ಳ, ವಾಣಿಯ ಮಗನಾದ(ಅಂದರೆ ವೇದಬೋಧ್ಯವಾದ) ಗಾಂ=ಧರ್ಮವನ್ನು (ಯಾವ ಕಾರಣದಿಂದ ರಕ್ಷಿಸುತ್ತಿರುತ್ತಿಯೋ ಅದು) ಕ್ಷೇತ್ರ ಜೇಷೇ=(ಕ್ಷಿಯಂತಿ ಅತ್ರ ಕ್ಷೇತ್ರಂ,ಮುಕ್ತ್ಯವಸ್ಥೆಯು ಕ್ಷಿ ಕ್ಷಯೇ(=ಅಥವಾ ಕ್ಷಿನಿವಾಸಗತ್ಯೋಃಪ್ರಜೆಗಳು ಅವಾಸಮಾಡುತ್ತಾರೆ. ಜಿ ಜಯೇ. ಜಯಃ=ಕೇವಲ ಪ್ರಾಪ್ತಿಯು. ತಿರಸ್ಕಾರವಲ್ಲ) ಇಲ್ಲಿ ಮುಕ್ತಿರೂಪವಾದ ಕ್ಷೇತ್ರದ ವಿಜಯಕ್ಕಾಗಿಯೇ, (ಮುಕ್ತಿ ಪ್ರಾಪ್ತಿಗಾಗಿಯೇ. ಕ್ಷುದ್ರಗಳಾದ ವಿಷಯಗಳ ಪ್ರಾಪ್ತಿಗಾಗಿ ಅಲ್ಲ) ಅಂದರೆ ಸಸ್ಯಾದ್ಯುತ್ಪತ್ತಿ ಸ್ಥಾನ ರೂಪಗಳಾದ ಕ್ಷೇತ್ರಗಳ ಪ್ರಾಪ್ತಿಯು ಲೌಕಿಕ ಪ್ರಭುಗಳ ದರ್ಶನಾದಿಗಳಿಂದಲೇ ಸಾಧ್ಯವಾಗಿರುವುದರಿಂದ ಅವುಗಳಿಗೆ ಈಶ್ವರ ಪ್ರಾರ್ಥನೆಯು ಅವಶ್ಯಕವಲ್ಲ.) ಅತ್ರ= ಇಂತಹ ನಿನ್ನಲ್ಲಿ, ಯೇ=ಯಾವ ಪುರುಷರು, ತಸ್ಥಿವಾಂಸಃ= ಜ್ಞಾನದಲ್ಲಿ ಆಸಕ್ತರಾಗಿ ಇರುತ್ತಾರೋ ತೇ ಚಿತ್=ಅವರೂ ಕೂಡ ಜ್ಯೋಕ್ ಅಕ್ರನ್=(ದ್ಯುತದೀಪ್ತೌ, ಕೃಞ್ ಕರಣೇ) ತನ್ನ ರೂಪವನ್ನು ಮೋಕ್ಷಪ್ರಾಪ್ತಿಯಿಂದ ಅತ್ಯಂತ ಪ್ರಕಾಶ ವಿಶಿಷ್ಟವನ್ನಾಗಿ ಮಾಡಿದರು. (ಅಂದರೆ ಯಾರು ನಿನ್ನನ್ನು ಯಥಾರ್ಥವಾಗಿ ತಿಳಿಯುತ್ತಾರೋ, ಅಂತಹವರು ಮುಕ್ತರಾಗಿ ಪ್ರಕಾಶ ಸ್ವರೂಪವುಳ್ಳವರಾಗಿರುತ್ತಾರೆ.) ಸರ್ವರೂ ಹೀಗೆ ಆಗುತ್ತಾರೋ ಎಂದರೆ ಅಲ್ಲವೆನ್ನುತ್ತಾರೆ. ಶತ್ರೂಯತಾಂ=ಶತ್ರುಗಳಂತೆ ಆಚರಿಸುವ ಅಯೋಗ್ಯರ, ಶ್ರೀ ಹರಿಗೆ ಸಾಕ್ಷಾತ್ತಾಗಿ ಶತ್ರುವೇ ಇಲ್ಲ. ಆದ ಕಾರಣ ಅಯೋಗ್ಯರಾದವರ ಎಂದರ್ಥವು) ವೇದನಾ= ಜ್ಞಾನಗಳನ್ನು ಅಧರಾ= ಅಧರಗಳನ್ನಾಗಿಯೇ, (ಫಲ ದೆಶೆಯಿಂದ ಅಪಕೃಷ್ಟಗಳನ್ನಾಗಿಯೇ) ಅಕಃ=ಮಾಡಿರುತ್ತಿ. (ಇಂದ್ರ ಪಕ್ಷದಲ್ಲಿ ಆದರೂ) ದಶದ್ಯು ರಾಜನೇ ವೃಷಭನು. ಶಮಗುಣದಿಂದ ಕೂಡಿರುವ ಪ್ರಯುಕ್ತ ಶಮಃ ಎನಿಸುತ್ತಾನೆ. ಕ್ಷೇತ್ರಂ= ಭೂ ಮಂಡಲವು. ಬೇರೆ ಎಲ್ಲದಕ್ಕೂ ಹಿಂದಿನಂತೆ ಅರ್ಥವು. ॥ ೪೫ ॥

ಭಾ ॥ (1) ಶಮಾತ್ಮಕಂ ವೃಷಭಂ ಧರ್ಮಮೇವಾಪ್ಯರಕ್ಷಸ್ತ್ವಂ ತುಗ್ರಿಯಾಸ್ವಪ್ಯಧೀಶ ॥

(2) ತುಗ್ರ್ಯಾಖ್ಯಾ ಸ್ವಾತ್ಮಸಂತತಿರ್ದೀರ್ಘಕಾಲಾ ॥ (3) ಮುಕ್ತಿಕ್ಷೇತ್ರವಿಜಯಾ

ಯೈವ ಧರ್ಮಂ । ಶ್ವೈತಾಸುತಂ (4) ರಮಣಾದ್ರೇಫ ಉಕ್ತಸ್ತಮಃ ರಕ್ಷಸ್ತ್ವಂ (5) ತ್ವಯಿ ಯೇ ತಸ್ಥಿವಾಂಸಃ । ಜ್ಯೋತಿಶ್ಚಕ್ರುಃ ನಿಜರೂಪಂ ವಿಮುಕ್ತ್ಯಾ (6) ಜ್ಞಾನಾನಿ ನ್ಯರೀಣಾಮಧರಾಣಿ ಚಾಕರೋಃ ॥ ೧೫ ॥ ೩ ॥ ೧ ॥

ಅ ॥ (1) ಸರ್ವೇಶ್ವರನೇ ಭಕ್ತರ ಜ್ಞಾನಾತ್ಮಕವಾದುದೂ ಶ್ರೇಷ್ಠವಾದ ಧರ್ಮವನ್ನೇ ನೀನು ರಕ್ಷಿಸಿರುತ್ತಿ. (ಭಕ್ತರದ್ದು ಮಾತ್ರವಲ್ಲ. ಮತ್ತೆ) ತುಗ್ರ್ಯಗಳಲ್ಲಿಯೂ ಕೂಡ. (೨) (ತುಗ್ರ್ಯ ಎಂದರೆ) ತುಗ್ರ್ಯ ಎಂದು ಹೆಸರುಳ್ಳದ್ದು ಭಕ್ತರ ಸಂತತಿಯು. (ಆದ ಕಾರಣ ಭಕ್ತರ ಸಂತತಿಗಳಲ್ಲಿಯೂ ಧರ್ಮವನ್ನು ರಕ್ಷಿಸಿರುತ್ತಿ.) (ಸಂತತಿಯು ತುಗ್ರ್ಯ ಎನಿಸುವುದು ಹೇಗೆ? ಎಂದರೆ) ದೀರ್ಘಕಾಲವುಳ್ಳದ್ದು (ಅನ್ನ ಆಕಾಶ ವುಳ್ಳದ್ದು. (ಅನ್ನ ಆಕಾಶ ಯಜ್ಞ ವರಿಷ್ಠೇಷು ತುಗ್ರ ಶಬ್ದಃ ಎಂದು ವೃತ್ತಿಕಾರರು ಹೇಳಿರುತ್ತಾರೆ. ಇಲ್ಲಿ ವರಿಷ್ಠ (ಶ್ರೇಷ್ಠ) ಎಂಬ ಅರ್ಥವು. ವರಿಷ್ಠ ಎಂಬುದಕ್ಕೆ ಕಾಲವು ವಿಶೇಷ್ಯವು. ತಥಾಚ ವರಿಷ್ಠಃ=ಶ್ರೇಷ್ಠವಾದ ಕಾಲವು ತುಗ್ರ್ಯ ಎನಿಸುತ್ತವೆ. ಅಥವಾ ಸಾಕ್ಷಾತ್ ದೀರ್ಘವಾದ ಕಾಲವು ತುಗ್ರಃ ಎನಿಸುತ್ತದೆ. ತತ್ರ ಭವಃ ಎಂಬ ಅರ್ಥದಲ್ಲಿ ತುಗ್ರ ಶಬ್ದದಿಂದ ಘನ್ ಪ್ರತ್ಯಯವು. ಮತ್ತು ಯನ್ ಪ್ರತ್ಯಯವು. ತುಗ್ರ್ಯ ಎಂದು ರೂಪವು, ಅಂತೂ ತುಗ್ರ್ಯ=ಶ್ರೇಷ್ಠವಾದ ದೀರ್ಘಕಾಲದಲ್ಲಿ ಹುಟ್ಟಿದ್ದು. ವಿಶೇಷ್ಯವು ಯಾವುದೆಂದು ಆಕಾಂಕ್ಷೆ ಬಂದರೆ ಸ್ತ್ರೀಲಿಂಗ ಪ್ರಯೋಗವಿದ್ದುದರಿಂದ ಯೋಗ್ಯತೆಯಾ ಸಂತತಿಯು ಎಂದು ಲಭಿಸುತ್ತದೆ.) (3) ಅಂತಹ ವೇದ ಜೋಧ್ಯವಾದ ಧರ್ಮವನ್ನು ಯಾವ ಕಾರಣದಿಂದ ರಕ್ಷಿಸುತ್ತಿಯೋ, ಅದು ಮುಖ್ಯವಸ್ತುರೂಪಕ್ಷೇತ್ರವನ್ನು ಹೊಂದುವುದಕ್ಕಾಗಿಯೇ (ಸಸ್ಯಾದ್ಯುತ್ಪತ್ತಿ ಸ್ಥಾನರೂಪ ಕ್ಷೇತ್ರಗಳ ಪ್ರಾಪ್ತಿಗಾಗಿ ಅಲ್ಲ.) (೪) ಶ್ವೈತ್ರ್ಯಂ ಎಂಬುದು ಹೇಗೆಂದರೆ) (ಶ್ವ=ವಾಯುವು ಶುನಾ ಇತಾ ಶ್ವಿತಾ=ವಾಯುವಿನಿಂದ ಪತ್ನಿಯಾಗಿ ಸ್ವೀಕರಿಸಲ್ಪಟ್ಟ ವಳು ವಾಣೀಯು) ಕ್ರೀಡಿಸುವುದರಿಂದ ಆಕಾರ ಶಿರಸ್ಕವಾದ ದೇಹವು ಹೇಳಲ್ಪಟ್ಟಿದೆ. ರಮಣಾತ್ ರಃ. (ಶ್ವಿತಾ ಚ ಸಾ ರಾ ಚ ಶ್ವಿತ್ರಾ. ಅಪತ್ಯ ಎಂಬ ಅರ್ಥದಲ್ಲಿ ಷ್ಯ ಪ್ರತ್ಯಯವು. ತಥಾಚ ಶ್ವೈತ್ರ್ಯಂ ಎಂದಾಗುತ್ತದೆ.) ಅಂತಹ ಧರ್ಮವನ್ನು ರಕ್ಷಿಸಿರುತ್ತಿ. (೫) ನಿನ್ನಲ್ಲಿ ಯಾವ ಪುರುಷರು ಜ್ಞಾನದಲ್ಲಿ ಆಸಕ್ತರಾಗಿ ಇರುತ್ತಾರೋ ಅಂತಹವರೂ ಕೂಡ ತಮ್ಮ ರೂಪವನ್ನು ಪ್ರಕಾಶ ವಿಶಿಷ್ಟವನ್ನಾಗಿ ಮಾಡಿದರು (ಅಂದರೆ ವಿಮುಕ್ತಿಗಾಗಿ ಯಾರು ನಿನ್ನನ್ನು ಯಥಾರ್ಥವಾಗಿ ತಿಳಿಯುತ್ತಾರೋ, ಅವರು ಮುಕ್ತರಾಗಿ ಪ್ರಕಾಶ ಸ್ವರೂಪರಾಗಿ ಇರುತ್ತಾರೆ.) (6) (ಸರ್ವರೂ ಹೀಗೆಯೇ ಇರುತ್ತಾರೋ ಎಂದರೆ) ಅಯೋಗ್ಯರಾದವರ ಜ್ಞಾನಗಳನ್ನು ಫಲದಿಂದ ಅಪಭ್ರಷ್ಟಗಳನ್ನಾಗಿಯೇ (ಫಲವಿರಹಿತಗಳನ್ನಾಗಿಯೇ) ಮಾಡಿರುತ್ತಿ. ॥ ೧೫ ॥ ೩ ॥ ೧ ॥

ಅವ॥ ತ್ರಿಶ್ಚಿನ್ನೋ ಎಂಬ ೩೪ನೇ ಸೂಕ್ತಕ್ಕೆ ೧೨ ಋಕ್ಕುಗಳು. ೨ ವರ್ಗಗಳು. ಅಶ್ವಿನೀ ದೇವತೆಗಳು ದೇವತೆಯು. ಅದರಲ್ಲಿ ೯, ೧೨ ಋಕ್ಕುಗಳು ತ್ರಿಷ್ಟುಬ್ ಛಂದಸ್ಸುಗಳು. ಇತರಗಳು ಜಗತೀ ಛಂದಸ್ಸುಗಳು.

ಋ ॥ (೩೯೯) ತ್ರಿಶ್ಚಿನ್ನೋ ಅದ್ಯಾ ಭವತಂ ನವೇದಸಾ ವಿಭುರ್ವಾಂ ಯಾಮ ಉತ ರಾತಿರಶ್ವಿನಾ । ಯುವೋರ್ಹಿ ಯಂತ್ರಂ ಹಿಮ್ಯೇವ ವಾಸಸೋಽಭ್ಯಾಯಂಸೇನ್ಯಾ ಭವತಂ ಮನೀಷಿಭಿಃ ॥ ೧ ॥

ಅ ॥ ನ ವೇದಸಾ=(ನ ವಿದ್ಯತೇ ಅನ್ಯಃ ವೇದಾಃ ಯಾಭ್ಯಾಂ=ಯಾರಿಂದ ಇತರೊಬ್ಬನು ತಿಳಿಯುವವನ್ನು ಇಲ್ಲವೋ.) (ನಞ್ಪೂರ್ವಕಾತ್ ವಿದಜ್ಞಾನೇ ಅಸುನ್ ಪ್ರತ್ಯಯವು. ನಭ್ರಾಣ್ನಪಾನ್ನವೇದಾಃ ಇತ್ಯಾದಿ ಸೂತ್ರದಿಂದ ನ ಲೋಪವಿಲ್ಲ) ಸರ್ವರಿಗಿಂತಲೂ ಅಧಿಕ ಜ್ಞಾನವುಳ್ಳ, ಅಶ್ವಿನಾ=ಅಶ್ವಿನೀ ದೇವತೆಗಳಿರಾ, ಅದ=

ಇಂದು ಆರಂಭಿಸಿಯೇ, ತ್ರಿಶ್ಚಿತ್=ಮೂರು ಕಾಲವೂ (ಹಗಲು ರಾತ್ರಿ, ಸಂಧ್ಯಾಕಾಲ ಹೀಗೆ ಮೂರು ಕಾಲಗಳಲ್ಲಿಯೂ) ಸರ್ವ ಕಾಲಗಳಲ್ಲಿಯೂ,) (ನೀವಿಬ್ಬರೂ) ನಃ=ನಮಗೇನೇ ಭವತಂ=ಸರ್ವರಿಗಿಂತಲೂ ನಮ್ಮಲ್ಲಿ ಕೃಪೆ ಮಾಡಿರಿ) (ನೀವಿಬ್ಬರು ಎಂತಹವರೆಂದರೆ) ಹಾಂ=ಯಾವ ನಿಮ್ಮಿಬ್ಬರನ್ನೇ, ಯದಾಮಃ=(ಯಾ ಪ್ರಾಪಣೇ ಕರಣೇ ಮನ್ ಪ್ರತ್ಯಯವು. ಯಾಂತ್ಯನೇನೇತಿ ಯಾಮಃ) ಮಾರ್ಗವು, ವಿಭುಃ=ವ್ಯಾಪಿಯು. (ಸಮಸ್ತ ದೇಶಗಳಲ್ಲಿ ವಿಷ್ಣುವು ಸಂಚರಿಸುವುದರಿಂದ ಮಾರ್ಗವು ವ್ಯಾಪಿಸಿಕೊಂಡಿದೆ.) ರಾತಿಃ=(ರಾದಾನೇ ಭಾವೇಕ್ತಿನ್) ದಾನವೂ, ವಿಭುಃ=ವ್ಯಾಪಿಯು. (ಅಂದರೆ ಭಕ್ತರಿಗೆ ಅಭೀಷ್ಟವನ್ನು ಕೊಡುವುದರಿಂದ ದಾನವೂ ವಿಭುವಾಗಿದೆ). ಯುವೋಃ= ನಿಮ್ಮಿಬ್ಬರ, ಯಂತ್ರಂ=(ಯತಿ, ಸಂಕೋಚೇ. ಕರಣೇ ಅಚ್ ಪ್ರತ್ಯಯವು.) (ಯಮ್ಯತೇ ನಿಯಮ್ಯತೇ ಅನೇನ ಯಂತ್ರಂ) ನಿಯಮನವು, ವಾಸಸಃ=ವಸ್ತ್ರದ, ಹಿಮ್ಯೇವ=(ಹಿಗತೌ, ಮ್ಯಕ್ ಪ್ರತ್ಯಯವು.) ತಂತುಗಳನ್ನು ಚೆಲ್ಲುವ ತುರಿಯಂತೆ ಅಂದರೆ-ತುರಿಯು ಹೇಗೆ ಅತಿ ಪ್ರಯತ್ನವಿಲ್ಲದೇನೇ ವಸ್ತ್ರವನ್ನುಂಟುಮಾಡುತ್ತದೋ, ಹಾಗೆಯೇ ಪ್ರಯತ್ನವಿಲ್ಲದೇನೇ ಸಮಸ್ತ ಜನರ ಬುದ್ಧಿಗಳಿಗೆ ಪ್ರೇರಕರು.) (ನೀವಿಬ್ಬರು)=ಮನೀಷಿಭಿಃ=ಜ್ಞಾನಿಗಳಾದ ದೇವತೆಗಳಿಂದ ಕೂಡಿಯೇ ಅಭ್ಯಾಯಂಸೇನ್ಯಾಃ=(ಅಭಿ ಇತ್ಯುಪಸೃಷ್ಟಾತ್ ಆಯಾಮಯಗತೌ ಧಾತು, ನಮ್ಮನ್ನು ಕುರಿತು ಬರಲಿಕ್ಕೆ ನಿಮ್ಮ ಸೇನೆಯಿಂದ ಯುಕ್ತರಾಗಿರುವಿರಿ. ಹಿ=ಪ್ರಸಿದ್ಧವು. ॥ ೧ ॥

ಭಾ ॥ (1) ಆರಭ್ಯ ಚಾದ್ಯೈವ ದಿವಾನಿಶಾಯಾಂ ತದಂತರೇ ಚ ತ್ರಿರಪಿ ಸ್ಮ ಸರ್ವದಾ ।
ಅಸ್ಮಾಕಮೇವ ಭವತಂ ಯತೋಽನ್ಯೋ ವೇತ್ತಾ ನ ತಾವಿತ್ಯದಿತೌ ನವೇದಸೌ ॥
(2) ಗೌಣಂ ತದನ್ಯತ್ರ ಹರೌ ತು ಮುಖ್ಯತೋ ವ್ಯಾಪೀ ತು ಮಾರ್ಗೋ ಯುವಯೋಸ್ತು ದಾನಂ ॥ ಅಶೇಷದೇಶೇಷು ಗತೇರಶೇಷದಾತೃತ್ವತಶ್ಚೈವ (3) ಯುವೋರ್ಯಂತ್ರಂ । ವಾಸೋಯಂತ್ರಂ ಯದ್ವದಯತ್ನತಃ ಸ್ಯಾದ್ಧಿಮ್ಯಾ ಹಿನೋತೇಸ್ತಂತುವಿಕ್ಷೇಪಣೀ ಹಿ ॥ (4) ತದ್ವದ್ಬುದ್ಧಿ ಪ್ರೇರಕಾವಯತ್ನತೋ ವಾಮಾಯಾರ್ಥೇ ಸೇನೌ ಭವತಂ ಮನೀಷಿಭಿಃ । ಸಹೈವ ದೇವೈಃ ॥ ೧ ॥

ಅ ॥ (1) ಸರ್ವರಿಗಿಂತಲೂ ಅಧಿಕ ಜ್ಞಾನವುಳ್ಳ ಅಶ್ವಿನೀ ದೇವತೆಗಳಿರಾ ಇಂದು ಆರಂಭಿಸಿಕೊಂಡೇ, ಸಂಕೋಚಿತವಾಗಿ ಪ್ರಾರ್ಥಿಸಲಿಕ್ಕೆ ಕಾರಣವಿಲ್ಲ ಎಂಬ ಅಭಿಪ್ರಾಯದಿಂದ ಸ್ಮ ಶಬ್ದವು) ಹಗಲು ರಾತ್ರಿ ಅವುಗಳ ಮಧ್ಯವಾದ ಸಂಧ್ಯಾಕಾಲ ಹೀಗೆ ಮೂರು ಕಾಲಗಳಲ್ಲಿಯೂ ಸರ್ವದಾ ನೀವಿಬ್ಬರೂ (ಸರ್ವಪ್ರಕಾರದಿಂದಲೂ ನಮ್ಮಲ್ಲಿ ಕೃಪೆಮಾಡಿರಿ. ಯಾವ ಕಾರಣದಿಂದ ಅವರಿಬ್ಬರಿಗಿಂತ ಇನ್ನೊಬ್ಬನು ತಿಳಿಯುವವನು ಇಲ್ಲವೋ ಆ ಕಾರಣದಿಂದ ಅವರಿಬ್ಬರು ನವೇದಸೌ ಎಂದು ಹೇಳಲ್ಪಡುತ್ತಾರೆ ಸರ್ವರಿಗಿಂತಲೂ ಅಧಿಕ ಜ್ಞಾನವುಳ್ಳವರೆಂದು ಅರ್ಥವು (2) ಈ ವ್ಯಾಖ್ಯಾನವು ಇತರ ದೇವತೆಗಳಲ್ಲಿಯೂ ಶ್ರೀಹರಿಯಲ್ಲಿಯೂ ಸಮಾನವೋ ಎಂದರೆ) ವಿಷ್ಣುವಿನಿಂದ ಇತರರಾದ ದೇವತೆಗಳಲ್ಲಿ ಅಮುಖ್ಯವು. ಶ್ರೀ ಹರಿಯಲ್ಲಿ ಆದರೂ ಮುಖ್ಯವಾಗಿಯೇ ಇರುವುದು. ಯಾವ ನಿಮ್ಮಿಬ್ಬರದೂ ಮಾರ್ಗವು ವಿಭುವಾಗಿದೆಯೋ, ದಾನವೂ ಕೂಡ ವಿಭುವಾಗಿದೆಯೋ, (ಮಾರ್ಗದಾನಗಳಿಗೆ ವಿಭುತ್ವವು ಹೇಗೆ ಎಂದರೆ) ಶ್ರೀ ವಿಷ್ಣುವು ಸಮಸ್ತ ದೇಶಗಳಲ್ಲಿಯೆಲ್ಲಾ ಸಂಚರಿಸುವುದರಿಂದ ಮಾರ್ಗವು ವಿಭುವಾಗಿಯದೆ. ವ್ಯಾಪಿಸಿಕೊಂಡಿದೆ. ಭಕ್ತರಿಗೆ ಸರ್ವಾಭೀಷ್ಟವನ್ನು ಕೊಡುವುದರಿಂದಲೇ ದಾನವೂ ವಿಭುವಾಗಿಯದೆ. (3) ಮತ್ತು ನಿಮ್ಮಿಬ್ಬರ (ಯಂತ್ರ್ಯಂತೇ ನಿಯಮ್ಯಂತೇ ಅನೇನೇತಿ ಯಂತ್ರಂ) ನಿಯಮನ ಸಾಧನವು ವಸ್ತ್ರದ ಹಿಮ್ಯೆಯಂತೆ. ಅಂದರೆ ವಸ್ತ್ರಯಂತ್ರವಾದ ಹಿಮ್ಯಾ ಎಂದು ಹೆಸರುಳ್ಳ ತುರಿಯು ಹೇಗೆ ಮಹಾ ಪ್ರಯತ್ನವಿಲ್ಲದೇನೇ ವಸ್ತ್ರವನ್ನು ಹುಟ್ಟಿಸುತ್ತದೋ, ಹಾಗೆಯೇ. (ಹಿಮ್ಯಾ ಎಂದರೆ ಯಾವುದು ಎಂದರೆ) ತಂತವಃ ವಿಕ್ಷಿಪ್ಯಂತೇ ಅನಯಾ ಎಂಬ ವ್ಯುತ್ಪತ್ತಿಯಿಂದ ತಂತು ವಿಕ್ಷೇಪಣಿಯು ತುರಿಯು. (ತಂತುಗಳನ್ನು ಒಟ್ಟಿಗೆ ಕೂಡಿಸಿ ಬಟ್ಟೆ ಮಾಡಲಿಕ್ಕೆ ಸಾಧನವಾದುದು.) ಹಿನೋತೇಃ ಹಿಮ್ಯಾ (ಹಿ ಗತೌ ಮ್ಯಕ್) (ತಂತುಗಳಲ್ಲಿ ಸಂಚಾರವಿದ್ದುದರಿಂದ ಹಿಮ್ಯಾ ಎನಿಸುತ್ತದೆ.) (4) ಹೇಗೆ ತುರಿಯು ಅತಿ ಪ್ರಯತ್ನವಿಲ್ಲದೇನೇ

ವಸ್ತ್ರವನ್ನುಂಟುಮಾಡುತ್ತದೋ, ಹಾಗೆಯೇ ಪ್ರಯತ್ನವಿಲ್ಲದೇನೇ ಸರ್ವರ ಬುದ್ಧಿಗಳಿಗೆ ಪ್ರೇರಕರಾದ ನೀವು ಜ್ಞಾನಿಗಳಾದ ದೇವತೆಗಳಿಂದೊಡಗೂಡಿಯೇ ನಮ್ಮನ್ನು ಕುರಿತು ಬರಲಿಕ್ಕೆ ಸೇನೆಯಿಂದ ಕೂಡಿದವರು ಆಗುವಿರಿ. ॥ ೧ ॥

ಋ॥ (೪೦೦) ತ್ರಯಃ ಪವಯೋ ಮಧುವಾಹನೇ ರಥೇ ಸೋಮಸ್ಯ ವೇನಾ

ಮನು ವಿಶ್ವ ಇದ್ವಿದುಃ। ತ್ರಯಃ ಸ್ಕಂಭಾಸಃ ಸ್ಕಭಿತಾಸ ಆರಭೇ ತ್ರಿರ್ನ

ಕ್ತಂಯಾಥಸ್ತ್ರಿರ್ವಶ್ವಿನಾ ದಿವಾ ॥ ೨ ॥

ಅ॥ ಅಶ್ವಿನಾ = ಅಶ್ವಿನೀ ದೇವತೆಗಳಿರಾ. ಮಧುವಾಹನೇ ರಥೇ = (ವಹ ಪ್ರಾಪಣೇ) (ನಿತ್ಯಾದ್ರಾ) ಮಧು ಸೋಮಂ ಪ್ರತ್ಯೂಹ್ಯೇತೇ ಭವಂತೌ ಯೇನ) ನೀವಿಬ್ಬರು ಯಾವ ರಥದಿಂದ ಮಧು ಸೋಮವನ್ನು ಹೊಂದುವಿರೋ ಅಂತಹ ರಥದಲ್ಲಿ, ತ್ರಯಃ ಪವಯಃ= ವಜ್ರ ಖಡ್ಗ ಶರ ರೂಪಗಳಾದ ಮೂರು ಆಯುಧಗಳು (ವಜ್ರದಸಾಹಚರ್ಯದಿಂದ ಖಡ್ಗ ಶರಗಳನ್ನು ಪವಿ ಶಬ್ದದಿಂದ ತೆಗೆದುಕೊಂಡದ್ದು) ತ್ರಯಃ ಸ್ಕಂಭಾಸಃ= ಕುಂತಾ ಪ್ರಾಸೇ ಚಂಡ ಭಾವಃ ಎಂಬ ವಿಶ್ವ ಕೋಶದಿಂದ ಪ್ರಾಸಾದಿಗಳಿಂದ ಕೂಡಿದ ಮೂರು ವೇಣುಗಳು ಸ್ತಂಭ ಎಂದು ಹೆಸರುಳ್ಳವುಗಳು. ಸ್ತಭ್ಯಂತೇ ಸ್ಕಭ್ಯಂತೇ ನಿರುಧ್ಯಂತೇ ಗರ್ತಾದೌ ಗರ್ತಾದಿಗಳಲಿ ತಡೆಯಲ್ಪಡುತ್ತವೆ.ಹೂಗಿಯಲ್ಪಡುತ್ತವೆ)ಸ್ಕಭಿತಾಸಃ= ಸ್ಥಾಪಿತಗಳಾಗಿದೆ. ತೇ ವಿಶ್ವೇವಿತ್=ಅವುಗಳೆಲ್ಲವೂ ವಜ್ರಾದಿಗಳೆಲ್ಲವೂ (ಅಂದರೆ ಪವಿ ಮೊದಲಾದ ಶಬ್ದಗಳಿಂದ ಹೇಳಲ್ಪಟ್ಟ ವಜ್ರಾದಿಗಳಿಗೆ ನಿಯಾಮಕರಾದ ಚೇತನರು) ಸೋಮಸ್ಯ=ಸೋಮದ,ವೇನಾಂ=(ವೀ ಗತಿ ವ್ಯಾಪ್ತಿ ಪ್ರಜನ ಕಾಂತ್ಯಸನ ಖಾದನೇಷು) ಖಾದನ (ಪಾನ)ವನ್ನು ಅಥವಾ ಪಾನಕ್ರಿಯೆಯನ್ನು ಅಥವಾ ರಸವನ್ನು. ಅನು ವಿದುಃ=ತಿಳಿಯುತ್ತಾರೆ (ಇಂತಹ ರಥದಿಂದ ನೀವಿಬ್ಬರು) ಆರಭೇ=ಪ್ರಾಣಿಗಳ ಯಜ್ಞಾದಿ ಕರ್ಮಗಳನ್ನು ಆರಂಭಿಸುವುದಕ್ಕಾಗಿ (ಅಂದರೆ ಯಜ್ಞಾದಿ ಕರ್ಮಗಳನ್ನು ಮಾಡಿಸುವುದಕ್ಕಾಗಿ)ಅಥವಾ ಯಜ್ಞಾದಿಕರ್ಮಗಳನ್ನು ಮಾಡಿದವರಿಗೆ ಸ್ವರ್ಗವೊದಲಾದ ಲೋಕಗಳುಪ್ರಾಪ್ತಿಯಾಗುವುದರಿಂದ ಆರಂಭಿಸುವುದಕ್ಕಾಗಿ) ನಕ್ತಂ=ರಾತ್ರಿಯಲ್ಲಿ,ತ್ರಿಃ=ಮೂರಾವರ್ತಿ, ದಿವಾಚ=ಹಗಲು,ತ್ರಿಃ=ಮೂರಾವರ್ತಿ, ಅನುಯಾಥಃ=ಅನುಸರಿಸಿ ಬನ್ನಿರಿ.(ಬಹಿಷ್ಠ ವಿಷ್ಣುರೂಪ ವಿಷಯದಲ್ಲಿ ಅರ್ಥವೂ)ಎಲೋ ಅಶ್ವಿನೀ ದೇವತೆಗಳಿರಾ ಮಧುವಾಹನೇ ರಥೆ = ನಿತ್ಯಾದ್ಭಾದ ಸುಖವನ್ನುಂಟು ಮಾಡತಕ್ಕ ವಾಹನರೂಪವಾದ ಅಧಿದೇವರಥದಲ್ಲಿ ತ್ರಯಃ ಪವಯಃ= ಚಕ್ರ ಗದಾ ಶರ ಎಂಬ ಮೂರು ಆಯುಧಗಳು, ತ್ರಯಃಸ್ಕಂಭಾಸಃ= ೩ ಪ್ರಸಿದ್ಧ ವೇಣುಗಳು (ಬೇರೆ ಎಲ್ಲವೂ ಸಮವೇ.) (ಅಧ್ಯಾತ್ಮ=ಶರೀರಾಂತರ್ಗತ ವಿಷ್ಣುವಿನಲ್ಲಿ) ಮಧುವಾಹನೇ= ಮೋಕ್ಷವನ್ನು ಹೊಂದಿಸಿಕೊಡುವ, (ಅಂದರೆ ಮೋಕ್ಷ ಸಾಧನವಾದ) ರಥೇ= ಭಕ್ತರ ದೇಹಾಖ್ಯವಾದ ರಥದಲಿ ತ್ರಯಃ ಪವಯಃ= ೩ ವೇದಗಳು, ತ್ರಯಃ ಸ್ಕಂಭಾಸಃ= ಪಂಚ ಪ್ರಾಣದಲ್ಲಿ ಪ್ರಧಾನರಾದ ೩ ಪ್ರಾಣರು. ಸೋಮಸ್ಯ ವೇನಾಂ= ಮನಸ್ಸಿನ ಗತಿಯನ್ನೂ (ಬೇರೆ ಎಲ್ಲವೂ ಸಮಾನವು) ॥ ೨ ॥

ಭಾ ॥ (1) ಪವಯಶ್ಚಾಯುಧಾನಿ (2) ಸೋಮಸ್ಯ ಪಾನಂ ಚೇತನತ್ವಾದ್ವಿದುಸ್ತೇ ॥
(3) ವಜ್ರಃಖಡ್ಗಃ ಶರ ಇತ್ಯಾಯುಧಾನಿ (4) ತ್ರಿವೇಣವಃ ಸ್ತಂಭನಾಮಾನ ಏವ ॥
(5) ದಿವಾ ನಿಶಾಯಾಂ ತ್ರಿಸ್ತ್ರಿರೇವಾನುಯಾಥಃ ಕರ್ಮಾರಂಭಾರ್ಥಂ ಲೋಕ ಸಿದ್ಧ್ಯರ್ಥಮಂಜಃ ।(6) ಚಕ್ರಂ ಗದಾ ಶರ ಇತ್ಯಾಯುಧಾನಿ (7)ವೇದಾಸ್ತ್ರಯೋ ವಾಸುದೇವಸ್ಯ ಚ ಸ್ಯುಃ। (8) ರಥಸ್ತ್ವಿಯೇತೋ ಜ್ಞಾನಿನಾಂ ವಾ ಶರೀರಂ ಪ್ರಾಣಾದಯಃ ಸ್ತಂಭನಾಮ್ನಸ್ಯ ಚಾಪಿ ॥ ೨ ॥

ಅ ॥ (1) ಪವಿ ಶಬ್ದವು ಯದ್ಯಪಿ ವಜ್ರವಾಚಕವು. ಆದಾಗ್ಯೂ ಘಾತಕತ್ವ (ಸಂಹಾರ ಕತ್ವ) ಸಾ

ದೃಶ್ಯದಿಂದ ಆಯುಧದಲ್ಲಿಯೇ ಪ್ರಯುಕ್ತವಾಗಿದೆ ಎನ್ನುತ್ತಾರೆ) ಪ್ರವಯಃಎಂದರೆ ಆಯುಧಗಳೇ. (2) (ಆಯುಧ ಸ್ತಂಭಗಳು ಜಡಗಳಾಗಿರುವುದರಿಂದ ಸೋಮ ಪಾನ ಜ್ಞಾನವು ಅವುಗಳಿಗೆ ಇಲ್ಲದಿರುವುದರಿಂದ ಸೋಮಸ್ಯ ಪಾನಂ ಎನ್ನುವುದು ಅಯುಕ್ತವು ಎಂದರೆ)ಆ ಆಯುಧ ಸ್ತಂಭಗಳು ಚೇತನರಿಂದ ಅಧಿಷ್ಠಿತಗಳಾಗಿರುವುದರಿಂದ ಸೋಮದ ಪಾನವನ್ನು ತಿಳಿದಿರುತ್ತವೆ. (ತಥಾಚ ಪವಿ ಸ್ಕಂಭ ಶಬ್ದಗಳಿಗೆ ಲಕ್ಷಣಯಾ ಅವುಗಳಲ್ಲಿರತಕ್ಕ ಚೇತನರು ಎಂದರ್ಥವು.) (3) (೩ ಪವಿಗಳು ಎಂದು ಹೇಳಿಯದೆ. ಆ ೩ ಆಯುಧಗಳು ಯಾವವು ಎಂದರೆ)ವಜ್ರ ಖಡ್ಗ ಶರ ಎಂದು ೩ ಆಯುಧಗಳು. (4) ತ್ರಯಃ ಸ್ತಂಭಾಸಃ ಎಂದು ಹೇಳಿದೆ. ಅವುಗಳು ಯಾವುವು ಎಂದರೆ) ಕುಂತಾ ಪ್ರಾಸ ಚಂಡಭಾವ ಎಂಬ ೩ ವೇಣುಗಳೇ ಸ್ತಂಭ ಎಂದು ಹೆಸರುಗಳುಳ್ಳವುಗಳು. (5) (ಆರಭೇ ಇತ್ಯಾದಿಗಳನ್ನು ವ್ಯಾಖ್ಯಾನ ಮಾಡುತ್ತಾರೆ.) (ಭಕಾರಂತ ಆರಭ್ ಶಬ್ದಾತ್ ತಾದರ್ಥ್ಯೇ ಚತುರ್ಥೀ) ಪ್ರಾಣಿಗಳಿಗೆ ಯಜ್ಞಾದಿ ಕರ್ಮಗಳ ಆರಂಭಕ್ಕಾಗಿ (ಕರ್ಮಗಳನ್ನು ಮಾಡಿಸುವುದಕ್ಕಾಗಿ) ಅಥವಾ ಚೆನ್ನಾಗಿ ಕರ್ಮಗಳನ್ನು ಮಾಡಿದ ಜನರಿಗೆ ಸ್ವರ್ಗ ಮೊದಲಾದ ಲೋಕಗಳ ಪ್ರಾಪ್ತಿಗಾಗಿ ರಾತ್ರಿಯಲ್ಲಿ ಮೂರಾವರ್ತಿ, ಹಗಲು, ಮೂರಾವರ್ತಿಯೇ ಬನ್ನಿರಿ. (6) ಬಹಿಷ್ಠ ವಿಷ್ಣುವಿನಲ್ಲಿ, ಎಂದರೆ ಅಶ್ವಿನೀ ದೇವತೆಗಳಲ್ಲಿ ಅಂತರ್ಗತವಾಗದಿರುವ ಮತ್ತು ಶರೀರದಲ್ಲಿ ಅಂತರ್ಗತವಾಗದಿರುವ ಪೃಥಕ್ ವಿಷ್ಣುರೂಪದಲ್ಲಿರುವ ಆಯುಧಗಳನ್ನು ಹೇಳುತ್ತಾರೆ) ಚಕ್ರ ಗದಾ ಶರ ಎಂಬುವುವು ಆಯುಧಗಳು (7) (ಅಧ್ಯಾತ್ಮ=ಶರೀರಾಂತರ್ಗತ ವಿಷ್ಣುವಿನಲ್ಲಿ ಹೇಳುತ್ತಾರೆ.) ಶ್ರೀ ವಾಸುದೇವನಿಗೆ ೩ ವೇದಗಳೇ ೩ ಪವಿಗಳು ಆಗುವವು. (8) ಬಹಿಃಮತ್ತೂ ಅಧ್ಯಾತ್ಮರಥವನ್ನೂ ಕ್ರಮವಾಗಿ ಹೇಳುತ್ತಾರೆ.) ಬಹಿಷ್ಠವಾದುದು) ವೈಷ್ಣವ ರಥವು ಜ್ಞಾನಿಗಳ ಶರೀರವು (ರಥಕ್ಕೆ ಆಧಾರ ಭೂತಗಳಾದ ೩ ಸ್ತಂಭಗಳು ಪ್ರಸಿದ್ಧಗಳು.) (ಅಧ್ಯಾತ್ಮ= ಶರೀರಾಂತರ್ಗತ ವಿಷ್ಣು)ಅರ್ಥದಲ್ಲಿ ಹೇಳುತ್ತಾರೆ. ಪ್ರಾಣಾದಿಗಳು ದೇಹದ ಸ್ತಂಭಗಳು,ದೇಹಕ್ಕೆ ಸ್ಥಾಪಕಗಳು (ಇತರವಾದುದನ್ನೂ ಹೀಗೆಯೇ ವ್ಯಾಖ್ಯಾನ ಮಾಡಬೇಕೆಂದು ತಿಳಿಸುವುದಕ್ಕಾಗಿ ಅಪಿ ಪದವು.)

ವಿ ॥ (1)ಕೆಲವು ಧ್ಯಾನದಲ್ಲಿ ಉದಾನ ಸಮಾನರು ಪ್ರಾಣಾದಿಗಳಲ್ಲಿ ಲಯ ಹೊಂದುವುದರಿಂದ ಪ್ರಾಣಾದಿಗಳು ಮೂವರೇ ಉಳಿಯುತ್ತಾರೆ. ಹಾಗೆ ಭಾಗವತದಲ್ಲಿ ಹೇಳಿದೆ, ವಾಚಂ ಜುಹಾವ ಮನಸಿ ತತ್ಪ್ರಾಣ ಇತರೆ ಪರಂಧ್ಯತ್ಯಾ ಹ್ಯಪಾನಂ ಸೋತ್ಸರ್ಗಂ ತತ್ಪಂಚತ್ವೇ ಹ್ಯಜೋಹವೀತ್ ॥ ತ್ರಿತ್ವೇ ಹುತ್ವಾಽಥ ಪಂಚತ್ವಂ ತಚ್ಚೈಕತ್ವೇಽಜುಹೋನ್ಮುನಿಃ ॥ ಎಂದರೆ ವಾಗಭಿಮಾನಿನಿಯಾದ ಪಾರ್ವತಿಗೆ ಮನೋಭಿಮಾನಿಯಾದ ರುದ್ರನಲ್ಲಿ ಲಯವು. ರುದ್ರನಿಗೆ ಪ್ರಾಣನಲ್ಲಿ, ಪ್ರಾಣನಿಗೆ ಅಪಾನನಲ್ಲಿ, ಅಪಾನನಿಗೆ ವ್ಯಾನನಲ್ಲಿ ಲಯವನ್ನು ಚಿಂತಿಸಬೇಕು. ಪ್ರಾಣಾದಿ ಮೂವರಲ್ಲಿ ಉದಾನ ಸಮಾನರಿಗೆ ಲಯವು ಎಂದು ಧ್ಯಾನಿಸಿ ಆ ಪ್ರಾಣಾದಿ ಮೂವರು ಮುಖ್ಯ ಪ್ರಾಣನಲ್ಲಿ ಲಯ ಹೊಂದುತ್ತಾರೆಂದು ಧ್ಯಾನಿಸಬೇಕು ಎಂದು ಹೇಳಿದೆ. (೩) ವಾಕ್ ಮೊದಲಾದ ಅನೇಕ ಇಂದ್ರಿಯಗಳು ಇದ್ದರೂ ಪ್ರಧಾನವಾಗಿರುವುದರಿಂದ ಚಕ್ಷುರಾದಿ ಐದೇ ಇಂದ್ರಿಯಗಳನ್ನು ಹೇಗೆ ಹೇಳಿರುವರೋ ಹಾಗೆಯೇ ಐದು ಪ್ರಾಣರಲ್ಲಿ ಮೂವರನ್ನೇ ಹೇಳಿರುತ್ತಾರೆ. (3) ಅಧ್ಯಾತ್ಮದಲ್ಲಿ ಮಧು ಮೋಕ್ಷವು. ಸೋಮಸ್ಯ=ಮನಸ್ಸಿನ, ಸೇನಾಂ=ಗತಿಯನ್ನು ಹೀಗೆ ಇಟ್ಟುಕೊಳ್ಳಬೇಕು. ॥ ೨ ॥

ಮಂ ॥ (೪೦೧) ಸಮಾನೇ ಅಹನ್ ತ್ರಿರವದ್ಯ ಗೋಹನಾ ತ್ರಿರದ್ಯ ಯಜ್ಞಂ
ಮಧುನಾ ಮಿಮಿಕ್ಷತಂ। ತ್ರಿರ್ವಾಜವತೀರಿಷೋ ಅಶ್ವಿನಾ ಯುವಂ
ದೋಷಾ ಅಸ್ಮಭ್ಯಮುಷಸಶ್ಚ ಪಿನ್ವತಂ ॥ ೩ ॥

ಅ॥ಅಶ್ವಿನಾ= ಅಶ್ವಿನೀ ದೇವತೆಗಳಿರಾ, ಸಮಾನೇ= ಸುಖ ದುಃಖ ರೂಪವಾದ ವೈಚಿತ್ರ್ಯವಿಲ್ಲದಿರುವ ಮತ್ತು ಕೇವಲ ಸುಖಕ್ಕೇನೇ ಆಶ್ರಯವಾಗಿರುವ, ಅಹನ್= ಹಗಲಿನಲ್ಲಿ (ಮೋಕ್ಷಕಾಲದಲ್ಲಿ) ತ್ರಿಃ= ಸರ್ವ ಕಾಲ

ದಲ್ಲಿಯೂ, (ಅವದ್ಯ ಗೋಹನಾ= ದೋಷಗಳಿಗೆ ಆಚ್ಛಾದಕರಾದ, (ಅಂದರೆ ಸಮಸ್ತ ದೋಷಗಳನ್ನು ನಾಶಗೊಳಿಸುವ) (ನೀವಿಬ್ಬರು) (ಪ್ರಸಿದ್ಧ ಅಶ್ವಿನೀ ಪಕ್ಷದಲ್ಲಿ)ಸಮಾನೇ ಅಹನ್= ಯಜ್ಞದಲ್ಲಿ, ತ್ರಿಃ= ತ್ರಿಕಾಲದಲ್ಲಿಯೂ ಅವದ್ಯಗೋಹನಾ= ಸಮಸ್ತ ಕ್ರಿಯೆಗಳ ದೋಷಗಳನ್ನೂ ನಾಶಗೊಳಿಸುವರು (ಎಂದು ಇಟ್ಟು ಕೊಳ್ಳಬೇಕು) ಅದ್ಯ= ಈಗ. (ನಿಮ್ಮ ಭಕ್ತರಾದ ನಮ್ಮ) ಯಜ್ಞಂ= ಯಾಗವನ್ನು ತ್ರಿಃ= ಮೂರು ಆವರ್ತಿಯೂ ಮಧುನಾ= ಮಧುತ್ವ ನಿಮಿತ್ತವಾದ ಹಸ್ತದಿಂದ, ಮಿಮಿಕ್ಷತಂ= ಸ್ಪರ್ಶ ಮಾಡಿರಿ. (ಅಂದರೆ ಹಸ್ತಸ್ಪರ್ಶದಿಂದ ಶುದ್ಧೀಕರಿಸಿರಿ.) ಮತ್ತು ಯುವಂ= ನೀವಿಬ್ಬರು, ಅಸ್ಮಭ್ಯಂ= ನಮಗಾಗಿ, ದೋಷಾ= ರಾತ್ರಿಯಲ್ಲಿ, ಉಷಸಃ= ಉಷಃಕಾಲದಲ್ಲಿಯೂ, ಅದಕ್ಕಿಂತ ಮರುದಿವಸದಲ್ಲಿಯೂ, ಹಗಲು ರಾತ್ರಿ, ತ್ರಿಃ= ಸರ್ವ ಕಾಲಗಳಲ್ಲಿಯೂ= ವಾಜವತೀಃ= ಯುದ್ಧವುಳ್ಳ, ಯುದ್ಧದಲ್ಲಿ ಗೆದ್ದು ತಂದಿರುವ, ಇಷಃ= ಅನ್ನಗಳನ್ನು ಅಥವಾ ಮೋಕ್ಷದಲ್ಲಿರುವ ಸುಖಗಳನ್ನು(ಇವುಗಳು ವಾದ ವಿತಂಡಾರೂಪ ಆಧ್ಯಾತ್ಮಿಕ ಯುದ್ಧವನ್ನು ಹೊಂದಿ ಲಬ್ಧಗಳಾದವುಗಳು)ಪಿನ್ವತಂ, ಚೆನ್ನಾಗಿ ಕೊಡಿರಿ. ॥ ೩ ॥

ಭಾ ॥ (1) ವೈಷಮ್ಯಹೀನೇಽಸುಖಭಾಜನೇಽಹ್ನಿ ವಿಮುಕ್ತಿಕಾಲೇಽಖಿಲ ದೋಷನಾಶಕೌ ।
ಸ್ವಭಕ್ತಾನಾಂ ಶೋಧಯತಂ ಚ ಯಜ್ಞಂ ತ್ರಿರಸ್ಮಾಕಂ ಯುದ್ಧಜಿತಾ ಇಷಶ್ಚ ।
ಸುಖಾನಿ ವಾ ಮೋಕ್ಷಗತಾನಿ ನೋಽಖಿಲಮಹೋರಾತ್ರಂ ಕ್ಷರತಂ ಸರ್ವದೈವ ॥ ೩ ॥

ಅ ॥(1) ಸುಖದುಃಖರೂಪವಾದ ವೈಷಮ್ಯವಿಲ್ಲದಿರುವ,ಅಂದರೆ ಕೇವಲ ಸುಖಕ್ಕೇನೇ ಆಶ್ರಯವಾಗಿರುವ ಹಗಲಿನಲ್ಲಿ ಅಂದರೆ ಮೋಕ್ಷ ಕಾಲದಲ್ಲಿ ಸಮಸ್ತ ದೋಷಗಳನ್ನು ನಾಶಗೊಳಿಸುವ, ನೀವಿಬ್ಬರೂ (ಅಶ್ವಿನೀದೇವತೆಗಳ ಪಕ್ಷದಲ್ಲಿ) ಸಮಸ್ತ ಕ್ರಿಯೆಗಳ ಭ್ರೇಷ=ಭ್ರಂಶವನ್ನು ನಾಶಗೊಳಿಸುವವರು, ಭ್ರಂಶವೆಂದರೆ–ಯಾವಾಗ ಹೇಗೆ ಯಾವ ಕರ್ಮವನ್ನು ಮಾಡಬೇಕೋ, ಆಗ ಹಾಗೆ ಪ್ರಮಾದದಿಂದ ಆಯಾಯ ಕರ್ಮಗಳನ್ನು ಮಾಡದಿರುವಿಕೆ) ನಿಮ್ಮ ಭಕ್ತರಾದ ನಮ್ಮ ಯಜ್ಞವನ್ನು ಹಸ್ತಸ್ಪರ್ಶದಿಂದ ಶುದ್ಧೀಕರಿಸಿರಿ. ಮತ್ತು ನೀವಿಬ್ಬರು, ನಮಗಾಗಿ ಯುದ್ಧದಲ್ಲಿ ಗೆದ್ದು ತಂದ ಅನ್ನಗಳನ್ನು ಮತ್ತು ಮೋಕ್ಷದಲ್ಲಿರುವ ವಾದ ವಿತಂಡಾಖ್ಯಯುದ್ಧದಲ್ಲಿ ಲಬ್ಧಗಳಾದ ಸುಖಗಳನ್ನು ಹಗಲು ರಾತ್ರಿ ಸರ್ವಕಾಲಗಳಲ್ಲಿಯೂ ಅತ್ಯಂತವಾಗಿ ಕೊಡಿರಿ. ॥ ೩ ॥

ಋ ॥ (೪೦೨) ತ್ರಿರ್ವರ್ತಿರ್ಯಾತಂ ತ್ರಿರನುವ್ರತೇ ಜನೇ ತ್ರಿಃ ಸುಪ್ರಾವ್ಯೇ
ತ್ರೇಧೇವ ಶಿಕ್ಷತಂ । ತ್ರಿರ್ನಾಂದ್ಯಂ ವಹತಮಶ್ವಿನಾ ಯುವಂ ತ್ರಿಃ
ಪೃಕ್ಷೋ ಅಸ್ಮೇ ಅಕ್ಷರೇವ ಪಿನ್ವತಂ ॥ ೪ ॥

ಅ ॥ ಅಶ್ವಿನೌ=ಅಶ್ವಿನೀ ದೇವತೆಗಳಿರಾ, (ನೀವಿಬ್ಬರು ಯಾವುದು) ವರ್ತಿಃ=ಸಮಸ್ತ ಲೋಕಗಳಲ್ಲಿರುವಿಕೆಯು,(ಕೇವಲ ಪ್ರವೃತ್ತಿ ಮಾತ್ರವೇ ಅಲ್ಲ,ಮತ್ತೆ ಕಾಲ ವಿಶೇಷ ಸಹಿತವಾದುದು). ಯಾವುದು, ತ್ರಿಃ=ಕಾಲತ್ರಯದಲ್ಲಿರತಕ್ಕುದೋ,ಅದನ್ನು ಕುರಿತು,ಯಾತಂ=ಹೋಗಿರಿ.(ಅಂದರೆ ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿರತಕ್ಕದ್ದು. ಸಮಸ್ತ ಪ್ರಾಣಿಗಳ ಕರ್ಮವನ್ನು ಪ್ರವರ್ತಿಸುವುದಕ್ಕಾಗಿ ಸರ್ವತ್ರ ಸನ್ನಿಹಿತರು ಆಗಿರಿ. ಆ ಎಲ್ಲಾ ಕರ್ಮಗಳೂ ನಿಮ್ಮ ಅಧೀನಗಳೇ. ಮತ್ತೂ ಅನುವ್ರತೇ=ಭಕ್ತಜನರ ವಿಷಯದಲ್ಲಿ ತ್ರಿಃ=ಸರ್ವಕಾಲಗಳಲ್ಲಿಯೂ, ಶಿಕ್ಷತಂ=ಶಿಕ್ಷಿಸಿರಿ. ತ್ರೇಧೇವ= ತ್ರಿಕಾಲಗಳಲ್ಲಿಯೂ ಇರುವ, ಸುಪ್ರಾವ್ಯೇ=(ಸುತ್ರಪೂರ್ವಕವಾಗಿ ಅವರಕ್ಷಣೇ) ಚೆನ್ನಾಗಿ ರಕ್ಷಿಸಿಕೊಳ್ಳಲಿಕ್ಕೆ ಅರ್ಹನಾದ, ಅತಿಭಕ್ತನ ವಿಷಯದಲ್ಲಿ (ಗುರು ಮೊದಲಾದವರಿಂದ ಶಿಕ್ಷಿತನಾದ ಪ್ರಯುಕ್ತವೇ ಭಕ್ತನು ಸುಖವಾಗಿ ರಕ್ಷಣಾರ್ಹನು) ಭಕ್ತನಿಗೆ ಅತೀತಾದಿ ಕಾಲ ಸಂಬಂಧದಿಂದಲೇ

ತ್ರೈವಿಧ್ಯವು. ಅಂದರೆ ಅತೀತ ಭಕ್ತ, ವರ್ತಮಾನ ಕಾಲಿಕ ಭಕ್ತ, ಭವಿಷ್ಯತ್ಕಾಲಿಕ ಭಕ್ತ, ಎಂಬ ಮೂರು ಪ್ರಕಾರವುಳ್ಳವನು. ವಸ್ತುತಃ ಸ್ವರೂಪತಃ=ಭಕ್ತನಿಗೆ ತ್ರೈವಿಧ್ಯವಿಲ್ಲ, ಎಂಬ ಅಭಿಪ್ರಾಯದಿಂದ ತ್ರೇಧೇವ ಎಂಬಲ್ಲಿ ಇವ ಶಬ್ದವು. ತ್ರಿಃ=ಸರ್ವ ಕಾಲಗಳಲ್ಲಿಯೂ ಶಿಕ್ಷತಂ=ಅತಿಶಯವಾಗಿ ಶಿಕ್ಷಿಸಿರಿ. ಇಂತಹ, ಯುವಂ=ನೀವಿಬ್ಬರು ಅಸ್ಮೇ=ನಮಗಾಗಿ, ತ್ರಿಃ=ಸರ್ವ ಕಾಲದಲ್ಲಿಯೂ, ನಾಂದ್ಯಂ (ನದಿ ಹರ್ಷೇ-ನಂದತೀತಿ ನಾದಃ, ತಸ್ಯ ಭಾವಃ) ಸುಖವನ್ನು, ವಹತಂ=(ವಹಪ್ರಾಪಣೇ) ಹೊಂದಿಸಿ ಕೊಡಿರಿ. ಪೃಕ್ಷಃ=(ಪೃಚೀ ಸಂಪರ್ಕೇ ಪ್ರಾಣಪಾಲನ ಪೂರಣಯೋಃ) ಪುಷ್ಟಿಯನ್ನೂ ತ್ರಿಃ=ಮೂರುಕಾಲದಲ್ಲಿರತಕ್ಕುದನ್ನೂ ಅಂದರೆ ಸರ್ವದಾನಿತ್ಯದಲ್ಲಿಯೂ, ಅಕ್ಷರೇವ=ವೇದಗಳ ಅಕ್ಷರಗಳಂತೆಯೇ, (ಅಂದರೆ ವೇದೋಕ್ತಗಳಾದ ಮಂತ್ರಗಳು ನಿಖಿಲ ಅಭೀಷ್ಟವನ್ನು ಹೇಗೆ ಕೊಡುತ್ತವೋ ಹಾಗೆಯೇ) ಪಿನ್ವತಂ ಕೊಡಿರಿ. || ೪ ||

ಭಾ || (1) ಯದ್ವರ್ತನಂ ಸರ್ವಲೋಕೇಷು ತಚ್ಚ ತ್ರಿಕಾಲಗಂ ಯುವಯೋರೇವ ಸರ್ವಂ ||
(2) ಭಕ್ತೇ ಜನೇ ಸುಷ್ಠು ರಕ್ಷ್ಯೇ ಸುಭಕ್ತೇ ತ್ರಿಧೇವ ಕಾಲಾನುಗತೇ ಸುಶಿಕ್ಷತಂ ||
(3) ಸುಖಂ ವಹೇತಂ ಚ ಯುವಾಂ ತು ನಃ ಸದಾ ಪುಷ್ಟಿಂ ಚ ನಿತ್ಯಾಂ ಕ್ಷರತಂ ವರ್ಣವಚ್ಚ || ೪ ||

ಅ || (1) ಸಮಸ್ತ ಲೋಕಗಳಲ್ಲಿರುವಿಕೆಯು, ಯಾವುದೋ, ಮೂರು ಕಾಲಗಳಲ್ಲಿಯೂ ಇರತಕ್ಕದ್ದು ಯಾವುದೋ, ಆ ಎಲ್ಲಾ ಕರ್ಮಗಳೂ ನಿಮ್ಮಿಬ್ಬರ ಅಧೀನಗಳೇ. (ಅಂದರೆ ಅತೀತಾದಿ ಮೂರು ಕಾಲಗಳಲ್ಲಿ ರತಕ್ಕ ಪ್ರಾಣಿಗಳ ಸಮಸ್ತಕರ್ಮಗಳನ್ನು ಪ್ರವರ್ತಿಸುವುದಕ್ಕಾಗಿ ಸರ್ವತ್ರ ಸನ್ನಿಹಿತರಾಗಿರಿ. ಎಲ್ಲಾ ಕರ್ಮಗಳೂ ನಿಮ್ಮ ಅಧೀನಗಳೇ ಆಗಿವೆ.) (2) ಭಕ್ತ ಜನರ ವಿಷಯದಲ್ಲಿ ಸರ್ವದಾ ಶಿಕ್ಷಿಸಿರಿ. ಮೂರು ಕಾಲಗಳಲ್ಲಿರತಕ್ಕ, ಚೆನ್ನಾಗಿ ರಕ್ಷಣಾರ್ಹನಾದ ಅತಿಭಕ್ತನ ವಿಷಯದಲ್ಲಿ ಸರ್ವದಾ ಚೆನ್ನಾಗಿ ಅತಿಶಯವಾಗಿ ಶಿಕ್ಷಿಸಿರಿ. (ತ್ರಿಕಾಲ ಸಂಬಂಧ ನಿಮಿತ್ತವಾಗಿ ಭಕ್ತನಿಗೆ ತ್ರೈವಿಧ್ಯವು. ಸ್ವರೂಪತಃ ತ್ರೈವಿಧ್ಯವಿಲ್ಲ ಎಂದು ತೋರಿಸುವುದಕ್ಕಾಗಿ ಇವ ಶಬ್ದವು) (3) ನೀವಿಬ್ಬರು ನಮಗೆ ಸದಾ ಸುಖವನ್ನು ಹೊಂದಿಸಿಕೊಡಿರಿ. ವೈದಿಕಮಂತ್ರಗಳು ಸರ್ವಾಭೀಷ್ಟವನ್ನು ಹೇಗೆ ಕೊಡುತ್ತವೋ ಹಾಗೆಯೇ ಸದಾ ನಿತ್ಯವಾದ ಪುಷ್ಟಿಯನ್ನು ಕೊಡಿರಿ. || ೪ ||

ಋ (೪೦೩) ತ್ರಿರ್ನೋ ರಯಿಂ ವಹತಮಶ್ವಿನಾ ಯುವಂ ತ್ರಿರ್ದೇವತಾತಾ ತ್ರಿರುತಾವತಂ ಧಿಯಃ। ತ್ರಿಃ ಸೌಭಗತ್ವಂ ತ್ರಿರುತ ಶ್ರವಾಂಸಿ ನಸ್ತ್ರಿಷ್ಠಂ ವಾಂ ಸೂರೇ ದುಹಿತಾಽಽರುಹದ್ರಥಂ || ೫ ||

ಅ || ಸೂರೇ=ಸೂರ್ಯನ, ದುಹಿತಾ=ಮಗಳಾದ ಉಷಾದೇವಿಯು, ತ್ರಿಷ್ಠಂ=ಮೂರುಕಾಲಗಳಲ್ಲಿರತಕ್ಕ, ವಾಂ ರಥಂ=ನಿಮ್ಮಿಬ್ಬರ ರಥವನ್ನು, ಆರುಹತ್=ಏರಿರುವಳು- ಅಂತಹ ಸೂರ್ಯನ ಪುತ್ರಿಯ ಪತಿರೂಪರಾದ, ಅಶ್ವಿನಾ=ಅಶ್ವಿನೀದೇವತೆಗಳಿರಾ, ಯುವಂ=ನೀವಿಬ್ಬರು, ನಃ=ನಮಗೆ, ತ್ರಿಃ=ನಿತ್ಯದಲ್ಲಿಯೂ, ರಯಿಂ=ದ್ರವ್ಯವನ್ನು ವಹತಂ=ಹೊಂದಿಸಿಕೊಡಿರಿ, ದೇವತಾತಾ=(ತನು ವಿಸ್ತಾರೇ ಕರಣೇ ಚ) ದೇವತೆಗಳ ಸಮುದಾಯವನ್ನು. ತ್ರಿಃ=ನಿತ್ಯದಲ್ಲಿಯೂ, ವಹತಂ=ಹೊಂದಿಸಿಕೊಡಿರಿ (ದೇವತೆಗಳು ಸದಾ ನಾವು ಮಾಡತಕ್ಕ ಪೂಜೆಯನ್ನು ಸ್ವೀಕರಿಸುವುದಕ್ಕಾಗಿ ಹೇಗೆ ಬಂದಾರೆಯೋ, ಹಾಗೆ ಮಾಡಿರಿ.) ಉತ=ಮತ್ತು, ಧಿಯಃ=ಬುದ್ಧಿಗಳನ್ನು, ಶುದ್ಧವಾದ ಬುದ್ಧಿಯನ್ನು ಕೂಡ, ತ್ರಿಃ=ನಿತ್ಯದಲ್ಲಿಯೂ, ಅವತಂ=ರಕ್ಷಿಸಿರಿ. ಸೌಭಗತ್ವಂ=) (ಸುಭಗ ಏವ ಸೌಭಗಃ ತಸ್ಯ ಭಾವಃ ಸೌಭಗತ್ವಂ ಸೌಭಾಗ್ಯವನ್ನೂ, ನಃ=ನಮಗೆ, ತ್ರಿ=ಸರ್ವಕಾಲಗಳಲ್ಲಿಯೂ, ಅವತಂ=

ರಕ್ಷಿಸಿರಿ. ಶ್ರವಾಂಸಿ ಉತ=ಕೀರ್ತಿಯನ್ನು ಕೂಡ, ಸದಾ ರಕ್ಷಿಸಿ.(ಅಧ್ಯಾತ್ಮ.)ವಾಂ=ನಿಮ್ಮಿಬ್ಬರ ಪ್ರಸಾದದಿಂದ, ಸೂರೇಃ ಜ್ಞಾನಿಯಾದ ಗುರುವಿನ, ದುಹಿತಾ=ಮಗಳಾದ ಬುದ್ಧಿಯು, ತ್ರಿವೃಂ=೩ ಕಾಲಗಳಲ್ಲಿರುವ, ರಥಂ= ರಥವನ್ನು ಆರುಹತ್=ಏರಿತು. (ಅಂದರೆ ಭಕ್ತರದೇಹದಲ್ಲಿ ಜ್ಞಾನೋದಯವು ಆಯ್ತು.) ॥ ೫ ॥

ಭಾ ॥ (1) ವಿತ್ತಂ ಚ ನಿತ್ಯಂ ದೇವತತಿಂ ಚ ನಿತ್ಯಂ ಧಿಯಂ ಚ ಶುಭ್ರಾಂ ನಿತ್ಯಮೇವಾ ವತಂ ನಃ । (2) ಕೀರ್ತಿಂ ಸೌಭಾಗ್ಯಂ ರಕ್ಷತಂ ನಃ ಸದೈವ ಕಾಲತ್ರಯೇ ಯುಷ್ಮ ದೀಯಂ ರಥಂ ಚ । ಪುತ್ರೀ ಸೂರ್ಯಸ್ಯಾರುಹ (3) ದ್ಭಕ್ತದೇಹೇ ಜ್ಞಾನೋದ ಯೋ ವಾ ಭಗವತ್ಪ್ರಸಾದಾತ್ ॥ ೫ ॥

ಅ ॥ ಅಶ್ವಿನೀ ದೇವತೆಗಳಿರಾ ನಿತ್ಯದಲ್ಲಿಯೂ ದ್ರವ್ಯವನ್ನು ನಿತ್ಯದಲ್ಲಿಯೂ ದೇವತೆಗಳ ಸಮುದಾಯವನ್ನು (ಸಮಸ್ತ ಚೇತನರಿಗೂ ಬುದ್ಧಿಯು ಸ್ವಾಭಾವಿಕವಾಗಿಯೇ ಇದ್ದುದರಿಂದ ಪ್ರಾರ್ಥನೆಯು ಏತಕ್ಕೆ ಎಂದರೆ) ಶುಭ್ರವಾದ ಶುದ್ಧವಾದ ಬುದ್ಧಿಯನ್ನು ನಿತ್ಯದಲ್ಲಿಯೂ ರಕ್ಷಿಸಿರಿ. (2) ಸದಾ ೩ ಕಾಲಗಳಲ್ಲಿಯೂ ನಮಗೆ ಕೀರ್ತಿಯನ್ನು ಸೌಭಾಗ್ಯವನ್ನೂ ರಕ್ಷಿಸಿರಿ. ಸೂರ್ಯನ ಮಗಳಾದ ಉಷಾದೇವಿಯು ಕಾಲತ್ರಯದಲ್ಲಿರುವ ನಿಮ್ಮ ರಥವನ್ನು ಏರುವವಳು. (3) (ಅಧ್ಯಾತ್ಮಾರ್ಥವು) ಪೂಜ್ಯರಾದ ನಿಮ್ಮಿಬ್ಬರ ಅನುಗ್ರಹದಿಂದ (ಆವಾವಕಾಲದಲ್ಲಿರತಕ್ಕದೇಹಾಖ್ಯ ರಥವನ್ನು ಏರಿದನು) ಭಕ್ತಜನರ ದೇಹದಲ್ಲಿ ಜ್ಞಾನೋದಯವಾಯ್ತು. ॥ ೫ ॥

೩೪ (೪೦೪) ತ್ರಿರ್ನೋ ಅಶ್ವಿನಾ ದಿವ್ಯಾನಿ ಭೇಷಜಾ ತ್ರಿಃ ಪಾರ್ಥಿವಾನಿ ತ್ರಿರುದತ್ತಮದ್ಭ್ಯಃ। ಓಮಾನಂ ಶಂಯೋರ್ಮಮಕಾಯ ಸೂನವೇ ತ್ರಿಧಾತು ಶರ್ಮ ವಹತಂ ಶುಭಸ್ಪತೀ ॥ ೬॥ ೪ ॥

ಅ ॥ ಅಶ್ವಿನಾ =ಅಶ್ವಿನೀ ದೇವತೆಗಳಿರಾ, ಅದ್ಭ್ಯಃ=ಉ=ಸುಖಕ್ಕಾಗಿಯೇ, ನಃ=ನಮಗೋಸ್ಕರ, ತ್ರಿಃ= ಸರ್ವಕಾಲಗಳಲ್ಲಿಯೂ, ದಿವ್ಯಾನಿ=ಸ್ವರ್ಗಲೋಕದಲ್ಲಿ ಉಂಟಾಗತಕ್ಕ ಭೇಷಜಾ=ಔಷಧಗಳನ್ನು ದತ್ತಂ=ಕೊಡಿರಿ ತ್ರಿಃ=ಸಮಸ್ತ ಕಾಲಗಳಲ್ಲಿಯೂ ಪಾರ್ಥಿವಾನಿ=ಪೃಥಿವಿಯಲ್ಲಿ ಉಂಟಾಗತಕ್ಕ ಔಷಧಗಳನ್ನೂ ಕೊಡಿರಿ. ಹಾಗೆಯೇ ಸರ್ವಕಾಲಗಳಲ್ಲಿಯೂ ಅಂತರಿಕ್ಷದಲ್ಲಿರತಕ್ಕ ಸೂರ್ಯಾದಿ ಲೋಕದಲ್ಲಿರುವ ಔಷಧಗಳನ್ನು ಕೊಡಿರಿ. (ಔಷಧಗಳು ಸುಖಸಾಧನಗಳು ಮಾತ್ರವಲ್ಲ. ಮತ್ತು) ಶುಭಸ್ಪತೀ=ಶುಭ ಕರ್ಮಾದಿಗಳಿಗೆ ಅಧಿಪತಿಗಳಾದ, ನೀವಿಬ್ಬರು ಶಂಯೋಃ=ಔಷಧದಿಂದುಂಟಾದ ಐಹಿಕಸುಖವುಳ್ಳ, ಸೂನವೇ=ನಿನ್ನ ಮಗ, ಮಮಕಾಯ=ಸ್ವಲ್ಪನಾದ, ನನಗೋಸ್ಕರ ಅಥವಾ ನಿಮ್ಮ ಮಗನಾದ ಮಮಕಾಯ=ನನ್ನ ಸಂಬಂಧಿಯಾದ ಮಗನಿಗೋಸ್ಕರ, ಓಮಾನಂ= (ಮಾನೇಷು ಜ್ಞಾನೇಷು ಊಯತೇ ವಿಷಯೀಕ್ರಿಯತೇ ಇತಿ ಓಮಾನಂ ಅಜ್ ಪೂರ್ವಕಾತ್ ವೇಞ್ ತಂತು ಸಂತಾನೇ) ಅನುಭವವಿಷಯಕವಾದ ತ್ರಿಧಾತು=ಮೂರು ಕಾಲಗಳಲ್ಲಿಯೂ ಧರಿಸಲ್ಪಡುವ, ಅಂದರೆ ನಿತ್ಯವಾದ, ಶರ್ಮ=ಮುಕ್ತಿಯಲ್ಲಿರುವ ಸುಖವನ್ನು ವಹತಂ=ಕೊಡಿರಿ. ॥ ೬ ॥

ಭಾ॥ (1)ಸರ್ವೇಷು ಕಾಲೇಷ್ವಪಿ ಭೇಷಜಾನಿ ನಃ ಸರ್ವಲೋಕಪ್ರಭವಾನಿ ದತ್ತಂ। ಅದ್ಭ್ಯಃ ಸುಖಾಯೈವ (2) ಸುಖಂ ಮದೀಯ ಸ್ವಲ್ಪಸ್ಯ ಯುಷ್ಮತ್ಪುತ್ರ ಕಸ್ಯಾಥದತ್ತಂ॥ ಪತೀ ಶುಭಸ್ಯಾಥ(3)ಸುತಸ್ಯ ಶಂ ಯೋರ್ಮದೀಯಸ್ಯೈವಾವಹತಂ ಸುಖಂ ವಾ ॥೬॥೪॥

ಅ ॥ (1)[ಪೂರ್ವಾರ್ಧವನ್ನು ಸಂಕ್ಷೇಪತಃ ವ್ಯಾಖ್ಯಾನ ಮಾಡುತ್ತಾರೆ.] ಕರ್ಮಜನ್ಯವಾದ ಸುಖಕ್ಕೋಸ್ಕರವೇ ಸಮಸ್ತಲೋಕಗಳಲ್ಲಿ ಹುಟ್ಟಿರುವ ಔಷಧಗಳನ್ನೂ ಸಮಸ್ತಕಾಲಗಳಲ್ಲಿಯೂ ನಮಗೆ ಕೊಡಿರಿ. (ಅಪ್(ಜಲ)ಗಳು ಲೋಕಗಳಾಗದಿರುವುದರಿಂದ ಯೇದೇವಾಸಃಎಂಬುವಲ್ಲಿ ಹೇಗೋ ಹಾಗೆಯೇ ಅಪ್‌ಶಬ್ದದಿಂದ ಅಂತರಿಕ್ಷ ಲೋಕವನ್ನು ಉಪಲಕ್ಷಣವಾಗಿಟ್ಟುಕೊಂಡರೆ ವಿರೋಧವಿಲ್ಲ. ತಥಾಚ) ಅಂತರಿಕ್ಷ ಲೋಕದಲ್ಲಿ ಉಂಟಾದ ಔಷಧಗಳನ್ನು ನಮ್ಮ ಸುಖಕ್ಕೋಸ್ಕರವೇ ಕೊಡಿರಿ. (ಈ ಕಲ್ಪದಲ್ಲಿ ಸುಖಾಯ ಎನ್ನುವುದು ಅಧ್ಯಾಹಾರವು.) [2] [ಉತ್ತರಾರ್ಧವನ್ನು ವ್ಯಾಖ್ಯಾನ ಮಾಡುತ್ತಾರೆ.] [ಔಷಧಗಳು ಸುಖಸಾಧನಗಳು ಮಾತ್ರವಲ್ಲ. ಮತ್ತೆ ಶುಭಕರ್ಮಾದಿಗಳಿಗೆ ಅಧಿಪತಿಗಳಾದ ನೀವಿಬ್ಬರು ಔಷಧದಿಂದುಂಟಾದ ಐಹಿಕ ಸುಖವುಳ್ಳ ನಿಮ್ಮ ಪುತ್ರನಾದ, ಅಶ್ವಲ್ಪವಾದ ನನಗೇನೇ ಕೊಡಿರಿ. [3] [ಅಥಸುತಸ್ಯ ಇತ್ಯಾದಿಗಳಿಂದ ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ. ಐಹಿಕ ಸುಖವುಳ್ಳ ನನ್ನ ಸಂಬಂಧಿಯಾದ ಮಗನಿಗೇನೇ ನಿತ್ಯವಾದ ಮುಕ್ತಿಯಲ್ಲಿರುವ ಸುಖವನ್ನು ಕೊಡಿರಿ.

ಮೂ ॥ ಯೇದೇವಾಸೋ ದಿವ್ಯೇಕಾದಶಸ್ಥ ಪೃಥಿವ್ಯಾ ಮಧ್ಯೇಕಾದಶಸ್ಥ। ಅಪ್ಸುಕ್ಷಿತೋ ಮಹಿನೈಕಾದಶಸ್ಥ ತೇ ದೇವಾಸೋ ಯಜ್ಞಮಿಮಂಜುಷಧ್ವಂ॥ ಈ ಋಕ್ಕಿನಲ್ಲಿ ೩೩ ದೇವತೆಗಳು ಸೋಮಪಾನ ಮಾಡುವವರು ೩೩ ದೇವತೆಗಳು ಸೋಮಪಾನವಾದದಿದ್ದವರು ಎಂದುಪ್ರತಿಜ್ಞೆ ಮಾಡಿ ಸೋಮಪಾನ ಮಾಡತಕ್ಕ ದೇವತೆಗಳನ್ನು ಹೇಳಿ, ೧೧ ಪ್ರಯಾಜರು ೧೧ ಅನುಯಾಜರು, ೧೧ ಉಪಯಾಜರು, ಇವರು ಸೋಮಪಾನ ಮಾಡುವವರು, ಎಂಬ ಬ್ರಾಹ್ಮಣ ವಾಕ್ಯಾನುಸಾರವಾಗಿ ಎಲೋ ದೇವತೆಗಳಿರಾ, ಪ್ರಯಾಜ ಎಂದು ಹೆಸರುಳ್ಳ ೧೧ ಮಂದಿ ನೀವು, ಸ್ವರ್ಗದಲ್ಲಿರುತ್ತೀರೋ ಯಾರು ಪೃಥಿವಿಯಲ್ಲಿ ಅನುಯಾಜ ಎಂದು ಹೆಸರುಳ್ಳವರು ೧೧ ಮಂದಿ ಯಾರು ಅಂತರಿಕ್ಷದಲ್ಲಿರತಕ್ಕ ಸೂರ್ಯಾದಿ ಲೋಕಗಳಲ್ಲಿ ಆವಾಸಮಾಡುವ ೧೧ ಮಂದಿ ಇರುತ್ತೀರೋ ಆ ಎಲ್ಲಾ ದೇವತೆಗಳಾದ ನೀವು ಭಕ್ತರಲ್ಲಿ ದಯೆ ಮಾಡುವುದು ಇದು ಮೊದಲಾದ ಮಹಿಮೆಯಿಂದ ಕೂಡಿದವರಾಗಿ ಈ ಯಜ್ಞವನ್ನು ಅಂಗೀಕರಿಸಿರಿ, ಎಂದು ಅರ್ಥವು ತೋರುತ್ತದೆ. ಹಾಗೆಯೇ ಅದ್ಭ್ಯಃ ಎನ್ನುವಲ್ಲಿಯೂ ಅಂಗೀಕರಿಸಬಹುದು. ಅದ್ಭ್ಯಃ=ಅಂತರಿಕ್ಷದಲ್ಲಿರತಕ್ಕ ಸೂರ್ಯಾದಿ ಲೋಕಗಳಲ್ಲಿರುವ ಔಷಧಗಳನ್ನು ಕೊಡಿರಿ. ॥ ೬ ॥ ೪ ॥

ಅ ವ॥ ಈ ವರ್ಗವನ್ನು ಶಿಷ್ಯರ ಬುದ್ಧಿಯನ್ನು ಪರೀಕ್ಷಿಸುವುದಕ್ಕಾಗಿಯೂ, ತಾನು ಹೇಳದ ಮಾರ್ಗದಿಂದಲೇ ಬುದ್ಧಿವಂತರಾದ ಶಿಷ್ಯರು ವ್ಯಾಖ್ಯಾನ ಮಾಡಬೇಕೆಂದು ಶಿಕ್ಷಿಸುವುದಕ್ಕಾಗಿಯೂ ಆಚಾರ್ಯರು ವ್ಯಾಖ್ಯಾನ ಮಾಡಲಿಲ್ಲ, ಎಂದು ಸಂಪ್ರದಾಯ ವೇತ್ತೃಗಳು ಹೇಳುತ್ತಾರೆ.

ಮೂ ॥ (೪೦೫) ತ್ರಿರ್ನೋ ಅಶ್ವಿನಾ ಯಜತಾ ದಿವೇ ದಿವೇ ಪರಿ ತ್ರಿಧಾತು

ಪೃಥಿವೀಮಶಾಯತಂ । ತ್ರಿಸ್ರೋ ನಾಸತ್ಯಾ ರಥ್ಯಾ ಪರಾವತ ಆತ್ಮೇವ

ವಾತಃ ಸ್ವಸರಾಣಿ ಗಚ್ಛತಂ ॥ ೭ ॥

ಅ ॥ ಅಶ್ವಿನೌ=ಅಶ್ವಿನೀ ದೇವತೆಗಳಿರಾ, (ಯಾವ ನೀವು) ತ್ರಿಧಾತು=(ದಧತೇ ಇತಿ ಧಾತುಃ=ಕಾಲವು. ಧಾ ಞ ಧಾರಣ ಪೋಷಣಯೋಃ. ತುನ್ ಪ್ರತ್ಯಯವು. (ಮೂರು ಕಾಲಗಳಲ್ಲಿಯೂ, ಪೃಥಿವಿ=ಭೂಲೋಕವನ್ನು ಪರಿ ಅಶಾಯತಂ=(ಶ್ರೀಙಸ್ವಪ್ನೇ) ವ್ಯಾಪಿಸುವವರಾಗಿರುತ್ತೀರೋ, ಅಂತಹ ನೀವು, ದಿವೇ ದಿವೇಃ=ಪ್ರತಿದಿವಸದಲ್ಲಿಯೂ ಸಾಯಂಕಾಲ ಪ್ರಾತಃಕಾಲ ಮಧ್ಯಾಹ್ನ ರೂಪ ೩ ಕಾಲಗಳಲ್ಲಿಯೂ, ನಃ=ನಮಗೆ, ಯಜತಾ

(ಯಜ ದೇವ ಪೂಜಾ ಸಂಗತಿ ಕರಣ ದಾನೇಷು, ಕರ್ಮಣಿ ಅತಚ್ ಪ್ರತ್ಯಯವು.) ಯಾಜ್ಯರು ಆಗುವಿರಿ. ನಾಸತ್ಯಾ=ಅಶ್ವಿನೀ ದೇವತೆಗಳಿರಾ, ಪರಾವತಃ=ದೂರದಿಂದಲೂ (ಬರುವುದಕ್ಕಾಗಿ) ತಿಸ್ರಃ ಮೂರು ಲೋಕಗಳ ಸಂಬಂಧಿಗಳಾದ, ರಥ್ಯಾಃ=ರಥವು ಹೋಗತಕ್ಕ ಮಾರ್ಗಗಳು,(ನಿಮ್ಮಿಬ್ಬರಿಗೆ ಸುಗಮಗಳಾಗಿವೆ. ಇದ ಕಾರಣ) ಆತ್ಮೇವ ವಾತಃ=ಜಗತ್ತಿಗೆ ನಿಯಾಮಕನಾಗಿ ಒಳಗೆ ಇರುವ ವಾಯುವಿನಂತೆ, ಸ್ವಸರಾಣಿ=ಸಮಸ್ತ ದಿನಗಳಲ್ಲಿಯೂ, ಗಚ್ಛತಂ=ಬನ್ನಿರಿ. ॥ ೭ ॥

ಋ ॥ (೪೦೬) ತ್ರಿರಶ್ವಿನಾ ಸಿಂಧುಭಿಃ ಸಪ್ತಮಾತೃಭಿಸ್ತ್ರಯ ಆಹಾವಾ

ಸ್ತ್ರೇಧಾ ಹವಿಷ್ಕೃತಂ । ತಿಸ್ರಃ ಪೃಥಿವೀರುಪರಿ ಪ್ರವಾ ದಿವೋ ನಾಕಂ

ರಕ್ಷೇಥೇ ದ್ಯುಭಿರಕ್ತುಭಿರ್ಹಿತಂ ॥ ೮ ॥

ಅ॥ ಹೇ ಅಶ್ವಿನಾ= ಎಲೋ ಅಶ್ವಿನೀ ದೇವತೆಗಳಿರಾ [ಯಾವ ಕಾರಣದಿಂದ ನಿಮ್ಮನ್ನು ಕುರಿತು] ತ್ರಯಃ= ಪ್ರಾತಃ ಸವನ ಮೊದಲಾದ ೩ ಸವನ ಸಂಬಂಧಿಗಳಾದ, ಆಹಾವಾಃ=[ಆಜ್ ಪೂರ್ವಕಾತ್ ಹ್ವೇಞ ಶಂಸು ಸಂತಾನೇ] ಆಹ್ವಾನಗಳು,[ಮಾಡಲ್ಪಡುತ್ತವೋ, [ಹೇಗೆ] ತ್ರೇಧಾ= ಮೂರು ಪ್ರಕಾರ ಚರು ಆಜ್ಯ ಪುರೋಡಾಶ ರೂಪವಾಗಿ, ಹವಿಃ=ಹವಿಸ್ಸು, ಕೃತಂ=ಮಾಡಲ್ಪಟ್ಟದೋ, ಯಾವ ನೀವು, ದಿವೋಃ ಉಪರಿ = ಸ್ವರ್ಗಕ್ಕಿಂತಲೂ ಮೇಲುಗಡೆ, ಪ್ರವಾಃ = ಪ್ರಕೃಷ್ಟ ಗತಿಯುಳ್ಳವರೋ [ವಾಗತಿಗಂಧನಯೋಃ] ಯಾವ ನೀವಿಬ್ಬರು, ನಾಕಂ= ಸ್ವರ್ಗಲೋಕವನ್ನು ದ್ಯುಭಿಃ = ದಿನಗಳಿಂದ, [ದಿನಗಳಲ್ಲಿ] ಅಕ್ತುಭಿಃ= ರಾತ್ರಿಗಳಿಂದಲೂ [ರಾತ್ರಿಗಳಲ್ಲಿಯೂ] ಹಿತಂ = ಹಿತಕರವು ಹೇಗಾದೀತೋ ಹಾಗೆ ರಕ್ಷೇಥೇ= ರಕ್ಷಿಸಿರುವಿರೋ, ಅಂತಹ ನೀವು, ಸಿಂಧುಭಿಃ= ೭ದಿಗಳಿಂದಲೂ, ಸಪ್ತ ಮಾತೃಭಿಶ್ಚ= ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ। ವಾರಾಹೀ ಚ ತಥೇಂದ್ರಾಣೀ ಚಾಮುಂಡಾ ಸಪ್ತಮಾತರಃ॥ ಎಂಬ ಪ್ರಮಾಣಾನುಸಾರ ಸರಸ್ವತ್ಯಾದಿ ೭ ಮಂದಿ ಮಾತೃಗಳಿಂದಲೂ ಕೂಡಿ, ತಿಸ್ರಃ= ಪೃಥಿವೀಃ=ವೇದ್ಯುತ್ತರಾ ಸದಶ್ಚೈವ ಪ್ರಾಗ್ವಂಶೋ ಯೋನಯಃ ಸ್ಮೃತಾಃ॥ ಎಂಬ ಭಾಷ್ಯಾನುಸಾರ ಉತ್ತರಾವೇದಿ, ಸದೋ ಮಂಟಪ, ಪ್ರಾಗ್ವಂಶ,(ಹವಿರ್ಗೃಹದಿಂದ ಪ್ರಾಗ್ಭಾಗವು ಪ್ರಾಗ್ವಂಶವೆನಿಸುತ್ತದ.) ಹೀಗೆ ದೇವತೆಯನ್ನು ಕೂಡ್ರಿಸುವುದಕ್ಕಾಗಿ ಹೇಳದ ಯೋನಿ ಎನಿಸಿಕೊಂಡ ೩ ಪೃಥವಿಗಳನ್ನು ಕುರಿತು ಪ್ರತ್ಯಾಗಚ್ಛತಂ=ಬನ್ನಿರಿ. ॥ ೮ ॥

ಋ ॥ (೪೦೭) ಕ್ವ೧ ತ್ರೀ ಚಕ್ರಾ ತ್ರಿವೃತೋ ರಥಸ್ಯ ಕ್ವ೧ ತ್ರಯೋ

ಬಂಧುರೋ ಯೇ ಸನೀಳಾಃ । ಕದಾ ಯೋಗೋ ವಾಜಿನೋ ರಾಸ

ಭಸ್ಯ ಯೇನ ಯಜ್ಞಂ ನಾಸತ್ಯೋಪಯಾಥಃ ॥ ೯ ॥

ಅ ॥ ನಾಸತ್ಯಾ=ಅಶ್ವಿನೀದೇವತೆಗಳಿರಾ, (ನಿಮ್ಮಿಬ್ಬರ) ತ್ರಿವೃತಃ=(ತ್ರೈಆವರಣೀ) ೩ ಲೋಕಗಳನ್ನು ಮರಿಸುವ, (ಸಂಚಾರದಿಂದ ೩ ಲೋಕಗಳ ಸಂಬಂಧವುಳ್ಳ) ರಥಸ್ಯ=ರಥದ, ತ್ರೀ=ಮೂರು, ಚಕ್ರಾ= ಚಕ್ರಗಳು, ಕ್ವ=ಎಲ್ಲಿ? (ಅಶ್ವನೀದೇವತೆಗಳ ಸ್ತೋತ್ರ ಪ್ರಸಂಗದಲ್ಲಿ ಚಕ್ರಾದಿಗಳ ಪ್ರಶ್ನೆಯು ಏಕೆ? ಎಂದರೆ

ಅಶ್ವಿನೀ ದೇವತೆಗಳನ್ನು ನೋಡಬೇಕೆಂಬ ಅವಲವಿಕೆಯಿಂದ ಈ ರೀತಿಯಾಗಿ ಪ್ರಶ್ನಿಸುತ್ತಾರೆ.) ರಥಸ್ಯ= ರಥದ, ಯೇ ಸನೀಳಾಃ=ಯಾವುವು ಪಕ್ಷಿಗಳ ಆವಾಸಸ್ಥಾನವಾದ ಗೃಹಗಳಿಂದ (ಗೂಡು) ಕೂಡಿ ಇವೆಯೋ, ಅಂತಹ, ಬಂಧುರಃ=ಉನ್ನತ ಆನತಗಳಾದ (ಉಚ್ಚನಮ್ರಗಳಾದ) ಅಂದರೆ ಅತಿ ರಮ್ಯಗಳೂ ತಗ್ಗು ಪ್ರದೇಶಗಳೂ ಆದ, ತ್ರಯಃ=೩ ಪ್ರದೇಶಗಳು, ಕ್ವ=ಎಲ್ಲಿ? ಯೇನ=ಯಾವ ರಥದಿಂದ ಯಜ್ಞಂ=ನಮ್ಮ ಯಜ್ಞವನ್ನು ಉಪಯಾಥಃ=ಬರುತ್ತೀರೋ, (ಅಂತಹ ರಥವಲ್ಲಿ) ರಾಸಭಸ್ಯ=ಗರ್ದಭದ (ಕತ್ತೆಯ) ಅಥವಾ, ವಾಜಿನಃ=ಕುದುರೆಯ ಯೋಗಃ=ಸಂಬಂಧವು ಕದಾ=ಯಾವಾಗ ತಾನೇ ಆಗುವುದು. ॥ ೯ ॥

ಋ (೪೦೮) ಆ ನಾಸತ್ಯಾ ಗಚ್ಛತಂ ಹೂಯತೇ ಹವಿರ್ಮಧ್ವಃ ಪಿಬತಂ
ಮಧುಪೇಭಿರಾಸಭಿಃ । ಯುವೋರ್ಹಿ ಪೂರ್ವಂ ಸವಿತೋಷಸೋ
ರಥಮೃತಾಯ ಚಿತ್ರಂ ಘೃತವಂತಮಿಷ್ಯತಿ ॥ ೧೦ ॥

ಅ ॥ ನಾಸತ್ಯಾ=ಅಶ್ವಿನೀ ದೇವತೆಗಳಿರಾ, (ಯಾವ ಕಾರಣದಿಂದ ನಿಮ್ಮಿಬ್ಬರನ್ನು ಕುರಿತು ನಮ್ಮಿಂದ) ಹವಿಃ ಹೂಯತೇ=ಹವಿಸ್ಸು ಹೋಮಿಸಲ್ಪಡುತ್ತದೋ. (ಅದ ಕಾರಣ) ಆ ಗಚ್ಛತಂ=ಬನ್ನಿರಿ. ಮತ್ತು, ಮಧುಪೇಭಿಃ=ಸೋಮಪಾನ ಮಾಡುವ, ಆಸಭಿಃ=ಆಸ್ಯಗಳಿಂದ, ಮಧ್ವಃ=ಮಧುವನ್ನು (ಅಂದರೆ ಸೋಮವನ್ನು) ಪಿಬತಂ=ಕುಡಿಯಿರಿ.(ಹಾಗಾದರೆ ನಾಸತ್ಯರಿಬ್ಬರಿಗೆ ೨ ಮುಖಗಳಿರುವುದರಿಂದ ಆಸಭ್ಯಾಂ ಎಂದು ದ್ವಿವಚನವನ್ನು ಹೇಳ ಬೇಕಿತ್ತು. ಆಸಭಿಃ ಎಂದು ಬಹುವಚನವು ಹೇಗೆ ಕೂಡುತ್ತದೆ? ಎಂದರೆ ಉಷಾದೇವಿಯನ್ನು ಮುಂದೆ ಹೇಳುವುದರಿಂದ ಅವಳ ಮುಖವನ್ನೂ ಸೇರಿಸಿಕೊಂಡು ಆಸಭಿಃ ಎಂದು ಬಹುವಚನವನ್ನು ಹೇಳಿದ್ದು.) ಯುವೋಃ=ನಿಮ್ಮಿಬ್ಬರ ಚಿತ್ರಂ=ಅತ್ಯದ್ಭುತವಾದ, ಘೃತವಂತಂ= (ಘೃಕ್ಷರಣದೀಪ್ತ್ಯೋಃ) ಮಹಾ ಪ್ರಕಾಶವುಳ್ಳ, ರಥಂ=ರಥವನ್ನು ಸವಿತಾಉಷಸಃ=ಸೂರ್ಯನಮಗಳಾದ ಉಷಾದೇವಿಯು.(ಸವಿತೃಶಬ್ದದ ಷಷ್ಠೀ ವಿಭಕ್ತಿಗೆ ಸು ಆದೇಶವು. ಉಷಸ್ ಶಬ್ದದ ಪ್ರಥಮಾವಿಭಕ್ತಿಗೆ ಷಷ್ಠೀ ವಿಭಕ್ತಿಯ ಆದೇಶವು. ಹೀಗೆ ವ್ಯತ್ಯಾಸವು ಸವಿತು: ಸುತಾಉಷಾಃ ಎಂದು) ಋತಾಯ =(ಋತ ಮುಂಛಶಿಲೇ ತೋಯೇ ದೀಪ್ತೇ ಸತ್ಯೇಽಭಿ ಪೂಜಿತೇ। ಎಂಬ ವಿಶ್ವಕೋಶದಿಂದ ಋತಂ=ಪೂಜಿಸಲ್ಪಟ್ಟ ಯಜ್ಞವು.) ಯಜ್ಞಕ್ಕೋಸ್ಕರ, (ಅಂದರೆ ಯಜ್ಞವನ್ನು ಕುರಿತು ಹೋಗುವುದಕ್ಕಾಗಿ) ಹಿ-ಯಾವ ಕಾರಣದಿಂದ ಪೂರ್ವಂ=ಪ್ರಥಮದಲ್ಲಿಯೇ, ಇಷ್ಯತಿ=(ಇಷಗತೌ) ಹೋಗುತ್ತಾಳೋ ಹಿ=ಪ್ರಸಿದ್ಧ. ಉಷೋದೇವಿಯು ರಥವನ್ನು ಕುರಿತು ಹೋಗಿದ್ದಾಳೆ ಎಂದು ಹೇಳಿದ್ದಕ್ಕೆ ಪ್ರಯೋಜನವೇನೆಂದರೆ) ಅತಃ=ಅದಕಾರಣ ಆ ಉಷೋದೇವಿಯಿಂದ ಕೂಡಿಕೊಂಡು ನೀವು ಬನ್ನಿರಿ ಎಂದು ಭಾವವು) ॥ ೧೦ ॥

ಋ ॥ (೪೦೯) ಆ ನಾಸತ್ಯಾ ತ್ರಿಭಿರೇಕಾದಶೈರಿಹ ದೇವೇಭಿರ್ಯಾತಂ
ಮಧುಪೇಯಮಶ್ವಿನಾ । ಪ್ರಾಯುಸ್ತಾರಿಷ್ಟಂ ನೀರಪಾಂಸಿ ಮೃಕ್ಷತಂ
ಸೇಧತಂ ದ್ವೇಷೋ ಭವತಂ ಸಚಾಭುವಾ ॥ ೧೧ ॥

ಅ॥ ನಾಸತ್ಯಾಅಶ್ವಿನಾ=ನಾಸಿಕಾಭಿಮಾನಿಗಳಾದ ಅಶ್ವಿನೀ ದೇವತೆಗಳಿರಾ, ತ್ರಿಭಿಃ ಏಕಾದಶೈಃ= ಹನ್ನೊಂದರ ಮೂರು ವರ್ಗಗಳಾದ, (ಅಂದರೆ ಮೂವತ್ತಮೂರು) ದೇವೇಭಿಃ= ದೇವತೆಗಳಿಂದೊಡಗೂಡಿ, ಇಹ=

ಈ ಯಜ್ಞದಲ್ಲಿ, ಮಧು ಪೇಯಂ= ಪಾನ ಮಾಡಲಿಕ್ಕೆ ಅರ್ಹವಾದ ಸೋಮವನ್ನು ಕುರಿತು ಆಯಾತಂ=ಬನ್ನಿರಿ. ಬಂದು, ಆಯುಃ= ಆಯುಷ್ಯವನ್ನು (ನಮಗಾಗಿ) ಪ್ರತಾರಿಷ್ಟಂ= (ತ್ವಾಪ್ಲವನ ತರಣಯೋಃ)ಕೊಡಿರಿ. ರಪಾಂಸಿ= (ರಪವಧೇ ಕರಣೆ ಅಸುನ್ ಪ್ರತ್ಯಯವು. ರಪ್ಯತೇ ಬಧ್ಯತೇ ನರಕಾದೌ ಯೈಃ ಪಾಪೈಃ ತಾನಿ ರಪಾಂಸಿ. ಯಾವ ಪಾಪಗಳಿಂದ ನರಕಾದಿಗಳಲ್ಲಿ ಬಂಧಿಸಲ್ಪಡುತ್ತಾನೋ ಅಂತಹ ಪಾಪಗಳು ರಪಾಂಸಿ ಎನಿಸುತ್ತವೆ) ನಮ್ಮ ಪಾಪ ಗಳನ್ನು ನಿಃ ಮೃಕ್ಷತಂ=(ಮೃಜೂಷ್ ಶುದ್ಧೌ.) ಶೋಧಿಸಿರಿ. ದ್ವೇಷಃ=(ದ್ವಿಷ ಅಪ್ರೀತೌ) ದ್ವೇಷಿಗಳಾದ ಶತ್ರುಗ ಳನ್ನು ಸೇಧತಂ= ಪ್ರತಿಷೇಧಿಸಿರಿ. ಸಚಾಭುವಾ = (ಸಹ ಶಬ್ದದ ಹಕಾರಕ್ಕೆ ಚಕಾರಾದೇಶವು. ಸಹ ಭವತಃ= ಒಟ್ಟಿಗೇನೇ ಇರುವ) ನಮಗೆ ಸಖಿಗಳಾಗಿ, ಭವತಂ=ಆಗುವಿರಿ.

ವಿ॥ ಅಷ್ಟೌ ವಸವಃ ಏಕಾದಶರುದ್ರಾಃದ್ವಾದಶಾದಿತ್ಯಾಃ ಪ್ರಜಾಪತಿಶ್ಚ ವಷಟ್ಕಾರಶ್ಚೈತೇ ದೇವಾಃ ಸೋಮಪಾಃ ಎಂದು ಬ್ರಾಹ್ಮಣವು. ೮ ವಸುಗಳು. ೧೧ ರುದ್ರರು, ೧೨ ಆದಿತ್ಯರು, ಪ್ರಜಾ ಪತಿ ವಷಟ್ಕಾರ, ಎಂದು ಸೋಮಪಾನ ಮಾಡುವ ದೇವತೆಗಳು (೩೩)ಮೂವತ್ತಮೂರು. ॥ ೧೧ ॥

ಋ ॥ ೪೧೦ ॥ ಆ ನೋ ಅಶ್ವಿನಾ ತ್ರಿವೃತಾ ರಥೇನಾರ್ವಾಂಚಂ ರ
ಯಿಂ ವಹತಂ ಸುವೀರಂ। ಶೃಣ್ವಂತಾ ವಾಮವಸೇ ಜೋಹವೀಮಿ
ವೃಧೇ ಚ ನೋ ಭವತಂ ವಾಜಸಾತೌ ॥ ೧೨ ॥ ೫ ॥ ೩೪॥

ಅ ॥ ಅಶ್ವಿನಾ=ಅಶ್ವಿನೀ ದೇವತೆಗಳಿರಾ, ನಃ=ನಮಗೆ(ಕೊಡುವುದಕ್ಕಾಗಿ) ಸುವೀರಂ=(ಶೋಭನಃವೀರಃ= ಪುತ್ರಃ ಯಸ್ಯ) ಪುತ್ರನಿಂದ ಕೂಡಿರುವ, ರಯಿಂ =ದ್ರವ್ಯವನ್ನು, ತ್ರಿವೃತಾರಥೇನ= ಸಂಚಾರದಿಂದ ೩ ಲೋಕಗಳ. ಸಂಬಂಧವುಳ್ಳ ರಥದಿಂದ, ಅರ್ವಾಂಚಂ =ಸ್ವರ್ಗಕ್ಕಿಂತ ಅಧಮಫಲರೂಪವಾದುದನ್ನು ಆ ವಹತಂ= ಹೊಂದಿಸಿಕೊಡಿರಿ (ಅಂದರೆ= ಸ್ವರ್ಗಕ್ಕಿಂತ ಅಧಮ ಫಲರೂಪವಾದ ಪುತ್ರ ಸಹಿತವಾದ ದ್ರವ್ಯವನ್ನು ನಮಗೆ ಕೊಡುವುದಕ್ಕಾಗಿ ರಥದಿಂದ ವಸ್ತುವನ್ನು ಹೊಂದಿರಿ.) ಶೃಣ್ವಂತಾ =ಕೇಳುವ (ಹೇಳಿದುದನ್ನು ನಿಶ್ಚಯಿಸುವ) ವಾಂ =ನಿಮ್ಮನ್ನು ಕುರಿತು, (ಅಹಂ =ನಾನು) ಅವಸೇ = ರಕ್ಷಣೆಗೋಸ್ಕರ, ಜೋಹವೀಮಿ= (ಹ್ವೇಞ ಕಂಠು ಸಂತಾನೇ) ಕರಿಯುತ್ತೇನೆ. (ಆ ಕಾರಣ) ವಾಜಸಾತೌ= ಯುದ್ಧದಲ್ಲಿ,(ವಾಜ =ಯುದ್ಧದ ಪ್ರೈಕ್ಷಯೇ, ತಥಾಪಿ ಧಾತುಗಳಿಗೆ ಅನೇಕಾರ್ಥಗಳಿದ್ದುದರಿಂದ, ಪ್ರಾಪ್ತಿಯೆಂದರ್ಥವು) ನಃ ನಮ್ಮ ಅವಸೇ= ರಕ್ಷಣೆಗಾಗಿಯೂ ವೃಧೇ= ಅಭಿವೃದ್ಧಿಗಾಗಿಯೂ, ಭವತಂ= ಆಗಿರಿ. ॥ ೧೨ ॥ ೫ ೩೪ ॥

ಅವ॥ ಹ್ವಯಾಮ್ಯಗ್ನಿಂ ಎನ್ನುವ ೩೫ನೇ ಸೂಕ್ತಕ್ಕೆ ೧೧ ಋಕ್ಕುಗಳು. ೨ ವರ್ಗಗಳು. ೧ನೇ ಋಕ್ಕಿಗೆ ಅಗ್ನಿ ಮಿತ್ರ ವರುಣ ರಾತ್ರಿ ಸವಿತೃ ದೇವತೆಗಳು. ಬೇರೆ ಋಕ್ಕುಗಳಿಗೆ ಸವಿತೃ ದೇವತೆಯು. ೧ನೇ ಮತ್ತೂ ೯ನೇ ಋಕ್ಕುಗಳು ಜಗತೀ ಛಂದಸ್ಸುಗಳು ಬೇರೆ ಋಕ್ಕುಗಳು. ತ್ರಿಷ್ಟುಪ್ ಛಂದಸ್ಸುಗಳು.

ಋ ॥ (೪೧೧) ಹ್ವಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೇ ಹ್ವಯಾಮಿ ಮಿತ್ರಾ
ವರುಣಾವಿಹಾವಸೇ। ಹ್ವಯಾಮಿ ರಾತ್ರೀಂ ಜಗತೋ ನಿವೇಶನೀಂ
ಹ್ವಯಾಮಿ ದೇವಂ ಸವಿತಾರಮೂತಯೇ ॥ ೧ ॥

ಅ॥ (ನಾನು) ಸ್ವಸ್ತಯೇ=ನಿರಂತರದಲ್ಲಿಯೂ ಸೌಖ್ಯವಾಗುವುದಕ್ಕಾಗಿ, ಪ್ರಥಮಂ ಅಗ್ನಿಂ=ವೈಶ್ವಾನರಾಖ್ಯ ಅಗ್ನಿಯನ್ನು, ಹ್ವಯಾಮಿ=ಕರೆಯುತ್ತೇನೆ. ಮಿತ್ರಾವರುಣೌ=ಮಿತ್ರ ವರುಣರೆಂಬ ಭಗವದ್ರೂಪ ವಿಶೇಷಗಳನ್ನು ಅವಸೇ=ರಕ್ಷಣೆಗೋಸ್ಕರ, ಇಹ= ಈ ಯಜ್ಞದಲ್ಲಿ, ಹ್ವಯಾಮಿ= ಕರೆಯುತ್ತೇನೆ. ಜಗತಃ= ಸಮಸ್ತ ಜಗತ್ತಿಗೆ, ನಿವೇಶನೀಂ =(ನಿವಿಂಶಂತೇ ಅತ್ರ.) ಆಶ್ರಯಭೂತಳಾದ, ರಾತ್ರೀಂ= (ರಾತಿ ದದಾತಿ ಇಷ್ಟಂ ರಾಧಾತುವಿಗೆ ತ್ರಿಪ್ ಪ್ರತ್ಯಯ) ರಾತ್ರೀ ಎಂದು ಹೆಸರುಳ್ಳ ಶ್ರೀ ವಿಷ್ಣುವನ್ನು, ರಾತ್ರಿ ದೇವತೆಯನ್ನು, ಹ್ವಯಾಮಿ =ಕರೆಯುತ್ತೇನೆ. ಸವಿತಾರಂ ದೇವಂ =ಸವಿತೃ ದೇವತೆಯನ್ನು ಕೂಡ ಊತಯೇ = ರಕ್ಷಣೆಗೋಸ್ಕರ ಹ್ವಯಾಮಿ=ಕರೆಯುತ್ತೇನೆ. (ಅಗ್ನ್ಯಾದಿ ಪದಗಳಿಂದ ಶ್ರೀ ವಿಷ್ಣುವನ್ನೇ ಇಟ್ಟುಕೊಳ್ಳಬೇಕು. ಅವುಗಳನ್ನು ಶ್ರೀ ವಿಷ್ಣುವಿನಲ್ಲಿ ನಿರ್ವಚನ ಮಾಡಿಯಾಗಿದೆ.)

ವಿ ॥ (1) ಸ್ಥೂಲಭುಗ್ವೈಶ್ವಾನರಃಪ್ರಥಮಃ ಪಾದಃಎಂದು ಮಾಂಡೂಕೋಪನಿಷತ್ತಿನಲ್ಲಿ ವಿಶ್ವ ಎಂದು ಹೆಸರುಳ್ಳ ಜಾಠರಾಗ್ನಿಯಲ್ಲಿ ಅಂತರ್ಗತನಾದ ವೈಶ್ವಾನರನು ಪ್ರಥಮನೆಂದು ಹೇಳಿದೆ. (2) ಆದುದರಿಂದಲೇ ಬ್ರಾಹ್ಮಣದಲ್ಲಿ ಅಗ್ನಿರ್ವಾಏಷವೈಶ್ವಾನರಃ ಎಂಬ ವಾಕ್ಯದಲ್ಲಿ ಶರೀರದಲ್ಲಿರತಕ್ಕ ಜಾಠರಾಗ್ನಿಗೆ ವೈಶ್ವಾನರ ಎಂದು ಹೆಸರುಳ್ಳ ವಿಶ್ವನೆನಿಸಿದ ಶ್ರೀ ಹರಿಯ ಸನ್ನಿಧಾನವಿದ್ದುದರಿಂದ ವೈಶ್ವಾನರನೆಂದು ಹೆಸರು ಜ್ವಾಲೆಗಳಿವೆ ಎಂದೂ ಹೇಳಿದೆ. (3)ಈ ಅಭಿಪ್ರಾಯದಿಂದಲೇ ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ । ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ । ಎಂದು ಶ್ರೀ ಕೃಷ್ಣಪರಮಾತ್ಮನು ಭಗವದ್ಗೀತೆಯಲ್ಲಿ ಅರ್ಜುನನಿಗೆ ಉಪದೇಶಿಸಿರುವನು ॥ ೧ ॥

ಭಾ॥ (1) ಹ್ವಯಾಮಿ ದೇವಾನಗ್ನಿಪೂರ್ವಾನಥೋವಾ ವಿಷ್ಣುಂ ತ್ವಸ್ತ್ರೈರ್ನಾಮಭೀರಾತಿ
ಯಸ್ಮಾತ್। ರತಿಪ್ರದಶ್ಚ ರತಿದಶ್ಚಾತ್ಸರಾತ್ರೀ ॥ ೧ ॥

ಅ॥ ಅಗ್ನಿಯೇ ಮೊದಲಾಗಿ ಉಳ್ಳ ದೇವತೆಗಳನ್ನು ಕರೆಯುತ್ತೇನೆ. ಅಥವಾ ಅಗ್ನಿ ಮೊದಲಾದ ಪದಗಳನ್ನು ಮೊದಲು ಶ್ರೀವಿಷ್ಣುವಿನಲ್ಲಿ ನಿರ್ವಚನ ಮಾಡಿದ ಪ್ರಕಾರ ಆಯಾಯ ಅಗ್ನ್ಯಾದಿ ನಾಮಗಳಿಂದ ಯುಕ್ತನಾದ ಶ್ರೀವಿಷ್ಣುವನ್ನು ಕರೆಯುತ್ತೇನೆ. (2) (ಮೊದಲು ವ್ಯಾಖ್ಯಾನ ಮಾಡದಿರುವುದರಿಂದ ರಾತ್ರಿ ಶಬ್ದವನ್ನು ಶ್ರೀವಿಷ್ಣುವಿನಲ್ಲಿ ನಿರ್ವಚನ ಮಾಡುತ್ತಾರೆ.) ಯಾವ ಕಾರಣದಿಂದ ಶ್ರೀವಿಷ್ಣುವು ಭಕ್ತರಿಗೆ ಅಭೀಷ್ಟವನ್ನು ಕೊಡುತ್ತಾನೋ ಆದ ಕಾರಣ ಶ್ರೀವಿಷ್ಣುವು ರಾತ್ರಿ ಎನಿಸುತ್ತಾನೆ. (ಸರ್ವಧಾತುಭ್ಯಃಷ್ಟ್ರನ್ ಎಂಬ ಸೂತ್ರದಿಂದ,ರಾತಿಧಾತುವಿಗೆ ಷ್ಟ್ರನ್ ಜೀಷ್ಂ) ಅಥವಾ ಶ್ರೀಹರಿಯು ರಮಣಕರ್ತನಾದುದರಿಂದ ರಾತ್ರೀ ಎನಿಸುತ್ತಾನೆ.(ರಮುಕ್ರೀಡಾಯಾಂ ಅಕಾರಾಗಮವು ಷ್ಟ್ರಪ್ರತ್ಯಯವು) ಅಥವಾ ರತಿಯನ್ನು ಕೊಡುವುದರಿಂದ ಶ್ರೀಹರಿಯು ರಾತ್ರೀ ಎನಿಸುತ್ತಾನೆ (ರತಂ ರಾತೀತಿ ರಾತ್ರೀ.ರಾದಾನೇ ರತಶಬ್ದದಲ್ಲಿ ರೇಫದಿಂದ ಪರವಾದ ಅ ಅಕಾರಕ್ಕೆ ದೀರ್ಘವು. ತಕಾರದಿಂದ ಮೇಲಿನ ಅಕಾರಕ್ಕೆ ಲೋಪವು ಈ ಕಾರವು.) ॥ ೧ ॥

ಋ ॥ (೪೧೨) ಆ ಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ
ಮರ್ತ್ಯಂ ಚ। ಹಿರಣ್ಯಯೇನ ಸವಿತಾ ರಥೇನಾ ದೇವೋಯಾತಿ ಭುವ
ನಾನಿ ಪಶ್ಯನ್ ॥ ೨ ॥

ಅ॥ದೇವಃ ಸವಿತಾ=ಕ್ರೀಡಾದಿಗುಣವಿಶಿಷ್ಟನಾದ ಸೂರ್ಯನು, ಕೃಷ್ಣೇನ ರಜಸಾ=ರಾತ್ರಿಯಲ್ಲಿ ಉಂಟಾಗತಕ್ಕ ಕಗ್ಗತ್ತಲೆಯನ್ನು)ನಿವರ್ತಕನಾಗಿ ಪ್ರವರ್ತಿಸುತ್ತಾ, ಆ ವರ್ತಮಾನಃ=ಚೆನ್ನಾಗಿ ಪ್ರವರ್ತಿಸುವವನಾಗಿ,

ಅಮೃತಂ=ದೇವತೆಗಳ ಸಮುದಾಯವನ್ನು, ಮರ್ತ್ಯಂ=ಮನುಷ್ಯರ ಸಮುದಾಯವನ್ನೂ, (ಇತರ ಪ್ರಾಣಿಗಳನ್ನೂ,) ನಿವೇಶಯನ್= ರಾತ್ರಿಗಳಲ್ಲಿ ನಿದ್ರೆ ಬರುವಂತೆ ಮಾಡುವವನಾಗಿ, ಹಿರಣ್ಯಯೇನ ರಥೇನ=ಹಿರಣ್ಮಯವಾದ ರಥದಿಂದ, ಭುವನಾನಿ=ಎಲ್ಲಾ ಲೋಕಗಳನ್ನು, ಪಶ್ಯನ್=ನೋಡುತ್ತಾ, ಆಯಾತಿ=ಬರುತ್ತಾನೆ. (ಲೋಕಗಳನ್ನು ನೋಡುವುದಕ್ಕಾಗಿ ಸೂರ್ಯಸಂಚಾರವೆಂದುಕ್ತವಾಯ್ತು.) ಅಥವಾ ಸವಿತಾ ದೇವಃ=ಸೂರ್ಯಾಂತರ್ಗತನಾದ ಜನಾರ್ದನನು, ಕೃಷ್ಣೇನ ರಜಸಾ ಆ ವರ್ತಮಾನಃ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥವು. ಅಥವಾ (ಕೇವಲ ವಿಷ್ಣುಪಕ್ಷದಲ್ಲಿಯೂ ಅಧ್ಯಾತ್ಮಸ್ಥ ವಿಷ್ಣುಪಕ್ಷದಲ್ಲಿಯೂ) ಸವಿತಾ ದೇವ: ಜಗತ್ತನ್ನು ಸೃಷ್ಟಿಸುವ ಶ್ರೀವಿಷ್ಣುವು, ಕೃಷ್ಣೇನ ರಜಸಾ=ಅವಿದ್ಯೆಯೆನ್ನುವ ಹೃದಯಾಂಧಕಾರದಿಂದ, (ಅದನ್ನು ಹೋಗಲಾಡಿಸುವವನಾಗಿ) ಆ ವರ್ತಮಾನಃ=ಚೆನ್ನಾಗಿ ಪ್ರವರ್ತಿಸುವವನಾಗಿ, ಅಮೃತಂ=ಮುಕ್ತರ ಸಮುದಾಯವನ್ನೂ ಮರ್ತ್ಯಂ=ಸಂಸಾರಿಗಳ ಸಮುದಾಯವನ್ನೂ ನಿವೇಶಯನ್ =ಪ್ರಲಯಕಾಲದಲ್ಲಿ ತನ್ನಲ್ಲಿಯೇ ಆವಾಸಗೊಳಿಸುವವನಾಗಿ, ಹಿರಣ್ಯಯೇನ ರಥೇನ=ಹಿರಣ್ಮಯವಾದ ತನ್ನ ರಥದಿಂದ, ಅಥವಾ ಭಕ್ತರ ಶುದ್ಧವಾದ ಶರೀರದಿಂದ, ಭುವನಾನಿ=ಲೋಕಗಳನ್ನು ಪಶ್ಯನ್=ನೋಡುತ್ತಾ, ಆಯಾತಿ=ಬರುತ್ತಾನೆ. ॥ ೨ ॥

ಭಾ॥ (1) ಕೃಷ್ಣಂ ರಜಃ ಶಾರ್ವರಂ ಹೃತ್ತಮೋ ವಾ।(2) ದೇವಾನ್ಮನುಷ್ಯಾನಥವಾ ವಿಮುಕ್ತಾನ್ ಬದ್ಧಾನ್ ಸೃತಿಗಾನ್ ಲಯೇಷು। ನಿಶಾಸು ವಾ ಸ್ವಾತ್ಮನಿ ಸಂನಿವೇಶಯನ್ ಪ್ರಸ್ವಾಪಯನ್ವಾ ರವಿಗೋ ಜನಾರ್ದನಃ ॥ ೨ ॥

ಅ॥ (1) (ಇಲ್ಲಿ ಕೃಷ್ಣಂ ರಜಃ ಎನ್ನುವದನ್ನು ಶರೀರದಿಂದ ಹೊರಗೂ ಒಳಗೂ ವ್ಯಾಖ್ಯಾನ ಮಾಡುತ್ತಾರೆ) ಕೃಷ್ಣಂ ರಜಃ ಅಂದರೆ— (ಬಹಿಃ) ರಾತ್ರಿಯಲ್ಲಿ ಉಂಟಾಗತಕ್ಕ ಕಗ್ಗತ್ತಲೆಯು. (ಅಂತಃ) ಶರೀರದೊಳಗಿನ ಅಜ್ಞಾನಾಂಧಕಾರವು. (2) (ದೇವೋ ಅಮೃತಂ ಮರ್ತ್ಯಂಚ ನಿವೇಶಯನ್ನಾಯಾತಿ ಎಂಬುದನ್ನು ಈ ಪ್ರಕಾರ ವ್ಯಾಖ್ಯಾನ ಮಾಡುತ್ತಾರೆ.) (ಸೂರ್ಯದೇವನು, ಕಗ್ಗತ್ತಲೆಯನ್ನು ಪ್ರವರ್ತಿಸುವವನಾಗಿ) ದೇವತೆಗಳ ಸಮುದಾಯಗಳನ್ನೂ ಮನುಷ್ಯರ ಸಮೂಹಗಳನ್ನೂ (ಇತರ ಪ್ರಾಣಿಗಳನ್ನು) ರಾತ್ರಿಗಳಲ್ಲಿ ನಿದ್ರೆ ಮಾಡಿಸುವವನಾಗಿ, (ಹಿರಣ್ಮಯವಾದ ರಥದಿಂದ ಲೋಕಗಳನ್ನು ನೋಡುತ್ತಾ ಬರುತ್ತಾನೆ.) ಅಥವಾ ಸೂರ್ಯಾಂತರ್ಗತನಾದ ಜನಾರ್ದನನು ಕೃಷ್ಣೇನ ರಜಸಾ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥವು. ಅಥವಾ (ಜಗತ್ತನ್ನು ಸೃಷ್ಟಿಸುವ ಶ್ರೀವಿಷ್ಣುವು ಅವಿದ್ಯೆಯನ್ನುವ ಹೃದಯಾಜ್ಞಾನಾಂಧಕಾರವನ್ನು ಹೋಗಲಾಡಿಸುವವನಾಗಿ) ವಿಮುಕ್ತರ ಸಮುದಾಯಗಳನ್ನೂ ಸಂಸಾರಿಗಳಾದ ಮನುಷ್ಯರ ಸಮೂಹಗಳನ್ನು ಪ್ರಲಯಕಾಲದಲ್ಲಿ ತನ್ನಲ್ಲಿಯೇ ಇರಿಸುವವನಾಗಿ (ಹಿರಣ್ಮಯವಾದ ತನ್ನ ರಥದಿಂದ ಅಥವಾ ಭಕ್ತರ ಶುದ್ಧಶರೀರದಿಂದ ಲೋಕಗಳನ್ನು ನೋಡುತ್ತಾ ಬರುತ್ತಾನೆ. ॥ ೨ ॥

ಋ॥ (೪೧.೩) ಯಾತಿ ದೇವಃ ಪ್ರವತಾ ಯಾತ್ಯುದ್ವತಾ ಯಾತಿ ಶುಭ್ರಾಭ್ಯಾಂ ಯಜತೋ ಹರಿಭ್ಯಾಂ। ಆ ದೇವೋ ಯಾತಿ ಸವಿತಾ ಪರಾವತೋಽಪ ವಿಶ್ವಾ ದುರಿತಾ ಬಾಧಮಾನಃ ॥ ೩ ॥

ಅರ್ಥ ॥ (೪೧ನೇ ಋಕ್ಕಿನಲ್ಲಿ ಹೇಳಿದ ಆಯಾತಿ ಎನ್ನುವುದನ್ನು ಅನುವಾದ ಮಾಡಿ ಅದರ ವಿಶೇಷಣಗಳು ಇಲ್ಲಿ ಹೇಳಲ್ಪಡುತ್ತವೆ.) ದೇವಃ ಸವಿತಾ=ಸೂರ್ಯದೇವನು, ಪ್ರವತಾ=(ಪ್ರಪೂರ್ವಸ್ಯ ವನ ಷಣ ಸಂಭಕ್ತೌ ಪಚಾದ್ಯಚಂತಃ, ನೀಚತ್ವಾರ್ಥಕಃ) ತಗ್ಗಿದ ಪ್ರದೇಶದಿಂದ (ಅಂದರೆ ದಕ್ಷಿಣಾಯನದಲ್ಲಿ ತಗ್ಗು ಪ್ರದೇಶಗ

ಳಿಂದ) ಆಯಾತಿ= ಬರುತ್ತಾನೆ. ಉತ್ತರಾಯಣದಲ್ಲಿ, ಉದ್ವತಾ=ಎತ್ತರ ಪ್ರದೇಶಗಳಿಂದ ಉಚ್ಚಪ್ರದೇಶಗಳಿಂದ ನಿತ್ಯದಲ್ಲಿಯೂ ಆ ಯಾತಿ = ಬರುತ್ತಾನೆ. (ನಿತ್ಯಂ ಎಂಬ ವಚನವು ಕ್ರಿಯೆಯು ನಿತ್ಯವಾದುದು ಸೂರ್ಯನ ಸಂಚಾರವು ಸದಾತನ ಎಂಬ ಅರ್ಥದಲ್ಲಿ ಲಟ್ ಪ್ರಯೋಗವು.) ಯಜತಃ=(ಯಜಃ ಧಾತುವಿಗೆ ಅತ ಪ್ರತ್ಯಯವು) ಯಾಗ ವಿಷಯನಾದವನು, ಶುಭ್ರಾಭ್ಯಾಂ=(ಶುಭ್ರೌ ಚ ತೌ ರೌ ಚ ರಮಣೀಯೌ ಚ) (ಗಮನಾದಿಗಳಿಂದ ಶುಭ್ರಗಳೂ ರೂಪದಿಂದ ರಮಣೀಯಗಳೂ ಆದ, ಹರಿಭ್ಯಾಂ=ಎರಡು ಕುದುರೆಗಳಿಂದ, (ಯುಕ್ತವಾದ ರಥದಿಂದ) ಆ ಯಾತಿ= ಬರುತ್ತಾನೆ. ಮತ್ತು ಸವಿತಾ=ಸೂರ್ಯನು,(ಪ್ರಾಣಿಗಳ) ವಿಶ್ವಾ ದುರಿತಾ=ಸಮಸ್ತದುರಿತಗಳನ್ನು,ಅಪಬಾಧಮಾನಃ = ನಾಶಗೊಳಿಸುವವನಾಗಿ, ಪರಾವತಃ = ದೂರದಿಂದಲೇ ಆಯಾತಿ = ಬರುತ್ತಾನೆ,॥ ೩ ॥

ಭಾ ॥ (1) ಆಯಾತಿ ನಿತ್ಯಂ ಚೋಚ್ಚೈರ್ನೀಚೈಃ ಪ್ರದೇಶೈಃ ಶುಭ್ರಾಭ್ಯಾಂಯುಕ್ತೇನ ರಥೇನ ಯೋಜ್ಯಃ। (2) ಶುಭ್ರೌ ಚ ತೌ ರಮಣೀಯೌ ಚ ಶುಭ್ರೌ ಪುರೋಗಾಶ್ವೌ ಹರಿದಶ್ವೋ ಹಿ ಸೂರ್ಯಃ। ಪರಾವತೋ ದೂರತೋ ॥ ೩ ॥

ಅರ್ಥ ॥ (1) ಯಾಗವಿಷಯನಾದ ಸೂರ್ಯನು ನಿತ್ಯದಲ್ಲಿಯೂ ಉಚ್ಚಪ್ರದೇಶ ನೀಚಪ್ರದೇಶಗಳಿಂದ ಬರುತ್ತಾನೆ. ಶುಭ್ರಗಳೂ ರಮಣೀಯಗಳೂ ಆದ ಅಶ್ವಗಳಿಂದ ಕೂಡಿದ ರಥದಿಂದ ಬರುತ್ತಾನೆ। (೨) ಶುಭ್ರ ಶಬ್ದವು ಶ್ವೇತ (ಬಿಳಿಪು) ಎಂಬ ಅರ್ಥವನ್ನು ಹೇಳುತ್ತದೆ. ಎಂಬ ಪ್ರತೀತಿಯನ್ನು ನಿವಾರಿಸುವುದಕ್ಕಾಗಿ ಹೇಳುತ್ತಾರೆ-) ರಮುಧಾತುವಿಗೆ ಡ ಪ್ರತ್ಯಯವು. ಅಕಾರ ಲೋಪವು.) ಶುಭ್ರೌ ಚ ತೌ ರೌ =ರಮಣೀಯೌ ಚ ಶುಭ್ರೌ=ಗತ್ಯಾದಿಗಳಿಂದ ಶುಭ್ರಗಳೂ ರೂಪದಿಂದ ರಮಣೀಯಗಳೂ ಆಗಿರುವುದರಿಂದ ಶುಭ್ರೌ ಎನಿಸುತ್ತವೆ. ಹಾಗಾದರೆ ಸೂರ್ಯನಿಗೆ ೭ ಕುದುರೆಗಳು. ೨ ಕುದುರೆಗಳನ್ನು ತೆಗೆದುಕೊಂಡದ್ದು ಹೇಗೆ? ಎಂದರೆ—) ೭ ಕುದುರೆಗಳಲ್ಲಿ ಮುಂದೆ ಹೋಗುವವುಗಳು ಎರಡು ಕುದುರೆಗಳು. ಅವುಗಳೇ ಪ್ರಧಾನಗಳು. ಆದಕಾರಣ ಎರಡೇ ಕುದುರೆಗಳನ್ನು ಹೇಳಿರುತ್ತಾರೆ.) ಶುಭ್ರ ಶಬ್ದಕ್ಕೆ ಪ್ರಸಿದ್ಧವಾದ ಬಿಳಿಪು ಎಂಬ ಅರ್ಥವನ್ನು ಬಿಡಲು ಕಾರಣವೇನೆಂದರೆ) ಸೂರ್ಯನು ಹಸುರು ಬಣ್ಣದ ಕುದುರೆಗಳುಳ್ಳವನು. (ಅದಕಾರಣ (ಹೀಗೆ ಅರ್ಥ ಹೇಳಿದ್ದು) ಪರಾವತಃ ಎನ್ನುವುದಕ್ಕೆ ದೂರದಿಂದ ಎಂದರ್ಥವು) ॥ ೩ ॥

ಋ ॥ (೪೧೪) ಅಭೀವೃತಂ ಕೃಶನೈರ್ವಿಶ್ವರೂಪಂ ಹಿರಣ್ಯಶಮ್ಯಂ ಯಜತೋ ಬೃಹಂತಂ। ಆಸ್ಥಾದ್ರಥಂ ಸವಿತಾ ಚಿತ್ರಭಾನುಃ ಕೃಷ್ಣಾ ರಜಾಂಸಿ ತವಿಷೀಂ ದಧಾನಃ ॥ ೪ ॥

ಅರ್ಥ ॥ ಯಜತಃ =(ಯಜಧಾತೋಃ ಅತಚ್ ಪ್ರತ್ಯಯಃ) ಯಾಗ ವಿಷಯನಾದ, ಚಿತ್ರಭಾನುಃ= ಚಿತ್ರ ರಶ್ಮಿಗಳುಳ್ಳ, ಚಿತ್ರಜ್ಞಾನಗಳುಳ್ಳ, ಸವಿತಾ =ಶ್ರೀ ಜನಾರ್ದನನು, ಕೃಷ್ಣಾ ರಜಾಂಸಿ= ಕಗ್ಗತ್ತಲೆಗಳನ್ನು, ತವಿಷೀಂ =ತೇಜಸ್ಸನ್ನು ಕೂಡ, ದಧಾನಃ =ಧರಿಸಿದವನಾಗಿ, (ಅಂದರೆ ಅವುಗಳಿಗೆ ನಿಯಾಮಕನಾಗಿ) ಅಥವಾ ಕೃಷ್ಣಾ, ರಜಾಂಸಿ, ತವಿಷೀಂ =ತಮೋಗುಣ ರಜೋಗುಣ ಸತ್ವಗುಣಗಳನ್ನು (ಅವುಗಳಿಗೆ ನಿಯಾಮಕನಾಗಿ) ದಧಾನಃ= ಧರಿಸುವವನಾಗಿ, ಕೃಶನೈಃ= ಸುವರ್ಣಗಳಿಂದ, ಅಭಿವೃತಂ =ಆಚ್ಛಾದಿತವಾದ, ವಿಶ್ವರೂಪಂ =ವಿಚಿತ್ರವಾದ,ಹಿರಣ್ಯಶಮ್ಯಂ= ಹಿರಣ್ಮಯವಾದ ನುಗ ಕೀಲುಗಳಿಂದ ಕೂಡಿದ, ಬೃಹಂತಂ ರಥಂ = ದೊಡ್ಡ ರಥವನ್ನು ಆ ಅಸ್ಥಾತ್= ಏರಿದನು- (ಆಙಪೂರ್ವಕಾತ್ ಸ್ಥಾಗತಿ ನಿವೃತ್ತೌ) ॥ ೪ ॥

ಭಾ ॥ (1) ಅಭೀವೃತಶ್ಚ ರಥೋ ಹಿರಣ್ಯೈಸ್ತಸ್ಯ ಶಮ್ಯಾ ಯುಗಾಣೀ ।(2) ತಮಃಪ್ರಕಾಶೌ ಯದಧೀನೌ ಯತಸ್ತೌ ದಧಾನ ಇತ್ಯುಚ್ಯತೇ ವಾಸುದೇವಃ ॥ (3) ಕೃಷ್ಣಂ ರಜಸ್ತವಿಷೀ ಸತ್ವಪೂರ್ವಾ ಗುಣಾಸ್ತ್ರಯೋ ವ್ಯುತ್ಕ್ರಮಾತ್ ॥ ೪ ॥

ಅರ್ಥ ॥ (1) ಇಲ್ಲಿ ರಥವು ಕೃಶನಗಳಿಂದ ಅಭಿವೃತ (ಆಚ್ಛಾದಿತ) ಎಂದು ಹೇಳಿದೆ, ಅದನ್ನು ವ್ಯಾಖ್ಯಾನ ಮಾಡುತ್ತಾರೆ.) (ಕೃಶನಂ ಲೋಹಂ ಕನಕಂ ಎಂದು ಕೃಶನ ಶಬ್ದವು ಹಿರಣ್ಯನಾಮಗಳಲ್ಲಿ ಪಠಿತವಾದ ಪ್ರಯುಕ್ತ) ರಥವು ಹಿರಣ್ಯಗಳಿಂದ ಆಚ್ಛಾದಿತವಾಗಿದೆ. (ಶಮ್ಯಾ ಶಬ್ದವನ್ನು ವ್ಯಾಖ್ಯಾನಮಾಡುತ್ತಾರೆ. ರಥದ ಶಮ್ಯಾ ಅಂದರೆ ಯುಗಾಣೀ = ಯುಗ ಕೀಲವು. (ಕೀಲಕಂತು ದ್ವಯೋರಣೀ ಎಂಬ ಕೋಶದಿಂದ ಕೀಲ= ಆಣಿಯು (ಕೀಲು) (ನೊಗದ ಕೀಲು) (2) (ಆದಿತ್ಯವರ್ಣಂ ತಮಸಃ ಪರಸ್ತಾತ್ ಎನ್ನುವುದರಿಂದ ಶ್ರೀ ವಿಷ್ಣುವು ತಮಸ್ಸಿನಿಂದ ದೂರನು ಎಂದು ಹೇಳಿದೆ. ಮತ್ತು ನ ತತ್ರ ಸೂರ್ಯೋ ಭಾತಿ ಎಂಬ ವಾಕ್ಯದಿಂದ ಶ್ರೀ ವಿಷ್ಣುವು ಸೂರ್ಯಾದಿ ಪ್ರಕಾಶಗಳಿಗೆ ಅವಿಷಯನು ಎಂದೂ ಹೇಳಿದೆ. ಆದ ಕಾರಣ ತಮಃ ಪ್ರಕಾಶಗಳನ್ನು ಶ್ರೀ ಹರಿಯು ಧರಿಸಿರುತ್ತಾನೆ ಎಂಬ ಉಕ್ತಿಯು ಹೇಗೆ ಕೂಡುತ್ತದೆ ಎಂದರೆ) ತಮಃ ಪ್ರಕಾಶಗಳು ಪ್ರವೃತ್ತಿ ರೂಪ ಕಾರ್ಯದಲ್ಲಿ ಯಾವ ಶ್ರೀ ವಿಷ್ಣುವಿನ ಅಧೀನಗಳಾಗಿಯೇ ಇವೆಯೋ, ಯಾವ ಶ್ರೀ ವಿಷ್ಣುವಿನಿಂದಲೇ ಉತ್ಪನ್ನಗಳಾಗಿಯೇ ಇವೆಯೋ, ಅಂತಹ ವಾಸುದೇವನು ಆ ತಮಃ ಪ್ರಕಾಶಗಳನ್ನೂ ಧರಿಸುತ್ತಾನೆ, ಎಂದು ಹೇಳಲ್ಪಡುತ್ತಾನೆ. (ಕೃಷ್ಣಾ ಇತ್ಯಾದಿ ಪದಗಳಿಗೆ ಬೇರೆ ರೀತಿಯಾಗಿಯೂ ಅರ್ಥಗಳನ್ನು ಹೇಳುತ್ತಾರೆ.) (ಕೃಷ್ಣಾ ರಜಾಂಸಿ ಎಂಬುದಲ್ಲಿ ಕೃಷ್ಣ ರಜಃ ಶಬ್ದಗಳಿಗೆ ಮೊದಲು ಅಂಧಕಾರ ಎಂಬ ಅರ್ಥವನ್ನು ಹೇಳಿರುವರು. ಈಗಲಾದರೂ ತಮೋಗುಣ ರಜೋಗುಣ ಎಂಬ ಅರ್ಥವನ್ನು ಗ್ರಹಿಸಿರುವರು. ಸತ್ವಾದಿಗುಣಗಳ ಪ್ರವೃತ್ತಿ ವಿಕಾರವು ಮಹತ್ತತ್ವ ಅಹಂಕಾರ ತತ್ವ ಮೊದಲಾದುದು. ಅವು ಅನೇಕ ವಿಧಗಳಾಗಿರುವುದರಿಂದ ಅದನ್ನು ವಿವಕ್ಷೆ ಮಾಡಿಕೊಂಡು ಶ್ರುತಿಯಲ್ಲಿ ಕೃಷ್ಣಾ ರಜಾಂಸಿ ಎಂಬ ಬಹುವಚನವು) ಸತ್ವ ಗುಣವೇ ಮೊದಲಾದ ಮೂರುಗುಣಗಳು ಕೃಷ್ಣ ರಜಃ ತವಿಷೀ ಎಂಬ ಮೂರು ಪದಗಳಿಂದ ಹೇಳಲ್ಪಡುತ್ತವೆ (ಯಥಾ ಕ್ರಮವಾಗಿ ಅಲ್ಲ. ಮತ್ತೆ) ವ್ಯುತ್ಕ್ರಮವಾಗಿ (ಏಕೆಂದರೆ. —ಸತ್ವ ಗುಣದಲ್ಲಿ ಕೃಷ್ಣತ್ವವಿಲ್ಲ. ತಮಸ್ಸಿನಲ್ಲಿ ತವಿಷೀತ್ವ (ತೇಜಸ್ತ್ವ) ವಿಲ್ಲ.

ವಿ ॥ (1) ಕೃಷ್ಣತ್ವವು ತಮಸ್ಸಿನಲ್ಲಿದೆ ಎಂಬುವುದು ಅಜಾಮೇಕಾಂ ಲೋಹಿತ ಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಜನಯಂತೀಂ ಸರೂಪಾಂ, ಎಂಬಲ್ಲಿ ಪ್ರಕೃತಿಯಿಂದ ಆಗತಕ್ಕ ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕಾರಣೀಭೂತಗಳಾದ ರಜೋ ಗುಣ ಸತ್ವ ಗುಣ ತಮೋ ಗುಣಗಳನ್ನು ಲೋಹಿತ ಶುಕ್ಲ ಕೃಷ್ಣ ಶಬ್ದಗಳಿಂದ ಗ್ರಹಣ ಮಾಡಿರುವುದರಿಂದ ಸಿದ್ಧಿಸುತ್ತದೆ. 2) ಸತ್ವಾತ್ಸಂಜಾಯತೇ ಜ್ಞಾನಂ ಎಂಬ ಪ್ರಮಾಣದಿಂದ ತೇಜಸ್ಸಿನಲ್ಲಿ ಪ್ರಕಾಶ ಹೇತುತ್ವವಿದ್ದ ಪ್ರಯುಕ್ತ ಸತ್ವ ಗುಣವಿದೆ ಎಂಬುವುದು ಸಿದ್ಧವಾಗುತ್ತದೆ ॥ ೪ ॥

ಋ ॥ (೪೧೫) ವಿ ಜನಾಞ್ಛ್ಯಾವಾಃ ಶಿತಿಪಾದೋ ಅಖ್ಯನ್ರಥಂ ಹಿರಣ್ಯಪ್ರಉಗಂ ವಹಂತಃ । ಶಶ್ವದ್ವಿಶಃ ಸವಿತುರ್ದೈವ್ಯಸ್ಯೋಪಸ್ಥೇ ವಿಶ್ವಾ ಭುವನಾನಿ ತಸ್ಥುಃ ॥ ೫ ॥

ಅ ॥ ಶ್ಯಾವಾಃ= (ಕ್ಷ್ವಾ ಸ್ವಾ ಶ್ವಾ ದ್ವಾ ಭ್ಯೋವಃ ಎಂಬ ಸೂತ್ರದಿಂದ ವ ಪ್ರತ್ಯಯವು. ಶ್ಯೈಙ್ ಗತೌ.) (ಶ್ಯಾವಃ ಸ್ಯಾತ್ಕಪಿಶೋ ಧೂಮ್ರಃ ಎಂಬ ಕೋಶದಿಂದ ಕೃಷ್ಣ ಪೀತ (ಕಪ್ಪು ಹಳದಿ) ಬಣ್ಣಗಳಿಂದ ಮಿಶ್ರವಾದ

ಕೊಂಡಿರುವುದರಿಂದ) ಶ್ಯಾವ ವರ್ಣಗಳಾದ ಶಿತಿ ಪಾದಃ =(ಶಿತಿಃ ಕೃಷ್ಣೇ ಶಿತೇ ಪ್ರೋಕ್ತೋ ಎಂಬ ವಿಶ್ವ ಕೋಶದಿಂದ) ನೀಲ ಪಾದಗಳುಳ್ಳ, ಹಿರಣ್ಯ ಪ್ರಉಗಂ =ಹಿರಣ್ಯದಿಂದ ಸಂಬದ್ಧವಾದ ರಥದ ಅವಯವಗಳ ಸಂಧಿ ಉಳ್ಳ, ರಥಂ= ರಥವನ್ನು, ಜನಾನ್ =ಜನರನ್ನು ಕುರಿತು, ವಹಂತಃ =ಹೊರುತ್ತಿರುವ ಸವಿತುಃ =ಸೂರ್ಯನ (ಆ ಪ್ರಸಿದ್ಧಗಳಾದ ಕುದುರೆಗಳು) ಶಶ್ವತ್ =ಯಾವಾಗಲೂ, ವಿಶಃ= ಪ್ರಜೆಗಳನ್ನು (ಇಡೀ ಜಗತ್ತನ್ನು) ವಿ ಅಖ್ಯನ್ ನೋಡುತ್ತವೆ. (ಯಾವ ಸೂರ್ಯನ ಕುದುರೆಗಳೂ ಕೂಡ ಸಮಸ್ತವನ್ನು ನೋಡುತ್ತವೆ ಎಂದಾದ ಮೇಲೆ ಈ ಸೂರ್ಯನು ಸಮಸ್ತವನ್ನು ನೋಡುತ್ತಾನೆನ್ನುವುದು ಸುತರಾಂ ಸಿದ್ಧ) ಮತ್ತು ವಿಶ್ವಾ =ಸಮಸ್ತ, ಭುವನಾನಿ=ಜಗತ್ತುಗಳು, ದೈವ್ಯಸ್ಯ= (ದೇವತೆಗಳಿಗೆ ಪ್ರಿಯನಾದುದರಿಂದ ಅಥವಾ ದೇವತೆಗಳಿಗೆ ಸಂಬಂಧಿಯಾದುದರಿಂದ) ದೈವ್ಯನೆಂದು ಹೆಸರುಳ್ಳ, ಸವಿತುಃ =ಶ್ರೀಹರಿಯ, ಉಪಸ್ಥೇ ಸಮೀಪದಲ್ಲಿ, ತಸ್ಥುಃ =ಇರುತ್ತವೆ. ॥ ೫ ॥

ಭಾ ॥ (1) ತತ್ತುರಂಗಾಃ। ಶ್ಯಾವಾಃ ಶ್ಯಾಮಾಸ್ತನ್ನೀಲ ಪಾದೋ ಜಗತ್ತೇ ಪಶ್ಯಂತಿ (2) ಸಂಧಿಃ ಪ್ರಉಗಂ ತದ್ರಥಸ್ಯ॥ (3) ದೇವ ಪ್ರಿಯತ್ವಾದ್ದೈವ್ಯನಾಮ್ನೋ ಹರೇಸ್ತು ಸಮೀಪಸ್ಥಂ ಸರ್ವಗತ್ವಾಜ್ಜಗದ್ಧಿ ॥ ೫ ॥

ಅ ॥ (1) ಕೃಷ್ಣ ಪೀತ ಮಿಶ್ರರೂಪಗಳಿದ್ದುದರಿಂದ ಶ್ಯಾವಗಳೆನಿಸಿಕೊಂಡ, ನೀಲ ಪಾದಗಳುಳ್ಳ, (ಹಿರಣ್ಯದಿಂದ ಸಂಬದ್ಧ ಸಂಧಿಯುಳ್ಳ ಜನರನ್ನು ಕುರಿತು ಹೊರುತ್ತಿರುವ) ಸೂರ್ಯನ ಪ್ರಸಿದ್ಧ ಕುದುರೆಗಳು ಜಗತ್ತನ್ನು ನೋಡುತ್ತವೆ. (ಕುದುರೆಗಳೂ ಸರ್ವ ಜಗತ್ತನ್ನು ನೋಡುವಾಗ ಸೂರ್ಯನು ನೋಡುತ್ತಾನೆ ಎಂಬುವುದು ಸುತರಾಂ ಸಿದ್ಧ) (2) ಪ್ರಉಗವೆಂದರೆ (ಯಾವುದೆಂದರೆ) ರಥದ ಮತ್ತು ರಥಾವಯವಗಳ ಸಂಧಿಯು ಪ್ರಉಗ ಎನಿಸುತ್ತದೆ. (3) ಸಮಸ್ತ ಜಗತ್ತು ದೇವತೆಗಳಿಗೆ ಪ್ರಿಯನಾದುದರಿಂದ ದೈವ್ಯನೆಂದು ಹೆಸರುಳ್ಳ ಶ್ರೀಹರಿಯ ಸಮೀಪದಲ್ಲಿಯೇ ಇರುತ್ತದೆ. (ಜಗತ್ತು ವೈಕುಂಠದಲ್ಲಿರತಕ್ಕ ಶ್ರೀ ವಿಷ್ಣುವಿನ ಸಮೀಪದಲ್ಲಿರತಕ್ಕದು ಹೇಗೆ? ಎಂದರೆ) ಶ್ರೀಹರಿಯು ಸರ್ವತ್ರ ವ್ಯಾಪ್ತನಾದುದರಿಂದ ಯುಕ್ತವಾಗುತ್ತದೆ. ಸರ್ವತ್ರವ್ಯಾಪ್ತನೆಂಬುವುದು ಯಚ್ಚಕಿಂಚಿ ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥ ಇತ್ಯಾದಿ ಶ್ರುತಿ ಸಿದ್ಧವಾಗಿದೆ ॥ ೫ ॥

ಋ ॥ (೪೧೬) ತಿಸ್ರೋ ದ್ಯಾವಃ ಸವಿತುರ್ದ್ವಾ ಉಪಸ್ಥಾಁ ಏಕಾ ಯಮಸ್ಯ ಭುವನೇ ವಿರಾಷಾಟ್ । ಆಣಿಂ ನ ರಥ್ಯಮಮೃತಾಧಿ ತಸ್ಥುರಿಹ ಬ್ರವೀತು ಯ ಉ ತಚ್ಚಿಕೇತತ್ ॥ ೬ ॥ ॥ ೬ ॥

ಅ ॥ ತಿಸ್ರಃ= ಮೂರು, ದ್ಯಾವಃ =(ದಿವು ಕ್ರೀಡಾ ವಿಜಿಗೀಷಾ ವ್ಯವಹಾರ ದ್ಯುತಿ ಸ್ತುತಿ ಮೋದ ಮದ ಸ್ವಪ್ನ ಕಾಂತಿ ಗತಿಷು) ಪ್ರತ್ಯಕ್ಷ ಅನುಮಾನ ಆಗಮಗಳಿಂದುಂಟಾದ ಯಥಾರ್ಥ ಜ್ಞಾನಗಳು, ಯಮಸ್ಯ (ಯಮ ಉಪರಮೇ. ಯಚ್ಛತಿ ನಿಯಮಯತಿ ವಿಶ್ವಮಿತಿ ಯಮಃ) ಸರ್ವ ಜಗತ್ತನ್ನು ನಿಯಮಿಸುವ ಸವಿತುಃ= ಶ್ರೀಹರಿಯ ಉಪಸ್ಥಾ= ಸಮೀಪದಲ್ಲಿರುತ್ತವೆ. ಹಾಗೆಯೇ, ದ್ವಾ= ಜಡ ಅಜಡ ವಸ್ತುಗಳ ಸಮೂಹಗಳು, ಸಮೀಪದಲ್ಲಿಯೇ ಇರುತ್ತವೆ. ಭುವನೇ= ಭುವನ ವಿಷಯದಲ್ಲಿ, ಏಕಾ= ಅದ್ವಿತೀಯಳಾದ (ಅಸದೃಶಳಾದ) ವಿರಾಷಾಟ್= ಲಕ್ಷ್ಮೀ ದೇವಿಯು, (ವಿರಾ= ವಿಶೇಷವಾಗಿ ಪ್ರಕಾಶಿಸಿಕೊಂಡಿರುವಿಕೆಯನ್ನು, ಸರ್ವೇಶ್ವರನ

ತನ್ನ ಸಹಕೀ ಪ್ರಾಪ್ನೋತಿ "ಹೊಂದಿದವಳು ಎಂಬ ವ್ಯುತ್ಪತ್ತಿಯಿಂದ) ವಿರಾಟ್. ಲಕ್ಷ್ಮೀದೇವಿಯು (ರಾಜೃ ದೀಪ್ತೌ. ರಾಜೃ ಐಶ್ವರ್ಯೇ) ಯಮಾಸ್ಯ ಸವಿತುಃ= ಸರ್ವ ನಿಯಾಮಕನಾದ ಶ್ರೀಹರಿಯು, ಉಪಸ್ಥಾ= ಸಮೀಪದಲ್ಲಿಯೇ ಇರುತ್ತಾಳೆ. (ದ್ಯುತ್ರಯಾದಿಗಳು ಸವಿತೃ ಎನಿಸಿದ ಶ್ರೀಹರಿಯು ಸಮೀಪದಲ್ಲಿ ಇರುತ್ತವೆ. ಎಂದರೆ ಸವಿತೃ ಎನಿಸಿದ ಶ್ರೀಹರಿಯಿಂದ ನಿಯಮ್ಯಗಳು ದ್ಯುತ್ರಯಾದಿಗಳಿಗೆ ಶ್ರೀಹರಿಯೇ ನಿಯಾಮಕನು. ಈ ಅಭಿಪ್ರಾಯದಿಂದಲೇ ಉಪಸ್ಥಾ ಎಂದು ಹೇಳಿದ್ದು) (ಕೇವಲ ರಜತ ಪದದಿಂದ ಹೇಳಲ್ಪಟ್ಟ ಸಂಸಾರಿಗಳಿಗೆ ಮಾತ್ರ ಆಶ್ರಯವೆಂಬುವುದು ಅಲ್ಲ. ಮತ್ತೆ) ರಥ್ಯಂ ಆಣಿಂ= ರಥದ ಸಂಬಂಧಿಯಾದ ವಸ್ತುಗಳ ಸಮುದಾಯವು ರಥದ ಕೀಲನ್ನೇ ಆಶ್ರಯಿಸಿಕೊಂಡು ಹೇಗೆ ಇದೆಯೋ. ಹೀಗೆಯೇ, ಅಮೃತಾ= ಚತುರ್ಮುಖ, ರುದ್ರ, ಮೊದಲಾದ ಸಮಸ್ತ ಮುಕ್ತರೂ, ಸವಿತಾರಂ ಹರಿಂ= ಸವಿತೃ ನಾಮಕ ಶ್ರೀಹರಿಯನ್ನೇ, ಅಧಿಷ್ಠುಃ= ಆಶ್ರಯಿಸಿಕೊಂಡು ಇರುತ್ತಾರೆ. (ಈ ಎಲ್ಲಾ ಹೇಳಿದ ಪ್ರಮೇಯವು ಮಿಥ್ಯೆಯು ಎಂದು ಏಕೆ ಆಗಬಾರದು ಎಂದರೆ) ಯ ಉ =ಯಾರು ತಾನೇ ತತ್= ಹಿಂದೆ ಹೇಳಿದ ಶ್ರೀಹರಿಯೇ ಸರ್ವಾಶ್ರಯನು ಇತ್ಯಾದಿ ಪ್ರಮೇಯಗಳನ್ನು, (ಅನ್ಯಥಾ =ಹಿಂದೆ ಹೇಳಿದುದಕ್ಕೆ ವಿರುದ್ಧವಾಗಿ) ಚಿಕೇತತ್ =(ಕಿತ ಜ್ಞಾನೇ.) ತಿಳಿಯುವನೋ. ಮಾಡುವನೋ, ಸಃ =ಅಂತಹವನು, ಇಹ =ಇಲ್ಲಿ, ಮಮ ಪುರತಃ =ನನ್ನ ಇದಿರು, ಬ್ರವೀತು, ಹೇಳಲಿ. (ಬಾಧಕವಿಲ್ಲದಿರುವುದರಿಂದ ಹೇಳಿದ್ದು ಸರ್ವಥಾ ಮಿಥ್ಯೆಯಲ್ಲ) ಅಥವಾ ಸವಿತೃ ನಾಮಕ ಶ್ರೀಹರಿಯ ಸ್ವರೂಪವನ್ನು ನಾನು ಇಷ್ಟು ತಿಳಿದಿರುತ್ತೇನೆ. ಯಾವಾತನು ಇದಕ್ಕಿಂತ ಅತಿಶಯವಾಗಿ ತಿಳಿಯುವನೋ, ಆತನು ಇಲ್ಲಿ ನಮಗೋಸ್ಕರ, ನಮಗೆ ತಿಳಿದಿರುವ ಶ್ರೀ ಹರಿಯ ಸ್ವರೂಪವನ್ನು ಹೇಳಲಿ. ಅಥವಾ ಯಾವ ಶ್ರೀಹರಿಯು, ಈ ಜಗತ್ತನ್ನು ಸೃಷ್ಟಿಸಿರುವನೋ, ಆತನು ನಮಗಾಗಿ ತನ್ನ ಸ್ವರೂಪವನ್ನು ಉಪದೇಶಿಸಲಿ. ॥ ೩ ॥

ಭಾ॥ (1) ತಿಸ್ರೋ ದ್ಯಾವೋ ಮಾತ್ರಯಂ ದ್ವಾವುಪಸ್ಥೌ ಜಡಾಜಡೇ ಶ್ರೀರ್ವಿರಾಟ್ಟಾಡಧೀಶ।
(2) ವಿಶ್ವಸ್ಯ ಸಾಕ್ಷಾದ್ಭಗವಾನ್ನಿಯಂತಾ ಯಮೋಽಸ್ಯ ಸರ್ವಂ ಗದಿತಂ ಸದ್ಭಿಃ॥
(3) ಜಡಾಜಡತ್ವಾನ್ನಾನ್ಯಮುಕ್ತೇ ಪೃಥಗ್ಫಿ (4) ಸರ್ವಸ್ವಾಮ್ಯಂವಕ್ತುಮೇವೋದಿತಾ ಶ್ರೀಃ॥ (5) ಅನ್ಯೋನ್ಯಸಂಬಂಧವಿವಕ್ಷಯೈವ ಹ್ಯುಪಸ್ಥತ್ವಂ (6) ಮುಕ್ತಭೂತಾನಿ ಯಾನಿ॥ ಅಶೇಷತಸ್ತಾನಿ ರಥಸ್ಯ ಯದ್ವದಾಣಿಂ ರಥ್ಯಂ ಸಂಶ್ರಿತಂ ಸರ್ವದೈವ॥ ಏವಂ ಹರಿಂ ಸಂಶ್ರಿತಾನ್ಯಬ್ಜಜೇಶ ಪೂರ್ವಾಣ್ಯಪೀಶ್ಯೇ (7) ಸ ವೇದಾರ್ಥಸಾರಃ॥ (8) ಇಹ ಬ್ರವೀತ್ವನ್ಯಥಾ ಯೋಽಭಿಪಶ್ಯೇ ಕುರ್ಯಾದ್ವಾ [9] ತದ್ಯೋ ಯಥಾವಚ್ಚ ಪಶ್ಯೇತ್।ಶೇಷಂ ಜ್ಞಾನಂ ಸಬ್ರವೀತ್ವಸ್ಮದರ್ಥೇ ಚಕಾರಯೋ ವಿಷ್ಣುರೇತತ್ಸ ವಾ ನಃ ॥ ೬ ॥

ಅ॥ (1) (ತಿಸ್ರೋದ್ಯಾವಃ ಎನ್ನುವುದನ್ನು ಅನುವಾದ ಮಾಡಿ ವ್ಯಾಖ್ಯಾನ ಮಾಡುತ್ತಾರೆ.) ತಿಸ್ರಃ ದ್ಯಾವಃ ಎಂದರೆ ಪ್ರತ್ಯಕ್ಷ ಅನುಮಾನ ಆಗಮಗಳಿಂದ ಉಂಟಾದ ಮೂರು ಪ್ರಮೆಗಳು, ಯಥಾರ್ಥ ಜ್ಞಾನಗಳು. (ದ್ವಾವುಪಸ್ಥೌ ಎನ್ನುವುದನ್ನು ಅನುವಾದ ಮಾಡಿ ದ್ವೌ ಎಂಬ ಪದಕ್ಕೆ ಅರ್ಥ ಹೇಳುತ್ತಾರೆ.) ದ್ವೌ=ಜಡಾಜಡ ವಸ್ತುಗಳು ಸಮೀಪದಲ್ಲಿ ಇರುತ್ತವೆ. (ವಿರಾಟ್ ಎನ್ನುವುದಕ್ಕೆ ವಾಚ್ಯಾರ್ಥವನ್ನು ಅಧೀಶತ್ವರೂಪವಾದ ನಿಮಿತ್ತವನ್ನು ಹೇಳುತ್ತಾರೆ.) ಎಲ್ಲೋ ಸರ್ವೇಶ್ವರನೇ ಲಕ್ಷ್ಮೀದೇವಿಯು ವಿಶೇಷವಾಗಿ ಪ್ರಕಾಶಿಸಿ ಕೊಂಡಿರುವಿಕೆಯನ್ನು ಸರ್ವಜಗತ್ತಿನ ನಿಯಾಮಕತ್ವವನ್ನು) ಹೊಂದಿರುವುದರಿಂದ ವಿರಾಟ್ ಎನಿಸುತ್ತಾಳೆ. (2) (ಯಮಶಬ್ದಕ್ಕೆ ನಿಮಿತ್ತ ಸಹಿತವಾಗಿ ವಾಚ್ಯಾರ್ಥವನ್ನು ಹೇಳುತ್ತಾರೆ.) ಸಮಸ್ತ ಜಗತ್ತಿಗೆ ಸಾಕ್ಷಾತ್ತಾಗಿ ಮುಖ್ಯವಾಗಿ ನಿಯಮಿಸುವ ಭಗವಂತನು ಯಮಃ ಎನಿಸುತ್ತಾನೆ. ಹಿಂದೆ ಹೇಳಿದ ಮೂರು ಯಥಾರ್ಥ

ಜ್ಞಾನಗಳಿಗೆ ಆಶ್ರಯನಾಗಿದ್ದಾನೆ, ಇದು ಮೊದಲಾದುದು ಎಲ್ಲವೂ ಶ್ರೀ ಭಗವಂತನಿಗೆ ಯಾವಾಗಲೂ ಸಮೀಪದಲ್ಲಿಯೇ ಇವೆ. (ತಥಾಚ ಪ್ರತ್ಯಕ್ಷಾದಿಗಳಿಂದುಂಟಾದ ಮೂರು ಯಥಾರ್ಥಜ್ಞಾನಗಳೂ ಶ್ರೀಹರಿಯ ಸಮೀಪದಲ್ಲಿಯೇ ಇರುವವು. ಜಡ ಅಜಡ ವಸ್ತುಗಳ ಸಮೂಹಗಳೂ ಶ್ರೀಹರಿಯ ಸಮೀಪದಲ್ಲಿಯೇ ಇರುವವುಗಳು. ಅಸದೃಶಳಾದ ಲಕ್ಷ್ಮೀದೇವಿಯೂ ಶ್ರೀಹರಿಯ ಸಮೀಪದಲ್ಲಿಯೇ ಇರುವವಳು.) (3) (ಹಾಗಾದರೆ ಸಮಸ್ತಜಗತ್ತೂ ಜಡಅಜಡ ವಸ್ತುಗಳ ಸಮೂಹದಲ್ಲಿಯೇ ಸೇರಿದೆ. ಆದ ಕಾರಣ ತಿಸ್ರೋದ್ಯಾವಃ=೩ಪ್ರಮೆಗಳು ಎಂದು ಪ್ರತ್ಯೇಕ ತೆಗೆದುಕೊಂಡದ್ದು ಏತಕ್ಕೆ ಎಂದರೆ) ಜಡ ಅಜಡ ಶಬ್ದಗಳಿಂದ ಯಾವುದು ಕೇವಲ ಜಡವಿದೆಯೋ ಯಾವುದು ಕೇವಲ ಚೈತನ್ಯವಿದೆಯೋ ಅದು ಮಾತ್ರ ಲಭ್ಯವಾಗುತ್ತದೆ. ಎರಡರ ಸಮಾಹಾರಾತ್ಮಕವಾದುದು ಸಿಗುವುದಿಲ್ಲ. ಪ್ರಮಾತ್ರಯವು ಉಭಯ ಸಮಾಹಾರರೂಪವಾದುದು. ಆದ ಕಾರಣ ತಿಸ್ರೋದ್ಯಾವಃ ಎಂದು ಪ್ರಮಾತ್ರಯವನ್ನು ಪ್ರತ್ಯೇಕ ಹೇಳಿದ್ದಾರೆ. (ಹಾಗಾದರೆ ಜಡಭಾಗವು ಜಡಶಬ್ದದಿಂದಲೂ ಚೈತನ್ಯವು ಅಜಡ ಶಬ್ದದಿಂದಲೂ ಗೃಹೀತವಾಗುವುದು ಎಂದೆನ್ನಕೂಡದು. ಏಕೆಂದರೆ ಸಂಸಾರದಲ್ಲಿ ಚೈತನ್ಯಕ್ಕೂ, ಸ್ವರೂಪಜ್ಞಾನಕ್ಕೂ, ಮನೋವೃತ್ತಿರೂಪವಾದ ಜ್ಞಾನಕ್ಕೂ ಮಿಶ್ರೀಭಾವದಿಂದಲೇ ಪ್ರವೃತ್ತಿಯಾಗುವುದರಿಂದ ಸಂಸಾರದಲ್ಲಿ ಪ್ರತ್ಯೇಕ ಮಾಡಲಿಕ್ಕೇನೇ ಬರುವುದಿಲ್ಲ. ಮತ್ತು ಮನಸ್ಸು ಚಿತ್‌ಅಚಿತ್‌ಗಳ ಮಿಶ್ರೀಭಾವರೂಪವಾಗಿರುವುದರಿಂದ ಮನಸ್ಸಿನ ಪರಿಣಾಮ ಭೂತವಾದ ಪ್ರಮಾತ್ರಯವೂ ಚಿತ್‌ಅಚಿತ್‌ಗಳ ಮಿಶ್ರೀಭಾವ ರೂಪವೇ ಆಗಿದೆ. ಮುಕ್ತಿಯಲ್ಲಿ ಆದರೂ ಶುದ್ಧ ಚೈತನ್ಯಕ್ಕೇನೇ ಪ್ರವೃತ್ತಿಯು) ಈ ಅಭಿಪ್ರಾಯವು ೨ನೇ ಸ್ಕಂದ ಭಾಗವತ ತಾತ್ಪರ್ಯದಲ್ಲಿ ಉದಾಹೃತವಾದ ಬ್ರಹ್ಮಪುರಾಣದಲ್ಲಿ ಉಕ್ತವಾಗಿದೆ. ಚಿನ್ಮಾತ್ರಾಣೀಂದ್ರಿಯಾಣ್ಯಾಹುರ್ಮುಕ್ತಾನಾಮನ್ಯದೈವತ। ತಾನ್ಯೇವ ಜಡಯುಕ್ತಾನಿ ವಿಭಿನ್ನಾನಿ ಸ್ವರೂಪತಃ॥ ಎನ್ನುವುದರಿಂದ ಮುಕ್ತರಿಗೆ ಚಿನ್ಮಾತ್ರಗಳಾದ ಮನಸ್ಸು ಮೊದಲಾದ ಇಂದ್ರಿಯಗಳಿಂದ ಪ್ರವೃತ್ತಿಯನ್ನು ಹೇಳಿ ಸಂಸಾರದಲ್ಲಿ ಸ್ವರೂಪತಃ ಭೇದವಿಲ್ಲದಿರುವ ಜಡೇಂದ್ರಿಯಗಳಿಂದ ಮಿಶ್ರಗಳಾದ ಚಿದಿಂದ್ರಿಯಗಳಿಂದ ಪ್ರವೃತ್ತಿಯು ಉಕ್ತವಾಗಿದೆ.) ಹಿ=ಪ್ರಸಿದ್ಧವು (೪) (ಹಾಗಾದರೆ ಕೇವಲ ಚೈತನ್ಯರೂಪಳಾದ ನಿತ್ಯಮುಕ್ತಳಾದ ಲಕ್ಷ್ಮೀದೇವಿಯನ್ನು ಪೃಥಕ್ ಹೇಳಬೇಕಿತ್ತು, ಎಂದರೆ—ಸತ್ಯವೇ ಆದಾಗ್ಯೂ) ಸಾಮಾನ್ಯತಃ ಲಕ್ಷ್ಮೀದೇವಿಯು ಲಬ್ಧಳಾದಾಗ್ಯೂ) ಸಮಸ್ತ ಜಗತ್ತಿಗೂ ನಿಯಾಮಕಳು ಎಂದು ಅವಳಿಗೆ ಸರ್ವಾಧಿಪತ್ಯವನ್ನೂ ಹೇಳುವುದಕ್ಕಾಗಿಯೇ ವಿರಾಷಾಟ್ ಎಂಬ ಪದದಿಂದ ಲಕ್ಷ್ಮೀದೇವಿಯನ್ನು ಪ್ರತ್ಯೇಕವಾಗಿ ಹೇಳಿದ್ದು (ಲಕ್ಷ್ಮೀದೇವಿಯು ಬ್ರಹ್ಮಾದಿಗಳಿಗೆಲ್ಲರಿಗೂ ನಿಯಾಮಕಳು ಎಂಬೀ ವಚನವು ಜಗತ್ಸೃಷ್ಟಿಕರ್ತನಾದ ಶ್ರೀ ಹರಿಯ ಉತ್ಕರ್ಷಕ್ಕಾಗಿ ಉಪಯುಕ್ತವಾಗುವುದು. ಅಂದರೆ ಸರ್ವರಿಗೂ ನಿಯಾಮಕಳಾದ ಲಕ್ಷ್ಮೀದೇವಿಯೂ ಸಹ ಯಾವ ಶ್ರೀಹರಿಗೆ ನಿಯಮ್ಯಳಾಗಿರುತ್ತಾಳೋ ಎಂಬ ಉಕ್ತಿಯಿಂದ ಶ್ರೀ ವಿಷ್ಣುವಿಗೆ ಅತಿಶಯವಾಗಿ ಸರ್ವೋತ್ತಮತ್ವವು ಸಿಗುವುದು.) (5) (ಹಾಗಾದರೆ ದ್ಯುತ್ರಯಾದಿಗಳು ಶ್ರೀಹರಿಯ ಸಮೀಪದಲ್ಲಿ ಇರುತ್ತವೆ ಎಂದು ಹೇಳಿದುದರಿಂದ ಶ್ರೀ ಹರಿಯನ್ನು ಏನು ಸ್ತೋತ್ರ ಮಾಡಿದಂತೆ ಆಯ್ತು. ಎಂದರೆ) ಪರಸ್ಪರ ಸಂಬಂಧ, ಅಂದರೆ ನಿಯಮ್ಯ ನಿಯಾಮಕ ಭಾವ, ಪ್ರೇರ್ಯ ಪ್ರೇರಕ ಭಾವ, ಇದು ಮೊದಲಾದ ಸಂಬಂಧಗಳ ವಿವಕ್ಷೆಯಿಂದಲೇ ಸಮೀಪದಲ್ಲಿದ್ದಾರೆಂದು ಹೇಳಿದ್ದು (ಅಂದರೆ ಲಕ್ಷ್ಮೀಬ್ರಹ್ಮಾದಿಗಳು ಶ್ರೀಹರಿಯಿಂದ ನಿಯಮ್ಯರು ಪ್ರೇರ್ಯರು, ಶ್ರೀ ಹರಿಯು ಅವರಿಗೆ ನಿಯಾಮಕನು ಪ್ರೇರಕನು, ಎಂಬ ಅಭಿಪ್ರಾಯದಿಂದ ಶ್ರೀ ಹರಿಯ ಸಮೀಪದಲ್ಲಿರುತ್ತಾರೆ,) (6) (೩ ನೇ ಪಾದವನ್ನು ವ್ಯಾಖ್ಯಾನ ಮಾಡುತ್ತಾರೆ,) (ಶ್ರೀಹರಿಯು ಸಂಸಾರಿಗಳಿಗೆ ಮಾತ್ರ ಆಶ್ರಯನೆಂದಲ್ಲ ಮತ್ತೆ) ರಥದ ಸಂಬಧಿಯಾದ ವಸ್ತುಗಳ ಸಮುದಾಯವು ರಥದ ಅಣಿಯನ್ನು (ಕೀಲನ್ನು) ಹೇಗೆ ಸರ್ವದಾ ಆಶ್ರಯಿಸಿ ಕೊಂಡಿದೆಯೋ ಹೀಗೆಯೇ ಮುಕ್ತರಾದವರು ಯಾರು ಇದ್ದಾರೋ, ಅಂತಹ ಬ್ರಹ್ಮ ಗರುಡ ಶೇಷ ಮೊದಲಾದವರೆಲ್ಲರೂ ಸವಿತೃನಾಮಕ ಶ್ರೀಹರಿಯನ್ನು ಆಶ್ರಯಿಸಿ ಕೊಂಡಿರುತ್ತಾರೆ. (7) ಶ್ರೀಹರಿಯು ೩ ಪ್ರಮಾ ಮೊದಲಾದವುಗಳಿಗೆ ನಿಯಾಮಕನು, ಇತ್ಯಾದಿಗಳು ವಿಷ್ಣುವಿನ ಸ್ತುತಿ ಮಾತ್ರವು. ಶ್ರುತಿಗೆ ಅಲ್ಲಿ ತಾತ್ಪರ್ಯವಿಲ್ಲ, ಎಂದು ಅದ್ವೈತಿಗಳು ಹೇಳುತ್ತಾರೆ. ಅದನ್ನು ನಿರಾಕರಿಸುವುದಕ್ಕಾಗಿ

ಹೇಳುತ್ತಾರೆ) ಇದೇವೇ ವೇದಾರ್ಥ ಸಾರವು (ಅಂದರೆ ವೇದಗಳ ತಾತ್ಪರ್ಯಕ್ಕೆ ವಿಷಯವಾದ ಅರ್ಥವು) (8) (ಏಕೆ ಎಂಬ ಆಶಂಕೆಯನ್ನು ನಿರಾಕರಿಸುವುದಕ್ಕಾಗಿ ೪ನೇ ಪಾದದ ತಾತ್ಪರ್ಯವನ್ನು ಹೇಳುತ್ತಾರೆ.) ಯಾರುತಾನೇ ಆ ಹೇಳಿದ ಸರ್ವಾಶ್ರಯತ್ವಾದಿ ಪ್ರಮೇಯಗಳನ್ನು ವ್ಯತ್ಯಾಸವಾಗಿ ತಿಳಿಯುವನೋ, ಆತನು ಇಲ್ಲಿ ನನ್ನ ಇದಿರು ಹೇಳಲಿ (ಕಾಲಾಂತರದಲ್ಲಿ ವಿಪರೀತವಾಗಿ ಮಾಡುವಿಕೆ, ಅಂದರೆ ಪ್ರಮಾತ್ರಯಾದಿಗಳಿಗೆ ಇನ್ನೊಬ್ಬನೂ ನಿಯಾಮಕನಾಗುವನು ಎಂದು ಪ್ರತಿಪಾದಿಸುವಿಕೆ ಎಂಬ ಆಶಂಕಾನಿರಾಸಕ್ಕಾಗಿ)ಕುಯರ್ಾತ್= ಅನ್ಯಥಾ ಮಾಡುವನೋ, ಅನ್ಯಥಾ ಪ್ರತಿಪಾದಿಸುವನೋ, ಅತನು ನನ್ನ ಇದಿರು ಹೇಳಲಿ. (ಯಾವುದೊಂದು ಬಾಧಕವೂ ಇಲ್ಲದಿರುವುದರಿಂದ ಹೇಳಿದ್ದು ಮಿಥ್ಯೆಯಲ್ಲ) (9) (೪ನೇ ಪಾದವನ್ನು ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಆ ಸವಿತೃ ಎನಿಸಿದ ಶ್ರೀಹರಿಯ ಸ್ವರೂಪವು ನನಗೆ ಇಷ್ಟು ಮಾತ್ರ ತಿಳಿದಿದೆ. ಯಾರುತಾನೇ ಯಥಾವತ್ ಇದಕ್ಕಿಂತ ಅತಿಶಯವಾಗಿಯೇ ತಿಳಿಯುವನೋ, ಆತನು ಇಲ್ಲಿ ನಮಗಾಗಿ ನಮಗೆ ತಿಳಿಯದಿದ್ದ ಆ ಶ್ರೀ ಹರಿಯ ಸ್ವರೂಪವನ್ನು ಹೇಳಲಿ. (ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ) ಯಾವ ವಿಷ್ಣುವೇ ಆ ಈ ಜಗತ್ತನ್ನು ಸೃಷ್ಟಿಸಿರುವನೋ, ಆತನು ಇಲ್ಲಿ ನಮ್ಮನ್ನು ಕುರಿತು ತನ್ನ ಸ್ವರೂಪವನ್ನು ಹೇಳಲಿ, ಉಪದೇಶಿಸಲಿ॥ ॥ ೬ ॥ ೬ ॥

ಮಂ॥ (೪೧೭) ವಿ ಸುಪರ್ಣೋ ಅಂತರಿಕ್ಷಾಣ್ಯಖ್ಯದ್ಗಭೀರವೇಪಾ ಅಸುರಃ
ಸುನೀಥಃ। ಕ್ವೇದಾನೀಂ ಸೂರ್ಯಃ ಕಶ್ಚಿಕೇತ ಕತಮಾಂ ದ್ಯಾಂ
ರಶ್ಮಿರಸ್ಯಾ ತತಾನ ॥ ೭ ॥

ಅ॥ ಸುಪರ್ಣಃ= ಅತಿಶಯವಾಗಿ ಅತ್ಯುತ್ಕೃಷ್ಟವಾದ ಸುಖವುಳ್ಳ, ಗಭೀರವೇಪಾಃ=ಗಂಭೀರವಾದ ವೇಗವುಳ್ಳ, ಅಸುರಃ =(ಸವಿಷೋಸುಃಸವಿಷ ಪ್ರಾಣಃ ಎಂಬ ಶ್ರೌತ ಪ್ರಯೋಗದಿಂದ) ಅಸು ಎನಿಸಿದ ಮುಖ್ಯ ಪ್ರಾಣನಲ್ಲಿ ರತಿಯುಳ್ಳ ಸುನೀಥಃ-(ಣೀಞ ಪ್ರಾಪಣೇ) ಶೋಭನನೀತಿಯುಳ್ಳ ಸವಿತೃ ನಾಮಕ ಶ್ರೀವಿಷ್ಣುವು ಅಂತರಿಕ್ಷಾಣಿ= (ಈಕ್ಷ ದರ್ಶನಾಂಕನಯೋಃ (ತನ್ನೊಳಗೆ ನೋಡಲರ್ಹಗಳಾದವುಗಳನ್ನು, ವಿ ಅಖ್ಯತ್= (ಖ್ಯಾ ಪ್ರಕಥನೇ ಅಥವಾ ಚಕ್ಷಿಙ ವ್ಯಕ್ತಾಯಾಂ ವಾಚಿ) ನೋಡಿದನು ಸೂರ್ಯಃ =ಇಂತಹ ಜ್ಞಾನಿ. ಶ್ರೇಷ್ಠರಾದ ಬ್ರಹ್ಮಾದಿಗಳಿಂದ ಹೊಂದಲ್ಪಡತಕ್ಕ ಶ್ರೀ ಹರಿಯು, ಇದಾನೀಂ = ಈಗ, ಕ್ವ= ಎಲ್ಲಿರುತ್ತಾನೆ. ಅಸ್ಯ= ಈ ಶ್ರೀ ಹರಿಯ, ರಶ್ಮಿಃ= ರಶ್ಮಿಯು, ಕತಮಾಂದ್ಯಾಂ=ಯಾವ ಅಂತರಿಕ್ಷ ಪ್ರದೇಶದಲ್ಲಿ, ಆತತಾನ= ವ್ಯಾಪ್ತವಾಯಿತು. ಹೀಗೆ, ಕಶ್ಚಿಕೇತ= ಈ ಪ್ರಮೇಯನ್ನು (ಇಂತಹ ಶ್ರೀಹರಿಯನ್ನು ಯಾರು ನೋಡಿರುವನು? ಯಾವನೊಬ್ಬನೂ ಕಾಣಲಿಲ್ಲ.) (ಸೂರ್ಯನನ್ನೂ ಸೂರ್ಯನ ರಶ್ಮಿಗಳನ್ನೂ ಸರ್ವರೂ ಪ್ರತ್ಯಕ್ಷವಾಗಿ ಕಾಣುತ್ತಿದ್ದರೂ ಶ್ರೀ ವಿಷ್ಣುವಿನ ರಶ್ಮಿಗಳನ್ನೂ ಪ್ರತ್ಯಕ್ಷವಾಗಿ ಕಾಣದಿರುವುದರಿಂದ ಆದನ್ನಪೇಕ್ಷಿಸಿ ಕ್ವ ಎಲ್ಲಿ ಎಂದು ಆಕ್ಷೇಪವೆಂದು ತಿಳಿಯಬೇಕು. ಶ್ರೀಹರಿಯನ್ನು ತಿಳಿದವನು ದುರ್ಲಭವೆಂದು ತಾತ್ಪರ್ಯವು. ॥ ೭ ॥

ಭಾ॥ (1) ಗಂಭೀರವೇಗೋ ಭಗವಾನ್ವಾ ಸುಪರ್ಣಃ ಪರಾನಂದಾದಂತರಿಕ್ಷಾಣ್ಯಪಶ್ಯತ್ ।
ಅಸೌ ರತಿಃ ಶುಭನೀತಿಶ್ಚ (2) ವಿಷ್ಣುರಿತ್ಯಪಶ್ಯದ್ದುರ್ಲಭತ್ವಾತ್ಕ ಏವ॥ (3) ಪಶ್ಯ
ನ್ನವೇರಶ್ಮಿಗಣಾನಪೀಹ ಸರ್ವವ್ಯಾಪ್ತಾನಪಿ ವಿಷ್ಣೋರ್ನರಶ್ಮೀನ್ । ಲೋಕಃ
ಪಶ್ಯೇದಿತಿ ಕುತ್ರಾತತಾನೇತ್ಯಾಕ್ಷೇಪ್ಯತೇ ವ್ಯಕ್ತಿಮುಪೇಕ್ಷ್ಯ ರಶ್ಮೇಃ ॥ ೭ ॥

ಅ॥ (1) ಸರ್ವೋತ್ಕೃಷ್ಟವಾದ ಆನಂದವಿರುವ ಕಾರಣ ಸುಪರ್ಣಃ ಎನಿಸಿ ಕೊಂಡವನು ಅತಿಶಯವಾಗಿ ಉತ್ಕೃಷ್ಟವಾದ ಆನಂದವುಳ್ಳವನು ಗಂಭೀರವಾದ ವೇಗವುಳ್ಳವನು. ಮುಖ್ಯಪ್ರಾಣನಲ್ಲಿ ರಮಿಸಿಕೊಂಡಿರುವವನು ಶೋಭನವಾದ ನೀತಿಯುಳ್ಳವನು ಇಂತಹ ಷಡ್ಗುಣ ಪರಿಪೂರ್ಣನಾದ ಶ್ರೀವಿಷ್ಣುವು ತನ್ನೊಳಗೆ ಇರುವ ಜಗದಾದಿ ಸರ್ವವಸ್ತುಗಳನ್ನು ಕಂಡನು. (2) (ಉತ್ತರಾರ್ಧದ ತಾತ್ಪರ್ಯವನ್ನು ಹೇಳುತ್ತಾರೆ. (ಈ ರೀತಿಯಾಗಿರುವ ಉತ್ಕೃಷ್ಟ ಆನಂದವುಳ್ಳವನು. ಅಗಾಧ ವೇಗವುಳ್ಳವನು. ಪ್ರಾಣರಲ್ಲಿ ರಮಿಸಿ ಕೊಂಡಿರುವವನು. ಎಲ್ಲಿಯೂ ದೋಷವಿಲ್ಲದ ನೀತಿಯುಳ್ಳವನು. ಉದರದಲ್ಲಿ ಜಗತ್ತನ್ನು ಧರಿಸಿಕೊಂಡಿರುವವನು ಇಂತಹ ಸರ್ವಜ್ಞನಾದ ಶ್ರೀಹರಿಯನ್ನು ಯಾರು ತಾನೇ ನೋಡಿರುವನು. (ಯಾವನೊಬ್ಬನೂ ಕಾಣಲಿಲ್ಲ ಏಕೆಂದರೆ) ಇಂತಹ ಪರಮಾತ್ಮ ಜ್ಞಾನಿಯೇ ದುರ್ಲಭನಾಗಿದ್ದ ಕಾರಣ ಯಾವನೂ ಕಾಣುವುದಿಲ್ಲ.(ಇಂತಹ ಸೂರ್ಯನು ಈಗ ಎಲ್ಲಿ ಇದ್ದಾನೆ.? ಆತನ ರಶ್ಮಿಯು ಯಾವ ಅಂತರಿಕ್ಷ ಪ್ರದೇಶದಲ್ಲಿ ವ್ಯಾಪ್ತವಾಗಿದೆ. ಯಾವನು ನೋಡಿರುವನು,? ಯಾವನೊಬ್ಬನೂ ನೋಡಲಿಲ್ಲ.) (3) (ಇತರತ್ರ ಅಗ್ನ್ಯಾದಿ ಶಬ್ದಗಳಿಗೆ ಅಗ್ನ್ಯಾದಿ ದೇವತೆಗಳ ಪರತ್ವವನ್ನು ಬಿಡದೇನೇ ಅಗ್ನ್ಯಾದಿಗಳೂ ವಾಚ್ಯರಾಗುತ್ತಾರೆ. ಎಂದು ಹೇಳಿಯೇ) ಭಗವಂತನೂ ಅಗ್ನ್ಯಾದಿ ಶಬ್ದಗಳಿಂದ ಮುಖ್ಯತವಾಚ್ಯನು ಎಂದು ಹೇಳುತ್ತವೆ. ಹಾಗೆ ಇಲ್ಲಿ ವ್ಯಾಖ್ಯಾನ ಮಾಡುವುದಿಲ್ಲ. ಮತ್ತೆ ಕೇವಲ ಭಗವಂತನೇ ವಾಚ್ಯನು ಎಂಬ ಅಭಿಪ್ರಾಯದಿಂದ ಹೇಳುತ್ತಾರೆ. ಈ ಆಕಾಶದಲ್ಲಿ ಸೂರ್ಯನ ರಶ್ಮಿಗಳ ಸಮೂಹಗಳನ್ನು ನೋಡುತ್ತಿದ್ದರೂ ಜನರು ಸರ್ವತ್ರ ವ್ಯಾಪ್ತನಾದಾಗ್ಯೂ ಶ್ರೀವಿಷ್ಣುವಿನ ರಶ್ಮಿಗಳನ್ನೂ ಆ ವಿಷ್ಣುವನ್ನೂ ಕೂಡ ನೋಡುವುದಿಲ್ಲ ಈ ಅಭಿಪ್ರಾಯದಿಂದಲೇ ಎಲ್ಲಿ ವ್ಯಾಪ್ತವಾಗಿದೆ. ಇತ್ಯಾದಿ ಪ್ರಕಾರ ಆಕ್ಷೇಪಿಸಿದ್ದು. (ಅಂದರೆ ಸೂರ್ಯನೂ ಸೂರ್ಯನ ರಶ್ಮಿಗಳೂ ಕೂಡ ಆಕಾಶದ ಕೆಳಭಾಗದಲ್ಲಿ ವ್ಯಾಪಿಸಿ ಕೊಂಡು ಇದ್ದಾನೆ ಎಂದು ಜನರು ಕಾಣುತ್ತಲೇ ಇದ್ದಾರೆ. ಆದ ಕಾರಣ ಅದನ್ನು ಅಪೇಕ್ಷಿಸಿಕೊಂಡು ಈ ಆಕ್ಷೇಪವು ಯುಕ್ತವಲ್ಲ. ಮತ್ತೆ ಭಗವಂತನು ಸರ್ವತ್ರ ವ್ಯಾಪ್ತನಾಗಿದ್ದರೂ ಆತನರಶ್ಮಿಗಳನ್ನು ಪ್ರಾಕೃತ ಜನರು ಕಾಣುವುದಿಲ್ಲ ಮತ್ತೆ ಭಗವದ್ವಿಷಯದಲ್ಲಿಯೇ ಆಕ್ಷೇಪವು. (ಹಾಗಾದರೆ ಇದನ್ನು ಆಕ್ಷೇಪವೆಂದು ಹೇಗೆ ಹೇಳುವದು.? ಆಕ್ಷೇಪಕ್ಕೆ ವಿಪರ್ಯಯ ಪರ್ಯವಸಾನವು ಆವಶ್ಯಕವು. ಅದು ಇಲ್ಲಿ ಇಲ್ಲ. ಸೂರ್ಯನು ಎಲ್ಲಿ? ಎಲ್ಲಿಯೂ ಇಲ್ಲ. ರಶ್ಮಿಯು ಯಾವ ಅಂತರಿಕ್ಷ ಪ್ರದೇಶದಲ್ಲಿ ವ್ಯಾಪ್ತವಾಗಿದೆ. ಎಲ್ಲಿಯೂ ಇಲ್ಲವೆಂದಾಗಬೇಕಾಗುವುದು ಎಂದರೆ) ರಶ್ಮಿಯು ವ್ಯಕ್ತಿಯನ್ನು ಅಪೇಕ್ಷಿಸಿ ಹೀಗೆ ಆಕ್ಷೇಪವು. (ಅಂದರೆ-ಸೂರ್ಯನನ್ನೂ ರಶ್ಮಿಯನ್ನೂ ಸರ್ವರೂ ಪ್ರತ್ಯಕ್ಷವಾಗಿ ತಿಳಿಯುವುದಾದರೂ ಶ್ರೀಹರಿಯನ್ನು ಶ್ರೀಹರಿಯ ರಶ್ಮಿಗಳನ್ನು ತಿಳಿದಿರುವುದರಿಂದ ಅವನ್ನು ಅಪೇಕ್ಷಿಸಿ ಕೊಂಡು ಈ ಆಕ್ಷೇಪವು.) ॥ ೭ ॥

ಋ॥ (೪೧೮) ಅಷ್ಟೌ ವ್ಯಖ್ಯತ್ಕಕುಭಃ ಪೃಥಿವ್ಯಾಸ್ತ್ರೀ ಧನ್ವ ಯೋಜನಾ ಸಪ್ತ ಸಿಂಧೂನ್। ಹಿರಣ್ಯಾಕ್ಷಃ ಸವಿತಾ ದೇವ ಆಗಾದ್ದಧ ದ್ರತ್ನಾ ದಾಶುಷೇ ವಾರ್ಯಾಣಿ ॥ ೮ ॥

ಅ ॥ ಯಃ =ಯಾವಾತನು ಪ್ರಥಿವ್ಯಾಃ= ಪ್ರಸಿದ್ಧ ಪ್ರಥಿವಿಯ, ಅಷ್ಟೌ ಕಕುಭಃ= ಪೂರ್ವ ದಿಕ್ಕು ಮೊದಲಾದ ಎಂಟು ದಿಕ್ಕುಗಳು, ಆ ದಿಕ್ಕುಗಳಲ್ಲಿ ಶಕ್ಯ ಪ್ರದೇಶಗಳು, ಮತ್ತು ಪೃಥುತ್ವಾತ್ ವಿಸ್ತೃತವಾಗಿರುವುದರಿಂದ ಪೃಥಿವೀ ಎನಿಸಿಕೊಂಡ ಪ್ರಕೃತಿಯೂ ಅಷ್ಟೌ ಕಕುಭಃ =೮ ದಿಕ್ಕುಗಳೂ, ಪ್ರದೇಶಗಳೂ ಮಹದಾದಿ ತತ್ವಗಳೂ ಅವುಗಳನ್ನೆಲ್ಲಾ, ತ್ರೀಧನ್ವ (ಸಮಾನೌ ಮರುಧನ್ವಾನೌ ಎಂದು ಕೋಶವು) ಊರ್ಧ್ವ ಮಧ್ಯ ಅಧರ ಭೇದದಿಂದ ೩ ವಿಧಗಳಾದ ಸುಖಲೇಶವೂ ಇಲ್ಲದಿರುವ, (ಧನ್ವನ್ ಶಬ್ದವು ಉದಕವಿಲ್ಲದಿರುವ ದೇಶವನ್ನು ಹೇಳುತ್ತದೆ. ಅದರಿಂದ ಸುಖರಾಹಿತ್ಯದಲ್ಲಿ ಲಕ್ಷಣಾ.) ಯೋಜನಾ= (ಯುಜಿರ್ ಯೋಗೇ) ಯುಜ್ಯಕೇ ಶ್ಲಿಷ್ಯತೇ

ಸ್ವಗತೈಃ ಎಂಬ ವ್ಯುತ್ಪತ್ತಿಯಿಂದ ಯೋಜನಂ=ತಮಸ್ಸು) ತಮಸ್ಸುಗಳನ್ನೂ ಸಪ್ತಸಿಂಧೂನ್=(ಲವಣ ಇಕ್ಷು ಸುರಾ ಸರ್ಪಿ,ದಧಿ ಕ್ಷೀರ ಶುಧೋದಕಂ। ಎಂಬ ೭ ಸಮುದ್ರಗಳನ್ನೂ ವಿ ಅಖ್ಯತ್=ನೋಡಿರುವನೋ (ಸಃ=ಅಂತಹ) ಹಿರಣ್ಯಾಕ್ಷಃ=ನರಸಿಂಹರೂಪಿಯಾದ, ಸವಿತಾ ದೇವಃ=ಜಗತ್ತಿನ ಸೃಷ್ಟಿಕರ್ತನಾದ ಶ್ರೀಹರಿಯು, ದಾಶುಷೇ=(ದಾಶೃದಾನೇ) ಯಜಮಾನನಿಗೆ ಕೊಡುವುದಕ್ಕಾಗಿ, ವಾರ್ಯಾಣಿ ಸ್ವೀಕರಿಸಲು ಯೋಗ್ಯಗಳಾದ, ರತ್ನಾ=ರತ್ನಗಳನ್ನು ದಧತ್=(ಡು ಧಾಞ್ಧಾರಣ ಪೋಷಣಯೋಃ) ಧರಿಸುವವನಾಗಿ, ಅಥವಾ ಕೊಡುವವನಾಗಿ. ಆ ಆಗಾತ್=(ಇಣಿಗತೌ) ನಮ್ಮನ್ನು ಕುರಿತು ಬರಲಿ ॥ ೮ ॥

ಭಾ ॥ (1) ಊರ್ಧ್ವಗಂ ಮಧ್ಯಮಧರಂ ಚೇತಿ ಧನ್ವತ್ರಯಂ ತಮಃ ಸುಖಲೀನಂ ಯತಸ್ತತ್ । (2) ಯುಕ್ತಂ ಭವೇತ್ತದ್ಗತೈಃ ಸರ್ವದೈವ ದೃಢಶ್ಲೇಷಾದ್ಯೋಜನಂ ಸ್ಯಾತ್ತಮೋಹಿ । (3) ಅಷ್ಟಾವಿದಿಶಃ ಪ್ರಕೃತೇರ್ವಾ ಪೃಥಿವ್ಯಾಃ ಮಹದಾದ್ಯಾಃ ಸಿಂಧವಸ್ತಾನ್ಯಪಶ್ಯತ್ ॥ (4) ಹಿರಣ್ಯಾಕ್ಷೋ ನರಸಿಂಹಾತ್ಮನಾ ಸ ವಾರ್ಯಾಣಿ ಯದ್ವರಣೀಯಂ ಸುವಿತ್ತಂ ॥ ೮ ॥

ಅ ॥ (1) (ಇಲ್ಲಿ ತ್ರೀಧನ್ವ ಎಂಬ ಶಬ್ದವನ್ನು ವ್ಯಾಖ್ಯಾನ ಮಾಡುತ್ತಾರೆ) ಊರ್ಧ್ವ ಮಧ್ಯ ಅಧರ ಎಂದು ಮೂರು ವಿಧವಾದ ತಮಸ್ಸು ಧನ್ವತ್ರಯವೆನಿಸುತ್ತದೆ. (ಅದಕ್ಕೆ ಧನ್ವ ಶಬ್ದ ವಾಚ್ಯತ್ವವು ಹೇಗೆಂದರೆ ಆ ತಮಸ್ಸು ಯಾವ ಕಾರಣದಿಂದ ಸುಖಲೇಶವಿಹೀನವೋ, ಅದ ಕಾರಣ ಅದನ್ನು (ಧನ್ವ ಎಂಬ ಶಬ್ದವು ವಾಚಕವಾಗಿ ಉಳ್ಳದ್ದನ್ನಾಗಿ ಹೇಳುತ್ತಾರೆ.) (ಜಲವಿಲ್ಲದಿರುವ ಮರುಪ್ರದೇಶವು ಧನ್ವ ಶಬ್ದದಿಂದ ಹೇಳಲ್ಪಡುತ್ತದೆ. ಆದರಿಂದ ಸುಖಲೇಶವಿಲ್ಲವೆಂದು ಲಕ್ಷಿತವಾಗುತ್ತದೆ.) (2) ಯೋಜನ ಶಬ್ದಕ್ಕೆ ವಾಚ್ಯವಾದ ಅರ್ಥವನ್ನೂ ನಿರ್ವಚನವನ್ನೂ ಹೇಳುತ್ತಾರೆ.) ತಮಸ್ಸೇ ಯೋಜನವೆನಿಸುತ್ತದೆ. (ಹೇಗೆಂದರೆ) (ಯುಜ್ಯತೇ ಶ್ಲಿಷ್ಯತೇ ಸ್ವಗತೈಃ=ತಮ್ಮವರಿಂದ ಚೆನ್ನಾಗಿ ಸಂಬಂಧಿಸಲ್ಪಡುತ್ತದೆ. ಅದ ಕಾರಣ ಯೋಜನವೆನಿಸುವುದು) ಸರ್ವರಿಗೂ ತಮ್ಮಲ್ಲಿ ಸಂಬಂಧವಿದ್ದ ಪ್ರಯುಕ್ತ ತಮಸ್ಸಿಗೇನೇ ಯೋಜನವೆಂದು ವಿಶೇಷಣ ಕೊಟ್ಟದೆ, ಅದ ಕಾರಣ ಚೆನ್ನಾಗಿ ಪ್ರಾಪ್ತಿಯನ್ನು ತಿಳಿಯುವ ಪ್ರಯುಕ್ತ ದೃಢವಾಗಿ ಸಂಬಂಧವಿದೆ. ಆದುದರಿಂದ ತಮಸ್ಸೇ ಯೋಜನವೆನಿಸುವುದು. (ಅದನ್ನೇ ವಿವರಿಸುತ್ತಾರೆ) ತಮಸ್ಸಿನಲ್ಲಿ ಇರುವವರಿಂದ ಯಾವಾಗಲೂ ಸಂಬದ್ಧವೇ ಆಗುವುದು. (3) ಪ್ರಸಿದ್ಧ ಪೃಥಿವಿಗೆ ಪ್ರಾಚ್ಯಾದಿ ೮ ದಿಕ್ಕುಗಳು, ದಿಕ್ಕುಗಳಿಂದ ಕೂಡಿದ ಭೂ ಪ್ರದೇಶಗಳು. ಮತ್ತು ವಿಸ್ತೃತವಾಗಿರುವುದರಿಂದ ಪೃಥಿವೀ ಎನಿಸಿದ ಪ್ರಕೃತಿಗೆ ತದಭಿಮಾನಿ ಲಕ್ಷ್ಮಿಗೆ, ಲಕ್ಷ್ಮಿಯಿಂದ ಅಭಿಮನ್ಯಮಾನವಾದ ಅವ್ಯಾಕೃತಾಕಾಶಕ್ಕೆ ೮ ದಿಕ್ಕುಗಳು, ೭ ಸಮುದ್ರಗಳು, ಮಹತ್ತತ್ವ ಅಹಂಕಾರತತ್ವ, ಪಂಚಮಹಾ ಭೂತಗಳು. (ಸಿಂಧವಃ) (ಸ್ಯಂದೂ ಪ್ರಸ್ರವಣೇ ಸ್ಯಂದನಾತ್=ಕಾರ್ಯಪ್ರವಾಹ ರೂಪವಾಗಿರುವುದರಿಂದ ಅಂದರೆ ಪ್ರಕೃತಿಯಿಂದ ಮಹತ್ತತ್ವ, ಆದರಿಂದ ಅಹಂಕಾರತತ್ವ ಇತ್ಯಾದಿಕ್ರಮದಿಂದ ಪ್ರವಾಹರೂಪವಾಗಿ ಸಿಂಧುಗಳೆನಿಸುತ್ತವೆ. ಆ ದಿಕ್ಕು ಮೊದಲಾದ ವಸ್ತುಗಳನ್ನು ಕಂಡನು. (4) ತಪ್ತಹಾಟಕಕೇಶಾಂತ ಜ್ವಲತ್ಪಾವಕ ಲೋಚನ ಎಂಬ ಪ್ರಮಾಣದಿಂದ ಅಗ್ನಿಗೆ ಸದೃಶವಾದ ಕಣ್ಣುಗಳು ಇದ್ದುದರಿಂದ ಹಿರಣ್ಯಾಕ್ಷನೆನಿಸಿದ ಶ್ರೀಹರಿಯು ನರಸಿಂಹ ರೂಪದಿಂದ, ಯಾವ ಕಾರಣದಿಂದ ಶೋಭನಗಳಾದ ದ್ರವ್ಯಗಳು ಸ್ವೀಕಾರಾರ್ಹಗಳೋ, ಅದಕಾರಣ ಸ್ವೀಕಾರಾರ್ಹಗಳಾದ ದ್ರವ್ಯಗಳನ್ನು (ಕೊಡುವವನಾಗಿ ನಮ್ಮನ್ನು ಹೊಂದಲಿ.) ॥ ೮ ॥

ಮು ॥ (೪೧೯) ಹಿರಣ್ಯಪಾಣಿಃ ಸವಿತಾ ವಿಚರ್ಷಣಿರುಭೇ ದ್ಯಾವಾಪೃಥಿವೀ ಅಂತರೀಯತೇ । ಅಪಾಮೀವಾಂ ಬಾಧತೇ ವೇತಿ ಸೂರ್ಯಮಭಿ ಕೃಷ್ಣೇನ ರಜಸಾ ದ್ಯಾಮೃಣೋತಿ ॥ ೯ ॥

ಅ || ಹಿರಣ್ಯಪಾಣಿಃ=ಹಿರಣ್ಯಾತ್ಮಕವಾದ ಪಾತ್ರವು ಕೈಯಲ್ಲಿ ಉಳ್ಳವನು, (ಅಂದರೆ ರತ್ನಾದಿಗಳಿಂದ ಸಂಪೂರ್ಣವಾಗಿ ತುಂಬಿದ ಹಿರಣ್ಯ ಪಾತ್ರವನ್ನು ಕೈಯಲ್ಲಿ ಧರಿಸುವವನಾಗಿರುವುದರಿಂದ ಹಿರಣ್ಯಪಾಣಿಃ ಎನಿಸುತ್ತಾನೆ) ಅಥವಾ ಹಿರಣ್ಯದಂತೆ ವರ್ಣವುಳ್ಳ ದೇಹವುಳ್ಳವನು, ಅಥವಾ ಹಿರಣ್ಯದಂತೆ ವರ್ಣವುಳ್ಳ ಪಾಣಿಗಳುಳ್ಳವನು, ವಿಚರ್ಷಣಿಃ=ನಾನಾ ವಿಧರಾದ ಪ್ರಜೆಗಳುಳ್ಳವನು. ಅಥವಾ ಎಲ್ಲಾ ಪ್ರಜೆಗಳಿಗಿಂತಲೂ ಉತ್ತಮನು, ಇಂತಹ, ಸವಿತಾ=ಶ್ರೀಹರಿಯು, ಉಭೇ ದ್ಯಾವಾ ಪೃಥಿವೀ=ದ್ಯಾವಾಪೃಥಿವಿಗಳ (ಸ್ವರ್ಗಭೂಮಿಗಳ ಅಂತಃ=ಮಧ್ಯದಲ್ಲಿ, ಈಯತೇ=(ಇಣ್ ಗತೌ) ಸಂಚರಿಸುತ್ತಾನೆ.ಮತ್ತು, ಅಮೀವಾಂ=(ಅಮ ಗತ್ಯಾದೌ)(ಅಮ್ಯತೇ ಗಮ್ಯತೇ ನರಕಂ ಅನೇನ ಪಾಪೇನ ಈ ಪಾಪದಿಂದ ನರಕವು ಹೊಂದಲ್ಪಡುತ್ತದೆ.) ಪ್ರಾಣಿಗಳ ಪಾಪವನ್ನು ಅಪಬಾಧತೇ=ಕೆಡಿಸುತ್ತಾನೆ. ಪರಿಹರಿಸುತ್ತಾನೆ. ಸೂರ್ಯಂ=ಪ್ರಸಿದ್ಧ ಸೂರ್ಯನನ್ನು ವೇತಿ=(ವೀ ಗತಿ ವ್ಯಾಪ್ತಿ ಪ್ರಜನ ಕಾಂತ್ಯಸನಖಾದನೇಷು.) ಹೊಂದುತ್ತಾನೆ. ಕೃಷ್ಣೇನ ರಜಸಾ= ಶಾರ್ವರ ತಮಸ್ಸಿನಿಂದ, ದ್ಯಾಂ= ಅಂತರಿಕ್ಷ ಲೋಕವನ್ನು ಅಭಿಋಣೋತಿ= ಪೂರ್ಣೀಕರಿಸುತ್ತಾನೆ || ೯ ||

ಭಾ || (1) ಚರ್ಷಣಿಭ್ಯೋ ಯತ್ಪ್ರಜಾಭ್ಯೋ ವಿಶಿಷ್ಟೋ ವಿಚರ್ಷಣಿಃ ಕೇಶವಃ ಸೂರ್ಯಮೇತಿ (2) ಋಣೋತಿ ಸಂಪೂರಯತಿ || ೯ ||

ಅ || (1) (ನಾನಾ ವಿಧರಾದ ಪ್ರಜೆಗಳುಳ್ಳವನು. ವಿಚರ್ಷಣಿಯೆನಿಸುತ್ತಾನೆ. ಎಂದು ಸಿದ್ಧವಾಗುವುದಾದರೂ ಅರ್ಥಾಂತರವನ್ನು ಹೇಳುತ್ತಾರೆ.) ಚರ್ಷಣಿಭ್ಯಃ= ಪ್ರಜೆಗಳ ದೆಸೆಯಿಂದ ಯಾವ ಕಾರಣದಿಂದ ಉತ್ತಮನೋ, ಆದ ಕಾರಣ ಶ್ರೀ ಹರಿಯು ವಿಚರ್ಷಣಿಯೆನಿಸುತ್ತಾನೆ. (ಸೂರ್ಯಂ ಏತಿ ಎನ್ನುವುದಕ್ಕೆ ಅರ್ಥ ಹೇಳುತ್ತಾರೆ.) ಶ್ರೀ ಕೇಶವನನ್ನು ಪ್ರಸಿದ್ಧ ಸೂರ್ಯನನ್ನೂ ಹೊಂದುತ್ತಾನೆ.(2) ಧಾತುಗಳಿಗೆ ಅನೇಕಾರ್ಥಗಳಿದ್ದುದರಿಂದ ಋಣೋತಿ ಎನ್ನುವುದು ಪೂರ್ಣೀಕರಿಸುತ್ತಾನೆಂದು ವ್ಯಾಖ್ಯಾತವಾಯ್ತು. ಅಥವಾ ಋಣ ಪ್ರಾಪಣೇ ಎಂದು ಧಾತುವಿಗೆ ಪ್ರಾಪಣ ಎಂದು ಅರ್ಥವಿರುವುದರಿಂದ ಹೊಂದಿಸುತ್ತಾನೆಂದರ್ಥವು ಪೂರ್ಣೀಕರಿಸುತ್ತಾನೆ ಎಂದು ತಾತ್ಪರ್ಯಾರ್ಥವನ್ನು ಹೇಳಿದ್ದು. || ೯ ||

ಋ || (೪೨೦) ಹಿರಣ್ಯಹಸ್ತೋ ಅಸುರಃ ಸುನೀಥಃ ಸುಮೃಳೀಕಃ ಸ್ವವಾಁ ಯಾತ್ವರ್ವಾಙ್ || ಅಪಸೇಧನ್ರಕ್ಷಸೋ ಯಾತುಧಾನಾನಸ್ಥಾದ್ದೇವಃ ಪ್ರತಿದೋಷಂ ಗೃಣಾನಃ || ೧೦ ||

ಅ || ಯಃ ದೇವಃ= ಯಾವ ಶ್ರೀ ಹರಿಯು ರಕ್ಷಸಃ= ರಾಕ್ಷಸರನ್ನು, ಯಾತುಧಾನಾನ್= ರಾಕ್ಷಸರ ಅವಾಂತರ ಜಾತಿ ಪ್ರಭೇದಗಳನ್ನು ಅಪಸೇಧನ್= ನಿರಾಕರಿಸುವವನಾಗಿ, ಪ್ರತಿದೋಷಂ= ಎಲ್ಲಾ ರಾತ್ರಿಗಳಲ್ಲಿ ರಾತ್ರಿಯ ಉಪಕ್ರಮ ಉಪಸಂಹಾರ ರೂಪ ಸಂಧ್ಯಾಕಾಲಗಳಲ್ಲಿ ಗೃಣಾನಃ= ಗಾಯತ್ರ್ಯಾದಿ ಮಂತ್ರಗಳಿಂದ ಸ್ತುತಿಸಲ್ಪಡುವವನಾಗಿ, ಅಸ್ಥಾತ್= ಇರುತ್ತಾನೋ, ಸಃ= ಅಂತಹ, ಹಿರಣ್ಯಹಸ್ತಃ= ಹಿರಣ್ಯಾತ್ಮಕವಾದ ಪಾತ್ರವು ಕೈಯಲ್ಲಿ ಉಳ್ಳ, ಅಸುರಃ= ಮುಖ್ಯಪ್ರಾಣರೂಪಗಳಲ್ಲಿ ಸ್ನೇಹವುಳ್ಳ ಸುನೀಥಃ= ಶೋಭನವಾದ ನೀತಿಯಿಂದ ಕೂಡಿದ,ಸುಮೃಳೀಕಃ= (ಮೃಡ ಸುಖನೇ)ಅಧಿಕವಾಗಿ ರಕ್ಷಿಸತಕ್ಕ, ಸ್ವವಾನ್= ತನ್ನ ಸತ್ತಾದಿಗಳಲ್ಲಿ ತನ್ನ ಅಪೇಕ್ಷೆಯಿರುವ, ಸರ್ವಸ್ವತಂತ್ರನಾದ, ಶ್ರೀಹರಿಯು, ಅರ್ವಾಙ್= ನೀಚರಾದ ನಮ್ಮನ್ನು ಕುರಿತು ಯಾತು= ಬರಲಿ. || ೧೦ ||

ಭಾ ॥ (1) ಸ್ವವಾನ್ಸ ಸ್ವತಂತ್ರತ್ವಾತ್ಸ್ವರ್ಣ ಪಾತ್ರಂ ಸುಪೂರ್ಣಂ। ದಧಾನೋಽಸೌ ಸ್ವರ್ಣ ವರ್ಣಶ್ಚ ತೇನ ಸ್ವರ್ಣಪಾಣಿಃ ಸ್ವರ್ಣಹಸ್ತಶ್ಚ ದೇವಃ ॥ (3) ಪೃಥಕ್ಪೃಥಕ್ ಪಾಣಿ ಪೂರ್ವಾಂಗ ವಿತ್ತ್ಯೈ ಸ್ವರ್ಣವರ್ಣಃ ಸ್ವರ್ಣಪಾಣಿಃ ನ ಉಕ್ತಃ ॥ (4) ಏತ್ಯೈರ್ಲಿಂಗೈ ರ್ವೇತ್ತಿ ಸೂರ್ಯಂ ಯತಶ್ಚ ಸೂರ್ಯಾದನ್ಯಃ ಸವಿತಾ ವಾಸುದೇವಃ ॥ (5) ಉಕ್ತೋ ಗಾಯತ್ರ್ಯಾ ಚಾರಣೈಸ್ತತ್ರತತ್ರ ಕಪ್ಯಾಸ ಪದ್ಮಾಕ್ಷ ಇತಿ ಹ್ಯುದಾಖ್ಯಃ ॥ ೧೦ ॥

ಅ ॥ (1) ತನಗೆ ತನ್ನಿಂದ ಸಂಬಂಧವಿಲ್ಲದಿರುವುದರಿಂದ ಸ್ವವಾನ್ ಎಂಬುವುದು ಅಯುಕ್ತವೆಂದರೆ (ನಿತ್ಯ ದಲ್ಲಿಯೂ ತನ್ನ ಸತ್ತಾದಿಗಳಲ್ಲಿ ಪರರ ಅಪೇಕ್ಷೆಯುಳ್ಳವನು ಪರವಾನ್=ಪರತಂತ್ರನು) ನಿತ್ಯದಲ್ಲಿಯೂ ತನ್ನ ಸತ್ತಾದಿಗಳಲ್ಲಿ ತನ್ನ ಅಪೇಕ್ಷೆಮಾತ್ರ ಉಳ್ಳವನು ಸ್ವತಂತ್ರನು) ತಥಾಚ ಆ ಶ್ರೀ ವಿಷ್ಣುವು ಸರ್ವಸ್ವತಂತ್ರನಾದುದರಿಂದ ಸ್ವವಾನ್ ಎನಿಸುತ್ತಾನೆ (2) ಹಿರಣ್ಯಹಸ್ತ ಎನ್ನುವುದನ್ನು ವ್ಯಾಖ್ಯಾನ ಮಾಡುತ್ತಾ, ಪೂರ್ವ ಋಕ್ಕಿನಲ್ಲಿನ ಹಿರಣ್ಯಪಾಣಿ ಎನ್ನುವುದನ್ನು ವ್ಯಾಖ್ಯಾನ ಮಾಡುತ್ತಾರೆ.) ರತ್ನಾದಿಗಳಿಂದ ಪರಿಪೂರ್ಣವಾದ ಸುವರ್ಣ ಪಾತ್ರೆಯನ್ನು ಯಾವ ಕಾರಣದಿಂದ ಶ್ರೀಹರಿಯು ಧರಿಸುವವನಾಗಿ ಇರುತ್ತಾನೋ,(ಆ ಕಾರಣಪೂರ್ವ ಋಕ್ಕಿನಲ್ಲಿ ಸ್ವರ್ಣಪಾಣಿಯೇ ಹಿರಣ್ಯಪಾಣಿಯಾಗಿಯೂ ಈ ಋಕ್ಕಿನಲ್ಲಿ ಸ್ವರ್ಣಹಸ್ತವೇ ಹಿರಣ್ಯಹಸ್ತನಾಗಿಯೂ ಹೇಳಲ್ಪಟ್ಟಿದ್ದಾನೆ (ಎಂಬ ಒಂದು ವ್ಯಾಖ್ಯಾನವು) ಹಿರಣ್ಯಾತ್ಮಕವಾದ ಪಾತ್ರವು ಕೈಯಲ್ಲಿ ಉಳ್ಳವನು ಎಂದು ನಿರ್ವಚನವು. ಯಾವ ಕಾರಣದಿಂದ ಸುವರ್ಣದಂತೆ ವರ್ಣವುಳ್ಳವನೋ, ಅದರಿಂದಲೂ ಸುವರ್ಣಪಾಣಿಃ ಎನಿಸುತ್ತಾನೆ, ಎಂದು ಇನ್ನೊಂದು ವ್ಯಾಖ್ಯಾನವು. (3) (ಪಾಣಿ ಶಬ್ದವು ವರ್ಣವಾಚಕವು ಆಗದಿರುವುದರಿಂದ ಈ ವ್ಯಾಖ್ಯಾನವು ಹೇಗೆ ಕೂಡುತ್ತದೆ ಎಂದರೆ) ಸ್ವರ್ಣದಂತೆ ವರ್ಣವುಳ್ಳ ಆ ಶ್ರೀಹರಿಯು ಸ್ವರ್ಣ ಪಾಣಿಯಾಗಿ ಹೇಳಲ್ಪಟ್ಟಿದ್ದಾನೆ. (ಹಿರಣ್ಯ ವರ್ಣೌ ಪಾಣೀ ಅಸ್ಯ=ಹಿರಣ್ಯದಂತೆ ವರ್ಣವುಳ್ಳ ಪಾಣಿಗಳುಳ್ಳವನು ಎಂದು ನಿರ್ವಚನವು)ಇದಾಗ್ಯೂ ಪಾಣಿಗಳಿಗೇ ಮಾತ್ರವೇ ಹಿರಣ್ಯವರ್ಣತ್ವವು ಸಿಗುತ್ತದೆ. ಸಮಸ್ತ ಅವಯವಗಳಿಗೆ ಹಿರಣ್ಯವರ್ಣತ್ವವು ಸಿಗುವುದಿಲ್ಲ,ಎಂದು ಹೇಳಕೂಡದು ಉಪಲಕ್ಷಣಯಾ ಪಾಣಿ ಶಬ್ದದಿಂದ ಸಮಸ್ತಅವಯವಗಳನ್ನು ಇಟ್ಟುಕೊಳ್ಳಬೇಕು)ಪ್ರತ್ಯೇಕವಾಗಿ ಸಮಸ್ತ ಅವಯವಗಳಿಗೂ ಅಂದರೆ ಪಾಣಿಯೇ ಮೊದಲಾಗಿ ಉಳ್ಳ ಸಮಸ್ತ ಅವಯವಗಳೂ ಹಿರಣ್ಯವರ್ಣವುಳ್ಳವುಗಳಾಗಿವೆ, ಎಂದು ತಿಳಿಸುವುದಕ್ಕಾಗಿ ಸ್ವರ್ಣವುಳ್ಳ ಆ ಶ್ರೀಹರಿಯೇ ಸ್ವರ್ಣಪಾಣಿಯಾಗಿ ಹೇಳಲ್ಪಟ್ಟಿದ್ದಾನೆ.(ಏವಂಚ ಎಲ್ಲಾ ಅವಯವಗಳೂ ಸುವರ್ಣವರ್ಣಗಳಾಗಿವೆ, ಎಂದು ತಿಳಿಸಿ ಕೊಡುವುದಕ್ಕಾಗಿ ಪಾಣಿ ಶಬ್ದವನ್ನು ಗ್ರಹಣ ಮಾಡಿದ್ದು) (ಪ್ರತ್ಯೇಕವಾಗಿ ಪ್ರತಿ ಒಂದು ಅಂಗವೂ ಸುವರ್ಣ ವರ್ಣವುಳ್ಳದ್ದೆಂದು ಧ್ಯಾನಿಸಬೇಕು ಒಂದೊಂದು ಅಂಗವು ಸುವರ್ಣವರ್ಣವುಳ್ಳದ್ದೆಂದು ದೃಢವಾದಾಗ ಮತ್ತೊಂದು ಅಂಗವನ್ನು ಸುವರ್ಣವರ್ಣವುಳ್ಳದ್ದೆಂದು ಧ್ಯಾನಿಸಬೇಕು ಪ್ರಥಮದಲ್ಲಿಯೇ ಸಮುದಾಯರೂಪದಿಂದಸುವರ್ಣ ವರ್ಣವುಳ್ಳದೆಂದು ಧ್ಯಾನಿಸಲಸಾಧ್ಯವು ಅಲ್ಪ ಜ್ಞಾನಿಗಳಿಗೆ ಹಾಗೆ ಧ್ಯಾನಿಸಲಿಕ್ಕೆ ಶಕ್ತಿಯುಳ್ಳವೆಂದು ತಿಳಿಸಿಕೊಡು ವುದಕ್ಕಾಗಿ ಪಾಣಿ ಶಬ್ದವನ್ನು ಗ್ರಹಣ ಮಾಡಿದ್ದು) (ಹಾಗಾದರೆ ರಾತ್ರಿಯಲ್ಲಿ ಸಂಧ್ಯಾವಂದನೆಯನ್ನು ನಿಷೇಧಿ ಸಿದುದರಿಂದ ಪ್ರತಿದೋಷಂ ಎಂದದ್ದು ಹೇಗೆಂದರೆ ಪ್ರತಿದೋಷಂ ಎನ್ನುವುದರಿಂದ ತ್ರಿಸಂಧ್ಯಾಕಾಲಗಳನ್ನು ಮಾತ್ರ ಇಟ್ಟುಕೊಳ್ಳಬೇಕು. ಹಾಗಾದರೆ-ರಾತ್ರಿಯಲ್ಲಿ ಸಂಧ್ಯಾವಂದನ ಮಾಡಕೂಡದು ಎಂಬ ವಾಕ್ಯಕ್ಕೆ ಸಂಧ್ಯಾ ಕಾಲಃ ಪ್ರಾಗುದಯಾದ್ವಿಪ್ರಸ್ಯ ದ್ವಿಮುಹೂರ್ತಕಃ। ರಾತ್ರೌ ಪ್ರಹರ ಪರ್ಯಂತಂ ದಿವಾ ಕರ್ಮಾಣಿ ಕಾರಯೇತ್॥ ಇತ್ಯಾದಿ ಪ್ರಮಾಣಾನುಸಾರ ಮಧ್ಯರಾತ್ರಿ ಕಾಲದಲ್ಲಿ ಸಂಧ್ಯಾವಂದನೆ ಮಾಡಕೂಡದು ಎಂಬಭಿಪ್ರಾಯವು) (ತಥಾಚ ಯಾವ ಶ್ರೀಹರಿಯು ರಾಕ್ಷಸಾದಿಗಳನ್ನು ನಿರಾಕರಿಸುತ್ತಾ ತ್ರಿ ಸಂಧ್ಯಾಕಾಲಗಳಲ್ಲಿ ಸ್ತುತಿಸಲ್ಪಡುವವನಾಗಿದ್ದನೋ, ಅಂತಹ ಹಿರಣ್ಯಪಾಣಿಯಾದ ಶ್ರೀ ಹರಿಯು ನೀಚರಾದ ನಮ್ಮನ್ನು ಹೊಂದಲಿ.) (4)(ಇತರತ್ರ ಅಗ್ನ್ಯಾದಿ ಶಬ್ದಗಳಿಗೆ ಅಗ್ನ್ಯಾದಿರೂಪವಾದ ಅರ್ಥವನ್ನೇ ಇಟ್ಟುಕೊಂಡೇ ಭಗವತ್ಪರತ್ವವನ್ನೂ ವ್ಯಾಖ್ಯಾನ ಮಾಡಿದುದರಿಂದ ಇಲ್ಲಿಯೂ ಹಾಗೆಯೇ ಎಂಬ ಪ್ರತೀತಿಯನ್ನು ಅಂದರೆ ಜೀವ

ತಾಂತರ ಪರತ್ವಪ್ರತೀತಿಯನ್ನು ನಿವಾರಣೆ ಮಾಡುತ್ತಾರೆ.) ಕ್ಷ್ಯೇದಾಧೀಂಸೂರ್ಯಃ ಇತ್ಯಾದಿಲಿಂಗಗಳಿಂದ ಹೇಳಲ್ಪಟ್ಟ ಪ್ರಾಕೃತಾಜ್ಞೇಯತ್ವ ಮೊದಲಾದ ಲಿಂಗಗಳಿಂದ ಇಲ್ಲಿ ಸವಿತೃ ಶಬ್ದದಿಂದ ಸೂರ್ಯನಿಂದ ಭಿನ್ನನು ವಾಚ್ಯನು. ಅವನು ವಾಸುದೇವನೇ. (ಮತ್ತು ಹಿಂದಿನ ಋಕ್ಕಿನಲ್ಲಿ) ಯಾವ ಕಾರಣದಿಂದ ಸೂರ್ಯಂ ಏತಿ=ಸೂರ್ಯನನ್ನು ಹೊಂದುತ್ತಾನೆ. ಎಂದು ಸೂರ್ಯನ ಸಮೀಪಕ್ಕೆ ಗಮನವು ಉಕ್ತವಾಗಿದೆ. (ಅದ ಕಾರಣ ಕರ್ಮ ಕರ್ತೃಗಳಿಗೆ ಬೇಧವು ಅವಶ್ಯಕವಾದ ಪ್ರಯುಕ್ತ) ಸೂರ್ಯಂ ಎಂಬ ದ್ವಿತೀಯಾಂತ ಪದದಿಂದ ವಾಸುದೇವನನ್ನೇ ಇಟ್ಟುಕೊಳ್ಳಬೇಕು.) (ಏತ್ಯೈರ್ಲಿಂಗೈಃ ಎಂಬ ಭಾಷ್ಯವನ್ನು ಪ್ರಕಾರಾಂತರದಿಂದ ವ್ಯಾಖ್ಯಾನ ಮಾಡುತ್ತಾರೆ.) ಆದಾಗ್ಯೂ ವಾಸುದೇವನೆಂದು ಹೇಗೆ ಸಿದ್ಧವಾಗುವುದೆಂದರೆ ಆಣಿಂ ನ ರಥ್ಯಂ ಇತ್ಯಾದಿಗಳಿಂದ ಹೇಳಲ್ಪಟ್ಟ ಮುಕ್ತಾಶ್ರಯತ್ವ ಮೊದಲಾದ ಲಿಂಗಗಳಿಂದ ಸವಿತೃ ಶಬ್ದವಾಚ್ಯನು ವಾಸುದೇವನೇ. (5) ಮತ್ತು ೨ ಸಂಧ್ಯಾಕಾಲಗಳಲ್ಲಿ ಸ್ತುತಿಸಲ್ಪಡುವವನು ಗಾಯತ್ರೀ ಪ್ರತಿಪಾದ್ಯನೆಂದು ಹೇಳಬೇಕು. (ಅಂದರೆ-೨ ಸಂಧ್ಯಾಕಾಲಗಳೂ ಪ್ರದೋಷಕಾಲವಾದುದರಿಂದ, ಪ್ರದೋಷಕಾಲದಲ್ಲಿ ವೇದಾಧ್ಯಯನವನ್ನು ಮಾಡಬಾರದೆಂದು ಹೇಳಿದ ಕಾರಣ ಸಂಧ್ಯಾಂಗ ಗಾಯತ್ರೀ ಮಂತ್ರದಿಂದ ಸ್ತುತ್ಯನೆಂದೇ ಅವಶ್ಯವಾಗಿ ಹೇಳಬೇಕು.) ಗಾಯತ್ರೀ ಪ್ರತಿಪಾದ್ಯನು ವಾಸುದೇವನೇ. ಧ್ಯೇಯಸ್ಸದಾ ಸವಿತೃ ಮಂಡಲ ಮಧ್ಯವರ್ತೀ ಎಂಬ ಪುರಾಣ ವಾಕ್ಯದಿಂದ ಮತ್ತು ಇಲ್ಲಿ ಹಿರಣ್ಯವರ್ಣವುಳ್ಳವನಾಗಿ ಹೇಳಲ್ಪಟ್ಟಿದ್ದಾನೆ. ಆ ಹಿರಣ್ಯವರ್ಣವುಳ್ಳವನು) ಆರಣ ಉಪನಿಷತ್ತುಗಳಿಂದ ಅಲ್ಲಿ ಹಿರಣ್ಯಶ್ಮಶ್ರುಃ ಹಿರಣ್ಯಕೇಶಃ ಆಪ್ರಣಖಾತ್ಸರ್ವ ಏವ ಸುವರ್ಣಃ, ಯದಾ ಪಶ್ಯಃ ಪಶ್ಯತೇ ರುಗ್ಮವರ್ಣಂ ಇತ್ಯಾದಿ ಪ್ರಮಾಣಗಳಲ್ಲಿ (ವಾಸುದೇವನೆಂದೇ ಹೇಳಲ್ಪಟ್ಟಿದ್ದಾನೆ. ಅಲ್ಲಿಯೂ ಸೂರ್ಯನೇ ಹೇಳಲ್ಪಟ್ಟಿದ್ದಾನೆಂದು ಹೇಳಲಾಗುವುದಿಲ್ಲ. ಯ ಏಷ ಆದಿತ್ಯೇ ಹಿರಣ್ಮಯಃ ಪುರುಷಃ ಎಂಬ ಶ್ರುತಿಯಲ್ಲಿ ಸೂರ್ಯನಲ್ಲಿ ಹಿರಣ್ಮಯನಾದ ಶ್ರೀ ವಾಸುದೇವನು ಇದ್ದಾನೆಂದು ಹೇಳಿದೆ. ಹಿರಣ್ಮಯನಾದವನು ಶ್ರೀ ವಾಸುದೇವನಿಂದ ಭಿನ್ನರಾದ ಬ್ರಹ್ಮರುದ್ರಾದಿಗಳೆಂದು ಹೇಳಕೂಡದು. ಏಕೆಂದರೆ—) ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ ಎಂದು ಕಪ್ಯಾಸ ಪದ್ಮಾಕ್ಷಃ =ಪದ್ಮದಳಗಳಂತೆ ಕಣ್ಣುಗಳುಳ್ಳವನೆಂದು ಹೇಳಿದೆ. (ಕಪ್ಯಾಸ ಶಬ್ದಾರ್ಥವನ್ನು ಪ್ರಮಾಣದಿಂದ ಹೇಳುತ್ತಾರೆ.) ಕಂಪಿಬನ್ನಾಲ ಸಂಬಂಧಿ ಕಮಲಾಯತಲೋಚನಃ ಕಪ್ಯಾಸವೆಂದರೆ ಬಾಡದಿರುವ ಪದ್ಮವು. ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ. (ಮತ್ತು ಹಿರಣ್ಯಶ್ಮಶ್ರುಃ ಎಂಬ ವಾಕ್ಯ ಪ್ರತಿಪಾದ್ಯನಾದವನು ಶ್ರೀವಿಷ್ಣುವೇ, ಸೂರ್ಯಾದಿಗಳಲ್ಲ, ಎಂಬಲ್ಲಿ ಉಪನಿಷತ್ತಿನಲ್ಲಿರತಕ್ಕ ಜ್ಞಾಪಕಾಂತರವನ್ನು ಹೇಳುತ್ತಾರೆ.) ತಸ್ಯೋದಿತಿನಾಮೋತ್ಸವುದಾಖ್ಯಃ ಅತನಿಗೆ ಉತ್ ಎಂದು ಹೆಸರು. ಆದಕಾರಣ ಈ ಹಿರಣ್ಯಶ್ಮಶ್ರುವು ಉತ್ ಎಂದು ಹೆಸರುಳ್ಳವನು ಎಂದು ಹೇಳಲ್ಪಟ್ಟಿದ್ದಾನೆ. ಸೂರ್ಯಾದಿಗಳಿಗೆ ಉತ್ ಎಂಬ ಹೆಸರು ಸರ್ವಥಾ ಕೂಡುವುದಿಲ್ಲ. ಸ ಏಷಃ ಸರ್ವೇಭ್ಯಃ ಪಾಪ್ಮಭ್ಯಃ ಉದಿತಃ ಆ ಶ್ರೀ ಹರಿಯು ಸಮಸ್ತ ಪಾಪಗಳಿಂದ ಉದ್ಗತನಾದುದರಿಂದ (ಸರ್ವದಾ ಪಾಪಲೇಶ ರಹಿತನಾದುದರಿಂದ ಉತ್ ಎಂದು ಹೆಸರುಳ್ಳವನು ಎಂದು ಉತ್ ಶಬ್ದವನ್ನು ನಿರ್ವಚನ ಮಾಡಿದ್ದಾರೆ. ಸರ್ವಪಾಪರಾಹಿತ್ಯರೂಪವಾದ ಉತ್ ಶಬ್ದಾರ್ಥವು ಸಂಸಾರಿಗಳಲ್ಲಿ ಸರ್ವಥಾ ಕೂಡಲಾರದು) ॥ ೧೦ ॥

ಋ ॥ (೪೨೧) ಯೇ ತೇ ಪಂಥಾಃ ಸವಿತಃ ಪೂರ್ವ್ಯಾಸೋರೇಣವಃ ಸುಕೃತಾ
ಅಂತರಿಕ್ಷೇ । ತೇಭಿರ್ನೋ ಅದ್ಯ ಪಥಿಭಿಃ ಸುಗೇಭೀ ರಕ್ಷಾ ಚ ನೋ
ಅಧಿ ಚ ಬ್ರೂಹಿ ದೇವ ॥ ೧೧ ॥ ೭ ॥ ೩೪ ॥ ೬ ॥

ಅ॥ ಹೇ ಸವಿತಃ ದೇವ= ಜಗತ್ಸೃಷ್ಟಿಕರ್ತನಾದ, ಶ್ರೀ ಹರಿಯೇ, ತೇ= ನಿನ್ನ ಸಂಬಂಧಿಗಳಾದ ಯೇ= ಯಾವ ಪ್ರಸಿದ್ಧಗಳಾದ. ದೇವಯಾನಗಳು (ಶರೀರದಲ್ಲಿರುವ ಸುಷುಮ್ನಾದಿ ನಾಡಿಗಳು) ಪೂರ್ವ್ಯಾಸಃ= ಪೂರ್ವದಲ್ಲಿಯೇ ಇದ್ದುವುಗಳೋ, ಯೇ=ಯಾವವು ಅಂತರಿಕ್ಷೇ=ಅಂತರಿಕ್ಷ ಲೋಕದಲ್ಲಿ ಅರ್ಚಿರಾದಿ ಲೋಕಗಳಲ್ಲಿ ಸಾಧಿಸಲು ಶಕ್ಯಗಳಾದ, ಅರೇಣವಃ=ವಿಷಯಗಳಲ್ಲಿ ರಾಗ,ರಜೋಗುಣ ರಹಿತರಾದ ಪುರುಷರ ಸಂಬಂಧಿಗಳಾದ, ಸುಕೃತಾಃ= ನಿವೃತ್ತ ಕರ್ಮಗಳಿಂದಲೇ ಪ್ರಾಪ್ಯಗಳಾದ ಪಂಥಾಃ=ಮಾರ್ಗಗಳಿವೆಯೋ, ತೇಭಿಃ=ಅಂತಹ ಸುಗೇಭಿಃ=(ಸುಪೂರ್ವಾತ್ ಗಮ್ ಗತೌ, ಸುಖೇನ ಗಚ್ಛಂತ್ಯತ್ರ) ಸುಖದಿಂದ ಹೋಗಲು ಶಕ್ಯಗಳಾದ, (ಕಂಟಕಾದಿಗಳಿಂದ ವಿರಹಿತಗಳಾದ) ಪಥಿಭಿಃ= ಮಾರ್ಗಗಳಿಂದ (ಮಾರ್ಗಗಳನ್ನು ಕೊಟ್ಟು) ಅದ್ಯ=ಈಗ, ನಃ= ನಮ್ಮನ್ನು ರಕ್ಷಚ= (ಸಂಸಾರದಿಂದ ಬಿಡುಗಡೆ ಮಾಡಿ) ರಕ್ಷಿಸು, ಅಥೋ= ಮತ್ತು, ನಃ= ಅಧಿಜ= ನಮ್ಮನ್ನು ಅಧಿಕರನ್ನಾಗಿಯೂ ಬ್ರೂಹಿ= ಹೇಳು, (ನಿನ್ನ ವಚನ ಮಾತ್ರದಿಂದ ಅಧಿಕರಾಗುವೆವು) ॥ ೧೧ ॥

ಭಾ ॥ (1) ಯೇ ಪಂಥಾನೋ ದೇವಯಾನಾ ಅಮುತ್ರ ಸಾಧ್ಯಾಯೇ ತೇ ರೇಣವೋಽರಾಗತೋ ವಾ। ರಜೋಹಾನಾದಥವಾ ತಾನ್ಪ್ರದಾಯ ರಕ್ಷಾಧಿಕಾನ್ ಬ್ರೂಹಿ ನೋಽಥೋ ಸಮೇಭ್ಯಃ ॥ ೧೧ ॥ ೭ ॥ ೩ ॥ ೭ ॥

ಅ॥ (ಎಲೋ ಶ್ರೀಹರಿಯೇ) ನಿನ್ನ ಸಂಬಂಧಿಗಳಾದ ಪ್ರಸಿದ್ಧಗಳಾದ ಶರೀರದಲ್ಲಿರತಕ್ಕ ಸುಷುಮ್ನಾದಿ ನಾಡಿಗಳು ಪೂರ್ವದಲ್ಲಿರತಕ್ಕವುಗಳೋ, ಯಾವವು ಅರ್ಚಿರಾದಿಲೋಕಗಳಲ್ಲಿ ಸಾಧಿಸಲು ಶಕ್ಯಗಳಾದ ರಾಗವಿಲ್ಲದಿರುವುದರಿಂದ ಅಥವಾ ರಜೋ ಗುಣವಿಲ್ಲದಿರುವುದರಿಂದ ಅರೇಣುಗಳೆನಿಸಿಕೊಂಡ, (ರೇಣು ಶಬ್ದದಿಂದ ರಜಃ ಶಬ್ದಾರ್ಥವು ಲಕ್ಷಿತವಾಗುತ್ತದೆ. ಆದಕ್ಕೆ ರಾಗವು ಅಥವಾ ರಜೋಗುಣವು ಅರ್ಥವು ತಥಾಚ ವಿಷಯರಾಗ ರಜೋಗುಣ ರಹಿತರಾದ ಪುರುಷರ ಸಂಬಂಧಿಗಳಾದ) ಮಾರ್ಗಗಳಿವೆಯೋ ಅಂತಹ ಮಾರ್ಗಗಳನ್ನು ಕೊಟ್ಟು ನಮ್ಮನ್ನು ರಕ್ಷಿಸು. ನಮ್ಮನ್ನು ಅಧಿಕರನ್ನಾಗಿಯೂ ಹೇಳು. (ನಿನ್ನ ವಚನ ಮಾತ್ರದಿಂದ ಅಧಿಕರಾಗುವೆವು.) ಸಮಾನಿಕರಿಂದಲೂ ಅಧಿಕರನ್ನಾಗಿ ಹೇಳು.

ವಿ॥ (1) ಹೀನರಿಗಿಂತ ಅಧಿಕರೆಂದು ಸುತರಾಂ ಸಿದ್ಧವಾಗಿದೆ. ಅಧಿಕರಾದವರಿಂದ ಆಧಿಕ್ಯವು ಹೊಂದಲಶಕ್ಯವೇ ಆಗಿದೆ. ಆದ ಕಾರಣ ಸಮಾನಿಕರಿಂದ ಆಧಿಕ್ಯ ಪ್ರಾರ್ಥನೆಯು. (2) ಹಾಗಾದರೆ ಅಧಿಕರಾದವರಿಂದ ಆಧಿಕ್ಯ ಪ್ರಾಪ್ತಿಯು ಹೇಗೆ ಆಗಲಾರದೋ, ಹಾಗೆಯೇ ಸ್ವರೂಪಕ್ಕೆ ನಾಶವಿಲ್ಲದಿರುವುದರಿಂದ ಸಮಾನಿಕರಿಂದಲೂ ಆಧಿಕ್ಯ ಪ್ರಾಪ್ತಿಯು ಸರ್ವಥಾ ಆಗಲಾರದು, ಎಂದರೆ. ಯಾರು ತನಗೆ ಸಮಾನಿಕರೋ, ಕಾಲಾಂತರದಲ್ಲಿ ಮೋಕ್ಷವನ್ನು ಹೊಂದುವವರೋ, ಅವರಿಗಿಂತ ಶೀಘ್ರವಾಗಿ ಮುಕ್ತಿಯಾದದ್ದು ಆಧಿಕ್ಯವು ಅಥವಾ ತನಗೆ ಸಮಾನಿಕರಾದವರು ಸತ್ಕರ್ಮ ಮಾಡದೆ ದುಷ್ಕರ್ಮ ಮಾಡುವುದರಿಂದ ಆನಂದಾದಿಹ್ರಾಸವನ್ನು ಹೊಂದುವರು. ಅವರಿಗಿಂತ ಮೊದಲು ಸಂಪೂರ್ಣ ಸ್ವರೂಪಾನಂದಾನುಭವರೂಪವಾದ ಆಧಿಕ್ಯವನ್ನು ಛಾಂದೋಗ್ಯ ಭಾಷ್ಯಾದಿಗಳಲ್ಲಿ ಉಪಪಾದಿಸಿರುವರು. (3) ಮೋಕ್ಷಮಾರ್ಗವು ಒಂದೇಯಾದುದರಿಂದ ಪಥಿಭಿಃ ಎಂಬೀ ಬಹುವಚನವು ಹೇಗೆ ಕೂಡುತ್ತದೆ ಎಂದರೆ. ಗರುಡಮಾರ್ಗ ಶೇಷಮಾರ್ಗ ಎಂದು ಭೇದವಿದೆ. ಮತ್ತು ಗರುಡ ಮಾರ್ಗ ಶೇಷ ಮಾರ್ಗಗಳಲ್ಲಿಯೂ ಪ್ರತ್ಯೇಕ ಅವಾಂತರ ಭೇದಗಳಿವೆ. ಆದರಿಂದ ಮಾರ್ಗಭೂತಗಳಾದ ಅರ್ಚಿರಾದಿ ಲೋಕಗಳಿಗೂ ಭೇದವಿದೆ. ಆದಕಾರಣ ಬಹುವಚನವು ಯುಕ್ತವೇ ॥೧೧॥೭॥೩॥೭॥

ಅವ॥ ಪ್ರವೋ ಯಹ್ವಂ ಎಂಬುವುದನ್ನಾರಂಭಿಸಿ, ತ್ವಮಗ್ನೇ ಎನ್ನುವುದಕ್ಕಿಂತ ಮೊದಲಿನದ್ದಾದ ೧೧೦ ಋಕ್ಕುಗಳಿಗೆ ಕಣ್ವರು ಋಷಿಗಳು. ಅವರಿಗೆ ಶತರ್ಚಿಗಳು ಎಂದು ಪ್ರಸಿದ್ಧಿ ಇದ್ದರೂ ಕಾಲಾಂತರದಲ್ಲಿ ಹೆಚ್ಚು ೧೦ ಋಕ್ಕುಗಳನ್ನು ಕಂಡಿರುವುದರಿಂದ ಶತರ್ಚಿಗಳು ಎಂಬ ಹೆಸರು ಯುಕ್ತವಾಗುವುದು. ಛಂದಸ್ಸನ್ನು ಯಥಾ ಯೋಗ್ಯವಾಗಿ ತಿಳಿದು ಕೊಳ್ಳಬೇಕು. ಪ್ರವೋಯಹ್ವಂ ಇತ್ಯಾದಿಗಳು ೨೦ ಋಕ್ಕುಗಳು. ೪ ವರ್ಗಗಳು. ಪ್ರಗಾಥಾ ಛಂದಸ್ಸುವು. ೨೬ನೇ ಸೂಕ್ತವು.

ಋ॥ (೪೨೨) ಪ್ರವೋ ಯಹ್ವಂ ಪುರೂಣಾಂ ವಿಶಾಂ ದೇವಯತೀನಾಂ।
ಅಗ್ನಿಂ ಸೂಕ್ತೇಭಿರ್ವಚೋಭಿರೀಮಹೇ ಯಂ ಸೀಮಿದನ್ಯ
ಈಳತೇ ॥ ೧ ॥

ಅ॥ (ಎಲೋ ಪ್ರಜೆಗಳಿರಾ ಜ್ಞಾನ ಕರ್ಮಗಳಲ್ಲಿ ಅಧಿಕಾರ ಹೊಂದಿದವರೇ), ದೇವಯತೀನಾಂ= (ದ್ವಿತೀಯಾಂತವಾದ ದೇವ ಶಬ್ದಕ್ಕೆ ಇಣ್‌ಗತೌ. ಶತ್ರಂತಾತ್ ಸ್ತ್ರೀಯಾಂ ಙೀಪ್. ಗತಿಯೆಂದರೆ ಜ್ಞಾನವು ಮತ್ತು ಯಜನವು. ತಥಾಚ) ದೇವಾನ್ ಯಂತೀತಿ ದೇವಯತ್ಯಃ) ಶ್ರೀ ಹರಿಯ ಜ್ಞಾನವಿದ್ದುದರಿಂದಲೂ ದೇವತೆಗಳನ್ನುದ್ದೇಶಿಸಿ ಯಾಗ ಮಾಡಿದುದರಿಂದಲೂ ದೇವಯತಿಗಳೆನಿಸಿಕೊಂಡ, ಪುರೂಣಾಂ=ಬಹು ಮಂದಿಗಳಾದ, ವಿಶಾಂ= ಪ್ರಜೆಗಳಾದ, ವಃ=ನಿಮಗೆ, ಅನ್ಯೇ=ಇತರರಾದ, ಸಂತಃ=ಸಜ್ಜನರು, ಯಂ= ಯಾವನು ಸೀಂ ಇತ್=ಚೆನ್ನಾಗಿಯೇ, ಈಳತೇ=(ಈಡಸ್ತುತೌ.) ಸ್ತುತಿಸುತ್ತಾರೋ ಅಂತಹ, ಯಹ್ವಂ=(ಯಹುಃಸೂನುಃ ಎಂದು ಅಪತ್ಯನಾಮಗಳಲ್ಲಿ ಪಠಿತವಾಗಿದೆ.) ಪುತ್ರನಾದ, ಅಗ್ನಿಂ= ಅಗ್ನಿಯನ್ನೂ ಶ್ರೀ ವಿಷ್ಣುವನ್ನೂ (ನಾವು) ಸೂಕ್ತೇಭಿಃ ಚೆನ್ನಾಗಿ ಪ್ರಯುಕ್ತಗಳಾದ, ವಚೋಭಿಃ= ವಚನಗಳಿಂದ ಪ್ರಈಮಹೇ= ಈಙ್ ಯಾಚ್ಞಾಯಾಂ ಯಾವಾಗಲೂ ಚೆನ್ನಾಗಿ ಪ್ರಾರ್ಥಿಸುತ್ತೇವೆ, ಹೊಂದುತ್ತೇವೆ. ತಿಳಿಯುತ್ತೇವೆ. ॥ ೧ ॥

ಭಾ॥ (1) ಕಣ್ವಾಸ್ತ್ವಧ್ಯಾಪಯನ್ ವಿಷ್ಣೋರನುಗ್ರಹಮಥಾಪ್ನುವನ್। ಇಚ್ಛಂತ್ಶ್ಚ ಜ್ಞಾನ ವಿತತಿಂ ದೇವಾಂಸ್ತುಷ್ಟುವ ಭಕ್ತಿತಃ॥ (2) ಋಕ್ಶತೇನಾವಶಿಷ್ಟಂಚ ಜಪ್ಯಸ್ಯಾಂತೇ ತು ಕಾಲತಃ। ಶೃಣ್ವಂತು ಸ್ತೋಮಮಿತ್ಯಂತಾ ದದೃಶ್ಯೈಕಾಗ್ರಮಾನಸಃ॥ (3) ಬಹ್ವಾಧೇಯತ್ವತಃ ಪುತ್ರಂ ಬಹೂನಾಂ ವೋ ಹುತಾಶನಂ। ಬಹುಜ್ಞೇಯತ್ವತೋ ವಿಷ್ಣುಂ ವೇಮಹೇ ಹೇ ಪ್ರಜಾಸ್ಸದಾ । ದೇವಜ್ಞಾನಾದ್ವಾ ಯಜನಾದ್ದೇವಯತ್ಯಃ (4) ಸಮೀಳತೇ॥ ಯಮನ್ಯೇಚ ಜನಾಃಸಂತಃ ॥ ೧ ॥

ಅ॥ (1) ಹಿಂದೆ ಹೇಳಿದ ಪ್ರಕಾರ ಹಿರಣ್ಯಸ್ತೂಪರು ಕಂಡಿರುವ ಋಕ್ಕುಗಳನ್ನು ವ್ಯಾಖ್ಯಾನ ಮಾಡಿ ಈಗ ಮೇಲಿನ ಋಕ್ಕುಗಳಿಗೆ ಋಷಿಯನ್ನು ಹೇಳುತ್ತಾರೆ) ಕಣ್ವಋಷಿಗಳಾದರೂ ಶ್ರೀ ವಿಷ್ಣುವಿನ ಅನುಗ್ರಹವನ್ನು ಹೊಂದುವವರಾಗಿಯೇ ಸಜ್ಞಾನ ವಿಸ್ತಾರವನ್ನು ಇಚ್ಛಿಸುವವರಾಗಿಯೇ ಅಧ್ಯಯನ ಮಾಡಿಸುವವರಾ (ಅಂದರೆ ಶ್ರೀ ವಿಷ್ಣುವಿನ ಅನುಗ್ರಹಕ್ಕಾಗಿಯೇ ಮತ್ತು ಅತಿಶಯ ಜ್ಞಾನ ಸಂಪಾದನೆಗಾಗಿಯೇ ಸಚ್ಛಿಷ್ಯರಿಗೆ ಅಧ್ಯಯನ ಮಾಡಿಸುವವರಾಗಿ (ಅದರಿಂದ ತಮ್ಮ ಜೀವನಕ್ಕಾಗಿ ಅಧ್ಯಯನ ಮಾಡಿಸುವುದು ಅಲ್ಪವೆಂದುಕ್ತವಾಯಿತು) ಶ್ರೀ ವಿಷ್ಣುವೇ ಪ್ರಧಾನನಾಗಿ ಉಳ್ಳ ಅಗ್ನ್ಯಾದಿದೇವತೆಗಳನ್ನು ಸ್ತೋತ್ರ ಮಾಡಿದರು.(2)ಆ ಕಣ್ವ ಋಷಿಗಳೇ ಏಕಾಗ್ರಚಿತ್ತರಾಗಿ ೧೦೦ ಋಕ್ಕುಗಳಿಂದ ಅವಶಿಷ್ಟಗಳಾದ ಶೃಣ್ವಂತು ಸ್ತೋಮಂ ಎಂಬ ಪರ್ಯಂತ ಇತರಕ್ಕ ಋಕ್ಕುಗಳನ್ನು ಜಪದ ಅವಸಾನದಲ್ಲಿ (ಜಪ ಅವ್ಯಕ್ತೇ ಶಬ್ದೇ) ಕಾಲಾಂತರದಲ್ಲಿ ನೋಡಿದರು.

ವಿ॥ (1) ಕಾಲತಃ ಎನ್ನುವುದರಿಂದ ಕಾಲಾಂತರತ್ವವೂ, ಜಪ್ಯಸ್ಯಾಂತೇ ಎನ್ನುವುದರಿಂದ ಅವಸ್ಥಾಂತರತ್ವವೂ ಉಕ್ತವಾಯಿತು. ಇದಕ್ಕಾಗಿಯೇ ಅಧ್ಯಾಪಯನ್ ಎಂದಂದ್ದು. ಅಂತೂ ಅಧ್ಯಯನ ಮಾಡಿಸುವ ಅವಸ್ಥೆಯಲ್ಲಿ ೧೦೦ ಋಕ್ಕುಗಳನ್ನು ಕಂಡದ್ದು. ಜಪಾವಸಾನರೂಪವಾದ ಅವಸ್ಥಾಂತರದಲ್ಲಿ ಆದರೂ ಅವಶಿಷ್ಟ

ಗಳಾದ ೧೪ ಋಕ್ಕುಗಳನ್ನು ನೋಡಿದ್ದು. (2) ಅವಶಿಷ್ಟಂ ಎಂದು ಹೇಳಿದುದನ್ನೇ ಶೃಣ್ವಂತು ಸ್ತೋಮವಾಹ್ಯಂ ತಾಃ ಎನ್ನುವುದರಿಂದ ವಿವರಿಸಿದರು. ಇದು ತದ್ಗುಣ ಸಂವಿಜ್ಞಾನ ಬಹುವ್ರೀಹಿಯು. ಯಾವ ಬಹುವ್ರೀಹಿಯಲ್ಲಿ ಅಲ್ಲಿರತಕ್ಕ ಪದಾರ್ಥದ ಜ್ಞಾನವೂ ಇದೆಯೋ, ಅದು ತದ್ಗುಣಸಂವಿಜ್ಞಾನ. ಬಹುವ್ರೀಹಿಯಾಗುತ್ತದೆ. ಪ್ರಕೃತ, ಶೃಣ್ವಂತು ಸ್ತೋಮಂ ಎಂಬ ಋಕ್ಕು, ಯಾವ ಋಕ್ಕುಗಳ ಅಂತ್ಯದಲ್ಲಿದೆಯೋ, ಅಂತಹ ತ್ವಮಗ್ನೇ ವಸೂಂರಿಹ ಎಂಬ ಋಕ್ಕಿನಿಂದ ಮೊದಲಿನ ಋಕ್ಕುಗಳು (3) ಈಗ ಅನುಕ್ರಮಣಿಕೆಯಲ್ಲಿ ಹೇಳಿದ್ದು ಅಯುಕ್ತವೆನ್ನುತ್ತಾರೆ.) ತ್ವಮಗ್ನೇ ಎನ್ನುವುದಕ್ಕಿಂತ ಮೊದಲಿನ ಋಕ್ಕುಗಳು ಕಣ್ವ ಋಷಿಗಳಿಂದ ದೃಷ್ಟಗಳಾದವುಗಳು ಎಂದು ಹೇಳಿದುದರಿಂದ ಅಗ್ನೇ ಪಳೂನಾ ಪ್ರಸ್ಕಣ್ವಃ ಎಂಬಲ್ಲಿ ಅಗ್ನೇ ಎನ್ನುವುದರಿಂದ ಅಗ್ನೇ ವಿವಸ್ವದುಷಸಃ ಎಂಬ ಸೂಕ್ತದ ಪ್ರತೀಕವನ್ನೂ ಪಳೂನಾ ಎನ್ನುವುದರಿಂದ ೧೪ ಎಂಬ ಸಂಖ್ಯೆಯನ್ನೂ, ಪ್ರಸ್ಕಣ್ವಃ ಎನ್ನುವುದರಿಂದ ಋಷಿಯನ್ನು ಗ್ರಹಣ ಮಾಡಿದ್ದು, ಎಂದು ಅನುಕ್ರಮಣಿಯಲ್ಲಿ ಕಣ್ವ ಋಷಿಗಳು ಕಂಡಿರುವ ಋಕ್ಕುಗಳಲ್ಲಿಯೇ ೧೪ ಋಕ್ಕುಗಳನ್ನು ಪ್ರಸ್ಕಣ್ವರು ಕಂಡದ್ದು, ಎಂದು ಹೇಳಿದ್ದು ಅಯುಕ್ತವೆಂದು ಉಕ್ತವಾಯಿತು. (೫) ನಾವು ಯಾವುವು ಋಷ್ಯಾದಿಗಳನ್ನು ಹೇಳುತ್ತೇವೋ,' ಅವು ಋಕ್ಸಂಹಿತಾ, ವ್ಯಾಸೋಕ್ತ ಸ್ವಾಧ್ಯಾಯಾದಿ ಗ್ರಂಥಾನುಸಾರವಾಗಿ ಹೇಳುತ್ತೇವೆಂದು ಹೇಳಿದ ಅರ್ಥದಲ್ಲಿ ಪ್ರಮಾಣವನ್ನು ಮೊದಲೇ ಹೇಳಿರುತ್ತೇವೆ. ||

ಅ ವ ||(1) ಪ್ರವೋ ಯಂಹಿಷ್ಠಂ ಕಣ್ವೋ ಘೋರಂ ಅಗ್ನೇಯಂ ಪ್ರಾಗಾಥಂ ಮೂರ್ಧ್ವಾ ಊಷು ಯೌಪ್ಯೌ ಎಂದು ಅನುಕ್ರಮಣಿಕೆಯು. ಪ್ರವೋಯಹ್ವಂ ಎಂಬ ಸೂಕ್ತವು ೨೦ ಋಕ್ಕುಗಳುಳ್ಳದ್ದು. ಈ ಸೂಕ್ತವನ್ನಾರಂಭಿಸಿ ಘೋರ ಪುತ್ರರಾದ ಕಣ್ವರು ಋಷಿಗಳು. ಅಗ್ನಿಯು ದೇವತೆಯು ಪ್ರಗಾಥಾ ಛಂದಸ್ಸು. ಊರ್ಧ್ವ ಊಷುಣ ಊತಯೇ, (೪೩೪) ಊರ್ಧ್ವೋನಃ ಪಾಹ್ಯಂಹಸಃ (೪೩೫) ಎಂಬೀ ೨ ಋಕ್ಕುಗಳು ಯೂಪ ದೇವತಾಕಗಳು, ಎಂದು ಕೆಲವರು ಅಂದರೆ ಅನುಕ್ರಮಣಿಕಾಕಾರರು ಹೇಳುತ್ತಾರೆ. ಆದರೆ ಯೂಪ ವಿಷಯಕ ಶ್ರುತಿ ಲಿಂಗಾದಿಗಳು ಇಲ್ಲದಿರುವುದರಿಂದಲೂ ಸ್ವಾಧ್ಯಾಯ ಮೊದಲಾದ ಗ್ರಂಥಗಳ ವಿರೋಧವಿದ್ದುದರಿಂದಲೂ ಇದು ಅಯುಕ್ತವು. (2) ಪ್ರಗಾಥ್ಯಂತೇ ಸಂಮೀಲ್ಯಂತೇ ಛಂದಾಂಸಿ ಯಸ್ಮಿನ್ ಸೂಕ್ತೇ ಸಪ್ರಗಾಥಂ. ಯಾವ ಸೂಕ್ತದಲ್ಲಿ ಛಂದಸ್ಸುಗಳು ಸಂಮಿಲಿತಗಳಾಗುತ್ತವೋ ಅದು ಪ್ರಗಾಥವು. ಪ್ರಗಾಥಗಳು ಅನೇಕ ವಿಧಗಳು. ಅವುಗಳಲ್ಲಿ ಈ ಸೂಕ್ತದಲ್ಲಿ ಬಾರ್ಹತ ಎಂದು ಹೆಸರುಳ್ಳ ಪ್ರಗಾಥ ಛಂದಸ್ಸಿನ ಋಕ್ಕುಗಳು. ಬೃಹತೀ ಸತೋಬೃಹತಿಗಳು ಬಾರ್ಹತ ಪ್ರಗಾಥವೆನಿಸುತ್ತವೆ. ಯಾವ ಸೂಕ್ತದಲ್ಲಿ ಬೃಹತೀ ಛಂದಸ್ಸಿನ ಋಕ್ಕುಗಳೂ ಪಜ್ರ ವಿಶೇಷ ಸತೋ ಬೃಹತೀ ಛಂದಸ್ಸಿನ ಋಕ್ಕುಗಳು ಇವೆಯೋ ಅಂತಹ ಋಕ್ಕುಗಳ ಸಮೂಹವು ಬಾರ್ಹತ ಪ್ರಗಾಥವೆನಿಸುತ್ತದೆ.(3) ಈ ಸೂಕ್ತದಲ್ಲಿಯೂ ಪ್ರಾಯಶಃ ಪ್ರಥಮ ತೃತೀಯಾದಿವಿಷಮ ಋಕ್ಕುಗಳು ಬೃಹತೀ ಛಂದಸ್ಕಗಳು. ಆದಿತೋಽಷ್ಟಾಕ್ಷರೌ ಪಾದೌ ತೃತೀಯೋ ದ್ವಾದಶಾಕ್ಷರಃ| ಚತುರ್ಥೋಽಷ್ಟಾಕ್ಷರಶ್ಚೇತಿ ಬೃಹತೀ ಖಲು ವೈಭವೇತ್|| ೧. ೨ ನೇ ಪಾದಗಳಲ್ಲಿ ೮ ಅಕ್ಷರಗಳು. ೩ನೇ ಪಾದದಲ್ಲಿ ೧೨ ಅಕ್ಷರಗಳು. ೪ನೇ ಪಾದದಲ್ಲಿ ೮ ಅಕ್ಷರಗಳು. ಅಂತಹದು ಬೃಹತೀ ಎನಿಸುತ್ತದೆ (೪) ೨ ೪ ಮೊದಲಾದ ಸಮ ಋಕ್ಕುಗಳು. ಪ್ರಾಯಃ ಸತೋಬೃಹತೀ ಛಂದಸ್ಕಗಳು. ಯಾವ ಋಕ್ಕಿನಲ್ಲಿ ೧ನೇ ೩ನೇ ಪಾದಗಳಲ್ಲಿ ೧೨ ಅಕ್ಷರಗಳು ಇವೆಯೋ, ೨ನೇ ೪ನೇ ಪಾದಗಳಲ್ಲಿ ೮ ಅಕ್ಷರಗಳು ಇವೆಯೋ ಅದು ಸತೋ ಸತೋ ಬೃಹತೀ ಎನಿಸುತ್ತದೆ ಬೃಹತೀ ಎಂದರೆ ಪಜ್ರ ವಿಶೇಷ ಛಂದಸ್ಸು. ವಜ್ರ ಛಂದಸ್ಸಿನ ದೇವತೆಯನ್ನು ಹೇಳಿಯಾಗಿದೆ. (5) ಬೃಹತೀ ಛಂದಸ್ಸಿಗೆ ಶ್ರೀಃ ಬ್ರಹ್ಮಾಣೀ ಭಾರತೀ. ಗರುಡ ತಾರಾ ಎಂದು ಐದುಮಂದಿ ದೇವತೆಗಳು.

ಅ || (3) ಶ್ರೀಹರಿಯ ಜ್ಞಾನವಿದ್ದುದರಿಂದಲೂ ದೇವತೆಗಳನ್ನುದ್ದೇಶಿಸಿ ಯಾಗ ಮಾಡುವುದರಿಂದಲೂ ದೇವಯಜ್ಯಾಃ ಎನಿಸಿಕೊಂಡ, (ಅಂದರೆ ಜ್ಞಾನ ಕರ್ಮಗಳಲ್ಲಿ ಅಧಿಕಾರ ಹೊಂದಿದ) ಎಲ್ಲಾ ಪ್ರಜೆಗಳೇ ದೇವಾನ್ ಯಂತೀತಿ ದೇವಯಜ್ಯಾಃ, ಇಣ್ ಗತೌ, ಗತಿಯೆಂದರೆ ಜ್ಞಾನವು. ಅಥವಾ ಯಜನವು. ಜ್ಞಾನವು ಮೋಕ್ಷ ರೂಪ

ನಾದ ಗತಿಗೆ ಸಾಧನವಾಗಿದೆ. ಯಜನವು ಸ್ವರ್ಗಾದಿಗಳಿಗೆ ಸಾಧನವಾಗಿದೆ. ಅದ ಕಾರಣ ಲಕ್ಷಣಯಾ ಇಣ್ ಧಾತುವಿನಿಂದ ವಾಚ್ಯವಾದ ಗತಿಶ್ಯವಿದೆ.) ಬಹು ಮಂದಿ ಪ್ರಜೆಗಳಾದ ನಿಮಗೆ, ಬಹು ಮಂದಿ ಆಧಾನಾಖ್ಯ ಕರ್ಮವಾದಿ ಅದರಿಂದ ಹುಟ್ಟಿಸಿದ ಪ್ರಯುಕ್ತ ಪುತ್ರನೆನಿಸಿದ ಅಗ್ನಿಯನ್ನು, ಬಹು ಮಂದಿ ವಿಷ್ಣುವಿಷಯಕ ತಮ್ಮ ಜ್ಞಾನವನ್ನು ಇತರರ ಜ್ಞಾನವನ್ನೂ ಅಭಿವ್ಯಕ್ತೀಕರಿಸಿದ ಪ್ರಯುಕ್ತ ಪುತ್ರನೆನಿಸಿಕೊಂಡ ಶ್ರೀ ವಿಷ್ಣುವನ್ನು ಸದಾ ಹೊಂದುತ್ತೇನೆ. ತಿಳಿಯುತ್ತೇನೆ (ಹೀಗೆ ಅಗ್ನಿಗೆ ಪುತ್ರತ್ವ ಘಟಕವಾದ ಆಧಾನಾಖ್ಯ ಪ್ರಯೋಜನ ಶ್ರೀ ವಿಷ್ಣುವಿಗೆ ಪುತ್ರತ್ವ ಘಟಕವಾದ ಜ್ಞಾನಾಖ್ಯ ಪ್ರಯೋಜನಗಳಿದ್ದ ಪ್ರಯುಕ್ತವೇ ದೇವ ಯತೀ ಶಬ್ದವನ್ನು ಎರಡು ಪ್ರಕಾರ ವ್ಯಾಖ್ಯಾನ ಮಾಡಿದರು.) (ತಥಾಚ ನಾವು ಸದಾ ಅಗ್ನಿಯನ್ನು ಶ್ರೀಹರಿಯನ್ನು ಪ್ರಾರ್ಥಿಸುತ್ತೇವೆ.) (ಸ) (ಎಂತಹವನೆಂದರೆ) ಇತರರಾದ ಸಜ್ಜನರು ಯಾವ ಅಗ್ನಿಯನ್ನೂ ಶ್ರೀಹರಿಯನ್ನೂ ಸರ್ವದಾ ಚೆನ್ನಾಗಿ ಸ್ತುತಿಸುತ್ತಾರೋ. ॥೧॥

ಋ॥ (೪೨೨) ಜನಾಸೋ ಅಗ್ನಿಂ ದಧಿರೇ ಸಹೋವೃಧಂ ಹವಿಷ್ಮಂತೋ
ವಿಧೇಮ ತೇ। ಸ ತ್ವಂ ನೋ ಅದ್ಯ ಸುಮನಾ ಇಹಾವಿತಾ ಭವಾ
ವಾಜೇಷು ಸಂತ್ಯ ॥೨॥

ಅ॥ (ಯಂ ಯಾವ) ಸಹೋವೃಧಂ=(ವೃಧು ವರ್ಧನೇ) ವಾಯುವಿನಿಂದ ಅಭಿವೃದ್ಧಿಯನ್ನು ಹೊಂದಿದ (ಶೂಷಂ ಸಹಃ ಎಂದು ಸಹ ಶಬ್ದವು ಬಲ ನಾಮಗಳಲ್ಲಿ ಪಠಿತವಾಗಿದೆ. ವಾಯುದೇವರು ಸಮಸ್ತ ಬಲಕ್ಕೂ ನಿಯಾಮಕರು. ಆದುದರಿಂದ ವಾಯುದೇವರು ಸಹಃ ಎನಿಸುತ್ತಾರೆ. ಹಾಗೆಯೇ ಅಗ್ನಿಯು ವ್ಯಜನಾದಿಗಳಿಂದುಂಟಾದ ವಾಯುವಿನಿಂದ ಅಭಿವೃದ್ಧಿಯನ್ನು ಹೊಂದುತ್ತಾನೆ.) ಅಗ್ನಿಂ=ಅಗ್ನಿಯನ್ನು (ವಿಷ್ಣು ಪಕ್ಷದಲ್ಲಿ) ಸಹೋವೃಧಂ=ವಾಯು ದೇವರಿಗೆ ವೃದ್ಧಿಯನ್ನು ಮಾಡುವ, (ಸಹಸಂ ವರ್ಧಯತೀತಿ ಸಹೋವೃಧ್. ಅಥವಾ ಸಹಃ ವರ್ಧಯತೀತಿ ಸಹೋವೃಧ್, ತಂ) ಅಗ್ನಿಂ=ಅಗ್ನಿ ಶಬ್ದ ವಾಚ್ಯನಾದ ನಿನ್ನನ್ನು, ಜನಾಸಃ=ಸಜ್ಜನರು, ದಧಿರೇ=ಧರಿಸುತ್ತಾರೆ. (ನಾವಾದರೂ) ತಸ್ಯ ತೇ=ಅಂತಹ ನಿನಗೆ, ಹವಿಷ್ಮಂತಂ=ಹವಿಸ್ಸು ಮೊದಲಾದುದನ್ನು ಕೊಡುವವರಾಗಿ, ವಿಧೇಮ=ಪರಿಚರಣಾದಿ ರೂಪವಾದ ಕರ್ಮವನ್ನು ಮಾಡುತ್ತೇವೆ. ಸಂತ್ಯ=(ಸಮ್ ಪೂರ್ವಕಾತ್, ತನು ವಿಸ್ತಾರೇ ಕರಣೇಚ) ಚೆನ್ನಾಗಿ ವ್ಯಾಪ್ತನಾದವನೇ, ಸಃ ಸುಮನಾಃ=ತ್ವಂ (ಹೀಗೆ ನಮ್ಮಿಂದ ಪೂಜಿಸಿಕೊಳ್ಳಲ್ಪಟ್ಟ ಪ್ರಶಸ್ತ ಮನಸ್ಸುಳ್ಳ,) ನೀನು, ಇಹ=ಈ ಲೋಕದಲ್ಲಿ, ಅದ್ಯ=ಈಗ, ವಾಜೇಷು=ಅನ್ನಗಳ ವಿಷಯಗಳಲ್ಲಿ, ನಃ=ನಮಗೆ, ಅವಿತಾ=(ಅವ ರಕ್ಷಣೇ) ರಕ್ಷಕನು, ಭವ ಆಗು. ॥೨॥

ಭಾ॥ (1) ಸಹಸಾ ವಾಯುನೈಧಿತಂ। ಧಾರಯಂತಿ ಜನಾಸ್ತಸ್ಯ ಕರ್ಮ ಕುರ್ಮೋ ವಯಂ ಚ
ತೇ॥ ಸಂತ್ಯಃ ಸಮ್ಯಕ್ತ್ವತತೋ ವಿಷ್ಣುರ್ವಾಯೋರಪಿ ವಿವೃದ್ಧಿಕೃತ್ ॥೨॥

ಅ॥(1)(ಪೂರ್ವಾರ್ಧವನ್ನು ವ್ಯಾಖ್ಯಾನ ಮಾಡುತ್ತಾರೆ) ಸಹಸಾ=ವಾಯುದೇವರಿಂದ ಅಭಿವೃದ್ಧಿಯನ್ನು ಹೊಂದಿದ ನಿನ್ನನ್ನು ಜನರು ಧರಿಸುತ್ತಾರೆ. ಅಂತಹ ನಿನ್ನ ಸೇವಾದಿ ರೂಪವಾದ ಕರ್ಮವನ್ನು ನಾವು ಮಾಡುತ್ತೇವೆ. (2) ಉತ್ತರಾರ್ಧದಲ್ಲಿರತಕ್ಕ ಸಂತ್ಯ ಎಂಬ ಪದವನ್ನು ವ್ಯಾಖ್ಯಾನ ಮಾಡುತ್ತಾರೆ) ಚೆನ್ನಾಗಿ ಸರ್ವತ್ರ ವ್ಯಾಪ್ತನಾಗಿದ್ದುದರಿಂದ ಶ್ರೀ ವಿಷ್ಣುವು ಸಂತ್ಯಃ ಎನಿಸುತ್ತಾನೆ. ಆ ವಿಷ್ಣುವು ಮುಖ್ಯಪ್ರಾಣನಿಗೂ ವಿಶೇಷತಃ ಅಭಿವೃದ್ಧಿಯನ್ನು ಮಾಡುವವನು. (ಧಾರ್ಯನಾದ ಅಗ್ನಿಯೂ ಅಗ್ನಿಯಲ್ಲಿರತಕ್ಕ ಶ್ರೀ ವಿಷ್ಣುವೂ ವ್ಯಾಪ್ತನಾಗಿದ್ದಾನೆಂಬುವುದು ಪ್ರಸಿದ್ಧವೇ.) ॥೨॥

ಋ॥ (೪೨೪) ಪ್ರ ತ್ವಾ ದೂತಂ ವೃಣೀಮಹೇ ಹೋತಾರಂ ವಿಶ್ವವೇದಸಂ।

ಮಹಸ್ತೇ ಸತೋ ವಿಚರಂತ್ಯರ್ಚಯೋ ದಿವಿ ಸ್ಪೃಶಂತಿ ಭಾನವಃ ॥ ೩ ॥

ಅ ॥ (ಎಲೋ ಅಗ್ನಿಯೇ ನಾವು) ದೂತಂ=ದೇವತೆಗಳು ಪ್ರಾರ್ಥಿಸಿದುದನ್ನು ಮಾಡುವುದರಿಂದ ಅವು ಖ್ಯಾತಃ ದೂತನೆನಿಸಿದ, ಹೋತಾರಂ=ಇಂದ್ರಿಯಾಖ್ಯ ಅಗ್ನಿಗಳಲ್ಲಿ ವಿಷಯರೂಪಗಳಾದ ಹವಿಸ್ಸುಗಳನ್ನು ಹೋಮಿಸುವ (ಹುದಾನಾದನಯೋಃ,) (ಅಂದರೆ ವಿಷಯಗಳಿಗೆ ಭೋಗವನ್ನು ಕೊಡುವ ವಿಶ್ವವೇದಸಂ=(ವಿಶ್ವಂ ವೇತ್ತೀತಿ ವಿಶ್ವವೇದಾಃ) ಸರ್ವಜ್ಞನಾದ, ತ್ವಾ=ನಿನ್ನನ್ನು, ಪ್ರವೃಣೀಮಹೇ=ಅಂಗೀಕರಿಸುತ್ತೇವೆ. (ಯಸ್ಯ=ಯಾವ) ಮಹಃ=ಶ್ರೇಷ್ಠನಾದ ಸತಃ=ಸರ್ವಜ್ಞನಾದ, ತೇ ನಿನ್ನ, ಅರ್ಚಯಃ=(ಅರ್ಚ ಪೂಜಾಯಾಂ) ಜ್ವಾಲೆಗಳು, ವಿಚರಂತಿ=ವಿಶೇಷವಾಗಿ ಸರ್ವತ್ರ ಸಂಚರಿಸುತ್ತವೋ, ಭಾನವಃ=ರಶ್ಮಿಗಳು (ಪ್ರಕಾಶಗಳು) ದಿವಿ ಸ್ವರ್ಗಲೋಕವನ್ನು ಸ್ಪೃಶಂತಿ=ಮುಟ್ಟುತ್ತವೋ,(ಅಂತಹ ನಿನ್ನನ್ನು ಅಂಗೀಕರಿಸುತ್ತೇವೆ. ಸ್ತುತಿಸುತ್ತೇವೆ.॥ ೩ ॥

ಋ॥ (೪೨೫) ದೇವಾಸಸ್ತ್ವಾ ವರುಣೋ ಮಿತ್ರೋ ಅರ್ಯಮಾ ಸಂ ದೂತಂ

ಪ್ರತ್ನಮಿಂಧತೇ। ವಿಶ್ವಂ ಸೋ ಅಗ್ನೇ ಜಯತಿ ತ್ವಯಾ ಧನಂ

ಯಸ್ತೇ ದದಾಶ ಮರ್ತ್ಯಃ ॥ ೪ ॥

ಅ॥ ಅಗ್ನೇ=ಶ್ರೀಹರಿಯೇ, ವರುಣಃ=ವರುಣನೂ ಮಿತ್ರಃ=ಮಿತ್ರಾಖ್ಯಸೂರ್ಯನು, ಅರ್ಯಮಾ=ಅರ್ಯಮಾಖ್ಯಸೂರ್ಯನು, ಇವರೇ ಮೊದಲಾದ, ದೇವಾಸಃ=ದೇವತೆಗಳು, ದೂತಂ=ದೂತನೆನಿಸಿದ, ಪ್ರತ್ನಂ=ಚೆನ್ನಾಗಿ ವ್ಯಾಪ್ತನಾದ, ಅಥವಾ ಪುರಾತನನಾದ ತ್ವಾ=ನಿನ್ನನ್ನು ಸಮಿಂಧತೇ=ಪ್ರಕಾಶಗೊಳಿಸುತ್ತಾರೆ ಯಃ ಮರ್ತ್ಯಃ=ಯಾವ ಮನುಷ್ಯನು, ತೇ=ನಿನಗಾಗಿ, ದದಾಶ=(ದಾಶೃದಾನೇ (ಹವಿಸ್ಸು ಮೊದಲಾದುದನ್ನು) ಕೊಡುತ್ತಾನೋ, ಸಃ=ಅಂತಹನು, ತ್ವಯಾ=ಸಂತುಷ್ಟನಾದ ನಿನ್ನ ನಿಮಿತ್ತದಿಂದ (ಅಂದರೆ ನಿನ್ನ ಅನುಗ್ರಹದಿಂದ) ವಿಶ್ವಂ= ಸಂಪೂರ್ಣವಾದ, ಧನಂ= ಅಗ್ನಿಯ ಪ್ರಸಾದದಿಂದ ಬಾಹ್ಯಧನವನ್ನೂ ವಿಷ್ಣುವಿನ ಪ್ರಸಾದದಿಂದ ಜ್ಞಾನಾಖ್ಯ.ದ್ರವ್ಯವನ್ನೂ ಜಯತಿ= ಹೊಂದುತ್ತಾನೆ. ॥ ೪ ॥

ಭಾ॥ ಪ್ರತತೇಃ ಪುರಾತನತ್ವಾದ್ವಾ ಪ್ರತ್ನಃ ॥ ೪ ॥

ಅ॥ (ಪ್ರತ್ನ ಶಬ್ದಾರ್ಥವನ್ನು ಹೇಳುತ್ತಾರೆ.) (ಪ್ರಪೂರ್ವಕತನು ವಿಸ್ತಾರೇ ಧಾತುವಿನಿಂದ) ಚೆನ್ನಾಗಿ ವ್ಯಾಪ್ತಿಯಿದ್ದುದರಿಂದ ಅಥವಾ(ಪ್ರತ್ನಂಪ್ರದಿವಃ ಎಂದು ಪುರಾತನ ಎಂಬ ಅರ್ಥದಲ್ಲಿ ಪಾಠವಿದ್ದ ಪ್ರಯುಕ್ತ) ಇವನು ಪುರಾತನನು ಆದುದರಿಂದ ಪ್ರತ್ನಃ ಎನಿಸುತ್ತಾನೆ. ॥ ೪ ॥

ಋ॥ (೪೨೬) ಮಂದ್ರೋ ಹೋತಾ ಗೃಹಪತಿರಗ್ನೇ ದೂತೋ ವಿಶಾಮಸಿ।

ತ್ವೇ ವಿಶ್ವಾ ಸಂಗತಾನಿ ವ್ರತಾ ಧ್ರುವಾ ಯಾನಿ ದೇವಾ ಅಕೃಣ್ವತ

॥ ೫ ॥ ೮ ॥

ಅ॥ ಅಗ್ನೇ=ಎಲೋ ಅಗ್ನಿಯೇ, ಮಂದ್ರಃ=(ಮದೀಹರ್ಷೇ) (ಮಂದಂತೇ ಅನೇನ ದೇವಾಃ) (ಅಲಾಕ್ಷಣಿಕವಾದ ನುಗಾಗಮದಿಂದ, ಮತುಪ್‌ಪರ್ಯಾಯವಾದ ರಪ್ರತ್ಯಯದಿಂದ ಮಹತ್ತ್ವವು ಉಕ್ತವಾಗಿದೆ.) ಮಹಾಮಖವುಳ್ಳ ನೀನು ವಿಶಾಂ=ಪ್ರಜೆಗಳಿಗೆ ಹೋತಾ=ಹೋತನಿಗೆ ನಿಯಾಮಕನಾಗಿ ವಿಶೇಷತಃ ಹೋತೃವಿನಲ್ಲಿ ಸನ್ನಿಧಾನವಿದ್ದುದರಿಂದ ಹೋತೃ ಎಂದೆನಿಸಿಕೊಂಡವನು, ಗೃಹಪತಿಃ=ಗೃಹ ಸ್ವಾಮಿಯು ದೂತಃ=ದೂತನೆನಿಸಿಕೊಂಡವನೂ, ಅಸಿ=ಆಗಿರುತ್ತಿ, ಮತ್ತು ದೇವಾಃ=ದೇವತೆಗಳು, ಯಾನಿ=ಯಾವ, ಧ್ರುವಾ=ನಿರ್ದುಷ್ಟಗಳಾದ ವ್ರತಾ=ಕರ್ಮಗಳನ್ನು ಅಕೃಣ್ವತ=ಮಾಡಿದರೋ, (ತಾನಿ=ಅಂತಹ,) ವಿಶ್ವಾ=ಸಮಸ್ತಕರ್ಮಗಳೂ ತ್ವೇ=ನಿನ್ನಲ್ಲಿ, ಸಂಗತಾನಿ=ಸಂಬದ್ಧಗಳೇ ಆಗಿವೆ. (ನಿನ್ನ ವಿಷಯಕಗಳೇ ಆಗಿವೆ). ॥ ೫ ॥

ಭಾ॥ ಮಂದ್ರೋ ಮಹಾಮಖಃ ॥ ೫ ॥

ಅ॥ (ಮಂದ್ರ ಶಬ್ದಾರ್ಥವನ್ನು ಹೇಳುತ್ತಾರೆ.)

ಅ॥ ಮಹಾನ್‌ಮಖಃ ಯಸ್ಮಿನ್ ವಿಷಯೇ ಸಃ ಮಹಾಮಖಃ=ಯಾರ ಉದ್ದಿಶ್ಯ ಮಹತ್ತಾದ ಯಜ್ಞವು ಆಗುತ್ತದೋ ಆತನು ಮಹಾಮಖನೆನಿಸುತ್ತಾನೆ. ಆಧಿಕ್ಯೇ ಅಧಿಕಂ ಎಂಬ ಸೂತ್ರದಿಂದ ಮಂದ್ರ ಎಂಬಲ್ಲಿದ್ದ ನಕಾರದಿಂದ ಮಹತ್ವವು ಅಥವಾ ಭೂಮನಿಂದಾ ಪ್ರಶಂಸಾಯಾಂ ಇತ್ಯಾದಿಗಳಿಂದ ಅತಿಶಾಯನರೂಪವಾದ ಮತ್ವರ್ಥದಲ್ಲಿ ಮಂದ್ರ ಎಂಬಲ್ಲಿ ರ ಪ್ರತ್ಯಯವು. ॥ ೫ ॥ ೮ ॥

ಋ॥ (೪೨೭) ತ್ವೇ ಇದಗ್ನೇ ಸುಭಗೇ ಯವಿಷ್ಠ್ಯ ವಿಶ್ವಮಾ ಹೂಯತೇ ಹವಿಃ।

ಸ ತ್ವಂ ನೋ ಅದ್ಯ ಸುಮನಾ ಉತಾಪರಂ ಯಕ್ಷಿ ದೇವಾನ್

ಸುವಿರ್ಯಾ ॥ ೬ ॥

ಅ॥ ಯವಿಷ್ಠ್ಯ=(ಯುವೀಯಸ್ತ್ವ ಸ್ಥಿತತ್ವೇನ ಯವಿಷ್ಠೋ ಹರಿರುಚ್ಯತೇ ಎಂಬ ಪ್ರಮಾಣದಿಂದ ಅಧಮರಾದ ಬ್ರಹ್ಮಾದಿಗಳಲ್ಲಿ ನಿಯಾಮಕನಾಗಿದ್ದುದರಿಂದ ಯವಿಷ್ಠ್ಯ ಎನಿಸಿಕೊಂಡ ಶ್ರೀವಿಷ್ಣುವೇ (ಪ್ರಸಿದ್ಧ ಅಗ್ನಿಪಕ್ಷದಲ್ಲಿ) (ಬ್ರಹ್ಮಾದ್ಯಪೇಕ್ಷಯಾ ನಿತ್ಯಂ ಯವಿಷ್ಠ್ಯತಮ ಏವ ಯತ। ಅಗ್ನಿರ್ಯವಿಷ್ಠ್ಯ ಇತ್ಯುಕ್ತಿಃ ಎಂಬ ಪ್ರಮಾಣದಿಂದ) ಬ್ರಹ್ಮಾದಿಗಳಿಗಿಂತ ಅತ್ಯಂತ ನಿಕೃಷ್ಟನಾದುದರಿಂದ ಯವಿಷ್ಠ್ಯ ಎನಿಸಿಕೊಂಡ, ಅಗ್ನೇ=ಎಲೋ ಅಗ್ನಿಯೇ, ವಿಶ್ವಂ ಹವಿಃ=ಸಮಸ್ತ ಹವಿಸ್ಸು, ಸುಭಗೇ=ಮಹೈಶ್ವರ್ಯವುಳ್ಳ, ತ್ವೇ ಇತ್=ನಿನ್ನಲ್ಲಿಯೇ, ಆ=ಚೆನ್ನಾಗಿ ಹೂಯತೇ=(ನಮ್ಮಿಂದ) ಹೋಮಿಸಲ್ಪಡುತ್ತದೆ. ಸಃ=ಹೀಗೆ ನಮ್ಮಿಂದ ಕೊಡಲ್ಪಟ್ಟ ಹವಿಸ್ಸುಳ್ಳ ಸುಮನಾಃ=ಪ್ರಶಸ್ತ ಮನಸ್ಸುಳ್ಳ ತ್ವಂ=ನೀನು, ಅದ್ಯ=ಈಗ, ನಃ=ನಮಗಾಗಿ ಸುವೀರ್ಯಾ=ಒಳ್ಳೇ ವೀರ್ಯವುಳ್ಳವನಾದುದರಿಂದ ದೇವಾನ್=ದೇವತೆಗಳನ್ನು ಯಕ್ಷಿ=(ಯಜದೇವಪೂಜಾಕರಣದ ನೆಪ) ಯಾಗ ಮಾಡುತ್ತಿ. ಅಪರಂಉತ=ಮುಂದಿನ ಕಾಲದಲ್ಲಿಯೂ ಯಜ=ಯಾಗ ಮಾಡು.

ವಿ॥ ಒಬ್ಬನೇ ಅನೇಕ ದೇವತೆಗಳಿಗೆ ಏಕ ಕಾಲದಲ್ಲಿ ಅನೇಕ ಯಜಮಾನರು ಕೊಟ್ಟ ಹವಿಸ್ಸನ್ನು ಹೊಂದಿಸಿಕೊಡುವುದು ಎಂಬುದು ಯಾವುದಿದೆಯೋ ಅದೇವೇಸುವೀರ್ಯಕಾರ್ಯವು ॥ ೯ ॥

ಭಾ॥ ದೇವಾನ್ ಸುವೀರ್ಯಾದ್ಯಜಸಿ ॥ ೬ ॥

ಅ॥ ಒಳ್ಳೇ ವೀರ್ಯವುಳ್ಳವನಾದುದರಿಂದ ದೇವತೆಗಳನ್ನು ಯಾಗವನಾತುತ್ತಿ. (ಒಬ್ಬ ಅಗ್ನಿಯೇ ಅನೇಕ ಯಜಮಾನರು ಕೊಡತಕ್ಕ ಹವಿಸ್ಸನ್ನು ಅನೇಕ ದೇವತೆಗಳಿಗೆ ಹೊಂದಿಸಿಕೊಡುವುದೇ ಸುವೀರ್ಯಕಾರ್ಯವು. ॥ ೬ ॥

ಋ॥ (೪೨೮) ತಂ ಘೇಮಿತ್ಥಾ ನಮಸ್ವಿನ ಉಪ ಸ್ವರಾಜಮಾಸತೇ। ಹೋತ್ರಾಭಿರಗ್ನಿಂ ಮನುಷಃ ಸಮಿಂಧತೇ ತಿತಿರ್ವಾಂಸೋ ಅತಿಸ್ರಿಧಃ ॥ ೭ ॥

ಅ ॥ (ಅಗ್ನಿಯೇ) (ಯೇ= ಯಾವ) ಮಾನುಷಃ = (ಮನಜ್ಞಾನೇ) ಜ್ಞಾನಿಗಳಾದ ಸಜ್ಜನರಾದ ಮನುಷ್ಯರು, ಸ್ವರಾಜಂ= ತಮಗೆ ರಾಜನಾದ, ತಂ= ಹಿಂದೆ ಹೇಳಿದ ಗುಣಗಳುಳ್ಳ, ಅಗ್ನಿಂ= ಅಗ್ನಿ ಎನಿಸಿಕೊಂಡ, (ತ್ವಾಂ ಈಂ= ನಿನ್ನನ್ನೇ,) ಇತ್ಥಾ=ನಿರ್ವಿಕಾರವಾಗಿ, ಸರ್ವಕಾಲದಲ್ಲಿಯೂ, ನಮಸ್ವಿನಃ= ನಮಸ್ಕಾರ ಮಾಡುವವರಾಗಿ, ಉಪ ಆಸತೇ= ಹೊಂದುತ್ತಾರೋ. (ಹೊಂದಿಯೂ) ಹೋತ್ರಾಭಿಃ= (ಹ್ವೇಞ ಶಂಕು ಸಂತಾಪೇ) ಅಜ್ಞಾನ ರೂಪಗಳಾದ ಖುಕ್ಕುಗಳಿಂದ, ಸಮಿಂಧತೇ = ಪ್ರಕಾಶಗೊಳಿಸುತ್ತಾರೋ, (ಅಂತಹವರಾದರೂ) ಸ್ರಿಧಃ= ಬಂಧಪ್ರದೇಶೆಯಿಂದ, ಅತಿ= ಅತಿಶಯವಾಗಿ, ತಿತಿರ್ವಾಂಸಃ= (ತೄ ಪ್ಲವನ ತರಣಯೋಃ) ಸಂಸಾರದಿಂದ ದಾಟಿದವರಾದರು. (ಬಿಡುಗಡೆ ಹೊಂದಿದವರು) ಘ= ನಿಶ್ಚಯವು (ರೀತ್ಯಂತರದಿಂದ ವ್ಯಾಖ್ಯಾನ ಮಾಡುತ್ತಾರೆ. ಯಾವ ಸಜ್ಜನರು ಸರ್ವಕಾಲದಲ್ಲಿಯೂ, ನಿನ್ನನ್ನೇ ನಮಸ್ಕರಿಸುತ್ತಾರೋ, ಅಂತಹವರು ಸ್ವರಾಜಂ= ತನ್ನ ರಾಜ್ಯವನ್ನು (ಉತ್ತಮ ಬ್ರಾಹ್ಮಣ್ಯವನ್ನು) ಹೊಂದುತ್ತಾರೆ. ಹೊಂದಿ ಸದ್ಯಜನಗಳಿಂದ, ಸಮಿಂಧತೇ= ಅತಿ ಪ್ರಕಾಶಮಾನರಾದ ವಿದ್ವಾಂಸರು ಆಗುತ್ತಾರೆ. ಆ ಮೇಲೆ ನಿನ್ನ ಅನುಗ್ರಹದಿಂದ, ಸ್ರಿಧಃ ಅತಿ ತಿತಿರ್ವಾಂಸಃ ಹಿ= ಈ ಜನ್ಮದಲ್ಲಿಯೇ ದುಃಖಗಳನ್ನು ದಾಟುತ್ತಾರೆ. (ಅಂದರೆ ಜೀವನ್ಮುಕ್ತರಾಗುತ್ತಾರೆ. ಘ= ನಿಶ್ಚಯವು. ॥ ೭ ॥

ಭಾ ॥ (1) ತಂ ಹಿ ತ್ವಾಮೇವ ಸರ್ವದಾ । ಉಪಾಸತೇ ನಮಸ್ಯಂತಃ ಸಂತಸ್ತೇ ಚಾಸ್ತು ಸಂಸೃತೇಃ । (2) ಸ್ರಿಧೋ ಹ್ಯತಿ ತಿತಿರ್ವಾಂಸಸ್ತೇ ದುಃಖಾ ಇಹೈವ ವಾ। ತ್ವತ್ಪ್ರಸಾದೇನ ವಿದ್ವಾಂಸಃ ಪ್ರಾಪ್ಯ ಬ್ರಾಹ್ಮಣ್ಯಮುತ್ತಮಂ ॥ ೭ ॥

ಅ ॥ (1) ಎಲೋ ಅಗ್ನಿಯೇ ಯಾವ ಸಜ್ಜನರು ಹಿಂದೆ ಹೇಳಿದ ಗುಣಗಳುಳ್ಳ ನಿನ್ನನ್ನೇ ಸರ್ವದಾ ನಮಸ್ಕರಿಸುವವರಾಗಿ ಹೊಂದುತ್ತಾರೋ, ಅಂತಹವರು ಸಂಸಾರದಿಂದ ಬಿಡುಗಡೆ ಹೊಂದುತ್ತಾರೆ. (2) ಯಾವ ಸಜ್ಜನರು ನಿನ್ನನ್ನೇ ನಮಸ್ಕರಿಸುತ್ತಿರುತ್ತಾರೋ, ಅಂತಹವರು ಉತ್ತಮ ಬ್ರಾಹ್ಮಣ್ಯವನ್ನು ಹೊಂದಿ ವಿದ್ವಾಂಸರು ಆಗುತ್ತಾರೆ, ಆ ಮೇಲೆ ನಿನ್ನ ಅನುಗ್ರಹದಿಂದ ಸ್ರಿಧಃ ಅತಿ ತಿತಿರ್ವಾಂಸಃ ಹಿ= ಅಂದರೆ ಈ ಜನ್ಮದಲ್ಲಿಯೇ ದುಃಖವನ್ನು ದಾಟಿದವರು ಆಗುತ್ತಾರೆ. ಅಂದರೆ ಜೀವನ್ಮುಕ್ತರಾಗುತ್ತಾರೆ. ನಿಶ್ಚಯ ॥ ೭ ॥

ಋ ॥ (೪೨೯) ಘ್ನಂತೋ ವೃತ್ರಮತರನ್ರೋದಸೀ ಅಪ ಉರು ಕ್ಷಯಾಯ ಚಕ್ರಿರೇ। ಭುವತ್ಕಣ್ವೇ ವೃಷಾ ದ್ಯುಮ್ನ್ಯಾಹುತಃ ಕ್ರಂದದಶ್ವೋ ಗವಿಷ್ಟಿಷು ॥ ೮ ॥

ಅ ॥ (ಎಲೋ ಅಗ್ನಿಯೇ ಯಾವ ಉತ್ತಮ ಪುರುಷರು,) ಅಪಃ= ಕರ್ಮಗಳನ್ನು, ಮನಸ್ಸು ಮೊದಲಾದುವುಗಳನ್ನೂ, (ಅಂದರೆ ಚಕ್ಷುರಾದಿ ಜ್ಞಾನೇಂದ್ರಿಯಗಳು, ವಾಗಾದಿ ಕರ್ಮೇಂದ್ರಿಯಗಳು, ಇವುಗಳನ್ನೂ ಇಟ್ಟುಕೊಳ್ಳಬೇಕು. ಕರೌ ಹರೇರ್ಮಂದಿರ ಮಾರ್ಜನಾದಿಷು ಶ್ರುತಿಂ ಚ ಕಾರಾಚ್ಯುತ ಸತ್ಕಥೋದಯೇ। ಇತ್ಯಾದಿ ಪ್ರಮಾಣ ಪ್ರಕಾರ ಸಮಸ್ತಇಂದ್ರಿಯಗಳನ್ನೂ ಯಜ್ಞಾದಿಕರ್ಮಗಳನ್ನೂ ಭಗವದ್ವಿಷಯಕಗಳನ್ನಾಗಿಯೇ ಮಾಡಿದರು.) ಉರುಕ್ಷಯಾಯ= ಸರ್ವಗುಣ ಪರಿಪೂರ್ಣನಾದ ನೀನೇ ಆಶ್ರಯನು ಎನ್ನುವುದಕ್ಕಾಗಿ (ಅಂದರೆ ನಿನ್ನ ವಿಷಯಕಗಳನ್ನಾಗಿಯೇ ಕ್ಷಿ ನಿವಾಸ ಗತ್ಯೋಃ) ಚಕ್ರಿರೇ=ಮಾಡಿರುವರೋ ಅಂತಹವರು ವೃತ್ರಂ= ಅಜ್ಞಾನಾಖ್ಯ ತಮಸ್ಸನ್ನು, ಅಥವಾ ತಮಸ್ಸನ್ನು, ಅಜ್ಞಾನವನ್ನು, ಘ್ನಂತಃ =ನಾಶ ಮಾಡುವವರಾಗಿ, ರೋದಸೀ= ದ್ಯಾವಾ ಪೃಥಿವಿಗಳನ್ನು, ಅಲ್ಲಿರತಕ್ಕ ಜನರನ್ನು ಅತರತ್ =ಅತಿಕ್ರಮಿಸುವರು (ಅವರಿಂದಲೂ ಉತ್ತಮರಾಗುವರು.) ಸಃ =ಹೀಗೆ ತನ್ನನ್ನು ಯಾರು ಆರಾಧಿಸುತ್ತಾರೋ, ಅವರನ್ನು ಸರ್ವರಿಗಿಂತಲೂ ಉತ್ತಮರನ್ನಾಗಿ ಮಾಡುವ, ವೃಷಾ= ಶ್ರೇಷ್ಠನಾದ, ದ್ಯುಮ್ನೀ= ದ್ಯುತದೀಪ್ತೌ) ಮಹಾ ಪ್ರಕಾಶವುಳ್ಳ ಶ್ರೀ ವಿಷ್ಣುವು, ಕ್ರಂದದಶ್ವಃ= (ಅ ಕ್ರಂದ ಶಬ್ದ ಸಾತತ್ಯೇ. ಶಬ್ದಾರ್ಥಕಃ) ಶಬ್ದ ಮಾಡತಕ್ಕ ಅಶ್ವಸ್ವರೂಪನೇ, (ಅಂದರೆ ಸರ್ವದಾ ವೇದಗಳನ್ನು ಉಚ್ಚಾರಣ ಮಾಡತಕ್ಕ ಹಯಗ್ರೀವ ರೂಪನಾಗಿಯೇ) ಗವಿಷ್ಟಿಷು =(ಗೌಃ ಸ್ವರ್ಗೇ ಚ ವೃಷೇ ರಶ್ಮೌ ಎಂಬ ವಿಶ್ವ ಕೋಶದಿಂದ ಜ್ಞಾನವೂ ಪ್ರಕಾಶ ರೂಪವೇ ಆಗಿದೆ. ಇಷು ಇಚ್ಛಾಯಾಂ. ಇಷ್ಟಿ ಶಬ್ದವು ಅನ್ವೇಷಣಾರ್ಥಕವು) ಕಣ್ವ ಋಷಿಯಾದ ನನ್ನಿಂದ ಜ್ಞಾನದ ಅಥವಾ ವೇದವಚನಗಳ (ಇಷ್ಟಿಷು) ಅನ್ವೇಷಣಗಳು (ಪ್ರಾರ್ಥನೆಗಳು) ಮಾಡಲ್ಪಡುತ್ತಿರಲು, ಕಣ್ವೇ= ಕಣ್ವ ಋಷಿಯಾದ ನನ್ನಲ್ಲಿ, ಆಹುತಃ =ಅಙ್ ಪೂರ್ವಕಾತ್ ಡು ಧಾ ಞ ಧಾರಣ ಪೋಷಣಯೋಃ- ಕ್ತ ಪ್ರತ್ಯಯವು. ದಧಾತೇರ್ಹಿಃ ಆ ಹಿತನು, (ಇದ್ದವನು) ಭುವತ್= ಆದನು. (ಅಂದರೆ ಕಣ್ವ ಋಷಿಯು ಜ್ಞಾನಕ್ಕಾಗಿ ಪ್ರಾರ್ಥಿಸಿದುದರಿಂದ ಹಯಗ್ರೀವ ದೇವರು ಕಣ್ವ ಋಷಿಯಲ್ಲಿ ಜ್ಞಾನಾದಿಗಳನ್ನು ಕೊಡುವುದಕ್ಕಾಗಿ ಇದ್ದಾರೆ.

ಭಾ ॥ (1) ತಮೋ ಘ್ನಂತೋಽತರಂಲ್ಲೋಕಾನಪಃ ಕರ್ಮಾಣಿ ಚೋತ್ತಮಾಃ। ಉರು ಬ್ರಹ್ಮ ಕ್ಷಿತಿತ್ವೇನ ಚಕ್ರುಸ್ತತ್ರೈವ ಸಂಸ್ಥಿತೇ॥ (2) ವೃಷಾ ಸ ಭಗವಾನ್ವಿಷ್ಣುಃ ಮುನೌ ಕಣ್ವೇಽಭವತ್ಸ್ಥಿತಃ। ಕ್ರಂದದಶ್ವಸ್ವರೂಪಶ್ಚ ಜ್ಞಾನಸ್ಯಾನ್ವೇಷಣೇ ಕೃತೇ। (3) ತತಃ ಕಣ್ವಾನ್ನಿಃಸರಂತಿ ಶುದ್ಧಾ ವೇದಾನುಗಾ ಗಿರಃ॥ (4) ದ್ಯುತಿಮತ್ವಾತ್ಸ ತು ದ್ಯುಮ್ನೀ ॥ ೮ ॥

ಅ ॥ (ಯಾವ ಉತ್ತಮ ಪುರುಷರು ಅಪಃ=ಕರ್ಮಗಳನ್ನು ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು, ಸರ್ವಗುಣಪರಿಪೂರ್ಣನಾದ ಬ್ರಹ್ಮನೇ, ಆಶ್ರಯನಾಗಿರುವುದರಿಂದ ಅಂದರೆ ಅಂತಹ ನಿನ್ನಲ್ಲಿಯೇ ಇರುವುದರಿಂದ (ಅಂದರೆ ನಿನ್ನಲ್ಲಿಯೇ ಇರುವವುಗಳನ್ನಾಗಿ) ಮಾಡಿದರೋ. ಅಂತಹವರು ಅಜ್ಞಾನಾಖ್ಯ ಅಂಧಕಾರವನ್ನು ನಾಶಗೊಳಿಸುವವರಾಗಿ ಸ್ವರ್ಗಭೂಮಿಗಳಲ್ಲಿರತಕ್ಕ ಜನರನ್ನು ಅತಿಕ್ರಮಿಸಿದರು. (ಅವರಿಂತಲೂ ಉತ್ತಮರಾದರು) (2) ಹೀಗೆ ತನ್ನನ್ನು ಆರಾಧನ ಮಾಡುವವರನ್ನು ಉತ್ತಮರನ್ನಾಗಿ ಮಾಡುವ ಸರ್ವ ಶ್ರೇಷ್ಠನಾದ ಷಡ್ಗುಣ ಪರಿಪೂರ್ಣನಾದ ಶ್ರೀ ವಿಷ್ಣುವು ಕಣ್ವ ಋಷಿಯಿಂದ ಜ್ಞಾನಕ್ಕಾಗಿ ಪ್ರಾರ್ಥನೆಯು ಮಾಡಲ್ಪಡುತ್ತಿರಲು ಸರ್ವದಾ ವೇದಗಳನ್ನುಚ್ಚಾರಣ ಮಾಡತಕ್ಕ ಹಯಗ್ರೀವ ರೂಪದಿಂದ ಜ್ಞಾನಾದಿಗಳ ಪ್ರಾಪ್ತಿಗಾಗಿ ಕಣ್ವ ಋಷಿಯಲ್ಲಿ ಸನ್ನಿಹಿತನಾಗಿದ್ದನು. (3) ಕಣ್ವಋಷಿಗೆ ಪ್ರಯೋಜನವು ಸಿದ್ಧವಾಯಿತು. ಎಂದು ಭಾಷ್ಯಕಾರರು ಹೇಳುತ್ತಾರೆ.) ಶ್ರೀ ಹಯಗ್ರೀವ ದೇವರ ಸನ್ನಿಧಾನವಿದ್ದ ಪ್ರಯುಕ್ತ ಕಣ್ವ ಋಷಿಯಿಂದ ಶುದ್ಧಗಳಾದ ಪೂರ್ವದಲ್ಲಿ ಅಭ್ಯಸ್ತಗಳಾದ ವೇದಗಳ ಅತ್ಯಂತ ಸಾದೃಶ್ಯವುಳ್ಳ ಮಾತುಗಳು ಹೊರಡುತ್ತವೆ. (4) (ದ್ಯುತದೀಪ್ತೌ.) ಪ್ರಕಾಶವಿದ್ದುದರಿಂದ ಆ ಶ್ರೀ ಹರಿಯು ದ್ಯುಮ್ನೀ ಎನಿಸುತ್ತಾನೆ.

ವಿ ॥ (1) ಕಣ್ವಋಷಿಯಿಂದ ಹೊರಟ ವಚನಗಳು ವೇದಗಳಾದುದರಿಂದ ವೇದಾನುಗಾಃ ಎಂದದ್ದು ಹೇಗೆ ಎಂದರೆ ತನಗೇನೆ ತೋರಿದ ವೇದವನ್ನು ಇಂತಹವನು ಮಾಡಿದ್ದೆಂದು ಕರ್ತೃ ಪ್ರಸಿದ್ಧಿಯು ಇಲ್ಲದಿರುವುದರಿಂದ ಪೂರ್ವದಲ್ಲಿ ಗುರುಗಳಿಂದ ಅಭ್ಯಸ್ತವಾದ ವೇದದಿಂದ ಅತ್ಯಂತ ಸಾದೃಶ್ಯವಿದೆ. ಆದಕಾರಣ ಪೂರ್ವದಲ್ಲಿ ಅಭ್ಯಸ್ತಗಳಾದ ಇತರ ವೇದಗಳ ಅತ್ಯಂತ ಸಾದೃಶ್ಯವುಳ್ಳವುಗಳು. ಜನ್ಮಾಂತರೇ ಶ್ರುತಾಸ್ತಾಸ್ತು ವಾಸುದೇವಪ್ರಸಾದತಃ। ಮುನೀನಾಂ ಪ್ರತಿಭಾಸ್ಯಂತಿ ಭಾಗೇನೈವ ನ ಸರ್ವಶಃ॥ ಎಂಬ ಪ್ರಮಾಣದಿಂದ ಹಿಂದೆ ಇದ್ದ ವೇದವನ್ನೇ ಅಧ್ಯಯನ ಮಾಡುತ್ತೇವೆ. ಎಂಬ ಅನುಭವದಿಂದಲೂ ಪೂರ್ವೋತ್ತರ ವೇದಗಳಿಗೆ ಐಕ್ಯವು ಸಿದ್ಧವಾದ ಪ್ರಯುಕ್ತ .ಹಿಂದೆ ಅಭ್ಯಾಸ ಮಾಡಿದ್ದ ವೇದದ ಸಾದೃಶ್ಯವನ್ನು ಹೇಳಿದುದು ಯುಕ್ತವು ಇಲ್ಲಿ ವೇದಲಕ್ಷಣವೂ ಇದೆ. ॥ ೮ ॥

ಋ ॥ (೪೩೦) ಸಂ ಸೀದಸ್ವ ಮಹಾಁ ಅಸಿ ಶೋಚಸ್ವ ದೇವವೀತಮಃ।

ವಿ ಧೂಮಮಗ್ನೇ ಅರುಷಂ ಮಿಯೇಧ್ಯ ಸೃಜ ಪ್ರಶಸ್ತ ದರ್ಶತಂ

॥ ೯ ॥

ಅ ॥ ಮಿಯೇಧ್ಯ=ಶಿಷ್ಯದಲ್ಲಿಯೂ ಹೋಮಿಸಲ್ಪಡತಕ್ಕ (ಯಾಗಾರ್ಹನಾದ) ಪ್ರಶಸ್ತ=(ಪ್ರಪೂರ್ವಾತ್ ಶಂಸಸ್ತುತೌ) ಚೆನ್ನಾಗಿ ಸ್ತುತಿಸಲ್ಪಡತಕ್ಕ, ಅಗ್ನೇ=ಎಲೈ ಅಗ್ನಿಯೇ, ಶ್ರೀಹರಿಯೇ, (ಯಾವ ನೀನು) ದೇವವೀತಮಃ=(ವೀಗತೌ, ಗತಿಃ=ಜ್ಞಾನವು. ಅತಿಶಯೇನ ವೀರ್ಯತಮಃ) ದೇವತೆಗಳಲ್ಲಿ ಅತಿಶಯವಾಗಿ ಜ್ಞಾನವುಳ್ಳವನು ಅಸಿ=ಆಗಿರುತ್ತಿಯೋ, ಮಹಾನ್=ಇತರ ಗುಣಗಳಿಂದಲೂ ಶ್ರೇಷ್ಠನಾಗಿರುತ್ತಿಯೋ,(ಅಂತಹ ನೀನು (ಈ ಯಜ್ಞದಲ್ಲಿ) ಸಮ್ ಸೀದಸ್ವ=ಸನ್ನಿಹಿತನಾಗು. ಶೋಚಸ್ವ=(ಶುಚ ಶೋಕೇ. ಅನೇಕಾರ್ಥಾ ಹಿ ಧಾತವಃ ಎಂಬ ಪ್ರಮಾಣದಿಂದ ದೀಪ್ತ್ಯರ್ಥವೂ ಇದೆ.) ವಿಶೇಷತಃ ಪ್ರಕಾಶಿಸಿಕೊಂಡಿರು. (ಅಗ್ನಿ ಪಕ್ಷದಲ್ಲಿ) ದರ್ಶತಂ=ದೃಷ್ಟಿಗೋಚರವಾದ. ಅರುಷಂ=ದೋಷವಿಲ್ಲದಿರುವ (ನಿರ್ದೋಷವಾದ) ಅಂದರೆ ಆಜ್ಯಾದ್ಯಾಹುತಿಗಳಿಂದುಂಟಾದ ಶುಭಗಂಧವುಳ್ಳ.) ಧೂಮಂ=ಧೂಮವನ್ನೇ, ವಿಸೃಜ=ಸೃಷ್ಟಿಸು (ವಿಷ್ಣು ಪಕ್ಷದಲ್ಲಿ) ಧೂಮಂ=(ಧೂನೋತಿ ಸಂಸಾರಂ ಇತಿ ಧೂಮಃ) (ಧೂಞ ಕಂಪನೇ) ಸಂಸಾರ ನಿವರ್ತಕವಾದ, ಅರುಷಂ=ದೋಷವಿಲ್ಲದಿರುವ, (ನಿರ್ದೋಷವಾದ) ದರ್ಶತಂ=ನಿನ್ನ ಅಪರೋಕ್ಷ ಜ್ಞಾನವನ್ನು ವಿ=ವಿಶೇಷವಾಗಿ, ಸೃಜ=ಉಂಟುಮಾಡು ॥ ೯ ॥

ಭಾ॥ (1) ದೇವೇಷು ಜ್ಞಾನವತ್ತಮಃ। ಸತ್ವಂ ಶೋಚಸ್ವ ದೀಪ್ಯಸ್ವ (2) ಧೂಮಃ ಸಂಸಾರ ಧೂತ್ಯೃತೇಃ॥ (3) ಅರುಷೋ ರೋಷಹೀನತ್ವ (4) ದ್ಧೂಮಶ್ಚೇಚ್ಛುಭಗಂಧವಾತ್ ॥ ೯ ॥

ಅ॥ (1) ದೇವತೆಗಳ ಮಧ್ಯದಲ್ಲಿ ಅತಿಶಯವಾಗಿ ಜ್ಞಾನವುಳ್ಳವನು ಆಗಿರುತ್ತಿ. ಅಂತಹ ನೀನು ಶೋಚಸ್ವ ವಿಶೇಷತಃ ಪ್ರಕಾಶಿಸಿ ಕೊಂಡಿರು. (2) (ವಿಷ್ಣು ಪಕ್ಷದಲ್ಲಿ) (ಸಂಸಾರನಿವರ್ತಕವಾದ ನಿರ್ದುಷ್ಟವಾದ ನಿನ್ನ ಸಾಕ್ಷಾತ್ಕಾರವನ್ನು ನಮಗೆ ವಿಶೇಷವಾಗಿ ಉಂಟುಮಾಡು.) (ದರ್ಶನ(ಸಾಕ್ಷಾತ್ಕಾರ)ಕ್ಕೆ ಧೂಮತ್ವಾದಿಗಳು ಹೇಗೆ

ದರೆ) ಸಂಸಾರಸ್ಯ ಧೂಕೃತಿಃ=ನಿರಾಕರಣವು ಯಾವ ಸಾಕ್ಷಾತ್ಕಾರದಿಂದ ಯಾವ ಕಾರಣದಿಂದ ಆಗುತ್ತದೋ, ಆ ಕಾರಣ ದರ್ಶತ ಶಬ್ದದಿಂದ ಹೇಳಲ್ಪಟ್ಟ ಈಶ್ವರ ಸಾಕ್ಷಾತ್ಕಾರವು ಧೂಮಃ ಎನಿಸುತ್ತದೆ(ಧುನೋತೀತಿ ಧೂಮಃ ಧೂಞ ಕಂಪನೇ) (3) ದೋಷ (ಕೋಪ) ವಿಲ್ಲದಿರುವುದರಿಂದ ಸಾಕ್ಷಾತ್ಕಾರವು ಅರುಷವೆನಿಸುತ್ತದೆ. (ಕೋಪವು ಚೇತನಧರ್ಮವಾದುದರಿಂದ ಸಾಕ್ಷಾತ್ಕಾರಕ್ಕೆ ಕೋಪವಿಲ್ಲವೆಂದದ್ದು ಅಯುಕ್ತವೆಂದರೆ) ಕೋಪರಾಹಿತ್ಯವೆಂದರೆ ಸಾಕ್ಷಾತ್ಕಾರವೂ ಕೋಪವೂ ಒಂದು ಕಡೆ ಇಲ್ಲವೆಂದರ್ಥವು. (4) (ಅಗ್ನಿಪಕ್ಷದಲ್ಲಿ ಆದರೂ) ದರ್ಶತವೆಂದರೆ ದೃಷ್ಟಿಗೆ ಗೋಚರವು. ಅರುಷವಾದ ಧೂಮವನ್ನು ವಿಶೇಷತಃ ಸೃಷ್ಟಿಸು ಎಂದು. (ಧೂಮಕ್ಕೆ ಅರುಷತ್ವವು ಹೇಗೆಂದರೆ) ಪ್ರಸಿದ್ಧ ಧೂಮವು ವಿಶೇಷ್ಯವೆಂದು ವಿವಕ್ಷಿತವಾದರೆ, ಆಜ್ಯ ಮೊದಲಾದ ದ್ರವ್ಯಗಳಿಂದುಂಟಾದ ಶುಭಗಂಧವಿದ್ದುದರಿಂದ ಧೂಮವು ಅರುಷವಾಗಿದೆ. ಅಂದರೆ ಶುಭಗಂಧವಿದ್ದುದರಿಂದ ನಿರ್ದೋಷವಾದುದು ಎಂದರ್ಥವು. ॥೯॥

ಋ॥ (೪೩೧) ಯಂ ತ್ವಾ ದೇವಾಸೋ ಮನವೇ ದಧುರಿಹ ಯಜಿಷ್ಠಂ ಹವ್ಯ

ವಾಹನ। ಯಂ ಕಣ್ವೋ ಮೇಧ್ಯಾತಿಥಿರ್ಧನಸ್ಪೃತಂ ಯಂ ವೃಷಾ ಯ

ಮುಪಸ್ತುತಃ ॥೧೦॥೯॥

ಅ॥ ಹವ್ಯವಾಹನ=(ಹವ್ಯಂ ವಹತೀತಿ)ಹವಿರ್ಭಾಗವನ್ನು ಸ್ವೀಕರಿಸುವ ಅಗ್ನಿಯೇ, ಯಂ=ಯಾವ, ಯಜಿಷ್ಠಂ=ಕನಿಷ್ಠನಾದ, ಅಥವಾ (ಯಜದೇವ ಪೂಜಾಸಂಗತಿ ಕರಣದಾನೇಷು) ಮುಖ್ಯ ಪೂಜ್ಯನಾದ. ತ್ವಾ=ನಿನ್ನನ್ನು, ಇಹ=ಈ ಲೋಕದಲ್ಲಿ, ದೇವಾಸಃ=ದೇವತೆಗಳು, ಮನವೇ=ಮನುವಿನ ಅಭೀಷ್ಟ ಪ್ರಯೋಜನ ಸಿದ್ಧಿಗಾಗಿ, ದಧುಃ=ಆಧಾನೇಷ್ಟಿಯಿಂದ ಸ್ಥಾಪಿಸಿದರು. ಯಂ ತ್ವಾ=ಯಾವ ನಿನ್ನನ್ನು ಧನಸ್ಪೃತಂ=ಧನಸಂಪರ್ಕವುಳ್ಳವನನ್ನಾಗಿ, ಧನಿಕನನ್ನಾಗಿ, ಕಣ್ವಃ=ಕಣ್ವನ ಪುತ್ರನಾದ ಮೇಧಾತಿಥಿಃ=ಮೇಧಾತಿಥಿಯೂ ಕೂಡ, ದಧೌ=ಆಧಾನೇಷ್ಟಿಯಿಂದ ಸ್ಥಾಪಿಸಿರುವನೋ, (ಯಾವ ನಿನ್ನನ್ನು ವೃಷಾ= (ವೃಷಾಧರ್ಮಮಹೇಂದ್ರಯೋಃ ಎಂಬ ವಿಶ್ವಕೋಶದಿಂದ) ಯಮಧರ್ಮರಾಜನು, ಅಥವಾ ದೇವೇಂದ್ರನು, ಆಧಾನೇಷ್ಟಿಯಿಂದ ಸ್ಥಾಪಿಸಿರುವನೋ ಯಂ= ಯಾವ ನಿನ್ನನ್ನು ಉಪಸ್ತುತಃ=ರಾಜನು, ದಧೌ= ಆಧಾನೇಷ್ಟಿಯಿಂದ ಸ್ಥಾಪಿಸಿರುವನೋ॥ ಅಂತಹ ನೀನು ಸನ್ನಿಹಿತನಾಗು, ಎಂದು ಪೂರ್ವ ಋಕ್ಕಿನಿಂದ ಸಂಬಂಧವು.) ॥೧೦॥೯॥

ಋ॥ (೪೩೨) ಯಮಗ್ನಿಂ ಮೇಧ್ಯಾತಿಥಿಃ ಕಣ್ವ ಈಧ ಋತಾದಧಿ। ತಸ್ಯ ಪ್ರೇ

ಷೋ ದೀದಿಯುಸ್ತಮಿಮಾ ಋಚಸ್ತಮಗ್ನಿಂ ವರ್ಧಯಾಮಸಿ॥೧೧॥

ಅ॥ ಯಮಗ್ನಿಂ= ಯಾವ ಅಗ್ನಿಯನ್ನು ಕಣ್ವಃ= (ಪಿತೃಪುತ್ರರಿಗೆ ಅಭೇದೋಪಚಾರದಿಂದ) ಕಣ್ವನಾದ ನನ್ನ ಮಗನಾದ ಮೇಧ್ಯಾತಿಥಿಃ= ಮೇಧಾತಿಥಿಯು, ಋತಾತ್=ಯಥಾಭೂತವಾದ ಅರ್ಥವನ್ನು ಪ್ರತಿಪಾದಿಸುವ ಪ್ರಮಾಣಭೂತವಾದ, ವೇದಾತ= ವೇದದಡೆಯಿಂದ, (ಅಂದರೆ ಸತ್ಯವಾದ ವೇದವಚನವನ್ನು ಹೇಳಿ, ಅಂದರೆ ವ್ಯಾಖ್ಯಾನಮಾಡಿ) ಅಧಿಈಧೇ= (ಞಿ ಇಂಧೀದಿಪ್ತೌ.) ಪ್ರಕಾಶಗೊಳಿಸಿದನೋ. ತಸ್ಯ= ಅಂತಹ ಅಗ್ನಿಗೋಸ್ಕರ ಇಷಃ= ಅನ್ನಗಳು ಪ್ರದೀದಿಯುಃ= (ದಾಞ್ ದಾನೇ) ನಮ್ಮಿಂದಲೂ ಕೊಡಲ್ಪಡಬೇಕು. ನಿಶ್ಚಯ.

ತಮಗ್ನಿಂ= ಅಂತಹ ಅಗ್ನಿಯನ್ನು ಕುರಿತೇ ಇತರಾಃಋಚಃ= ಈ ಎಲ್ಲಾ ಋಕ್ಕುಗಳು ಪ್ರವರ್ತಿಸಲರ್ಹಗಳು. (ಶಿಷ್ಯರನ್ನು ಕುರಿತು ಋಕ್ಕು ಪ್ರವೃತ್ತವಾದ ಪ್ರಯುಕ್ತ) ತಮಗ್ನಿಂ= ಆ ಅಗ್ನಿಯನ್ನು (ನಾವು) ವರ್ಧಯಾಮಸಿ= ಅಭಿವೃದ್ಧೀಕರಿಸುತ್ತೇವೆ. (ಆ ಅಗ್ನಿಯು ಪೂರ್ಣನಾಗಿದ್ದಾನೆಂದು ಪ್ರಕಾಶಗೊಳಿಸುತ್ತವೆ.) ॥ ೧೧ ॥

ಭಾ॥ (೧) ಯಂ ಸುತೋ ಮೇ ಸಮಿಂಧೇಽಗ್ನಿಂ ಮೇಧ್ಯಾತಿಥಿ ಋತಾದಧಿ। ಉಕ್ತ್ವಾ ಸತ್ಯಾಂ ವೇದವಾಚಂ ದೇಯಾನ್ಯನ್ನಾನಿ ತಸ್ಯ ಹಿ ॥ ॥೨॥ ತಂ ಪ್ರತೀಮಾ ಋಚಃ ಸರ್ವಾಃ ಪ್ರಕಾಶಾದ್ವರ್ಧಯಾಮ ತಂ.। ಇಂಧನಂ ತು ಹರೇರ್ನಾನ್ಯತ್ಕ್ವಚಿದಸ್ತಿ ಪ್ರಕಾಶನಾತ್ ॥ ೧೧ ॥

ಅ॥ (೧) ಯಾವ ಅಗ್ನಿಯನ್ನು ಕಣ್ವನಾದ ನನ್ನ ಮಗನಾದ, ಮೇಧ್ಯಾತಿಥಿ ಋಷಿಯು ಯಥಾಭೂತವಾದ ಅರ್ಥವನ್ನು ಪ್ರತಿಪಾದಿಸುವ ಪ್ರಮಾಣಭೂತವಾದ ವೇದವೃತ್ತಿಯಿಂದ (ಲ್ಯಪ್‌ಲೋಪನಿಮಿತ್ತವಾದ ಪಂಚಮೀ ವಿಭಕ್ತಿಯು) ಅಂದರೆ ಸತ್ಯವಾದ ವೇದ ವಚನವನ್ನು ಹೇಳಿ (ವ್ಯಾಖ್ಯಾನಮಾಡಿ) ಪ್ರಕಾಶಗೊಳಿಸುತ್ತಾನೋ, ಅಂತಹ ಅಗ್ನಿಗೋಸ್ಕರ ಅನ್ನಗಳು (ನಮ್ಮಿಂದ) ಕೊಡಲ್ಪಡಬೇಕು (ಅಂದರೆ ನಾವೂ ಅನ್ನಗಳನ್ನು ಕೊಡಬೇಕು) (೨) ಅಂತಹ ಅಗ್ನಿಯ ಉದ್ದಿಶ್ಯವೇ ಈ ಎಲ್ಲಾ ಋಕ್ಕುಗಳೂ (ಪ್ರವರ್ತಿಸಲರ್ಹಗಳು.) ಅಂತೂ ಶಿಷ್ಯರನ್ನು ಕುರಿತು ಋಕ್ಕುಗಳು ಪ್ರವೃತ್ತಗಳಾಗಿರುವುದರಿಂದ ಪ್ರಕಾಶದಿಂದ ಆ ಅಗ್ನಿಯನ್ನು ಅಭಿವೃದ್ಧೀಕರಿಸುತ್ತೇವೆ.(ಅಂದರೆ ಆ ಅಗ್ನಿ ಶಬ್ದವಾಚ್ಯನಾದ ಶ್ರೀಹರಿಯು ಸರ್ವಗುಣಪರಿಪೂರ್ಣನೆಂದು ಪ್ರಕಾಶಗೊಳಿಸುತ್ತೇವೆ. (ಇಂಧನ ಎನ್ನುವವರಿಂದ ಪ್ರಕಾಶವಿಲ್ಲದಿದ್ದುದಕ್ಕೆ ಪ್ರಕಾಶವನ್ನು ಹುಟ್ಟಿಸುವುದು ಎಂಬ ಅನ್ಯಥಾ ಪ್ರತೀತಿಯನ್ನು ಹೋಗಲಾಡಿಸುತ್ತಾರೆ.) ಶ್ರೀಹರಿಗೆ ಇಂಧನವೆಂದರೆ ಪ್ರಕಾಶನ ದೆಸೆಯಿಂದ (ಅಂದರೆ ಶಿಷ್ಯರನ್ನು ಚೆನ್ನಾಗಿ ಬೋಧಿಸುವುದಕ್ಕಿಂತ) ಇತರವಾದುದು ಎಲ್ಲಿಯೂ ಇಲ್ಲವೇ ಇಲ್ಲ. ॥ ೧೧ ॥

ಋಮ॥(೮೩೩) ರಾಯಸ್ಪೂರ್ಧಿ ಸ್ವಧಾವೋಽಸ್ತಿ ಹಿ ತೇಽಗ್ನೇ ದೇವೇಷ್ವಾಪ್ಯಂ।
ತ್ವಂ ವಾಜಸ್ಯ ಶ್ರುತ್ಯಸ್ಯ ರಾಜಸಿ ಸ ನೋ ಮೃಳ ಮಹಾँ ಅಸಿ ॥೧೨॥

ಅ॥ ಅಗ್ನೇ= ಎಲೋ ಅಗ್ನಿಯೇ, ತೇ = ಯಾವ ನಿನಗೆ, ದೇವೇಷು =ದೇವ ಗಂಧರ್ವಾದಿಗಳಲ್ಲಿ, ಆಪ್ಯಂ= ಪ್ರಾಪ್ಯವಾದುದು, ಅಸ್ತಿಹಿ= ಇದೆಯೋ, ತ್ವಂ= ಯಾವ ನೀನು, ಸ್ವಧಾವಃ= ಸುಖವನ್ನು ವೃದ್ಧಿ ಗೊಳಿಸುವವನೋ, (ಸುಖ ವಾಚಕವಾದ ಸ್ವಧಾ ಶಬ್ದವು ಉಪಪದವಾಗಿರುವಾಗ ಣಿಜಂತವಾದ ವೃಧು ಧಾತುವಿಗೆ ಡ ಪ್ರತ್ಯಯವು) ತ್ವಂ= ಅಂತಹ ನೀನು, (ನಮಗೆ) ರಾಯಃ= ದ್ರವ್ಯಗಳನ್ನು, ಪೂರ್ಧಿ= (ಪೃ ಪಾಲನ ಪೂರಣಯೋಃ) ಪೂರ್ಣಗಳನ್ನಾಗಿ ಮಾಡು. ಯಾವ ನೀನು ಶ್ರುತ್ಯಸ್ಯ=ಶ್ರುತಿಸಂಬಂಧಿಯಾದ ಶ್ರುತಿ ಶಬ್ದದಿಂದ ಭವ ಎಂಬ ಅರ್ಥದಲ್ಲಿ ಯತ್ಪ್ರತ್ಯಯವು . ವಾಜಸ್ಯ= ಅನ್ನಕ್ಕೆ, (ಅಂದರೆ ಯಜ್ಞಭಾಗಕ್ಕೆ, ರಾಜಸಿ= (ರಾಜೃ ದೀಪ್ತೌ) ರಾಜನಾಗಿರುತ್ತಿಯೋ, (ಯಜ್ಞಭಾಗದಿಂದ ಪೂಜ್ಯನಾಗಿರುವುದರಿಂದ ರಾಜಸಿ ಎಂದು ಹೇಳಲ್ಪಡುತ್ತಾನೆ) ಯಾವ ನೀನು, ಮಹಾನ್ ಅಸಿ= ಸರ್ವೋತ್ತಮನಾಗಿರುತ್ತಿಯೋ, ಅಂತಹ ನೀನು ನಃ= ನಮ್ಮನ್ನು ಮೃಳ= ಸುಖಗೊಳಿಸು ಅಥವಾ ರಕ್ಷಿಸು. ॥ ೧೨ ॥

ಭಾ॥ (೧) ವಿತ್ತಾನಿ ಪೂರಯಾಸ್ಮಾಕಂ ದೇವೇಷ್ವಪ್ಯಾಪ್ಯಮಸ್ತಿತೇ । ಯಜ್ಞಭಾಗಾದಿ ಪೂಜ್ಯತ್ವಾತ್ಸ್ವಧಾವಃ ಸುಖವರ್ಧಕಃ॥(೨)ಶ್ರುತ್ಯ ವಾಜೋ ಯಜ್ಞಭಾಗೋ ರಾಜಾ ಭವಸಿ ತಸ್ಯ ಹಿ ॥ ೧೨ ॥

ಅ|| (೧)ಎಲೋ ಅಗ್ನಿಯೇ ನೀನು ಹಿ=ಯಜ್ಞ ಭಾಗಾದಿಗಳಿಂದ ಪೂಜಿಸಲ್ಪಡುವುದರಿಂದ ಯಾವ ನಿನಗೆ ದೇವತೆಗಳು ಗಂಧರ್ವರು ಮೊದಲಾದವರಲ್ಲಿಯೂ ಪ್ರಾಪ್ಯವಾದುದು ಇದೆಯೋ ಯಾವ ನೀನು ಸ್ವಧಾವಃ= ದೇವಾದಿಗಳಿಗೆ ಸುಖವನ್ನು ವೃದ್ಧಿಗೊಳಿಸುವವನೋ, ಅಂತಹ ನೀನು ದ್ರವ್ಯಗಳನ್ನು ನಮಗೆ ಪೂರ್ಜೀಣಿಸು ಅಥವಾ ಸುಖವನ್ನು ವೃದ್ಧಿಗೊಳಿಸುವ ಶ್ರೀ ವಿಷ್ಣುವು ಸ್ವಧಾವಃ ಎಂಬ ಪದದಿಂದ ಕರೆಯಲ್ಪಡುತ್ತಾನೆ. (೨) ಶ್ರುತಿ ಸಂಬಂಧಿಯಾದ ಅನ್ನವೆಂದರೆ ಯಜ್ಞಭಾಗವು. ಅದಕ್ಕೆ ನೀನು ರಾಜನಾಗಿರುತ್ತಿ. (ಅಂದರೆ ಯಾವ ಕಾರಣ ದಿಂದ ಯಜ್ಞಭಾಗಕ್ಕೆ ರಾಜ ನಾಗಿರುತ್ತಿಯೊ ಆ ಕಾರಣ ಅಗ್ನಿಯಾದ ನೀನು ಶ್ರುತಿ ಸಂಬಂಧಿಯಾದ ಅನ್ನಕ್ಕೆ ರಾಜನಾಗಿರುತ್ತಿ ಎಂದು ಹೇಳಲ್ಪಡುವುದು) (ಅಂತಹ ನೀನು ನಮ್ಮನ್ನು ರಕ್ಷಿಸು. ಸುಖಗೊಳಿಸು)||೧೨||

ಋ|| (೪೩೪) ಊರ್ಧ್ವ ಊ ಷು ಣ ಊತಯೇ ತಿಷ್ಠಾ ದೇವೋ ನ ಸವಿತಾ|
ಊರ್ಧ್ವೋ ವಾಜಸ್ಯ ಸನಿತಾ ಯದಂಜಿಭಿರ್ವಾಘದ್ಭಿರ್ವಿಹ್ವಯಾಮಹೇ||
|| ೧೩ ||

ಅ || ಯಾವ ನೀನು, ನಃ= ನಮಗೋಸ್ಕರ, ವಾಜಸ್ಯ ಸನಿತಾ= (ಷಣು ದಾನೇ) ತಾನು ಅನ್ನವನ್ನು ಕೊಡುವವನೋ ಇತರರಿಂದ ಕೊಡಿಸುವವನೋ, ಊರ್ಧ್ವಃ= (ಊರ್ಧ್ವಃ ಸ್ಯಾದುತ್ಥಿತೇ ತುಂಗೇ ಎಂಬ ಕೋಶದಿಂದ) ಸಮಸ್ತ ಕಾರ್ಯಗಳಲ್ಲಿಯೂ ಸದಾ ಉದ್ಯೋಗವುಳ್ಳವನೋ, ಅಂತಹ ನೀನು ನಃ ಊತಯೇ= ನಮ್ಮ ರಕ್ಷಣೆಯನ್ನು ಮಾಡುವುದಕ್ಕಾಗಿ, ಸವಿತಾ ದೇವಃ ನ= ಜಗತ್ತನ್ನು ಸೃಷ್ಟಿಸುವ ಕ್ರೀಡಾದಿಗುಣ ವಿಶಿಷ್ಟನಾದ ಶ್ರೀವಿಷ್ಣುವಿನಂತೆ, ಊರ್ಧ್ವಃ ಸುತಿಷ್ಠ= ಚೆನ್ನಾಗಿ ಉದ್ಯೋಗವುಳ್ಳವನಾಗು.(ವಿಷ್ಣು ಪಕ್ಷದಲ್ಲಿ ತಾನೇ ದೃಷ್ಟಾಂತನು.) ಯತ್= ಯಾವ ಕಾರಣದಿಂದ, ವಾಘದ್ಭಿಃ= (ವಚಪರಿಭಾಷಣೇ) ಹೇಳುವ ಸ್ತುತಿಸುವ ಋತ್ವಿಜರಿಂದ, (ಯುಕ್ತರಾದ ನಾವು ನಿನ್ನನ್ನು) ಅಂಜಿಭಿಃ= (ಅಂಜೂಸಂಗೇ) ಸ್ನೇಹ ವಿಶೇಷಗಳಿಂದ (ಭಕ್ತಿಗಳಿಂದ,) ವಿಹ್ವಯಾಮಃ =(ಹ್ವೇಞ ಸ್ಪರ್ಧಾಯಾಂ ಶಬ್ದೇಚ) ಕರೆಯುತ್ತೇವೋ, ಸ್ತೋತ್ರ ಮಾಡುತ್ತೇವೋ, (ಅದ ಕಾರಣ ನಮ್ಮನ್ನು ರಕ್ಷಿಸುವುದಕ್ಕಾಗಿ ಚೆನ್ನಾಗಿ ಉದ್ಯೋಗವುಳ್ಳವನಾಗು. || ೧೩ ||

ಭಾ || (1) ಅಸ್ಮದ್ರಕ್ಷಾಕೃತೇ ನಿತ್ಯಂ ಸೂದ್ಯತೋ ಭವ ವಿಷ್ಣುವತ್ || ವಿಷ್ಣುಶ್ಚೇತ್ಸ್ವತ್ರ ದೃಷ್ಟಾಂತೋ ನೋನ್ನದಾತಾ ತಥೋದ್ಯಮೀ || (2) ಯತಸ್ತ್ವಾಮೃತ್ವಿಗ್ಭಿರ್ಯುಕ್ತಾಃ ಸ್ನೇಹೈಸ್ತ್ವಾಂ ವಿಹ್ವಯಾಮಹೇ || ೧೩ ||

ಅ || (೧) ನಮ್ಮ ರಕ್ಷಣೆಯನ್ನು ಮಾಡುವುದಕ್ಕಾಗಿ ನಮಗೆ ತಾನು ಅನ್ನವನ್ನು ಕೊಡುವವನಾಗಿಯೂ ಇತರರಿಂದ ಕೊಡಿಸುವವನಾಗಿಯೂ ಹಾಗೆಯೇ ಕಾರ್ಯದಲ್ಲಿ ಸದಾ ಉದ್ಯೋಗವುಳ್ಳವನಾಗಿಯೂ ಶ್ರೀ ವಿಷ್ಣುವಿನಂತೆ ನಿರಂತರದಲ್ಲಿಯೂ ಚೆನ್ನಾಗಿ ಉದ್ಯೋಗವುಳ್ಳವನಾಗು. (ಹಾಗಾದರೆ ಇಲ್ಲಿ ಶ್ರೀ ವಿಷ್ಣುವನ್ನೇ ಪ್ರಾರ್ಥಿಸುವುದಾದರೆ ಆಗ ಸವಿತಾನ (ಶ್ರೀ ವಿಷ್ಣುವಿನಂತೆ) ಎನ್ನುವುದನ್ನು ಹೇಗೆ ವ್ಯಾಖ್ಯಾನ ಮಾಡಬೇಕೆಂದರೆ) ಶ್ರೀ ವಿಷ್ಣುವನ್ನು ಪ್ರಾರ್ಥಿಸುವುದಾದರೆ ತನಗೆ ತಾನೇ ದೃಷ್ಟಾಂತನು- (೨) (ರಕ್ಷಣೆಗಾಗಿ ಚೆನ್ನಾಗಿ ಉದ್ಯುಕ್ತನಾಗಿದ್ದಾನೆಂಬುವುದು ಯಾವುದರಿಂದ ಸಿದ್ಧಿಸುತ್ತದೆ. ಎಂದರೆ.) ಯಾವ ಕಾರಣದಿಂದ ಸ್ತೋತ್ರ ಮಾಡುವ ಋತ್ವಿಜರಿಂದೊಡಗೂಡಿದ ನಾವು ಮಾಹಾತ್ಮ್ಯಜ್ಞಾನ ಪೂರ್ವಕ ಸುದೃಢ ಸ್ನೇಹದಿಂದಲೇ ನಿನ್ನನ್ನು ಸ್ತುತಿಸುತ್ತೇವೋ, (ಅದ ಕಾರಣ ನಮ್ಮ ರಕ್ಷಣೆಗಾಗಿ ಚೆನ್ನಾಗಿ ಉದ್ಯುಕ್ತನಾಗು.) || ೧೩ ||

ಋ ॥ (೪೩೫) ಊರ್ಧ್ವೋ ನಃ ಪಾಹ್ಯಂಹಸೋ ನಿ ಕೇತುನಾ ವಿಶ್ವಂ ಸಮತ್ರಿಣಂ ದಹ। ಕೃಧೀ ನ ಊರ್ಧ್ವಾಞ್ಚರಥಾಯ ಜೀವಸೇ ವಿದಾ ದೇವೇಷು ನೋ ದುವಃ ॥೧೪॥

ಅ ॥ ಊರ್ಧ್ವಃ =ಉದ್ಯೋಗವುಳ್ಳವನು, ಗುಣಗಳಿಂದ ಉಚ್ಚನು. ಅಂದರೆ ಸರ್ವೋತ್ಕೃಷ್ಟ ಗುಣಗಳುಳ್ಳವನಾದಾಗ್ಯೂ ನೀನು ನಃ =ನಮ್ಮನ್ನು, ಕೇತುನಾ =ಜ್ಞಾನವನ್ನು ಕೊಟ್ಟು; ಅಂಹಸಃ= ಪಾಪದ ಕೆಯಿಂದ, ನಿ =ಅತ್ಯಂತವಾಗಿ, ಪಾಹಿ= ರಕ್ಷಿಸು. [ಪಾಪವನ್ನು ಪರಿಹರಿಸು.] (ಅಂದರೆ—ಜ್ಞಾನೋಪದೇಶಕ್ಕಿಂತ ಮೊದಲೂ ರಕ್ಷಿಸುವನೇ ಸರಿ. ಜ್ಞಾನೋಪದೇಶ ಮಾಡಿದ ಮೇಲೆಯಾದರೂ ಮೊದಲಿನ ಪಾಪಗಳಿಗೆ ವಿನಾಶ, ಮೇಲಿನ ಪಾಪಗಳಿಗೆ ಅಶ್ಲೇಶ, (ಸಂಬಂಧಾಭಾವ) ಗಳನ್ನು ಮಾಡುವುದರಿಂದ ನಿತರಾಂ ಎಂದು ಹೇಳಿದ್ದು.) (ಪಾಪದಿಂದ ಸಂರಕ್ಷಿಸುವುದಕ್ಕಾಗಿ) ವಿಶ್ವಂ ಅತ್ರಿಣಂ = ಸ್ವರ್ಗ ಮುಕ್ತಿಮಾನುಷ ರೂಪವಾದ ಮೂರುಮಾರ್ಗಗಳು ಇಲ್ಲದಿರುವುದರಿಂದ ಅತ್ರಿ ಶಬ್ದವಾಚ್ಯರಾದ ಅಸುರರನ್ನು ಅಥವಾ (ಅದಭಕ್ಷಣೇ) ಅತ್ಯಂತ್ಯಧಿಕ= ಅಧಿಕವಾಗಿ ಭಕ್ಷಿಸುವುದರಿಂದ ಅತ್ರಿ ಶಬ್ದವಾಚ್ಯರಾದ) ರಾಕ್ಷಸರನ್ನು, ಸಮುದಹ= ಭಸ್ಮೀಭೂತರನ್ನಾಗಿ ಮಾಡು.(ಸುಟ್ಟುಬಿಡು.) ಮತ್ತು, ನಃ=ನಮ್ಮನ್ನು,ಚರಥಾಯ=ಸಂಚಾರಕ್ಕಾಗಿ, (ಚರಗತಿ ಭಕ್ಷಣಯೋಃ) ಭಕ್ಷಿಸುವುದಕ್ಕಾಗಿ ಭೋಗಕ್ಕಾಗಿಯೂ ಭಿನ್ನ ಸಂಬಂಧಿಯಾದ ಲೋಕವನ್ನು ಕುರಿತುಸಂಚರಿಸುವುದಕ್ಕಾಗಿಯೂ, ಜೀವಸೇ=ಜೀವನಕ್ಕಾಗಿಯೂ =ಊರ್ಧ್ವಾನ್=ಉತ್ತಮರನ್ನಾಗಿಯೂ ಕೃಧಿ=ನಿತ್ಯದಲ್ಲಿಯೂ ಮಾಡು.(ಅಂದರೆ ಭೋಗಾದಿ ವಿಷಯದಲ್ಲಿ ನಮ್ಮನ್ನು ಉತ್ತಮರನ್ನಾಗಿ ಮಾಡು.) ಮತ್ತು, ದೇವೇಷು=ದೇವತೆಗಳಿಗೋಸ್ಕರ, ದುವಃ=(ದುಹಪ್ರಪೂರಣೇ) ಅತಿಮಹತ್ತಾದ ಸಮಸ್ತ ಕಾಮ್ಯಗಳನ್ನು, ನಃ= ನಮ್ಮನ್ನು,ವಿದಾಃ=(ವಿದ್ಲ್ರಲಾಭೇ) ಸರ್ವದಾ ಹೊಂದಿಸಿಕೊಡು. ॥ ೧೪ ॥

ಭಾ (1) ಜ್ಞಾನೇನ ಪಾಹಿ ನಿತರಾಮುದ್ಯಮೀ ಚೋಚ್ಚಗುಣೋಽಪಿ ನಃ ॥(2) ಅಸುರಾ ಅತ್ರಯಃ ಪ್ರೋಕ್ತಾ ಮಾರ್ಗತ್ರಯವಿವರ್ಜಿತಾಃ । ಸ್ವರ್ಗಾಪವರ್ಗಮಾನುಷ್ಯಂ ತ್ಯಕ್ತ್ವಾ ಯಾಂತಿ ತಮೋ ಹಿ ತೇ ॥ (3) ಅದಂತೀತ್ಯಥ ರಕ್ಷಾಂಸಿ ವಾ ತ್ರಯೋಧಿಕ ಭಕ್ಷಣಾತ್ ॥ (4) ಭೋಗಾಯ ಜೀವನಾಯಾಪಿ ಸ್ವಲೋಕಚರಣಾಯ ಚ। ಉತ್ತಮಾನ್ ಕುರು ನೋ ನಿತ್ಯಂ (5) ದೋಹನಾನಿ ಚ ಲಂಭಯ । ದೇವೇಭ್ಯೋಽಖಿಲಕಾಮ್ಯಾನಿ ಸದಾ ಪೋಷಿತಮಾಹಾಂತಿ ಚ॥ ॥ ೧೪ ॥

ಅ ॥ (೧) ಕಾರ್ಯದಲ್ಲಿ ಸದಾ ಉದ್ಯೋಗವುಳ್ಳವನು ಮತ್ತು ಸರ್ವೋತ್ಕೃಷ್ಟಗುಣಗಳುಳ್ಳವನಾದಾಗ್ಯೂ ನೀನು ನಮ್ಮನ್ನು ಜ್ಞಾನೋಪದೇಶಮಾಡಿ ಅತ್ಯಂತವಾಗಿ ರಕ್ಷಿಸು. (೨) ಸ್ವರ್ಗ ಮೋಕ್ಷ ಮನುಷ್ಯರೂಪ ೩ ಮಾರ್ಗಗಳೂ ವಿರಹಿತಗಳಾಗಿರುವುದರಿಂದಲೇ ಅಸುರರು ಅತ್ರಿಗಳೆನಿಸುತ್ತಾರೆ. ಅಂತಹ ಅಸುರರು ಸ್ವರ್ಗ ಮೋಕ್ಷ ಮನುಷ್ಯಲೋಕವನ್ನು ಬಿಟ್ಟು (ಹೊಂದದೆ) ಅಂಧಂತಮಸ್ಸನ್ನೇ ಹೊಂದುತ್ತಾರೆ. ಶ್ರುತ್ಯಾದಿ ಪ್ರಸಿದ್ಧವು. (೩) (ಅರ್ಥಾಂತರವನ್ನು ಹೇಳುತ್ತಾರೆ.) ಅಥವಾ ಸರ್ವರಿಗಿಂತ ವಿಶೇಷತಃ ಭಕ್ಷಿಸುತ್ತಾರೆ. ಅಂದರೆ ಸರ್ವರಿಗಿಂತ ಅತ್ಯಧಿಕವಾಗಿ ಭಕ್ಷಿಸುವುದರಿಂದ ರಾಕ್ಷಸರು ಅತ್ರಿಗಳೆನಿಸುತ್ತಾರೆ (ತಥಾಚ ಅತ್ರಿರ್ಹನ್ಯೈ ನಾಮೈತದ್ಯದತ್ತಿರಿತಿ ಎಂದು ಶ್ರುತಿಯು) (೪) ಯಥೇಷ್ಟ ಭೋಗಕ್ಕಾಗಿಯೂ ಜೀವಿಸುವುದ

ಕ್ಕಾಗಿಯೂ, ನಿನ್ನ ಲೋಕವನ್ನು ಕುರಿತು ಸಂಚರಿಸುವುದಕ್ಕಾಗಿಯೂ (ಅಂದರೆ ಭೋಗಾದಿ ವಿಷಯದಲ್ಲಿ ನಮ್ಮನ್ನು ನಿತ್ಯದಲ್ಲಿಯೂ ಉತ್ತಮರನ್ನಾಗಿ ಮಾಡು (೫) ದೇವತೆಗಳಿಗೋಸ್ಕರ ದೋಹನಗಳನ್ನು ಅಂದರೆ ಅತ್ಯಂತ ಶ್ರೇಷ್ಠಗಳೇ ಆದ ಸಮಸ್ತಕಾಮ್ಯಗಳನ್ನು ಸರ್ವದಾ ನಮ್ಮನ್ನು ಹೊಂದಿಸಿಕೊಡು. ॥ ೧೪ ॥

ಋ॥ (೪೩೬) ಪಾಹಿ ನೋ ಅಗ್ನೇ ರಕ್ಷಸಃ ಪಾಹಿ ಧೂರ್ತೇರರಾವ್ಣಃ। ಪಾಹಿ ರೀಷತ ಉತ ವಾ ಜಿಘಾಂಸತೋ ಬೃಹದ್ಭಾನೋ ಯವಿಷ್ಠ್ಯ ॥ ೧೫ ॥ ೧೦ ॥

ಅ ॥ ಬೃಹದ್ಭಾನೋ= ಬಹಳ ರಶ್ಮಿಗಳುಳ್ಳ, ಯವಿಷ್ಠ್ಯ= ಚಿಕ್ಕವರಲ್ಲಿಯೂ ನಿಯಾಮಕನಾಗಿರುವ, ಅಗ್ನೇ= ಶ್ರೀಹರಿಯೇ, ನಃ= ನಮ್ಮನ್ನು ರಕ್ಷಸಃ= ರಾಕ್ಷಸರ ದೆಸೆಯಿಂದ, ಪಾಹಿ =ರಕ್ಷಿಸು. ಅರಾವ್ಣಃ= (ದೋಷಾಂತಛಿದ್ರಶಬ್ದಾನಾಂ ಪರ್ಯಾಯತ್ವಂ ಯಾಸ್ಕತಃ। ಎಂಬ ಅನುವ್ಯಾಖ್ಯಾನದಿಂದಲೂ, ಅರಂ ಶೀಘ್ರೇಚ ಚಕ್ರಾಂಗೇ ಶೀಘ್ರಗಾಮಿನಿ ಕಿಲ್ಬಿಷೇ ಎಂಬ ಕೋಶದಿಂದಲೂ) ಅರ=ದುಃಖಾದಿ ದೋಷಗಳನ್ನು ಅವಾತಿ=ಇತರರಿಗೆ ಹೊಂದಿಸಿಕೊಡುವುದರಿಂದ ಅರಾವಾ ಎನಿಸಿಕೊಂಡ ಪಾಪಿಷ್ಠ ಪುರುಷನ, (ಅರಶಬ್ದೋಪಪದಾತ್ ಆಙ್‌ಪೂರ್ವಕಾತ್ ವಾ ಗತಿ ಗಂಧನಯೋಃ ಇತ್ಯಸ್ಮಾತ್ ದನ್‌ಪ್ರತ್ಯಯಃ) ಧೂರ್ತೇಃ= (ಧುರ್ವೀ ಧುರ್ವೀ ಹಿಂಸಾಯಾಂ) ಹಿಂಸಾರೂಪವಾದ ವಚನ ದೆಸೆಯಿಂದ, ನಃ=ನಮ್ಮನ್ನು ಪಾಹಿ= ರಕ್ಷಿಸು. ಹಾಗೆಯೇ, ರಿಷತಃ =(ರುಷರಿಷಹಿಂಸಾಯಾಂ) ನಾಶಕನಾದ ದುಷ್ಟನ ದೆಸೆಯಿಂದ, ಪಾಹಿ=ರಕ್ಷಿಸು, ಉತವಾ= ಮತ್ತು, ಜಿಘಾಂಸತಃ =ನಮ್ಮನ್ನು ಕೊಲ್ಲುವುದಕ್ಕಾಗಿ ಪ್ರವೃತ್ತಿ ಮಾಡಿದ ಪುರುಷನ ದೆಸೆಯಿಂದ ನಃ =ನಮ್ಮನ್ನು, ಪಾಹಿ =ರಕ್ಷಿಸು. (ಅಂದರೆ ರಾಕ್ಷಸರು ದುಷ್ಟ ವಿಷಯದಲ್ಲಿ ಇಂದ್ರಿಯಾದಿಗಳಿಗೆ ಪ್ರೇರಕರು, ಇತರರು ಕೆಲವರು ದುಷ್ಟವಚನವನ್ನು ಹೇಳುವವರು, ಕೆಲವರು ಅತಿದುಷ್ಟರಾದುದರಿಂದ ಸಂಬಂಧಕ್ಕೇನೇ ಅಯೋಗ್ಯರು. ಕೆಲವರು ಶರೀರಹನನಾದಿಗಳಿಗಾಗಿ ಪ್ರವೃತ್ತರಾಗುವರು. ಆದಕಾರಣ ಅವರಿಂದ ಎಲ್ಲಾ ರಕ್ಷಿಸು ಎಂಬ ವಿವಕ್ಷೆಯಿಂದ ರಕ್ಷಸಃ ಪಾಹಿ ಇತ್ಯಾದಿಗಳನ್ನು ಪ್ರತ್ಯೇಕ ಹೇಳಿದ್ದು) ॥ ೧೫ ॥ ೧೦ ॥

ಭಾ ॥ ಅರಂ ಛಿದ್ರಂ ಪ್ರಾಪಯತೀತ್ಯರಾವಾ ಪಾಪಪೂರುಷಃ ॥ (೨) ಧೂರ್ತ್ಯತೇಸ್ತಸ್ಯ ನೋ ರಕ್ಷ ನಶ್ಯತೋಽಸ್ಮದ್ವಧಾಯ ಚ ॥ (೩) ಯವೀಯಸ್ಸು ಸ್ಥಿತತ್ವೇನ ಯವಿಷ್ಠ್ಯೋ ಹರಿರುಚ್ಯತೇ। ಬ್ರಹ್ಮಾದ್ಯಪೇಕ್ಷಯಾ ನಿತ್ಯಂ ಯವಿಷ್ಠತಮ ಏವ ಯತ್ । ಅಗ್ನಿರ್ಯವಿಷ್ಠ್ಯ ಇತ್ಯುಕ್ತೋ ಯದಾಧಿಕ್ಯಾರ್ಥತೋಽಧಿಕಂ ॥ ೧೫ ॥ ೧೦ ॥

ಅ॥ (೧) ಅರಂ=ಛಿದ್ರವನ್ನು (ದುಃಖಾದಿದೋಷವನ್ನು) ಇತರರಿಗೆ ಹೊಂದಿಸಿ ಕೊಡುವುದರಿಂದ ಅರಾವಾಃ= ಪಾಪಿಷ್ಠ ಪುರುಷನು. (೨) ಆ ಪಾಪ ಪುರುಷನ ಹಿಂಸಾರೂಪ ವಚನದಿಂದಲೂ ನಾಶಕನಾದ ದುಷ್ಟ ಪುರುಷನಿಂದಲೂ ನಮ್ಮನ್ನು ಕೊಲ್ಲುವುದಕ್ಕಾಗಿ ಪ್ರವರ್ತಿಸತಕ್ಕ ಪುರುಷನ ದೆಸೆಯಿಂದಲೂ ನಮ್ಮನ್ನು ರಕ್ಷಿಸು. (೩) (ಯವಿಷ್ಠ್ಯಶಬ್ದವನ್ನು ಶ್ರೀ ವಿಷ್ಣುವಿನಲ್ಲಿಯೂ ಅಗ್ನಿಯಲ್ಲಿಯೂ ಕ್ರಮದಿಂದ ವ್ಯಾಖ್ಯಾನ ಮಾಡುತ್ತಾರೆ.) ಚಿಕ್ಕವರಾದ ಬ್ರಹ್ಮಾದಿಗಳಲ್ಲಿ ನಿಯಾಮಕನಾಗಿದ್ದುದರಿಂದ ಶ್ರೀಹರಿಯು ಯವಿಷ್ಠ್ಯನೆನ್ನಿಸುತ್ತಾನೆ. ಅಗ್ನಿಯಾದರೂ ಯಾವ ಕಾರಣದಿಂದ ಬ್ರಹ್ಮಾದಿಗಳಿಂದ ನಿತ್ಯದಲ್ಲಿಯೂ ಚಿಕ್ಕವನೇ ಆಗಿರುತ್ತಾನೋ, ಆದಕಾರಣ ಯವಿ

ಷ್ಟನೆಂದು ಹೇಳಲ್ಪಡುತ್ತಾನೆ. (ಇದು ಹೇಗೆ ಸಿಗುತ್ತದೆ ಎಂದರೆ) (ಆಧಿಕ್ಯೇ ಅಧಿಕಂ ಎಂಬ ಸೂತ್ರದಿಂದ) ಯಾವಕಾರಣದಿಂದ ಆಧಿಕ್ಯವೆಂಬ ಅರ್ಥದಲ್ಲಿ ಅಧಿಕ ಶಬ್ದರೂಪವು ಆಗುತ್ತದೋ, ಆದಕಾರಣ ಯವಿಷ್ಠ ಶಬ್ದದಿಂದಮೇಲೆ ತಮಬ್ ಎಂಬ ಅರ್ಥವುಳ್ಳ ಯು ಶಬ್ದವು ಆಗುವುದು (ತಥಾಚ ಅತಿಶಯವೆಂಬ ಅರ್ಥದಲ್ಲಿ ತಮಬ್ ಪ್ರತ್ಯಯವನ್ನು ವಿಧಿಸುವುದರಿಂದ ಯವಿಷ್ಠ ಎಂಬಲ್ಲಿದ್ದ ಯು ಶಬ್ದವು ಆಧಿಕ್ಯವೆಂಬ ಅರ್ಥವುಳ್ಳದ್ದು ||೧೫||೧೦||

ಮಂ || (೪೩೭) ಘನೇವ ವಿಷ್ವಗ್ವಿ ಜಹ್ಯರಾವ್ಣಸ್ತಪುರ್ಜಂಭ ಯೋ ಅಸ್ಮ ಧ್ರುಕ್ | ಯೋ ಮರ್ತ್ಯಃ ಶಿಶೀತೇ ಅತ್ಯಕ್ತುಭಿರ್ಮಾನಃ ಸ ರಿಪುರೀಶತ || ೧೯ ||

ಅ || ಯತ್ =ಯಾವಕಾರಣದಿಂದ, ತಪುರ್ಜಂಭ =(ತಪಸಂತಾಪೇ. ಜಭೀ ಗಾತ್ರವಿನಾಮೇ ಇತ್ಯತಃ ಸಂಹಾರಾರ್ಥಕಃ) ತಾಪದಿಂದಲೇ ಸಂಹರಿಸುವ ಅಗ್ನಿಯೇ, ತ್ವಂ =ನೀನು, ಅರಾವ್ಣಃ =ಪಾಪಿಷ್ಠ ಪುರುಷರನ್ನು, ಘನಾ ಇವ= ವಾಯುವು ಮೇಘಗಳನ್ನೆಂಬಂತೆ, ವಿಷ್ವಕ್ ಸರ್ವಪ್ರದೇಶಗಳಲ್ಲಿಯೂ, ವಿಜಹಿ= ನಾಶಗೊಳಿಸು. (ಹನಹಿಂಸಾಗತ್ಯೋಃ) ಯಶ್ಚ=ಯಾವನು, ಅಸ್ಮಧ್ರುಕ್ =ನಮ್ಮನ್ನು ದ್ರೋಹಿಸುವನೋ ಅತನನ್ನು ಕೂಡ, ವಿಜಹಿ= ಸಂಹರಿಸು. ಯಃ =ಯಾವ ಮರ್ತ್ಯನು, ಅತಿ ಅಕ್ತುಭಿಃ =[ಅಂಜೂ ವ್ಯಕ್ತಿಮ್ರಕ್ಷಣ ಕಾಂತಿ ಗತಿಷು. ಮ್ರಕ್ಷಣಃ= ಸಂಗವು.) ಸ್ನೇಹಗಳ ಅತಿಕ್ರಮಿಸುವಿಕೆಗಳಿಂದ ಅಂದರೆ ಸ್ನೇಹಾಭಾವಗಳಿಂದ, [ಸ್ನೇಹ ಮಾತ್ರವನ್ನು ಬಿಟ್ಟು] ಅಥವಾ ಸ್ನೇಹವಿಲ್ಲದಿರುವ ಪುರುಷರಿಂದ ಕೂಡಿಕೊಂಡು [ತೀಕ್ಷ್ಣವಾದ ಕುಠಾರವಂತೆ] ಶಿಶೀತೇ= [ಶೋ ತನೂಕರಣೇ] ಸರ್ವದಾ ತೀಕ್ಷ್ಣನಾಗುತ್ತಾನೋ ಸಃ ರಿಪುಃ = ಅಂತಹ ಶತ್ರುವಾದ ದುರಾಚಾರಿಯಾದ ಪಾಪಪುರುಷನು, ನಃ =ನಮಗೆ, ಮಾ ಈಶತ= [ಈಶ ಐಶ್ವರ್ಯೇ ನಿಯಾಮಕನಾಗಬಾರದು] || ೧೬ ||

ಭಾ || (೧) ವಾಯುರ್ಮೇಘಾನಿವ ಜಹಿ ಸರ್ವತಃ ಪಾಪಪೂರುಷಾನ್ (೨) ಅಸ್ಮದ್ರೋಹೀ ಚ ಯಸ್ತಂ ಚ (೩) ತಾಪೇನೈವಾತ್ತಿ ಯತ್ತತಃ| ತಪುರ್ಜಂಭಃ (೪) ಶಿಶೀತೇ ಯಸ್ತೀಕ್ಷ್ಣೋ ಭವತಿ ಸರ್ವದಾ || ನೇಶೋ ಭವತು ಸೋಽಸ್ಮಾಕಂ ದುರಾತ್ಮಾ ಪಾಪಪೂರುಷಃ || ೧೬ ||

ಅ || [೧] ವಾಯುವು ಮೇಘಗಳನ್ನೆಂಬಂತೆ ಸರ್ವಪ್ರದೇಶಗಳಲ್ಲಿಯೂ "ಪಾಪಿಷ್ಠಪುರುಷರನ್ನು ಸಂಹರಿಸು. [೨] ಯಾವನು ನಮಗೆ ದ್ರೋಹಿಯೋ ಅತನನ್ನು ಕೂಡ ಸಂಹರಿಸು. [೩] ಯಾವಕಾರಣದಿಂದ ತಾಪದಿಂದಲೇ ಸಂಹರಿಸುತ್ತಾನೋ ಆದಕಾರಣ ತಪುರ್ಜಂಭಃ ಎನಿಸುತ್ತಾನೆ. [೪] ಯಾವಾತನು ಶಿಶೀತೇ= ಸರ್ವದಾ ತೀಕ್ಷ್ಣನಾಗುತ್ತಾನೋ, ಅಂತಹ ದುಷ್ಟ ಸ್ವಭಾವವುಳ್ಳ ಪಾಪಪುರುಷನು ನಮಗೆ ನಿಯಾಮಕನಾಗಬಾರದು || ೧೬ ||

ಮಂ || (೪೩೮) ಅಗ್ನಿರ್ವನ್ನೇ ಸುವೀರ್ಯಮಗ್ನಿಃ ಕಣ್ವಾಯ ಸೌಭಗಂ| ಅಗ್ನಿಃ ಪ್ರಾವನ್ಮಿತ್ರೋತ ಮೇಧ್ಯಾತಿಥಿಮಗ್ನಿಃ ಸಾತಾಉಪಸ್ತುತಂ || ೧೭ ||

ಅ ॥ ಅಗ್ನಿಃ=ಸರ್ವೇಶನಾದ ಶ್ರೀಹರಿಯು, ಕಣ್ವಾಯ ಕಣ್ವನಾದ ನನ್ನನ್ನು, ಸುವೀರ್ಯಂ= ಒಳ್ಳೇಯ ವೀರ್ಯವುಳ್ಳವನನ್ನಾಗಿ, ವವ್ನೇ= (ವನಷಣ ಸಂಭಕ್ತೌ) ಹೊಂದಿಸಿಕೊಟ್ಟನು. ಮತ್ತು ಅಗ್ನಿಃ= ಅಗ್ನಿಯು; ಕಣ್ವಾಯ= ಕಣ್ವನಾದ ನನ್ನನ್ನು, ಸೌಭಗಂ= ಒಳ್ಳೇ ಐಶ್ವರ್ಯವುಳ್ಳವನನ್ನಾಗಿಯೂ ವವ್ನೇ = ಹೊಂದಿಸಿಕೊಟ್ಟನು. ಅಗ್ನಿರೇವ= ಅಗ್ನಿಯೇ, ಮೇಧ್ಯಾತಿಥಿಂ= ನನ್ನ ಮಗನಾದ ಮೇಧ್ಯಾತಿಥಿಯನ್ನು, ಉತಮಿತ್ರಾ= ನನ್ನ ಮಿತ್ರರನ್ನೂ. ಪ್ರ ಆವತ್= ಚೆನ್ನಾಗಿ ರಕ್ಷಿಸಿದನು. (ಅವರ ರಕ್ಷಣೇ) (ಹೀಗೆ ಕೇವಲ ನನಗೆನೇ ಉಪಕಾರಕನಲ್ಲ, ಮತ್ತೆ,) ಅಗ್ನಿಃ= ಅಗ್ನಿಯೇ, ಉಪಸ್ತುತಂ= ಉಪಸ್ತುತ ಮುನಿಯನ್ನು, ಸಾತೌ= ಷಣುಲಾಭೇ) ಲಾಭವಿಷಯದಲ್ಲಿ, ಪ್ರ ಆವತ್ ಚೆನ್ನಾಗಿ ರಕ್ಷಿಸಿದನು. ॥ ೧೭ ॥

ಭಾ ॥ (೧) ಸುವೀರ್ಯಂ ಸೌಭಗಂ ಚೈವ ಮಮೇಶಃ ಸಮಭಾಜಯತ್ ॥ (೨)॥
ಮೇಧ್ಯಾತಿಥಿಂ ಸುತಂ ಚೈವ ಮಿತ್ರಾಣಿ ಚ ರರಕ್ಷ ಮೇ ॥ (೩) ಉಪಸ್ತುತಂ ಚೈವ
ಮುನಿಂ ಸಾತೌ ಲಾಭೇ ರರಕ್ಷ ಹ ॥ ೧೭

ಅ ॥ ಶ್ರೀಹರಿಯು ನನ್ನನ್ನು ಒಳ್ಳೇ ವೀರ್ಯವುಳ್ಳವನನ್ನಾಗಿಯೂ ಒಳ್ಳೇ ಐಶ್ವರ್ಯವುಳ್ಳವನನ್ನಾಗಿಯೂ ಹೊಂದಿಸಿಕೊಟ್ಟನು. (೨) ನನ್ನ ಮಗನಾದ ಮೇಧ್ಯಾತಿಥಿಯನ್ನೂ ಮಿತ್ರರನ್ನೂ ರಕ್ಷಿಸಿದನು. (೩) ಉಪಸ್ತುತನೆಂಬ ಮುನಿಯನ್ನೂ ಸಾತೌ= ಲಾಭ ವಿಷಯದಲ್ಲಿ ರಕ್ಷಿಸಿದನು. ಪ್ರಸಿದ್ಧ. ॥೧೭॥

ಮು॥ (೪೩೯) ಅಗ್ನಿನಾ ತುರ್ವಶಂ ಯದುಂ ಪರಾವತ ಉಗ್ರಾದೇವಂ
ಹವಾಮಹೇ । ಅಗ್ನಿರ್ನಯನ್ನವವಾಸ್ತ್ವಂ ಬೃಹದ್ರಥಂ ತುರ್ವೀತಿಂ
ದಸ್ಯವೇ ಸಹಃ ॥ ೧೮ ॥

ಅ॥ (ನಾವು) ತುರ್ವಶಂ ಯದುಂ ಉಗ್ರದೇವಂ= ಎಂಬೀ ತುರ್ವಶಾದಿರಾಜರನ್ನು, ಅಗ್ನಿನಾ=ಅಗ್ನಿಯಿಂದ ಕೂಡಿಕೊಂಡು, ಪರಾವತಃ= ದೂರದಲ್ಲಿಯೇ ಹವಾಮಹೇ=ಕರೆಯುತ್ತೇವೆ. ಅಗ್ನಿಃ= ಅಗ್ನಿಯು, ನವವಾಸ್ತ್ವಂ ಬೃಹದ್ರಥಂ ತುರ್ವೀತಿಂ= ಎಂಬೀ ನವವಾಸ್ತ್ವಾದಿರಾಜರನ್ನೂ, ದಸ್ಯವೇ= ದಸ್ಯು ಸಂಬಂಧಿಯಾದ ನಿಗ್ರಹಕ್ಕಾಗಿ, (ದಸ್ಯುಗಳನ್ನು ವಿಶೇಷತಃ ನಿಗ್ರಹಿಸುವ ವಿಷಯದಲ್ಲಿ) ಸಹಃ= ಬಲವನ್ನು, ನಯತ್= ಹೊಂದಿಸಿಕೊಟ್ಟನು. (ಅಂದರೆ ದಸ್ಯುಗಳನ್ನು ಸಂಹರಿಸಲಿಕ್ಕೆ ಉಪಯುಕ್ತವಾದ ಬಲವುಳ್ಳವರನ್ನಾಗಿ ಮಾಡಿದನು.) ವಿಷ್ಣು ಪಕ್ಷದಲ್ಲಿ ಆದರೂ) ತುರ್ವಶಂ= (ತುರತ್ವರಣೇ) ತುರ ಶಬ್ದವು ಮಹಾವೇಗದಿಂದ ಕೂಡಿರುವುದರಿಂದ ವಾಯುವಾಚಕವು) ತುರಃ=ವಾಯುವು, ವಶೋ ಯಸ್ಯ ಎಂಬ ವ್ಯುತ್ಪತ್ತಿಯಿಂದ, ವಾಯುವು ಯಾವ ವಿಷ್ಣುವಿನ ಅಧೀನದಲ್ಲಿರುವನೋ ಅಂತಹ ವಿಷ್ಣುವನ್ನು ಯದುಂ= (ಯತ್ ಅಸ್ತಿ ತತಃ ಉತ್= ಉಚ್ಚಃ) ಯಾವುದು ಯಾವುದು ಇದೆಯೋ ಆ ಎಲ್ಲಾದಕ್ಕಿಂತಲೂ ಉಚ್ಚ (ಉತ್ತಮ)ನಾದ ಪ್ರಯುಕ್ತ ಯದು ನಾಮಕ ಶ್ರೀ ವಿಷ್ಣುವನ್ನು, ಉಗ್ರದೇವಂ= ಅಸುರರನ್ನು ಕುರಿತು ಉಗ್ರನು (ಕ್ರೂರನು) ಕ್ರೀಡಾದಿಗುಣ ವಿಶಿಷ್ಟನೂ ಆದ ಉಗ್ರದೇವ ನಾಮಕ ಶ್ರೀ ವಿಷ್ಣುವನ್ನು ಅಗ್ನಿನಾ= ಶ್ರೀ ವಿಷ್ಣುವಿನ ಪ್ರಸಾದದಿಂದಲೇ, ಹವಾಮಹೇ= ಕರೆಯುತ್ತೇವೆ. ॥ ೧೮ ॥

ಭಾ॥ (೧) ತುರ್ವಶಾದೀಂಸ್ತಥಾ ರಾಜ್ಞೋ ವಯಂ ತೇನ ಹವಾಮಹೇ ॥(೨) ತುರೋಽಪಿ
ಯದ್ವಶೋ ವಿಷ್ಣುಃ ಸ ಚ ತುರ್ವಶನಾಮವಾನ್ ॥ ಯದಸ್ತಿ ತತ ಉಚ್ಚತ್ವಾದ್ಯದು

ರುಗ್ರೋಽಸುರಾನ್ಪ್ರತಿ॥ (3) ತವೋವ ತತ್ಪ್ರಸಾದೇನ ಹ್ವಯಾಮೋಽ (4) ನಯ
ದೇವ ಸಃ। ನವವಾಸ್ತ್ವಾದಿಕಾನ್ ರಾಜ್ಞೋ ಬಲಂ ದಸ್ಯುವಿನಿಗ್ರಹೇ ॥ ೧೮ ॥

ಅ॥ (೧) (ಅಗ್ನಿ ವಿಷಯದಲ್ಲಿ ಪೂರ್ವಾರ್ಧ ತಾತ್ಪರ್ಯವನ್ನು ಹೇಳುತ್ತಾರೆ.) ಪೂರ್ವ ಋಕ್ಕಿನಲ್ಲಿ ಹೇಳಲ್ಪಟ್ಟ ಮೇಧಾತಿಥ್ಯಾದಿಗಳ ರಕ್ಷಣೆಯು ಮಾತ್ರವಲ್ಲ. ಮತ್ತೆ ನಾವು ತುರ್ವಶ, ಯದು ಉಗ್ರದೇವ ಎಂಬೀ ತುರ್ವಶ ಮೊದಲಾದ ರಾಜರನ್ನು ಯಾವ ಅಗ್ನಿಯು ಪೂಜೆಗೋಸ್ಕರ (ಪರಾವತಃ=)ದೂರದಲ್ಲಿಯೇ ಕರೆಯುತ್ತೇವೋ ಅದೂ ಕೂಡ ಆ ಅಗ್ನಿಯ ಸಾಮರ್ಥ್ಯದಿಂದಲೇ (೨) (ಶ್ರೀ ವಿಷ್ಣುವಿನಲ್ಲಿ ವ್ಯಾಖ್ಯಾನ ಮಾಡುವುದಕ್ಕಾಗಿ ತುರ್ವಶ ಮೊದಲಾದ ಶಬ್ದಗಳಿಗೆ ಅರ್ಥ ಹೇಳುತ್ತಾರೆ) (ತುರತ್ವರಣೇ ಎಂಬುದರಿಂದುಂಟಾದ ತುರ ಶಬ್ದವು ಮಹಾ ವೇಗವುಳ್ಳ ವಾಯುವಾಚಕವು. ಅಪಿ ಶಬ್ದವು ಸರ್ವಜೀವೋತ್ತಮರಾದ ವಾಯು ದೇವರು ಕೂಡ ಯಾವಾಗ ಶ್ರೀ ವಿಷ್ಣುವಿನ ಅಧೀನದಲ್ಲಿರುವವರೋ ಆಗ ಇತರ ವಾದುದೆಲ್ಲವೂ ಶ್ರೀ ವಿಷ್ಣುವಿನ ಅಧೀನದಲ್ಲಿಯೇ ಇರುವುದೆಂದು ಸುತರಾಂ ಸಿದ್ಧ ಎಂಬ ಕೈಮುತ್ಯವನ್ನು ತೋರಿಸುತ್ತದೆ. ತುರಃ= ವಶಃ ಯಸ್ಯಾಸೌ ತುರ್ವಶಃ= ಯಾವ ಶ್ರೀ ವಿಷ್ಣುವಿನ ಅಧೀನದಲ್ಲಿ ವಾಯುವು ಇದ್ದಾನೋ ಆ ವಿಷ್ಣುವು ತುರ್ವಶನು, ತಥಾಚ) ವಾಯು ದೇವರೂ ಕೂಡ ಯಾವ ಶ್ರೀ ವಿಷ್ಣುವಿನ ಅಧೀನದಲ್ಲಿಯೇ ಇರುವವರೋ, ಅಂತಹ ಶ್ರೀವಿಷ್ಣುವೂ ಕೂಡ (ರಾಜನು ಮಾತ್ರವಲ್ಲ) ತುರ್ವಶನೆಂದು ಹೆಸರುಳ್ಳವನು. ಯಾವ ಯಾವ ವಸ್ತುವು ಇದೆಯೋ ಆ ಎಲ್ಲಾ ವಸ್ತುಗಳಿಗಿಂತಲೂ ಉತ್ಕೃಷ್ಟನಾಗಿರುವುದರಿಂದ ಶ್ರೀ ವಿಷ್ಣುವೆ ಯದುಃ ಎನಿಸುತ್ತಾನೆ. ಅಸುರಾದಿಗಳನ್ನು ಕುರಿತು ಕ್ರೂರನೂ ಕ್ರೀಡಾದಿ ಗುಣ ವಿಶಿಷ್ಟನೂ ಆದುದರಿಂದ ಶ್ರೀಹರಿಯು ಉಗ್ರದೇವನೆನಿಸುತ್ತಾನೆ. (2) (ಈಗ ವಾಕ್ಯಾರ್ಥವನ್ನು ಹೇಳುತ್ತಾರೆ.) ತುರ್ವಶ ಮೊದಲಾದ ನಾಮಗಳುಳ್ಳ ಶ್ರೀ ವಿಷ್ಣುವನ್ನು ಆ ವಿಷ್ಣುವಿನ ಪ್ರಸಾದದಿಂದಲೇ ಕರೆಯುತ್ತೇವೆ. (೪) (ಅನಯುದೇವಸಃ ಇತ್ಯಾದಿಗಳಿಂದ ಉತ್ತರಾರ್ಧವನ್ನು ವ್ಯಾಖ್ಯಾನ ಮಾಡುತ್ತಾರೆ.) ಆ ಅಗ್ನಿಯೇ, ನವವಾಸ್ತ್ವ, ಬೃಹದ್ರಥ, ತುರ್ವೀತಿ, ಎಂಬೀ ನವವಾಸ್ತ್ವಾದಿರಾಜರಿಗೆ ದಸ್ಯುಗಳ ವಿನಿಗ್ರಹವಿಷಯದಲ್ಲಿ ಬಲವನ್ನು ಹೊಂದಿಸಿಕೊಟ್ಟನು. (ಅಂದರೆ ದಸ್ಯುಗಳ ಸಂಹಾರಕ್ಕೆ ಉಪಯುಕ್ತವಾದ ಬಲವುಳ್ಳವರನ್ನಾಗಿ ಮಾಡಿದನು. ॥ ೧೮ ॥

ಋು॥ (೪೪೦) ನಿ ತ್ವಾಮಗ್ನೇ ಮನುರ್ದಧೇ ಜ್ಯೋತಿರ್ಜನಾಯ ಶಶ್ವತೇ ।
ದೀದೇಥ ಕಣ್ವ ಋತಜಾತ ಉಕ್ಷಿತೋ ಯಂ ನಮಸ್ಯಂತಿ
ಕೃಷ್ಟಯಃ ॥ ೧೯ ॥

ಅ ॥ ಅಗ್ನೇ=ಎಲೋ ಅಗ್ನಿಯೇ, ಮನುಃ=(ಮನುಷ್ಯರು ಮನುವಿನಿಂದ ಹುಟ್ಟಿದವರಾದ ಪ್ರಯುಕ್ತ ಮನು ಶಬ್ದದಿಂದ ಮನುಷ್ಯರನ್ನು ಇಟ್ಟುಕೊಳ್ಳಬೇಕು) ಮನುಷ್ಯನಾಗಿ ನಾನು, ಶಶ್ವತೇ= ಶಾಶ್ವತನಾದ, ಜನಾಯ=ಮುಕ್ತ ಜನರಿಗೋಸ್ಕರವೂ ಕೂಡ ಜ್ಯೋತಿಃ=ಜ್ಞಾನಪ್ರದನಾದ, ತ್ವಾಂ= ನಿನ್ನನ್ನು (ಹೃದಯದಲ್ಲಿ) ನಿದಧೇ=ಚೆನ್ನಾಗಿ ಧರಿಸಿರುತ್ತೇನೆ. (ನನ್ನ ಧಾರ್ಷ್ಟ್ಯವು ಅತ್ಯಾಶ್ಚರ್ಯವು. ನಾನು ಅತ್ಯಲ್ಪನಾದಾಗ್ಯೂ ನಿನ್ನನ್ನು ನೋಡಲಿಕ್ಕೆ ಆಲೋಚಿಸುತ್ತೇನೆ, ನಿನ್ನ ದಯಾಳುತನವೂ ಆಶ್ಚರ್ಯವು. ಹೇಗೆಂದರೆ) ಯಂ=ಯಾವ ನಿನ್ನನ್ನು, ಕೃಷ್ಟಯಃ=ಸಮಸ್ತ ಪ್ರಜೆಗಳೂ; ನಮಸ್ಯಂತಿ=ನಮಸ್ಕರಿಸುತ್ತಾರೋ, (ಯಾವ ನೀನು) ಋತಜಾತಃ= (ಋತಮುಂಛ ಶಿಲೇ ತೋಯೇ ದೀಪ್ತೇ ಸತ್ಯೇಽಭಿಪೂಜಿತೇ ಎಂಬ ಕೋಶದಿಂದ) ಅರ್ಥದೋಷವಿಲ್ಲದಿರುವ ವೇದ ವಾಕ್ಯ ದೆಶೆಯಿಂದ ಅಭಿವ್ಯಕ್ತನಾದವನೋ,

ಪ್ರಸಿದ್ಧ ಅಗ್ನಿ ಪಕ್ಷದಲ್ಲಿ) ಋತಂ ಸತ್ಯಂ ಪರಬ್ರಹ್ಮ ಎಂಬ ಶ್ರುತಿಯಿಂದ) ಪರಬ್ರಹ್ಮನಿಂದ ಹುಟ್ಟಿದವನೋ, ಉಕ್ಷಿತಃ= ಉಕ್ಷ ಸೇಚನೇ ಸಮಸ್ತ ತನ್ನ ಗುಣಗಳಿಂದ ಸಂಬದ್ಧನೋ (ಕೂಡಿದವನೋ) (ಇಂತಹ ಗುಣಗಳುಳ್ಳ ನೀನು) ಕಣ್ವೇ= ಕಣ್ವನಾದ ನನ್ನಲ್ಲಿ, ದೀದೇಥ(ದೀಪೀದೀಪ್ತೌ, ಅಥವಾ ದ್ಯುತಿ ಎಂದರ್ಥವುಳ್ಳ ದಿವು ಧಾತುವು. ಅಥವಾ ದೀಧೀಙ್‌ದೀಪ್ತಿ ದೇವನಯೋಃ) ಸರ್ವದಾ ಪ್ರಕಾಶಿಸಿ ಕೊಂಡಿರುತ್ತಿ. ॥ ೧೯ ॥

ಭಾ ॥ (೧) ಮನುಷ್ಯಸ್ಸನ್ನಹಂ ತ್ವಾಂ ತು ಜ್ಯೋತಿರ್ಮುಕ್ತಜನಾಯ ಚ । ನಿದಧೇ ಹೃದಿ (೨) ಸತ್ತ್ವಂಚ ದೀಪ್ಯಸೇ ಮಯಿ ಸರ್ವದಾ । ಬ್ರಹ್ಮಜೋಽಗ್ನಿರ್ಋತಾದ್ವೇದವಾಚೋಽಭಿವ್ಯಜ್ಯತೇ ಹರಿಃ ॥ ಉಕ್ಷಿತಃ ಸ್ವಗುಣೈಃ ಸರ್ವೈ ರ್ಯುಕ್ತೋ ॥ ೧೯ ॥

ಅ ॥ ಮನುಷ್ಯನಾಗಿ ನಾನು ಮುಕ್ತ ಜನರಿಗೋಸ್ಕರವೂ ಕೂಡ ಜ್ಞಾನದಾಯಕನಾದ ನಿನ್ನನ್ನಾದರೂ ಹೃದಯದಲ್ಲಿ ಧರಿಸುವೆನು. ಅಲ್ಪನಾದಾಗ್ಯೂ ನಾನು ಅತಿ ಮಹತ್ತಾದ ನಿನ್ನನ್ನು ನೋಡಲು ಚಿಂತಿಸುತ್ತೇನೆ ಎನ್ನುವುದು (ಆಶ್ಚರ್ಯವು ನನ್ನ ಧಾರ್ಷ್ಟ್ಯವು (೨) ಅಗ್ನಿಯಾದರೆ ಬ್ರಹ್ಮನಿಂದ ಹುಟ್ಟಿದವನು. ಶ್ರೀಹರಿಯು ವೇದವಾಕ್ಯಗಳಿಂದ ಅಭಿವ್ಯಕ್ತನಾಗುತ್ತಾನೆ. ಉಕ್ಷಿತಃ= ಸಮಸ್ತ ತನ್ನ ಗುಣಗಳಿಂದಲೂ ಕೂಡಿದವನು. ಇಂತಹ ಗುಣಗಳುಳ್ಳ ನೀನು ಕಣ್ವನಾದ ನನ್ನಲ್ಲಿ ಸರ್ವಧಾ ತೋರುತ್ತಿ. ಪ್ರಕಾಶಿಸಿ ಕೊಂಡಿರುತ್ತಿ ॥ ೧೯ ॥

ಋ ॥ (೪೪೧) ತ್ವೇಷಾಸೋ ಅಗ್ನೇರಮವಂತೋ ಅರ್ಚಯೋ ಭೀಮಾಸೋ ನ ಪ್ರತೀತಯೇ । ರಕ್ಷಸ್ವಿನಃ ಸದಮಿದ್ಯಾತುಮಾವತೋ ವಿಶ್ವಂ ಸಮತ್ರಿಣಂ ದಹ ॥ ೨೦ ॥ ೧೧ ॥ ೩೬ ॥

ಅ॥ ಅಗ್ನೇಃ=ಹಿಂದೆಹೇಳಿದ ಗುಣಗಳುಳ್ಳ ಶ್ರೀ ಹರಿಯ, ತ್ವೇಷಾಸ (ತ್ವಿಷದೀಪ್ತೌ. ಆದಾಗ್ಯೂ ಅರ್ಚಯಃ ಎಂದು ಪ್ರತ್ಯೇಕ ಹೇಳಿದ ಪ್ರಯುಕ್ತ ಇಲ್ಲಿ ಶಕ್ತಿಗಳನ್ನು ಇಟ್ಟು ಕೊಳ್ಳಬೇಕು,) ತ್ವೇಷಾಃಎಂದು ಹೇಳಲ್ಪಟ್ಟ ಶಕ್ತಿಗಳೂ, ಅರ್ಚಯಃ =ರಶ್ಮಿಗಳೂ, ಅಮವಂತಃ= (ಮಾಙ್‌ಮಾನೇ. ಮಾ ಶಬ್ದವು ಜ್ಞಾನ ವಾಚಕವು. ಅಥವಾ ಮಾ= ಮರ್ಯಾದೆಯು. ವಿಷಯತಾ ಸಂಬಂಧ ರೂಪವಾದ ಅರ್ಥದಲ್ಲಿ ಮತುಬ್ ಪ್ರತ್ಯಯವು. ತಥಾಚ) ಅಮೇಯಗಳೇ- ಜ್ಞಾನ ವಿಷಯಗಳಾಗದೇನೇ ಇದ್ದವುಗಳು. ಅಥವಾ ಇಯತ್ತಾ ಇಲ್ಲದಿದ್ದವುಗಳು ಭೀಮಾಸಃ= ಭಯಂಕರಗಳೇ ಆಗಿವೆ. (ಹೇಗೆಂದರೆ) ಸದಮಿತ್=ಎಲ್ಲಾ ಸ್ಥಾನಗಳಲ್ಲಿ (ಸಭೆಗಳಲ್ಲಿ) ಯಾತುಮಾವತಃ= ಯಾತೋ ಮರ್ಯಾದಾಮಾ. ಯಾತುಮಾ ಅಸ್ಯಾಸ್ತೀತಿ ಯಾತುಮಾವಾನ್ ತಸ್ಯ) ಯಾತನೆಯನ್ನನುಭವಿಸತಕ್ಕ ರಕ್ಷಸ್ವಿನಃ=(ರಕ್ಷಾಂಸಿ ಅಸ್ಯ ಸಂತಿ ಎಂಬ ವ್ಯುತ್ಪತ್ತಿಯಿಂದ) ರಾಕ್ಷಸರ ಪಕ್ಷವುಳ್ಳ ಪುರುಷನ, ಪ್ರತೀತಯೇ= (ಪ್ರತೀತ್ಯುಪ ಸೃಷ್ಟಾತ್ ಇಣ್‌ಗತೌ) ಅಭಿಮುಖವಾಗಿಹೋಗುವುದಕ್ಕಾಗಿಯೂ, ನ= ಶಕ್ಯಗಳಲ್ಲ(ಇಂತಹ ನೀನು, ವಿಶ್ವಂ= ಎಲ್ಲಾ, ಅತ್ರಿಣಂ= ಅಸುರರನ್ನು ಸಂದಹ= (ದಹ ಭಸ್ಮೀಕರಣೇ)ಸಂಹರಿಸು. ॥ ೨೦ ॥ ೧೧ ॥ ೩೬ ॥

ಭಾ ॥ (೧) ಅಮೇಯಾಶ್ಚ ಶಕ್ತಯಃ । ತ್ವೇಷಾ ಇತ್ಯುದಿತಾಸ್ತಸ್ಯ ಹರೇರಶ್ಮಯ ಏವಚ । ಭೀಮಾ (೨) ಹಪ್ರತಿಗಂತುಂ ಚ ಶಕ್ಯಾ ರಾಕ್ಷಸ ಪಕ್ಷಿಣಃ॥ (೩) ಯಾತವೋ ಜಂಗಮಾಸ್ತೇಷಾಂ ಹಿಂಸನಾವಾಂಸ್ತು ರಾಕ್ಷಸಃ ॥ ಯಾತುಮಾವಾನಿತಿ ಪ್ರೋಕ್ತೋ (೪) ಯಾತ

ನಾನುಭವಾತ್ಕ್ವಚಿತ್ । (೫) ಯಾತುರಿತ್ಯೇವಚ ಪ್ರೋಕ್ತಃ (೬) ಸಂತಂ ಪ್ರತ್ಯನುಕೂಲತ: । ಸ್ಥಿತಾಸ್ತಾಃ ಶಕ್ತಯೋ ವಿಷ್ಣೋಃ ॥ ೨೦ ॥ ೧೧ ॥ ೪ ॥

ಅ ॥ (೧) ಹಿಂದೆ ಹೇಳಿದ ಗುಣಗಳುಳ್ಳ ಶ್ರೀ ಹರಿಯ ಶ್ಲೋಕಗಳಿಂದು ಹೇಳಲ್ಪಟ್ಟ ಶಕ್ತಿಗಳೂ, ರಶ್ಮಿಗಳೂ ಕೂಡ ಅಮೇಯಗಳೇ ಆಗಿವೆ. ಭಯಂಕರಗಳೂ ಆಗಿವೆ (೨) ಅವುಗಳು ರಾಕ್ಷಸರ ಪಕ್ಷವುಳ್ಳ ಪುರುಷನ ಇದಿರು ಹೋಗಲಿಕ್ಕೂ ಶಕ್ಯಗಳಲ್ಲ. (ಎಲ್ಲಾ ಅಸುರರನ್ನು ಸಂಹರಿಸು) (೩) ರಾಕ್ಷಸರ ಪಕ್ಷವುಳ್ಳ ಪುರುಷನು ಯಾತುಮಾವಾನ್ ಎಂದು ಯಾವ ಕಾರಣದಿಂದ ಹೇಳಲ್ಪಡುತ್ತಾನೆ ಎಂದರೆ) ಯಾಂತಿ ಗಚ್ಛಂತಿ ಎಂಬವ್ಯುತ್ಪತ್ತಿಯಿಂದ ಜಂಗಮ ಪ್ರಾಣಿಗಳು ಯಾತು ಶಬ್ದ ವಾಚ್ಯಗಳು. ಆ ಜಂಗಮ ಪ್ರಾಣಿಗಳ ಹಿಂಸೆಯು ಯಾತುಮಾ ಎನಿಸುತ್ತದೆ (ಮಾಙ್ ಹಿಂಸಾಯಾಂ ಮಾನಂ ಜ್ಞಾನಂ ಲಯಶ್ಚೈವ ಮರ್ಯಾದಾಪಿ ಕಥ್ಯತೇ ಎಂದು ಕೋಶವು ಯಾವ ಕಾರಣದಿಂದ ರಾಕ್ಷಸನು ಜಂಗಮ ಪ್ರಾಣಿಗಳ ಹಿಂಸೆಯುಳ್ಳವನೋ ಅದ ಕಾರಣ ರಕ್ಷಸ್ವಿಯು ಯಾತುಮಾವಾನ್ ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ. ತಥಾಚ ಯಾತೂನಾಂ ಹಿಂಸಾ ಯ್ನಸ್ತಾನಿ ಯಾತುಮಾನಿ, ಯಾತುಮಾನಿ ಅಸ್ಯ ಸಂತೀತಿ ಯಾತುಮಾವಾನ್ ಎಂದು ವಿಗ್ರಹವು.) (೪) ಯಾತನೆಯನ್ನು ಅನುಭವಿಸುವ ಪ್ರಯುಕ್ತವೂ ರಕ್ಷಸ್ವಿಯು ಯಾತುಮಾವಾನ್ ಎಂದು. ಹೇಳಿಸಿ ಕೊಳ್ಳಲ್ಪಡುತ್ತಾನೆ. ಯಾತೋಃ= ಯಾತನೆಯ (ನರಕಾದ್ಯನರ್ಥಗಳ) ಮಾ= ಅನುಭವವು ಯೇಷಾಂ ತಾನಿ ಯಾತುಮಾನಿ=ರಾಕ್ಷಸರು. ಯಾತುಮಾನಿ ಅಸ್ಯಸಂತೀತಿ ಯಾತುಮಾವಾನ್ ಎಂದು) (೫) (ಪ್ರಸಂಗ ಸಂಗತಿಯಿಂದ ನಾವೂ ಹೀಗೆಯೇ ಮಾಡಬೇಕೆಂದು ಶಿಷ್ಯರಿಗೆ ತಿಳಿಸುವುದಕ್ಕಾಗಿ ಹೇಳುತ್ತಾರೆ) ಕೆಲವು ಕಡೆ ಯಾತುಃ ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ. (ಅಂದರೆ ಉಲೂಕ ಯಾತುಂ ಶುಶುಲೂಕಯಾತುಂ ಇತ್ಯಾದಿ ಋಕ್ಕಿನಲ್ಲಿಯೂ ಯಾತು ಶಬ್ದ ಪ್ರವೃತ್ತಿ ನಿಮಿತ್ತವು ಯಾತನೆಯೇ ನರಕಾದ್ಯನರ್ಥವೆ) (ಹೇಗೆಂದರೆ) ಯಾತ್ಯತೇ= ಖಿದ್ಯತೇ ಎಂಬ ಕರ್ಮವ್ಯುತ್ಪತ್ತಿಯಿಂದ ದುಃಖಕ್ಕೆ ಆಸ್ಪದನಾದ ರಾಕ್ಷಸನು ಯಾತುಃ ಎನಿಸುತ್ತಾನೆ. (೬) (ರಕ್ಷಸ್ವಿಮೋ ನ ಪ್ರತೀಯತೇ ಎಂಬಲ್ಲಿ ಪ್ರತೀಕಯೇ ಎನ್ನುವುದಕ್ಕೆ ರಕ್ಷಸ್ವಿನಃ ಎಂಬ ವಿಶೇಷಣವು ಏತಕ್ಕೆಂದರೆ) ಶ್ರೀ ವಿಷ್ಣುವಿನ ಆ ಶಕ್ತಿಗಳು ರಶ್ಮಿಗಳೂ ಕೂಡ ಯೋಗ್ಯ ಪುರುಷನಿಗೆ ಅನುಕೂಲಗಳಾಗಿಯೇ ಇರುತ್ತವೆ. (ಅಭಿಮುಖವಾಗಿ ಹೋಗಲಿಕ್ಕೆ ಶಕ್ಯಗಳೇ ಆಗಿವೆ. ಪ್ರಹ್ಲಾದಾದಿಗಳಿಗೆ ಹೇಗೋ ಹಾಗೆಯೇ ಅದ ಕಾರಣ ರಕ್ಷಸ್ವಿನಃ ಎಂಬ ವಿಶೇಷಣವು ಸಾರ್ಥಕವೇ ಆಗಿದೆ. ॥ ೨೦ ॥ ೧೧ ॥ ೪ ॥

ಅ॥ ೧೫ ಋಕ್ಕುಗಳು. ೩ ವರ್ಗಗಳು. ಮರುದ್ದೇವತಾಕವು. ಗಾಯತ್ರೀ ಛಂದಸ್ಕವು ೩೭ನೇ ಸೂಕ್ತವು. ಅದರಲ್ಲಿ ೧-೬-೫ ಈ ಋಕ್ಕುಗಳು ಪ್ರಧಾನ ಮರುದ್ವಿಷಯಕಗಳು. ಬೇರೆ ಋಕ್ಕುಗಳು ಪ್ರಧಾನ ವಾಯು ಮತ್ತು ಐವತ್ತು ಮರುದ್ವಿಷಯಕಗಳು.

ಋ॥ (೪೪೨) ಕ್ರೀಳಂ ವಃ ಶರ್ಧೋ ಮಾರುತಮನರ್ವಾಣಂ ರಥೇ ಶುಭಂ । ಕಣ್ವಾ ಅಭಿ ಪ್ರಗಾಯತ ॥ ೧ ॥

ಅ॥ ಕಣ್ವಾಃ=ನನ್ನವರಾದ ಕಣ್ವರೇ, ಕ್ರೀಳಂ=ಕ್ರೀಡಿಸುತ್ತಿರುವ ಶರ್ಧಃ=ಸುಖಸಂಪೂರ್ಣನಾದ, ಅಥವಾ ಪೂರ್ಣಬಲವುಳ್ಳ ಅನರ್ವಾಣಂ=ಇಂದ್ರಿಯಾಣಿ ಹಯಾನಾಹುಃ ಎಂಬ ಶ್ರುತಿಯಿಂದ ಇಂದ್ರಿಯಾಭಿಮಾನಿ ದೇವತೆಗಳು ಇಲ್ಲದಿರುವವನು, ರಥೇ ಶುಭಂ=ಶರೀರಂ ರಥಮೇವಚ ಎಂಬ ಪ್ರಮಾಣದಿಂದ ಪ್ರಾಣಿಗಳ ದೇಹದಲ್ಲಿ ವಿಶೇಷತಃ ಶೋಭಿಸಿಕೊಂಡಿರುವವನು, ವಃ=ನಿಮಗೆ ಸ್ವಾಮಿಯಾದ, ಮಾರುತಂ ಚ-ಕ್ರೀಡೆಯೇ ಸ್ವಭಾವ ಇತ್ಯಾದಿ ಗುಣಗಳಿಂದ ಕ್ರೀಡಾದಿಶಬ್ದವಾಚ್ಯನಾದ ವಿಷ್ಣುವನ್ನೂ ಕೂಡ, ಅಭಿಪ್ರಗಾಯತ=ಸ್ತುತಿ ॥ ೧ ॥

ಭಾ॥(1) ಕ್ರೀಡಾಶೀಲಂ ಚ ಮಾರುತಂ॥ ಶರ್ಧಃ ಸುಖಬಲಾಢ್ಯಂ ಸ್ಯಾತ್ಯನರ್ವಾಣಮನಿಂದ್ರಿಯಂ॥ ನ ವಾಯೋರಿಂದ್ರಿಯಾಣಾಂ ಹಿ ದೇವಾಃ ಸಂತ್ಯಭಿಮಾನಿನಃ॥ ಅತೋಽನಿಂದ್ರಿಯತಾ ತಸ್ಯ ರಥೇ ದೇಹೇ ಶುಭಶ್ಚ ಸಃ॥ ತಸ್ಮಾತ್ತಂ ಗಾಯತಾ ಭೀಷ್ಮಂ ವಿಷ್ಣುಂ ವಾ ತಾದೃಶೈರ್ಗುಣೈಃ ॥ ೧ ॥

ಅ॥ (1) ಕ್ರೀಳಂ= ಕ್ರೀಡಾಸ್ವಭಾವವುಳ್ಳವನು. (ಯದ್ಯಪಿ ಪಚಾದ್ಯಚ್. ಇಗುಪಧಜ್ಞಾಪ್ರೀಕಿರಃ ಕಃ, ಎಂಬ ಕ ಪ್ರತ್ಯಯವಾಗಲೀ ಕ್ರೀಡಾಕರ್ತನು ಎಂಬ ಅರ್ಥದಲ್ಲಿ ಸೂತ್ರ ವಿಹಿತವಾಗಿದೆ. ಆದಾಗ್ಯೂ ಜಗದ್ರಕ್ಷಣಾದಿರೂಪವಾದ ಕ್ರೀಡೆಯಿಂದ ಆ ಶ್ರೀಪರಮಾತ್ಮನಿಗೆ ಯಾವುದೊಂದು ಪ್ರಯೋಜನವೂ ಇಲ್ಲ ಎಂದು ತಿಳಿಸುವುದಕ್ಕಾಗಿಯೇ ಕ್ರೀಡಾ ಶೀಲಂ ಎಂದದ್ದು.) ಕ್ರೀಡಾಶೀಲತ್ವಾದಿಗುಣಗಳಿಂದ ಕ್ರೀಡಾದಿ ಶಬ್ದ ವಾಚ್ಯನಾದವನು. ಶರ್ಧಃ= ಶಂ= ಸುಖದಿಂದ ಋದ್ಧಃ= ಸಮೃದ್ಧನಾದವನು, ಎಂಬ ಅವಯವಾರ್ಥವಿವಕ್ಷೆಯಿಂದ ಸುಖದಿಂದ ಪೂರ್ಣನಾದವನು ಅಥವಾ ಬಲಾಢ್ಯನು ಎಂದರ್ಥವು. ಅನರ್ವಾಣಂ= ನ ವಿದ್ಯಂತೇ ಅರ್ವಾಣಃ ಶತ್ರವಃ ಯಸ್ಯ ಎಂಬ ವ್ಯುತ್ಪತ್ತಿಯಿಂದ ಶತ್ರುಗಳು ಇಲ್ಲದವನು ಎಂದು ಹೇಳುವುದರಿಂದ, ಅನಿಂದ್ರಿಯಂ= ಇಂದ್ರಿಯಗಳಿಲ್ಲದವನು ಎಂಬ ವ್ಯಾಖ್ಯಾನವು ಹೇಗೆಂದರೆ— ಇಂದ್ರಿಯಾಣಿ ಹಯಾನಾಹುಃ ಎಂದು ಶ್ರುತಿಯಲ್ಲಿ ಇಂದ್ರಿಯಗಳಿಗೆ ಹಯಸಾಮ್ಯವನ್ನು ಹೇಳಿದುದರಿಂದ ಇಂದ್ರಿಯಾಭಿಮಾನಿ ದೇವತೆಗಳು ಇಲ್ಲದವನು ಎಂದರ್ಥವು. ಶ್ರೀವಿಷ್ಣುವಿಗೆ ಪ್ರಾಕೃತ ಶರೀರವು ಇಲ್ಲದಿರುವುದರಿಂದ ಇಂದ್ರಿಯಗಳಿಲ್ಲವೆನ್ನುವುದು ಯುಕ್ತವು. ಶ್ರೀವಾಯುವಿಗೆ ಹೇಗೆಂದರೆ) ಶ್ರೀವಾಯುವಿಗೆ ಇಂದ್ರಿಯಾಭಿಮಾನಿಗಳಾದ ದೇವತೆಗಳು ನಿಯಾಮಕರಾಗಿ ಇರುವುದಿಲ್ಲ. ಆದ ಕಾರಣ ವಾಯು ದೇವರಿಗೆ ಅನಿಂದ್ರಿಯತ್ವವು ಯುಕ್ತವಾಗುತ್ತದೆ. ಯಾವ ಪ್ರಸಿದ್ಧನಾದ ಶ್ರೀಹರಿಯು ರಥೇ= ಪ್ರಾಣಿಗಳ ದೇಹದಲ್ಲಿ ಶೋಭೆಯುಳ್ಳವನೋ ಅಂತಹ ಕ್ರೀಡಾಶೀಲತ್ವಾದಿಗುಣಗಳಿಂದ ಕ್ರೀಡಾದಿಶಬ್ದವಾಚ್ಯನಾದ ಶ್ರೀವಿಷ್ಣುವನ್ನು ನಿತ್ಯದಲ್ಲಿಯೂ ನಮ್ಮವರಾದ ಕಣ್ವರೇ ಸ್ತುತಿಸಿರಿ. ॥೧॥

ಋ॥ (೪೪೩) ಯೇ ಪೃಷತೀಭಿರೃಷ್ಟಿಭಿಃ ಸಾಕಂ ವಾಶೀಭಿರಂಜಿಭಿಃ।
ಅಜಾಯಂತ ಸ್ವಭಾನವಃ॥ ॥ ೨ ॥

ಅ॥ ಯೇ= ಯಾವ ಮರುತ್ತುಗಳು, ಸ್ವಭಾನವಃ= ಸ್ವಾಭಾವಿಕವಾಗಿಯೇ ಇರುವ ತೇಜಸ್ಸುಗಳುಳ್ಳವರುಗಳೋ, ಪೃಷತೀಭಿಃ= ವಾಹನಗಳಿಂದ ಋಷ್ಟಿಭಿಃ ವಾಶೀಭಿಃ ಅಂಜಿಭಿಶ್ಚ= ಋಷ್ಟಿ, ವಾಶೀ, ಅಂಜಿ ಎಂಬ ಆಯುಧ ವಿಶೇಷಗಳಿಂದ ಸಾಕಂ= ಕೂಡಿಕೊಂಡು, ಅಜಾಯಂತ= ಹುಟ್ಟಿದರೋ, (ಜನ್ಮವನ್ನು ಆರಂಭಿಸಿಯೇ ಆಯುಧಾದಿಗಳಿಂದ ಕೂಡಿದವರಾಗಿರುತ್ತಾರೋ,) [ವಿಷ್ಣುಪಕ್ಷದಲ್ಲಿ ಅದರೂ] ಸ್ವಭಾನವಃ= ಸ್ವವಿಷಯಕವಾದ ಜ್ಞಾನ [ಪ್ರಕಾಶ]ವುಳ್ಳ ಯೇ= ಯಾವ ಪೃಷತ್ಯಾದಿನಾಮಕ ವಾಹನ ಮತ್ತು ಆಯುಧ ವಿಶೇಷಗಳಿಂದ, ಕೂಡಿ ಹುಟ್ಟುತಕ್ಕ ಮರುತ್‍ಗಳಲ್ಲಿ ಅಭಿವ್ಯಕ್ತಗಳಾಗುವ ಭಗವದ್ರೂಪ ವಿಶೇಷಗಳೂ ಕೂಡ, ಪೃಷತ್ಯಾದಿ ವಾಹನ ಆಯುಧ ವಿಶೇಷಗಳಿಂದ ಕೂಡಿಯೇ, ಅಜಾಯಂತ= ಅಭಿವ್ಯಕ್ತಗಳಾದವು. ॥ ೨ ॥

ಭಾ ॥ (1) ಪೃಷತ್ಯೋ ವಾಹನಾನ್ಯೇಷಾಮನ್ಯದಾಯುಧಮುಚ್ಯತೇ ॥ (2) ಸ್ವಪ್ರಕಾಶೋಽಥವಾ ವಿಷ್ಣುಸ್ತಲ್ಲಿಂಗೈರ್ವರ್ಜ್ಯತೇ ಸಹ॥ ತತ್ತದ್ದೇವಗತಸ್ಯಾಪಿ ವಿಷ್ಣೋರ್ಲಿಂಗಂ ಚ ತದ್ಭವೇತ್ ॥ ೨ ॥

ಅ ॥ (1) ಈ ಮರುತ್‌ಗಳ ವಾಹನಗಳು ವೃಷತ್‌ಗಳು ಎನಿಸುತ್ತವೆ. ಇತರವಾದುದು ಋಷ್ಟಿವಾಶೀ ಅಂಜಿ ಎಂಬ ಶಬ್ದಗಳಿಂದ ಹೇಳಲ್ಪಟ್ಟದ್ದು ಆಯುಧ ವಿಶೇಷವು. ಅಂದರೆ–ಋಷ್ಟಿಃ=ಅಸಿ ಖಡ್ಗ ಶಬ್ದ ವಾಚ್ಯವಾದುದು. ವಾಶೀ=ಕಾಷ್ಠವನ್ನು ಕತ್ತರಿಸಲಿಕ್ಕೆ ಸಾಧನವಾದುದು ಆಯುಧವು. ವಾಶ್ಯೀ ಎಂದು ಪ್ರಸಿದ್ಧವಾದುದು ಆಯುಧವು. ಅಂಜಿಃ=ಅಪ್ರಸಿದ್ಧವಾದ ಆಯುಧವು. (2) (ಶ್ರೀವಿಷ್ಣುವಿನಲ್ಲಿ ಇದನ್ನು ಕೂಡಿಸುತ್ತಾರೆ.) ಅಥವಾ ಶ್ರೀ ವಿಷ್ಣುವು ಸ್ವವಿಷಯಕವಾದ ಜ್ಞಾನವುಳ್ಳವನು. ವೃಷತ್ತ್ವಾದಿ ಲಿಂಗಗಳಿಂದ ಕೂಡಿಕೊಂಡು ಅಭಿವ್ಯಕ್ತನಾಗುತ್ತಾನೆ ಎನ್ನುವುದರಿಂದ ಅಜಾಯಂತ ಎನ್ನುವುದರಿಂದ ಉಕ್ತವಾದ ಜನ್ಮವು ಸಾರ್ಥಕವಾಯಿತು. (3) (ಆವಾವ ಲಿಂಗಗಳಿಂದ ಕೂಡಿ ಇದ್ದಾನೆ ಎನ್ನುವುದು ಹೇಗೆ ಆಗುತ್ತದೆ? ಎಂದರೆ) ಆವಾವ ದೇವತೆಗಳಲ್ಲಿರತಕ್ಕ ಶ್ರೀ ವಿಷ್ಣುವಿಗೂ ಕೂಡ ಆ ಲಿಂಗವೇ ಆಗುವುದು. ಅಂದರೆ-ಇಂದ್ರಾದಿ ದೇವತೆಗಳಲ್ಲಿರತಕ್ಕ ವಜ್ರಧರತ್ವಾದಿ ಲಿಂಗವು ಶ್ರೀ ವಿಷ್ಣುವಿಗೂ ಇಂದ್ರಾದಿಗಳಿಗೂ ಕೂಡ ಆಗುವುದು. ॥ ೨ ॥

ಋ ॥ (೪೪೪) ಇಹೇವ ಶೃಣ್ವ ಏಷಾಂ ಕಶಾ ಹಸ್ತೇಷು ಯದ್ವದಾನ್ ।
ನಿ ಯಾಮಞ್ಚಿತ್ರಮೃಂಜತೇ ॥ ೩ ॥

ಅ ॥ (ಆ ಮರುತ್‌ಗಳು,) ಯಾತ್= ಯಾವ ವಚನವನ್ನು, ವದಾನ್ =(ವದ ವ್ಯಕ್ತಾಯಾಂ ವಾಚಿ) ಹೇಳುತ್ತಾರೋ, ತತ್= ಅಂತಹುದು, ಇಹೇವ ಶೃಣ್ವೇ= ಈ ಪೃಥಿವಿಯಲ್ಲಿರತಕ್ಕವರಿಂದಲೂ ಕೇಳಲ್ಪಡುವಂತೆ ಇದೆ. ಅಂದರೆ ಅವರಿಂದ ವರ್ಣಗಳಿಗೆ ಅಭಿವ್ಯಕ್ತವಾಗುವಂತೆ ಅವರಿಂದ(ಘೋಷಗಳಿಂದ) (ಮಾಡಲ್ಪಡತಕ್ಕ ಘೋಷನಾದಗಳೂ ಕೇಳಲ್ಪಡುತ್ತವೆ) (ಆ ಮರುತ್‌ಗಳು ಘೋಷನಾದಗಳನ್ನು ಹೇಗೆ ಹುಟ್ಟಿಸುತ್ತವೆ ಎಂದರೆ) ಏಷಾಂ= ಈ ಮರುತ್‌ಗಳ, ಹಸ್ತೇಷ =ಕೈಗಳಲ್ಲಿ, ಕಶಾ =ಮೇಘಗಳನ್ನು ಹೊಡೆಯಲಿಕ್ಕೆ, ಉಪಯುಕ್ತಗಳಾದ ಬಾರ್ಕೋಲುಗಳು, ಇರುತ್ತವೆ. ಏಷಾಂ= ಈ ಮರುತ್‌ಗಳ, ಯಾಮನ್= (ಯಾಂತ್ಯಸ್ಮಿನ್ ಅನೇನ ಎಂಬ ವ್ಯುತ್ಪತ್ತಿಯಿಂದ)ಮಾರ್ಗದಲ್ಲಿ, ಚಿತ್ರಂ= ಆಶ್ಚರ್ಯವಾಗಿ, ನಿ ಋಂಜತೇ= (ಋಂಜ ಗತೌ) ಹೊಂದಲ್ಪಡುತ್ತದೆ. (ಮರುತ್‌ಗಳು ಹೋಗುತ್ತಿರಲು ಧೂಳಿ ಮೊದಲಾದ ಸಮಸ್ತ ವಸ್ತುಗಳೂ ಅವುಗಳೊಡಗೂಡಿ ಹೋಗುವುದರಿಂದ ಮಾರ್ಗವು ಚಿತ್ರವಾಗಿದೆ. (ಶ್ರೀ ವಿಷ್ಣುವನ್ನು ವಿವಕ್ಷೆ ಮಾಡಿದರೆ) ಚಿತ್ರಂ=ನಾನಾ ವಿಧವಾದ ಸಮಸ್ತ ಜಗತ್ತು, ಯಾಮನ್ =ಶಂತವಾಗ ಮಾರ್ಗದಲ್ಲಿ ನಿ ಋಂಜತೇ= ಮರುತ್‌ಗಳಲ್ಲಿರತಕ್ಕ ರೂಪದಿಂದ ಚೆನ್ನಾಗಿ ಪ್ರೇರೇಪಿಸಲ್ಪಡುತ್ತದೆ

ಭಾ ॥ (1)ಯತ್ತೇ ವದಂತಿ ವಚನಂ ಮೇಘನಾದಾತ್ಮಕಂ ಹಿ ತತ್ । ಇಹಾಪಿ ಶ್ರೂಯತ ಇವ
ವರ್ಣಾವ್ಯಕ್ತೇರಿವೇತಿ ಚ ॥ (2) ಹಸ್ತೇಷ್ವೇಷಾಂ ಕಶಾಃ ಸಂತಿ ಚಿತ್ರಂ ಮಾರ್ಗೇಽಧಿ
ಗಮ್ಯತೇ ॥ (3) ರೇಣ್ವಾದಿಸರ್ವವಸ್ತೂನಾಂ ಗಮನಾನ್ಮಾರ್ಗಚಿತ್ರತಾ (4)
ವಿಷ್ಣೋಸ್ಸರ್ವಂ ಜಗಚ್ಚಿತ್ರಂ ಮಾರ್ಗೇ ಸಂಪ್ರೇರ್ಯತೇಽಮುನಾ ॥ ೩

ಅ ॥ (1) ಆ ಮರುತ್‌ಗಳು ಯಾವುದೊಂದು ವಚನವನ್ನು ಹೇಳುತ್ತಾರೋ, ಆ ವಚನವು ಈ ಪೃಥಿವಿಯಲ್ಲಿರತಕ್ಕವರಿಂದಲೂ ವರ್ಣಗಳಿಗೆ ಅಭಿವ್ಯಕ್ತಿಯಾಗುವುದರಿಂದ ಕೇಳಲ್ಪಡುವಂತಿದೆ. ಏಕೆಂದರೆ—ಆ ವಚನವು ಮೇಘಗಳ ಧ್ವನಿರೂಪವಾದುದು. (ಅಂದರೆ ಆ ಮರುತ್‌ಗಳಿಂದ ಮಾಡಲ್ಪಡತಕ್ಕ ಘೋಷ ಧ್ವನಿಗಳು ಕೇಳಲ್ಪಡುತ್ತವೆ.) (2) (ಆ ಮರುತ್‌ಗಳು ಆ ಮೇಘ ಧ್ವನಿಗಳನ್ನು ಹೇಗೆ ಹುಟ್ಟಿಸುತ್ತವೆ ಎಂದರೆ) ಆ ಮರುತ್‌ಗಳ ಕೈಗಳಲ್ಲಿ ಕಶೆಗಳು (ಅಂದರೆ ಅಶ್ವಾದಿಗಳನ್ನು ಹೊಡೆಯುವುದಕ್ಕಾಗಿ ಮಾಡಲ್ಪಟ್ಟ ಆಕಾರ ವಿಶೇಷ ವಿಶಿಷ್ಟಗಳಾದ ರಜ್ಜುಗಳು) ಇವೆ. ಈ ಮರುತ್‌ಗಳ ಮಾರ್ಗದಲ್ಲಿ ಆಶ್ಚರ್ಯವು ಹೊಂದಲ್ಪಡುತ್ತದೆ. (ಋಜಿಭೃಜೀ ಭರ್ಜನೇ

ಎಂದು ಭರ್ಜನಾರ್ಥದಲ್ಲಿ ಪಠಿತವಾದ ಋಂಜ ಧಾತುವಿಗೆ ಜೋಡಿಸಲ್ಪಡುತ್ತದೆ ಎಂಬ ವ್ಯಾಖ್ಯಾನವು ಹೇಗೆ ಕೂಡುವುದೆಂದರೆ ಅನೇಕಾರ್ಥಾಹಿ ಧಾತವಃ ಎಂದು ಇಷ್ಟ ಪ್ರಯುಕ್ತ ಧಾತುಗಳಿಗೆ ಅನೇಕಾರ್ಥಗಳಿದ್ದ ಪ್ರಯುಕ್ತ [illegible] ಡುತ್ತದೆ. (3) (ಮಾರ್ಗಗಳು ಚಿತ್ರವಾಗುವುದು ಹೇಗೆಂದರೆ) ಮರುತ್‌ಗಳು ಹೋಗುವಾಗ ಮರುತ್‌ಗಳ ಮಾರ್ಗದಲ್ಲಿತತಕ್ಷ ಪರ್ಣ ಧೂಲಿ ಮೊದಲಾದ ಸಮಸ್ತ ವಸ್ತುಗಳೂ ಅವುಗಳೊಡನೇ ಹೋಗುವುದರಿಂದ ಶುದ್ಧವಾಗುವ ಪ್ರಯುಕ್ತ ಹಿಂದಿನ ಅವಸ್ಥೆಗಿಂತ ಮಾರ್ಗವು ಚಿತ್ರವಾಗುವುದು.) (4) (ಶ್ರೀ ವಿಷ್ಣುವಿನಲ್ಲಿ ಉತ್ತರಾರ್ಥವನ್ನು ಅನ್ಯಥಾ ವ್ಯಾಖ್ಯಾನ ಮಾಡುತ್ತಾರೆ.) ಶ್ರೀ ವಿಷ್ಣುವನ್ನು ವಿವಕ್ಷಿಸಿ ಮಾಡಿದರೆ (ಹೀಗೆ ವ್ಯಾಖ್ಯಾನ ಮಾಡಬೇಕು.) ನಾನಾ ವಿಧವಾದ ಸಮಸ್ತ ಜಗತ್ತು, ತನ್ಮೂಲಕ ಮೋಕ್ಷ ಮಾರ್ಗದಲ್ಲಿ, ಮರುತ್‌ಗಳಲ್ಲಿ ನಿಯಾಮಕನಾಗಿರುವ ರೂಪದಿಂದ ಚೆನ್ನಾಗಿ ಪ್ರೇರೇಪಿಸಲ್ಪಡುತ್ತದೆ ॥ ೩ ॥

ಋ॥ (೪೪೫) ಪ್ರ ವಃ ಶರ್ಧಾಯ ಘೃಷ್ವಯೇ ತ್ವೇಷದ್ಯುಮ್ನಾಯ ಶುಷ್ಮಿಣೇ।
ದೇವತ್ತಂ ಬ್ರಹ್ಮ ಗಾಯತ ॥ ೪ ॥

ಅ ॥ ಕಣ್ವಾಃ=ಕಣ್ವರೇ, ವಃ=ನಿಮಗೆ, ಶರ್ಧಾಯ= ಬಲಕ್ಕಾಗಿ, ಬಲವನ್ನು ಕೊಡುವ, ವಾ, ಸುಖವನ್ನು ಕೊಡುವ, ಘೃಷ್ವಯೇ=ಶೋಧಕನಾದ, ಅಥವಾ ಶುದ್ಧನಾದ, ತ್ವೇಷದ್ಯುಮ್ನಾಯ= ಚೆನ್ನಾಗಿ ಪ್ರಕಾಶರೂಪ ಜ್ಞಾನವುಳ್ಳ, ಅಂದರೆ ಪ್ರತಿಬದ್ಧವಾಗದಿರುವ ಜ್ಞಾನವುಳ್ಳ, ಶುಷ್ಮಿಣೇ= ವೀರ್ಯವುಳ್ಳ ಅಥವಾ ಅತಿಬಲವುಳ್ಳ, ಪ್ರಧಾನ ವಾಯುವಿಗೋಸ್ಕರ, ದೇವತ್ತಂ= ದೇವತೆಗಳಲ್ಲಿ ವ್ಯಾಪಿಸಿಕೊಂಡಿರುವ ಬ್ರಹ್ಮ= ಪರಬ್ರಹ್ಮನನ್ನು ಪ್ರಗಾಯತ= ಚೆನ್ನಾಗಿ ಸ್ತುತಿಸಿರಿ. ಅಂದರೆ ಪ್ರಧಾನ ವಾಯುವಿಗೋಸ್ಕರ ಶ್ರೀ ವಿಷ್ಣುವನ್ನು ಸ್ತುತಿಸಿರಿ. ಶ್ರೀವಿಷ್ಣುವನ್ನು ಗಾನಮಾಡಿ ಶ್ರೀವಾಯುವನ್ನು ಸಂತೋಷಗೊಳಿಸಿರಿ. (ಶ್ರೀ ವಿಷ್ಣು ಪಕ್ಷದಲ್ಲಿ ಆದರೂ) ಶರ್ಧಾದಿಪದಗಳಿಂದ ಹೇಳಲ್ಪಟ್ಟ ಶ್ರೀ ವಿಷ್ಣುವಿಗೋಸ್ಕರ, ದೇವತ್ತಂ= ದೇವತೆಗಳು ಅಧ್ಯಯನ ಮಾಡುವುದರಿಂದ ದೇವತೆಗಳಲ್ಲಿ ವ್ಯಾಪ್ತವಾದ, ಬ್ರಹ್ಮ= ವೇದಾಖ್ಯ ಬ್ರಹ್ಮವನ್ನು ಗಾನಮಾಡಿರಿ. ॥ ೪ ॥

ಭಾ ॥ (1) ಶೋಧಕಾಯ ಪ್ರಧಾನಾಯ ವೋ ಬಲಾಯ ಚ ವಾಯವೇ । ಶುದ್ಧಾಯ ವಾ ಸುಪ್ರಕಾಶಜ್ಞಾನಾಯಾತಿಬಲಾಯ ಚ ॥ ಗಾಯತ ಬ್ರಹ್ಮದೇವತ್ತಂ ದೇವೇಷು ತತಮೀಶ್ವರಂ ॥ (2) ಪ್ರೀತಿರ್ವಾಯೋರ್ವಿಷ್ಣುಗಾನಾ (3) ದ್ವೇದಾಖ್ಯಂ ಬ್ರಹ್ಮ ವಿಷ್ಣವೇ ॥ (4) ದೇವೈರಧೀಯಮಾನತ್ವಾದ್ದೇವತ್ತಂ ಬ್ರಹ್ಮವೈಷ್ಣವಂ॥ ೪ ॥

ಅ॥ (೧) ನಿಮಗೆ ಬಲಕ್ಕಾಗಿ, ಬಲವನ್ನು ಕೊಡುವವನು ಅಥವಾ ಸುಖವನ್ನು ಕೊಡುವವನು ಶುದ್ಧಿಯನ್ನು ಮಾಡುವವನು, ಅಥವಾ ಶುದ್ಧನಾದವನು ಒಳ್ಳೇ ಪ್ರಕಾಶ ಜ್ಞಾನವುಳ್ಳವನು, ಅಂದರೆ— ಪ್ರತಿಬಂಧಕವಿಲ್ಲದ ಜ್ಞಾನವುಳ್ಳವನು, ಅಥವಾ ಅತ್ಯಂತ ಬಲವುಳ್ಳವನು, ಇಂತಹ ಪ್ರಧಾನ ವಾಯುವಿಗೋಸ್ಕರ, (ಮರುತ್ ಸೂಕ್ತವಾದ ಪ್ರಯುಕ್ತ ವಾಯವೇ ಎಂದು ಸಿಗುತ್ತದೆ.) ದೇವತ್ತಂ=ದೇವತೆಗಳಲ್ಲಿ ವ್ಯಾಪ್ತನಾದ, ಸರ್ವಗುಣ ಪರಿಪೂರ್ಣನಾದ ಶ್ರೀ ಪರ ಬ್ರಹ್ಮನನ್ನು ಚೆನ್ನಾಗಿ ಸ್ತುತಿಸಿರಿ. (೨) (ಪ್ರಧಾನವಾಯುವಿಗೋಸ್ಕರ ಶ್ರೀ ವಿಷ್ಣುವನ್ನು ಸ್ತುತಿಸಿರಿ. ಎಂಬುದು ಹೇಗೆ ಕೂಡುತ್ತದೆ? ಎಂದರೆ) ಶ್ರೀ ವಿಷ್ಣುವಿನ ಗಾನದಿಂದ ಶ್ರೀ ವಾಯುವಿಗೆ ಪ್ರೀತಿಯುಂಟಾಗುತ್ತದೆ. ಅಂತೂ ಶ್ರೀ ವಿಷ್ಣುವನ್ನು ಗಾನಮಾಡಿ ಶ್ರೀ ವಾಯುವನ್ನು ಸಂತೋಷಗೊಳಿಸಿರಿ, ಎಂದು ತಾತ್ಪರ್ಯವು. (೩) (ಶ್ರೀ ವಿಷ್ಣುವಿನಲ್ಲಿ ವ್ಯಾಖ್ಯಾನ ಮಾಡುತ್ತಾರೆ.) ಶರ್ಧಾದಿ

ಪದಗಳಿಂದ ಹೇಳಲ್ಪಟ್ಟ ಶ್ರೀ ವಿಷ್ಣುವಿಗೋಸ್ಕರ, ವೇದವೆಂಬ ಬ್ರಹ್ಮವನ್ನು ಗಾನಮಾಡಿರಿ.(೪) ದೇವತ್ತಂ ಎಂಬ ವಿಶೇಷಣವು, ವೇದದಲ್ಲಿ ಹೇಗೆ ಕೊಡುತ್ತದೆ. ಎಂದರೆ) ಶ್ರೀ ವಿಷ್ಣು ವಿಷಯಕವಾದ ವೇದವು ದೇವತೆಗಳಿಂದ ಅಧ್ಯಯನ ಮಾಡಲ್ಪಡುವುದರಿಂದ ದೇವತ್ತಂ ಎನಿಸುತ್ತದೆ. ॥ ೪ ॥

ಮಂ॥ (೪೭೬) ಪ್ರಶಂಸಾ ಗೋಷ್ವಘ್ನ್ಯಂ ಕ್ರೀಳಂ ಯಚ್ಛರ್ಧೋ ಮಾರುತಂ।
ಜಂಭೇ ರಸಸ್ಯ ವಾವೃಧೇ॥ ॥ ೫ ॥ ೧೨ ॥

ಅ॥ (ತನ್ನನ್ನು ಕುರಿತೇ ಹೇಳುವುದು) (ಕಣ್ವ=ಎಲೋ ಕಣ್ವ ಋಷಿಯೇ) ಯತ್= ಯಾವ ಈ ವಾಯುವು, ರಸಸ್ಯ= ಸೋಮವನ್ನ ಜಂಭೇ=(ಜಂಭೋ ದೈತ್ಯಾಂತರೇ ದಂತೇ ಜಂಬೀರೇ ಭಕ್ಷಣೇsಪಿ ಚ। ಎಂಬ ವಿಶ್ವಕೋಶದಿಂದ, ಭಕ್ಷಿಸುವುದಕ್ಕಾಗಿ, ವವೃಧೇ= ಪ್ರಕಟ ನಾದನೋ, ಯತ್= ಯಾವಾತನು, ಶರ್ಧಃ=ಸುಖ ಪರಿಪೂರ್ಣನೋ, ಅಥವಾ ಪರಿಪೂರ್ಣ ಬಲವುಳ್ಳವನೋ, ಅಂತಹ, ಅಘ್ನ್ಯಂ= ಸಂಹರಿಸಿ ಕೊಳ್ಳಲ್ಪಡುವುದರಿಂದ ಅಘ್ನ್ಯ ಎನಿಸಿಕೊಂಡವನು, ಗೋಷು=ವೇದರೂಪ ವಚನಗಳಲ್ಲಿ ಅಥವಾ, ವೇದಾಭಿಮಾನಿಗಳಾದ ಧೇನುಗಳಲ್ಲಿ, ಕ್ರೀಳಂ= ಕ್ರೀಡಿಸುತ್ತಿರುವನೋ, ಇಂತಹ, ವೃಷಭ ರೂಪಿಯಾದ, ಮಾರುತಂ= ವಾಯುವನ್ನು, ಪ್ರಶಂಸ= ಚೆನ್ನಾಗಿ ಸ್ತುತಿಸು.ಅಥವಾ, ಮಾರುತಂ= ವೇದಾದಿ ಪ್ರಮಾಣಗಳಿಂದ ಸ್ತುತಿಸಲ್ಪಡುವುದರಿಂದ ಮಾರುತನೆನಿಸಿದ ಶ್ರೀ ವಿಷ್ಣುವನ್ನು ಚೆನ್ನಾಗಿ ಸ್ತುತಿಸು ॥ ೫ ॥

ಭಾ॥ (೧)ಅಹಂತನ್ಮತ್ವತ ಸ್ತ್ವಘ್ನ್ಯಂ ವಾಯುಂ ವೃಷಭರೂಪಿಣಂ। ಕ್ರೀಡಂತಂ ವೇದರೂಪಾಸು ಗೋಷು ತಂ ಸ್ತುಹಿ ಮಾರುತಂ॥(೨) ಮಾಭಿರ್ವೇದೈಃಸ್ತುತತ್ವೇನ ಮಾರುತೋ ವಿಷ್ಣುರೇವವಾ॥ (೩) ಭಕ್ಷಣಾರ್ಥಂ ರಸಸ್ಯಾಸೌ ವವೃಧೇ ಮರುತಾಂ ಪಿತಾ॥ ॥ ೫ ॥ ೧೨ ॥

ಅ ॥ (೧) ಸಂಹರಿಸಿಕೊಳ್ಳಲ್ಪಡದಿರುವುದರಿಂದ ಅಘ್ನ್ಯ ಎನಿಸಿಕೊಂಡವನು, ವೇದಾಭಿಮಾನಿಗಳಾದ ಗೋವುಗಳಲ್ಲಿ ಕ್ರೀಡಿಸಿಕೊಂಡಿರುವವನು, (ಗೋವುಗಳಲ್ಲಿ ಕ್ರೀಡಿಸಿಕೊಂಡಿದ್ದಾನೆನ್ನುವುದು ಅನ್ಯಥಾ ಅನುಪಪನ್ನವಾಗಿರುವುದರಿಂದ ವೃಷಭ ರೂಪಿಣಂ ಎಂದು ಹೇಳಿದ್ದು) ಅಂತಹ ವೃಷಭ ರೂಪಿಯಾದ ವಾಯುವನ್ನು ಸ್ತುತಿಸು. (೨) (ಮಾರುತನೆಂದರೆ ವಾಯುವು. ಅಥವಾ ಶ್ರೀ ವಿಷ್ಣುವೇ ಮಾರುತನೆನಿಸುತ್ತಾನೆ. ಹೇಗೆಂದರೆ) ಮಾಭಿಃ=ವೇದಗಳಿಂದ; ರುತತ್ವೇನ=(ರು ಶಬ್ದೇ.) ಸ್ತುತಿಸಲ್ಪಡುವುದರಿಂದ ಮಾರುತಃ=ಶ್ರೀ ವಾಯುವು. ಅಥವಾ ಶ್ರೀ ವಿಷ್ಣುವು (೩) ಅಥವಾ (ಮರುತಾಂ ಅಯಂ ಮಾರುತಃ=ಮರುತ್‌ಗಳಿಗೆ ಸಂಬಂಧಪಟ್ಟವನು, ಪಿತೃ ಪುತ್ರತ್ವ, ಸಂಬಂಧವು ತಥಾಚ) ೪೯ ಮರುತ್‌ಗಳ ತಂದೆಯಾದ ಮುಖ್ಯ ವಾಯುವು ಸೋಮವನ್ನು ಭಕ್ಷಿಸುವುದಕ್ಕಾಗಿ ಅಭಿವೃದ್ಧನಾದವನು. ॥ ೫ ॥ ೧೨ ॥

ಮಂ ॥ (೪೭೭) ಕೋ ವೋ ವರ್ಷಿಷ್ಠ ಆನರೋ ದಿವಶ್ಚ ಗ್ಮಶ್ಚ ಧೂತಯಃ।
ಯತ್ಸೀಮಂತಂ ನ ಧೂನುಥ ॥ ೬ ॥

ಅ ॥ ನರಃ =ಎಲೋ ಮರುತ್‌ಗಳೇ, ವಃ= ನಿಮ್ಮ ಮಧ್ಯದಲ್ಲಿ, ಕಃ=(ಕೋ ವಾಯುರಿತಿ ತಜ್ಞಿತಃ ಎಂಬ ಪ್ರಮಾಣದಿಂದ) ಪ್ರಧಾನ ವಾಯುವು, ಆ ವರ್ಷಿಷ್ಠಃ= ಚೆನ್ನಾಗಿ ಸರ್ವೋತ್ಕೃಷ್ಟನು.

(ಅಂದರೆ ಅತ್ಯಧಿಕ ವಯಸ್ಸಿನಿಂದ ಮುಖ್ಯಶಃ ಕೂಡಿದವನು. ಕಾಲದಿಂದಲೂ ಸಮಸ್ತ ವಸ್ತುಗಳಿಂದಲೂ ಗುಣಗಳಿಂದಲೂ ಜ್ಯೇಷ್ಠನೇ. ಇಂತಹ ಪ್ರಭುವು ನಿಮಗೆ ಅಧಿಪತಿಯಾಗುವುದರಿಂದ ನೀವು ಕೂಡ ಶ್ರೇಷ್ಠರೇ. ಮತ್ತು ನೀವು) ದಿವಶ್ಚ =ಸ್ವರ್ಗವನ್ನೂ ಗ್ಮಶ್ಚ =ಭೂಮಿಯನ್ನು, ಧೂತಯಃ =ಕಂಪಿಸು (ನಡುಗಿಸು)ವವರೂ ಆಗಿರುವಿರಿ. (ಹೇಗೆಂದರೆ) ಯತ್ =ಯಾವ ಕಾರಣದಿಂದ, (ಈ ಸಮಸ್ತ ಜಗತ್ತನ್ನು,) ಅಂತಂ=ಪ್ರಲಯವನ್ನು ಮಾಡುವುದಕೋಸ್ಕರವೋ ಎಂಬಂತೆ, ಸೀಮ್=ಚೆನ್ನಾಗಿ, ಧೂನುಥ= ನಡುಗಿಸುತ್ತೀರೋ, (ಆದಕಾರಣ ಸಮಸ್ತ ಸ್ವರ್ಗ ಭೂಮಿಗಳನ್ನು ನಡುಗಿಸುತ್ತೀರಿ.) (ವಿಷ್ಣು ಪಕ್ಷದಲ್ಲಿ ಆದರೂ) ಮರುತ್=ಮರುತ್‌ಗಳಲ್ಲಿರತಕ್ಕ ವಿಷ್ಣು ರೂಪ ವಿಶೇಷಗಳೇ, ವಃ=ನಿಮ್ಮ ಸಕಾಶದಿಂದ, ವರ್ಷಿಷ್ಠಃ=ಉತ್ತಮನು, ಕಃ ಭವೇತ್=ಯಾವನಾದಾನು (ಯಾವನೂ ಇಲ್ಲವೇ ಇಲ್ಲ.) ನೀನು ಎಂತಹ ಶ್ರೇಷ್ಠನೋ ಅಂತಹ ನಿನಗೆ ಸಮಾನಿಕನಾಗಲೀ, ಯಾವನು ಇದ್ದಾನು? ಯಾವನೂ ಇಲ್ಲ. ॥ ೬ ॥

ಭಾ ॥ (1) ಆಸಮಂತಾದುತ್ತಮಃ ಕಃ ಪ್ರಧಾನೋ ವಾಯುರೇವ ವಃ ॥ (೨) ವಿಷ್ಣೋರಾಕ್ಷೇಪ ಏವ ಸ್ಯಾತ್ಕೋ ವಾಮಾಸ್ತಿ ಪರಸ್ತ್ವಿತಿ ॥ (೩) ತ್ವತ್ಪರ್ಯಂತಂ ಚ ವರ್ಷಿಷ್ಠಃ ಕೋ ಭವೇದಿತಿ ವಾ ಭವೇತ್ ॥ (೪) ಆಧೂತಯೋ ದಿವೋ ಗ್ಮಶ್ಚ ಭೂಮ್ಯಾ ಇತ್ಯನ್ವಯೋ ಭವೇತ್ ॥ (೫) ತಸ್ಮಾದಂತಂ ಪ್ರತೀವೈತಜ್ಜಗತ್ಸಂಧೂನುಥಾಖಿಲಂ ॥ ೬ ॥

ಅ ॥ (೧) (ಕಃ ವಃ ವರ್ಷಿಷ್ಠಃ ಆ ಎಂಬ ಆದಿಯ ನಾಲ್ಕು ಪದಗಳನ್ನು ಪ್ರಧಾನ ವಾಯು ವಿಷಯದಲ್ಲಿ ವ್ಯಾಖ್ಯಾನ ಮಾಡುತ್ತಾರೆ) ಆ=ಸಮಂತಾತ್=ಸರ್ವರಿಗಿಂತಲೂ, ವರ್ಷಿಷ್ಠಃ=ಉತ್ತಮನು. ಕಃ= ಕಃ ಪ್ರಜಾಪ್ರತಿರುದ್ದಿಷ್ಟಃ ಕೋ ವಾಯುರಿತಿ ಶಬ್ದಿತಃ ॥ ಎಂಬ ವಚನದಿಂದ ಪ್ರಧಾನ ವಾಯುವೇ ಎಂದರ್ಥವು. ವಃ=ನಿಮ್ಮ ಮಧ್ಯದಲ್ಲಿ. (೨) ಸರ್ವೋತ್ತಮನಾದ ಶ್ರೀವಿಷ್ಣುವಿನಲ್ಲಿ ಇದನ್ನು ಹೇಗೆ ವ್ಯಾಖ್ಯಾನ ಮಾಡುವುದು ಎಂದರೆ) ಶ್ರೀವಿಷ್ಣುವನ್ನು ವಿವಕ್ಷಾ ಮಾಡಿದರೆ ಕಃ ಎಂಬ ಶಬ್ದವು ಆಕ್ಷೇಪವೇ ಆಗುವದು. (ಅದನ್ನೇ ಸ್ಪಷ್ಟೀಕರಿಸುತ್ತಾರೆ.) ಮರುತ್‌ಗಳಲ್ಲಿರತಕ್ಕ ವಿಷ್ಣುರೂಪ ವಿಶೇಷಗಳೇ ನಿಮ್ಮ ಸಕಾಶದಿಂದ, ಉತ್ತಮನು ಯಾವನಿದ್ದಾನೆ. (ಯಾವನೊಬ್ಬನೂ ಇಲ್ಲವೇ ಇಲ್ಲ, (೩) (ನಿಮಗಿಂತ ಉತ್ತಮನು ಇಲ್ಲವೆಂದು ಮಾತ್ರವಲ್ಲ. ನಿಮಗೆ ಸಮಾನಿಕನೂ ಇಲ್ಲವೇ ಇಲ್ಲವೆನ್ನುತ್ತಾರೆ) ನಿಮ್ಮ ಪರ್ಯಂತ ಶ್ರೇಷ್ಠನು ಯಾವನು ಇರುವನು? ಅಂದರೆ ನೀನು ಎಂತಹ ಶ್ರೇಷ್ಠನೋ ಅಷ್ಟು ಶ್ರೇಷ್ಠನು ಅಂದರೆ ನಿನಗೆ ಸಮಾನಿಕನು ಯಾವನು? ಇರುವನು, ಅಂದರೆ ಸಮಾನಿಕನೂ ಇಲ್ಲ, ಉತ್ತಮನು ಸುತರಾಂ ಇಲ್ಲವೇ ಇಲ್ಲ ಎಂದೂ ಅರ್ಥ ಆಗುವುದು. (೪) ವಾಯು ಪಕ್ಷದಲ್ಲಿ ಆಜಗೆ ವರ್ಷಿಷ್ಠ ಶಬ್ದದಿಂದ ಅನ್ವಯವನ್ನು ಮಾಡಿದ್ದಾರೆ. ಶ್ರೀವಿಷ್ಣು ಪಕ್ಷದಲ್ಲಿ ಹಾಗೆ ಅನ್ವಯ ಮಾಡಲಾಗುವುದಿಲ್ಲ. ಏಕೆಂದರೆ ವಿಷ್ಣು ರೂಪ ವಿಶೇಷಗಳೇ ನಿಮಗಿಂತ ಚೆನ್ನಾಗಿ ಸಮಸ್ತ ಗುಣಾದಿಗಳಿಂದಲೂ ಶ್ರೇಷ್ಠನು. ಯಾವನು? ಇರುವನು, ಎಂದು ಆಕ್ಷೇಪಿಸಿ ವ್ಯಾಖ್ಯಾನ ಮಾಡಿದರೆ ಯತ್ಕಿಂಚಿತ್ ಗುಣಾದಿಗಳಿಂದ ಶ್ರೇಷ್ಠನು ಇರಬಹುದು ಎಂದರ್ಥವು ಬರಬೇಕಾಗುವುದು. ಅಂತಹ ಅರ್ಥವು ಬರಬಾರದೆಂಬ ಉದ್ದಿಶ್ಯ ಆ ಎಂಬುವುದಕ್ಕೆ ಧೂತಯಃ ಎನ್ನುವುದರಿಂದ ಅನ್ವಯವು ಎನ್ನುತ್ತಾರೆ) ಸ್ವರ್ಗವನ್ನೂ ಗ್ಮಶ್ಚ= ಭೂಮಿಯನ್ನು ಕೂಡ, ಆ ಧೂತಯಃ=ಚೆನ್ನಾಗಿ ನಡುಗಿಸಿ ಕೊಂಡಿರುವಿರಿ, ಎಂದು ಆ ಎನ್ನುವುದಕ್ಕೆ ಧೂತಯಃ ಎನ್ನುವುದರಿಂದ ಅನ್ವಯವು ಆಗುವದು. (೫) ಉತ್ತರಾರ್ಧವನ್ನು ವ್ಯಾಖ್ಯಾನ ಮಾಡುತ್ತಾರೆ.) ಆ ಕಾರಣದಿಂದ ಈ ಸಮಸ್ತ ಜಗತ್ತನ್ನು ನಾಶಮಾಡುವಂತೆ ಚೆನ್ನಾಗಿ ನಡುಗಿಸುತ್ತೀರಿ. ॥ ೬ ॥

ಋ (೪೪೮) ನಿ ವೋ ಯಾಮಾಯ ಮಾನುಷೋ ದಧ್ರ ಉಗ್ರಾಯ ಮನ್ಯವೇ । ಜಿಹೀತ ಪರ್ವತೋ ಗಿರಿಃ ॥ ೭ ॥

ಅ ‖ (ಎಲೋ ಮರುತ್‌ಗಳೆ,) ವಃ=ನಿಮಗೆ ಯಾಮಾಯ =(ಯಾಂತ್ಯಸ್ಮಿನ್ನಿತಿ ಎಂಬ ವ್ಯುತ್ಪತ್ತಿಯಿಂದ) ಮಾರ್ಗಕ್ಕೋಸ್ಕರ. ಉಗ್ರಾಯ ಮನ್ಯವೇ ಚ= ಕ್ರೂರವಾದ ಕೋಪಕ್ಕೋಸ್ಕರವೂ, ಮಾನುಷಃ= ಮನುಷ್ಯರು, ನಿದಧ್ರೇ =ನೀಚರಿಂದ ಧರಿಸಲ್ಪಟ್ಟರು. (ಅಂದರೆ ನೀಚರಾದ ಅಸುರರು ಮರುತ್‌ಗಳಾದ ನಿಮಗೆ ವಿರೋಧಿಗಳಾಗಿರುದುದರಿಂದ ನಿಮ್ಮ ಮಾರ್ಗವನ್ನು ಹೊಂದುವುದಕ್ಕಾಗಿಯೂ ನಿಮಗೆ ಕೋಪವನ್ನು ಹುಟ್ಟಿಸುವುದಕ್ಕಾಗಿಯೂ ಒಬ್ಬ ಮನುಷ್ಯನನ್ನು ಸ್ವೀಕರಿಸಿರುವರು.) ನಿಮ್ಮ ಮಾರ್ಗದಲ್ಲಿ ಇರಲಿಕ್ಕೂ, ನಿಮ್ಮ ಕೋಪವನ್ನು ತಿರಸ್ಕರಿಸಲಿಕ್ಕೂ ಅತ್ಯಲ್ಪನಾದುದರಿಂದ ಮನುಷ್ಯನು ಸಮರ್ಥನಾಗಲಾರನು.) (ಹೇಗೆಂದರೆ) ಪರ್ವತಃ= (ಪರ್ವಃಸ್ಯಾದುತ್ಸವೇ ಗ್ರಂಥೌ ಎಂಬ ವಿಶ್ವಕೋಶದಿಂದ) ಬಹುಪರ್ವಗಳಿಂದ ಕೂಡಿದ (ಅಂದರೆ ಅತ್ಯುಚ್ಚವಾದ) ಗಿರಿಃ =ಎಂತಹ ಬೆಟ್ಟವೂ ಕೂಡ, (ನಿಮ್ಮ ಮಾರ್ಗದಲ್ಲಿದ್ದುದಾಗಿ) (ಜಿಹೀತಃ =(ಓಹಾಕ್ ತ್ಯಾಗೇ) ಮೂಲವನ್ನೇ ಬಿಟ್ಟಿದೆ. (ಅಂದರೆ ಉನ್ಮೂಲವಾಯ್ತು. ಮೂಲವೇ ಇಲ್ಲವೆಂದಾಯ್ತು. ‖ ೭ ‖

ಭಾ (೧) ನೀಚೈರ್ಧೃತೋ ಮಾನುಷೋ ವೋ ಮಾರ್ಗಾಯೋಗ್ರಾಯ ಮನ್ಯವೇ ‖ (೨)
ನ ಪೂರ್ಯತೇ ಚ ಕೋಪಾಯ ಸ್ವಲ್ಪತ್ವಾನ್ಮಾನುಷಃ ಕ್ವಚಿತ್ ‖ (೩) ಬಹು
ಪರ್ವಯುತೋಽತ್ಯುಚ್ಚಗಿರಿರ್ಮಾರ್ಗೇ ಹಿ ವೋಽತ್ಯಜತ್ ‖ ಮೂಲಂ ‖ ೭ ‖

ಅ ‖ (೧) ಮರುತ್‌ಗಳಾದ ನಿಮ್ಮ ಮಾರ್ಗಕೋಸ್ಕರವೂ, ಕ್ರೂರವಾದ ಕೋಪಕ್ಕೋಸ್ಕರವೂ, ಕೂಡ ಮನುಷ್ಯನು, ನೀಚರಾದ ಅಸುರರಿಂದ ಧರಿಸಲ್ಪಟ್ಟನು. (೨) ಅಂದರೆ-ನಿಮ್ಮ ಕೋಪವನ್ನು ತಿರಸ್ಕರಿಸುವುದಕ್ಕಾಗಿಯೂ, ನಿಮ್ಮ ಮಾರ್ಗದಲ್ಲಿರಲಿಕ್ಕೂ, ಅತ್ಯಲ್ಪನಾದ ಪ್ರಯುಕ್ತ ಎಲ್ಲಿಯೂ ಮನುಷ್ಯನು ಶಕ್ತನಾಗಲಾರನು. (೩) ಬಹು ಪರ್ವರೂಪ ಗ್ರಂಥಿಗಳಿಂದ ಕೂಡಿದ ಅಂದರೆ ಬಹು ಎತ್ತರವಾದ ಪರ್ವತವು ನಿಮ್ಮ ಮಾರ್ಗದಲ್ಲಿರತಕ್ಕುದಾಗಿ ಮೂಲವನ್ನೇ ಬಿಟ್ಟು ಬಿಟ್ಟಿದೆ. ಮೂಲವೇ ಇಲ್ಲವೆಂದಾಯ್ತು. ‖ ೭ ‖

ಋ ‖ (೪೪೯) ಯೇಷಾಮಜ್ಮೇಷು ಪೃಥಿವೀ ಜುಜುರ್ವಾ ಇವ ವಿಶ್ಪತಿಃ।
ಭಿಯಾ ಯಾಮೇಷು ರೇಜತೇ ‖ ೮ ‖

ಅ ‖ ಯೇಷಾಂ=ಯಾವ ಮರುತ್‌ಗಳಿಗೆ ಅಜ್ಮೇಷು=ಪೃಥಿವೀ ಸಂಬಂಧಿಗಳಾಗದೆ ಇದ್ದ ಅಂತರಿಕ್ಷಾಶ್ರಿತಗಳಾದ, ಯಾಮೇಷು=ಮಾರ್ಗಗಳು ಇರುತ್ತಿರಲು (ಅಂದರೆ ಆ ಮಾರ್ಗಗಳಿಂದ ಮರುತ್‌ಗಳು ಹೋಗುತ್ತಿರಲು) ಪೃಥಿವೀ=ಭೂ ದೇವಿಯು ಭಿಯಾ=ಬಹು ಭೀತಿಯಿಂದ, ಜುಜುರ್ವಾನಿವ ವಿಶ್ಪತಿಃ= (ಜ್ಯಾವಯೋಹಾನೌ) ಜೀರ್ಣನಾದ ರಾಜನಂತೆ, ಹೇಗೆ ದುರ್ಬಲನಾದ ರಾಜನು ಪರರಿಂದ ಭಯಪಟ್ಟವನಾಗಿ ನಡುಗುತ್ತಾನೋ, ಹಾಗೆಯೇ, ರೇಜತೇ=(ರೇಜ್ಋ ದೀಪ್ತೌ,ಅಥವಾ ರೇಜ್ಋ ಭಯ ಕಂಪನಯೋಃ) ನಡುಗುತ್ತದೆ. ‖ ೮ ‖

ಭಾ ‖ ಯೇಷಾಂ ತಥಾಽಜ್ಮೇಷು ಮಾರ್ಗೇಷ್ವತಿ ಭಿಯಾ ಧರಾ। ಕಂಪತೇ ಜೀರ್ಣರಾಜೇವ ‖ ೮ ‖

ಅ ‖ ಯಾವ ಮರುತ್‌ಗಳು ಅಂತರಿಕ್ಷಾಶ್ರಿತಗಳಾದ ಮಾರ್ಗಗಳಿಂದ ಹೋಗುತ್ತಿರಲು ಭೂದೇವಿಯು ದುರ್ಬಲ ರಾಜನು ಇತರರಿಗೆ ಹೆದರಿ ಹೇಗೆ ನಡುಗುತ್ತಾನೋ, ಹಾಗೆಯೇ ಹೆದರಿಕೆಯಿಂದ ನಡುಗುತ್ತದೆ. ‖ ೮ ‖

ಋ ॥ (೪೫೦) ಸ್ಥಿರಂ ಹಿ ಜಾನಮೇಷಾಂ ವಯೋ ಮಾತುರ್ನಿರೇತವೇ ।
ಯತ್ಸೀಮನು ದ್ವಿತಾ ಶವಃ ॥ ೯ ॥

ಅ ॥ (ಎಲೋ ಮರುತ್‍ಗಳೇ.) ಏಷಾಂ=ಹಿಂದೆ ಹೇಳಿದ ಗುಣಗಳುಳ್ಳ ನಿಮ್ಮ, ಜಾನಂ=(ಜನೀ ಪ್ರಾದುರ್ಭಾವೇ-) ಜನನವು ಸ್ಥಿರಂ ಹಿ=ಸ್ಥಿರವಾಗಿರುವುದರಿಂದ ಉತ್ತಮವಾಗಿದೆ. ಹಿ=ಮರುತ್‍ಗಳು ವಾಯುದೇವರಿಂದ ಭಾರತೀದೇವಿಯಲ್ಲಿಹುಟ್ಟಿರುವುದರಿಂದ ವಿಶಿಷ್ಟವಾದ ಮಾತಾಪಿತೃಗಳಸಂಬಂಧವಿರುವುದರಿಂದ ಉತ್ತಮ ಜನ್ಮವು (ಮತ್ತು ಆ ಮರುತ್‍ಗಳು, ನಿರೇತವೇ=(ನಿರ್ ಪೂರ್ವಾತ್ ಇಣ್ ಗತೌ ಹೊರಡುವುದಕ್ಕಾಗಿ, (ಹುಟ್ಟಿದ ಉತ್ತರ ಕ್ಷಣದಲ್ಲಿಯೇ, ಅಂದರೆ ಸಮಸ್ತ ಲೋಕಗಳನ್ನು ಸಂಚರಿಸುವುದಕ್ಕಾಗಿ) ಮಾತುಃ=ತಾಯಿಯಾದ ಭಾರತೀಯ ಪ್ರಸಾದದಿಂದ, ವಯಃ=ವಯೋ ವಿಶೇಷವಾದ ಯೌವನವನ್ನು, (ಹೊಂದಿರುತ್ತಾರೆ.) (ಅಂದರೆ ಜನ್ಮಾರಭ್ಯ ಅವರು ತರುಣರೆಂದೇ ಪ್ರಸಿದ್ಧರು.) ಯತ್=ಯಾವ ಕಾರಣದಿಂದ, ಏಷಾಂ= ಈ ಮರುತ್‍ಗಳ, ಅನು= ತಾಯಿಯ ಪ್ರಸಾದವನ್ನನುಸರಿಸಿ, (ತಾಯಿಯ ಪ್ರಸಾದದಿಂದಲೇ) ಸೀಮ್=ಚೆನ್ನಾಗಿ, ದ್ವಿತಾ ಶವಃ=ದ್ವಿತ್ವದಿಂದ ಕೂಡಿದ, ಅಂದರೆ ಎರಡು ವಿಧವಾದ ಪ್ರಸಿದ್ಧವಾದ ಪ್ರಜ್ಞಾಬಲವೂ ಬಾಹುಬಲವೂ ಇದೆಯೋ, ತಸ್ಮಾತ್=ಆದ ಕಾರಣ, ಪ್ರಜ್ಞಾಬಲವು ವ್ಯಾಖ್ಯಾನ ಮಾಡಲಿಕ್ಕೂ ಬಾಹುಬಲವು ದಿಗ್ವಿಜಯಕ್ಕೂ ಹೇತುವೆಂದು ಉಕ್ತವಾಗಿದೆ. ॥ ೯ ॥

ಭಾ॥ (೧) ಸ್ಥಿರಂ ವೋ ಜನನಂ (೨) ಯತಃ। ಜಾತಾ ವಾಯೋರ್ದಿವಿ (೩) ವಯೋ ಮಾತುಃ ಪ್ರಾಪ್ತಾ ನಿರೇತವೇ । ನಿರ್ಗಂತುಂ ತತ್ಕ್ಷಣೇ ನೈವ ಸರ್ವಲೋಕಾಟನಾಯ ಹಿ ॥ ಯೌವನಂ (೪) ತೇ ಯುವಾನೋ ಹಿ ನಿಸರ್ಗಾತ್ಸ್ವಾತುರಾಜನೇಃ ॥ (೫) ಮಾತುರೇವ ಪ್ರಸಾದೇವ ಸಮ್ಯಕ್ತದ್ದ್ವಿವಿಧಂ ಬಲಂ । ಪ್ರಜ್ಞಾ ಬಾಹು ಬಲಂ ಯಸ್ಮಾತ್ತಸ್ಮಾತ್ ॥ ೯ ॥

ಅ ॥ (೧) ಹಿಂದೆ ಹೇಳಿದ ಗುಣಗಳುಳ್ಳ ಮರುತ್‍ಗಳಾದ ನಿಮ್ಮ ಜನನವು ಸ್ಥಿರವಾಗಿರುವುದರಿಂದ ಉತ್ತಮವಾಗಿದೆ. (೨) (ಹೇಗೆಂದರೆ) ಯಾವ ಕಾರಣದಿಂದ (ಮರುತ್‍ಗಳು) ಪ್ರಧಾನ ವಾಯುದೇವರ ಜೊತೆಯಂಗ ಕ್ರೀಡಾದಿ ಗುಣ ವಿಶಿಷ್ಟಳಾದ ಭಾರತಿಯಲ್ಲಿ ಹುಟ್ಟುತ್ತಾರೋ, ಆದ ಕಾರಣ ವಿಶಿಷ್ಟ ಮಾತಾಪಿತೃಸಂಬಂಧದಿಂದ ಇವರ ಜನನವು ಉತ್ತಮವೇ, ಎಂದು ಶ್ರುತಿಯಲ್ಲಿನ ಹಿ ಶಬ್ದಾರ್ಥವು (೩) (ಆ ಮರುತ್‍ಗಳು ನಿರೇತವೇ=ತತ್ಕ್ಷಣದಲ್ಲಿ ಹೊರಡುವುದಕ್ಕಾಗಿ ಅಂದರೆ ಹುಟ್ಟಿದ ಉತ್ತರ ಕ್ಷಣದಲ್ಲಿಯೇ, ಸಮಸ್ತ ಲೋಕಗಳ ಸಂಚಾರಕ್ಕಾಗಿ, ತಾಯಿಯಾದ ಭಾರತಿಯ ಪ್ರಸಾದದಿಂದ ವಯೋವಿಶೇಷವಾದ ತಾರುಣ್ಯವನ್ನು ಹೊಂದಿರುತ್ತಾರೆ (೪) (ತಾರುಣ್ಯ ಪ್ರಾಪ್ತಿಯು ಸರ್ವಸಾಧಾರಣವಾದುದರಿಂದ ಅದನ್ನು ಹೇಳಬೇಕಾಗಿಲ್ಲ. ಎಂದರೆ) ಆ ಮರುತ್‍ಗಳು ತಾಯಿಯಾದ ಭಾರತಿಯ ಪ್ರಸಾದದಿಂದ ಸ್ವಾಭಾವಿಕವಾಗಿಯೇ, ಅಂದರೆ ಹುಟ್ಟಿದಂದಿನಿಂದ ತರುಣರೇ ಆಗಿರುತ್ತಾರೆ (೫) ಯಾವ ಕಾರಣದಿಂದ ತಾಯಿಯ ಅನುಗ್ರಹದಿಂದಲೇ, ಚೆನ್ನಾಗಿ ಎರಡು ವಿಧವಾದ ಬಲವು ಅಂದರೆ ಪ್ರಜ್ಞಾಬಲವು ಬಾಹುಬಲವೂ ಇದೆಯೋ, ಆದಕಾರಣ (ಪ್ರಜ್ಞಾಬಲವು ವ್ಯಾಖ್ಯಾನ ಮಾಡಲಿಕ್ಕೂ ಬಾಹುಬಲವು ದಿಗ್ವಿಜಯಕ್ಕೂ ಹೇತುವು.) ॥ ೯ ॥

ಋ॥ (೪೫೧) ಉದು ತ್ಯೇ ಸೂನವೋ ಗಿರಃ ಕಾಷ್ಠಾ ಅಜ್ಮೇಷ್ವತ್ನತ । ವಾಶ್ರಾ
ಅಭಿಜ್ಞು ಯಾತವೇ ॥ ೧೦ ॥ ೧೩ ॥

ಅ॥ ಗಿರಃ=ಭಾರತೀದೇವಿಯ, ಸೂನವಃ=ಪುತ್ರರು, ವಾಶ್ರಾಃ=(ವಾಶೃಶಬ್ದೇ) ವ್ಯಾಖ್ಯಾನ ಮಾಡ ತಕ್ಕ ಸ್ವಭಾವವುಳ್ಳವರು. ತ್ಯೇ=ಪ್ರಸಿದ್ಧರಾದ ಮರುತ್‌ಗಳು ಅಜ್ಮೇಷು=ಅಮಾರ್ಗಗಳಲ್ಲಿ ಅಂತರಿಕ್ಷಾಶ್ರಿತ ಮಾರ್ಗಗಳಲ್ಲಿ (ಆಕಾಶದಲ್ಲಿ ಸಂಚರಿಸುವವರೇ ಆಗಿ) ಕಾಷ್ಠಾಃ=ದಿಕ್ಕುಗಳನ್ನು ಉತ್ ಅತ್ನತ=(ಅತಸಾತತ್ಯಗಮನೇ) ಹೊಂದಿರುವರು. (ಏಕೆಂದರೆ) ಯಾವ ಕಾರಣದಿಂದ ದಿಕ್ಕುಗಳನ್ನೇ ಹೊಂದಿರುವರೋ, ಆದಕಾರಣ ಅಭಿಜ್ಞು=(ಅಭಿಪೂರ್ವಕಾತ್ ಜನೀಪ್ರಾದುರ್ಭಾವೇ.) ಉತ್ತಮವಾದ ಜನ್ಮವನ್ನನುಸರಿಸಿ, ಉತ್ತಮ ಜನ್ಮಾನುಸಾರವಾಗಿ ಯಾತವೇ=(ಯಾ ಪ್ರಾಪಣೇ) ಗುಣಗಳನ್ನು ಹೊಂದುವುದಕ್ಕಾಗಿ ಉದತ್ನತ=ಹೊಂದಿದರು. (ಭಾರತೀ ಪುತ್ರರಾದ ಮರುತ್‌ಗಳು ವ್ಯಾಖ್ಯಾನಮಾಡಲಿಕ್ಕೆ ಉಪಯುಕ್ತವಾದ ಸಾಮರ್ಥ್ಯದಿಂದ ಕೂಡಿದವರು. ಅಂತಹವರು ಲೋಕಗಳನ್ನುದ್ಧರಿಸುವುದಕ್ಕಾಗಿ ದಿಗ್ವಿಜಯವನ್ನು ಮಾಡದೆ ಇದ್ದರೆ ಅವರಿಗೆ ಉತ್ತಮ ಜನ್ಮಪ್ರಾಪ್ತಿಯು ಹೇಗೆ ತಾನೇ ಸಫಲವಾಗುವುದು? ಮಹಾಗುಣವುಳ್ಳವರು ಹೇಗೆ ತಾನೇ ಆಗುವರು? ಇಂತಹುದಕ್ಕೆ ಸಾಮರ್ಥ್ಯವಿದೆ ಎಂಬುವುದು ಹಿಂದಿನ ಋಕ್ಕಿನಲ್ಲಿ ಹೇಳಿದೆ.) ॥ ೧೦ ॥ ೦೩ ॥

ಭಾ॥ (೧) ದಿಶ ಉದಾಪಿರೇ। ತೇ ಗಿರಃ ಸೂನವೋ ದೇವ್ಯಾ ವಾಶ್ರಾ ವಚನಶೀಲಿನಃ। ಅಭಿ
ಜನ್ಮಾನುಸಾರೇಣ ಗುಣಾನ್ಯಾತುಮುದಾಪಿರೇ ॥ ೧೦ ॥ ೧೩ ॥

ಅ॥ (೧) ಭಾರತೀ ದೇವಿಯ ಪುತ್ರರಾದ, ವಾಶ್ರಾಃ=ಶಾಸ್ತ್ರ ವ್ಯಾಖ್ಯಾನ ಮಾಡುವ ಸ್ವಭಾವವುಳ್ಳ ಆ ಮರುತ್‌ಗಳು (ಖೇಚರರಾಗಿ) ದಿಕ್ಕುಗಳನ್ನು ಹೊಂದಿರುತ್ತಾರೆ. ಉತ್ತಮ ಜನ್ಮಾನುಸಾರವಾಗಿ ಗುಣಗಳನ್ನೂ ಹೊಂದುವುದಕ್ಕಾಗಿ ಹೊಂದಿರುತ್ತಾರೆ. ॥ ೧೦ ॥ ೧೩ ॥

ಋ॥ (೪೫೭) ತ್ಯಂ ಚಿದ್ಘಾ ದೀರ್ಘಂ ಪೃಥುಂ ಮಿಹೋ ನಪಾತಮಮೃಧ್ರಂ

ಪ್ರಚ್ಯಾವಯಂತಿ ಯಾಮಭಿಃ ॥ ೧೧ ॥

ಅ॥ (ಮರುತಃ=ಮರುತ್‌ಗಳು) ದೀರ್ಘಂ= ಬಹು ಎತ್ತರವಾದ ಪೃಥುಂ= ಬಹು ವಿಸ್ತಾರವಾದ ಅತಿ ಸ್ಥೂಲವಾದ ಅಡ್ಡವಾಗಿ ವ್ಯಾಪಿಸಿಕೊಂಡಿರುವ ಅಮೃಧ್ರಂ= ಮೃಧು ಉಂದೇ, ಉಂದೀಕ್ಲೇದನೇ) ಒದ್ದೆಯಾಗದಿರುವುದರಿಂದ ಸಹಿಸಲತಕ್ಕವಾದ ಮಿಹಃ=(ಮಿಹ ಸೇಚನೇ) ಅಭೀಷ್ಟಸೇಚಕನಾದ ಶ್ರೀಹರಿಯ ಮಗಳಾದ ಧರಾದೇವಿಯಿಂದ ಹುಟ್ಟಿದ ಪರ್ವತಗಳ ಸಮುದಾಯವನ್ನು. ನಪಾತಂ=ನಪ್ತೃಭೂತವಾದ, (ಪೌತ್ರಭೂತವಾದ ತ್ಯಂಚಿತ್=ಪ್ರಸಿದ್ಧ ಮೇರ್ವಾದಿಗಳನ್ನೂ ಯಾಮಭಿಃ=(ಯಾ ಪ್ರಾಪಣೇ) ಗಮನಗಳಿಂದ, ಪ್ರಚ್ಯಾವಯಂತಿ= ತಮ್ಮ ಸ್ಥಾನಕ್ಕಿಂತ ಚ್ಯುತಗಳನ್ನಾಗಿ ಮಾಡುತ್ತಾರೆ. ಸ್ಥಾನಭ್ರಷ್ಟಗಳನ್ನಾಗಿ ಮಾಡುತ್ತವೆ ॥ ೧೧ ॥

ಭಾ॥ (೧) ಪದ್ಭ್ಯಾಂ ಭೂಮಿರಿತಿ ಶ್ರುತ್ಯಾ ಸುತಾ ವಿಷ್ಣೋರ್ವಸುಂಧರಾ। (೨) ತತ್ಸುತತ್ವಾತ್ಪರ್ವ
ತಾ ವಿಷ್ಣೋರ್ನಪ್ತಾರಃ (೩) ಸೇಚನಾದ್ಧಿ ಮಿಟ್॥ ಹರಿ (೪) ಸ್ತಮಪಿ ಮೇರ್ವಾದಿಂ
ಮರುತಶ್ಚ್ಯಾವಯಂತಿ ಹಿ॥ ಅಮೃಧ್ರಮಪ್ರಧೃಷ್ಯತ್ವಾತ್॥

ಅ॥ (೧) ಪದ್ಭ್ಯಾಂ ಭೂಮಿರಜಾಯತ= ಪಾದಗಳಿಂದ ಭೂಮಿಯು ಹುಟ್ಟಿತು. ಎಂಬ ಶ್ರುತಿಯಿಂದ ಭೂದೇವಿಯು ಶ್ರೀವಿಷ್ಣುವಿನ ಪುತ್ರಿಯು, (೨) ಭೂದೇವಿಯಿಂದ ಹುಟ್ಟಿರುವುದರಿಂದ ಪರ್ವತಗಳು ಶ್ರೀವಿಷ್ಣುವಿಗೆ ನಪ್ತೃಗಳ (ಪುತ್ರೀಪುತ್ರಗಳು.) (೩)ಶ್ರೀಹರಿಯು ಅಭೀಷ್ಟವನ್ನು ಸೇಚಿಸುವುದರಿಂದ ಮಿಟ್ ಎನಿಸುತ್ತಾನೆ,

(೪) ಸಹಿಸಲಶಕ್ಯವಾದುದರಿಂದ ಅಮೃಧ್ರಂ ಎನಿಸಿಕೊಂಡ ಆ ಮೇರುಪರ್ವತ ಮೊದಲಾದುದನ್ನು ಮರುತ್ ಗಳು ಸ್ಥಾನಭ್ರಷ್ಟವನ್ನಾಗಿ ಮಾಡುತ್ತವೆ. ॥ ೧೧ ॥

ಋ॥ (೪೫೩) ಮರುತೋ ಯದ್ಧ ವೋ ಬಲಂ ಜನಾಁ ಅಚುಚ್ಯವೀತನ।
ಗಿರೀಁರಚುಚ್ಯವೀತನ ॥ ೧೨ ॥

ಅ॥ ಮರುತಃ= ಎಲೋ ಮರುತ್‌ಗಳೇ ಯತ್= ಯಾವ ಕಾರಣದಿಂದ, ವಃ= ನಿಮಗೆ, ಬಲಂ= ಸಂಪೂರ್ಣ ಬಲವಿದೆಯೋ, (ಆ ಕಾರಣದಿಂದ) (ನೀವು) ಜನಾನ್= ಜನರನ್ನು, ಅಚುಚ್ಯವೀತನ= (ಚ್ಯುಙ ಗತೌ) ಗಿರೀನ್= ಅಚುಚ್ಯವೀತನ= ಪರ್ವತಗಳನ್ನೂ ಕೂಡ ತಮ್ಮ ಸ್ಥಾನಕ್ಕಿಂತ ಚ್ಯುತಗಳನ್ನಾಗಿ ಮಾಡಿರುವಿರಿ. (ಜನರನ್ನೂ ಪರ್ವತಗಳನ್ನೂ ಕೂಡ ತಂತಮ್ಮ ಸ್ಥಾನಕ್ಕಿಂತ ತಪ್ಪಿಸಲಿಕ್ಕೆ ಶಕ್ತರಾಗಿರುತ್ತೀರಿ. (ಚೆನ್ನಾಗಿ ಶಕ್ತಿಯಿದೆ ಎಂದು ತೋರಿಸುವುದಕ್ಕಾಗಿ ೨ ಸಲ ಕ್ರಿಯೆಯನ್ನು ಹೇಳಿದ್ದು.) ॥ ೧೨ ॥

ಭಾ॥ (೧) ಬಲಂ ಯದಪಿ ವೋಽಖಿಲಂ। (೨) ಜನಾಂಶ್ಚ್ಯಾವಯಿತುಂ ಸ್ಥಾನಾಚ್ಛಕ್ತಾಃ ಸನ್ಯ
ಗ್ಗಿರೀನಪಿ ॥ ೧೨ ॥

ಅ॥ (೧) ಯಾವ ಕಾರಣದಿಂದ ನಿಮಗೆ ಸಮಸ್ತಬಲವೂ ಇದೆಯೋ, (೨) ಆದಕಾರಣ ನೀವು ಜನರನ್ನೂ ಪರ್ವತಗಳನ್ನೂ ತಂತಮ್ಮ ಸ್ಥಾನಕ್ಕಿಂತ ಚ್ಯುತಗಳನ್ನಾಗಿ ಮಾಡುವಿರಿ.

ವಿ ॥ (ಪರ್ವತಾದಿಗಳು ತಂತಮ್ಮ ಸ್ಥಾನಗಳಲ್ಲಿಯೇ ಇರುವುದರಿಂದ ತಪ್ಪಿಸುವಿರಿ ಎನ್ನುವುದು ಪ್ರಮಾಣ ವಿರುದ್ಧವೆಂದರೆ ಪರ್ವತಾದಿಗಳನ್ನು ತಮ್ಮ ಸ್ಥಾನಕ್ಕಿಂತ ತಪ್ಪಿಸಲಿಕ್ಕೆ ಶಕ್ತರಾಗುತ್ತೀರಿ, ಎಂದು ತಾತ್ಪರ್ಯವು. (2) ಚೆನ್ನಾಗಿ ಅಂತಹ ಸಾಮರ್ಥ್ಯವಿದೆ ಎಂದು ತೋರಿಸುವುದಕ್ಕಾಗಿ ಅಚುಚ್ಯವೀತನ ಎಂದು ೨ ಸಲ ಕ್ರಿಯೆಯನ್ನು ಹೇಳಿದ್ದು ॥ ೧೨ ॥

ಋ ॥ (೪೫೪) ಯದ್ಧ ಯಾಂತಿ ಮರುತಃ ಸಂ ಹ ಬ್ರುವತೇಽಧ್ವನ್ನಾ।
ಶೃಣೋತಿ ಕಶ್ಚಿದೇಷಾಂ ॥ ॥ ೧೩ ॥

ಅ ॥ ಮರುತಃ=ಮರುತ್‌ಗಳು, ಯತ್= ಯಾವಾಗ, ಯಾಂತಿ= ಹೋಗುತ್ತಾರೋ, (ಆಗ) ಏಷಾಂ = ಈ ಮರುತ್‌ಗಳ ಮಧ್ಯದಲ್ಲಿ, ಕಶ್ಚಿತ್= ಕೆಲವರು, ಅಧ್ವನ್= ಮಾರ್ಗದಲ್ಲಿ, ಸಮ್‌ಬ್ರುವತೇ= ಶಾಸ್ತ್ರವಿಷಯಕ ಸಂವಾದವನ್ನು ಮಾಡುತ್ತಾರೆ. ಪ್ರಸಿದ್ಧ ಕಶ್ಚಿತ್=ಕೆಲವರು, ಆ=ಚೆನ್ನಾಗಿ, ಶೃಣೋತಿ ಹ= ಕೇಳುತ್ತಿರುತ್ತಾರೆ. (ಸರ್ವದಾ ಶಾಸ್ತ್ರಾಭ್ಯಾಸಗಳಲ್ಲಿಯೇ ಆಸಕ್ತರಾಗಿರುತ್ತಾರೆ.) ॥ ೧೩ ॥

ಭಾ ॥ ಕುರ್ವಂತಿ ಶಾಸ್ತ್ರಸಂವಾದಂ ಮಾರ್ಗೇ ಶೃಣ್ವಂತಿ ಕೇಚನ । ತೇಷಾಂ ಮಧ್ಯೇ ಹಿ
ಮರುತಾಂ ॥ ೧೩ ॥

ಅ || ಆ ಮರುತ್‌ಗಳ ಮಧ್ಯದಲ್ಲಿ ಕೆಲವರು ವರ್ಗದಲ್ಲಿ ಶಾಸ್ತ್ರ ವಿಷಯಕ ಸಂವಾದವನ್ನು ಮಾಡುತ್ತಿದ್ದಾರೆ ಕೆಲವರು ಸರ್ವದಾ ಶಾಸ್ತ್ರಾಭ್ಯಾಸಗಳಲ್ಲಿಯೇ ಆಸಕ್ತರಾಗಿರುತ್ತಾರೆ- || ೧೩ ||

ಋ || (೪೫೫) ಪ್ರಯಾತ ಶೀಭಮಾಶುಭಿಃ ಸಂತಿ ಕಣ್ವೇಷು ವೋ ದುವಃ । ತತ್ರೋ ಷು ಮಾದಯಾಧ್ವೈ || ೧೪ ||

ಅ || (ಎಲೋ ಮರುತ್‌ಗಳೇ ನೀವು) ಆಶುಭಿಃ= (ಆಶುರ್ಬ್ರಧ್ನಃ ಎಂದು ಅಶ್ವನಾಮಗಳಲ್ಲಿ ಪಠಿತವಾಗಿದೆ.) ವಾಹನಗಳಿಂದ, ಶೀಭಂ=ಶೀಘ್ರದಲ್ಲಿ, ನಃ=ನಮ್ಮನ್ನು ಕುರಿತು, ಪ್ರಯಾತ=ಬನ್ನಿರಿ. (ಬಂದು) ತತ್ರೋ=ಅಲ್ಲಿಯೇ, (ನಮ್ಮ ಮನೆಗಳಲ್ಲಿಯೇ) ಸು=ಚೆನ್ನಾಗಿ ಮಾದಯಾಧ್ವೈ=ಮದವನ್ನು ಮಾಡಿರಿ.(ಸುಖಿಗಳಾಗಿರಿ.) (ಹೇಗೆಂದರೆ) ಕಣ್ವೇಷು=ಕಣ್ವ ಗೃಹಗಳಲ್ಲಿ, ವಃ=ನಿಮಗಾಗಿ, ದುವಃ=ದೋಹನಗಳು, ಸಂತಿ ಹಿ= ಇರುತ್ತವೆಯಷ್ಟೆ. || ೧೪ ||

ಭಾ || (೧) ಶೀಭಂ ಕ್ಷಿಪ್ರಂ ಪ್ರಯಾತ ನಃ । (೨) ಮದಂ ಕುರುತ ತತ್ರೈವ ದೋಹನಾನ್ಯತ್ರ ಸಂತಿ ಹಿ || ೧೪ ||

ಅ || (೧) ಶೀಭಂ=(ಶೀಘ್ರಂ ತಾಜಃ ಶೀಭಂ ಎಂದು ಕ್ಷಿಪ್ರನಾಮಗಳಲ್ಲಿ ಪಠಿತವಾಗಿದೆ.) ಶೀಘ್ರವಾಗಿ ನಮ್ಮನ್ನು ಕುರಿತು ಬನ್ನಿರಿ. (೨) ಬಂದು ನಮ್ಮ ಗೃಹಗಳಲ್ಲಿಯೇ ಸುಖಿಗಳಾಗಿ ಆಗಿರುವಿರಿ, ಕಣ್ವಗೃಹಗಳಲ್ಲಿಯೇ ನಿಮಗಾಗಿ(ದುಹ ಪ್ರಪೂರಣೇ)ದೋಹನಗಳು (ಸುಖ ಸಾಧನಗಳು) ಸಮೃದ್ಧಗಳಾಗಿವೆ. ಪ್ರಸಿದ್ಧ || ೧೪ ||

ಋ || (೪೫೬) ಅಸ್ತಿ ಹಿ ಷ್ಮಾ ಮದಾಯ ವಃ ಸ್ಮಸಿ ಷ್ಮಾ ವಯಮೇಷಾಂ । ವಿಶ್ವಂ ಚಿದಾಯುರ್ಜೀವಸೇ || ೧೫ || ೧೪ || ೩೭ ||

ಅ || (ಎಲೋ ಮರುತ್‌ಗಳೇ) ವಃ= ನಿಮಗೆ. ಮದಾಯ= ಸುಖಕ್ಕಾಗಿ, ಅಸ್ತಿ= ನಮ್ಮ ಗೃಹಗಳಲ್ಲಿ ಹವಿಸ್ಸು ಮೊದಲಾದ ಸಾಧನವಿದೆ. ಹಿ ಸ್ಮ= ಇದು ಸುಪ್ರಸಿದ್ಧವು. ಮತ್ತು, ವಯಂ= ನಾವು, ಏಷಾಂ= ಈ ಮರುತ್‌ಗಳ ಸಂಬಂಧಿಗಳು, ಸ್ಮಸಿ ಸ್ಮ= ಆಗಿರುವೆವು. (ಹೇಗೆಂದರೆ) ನಃ= ನಮಗೆ, (ಮರುತ್‌ಗಳ ಅನುಗ್ರಹದಿಂದ) ಜೀವಸೇ= ಜೀವನಕ್ಕಾಗಿ, ವಿಶ್ವಂ ಚಿತ್= ಸಂಪೂರ್ಣವಾದ ಆಯುಷ್ಯವೂ, ಅಸ್ತಿ ಹಿ= ಇದೆ. (ಆ ಮರುತ್‌ಗಳ ಪ್ರಸಾದದಿಂದ ಆಯುಷ್ಯ ಅನ್ನಾದಿಗಳನ್ನು ಹೊಂದಿರುವ ನಾವು ಮರುತ್‌ಗಳ ಸಂಬಂಧಿಗಳು ಹೇಗೆತಾನೇ ಆಗದೆ ಹೋದೇವು? ಆದ ಕಾರಣ ನಮ್ಮನ್ನು ಕುರಿತು ಬನ್ನಿರಿ. || ೧೫ || ೧೪ || ೩೭ ||

ಭಾ || ಸರ್ವಮಾಯುರ್ಜೀವಸೇಽಸ್ತಿ ಪ್ರಸಾದಾನ್ಮರುತಾಂ ಹಿ ನಃ || ೧೫ || ೧೪ || ೫ ||

ಅ || (ಇಲ್ಲಿ ಉತ್ತರಾರ್ಧವು ಅಪೂರ್ಣವಾಗಿರುವುದರಿಂದ ಅದನ್ನು ಪ್ರಸಾದಾನ್ಮರುತಾಂಹಿನಃ ಎಂದು ಪೂರ್ಣಗೊಳಿಸಿಕೊಂಡು ವ್ಯಾಖ್ಯಾನ ಮಾಡುತ್ತಾರೆ.) (ಎಲೋ ಮರುತ್‌ಗಳೇ, ನಿಮ್ಮ ಸುಖಕ್ಕಾಗಿ ನಮ್ಮ

ಮನೆಗಳಲ್ಲಿ ಹವಿರಾದಿ ಸಾಧನಗಳಿವೆ. ನಾವು ಮರುತ್‌ಗಳ ಸಂಬಂಧಿಗಳಾಗಿರುವೆವು. ಹೇಗೆಂದರೆ) ನಮಗೆ ಮರುತ್‌ಗಳ ಅನುಗ್ರಹದೆಸೆಯಿಂದ ಜೀವನಕ್ಕಾಗಿ ಸಂಪೂರ್ಣವಾದ ಆಯುಷ್ಯವೂ ಇದೆಯಷ್ಟೆ. (ಆದಕಾರಣ ಆ ಮರುತ್‌ಗಳ ಅನುಗ್ರಹದಿಂದಲೇ ದೀರ್ಘಾಯುಷ್ಯ ಅನ್ನ ಮೊದಲಾದವುಗಳನ್ನು ನಾವು ಹೊಂದಿರುತ್ತೇವೆ. ಆದಕಾರಣ ಮರುತ್‌ಗಳ ಸಂಬಂಧಿಗಳು ನಾವು ಹೇಗೆ ತಾನೆ ಆಗದೆ ಹೋದೇವು. ಆದಕಾರಣ ನಮ್ಮನ್ನು ಹೊಂದಿರಿ) ॥ ೧೫ ॥ ೧೪ ॥ ೫ ॥

ಅವ॥ ಕದ್ಧ ಇತ್ಯಾದಿಗಳು ೧೫ ಋಕ್ಕುಗಳುಳ್ಳದ್ದು ೩ ವರ್ಗಗಳು. ಮರುದ್ದೇವತಾಕವು. ಗಾಯತ್ರೀ ಛಂದಸ್ಕವು. ೩೮ನೇ ಸೂಕ್ತವು

ಋ ॥ (೪೫೭) ಕದ್ಧ ನೂನಂ ಕಧಪ್ರಿಯಃ ಪಿತಾ ಪುತ್ರಂ ನ ಹಸ್ತಯೋಃ।
ದಧಿಧ್ವೇ ವೃಕ್ತಬರ್ಹಿಷಃ ॥ ೧ ॥

ಅ ॥ ಹೇ ವೃಕ್ತ ಬರ್ಹಿಷಃ= [ವೃಜೀ ವರಣೇ] [ವೃಕ್ತಂ ಬರ್ಹಿಃ ಯೇಷು ಎಂಬ ವಿಗ್ರಹದಿಂದ] ಯಾವ ವಿಷಯದಲ್ಲಿ ಬರ್ಹಿಸ್ಸು ವಿಸ್ತೃತವಾಗಿದೆಯೋ, ಅಂತಹ ವಿಸ್ತೃತ ಬರ್ಹಿಸ್ಸುಳ್ಳ, ಮರುತ್‌ಗಳಾದ ನೀವು, ಕತ್= ಯಾವಾಗ, ಹಸ್ತಯೋಃ= ಈ ಶರೀರ ಸಂಬಂಧಿಗಳಾದ ಹಸ್ತಗಳಲ್ಲಿ (ಜನ್ಮಾಂತರಭಾವಿಗಳಾದ ಹಸ್ತಗಳಲ್ಲಿ ಅಲ್ಲ)ನೂನಂ= ನಿಶ್ಚಯವಾಗಿಯೂ, ದಧಿಧ್ವೇ= ಧರಿಸಿರುವಿರಿ, ಹ= ಆಸ್ವಾದನ. ಕಧ ಪ್ರಿಯಃ= ಸರ್ವದಾ ಪ್ರಿಯನಾದ, ಪಿತಾ= ತಂದೆಯು. ಪುತ್ರಂ ನ=ಪುತ್ರನನ್ನೆಂಬಂತೆ. (ಅಂದರೆ ಮಗನನ್ನು ಪ್ರಿಯನಾದ ತಂದೆಯಂತೆ ಧರಿಸುವಿರಿ) ॥ ೧ ॥

ಭಾ ॥ (೧) ಕದಾಽನಯೋರ್ಹಸ್ತಯೋರ್ದೇವಾ ದಧ್ವೇ ಪ್ರಿಯತಾತವತ್॥(೨)ಕದಾಪಿ ಯತ್ಪ್ರಿಯಸ್ತಾತಃ ಕಧಪ್ರಿಯ ಇತೀರಿತಃ ॥ (೩) ಸ್ತೃತಂ ಬರ್ಹಿರ್ಯದ್ವಿಷಯೇ ತೇಃ ಪ್ರೋಕ್ತಾ ವೃಕ್ತಬರ್ಹಿಷಃ ॥ ೧ ॥

ಅ॥ ಎಲೋ ಮರುತ್ ದೇವತೆಗಳಿರಾ ಮಗನನ್ನು ಪ್ರಿಯನಾದ ತಂದೆಯಂತೆ ಯಾವಾಗ ಈ ಶರೀರ ಸಂಬಂಧಿಗಳಾದ ಹಸ್ತಗಳಲ್ಲಿ ಧರಿಸುವಿರಿ. [೨] ಸರ್ವದಾ ತಂದೆಯು ಯಾವ ಮಗನಿಗೆ ಪ್ರಿಯನೇ ಆಗಿರುತ್ತಾನೋ, ಅಂತಹ ತಂದೆಯು ಕಧ ಪ್ರಿಯಃ ಎನಿಸುತ್ತಾನೆ. [೩] ಯಾವ ವಿಷಯದಲ್ಲಿ ಬರ್ಹಿಸ್ಸು ವಿಸ್ತೃತವಾಗಿದೆಯೋ, ಅಂತಹವರು ವಿಸ್ತೃತ ಬರ್ಹಿಸ್ಸುಳ್ಳವರು, ಎಂದು ಹೇಳಲ್ಪಟ್ಟಿರುತ್ತಾರೆ ॥ ೧ ॥

ಋ ॥ (೪೫೮) ಕ್ವ ನೂನಂ ಕದ್ವೋ ಅರ್ಥಂ ಗಂತಾ ದಿವೋ ನ ಪೃಥಿವ್ಯಾಃ ।
ಕ್ವ ವೋ ಗಾವೋ ನ ರಣ್ಯಂತಿ ॥ ೨ ॥

ಅ ॥ (ಎಲೋ ಮರುತ್‌ಗಳೇ ನೀವು) ನೂನಂ= ಈಗ, ದಿವಃ= ಸ್ವರ್ಗದೆಶೆಯಿಂದಲೂ ಪೃಥಿವ್ಯಾಶ್ಚ= ಪೃಥಿವಿಯ ದೆಶೆಯಿಂದಲೂ, ಕ್ವಗಂತಾ= ಎಲ್ಲಿಗೆ ಹೋಗುವಿರಿ. (ಹೋದರೆ) ವಃ= ನಿಮಗೆ, ಕತ್ ಅರ್ಥಂ= ಏನು ಅರ್ಥವು? ಏನು ಪ್ರಯೋಜನವು? (ಎಲ್ಲಿಗೂ ಹೋಗಬೇಡಿರಿ.) ಮತ್ತು, ವಃ=ನಿಮ್ಮನ್ನು, ಕ್ವ=ಎಲ್ಲಿಗೆ,

ಹ್ವಯಂತಿ=ಕರೆಯುತ್ತಾರೆ. (ಹೇಗೆಂದರೆ) ಗಾವಃ ನ=ಗೋವುಗಳಂತೇ. ಹೇಗೆ ಹಸಿ ಹುಲ್ಲನ್ನು ಇಚ್ಛಿಸುವ ಗೋವುಗಳು ಹಸಿ ಹುಲ್ಲನ್ನು ಕೊಡುವವರನ್ನು ಕರೆಯುತ್ತವೋ ಹಾಗೆಯೇ ಮೋಕ್ಷಾದಿ ಫಲವನ್ನು ಇಚ್ಛಿಸುತ್ತಾ ಸ್ತುತಿಸುವ ಸಾಧಕರು ನಿಮ್ಮನ್ನು ಎಲ್ಲಿಗೆ ಕರೆಯುತ್ತಾರೆ. (ಭಕ್ತರು ಯಜ್ಞಾದಿಗಳಲ್ಲಿ ನಿಮ್ಮನ್ನು ನಿಶ್ಚಯವಾಗಿಯೂ ಕರೆಯುತ್ತಾರೆ. ಆದ ಕಾರಣ ಎಲ್ಲಿಗೆ ಕರೆಯುತ್ತಾರೆ ಎಂದದ್ದು ಹೇಗೆ ಎಂದರೆ, ಭಕ್ತರು ನಿಮ್ಮನ್ನು ಕರೆಯುತ್ತಾರೆ ಎಂಬುವುದು ದುರ್ಲಭವು ಎಂದು ಭಾವವು-) ॥ ೨ ॥

ಭಾ ॥ (೧) ದಿವಃ ಪೃಥಿವ್ಯಾಶ್ಚೇದಾನೀಂ ಕ್ವ ಗಚ್ಛಥ ಚ ಕಿಂ ಫಲಂ। ನ ಗಚ್ಛಥ ಕ್ವವ್ಯಾಪ್ಯೇತಜ್ಜ್ಞಾತವ್ಯಂ ತತ್ಪ್ರಸಾದತಃ। (೨) ಆ ಹ್ವಯಂತಿ ಕ್ವ ವಾ ಗಾವೋ । ಯುಥೈವ ಯವಸಾರ್ಥಿನಃ। ಫಲಾರ್ಥಿನಃ ಸ್ತುವಂತೋ ವಃ ಕ್ವಾಹ್ವಯಂತಿ ತಥೈವ ಚ ॥ ೨ ॥

ಅ ॥ (೧) ಎಲೋ ಮರುತ್‍ಗಳೇ ಈಗ ಸ್ವರ್ಗದಿಂದಲೂ, ಭೂಲೋಕದಿಂದಲೂ, ಎಲ್ಲಿಗೆ ಹೋಗುವಿರಿ. ಹೋದರೆ ನಿಮಗೆ ಏನು ಪ್ರಯೋಜನವು? ಎಲ್ಲಿಗೂ ಹೋಗಬೇಡಿರಿ ಅವರ ಅನುಗ್ರಹದಿಂದ ಇದನ್ನು ತಿಳಿಯಬೇಕು. (೨) ಹೇಗೆ ಬಾಲತೃಣವನ್ನು ಇಚ್ಛಿಸುವ ಗೋವುಗಳು ಬಾಲತೃಣವನ್ನು ಕೊಡುವವರನ್ನು ಕರೆಯುತ್ತವೋ, ಹಾಗೆಯೇ ಮೋಕ್ಷಾದಿ ಫಲಗಳನ್ನು ಇಚ್ಛಿಸುವ ಸ್ತುತಿಸುವ ಸಾಧಕರಾದ ಭಕ್ತರು ನಿಮ್ಮನ್ನು ಎಲ್ಲಿಗೆ ಕರೆಯುತ್ತಾರೆ. ॥ ೨ ॥

ಖು ॥ (೪೫೯) ಕ್ವ ವಃ ಸುಮ್ನಾ ನವ್ಯಾಂಸಿ ಮರುತಃ ಕ್ವ ಸುವಿತಾ । ಕ್ವೋ ವಿಶ್ವಾನಿ ಸೌಭಗಾ ॥ ೩ ॥

ಅ ॥ ಹೇ ಮರುತಃ=ಎಲೋ ಮರುತ್‍ಗಳೇ ವಃ=ನಿಮ್ಮ ನವ್ಯಾಂಸಿ=(ಣು ಸ್ತುತೌ) ಸ್ತುತ್ಯಗಳಾದ, ಸುಮ್ನಾ=(ಸುಮ್ನಂ ಸ್ಯೋನಂ ಎಂದು ಸುಖ ನಾಮಗಳಲ್ಲಿ ಪಠಿತವಾಗಿದೆ.) ಸುಖಗಳು, ಕ್ವ=ಹೇಗೆ ಇರುವವುಗಳು. ಯಾವ ಉಪಾಯದಿಂದ ಜ್ಞೇಯಗಳು,. ಸುವಿತಾ=(ಷು ಪ್ರಸವೈಶ್ವರ್ಯಯೋಃ) ಒಳ್ಳೇ ಮಂಗಳಕರಗಳಾದ ಚರಿತಗಳು, ಕ್ವ=ಹೇಗೆ ಇರುವವುಗಳು. ಯಾವ ಉಪಾಯದಿಂದ ತಿಳಿಯಲರ್ಹಗಳು. ವಿಶ್ವಾನಿ=ಸಂಪೂರ್ಣಗಳಾದ, ಸೌಭಗಾ=ಸೌಭಾಗ್ಯಗಳು (ಯಾವ ಲಕ್ಷಣವಿದ್ದರೆ ಜನರು ಅಧೀನರು ಆಗುತ್ತಾರೋ ಅದು ಸೌಭಾಗ್ಯವೆನಿಸುತ್ತದೆ. ಅವುಗಳು.) ಕ್ವೋ=ಹೇಗೆ ತಾನೇ ಇರುವವುಗಳು. ಯಾವ ಉಪಾಯದಿಂದ ತಿಳಿಯಲರ್ಹಗಳು. ॥ ೩ ॥

ಭಾ ॥ (೧) ಸ್ತುತ್ಯಾನಿ ವಃ ಸುಖಾನಿ ಚ ಕಥಂ ಜ್ಞೇಯಾನಿ ನಃ ಸದಾ । ಇತ್ಯಭಿಪ್ರಾಯತಃ ಪ್ರಶ್ನಃ (೨) ಕಸ್ಮಿನ್ನೋ ಜ್ಞಾಪಕಸ್ತ್ವಿತಿ ॥ (೩) ಸುವಿತಾನಿ ಸುಭದ್ರಾಣಿ ಸೌಭಗಂ ಲಕ್ಷಣಂ ಪರಂ ॥ ೩ ॥

ಅ ॥ (೧) ನಿಮ್ಮ ಸ್ತುತ್ಯಗಳಾದ ಸುಖಗಳು ಹೇಗೆ ಇರುವವುಗಳು. ಯಾವ ಉಪಾಯದಿಂದ ನಮಗೆ ತಿಳಿಯಲರ್ಹಗಳು ಈ ಅಭಿಪ್ರಾಯದಿಂದ ಪ್ರಶ್ನೆಯು ಸಮರ್ಥಿತವಾಗಿದೆ.(೨)ನಿಮಗೆ ಸುಖ ಮೊದಲಾದ ಧರ್ಮಗಳು ಯಾವ ಆಚಾರ್ಯರು ತಿಳಿಸುತ್ತಿರಲು (ಉಪದೇಶಕರಾಗುತ್ತಿರಲು) ನಮಗೆ ಸ್ಪಷ್ಟ

ರೂಪವನ್ನು ತಿಳಿಸಿಕೊಡುವುವು? ಸುಖಾದಿಗಳು ಬಹಳವಿದ್ದ ಪ್ರಯುಕ್ತ ಜ್ಞಾಪಕಃ ಎಂದು ಏಕವಚನವು ಹೇಗೆ ಎಂದರೆ ಭಗವಂತನು ಒಬ್ಬನೇ. ಆ ಭಗವದ್ರೂಪಗಳೇ ಆದ ಸುಖ ಚರಿತ್ರ ಸೌಭಾಗ್ಯಗಳೂ ಒಂದೇ ಎಂಬ ವಿವಕ್ಷೆಯಿಂದ ಜ್ಞಾಪಕಃ ಎಂದು ಏಕ ವಚನವು ಯುಕ್ತವೇ) (ಮರುತ್‌ಗಳಲ್ಲಿ ಆದರೂ ಮರುತ್‌ಗಳು ಬಹುಮಂದಿಯಾದುದರಿಂದ ನಿಮ್ಮ ಸುಖಾದಿ ಧರ್ಮಗಳು ಯಾವ ಆಚಾರ್ಯರು ತತ್ಪ್ರೋಪದೇಶಕರಾಗುತ್ತಿರಲು ನಮಗೆ ಜ್ಞಾಪಕರಾಗುತ್ತಾರೆ, ಎಂದು ಬಹುವಚನವನ್ನು ತಿಳಿದುಕೊಳ್ಳಬೇಕು.) (೩) (ಸುವಿತ ಸೌಭಗ ಶಬ್ದಾರ್ಥವನ್ನು ಹೇಳುತ್ತಾರೆ.) ಸುವಿತಾನಿ=ಒಳ್ಳೇ ಮಂಗಳಕರಗಳು. ಷಣ್ಣವತ್ಯಂಗುಲೋಯಸ್ತು ನ್ಯಗ್ರೋಧ ಪರಿಮಂಡಲಃ । ಸಪ್ತಪಾದಶ್ಚತುರ್ಹಸ್ತಃ ಇತ್ಯಾದಿ ಪ್ರಕಾರ ಹೇಳಿದ ೩೨ ಲಕ್ಷಣಗಳಲ್ಲಿ ಸೌಭಾಗ್ಯವೆಂಬುವುದು ಒಂದು ಲಕ್ಷಣವು. ಯಾವುದಿದ್ದರೆ ಜನರು ಅಧೀನರು ಆಗುತ್ತಾರೋ, ಅದು ಸೌಭಾಗ್ಯವೆನ್ನಿಸುತ್ತದೆ. ॥ ೩ ॥

ಋ ॥ (೪೬೦) ಯದ್ಯೂಯಂ ಪೃಶ್ನಿಮಾತರೋ ಮರ್ತಾಸಃ ಸ್ಯಾತನ ।

ಸ್ತೋತಾ ವೋ ಅಮೃತಃ ಸ್ಯಾತ್ ॥ ೪ ॥

ಅ ॥ ಹೇ ಪೃಶ್ನಿಮಾತರಃ= (ಪೃಶ್ನಿರ್ಮಾತಾ ಯೇಷಾಂ ಎಂಬ ವ್ಯುತ್ಪತ್ತಿಯಿಂದ) ಭಾರತಿಯೇ ತಾಯಿಯಾಗಿಉಳ್ಳ ಮರುತ್‌ಗಳೇ,ಅಥವಾ ಪ್ರಶ್ನಯೋಗ್ಯತ್ವಾತ್=ಪ್ರಶ್ನೆಗೆ ಯೋಗ್ಯವಾಗಿರುವುದರಿಂದ ಪೃಶ್ನಿಃ= ವೇದವು, ಮಾತಾ=(ಜ್ಞಾತಾ ಯಸ್ಯ ಎಂಬವ್ಯುತ್ಪತ್ತಿಯಿಂದ) ವೇದೈಕಸಮಧಿಗಮ್ಯನಾದ ಶ್ರೀಹರಿಯು ಅಥವಾ ವೇದಾರ್ಥವನ್ನು ಚೆನ್ನಾಗಿ ತಿಳಿದಿರುವವನು, ಇಂತಹ ವಿಷ್ಣುರೂಪ ವಿಶೇಷಗಳೇ ಯೂಯಂ =ನೀವು, ಯತ್=ಯಾವ ಪಕ್ಷದಲ್ಲಿ, ಮರ್ತಾಸಃ =ಮನುಷ್ಯರು, ಸ್ಯಾತನ= (ಅಸಭುವಿ) ಆಗುವಿರೋ) ಆದಾಗ್ಯೂ ವಃ= ನಿಮ್ಮನ್ನು, ಸ್ತೋತಾ =ಸ್ತುತಿಸುವವನು, ಅಮೃತಃ= ದೇವನು, ಸ್ಯಾತ್ ಆಗುವನು. (ಅಂದರೆ ಮನುಷ್ಯಾವತಾರದಲ್ಲಿಯೂ ನೀವು ಭಕ್ತರಿಗೆ ದೇವತ್ವಾದಿಗಳನ್ನು ಕೊಡಲಿಕ್ಕೆ ಸಮರ್ಥರೇ ಆಗುವಿರಿ. ॥ ೪ ॥

ಭಾ ॥ (೧) ಪೃಶ್ನಿರ್ವೇದಃ ಪ್ರಶ್ನಯೋಗ್ಯಃ ಪೃಶ್ನಿಮಾತಾ ಹರಿಸ್ತತಃ । ಜ್ಞೇಯಸ್ತಸ್ಯಾಪಿ ವಿಜ್ಞಾತಾ (೨) ಮರುತಶ್ಚೇತ್ ಸುತಾ ಗಿರಃ॥ (೩) ಮಾನುಷಾ ಯದಿ ಯೂಯಂ ವಃ ಸ್ತೋತಾ ದೇವೋ ಭವೇದಪಿ ॥ ೪ ॥

ಅ ॥ (ಪೃಶ್ನಿ ಮಾತೃ ಶಬ್ದವನ್ನು ಶ್ರೀಹರಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ.) ಪ್ರಶ್ನಕ್ಕೆ ಯೋಗ್ಯವಾಗಿರುವುದರಿಂದ ಪೃಶ್ನಿಃ=ವೇದವು. ವೇದದಿಂದ ಜ್ಞೇಯನಾದುದರಿಂದ ಪೃಶ್ನಿ ಮಾತಾ=ಶ್ರೀಹರಿಯು. ಅಥವಾ ವೇದವನ್ನು ಚೆನ್ನಾಗಿ ತಿಳಿಯುವವನು ಶ್ರೀಹರಿಯು. (೨) ಮರುತ್‌ಗಳು ವಿವಕ್ಷಿತರಾದರೆ ಆಗ ಪೃಶ್ನಿಮಾತರಃ ಎನ್ನುವುದಕ್ಕೆ ಭಾರತಿಯ ಮಕ್ಕಳು ಎಂದರ್ಥವು. (ಪೃಶ್ನಿರ್ಗೀರ್ಭಾರತೀ ಎಂದು ವಾಙ್‌ನಾಮಗಳಲ್ಲಿ ಪಠಿತವಾಗಿದೆ.)(೩)(ಈಗ ಈ ಋಕ್ಕನ್ನು ವ್ಯಾಖ್ಯಾನ ಮಾಡುತ್ತಾರೆ)ಎಲೋ ಮರುತ್‌ಗಳೇ ನೀವು ಯಾವ ಪಕ್ಷದಲ್ಲಿ ಮನುಷ್ಯರು ಆಗಿರುವಿರೋ, ಆಗಲೂ ನಿಮ್ಮನ್ನು ಸ್ತುತಿಸುವವನು ದೇವನು ಆಗುವನು. (ಅಂದರೆ ಮನುಷ್ಯಾವತಾರದಲ್ಲಿಯೂ ಭಕ್ತರಿಗೆ ದೇವತ್ವಾದಿಗಳನ್ನು ಕೊಡಲಿಕ್ಕೆ ಸಮರ್ಥರೇ ಆಗಿರುವಿರಿ) ॥ ೪ ॥

ಋ ॥ (೪೬೧) ಮಾ ವೋ ಮೃಗೋ ನ ಯವಸೇ ಜರಿತಾ ಭೂದಜೋಷ್ಯಃ।

ಪಥಾ ಯಮಸ್ಯ ಗಾದುಪ ॥ ೫ ॥ ೧೫ ॥

ಅ॥ (ಮರುತ್‌ಗಳೇ) ವಃ=ನಿಮ್ಮನ್ನು, ಜರಿತಾ=ಸ್ತುತಿಸುವವನು,(ಪ್ರಾಯಸ್ಸತಾಂ ನ ಮನಃ ಪಾಪ ಮಾರ್ಗೇ ಗಚ್ಛೇತ್, ಎಂದು ಹೇಳಿದ ಪ್ರಕಾರ ಕಥಂಚಿತ್ ಪಾಪಮಾಡಿದವನಾದಾಗ್ಯೂ ಈ ಜನ್ಮದಲ್ಲಿ) ಯವಸೇ=ಗೋವುಗಳಿಂದ ಹೊಂದಲು ಯೋಗ್ಯವಾದ ಬಾಲತೃಣದಾನ ಸಮಯದಲ್ಲಿ ಮೃಗೋನ ಜೋಷ್ಯಃ= ವ್ಯಾಘ್ರಾದಿ ಮೃಗಗಳು ಹೇಗೆ ಸೇವಿಸಲು ಅರ್ಹಗಳು ಅಲ್ಲವೋ, ಹಾಗೆಯೇ ಅಜೋಷ್ಯಃ=(ಜುಷಿಪ್ರೀತಿಸೇವನಯೋಃ ಸೇವಿಸಲನರ್ಹನು ಮಾಭೂತ್‌ಃ-ಆಗ ಬಾರದು. ಮಾತನಾಡಿಸಿ ಕೊಳ್ಳಲನರ್ಹನು ಮಾಭೂತ್=ಆಗ ಬಾರದು (ಇಲ್ಲಿ ಮಾತನಾಡಿಸಿಕೊಳ್ಳಲು ಅನರ್ಹನು ಆಗುವುದಿಲ್ಲವೆಂದು ಇಷ್ಟು ಮಾತ್ರವಲ್ಲ. ಮತ್ತೆ ಪರಲೋಕದಲ್ಲಿ) ಯಮಸ್ಯ ಪಥಾ ಮಾ ಉಪಗಾತ್= ಯಮಮಾರ್ಗವನ್ನು ಹೊಂದಬಾರದು ॥೫॥೧೫॥

ಭಾ ॥ (೧) ನ ಸ್ಯಾದಸೇವ್ಯಃ ಸ್ತೋತಾऽತ್ರ ಯಥಾ ಯವಸಗೋಚರೇ । ಗೋಪ್ರಾಪ್ಯೇ ತು
ಮೃಗೋ ಸೇವ್ಯೋ (೨) ಯಮಮಾರ್ಗಂ ನ ಚ ವ್ರಜೇತ್॥ (೩) ಯಾಚ್ಞಾರೀತಿ
ವಿಶೇಷೋऽಯಂ ನಿಂದಾಸ್ತುತ್ಯೇಕದೇಶಯುಕ್ ॥೫॥೧೫॥

ಅ ॥ [೧] ನಿಮ್ಮನ್ನು ಸ್ತುತಿಸುವವನು ಕಥಂಚಿತ್ ಪಾಪವನ್ನು ಮಾಡಿದವನಾದಾಗ್ಯೂ ಈ ಜನ್ಮದಲ್ಲಿ ಸೇವಿಸಿಕೊಳ್ಳಲನರ್ಹನು ಆಗಲಾರನು. [ವ್ಯತಿರೇಕ ದೃಷ್ಟಾಂತವೆಂಬ ಅಭಿಪ್ರಾಯದಿಂದ ವ್ಯಾಖ್ಯಾನ ಮಾಡುತ್ತಾರೆ.] ಹೇಗೆ ಪಂಚ ಮಹಾಯಜ್ಞ ಮಧ್ಯದಲ್ಲಿ ಗೋವುಗಳಿಂದ ಪ್ರಾಪ್ಯವಾದ ಗೋಗ್ರಾಸ ದಾನ ಸಮಯದಲ್ಲಿ ಹಸಿಹುಲ್ಲು ಮೊದಲಾದುದನ್ನು ಕೊಡುವ ಸಮಯದಲ್ಲಿ ವ್ಯಾಘ್ರ ಮೊದಲಾದ ಮೃಗವು ಸೇವಿಸಲರ್ಹವು ಆಗುವುದಿಲ್ಲವೋ (ಹಾಗೆ ಈ ಸ್ತುತಿಸುವವನು ಪೂಜಾದಿಗಳಲ್ಲಿ ಅಸೇವ್ಯನು ಆಗುವುದೇ ಇಲ್ಲ) (೨) (ಈಜನ್ಮದಲ್ಲಿ ಮಾತನಾಡಿಸಿಕೊಳ್ಳಲಿಕ್ಕೆ ಅನರ್ಹನು ಆಗುವುದಿಲ್ಲವೆಂದಿಷ್ಟು ಮಾತ್ರವಲ್ಲ. ಮತ್ತೆ) ಯಮ ಮಾರ್ಗವನ್ನು ಹೊಂದುವುದಿಲ್ಲ. (೩) (ಹಾಗಾದರೆ ಸೇವಿಸಿಕೊಳ್ಳಲು ಯೋಗ್ಯವಾದ ಒಂದು ವಸ್ತುವನ್ನು ದೃಷ್ಟಾಂತ ಹೇಳಬೇಕಿತ್ತು. ವ್ಯತಿರೇಕ ಮುಖದಿಂದ ಅಸೇವ್ಯಗಳಾದ ವ್ಯಾಘ್ರಾದಿಗಳನ್ನು ದೃಷ್ಟಾಂತವಾಗಿ ಹೇಳಿದ್ದು ಹೇಗೆ ಕೂಡುತ್ತದೆ, ಎಂದರೆ) ಆದಕಾರಣ ನಮ್ಮನ್ನು ಸ್ತೋತೃಗಳನ್ನಾಗಿ ಮಾಡಿರಿ, ಎಂದು ಪ್ರಾರ್ಥನೆಯಲ್ಲಿ ತಾತ್ಪರ್ಯವು. ಇದು ಯಾಚ್ಞಾರೀತಿ ವಿಶೇಷವು, ಪರರ ನಿಂದೆಯನ್ನು ವ್ಯಸನಿಯಾಗಿ ಮಾಡುವುದಿಲ್ಲ. ಮತ್ತೆ ಪ್ರಕೃತ ಗೋವಿನ ಸ್ತುತಿಗಾಗಿ, ಹೀಗೆ ಸ್ತುತಿಯು ಪರನಿಂದೆಯ ಏಕದೇಶವು. ಅಂದರೆ ವ್ಯಾಘ್ರಾದಿಗಳ ನಿಂದೆಯಿಂದ ಸ್ತುತಿಸುವ ಪುರುಷನನ್ನು ಪ್ರಶಂಸಿದ ಹಾಗೆ ಆಯಿತು; (ಆದಕಾರಣ ಹೇಳಿದು ಯುಕ್ತವು) ॥ ೫ ೧೫ ॥

ಮಂ ॥ (೪೬೨) ಮೋ ಷು ಣಃ ಪರಾಪರಾ ನಿರ್ಋತಿ ರ್ದುರ್ಹಣಾ ವಧೀತ ।
ಪದೀಷ್ಟ ತೃಷ್ಣಯಾ ಸಹ ॥ ೬ ॥

ಅ ॥ (ಎಲೋ ಮರುತ್‌ಗಳೇ.) (ನಿಮ್ಮ ಅನುಗ್ರಹದಿಂದ) ದುರ್ಹಣಾ=ದುಃಖವನ್ನು ಹೊಂದಿಸಿಕೊಡುವುದು ಸಂಹರಿಸುವುದು. ಆದಕಾರಣ ದುರ್ಹಣಾ ಎನಿಸಿಕೊಂಡ, ನಿರ್ಋತಿಃ=ನಿರ್ಋತಿಯೆಂದು ಹೆಸರುಳ್ಳ ದೇವತೆಯು, (ಮೃತ್ಯುದೇವತೆಯು) ನಃ=ನಮ್ಮನ್ನು, ಪರಾಪರಾ=ಮುಂದಿನ ಕಾಲದಲ್ಲಿ, ಅದಕ್ಕಿಂತ ಮುಂದಿನ ಕಾಲದಲ್ಲಿ ಸು=ಎಲ್ಲಿಯೂ, ಮೋ ವಧೀತ್=ಸರ್ವಥಾ ಕೊಲ್ಲಲೇಬಾರದು. (ಆ ನಿರ್ಋತಿಯು) ತೃಷ್ಣಯಾ ಸಹ=ಆಶೆಯಿಂದ ಕೂಡಿಕೊಂಡೇ, ಪದೀಷ್ಟ=(ಪದ ಗತೌ) ಹೋಗಲಿ-(ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಲಿ)॥ ೬ ॥

ಭಾ ॥ ಮಾ ವಧೀನ್ನಃ ಕ್ವಚಿನ್ಮೃತ್ಯುಃ ಪರತಃ ಪರತೋಽಪಿ ಚ । ದುರ್ಹಣಾ ದುಃಖದಾ ಹಂತ್ರೀ ಯಾತು ಸಾ ತೃಷ್ಣಯಾ ಸಹ ॥ ೬ ॥

ಅ ॥ ದುರ್ಹಣಾ=ದುಃಖವನ್ನು ಕೊಡುವವಳು ಸಂಹರಿಸುವವಳು. ಇಂತಹ ಯಾವ ಮೃತ್ಯು ದೇವತೆಯು ಪರಕಾಲದಲ್ಲಿಯೂ ಅದಕ್ಕಿಂತಲೂ ಮೇಲಿನ ಕಾಲದಲ್ಲಿಯೂ ಎಲ್ಲಿಯೂ ನಮ್ಮನ್ನು ಕೊಲ್ಲಬಾರದು. ಆ ಮೃತ್ಯುದೇವತೆಯು ಅಭಿಲಾಷೆಯಿಂದ ಕೂಡಿ ಎಲ್ಲಿಗಾದರೂ ಹೋಗಲಿ ॥ ೬ ॥

ಋ ॥ (೪೬೩) ಸತ್ಯಂ ತ್ವೇಷಾ ಅಮವಂತೋ ಧನ್ವಞ್ಚಿದಾ ರುದ್ರಿಯಾಸಃ ।
ಮಿಹಂ ಕೃಣ್ವಂತ್ಯವಾತಾಂ ॥ ೭ ॥

ಅ ॥ ತ್ವೇಷಾಃ=(ತ್ವಿಷ ದೀಪ್ತೌ) ದೀಪ್ತಿ (ಪ್ರಕಾಶ) ವುಳ್ಳ; ಅಮವಂತಃ=(ಮಾ ಪ್ರಮಾ ಪರಿಚ್ಛೇದಃ ತದ್ವಂತಃ) ಪರಿಚ್ಛೇದ ಇಲ್ಲದಿರುವ, ಅಥವಾ (ನ ವಿದ್ಯತೇ ಮಾ ಯಸ್ಯ ಸಾಮರ್ಥ್ಯಸ್ಯ ತದಮಂ, ತದ್ವಂತಃ) ಅಪ್ರಮೇಯರಾದ, ಅಪರಿಮಿತ ಸಾಮರ್ಥ್ಯವುಳ್ಳ, ರುದ್ರಿಯಾಸಃ=(ದ್ರುಗತೌ ರುಜಃ ವಿದ್ರಾವಕಃ, ರುದ್ರಃ= ರೋಗ ಪರಿಹಾರಕನಾದ ವಾಯುವು ರುದ್ರಸ್ಯ ಪುತ್ರಾಃ=) ವಾಯುವಿನ ಪುತ್ರರಾದ ಮರುತ್‌ಗಳು, ಸತ್ಯಂ= ಯಥಾರ್ಥ ಹೇಗೆ ಆದೀತೋ ಹಾಗೆಯೇ, (ಮಾಯೆಯಿಂದ ಅಲ್ಲ.) ಧನ್ವನ್ ಚಿತ್=(ಸಮಾನೌ ಮರುಧನ್ವಾನೌ) ಮರು ಪ್ರದೇಶದಲ್ಲಿಯೂ, ಅವಾತಾಂ=ಗಾಳಿಯಿಲ್ಲದ (ಅಚೇತನವಾದ ಗಾಳಿ ಹೊರತು) ಮಿಹಂ=(ಮಿಹ ಸೇಚನೇ) ವೃಷ್ಟಿಯನ್ನು, ಆ=ಚೆನ್ನಾಗಿ, ಇಚ್ಛೆಯಿಂದಲೇ. ಕೃಣ್ವಂತಿ=ಮಾಡುತ್ತಾರೆ. ॥ ೭ ॥

ಭಾ ॥ (೧) ಅಪ್ರಮೇಯಾ ಯಥಾ ಸತ್ಯಂ ಧನ್ವನ್ಯಪಿ ಹಿ ಸೇಚನಂ । ರುಜಾಂ ವಿದ್ರಾವಕಸ್ಯೈವ ವಾಯೋಃ ಪುತ್ರಾ ಹಿ ರುದ್ರಿಯಾಃ ॥ ವಿನಾಽಪ್ಯಚೇತನಂ ವಾತಂ ವೃಷ್ಟಿಂ ಕೃಣ್ವಂತಿ ಹೀಚ್ಛಯಾ ॥ ೭ ॥

ಅ ॥ (೧) ರೋಗಗಳನ್ನು ಓಡಿಸುವ (ಪರಿಹರಿಸುವ) ವಾಯುದೇವರ ಮಕ್ಕಳು ರುದ್ರಿಯರೆನಿಸುತ್ತಾರೆ, ಇಂತಹ ಅಪರಿಮಿತ ಸಾಮರ್ಥ್ಯವುಳ್ಳ ಮರುತ್ ಗಳು ಸತ್ಯ ಹೇಗೆ ಆದೀತೋ ಹಾಗೆ ಮರು ಪ್ರದೇಶದಲ್ಲಿಯೂ ಕೂಡ ಅಚೇತನವಾದ ಗಾಳಿ ಹೊರತು ಕೂಡ (ಗಾಳಿಯಿಲ್ಲದೇನೇ) ಸೇಚನಂ=ವೃಷ್ಟಿಯನ್ನು ಇಚ್ಛೆಯಿಂದಲೇ ಮಾಡುತ್ತಾರೆ. ॥ ೭ ॥

ಋ ॥ (೪೬೪) ವಾಶ್ರೇವ ವಿದ್ಯುನ್ಮಿಮಾತಿ ವತ್ಸಂ ನ ಮಾತಾ ಸಿಷಕ್ತಿ ।
ಯದೇಷಾಂ ವೃಷ್ಟಿರಸರ್ಜಿ ॥ ೮ ॥

ಅ ॥ ಯತ್=ಯಾವ ಕಾರಣದಿಂದ, ಏಷಾಂ=ಮರುತ್‌ಗಳ ಸಕಾಶದಿಂದ, ವೃಷ್ಟಿಃ ಮಳೆಯು, ಅಸರ್ಜಿ=ಸೃಷ್ಟಿಸಲ್ಪಟ್ಟಿದೋ, (ಯಾವಾಗ ಈ ಮರುತ್‌ಗಳು ವೃಷ್ಟಿಯನ್ನು ಸೃಷ್ಟಿಸುತ್ತಾರೋ,) ಆಗ, ವಿದ್ಯುತ್=ಮಿಂಚು, ಮಿಮಾತಿ=ಭೂಮಿಯನ್ನು ಪ್ರಕಾಶಗೊಳಿಸುವುದು. ಹೇಗೆಂದರೆ—ವಾಶ್ರೇವ=(ವಾಶ್ರಾ

ಪ್ರಶಸ್ತಸಾಧೇನುಃ ಎಂಬಕೋಶದಿಂದ) ಕರುಗಳಲ್ಲಿ ಪ್ರೀತಿಯುಳ್ಳ ತಾಯಿಯು ಹೇಗೆ ಕರುವನ್ನು ನೋಡುವುದೋ ಹಾಗೆಯೆ ಪ್ರಕಾಶಗೊಳಿಸುವುದು. ಮತ್ತು ಮಾತಾ=ತಾಯಿಯಾದ ಗೋವು ವತ್ಸಂ ನ=ಕರುವನ್ನೆಂಬಂತೆ (ಭೂಮಿಯಲ್ಲಿರತಕ್ಕ ವಸ್ತುಗಳನ್ನು) ವಿದ್ಯುತ್=ಮಿಂಚು ಸಿಷಕ್ತಿ=ಆಲಿಂಗಿಸುತ್ತದೆ. (ಏವಂಚ ಮಿಂಚಿನ ಕಾರ್ಯವಾದ ಮಳೆಯೂ ಕೂಡ ಮರುತ್‍ಗಳಿಂದಲೇ ಆಗುವುದು-) ॥ ೮ ॥

ಭಾ ॥ (೧) ಏಷಾಂ ಸಕಾಶಾದ್ವೃಷ್ಟಿಶ್ಚ ವಿದ್ಯುದ್ಭೂಮಿಂ ಪ್ರಕಾಶಯೇತ್। (೨) ಗೌರ್ವತ್ಸಮಿವ ಭೂಮ್ಯಾಂ ಚ ॥ ೮ ॥

ಅ ॥ (೧) ಈ ಮರುತ್‍ಗಳ ಸಕಾಶದಿಂದ ವೃಷ್ಟಿಯು ಸೃಷ್ಟಿಸಲ್ಪಟ್ಟಿತು. (ಮರುತ್‍ಗಳು ವೃಷ್ಟಿಯನ್ನು ಸೃಷ್ಟಿಸುತ್ತಾರೆ) ಆಗ ಮಿಂಚು ಭೂಮಿಯನ್ನು ಪ್ರಕಾಶಗೊಳಿಸುವುದು. (೨) ಗೋವು ಕರುವನ್ನೆಂಬಂತೆ ಭೂಮಿಯಲ್ಲಿರತಕ್ಕ ವಸ್ತುಗಳನ್ನೆಲ್ಲಾ ಮಿಂಚು ಆಲಿಂಗಿಸುತ್ತದೆ. ॥ ೮ ॥

ಮಂ ॥ (೪೭೫) ದಿವಾ ಚಿತ್ತಮಃ ಕೃಣ್ವಂತಿ ಪರ್ಜನ್ಯೇನೋದವಾಹೇನ ॥
ಯತ್ಪೃಥಿವೀಂ ವ್ಯುಂದಂತಿ ॥ ೯ ॥

ಅ ॥ ಮರುತಃ=ಮರುತ್‍ಗಳು, ಯತ್=ಯಾವಾಗ, ಪೃಥಿವೀಂ=ಲೋಕವನ್ನು ವ್ಯುಂದಂತಿ=(ಉಂದೀ ಕ್ಲೇದನೇ ಕ್ಲಿದೂ ಆರ್ದ್ರೀಭಾವೇ) ತಾಯಿಯಂತೆ ಸೇಚಿಸುತ್ತಾರೋ, ಹೇಗೆ ತಾಯಿಯಾದ ಗೋವು ಕರುವನ್ನು ಹಾಲಿನಿಂದ ಸೇಚಿಸುತ್ತದೋ (ತೃಪ್ತಿಗೊಳಿಸುತ್ತದೋ,) (ಹಾಗೆಯೇ ಭೂಮಿಯನ್ನು ಯಾವಾಗ ವೃಷ್ಟಿಯಿಂದ ಒದ್ದೆ ಮಾಡುತ್ತಾರೋ, ಆಗ ಉದವಾಹೇನ=ಮೇಘ ಮಂಡಲದಿಂದ, ದಿವಾಚಿತ್=ಹಗಲೂ ಕೂಡ, ತಮಃ=ಕತ್ತಲೆಯನ್ನು ಕೃಣ್ವಂತಿ=(ಕೃವಿ ಹಿಂಸಾಕರಣಯೋಃ) ಮಾಡುತ್ತಾರೆ. ॥ ೯ ॥

ಭಾ ॥ ಲೋಕಂ ಸಿಂಚಂತಿ ಮಾತೃವತ್ ॥ ೯ ॥

ಅ ॥ ಗೋವು ಕರುವನ್ನು ಹಾಲಿನಿಂದ ತೃಪ್ತಿಗೊಳಿಸುವಂತೆ ಲೋಕವನ್ನು ವೃಷ್ಟಿಯಿಂದ ಮರುತ್‍ಗಳು ತೃಪ್ತಿಗೊಳಿಸುತ್ತಾರೆ. ॥ ೯ ॥

ಮಂ ॥ (೪೭೬) ಅಧ ಸ್ವನಾನ್ಮರುತಾಂ ವಿಶ್ವಮಾ ಸದ್ಮ ಪಾರ್ಥಿವಂ ।
ಅರೇಜಂತ ಪ್ರ ಮಾನುಷಾಃ ॥ ೧೦ ॥ ೧೬ ॥

ಅ ॥ ಅಧ=ಇನ್ನೊಂದು ವಿಷಯವನ್ನೂ ಹೇಳುತ್ತೇವೆ. (ಯಾವುದೆಂದರೆ) ಮರುತಾಂ=ವಾಯುಗಳ, ಸ್ವನಾತ್=ಧ್ವನಿಮಾತ್ರದಿಂದ ಆ=ಸುತ್ತಲೂ ಇರುವ, ವಿಶ್ವಂ=ಎಲ್ಲಾ, ಪಾರ್ಥಿವಂ=ಪೃಥಿವಿಯಲ್ಲಿ ಹುಟ್ಟತಕ್ಕ, ಸದ್ಮ=ಗೃಹಗಳ ಸಮುದಾಯವು, ಗೃಹಾಭಿಮಾನಿಗಳ ಸಮುದಾಯವು, ಮಾನುಷಾಃ=ಅಲ್ಲಿರುವ ಮನುಷ್ಯರೂ ಕೂಡ ಪ್ರ ಅರೇಜಂತ (ದೇಜೃ ಕಂಪನೇ.) ಹೆದರಿದರು. ॥ ೧೦ ॥ ೧೬ ॥

ಭಾ ॥ (೧) ಮಾನುಷಾದಿತ್ವಮನ್ವಚ್ಚ ಬಿಭೇದೇಷಾಂ ಸ್ವನಾದಪಿ । ಗೃಹಮಾನಿನೋ ಗೃಹಾದ್ಯಂ ವಾ ಚಚಾಲೈಷಾಂ ಸ್ವನಾದಪಿ ॥೧೦ ॥ ೧೬ ॥

ಅ ॥ (೧) ಈ ಮರುತ್‌ಗಳ ಧ್ವನಿ ಮಾತ್ರದಿಂದಲೇ, ಮನುಷ್ಯರೇ ಮೊದಲಾದವರು ಇತರವಾದುದೂ ಕೂಡ ಹೆದರುವವು. (೨) ಈ ಮರುತ್‌ಗಳ ಧ್ವನಿ ಮಾತ್ರದಿಂದಲೇ ಗೃಹಾದ್ಯಭಿಮಾನಿಗಳು ಗೃಹಾದಿಗಳು ಎಲ್ಲವೂ ಹಂದಾಡಿದವು.

ವಿ ॥ (1) ಮಾನುಷಾದಿಕಂ ಎಂದು ಹೇಳದೆ ಮಾನುಷಾದಿತ್ವಂ ಎಂದು ತ್ವಪ್ರತ್ಯಯ ಸಹಿತವಾಗಿ ಹೇಳಿದ್ದು ಜಾತಿ ವ್ಯಕ್ತಿಗಳಿಗೆ ಅಭೇದವು ಎಂದು ತಿಳಿಸುವುದಕ್ಕಾಗಿ. (2) ಅಥವಾ ಪರಮೇಶ್ವರ ವಿಷಯೀಭೂತವಾದ ಸ್ತುತಿರೂಪವಾದ ಧ್ವನಿಯಿಂದ ಕರ್ಮ ಫಲ ರೂಪವಾದುದು ಯಾವುದು ಮಾನುಷತ್ವಪದೆಯೋ, ಯಾವುದು ಗೃಹಾದಿಗಳಲ್ಲಿ ಅಭಿಮಾನವಿಷಯೋ, ಅದೆಲ್ಲವೂ ಹೆದರಿದಂತೆಯೇ ಓಡಿತು, ಎಂಬ ಅರ್ಥವನ್ನು ಸೂಚಿಸುವುದಕ್ಕಾಗಿ. ಮಾನುಷಾದಿತ್ವಂ ಎಂದು ಭಾವ ಪ್ರಧಾನ ನಿರ್ದೇಶವಾಗಿ ವ್ಯಾಖ್ಯಾನ ಮಾಡಿದ್ದು, (3) ಹಾಗಾದರೆ ಅಚೇತನಗಳಾದ ಗೃಹಗಳಿಗೆ ಭಯವು ಹೇಗೆಂದರೆ. ಸದ್ಮ ಶಬ್ದದಿಂದ ಗೃಹಾಭಿಮಾನಿಗಳನ್ನೂ ಇಟ್ಟುಕೊಳ್ಳಬೇಕು. (4) ಅಥವಾ ಪ್ರಾರೇಜಂತ ಎನ್ನುವುದು ಭಯಾರ್ಥಕವಲ್ಲ. ಮತ್ತೆ ಚಲನಾರ್ಥಕವು. ತಥಾಚಸದ್ಮ=ಮನೆಯು, ಹೀಗೆ ಅರ್ಥ ಇಟ್ಟುಕೊಂಡರೂ ವಿರೋಧವಿಲ್ಲ. ॥ ೧೦ ॥ ೧೬ ॥

ಋ ॥ (೪೬೭) ಮರುತೋ ವೀಳುಪಾಣಿಭಿಶ್ಚಿತ್ರಾ ರೋಧಸ್ವತೀರನು । ಯಾತೇ ಮಖಿದ್ರಯಾಮಭಿಃ ॥ ೧೧ ॥

ಅ ॥ ಮರುತಃ=ಎಲೋ ಮರುತ್‌ಗಳೇ (ನೀವು) ವೀಳು ಪಾಣಿಭಿಃ=ದೃಢಗಳಾದ ತಮ್ಮ ಹಸ್ತಗಳಿಂದಲೂ ಅಖಿದ್ರಯಾಮಭಿಃ ಈರ್ಮ=(ಖಿದದ್ಭಿರ್ನೈ) ಭೇದವಿಲ್ಲದಿರುವ ಪಾದಗಳಿಂದಲೂ, ಚಿತ್ರಾಃ=ವಿಚಿತ್ರಗಳಾದ, ರೋಧಸ್ವತೀಃ=ನದಿಗಳನ್ನು, ಅನುಸರಿಸಿ ಹೋಗಿರಿ (ಯಾವ ನದಿಗಳ ತೀರಗಳಲ್ಲಿ ನಾವು ತಪಸ್ಸನ್ನು ಮಾಡುತ್ತಿರುತ್ತೇವೋ ಅಂತಹ ನದಿಗಳನ್ನು ಕುರಿತು ಬನ್ನಿರಿ.) ॥ ೧೧ ॥

ಭಾ ॥ (೧) ಅಖಿನ್ನೈರ್ಗಮನೈಶ್ಚೈವ ದೃಢಸ್ಥೀಯೈಶ್ಚ ಪಾಣಿಭಿಃ । ಅನು ಯಾತ ನದೀಶ್ಚಿತ್ರಾಃ ॥ ೧೧ ॥

ಅ ॥ (ಗಚ್ಛಂತ್ಯೇಭಿಃ ಇತಿ ಗಮನಾಃ=ಪಾದಗಳು,) ಖೇದವಿಲ್ಲದ ಪಾದಗಳಿಂದಲೂ ದೃಢಗಳೂ ತಮ್ಮದ್ದೂ ಆದ ಹಸ್ತಗಳಿಂದಲೂ ವಿಚಿತ್ರಗಳಾದ ನದಿಗಳನ್ನು ಕುರಿತು ಹೋಗಿರಿ.

ವಿ ॥ ಹಂದಾಡಿಸಿದರೂ ಶ್ರಮವಿಲ್ಲದಿರುವ ಹಸ್ತಗಳನ್ನು ಹಂದಾಡಿಸುತ್ತಿರುತ್ತಾರೆ. ವೇಗವುಳ್ಳ ಗಮನದಿಂದ ಯಾವ ನದೀ ತೀರಗಳಲ್ಲಿ ನಾವು ತಪಸ್ಸನ್ನು ಮಾಡುತ್ತಿರುತ್ತೇವೋ ಅಂತಹ ನದಿಗಳನ್ನು ಕುರಿತು ಹೋಗಿರಿ. (2) ಅಥವಾ ಋಗ್ಭಾಷ್ಯದಲ್ಲಿರತಕ್ಕ ಯಾಮನ್ ಗಮನ ಶಬ್ದಗಳು ಕರಣಾರ್ಥಕಗಳು. ಆದ ಕಾರಣ ನೀವು ಹಸ್ತ ಪಾದಗಳಿಂದ ಕೂಡಿದವರು. ಅಚೇತನ ವಾಯು ರೂಪರಲ್ಲ ಎಂದರ್ಥವು. ॥ ೧೧ ॥

ಋ ॥ (೪೬೮) ಸ್ಥಿರಾಃ ವಃ ಸಂತು ನೇಮಯೋ ರಥಾ ಅಶ್ವಾಸ ಏಷಾಂ । ಸುಸಂಸ್ಕೃತಾ ಅಭೀಶವಃ ॥ ೧೨ ॥

ಅ॥ (ಎಲೋ ಮರುತ್‌ಗಳೇ,) ವಃ=ನಿಮಗೆ, (ಇಲ್ಲಿಗೆ ಬರಲಿಕ್ಕೆ) ಸ್ಥಿರಾಃ=ದೃಢಗಳಾದ, ಸುಸಂಸ್ಕೃತಾಃ=ಚೆನ್ನಾಗಿ ಸಂಸ್ಕಾರವುಳ್ಳ, ಅಭೀಷವಃ=ತೇಜಸ್ಸುಳ್ಳ, ರಥಾಃ=ರಥಗಳು ಸಂತು=ಇರುತ್ತವೆ. ಏಷಾಂ=ಆ ರಥಗಳಿಗೆ ನೇಮಯಃ=ಚಕ್ರಗಳು, ಸ್ಥಿರಾಃ=ದೃಢಗಳಾಗಿ ಸಂತು=ಇರುತ್ತವೆ. ಅಶ್ವಾಸಃ=ಆ ರಥಗಳ ಸಂಬಂಧವುಳ್ಳ ಕುದುರೆಗಳೂ ಕೂಡ ದೃಢಗಳಾಗಿವೆ. (ಅಂತಹ ರಥಗಳಿಂದ ಬನ್ನಿರಿ.) ॥ ೧೨ ॥

ಭಾ॥ ಸ್ಥಿರಾಃ ಸಂತಿ ರಥಾದಯಃ ॥ ೧೨ ॥

ಅ॥ ರಥ ಮೊದಲಾದವುಗಳೆಲ್ಲವೂ ದೃಢಗಳಾಗಿಯೇ ಇರುತ್ತವೆ. ॥ ೧೨ ॥

ಮು॥ (೪೬೯) ಅಚ್ಛಾ ವದಾ ತನಾ ಗಿರಾ ಜರಾಯೈ ಬ್ರಹ್ಮಣಸ್ಪತಿಂ। ಅಗ್ನಿಂ ಮಿತ್ರಂ ನ ದರ್ಶತಂ॥ ॥ ೧೩ ॥

ಅ॥ (ಎಲೋ ಕಣ್ವಋಷಿಯೇ, ನೀವು) ಬ್ರಹ್ಮಣಃ ಪತಿಂ=ಚತುರ್ಮುಖ ಬ್ರಹ್ಮನಿಗೆ ಸ್ವಾಮಿಯಾದ ಶ್ರೀವಿಷ್ಣುವನ್ನೂ, ಭಾರತೀಪತಿಯಾದ ಮುಖ್ಯಪ್ರಾಣನನ್ನೂ ತನಾ=(ತನುವಿಸ್ತಾರೇ ಕರಣೇಚ) ವ್ಯಾಪ್ತವಾದ ಬಹು ವಿಷಯಕವಾದ, ಗಿರಾ=ಮಾತಿನಿಂದ, ಜರಾಯೈ=ಚೆನ್ನಾಗಿ ಸ್ತುತಿರೂಪವಾಗಿ, ಅಗ್ನಿಂನ=ಅಗ್ನಿಯನ್ನೆಂಬಂತೆ, ಮಿತ್ರಂನ=ಸೂರ್ಯನನ್ನೆಂಬಂತೆ, ದರ್ಶತಂ=ಹೇಗೆ ಅಗ್ನಿಸೂರ್ಯರು ಬೇರೆ ಪ್ರಕಾಶದ ಅಪೇಕ್ಷೆಯಿಲ್ಲದೇನೇ ತಮ್ಮ ಮಹಿಮೆಯಿಂದಲೇ ಕಾಣಿಸಿಕೊಳ್ಳಲ್ಪಡುತ್ತಾರೋ ಹಾಗೆಯೇ ತನ್ನಪ್ರಸಾದದಿಂದಲೇ ಕಾಣಲ್ಪಡತಕ್ಕವನನ್ನಾಗಿ ಅಚ್ಛವದ=ಯಥಾಯೋಗ್ಯವಾಗಿ ಹೇಳಿರಿ. ॥ ೧೩ ॥

ಭಾ॥ (೧) ಬ್ರಹ್ಮಣಶ್ಚ ಪತಿಂ ವಿಷ್ಣುಂ ಯಥಾವದ್ವ್ಯಾಪ್ತಯಾ ಗಿರಾ। ಜರಾಯೈ ಸಂಸ್ತುತಿತ್ವೇನ (೨) ತೃತೀಯಾ ಭಾವರೂಪಿಣೀ॥ (೩) ಸರ್ವಾ ವಿಭಕ್ತಯಶ್ಚೇತ್ಥಂ ಭಾವವಾಚಿನ್ಯ ಏವ ಚ॥ ಮಹಾವ್ಯಾಕರಣೇ ಸೂತ್ರಮಿತಿ (೪) ಸಂಸ್ತುತಿರೂಪತಃ (೫) ವಿದ ವಿಷ್ಣುಂ ಸ್ವಪ್ರಕಾಶಮಗ್ನಿವತ್ಸೂರ್ಯವತ್ತಥಾ॥ (೬) ಆಹ ಚಾತ್ಮಾನಮೇವಾತ್ರ ದಾರ್ಢ್ಯೇ ಸ್ವಪ್ರತಿಯೋಗಿತಃ॥ ಇತಿ ಸೂತ್ರಾತ್॥ ॥ ೧೩ ॥

ಅ॥ (೧) ಚತುರ್ಮುಖನಿಗೆ ಸ್ವಾಮಿಯಾದ ಶ್ರೀವಿಷ್ಣುವನ್ನೂ ಭಾರತೀಪತಿಯಾದ ಶ್ರೀವಾಯುವನ್ನೂ ಬಹು ವಿಷಯಕವಾದ ಮಾತಿನಿಂದ (ಜರಾಯೈ=ಜ್ವಾಷ್ ವಯೋಹಾನೌ) ಚೆನ್ನಾಗಿ ಸ್ತುತಿರೂಪದಿಂದ ಕೂಡಿದ ಮಾತಿನಿಂದ ಯೋಗ್ಯ ರೀತಿಯಾಗಿ ಹೇಳಿರಿ. (೨) (ಜರಾಯೈ ಎಂಬ ಚತುರ್ಥಿಯು ತೃತೀಯಾರ್ಥದಲ್ಲಿ. ತೃತೀಯಾವಿಭಕ್ತಿಯು ಯಾವ ಅರ್ಥದಲ್ಲಿ ಎಂದರೆ) ತೃತೀಯಾ ವಿಭಕ್ತಿಯು ಭಾವರೂಪವುಳ್ಳದ್ದು. ಇತ್ಥಂಭೂತಲಕ್ಷಣಾರ್ಥಕವಾದುದು. (ಅಂದರೆ– ಫಲದಾನ ಸಾಮರ್ಥ್ಯರೂಪವಾದ ಒಂದಾನೊಂದು ಪ್ರಕಾರವನ್ನು ಹೊಂದಿರುವ ಅಂದರೆ ಫಲವನ್ನು ಕೊಡಲು ಸಮರ್ಥವಾದ ವಚನವನ್ನು ತಿಳಿಸಿಕೊಡುವುದು ಸಂಸ್ತುತಿತ್ವವು. ಅದನ್ನು ಹೇಳುವ ಶಬ್ದದಲ್ಲಿ ಚತುರ್ಥೀ ವಿಭಕ್ತಿಯು ಬರುವುದು (೩) (ಅಥವಾ ಚತುರ್ಥೀ ವಿಭಕ್ತಿಯನ್ನು ತೃತೀಯಾಂತವಾಗಿ ವ್ಯತ್ಯಾಸ ಮಾಡಿಕೊಳ್ಳುವುದು ಬೇಡ. ಜರಾಯೈ ಎಂಬ ಚತುರ್ಥೀ ವಿಭಕ್ತಿಗೇನೇ ಇತ್ಥಂಭೂತಲಕ್ಷಣಾರ್ಥವಾಗಿ ವ್ಯಾಖ್ಯಾನ ಮಾಡಬೇಕು. ಹೇಗೆಂದರೆ) ಸಮಸ್ತ ವಿಭಕ್ತಿಗಳೂ ಕೂಡ ಇತ್ಥಂಭೂತಲಕ್ಷಣರೂಪ ಅರ್ಥವನ್ನು ಹೇಳುವವುಗಳೇ ಹೀಗೆಯೇ ಮಹಾವ್ಯಾಕರಣದಲ್ಲಿ ಈ ಅರ್ಥವನ್ನು ಪ್ರತಿಪಾದಿಸುವ ಸೂತ್ರವಿದೆ. (೪) (ಇದ

ರಿಂದ ಯಾವ ಅರ್ಥವು ಸಿದ್ಧಿಸಿತೆಂದರೆ) ಫಲವನ್ನು ಕೊಡಲಿಕ್ಕೆ ಸಮರ್ಥವಾದುದು ಎಂಬ ಅರ್ಥವನ್ನು ತಿಳಿಸಿಕೊಡುವ ಚೆನ್ನಾಗಿ ಸ್ತುತಿತ್ವದಿಂದ ಕೂಡಿದ ಮಾತಿನಿಂದ. ಎಂದರ್ಥವುಂಟಾಯಿತು.) (೫) ಅಗ್ನಿ ಸೂರ್ಯರಂತೆ ಸ್ವಾಧೀನ ಪ್ರಕಾಶವುಳ್ಳ ಶ್ರೀವಿಷ್ಣುವನ್ನು ತಿಳಿ. ಅಂದರೆ (ಅಗ್ನಿ ಸೂರ್ಯರು ಇತರ ಪ್ರಕಾಶದ ಅಪೇಕ್ಷೆಯಿಲ್ಲದನೇ ತಮ್ಮ ಮಹಿಮೆಯಿಂದಲೇ ಹೇಗೆ ಕಾಣಿಸಿಕೊಳ್ಳುತ್ತಾರೋ. ಹಾಗೆಯೇ ತನ್ನ ಪರಮಾನು ಗ್ರಹದಿಂದಲೇ ಕಾಣಿಸಿಕೊಳ್ಳುವವನು. (ಮಿತ್ರಂ ನ ದರ್ಶತಂ ಎನ್ನುವಲ್ಲಿ ದರ್ಶತ ಶಬ್ದವು ಅಗ್ನಿಗೆ ವಿಶೇಷಣ ವಲ್ಲ ವಿಷ್ಣುವಿಗೇನೇ ವಿಶೇಷಣವು ಎಂದು ತೋರಿಸುವುದಕ್ಕಾಗಿ ಪುನಃ ವಿದವಿಷ್ಣುಂ ಎಂಬಲ್ಲಿ ವಿಷ್ಣುಂ ಎಂದು ಹೇಳಿದ್ದು) (ಈ ಸೂಕ್ತವು ಅಗ್ನಿಯನ್ನೇ ಪ್ರತಿಪಾದಿಸುವುದೆಂದು ಹೇಳಿದರೆ ಮಾರುತ ಸೂಕ್ತವೆಂದುದ್ದು ವಿರುದ್ಧವಾಗುವುದು.) (೬) (ಈ) ಋಕ್ಕಿನಲ್ಲಿ ವದ ಎಂದು ಯಾರನ್ನು ಕುರಿತು ಹೇಳುವುದೆಂದರೆ) ತನ್ನನ್ನು ಕುರಿತೇ ವದ ಎಂದು ಹೇಳಿರುವನು. (ಹಾಗಾದರೆ ಯುಷ್ಮತ್ ಶಬ್ದವಿದ್ದರೇನೇ ಮಧ್ಯಮ ಪುರುಷವು (ವದ ಎಂಬುವುದು) ಕೂಡುವುದರಿಂದ ಆತ್ಮನ್ ಶಬ್ದಕ್ಕೆ ಯುಷ್ಮದರ್ಥತ್ವವು ಹೇಗೆ ಎಂಬ ಅರ್ಥವು) ಕೂಡದಿರುವುದರಿಂದ ವದ ಎಂಬ ಮಧ್ಯಮ ಪುರುಷವು ಹೇಗೆ ಕೂಡುತ್ತದೆ? ಎಂದರೆ) ದಾರ್ಢ್ಯ ಎಂಬ ಅರ್ಥದಲ್ಲಿ ಆತ್ಮಶಬ್ದಕ್ಕೆ ಯುಷ್ಮದರ್ಥತ್ವವಿದೆ. ಎಂಬ ಸೂತ್ರದಿಂದ ಇದು ಉಪಪನ್ನವಾಗುತ್ತದೆ. ॥ ೧೩ ॥

ಋ ॥ (೪೭೦) ಮಿಮೀಹಿ ಶ್ಲೋಕಮಾಸ್ಯೇ ಪರ್ಜನ್ಯ ಇವ ತತನಃ ।
ಗಾಯ ಗಾಯತ್ರಮುಕ್ಥ್ಯಂ ॥ ೧೪ ॥

ಅ ॥ (ಆತ್ಮನ್=ಎಲೋ ಆತ್ಮನೇ, ತ್ವಂ=ನೀನು,) (ಈ ವಿಷ್ಣುವಿನ) ಶ್ಲೋಕಂ=ಕೀರ್ತಿಯನ್ನು ಆಸ್ಯೇ= ಮುಖದಲ್ಲಿ, ಮಿಮೀಹಿ =(ಮಾಙ್ ಮಾನೇ.) ನಿರ್ಮಿಸುತ್ತಿರು. ಸದಾ ಮಾಡುತ್ತಿರು- ಪರ್ಜನ್ಯ ಇವ =ಧ್ವನಿಯುಕ್ತವಾದ ಮೇಘದಂತೆ, (ಪರ್ಜನ್ಯೋ ಮೇಘಶಬ್ದೇಽಪಿ ಧ್ವನದಂಬುದಶಕ್ರಯೋ.) ಇತಿವಿಶ್ವಃ) ತತನಃ=(ತನುವಿಸ್ತಾರೇ ಕರಣೇಚ) ವಿಸ್ತರಿಸು, ಶಿಷ್ಯರಿಗೂ ಉಪದೇಶಿಸು. (ಅಂದರೆ ಮೇಘವು ಹೇಗೆ ಮಳೆಯನ್ನು ಸರ್ವತ್ರ ವಿಸ್ತರಿಸುತ್ತದೋ, ತನ್ನಲ್ಲಿ ಮಾತ್ರ ನೀರನ್ನು ಮಾಡುವುದಿಲ್ಲ) ಹಾಗೆಯೇ ನೀನು ಶ್ರೀಹರಿಯ ಸಂಬಂಧವಾದ ಕೀರ್ತಿಯನ್ನು ಜಗತ್ತಿನಲ್ಲಿಯೂ ವಿಸ್ತರಿಸು) ಮತ್ತು ಉಕ್ಥ್ಯಂ= (ಪ್ರಾಣೋ ವಾ ಉಕ್ಥಂ ಎಂಬ ಶ್ರುತಿಯಿಂದ ಉಕ್ಥ್ಯಃ =ಚತುರ್ಮುಖನಿಗೆ ಅಧಿಪತಿಯಾದ ಶ್ರೀವಿಷ್ಣುವು) ವಿಷ್ಣು ವಿಷಯಕವಾದ ಗಾಯತ್ರಂ =ಗಾಯತ್ರ ಸಾಮವನ್ನು ಗಾಯ=(ಗೈ ಶಬ್ದೇ) ಗಾನಮಾಡು ॥ ೧೪ ॥

ಭಾ ॥ (೧) ಕೀರ್ತಿಮಸ್ಯ ವಿಷ್ಣೋಃ ಕುರುಮುಖೇ ಸದಾ । (೨) ವಿಸ್ತಾರಯತಿ ಪರ್ಜನ್ಯೋ ಯದ್ವದ್ವೃಷ್ಟಿಂ ತಥೈವ ಚ । ವಿಸ್ತೃಣೀಹಿ ತಥೇಶಸ್ಯ ತಥಾ ಕೀರ್ತಿಂ ಜಗತ್ಯಪಿ ॥ ೧೪ ॥

ಅ ॥ (೧) (ಇಲ್ಲಿಯೂ ಕಣ್ವ ಋಷಿಯು ತನ್ನನ್ನು ಕುರಿತೇ ಹೇಳುತ್ತಾನೆ.) ಈ ವಿಷ್ಣುವಿನ ಕೀರ್ತಿಯನ್ನು ಆಸ್ಯದಲ್ಲಿ ಸದಾ ಮಾಡುತ್ತಿರು. (ಸರ್ವದಾ ಸ್ತುತಿಸುತ್ತಿರು.) (೨) ಧ್ವನಿ ಗೈಯುವ ಮೇಘವು ವೃಷ್ಟಿಯನ್ನು ಹೇಗೆ ವಿಸ್ತರಿಸುತ್ತದೋ ಹಾಗೆಯೇ ಶ್ರೀಹರಿಯ ಕೀರ್ತಿಯನ್ನೂ ಜಗತ್ತಿನಲ್ಲಿಯೂ ಕೂಡ ವಿಸ್ತಾರಗೊಳಿಸು. ॥ ೧೪ ॥

ಋ ॥ (೪೭೧) ವಂದಸ್ವ ಮಾರುತಂ ಗಣಂ ತ್ವೇಷಂ ಪನಸ್ಯುಮರ್ಕಿಣಂ ।

ಅಸ್ಮೇ ವೃದ್ಧಾ ಅಸನ್ನಿಹ ॥ ೧೫ ॥ ೧೭ ॥ ೩೮ ॥

ಅ ॥ (ಇಲ್ಲಿಯೂ ಕಣ್ವ ಋಷಿಯು ತನ್ನನ್ನು ಕುರಿತೇ ಹೇಳುವುದು.) (ಎಲೋ ಆತ್ಮನೇ ನೀನು) ತ್ವೇಷಂ=ಪ್ರಕಾಶವುಳ್ಳ, ಪನಸ್ಯುಂ=(ಪನ ಜ್ಞಾನೇ) ಜ್ಞಾನವೇ ಸ್ವಭಾವವಾಗಿ ಉಳ್ಳ, ಅರ್ಕಿಣಂ= (ಅರ್ಕಾಃ= ಋಚಃ ಅಸ್ಯ ಜ್ಞಾಪಿಕಾಃ ಸಂತಿ ಎಂಬ ವ್ಯುತ್ಪತ್ತಿಯಿಂದ) ಋಕ್ಕುಗಳಿಂದ ಜ್ಞೇಯನಾದ, ಮಾರುತಂ ಗಣಂ= ಮರುತ್‌ಗಳ ಸಂಬಂಧಿಯಾದ ಗಣವನ್ನೂ, ವಂದಸ್ವ=ಸ್ತುತಿಸು. (ಸ್ತುತಿಸಲಿಕ್ಕೆ ತಿಳಿಯುವುದಿಲ್ಲ, ಎಂದು ಹೇಳ ಕೂಡದು. ಏಕೆಂದರೆ) ಅಸ್ಮೇ=ನಮಗೆ, ಇಹ=ಈ ಮರುತ್ ನಿಮಿತ್ತವಾಗಿ ಮರುತ್‌ಗಳ ಅನುಗ್ರಹದಿಂದ ವೃದ್ಧಾಃ=ವೃದ್ಧರು, ಅಸನ್=ಜ್ಞಾಪಕರಾದರು. ॥ ೧೫ ॥

ಭಾ ॥ (೧) ಪನಸ್ಯುಂ ಜ್ಞಾನಶೀಲಂ ಚ ವಿಜ್ಞೇಯಂ ಗಣಮರ್ಕಿಣಂ (೨) ಅಭವನ್ ಜ್ಞಾಪಕಾ ವೃದ್ಧಾಃ ಅಸ್ಮಾಕಂ ತದನುಗ್ರಹಾತ್ ॥ ೧೫ ॥

ಅ ॥ (೧) ಪನಸ್ಯುಂ ಜ್ಞಾನವೇ ಸ್ವಭಾವವಾಗಿ ಉಳ್ಳದ್ದು, ಅರ್ಕಿಣಂ=ಋಕ್ಕುಗಳಿಂದ ತಿಳಿಯಬೇಕಾದುದು, ಇಂತಹ ಮರುದ್ಗಣವನ್ನು ಸ್ತುತಿಸು. (೨) ನಮಗೆ ಆ ಮರುತ್‌ಗಳ ಅನುಗ್ರಹದಿಂದ ವೃದ್ಧರು ಜ್ಞಾಪಕರಾಗುತ್ತಾರೆ. (ವೃದ್ಧರು ತತ್ವವನ್ನೂ ತಿಳಿಸಿರುವರು.) ॥ ೧೫ ॥ ೧೭ ॥ ೬ ॥

ಅ ವ॥ ಪ್ರಯತ್ ಇತ್ಯಾದಿಗಳು ೧೦ ಋಕ್ಕುಗಳುಳ್ಳದ್ದು. ೨ ವರ್ಗಗಳು. ಮರುದ್ದೇವತಾಕವು. ಪ್ರಗಾಥಾ ಛಂದಸ್ಕವು. ಅವುಗಳಲ್ಲಿ ವಿಷಮ ಋಕ್ಕುಗಳು ಬೃಹತೀ ಛಂದಸ್ಕಗಳು. ಸಮ ಋಕ್ಕುಗಳು ಸತೋ ಬೃಹತೀ ಛಂದಸ್ಕಗಳು. ಕಣ್ವರೇ ಋಷಿಗಳು. ೩೯ನೇ ಸೂಕ್ತವು.

ಋ ॥ (೪೭೨) ಪ್ರಯದಿತ್ಥಾ ಪರಾವತಃ ಶೋಚಿರ್ನ ಮಾನಮಸ್ಯಥ ।

ಕಸ್ಯ ಕ್ರತ್ವಾ ಮರುತಃ ಕಸ್ಯ ವರ್ಪಸಾ ಕಂ ಯಾಥ ಕಂ ಹ ಧೂತಯಃ ॥ ೧ ॥

ಅ॥ ಮರುತ್:=ಎಲೋ ಮರುತ್‌ಗಳೇ ನೀವು ಪರಾವತಃ=ದೂರದಲ್ಲಿಯೇ (ಶ್ರೀಹರಿಯ ಸ್ಥಾನವಾದ ಸ್ವರ್ಗಲೋಕದಲ್ಲಿ ನಿಂತುಕೊಂಡೇ ಪ್ರಾಣಿಗಳಲ್ಲಿ) ಶೋಚಿರ್ನ=ಪ್ರಕಾಶವನ್ನೆಂಬಂತೆ ಮಾನಂ=ಜ್ಞಾನವನ್ನು ಪ್ರ ಅಸ್ಯಥ=(ಅಕ್ಷೇಪೇ) ಚೆನ್ನಾಗಿ ಅಲ್ಪೀಕರಿಸಿರಿ (ಅಂದರೆ–ಸೂರ್ಯಾದಿಗಳು ಪ್ರಕಾಶವನ್ನು ಹೇಗೆ ದೂರದಿಂದಲೇ ಪ್ರಾಣಿಗಳಲ್ಲಿ ಹೊಂದಿಸಿಕೊಡುವರೋ, ಹೀಗೆಯೇ ಸತ್ಸಂಪ್ರದಾಯದಿಂದ ಬಂದಾಗ್ಯೂ ನೀಚರಲ್ಲಿರತಕ್ಕ ಜ್ಞಾನವನ್ನು ತಮ್ಮ ಜ್ಞಾನಕ್ಕಿಂತ ಅಲ್ಪವನ್ನಾಗಿ ಮಾಡಿರಿ.) ಏವಂಚ ಎಲೋ ಮರುತ್‌ಗಳೇ, ಅಥವಾ ಶ್ರೀವಿಷ್ಣುವೇ ಶ್ರೀವಿಷ್ಣುರೂಪ ವಿಶೇಷಗಳೇ ಸತ್ಸಂಪ್ರದಾಯದಿಂದ ಬಂದಿರುವ ನೀಚರಲ್ಲಿರುವ ಜ್ಞಾನವನ್ನು ತಮ್ಮ ಜ್ಞಾನಕ್ಕಿಂತ ಅಲ್ಪವನ್ನಾಗಿ ಮಾಡಿರಿ.) ಯತ್ ಇತ್ಥಾ=ಯಾವುದು ಯಾವುದು ಹೀಗೆಯೇ ಎಂದು ಪ್ರಮಿತವಾಗಿದೆಯೋ (ಅದು ಹಾಗೆಯೇ ಮರುತ್‌ಗಳಾದ ನಿಮಗೆ ಮಾಡಲ್ಪಟ್ಟಿದೆ. ಅಂದರೆ ಸತ್ಪ್ರಕಾರವಾದ ಕಾರ್ಯ

ಸಮುದಾಯವನ್ನು ನೀವೇ ನಿರ್ಮಿಸಿದ್ದು.) (ಹೀಗೆಯೇ ನೀವು ಜ್ಞಾನಪೂರ್ವಕವಾಗಿ ಎಲ್ಲಿಗಾದರೂ ಹೋಗುವಿರೋ, ಯತ್ಕಿಂಚಿತ್ ಜ್ಞಾನವಿಷಯವನ್ನು ಮಾಡುತ್ತೀರೋ, ತಿಳಿಯುತ್ತೀರೋ, ಅದು) ಕಸ್ಯ=ಯಾರ ಅಧೀನವಾಗಿ, ಕ್ರತ್ವಾ=ಜ್ಞಾನಪೂರ್ವಕವಾಗಿ, (ಬಲಾತ್ಕಾರವಾಗಿ ಎಲ್ಲಿಗಾದರೂ ಹೋಗುವಿರೋ ಬಲವಿಷಯವನ್ನು ಮಾಡುವಿರೋ, ಅದು ಕಸ್ಯ=ಯಾರ ಅಧೀನವಾದ ವರ್ಪಸಾ=ಬಲದಿಂದ (ಸರ್ವಸ್ವಾತಂತ್ರ್ಯವಿದ್ದುದರಿಂದ ಜ್ಞಾನದಲ್ಲಿ ಬಲದಲ್ಲಿ ಆಗಲೀ ಪರಾಪೇಕ್ಷೆಯು ಇಲ್ಲ. ಮತ್ತೆ) ಕಂ=ಯತ್ಕಿಂಚಿತ್ ವಿಷಯವನ್ನು ಯಾಥ=ತಿಳಿಯುವಿರಿ.ಅದು (ಸ್ವಾಧೀನವಾದ ಜ್ಞಾನದಿಂದಲೇ, (ಯಾವುದು ಬಲಾತ್ಕಾರದಿಂದ) ಕಂ ಧೂತಯಃ=ನೀವು ಯಾರನ್ನಾದರೂ ನಡುಗಿಸುವಿರೋ, (ಅದು ತನ್ನ ಬಲದಿಂದಲೇ) ಹ=ಪ್ರಸಿದ್ಧ. ॥ ೧ ॥

ಭಾ॥ (೧) ಹೇ ಮರುತೋ ಹರೇಃ ಸ್ಥಾನಾತ್ ಜ್ಞಾನಂ ಶೋಚಿರಿವಾಸ್ಯಥ॥ (೨) ಸೂರ್ಯಾದಯೋ ಯಥಾ ಶೋಚಿರ್ದೂರಾದಸ್ಯಂತಿ ಜಂತುಷು॥ ಏವಂ ಜ್ಞಾನಂ ಸಂಪ್ರದಾಯಾನ್ಮರುತೋ ವಿಷ್ಣುರೇವ ವಾ।(೩) ಇತ್ಥಂ ಯಥಾ ಸರ್ವದೃಶ್ಯಂ ತತ್ತಥಾ ಭವತಾಂಕೃತಂ॥ (೪) ಏವಂ ಯತ್ರ ಕ್ವವಾ ಜ್ಞಾನಾದ್ಬಲಾದ್ವಾ ಗಚ್ಛಥ ಕ್ವಚಿತ್॥ (೫) ಸ್ವತಂತ್ರತ್ವಾತ್ಪರಾಪೇಕ್ಷಾನ ಹಿ ವಃ ಕ್ವಚಿದಿಷ್ಯತೇ ॥ (೬) ಕಿಂಚಿದ್ಯಾಥ ಬಲಾತ್ಕಿಂಚಿದ್ಧೂನುಥ ಸ್ವಬಲಾದ್ಧಿ ತತ್ ॥ ೧ ॥

ಅ॥ (೧)ಎಲೋ ಮರುತುಗಳೇ ದೂರದಲ್ಲಿ ಅಂದರೆ ಶ್ರೀ ಹರಿಯ ಸ್ಥಾನದಲ್ಲಿ ಅಂದರೆ ತನ್ನ ಲೋಕದ ಕ್ಷೇತ್ರದೇ ಪ್ರಾಣಿಗಳಲ್ಲಿ ಪ್ರಕಾಶವನ್ನೆಂಬಂತೆ. ಜ್ಞಾನವನ್ನು ನಿರಾಕರಿಸಿರಿ. (೨) (ಇದನ್ನೇ ವಿವರಿಸುತ್ತಾರೆ.) ಶ್ರೀ ವಿಷ್ಣುವೇ ಮುಖ್ಯ ವೃತ್ತಿಯಿಂದ ಈ ಮಂತ್ರ ಪ್ರತಿಪಾದ್ಯನು. ಸೂರ್ಯಾದಿಗಳು ಹೇಗೆ ಪ್ರಕಾಶವನ್ನು ದೂರದಿಂದಲೇ ಪ್ರಾಣಿಗಳಲ್ಲಿ ಇಡುತ್ತಾರೋ ಹೀಗೆಯೇ ಸಂಪ್ರದಾಯದಿಂದ ಬಂದಿರುವ ಜ್ಞಾನವನ್ನು ಮರುತ್ತುಗಳು ಶ್ರೀ ವಿಷ್ಣುವು ಅಥವಾ ಮರುನ್ನಾಮಕ ವಿಷ್ಣುರೂಪ ವಿಶೇಷಗಳು ಪ್ರಾಣಿಗಳಲ್ಲಿ ಇಡುತ್ತಾರೆ. (೩) ಮತ್ತು ಯಾವುದು ಯಾವುದು ಸರ್ವರಿಂದಲೂ ದೃಶ್ಯವಾಗಿ ಪ್ರಕಾಶವಾಗಿದೆಯೋ, ಅದು ಹಾಗೆಯೇ ಮರುನ್ನಾಮಕರಾದ ನಿಮಗೋಸ್ಕರ ಮಾಡಲ್ಪಟ್ಟಿದೆ. (ಅಂದರೆ ಭೂತಾದಿಗಳಿಂದ ಕೂಡಿದ ಕಾರ್ಯ ಸಮುದಾಯವನ್ನು ನೀವೇ ಮಾಡಿದ್ದು) (೪) ಹೀಗೆಯೇ ಇತರವನ್ನು ಇಟ್ಟುಕೊಳ್ಳಬೇಕು. ಹೀಗೆಯೇ ಜ್ಞಾನಪೂರ್ವಕವಾಗಿ ಎಲ್ಲಿಗಾದರೂ ಹೋಗುವಿರೋ, ಯತ್ಕಿಂಚಿತ್ ಜ್ಞಾನವಿಷಯವನ್ನು ತಿಳಿಯುತ್ತೀರೋ, ಅದು ಯಾರ ಅಧೀನವಾದ ಜ್ಞಾನದಿಂದ ಯಾವುದಾದರೂ ಬಲಾತ್ಕಾರದಿಂದ ಎಲ್ಲಿಗಾದರೂ ಹೋಗುವಿರೋ (ಅಂದರೆ ಬಲ ವಿಷಯವನ್ನು ಮಾಡುತ್ತೀರೋ ಅದು ಯಾರ ಅಧೀನವಾದ ಬಲದಿಂದ (೫)(ಆಕ್ಷೇಪದ ತಾತ್ಪರ್ಯ ಹೇಳುತ್ತಾರೆ.) ಸರ್ವ ಸ್ವಾತಂತ್ರ್ಯವಿದ್ದುದರಿಂದ ಜ್ಞಾನದಲ್ಲಿಯೂ ಬಲದಲ್ಲಿಯೂ ಎಲ್ಲಿಯೂ ನಿಮಗೆ ಇತರಾಪೇಕ್ಷೆಯು ಇಲ್ಲವೇ ಇಲ್ಲ, (೬) ಯಾವುದನ್ನಾದರೂ ತಿಳಿಯುತ್ತೀರೋ ಅದು ಸ್ವಾಧೀನವೇ ಆದ ಜ್ಞಾನದಿಂದಲೇ ಯಾವುದನ್ನಾದರೂ ಬಲಾತ್ಕಾರದಿಂದ ನಡುಗಿಸುತ್ತೀರೋ ಅದು ಸ್ವಾಧೀನವೇ ಆದ ಬಲಾತ್ಕಾರದಿಂದಲೇ ॥ ೧ ॥

ಋಮ ॥ (೪೭೩) ಸ್ಥಿರಾ ವಃ ಸಂತ್ವಾಯುಧಾ ಪರಾಣುದೇ ವೀಳೂ ಉತ ಪ್ರತಿಷ್ಕಭೇ । ಯುಷ್ಮಾಕಮಸ್ತು ತವಿಷೀ ಪನೀಯಸೀ ಮಾ ಮರ್ತ್ಯಸ್ಯ ಮಾಯಿನಃ ॥ ೨ ॥

ಅ ॥ (ಎಲೋ ಮರುತ್‌ಗಳೇ) ವಃ= ನಿಮಗೆ, ಪರಾಣುದೇ= ಈ ಜಗತ್ತಿನಲ್ಲಿ ಶತ್ರುಗಳನ್ನು ನಾಶಗೊಳಿಸುವುದಕ್ಕಾಗಿ ಉತ ಪ್ರತಿಷ್ಕಭೇ= (ಷ್ಕಭಿ ಸ್ಕಭಿ ಪ್ರತಿಬಂಧೇ) ಶತ್ರುಗಳನ್ನು ಸ್ತಂಭಿಸುವುದಕ್ಕಾಗಿಯೂ ಆಯುಧಾ= ಆಯುಧಗಳು ಸಂತು =ಇರುತ್ತವೆ. (ಕೇವಲ ಆಯುಧ ಮಾತ್ರವಲ್ಲ ಮತ್ತೆ ಆ ಆಯುಧಗಳು ಸ್ಥಿರಾ= ಸ್ಥಿರಗಳು. ವೀಳು= ಸದಾ ಸುದೃಢಗಳೇ ಆಗಿವೆ. (ಸ್ಥಿರ ಶಬ್ದ ವಾಚ್ಯವಾದ ದೀರ್ಘಕಾಲದಲ್ಲಿದ್ದುದರಿಂದಲೇ ವೀಳು ಶಬ್ದವಾಚ್ಯಗಳಿಂದ ದೃಢಗಳಾಗಿವೆ.) ಯುಷ್ಮಾಕಂ =ನಿಮಗೆ, ಪನೀಯಸೀ =(ಪಣ ವ್ಯವಹಾರೇ ಸ್ತುತೌಚ) ಸ್ತುತಿಯಿಂದ ಸದಾ ಉತ್ತಮವಾದ; ತವಿಷಿ= ತೇಜಸ್ಸು, ಅಥವಾ ಬಲವು, ಅಸ್ತು= ಇದೆ. ಮಾಯಿನಃ= (ಮಾಯಾ ದಂಭೇ ಕೃಪಾಯಾಂ ಚ. ದಂಭಸ್ತು ಕೈತವೇ ಕಲ್ಕೇ ಇತಿವಿಶ್ವಃ) ಮನುಷ್ಯರಾದ ಕಪಟಿಗಳಾದ ದೈತ್ಯಾದಿಗಳಿಗೆ, ಪನೀಯಸೀ ತವಿಷೀ =ಉತ್ತಮವಾದ ಬಲವು ಅಥವಾ ಉತ್ತಮವಾದ ತೇಜಸ್ಸು, ಮಾ ಅಸ್ತು, ಇಲ್ಲ ಹಿ= ಪ್ರಸಿದ್ಧವು. (ಆದಕಾರಣ ನಮ್ಮ ತಪಸ್ಸಿಗೆ ವಿಘ್ನ ಮಾಡುವವರನ್ನು ಸಂಹರಿಸಿರಿ.) ॥ ೨ ॥

ಭಾ॥ (೧) ಶತ್ರೂಣಾಮಪನೋದಾಯ ಸ್ತಂತು ವಸ್ತ್ವಾಯುಧ ಹೇತಯಃ। ಸ್ತಂಭನಾಯ ಚ ಶತ್ರೂಣಾಂ ಸುದೃಢಾನ್ಯೇವ ತಾನ್ಯಸದಾ॥ (೨) ಸ್ಥಿರತ್ವಂ ದೀರ್ಘಕಾಲತ್ವಂ ವೀಳುತ್ವಂ ದೃಢತಾ ತಥಾ ॥ (೩) ಯುಷ್ಮಾಕಂ ತವೀಷೀ ತೇಜೋ ಬಲಮಸ್ತ್ಯುತ್ತಮಂ ಸದಾ ॥ (೪) ಮಾಯಿನೋ ನ ಹಿ ಮರ್ತ್ಯಸ್ಯ ಬಲಂ ತೇಜೋsಥ ವೋತ್ತಮಂ ॥ ೨ ॥

ಅ ॥ ಮರುತ್‌ಗಳೇ ನಿಮಗೆ ಈ ಜಗತ್ತಿನಲ್ಲಿರತಕ್ಕ ಶತ್ರುಗಳನ್ನು ನಿರಾಕರಿಸುವುದಕ್ಕಾಗಿಯೂ ಶತ್ರುಗಳನ್ನು ಸ್ತಂಭಿಸುವುದಕ್ಕಾಗಿಯೂ ಆಯುಧಗಳು ಇರುತ್ತವೆ. (ಆಯುಧ ಮಾತ್ರವಲ್ಲ. ಮತ್ತೆ ಆ ಆಯುಧಗಳು) ಸುದೃಢಗಳಾಗಿಯೇ ಇವೆ. (೨) (ಸ್ಥಿರತ್ವ ವೀಳುತ್ವಗಳಿಗೆ ಏನು ಭೇದವು? ಎಂದರೆ) ಸ್ಥಿರತ್ವವೆಂದರೆ ದೀರ್ಘಕಾಲದಲ್ಲಿರುವಿಕೆ. ವೀಳುತ್ವವೆಂದು ಅತಿದಾರ್ಢ್ಯವು. (೩) ನಿಮಗೆ, ತವಿಷೀ= ತೇಜಸ್ಸು ಅಥವಾ ಸ್ತುತಿಯಿಂದ ಸದಾ ಅತ್ಯುತ್ತಮವಾದ ಬಲವಿದೆ. (೪) ಕಪಟಿಗಳಾದ ಮನುಷ್ಯರಾದ ದೈತ್ಯಾದಿಗಳಿಗೆ ಬಲವು ಅಥವಾ ಉತ್ತಮವಾದ ತೇಜಸ್ಸಾಗಲೀ ಇಲ್ಲವೇ ಇಲ್ಲ. (ಮರುತ್‌ಗಳ ಮಾಹಾತ್ಮ್ಯವನ್ನು ಹೇಳುವ ಸಮಯದಲ್ಲಿ ದೈತ್ಯಾದಿಗಳ ಬಲವನ್ನಾಗಲೀ ತೇಜಸ್ಸನ್ನಾಗಲೀ ನಿಷೇಧಿಸುವುದು ಅಸಂಗತವೆಂದರೆ) ನಮ್ಮ ತಪಸ್ಸಿಗೆ ವಿಘ್ನಕಾರಿಗಳಾದ ದೈತ್ಯಾದಿಗಳನ್ನು ಸಂಹರಿಸಿರಿ ಎಂದು ತಾತ್ಪರ್ಯವು. ॥ ೨ ॥

ಋ॥ (೪೭೪) ಪರಾ ಹ ಯತ್ಸ್ಥಿರಂ ಹಥ ನರೋ ವರ್ತಯಥಾ ಗುರು ।
ವಿ ಯಾಥನ ವನಿನಃ ಪೃಥಿವ್ಯಾ ವ್ಯಾಶಾಃ ಪರ್ವತಾನಾಂ ॥ ೩ ॥

ಅ ॥ (ಎಲೋ ಮರುತ್‌ಗಳೇ, ನೀವು) ಯತ್ =ಯಾವುದು, ಸ್ಥಿರಂ= ದೀರ್ಘಕಾಲದಲ್ಲಿರತಕ್ಕ ಅನಾದಿಯಾದ ಅಜ್ಞಾನ ಪಾಪಾದಿಗಳು ಇವೆಯೋ, ತತ್ =ಅವೆಲ್ಲವನ್ನೂ, ಭಕ್ತಾಯ= ನಿಮ್ಮ ಭಕ್ತನದ್ದನ್ನು, ಪರಾಹಥ= ವಿನಾಶಗೊಳಿಸಿರಿ. ಗುರು= ಉತ್ತಮವಾದಾಗ್ಯೂ, ನರಃ =ಮನುಷ್ಯರನ್ನು (ನಿತ್ಯದಲ್ಲಿಯೂ ಚೆನ್ನಾಗಿ ಗುಣಗಳನ್ನು ಕೊಟ್ಟು) ವರ್ತಯಥ =ಇರಿಸುತ್ತೀರಿ. (ನೀವು) ವನಿನಃ= ಅರಣ್ಯ ಸಂಬಂಧಿಗಳಾದ, ತರೂನ್= ವೃಕ್ಷಗಳನ್ನು, (ಹರಿಪಕ್ಷದಲ್ಲಿ) ಭಜಿಸಿಕೊಳ್ಳಲು ಯೋಗ್ಯರಾದ ದೇವತೆಗಳನ್ನು ಕುರಿತು, ವಿಯಾಥನ=ವಿಶೇಷವಾಗಿ ಹೋಗಿರಿ. ಪರ್ವತಾನಾಂ ಪೃಥಿವ್ಯಾಶ್ಚ= ಪರ್ವತಗಳ ಮತ್ತು ಪೃಥಿವಿಯ, ಆಶಾಃ= ದಿಕ್ಕುಗಳನ್ನೂ ಪ್ರದೇಶಗಳನ್ನೂ) ಸರ್ವಥಾ, ವಿಯಾಥನ =ಹೋಗಿರಿ. (ನಿಮಗೆ ಅಗಮ್ಯವಾದುದು ಯಾವುದೂ ಇಲ್ಲ. ॥ ೩ ॥

ಭಾ ॥ (೧) ಸ್ಥಿರಂ ಚಾಜ್ಞಾನಪಾಪಾದಿ ತದ್ಭಕ್ತ್ಯಾ ಪರಾಹಥ । (೨) ಗುರೂನಪಿ
ನರಾನ್ನಿತ್ಯಂ ಗುಣೈರ್ವರ್ತಯಥಾಂಜಸಾ ॥ (೩) ಪರ್ವತಾನಾಂ ಪೃಥಿವ್ಯಾಶ್ಚ
ದಿಶೋ ನಿತ್ಯಂ ವಿಯಾಥನ । (೪) ವನಿನಶ್ಚ ತರೂನ್ ಸಮ್ಯಕ್ ಭಜನೀಯಾನ್
ಸುರಾನ್ ಹರಿಃ ॥ ೩ ॥

ಅ ॥ ಸ್ಥಿರವಾದ ದೀರ್ಘಕಾಲಿಕವಾದ ಅನಾದಿ ಅಜ್ಞಾನ ಪಾಪಾದಿಗಳು ಇವೆಯೋ, ನಿಮ್ಮ ಭಕ್ತನ ಸಂಬಂಧಿಗಳಾದ ಅವುಗಳನ್ನು ವಿನಾಶಗೊಳಿಸಿರಿ. [೨] ಉತ್ತಮರಾದ ಮನುಷ್ಯರನ್ನು (ರಿಗೆ) ಚೆನ್ನಾಗಿ ಗುಣಗಳನ್ನು ಕೊಟ್ಟು ಇರಿಸುತ್ತೀರಿ. (ಪರ್ವತಗಳ ಮತ್ತು ಪೃಥಿವಿಯ ಭಾಗಗಳನ್ನು ನಿತ್ಯದಲ್ಲಿಯೂ, ವಿಶೇಷವಾಗಿ ಹೋಗಿರಿ. (ನಿಮಗೆ ಅಗಮ್ಯವಾದುದು ಯಾವುದೂ ಇಲ್ಲ) (೪) ಅರಣ್ಯ ಸಂಬಂಧಿಗಳಾದ ವೃಕ್ಷಗಳನ್ನು ವಿಶೇಷವಾಗಿ ಹೊಂದಿರಿ. ಶ್ರೀಹರಿಯು ಚೆನ್ನಾಗಿ ಭಜಿಸುತ್ತಿರುವ ದೇವತೆಗಳನ್ನು ಹೊಂದುತ್ತಾನೆ. (ವಿಷ್ಣು ಪಕ್ಷದಲ್ಲಿ ಪೃಥಿವ್ಯಾಃ ಪರ್ವತಾನಾಂ ವ್ಯಾಶಾಃ ಎನ್ನುವುದಕ್ಕೆ ಏನರ್ಥವು ಎಂದರೆ) ಮಹೀ ದ್ಯೌಃ ಪೃಥಿವೀ ಚನ ಎಂಬ ಋಗ್ವ್ಯಾಖ್ಯಾನದಲ್ಲಿ ಪೃಥಿವೀ ಶಬ್ದವು ಭೂದೇವಿಪರವೆಂದೂ, ಯ ಈಂಖಯಂತಿ ಪರ್ವತಾನ್ ಎಂಬಲ್ಲಿ ಪರ್ವತ ಶಬ್ದವು ಜನ್ಮಾಖ್ಯ ಪರ್ವವಿದ್ದುದರಿಂದ ಚೇತನಾರ್ಥಕವೆಂದೂ ವ್ಯಾಖ್ಯಾತವಾಗಿದೆ. ಪೃಥಿವೀ ಶಬ್ದವಾಚ್ಯಳಾದ ಭೂದೇವಿಯ, ಪರ್ವತ ಶಬ್ದವಾಚ್ಯರಾದ ಸಮಸ್ತ ಜೀವರ ಆಶಾಃ= ಅಪೇಕ್ಷೆಗಳನ್ನು ವಿಯಾಥನ= ಹೊಂದುತ್ತೀರಿ. ॥ ೩ ॥

ಋ ॥ (೪೭೫) ನಹಿ ವಃ ಶತ್ರುರ್ವಿವಿದೇ ಅಧಿ ದ್ಯವಿ ನ ಭೂಮ್ಯಾಂ ರಿಶಾದಸಃ। ಯುಷ್ಮಾಕಮಸ್ತು ತವಿಷೀ ತನಾ ಯುಜಾ ರುದ್ರಾಸೋ ನೂ ಚಿದಾಧೃಷೇ ॥ ೪ ॥

ಅ ॥ ಹೇ ರಿಶಾದಸಃ=(ರಿಶಾ= ಸುಖದಿಂದ, (ಸಾಧನ ಮೊದಲಾದುವುಗಳನ್ನು ಸಂಪಾದಿಸುವಿಕೆ, ಮೊದಲಾದ ಆಯಾಸವಿಲ್ಲದೇನೇ) ಶ= ಸುಖವನ್ನು, ಅದಂತಿ-ಅನುಭವಿಸುತ್ತಾರೆ, ಎಂಬ ವ್ಯುತ್ಪತ್ತಿಯಿಂದ) ಚೆನ್ನಾಗಿ ಸುಖವುಳ್ಳ ಎಲೈ ಮರುತ್‌ಗಳೇ, ವಃ= ನಿಮಗೆ, ದ್ಯವಿ= ಸ್ವರ್ಗದಲ್ಲಿ, ಶತ್ರುಃ= ನಾಶಕನು, ನ ಹಿ ಅಧಿ ವಿವಿದೇ= ಸರ್ವಥಾ ಹೊಂದಲ್ಪಡುವುದೇ ಇಲ್ಲ ಭೂಮ್ಯಾಂ= ಭೂಮಿಯಲ್ಲಿಯೂ, ನ ಅಧಿ ವಿವಿದೇ= (ವಿದ್ಲೃ ಲಾಭೇ) ಎಲ್ಲಿಯೂ ಸರ್ವಥಾ ಹೊಂದಲ್ಪಡುವುದೇ ಇಲ್ಲ. ಏಕೆಂದರೆ-ರುದ್ರಾಸಃ= ರೋಗ ಪರಿಹಾರಕರಾದ ಮರುತ್‌ಗಳೇ, ನಿಮಗೆ, ನು ಚಿತ್= ಈಗಲೂ ಕೂಡ ಸರ್ವದಾ, ಆ ಧೃಷೇ (ಆ ಞಿ ಧೃಷಾ ಪ್ರಾಗಲ್ಭ್ಯೇ) ಸಮಸ್ತ ದೈತ್ಯರ ಸಮುದಾಯವನ್ನು ಸೆಳೆಯುವುದಕ್ಕೋಸ್ಕರವೇ, ಅಂದರೆ ಸಮಸ್ತ ದೈತ್ಯರನ್ನೂ ನಾಶಗೊಳಿಸುವುದ ಕ್ಕಾಗಿಯೇ ತನಾ= ಸರ್ವತ್ರ ವ್ಯಾಪ್ತವಾದ, ಯುಜಾ= ನಿತ್ಯವಾಗಿ ಆವಾವ ದೈತ್ಯರನ್ನು ನಾಶಮಾಡುವ ಉಪಾಯ ದಿಂದ ಕೂಡಿದ, ತವಿಷೀ= ಬಲವು, ಅಥವಾ ತೇಜಸ್ಸು, ಅಸ್ತು= ಇದೆ. ಹಿ= ಪ್ರಸಿದ್ಧವು. ॥ ೪ ॥

ಭಾ ॥ (೧) ಭೂಮೌ ದಿವಿ ಚ ವಃ ಶತ್ರುಃ ಕ್ವಚಿನ್ನೈವ ಹಿ ಲಭ್ಯತೇ। (೨) ರಿಶಾದಸಃ ಸು
ಸುಖಿನಃ ಸುಖೇನ ಶಮದಂತಿ ಯತ್ (೩) ಬಲಂ ತೇಜೋಽಪಿ ವೋ ಹ್ಯಸ್ತಿ ವ್ಯಾಪ್ತಾ
ನಿತ್ಯತಯಾ ಯುಜಾ । ಅದ್ಯಾಪ್ಯಾಧರ್ಷಣಾಯೈವ ನಿಖಿಲಾಸುಭಸಂತತೇಃ ॥ ೪ ॥

ಅ ॥ ಭೂಮಿಯಲ್ಲಿಯೂ ಸ್ವರ್ಗಲೋಕದಲ್ಲಿಯೂ ಕೂಡ ನಿಮಗೆ ಶತ್ರುವು ಎಲ್ಲಿಯೂ ಹೊಂದಲ್ಪಡುವುದೇ ಇಲ್ಲ. (೨) ಯಾವ ಕಾರಣದಿಂದ ಧನಾರ್ಜನಾದ್ಯಾಯಾಸವಿಲ್ಲದೇನೇ ಸುಖವನ್ನು ಅನುಭವಿಸುತ್ತಾರೋ ಆದ ಕಾರಣ ಭಿಶಾದಸಃ=ಚೆನ್ನಾಗಿ ಸುಖವುಳ್ಳವರು (೩) ಈಗಲೂ ಸರ್ವಕಾಲದಲ್ಲೂ ಸಮಸ್ತ ಅಶುಭಗಳ ಸಮುದಾಯವನ್ನು ಸೆಳೆಯುವುದಕ್ಕಾಗಿ ಅಂದರೆ ಸಮಸ್ತ ದೈತ್ಯರನ್ನು ನಾಶಗೊಳಿಸುವುದಕ್ಕಾಗಿ ನಿತ್ಯವಾಗಿ ಆಯಾಯ ದೈತ್ಯರನ್ನು ನಾಶಮಾಡಲು ಯೋಗ್ಯವಾದ ಉಪಾಯದಿಂದ ಕೂಡಿದ ವ್ಯಾಪ್ತವಾದ ಬಹಳವಾದ ಬಲವೂ ತೇಜಸ್ಸಾಗಲೀ ಇದೆ. ಪ್ರಸಿದ್ಧ ॥ ೪ ॥

ಖು ॥ (೪೭೬) ಪ್ರ ವೇ॑ಪಯಂತಿ ಪರ್ವ॑ತಾನ್ ವಿ ವಿಂ॑ಚಂತಿ ವನಸ್ಪತೀ॑ನ್ ।
ಪ್ರೋ ಆ॑ರತ ಮರುತೋ ದುರ್ಮ॑ದಾ ಇವ ದೇವಾ॑ಸಃ ಸರ್ವ॑ಯಾ ವಿಶಾ ॥ ೫ ॥ ೧೮ ॥

ಅ॥ ಮರುತಃ=ಮರುದ್ದೇವತೆಗಳು, ಪರ್ವತಾನ್ = ಪರ್ವತಗಳನ್ನು, ಪ್ರವೇಪಯಂತಿ = (ವೇಪೃ ಕಂಪನೇ.) ನಡುಗಿಸುತ್ತಾರೆ. ವನಸ್ಪತೀನ್= ವೃಕ್ಷಗಳನ್ನು. ವಿವಿಂಚಂತಿ= (ವಿಚಿರ್ ಪೃಥಗ್ಭಾವೇ. ಬುಡ ಸಮೇತ ಕಿತ್ತುಹಾಕುತ್ತಾರೆ. ಮರುತಃ=ಮರುತ್ ದೇವತೆಗಳು, ಸರ್ವಯಾವಿಶಾ=ಸಮಸ್ತ ಪ್ರಜೆಗಳಿಂದ ಕೂಡಿಯೇ, ಪ್ರೋ ಆರತ= (ಋಗತಿ ಪ್ರಾಪಣಯೋಃ) ಸಂಬದ್ಧರಾದರು. (ಸಮಸ್ತ ಪ್ರಜೆಗಳಲ್ಲಿ ಸನ್ನಿಹಿತರಾದರು.) ದುರ್ಮದಾ ಇವ= ಮದೋನ್ಮತ್ತರಂತೆ ತಮ್ಮ ಪ್ರಯೋಜನಾನುಸಂಧಾನ ವಿರಹಿತರಾಗಿಯೇ (ಮನುಷ್ಯರನ್ನು ಶುಭ ಅಶುಭಗಳನ್ನು ಮಾಡುವ ವಿಷಯದಲ್ಲಿ ಪ್ರೇರೇಪಿಸುತ್ತಾರೆ.) (ವಿಷ್ಣು ಪಕ್ಷದಲ್ಲಿ ಪರ್ವತಾನ್ =ಜೀವರನ್ನು, ಪ್ರವೇಪಯಂತಿ=ಚೆನ್ನಾಗಿ ಪ್ರೇರೇಪಿಸುತ್ತಾರೆ. ವನಸ್ಪತೀನ್ = ಭಜಿಸಿಕೊಳ್ಳಲು ಯೋಗ್ಯರಾದ ಇಂದ್ರಾದಿಗಳಿಗೆ ಅಧಿಪತಿಗಳಾದ ಬ್ರಹ್ಮಾದಿ ದೇವತೆಗಳನ್ನು ಫಲವನ್ನು ಕೊಡೋಣದರಿಂದ ತಾರತಮ್ಯಾನುಸಾರವಾಗಿ ಪೃಥಕ್ಕರಿಸುತ್ತಾರೆ) ॥ ೫ ॥ ೧೮ ॥

ಭಾ॥ (೧) ಪ್ರವೇಪಯಂತಿ ಪರ್ವತಾನ್ ವಿವಿಂಚಂತಿ ವನಸ್ಪತೀನ್ (೨) ಜನಿಪರ್ವವತೋ ಜೀವಾನ್ ಸಂಪ್ರೇರಯತಿ ಕೇಶವಃ॥ (೩) ಭಜನೀಯಪತೀನ್ ಬ್ರಹ್ಮಪೂರ್ವಾಂಶ್ಚ ಫಲದಾನತಃ। ತಾರತಮ್ಯೇನ ಸವ್ಯಕ್ತ ವಿವೇಚಯತಿ ಸರ್ವದಾ। (೪) ಸರ್ವಪ್ರಜಾಸ್ವತಿಷ್ಠಂತ ಪ್ರಾಪ್ತಾಸ್ತಾಭಿಃ ಸಹೈವ ಚ॥ (೫) ಮತ್ತಾ ಇವ ಪ್ರೇರಯಂತಿ ಶುಭಾಶುಭಕೃತೌ ನರಾನ್॥ ॥ ೫ ॥ ೧೮ ॥

ಅ॥ (೧) (ಮರುತ್‌ಗಳು) ಪರ್ವತಗಳನ್ನು ಚೆನ್ನಾಗಿ ನಡುಗಿಸುತ್ತಾರೆ. ವೃಕ್ಷಗಳನ್ನು ಮೂಲ ಸಮೇತ ಕಿತ್ತು ಬಿಸಾಡುತ್ತವೆ. (೨) ಶ್ರೀ ಕೇಶವನು ಜನನ ರೂಪ ಪರ್ವಗಳುಳ್ಳ ಜೀವರನ್ನು ಚೆನ್ನಾಗಿ ಪ್ರೇರೇಪಿಸುತ್ತಾನೆ, (೩) ಭಜಿಸಿಕೊಳ್ಳಲು ಯೋಗ್ಯರಾದ ಗರುಡ ಶೇಷ ರುದ್ರಾದಿಗಳಿಗೆ ಅಧಿಪತಿಗಳಾದ ಬ್ರಹ್ಮಾದಿ ದೇವತೆಗಳಿಗೆ ಸರ್ವದಾ ಫಲವನ್ನು ದಾನ ಮಾಡುತ್ತಾ ತಾರತಮ್ಯಾನುಸಾರವಾಗಿ ಪೃಥಕ್ಕರಿಸುತ್ತಾನೆ. (೪) ಆ ಪ್ರಜೆಗಳಿಂದ ಕೂಡಿಕೊಂಡೇ ಸಂಬದ್ಧರಾದವರಾದರು. ಅಂದರೆ ಸಮಸ್ತಪ್ರಜೆಗಳಲ್ಲಿ ಸನ್ನಿಹಿತರಾಗಿದ್ದರು. (೫) ಮದೋನ್ಮತ್ತರಾದವರಂತೆ ತಮಗೆ ಪ್ರಯೋಜನಾನುಸಂಧಾನರಹಿತರಾದವರಾಗಿಯೇ ಶುಭ ಅಶುಭ ಕರ್ಮಗಳನ್ನು ಮಾಡುವ ವಿಷಯದಲ್ಲಿ ಮನುಷ್ಯರನ್ನು ಪ್ರೇರೇಪಿಸುತ್ತಾರೆ. ॥ ೫ ॥

ಋ ॥ (೪೭೭) ಉಪೋ ರಥೇಷು ಪೃಷತೀರಯುಗ್ಧ್ವಂ ಪ್ರಷ್ಟಿರ್ವಹತಿ ರೋಹಿತಃ। ಆ ವೋ ಯಾಮಾಯ ಪೃಥಿವೀ ಚಿದಶ್ರೋದಬೀಭಯಂತ ಮಾನುಷಾಃ ॥ ೬ ॥

ಅ ॥ (ಎಲೋ ಮರುತ್‌ಗಳೇ) ರಥೇಷು=ರಥಗಳಲ್ಲಿ, ಪೃಷತೀಃ= ಹೆಣ್ಣು ಜಿಂಕೆಗಳನ್ನು, ಉಪೋ ಅಯುಗ್ಧ್ವಂ= ಕೂಡಿಸಿರುತ್ತೀರಿ. (ಸಂಬಂಧಿಸಿರುತ್ತೀರಿ)(ರೋಹಿತಶ್ಚ = ಜಿಂಕೆಯು, ಪ್ರಷ್ಟಿಃ= ಪೃಷ್ಠವನ್ನು ವಹತಿ= ಹೊರುತ್ತದೆ. (ಅಂದರೆ ಜಿಂಕೆಯನ್ನು ರಥದಲ್ಲಿ ಪೃಷ್ಠಭಾಗದಲ್ಲಿ (ಹಿಂದುಗಡೆ) ಕೂಡಿಸಿರುತ್ತೀರಿ) ಆ, ವಃ=ನಿಮಗೆ, ಯಾಮಾಯ=ಗಮನವನ್ನು ಕುರಿತು, (ಗಮನವನ್ನು ಸಹಿಸುವುದಕ್ಕಾಗಿ) ಪೃಥಿವೀ ಚಿತ್=ಧರಾ ದೇವಿಯೂ ಕೂಡ, ದಾರ್ಢ್ಯಾಯ=ದೃಢವಾಗಿ ನಿಲ್ಲುವುದಕ್ಕಾಗಿ, ಆ ಅಶ್ರೋತ್= ಪುನಃ ಅತಿಶಯವಾಗಿ (ತನಗೆ ಆಧಾರಭೂತರಾದ ಶೇಷ ದೇವರನ್ನು) ಆಶ್ರಯಿಸಿತು. ಮಾನುಷಾಃ= ಮನುಷ್ಯರೂ ಕೂಡ, ಅಬೀಭಯಂತ= (ಅಬೀಭಯೀ) ಭಯವನ್ನು ಹೊಂದಿದರು ॥ ೬ ॥

ಭಾ ॥ (೧) ಅಯುಙ್ಗ್ಧ್ವಂ ಪೃಷತೀಶ್ಚೈವ ರೋಹಿತಂ ಪೃಷ್ಠತೋ ರಥೇ (೨) ವೋ ಯಾಮಂ ಪ್ರತಿದಾರ್ಢ್ಯಾಯ ಶೇಷಮಶ್ರೇತ್ಪುನರ್ಧರಾ । (೩) ಭೀತಿಮಾಪುರ್ಮಾನುಷಾಶ್ಚ ॥ ೬ ॥

ಅ ॥ ರಥದಲ್ಲಿ ಹೆಣ್ಣು ಜಿಂಕೆಗಳನ್ನೂ ಪೃಷ್ಠ ಭಾಗದಲ್ಲಿ ಜಿಂಕೆಯನ್ನೂ (ಸಂಬಂಧಿಸಿರಿ.) ಕೂಡಿಸಿರಿ- (೨) ಧರಾದೇವಿಯೂ ಕೂಡ ನಿಮ್ಮ ಗಮನವನ್ನು ಸಹಿಸುವುದಕ್ಕಾಗಿ ಅತಿಶಯವಾಗಿ ಭೂಮಿಗೆ ಆಧಾರಭೂತನಾದ ಶೇಷ ದೇವನನ್ನು ಆಶ್ರಯಿಸಿದಳು. (೩) ಮನುಷ್ಯರೂ ಕೂಡ ಭಯವನ್ನು ಹೊಂದಿದರು. ॥ ೬ ॥

ಋ ॥ (೪೭೮) ಆ ವೋ ಮಕ್ಷೂ ತನಾಯ ಕಂ ರುದ್ರಾ ಅವೋ ವೃಣೀಮಹೇ। ಗಂತಾ ನೂನಂ ನೋಽವಸಾ ಯಥಾ ಪುರೇತ್ಥಾ ಕಣ್ವಾಯ ಬಿಭ್ಯುಷೇ ॥ ೭ ॥

ಅ ॥ ರುದ್ರಾಃ=ರೋಗಪರಿಹಾರಕರಾದ ಮರುತ್‌ಗಳೇ, (ನಾವು) ವಃ= ನಿಮ್ಮ ಸಕಾಶದಿಂದ, ಕಂ= ಸುಖದ, ತನಾಯ= ಪ್ರಾಪ್ತಿಗಾಗಿ, ಮಕ್ಷು= ಶೀಘ್ರದಲ್ಲಿ, ವಃ= ನಿಮ್ಮ ಅವಃ= ರಕ್ಷಣೆಯನ್ನು ಆ ವೃಣೀಮಹೇ= ಪ್ರಾರ್ಥಿಸುತ್ತೇವೆ. ಅದ ಕಾರಣ ಹೇಗೆ, ಪುರಾ= ಪೂರ್ವ ಕಾಲದಲ್ಲಿ ಬಿಭ್ಯುಷೇ= ಭಯದಿಂದ ಕೂಡಿದ, ಕಣ್ವಾಯ= ಕಣ್ವನಾದ ನಮಗೋಸ್ಕರ, (ಹೋಗುವವರಾಗಿ) ಇತ್ಥಾ= ಹಾಗೆಯೇ, ನೂನಂ= ನಿಶ್ಚಯವಾಗಿ ಈಗಲೂ ಕೂಡ, ನಃ= ನಮ್ಮನ್ನು ಕುರಿತು, ಅವಸಾ= ರಕ್ಷಣವನ್ನು ಮಾಡುವವರಾಗಿಯೇ ಗಂತ= ಬನ್ನಿರಿ. ॥ ೭ ॥

ಭಾ ॥ (೧) ಕ್ಷಿಪ್ರಂ ವಃ ಪ್ರಾಪ್ತಯೇ ಸುಖಂ ॥ ರಕ್ಷಾಂ ವೃಣೀಮಹೇ ಯುಷ್ಮದ್ಗಂತಾಽದ್ಯ (೨) ಪಿ ಚ ನೋಽವಸಾ ॥ ಭೀತಿಯುಕ್ತಾಯ ಕಣ್ವಾಯ ಮಹ್ಯಂ ॥ ೭ ॥

ಅ|| (೧) ನಿಮ್ಮ ಸಕಾಶದಿಂದ, ಸುಖದ ಪ್ರಾಪ್ತಿಗಾಗಿ, ಶೀಘ್ರವಾಗಿ, ನಿಮ್ಮ ರಕ್ಷಣೆಯನ್ನು ಪ್ರಾರ್ಥಿಸುತ್ತೇವೆ. (೨) (ಅದಕಾರಣ ಪೂರ್ವದಲ್ಲಿ) ಭಯದಿಂದ ಕೂಡಿರುವ ಕಣ್ವನಾದ ನನಗೋಸ್ಕರ, ಈಗಲೂ ಕೂಡ ನಮ್ಮನ್ನು ಉರಿತು ರಕ್ಷಣೆಯನ್ನು ಮಾಡುವವರಾಗಿಯೇ ಬನ್ನಿರಿ. || ೭ ||

ಋ (೪೭೯) ಯುಷ್ಮೇಷಿತೋ ಮರುತೋ ಮರ್ತ್ಯೇಷಿತ ಆ ಯೋ ನೋ
ಅಭ್ವ ಈಷತೇ। ವಿ ತಂ ಯುಯೋತ ಶವಸಾ ವ್ಯೋಜಸಾ ವಿ
ಯುಷ್ಮಾಕಾಭಿರೂತಿಭಿಃ ॥ || ೮ ||

ಅ|| ಮರುತಃ=ಎಲೋ ಮರುತ್‌ಗಳೇ, ಯಃ=ಯಾವ ದುರಾತ್ಮನು, ಯುಷ್ಮೇಷಿತಃ=(ಇಷುಗತೌ. ನೀವು ಸರ್ವರಿಗೂ ನಿಯಂತೃಗಳಾಗಿರುವುದರಿಂದ ಮುಖ್ಯವಾಗಿ ನಿಮ್ಮಿಂದಲೇ ಪ್ರೇರೇಪಿಸಲ್ಪಟ್ಟಿರುವನೋ ಅಥವಾ ಮರ್ತ್ಯೇಷಿತಃ=ಬಾಹ್ಯದೃಷ್ಟಿಯಿಂದ ಮನುಷ್ಯರಾದ ರಾಜಾದಿಗಳಿಂದ ಪ್ರೇರೇಪಿಸಲ್ಪಟ್ಟವನಾಗಿ, ನಃ=ನಮಗೆ ಅಭ್ವಃ=ಐಶ್ವರ್ಯಾಭಾವಗಳನ್ನು ಆ ಈಷತೇ=ಚೆನ್ನಾಗಿ ಇಚ್ಛಿಸುತ್ತಾನೋ, ತಂ=ಅಂತಹನನ್ನು (ನೀವು) ಶವಸಾ=ಸುಖದಿಂದ, ವಿಯುಯೋತ=ಓಡಿಸಿರಿ. ಬಿಡಿಸಿರಿ (ದುಃಖಿಯನ್ನಾಗಿ ಮಾಡಿರಿ.) ಓಜಸಾ=ಬಲದಿಂದಲೂ ವಿಯುಯೋತ=ಬಿಡಿಸಿರಿ. ಹಾಗೆಯೇ, ಯುಷ್ಮಾಕಾಭಿಃ ಊತಿಭಿಃ=ನಿಮ್ಮದಾದ ಅಭಿಪ್ರಾಯಗಳಿಂದಲೂ, ವಿಯುಯೋತ=(ಯುಯು ವಿಯೋಗೇ) ಬಿಡಿಸಿರಿ. (ಉಪದ್ರವಹಿತನನ್ನಾಗಿ ಮಾಡಿರಿ. || ೮ ||

ಭಾ|| [೧] ಯುಷ್ಮಾಭಿರೇವಚ|| ಪ್ರೇರಿತೋಽಥ ನಿಯಂತೃತ್ವಾದ್ಯುಷ್ಮಾಕಂ (೨) ಮಾನು
ಷೇಣ ವಾ। ಬಾಹ್ಯದೃಷ್ಟ್ಯಾತ್ವಭೂತೀರ್ನೋ ಯ ಇಚ್ಛತಿ (೩) ತಮೋಜಸಾ||
ಬಲೇನ ಚ ದ್ರಾವಯತ ಯುಷ್ಮದೀಯೋತಿಭಿಸ್ತಥಾ || ೮ |

ಅ|| (೧) ಯಾವ ದುರಾತ್ಮನು ನೀವು ಸಮಸ್ತರಿಗೂ ನಿಯಾಮಕರಾಗಿರುವುದರಿಂದ ಮುಖ್ಯವಾಗಿ ನಿಮ್ಮಿಂದಲೇ ಪ್ರೇರೇಪಿಸಲ್ಪಟ್ಟಿರುವನೋ, (೨) ಅಥವಾ ಬಾಹ್ಯದೃಷ್ಟಿಯಿಂದ ರಾಜಾದಿಮನುಷ್ಯರಿಂದ ಪ್ರೇರಿತನಾಗಿ ನಮಗೆ ಐಶ್ವರ್ಯಾಭಾವವನ್ನು ಚೆನ್ನಾಗಿ ಇಚ್ಛಿಸುತ್ತಾನೋ (೩) ಅತನನ್ನು ನೀವು ಪ್ರಕಾಶದಿಂದಲೂ ಬಲದಿಂದಲೂ ಹಾಗೆಯೇ ನಿಮ್ಮದಾದ ಅಭಿಪ್ರಾಯಗಳಿಂದಲೂ ಓಡಿಸಿರಿ || ೮ ||

ಋ (೪೮೦) ಅಸಾಮಿ ಹಿ ಪ್ರಯಜ್ಯವಃ ಕಣ್ವಂ ದದ ಪ್ರಚೇತಸಃ। ಅಸಾಮಿ
ಭಿರ್ಮರುತ ಆ ನ ಊತಿಭಿರ್ಗಂತಾ ವೃಷ್ಟಿಂ ನ ವಿದ್ಯುತಃ || ೯ ||

ಅ|| ಪ್ರಯಜ್ಯವಃ=ಚೆನ್ನಾಗಿ ಯಾಗಗಳಿಂದ ಪೂಜಿಸಲ್ಪಡುವ ಪ್ರಚೇತಸಃ=ಪ್ರಕೃಷ್ಟ ಚಿತ್ತವುಳ್ಳ ಮರುತಃ=ಮರುತ್‌ಗಳೇ, (ನೀವು) ಕಣ್ವಂ=ಕಣ್ವನಾದ ನನಗೋಸ್ಕರ ಅಸಾಮಿ=ಅಸದೃಶವಾದ, ಅನುಪಮವಾದ ಹಿ (ಅಭೀಪ್ಸಿತಂ) ಇಷ್ಟವಾದುದನ್ನೇ, ದದ=(ದದದಾನೇ) ಕೊಡಿರಿ. ಮತ್ತು ಅಸಾಮಿಭಿಃ=ಅಸದೃಶಗಳಾದ, ಊತಿಭಿಃ=ಅಭಿಪ್ರಾಯಗಳಿಂದ, (ನಮ್ಮನ್ನು ರಕ್ಷಿಸುವ ವಿಷಯದಲ್ಲಿ ಅಸದೃಶ ಅಭಿಪ್ರಾಯವುಳ್ಳ ನೀವು) ವಿದ್ಯುತಃ=ಮಿಂಚುಗಳು, ವೃಷ್ಟಿಂ ನ=ಮಳೆಯನ್ನೆಂತೋ ಹಾಗೆ, (ಶೀಘ್ರವಾಗಿ) ನಃ=ನಮ್ಮನ್ನು ನಮ್ಮ ರಕ್ಷಣಾರ್ಥಗಳಿಗಾಗಿ ಶೀಘ್ರದಲ್ಲಿ) ಆ ಗಂತ=ಬನ್ನಿರಿ. || ೯ ||

ಋ॥ (೪೮೧) ಅಸಾಮ್ಯೋಜೋ ಬಿಭೃಥಾ ಸುದಾನವೋಽಸಾಮಿ ಧೂತಯಃ ಶವಃ। ಋಷಿದ್ವಿಷೇ ಮರುತಃ ಪರಿಮನ್ಯವ ಇಷುಂ ನಸೃಜತ ದ್ವಿಷಂ ॥ ೧೦ ॥

ಅ॥ ಸುದಾನವಃ=ಚೆನ್ನಾಗಿ ದಾನಮಾಡುವ ಸ್ವಭಾವವುಳ್ಳ ಧೂತಯಃ=ಶತ್ರುಗಳನ್ನು ನಡುಗಿಸುತ್ತಿರುವ ಮರುತಃ=ಮರುತ್‌ಗಳೇ (ನೀವು) ಅಸಾಮಿ=ಅಸದೃಶವಾದ ಓಜಃ=ಬಲವನ್ನೂ ಬಿಭೃಥಃ=(ಡುಭೃಞ್ ಧಾರಣ ಪೋಷಣಯೋಃ ಧರಿಸಿರುವಿರಿ. ಅಸಾಮಿ ಶವಃ=ಅಸದೃಶವಾದ ಸುಖವನ್ನೂ ಕೂಡ, ಬಿಭೃಥ=ಧರಿಸಿರುತ್ತೀರಿ. (ಆದಕಾರಣ) ಪರಿಮನ್ಯವೇ=ಕೋಪವನ್ನು ಹೊಂದಿದ ಋಷಿದ್ವಿಷೇ=ಋಷಿಗೆ ದ್ವೇಷಿಯಾದವನನ್ನು ಕೊಲ್ಲುವುದಕ್ಕಾಗಿ ಇಷುಂ ನ=ಬಾಣವನ್ನೆಂಬಂತೆ ದ್ವಿಷಂ=ವೈರಿಗೆ ಪ್ರತಿವಿರೋಧಿಗಳಾದ ದೇವಾದಿಗಳನ್ನು ಸೃಜತ=ಸೃಷ್ಟಿಸಿರಿ ॥ ೧೦ ॥ ೧೯ ॥ ೭ ॥

ಭಾ॥ (೧) ಓಜೋ ಸಮಂ ಬಿಭೃಥ ಚ ಮಖೇಜ್ಯಾಃ ಸಮಮುತ್ತಮಂ। ಸುದಾನಶೀಲಾಃ ಕಣ್ವಾಯ ದತ್ತಾತ್ಸಮಮಭೀಪ್ಸಿತಂ ॥ (೨) ಅಸಮೈರ್ನೋಽಭಿಪ್ರಾಯೈರ್ಗಂತ ವೃಷ್ಟಿಂ ನ ವಿದ್ಯುತಃ ॥ ೯ ॥ ೧೦ ॥ ೧೯ ॥ ೭ ॥

ಅ॥ (೧) ಯಾಗಗಳಿಂದ ಪೂಜಿತಲ್ಪಡತಕ್ಕ ಒಳ್ಳೇದಾನ ಮಾಡುವ ಸ್ವಭಾವವುಳ್ಳ ಮರುತ್‌ಗಳೇ ಅಸದೃಶವಾದ ಅನುತ್ತಮವಾದ ಬಲಾದಿಗಳನ್ನು ಧರಿಸಿರುತ್ತೀರಿ.(ಅಸಮಶಬ್ದವು ಸಮಾಭಾವವನ್ನು ಹೇಳುತ್ತದೆ. ಉತ್ತಮಾಭಾವವೆಂದು ಹೇಗೆ ಸಿಗುತ್ತದೆ ಎಂದರೆ) ಸಮವೆಂದರೆ ಉತ್ತಮವು.(ಅಂದರೆ ಸಮಶಬ್ದವು ಉತ್ತಮಕ್ಕೂ ಉಪಲಕ್ಷಣವು. ಕಣ್ವನಾದ ನನಗೋಸ್ಕರ ಅಸದೃಶವಾದ ಇಷ್ಟವನ್ನು ಕೊಡಿರಿ. (೨) (ಅಸದೃಶ ಅಭಿಪ್ರಾಯಗಳಿಂದ ಅಂದರೆ ನಮ್ಮನ್ನು ರಕ್ಷಿಸುವ ವಿಷಯದಲ್ಲಿ ಅನುತ್ತಮ ಅಭಿಪ್ರಾಯಗಳುಳ್ಳ ನೀವು) ಮಿಂಚುಗಳು ವೃಷ್ಟಿಯನ್ನೆಂಬಂತೆ ನಮ್ಮನ್ನು ಹೊಂದಿರಿ. ॥ ೧೦ ॥ ೧೯ ॥ ೭ ॥

ವಿ॥ ಈ ೨ ಋಕ್ಕುಗಳಿಗೆ ಒಟ್ಟಿಗೆ ವ್ಯಾಖ್ಯಾನ ಮಾಡಲಿಕ್ಕೆ ಪ್ರಯೋಜನವೇನೆಂದರೆ ಅಸಾಮ್ಯೋಜಃ ಎಂಬ ಋಕ್ಕಿನಲ್ಲಿ ಸುದಾನವ ಎಂಬ ವಿಶೇಷಣಕ್ಕೂ ಶವೋಬಿಭೃಥ ಎನ್ನುವುದಕ್ಕೂ ಪ್ರಯೋಜನವಿಲ್ಲದಿರುವುದರಿಂದ ದ ಎನ್ನುವುದರಿಂದ ಅನ್ವಯವೆಂದು ತಿಳಿಸುವುದಕ್ಕಾಗಿ ಮಿಶ್ರವಾಗಿ (ಒಟ್ಟಿಗೆ) ವ್ಯಾಖ್ಯಾನ ಮಾಡಿದ್ದು. ತಥಾಚ ಯಾವ ಕಾರಣದಿಂದ ನೀವು ದಾನಸ್ವಭಾವವುಳ್ಳವರೋ ಮಹಾಸುಖವುಳ್ಳವರೋ ಆದ ಕಾರಣ ಕೊಡಿರಿ. ಎಂದು ಭಾವವು. ॥ ೯ ॥ ೧೦ ॥ ೧೯ ॥ ೩೯ ॥ ೭ ॥

ಅವ ॥ ಉತ್ತಿಷ್ಠ ಇತ್ಯಾದಿಗಳು ೮ ಋಕ್ಕುಗಳುಳ್ಳದ್ದು. ನಾಲ್ವರ್ಗಗಳು. ಬ್ರಹ್ಮಣಸ್ಪತ್ಯಾದಿಗಳು ದೇವತೆಗಳು. ಪ್ರಗಾಥಾ ಛಂದಸ್ಸು. ಕಣ್ವನೇ ಋಷಿಯು. ೪೦ ನೇ ಸೂಕ್ತವು.

ಋ॥ (೪೮೨) ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇಮಹೇ। ಉಪ ಪ್ರಯಂತು ಮರುತಃ ಸುದಾನವ ಇಂದ್ರ ಪ್ರಾಶೂರ್ಭವಾ ಸಚಾ ॥ ೧ ॥

ಅ॥ ಹೇ ಬ್ರಹ್ಮಣಸ್ಪತೇ=ಚತುರ್ಮುಖನಿಗೆ ಅಧಿಪತಿಯಾದ ಶ್ರೀ ವಿಷ್ಣುವೇ, ಭಾರತೀಪತಿಯಾದ ಶ್ರೀ ವಾಯುವೇ, ಉತ್ತಿಷ್ಠ=(ನಮ್ಮ ಸಮೀಪಕ್ಕೆ ಬರುವುದಕ್ಕಾಗಿ) ಎದ್ದು ನಿಲ್ಲು. ದೇವಯಂತಃ=(ದಿವು ಕ್ರೀಡಾ ವಿಜಿಗೀಷಾ ವ್ಯವಹಾರ ದ್ಯುತಿ ಸ್ತುತಿ ಮೋದ ಮದ ಸ್ವಪ್ನ ಕಾಂತಿ ಗತಿಷು ವ್ಯವಹಾರ ಶಬ್ದದಿಂದ ಪೂಜಾ ರೂಪ ವ್ಯವಹಾರವನ್ನು ಇಟ್ಟುಕೊಳ್ಳಬೇಕು) ಪೂಜೆಯನ್ನು ಸ್ತುತಿಯನ್ನಾಗಲೀ ಮಾಡುತ್ತಿರುವ, ನಾವು, ಯಾವ ಕಾರಣದಿಂದ ತ್ವಾ=ನಿನ್ನನ್ನು, ಈಮಹೇ=(ಈ ಇ ಗತೌ) ಶರಣು ಹೊಂದುತ್ತೇವೋ, (ಆದ ಕಾರಣ ಸುದಾನವಃ ಮರುತಃ=ಒಳ್ಳೇ ದಾನ ಮಾಡುವ ಸ್ವಭಾವವುಳ್ಳ, ಮರುತ್‌ಗಳೇ ನಮ್ಮನ್ನು, ಉಪ ಪ್ರಯಂತುಃ= ಬನ್ನಿರಿ. ಇಂದ್ರ=ಇಂದ್ರನೇ ನೀನು, ಸಚಾ=ಸುಖದಿಂದಲೇ, (ನಮ್ಮ ಯಜ್ಞವನ್ನು, ಪ್ರಾಶೂರ್ಭವ=(ಪ್ರಕರ್ಷೇಣ ಅಶ್ನಾತೀತಿ ಪ್ರಾಶೂಃ ಅಶಭೋಜನೇ.) ಚೆನ್ನಾಗಿ ಭೋಜನ ಮಾಡಿದವನು ಆಗು. ॥೧॥

ಭಾ (೧) ದೇವಯಂತಃ ಪೂಜಯಂತಃ ಸ್ತುವಂತೋऽ (೨) ತಿಶ್ಯತಾಶನಃ। ಪ್ರಾಶೂಃ ॥೧॥

ಅ॥ (೧) ದೇವಯಂತಃ= ಪೂಜಿಸುತ್ತಿರುವ, ಅಥವಾ ಸ್ತುತಿಸುತ್ತಿರುವ ನಾವು. (೨) ಪ್ರಾಶೂಃ=ಅತಿಶಯವಾಗಿ, ಕೃತಂ=ಮಾಡಲ್ಪಟ್ಟ ಅಶನಂ=ಭೋಜನಂ ಅನೇನ ಎಂಬ ವ್ಯುತ್ಪತ್ತಿಯಿಂದ,) ಅತಿಶಯವಾಗಿ ಭೋಜನ ಮಾಡಿದವನು ಪ್ರಾಶೂಃ ಎನಿಸುತ್ತಾನೆ. ॥೧॥

ಋ॥ (೪೮೩) ತ್ವಾಮಿದ್ಧಿ ಸಹಸಸ್ಪುತ್ರ ಮರ್ತ್ಯ ಉಪಬ್ರೂತೇ ಧನೇ ಹಿತೇ।
ಸುವೀರ್ಯಂ ಮರುತ ಆ ಸ್ವಶ್ವ್ಯಂ ದಧೀತ ಯೋ ವ ಆಚಕೇ ॥೨॥

ಅ॥ (ತನೇ ಈ ಋಕ್ಕಿಗೆ ಸಹಸಸ್ಪುತ್ರರು ಮರುತ್‌ಗಳೂ ಕೂಡ ದೇವತೆಗಳು) ಹೇಸಹಸಃ ಪುತ್ರ= ವಾಯುವಿನಿಂದ ಅಭಿವ್ಯಂಗ್ಯನಾದ ಪ್ರಯುಕ್ತ ವಾಯುವಿನ ಪುತ್ರನೆನಿಸಿಕೊಂಡ ಶ್ರೀ ವಿಷ್ಣುವೇ ಅಥವಾ ವಾಯುವಿನಿಂದ ಹುಟ್ಟಿರುವ ಪ್ರಯುಕ್ತ ವಾಯು ಪುತ್ರನಾದ ಇಂದ್ರನೇ, ಯಃ ಮರ್ತ್ಯಃ=ಯಾವ ಮನುಷ್ಯನು ತ್ವಾ ಇತ್=ನಿನ್ನನ್ನೇ, ಹೇ ಮರುತಃ=ಎಲೋ ವಾಯುಗಳೇ, ವಃ=ನಿಮ್ಮನ್ನು ಕೂಡ. ಹಿತೇ ಧನೇ= ಯುದ್ಧ ವಿಷಯದಲ್ಲಿ, ಅಥವಾ ನಿಹಿತವಾದ ಅಂದರೆ ನಿಧಿ ರೂಪವಾದ ಧನ ವಿಷಯದಲ್ಲಿ ಆದರೂ, ಉಪಬ್ರೂತೇ= ಅತ್ಯಂತವಾಗಿ ಸ್ತುತಿಸುತ್ತಾನೋ, ಆಚಕೇ=(ಚಕ ತೃಪ್ತೌ) ನೋಡಿರುವನೋ, ಸಃ=ಅವನು, ಸುವೀರ್ಯಂ= ಒಳ್ಳೆ ವೀರ್ಯವತ್ತಾದ, ಸ್ವಶ್ವ್ಯಂ=(ಶೋಭನಾಶ್ಚತೇ ಅಶ್ವಾಶ್ಚ ಸ್ವಶ್ವಾಃ=ಇಂದ್ರಿಯಗಳು. ತೇಷಾಂ ಇದಂ ಸ್ವಶ್ವ್ಯಂ) ಜ್ಞಾನ ಮೊದಲಾದುದನ್ನು, ಆದಧೀತ=ಧರಿಸಿರುವನು. ಹೊಂದಿರುವನು. ಹಿ=ಪ್ರಸಿದ್ಧವು. ॥೨॥

ಭಾ॥ (೧) ವಾಯೋಃ ಸುತೇತ್ಯೇವ ಸಹಸಸ್ಪುತ್ರ ಇತ್ಯಥ॥ (೨) ತದ್ವ್ಯಂಗ್ಯತ್ವಾದ್ಧರಿಃ ಪ್ರೋಕ್ತಃ ಶಕ್ರಸ್ತತ್ಸುತ ಏವಚ॥ (೩) ಯುದ್ಧಂ ಹಿತಧನಂ ಪ್ರೋಕ್ತಂ ನಿಹಿತಂ ಧನಮೇವ ವಾ॥(೪) ಸ್ವಶ್ವ್ಯಂತು ಸ್ವಿಂದ್ರಿಯ ಫಲಮಾಚಕೇऽ ಪಶ್ಯದಿತ್ಯಪಿ ॥೨॥

ಅ॥ (೧) ಸಹಸಸ್ಪುತ್ರ ಎನ್ನುವುದಕ್ಕೆ ವಾಯುವಿನ ಮಗನು ಎಂದೇ ಸಾಮಾನ್ಯತಃ ಅರ್ಥವು (ಶ್ರುತಿಯಲ್ಲಿ ಸಹಸಸ್ಪುತ್ರ ಎಂದು ಸಂಬುದ್ಧ್ಯಂತವಾದುದಕ್ಕೆ ಭಾಷ್ಯದಲ್ಲಿ ಸಹಸಃ ಪುತ್ರಃ ಎಂದು ಸಂಧಿಯಿಲ್ಲದೆ ಪ್ರಯೋಗವು ಹೇಗೆಂದರೆ ವಿವಕ್ಷಿತವಾದ ಸಂಧಿಯು ಆಗುತ್ತದೆ, ಎಂದು ವೈಯಾಕರಣ ವ್ಯವಹಾರದಿಂದ ಪುತ್ರಃ ಎಂದು ಸಂಧಿಯಿಲ್ಲದೆ ನಿರ್ದೇಶ ಮಾಡಿದ್ದು. ಹಾಗಾದರೆ ಸಹಃ ಶಬ್ದಕ್ಕೆ ವಾಯು ಎಂಬ ಅರ್ಥವು ಹೇಗೆ ಎಂದರೆ- ಸಹಃ ಶಬ್ದಕ್ಕೆ ಬಲನಾಮಗಳಲ್ಲಿ ಪಾಠವಿದೆ. ವಾಯು ಶಬ್ದವು. ಬಳಿತ್ಥೋಕ್ತ್ಯಾದಿಗಳಲ್ಲಿ ಬಲ

ಜ್ಞಾನಾರ್ಥಕವೆಂದು ವ್ಯಾಖ್ಯಾತವಾಗಿದೆ, ಆದಕಾರಣ ಏಕದೇಶಕ್ಕೆ ವಿಶಿಷ್ಟ ಲಕ್ಷಣೆಯಿಂದ ವಾಯುವೆಂದರ್ಥವು. ಸಿದ್ಧವಾಗಿದೆ ಎಂಬ ಅಭಿಪ್ರಾಯದಿಂದ ಸುತೇಕ್ಷ್ಯೇವ ಎಂಬಲ್ಲಿ ಏವ ಶಬ್ದವು.) (೨)(ಸಾಮಾನ್ಯತಃ ವ್ಯಾಖ್ಯಾನ ಮಾಡಿ ವಿಶೇಷತಃ ವ್ಯಾಖ್ಯಾನವನ್ನು ತೋರಿಸುತ್ತಾರೆ.) ಸಹಸಸ್ಪುತ್ರ ಎನ್ನುವುದಕ್ಕೆ ವಾಯು ಪುತ್ರನು ಶ್ರೀಹರಿಯು ಎಂದು ಅರ್ಥವಿವಕ್ಷಿತವಾದರೆ) ಶ್ರೀಹರಿಯು ರುದ್ರಾದಿಗಳಿಗೆ ವಾಯುದೇವರ ಉಪದೇಶದಿಂದ ವ್ಯಕ್ತನಾಗುವುದರಿಂದ ಶ್ರೀಹರಿಯು ವಾಯುವಿನ ಪುತ್ರನೆಂದು ಹೇಳಲ್ಪಡುತ್ತಾನೆ. ದೇವೇಂದ್ರನು ವಾಯುವಿನಿಂದ ಹುಟ್ಟಿರುವುದರಿಂದ ವಾಯುಪುತ್ರನೇ ಆಗಿರುತ್ತಾನೆ. (ಅಲ್ಲಿ ಔಪಚಾರಿಕ ಪ್ರಯೋಗವೆಂದು ಹೇಳಬೇಕಾಗಿಲ್ಲ. (೩)(ಧನೇಹಿತೇ ಎನ್ನುವುದರ ಅರ್ಥಹೇಳುತ್ತಾರೆ.) ಯುದ್ಧವು ಹಿತಧನವೆಂದು ಹೇಳಲ್ಪಡುತ್ತದೆ. (ಆಜೌ ಪ್ರಧನೇ ಎಂದು ಸಂಗ್ರಾಮ ನಾಮಗಳಲ್ಲಿ ಪಠಿತವಾದ ಪ್ರಯುಕ್ತ ನಿಘಂಟುಸಿದ್ಧವೆಂದು ಯುಕ್ತವಾಯಿತು. ಅಥವಾ ನಿಹಿತಂ= ನಿಧಿರೂಪವಾದ ಧನವೇ ಹಿತಧನವೆನಿಸುತ್ತದೆ. (೪) (ಸ್ವಶ್ವ್ಯಂ ಎನ್ನುವುದನ್ನು ವ್ಯಾಖ್ಯಾನ ಮಾಡುತ್ತಾರೆ.) ಶೋಭನಗಳಾದ ಅಶ್ವರೂಪಗಳಾದ ಇಂದ್ರಿಯಗಳ ಫಲವಾದ ಜ್ಞಾನಾದಿಗಳನ್ನು ಆ ಚಕೇ= (ಚಕತೃಪ್ತೌ ಎಂಬುವುದು ಧಾತುಗಳಿಗೆ ಅನೇಕಾರ್ಥಗಳಿರುವುದರಿಂದ ದರ್ಶನಾರ್ಥದಲ್ಲಿಯೂ ಇದೆ.) ಕಂಡನು. ॥ ೨ ॥

ಮಂ॥ (೪೪೪) ಪ್ರೈತು ಬ್ರಹ್ಮಣಸ್ಪತಿಃ ಪ್ರದೇವ್ಯೇತು ಸೂನೃತಾ । ಅಚ್ಛಾ ವೀರಂ ನರ್ಯಂ ಪಙ್ಕ್ತಿರಾಧಸಂ ದೇವಾ ಯಜ್ಞಂ ನಯಂತು ನಃ ॥ ೩ ॥

ಅ॥ (ಈ ೩ನೇ ಋಕ್ಕಿಗೆ ಬ್ರಹ್ಮಣಸ್ಪತಿಯು ಸೂನೃತಾ ದೇವಿಯು, ಮತ್ತು ದೇವತೆಗಳೂ ದೇವತೆಗಳು-) ಬ್ರಹ್ಮಣಸ್ಪತಿಃ=ಶ್ರೀ ವಿಷ್ಣುವು, ಅಥವಾ ವಾಯುವು, ಪ್ರಏತು=ನಮ್ಮ ಕಾರ್ಯಗಳಲ್ಲಿ ಮುಂದುಗಡೆ ಹೋಗಲಿ, ಅಂದರೆ ಮುಖ್ಯ ಸಾಧಕನು ಆಗಲಿ. ಸೂನೃತಾ= (ಸೂನೃತಂ ಮಂಗಲೇ ಸತ್ಯೇ ಪ್ರಿಯ ವಾಚಿಚ ಸೂನೃತಂ ಇತಿವಿಶ್ವಃ) ಪ್ರಿಯ ವಚನಕ್ಕೆ ಅಭಿಮಾನಿನಿಯಾದ, ದೇವೀ= ಸರಸ್ವತೀದೇವಿಯು, ಆಥವಾ ವಿಷ್ಣು ಸಂಬಂಧಿನಿಯಾದ ಆಜ್ಞಾರೂಪವಾದ ವಚನವು, ಪ್ರಏತು= ಮುಂದುಗಡೆ ಹೋಗಲಿ, ದೇವಾಃ= ಇತರ ಸಮಸ್ತ ದೇವತೆಗಳೂ ಕೂಡಾ ನಃ= ನಮ್ಮದಾದ, ಯಜ್ಞಂ ಯಾಗವನ್ನು ವೀರಂ= (ವೀರಸ್ತು ಸುಭಟೇ ಶ್ರೇಷ್ಠೇ ಇತಿ ವಿಶ್ವಃ) ಶ್ರೇಷ್ಠನಾದ, ನರ್ಯಂ= (ನ ರೀಯತೇ ನ ಕ್ಷೀಯತೇ ಇತಿ ನರ್ಯಂ) ಕ್ಷಯ (ನಾಶ) ರಹಿತನಾದ, ಪಙ್ಕ್ತಿರಾಧಸಂ= (ಪಙ್ಕ್ತಿ ವಿಂಶತಿ ತ್ರಿಂಶಚ್ಚತ್ವಾರಿಂಶತ್, ಇತ್ಯಾದಿ ನಿಪಾತ ಮಾಡಿರುವುದರಿಂದ ಪಙ್ಕ್ತಿ ಶಬ್ದವು ಪಂಚನ್ ಪರ್ಯಾಯವು.) ಪಂಚ ವಿಧರಾದ ದೇವ ಗಂಧರ್ವ ನೃ ಪಿತೃದೈತ್ಯರೂಪರಾದ ಜನರನ್ನು (ರಾಧಯತಿ) ಸೃಷ್ಟಿಸ್ಥಿತ್ಯಾದಿಗಳಿಂದ ಅಭಿವೃದ್ಧಿಗೊಳಿಸುವ ಶ್ರೀ ಹರಿಯನ್ನು, ಅಚ್ಛ= ಕುರಿತು, ನಯಂತು= ಹೊಂದಿಸಲಿ. ॥ ೩ ॥

ಭಾ॥ (೧) ಪತಿಸ್ತು ಬ್ರಹ್ಮಣೋ ವಿಷ್ಣುರ್ವಾಗೀಶತ್ವಾತ್ಸಮಾರಣಃ॥ (೨)ಅಗ್ರತೋ ಯಾತ್ವಸಾವಸ್ಮತ್ಕಾರ್ಯೇಷ್ವೇವಂ ಸರಸ್ವತೀ॥ ಸೂನೃತಾ ವೈಷ್ಣವೀ ವಾಗ್ವಾ [೩] ಯಜ್ಞಂ ವೀರಂ ವರಂ ಪ್ರತಿನಯಂತು । ದೇವಾಃ ಸರ್ವೇऽಪಿ [೪] ಯತ್ಪಂಚಜನವರ್ಧನಃ। ಪಂಙ್ಕ್ತಿರಾಧಾ ಹರಿಸ್ತೇನ [೫] ವೀರೋ ನರ್ಯಸ್ಸ ಏವಚ॥ [೬] ದೇವ ಗಂಧರ್ವ ನೃ ಪಿತೃ ದೈತ್ಯಾಃ ಪಂಚಜನಾಭಿಧಾಃ॥ ॥ ೩ ॥

ಅ॥ (೧) (ಬ್ರಹ್ಮಣಸ್ಪತಿ ಶಬ್ದಾರ್ಥವನ್ನು ಪುನಃ ಸ್ಮೃತಿಪಥಕ್ಕೆ ತರಿಸುತ್ತಾರೆ.) ಶ್ರೀ ವಿಷ್ಣುವು ಚತುರ್ಮುಖನಿಗೆ ಅಧಿಪತಿಯಾದುದರಿಂದ ಬ್ರಹ್ಮಣಸ್ಪತಿಯೆನಿಸುತ್ತಾನೆ, ಹಾಗೆಯೇ ವಾಯುದೇವರೂ ಭಾರತಿಗೆ ಪತಿಯಾಗಿ ನಿಯಾಮಕರಾದುದರಿಂದ ಬ್ರಹ್ಮಣಸ್ಪತಿಯೆನಿಸುತ್ತಾರೆ. (೨) (ಈಗ ಋಕ್ಕನ್ನು ವ್ಯಾಖ್ಯಾನ ಮಾಡುತ್ತಾರೆ.) ಈ ವಿಷ್ಣು ವಾಯುಗಳು ನಮ್ಮ ಕಾರ್ಯಗಳಲ್ಲಿ ಮುಖ್ಯಸಾಧಕರಾಗಲಿ. ಹೀಗೆಯೇ ಪ್ರಿಯುವಚನಕ್ಕೆ ಅಭಿಮಾನಿನಿಯಾದ ಸರಸ್ವತಿಯೂ ಅಥವಾ ವಿಷ್ಣು ಸಂಬಂಧಿಯಾದ ಆಜ್ಞಾರೂಪವಚನವೂ ಮುಖ್ಯ ಸಾಧಕವಾಗಲಿ. (೩) ಇತರ ಸಮಸ್ತದೇವತೆಗಳೂ ನಮ್ಮ ಯಜ್ಞವನ್ನು ಸರ್ವಶ್ರೇಷ್ಠನೂ ನಾಶವಿರಹಿತನೂ ಆದ ಶ್ರೀ ಹರಿಯನ್ನು ಕುರಿತು ಹೊಂದಿಸಲಿ (೪) ಯಾವ ಕಾರಣದಿಂದ ಶ್ರೀಹರಿಯು ದೇವಾದಿ ಐದು ವಿಧ ಜನರನ್ನು ಸೃಷ್ಟಿಸ್ಥಿತ್ಯಾದಿಗಳಿಂದ ಅಭಿವೃದ್ಧಿಗೊಳಿಸುವನೋ, ಅದುದರಿಂದ ಶ್ರೀ ಹರಿಯು ಪಂಚ್ರರಾಧಾಃ (ಪಂಚ್ರಂರಾಧಯತೀತಿ ಎಂಬ ವ್ಯುತ್ಪತ್ತಿಯಿಂದ) ದೇವಾದಿಗಳಿಗೆ ಸೃಷ್ಟಿಸ್ಥಿತ್ಯಾದಿಗಳನ್ನು ಮಾಡುವವನೆನಿಸುತ್ತಾನೆ. (೫) ಆ ಶ್ರೀ ಹರಿಯೇ ವೀರಃ= ಸರ್ವಶ್ರೇಷ್ಠನೆಂದೂ ನರ್ಯಃ= ನಾಲ್ಕು ವಿಧ ನಾಶರಹಿತನೆಂದೂ ಹೇಳಿಸಿಕೊಳ್ಳಲ್ಪಡುತ್ತಾನೆ. (೬) (ಪಂಚ ಜನರು ಯಾರೆಂದರೆ) ದೇವತೆಗಳು, ಗಂಧರ್ವರು, ನರರು, ಪಿತೃ ದೇವತೆಗಳು ದೈತ್ಯರು ಎಂದು ಪಂಚ ಜನರೆಂದು ಹೆಸರುಳ್ಳವರು ॥ ೩ ॥

ಋ (೪೮೫) ಯೋ ವಾಘತೇ ದದಾತಿ ಸೂನರಂ ವಸು ಸ ಧತ್ತೇ ಅಕ್ಷಿತಿ
ಶ್ರವಃ । ತಸ್ಮಾ ಇಳಾಂ ಸುವೀರಾಮಾ ಯಜಾಮಹೇ ಸುಪ್ರತೂರ್ತಿ
ಮನೇಹಸಂ ॥ ೪ ॥

ಅ ॥ (ಈ ನಾಲ್ಕನೇ ಋಕ್ಕಿಗೂ ಐನೇ ಋಕ್ಕಿಗೂ ಬ್ರಹ್ಮಣ ಸ್ಪತಿಯು ದೇವತೆಯು.) ಯಃ= ಯಾವ ಶ್ರೀ ವಿಷ್ಣುವು, ವಾಘತೇ=ಸ್ತೋತ್ರಮಾಡುವ ಭಕ್ತನಿಗೋಸ್ಕರ, ಸೂನರಂ ವಸು =(ಸುಷ್ಠುಭವತಿ ನರಃಯೇನ ಎಂಬ ವ್ಯುತ್ಪತ್ತಿಯಿಂದ) ಒಳ್ಳೇ ಜ್ಞಾನವನ್ನು, ದದಾತಿ= ಕೊಡುತ್ತಾನೋ. ಸಃ= ಆ ಶ್ರೀ ವಿಷ್ಣುವು, ಅಕ್ಷಿತಿಶ್ರವಃ= ವಿನಾಶವಿಲ್ಲದಿರುವ (ಶಾಶ್ವತವಾದ) ಕೀರ್ತಿಯನ್ನು ಧತ್ತೇ= ಧರಿಸುತ್ತಾನೆ. ಯಾವ ಶ್ರೀ ಹರಿಯು ಅಕ್ಷಯ ಕೀರ್ತಿಯನ್ನು ಧರಿಸುತ್ತಾನೋ, ತಸ್ಮೈ=ಅಂತಹ ಶ್ರೀ ವಿಷ್ಣುವಿಗೋಸ್ಕರ, ಸುವೀರಾಂ=ಶೋಭನವಾದ ವೀರ್ಯವುಳ್ಳ, (ಒಳ್ಳೇವೀರ್ಯವನ್ನುಂಟುಮಾಡುವ) ಸುಪ್ರತೂರ್ತಿಂ=(ಪ್ರಪೂರ್ವಾತ್ ತುರ್ವೀ ಹಿಂಸಾಯಾಂ, ಪ್ರತೂರ್ತಿ ಶಬ್ದಃ ರೂಪ ನಾಮ ಪರಿಃ) ಒಳ್ಳೇ ರೂಪವನ್ನು ಮಾಡುವ (ಅಥವಾ ತೂರೀ ಗತಿತ್ವರಣ ಹಿಂಸಯೋಃ) ವೇಗವನ್ನುಂಟು ಮಾಡುವ, ಅನೇಹಸಂ= (ಅನಾಸಾಂ ಈಹಾ ಯಸ್ಮಾಃ ಎಂಬ ವ್ಯುತ್ಪತ್ತಿಯಿಂದ) ಇಂದ್ರಿಯಗಳಿಗೆ ವಿಶೇಷತಃ ಚೇಷ್ಟೆಯನ್ನುಂಟು ಮಾಡುವ, ಇಳಾಂ=ಅನ್ನವನ್ನು (ಹವಿಸ್ಸನ್ನು) ಆಯಜಾಮಹೇ=ಕೊಡುತ್ತೇವೆ. ॥ ೪ ॥

ಭಾ ॥ (೧) ವಾಘತೇ ಸ್ತುವತೇ ವಿಷ್ಣುರ್ದದಾತಿ ಸೂನರಂ ವಸು ॥ (೨) ಸುಷ್ಠುಯೇನ ನರೋ ಭೂಯತ್ತಾಜ್ಞಾನರಂ ಜ್ಞಾನಮುಚ್ಯತೇ ॥ (೩) ಸ ಧತ್ತೇ ಚಾಕ್ಷಯಾಂ ಕೀರ್ತಿಮಿಳಾಮನ್ನಂ ಯಜಾಮಹೇ ॥ (೪) ಸುವೀರ್ಯತ್ವಾತ್ಸುವೀರಂ ತತ್ಸು ಪ್ರತೂರ್ತಿಃ ಸುವೇಶಕೃತ್ । ಪ್ರಾಣಚೇಷ್ಟಾ ನಿಮಿತ್ತತ್ವಾತ್ತದನೇಹ ಇತೀರಿತಂ ॥ ೪ ॥

ಅ ॥ (೧) ಶ್ರೀ ವಿಷ್ಣುವು, ವಾಘತೇ=ಸ್ತುತಿಸುವ ಭಕ್ತನಿಗೋಸ್ಕರ, ಸೂನರಂವಸುವನ್ನು ಕೊಡುತ್ತಾನೆ.) (೨) (ಸೂನರವೆಂದರೆ ಯಾವುದು ಹೇಗೆ ಎಂದರೆ) ಮನುಷ್ಯನು ಯಾವುದರಿಂದ ಚೆನ್ನಾಗಿ ಯೋಗ್ಯನು ಆಗು

ಸ್ವಯಂ। ಸ್ವೇಷ್ಟ ಸ್ಥಾನೇಷು (೩) ಚಾಂತರ್ವಾ ವಿಷ್ಣುರಂತರ್ಗತೋ ಯತಃ। ತದ್ವ
ತ್ತ್ವೇನ ಸ್ವಯಂ ಸ್ಥಾನಂ ಪ್ರಾಪ್ನೋತಿ ಜ್ಞಾನತೋ ಯಜನ್ ॥ ೭ ॥

ಅ ॥ (೧) ನಿಮ್ಮ ಭಕ್ತರಾದ ಜನರನ್ನು ಯಾರು ಹೊಂದುವರು. ಸಮ್ಯಕ್ ಜ್ಞಾನಾದಿ ಪೂರ್ವಕವಾಗಿ ಬರ್ಹಿಸ್ಸನ್ನೂ ವಿಸ್ತರಿಸಿಕೊಂಡಿರುವ ಯಜಮಾನನನ್ನಾಗಲೀ ಯಾವನು ಹೊಂದುವನು. (ಯಾವನೂ ಹೊಂದ ಲಾರನು.) (ದೇವ ಭಕ್ತ ಯಜಮಾನರು ಅಪ್ರಾಪ್ಯರು ಯಾವುದರಿಂದ ಎಂದರೆ.) ಅತಿಶಯವಾಗಿ ದುರ್ಲಭ ನಾಗಿರುವುದರಿಂದ. (೨) (ದುರ್ಲಭನು ಮಾತ್ರವಲ್ಲ. ಮತ್ತೆ) (ಈ ಯಜಮಾನನು ಪರಾಪೇಕ್ಷಾ ಇಲ್ಲದೇನೇ ಸುಖಗಳಿಂದ ಯುಕ್ತನಾಗಿಯೇ ಆಯಾಯ ತನ್ನ ಇಷ್ಟ ಸ್ಥಾನಗಳಲ್ಲಿಯೇ, ಚೆನ್ನಾಗಿ ನಿಲ್ಲುವವನಾಗುತ್ತಾನೆ. (೩) ಯಜಮಾನನು ಜ್ಞಾನ ಪೂರ್ವಕವಾಗಿ ಹವಿರಾದಿಗಳನ್ನು ಕೊಡುವವನು, ವಿಷ್ಣುವೇ ಸ್ವಾಮಿಯಾಗಿ ಉಳ್ಳ ಸ್ಥಾನವನ್ನು ಹೊಂದುತ್ತಾನೆ. ಶ್ರೀ ವಿಷ್ಣುವು ಯಾವ ಕಾರಣದಿಂದ ಸಮಸ್ತ ವಸ್ತುಗಳ ಒಳಗೆ ನಿಯಾಮಕ ನಾಗಿರುತ್ತಾನೋ, ಆದ ಕಾರಣ ಶ್ರೀ ವಿಷ್ಣುವು ಅಂತರ್ವಾ=ಎನಿಸುತ್ತಾನೆ. ವಿಷ್ಣು ಸಾದೃಶ್ಯದಿಂದ ಯುಕ್ತ ನಾದ ಸ್ಥಾನವನ್ನು ಹೊಂದುತ್ತಾನೆ. (ಅಂತರ್ವಾವತ್ ಎಂಬಲ್ಲಿ ಪ್ರಕಾರಾಂತರವನ್ನು ಹೇಳುತ್ತಾರೆ) (ಅಂತರ್ವಾ ಅಸ್ಯಾಸ್ತೀತಿ ಅಂತರ್ವಾವತ್.) ಶ್ರೀ ವಿಷ್ಣುವೇ ಸ್ವಾಮಿಯಾಗಿರುವುದರಿಂದ ಅಂತರ್ವಾವತ್, ಅಂದರೆ, ವಿಷ್ಣುವೇ ಸ್ವಾಮಿಯಾಗಿ ಉಳ್ಳ ಸ್ಥಾನವನ್ನು ಹೊಂದುತ್ತಾನೆ. (ಸರ್ವವ್ಯಾಪಿಯಾಗಿರುತ್ತಾನೆ.) ॥ ೭ ॥

ಋ ॥ (೪೮೯) ಉಪ ಕ್ಷತ್ರಂ ಪೃಂಚೀತ ಹಂತಿ ರಾಜಭಿರ್ಭಯೇ ಚಿತ್ಸು
ಕ್ಷಿತಿಂ ದಧೇ। ನಾಸ್ಯ ವರ್ತಾ ನ ತರುತಾ ಮಹಾಧನೇ ನಾರ್ಭೇ
ಅಸ್ತಿ ವಜ್ರಿಣಃ ॥ ೮ ॥ ॥ ೨೧ ॥ ೪೦ ॥

ಅ॥ (ಆನೇ ಋಕ್ಕಿಗೆ ಇಂದ್ರನು ದೇವತೆಯು.) (ಆ ಜನಾರ್ದನನು,) ಕ್ಷತ್ರಮುಪ ಪೃಂಚೀತ= (ಪೃಚೀ ಸಂಪರ್ಕೇ) ಕ್ಷತ್ರಿಯರಾದ ಮನ್ವಾದಿಗಳಿಂದ ಸಂಬದ್ಧನಾಗುತ್ತಾನೆ. (ಅಂದರೆ ಮನ್ವಾದಿಗಳಲ್ಲಿ ಆವೇಶ ಮಾಡಿ ಅವರಿಂದ ಮಿಶ್ರನಾಗುತ್ತಾನೆ.) ಅವರಲ್ಲಿ ಆವಿಷ್ಟನಾದ ಶ್ರೀ ಹರಿಯು ಆ ರಾಜರಿಂದ) ಹಂತಿ= (ಶತ್ರುಗಳನ್ನು ಸಂಹರಿಸುತ್ತಾನೆ. ಭಯೇಚಿತ್= (ಭಕ್ತರಿಗೆ) ಭಯವು ಪ್ರಾಪ್ತವಾದಾಗ, ಸುಕ್ಷಿತಿಂ= ಕ್ಷಿನಿವಾಸಗತ್ಯೋಃ, ಶೋಭನವಾದ ಆಶ್ರಯವನ್ನು(ಭಯನಿವಾರಣವನ್ನು ದಧೇ= ಕೊ(ಮಾ)ಡುತ್ತಾನೆ.ಅಸ್ಯ ವಜ್ರಿಣಃ= ಇಂದ್ರನಿಗೆ) ಮಹಾಧನೇ= ಯುದ್ಧಾಖ್ಯ ಮಹಾಧನವಿಷಯದಲ್ಲಿ, ವರ್ತಾ= (ವೃತು ವರ್ತನೇ) ಇದಿರು ಹೋಗುವವನು, (ಪ್ರತಿ ಯುದ್ಧ ಮಾಡುವವನು ನ=ಎಲ್ಲಿಯೂ ಇಲ್ಲವೇ ಇಲ್ಲ.ತರುತಾ= (ತೄ ಪ್ಲವನ ತರಣಯೋಃ, ಗೆಲ್ಲುವವ ನಾಗಲೀ, ನ= ಇಲ್ಲವೇ ಇಲ್ಲ (ಹೀಗೆಯೇ) ಅರ್ಭೇ= ಅಲ್ಪಧನದಲ್ಲಿ, ಪ್ರಸಿದ್ಧವಾದ ವಿತ್ತ ರೂಪವಾದ ಧನ ವಿಷಯದಲ್ಲಿ, ವರ್ತಾ ತರುತಾ ವಾ= ಇದಿರು ಯುದ್ಧ ಮಾಡುವವನು, ಗೆಲ್ಲುವವನಾಗಲೀ, ನ= ಇಲ್ಲವೇಇಲ್ಲ.
॥ ೮ ॥ ೧೨ ॥ ೪೦ ॥

ಭಾ॥ (೧) ಉಪಸೃಕ್ತಃ ಕ್ಷತ್ರಿಯೈಸ್ಸ ಆವೇಶೇನ ಜನಾರ್ದನಃ (೨) ಹಂತಿ ಶತ್ರೂಂಸ್ತತ್ತೈ
ರ್ದೇವೋ ಭಯೇ ಚ ಸ್ವಾಶ್ರಯಂ ದದೌ॥ (೩) ವರ್ತಾಽಭಿಗಂತಾ ತರುತಾ ಜೇತಾ
ಚಾಸ್ಯ ನ ಹಿ ಕ್ವಚಿತ್। (೪) ಯುದ್ಧಂ ಮಹಾಧನಂ ತ್ವರ್ಭಂ ಪ್ರಸಿದ್ಧಂ ಧನಮೇವಹಿ
॥ ೮ ॥ ೨೧ ॥ ೮ ॥

ಅ॥ (೧) ಆ ಜನಾರ್ದನನು ಕ್ಷತ್ರಿಯರಿಂದ ಸಂಬದ್ಧನಾದನು.(ಅಂದರೆ ಅವರಲ್ಲಿ ಪ್ರವೇಶ ಮಾಡಿ ಮಿಶ್ರನಾದನು. (೨) ರಾಜರಿಂದ ಶತ್ರುಗಳನ್ನು ಸಂಹರಿಸುತ್ತಾನೆ. ಭಕ್ತರಿಗೆ, ಭಯವು ಪ್ರಾಪ್ತವಾದಾಗ ಭಯ ನಿವಾರಣವನ್ನು ಕೊಟ್ಟನು. ಮಾಡಿದನು.(೩) ಯಾವನು ಇದಿರಾಗಿ ಹೋಗುತ್ತಾನೋ ಅತನು ಮರ್ತ ಎನಿಸುತ್ತಾನೆ. ಯಾವನು ಅತಿಕ್ರಮಿಸುತ್ತಾನೋ ಗೆಲ್ಲುತ್ತಾನೋ,ಅವನು ತರುತಾ ಎನಿಸುತ್ತಾನೆ. ಈ ಇಂದ್ರನ ಇದಿರು ಯುದ್ಧ ಮಾಡುವವನು ಗೆಲ್ಲುವವನಾಗಲೀ ಎಲ್ಲಿಯೂ ಇಲ್ಲನೇ ಇಲ್ಲ. (೪) (ಮಹಾಧನ ವಿಷಯದಲ್ಲಿ ಆಗಲೀ ಅಲ್ಪ ಧನ ವಿಷಯದಲ್ಲಿ ಆಗಲೀ ಯಾವನೊಬ್ಬನೂ ಇಲ್ಲವೇ ಇಲ್ಲ. ಮಹಾಧನ ಯಾವುದು, ಅಲ್ಪಧನವು ಯಾವುದೆಂದರೆ) (ಪ್ರಧನ ಶಬ್ದ ಪರ್ಯಾಯವು ಮಹಾಧನ ಶಬ್ದವು. ಅರ್ಭ ಶಬ್ದವು ಅಲ್ಪವಾಚಕವು, ಕ್ಷತ್ರಿಯರಿಗೆ)ಯುದ್ಧವು ಮಹಾಧನವು ಪ್ರಸಿದ್ಧ ಧನವು ಯುದ್ಧಕ್ಕಿಂತ ಅಲ್ಪ ಧನವೇ ಆಗಿದೆ. ಎಂಬು ಹಿ ಶಬ್ದಾರ್ಥವು, ಅಥವಾ ಯಂ ಕಕ್ಷಂತಿ ಇದು ಮೊದಲಾದ ಮೇಲಿನ ಮಂತ್ರಭಾಗವನ್ನು ಏಕೆ ವ್ಯಾಖ್ಯಾನ ಮಾಡಲಿಲ್ಲ ಎಂದರೆ, ನಿಘಂಟು ವ್ಯಾಕರಣ ಮೊದಲಾದ ಈ ಮಾರ್ಗದಿಂದಲೇ ಮೇಲಿನ ಮಂತ್ರಗಳ ಸಮುದಾಯವನ್ನು ವ್ಯಾಖ್ಯಾನ ಮಾಡುವುದು ಸುಲಭವಾಗಿದೆ ಎಂಬ ಅಭಿಪ್ರಾಯದಿಂದ ಇಲ್ಲಿ ಉಪರಮ ಮಾಡುತ್ತೇವೆ, ಎಂದು ಹಿ ಶಬ್ದದಿಂದ ಶ್ರೀಮದಾಚಾರ್ಯರು ಹೇಳಿರುವರು: || ೮ || ೨೧ || ೮ ||

ವಿ॥ (1) ಈ ಗ್ರಂಥದ ಆದಿಯಲ್ಲಿ ಅತಿತುಷ್ಟಿಕರಂ ಎಂದೂ ಅಂತ್ಯದಲ್ಲಿ ಪ್ರಸಿದ್ಧಂ ಧನಮೇವ ಹಿ ಎಂದೂ ಹೇಳಿದ ಪ್ರಯುಕ್ತ ಈ ಗ್ರಂಥವು ಶ್ರೀ ಪರಮಾತ್ಮನಿಗೆ ಅತಿ ಪ್ರೀತಿಕರವಾದುದು. ಈ ಗ್ರಂಥವನ್ನು ಅಧ್ಯಯನ ಮಾಡುವವರಿಗೆ ಐಹಿಕಾಮುಷ್ಮಿಕ ನಿಖಿಲಪುರುಷಾರ್ಥಗಳೂ ಸಿಗುತ್ತವೆ ಎಂದುಕ್ತವಾಯ್ತು. ಹೇಗೆಂದರೆ—ಈ ಅಂತಿಮ ಋಕ್ಕಿನ ಪೂರ್ವಾರ್ಧದಿಂದ ಶ್ರೀಭಗವಂತನ ಅನುಗ್ರಹದಿಂದ ಭಕ್ತರ ಸಕಲ ಅನಿಷ್ಟಗಳೂ ನಿವೃತ್ತಗಳಾಗುತ್ತವೆ ಎಂದೂ, ಉತ್ತರಾರ್ಧದಿಂದ ಸಮಸ್ತ ಅಭೀಷ್ಟಗಳು ಸಿದ್ಧಿಸುತ್ತವೆ ಎಂದೂ ಪ್ರತಿಪಾದಿಸುತ್ತಾ ಶ್ರೀಮಧ್ವಾಚಾರ್ಯರು ಮಂತ್ರವ್ಯಾಖ್ಯಾನದಿಂದಲೇ ಗ್ರಂಥವನ್ನು ಸಮಾಪ್ತಿಸಿರುವರು. (2) ಹೇಗೆ ಶ್ರೀಮದಾಚಾರ್ಯರು ತಾನುಮಾಡಿದ ಬ್ರಹ್ಮಸೂತ್ರ ಭಾಷ್ಯ ಮೊದಲಾದ ಇತರ ಎಲ್ಲಾ ಗ್ರಂಥಗಳಲ್ಲಿ ಯಸ್ಯತ್ರೀಣ್ಯು ದಿತಾನಿ ಇತ್ಯಾದಿಗಳಿಂದ ತಮ್ಮ ಮಾಹಾತ್ಮ್ಯ ಪ್ರತಿಪಾದನ ಪರವಾದ ಬಳಿತ್ಥಾ ತದ್ವಪುಷೇ ಇದು ಮೊದಲಾದ ಮಂತ್ರಗಳ ಅರ್ಥ ಸಂಗ್ರಹವನ್ನು ಹೇಳಿ ಅಷ್ಟರಿಂದಲೇ ಸಮಾಪ್ತಿಯನ್ನು ಇಚ್ಛಿಸದ ಅಂತ್ಯದಲ್ಲಿಯೂ ಭಗವಂತನ ನಮನ ಸ್ತುತ್ಯಾದಿಗಳನ್ನು ಹೇಳಿ ಸಮಾಪ್ತಿಗೊಳಿಸಿರುವರೋ, ಹಾಗೆ ಈ ಋಗ್ಭಾಷ್ಯದಲ್ಲಿ ತಮ್ಮ ಮಹಿಮೆಯನ್ನು ಪ್ರತಿಪಾದಿಸುವ ಮಾರುತಸೂಕ್ತ ವ್ಯಾಖ್ಯಾನದಿಂದಲೇ ಗ್ರಂಥ ಸಮಾಪ್ತಿ ಮಾಡಲಿಕ್ಕೆ ಇಚ್ಛಿಸದ ಶ್ರೀಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನೇ ಬ್ರಹ್ಮರುದ್ರಾದಿ ನಿಖಿಲದೇವತೆಗಳಿಂದಲೂ ಉತ್ತಮನು, ಆತನಿಗೆ ಸಮಾನಕನು ಯಾವನೊಬ್ಬನೂ ಇಲ್ಲವೇ ಇಲ್ಲ. ಆತನೇ ಬ್ರಹ್ಮರುದ್ರಾದಿ ದೇವತೆಗಳ ಸೃಷ್ಟಿಸ್ಥಿತ್ಯಾದಿಗಳನ್ನು ಮಾಡುವವನು. ಸಮಸ್ತ ವೇದಶಾಸ್ತ್ರಗಳಿಂದ ಮುಖ್ಯತಃ ಪ್ರತಿಪಾದ್ಯನು, ಸರ್ವೇಂದ್ರಿಯಗಳಿಗೆ ಪ್ರೇರಕನು, ಸರ್ವವ್ಯಾಪ್ತನು, ಭಕ್ತರಿಗೆ ಮೋಕ್ಷಾದಿ ಪುರುಷಾರ್ಥಗಳನ್ನು ಕೊಡುವವನು, ಇತ್ಯಾದ್ಯರ್ಥಗಳನ್ನು ಪ್ರತಿಪಾದಿಸುವ, ಸೂಕ್ತವನ್ನು ಅಂತ್ಯದಲ್ಲಿ ವ್ಯಾಖ್ಯಾನಮಾಡಿಯೇ ಗ್ರಂಥವನ್ನು ಸಮಾಪ್ತಿಗೊಳಿಸಿದರು (3) ಏವಂಚ ಶ್ರೀಮದಾಚಾರ್ಯರು ಶ್ರೀಮದೃಕ್ ಸಂಹಿತೆಯ ಪ್ರಥಮಾಷ್ಟಕದಲ್ಲಿ ೩ನೇ ಅಧ್ಯಾಯದಲ್ಲಿ ೨೧ ವರ್ಗ ಅಂದರೆ ಪ್ರಥಮ ಮಂಡಲದಲ್ಲಿ ೮ನೇ ಅನುವಾಕ ೪೦ ಸೂಕ್ತದವರೆಗೇನೇ ವ್ಯಾಖ್ಯಾನ ಮಾಡಿರುವರು (4) ತ್ರಿಭಾಷಾಂ ಯೋ ನ ಜಾನಾತಿ ರೀತೀನಾಂ ಶತಮೇವ ಚ।ವ್ಯತ್ಯಾ ಸಾದೀನ್ ಸಪ್ತ ಭೇದಾನ್ ವೇದಾದ್ಯರ್ಥಂ ತು ಯೋ ವದೇತ್। ಸ ಯಾತಿ ನಿರಯಂ ಘೋರಮನ್ಯಥಾಜ್ಞಾನಸಂಭವಂ ಯಾವನು ಗುಹ್ಯ,ಸಮಾಧಿ ದರ್ಶನ ಎಂಬ ೩ ಭಾಷೆಗಳನ್ನು ವೈದರ್ಭೀರೀತಿ ಮೊ ದ ಲಾ ದ ೧೦೦ ವ್ಯಾಖ್ಯಾನ ಪ್ರಕಾರ ವಿಶೇಷಗಳನ್ನು ವ್ಯತ್ಯಾಸ, ಪ್ರಾಪ್ತಿ ಲೋಪ್ಯ, ಗೋಮೂತ್ರೀ ಪ್ರಘಸ ಉಕ್ಷಣ, ಸುಧರ, ಸಾಧು ಎಂಬ ೭ ಭೇದಗಳನ್ನೂ ತಿಳಿಯದ ವೇದಾದಿಗಳ ಅರ್ಥಗಳನ್ನು ಹೇಳುವನೋ, ಅತನು ವಿಪರೀತ ಜ್ಞಾನಪ್ರಯುಕ್ತ ಫಲಾದ್ಯನರ್ಥವನ್ನು ಹೊಂದುತ್ತಾನೆ, ಎಂದು ವೇದವ್ಯಾಸರು ಮಾಡಿದ ಲಕ್ಷಣ ಶಾಸ್ತ್ರದಲ್ಲಿ ಹೇಳಿದೆ. ಅದ್ದ

ಕಾರಣ ಭಾಷಾಶ್ರಯ ೧೦೦ ರೀತಿ ಇತ್ಯಾದಿಗಳ ಲಕ್ಷಣಗಳನ್ನು ಪ್ರತಿಪಾದಿಸುವ ಗ್ರಂಥಗಳನ್ನು, ಸತ್ಯಂ ಸತ್ಯಂ ಪುನಸ್ಸತ್ಯಂ। ನ ಹಿ ವಿಷ್ಣೋಃ ಪ್ರಮಾಣತಿ ಕಸ್ಮೈಚಿದ್ವಿಬುಧಾಯ ತು ಇದು ಮೊದಲಾದ ನಿರ್ಣಯ ಗ್ರಂಥಗಳನ್ನು ಅನುಸರಿಸಿಕೊಂಡೇ ನಿಗಮ, ನಿರುಕ್ತ, ವ್ಯಾಕರಣ, ನಿಘಂಟು ಮೊದಲಾದ ಮಾರ್ಗದಿಂದಲೇ ಮಂತ್ರಗಳ ಸಮುದಾಯವನ್ನು ವ್ಯಾಖ್ಯಾನ ಮಾಡಬೇಕೆಂಬ ಅಭಿಪ್ರಾಯದಿಂದ ಶ್ರೀಮನ್ಮಧ್ವಾಚಾರ್ಯರು ಮುಂದಿನ ಋಕ್ಕುಗಳನ್ನು ತಾವು ವ್ಯಾಖ್ಯಾನ ಮಾಡದೆ ಇಲ್ಲಿಯೇ ಅವಸಾನ ಮಾಡಿರುತ್ತಾರೆ.

ಇತಿ ಶ್ರೀಮದಾನಂದತೀರ್ಥಭಗವತ್ಪಾದಕೃತಂ ಶ್ರೀಮದೃಗ್ಭಾಷ್ಯಂ ಸಂಪೂರ್ಣಂ
ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ವಿರಚಿಸಿರುವ ಋಗ್ಭಾಷ್ಯವು ಸಂಪೂರ್ಣವಾಯ್ತು.

ಕಲ್ಯಾಣಗುಣಪೂರ್ಣಾಯ ದೋಷದೂರಾಯ ವಿಷ್ಣವೇ ।
ಅನಂತಾದ್ಯಾಯ ವೇದ್ಯಾಯ ಶ್ರೀಪ್ರಾಣಪತಯೇ ನಮಃ ॥

ದೇವತಾಃ ಕಂಚುಕಾಯಂತೇ ವೇದೋ ಬಂದಿಜನಾಯತೇ ।
ಯಸ್ಯ ತಸ್ಮಿನ್ಪ್ರವಣಾನಘೇ ಸುದೃಢಾ ಪ್ರೀತಿರಸ್ತು ಮೇ ॥

ಶ್ರೀಮನ್ಮಧ್ವಮುನೇಃ ಕೃತೀಃ ಪ್ರಥಯತಾ ಭಾಷಾಮಯ ವ್ಯಾಖ್ಯಯಾ
ಋಗ್ಭಾಷ್ಯಸ್ಯ ಚ ಸಾಂತತಃ ಶುಭಹಿತಾ ಮಂತ್ರಾರ್ಥ ಸನ್ಮಂಜರೀಂ ।
ಮೂಲೀಕೃತ್ಯ ತದೀಯಭಾಷ್ಯ ವಿವೃತಿಂ ಟೀಕಾಪ್ರಕಾಶಂ

ತಥಾ ಶ್ರೀ ನಾರಾಯಣ ತಂತ್ರಿಣಾ ವಿರಚಿತಾ ಸಚ್ಛ್ರೇಯಸೇ ಕಲ್ಪತಾಂ ॥
ನಮೋಽಸ್ತು ಹರಯೇ ಯುಕ್ತಿಗಿರಯೇ ನಿರ್ಜಿತಾರಯೇ ।
ಸಮಸ್ತಗುರವೇ ಕಲ್ಪತರವೇ ಪರವೇದಿನಾಂ ॥
ಹಯಗ್ರೀವಾಯ ದೇವಾಯ ಜ್ವಲದ್ದಾಹಾಯ ದುರ್ಹೃದಾಂ ।
ತ್ರಯಿಗಾಗೇಯಾಯ ನಿರ್ವಾಣಯಜನಧ್ಯೇಯಾಯ ತೇ ನಮಃ ॥
ವ್ಯಾಸಂ ಶುಭಗುಣಾವಾಸಂ ಶ್ರೀಶಂ ನೌಮಿ ಸತಾಂ ವಶಂ ।
ಯೋಽಶಂಕೋ ಮಾಂ ಸುಹೃಲ್ಲೇಶಂ ದಾಸಂ ದರ್ಶಯತೀದೃಶಂ ॥
ಸನ್ಮುಖ್ಯಗತಯೇ ಶ್ಲಾಘ್ಯಕೃತಯೇ ವೀತಭೀಯೇ ।
ಸ್ವರ್ಣಗ್ನಿಪತಯೇ ಪೂರ್ಣಮತಯೇ ಯತಯೇ ನಮಃ ॥
ಅನಯಾ ಸೇವಯಾ ಶ್ರೀಶಃ ಪ್ರೀಯತಾಂ ಮೇ ಹಯಾನನಃ ।
ಹರಿಭಕ್ತಾಗ್ರಣೀರ್ಮಧ್ವೋ ಗುರುಶ್ಚ ಪ್ರೀಯತಾಂ ಮಮ ॥

॥ ಶ್ರೀಃ ॥ ॥ ಶ್ರೀಃ ॥